ಅಮೇರಿಕದ ಸಂಯುಕ್ತ ಸಂಸ್ಥಾನದ ಅಕ್ಕಿ ಬೆಳೆ. ಪ್ರಕೃತ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಪರ್ಯಾಪ್ತವಾದ ಸೌಕರ್ಯವು ದವಸ ಧಾನ್ಯಗಳ ಅಧಿಕ ಬೆಲೆಯು ಒಂದು ಕಾರಣವಾಗಿದೆಯೆನ್ನುವರು. ಈ ಕಾರಣದಿಂದ ಪ್ರಕೃತ ಹಿಂದೂಸ್ಥಾನದಲ್ಲಿ ತಯಾರಾಗುವ ಅಕ್ಕಿಗೆ ಬೆಲೆ ಏರುತ್ತದೋ [illegible] ಉಂಟಾಗಿರುತ್ತದೆ. [illegible] ಹಿಂದೂಸ್ಥಾನ ಮತ್ತು [illegible] ದೇಶಗಳಿಂದ [illegible] ಅಕ್ಕಿಯು ರಫ್ತಾಗುವದೇ [illegible] ಮಾಯಿಸು ಮಾಡಿರುವರು. ಅಮೇರಿಕದ ಸಂಯುಕ್ತ ಸಂಸ್ಥಾನದ ಅಕ್ಕಿಯು [illegible] ವಾಗಿ ಪೈದಾಸು [illegible] ಪ್ರಪಂಚದಲ್ಲಿ [illegible] ಒಂದು ಅಕ್ಕಿಗೆ [illegible] ಅದರ ಪೈರು [illegible] ದ್ದಾಗ ಅತಿ ವಿಸ್ತಾರವಾದ [illegible] ವರು ಸ್ವತಃ [illegible] ಅಮೇರಿಕದಲ್ಲಿ [illegible] 1,000,000 [illegible] ಅಕ್ಕಿಯು [illegible] ದೊರಕದೆಂದು [illegible] ಈ ವರುಷ [illegible] ಕಿಯಾಗುವದೆಂದು [illegible] ಅನೇಕರು [illegible] ಸ್ಥಾನು [illegible]

ಇತ್ತಲಾಗ [illegible] ಥಾದೊಂದಿಗೆ ಅಕ್ಕಿ [illegible]

ದಿವಂಗತರಾದ ರಿಪನ್ ಪ್ರಭುಗಳು. [illegible] ಚಿರಸ್ಮರಣೀಯರಾದ ರಿಪನ್ ಪ್ರಭುಗಳು [illegible] ಹಿಂದುಸ್ಥಾನದ ಪ್ರಜಾವರ್ಗಗಳೆಲ್ಲರಲ್ಲಿಯೂ [illegible] ಪ್ರಭುಗಳು ತಮ್ಮ ಆಳಿಕೆಯಲ್ಲಿ ಪ್ರಜಾಸ್ವಾತಂತ್ರ್ಯಕ್ಕೋಸ್ಕರ ಹಿಂದುಸ್ಥಾನದ ಸರಕಾರದಲ್ಲಿ ಮಾಡಿದ [illegible] ಮೂಲತತ್ತ್ವವನ್ನೇ [illegible] ಸೆಕ್ರೆಟರಿಯಾದ ಮೋರ್ಲೆ ಪ್ರಭುಗಳು ಆದರಿಸಿ ಹಿಂದುಸ್ಥಾನದ ನವೀನ [illegible] ಮಾಡಿರುವರು. ಮುನಿಸಿಪಾಲಿಟಿಗಳು ಮೊದಲಾದ ಪ್ರಜಾಸಂಸ್ಥೆಗಳು ರಿಪನ್ ಪ್ರಭುಗಳ ಕಾಲದಲ್ಲಿಯೇ ಏರ್ಪಡಿಸಲ್ಪಟ್ಟವು. ೧೮೮೨ನೇ ಇಸವಿಯಲ್ಲಿ ಲಿಟ್ಟನ್ ಪ್ರಭುಗಳ ಆಧಿಪತ್ಯದಲ್ಲಿ ದೇಶಭಾಷಾ ಪತ್ರಗಳ ನಿರ್ಬಂಧಗೋಸ್ಕರ ರಚಿಸಿದ ಆಕ್ಟನ್ನು ರದ್ದುಪಡಿಸಿ ದೇಶಭಾಷಾ ಪತ್ರಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದರಿಂದ ಪ್ರಜಾ ಶಿಕ್ಷಣಕ್ಕೂ ಇತರ ದೇಶಾಭಿವೃದ್ಧಿಗೂ ಉಪಾಯವಾಯಿತು. ದೇಶದ ವಿದ್ಯಾಭಿವೃದ್ಧಿಗೋಸ್ಕರ ವಿದ್ಯಾಸ್ಥಿತಿಯನ್ನು ತಿಳಕೊಳ್ಳಲಿಕ್ಕೆ ಒಂದು ಕಮ್ಮಿಶನನ್ನು ನೇಮಿಸಿ ಆ ಕಮಿಶನ್‌ನವರು ಅಭಿಪ್ರಾಯಪಟ್ಟಂತೆ ಸರಕಾರದಿಂದ ವಿದ್ಯೆಗೆ ಹೆಚ್ಚಿನ ಸಹಾಯವು ದೊರಕುವಂತೆ ಆಯಾ ಪ್ರಾಂತಿಕ ಸರಕಾರಗಳಿಗೆ ಆಜ್ಞಾಪಿಸಿದ್ದಲ್ಲದೆ ಈ ಸರಕಾರಗಳ ಮುನಾಫೆಗಳಲ್ಲಿ ತಕ್ಕಷ್ಟು ಹಣವು ಉಳಿಯದಿದ್ದಲ್ಲಿ ಇಂಪಿರಿಯಲ್ ಸರಕಾರದಿಂದ ಕೊಡಬಹುದೆಂಬದಾಗಿ ಅಪ್ಪಣೆಕೊಟ್ಟಿದ್ದರು. ಇವರ ಕಾಲದಲ್ಲಿಯೇ ಉಪ್ಪಿನ ಸುಂಕವು ಸಹ ಕಡಿಮೆಯಾಯಿತು. ಇಂತಹ ಪ್ರಜಾರಂಜಕರ ಮರಣವಾರ್ತೆಯನ್ನು ಕೇಳಿ ಕಲಿಕತ್ತೆ, ಮುಂಬಾಯಿ ಪಟ್ಟಣಗಳಲ್ಲಿ ಅನೇಕ ಪ್ರಜಾ ಮುಖಂಡರೆಲ್ಲರೂ ಸಭೆಕೂಡಿ ತಮ್ಮ ಅನುತಾಪಗಳ ನಿರ್ಣಯಗಳನ್ನು ಮಾಡುತ್ತಿರುವರು. ಕಲಿಕತ್ತೆಯ ದೇಶಭಾಷಾ ವರ್ತಮಾನ ಪತ್ರಗಳೆಲ್ಲವು ಇವರ ಪ್ರಜಾರಂಜಕತೆಯ ವಿಷಯ ಅಗ್ರಲೇಖನಗಳನ್ನು ಬರೆದು ಪ್ರಭುಗಳ [illegible] ಮಾಡುತ್ತಿರುವವು. ರಿಪನ್ ಪ್ರಭುಗಳ ಸ್ಮರಣಾರ್ಥವಾಗಿ ಅವರ [illegible] ಪ್ರತಿಷ್ಠಿಸುವರೆ ಈ ಮೊದಲೇ ಕೆಲವು ಚಂದಾ ಹಣವನ್ನು ಕೂಡಿಸಿದ್ದರು. [illegible] ಇಸವಿಯಲ್ಲಿ ಮದ್ರಾಸಿನಲ್ಲಿ ಕೂಡಿದ ಕೊಂಗ್ರೆಸು ಸಭೆಯಲ್ಲಿ [illegible] ರೂಪಾಯಿಗಳನ್ನು ಈ ಬಗ್ಗೆ ವಿನಿಯೋಗಿಸಬೇಕಾಗಿ ನಿರ್ಣಯಮಾಡಿತ್ತು. ಮಾರನೇ ವರುಷ ಮುಂಬಯಿಯಲ್ಲಿ ಕೂಡುವ ಕೊಂಗ್ರೆಸು ಸಭೆಯಿಂದ ಈ ಬಗ್ಗೆ ಹೆಚ್ಚಿನ ಹಣವನ್ನು ಕೊಡಿಸಬಹುದಾಗಿ ಬಹುಮಾನಪಟ್ಟ ಗೋಖಲೆಯವರು ಹೇಳಿದ್ದರಂತೆ. ಹ್ಯಾಗೂ ಈ ಕೆಲಸವನ್ನು ಮಿ। ಗೋಖಲೆಯವರು ತಿರಿಗಿ ಕೈಕೊಳ್ಳಬೇಕಾಗಿ ಹಲವು ವರ್ತಮಾನ ಪತ್ರಗಳಲ್ಲಿ ಸೂಚಿಸಲ್ಪಟ್ಟಿದೆ.

ಪತ್ರವ್ಯವಹಾರ.

ಮಂಗಳೂರಿನ "ವಿದ್ಯಾರ್ಥಿ ಭವನ".

ಸ್ವದೇಶಾಭಿಮಾನಿಯ ಎಡಿಟರಿಗೆ.—

ಅಯ್ಯಾ,

ನಾನು ಈ ಮುಂಚೆ ಕೆಲವು ಕಾಲ ಮಂಗಳೂರಿನಲ್ಲಿದ್ದವನಾದರೂ, ಇತ್ತಲಾಗೆ ಎಲ್ಲಾ ಕಡೆಗಳಲ್ಲಿಯೂ ಸುಧಾರಣೆಗಳು ಆಗಿ ಪುರವು ಬಹಳ ಮಟ್ಟಿಗೆ ಅಭಿವೃದ್ಧಿ ಹೊಂದಿರುವದನ್ನು ಕಂಡು, ವಿನೋದಕ್ಕಾಗಿ ಸಂಚಾರಕ್ಕೆ ಹೊರಟು ಅಪರೂಪವಾಗಿಯೂ ವಿಚಿತ್ರವಾಗಿಯೂ ನಿರ್ಮಿಸಿದ ಹೊಸ ಮನೆ, ಮಠ, ಉದ್ಯಾನಗಳನ್ನು ನೋಡಿ ನನ್ನ ಕಣ್ಣುಗಳು ಆನಂದವನ್ನು ಹೊಂದಿದವು. ಹೀಗೆಯೇ ಸಂಚಾರ ಮಾಡುವಾಗ ಒಂದು ವಿಶಾಲವಾದ ಹಳೇ ಮನೆಯನ್ನೂ ಅದರಲ್ಲಿ ಬಹುಮಂದಿ ಯೌವನಸ್ಥರೂ, ಚಿಕ್ಕ ಹುಡುಗರೂ, ಚಟುವಟಿಕೆಯಿಂದಲೂ, ಗೆಲವಿನಿಂದಲೂ, [illegible]ವದನ್ನೂ ಕಂಡು ಆ ಜನರನ್ನು ಪ್ರವೇಶಿಸಿದ್ದಲ್ಲಿ ಅದು ಐದು ಮಂದಿ ದಯಾವಂತರಾದ ಸದ್ಗೃಹಸ್ಥರು [illegible] ಬ್ರಾಹ್ಮಣ ವಿದ್ಯಾರ್ಥಿಗಳ ಉಪಯೋಗದ [illegible] ಏರ್ಪಡಿಸಿದ 'ವಿದ್ಯಾರ್ಥಿಭವನ' ಎಂದು ತಿಳಕೊಂಡೆನು.

[illegible] ವಿದ್ಯಾರ್ಥಿಗಳು ಬೇರೆ ಬೇರೆ ವಿದ್ಯಾಲಯಗಳಿಗೆ ಹೋಗಿ ಅಭ್ಯಾಸ ಮಾಡುವವರಾಗಿ ಪ್ರತ್ಯೇಕ ಊರುಗಳಿಂದ ಬಂದವರಾಗಿರುತ್ತಾರೆ. ಇಂತಹ ಹುಡುಗರು ಸಾಮಾನ್ಯವಾದ [illegible] ಪಡುವ ಕಷ್ಟಗಳನ್ನು ನೋಡಿ, ಅಂತಹ [illegible] ಸಂಸ್ಥೆಯನ್ನು [illegible] ಏರ್ಪಡಿಸಿರುವರು.

[illegible] ವಿದ್ಯಾರ್ಥಿ [illegible] ಸ್ಥಿತ್ಯಂತರದವರಾಗಿ [illegible] ವಿದ್ಯಾಭ್ಯಾಸಕ್ಕಾಗಿ ಬಂದವರಾದಾಗ್ಯೂ ಈ ಭವನದ [illegible] ಏಕನುತ್ವದಿಂದಲೂ ಪರಸ್ಪರ ಭಾವ [illegible] ಇವರು ತಮ್ಮ ವಿದ್ಯಮಾನ ಅಭ್ಯಾಸಗಳನುಸರಿಸಿ ಒಂದೊಂದು ಕೋಣೆಯಲ್ಲಿ ಇದ್ದು ಹೂವರಂತೆ ಅಭ್ಯಾಸ ಮಾಡುವರು. ಇವರ ಸಂಖ್ಯೆಯು ಪ್ರಕೃತ [illegible] ಆಗಿರುವದು.

ಇವರ ಊಟೋಪಚಾರಗಳನ್ನು ನಿರ್ವಹಿಸಿ ಕೊಡುವದಕ್ಕೆ ಇಬ್ಬರು [illegible] ಸ್ನಾನ, ಬಟ್ಟೆ ಒಗೆಯುವದಕ್ಕೆ ಒಬ್ಬ ಪರಿಚಾರಕನೂ ನೇಮಿಸಲ್ಪಟ್ಟಿರುವರು.

[illegible] ಸ್ನಾನ ಪಾನ ವರುಗೆ [illegible] ಒದಗಿಸಲ್ಪಡುತ್ತಿದೆ. ವಾರಕ್ಕೊಮ್ಮೆ [illegible] ತೈಲಾಭ್ಯಂಗದ ಏರ್ಪಾಡು ಮಾಡಿಸಿದ್ದಾರೆ. ಹುಡುಗರಿಗೆ ಬೆಳಗ್ಗೆ 9 ಗಂಟೆಗೆ [illegible] ಊಟವೂ, ಮಧ್ಯಾಹ್ನ 1 ಗಂಟೆಗೆ ಪರಿಷ್ಕಾರವಾದ ಫಲಾಹಾರವೂ, ಸಾಯಂಕಾಲ [illegible] ಗಂಟೆಗೆ [illegible] ಪಾನವೂ, ರಾತ್ರಿ 7 ಗಂಟೆಗೆ ತಿರಿಗಿ ಭೋಜನವೂ ಈ ಪ್ರಕಾರ ಊಟೋಪಚಾರಗಳು ನಡೆಯುತ್ತಿವೆ. ರಾತ್ರಿಯ ಭೋಜನಕ್ಕೆ ಹಾಲೂ ಇರುವದು. ಹೀಗೆ ವಿದ್ಯಾರ್ಥಿಗಳ ಸುಖಕ್ಕೂ ಆರೋಗ್ಯಕ್ಕೂ ಬೇಕಾದ್ದೆಲ್ಲಾ ಒದಗಿಸಿ ಕೊಡುವದರಲ್ಲಿ ಯಾವ ನ್ಯೂನತೆಯೂ ಕಂಡುಬರುವದಿಲ್ಲ.

ಇಷ್ಟು ವಿದ್ಯಾರ್ಥಿಗಳ ಆಹಾರ ಪಾನ ಮುಂತಾದವುಗಳ ವಿಷಯದಲ್ಲಿ ಜಾಗ್ರತೆ ತೆಗೆದುಕೊಳ್ಳುವಂತೆಯೇ ಅವರ ನೈತಿಕ ಮತ್ತು ಧಾರ್ಮಿಕ ಶಿಕ್ಷಣವೂ ಅಲಕ್ಷಿಸಲ್ಪಟ್ಟಿಲ್ಲ. ವಿದ್ಯಾರ್ಥಿಗಳು ತಮ್ಮ ತಮ್ಮೊಳಗೆ ಅನ್ಯೋನ್ಯ ಸಹಾಯಕಾರಿಗಳಾಗಿರಬೇಕು. ಎಲ್ಲರೂ ಪ್ರಾತಃಕಾಲವೆದ್ದು, ಮುಖಪ್ರಕ್ಷಾಲನ, ಸ್ನಾನಾದಿಗಳನ್ನು ತೀರಿಸಿ ಸಂಧ್ಯಾವಂದನೆಯನ್ನು ಲೋಪವಿಲ್ಲದೆ ಮಾಡಬೇಕು. ಬಟ್ಟೆ ಬರೆಗಳನ್ನು ಶುಚಿಯಾಗಿಟ್ಟುಕೊಂಡಿರಬೇಕು. ಸಾಯಂಕಾಲದ ಸಂಧ್ಯಾವಂದನೆಯನ್ನು ಪೂರೈಸಿದೊಡನೆ ಎಲ್ಲರೂ ಒಟ್ಟುಗೂಡಿ ಭಗವತ್ಪ್ರಾರ್ಥನೆಯನ್ನು ಪಠಿಸಿದ ನಂತರ ತಮ್ಮ ತಮ್ಮ ಕೆಲಸಕ್ಕೆ ಹೋಗಬೇಕು. ಕಿರಿಯರು ಹಿರಿಯರಿಗೆ ಬುದ್ಧಿವಾದಗಳನ್ನು ಹೇಳುತ್ತಿರಬೇಕು. ಯಾವ ವಿಧದಿಂದಲೂ ಹೊಗೆಸೊಪ್ಪು ಉಪಯೋಗಿಸಕೂಡದು. ಇನ್ನೇ ಮೊದಲಾದ ಉತ್ಕೃಷ್ಟ ನಿಯಮಗಳನ್ನು ಎಲ್ಲರೂ ಅನುಸರಿಸಬೇಕು ಎಂಬ ಆಜ್ಞೆಗಳಿವೆ.

ಈ ಭವನದ ಕೆಲಸಗಳು ಸರಿಯಾಗಿ ನಡೆಯುತ್ತವೋ? ವಿದ್ಯಾರ್ಥಿಗಳು ಆಜ್ಞೆಗಳಂತೆ ನಡೆಯುವರೋ? ಇವರು ಸುಖವಾಗಿಯೂ ಆರೋಗ್ಯವಾಗಿಯೂ ಇರುವರೋ? [illegible]

ರ್ಯಾರಾದರೂ ಒಬ್ಬರು ಪ್ರತಿ ದಿನವೂ ಕನಿಷ್ಠಪಕ್ಷ ಎರಡು ಸಾರಿ ಅಲ್ಲಿಗೆ ಹೋಗಿ ಸಂದರ್ಶಿಸಿ ಬರುತ್ತಾರೆ. ಈ ಗೃಹಸ್ಥರ ಸ್ವಾರ್ಥತ್ಯಾಗವೂ ಉದಾರತ್ವವೂ ಸ್ತೋತ್ರಾರ್ಹವಾಗಿವೆ.

ಇಲ್ಲಿಯ ವಿದ್ಯಾರ್ಥಿಗಳು ತಿಂಗಳು ಒಂದಕ್ಕೆ 6 8 0ರ ಪ್ರಕಾರ ಪ್ರತಿ ಒಬ್ಬನೂ ಫೀಸು ಕೊಡಬೇಕಾಗಿದೆ. ಇಲ್ಲಿಯ ನೌಕರರ ಸಂಬಳಗಳೂ, ಮನೆ ಬಾಡಿಗೆಯೂ, ಪೇಟೆಯ ಪ್ರಕೃತದ ಧಾರಣೆವಾಸಿಗಳೂ, ವಿದ್ಯಾರ್ಥಿಗಳು ಆರೋಗ್ಯವಂತರಾಗಿ ವಿದ್ಯಾಭ್ಯಾಸವನ್ನು ಸುಖಕರವಾಗಿ ಪೂರೈಸುವಂತೆ ಪರಿಷ್ಕಾರವಾಗಿ ಅವರಿಗೆ ಉಪಯೋಗಕಾರಗಳಲ್ಲಿ ಕೊರತೆ ಬಾರದಂತೆ ನೋಡಿಕೊಳ್ಳುವ ಜಾಗ್ರತೆಯೂ, ಇವೇ ಮೊದಲಾದ ಎಲ್ಲಾ ಸಂಗತಿಗಳನ್ನು ಲಕ್ಷ್ಯಕ್ಕೆ ತಂದು ವಿಚಾರಿಸುವಲ್ಲಿ ಈ ಫೀಸು ಎಷ್ಟು ಮಾತ್ರಕ್ಕೂ ಇಲ್ಲಿಯ ಖರ್ಚನ್ನು ನಿರ್ವಹಿಸುವದೆಂಬದನ್ನು ಊಹಿಸ ಕೂಡದು. ಆದಕಾರಣ ಕೂಟದವರು ತಮ್ಮ ಕೈಯಿಂದ ಪ್ರಕೃತ ದ್ರವ್ಯಸಹಾಯ ಮಾಡುವರು. ಆದರೆ ಇದೇ ಪ್ರಕಾರ ಇವರು ಹೆಚ್ಚುಕಾಲ ತಮ್ಮ ಸ್ವಂತ ಹಣವನ್ನು ವಿನಿಯೋಗಿಸಿ ಪೂರೈಸಲಾರರಷ್ಟೆ. ಇವರ ಸ್ನೇಹಿತ ಮಂಡಲಿಯವರಿಂದ ಅಲ್ಪಸ್ವಲ್ಪ ಮಾಸಿಕ ವರ್ಗಣಿಯು ಬರುವದು. ಆದರೆ ಅದು ಇಷ್ಟರಲ್ಲಿಯೇ ಭವನಕ್ಕೆ ಬೇಕಾದ ಆವಶ್ಯಕ ಸಾಹಿತ್ಯಗಳ ಬಗ್ಗೆ ವಿನಿಯೋಗಿಸಲ್ಪಟ್ಟಿದೆ. ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿದರೆ ಮೇಲೆ ದುಗ್ಗಾಣಿ(?) ಕೊರತೆಗಳು ಸ್ವಲ್ಪ ಮಟ್ಟಿಗೆ ದೂರವಾಗಬಹುದು. ಆದರೆ ಇದು ಎಷ್ಟು ಮಾತ್ರಕ್ಕೂ ಸಾಕಾಗಲಾರದು. ಇದಲ್ಲದೆ ವಿದ್ಯಾರ್ಥಿಗಳ ಅನುಕೂಲಕ್ಕೆ ಅವಶ್ಯಕವಾದ ಕುರ್ಚಿಗಳು, ಮೇಜುಗಳು, ಕಾಲುಮಣೆಗಳು, ಚಾಪೆಗಳು ಬೇಕಾದಷ್ಟು ಪ್ರಮಾಣದಲ್ಲಿ ಇಲ್ಲ. ಇಷ್ಟೇ ಅಲ್ಲದೆ ಇನ್ನೂ ಅನೇಕ ಸುಧಾರಣೆಗಳು ಆಗಬೇಕಾದ್ದು ಅವಶ್ಯವಿದೆ. ಇದಕ್ಕೆಲ್ಲಾ ತಕ್ಕಷ್ಟು ಫಂಡು ಬೇಕಷ್ಟೇ!

ಇಲ್ಲಿ ಬಂಟ ಜಾತಿಯವರು ಇದೇ ತರದ ಸಂಘವನ್ನು ಏರ್ಪಡಿಸಿ ಅದು ಶೀಘ್ರದಲ್ಲಿಯೇ ಉತ್ತಮ ಸ್ಥಿತಿಗೆ ಬಂದಿರುವದಾಗಿ ಕೇಳುತ್ತೇನೆ. ಬ್ರಾಹ್ಮಣ ವರ್ಗದವರೂ ಸಹ ಇದೇ ರೀತಿ ಜಾಗ್ರತೆ ತೆಗದುಕೊಂಡು ಮೇಲಿನ ಜಾತಿಯವರ ಸಂಘ ಶಕ್ತಿಯನ್ನು ಒದರೂ ಲಕ್ಷ್ಯಕ್ಕೆ ತಂದು ಈ ಭವನಕ್ಕೆ ಅಧೋಚಿತ ಸಹಾಯ ಮಾಡಿ ಅದು ಶಾಶ್ವತಗೊಳಿಸಿದ ಶ್ರೇಯವನ್ನು ಹೊಂದಬಾರದೇ. ಹೀಗೆ ಬ್ರಾಹ್ಮಣ ಜಾತಿಯ ಸದ್ಗೃಹಸ್ಥರಿಂದ ಕಾಲೋಚಿತ ಸಹಾಯವು ದೊರೆಯದಿದ್ದರೆ ಸದುದ್ದೇಶಗಳಿಂದ ಪ್ರಯತ್ನಪಟ್ಟು ಸ್ಥಾಪಿಸಿದ ಈ ಸಂಘವು ನಾಶ ಹೊಂದುವದಲ್ಲದೆ, ಆ 5 ಮಂದಿ ಗೃಹಸ್ಥರ ಶ್ರಮಗಳೂ ನಿರರ್ಥಕವಾಗುವವು.

ಮಂಗಳೂರು
ತಾ 11 7 1909

ತಮ್ಮ ಅತ್ಯಂತ ವಿಧೇಯ
Patwardhan.

ವಿದೇಶ ವೃತ್ತಾಂತ.

ಮಾಜಿ ವ್ಯಾಸರಾಯ ಪ್ರಭುಗಳಾದ ಲೋರ್ಡ್ ರಿಪನ್ ಪ್ರಭುಗಳು ಕಳೆದ ವಾರದಲ್ಲಿ ಸ್ವರ್ಗಸ್ಥರಾದರು.

ಟ್ರಾನ್ಸ್ವಾಲಿನಲ್ಲಿಯ ಭಾರತೀಯರ ಸಂಕಷ್ಟ ನಿವಾರಣೆಯನ್ನು ಸಾಧಿಸಲಿಕ್ಕೆ ಗಾಂಧಿಯವರು ಟ್ರಾನ್ಸ್ವಾಲಿನಿಂದ ಲಂಡನ್ ಪಟ್ಟಣಕ್ಕೆ ಬಂದಿರುವರು.

ಮದನಲಾಲನ ತನಿಖೆಯು ಲಂಡನಿನಲ್ಲಿ ನಡೆಯುತ್ತಿರುವದು. ತನ್ನ ಮಾತೃಭೂಮಿಯ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿರುವ ದೇಶವತ್ಸಲನಾಗಿರುವನೆಂಬದಾಗಿಯೂ ತಾನು ಮಾಡಿದ ಕೃತ್ಯವು ಕೊಲೆಪಾತಕವಲ್ಲವೆಂದೂ ಜರ್ಮನರು ಇಂಗ್ಲಾಂಡಿಗೆ ಒಂದು ವೇಳೆ ಪಕ್ಷದಲ್ಲಿ ಇಂಗ್ಲೀಷರು ಅದೇ ರೀತಿ ಮಾಡ ಬಹುದೆಂದೂ ಹೇಳಿಕೊಂಡಿರುವನೆಂಬದಾಗಿ ತಿಳಿದುಬರುತ್ತದೆ. ಅಪರಾಧಿಯು ಕಳೆದ ಜನವರಿ ತಿಂಗಳಲ್ಲಿ ಒಂದು ಕೋವಿಯನ್ನು ಕ್ರಯಕ್ಕೆ ಪಡೆದು ಅದನ್ನು ಹೊಡೆಯುವ ಕ್ರಮವನ್ನು ಅಭ್ಯಾಸಿಸುತ್ತಿದ್ದನಂತೆ.

ಸರ ವಿಲಿಯಂ ವಿಲ್ಲಿಯವರಿಗೋಸ್ಕರವಾಗಿ ದಫನಕ್ಕೆ ಮುಂಚಿನ ಪ್ರಾರ್ಥನೆಗೆ ಕರ್ಜನ್ ಪ್ರಭು, ಲಮಿಂಗ್ಟನ್ ಪ್ರಭು, ಲಗಾರ್ಡನ್ ಮೊದಲಾದ ಅನೇಕ ಜನ ಭಾರತೀಯರೂ ಹಿಂದುಸ್ಥಾನದ ಹಲವು ರಾಜಪ್ರಭುಗಳೂ ಸಹಾ ಹೋಗಿದ್ದರು. ಚಕ್ರವರ್ತಿಯವರ ಕಡೆಯಿಂದಲೂ ಕಿಚ್ನರ್ ಪ್ರಭುಗಳ ಪರವಾಗಿಯೂ ಅವರವರ ಪ್ರತಿನಿಧಿಗಳು ದಫನ ಕ್ರಿಯೆಗೆ ಬಂದಿದ್ದರು. ಈ ಆರಾಧನೆಯನ್ನು ಮುಗಿಸುವಾಗ ಪಾದ್ರಿಯು 'ವಿಲ್ಲಿಯವರ ವಿಧವೆಯಾದ ನಮ್ಮ ಸಹೋದರಿ ಬಗ್ಗೆ, ಈ ಕೊಲೆಯನ್ನು ಮಾಡಿದವನ ಬಗ್ಗೆ ನಾವು ದೇವರನ್ನು ಬೇಡಿಕೊಳ್ಳುವಾ'—ಎಂತ ಹೇಳಿ ಆರಾಧನೆಯನ್ನು ಮುಕ್ತಾಯ ಮಾಡಿದರು.

ಅಮೇರಿಕದ ಕೋಲೆರೆಡೊ, ಒಹಿಯೊ, ಮಿಸ್ಸೂರಿ ಮತ್ತು ಮೆಕ್ಸಿಕೊ ಮೊದಲಾದ ಪಟ್ಟಣಗಳಲ್ಲಿ ನೆರೆ ತುಂಬಿ ವಿಶೇಷ ಹಾವಳಿಯುಂಟಾಗಿರುವದು. ಅನೇಕ ಸಾವಿರ ಕ್ರಯ ಬಾಳುವ ಸೊತ್ತು ಮನೆಗಳು ನೀರುಪಾಲಾಗಿ ನಿವಾಸಿಗಳು ಮನೆಮಾರುಗಳಿಲ್ಲದೆ ಇರುವರು.

ಇಂಪಿರಿಯಲ್ ಪ್ರೆಸ್ಸ ಕೊನ್ಫರೆನ್ಸಿನ ತಂತೀ ದರವನ್ನು ಕಡಿಮೆ ಮಾಡುವ ನಿರ್ಣಯಕ್ಕೆ ಬ್ರಿಟಿಷ್ ಪ್ರಮುಖ ಮಂತ್ರಿಯಾದ ಮಿ. ಎಸ್ಕ್ವಿತರವರು ತಕ್ಕ ಪ್ರೋತ್ಸಾಹವನ್ನು ಕೊಡಲಿಲ್ಲವೆಂಬದಾಗಿ ತಿಳಿದುಬರುತ್ತದೆ.

ಲಂಡನ್ ಪಟ್ಟಣದಲ್ಲಿ ಆಂಗ್ಲೇಯರ ಮತ್ತು ಭಾರತೀಯ ಸ್ತ್ರೀಯರ ಪ್ರತಿನಿಧಿಗಳು ಕೂಡಿಬಂದು ಕಮಿಟಿಯು [illegible] ಹಿಂದೂಸ್ಥಾನದಲ್ಲಿ ವಿದ್ಯೆಯನ್ನು ಕಲಿತ ಸ್ತ್ರೀಯರು ಉಪಾಧ್ಯಾಯಿನಿಯರಾಗಲಿಕ್ಕೆ ತಕ್ಕ ಶಿಕ್ಷಣವನ್ನು ಲಂಡನಿನಲ್ಲಿ ಭಾರತೀಯ ಸ್ತ್ರೀಯರಿಗೆ ಕೊಡುವದು ಇದರ ಮುಖ್ಯ ಉದ್ದೇಶವಾಗಿರುವದು. ಕ್ರಮೇಣ ಇಂತಹ ಶಿಕ್ಷಿತ ಸ್ತ್ರೀಯರು ಹಿಂದೂಸ್ಥಾನದಲ್ಲಿಯೇ ತಯಾರಾಗುವಂತೆ ಕಲ್ಕತ್ತೆಯಲ್ಲಿ ಒಂದು ಕೋಲೇಜನ್ನು ಸ್ಥಾಪಿಸುವರು. ಈ ಉದ್ದೇಶಕ್ಕಾಗಿ ಲಂಡನಿನ ಜಹಾಂಗೀರ ಸಭಾಸದನದಲ್ಲಿ ಮಿಸೆಸ್ ಪಿ ಎಲ್ ರೋಯ ಎಂಬವರು ಒಂದು ಸಭೆ ನಡಸಿ ಕೆಲವು ದೇಶಾಭಿಮಾನಿಗಳಿಂದ ಈ ಬಗ್ಗೆ ದ್ರವ್ಯಸಂಗ್ರಹವನ್ನು ಮಾಡುವದಾಗಿ ತಿಳಿದುಬರುತ್ತದೆ.

ಈ ವರ್ಷದಲ್ಲಿ ಭೂಕಂಪಗಳು ಭೂಲೋಕದ ಯಾವ್ಯಾವ ಕಡೆಗಳಲ್ಲಿ ಯಾವ ದಿವಸಗಳಲ್ಲಿ ಇದೇ ಜುಲಾಯಿ ತಿಂಗಳಿನಿಂದ ಬರುವ ಜನವರಿ ತಿಂಗಳ ವರೆಗೆ ಆಗುವವೆಂಬದಾಗಿ ಮುಂಬಾಯಿಯ ಟೈಮ್ಸ್ ಒಫ್ ಇಂಡಿಯ ಪತ್ರಕ್ಕೆ ಒಬ್ಬ ಜ್ಯೋತಿಷ್ಯದಾರನು ಬರೆದಿರುವನು.

ಗ್ರೇಟ್ ಬ್ರಿಟನ್ ಸುಮಾರು ಜುಲಾಯಿ ತಿಂಗಳ 25ನೇ ತಾರೀಕಿನಲ್ಲಿ ಆಗೋಸ್ತು ತಾ 3 ನವಂಬ್ರ ತಾ 6, 25 ಮತ್ತು 29 ದಶಂಬರ 14 ನೇ ತಾರೀಕಿನಲ್ಲಿ. ದಕ್ಷಿಣ ಯುರೋಪ—ಜುಲಾಯಿ ತಿಂಗಳ ತಾ 2, 3 7 ಮತ್ತು 29 ಆಗೋಸ್ತು ತಾ 10, 12, 16 ಮತ್ತು ಅಕ್ಟೋಬರ 19 ನವಂಬ್ರ 12 ಮತ್ತು 27 ದಶಂಬ್ರ ತಾ 11, 13, 15, 31 ಮಧ್ಯ ಯುರೋಪ—ಜುಲಾಯಿ 27 ಮತ್ತು ಸಪ್ಟಂಬರ 29 ಅಮೇರಿಕಾ ಸಂಯುಕ್ತ ಸಂಸ್ಥಾನ—ಜುಲಾಯಿ ತಾ 12, 20 25 ಮತ್ತು 29, ನವಂಬ್ರ 25. ದಶಂಬ್ರ 19 ಮತ್ತು 22 ವೆಸ್ಟ್ ಇಂಡೀಸ್—ಜುಲಾಯಿ ತಾ 2, ಮತ್ತು 19 ಸಪ್ಟಂಬರ ತಾ 26 ಮತ್ತು ದಶಂಬರ ತಾ 25 ದಕ್ಷಿಣ ಅಮೇರಿಕ—ಜುಲಾಯಿ ತಾ 6 ಮತ್ತು 7, ದಶಂಬರ ತಾ 12 ಆಸ್ಯಖಂಡದ ಉತ್ತರ ಪಾರ್ಶ್ವ—ಜುಲಾಯಿ 24 ಏಸ್ಯಾ ಮ್ಯಾನರ್ ಮತ್ತು ಆಸ್ಯಖಂಡದ ಮಧ್ಯಭಾಗ—ನವಂಬರ ತಾ 22, 27, ದಶಂಬರ ತಾ 9 ಮತ್ತು 12 ಆಸ್ಯಖಂಡದ ದಕ್ಷಿಣಭಾಗ ಮತ್ತು ಈಸ್ಟ ಇಂಡೀಸ್—ಜುಲಾಯಿ ತಾ 1, 2, 4, 5 ಮತ್ತು 14; ಮತ್ತು ದಶಂಬರ 31

ಉತ್ತರ ಹಿಂದುಸ್ಥಾನ

ಹಿಂದೂಸ್ಥಾನದಲ್ಲಿಯೂ ಬರ್ಮಾದೇಶದಲ್ಲಿಯೂ ಇರುವ ವ್ಯಾಪಾರ ಸಂಘಗಳ ಒಂದು ಪರಿಷದವು ನೆರೆಯುವಂತೆ ಪ್ರಾಮುಖ್ಯ ವ್ಯಾಪಾರ ಸಂಘದವರು ಈ ವಿಷಯ ತಂತಮ್ಮೊಳಗೆ ಪತ್ರ ವ್ಯವಹಾರವನ್ನು ನಡಿಸುತ್ತಿರುವರು.

ಕಳೆದ ತಿಂಗಳ ೨೭ನೇ ತಾರೀಕಿನಲ್ಲಿ ಲಾಹೋರಿನಲ್ಲಿ ರೈಸಾಹೇಬ ಗಿರಿಧರ್‌ಲಾಲ್‌ರವರ ಮನೆಯಲ್ಲಿ ಕೆಪ್ಟನ್ ಆರ್ ಎ ಡಿಕ್ಕಿ ಎಂಬ ಆಂಗ್ಲೇಯನನ್ನು ಆರ್ಯ ಸಮಾಜಕ್ಕೆ ಕೂಡಿಸುವ ಸಮಾರಂಭವು ಬಹಳ ವಿಶೇಷವಾಗಿ ನಡೆಯಿತು. ಈ ಸಂಭ್ರಮವನ್ನು ನೋಡಲಿಕ್ಕೆ ಐದುಸಾವಿರ ಜನರು ನೆರೆದಿದ್ದರು. ಈ ವಿಧಿಯ ಪ್ರಾರಂಭದಲ್ಲಿ ಹರಿಕೀರ್ತನೆಗಳು ಹಾಡಲ್ಪಟ್ಟವು. ಕೆಪ್ಟನ್ ಡಿಕ್ಕಿಯವರು ಬಾವಿಯ ಹತ್ತರ ಹೋಗಿ ಸ್ನಾನವನ್ನು ಮಾಡಿದ ತರುವಾಯ ಅವರಿಗೆ ಉಡಲಿಕ್ಕೆ ಒಂದು ಧೋತ್ರವೂ ಮೈಯಲ್ಲಿ ಹಾಕಿಕೊಳ್ಳುವದೆ ಒಂದು ಪಿತಾಂಬರವನ್ನೂ ಕೊಟ್ಟರು. ವಿಧಿ ಪ್ರಕಾರ ಸಂಧ್ಯಾ, ಗಾಯತ್ರಿ, ಉಪದೇಶಗಳಾದನಂತರ ಹೋಮವೂ ಆಯಿತು. ಈ ವಿಧಾನದಲ್ಲಿ ಮತಾಂತರವನ್ನು ಹೊಂದಿದನಂತರ ಇವರಿಗೆ ಮಹಾವೀರಸಿಂಗ ಎಂಬ ನಾಮಕರಣವಾಯಿತು. ಕೂಡಿದ ಸಭಿಯವರೆಲ್ಲರಿಗೂ ಮಹಾವೀರಸಿಂಗರವರು ತಮ್ಮ ಕೈಯಿಂದಲೇ ಮಿಠಾಯಿ ಹಂಚಿದರು.

ಮೊರ್ಲೆ ಧೊರೆಗಳ ನವೀನ ರಾಜ್ಯಭಾರ ಮಾರ್ಪಾಟಗಳು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಮಂಜೂರಾಗಿ ಈ ಬಗ್ಗೆ ತಕ್ಕದಾದ ವ್ಯವಸ್ಥೆಯನ್ನು ಆಲೋಚಿಸಲಿಕ್ಕೆ ವ್ಯಾಸರಾಯ ಪ್ರಭುಗಳ ಕಾರ್ಯನಿರ್ವಾಹಕ ಸಭೆಯು ಮೂರು ಜನ ಮೆಂಬರರ ಒಂದು ಕಮಿಟಿಯು ನೇಮಕವಾಗಿತ್ತು. ಈ ರಾಜ್ಯಭಾರ ಮಾರ್ಪಾಟಗಳಲ್ಲಿ ಈ ಮೊದಲೇ ಇತರ ಪ್ರಜಾವರ್ಗಗಳಿಗಿಂತ ಮಹಮ್ಮದೀಯರಿಗೆ ಹೆಚ್ಚಿನ ರಿಯಾಯತಿಗಳು ಕೊಟ್ಟಿರುವರೆಂಬದು ವಾಚಕರೆಲ್ಲರಿಗೂ ತಿಳಿದಿರ ಬಹುದು. ಈ ರಿಯಾಯತಿಗಳು ಸಹಾ ಸಾಲದೆಂಬಂತೆ ಮಹಮ್ಮದೀಯ ಮುಖಂಡರಲ್ಲಿ ಕೆಲವರು ವ್ಯಾಸರಾಯ ಪ್ರಭುಗಳ ಕಾರ್ಯನಿರ್ವಾಹಕ ಸಭೆಯು ಈ ಕಮಿಟಿಯರಿದ್ದೆಡೆಗೆ ತಮ್ಮ ಹಕ್ಕು ಸ್ವಾತಂತ್ರ್ಯಗಳಿಗೆ ಇನ್ನಷ್ಟು ಗಮನ ಕೊಡಬೇಕೆಂಬದನ್ನು ವ್ಯಕ್ತಪಡಿಸಲು ಹೋಗಿರುವರಾಗಿ ತಿಳಿಯುತ್ತೇವೆ. ಈ ಕಾರಣಗಳಿಂದ ಮಾರ್ಪಾಟಗಳನ್ನು ಚಾಲ್ತಿ ಸರಕಾರದಲ್ಲಿ ಜ್ಯಾರಿಗೆ ತರುವ ವ್ಯವಸ್ಥೆಗಳೆಲ್ಲವನ್ನು ಮೊರ್ಲೆ ಪ್ರಭುಗಳಿಗೆ ಬರೆದು ಕಳುಹಿಸಿ ಅವರ ಅಂಗೀಕಾರವನ್ನು ಪಡಿಯುವದು ಇನ್ನೆರಡು ತಿಂಗಳು ಹಿಂದಕ್ಕೆ ಬೀಳುವದಾಗಿ ವರ್ತಮಾನವಿರುವದು. ಇತ್ತಲಾಗೆ ಇತರ ಪ್ರಜಾವರ್ಗಗಳಲ್ಲಿ ಮುಂಬಾಯಿಯಲ್ಲಿ ಪ್ರೆಸಿಡೆನ್ಸಿ ಎಸೋಸಿಯೇಶನ್ ಸಭೆಯೂ ಮದರಾಸಿನಲ್ಲಿ ಪ್ರಾಂತಿಕ ಕೊಂಗ್ರೆಸ್ ಸಭೆಯೂ ಪಂಜಾಬಿನಲ್ಲಿ ಹಿಂದು

...ಪರಿಷತ್ ಸಭೆಯವರೂ, ಇನ್ನು ಹಲವು ಕಡೆಗಳಲ್ಲಿ ಆಯಾ ಸಭೆಗಳವರೂ ಸಭೆ ಕೂಡಿ ಮಹಮ್ಮದೀಯರಿಗೆ ಈ ರೀತಿ ರಿಯಾಯಿತಿಗಳನ್ನು ತೋರಿಸುವುದು ದೇಶಕ್ಕೆ ಹಾನಿಕರವಾಗಿರುವುದೆಂಬದನ್ನು ಸರಕಾರದವರಿಗೆ ಸೂಚಿಸುವರಲ್ಲದೆ, ಪ್ರಜಾವರ್ಗವೆಲ್ಲವನ್ನು ಜಾತಿಮತ ಭೇದಗಳನ್ನೆಣಿಸದೆ ನಿಷ್ಪಕ್ಷಪಾತದಿಂದ ನಡಿಸುವ ಬ್ರಿಟಿಷ್ ನ್ಯಾಯ ಶೀಲತೆಯು ಹಿಂದೂಸ್ಥಾನದ ಬ್ರಿಟಿಷ್ ಸಾಮ್ರಾಜ್ಯ ಪದವಿಯ ಮೂಲ ಮಂತ್ರವಾಗಿರುವುದೆಂಬದನ್ನು ಸಹಾ ಸರಕಾರದವರ ಸ್ಮೃತಿಪಥಕ್ಕೆ ತರುತ್ತಿರುವರು. ಈ ಕಮ್ಮಿಟಿಯವರ ವ್ಯವಸ್ಥೆ ಪ್ರಕಾರ ಇಂಪಿರಿಯಲ್ ನ್ಯಾಯ ವಿಧಾಯಕ ಸಭೆಯ ೬೦ ಜನ ಮೆಂಬರರಲ್ಲಿ ೧೧ ಜನರು ಮಹಮ್ಮದೀಯರೇ ಆರಿಸಲ್ಪಡುವರಂತೆ. ಜಾತಿಮತ ಮತ್ಸರಗಳು ಇನ್ನೂ ಹೆಚ್ಚಿಸ ಕೂಡದೆಂಬ ಭಾವನೆಯಿಂದ ಹಿಂದೂಗಳು ಸುಮ್ಮನೆ ಇದ್ದದರಿಂದ ಮುಸಲ್ಮಾನರ ಈ ವರ್ತನೆಯು ವಿಪರೀತವಾಗಿ ಹಿಂದೂಗಳಿಗೆ ಅಪಾಯಕರವಾದ್ದರಿಂದ ಹಿಂದೂಗಳ ಬಗ್ಯೆ ಸಹಾ ಒಂದು ಸರ್ವ ಹಿಂದೂ ಸಭೆ ಎಂಬದನ್ನು ಏರ್ಪಡಿಸಬೇಕೆಂಬ ಸೂಚನೆಯು ಹಲವು ಕಡೆಗಳಲ್ಲಿ ಅಂಗೀಕರಿಸಲ್ಪಟ್ಟದೆ. ಎಂತೂ "ಎಮ್ಮೆ ತೆರಲೇ ಇಲ್ಲ" ತರುವದೂ ಹ್ಯಾಗೆಯೋ, ಅದರ ಮುಂಚಿತವಾಗಿಯೇ 'ಎಮ್ಮೆಗಿಮ್ಮೆ ತಂದರೆಗಿಂದರೆ- ತವರು ಮನೆ ಕೊಟ್ಟೆಯಾ ನನಗಿಕ್ಕೆಯಾ' ಎಂಬ ಚರ್ಚೆಯು ಬಹಳ ವಿಶೇಷವಾಗಿ ನಡಿಯುತ್ತಿರುವುದು!

~~~~~~

ಕಳೆದ ಸಂಚಿಕೆಯಲ್ಲಿ ಲಾಲಾಲಜಪತ್‌ರೈಯವರಿಗೆ 'ಇಂಗ್ಲೀಷಮನ್' ಎಂಬ ಆಂಗ್ಲೇಯ ಪತ್ರಿಕೆಯು ಅಪರಾಧಧನವಾಗಿ ೧೫,೦೦೦ ರೂಪಾಯಿಗಳನ್ನು ತೆರುವಂತೆ ಕಲ್ಕತ್ತಾ ಹೈಕೋರ್ಟ್ ಆಂಗ್ಲೇಯ ಜಡ್ಜರೊಬ್ಬರು ತೀರ್ಮಾನಿಸಿರುವರೆಂತ ಪ್ರಕಟಿಸಿದ್ದೆವು. ಇಂಗ್ಲೀಷ್‌ಮನ್ ಪತ್ರಿಕೆಯು ಲಜಪತ್‌ರೈಯವರ ಮೇಲೆ ಹೊರಿಸಿದ ಈ ಮೊಕದ್ದಮೆಯ ಕಾರಣಗಳಾದ ಆರೋಪಣೆಗಳು ಕಡು ಕೆಟ್ಟವಾಗಿದ್ದವು. ಲಜಪತರಾಯರವರು ಗಡಿಪಾರಿನ ಬಂಧನದಲ್ಲಿದ್ದು ಮೋರ್ಲೆ ಪ್ರಭುಗಳು ಅವರನ್ನು ಬೇಗನೆ ಬಿಡುಗಡೆ ಮಾಡುವೆನೆಂಬದಾಗಿ ಸೂಚಿಸಿದಾಗ ಇಂಗ್ಲಿಷ್‌ಮನ್ ಪತ್ರಿಕೆಯಲ್ಲಿ ಮೋರ್ಲೆ ಪ್ರಭುಗಳು ಈ ತಮ್ಮ ಸೂಚನೆಯನ್ನು ಕೊನೆಗಾಣಿಸದಂತೆ ಈ ಆರೋಪಣೆಗಳು ಪ್ರಕಟಿಸಲ್ಪಟ್ಟವು. ಪಂಜಾಬು ಸಿಪಾಯಿಗಳ ರಾಜನಿಷ್ಠೆಯನ್ನು ಲಜಪತ್‌ರೈಯವರು ಕೆಡಿಸಲು ಪ್ರಯತ್ನಿಸಿದರೆಂಬದಾಗಿ ಈ ಆರೋಪಣೆಯಾಗಿತ್ತು. ಕೋರ್ಟಿನಲ್ಲಿ ಜಡ್ಜರವರು ಈ ಆರೋಪಣೆಗೆ ರುಜುವಾತು ಕೇಳಿದ್ದಕ್ಕೆ ಯಾವ ರುಜುವಾತೂ ಇರದೆ ಆರೋಪಣೆಯು ಸುಳ್ಳಾಯಿತು.

~~~~~~

"ಮಾತೃಪೂಜಾ" ಎಂಬ ರಾಜದ್ರೋಹಪರವಾದ ಹಾಡನ್ನು ರಚಿಸಿ ಮುದ್ರಿಸಿದ ಮುಕುಂದ ದಾಸ ಮತ್ತು ರಸೀಕ ದಾಸ ಎಂಬಿಬ್ಬರು ಬ್ಯಾರಿಸಾಲಿನ ಮೆಜಿಸ್ಟ್ರೇಟರಿಂದ ಎರಡು ವರುಷದ ಮತ್ತು ಒಂಭತ್ತು ತಿಂಗಳ ಕಠಿನ ಕಾಮಗಾರಿಯ ಸಜಾ ಪಡೆದು ಇವರ ಈ ಮೊಕದ್ದಮೆಯು ಅಪೀಲು ಕಲ್ಕತ್ತೆಯ ಚೀಫ್ ಜಸ್ಟಿಸರಿಂದ ತೀರ್ಮಾನಿಸಲ್ಪಟ್ಟು ಮುಕುಂದ ದಾಸನಿಗೆ ಶಿಕ್ಷೆ ಕಾಯಮಾಗಿ ರಸೀಕನ ಸಜೆಯು ನಾಲ್ಕು ತಿಂಗಳಿಗೆ ಕಡಿಮೆಯಾಯಿತು. ರಸೀಕನು ಈ ಮೊದಲೇ ಶಿಕ್ಷೆಯನ್ನು ಅನುಭವಿಸಿರುವದರಿಂದ ಆತನನ್ನು ಬಿಟ್ಟಿರುವರು.

~~~~~~

ಲಾಹೋರಿನ ದಯಾನಂದ ಮತ್ತು ಫೋರ್ಮನ್ ಕ್ರೈಸ್ತ ಕೋಲೇಜುಗಳ ವಿದ್ಯಾರ್ಥಿ ಭವನದ ಹುಡುಗರ ಕೋಣೆಗಳಲ್ಲಿ 'ಯುಗಾಂತರ' ಪತ್ರಿಕೆಯ ಪ್ರತಿಗಳು ಸಿಕ್ಕವೆ. ವಿದ್ಯಾರ್ಥಿಗಳು ರಾತ್ರಿ ಊಟದನಂತರ ಮಲಗಿಕೊಳ್ಳುವಾಗ ಈ ಪತ್ರಿಕೆಯ ಪ್ರತಿಗಳು ಆ ಕೋಣೆಗಳಲ್ಲಿರಲಿಲ್ಲ. ಬೆಳಿಗ್ಯೆ ಎದ್ದ ಕೂಡಲೇ ಕಿಟಕಿಯ ಎಡೆಗಳಿಂದ ಪ್ರತಿಯೊಂದು ಕೋಣೆಗೂ ಒಂದೊಂದು ಪ್ರತಿಯ ಪ್ರಕಾರ ಹಾಕಿರುವರು. ರಾತ್ರೆ ನಂತರ ವಿದ್ಯಾರ್ಥಿ ಭವನದ ಸುತ್ತಲೂ ಎತ್ತರವಾದ ಗೋಡೆಗಳಿರುವದರಿಂದ ಯಾರಿಗೂ ಇವುಗಳೊಳಗೆ ಬರುವುದು ಅಸಾಧ್ಯ. ರಾಜದ್ರೋಹ ಮುಂತಾದವುಗಳನ್ನು ಕಂಡು ಹಿಡಿಯುವ ಡಿಟೆಕ್ಟೀವ ಕೆಲಸದವನೊಬ್ಬನು ವಿದ್ಯಾರ್ಥಿಗಳಲ್ಲಿ ಇದ್ದು ಈ ರೀತಿಯಾಗಬೇಕೆಂದು ಊಹಿಸುತ್ತಾರೆ.

~~~~~~

ಮುಂಬಯಿಯಲ್ಲಿ ಮುಂಬಯಿ ಮರ್ಚಂಟ್ಸ್ ಬೇಂಕು ಅಥವಾ ಮುಂಬಯಿಯ ಸಾವುಕಾರರ ಬೇಂಕು ಎಂಬ ಹೊಸ ಬೇಂಕು ಸ್ಥಾಪಿತವಾಯಿತು. ಇದರ ಭಂಡವಾಳವು ಒಂದು ಕೋಟಿ ರೂಪಾಗಳಾಗಿದ್ದು 100 ರೂಪಾಯಿಗಳ ಒಂದು ಲಕ್ಷ ಪಾಲುಗಳಾಗಿ ವಿಭಾಗಿಸಲ್ಪಟ್ಟಿದೆ. ಇದರಲ್ಲಿ ಪ್ರಕೃತಕ್ಕೆ ಪಾಲು ಒಂದಕ್ಕೆ 10 ರೂಪಾಯಿಗಳ ಪ್ರಕಾರ ತಕ್ಕೊಳ್ಳುವರು. ಸ್ವದೇಶಿ ಕೈಗಾರಿಕೆಗಳಿಗೂ ಸ್ವದೇಶ ವ್ಯಾಪಾರಕ್ಕೂ ಉತ್ತೇಜನ ಕೊಡುವುದು ಈ ಬ್ಯಾಂಕಿನ ಮುಖ್ಯ ಉದ್ದಿಶ್ಯವಾಗಿರುವುದು. ಹಿಂದೂಸ್ಥಾನದ ಬ್ಯಾಂಕರುಗಳಲ್ಲಿ ಒಂದನೆಯವರಾದ ರಾಜಾ ಶಿವಲಾಲ್ ಮೋತಿಲಾಲ್‌ರಲ್ಲಿಯೂ ಇವರ ಮುಖ್ಯಸ್ಥರಾಗಿರುವ ದಾಸಿಯವರಲ್ಲಿಯೂ ಸಹಾ ಜನರಿಗೆ ಬಹಳ ಭರವಸೆಯಿದ್ದ ಕಾರಣ ಬ್ಯಾಂಕಿನ ಪಾಲುಗಳನ್ನು ಕೊಂಡುಕೊಳ್ಳುವದರಲ್ಲಿ ಜನರು ಮೇಲ್ಬಾಯುತ್ತಿರುವರು.

~~~~~~

ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವಗೋಸ್ಕರ ದರ್ಭಂಗದ ಮಹಾರಾಜರವರು 10 ಲಕ್ಷ ರೂಪಾಯಿಗಳನ್ನು ದಾನದತ್ತ ಮಾಡಿರುವರು.

—:0:—

ಟಿಪೆರಾಂಗ್ ಎಂಬಲ್ಲಿ ಮಿ. ಬೊಕ್ಸವೆಲ್ ಎಂಬ ಬಂಗಾಳ ಮತ್ತು ಅಸ್ಸಾಮ್ ರೈಲ್ವೆಯ ಮುಖ್ಯ ಕ್ಲಾರ್ಕರಾಗಿರುವವರನ್ನು ಹರಿ ಚರಣ ಬಿಸ್ವಾಸ ಎಂಬ ಒಬ್ಬನು ಕೊಲೆ ಮಾಡುವದಗೋಸ್ಕರ ಬೆದರಿಸುವದು ಅಪರಾಧವು ತಪ್ಪಿತಸ್ಥನೆಂತ ರುಜುವಾತಾದಾಗ್ಯೂ ಸಣ್ಣ ಪ್ರಾಯದವನಾದ ಕಾರಣ ಶಿಕ್ಷೆಯನ್ನು ಕಡಿಮೆ ಮಾಡಬಹುದೆಂದು ಅಭಿಪ್ರಾಯ ಪಟ್ಟರೂ ಸೆಷನ್ಸ್ ಜಡ್ಜರವರು ಅಪರಾಧಿಗೆ 10 ವರುಷಗಳ ಕಠಿಣ ಕಾಮಗಿರಿ ಶಿಕ್ಷೆಯನ್ನು ವಿಧಿಸಿರುವರು.

~~~~~~

50 ರೂಪಾಯಿ ವ ಇದಕ್ಕೊಳಗಿನ ಎಲ್ಲಾ ಕರೆನ್ಸಿ ನೋಟುಗಳನ್ನು ಎಲ್ಲಾ ಕಡೆಯಲ್ಲಿಯೂ ಒಂದೇಯಾಗಿ ನಡಿಯುವಂತೆ ಕರೆನ್ಸಿ ಆಕ್ಟನ್ನು ಸದ್ಯದಲ್ಲಿ ತಿದ್ದುಪಡಿ ಮಾಡುವರು.

~~~~~~

ಕಲಕತ್ತೆಯಿಂದ ಬರಕ್‌ಪೂರ ವರೆಗಿನ ರೈಲ್ವೆ ಮಾರ್ಗಗಳಲ್ಲಿ ಬಾಂಬುಗಳನ್ನು ಮುಂಚಿನಂತೆ ಎಸೆಯಲು ಶುರುವಾಗುವದೆಂಬದಾಗಿ ಅಪಾಯಕತ್ವದ ಪಂಗಡದವರ್ಯಾರೋ ಅಲ್ಲಲ್ಲಿ ನೋಟೀಸುಗಳನ್ನು ಹಚ್ಚಿರುವರಂತೆ.

~~~~~~

ಬರುವ ಅಕ್ಟೋಬರ ತಿಂಗಳಲ್ಲಿ ಲಾಹೋರು ಪ್ರಾಂತಿಕ ಕೊಂಗ್ರೆಸು ಸಭೆಯು ಕೂಡುವಂತೆ ಏರ್ಪಾಡು ನಡಿಯುತ್ತಿರುವುದು.

~~~~~~

ಕಳೆದ ಫೆಬ್ರುವರಿಯಲ್ಲಿ ನಾಗಪುರದಲ್ಲಿ ಕೂಡಿದ ಹಿಂದೂಸ್ಥಾನದ ವ್ಯವಸಾಯ ಯಾ ಎಗ್ರಿಕಲ್ಚರಲ್ ಬೋರ್ಡಿನವರ ಸಭೆಯ ವೃತ್ತಾಂತವು ಇತ್ತಲಾಗೆ ಪ್ರಕಟಿಸಿರುತ್ತದೆ. ಆಶ್ರಿತ ಸಂಸ್ಥಾನಗಳಿಂದ ಹಿಂದೂಸ್ಥಾನದ ಇತರ ಪ್ರಾಂತಿಕ ವ್ಯವಸಾಯ ಇಲಾಖೆಗಳಿಂದಲೂ ಅಧಿಕಾರಿಗಳು ಈ ಸಭೆಗೆ ಬಂದಿದ್ದರಾಗಿ ತೋರಿಬರುತ್ತದೆ. ಪುಸ್ಸಾದಲ್ಲಿರುವ ವ್ಯವಸಾಯ ಕೋಲೇಜಿನಲ್ಲಿ ಪ್ರಕೃತ 40 ಮಂದಿ ವಿದ್ಯಾರ್ಥಿಗಳಿಗೆ ಸ್ಥಳ ಸಿಕ್ಕುವುದೆಂತಲೂ ಇಲ್ಲಿ ಯಾವ ಯಾವ ಶಾಖೆಗಳಲ್ಲಿ ತರಬೇತಿ ಹೊಂದಬಹುದಾಗಿಯೂ ಈ ವೃತ್ತಾಂತದಿಂದ ಕಂಡು ಬರುವುದು. ವ್ಯವಸಾಯ ಇಲಾಖೆಯವರ ಉದ್ದಿಶ್ಯಗಳನ್ನೂ ಇಲಾಖೆಯವರು ಆಗ್ಯಾಗ್ಯೆ ಶೋಧನೆಯಿಂದ ಕಂಡು ಹಿಡಿಯುವ ನವೀನ ವ್ಯವಸಾಯ ರೀತಿಗಳನ್ನು ವರ್ತಮಾನಪತ್ರಗಳ ಮುಖೇನ ಜನರಿಗೆ ತಿಳಿಯಪಡಿಸುವ ವಿಧಾನವನ್ನು ಇನ್ನಷ್ಟು ಪ್ರೋತ್ಸಾಹಿಸಬೇಕಾಗಿ ಸಭಾಧ್ಯಕ್ಷರು ಅಭಿಪ್ರಾಯ ಪಟ್ಟಿರುವರು.

~~~~~~

...ಸಿಮ್ಲಾ ಮತ್ತು ಲಾಹೋರಿನಲ್ಲಿ ಭೂಕಂಪಗಳ ನಡುಗಿತ್ತು.

~~~~~~

ಹಿಂದೂಸ್ಥಾನದ ಸಂಯುಕ್ತ ಸಂಸ್ಥಾನದ ಗವರ್ನಮೆಂಟಿನವರು ಶಾಲಾ ಹುಡುಗರಲ್ಲಿ ಬೀಡಿ ಮುಂತಾದವುಗಳನ್ನು ಸೇದುವುದನ್ನು ನಿಲ್ಲಿಸುವರೆ ಅಲ್ಲಿಯ ವಿದ್ಯಾಖಾತೆಯ ಡಿರೆಕ್ಟರವರ ಸೂಚನೆಯನ್ನು ಅಂಗೀಕರಿಸಿ ಶಾಲಾ ಇನ್ಸಪೆಕ್ಟರರುಗಳು ಶಾಲಾ ತನಖಿ ನಡಿಸುವಾಗ್ಯೆ ಈ ವಿಷಯ ಮುಖೋಪಾಧ್ಯಾಯರು ಯಾವ ಏರ್ಪಾಡುಗಳನ್ನು ಮಾಡಿ ಇದನ್ನು ನಿಲ್ಲಿಸುವರೆ ಪ್ರಯತ್ನನಡಿಸುವರೆಂಬದನ್ನು ಆಗ್ಯಾಗ್ಯೆ ತಿಳಿಸುತ್ತಿರಬೇಕಾಗಿ ಸೂಚಿಸಿರುವರು. ಇಂಡಿಯಾ ಗವರ್ನಮೆಂಟಿನವರು ಸಂಯುಕ್ತ ಸಂಸ್ಥಾನದ ಸರಕಾರದವರ ಈ ಏರ್ಪಾಡನ್ನು ಶ್ಲಾಘಿಸಿ ಹಿಂದೂಸ್ಥಾನದ ಇತರ ಪ್ರಾಂತಿಕ ಸರಕಾರದವರಿಗೆ ಸಹಾ ಈ ಏರ್ಪಾಡಿನ ನಿರ್ಣಯಗಳ ನಕಲುಗಳನ್ನು ಕಳುಹಿಸಿಕೊಟ್ಟಿರುವರು.

~~~~~~

ವಢ್ವನ್ ಎಂಬ ಆಶ್ರಿತ ಸಂಸ್ಥಾನದಲ್ಲಿ ದೇಶಭಾಷೆಯ ವಿದ್ಯಾಭ್ಯಾಸವನ್ನು ಪ್ರಜೆಗಳೆಲ್ಲರಿಗೂ ಉಚಿತವಾಗಿ ಕೊಡಬೇಕೆಂಬದಾಗಿ ಏರ್ಪಾಡು ಮಾಡಿರುವದಲ್ಲದೆ ಶಾಲೆಗಳಲ್ಲಿ ಮತ ಭೋದವನ್ನೂ ಸಹಾ ಕೊಡುವಂತೆ ನಿಯಮ ಮಾಡಿರುವರು.

~~~~~~

ಮುಂಬಯಿಯ ಗವರ್ನರ್ ದೊರೆಗಳು ಪುಣೆಯಲ್ಲಿ ಬಹುಮಾನಪಟ್ಟ ಗೋಖಲೆಯವರಿಂದ ಸ್ಥಾಪಿಸಲ್ಪಟ್ಟ ಸರ್ವೆಂಟ್ ಒಫ್ ಇಂಡಿಯಾ ಸೊಸೈಟಿ ಎಂಬ ಭಾರತ ಸೇವಾ ಸಂಘವನ್ನು ಸಂದರ್ಶಿಸಿದರು. ಸಂಘದ ಸ್ಥಾಪಕರಾದ ಗೋಖಲೆಯವರೇ ಮೊದಲಾದ ಇತರ ಸಂಘದ ಮೆಂಬರರೊಂದಿಗೆ ಗವರ್ನರ್ ದೊರೆಗಳು ಚಾ ಕುಡಿದು, ಸಂಘದವರ ಉದ್ದಿಶ್ಯಗಳನ್ನು ಶ್ಲಾಘಿಸಿ, ಸಂಘದ ಅಭಿವೃದ್ಧಿಯನ್ನು ಮುಂದುನೋಡುತ್ತಿರುವೆನೆಂಬದಾಗಿ ಅಪ್ಪಣೆಕೊಟ್ಟಿರುವರು.

~~~~~~

ಸರ್ ವಿಲಿಯಂ ವಿಲ್ಲಿ ಕರ್ಜನರವರ ಕೊಲೆಯಿಂದುಂಟಾದ ಸಹಸಂತಾಪವನ್ನು ಸೂಚಿಸುವರೆ ಹಿಂದೂಸ್ಥಾನದ ಕಲ್ಕತ್ತೆ, ಮುಂಬಯಿ, ಪುಣೆ, ಲಾಹೋರು, ಮದ್ರಾಸು ಮೊದಲಾದ ಅನೇಕ ಪ್ರಾಂತ್ಯಗಳಲ್ಲಿ ಭಾರತೀಯರು ಸಭೆಕೂಡುತ್ತಿರುವರು. ಕೊಲೆಪಾತಕಿಯ ಅಣ್ಣಂದಿಯರಾದ ಡಾಕ್ಟರ್ ಎಮ್. ಎಲ್. ಮತ್ತು ಬಿ. ಎಲ್. ಧಿಂಗ್ರರವರು ತಮ್ಮ ಕುಟುಂಬದ ಪರವಾಗಿ ಸರ್ ಕರ್ಜನರವರ ಮರಣದಿಂದುಂಟಾದ ವಿಷಾದವನ್ನು ಸೂಚಿಸುವರೆಯೂ, ಮದನಲಾಲನು ವಿಕಾರ ಬುದ್ಧಿಯುಳ್ಳವನಾಗಿದ್ದು ದುಷ್ಪ್ರೇರಣೆಯಿಂದ ಈ ಕೊಲೆಯನ್ನು ಮಾಡಿದನೆಂಬದಾಗಿ ತಿಳಿಸಲಿಕ್ಕೂ ವ್ಯಾಸರಾಯ ಪ್ರಭುಗಳ ಪ್ರೈವೇಟ ಸೆಕ್ರೆಟರಿಯವರ ಭೇಟಿ ಪಡದಿರುವರು. ಈ ಕ್ರೂರ ಕೃತ್ಯದ ತಮ್ಮ ಅಂಜಿಕೆಯನ್ನೂ, ವಿಷಾದವನ್ನೂ, ಮೋರ್ಲೆಪ್ರಭುಗಳವರಿಗೂ ಬ್ರಿಟಿಷ ಜನರಿಗೂ, ತಮ್ಮ ಸಹಸಂತಾಪವನ್ನು ವಿಲ್ಲಿಯವರ ವಿಧವೆಯರಿಗೂ ಸೂಚಿಸಬೇಕಾಗಿ ಬೇಡಿಕೊಂಡಿರುವರು.

~~~~~~

ಲಂಡನಿನ ಟೈಮ್ಸ್ ಪತ್ರಿಕೆಯಲ್ಲಿ ವಿರೇಂದ್ರನಾಥ ಚಟೋಪಾಧ್ಯನೆಂಬವನು ಸರ್ ವಿಲಿಯಮ್ ಕರ್ಜನರವರ ಕೊಲೆವಿಷಯವಾಗಿ ತನ್ನ ಹುಚ್ಚು ಭ್ರಮೆಯನ್ನು ಈ ರೀತಿ ಪ್ರಕಟಿಸಿರುವನೆಂಬದಾಗಿ ಸ್ಟೇಟ್ಸ್‌ಮನ್ ಎಂಬ ಕಲ್ಕತ್ತೆಯ ಪತ್ರಿಕೆಯಿಂದ ತಿಳಿದುಬರುವದು. ಲಂಡನಿನಲ್ಲಿ ವಿಲ್ಲಿಯವರ ಮರಣದ ಸಲುವಾಗಿ ತಮ್ಮ ಪರಿತಾಪವನ್ನು ಸೂಚಿಸುವರೆ ಸಭೆಯು ಕೂಡಿತ್ತು. ಈ ಸಭೆಯಲ್ಲಿ ಬ್ಯಾರಿಷ್ಟರಿ ಪರಿಕ್ಷೆಗೆ ಕಲಿಯಕ್ಕೆ ಹೋದ ಸವರಕಾರ್ ಎಂಬವನು ಈ ಸಭೆಯವರ ಸಹಸಂತಾಪ ಸೂಚನೆಯ ನಿರ್ಣಯವನ್ನು ಪ್ರತಿಭಟಿಸಿದ್ದನ್ನು ಆದರಿಸಿ ಬರೆದು ಬಲತ್ಕಾರವು ಹಿಂದೂಸ್ಥಾನದಲ್ಲಿ ವಿನಾಶಕ್ಕೆ ಕಾರಣವಾಗುವದೆಂದೂ, ಆಂಗ್ಲೇಯರು ಜನೋಪಕಾರ ಭಾವದಿಂದ ತಾವು ಹಿಂದುಸ್ಥಾನದಲ್ಲಿರುವರೆಂಬದಾಗಿ ಆಂಗ್ಲೇಯರು ಚಿಂತಿಸಿದರೆ ಈ ಚಿಂತನೆಯು [illegible]ವದೆಂದೂ, ಇನ್ನು ಆಗಲಿಕೆ
~~~~~~

ರುವ ಕೊಲೆಗಳು ಬಹಳವಾಗಿರುವವೆಂದೂ ಈ ಕೊಲೆಗಳಿಗೆ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡ ಬಿಡದೆ ಹಿಂದೂಸ್ಥಾನವನ್ನು ಬ್ರಿಟಿಷರ ಪ್ರಯೋಜನಕ್ಕಾಗಿ ಆಳುವ ಮನಸುಳ್ಳವರೇ ಕಾರಣವಾಗಿರುವರೆಂದೂ, ಈ ಪ್ರಕಾರ ತನ್ನ ಹುಚ್ಚು ಅಭಿಪ್ರಾಯಗಳನ್ನು ಪ್ರಕಟಿಸಿರುವರಂತೆ. ಲಂಡನ್ ಪೋಲೀಸಿನವರು ಈ ವಿಷಯ ಶೋಧನೆ ನಡಿಸುತ್ತಿರುವರು. ಲಂಡನ್ ಪಟ್ಟಣದಲ್ಲಿ ಅನೇಕ ದ್ರವ್ಯವ್ಯಯದಿಂದ ಪ್ರವಾಸಮಾಡಿಕೊಂಡಿರುವ ಇಂತಹ ಭಾರತೀಯನು ಈ ರೀತಿ ವರ್ತಮಾನಪತ್ರಗಳಲ್ಲಿ ಬುದ್ಧಿಭ್ರಮೆಯಿಂದ ಗಳಹುವುದು ಭಾರತೀಯರೆಲ್ಲರಿಗೂ ಶೋಕಾಸ್ಪದವಾಗಿರುವುದು.

ಲಾಲಾಲಾಜಪತರ್ಯ್ಯವರು ಪೀಡಿತ ಜನೋದ್ಧಾರಸೆಯ ಸಲುವಾಗಿ, ಮಾಡಿದ ಭಾಷಣದಲ್ಲಿ ನಾಸ್ತಿಕರೂ ಶೂದ್ರರೂ ಹೆಚ್ಚಿರುವ ದೇಶಗಳಲ್ಲಿ ಕ್ಷಾಮವು ನಿರಂತರವಾಗಿರುವದೆಂಬ ಮನುವಚನವನ್ನು ಹೇಳಿ, ಈ ಸಂಕಟ ನಿವಾರಣೆಗಾಗಿ ಶೂದ್ರರಿಗೆ ವಿದ್ಯಾಭ್ಯಾಸಕೊಟ್ಟು ದ್ವಿಜರ ಪದವಿಗೆ ತರುವದೇ ಶ್ರೇಷ್ಠ ಉಪಾಯವಾಗಿರುವುದೆಂಬದನ್ನು ಸೂಚಿಸಿರುವರು

~~~

ಮುಂಬಯಿಯ ನ್ಯಾಯವಿಧಾಯಕ ಸಭೆಯ ನೊನ್ ಆಫೀಸಿಯಲ್ ಮೆಂಬರರವರು ಬಹುಮಾನಪಟ್ಟ ಗೋಖಲೆಯವರನ್ನೇ ತಿರುಗಿ ತಮ್ಮ ಸಭೆಯಿಂದ ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಯಾಗಿ ಆರಿಸಿರುವರು

~~~

ಹಿಂದೂಸ್ಥಾನದ ಸರ್ವ ಸೇನಾಧಿಪತಿಯಾದ ಕಿಚಿನರ್ ಪ್ರಭುಗಳು ಹಿಂದೂಸ್ಥಾನದಲ್ಲಿ ತಮ್ಮ ಕೆಲಸದ ಅವಧಿಯು ತೀರಿದ ನಂತರ ಔಸ್ಟ್ರೇಲ್ಯ ಸರಕಾರದವರ ಅಪೇಕ್ಷೆ ಮೇರೆಗೆ ಅಲ್ಲಿಯ ಸೇನೆಯನ್ನು ವ್ಯವಸ್ಥೆ ಪಡಿಸಲಿಕ್ಕೆ ಹೋಗುವರು

ಕಲ್ಕತ್ತೆಯ ಇಂಡಿಯನ್ ಎಸೋಸಿಯೇಶನ್ ಸಭೆಯವರು ಈ ತಿಂಗಳ ತಾ ೧೧ರಲ್ಲಿ ಸಭೆ ಕೂಡಿ ಗಡಿಪಾರು ಮಾಡಿದವರನ್ನು ಬಿಡುಗಡೆ ಮಾಡಬೇಕೆಂಬದಾಗಿಯೂ, ಹೀಗೆ ಗಡಿಪಾರು ಮಾಡಿದವರನ್ನು ಅರೆಗಳಲ್ಲಿ ಇರಿಸಿ ಅವರ ವ್ಯಾಯಾಮ ಮತ್ತು ಆಹಾರಗೋಸ್ಕರ ತಕ್ಕ ವಿಲವಾರಿಯನ್ನು ಮಾಡಿಲ್ಲವೆಂಬದಾಗಿಯೂ, ಅಪರಾಧಿಗಳ ಮೇಲಿರುವ ತಪ್ಪುಗಳನ್ನು ಹೇಳಿ ಅವುಗಳನ್ನು ನ್ಯಾಯವಾದ ರೀತಿಯಲ್ಲಿ ತನಿಖೆ ಮಾಡಲು ಸಂದರ್ಭಗಳನ್ನು ಕೊಡಬೇಕೆಂಬದಾಗಿಯೂ ಪ್ರತಿಪಾದಿಸಿರುವರು ಈ ಸಂದರ್ಭದಲ್ಲಿಯೇ ಮೋರ್ಲೆ ಪ್ರಭುಗಳ ನವೀನ ಏರ್ಪಾಡುಗಳಲ್ಲಿ ಮಹಮ್ಮದೀಯರಿಗೆ ಕೊಡಬಹುದಾದಂಥಾ ರಿಯಾಯತಿಗಳ ವಿಷಯ ಆಕ್ಷೇಪಿಸಿರುವರಲ್ಲದೆ, ಮಾರ್ಪಾಟಿನ ವಿವರವೆಲ್ಲವೂ [illegible]ವಾಗುವ ಮೊದಲೇ ಅವುಗಳ ವಿಷಯ ಪ್ರಜಾ[illegible]ನ್ನು ತಿಳಕೊಳ್ಳುವರೆ ಅವಕಾಶ ಕೊಡಬೇ[illegible]ಕಾರದವರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯ[illegible]ವರು

~~~

ಬಾಬು ಅರವಿಂ[illegible]ಘೋಷರವರು ಕಲ್ಕತ್ತೆಯಲ್ಲಾದ ಒಂದು ಸ್ವದೇಶಿ[illegible]ವಳದ ಸಭೆಯಲ್ಲಿ ತನಗೂ ಪೋಲೀಸಿನವರಿಗೂ ಆದ ಈ ವೃತ್ತಾಂತವನ್ನು ಸಭೆಯವರಿಗೆ ತಿಳಿಸಿರುವರು ತಾನು ಬಾಯಿ ತೆರೆಯುವಂಥಾದ್ದು ಒಹಳ ವಿಪರೀತವಾಗುತ್ತದೆಂದೂ ವರ್ತಮಾನ ಪತ್ರಗಳ ಪ್ರತಿನಿಧಿಗಳಿಗೆ ತನ್ನ ಜೈಲಿನ ಅನುಭವವನ್ನು ಕೊಟ್ಟದ್ದು ಆಕ್ಷೇಪಕರವಾಗಿರುವುದೆಂದೂ ಇದರಿಂದ ತನಗೆ ಅಪಾಯ ಉಂಟಾಗುವದೆಂದೂ ಪೋಲೀಸಿನವರು ತನಗೆ ತಿಳಿಸಿರುವರಾಗಿ ಹೇಳಿ, ಜೈಲಿನಲ್ಲಿಯ ಜೀವನವು ಅದು ತೋರುವಷ್ಟು ಕಠಿಣವಲ್ಲವೆಂದೂ ದೇಶಸೇವೆಯನ್ನು ಮಾಡಲು ಮನಸ್ಸುಳ್ಳವರು ಯಾತನೆಗಳನ್ನಾದರೂ ಸಹಿಸಿಕೊಳ್ಳಲು ಶಕ್ತರಾಗಿರುವರೆಂದೂ ಸಭಿಕರಿಗೆ ಸೂಚಿಸಿದರು.

~~~

ದಕ್ಷಿಣ ಹಿಂದುಸ್ಥಾನ.

ಕೊಯಂಬುತ್ತೂರು ವ್ಯವಸಾಯ ಇನ್ಸ್ಟಿಟ್ಯೂಟ್ ಈ ತಿಂಗಳ [illegible]ನೇ ತಾರೀಕಿನಲ್ಲಿ ಸರ್ ಆರ್ಥರ್ ಲಾಲಿ ದೊರೆಗಳವರಿಂದ ತೆರಯಲ್ಪಟ್ಟಿತು.

~~~

ಮದ್ರಾಸು ಸಂಸ್ಥಾನದಲ್ಲಿ ಸ್ಟಾಂಪುಗಳಿಂದ ಸರಕಾರದವರಿಗೆ ಬ್ಬನ್ ಹುಟ್ಟುವಳಿಯು ೧೯೦೮-೦೯ ವರುಷಕ್ಕೆ ಒಂದು ಕೋಟಿ ಮೂರು ಲಕ್ಷ ರೂಪಾಯಿವಾಗಿತ್ತೆಂಬದಾಗಿ ತಿಳಿದುಬರುತ್ತದೆ.

~~~

ಸರ್ ಗಾಬ್ರಿಯಲ್ ಸ್ಟೋಕ್ಸರ ಬಹುಮಾನಾರ್ಥವಾಗಿ ಮದ್ರಾಸು ಯುನಿವರ್ಸಿಟಿಯಲ್ಲಿ ಸ್ಟೋಕ್ಸರ ಹೆಸರಲ್ಲಿ ವಿದ್ಯಾರ್ಥಿಗಳಿಗೆ ಒಂದು ಇನಾಮನ್ನು ಶಾಶ್ವತಾಗಿ ಕೊಡುವರೆ ಏರ್ಪಡಿಸಿದ ಫಂಡಿಗೆ ನಮ್ಮ ಕಲೆಕ್ಟರ ದೊರೆಗಳವರು ೫೦೦ ರೂಪಾಯಿಗಳನ್ನು ಚಂದಾಹಣವಾಗಿ ಕೊಟ್ಟಿರುವರೆಂಬದಾಗಿ ತಿಳಿದುಬರುತ್ತದೆ

~~~

ನಮ್ಮ ಗವರ್ನರ ದೊರೆಗಳ ಕಾರ್ಯನಿರ್ವಾಹಕ ಸಭೆಯ ಸೀನಿಯರ್ ಮೆಂಬರರಾದ ಸರ್ ಜಿ ಎಸ್ ಫೋರ್ಬ್ಸ ಕೆ ಸಿ ಎಸ್ ಐರವರು ತಮ್ಮ ಕೆಲಸದ ಚಾರ್ಜು ವಹಿಸಿ ಕೊಟ್ಟು ವಿಲಾಯತಿಗೆ ತೆರಳಿರುವರು

~~~

ಚಿಕ್ಕಮಗಳೂರು ಇಲ್ಲಿಯ 'ಅಂಜುಮನ್ ಇಸ್ಲಾಮಿಯಾ' ಸಂಘದವರ ಮೂರನೇ ವರ್ಷವರ್ಧಂತಿಯನ್ನು ಇದೇ ತಿಂಗಳ ಸುಮಾರು ೧೭, ೧೮ನೇ ತಾರೀಕಿಗೆ ಇಲ್ಲಿಯ ಮುಸಲ್ಮಾನರು ಆಚರಿಸುವರು ಆಕಾಲಕ್ಕೆ ಶಿಮೊಗ್ಗಾದಲ್ಲಿರುವ ಡಿವಿಜನಲ್ ಮತ್ತು ಸೆಷ್ಯನ್ಸ್ ಕೋರ್ಟಿನ ಜಡ್ಜರಾದ ಮಿ. ಪ್ಲಂಬರ್ ಸಾಹೇಬರು ಅಧ್ಯಕ್ಷ ಸ್ಥಾನವನ್ನು ವಹಿಸುವರೆಂದು ವದಂತಿ ಇದೆ

ಈಗ ಇಲ್ಲಿ ಮಳೆ ಬಹಳ ಜೋರಾಗಿ ಬೀಳುತ್ತಿದೆ ಶೀತವು ಸಹಾ ವಿಪರೀತವದೆ ಇಷ್ಟರವರೇಗೆ ಬಂದ ಮಳೆಯು ಜಾಸ್ತಿಯಾದ್ದರಿಂದ ಈ ಕಾಲಕ್ಕೆ ಮುಖ್ಯ ಫಸಲಾಗಿದ್ದ ಆಲುಗೆಡ್ಡೆ ಪೈರಿಗೆ ತುಂಬಾ ಹಾನಿಯಿದೆ ರೂಪಾಯಿಗೆ ಎಂಟು ಬಳೆ ಪಸಲು ಸಿಕ್ಕುವದು ಕಷ್ಟವೆಂದು ಇಲ್ಲಿಯ ನೆರೆಹೊರೆಯ ಹಳ್ಳಿಯ ರೈತರು ಹೇಳಿಕೊಳ್ಳುತ್ತಾರೆ ಈ ಜಿಲ್ಲೆಗೆ ಮುಖ್ಯ ಫಸಲಾಗಿರುವ ಕಾಪಿ ಪೈರು ಈಗ ಚನ್ನಾಗಿ ಇದೆ ಅದ್ದರಿಂದ ಈ ವರುಷ ಕಾಪಿ ಫಸಲು ಅಧಿಕವಾಗಬಹುದೆಂದು ಊಹಿಸಬಹುದು ಈ ಪ್ರಾಂತ್ಯದ ಕಾಪಿ ತೋಟಗಳಲ್ಲಿ ಪ್ಲಾಂಟರುಗಳು ಅತ್ಯಾತುರದಿಂದ ಕಾಮಗಿರಿಗಳನ್ನು ಮಾಡಿಸುತ್ತಾ ಇದ್ದಾರೆ.

ಈಗ ಸಂತೆಯಲ್ಲಿ ರಾಗಿಯು ರೂಪಾಯಿ ಒಂದಕ್ಕೆ ೧೦ ಸೇರಿನಂತೆಯೂ ಅಕ್ಕಿಯು ೬ ಸೇರು ೭ ಸೇರಿನಂತೆಯೂ ವಿಕರಿಯಾಗುವದರಿಂದ ಇನ್ನೂ ಬಡಜನಗಳ ಗೋಳು ತಪ್ಪಲಿಲ್ಲ ಇಲ್ಲಿಯ ವರ್ತಕರ ಪೈಕಿ ಕೆಲವರು ಬೆಜವಾಡದಿಂದ ರಾಗಿಯನ್ನೂ ಅಕ್ಕಿಯನ್ನೂ ಮತ್ತು ಬೇರೆ ದೇಶಗಳಿಂದಲೂ ರಾಗಿಯನ್ನೂ ರಂಗೂನಕ್ಕಿಯನ್ನೂ ತರಿಸದೆ ಇದ್ದರೆ ಅಕ್ಕಿ ರಾಗಿ ಧಾರಣೆ ಹ್ಯಾಗೆ ನಿಲ್ಲುತ್ತಿತ್ತೊ?

ಇಲ್ಲಿ ಸ್ವಲ್ಪ ದಿವಸದ ಹಿಂದೆ ಈ ಊರ ಮುನಿಸಿಪಲ್ ವಾರ್ಡು ಮೆಂಬರುಗಳನ್ನು ಹೊಸದಾಗಿ ಚುನಾಯಿಸುವ ಬಗ್ಗೆ ಡಿಪ್ಯುಟಿ ಕಮಿಶನರ್ ಸಾಹೇಬರ ಅಧ್ಯಕ್ಷತೆಯಲ್ಲಿ ಕೂಡಿದ ಮುನಿಸಿಪಲ್ ಮೀಟಿಂಗಿನಲ್ಲಿ ಕೋಟೆ ಮತ್ತು ಹಿರೇಮಗಳೂರು ವಾರ್ಡಿಗೆ ಮ| ರಾ| ಅಡ್ವೊಕೇಟ್ ಯು ಎಸ್ ಶಿವರಾಯರನ್ನೂ ಮತ್ತು ಮಿ| ರಾ| ಹಲಿಷೇ ಗೌಡರನ್ನೂ, ಪೇಟೆ ವಾರ್ಡಿಗೆ ಮ| ರಾ| ಅಬ್ದುಲ್ಲ ಬಾಲಕ ಸಾಹೇಬರನ್ನೂ ಮತ್ತು ಮ| ರಾ| ಪ್ಲೀಡರ್ ಮಂಜಯ್ಯನವರನ್ನೂ, ಬಸವನಹಳ್ಳಿ ಮತ್ತು ದಂಟ್ರಮಕ್ಕಿ ವಾರ್ಡಿಗೆ ಮ ರಾ ಸಿ ವಾಸುದೇವರಾಯರನ್ನೂ ಮತ್ತು ಮ| ರಾ| ಕೇಶವಯ್ಯನವನ್ನೂ ಈ ರೀತಿ ನೇಮಕಮಾಡಿರುತ್ತಾರೆ.

ಈಗ ಸುಮಾರು ಎರಡು ವರುಷದಿಂದೀಚೆಗೆ ಕಾಣದ ಪ್ಲೇಗುರೋಗವು ಪುನಹಾ ಈ ಪಟ್ಟಣದಲ್ಲಿ ತಲೆದೋರುತ್ತಿದೆ. ಅಲ್ಲಲ್ಲಿ ಒಬ್ಬಿಬ್ಬರು ಸಾಯುತ್ತಿದ್ದಾರೆ ಅಲ್ಲಲ್ಲಿ ಸ್ವಲ್ಪ ಇಲಿಗಳು ಸಾಯುವದರಿಂದ ಪ್ಲೇಗು ವಾಪಾಸು ಶುರುವಾಗುವ ಸಂಭವವಿದೆಯೆಂದು ಸರಕಾರದವರೂ ಮುನಿಸಿಪಾಲಿಟಿಯವರೂ ಜನರಿಗೆ ಪ್ಲೇಗುಡಾಕು ಹಾಕಿಸಿಕೊಳ್ಳಬಹುದೆಂದು ಉತ್ತೇಜನ ಕೊಡುತ್ತಿದ್ದಾರೆ. ಇಲ್ಲಿಯ [illegible] ಈ ಟೌನಿನಲ್ಲಿ ಮುಖಂಡರುಗಳಾಗಿರುವ ಕೆಲವು ಮಾನ್ಯ ಗೃಹಸ್ಥರೂ ವಿದ್ಯಾರ್ಥಿಗಳಲ್ಲಿ ಕೆಲವರು ಸದರಿ ಪ್ಲೇಗ್ ಡಾಕನ್ನು ತಾ. ೧೧-೭-೦೯ರಲ್ಲಿ ಹಾಕಿಸಿಕೊಂಡರು. ಇನ್ನೂ ಹಲವರು ಸಹಾ ಪ್ಲೇಗ್ ಡಾಕನ್ನು ಹಾಕಿಸಿಕೊಳ್ಳುವರೆಂದು [illegible] ವಿದ್ದಾರೆ. ಈ ಮಳೆಗಾಲದಲ್ಲಿ ಪ್ಲೇಗ್ ರೋಗವು ಪ್ರಬಲಿಸಿದರೆ ಜನರು ತಮ್ಮ ತಮ್ಮ ಮನೆಗಳನ್ನು ಬಿಟ್ಟು ಹೋಗುವದು ಕಷ್ಟವಾಗಿದೆ. ಯಾಕೆಂದರೆ ಶೆಡ್ಡುಗಳಿಗೆ ಹೋಗಿ ಉಳಕೊಂಡರೆ ಛಳಿ ರೋಗದಿಂದಲೇ ಸಾಯುವದು ನಿಸ್ಸಂದೇಹವು. ಹೀಗೆ ಉಭಯಸಂಕಟವಾಗುವದು. ಹ್ಯಾಗೂ ಈ ಆಪತ್ತಿನಲ್ಲಿ ಈ ಪುರ ನಿವಾಸಿಗಳಿಗೆ ಭಗವಂತನೇ ಕಾಪಾಡಬೇಕು.

~~~

ದಕ್ಷಿಣಕನ್ನಡ.

ಮಂಗಳೂರು. ಕಳದ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣವಿತ್ತೆಂಬದಾಗಿ ಕೇಳುತ್ತೇವೆ

ಮೊನ್ನೆ ದಿನ ಪೋಸ್ಟ್ ಮಾಸ್ಟರ್ ಜನರಲರು ಇಲ್ಲಿಗೆ ಬಂದಿರುವರು

ತಾ 13ನೇ ಜುಲಾಯಿ ಮಂಗಳವಾರ ದಿನ ರಾತ್ರೆ ಪುರುಷೋತ್ತಮನಾಯಿಕ ಸೇಟರ ಬಂದರಿನಿಂದ 5 ಮುಡಿ ಜೀರಸಾಲೆ ಅಕ್ಕಿಯನ್ನು ಯಾರೋ ಕಳವುಮಾಡಿದ್ದಾರಂತೆ

ಜಿಲ್ಲಾ ಸರ್ಜನ್ ಡಾಕ್ಟರ್ ಬೋನರವರಿಗೆ ೨ ವರುಷದ ರಜಾ ಸೆಂಕ್ಷನ್ ಆಗಿದೆ

ಕಳದ ಸೋಮವಾರ ಇಲ್ಲಿಗೆ ಬಂದ ಬೋರ್ಡ್ ಕಮ್ಮಿಶನರ್ ಬಹುಮಾನ ಪಟ್ಟ ಜೆ ಆಂಡ್ರ್ಯು ದೊರೆಗಳು ಹಜೂರ್ ಕಚೇರಿ ತಾಲೂಕ್ ಕಚೇರಿಗಳಿಗೆ ಬಂದು ಹೋದರು ಇವರಿಗೂ ಇತರ ಮಾನ್ಯ ಆಂಗ್ಲೇಯ ಗೃಹಸ್ಥರಿಗೂ ಕಲೆಕ್ಟರ್ ದೊರೆಗಳಲ್ಲಿ ಔತಣವಾಯಿತು

ಇಲ್ಲಿಯ ಮುನಿಸಿಪಲ್ ನೌಕರರಲ್ಲಿ ೧೭ ರೂಪಾಯಿಗೆ ಮೀರದ ಸಂಬಳದವರಿಗೆ ತಿಂಗಳಿಗೆ ೧ ರೂಪಾಯಿ ಪ್ರಕಾರ ಮುಂಗಾಯಿ ಭತ್ತೆ ಸೆಂಕ್ಷನ್ ಆಗಿದೆ

ನೆರಿಯಾ ಇಲ್ಲಿ ಈ ಜೂಲಾಯಿ ೮ನೇ ನರಿಯದ ಸುಬ್ರಾಯ ಹೆಬ್ಬಾರರವರ ಏಲಕ್ಕಿಮಲೆಯಲ್ಲಿ ಕರ್ಪದಲ್ಲಿ ಬಿದ್ದಿದ್ದ ಎರಡಾನೆಗಳಲ್ಲಿ ಒಂದು ಹೆಣ್ಣಾನೆಯು ಎರಡು ಮರಿಯನ್ನು ಹಾಕಿರುವುದು

~~~

ಕಾಸರಗೋಡು ಇಲ್ಲಿಯ ಲೋಕಲ್ ಫಂಡ್ ಓವರ್ಸಿಯರ್ ಮ ರಾ ಪಂಚಾಪಿಕೇಶಯ್ಯರು ಉಪ್ಪಿನಂಗಡಿ ತಾಲೂಕು ಓವರ್ಸಿಯರರಾಗಿ ವರ್ಗವಾಗಿ ಹೋದದ್ದರಿಂದ ಇವರ ಬದ್ಲೀಗೆ ಇಲ್ಲಿ ಮ ರಾ ಹೆಬ್ಬಾರರು ಬಂದಿರುವರಾಗಿ ಕೇಳುತ್ತೇನೆ

ನಮ್ಮ ಸಬ್ ಪೋಸ್ಟ್ ಮಾಸ್ಟರ್ ಮ ರಾ ಎನ್ ಯಸ್ ಗೋಪಾಲರಾಯರು ೬ ತಿಂಗಳ ರಜೆ ಮೇಲೆ ತನ್ನ ಸ್ವಂತ ಊರಾದ ತಂಜಾವೂರಿಗೆ ಹೋಗುತ್ತಾರಾದ್ದರಿಂದ ಇವರ ಬದ್ಲೀಗೆ ಇಲ್ಲಿ ಮಲಬಾರಿಂದ ಮ ರಾ ವಿ ಸುಬ್ಬರಾಯರವರು ನಿನ್ನೆ ಒಂದು ಚಾರ್ಜ್ ವಹಿಸಿಕೊಂಡಿದ್ದಾರೆ

ಇಲ್ಲಿಯ ವ್ಯಾಕ್ಸಿನೇಷನ್ ಇನ್ಸ್‌ಪೆಕ್ಟರ್ ಮ ರಾ ಪಿ ವಿ ಶೇಷಯ್ಯರ ಮನೆಯಿಂದ ಮೊನ್ನೆ ಆದಿತ್ಯವಾರ ಹಗಲು ಸುಮಾರು ೧೧ ಘಂಟೆ ಸಮಯ ಮನೆಯ ಹೆಂಗಸರು ಮುಂತಾದವರು ಮನೆಯ ಒಂದು ಕಡೆಯಲ್ಲಿರುವಾಗ್ಯೆ ಮುಂದುಗಡೆಯಿಂದ ಇಬ್ಬರು ನೆರೆಕರೆಯಲ್ಲಿರುವ ಶೂದ್ರ ಜಾತಿಯ ಹುಡುಗರು ಬಂದು ಒಳಹೊಕ್ಕು ಚಿನ್ನಾಭರಣ ನಗದಿ ವಗೈರೆ ಇಟ್ಟಿರುವ ಒಂದು ಸಣ್ಣ ಪೆಟ್ಟಿಗೆಯನ್ನು ತೆಗದುಕೊಂಡು ಪಲಾಯನ ಮಾಡಿದರು ಕೆಲವು ತಾಸಿನನಂತರ ಮನೆಯವರಿಗೆ ತಿಳಿಯಲಾಗಿ ಬಹಳ ಕಡೆಯಲ್ಲಿ ತಲಾಶಿಯನ್ನು ಪ್ರಯತ್ನಿಸಿದ್ದಲ್ಲದೆ ಪೋಲೀಸಿನವರಿಗೆ ಸಹ ರಿಪೋರ್ಟ್ ಕೊಟ್ಟು ಪೋಲೀಸಿನವರೂ ಮತ್ತು ಕೆಲವರು ಕೂಡಿ ಸದರಿ ಇಬ್ಬರು ಹುಡುಗರನ್ನು ಹಿಡದು ನಿಜಸ್ಥಿತಿಯೆಲ್ಲಾ ತಿಳಿದು ಪೂರ್ಣ ಸೊತ್ತು ಸಮೇತ ನಿನ್ನೆ ಮಧ್ಯಾನ್ಹಕ್ಕೆ ದಸ್ತಗಿರಿ ಮಾಡಿದರು. ಸದರಿ ಕಳ್ಳ ಹುಡುಗರು ಜಾತಿಯಲ್ಲಿ ಶೂದ್ರರೂ, ಪ್ರಾಯದಲ್ಲಿ ಸುಮಾರು ೧೦ ಯಾ ಹನ್ನೆರಡು ವರುಷದವರಾದಾಗ್ಯೂ ಬಳ್ಳೇ ದೇವ ಭಕ್ತಿಯಿಂದ ಕದ್ದು ತಂದ ಪೆಟ್ಟಿಗೆಯಿಂದ ರೂಪಾಯಿ ೨ ಮಾತ್ರ ತೆಗದು ಅಂಗಡಿಯಲ್ಲಿ ವಸ್ತ್ರ [illegible] ದೇವಸ್ಥಾನದ ಭಂಡಾರಕ್ಕೆ ಪ್ರಥಮತಾ [illegible] ಒಂದು

[illegible] ಯವರಿಗೆ ಯಥಾ [illegible] ಸಂಚಾರ ಮಾಡು ಒಂದು [illegible] ಅವಲಕ್ಕಿ [illegible] ಸಾಮಗ್ರಿಗಳು ತಕೊಂಡು ಇ [illegible] ದಿವಸ ನಿಶ್ಚಿಂತರಾಗಿದ್ದರು, ಬಾಕಿ [illegible] ಹೊತ್ತಿಗೆ ತಮ್ಮ ಮನೆಯಲ್ಲಿರುವ ಹೆಂಗ ಸಿನ ಸ್ವಾಧೀನ [illegible] ಏನೂ [illegible] ನಿನ್ನೆ ಪೋ ಲೀಸಿನವರ ಸ್ವಾಧೀನ ಶಿಕ್ಷೆ ಇರುವದಂತೆ ಇದೇ ತರದ ಹುಡುಗರು ಸುಮಾರು [illegible] ಕ್ಕಿಂತ ಹೆಚ್ಚು ನಿರುದ್ಯೋಗಿ ಗಳಾಗಿ ಈ ಕಸಬಿಯಲ್ಲಿ ಅಲೆದಾಡುತ್ತಾರೆ. ಇವರ ಮೇ ಲೆ ಪೋಲೀಸ್ ಅಧಿಕಾರಿಗಳು ತಕ್ಕರೀತಿ ದೃಷ್ಟಿ ಇಟ್ಟು ಒಳ್ಳೇ ಮಾರ್ಗಕ್ಕೆ ತರಬೇಕಾಗಿ ಕೋರುತ್ತೇನೆ.

ಹಂಗಾರಕಟ್ಟೆ. ಇಲ್ಲಿ ಸಮೀಪದಲ್ಲಿ ಒಂದು ಶಾಲೆಯಿಲ್ಲದೆ ಹುಡುಗರು ಖಾಲಿ ತಿರುಗಾಡಿಕೊಂಡು ಪೋಕರಿಯಾಗುತ್ತಿರುವರು. ಇಲ್ಲಿಂದ ಒಂದುವರೆ ಮೈಲು ದೂರ ಒಂದು ಶಾಲೆ ಇದ್ದರೂ ಅದು ಧ್ರುವಪ್ರಾಂತ್ಯದಲ್ಲಿ ಇರುವಂತೆ ಇರುವುದು. ಅಲ್ಲಿ ಸೂರ್ಯೋದಯವಾಗಿ ಶಾಲೆ ಬಾಗಿಲು ತೆರಿಯುವಷ್ಟರಲ್ಲಿ ಇತರ ಪ್ರಾಂತ್ಯಗಳಿಂದ ಬರುವ ಹುಡುಗರಿಗೆ ಮಧ್ಯಾನ ಊಟಕ್ಕೆ ಸಮಯವಾಗುವದು. ಹ್ಯಾಗೂ ಹುಡುಗರು ಶಾಲೆಯ ಬಾಗಿಲು ಮುಚ್ಚುವಾಗಲೂ ತೆರಿಯುವಾಗಲೂ ಹಾಜರಿರುವರು ಈ ಬಂದರದ ಸಾಹುಕಾರರು ಈ ಸಂಕಷ್ಟಕ್ಕೆ ತಕ್ಕ ಗಮನ ಕೊಟ್ಟು ಕಳದ ದಶಂಬರ ತಿಂಗಳಲ್ಲಿ ಸಭ ಕೂಡಿ ಒಂದು ಶಾಲೆಯನ್ನು ಹಂಗಾರ ಕಟ್ಟೆಯಲ್ಲಿ ಸ್ಥಾಪಿಸಬೇಕಾಗಿ ನಿರ್ಣಯಿಸಿದರೂ ಈ ವರೇಗೆ ಅದರ ಪ್ರಸ್ತಾಪವೇ ಇಲ್ಲ. ನಮ್ಮಲ್ಲಿಯ ಸಾವುಕಾರ ರಾ ಕೊಚಿಕಾರ್ ರಾಮಚಂದ್ರಪೈಗಳವರು ಇಲ್ಲಿ ಶಾಲೆಯನ್ನು ಸ್ಥಾಪಿಸಲು ಮನಸ್ಸು ಮಾಡಿದ್ದಲ್ಲಿ ಅದು ಸ್ಥಾಪಿತವಾಗಲಿಕ್ಕೆ ಏನೂ ತೊಂದರೆ ಇರದು ರಾಜೇಶ್ರಿ ಪೈಗಳವರು ಈ ಹುಡುಗರ ಈ ಸಂಕಷ್ಟವನ್ನು ನಿವಾರಿಸಿ ಗ್ರಾಮಸ್ಥರೆಲ್ಲರ ಪ್ರೀತಿ ಪಾತ್ರರಾಗುವರೆಂಬದಾಗಿ ಕೋರುವೆನು

ಪುತ್ತೂರು. ಮುಜೂರು ಫೊರೆಸ್ಟ್ ಬ್ಲಾಕಿನ ಒಳಗೆ ತನ್ನ ಮನೆಗೆ ಹೋಗುವರೆ ಐತು ಪಿರ್ಕಾ ಶ್ಯಾನುಭಾಗ ನಾಗಪ್ಪಯ್ಯನವರು ಒಂದು ಗಾಡಿರಸ್ತೆಯನ್ನು ಮಾಡಿದಾಗಿ ಸದರಿ ಶ್ಯಾನುಬಾಗ ವಗೈರೆ 9 ಜನರ ಮೇಲೆ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದಮೆ ತನಕಿ ನಡಿಯುತ್ತದೆ ಸದರಿ ಮೊಕದಮೆಯಲ್ಲಿ ಮುದ್ದೈಯ್ಯಾಲರ ಹಾಜರು ಬಗ್ಗೆ ಬಿಳಿನೆಲೆ ಗ್ರಾಮದ ಪಟೇಲ ಪದ್ಮಯ್ಯ ಗೌಡರು ಜಾಮೀನ್ ನಿಂತವರ ಪೈಕಿ ಒಬ್ಬ ಮುದ್ದೈಯಾಲೆ ಪಲ್ಲಣೆ ಮ್ಯಾಲ ಗೌಡ ಎಂಬವನು ವ್ಯಾದೆಗೆ ಹಾಜರಾಗದ್ದರಿಂದ ಜಾಮಿನ್ದಾರ ಸದರಿ ಪಟೇಲರಿಗೆ 100 ರೂಪಾಯಿ ಜುರುಮಾನೆ ಮತ್ತು ಮುದ್ದೈಯ್ಯಾಲೆಗೆ 5 ರೂಪಾಯಿ ಜುರುಮಾನೆ ಮೆಜಿಸ್ಟ್ರೇಟರವರಿಂದ ವಿಧಿಸೋಣಾಯಿತು ಪಟೇಲರಿಗೆ ಜುರುಮಾನೆ ಆದ ಸಮ್ಮಂದ 6 ತಿಂಗಳ ಅಮಾನತು ಹುಕುಂ ಆದ್ದಾಗಿ ತಿಳಿದು ಬರುತ್ತದೆ

1909-1910 ನೇ ವರುಷದ ಬಗ್ಗೆ ಉಪ್ಪಿನಂಗಡಿ ತಾಲೂಕಿನ ಶೇಂದಿ ಅಂಗಡಿಗಳು ಬರುವ ಆಗೋಸ್ತು ತಾ 13 ರಲ್ಲು ಬೆಳ್ತಂಗಡಿ 17ರಲ್ಲು ಪುತ್ತೂರು ಮೊಕ್ಕಾಮಿನಲ್ಲಿಯೂ ಡಿಪ್ಯುಟಿ ಕಲೆಕ್ಟರವರಿಂದ ಯೇಲಂ ಮಾಡುವರೆ ನಿಶ್ಚಯಿಸಿರುತ್ತದೆ

—o—

ಮುಲ್ಕಿ. ಮಳೆಗಾಲ ಪ್ರಾರಂಭದಿಂದ ಅನೇಕ ಕಡೆಗಳಲ್ಲಿ ಅನೇಕರು ರಕ್ತಾತಿಸಾರ ರೋಗಕ್ಕೆ ಗುರಿಯಾಗಿ ಪರವಶೈದಿದರು ಎಂಬ ದುಃಖಕರವಾರ್ತೆಯನ್ನು ತಿಳಿಸಲು ವಿಷಾದ ಪಡುತ್ತೇನೆ

ಮೇಘರಾಜನು ತಕ್ಕ ಕಾಲದಲ್ಲಿ ಬಂದೊದಗುವದರಿಂದ ಒಕ್ಕಲಿಗರೆಲ್ಲರೂ ಬಿತ್ತನೆಯ ಕೆಲಸ ಮುಗ್ಗಿಸಿ ಸಂತೋಷದಿಂದಿರುವರು. ದೈವ ಕಟಾಕ್ಷದಿಂದ ಇಷ್ಟು ತನಕ ದೊಡ್ಡ ದೊಡ್ಡ ನೆರೆಗಳೇನೂ ಬಾರದಿದ್ದರೂ ಗಾಳಿಯು ವಿಪರೀತವಾಗಿ ಬೀಸುತ್ತಿರುವುದರಿಂದ ಅನೇಕರು ನಾನಾ ಕಷ್ಟಕ್ಕೆ ಗುರಿಯಾಗುತ್ತಿರುವರು. ಇನ್ನು ಕೆಲವರಾದರೋ ಮದಾಂಧರಾಗಿ ಅಲ್ಲಲ್ಲಿ ಇಸ್ಪೀಟು ರಾಣಿಗೆ ಮುದ್ದಿಡುತ್ತಾ ವೃಥಾ ಕಾಲಹರಣ ಮಾಡುತ್ತಿರುವದು ಕ್ಷೇತ್ರದ ದುರಾವಸ್ಥೆಯೇ ಎಂದೆನ್ನಬೇಕು. ಸಬ್ಇನ್ಸ್‌ಪೆಕ್ಟರರಾದ ಶ್ರೀ ಅಮೃತರಾಯರು ಯಾವಾಗ ವರ್ಗಾಯಿಸಲ್ಪಟ್ಟಿರುವರೋ ಅಂದಿನಿಂದ ಜುಗಾರುರಾಜರುಗಳು ತಮ್ಮ ತಲೆಯನ್ನು ಎತ್ತಿರುವರು ಎಂಬದಾಗಿ ಹಲವರು ಅನ್ನುತ್ತಿರುವರು.

—o—

ವಿವಿಧ ವಿಷಯುಗಳು.

ಕಾಶ್ಮೀರದಲ್ಲಿರುವ ರೇಶ್ಮೆ ಕಾರಖಾನೆಯಲ್ಲಿ ಕಳದ ವರುಷ ೨೪೦ ಅಂಡಿಗೆ ರೇಶ್ಮೆಯು ತಯ್ಯಾರಾಗಿ ೬ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಮುನಾಫೆಯುಂಟಾಗಿರುವುದು

ವಿದೇಶಿ ನಮೂನೆಯಲ್ಲಿ 'ಸಿಗರೆಟ್' 'ಟೊಬೆಕೊ' ಮುಂತಾದವುಗಳನ್ನು ತಯ್ಯಾರಿಸುವ ಯಂತ್ರಮುಖಾಂತರ ನಡಿಯುವ ಕಾರಖಾನೆಯು ಈ ವರೆಗೆ ಹಿಂದುಸ್ಥಾನದಲ್ಲಿರಲಿಲ್ಲ ಇತ್ತಲಾಗ ರಂಗಪುರದಲ್ಲಿ ಇಂತಹ ಒಂದು ಕಾರಖಾನೆಯನ್ನು ರಚಿಸಿರುವರು ಇಲ್ಲಿ ಎಲ್ಲಾ ನಮೂನೆಯ ಸಿಗರೆಟ್ ಟೊಬೆಕೊ ಮುಂತಾದವುಗಳು ಒಳ್ಳೇ ರೀತಿಯಲ್ಲಿ ತಯ್ಯಾರಿಸಲ್ಪಡುವವು

ಚೀನಾದೇಶದಲ್ಲಿ ಪ್ರಕಟವಾಗುವ ಒಂದು ಪಂಚಾಂಗದ ಪ್ರತಿಗಳಷ್ಟು ಇಡೀ ಭೂಲೋಕದಲ್ಲಿ ಬೇರೆ ಯಾವ ಪುಸ್ತಕದ ಪ್ರತಿಗಳೂ ಆಗುವದಿಲ್ಲವೆಂತ ತಿಳಿದುಬರುತ್ತದೆ ಇದರ ೬,೦೦೦ ೦೦೦ ಪ್ರತಿಗಳು ಪ್ರತಿ ವರುಷವೂ ಛಾಪಿಸಲಾಗಿ ಎಲ್ಲವೂ ಮಾರಾಟವಾಗಿ ಹೋಗಿ ಒಂದೂ ಉಳಿಯುವದಿಲ್ಲವೆಂಬದಾಗಿ ತಿಳಿದು ಬರುವದು

— —

ಕ್ಷಯ ರೋಗದ ಹಾವಳಿಯು ಹಿಂದೂಸ್ಥಾನದಲ್ಲಿ ಬಹು ವಿಪರೀತವಾಗಿ ಬರುತ್ತಿರುವುದೆಂಬದಾಗಿ ಬಂಗಾಳದ ಸ್ಯಾನಿಟರಿ ಸೂಪ್ರೆಂಟಿಂಡೆಂಟ್ ಅಧ್ಯಕ್ಷರಾದ ಸರ್ ಥೋಮಸ್ [illegible] ರವರ [illegible] ಪರಥಯಿಂದ ತಿಳಿದುಬರುವದು ಕಲ್ಕತ್ತೆಯಲ್ಲಿಯೇ ವರುಷ [illegible] ಈ ರೋಗಕ್ಕೆ ತುತ್ತಾಗುವವರ ಸಂಖ್ಯೆ [illegible] ಈ ರೋಗದ ಹಾವಳಿ [illegible] ರಹಿತವಾಗಿರ [illegible] ದೇಶಗಳ ಗಿಂತಲೂ [illegible] ಹೆಚ್ಚಾಗಿರುವುದೆಂದು ತಿಳಿಸಲ್ಪಟ್ಟಿದೆ ಇನ್ನು ಕೆಲವು ಸಮಯದಲ್ಲಿಯೇ ಕ್ಷಯರೋಗವು ಪ್ಲೇಗ್ ಮತ್ತು ಕಾಲರಾದಷ್ಟೇ ಪ್ರಬಲವಾಗುವದೆಂದು ಅಭಿಪ್ರಾಯಪಟ್ಟಿರುತ್ತಾರೆ ಈ ರೋಗದಿಂದ ಪೀಡಿತರಾದವರ ಒಸ್ಕೆಕೆ ಬಗ್ಗೆ ತಕ್ಕದಾದ ಒಂದು ಆರೋಗ್ಯಮಂದಿರವನ್ನು ಕಟ್ಟಿಸಬೇಕಾಗಿ ಸೂಚಿಸಿರುವರು ಈ ರೋಗವನ್ನು ಆರಂಭದಲ್ಲಿಯೇ ಗುಣಮಾಡಬಹುದಾದ್ದರಿಂದಲೂ ರೋಗಿಗಳನ್ನು ಇತರ ಜನರ ನಡುವೆ ಇರಗೊಡಿಸಿದರೆ ಇದು ಎಲ್ಲರಲ್ಲಿಯೂ ಹಬ್ಬುವದರಿಂದಲೂ, ಒಳ್ಳೇ ಆಹಾರ, ಗಾಳಿಗಳಿದ್ದಲ್ಲಿ ರೋಗಿಗಳ ಚಿಕಿತ್ಸೆಮಾಡಬೇಕಾದ್ದರಿಂದಲೂ, ಈ ಸೂಚನೆಗಳಿಗೆಲ್ಲ ಗಮನಕೊಟ್ಟು ಈ ವಿದ್ಯಮಾನಗಳಿಗೆ ತಕ್ಕವಾದ ಆರೋಗ್ಯಗೃಹವನ್ನು ಕಟ್ಟಿಸಬೇಕಾಗಿರುವುದು ಮಿ| ಮಲಬಾರಿಯವರಿಂದ ಸ್ಥಾಪಿತವಾದ ಸೇವಾಸದನ ಎಂಬ ಸಂಘದವರು ಈ ರೋಗಕ್ಕೆ ತಡೆಕಟ್ಟುವರೆ ಬಹಳವಾಗಿ ಪ್ರಯತ್ನಿಸುತ್ತಿರುವರು ರೋಗದ ಪೂರ್ಣ ವಿವರವನ್ನು ಜನರಿಗೆ ತಿಳಿಯಪಡಿಸಿ ಅದನ್ನು ಹೋಗಗೊಡಿಸುವ ಉಪಾಯಗಳನ್ನು ಸೂಚಿಸುವ ಚಿಕ್ಕ ಪುಸ್ತಕವನ್ನು ಈ ಸೇವಾಸದನ ಸಂಘದವರು ಪ್ರಕಟಿಸಿರುವರು ಈ ಪುಸ್ತಕವನ್ನು ದೇಶಭಾಷೆಗಳಲ್ಲಿ ಜನರ ಉಪಯೋಗದ ಬಗ್ಗೆ ಪ್ರಕಟಿಸಲು ಇವರ ಅನುಮತಿ ಇರುವುದು

ಈ ವರೆಗೆ ಟೆಲಿಫೋನುಗಳ ಮುಖಾಂತರ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗದೆ ಮಾತಾಡಲು ಮಾತ್ರ ಸಾಧ್ಯವಿತ್ತು ಕೋಪನ್‌ಹೆಗನ್ ಎಂಬಲ್ಲಿಯ ಪೆಡರ್‌ಸನ್ ಅಣ್ಣತಮ್ಮಂದಿರಿಂದ ಶೋಧಿಸಲ್ಪಟ್ಟ ನವೀನ ವಿಧಾನದಿಂದ ಈಗ ಟೆಲಿಫೋನು ಸರಿಗೆಗಳ ಮುಖಾಂತರ ಒಬ್ಬರೊನ್ನೊಬ್ಬರು ನೋಡಿಕೊಳ್ಳಬಹುದೆಂದೂ ಒಬ್ಬರಿಗೊಬ್ಬರು ಸಾಮಗ್ರಿಗಳನ್ನು ತೋರಿಸಬಹುದೆಂದೂ ತಿಳಿದಿರುತ್ತದೆ.

ಮಂಗಳೂರು ಪೀಡಿತ ಜನ ಸಹಾಯಕ ಫಂಡು.

ಕೆಳಗೆ ಹೆಸರು ಕಾಣಿಸಿದ ಕುಲಸ್ತ್ರೀಯರು ಮತ್ತು ಗೃಹಸ್ಥರು ಮಂಗಳೂರ ಪೀಡಿತ ಜನ ಸಹಾಯಕ ಸಂಘಕ್ಕೆ ಕೊಟ್ಟ ಧನ ಸಹಾಯವನ್ನು ಹೃದ್ಪೂರ್ವಕ ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಶ್ರೀಮತಿ ರಮಾಬಾಯಿ ಸಾಹೇಬ ರಾನಡೇ ರೂ. 50. ಯಮ್ ಯಸ್ ರಾಮಅಯ್ಯರ್, ರೂ 50, ಸಿ ಯಚ್. ಮೋರ್ಗನ್ ದೊರೆಗಳವರು, ರೂ 50; ಯಮ್ ಎಂಬ ಹೆಸರಿನಿಂದ ಕೊಟ್ಟವರು ರೂ. 50, ಬೇರಿಷ್ಟರ ಎಚ್ ಎ ವಾದ್ಯೆರವರು, ರೂ 50, ಮಂಗಳೂರು ಮುನ್ಸಿಪಾಲ್ ಚೆಯರ್ಮೆನರವರು ರೂ 90; ಶ್ರೀಮತಿ ಕ್ಷಮಾಬಾಯಿ ರಾವ್, ರೂ 25, ಕರ್ನೆಲ ಡಾಕ್ಟರ್ ಡಿ ಪಿ ವಾರ್ಲಿಕರ್‌ರವರು ರೂ 25, ಡಾಕ್ಟರ್ ಯಸ್ ಬೋಸರವರು ರೂ 22 8 0 (ತಿಂಗಳ ವಂತಿಗೆ) ಆರ್ ವೆಂಕಟರತ್ನಂ ನ್ಯಾಡುಗಾರರು, ರೂ 15, ಯಚ್ ಯಸ್ ಬ್ರೌನ್ ದೊರೆಗಳವರು ರೂ 12, (ತಿಂಗಳ ವಂತಿಗೆ), ಹೆನ್ರಿ ಹಾರ್ಟ ದೊರೆಗಳವರು, ರೂ 8(ತಿಂಗಳ ವಂತಿಗೆ), ಡಿ ವಿ ಪ್ರಕಾಶ ರಾವ್ ರೂ 8, ಯಚ್ ಮೇಲಿಮ್ ದೊರೆಗಳವರು ರೂ 10, ಎ ದೇವಪ್ಪ ಪೂಂಜರವರು ರೂ 10. ಜೆ ಲೋಬೋರವರು ರೂ 5 (ತಿಂಗಳ ವಂತಿಗೆ) ಛಾಯಿ ಅಮೃತಲಾಲ್ ಬೋಸರವರು ರೂ 5, ಕಾನಾರ್ಡ ಭಾರದ್ವಾಜ ಮಂಜುನಾಥಯ್ಯನವರು ರೂ 5, ಮಿಜಾರ ಅಪ್ಪಯ್ಯ ಶೆಟ್ರು 5 (ಕಂತು) ಬಿ ಗಣಪತಿ ಶೇಣೈರವರು ರೂ 5, ಡಾಕ್ಟರ ಎಮ್ ಅಣ್ಣಪ್ಪ ಕಾಮತ್‌ರವರು ರೂ 3 ಪಿ ಯಲ್ ವಾಸ್ವಾನಿಗಳು ರೂ 3, ಶ್ರೀಮತಿ ಶಾಂತಾಬಾಯಿ ಶ್ಯಾಕಿಣಿ ರೂ 2 ಅಲಿಮಾನ ರಾಮರಾಯರು ರೂ 1 ಒಟ್ಟು ರೂ 511-8 0 ಮೊದಲು ಪ್ರಕಟಿಸಿದ ಪಟ್ಟಿಯ ಜುಮ್ಲಾ 2471 0 0

ರೂಪಾಯಿ 2982 8 0 ಒಟ್ಟು ಜುಮ್ಲಾ

ಉದಾರ ಡಾಕ್ಟರ್ ಯಲ್ ಪಿ ಫೆರ್ನಾಂಡಿಸರವರು ದಿನಂತೆಯೇ ಶಾಲಾ ವಿದ್ಯಾರ್ಥಿಗಳಿಗೂ ಕಿಂಡಿಯವರಿಗೂ ದರ್ಮಾರ್ಥ ಔಷಧ ಕೊಟ್ಟರು ಮ ರಾ ರಾ ಉದ್ಯಾವರ ಕೃಷ್ಣಯ್ಯನವರು 15ವಸ್ತ್ರಗಳನ್ನು ವಿದ್ಯಾರ್ಥಿಗಳ ಬಗ್ಗೆ ಉಚಿತವಾಗಿ ಕೊಟ್ಟರು ಮುನ್ಸಿಪಾಲ್ ವ್ಯಾಸ್ ಚೆಯರ್ಮೆನರಾದ ಎ ವಾಸುದೇವಪೈಗಳು ನೆಲೆಗಾಲ ಸಾಗ್ವಳಿ ಸಂಬಂಧವಾದ ಎರಡು ಪುಸ್ತಕಗಳನ್ನೂ ಬೋಳಾರ ಹಂಚು ಕಾರಖಾನೆಯ ಮಟ್ಪಾಡಿ ಪ್ರದರ್ಶರವರು 100 ಹಂಚುಗಳನ್ನೂ ಉಚಿತ ಕೊಟ್ಟರು ಇಬ್ಬರು ಕುಲಸ್ತ್ರೀಯರು ಶಾಲೆಯ ಮಕ್ಕಳಿಗೆ ಮಿಠಾಯಿ ಹಂಚಿಕೊಟ್ಟರು ಈ ಎಲ್ಲಾ ಕುಲಸ್ತ್ರೀಯರೂ ಗೃಹಸ್ಥರೂ ಮಾಡಿದ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ

ಮಂಗಳೂರು } ಕದ್ರೀಲ ರಂಗರಾವ್.
ತಾ 15-7 09 } ಸೆಕ್ರೆಟರಿ

—o—

ಜೀವಸುಗಳ ಧಾರಣೆ, ಮಂಗಳೂರು

ಅವಲ್ ಮಸ್ಕತಿ ಮುಡಿ ೧ಆ ರೂ	5—8—0
ಒಳ್ಳೇ ಗುಡ್ಡು ಮಸ್ಕತಿ ,,,,,,	5—1—0
,, ಬೈಲು ಸುಗ್ಗಿ ,,,,,,,,,	4-15—0
ದುಯಂ ಗುಡ್ಡು ರಾಶಿ ,,,,,,	4 12—0
ಒಳ್ಳೇ ಮಸ್ಕತಿ ಬೆಳ್ತಿಗೆ ಅಕ್ಕಿ ,,,	5—8—0
ದುಯಂ ,, ,, ,,,,, ,,	5—0—0
ಸುಗ್ಗಿ ಭತ್ತದ ಮುಡಿ ,,,,,,,,	2—0—0
ಮಸ್ಕತಿ ಬತ್ತದ ,,,,,,,,,,,	2—4—0
ರಂಗೂನ್ ಬೆಳ್ತಿಗೆ ಗೋಣಿ ,,,,	8—0—0
ಉಪ್ಪು ಗೋಣಿ ೧ರ ,,,,,,,	3-12—0
ಹುರುಳಿ ,,,,,,,,,,,,,,,	8—8—0
ಕೊಬ್ರಿ ಎಣ್ಣೆ ಮಣ ,,,,,,,	5—6—0
ಕಾಫಿ ಖಂಡಿ ,,,,,,,	205—0—0
[illegible]	110—0—0
[illegible]	85—0—0
[illegible]	2-12—0

ಲಾ ಪ್ರಕಟನೆಗಳು

———o———

1. ವ್ಯವಹಾರ ನಿರ್ಣಯ ಸಂಪುಟಗಳು ೫೪೬ ಹಿಂದೂ ಮತಮರಿಯಾದೆಗಳು, ... ಕಾನೂನುಗಳು, ಇವುಗಳ ಸಂಗ್ರಹವು, ೯೨ ದಸ್ತಾವೇಜು ... ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಆಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ.

2 ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ, ಪ್ರಿವಿಕೌಂಸಿಲ್, ಹೈಕೋರ್ಟ್ ಚೇಫ್ ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದ್ದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ ಯಾ ವಿ. ಪಿ, ಬಿಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ. ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು "ಎಂ ಮಲ್ಲಾರಾಧ್ಯರ್ಕೆ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ ಬೆಂಗಳೂರು ಸಿಟಿ" ಈ ವಿಳಾಸಕ್ಕೆ ಬರೆಯುವದು.

———o———

THE HINDU SOAP MANUFACTURING CO.,

ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

———o———

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು ವ್ಯಾಪಾರಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಬಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳು

ಪರಿಮಳಾಂಜನ ನಂಬ್ರ 1 — ಇದರ ಬಾಹ್ಯಲೇಪನದಿಂದಲೇ ತಲನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0 8 0

2 ತಾಂಬೂಲ ಸುವಾಸಿನಿ —ಸೀಸೆ ೧ರ ಕ್ರಯ 0-4-0

3 ದಂತಮಂಜನ —ಡಬ್ಬಿ ೧ರ ಕ್ರಯ 0 2-0

4 ಗಜಕರ್ಣದ ಮುಲಾಮು —ಡಬ್ಬಿ ೧ರ ಕ್ರಯ 0-6-0

5 ನಯನಾಮೃತ ಸುರ್ಮ —ಸೀಸೆ ೧ರ ಕ್ರಯ 0-8-0

6 ಶ್ವಾಸಕುಠಾರ —ಡಬ್ಬಿ ೧ರ ಕ್ರಯ 0-8-0

8 ಪರಿಮಳಾಂಜನ ನಂಬ್ರ ೨ —ಡಬ್ಬಿ೧ರಕ್ರಯ 0 10 0

11 ಜ್ವರಾಂಕುಶ ಮಾತ್ರೆ - ಡಜನ್ ೧ರ ಕ್ರಯ 1-8-0.

13 ಸುಗಂಧ ವಶ್ಯದ ಪುಡಿ :—ಡಬ್ಬಿ ೧ರ ಕ್ರಯ 0-6-0

14 ದಶಾಂಗಧೂಪ —ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಸೇರು ೧ಕ್ಕೆ ರೂಪಾಯಿ 1-4-0.

19. ದ್ರಾಕ್ಷಾರಿಷ್ಟ:—ಬಾಟ್ಲಿ ೧ರ ಕ್ರಯ 2-8-0. ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಶ್ವಾಸಕಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು.

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ... ಬರಿಯಿರಿ.

ಟಪ್ಪಾಲ್ ದ್ವಾರಾ ...

ಟಿ. ಬಾಬುರಾಯರ

... ಔಷಧಾಲಯ,

ಮಂಗಳೂರು, ದ. ಕ.

... ಗಂಧದ ... ಕೊಳ್ಳುವದಕ್ಕೆ ... ತಾಂಬೂಲ ... ೧ಕ್ಕೆ ರೂ. ೦-೪-೦, ಮಕ್ಕಳ ಬಾಲಚೇಷ್ಟೆಗೆ ಸಂಜೀವನವಾದ ... ಬಾಲಗ್ರಹ ... ೧ಕ್ಕೆ ೦-೮-೦

ಕೆ. ಎಲ್. ಉಪಾಧ್ಯ,

ಮೈಸೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ	೫೨ ಸಾರಿ
ಇಡೀ ಪಾನು	ರೂ ೧೦	ರೂ ೩೨	ರೂ ೭೨	ರೂ ೧೧೦	ರೂ ೧೫೦
ಅರ್ಧ ಪಾನು	೬	,, ೧೮	೩೮	೬೦	,, ೮೫
ಕಾಲು ಪಾನು	೪	೧೨	,, ೨೦	೩೨	,, ೭೫
ಅರೆಕಾಲು ಪಾನು ,, ೨		,, ೭	೧೩	೧೮	,, ೩೫

ಸೂಚನೆ —ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರೆಯುವದು ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು

ಸ್ವದೇಶಾಭಿಮಾನಿಯ ಚಂದಾ ನಿರಖು — ರೂ ಆ

ಟಪ್ಪಾಲು ಹಾಸಲು ಸಹಿತ ೧ ವರುಷಕ್ಕೆ ೨—೧

ಇಲ್ಲದೆ ೧—೪

ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ

ಒಂದು ಪ್ರತಿಗೆ ಸೇರಿ ೧—

ಟಪ್ಪಾಲು ಹಾಸಲು ಸಹಿತ ಒಂದು ವರುಷಕ್ಕೆ ೧—೧

TO LET.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷ್ಯಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್ ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.) **ಹಾಫ್ ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.) **ಫುಲ್ ಬೈಂಡ್** (ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು.

3″ × 8¼″, 3″ × 5¼″; 8¼″ × 6½″, 6½″ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು.

ಬಹಳ ಸಮಯದ ವರೆಗೆ ಬಾಳಾಗತ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ವಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಶಕ್ತಿವಾಗಿ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ.

ಮೇನೇಜರ್,
ಶಾರದಾ ಮುದ್ರಾಲಯ,
ಮಂಗಳೂರು.

ಹಣವಿನ ಒಳ್ಳೇ ವಿನಿಯೋಗವು ಯಾವುದು. ಬೆಲೆಗೆ ತಕ್ಕ ಒಡವೆಗಳನ್ನು ಪಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಕಳೆದ 1912ನೇ ಇಸವಿಯಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೋರ್ನ್‌ಫ್ಲೋರ್, ಟೀ, ಕೋಕೋವಾ, ಕಾಫಿ ಹುಡಿ, ಬಿಸ್ಕೂಟು, ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟ್ರರ ವೈದ್ಯೋಪಯೋಗಕ್ಕಾದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಓಯಿಲ್, ಪೆಟ್ರೋಸ್ಯಾರಫ್, ಕೆಮಿಕಲ್ ಫುಡ್, ಗಾಜಿನ ಸಾಮಾನು, ಮೊದಲಾದವುಗಳೂ ಸಹಾ)

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವಶಾಲಿಗಳೂ ಆದ ಡಾಕ್ಟ್ರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು. (ರೋಗ ಪ್ರಕೃತಿಗಳನ್ನು ಬರಕೊಳ್ಳುವವರ ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು).

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಮಂಗಳೂರು.

Mangalore Trading Association,
Mangalore, S. Canara.

Printed by V. S. Kamath, at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3 | ಮಂಗ್ಗಳೂರು, ತಾರೀಕು 23ನೇ ಶುಕ್ರವಾರ ಜುಲಾಯಿ 1909 | ಸಂಚಿಕೆ 16.

William & Co. Fort Bombay.

ಅಮೃತಾಂಜನ.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ದೇಸೀಯ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು, ಜಖಮು, ಉಳುಕು, ಛಾಯೆ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯ ವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಶಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷದಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ಗರ ಕಿಮ್ಮತು 8 ಆಣೆ

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಛಪ್ಪಿ.

ಕಿಮ್ಮತು ಆರು ಆಣೆ. ಈ ನಮೂನೆ ಛಪ್ಪಿ.

SAFE ★ EFFICACIOUS ★ SURE ★ PILLS ★ OINTMENTS ★ POWDERS
WILLIAM & Co. BOMBAY

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ತುರಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ [illegible]ದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ಗರ ಕಿಮ್ಮತು 6 ಆಣೆ ೧೨ ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತದೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ಗರ ಕಿಮ್ಮತು 2 ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ ನಿರ್ಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮೆಯಿಸ ಕೋಕೊ, ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೩೦ ಗುಟಿಕೆಗಳ ಡಬ್ಬಿ ಗರ ಕಿಮ್ಮತು ರೂ. 1.

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದಣಗಳನ್ನೂ ಛಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ [illegible] ವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ಗರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0.

ಚೇಳು ಕಡತದ ಮೇಲ್ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತುಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ಗರ ಕಿಮ್ಮತು 8 ಆಣೆ

ಕೇಶವರ್ಧಿನೀ ಎಣ್ಣೆ.

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳ್ಳು ಉದ್ದವಾಗಿಯೂ, ನಯವಾಗಿಯೂ, [illegible]ಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು ತಂಪುಮಾಡಿ ಮನ ಶುದ್ಧಿ ಮಾಡುವದು. ಬಾಟ್ಲಿ ಗರ ಕಿಮ್ಮತು ೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	„	0—8—0.
ಕಸ್ತೂರಿ ಮಾತ್ರೆ 50	„	0—10—0.
[illegible] ಮುಲಾಮು	„	0—3—0.
ನೇತ್ರಾಂಜನ	„	0—4—0.

[illegible] ಔಷಧಗಳನ್ನು ತಯಾರಿಸುವದರಿಂದ [illegible] ಬರದಲ್ಲಿ [illegible]

ವಿಳಾಸ:—ವಿಲಿಯಂ ಮತ್ತು [illegible] ಮುಂಬಯಿ. [illegible] ಎಡ್ರೆಸು:—"ಅಮೃತಾಂಜನ" ಮುಂಬಾಯಿ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಫ್ಲೆಕ್ಸ್ ಕವರ್	ಹಾಫ್ ಬೈಂಡ್	ಫುಲ್ ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

13" × 8¼", 3" × 5¼", 8¼" × 6½", 6½" × 4" ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕರ ವ ಆಫೀಸರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು.

ಬಹಳ ಸಮಯದ ವರೆಗೆ ಬಾಳುವ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೆರೆ ಇಲ್ಲದ ಪೋಳಿನ ಎಲ್ಲಾ ಸೈಜಿನಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರದಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳನ್ನು ದಯಮಾಡಿ ಬರೆಕೊಳ್ಳಿ.

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹಣವಿನ ಒಳ್ಳೇ ವಿನಿಯೋಗವು ಯಾವುದು? ಬೆಲೆಗೆ ತಕ್ಕ ಬಡವೆಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಕಳೆದ 1902ನೇ ಇಸವಿಯಿಂದ ಪ್ರತ್ಯೇಕ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೋನ್‌ಪ್ಲೋರ್ ಟೀ, ಕೋಕೋವ, ಕಾಫಿ, ಬಿಸ್ಕತು ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು,)

ಡಾಕ್ಟರರ ಉಪಯೋಗಕ್ಕಾದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಓಯಿಲ್, ಪರ್ಲೋಸ್ಪ್ಯಾರವ್ ಕೆಮಿಕಲ್ ಫುಡ್ [illegible] ಮೊದಲಾದವುಗಳೂ ಸಹಾ);

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರೆಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು. (ರೋಗ ಪ್ರಕೃತಿಗಳನ್ನು ಬರೆಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು).

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಮಂಗಳೂರು.

Mangalore Trading Association,
Mangalore, S. Canara.

Printed by V. S. Kamath at the Mangalore Trading Association's Sharada Press Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3 ಮಂಗಳೂರು, ತಾರೀಕು 23ನೇ ಶುಕ್ರವಾರ ಜುಲಾಯಿ 1909 ಸಂಚಿಕೆ 16.

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನೆಜಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯ ವಿರಹಿತವಾಗಿ ಹಚ್ಚಬಹುದು. ನಾಗಪ್ರರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷದಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ಗರ ಕಿಮ್ಮತು 8 ಆಣೆ

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತದೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ಗರ ಕಿಮ್ಮತು 2 ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ತಾಗಿಸುವದರಿಂದ ಮೋರೆಯ ಮೇಲಿರುವ ಮೊಡ್ಡೆಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ [illegible] ವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ಗರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ. 2—4—0.

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮಿದುಳನ್ನು ತಂಪುಮಾಡಿ ಮನ ಶುದ್ಧಿ ಮಾಡುವದು. ಬಾಟ್ಲಿ ಗರ ಕಿಮ್ಮತು ೧೦ ಆಣೆ. ಮೂರು ಬಾಟ್ಲಿಗಳಿಗೆ ರೂ. 2—4—0.

ಕಿಮ್ಮತು ಆರು ಆಣೆ ಈ ನಮೂನೆ [illegible]

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ [illegible] ಸುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ಗರ ಕಿಮ್ಮತು 6 ಆಣೆ ೧೨ ಡಬ್ಬಿಗಳಿಗೆ ರೂ 4

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆವೆ ಯಿಸ ಕೋಕೊ, ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೩೦ ಗುಟಿಕೆಗಳ ಡಬ್ಬಿ ಗರ ಕಿಮ್ಮತು ರೂ. 1.

ಚೇಳು ಕಡಿತದ ಮೇಲ್ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ಗರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	„	0—8—0.
ಕಸ್ತೂರಿ ಮಾತ್ರೆ 50	„	0-10—0.
ಖುಜ್ಲಿ ಮುಲಾಮು	„	0—3—0.
ನೇತ್ರಾಂಜನ	[illegible]	[illegible]4—0.

[illegible] ಬರದಲ್ಲಿ [illegible]

ವಿಳಾಸ:—ವಿಲಿಯಮ್ ಮತ್ತು ಕಂಪೆನಿ [illegible] ಮುಂಬಯಿ. [illegible] ಎಡ್ರೆಸು:—"ಅಮೃತಾಂಜನ" ಮುಂಬಯಿ.

ಫುಟ್‌ಬಾಲ್.

ನಂ|| ೧. ರೂ. ೩—೦—೦.
,, ೨. ,, ೩—೬—೦.
,, ೩. ,, ೪—೪—೦.
,, ೪. ,, ೫—೦—೦.
,, ೫. ,, ೫—೪—೦.

ಬ್ಲಾಡರ್‌ಲೆಸ್.

ನಂ|| ೩. ರೂ. ೫—೦—೦.
,, ೪. ,, ೫—೮—೦.
,, ೫. ,, ೬—೦—೦.

ಕವರುಗಳು.

ನಂ|| ೧. ರೂ. ೧—೧೨—೦.
,, ೨. ,, ೨—೦—೦.
,, ೩. ,, ೨—೮—೦.
ನಂ|| ೪ ರೂ. ೩—೮—೦.
,, ೫. ,, ೪—೦—೦.

ಬಟನ್‌ಲೆಸ್.

ನಂ|| ೩. ರೂ. ೩—೮—೦
,, ೪. ,, ೪—೦—೦.
,, ೫. ,, ೪—೮—೦.

ಬ್ಲಾಡರ್‌ಗಳು.

ನಂ|| ೧. ರೂ. ೧—೧೦—೦.
,, ೨. ,, ೧—೧೨—೦.
,, ೩. ,, ೧ ೧೫—೦
,, ೪. ,, ೨—೪—೦
,, ೫. ,, ೨—೬—೦

ಇನ್‌ಫ್ಲೇಟರ್

೧ಕ್ಕೆ:—೧—೧೨-೦, ೨-೦-೦; ೨-೮-೦, ೩-೦-೦.

ರಬ್ಬರ್ ಸಿಮೆಂಟ್.

೧ಕ್ಕೆ:—೦—೩—೦; ೦—೬—೦

ಆಲಿಗರು ಬೀಗಗಳು.

ಒಂದು ಲೀವರು ಇರುವ ಹಿತ್ತಾಳೇ ಬೀಗಗಳು

ಸೈಜು:—೧. ೦-೫ ೦; ೧|, ೦-೬-೦; ೧|. ೦ ೬-೬, ೨, ೦-೯-೦; ೨||, ೦-೧೨-೦; ನಾಲ್ಕು ಚಕ್ಕರಗಳಿರುವ ಬದ್ರವಾದ ಬೀಗಗಳು. ಒಂದರ ಬೀಗದ ಕೈ ಮತ್ತೊಂದಕ್ಕೆ ಹಿಡಿಯುವದಿಲ್ಲಾ.

ಹಿತ್ತಾಳೇ ಬೀಗಗಳು.

ಸೈಜು:—೧, ರೂ. ೦-೧೨-೦; ೧|, ೦-೧೫ ೦, ೧||. ೧-೨-೦; ೨. ೧-೬-೦; ೨||, ೧-೧೨ ೦;

ಕಬ್ಬಿಣದ ಬೀಗಗಳು.

ಎರಡು ಲೀವರು:—೨, ೧-೧೩ ೦; ೨|, ೧-೦-೦; ೨||೧-೩-೦.
ನಾಲ್ಕು ಲೀವರು:—೧, ೦-೧೨-೦; ೧| ೦-೧೨ ೦; ೧|| ೦ ೧೩-೦; ೧||| ೦-೧೫-೦; ೨, ೧-೨-೦, ೨|| ೧-೪-೦. ೨||| ೧-೬-೦; ೩, ೧-೯-೦.
ಆರುಲೀವರು:—೧||, ೧-೦-೦; ೨|೧-೮-೦; ೨||,೧-೧೪-೦.

ಅಮೇರಿಕನ್ ಸ್ಪಿಂಗ್ ಬೀಗಗಳು.

೧ಕ್ಕೆ ೦-೫-೦; ೦-೮-೦; ೦-೧೨-೦ ೧-೦-೦. ಡಿಟ್ರೋ ಮಿಲ್ಲರ್ ಬೀಗ ೧ಕ್ಕೆ ೦-೫-೦; ೦-೬-೦; ೦-೮-೦.

ಟ್ರಂಕು ಪ್ಯಾಡಲಾಕ್ ೧ಕ್ಕೆ ೦-೮-೦.

ಟ್ರಂಕುಗಳಿಗೆ ಹಾಕುವದಕ್ಕೆ ಅನುಕೂಲವಾಗಿ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ ೨ ಲೀವರು ೦-೧೨-೦; ೪ ಲೀವರು ೧-೦-೦.

ಒಂದೇಸಲ ೩ ಬೀಗಗಳನ್ನು ವಿ.ಪಿ.ಯಲ್ಲಿ ತರಿಸಿಕೊಳ್ಳುವವರಿಗೆ ಟಪಾಲು ಹಾಸಲು ಇಲ್ಲದೇ ಕಳುಹಿಸಲ್ಪಡುತ್ತೆ.

ಹೆಚ್. ಎಸ್. ರಾವ್ ಬ್ರದರ್ಸ್.
ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೋಟೀಸು.

ನಮ್ಮ ಸ್ವಂತ ಕೈಗಾರಿಕೆಯಲ್ಲಿ ತಯಾರು ಮಾಡಲ್ಪಟ್ಟ ಹಸರೂ ಬ್ಲೂ ಅಂಬೂರ ಹೆಗಲ್‌ಬತ್ತಿ ಸವರನ್ ಬಕ್ಲಾ ವಗೈರೆ ನಮೂನೆ ಬಣ್ಣಗಳ ಕಲಾಬತ್ತು ಬಾವಾ ಅಂಚು ಪಿತಾಂಬ್ರಗಳೂ ೧೬-೧೮ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಡಿಟೊ ರಂಗುಗಳಲ್ಲಿ ಕಲಾಬತ್ತು ಸರಪಣಿ ರುದ್ರಾಕ್ಷಿ ಅಂಚಿನ ಕಲಾಬತ್ತು ಚೌಕಳ ಸಾಲಂ ದಿ ವಗೈರೆ ಪಿತಾಂಬರಗಳೂ ಸದರಿ ಜರತಾರದ ಕಣಗಳೂ ೧೬-೧೮ ಮೊಳದ ಕಿರಿಗೆಗಳೂ ಸದರಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಶೀರೆಗಳೂ ೧೬-೧೮ ಮೊಳದ ಕಿರಿಗೆಗಳೂ ಹಳದಿ ಮುಂಗಿಲಾತಿಮುಂಗಿ ಬಂಗಾರ ಚುಕ್ಕೆ ಕಾಡಿಗಣ್ಣು ಹಳದಿ ರುದ್ರಗಂಟೆ ಸಬಾಲಂಕಾರ ವಗೈರೆ ರಖಂವಾರು ಶೀರೆಗಳೂ ಜರತಾರದ ಕಣಗಳೂ ೧೬-೧೮ ಮೊಳದ ಶೀರೆಗಳೂ ಸದರಿ ಎಲ್ಲಾ ಮಾದರಿಯಲ್ಲಿಯೂ ಸಾದಾ ರುದ್ರಾಕ್ಷಿ ಸರಪನೆ ಅಂಚಿನ ಶೀರೆಗಳೂ ೧೬-೧೮ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಮೇಲ್ಕಂಡ ಎಲ್ಲಾ ಮಾದರಿಯ ಕುಪ್ಪಸದ ಕಣಗಳೂ ಕಲಾಬತ್ತು ಮತ್ತು ರೇಷ್ಮೆ ರುಮಾಲುಗಳೂ ರೇಷ್ಮೆ ದೊತ್ತ ವಸ್ತ್ರಗಳೂ ಹ್ಯಾಂಡ್ ಕರ್ಚೀಫ್‌ಗಳೂ ಹೊಸ ನಮೂನೆ ಒನಾತೂ ತೂಪ್ಪಾಟಿ ಬಾವಾ ಅಂಚಿನ ಶೀರೆಗಳೂ ಸಹಾ ಹಮವು ಕ್ರಯಕ್ಕೆ ಸಿದ್ಧವಾಗಿರುತ್ತವೆ. ಇಲ್ಲದೆ ಕಂಚಿ, ಮದರಾಸು ಕೊಳಂಗೋಡು, ಕುತ್ತಾಲಂ, ಕುಂಭಕೋಣಂ, ಮಧುರಾ, ಸತಾರಾ, ಪೀರಾಣಿ, ಮುಂತಾದ ಸ್ಥಳದಲ್ಲಿ ತಯಾರಾಗುವ ಪೂನಾ ಇಡಿ ಶೀರೆಗಳೂ ಕಣಗಳೂ ಕೊಯಂಬುತ್ತೂರು ತಿಂಡುಕಲ್ಲು ಈ ಸ್ಥಳಗಳಲ್ಲಿ ತಯಾರಾಗುವ ಕಲಾಬತ್ತು ರುಮಾಲುಗಳೂ ಪೇಟಾಗಳೂ ಕಲರ್ ಪೇಟಾಗಳೂ ದುಪ್ಪಟ್ಟಾಗಳೂ ರೇಲಂ ತಾತ್ಕೆಂಗಾರ ಪೇಟೆ ಕಲಾಬತ್ತು ಪಂಚೆಗಳೂ ಕಪ್ಪು ರುದ್ರಾಕ್ಷಿ ಜನಾರಫ್ ೮-೯ ಮೊಳದ ಪಂಚೆಗಳೂ ದೋತ್ರಗಳೂ ರೇಷ್ಮೆ ಅಂಚಿನ ಶ್ಲಾಘನೀಯವಾದ ಪಂಚೆಗಳೂ ಸಹಾ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತವೆ. ಮೇಲ್ಕಂಡ ಎಲ್ಲಾ ರಖಂಗಳು ಬಣ್ಣ ಗ್ಯಾರಂಟಿಯಾಗಿರುತ್ತೆ. ಆರ್ಡರು ಕೊಟ್ಟಲ್ಲಿ ಕೂಡಲೆ ವಿ.ಪಿ. ದ್ವಾರಾ ಕಳುಹಿಸಲ್ಪಡುತ್ತೆ. ಒಂದಾವರ್ತಿ ನಮ್ಮಲ್ಲಿ ಬೇಕಾದ ಜವಳಿಯನ್ನು ತರಿಸಿಕೊಂಡು ಅಜಮಾಯಿಸಿ ಮಾಡಿದಲ್ಲಿ ನಮ್ಮ ಜವಳಿಯ ಶ್ಲಾಘ್ಯವು ವ್ಯಕ್ತಪಡುತ್ತೆ. ದಯವಿಟ್ಟು ಬರಿಸುವರೆಂದು ಪ್ರಾರ್ಥಿಸುತ್ತಿದ್ದೇವೆ. ಮೇಲ್ಕಂಡ ನಮ್ಮ ಸ್ವಂತ ಕೈಗಾರಿಕೆಯ ಜವಳಿಯು ಗೌರವಕ್ಕಾಗಿ ಮೈಸೂರು ಎಗ್ಜಿಬೀಷನ್‌ನಲ್ಲಿಯೂ ನಾಗಪೂರ್ ಎಗ್ಜಿಬೀಷನ್‌ನಲ್ಲಿಯೂ ಬೆಳ್ಳಿ ಮೆಡಲ್‌ಗಳೂ ಮತ್ತು ಸರ್ಟಿಫಿಕೇಟುಗಳೂ ಸಹಾ ಹೊಂದಿ ಇರುತ್ತೇವೆ.

ಹೆಚ್. ಸಂಕಪ್ಪಾ ಬಸವಪ್ಪಾ,
ಜವಳಿ ವ್ಯಾಪಾರಸ್ಥರು,
ಚಿಕ್ಕಪೇಟೆ,
ಬೆಂಗಳೂರು ಸಿಟಿ.

1. ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ ಫಕತ್ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). } ೩-೦-೦.
2. ಶ್ರೀಶಿವಾನಂದಲಹರಿ ಈ ಗ್ರಂಥಕ್ಕೆ ಪ್ರತಿಪದ ಟೀಕಾ ತಾತ್ಪರ್ಯ. } ೦-೬-೦.
3. ಉತ್ತರ ರಾಮಚರಿತ್ರೆ ಕಥೆ ಬಹಳ ಸ್ವಾರಸ್ಯವಾದದ್ದು. } ೦-೫-೦.
4. ಟೀಕಾ ರಾಘವೇಂದ್ರ ಸ್ತೋತ್ರ. ೦-೨-೦.
5. ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ ಸಮಂತ್ರಕ ಉದುತ್ಯ, ಮಹಾಸೌರ, ಆದಿತ್ಯ ಹೃದಯಾದಿ. } ೦-೨-೦.
6. ಉದಕಶಾಂತಿ ಶುದ್ಧವಾದ ಪುಸ್ತಕ. ೦-೨-೦.
7. ವಿಷ್ಣು ಸಹಸ್ರನಾಮ ಮೂಲ ಶ್ಲೋಕ ರೂಪ ನಾಮರೂಪ ಕೂಡ ಚಿಕ್ಕ ಸೈಜು. } ೦-೨-೦.
8. ವಿಷ್ಣು ಸಹಸ್ರನಾಮಕ್ಕೆ ಪ್ರತಿಪದ ಟೀಕಾ ತಾತ್ಪರ್ಯ ಉತ್ತಮ ಕಾಗದ ಕೆತ್ತಾನು ಬೈಂಡು. } ೩-೦-೦.
9. ಕಾಲಾಮೃತ ಒಳ್ಳೇ ಕಾಗದದಲ್ಲಿ ತಪ್ಪಿಲ್ಲದೆ ಟೀಕಾ ತಾತ್ಪರ್ಯ ಸಹಾ ಪ್ರಿಂಟಾಗಿದೆ ಹಸನ್ ಕಾಗದ ೧ನೇ ರಖಂ. } ೧-೦-೦.
10. ಗ್ಲೇಜು ಕಾಗದದ ೨ನೇ ರಖಂ. ೦.೧೨.೦
11. ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ. } ೦ ೨-೦
12. ಬಾಲ ರಾಮಾಯಣ ಟೀಕಾ ತಾತ್ಪರ್ಯ } ೦-೨ ೦.
13. ಸ್ವರಸಹಿತವಾದ ನಮಕ ಚಮಕ, ಪುರುಷಸೂಕ್ತ ಶ್ರೀಸೂಕ್ತ ಭೂಸೂಕ್ತ ನಾರಾಯಿಣೋಪನಿಷತ್ತು. } ೦-೨-೦
14. ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ. } ೦-೪-೦.
15. ಸೂರ್ಯ ಸಹಸ್ರನಾಮ, ಶ್ಲೋಕ, ನಾಮ. } ೦-೨-೦.
16. ಕೃಷ್ಣ ಕರ್ಣಾಮೃತ ಮೂಲ. ೦-೨ ೦.
17. ಯಕ್ಷಗಾನ ಪಂಚಭಾಷಾ ಕೃಷ್ಣ ಬಾಲಲೀಲೆ. } ೦-೪-೦.

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು.

ವಿಳಾಸ.— ಬಿ. ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್,
ಚಿಕ್ಕಪೇಟೆ,
ಬೆಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವು.

ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಶೇಬು, ಕಿತ್ತಾಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಕೆಟಲಾಗಿಗೆ ಬರದು ತರಿಸಿಕೊಳ್ಳಬಹುದು.

ಟಿ. ಎಸ್. ಗಿರಿಯಪ್ಪ ಎಂಡ್ ಸನ್,
ಪ್ಲಾರಿಸ್ಟ್ ಎಂಡ್ ಸೀಡ್ಸ್‌ಮೆನ್,
ಲಾಲ್‌ಬಾಗ್ ಕೋಟೆ ರಸ್ತೆ,
ಬೆಂಗಳೂರು; ಸಿಟಿ.

[illegible] ನೋಟೀಸು

[illegible] ಈ ಸಂಚಿಕೆಯಲ್ಲಿಯೂ [illegible] ಹಣ ವಾಯಿದೆ ಮುಗಿದವರಿಗೂ ನೋಟೀಸನ್ನು ಕೊಟ್ಟಿರುವೆವು. ನೋಟೀಸುಗಳಲ್ಲಿ ಸೂಚಿಸಿದಂತೆ ವರ್ತಿಸಿ ವೃಥಾ ವಿ. ಪಿ. ಗಳ ತಿರಸ್ಕಾರದಿಂದ ನಮಗಾಗುವ ನಷ್ಟವನ್ನು ಳಿಸಬೇಕಾಗಿ ಅಪೇಕ್ಷಿಸುತ್ತೇವೆ

ಸ್ವದೇಶಾಭಿಮಾನಿ

ಮಂಗಳೂರು ಶುಕ್ರವಾರ ತಾರೀಕು 23ನೇ ಜುಲಾಯಿ 1909

ಹಿಂದೂ ಮಹಮ್ಮದೀಯ ಸಮಾಜಗಳು

ಕಳೆದ ೨೦ನೇ ತಾರೀಕಿಗೆ ಪುಣೆಯ ದಕ್ಷಿಣ ಸಭ ಮುಂದೆ ಮಿ ಗೋಖಲೆಯವರು ಇನ್ನೊಂದು ವಿಚಾರಪೂರಿತ ಉಪನ್ಯಾಸ ಮಾಡಿದರು ಭಾರತೀಯರಲ್ಲಿ ಮೋಹಿತ ರಾಷ್ಟ್ರೀಯ ಕಲ್ಪನೆಯು ಮೂರ್ತಿಭವಿಸಿ ನಾವು ಒಂದು [illegible] ನಾಗಿ ಪರಿಣಮಿಸಬೇಕಾದರೆ ಹಿಂದೂ ಮಹಮ್ಮದೀಯರ [illegible] ಸಿದ್ಧಿಸಬೇಕಾಗುವದು ಆದ್ದರಿಂದ ಭಾರತೀಯರ ಐಕ್ಯದ ಪ್ರಶ್ನೆಯು [illegible] ಹಿಂದೂ ಮುಸಲ್ಮಾನ ಪ್ರಶ್ನೆಯೂ ದಿನೇದಿನೇ ಸಮೀಪಿಸುವದು [illegible] ಹೊಸ ಏರ್ಪಾಡುಗಳ ದೆಸೆಯಿಂದ ಈ ಸವಾಲು [illegible] ಈ [illegible] ನೋಡಿ ಮಿ| ಗೋಖಲೆಯವರು ಹಿಂದೂ ಮಹಮ್ಮದೀಯ [illegible] ಪರಸ್ಪರ ತ್ಯಾಗ ನಡೆಸಿಕೊಳ್ಳಬೇಕೆಂದು ತಿಳಿಯ ಹೇಳಿದ್ದಾರೆ ದೇಶ [illegible] ದಲ್ಲಿಟ್ಟ ಪ್ರತಿಯೊಬ್ಬನೂ ಈ ಕಥ ಗಮನಕೊಟ್ಟು ಈ [illegible] ತನ್ನ [illegible] ತಿದ್ದಿಕೊಳ್ಳಬೇಕು

ಈ ಎರಡು ಸಮಾಜಗಳಲ್ಲಿ [illegible] ಮತ ಸಂಬಂಧವಾದ ವೈಷಮ್ಯಗಳು ಮಾತ್ರವೇ ಆಗ್ಯಾಗ್ಯೆ ತೋರಿದ್ದು [illegible] ಈಗ [illegible] ಮುಸಲ್ಮಾನರಲ್ಲಿ ಮೊಸ್ಲೆಮ ಲೀಗ್ ಅಪ್ [illegible] ಸಂಘಗಳು ಏರ್ಪಟ್ಟು ತಮಗೆ ಹಿಂದುಗಳಿಗಿಂತ ಹೆಚ್ಚಿನ [illegible] ಸಂಖ್ಯೆಗ [illegible] ರೀತವಾದ ಸ್ವಾತಂತ್ರ್ಯಗಳನ್ನೂ ಸರಕಾರಿ ಹುದ್ದೆಗಳನ್ನೂ ಅಸಿಕೊಳ್ಳಬೇಕೆಂದು [illegible] ಮಾಡುವವು ಮುಸಲ್ಮಾನರು ವಿದ್ಯಾವಂತರಾಗಿ [illegible] ತೃಪ್ತಿಕರವಾದರೂ ಅವರು ವಿಶೇಷ ಸ್ವಾತಂತ್ರ್ಯಗಳನ್ನು [illegible] ಕೊಳ್ಳಯತ್ನಿಸುವದರಿಂದ ಸದರಿ ವೈಷಮ್ಯಗಳು ಬೆಳೆಯ ಕಾರಣವಾಗುವದು ಹಿಂದೂ ಮುಸಲ್ಮಾನ ಪ್ರಜಾನಾಯಕರು ತಮ್ಮತಮ್ಮ ಸಮಾಜದ ಪ್ರಕೃತ ಲಾಭವನ್ನೇ [illegible] ಮನಸ್ಸಿನಲ್ಲಿಟ್ಟು ವರ್ತಿಸಬೇಕಾಗಿದೆ

ಮುಸಲ್ಮಾನರು ಹಿಂದುಸ್ಥಾನದ ಇಡೀ ಜನಸಂಖ್ಯೆಯ ¼ ಪಾಲು ಇರುವರು ಶೀಮೆಗಳ ಪ್ರಕಾರ ನೋಡಿದರೆ ಇವರು ಪಂಜಾಬ (ಅರೆವಾಸಿಕ್ಕಿಂತ ಸ್ವಲ್ಪ ಹೆಚ್ಚು) ಮತ್ತು ಪೂರ್ವಬಂಗಾಳ (ಸುಮಾರು ⅔ ಪಾಲು) ದಲ್ಲಿ ಮಾತ್ರ ಬಹು ಪಕ್ಷವಿರುವರು ಮುಸಲ್ಮಾನರು ಹಿಂದುಗಳಿಂದಲೇ ಮತಾಂತರ ಹೊಂದಿದವರಾಗಿ ಉಭಯ ಸಮಾಜಗಳೂ ಒಂದೇ ವಂಶಜರಾಗಿರುವರು ಆದರೆ ಮುಸಲ್ಮಾನ ಹಿಂದೂ ಧರ್ಮಗಳ ವರ್ಚಸ್ಸಿನಿಂದ ಈ ಎರಡು ಸಮುದಾಯಗಳಲ್ಲಿ ಬಿನ್ನ ಗುಣಗಳು ಬೆಳೆದಿವೆ ಹಿಂದುಗಳಲ್ಲಿ ಜಾತಿ ವೈಷಮ್ಯ ಅನರ್ಥಕಾರಣವಾಗಿದೆ ಸ್ವಭಾವದಲ್ಲಿ ಇವರು ಶಾಂತರೂ ಉದಾಸೀನರೂ ಆಗಿರುವರು ಮಹಮ್ಮದೀಯರಲ್ಲಿ ಭೇದಗಳು ಕಡಿಮೆ, ಐಕ್ಯವು ಹೆಚ್ಚು ಮತ್ತು ಅವರು ಬೇಗನೆ ಉತ್ತೇಜಿತರಾಗುವರು ಪ್ರಕೃತ ವಿದ್ಯೆಯಲ್ಲಿಯೂ ಧನದಲ್ಲಿಯೂ ಸಂಖ್ಯೆಯಲ್ಲಿಯೂ ಹಿಂದುಗಳೇ ಮಿಗಿಲಾಗಿರುವರು. ಉಭಯತರಲ್ಲಿ ಪರಂಪರೆಯಾಗಿ [illegible] ಶೋಚನೀಯವಾದದ್ದು ಆದರೆ ಕ್ರಮೇಣ ವಿದ್ಯಾಪ್ರಚಾರದಿಂದಲೂ, ರಾಷ್ಟ್ರೀಯಭಾವ ಪ್ರಾಬಲ್ಯದಿಂದಲೂ, ರಾಷ್ಟ್ರೀಯಾಭಿಮಾನದಿಂದಲೂ [illegible] ಹಿಂದೂ ಮುಸಲ್ಮಾನರುಗಳಲ್ಲಿ ಐಕ್ಯಮತ್ಯ [illegible] ಯುರೋಪದಲ್ಲಿ [illegible] ಪರಿಣಾಮವಾಗಿದೆ. ಹಿಂದು ಮುಸಲ್ಮಾನರಲ್ಲಿ [illegible] ದೇಶಾಭ್ಯುದಯದಲ್ಲಿ [illegible] ಆದಕಾರಣ [illegible]

[illegible] ಮುಂದಿಡಬೇಕು.

[illegible] ಕಲಕ್ಟರ [illegible] ಪ್ರೆಸಿಡೆನ್ಸಿ [illegible] ತಮ್ಮ [illegible] ಅಪ್ಪೀಲ್ [illegible] ಕೊಟ್ಟಿದ್ದ [illegible] ಪರೀ ಮಾಡಬಹುದು. (2) ಕಲಕ್ಟರರ ಮುಖಾಂತರ [illegible] ಈ ಕೆಲ [illegible] (3) ಬೋರ್ಡ್ ಆಫ್ ರೆವಿನ್ಯೂ [illegible] 124 [illegible] ತಮ್ಮ [illegible] ಕಲೆಕ್ಟರರ [illegible] ಈ ತಹಶೀಲ್ದಾರರ [illegible] ತಮ್ಮ [illegible] ತಹಶೀಲ್ದಾರರು [illegible] (4) [illegible] ಮತ್ತು [illegible] ಕೊಟ್ಟ ಶಿಕ್ಷೆಗಳ [illegible] ಡಿಪ್ಯುಟಿ ತಹಶೀಲ್ದಾರರು [illegible] ಕ್ರಮವನ್ನು [illegible] (5) ತಹಶೀಲ್ದಾರರವರಿಗೆ ತಮ್ಮ [illegible] ಕ್ಲಾರ್ಕುಗಳಿಗೆ ಒಂದು ತಿಂಗಳಿಗೆ ಮೀರದ ಪ್ರಿವಿಲೇಜ ರಜೆಯನ್ನು ಕೊಡುವ ಅಧಿಕಾರವನ್ನೂ ಹೀಗೆ ರಜೆಕೊಟ್ಟದ್ದರಿಂದ ಖಾಲಿಬಿದ್ದ [illegible] ಕೆಲಸಕ್ಕೆ ಆ ಕೆಲಸದ ಕೆಳಗಿನ ತರಗತಿಯವರನ್ನು ನೇಮಿಸಿ ಈ ಪ್ರಕಾರ ಖಾಲಿ ಬೀಳುವ ಕಡೇ ಕೆಲಸಕ್ಕೆ ಸರಕಾರ ಹುದ್ದೆಗೆ ತಕ್ಕದಾದ ಪರೀಕ್ಷೆ ಪಾಸಾದವರನ್ನು ಬದಲಿಗೆ ನೇಮಿಸುವ ಅಧಿಕಾರವನ್ನು ಸಹಾ ಕೊಟ್ಟಿರುವರು. (6) ಡಿಪ್ಯುಟಿ ತಹಸೀಲದಾರ ವ ತಹಸೀಲದಾರರಿಗೆ ನೇಮಿಸಲು ಅಧಿಕಾರ ವಿರುವ ಕೆಳ ನೌಕರರ ಸೆಕೆಂಡ್ ಅಪೀಲುಗಳನ್ನು ಅಂಗೀಕರಿಸಬಾರದು. (7) ಡಿವಿಜನಲ್ ಆಫೀಸರರುಗಳು ಒಂದು ವರುಷದ ತನಕ ಮೂವತ್ತು ಯಾ ಮೂವತ್ತು ರೂಪಾಯಿಗಳ ಕೆಳಗಿನ ಹುದ್ದೆಗಳಿಗೆ ಪಾಸಾಗದವರನ್ನು ನೇಮಿಸಲು ಬಹುದು. (8) ರೆವಿನ್ಯು ಇನ್ಸಪೆಕ್ಟರರುಗಳ 6ತಿಂಗಳ ವರೆಗಿನ ಬದಲಿ ಕೆಲಸ ನೋಡಲಿಕ್ಕೆ ರೆವಿನ್ಯೂ ಯಾ ಎಕೌಂಟು ಲೋವರ್ ಪರೀಕ್ಷೆಗಳು ಪಾಸಾಗದವರನ್ನು ನೇಮಿಸಬಹುದು. (9) ಡಿವಿಜನಲ್ ಆಫೀಸರುಗಳಿಗೆ ತಮ್ಮ ಕೈ ಕೆಳಗಿರುವ ತಹಸೀಲದಾರ, ಡಿಪ್ಯುಟಿ ತಹಸೀಲದಾರ, ತಾಲೂಕು ಸಿರಸ್ತೆದಾರ್, ಮತ್ತು ಹೆಡ್ ಎಕೌಂಟೆಂಟರುಗಳಿಗೂ, ತಹಸೀಲದಾರರುಗಳಿಗೆ ತಮ್ಮ ಸಿರಸ್ತೆದಾರ್ ಮುಂತಾದವರಿಗೂ ಕೆಜುಯಲ್ ರಜೆಯನ್ನು ಕೊಡುವ ಅಧಿಕಾರವಿರುವುದು. (10) ಸರಕಾರಿ ಕೆಲಸದವರು ಪೆನಶನು ತಕ್ಕೊಳ್ಳುವ ತಾರೀಕುಗಳನ್ನು ನಿರ್ಣಯಿಸುವ ಅಧಿಕಾರವು ಅಂಥಾ ಪೆನಶನು ತಕ್ಕೊಳ್ಳುವಂಥಾ ಹುದ್ದೆಗಳಿಗೆ ನೇಮಕ ಮಾಡುವ ಅಧಿಕಾರವುಳ್ಳವರಿಗೆನೇ ಕೊಟ್ಟಿರುವುದು.

〰〰〰

ತಿರುವಾಂಕೋಡಿನ ಮಹಾರಾಜರವರು ಡಾಕ್ಟರ್ [illegible] ಪೂನನ ಎಂಬವರ ಮಗಳಾದ ಮಿಸಿಸ್. ಎಮ್ [illegible] ಪೂನನ ಎಂಬಾಕೆಗೆ ಎಡಿಂಬರ್ಗಿಗೆ ಹೋಗಿ ವೈದ್ಯ ವಿದ್ಯೆಯಲ್ಲಿ ಅಭ್ಯಾಸ ಹೊಂದಿ ಬರಲಿಕ್ಕೆ ವರುಷಕ್ಕೆ [illegible] ಪವನುಗಳ ವಿದ್ಯಾರ್ಥಿವೇತನವನ್ನು ಕೊಟ್ಟಿರುವರು. ಮಿಸಿಸ್. ಎಮ್ [illegible] ಪೂನನರವರು ಬಿ. ಎ. ಪರೀಕ್ಷೆಯಲ್ಲಿ ಬಹುಮಾನ ಪದಕ [illegible] ಪಾಸಾಗಿರುವರು. ಬಿ. ಎ. ಪರೀಕ್ಷೆಗೆ ಇವರು ತಕ್ಕೊಂಡ ಫ್ರೆಂಚ ಭಾಷೆಯಲ್ಲಿ ಇವರು ಇಡೀ ಸಂಸ್ಥಾನದಲ್ಲಿ ಪ್ರಥಮ ಸ್ಥಾನವನ್ನು ಹೊಂದಿದಲ್ಲದೆ ಇಂಗ್ಲೀಷ ಭಾಷಾ ಪಾಂಡಿತ್ಯದಲ್ಲಿ ಸಹಾ ಎರಡು ಚಿನ್ನದ ಪದಕಗಳನ್ನು ಪಡೆದಿರುವರು. ವೈದ್ಯವಿದ್ಯೆಯಲ್ಲಿ ಪಾಸಾಗಿ ಬಂದ ನಂತರ ಇವರು ಸ್ತ್ರೀ ವೈದ್ಯನಾಗಿ ತಿರುವಾಂಕೋಡಿನ ಮಹಾರಾಜರವರಿಂದ ನೇಮಿಸಲ್ಪಡುವರು.

〰〰〰

ಮುಂಬಯಿ ಮೊದಲಾದ ಪ್ರಾಂತ್ಯಗಳಲ್ಲಿ ಪ್ರಸಿದ್ಧಿ ಪಟ್ಟ ರಾ। ವಿಶ್ವೇಶ್ವರಯ್ಯ ಬಿ. ಎ. ಎಲ್ ಸಿ ಯಿ ಯವರು ಮೈಸೂರು ಸಂಸ್ಥಾನದ ಚೀಫ್ ಇಂಜನಿಯರಾಗಿ ನೇಮಿಸಲ್ಪಟ್ಟಿರುವರು. ಈ ಮೊದಲು ಈ ಪದವಿಗೆ ಯುರೋಪಿಯನರನ್ನೇ ನೇಮಿಸುವದಿತ್ತು. ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದಲ್ಲಿ ನೇಮಿಸಲ್ಪಟ್ಟ ಪ್ರಥಮ ಭಾರತೀಯ ಚೀಫ್ ಇಂಜಿನಿಯರರಾಗಿರುವರು. ಪ್ರಕೃತ ಇವರು ಹೈದರಾಬಾದು ಸಂಸ್ಥಾನದಲ್ಲಿ ಆರು ತಿಂಗಳ ವರೆಗೆ ಕನ್ಸಲ್ಟಿಂಗ್ ಇಂಜಿನಿಯರ್ ಕೆಲಸ ನಿರ್ವಹಿಸಿ ಬರುವ ನವಂಬರ 1ನೇ ತಾರೀಕಿನಲ್ಲಿ ಮೈಸೂರಿಗೆ ಬಂದು ತಮ್ಮ ಹುದ್ದೆಯನ್ನು ವಹಿಸಿಕೊಳ್ಳುವರು.

〰〰〰

ಮೈಸೂರು ಸಿವಿಲ್ ಸರ್ವೀಸ್ ಪರಿಕ್ಷೆ ಬಗ್ಗೆ ಉಮೇದ್ವಾರರಾಗಿ ಬಂದ 29ಜನರಲ್ಲಿ ಮೆಡಿಕಲ್ ಬೋರ್ಡಿನವರು 19ಜನರನ್ನು ಚುನಾಯಿಸಿರುವರು. ಹೀಗೆ ದೇಹದಾರ್ಢ್ಯವು ಸಮರ್ಪಕವಾಗಿಲ್ಲದ 10 ಜನರಲ್ಲಿ 8ಜನರು ಮೈಸೂರಿನವರೇ ಆಗಿರುವರು.

〰〰〰

ದಕ್ಷಿಣಕನ್ನಡ

〰〰〰

ಮಂಗಳೂರು ಕುಂದಾಪುರ ತಾಲೂಕು ಉಪ್ಪಂದ ಗ್ರಾಮದ ಪಟೇಲ ವ ಉಗ್ರಾಣಿಯು ಲಂಚ ತೆಗೆದುಕೊಂಡಿದ್ದರೆಂಬ ಫಿರ್ಯಾದಿಯನ್ನು ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರವರು ಆಗೋಸ್ತು ತಾ [illegible]ಕ್ಕೆ ತನಿಖೆ ಬಗ್ಗೆ ಇಟ್ಟಿದ್ದಾರೆ.

ಮಂಗಳೂರು ಶಹರ ಪೈಕಿ ಕುದ್ರೋಳಿಗೆ ಹೋಗುವ ರಸ್ತೆ ಬಳಿ ಕಂಡಗಪುಳ ಹತ್ತರ ಟೌನ್ ಪೋಲೀಸಿನವರಿಗೆ ಪೋಕ್ರಿ ಸ್ವಭಾವದ ಎಂಟು ಮಂದಿ ನಾಪಿತ ಹುಡುಗರು ಹೊಡೆದ ಈ ಮೊಕದ್ದಮೆಯು ಡಿಪ್ಯುಟಿ ಕಲೆಕ್ಟರರ ಕಚೇರಿಯಲ್ಲಿ ಈ ತಿಂಗಳ [illegible] ರಲ್ಲು ತೀರ್ಮಾನಿಸಲ್ಪಟ್ಟು ಇಬ್ಬರನ್ನು ಬಿಟ್ಟರು. ಬಾಕಿ ಉಳಿದ ಆರು ಮಂದಿ ಪೈಕಿ ಒಬ್ಬನಿಗೆ ಆರು ತಿಂಗಳ ಸಜೆಯೂ [illegible] ರೂಪಾಯಿ ಜುಲುಮಾನೆ-

ಯೂ, ಇನ್ನೊಬ್ಬನಿಗೆ ೫ ತಿಂಗಳ ಸಜೆಯೂ ೨೫ ರೂಪಾಯಿ ಜುಲ್ಮಾನೆಯೂ, ಬಾಕಿ ನಾಲ್ವರಿಗೆ ನಾಲ್ಕು ತಿಂಗಳ ಪ್ರಕಾರ ಸಜೆಯೂ ವಿಧಿಸೋಣಾಯಿತು.

ಲಿಂಗಪ್ಪನೆಂಬ ಒಬ್ಬ ಪೋಲೀಸಿನವನು ಈ ತಿಂಗಳ ಕಳೆದ ತಾ. [illegible]ರಲ್ಲು ಏನೋ ಕಾರಣದಿಂದ ತ್ರಿಶಿಲೇಶ್ವರ ದೇವಸ್ಥಾನದ ಕೆರೆಯಲ್ಲಿ ಬಿದ್ದು ಸತ್ತುಹೋದನು

ಈ ಹಪ್ತೆಯಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಪ್ಲೇಗುಮರಣಗಳು ಇರಲಿಲ್ಲ.

ರಾವ್ ಸಾಹೇಬ್ ಎನ್ ಸುಬ್ಬರಾವ್ ಗೋಳಿಕಟ್ಟೆ ಬಜಾರಿನ ಮ್ಯುನ್ಸಿಪಲ್ ಕೌನ್ಸಿಲರಾಗಿ ತಿರಿಗಿ ಚುನಾಯಿಸಲ್ಪಟ್ಟಿದ್ದಾರೆ

ಕಲ್ಲೆಕ್ಟರ ದೊರೆಗಳು ಹೊಸಗು[illegible] ಸರ್ಕೀಟು ಬೆಳಸಿರುವರು

ಇಲ್ಲಿಯ ಮದ್ರಾಸು ಬ್ಯಾಂಕು ಏಜೆಂಟರು ಮಿ. [illegible] ಶೆಣೈ ದೊರೆಗಳಿಗೆ ವರ್ಗವಾಗಿ ಮಿ. ಲಕ್ಷ್ಮಿ ದೊರೆಗಳು ಬಂದಿರುವರು

ನಮ್ಮ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳು ವಾತದ ಕ್ಯಾಲೆಯಲ್ಲಿ ಬಿದ್ದವರಿಂದ ಮಿ. ಪಿಟ್ ದೊರೆಗಳು ಬದಲಿ ನೋಡುವರು.

ಕಳೆದ ದಪೂನ್ ನಂತರ ಹುಜೂರುಕಚೇರಿಯಲ್ಲಿ ೧೫ ರೂಪಾಯಿ ತಲೆಪಿನ ಇಸಮುಗಳು ಇನ್ನೂ ೧೫ ಉಳಿದಿವೆ. ಇವರಲ್ಲಿ ೯ ಇಸಮುಗಳಿಗೆ ೨೦ ರೂಪಾಯಿ ಪಗಾ ತಲೆಕ್ಕೆ ಸರಕಾರದವರು ಹುಕುಂ ಕೊಟ್ಟಿರುವರು.

ಮುಲ್ಕಿ ಸಬ್‌ರಿಜಿಸ್ತ್ರಾರರು ಮ. ರಾ. ರಾ. ನಾರಾಯಣರಾಯರಿಗೆ ಮಂಗ್ಳೂರ ಜೋಯಿಂಟ್ ಸಬ್ ರಿಜಿಸ್ತ್ರಾರರಾಗಿಯೂ ಕೆಲವು ಕಾಲಕ್ಕೆ ಮುಂಚೆ ಹೊಸದುರ್ಗ ಸಬ್ ರಿಜಿಸ್ತ್ರಾರರಾಗಿದ್ದ ಮಿ. ಡಿಸೋಜರವರಿಗೆ ಮುಲ್ಕಿಗೂ ವರ್ಗವಾಗಿದೆ

~~~~~

ಉಡುಪಿ. ಇಲ್ಲಿ ಮಲ್ಪೆ ಬಂದರದಲ್ಲಿ ಸ್ಟೀಮರುಗಳಿಂದ ಇಳಿಯುವ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿ ಕೊಟ್ಟು ಪರೋಪಕಾರಿ ಎಂತ ಹೆಸರುವಾಸಿ ಪಡೆದ ಸಂಪನ್ನರಾದ ರಾ| ಮಾಬುಕಾಪಟ್ಟು ಶೆಣೈಯವರು ಈ ತಿಂಗಳ ತಾ. [illegible]ರಲ್ಲಿಯೂ ಉಡುಪಿ ಪೇಟೆ ಸಾವುಕಾರ ರಾ| [illegible] ರಾಮಕೃಷ್ಣ ಶ್ಯಾನುಭಾಗರು ಅದೇ ತಿಂಗಳ ತಾ. [illegible]ರಲ್ಲಿಯೂ ದೈವಾಧೀನರಾದರೆಂಬದನ್ನು ತಿಳಿಸಲು ವಿಷಾದ ಪಡುತ್ತೇನೆ.

ನಮ್ಮ ಸೆಕೆಂಡ ಕ್ಲಾಸ್ ಮೇಜಿಸ್ಟ್ರೇಟರ ಕಚೇರಿಯಲ್ಲಿ ಬೆಂಚ್ ಮೇಜಿಸ್ಟ್ರೇಟರಲ್ಲಿ ಕೆಲವರು ಪರ ಊರುಗಳಲ್ಲಿದ್ದು ಊರಿನಲ್ಲಾದ ತಕ್ಕರಾರುಗಳನ್ನು ಇವರು ತೀರ್ಪು [illegible] ಸುವದು ಕಷ್ಟಸಾಧ್ಯವಾದದರಿಂದ ಇನ್ನು ಒಬ್ಬಿಬ್ಬರನ್ನು ಬೆಂಚ್ ಮೇಜಿಸ್ಟ್ರೇಟರಾಗಿ ಚುನಾಯಿಸಬೇಕೆಂತ ಕೆಲವು ಪಟ್ಟಣ ನಿವಾಸಿಕರು ಅರ್ಜಿ ಮಾಡಿರುವರಾಗಿ ಕೇಳುತ್ತೇನೆ. ಈ [illegible] ಉದ್ದೇಶಕ್ಕೆ ಕೆಲವರ ಖಾಹಿಷೆಯೇ ಆಧಾರವಾಗಿರುವುದು [illegible] ಹೀಗೆ ಕೆಲವು ಬೆಂಚ್ ಮೇಜಿಸ್ಟ್ರೇಟರು ಪರಊರಿನಲ್ಲಿರುವವರಿಂದ ಪ್ರಜೆಗಳು ಯಾವ ಅನ್ಯಾಯಗಳನ್ನೂ ಹೊಂದಲಿಲ್ಲ. ಇಂತಹ ಹೊಸ ನೇಮಕವು ಅಗತ್ಯವಿಲ್ಲವೆಂತ ಇಲ್ಲಿಯ ಊರಿನವರೆಲ್ಲರ ಅಭಿಪ್ರಾಯವಾಗಿರುವುದು. ಬೆಂಚ್ ಮೇಜಿಸ್ಟ್ರೇಟರನ್ನು ನೇಮಿಸುವ ಬಗ್ಗೆ ಯತೇಷ್ಟ ಹಣವಿರುವ ಯೋಗ್ಯತೆ ಮಾತ್ರವಲ್ಲ, ಇಂತಹ ನೇಮಕ ಹೊಂದುವವರು ತಮ್ಮ ನಡತೆ ವ ವರ್ತನೆಯಿಂದ ಎಷ್ಟುಮಟ್ಟಿಗೆ ಪ್ರಜಾರಂಜಕರಾಗಿರುವರೆಂಬದನ್ನು ಸಹಾ ತಿಳಕೊಳ್ಳ ಬೇಕಾಗಿರುವುದು. ಬೆಂಚ್ ಮೆಜಿಸ್ಟ್ರೇಟ ಪದವಿಯನ್ನು ಸರಕಾರದವರಿಂದ ಪಡೆದು ಈ ಅಧಿಕಾರ ಬಲವನ್ನು ಸ್ವಾರ್ಥಸಾಧನೆಯಲ್ಲಿಯೇ ಉಪಯೋಗಿಸುವವರು ಈ ಪದವಿಗೆ ಎಂದೂ ಅರ್ಹರಲ್ಲ.

ಇಲ್ಲಿಯ ಸ್ಟೇಶನರಿ ಸಬ್ ಮೇಜಿಸ್ಟ್ರೇಟರ ಕೋರ್ಟಿನ ಒಂದು ಮೊಕದ್ದಮೆಯಲ್ಲಿ ೫೦ ರೂಪಾಯಿ ಜುರುಮಾನೆ ವಿಧಿಸಲ್ಪಟ್ಟ ಇಲ್ಲಿಯ ಶ್ರೀ ಅದಮಾರು ಮಠದ ಆಚಾರ್ಯರಾದ ಮ. ರಾ. ರಾ. ವ್ಯಾಸರಾಯ ಆಚಾರ್ಯರಿಗೆ ಈ ಜುರುಮಾನೆಯು ಅಪೀಲಿನಲ್ಲಿಯೂ ಸಹಾ ಕಾಯಂ ಆಗಿರುವುದೆಂಬದನ್ನು ತಿಳಿಸಲು ವ್ಯಸನಪಡಬೇಕಾಗಿದೆ.

M. S.

ಶ್ರೀ ಪುತ್ತಿಗೆ ಶ್ರೀ ಪಾದಂಗಳವರು ಬೆಂಗಳೂರಲ್ಲಿಯೂ ಶ್ರೀ ಪೇಜಾವರ ಶ್ರೀ ಪಾದಂಗಳವರು ಕೊಯಂಬುತ್ತೂರು ಜಿಲ್ಲೆಯ ಕರೂರಲ್ಲಿಯೂ ಶ್ರೀ ಉತ್ತರಾದಿ ಶ್ರೀ ಪಾದಂಗಳವರು ಬಳ್ಳಾರಿ ಜಿಲ್ಲೆಯ ಹರ್ಪನಹಳ್ಳಿಯಲ್ಲಿಯೂ ಶ್ರೀ ಭೀಮನ ಕಟ್ಟೆ ಶ್ರೀ ಪಾದಂಗಳವರು ಸೇಲಂ ಜಿಲ್ಲೆಯ ಕುಮಾರ ಪಾಳ್ಯದಲ್ಲಿಯೂ ಈ ವರ್ಷದ ಚಾತುರ್ಮಾಸ ವ್ರತವನ್ನು ಪೂರೈಸುವವರಿದ್ದಾರೆ

ಹೆಡ್ ಅಸಿಸ್ಟಾಂಟ್ ಕಲೆಕ್ಟರ್ ದೊರೆಗಳವರು ಕೆಲವು ಕಾಲದಿಂದ ತಮ್ಮ ಮೊಕ್ಕಾಮನ್ನು ಮಂಗಳೂರಲ್ಲಿ ಮಾಡಿದ್ದರಿಂದ ಉಡುಪಿ ಕುಂದಾಪುರ ತಾಲೂಕುಗಳ ಜನರಿಗೆ [illegible] ಮಳೆ ಸಮಯಗಳಲ್ಲಿ ಮಂಗಳೂರಿಗೆ ಹೋಗುವದಕ್ಕೆ ತುಂಬಾ ಕಷ್ಟವಾದದೂ [illegible] ಕಂಪನಿಗಳಿಗೂ ಹೊಟೇಲುಗಳಿಗೂ ತುಂಬಾ ಅನುಕೂಲವಾಯಿತು.

[illegible] ಉಡಿಯಾವರ ಲಕ್ಷ್ಮೀ ನಾರಾಯಣ [illegible] ರಾತ್ರಿ ಕಳ್ಳರು ಕನ್ನಹಾಕಿ ಒಳ[illegible] ಹೊತ್ತುಕೊಂಡು ಹೋಗಿ[illegible] ೩೦೦ ರೂಪಾಯಿ [illegible] ಅದೇ ರಾತ್ರಿ [illegible] ಈ ಕಳ್ಳರು [illegible] ಇಲ್ಲಿಯ ಪೋಲೀಸಿನವರು ಕೈದು ಮಾಡಿರುವರು

ಪ್ರಸಿದ್ಧ ಕೆ. ಪಿ. [illegible] ಎಂಬವನು [illegible] ಈ ತಿಂಗಳ ೨ನೇ ತಾರೀಕಿನಲ್ಲಿ [illegible] ಕೆಲವು ಮನೆಗಳಿಗೆ [illegible] ಮಾಡಿರುವನಂತೆ

ನಮ್ಮ ಊರಿನ ಶ್ರೀಮಂತ ಸಾವುಕಾರರಾದ ಮ. ರಾ. ಅಬ್ದುಲ್ಲಾ ಸಾಹೇಬ್ ಕಾಸಿಂಸಾಹೇಬ ಇವರಿಗೆ ಖಾನ್ ಬಹದೂರ್ ಬಿರುದನ್ನು ಸರಕಾರದವರು ದಯಪಾಲಿಸಿದ್ದಕ್ಕಾಗಿ ಇಲ್ಲಿ ಜನರೂ ಸಂತೋಷಪಡುತ್ತಿರುವರು. [illegible] ತಮ್ಮ ಸಂತೋಷವನ್ನು ಪ್ರಕಟಿಸುವದಕ್ಕಾಗಿ ಊರ ಮಹಾಜನರು [illegible] ದಲ್ಲಿಯೇ [illegible] ಸಿದ್ಧರಾಗಿದ್ದಾರೆ

ಈ ಶಹರದಲ್ಲಿ ಬ್ಯಾಸಿಗೆಯ ಹೆಚ್ಚಿನ ಸಮಯದಲ್ಲಿ ನೀರಿಗೆ ತತ್ವಾರವಾದ್ದರಿಂದ ಶಹರಕ್ಕೆ ಸಮೀಪವಿರುವ ಹೊಳೆಯಿಂದ ನಳ್ಳಿಗಳ ಮೂಲಕ ನೀರು ತರಿಸುವ ಆಲೋಚನೆಯನ್ನು ನಮ್ಮ ಜಿಲ್ಲಾ ಕಲೆಕ್ಟರ್ ದೊರೆಗಳವರು ಮಾಡಿರುವದಾಗಿ ತಿಳಿದು ಬರುತ್ತದೆ

~~~~~

ಕಾಸರಗೋಡು. ಕಳೆದ ತಿಂಗಳ ಸುರುವಿನಲ್ಲಿ ಮ. ರಾ. ಕಣ್ಣಾನೂರ ವಿಟ್ಠಲ ಕಮ್ತಿಯರು ಭಿಕ್ಷುಕ ಜನರಿಗೆ ಪ್ರತಿ ಶುಕ್ರವಾರ ಕೊಡಲಾರಂಭಿಸಿದ ಅನ್ನದಾನವು ಈಗಲೂ ನಡಿಯುತ್ತದೆ. ಇನ್ನೂ ಒಂದು ತಿಂಗಳ ವರೆಗೆ ಪ್ರತಿ ಶನಿವಾರ ಕೊಡಲಿಕ್ಕೆ ನಿಶ್ಚಯಿಸಿದ್ದಾರಾಗಿ ಕೇಳಿ ತುಂಭಾ ಸಂತೋಷಪಡುತ್ತೇನೆ.

ಇಲ್ಲಿಯ ಡಿ. ಮುನ್ಸೀಫ್ ಕೋರ್ಟಿನ ದೇಶಭಾಷೆ ಕುರಿತು ಈ ಊರ ಕನ್ನಡ, ತುಳು ಭಾಷೆಯ ನಿವಾಸಿಕರು ಗವರ್ನಮೆಂಟಿನವರಿಗೆ ಕಳುಹಿಸಿದ ಮೆಮೋರಿಯಲ್ ಅರ್ಜಿಯು ತನಕೆಯಿಂದ ರಿಪೋರ್ಟು ಮಾಡತಕ್ಕ ಬಗ್ಗೆ ಡಿಸ್ಟ್ರಿಕ್ಟ್ ಜಡ್ಜ ದೊರೆಗಳಿಗೆ ಕಳುಹಿಸಿದ್ದನ್ನು ಜಡ್ಜ ದೊರೆಗಳು ಡಿ. ಮುನ್ಸೀಫರಿಗೆ ಮಲೆಯಾಳಿ ಭಾಷೆ ಕೋರ್ಟಿನ [illegible] ಮಾಡುವ [illegible] ದಾಗಿ [illegible] ವಗೈರೆ [illegible] ಅದು ಈ ವರೆಗೆ ಜವಾಬು ಸಿಕ್ಕದೆ [illegible] ದಾಗಿಯೂ ಕೇಳುತ್ತೇನೆ. ಈಗಲೂ ನಮ್ಮ ಮುನ್ಸೀಫ್ ಕೋರ್ಟಿನಲ್ಲಿ ಸರ್ವ ದಾಖ್ಲೆಗಳು, ಸಮ್ಮನ್ಸ್‌ಗಳು ವಗೈರೆ ಮಲೆಯಾಳಿ ಬರಹ ಗೊತ್ತಿರುವ ಕೆಲವರಿಂದಲೇ ಬರಿಸಿ ದಾಖಲು ಮಾಡುವದರಿಂದ ಅನೇಕರಿಗೆ ಬಹಳ ಅಡಚಣೆ ವ ಅನಾನುಕೂಲ ಸಂಭವಿಸುತ್ತದೆ. ಈ ವಿಷಯವು ದಯಾಳು ಜಿಲ್ಲಾ ಮೇಲಧಿಕಾರಿಗಳಾದ ಜಡ್ಜ ಮತ್ತು ಕಲೆಕ್ಟರ್ ದೊರೆಗಳು ಬಡಕಕ್ಷಿಗಾರ ಮುಂತಾದ ನಿವಾಸಿಕರ ಮೇಲೆ ದಯದೋರಿ ತ್ವರ್ಯದಲ್ಲಿ ಮುಂಚಿನಂತೆ ಕನ್ನಡ ಭಾಷೆಯೇ ಕೋರ್ಟಿನಲ್ಲಿ ದೇಶಭಾಷೆಯನ್ನಾಗಿಟ್ಟು, ಅಡಚಣೆ ವ ಅನಾನುಕೂಲತೆಗಳು ಹೋಗಲಾಡಿಸುವರಾಗಿ ಕೋರುತ್ತೇನೆ

~~~~~

ಮುಲ್ಕಿ. ಕುಂದಾಪುರದತ್ತಾಗಿನ ಕಠಿಣವಾಗಿ ಹುಚ್ಚು ಹಿಡಿದ ಬ್ರಾಹ್ಮಣನನ್ನು ಪೋಲೀಸಿನವರು ಹುಚ್ಚರ ಆಸ್ಪತ್ರೆಗೆ ಕೊಂಡುಹೋಗುವ ಬಗ್ಗೆ ಮಂಗಳೂರಿಗೆ ಕಲೆಕ್ಟರ ಬಳಿಗೆ ವೈದಿರುವರು. ಹುಚ್ಚು ಹಿಡಿದ ಮನುಷ್ಯರ ಸ್ಥಿತಿ ಎಂಥಾ ಭಯಂಕರ ಎಂಬುದನ್ನು ಇವನನ್ನು ನೋಡಿ ನುಡಿಯಬೇಕಾಗುವುದು

ಪುನರ್ವಸು ನಕ್ಷತ್ರದ ಮಳೆಯು ದೈವಕಟಾಕ್ಷದಿಂದ [illegible] ಹೀಗೆ ಇನ್ನು ಮುಂದೆ [illegible] ಈ ಸಾರಿಯ ಬೆಳೆಗ[illegible] ರೈತರು ಹೇಳುತ್ತಿರುವರು.

[illegible] ತಾಲೂಕು ೧೧ರಲ್ಲಿ [illegible] ಹೀಗೆ ಇಲ್ಲಿಯ [illegible] ಉಪಾಧ್ಯಾಯರ [illegible] ಸ್ಥಿತಿಯನ್ನು ಹೊಂದು[illegible] ಸಂಕೋಚವಾಗಿರುವ ಶಾಲೆಯ [illegible] ಪಟ್ಟಿಗೊಂದಾವರ್ತಿಯಾದರೂ [illegible] ತೆಗೆಯದೆಯೂ [illegible] ಮಕ್ಕಳಿಗೆ ಶೀತ[illegible] ಯಾವ ಗೋಡೆಯ [illegible] ನುಸಿಗಳು ಎದ್ದು ಮಕ್ಕಳಿಗೆ [illegible] ಹಿಡಿದೀತು ಎಂಬ ವಿವೇಕದಿಂದಲೋ ತಿಳಿಯುವದು ಕಷ್ಟವಾಗಿರುವುದು

~~~~~

ಪುತ್ತೂರು. ಕಳೆದ ೧೩ನೇ ಸಂಚಿಕೆಯಲ್ಲಿ ಸೂಚಿಸೋಣಾದ ಮೇರೆಗೆ ಸುಬ್ರಮಣ್ಯ ಸಮೀಪ ಕುಳಗುಂದ ಹಜಾಮ ದೇವಪ್ಪನಲ್ಲಿ ನಡದ ಕಳವಿನ ಮೊಕದಮೆಯು ಡಿವಿಜನ್ ಮೇಜಿಸ್ಟ್ರೇಟರಲ್ಲಿ ತನಖಿ ನಡಿಯುತ್ತಾ ಇದ್ದು ಮುದ್ದೈಯಾಳೆ ಪುಂಚಾಲಕಟ್ಟೆ ಕ್ಷೌರಿಕ ಮಂಜಪ್ಪ ಗಾಡ ಸೋಮ ಇವರಿಗೆ ಪ್ರತಿ ಒಬ್ಬಗೆ ೨ ವರುಷ ಶಿಕ್ಷೆ ವಿಧಿಸಿ ಡಿವಿಜನ್ ಮೆಜಿಸ್ಟ್ರೇಟರವರಿಂದ ತೀರ್ಮಾನಿಸೋಣಾಗಿದೆ.

ಕೇಡಿ ಕಂಚಿಲ ಇದಿನೆ ಬ್ಯಾರಿ ಮತ್ತು ಅರಬ್ಬಿ ಬ್ಯಾರಿಯವರ ಮೇಲೆ ನೆರಳಕಟ್ಟೆ ಸುಬ್ರಾಯ ಕಮ್ತಿಯವರ ಐವಜು ಕಳವು ಮಾಡಿದ ಮೊಕದಮೆಯು ಡಿವಿಜನ್ ಮೇಜಿಸ್ಟ್ರೇಟರಲ್ಲಿ ತನಖಿ ನಡದು ಪ್ರತಿ ಒಬ್ಬಗೆ ಒಂದುವರೆ ವರುಷ ಶಿಕ್ಷೆ ಮತ್ತು ೩ ವರುಷ ಸ್ಟೇಶನ್ ಹಾಜರು ಕೊಡಬೇಕೆಂತಲೂ ತೀರ್ಮಾನಿಸಿರುವರು. ಸದರಿ ಇದಿನೆ ಬ್ಯಾರಿ ಮೇಲೆ ಅನೇಕ ಕಳವಿನ ದರೋಡೆ ಮೊಕದಮೆಗಳು ಇಲ್ಲಿಯ ಮೆಜಿಸ್ಟ್ರೇಟ್ ಕೋರ್ಟಿನಲ್ಲಿಯೂ ಡಿವಿಜನ್ ಮೆಜಿಸ್ಟ್ರೇಟರಲ್ಲಿಯೂ ಇರುವದಾಗಿ ತಿಳಿದುಬರುತ್ತದೆ.

[illegible] ರಾಮಕೃಷ್ಣ ಶೆಟ್ಟಿಯವರು ಮತ್ತು [illegible] ದಾಸ ಮತ್ತು ಪ್ರಭು ಹೀಗೆ ೩ ಜನ ಪ್ರಾದಿಯರು ಕೂಡ ದೇವಜ್ಞ ಗ್ರಾಮದ ಹೊಸಳ್ಳಿ ಸುಬ್ಬಯ್ಯನಿಂದ ಅಬ್ಕಾರಿ ನಂಬ್ರ ಇದ್ದದ್ದಾಗಿ ಮಾಡಿ ೧೫ ರೂಪಾಯಿ ಲಂಚ ತೆಗದುಕೊಂಡದ್ದಾಗಿ ಮಾಡಿದ್ದ ಅರ್ಜಿ ತನಖಿ ವಗೈರೆ ನಡದು ಆ ಸನ್ನುಂದ ಡಿಪಾರ್ಟ್‌ಮೆಂಟಿನಿಂದ ಕಾಸರಗೋಡು ಸರ್ಕಲ್ ಅಬ್ಕಾರಿ ಇನ್ಸ್‌ಪೆಕ್ಟರರು ಮಾಡಿದ ಫಿರ್ಯಾದಿಯು ಪುತ್ತೂರು ಡಿವಿಜನ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಇದೇ ತಾ. ೧೯ಕ್ಕೆ ತನಖಿ ನಡದು ಮುಂದಿನ ತನಖಿ ಬಗ್ಯೆ ಇದೇ ತಾ. ೨೮ಕ್ಕೆ ಹೊಸದುರ್ಗ ಮೊಕ್ಕಾಮಿಗೆ ಇಟ್ಟಿರುವರು

~~~

ಕುಂಡಡ್ಕ. ವಿಟ್ಲ ಸಮೀಪ ವಿಟ್ಲ ಮುಡ್ನೂರ ಗ್ರಾಮದ ಕುಂಡಡ್ಕ ಎಂಬಲ್ಲಿ ಈ ವರೇಗೆ ಶಾಲೆ ಇಲ್ಲದೆ ಹುಡುಗರು ಖಾಲಿಪೋಲಿಯಾಗಿ ತಿರುಗಾಡಿ ಮೂಢರಾಗುತ್ತಿದ್ದರು. ಇದಲ್ಲದೆ ದೂರ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸುವರೆ ತಮ್ಮ ಹೆತ್ತವರನುಮತೆ ಇರಲಿಲ್ಲ. ಇದನ್ನು ನೋಡಿ ನಮ್ಮ ಇಲ್ಲಿಯ ಜಮೀನವಾರ ಮ. ರಾ. ರಾ. ಕುಂಡಡ್ಕ ಗುಡ್ಡಪ್ಪ ರೈಗಳು ಒಂದು ಶಾಲೆಯನ್ನು ಇಕ್ಲಿ ಸ್ಥಾಪಿಸಿ ಪುತ್ತೂರಿಂದ ಇಂಗ್ಲೀಷು ತಿಳಿಯುವ ಒಬ್ಬ ಮಾಸ್ತರರನ್ನು ಸಹಾ ತಂದು ಇಟ್ಟಿರುತ್ತಾರೆ. ಈಗಲೆ ೬೦ರ ವರೆಗೆ ಹುಡುಗರು ಕೂಡಿದ್ದಾರೆ

~~~

ವಿವಿಧ ವಿಷಯಗಳು.

~~~

ಮುಂಬಯಿ ಸಂಸ್ಥಾನದಲ್ಲಿ ಗಾಯನ ಶಾಸ್ತ್ರವು ಮುಂಬಯಿ ಸರಕಾರದವರು ಭಾರತೀಯ ಗಾಯನ ಶಾಸ್ತ್ರಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುತ್ತಿರುವರು. ಪುಣೆಯಲ್ಲಿರುವ ಗಾಯನ ಸಮಾಜ ಸಂಗೀತ ಶಾಲೆಗೆ ತಕ್ಕಷ್ಟು ಗ್ರೇಂಟ್ ಎಂದರೆ ದ್ರವ್ಯ ಸಹಾಯವನ್ನು ಕೊಟ್ಟಿದ್ದಲ್ಲದೆ ಪುಣೆಯಲ್ಲಿಯೂ ಮತ್ತು ಮುಂಬಯಿ ಸಂಸ್ಥಾನದ ಹಲವು ಕಡೆಗಳಲ್ಲಿಯೂ ಇರುವ ಉಪಾಧ್ಯಾಯರನ್ನೂ ಉಪಾಧ್ಯಾಯಿನಿಯರನ್ನೂ ತರಬೇತು ಮಾಡುವ ಸರಕಾರಿ ಕೊಲೇಜುಗಳಲ್ಲಿ ಗಾಯನವನ್ನು ಕಲಿಸಲಿಕ್ಕೆ ಸಂಗೀತ ಮಾಸ್ತರರನ್ನು ಸಹಾ ನೇಮಿಸಿರುವರು. ಮೇಲೆ ಹೆಸರು ಕಾಣಿಸಿದ ಗಾಯನ ಸಮಾಜ ಸಂಗೀತ ಶಾಲೆಯವರು ಪ್ರೈಮರಿ ಶಾಲೆಗಳಲ್ಲಿಯೂ ಇತರ ಸ್ಕೂಲುಗಳಲ್ಲಿಯೂ ಕಲಿಸಲಿಕ್ಕೆ ಉಪಯುಕ್ತವಾಗಿರುವ ಗಾಯನ ಶಾಸ್ತ್ರದ ಪುಸ್ತಕಗಳನ್ನು ರಚಿಸುವರು. ಕೆಲವು ಇಂತಹ ಪುಸ್ತಕಗಳು ಈ ಸಂಘದವರಿಂದ ಈ ಮೊದಲೇ ಪ್ರಕಟಿಸಲ್ಪಟ್ಟಿವೆ. ಈ ಸಮಾಜದವರು ಗಾಯನ ಶಾಸ್ತ್ರಪರವಾದ ಅನೇಕ ಪುರಾತನ ಸಂಸ್ಕೃತ ಮತ್ತು ದೇಶಭಾಷಾ ಗ್ರಂಥಗಳನ್ನು ಸರ್ವರಿಗೂ ಉಪಯುಕ್ತವಾಗುವ ರೀತಿಯಲ್ಲಿ ಪರಿಷ್ಕರಿಸಿ ಭಾಷಾಂತರಗಳ ಸಮೇತ ಮುದ್ರಿಸುತ್ತಿರುವರು. ಪ್ರಕೃತ ಕಿಷಂಗರದ ಮಹಾರಾಜರವರು ಈ ಸಂಘದವರಿಗೆ ಉಚಿತವಾಗಿ ಕೊಟ್ಟಿರುವ ಹಿಂದಿ ಭಾಷೆಯಲ್ಲಿರುವ ಒಂದು ಗ್ರಂಥವನ್ನು ಏಳು ಭಾಷೆಗಳಲ್ಲಿ ಪ್ರಕಟಿಸುವರೆ ಕೈಕೊಂಡಿರುವರು. ಈ ಗ್ರಂಥವು ೧೭೭೯-೧೮೦೪ನೇ ವರುಷದವರೆಂಗೆ ಜಯಪುರವನ್ನು ಆಳಿದ ಮಹಾರಾಜರವರಾದ ಸವೈ ಪ್ರತಾಪಸಿಂಗದೇವ ಎಂಬವರು ಅನೇಕ ಸಂಸ್ಕೃತ ಗ್ರಂಥಗಳ ಆಧಾರದ ಮೇಲೆ ಹಿಂದೀ ಭಾಷೆ ರಚಿಸಿದ್ದಾಗಿ ತೋರಿ ಬರುವುದು. ದೇಶ ಬಾಂಧವರಲ್ಲಿ ಐಶ್ವರ್ಯವಂತರೂ, ರಾಜರುಗಳೂ ಇನ್ನೂ ಅನುಕೂಲಸ್ಥ ಗೃಹಸ್ಥರೂ ಈ ಗ್ರಂಥ ಭಾಷಾ ಬಗ್ಯೆ ಸಹಾಯ ಮಾಡಬೇಕೆಂದು ಕೋರುವರು

~~~

ಮುಂಬಯಿಯಲ್ಲಿಯ ಹೊಸ ಉಣ್ಣೆಯ ಕಾರಖಾನೆ. ಉಣ್ಣೆಯ ಬಟ್ಟೆಗಳನ್ನೂ ಇತರ ಒಡವೆಗಳನ್ನೂ ತಯ್ಯಾರಿಸುವರೆ ಮುಂಬಯಿ ಸಮೀಪ 'ಸ್ಟೇಂಡಾರ್ಡ್ ಊಲನ್ ಮಿಲ್' ಎಂಬ ರೂ. ೧೫,೦೦,೦೦೦ ಬಂಡವಾಳವಿರುವ ಒಂದು ಕಾರ್ಖಾನೆಯು ಸ್ಥಾಪಿತವಾಗುವದು. ಹಿಂದುಸ್ಥಾನದಲ್ಲಿ ಉಣ್ಣೆಯು ಬಹಳವಾಗಿ ದೊರಕುವದರಿಂದ ಇದರಿಂದ ಬಟ್ಟೆ ಮುಂತಾದವುಗಳನ್ನು ತಯ್ಯಾರಿಸುವರೆ ಹಿಂದುಸ್ಥಾನದಲ್ಲಿ ಸಾಕಷ್ಟು ಕಾರ್ಖಾನೆಗಳಿಲ್ಲದಿರುವದರಿಂದ ಈ ಉಣ್ಣೆಯು ಪರದೇಶಗಳಿಗೆ ರಫ್ತಾಗುತ್ತಿತ್ತು. ಇಂಡಿಯಾದಲ್ಲಿ ಉಣ್ಣೆಯ ವಸ್ತ್ರಗಳಿಗೆ ಗಿರಾಕಿಯು ಹೆಚ್ಚುತ್ತಲಿರುವದರಿಂದ ಪ್ರಕೃತವಿರುವ ಉಣ್ಣೆಯ ಕಾರ್ಖಾನೆಗಳಿಂದ ತಯ್ಯಾರಾಗುತ್ತಿರುವ ಮಹಾಲು ಅತ್ಯಲ್ಪವಾಗಿರುವುದು. ಅಗಸೆ ಮತ್ತು ಹತ್ತಿ ಕಾರ್ಖಾನೆಗಳಿಗೆ ಆಗಿಂದಾಗ್ಯೆ ನಷ್ಟ ನಫೆಗಳು ಉಂಟಾದಾಗ್ಯೂ ಉಣ್ಣೆಯ ಕಾರ್ಖಾನೆಗಳಿಗೆ ಈ ತನಕ ಮುನಾಫೆಯು ಏಕ ರೀತಿಯಲ್ಲಿರುವುದು. ಈ ಹೊಸ ಕಾರ್ಖಾನೆಯಲ್ಲಿ ಕೆಲಸದ ಮಾಹಿತಿಯುಳ್ಳ ಯುರೋಪಿಯರನ್ನೇ ಪ್ರಕೃತ ಕೆಲಸವನ್ನು ನಡಿಸುವರೆ ನೇಮಿಸುವರು

~~~

ಅನಕಪಳ್ಳಿಯಲ್ಲಿ ಸ್ಥಾಪಿತವಾದಂಥಾ ಪೆನ್ಸಿಲು ಕಾರ್ಖಾನೆಯಲ್ಲಿ ಕೆಲಸವು ಪ್ರಾರಂಭವಾಗಿ ಉತ್ಕೃಷ್ಟ ತರದ ಪೆನ್ಸಿಲುಗಳನ್ನು ತಯ್ಯಾರು ಮಾಡುತ್ತಿರುವರು. ಜಪಾನಿನ ಪೆನ್ಸಿಲು ಕಾರ್ಖಾನೆಗಳ ಒಳ್ಳೇ ಮಾಹಿತಿಯುಳ್ಳ ಮೆ. ತಿ ಎಂಬವರು ಈ ಕಾರ್ಖಾನೆಯ ಮೆನೇಜರರಾಗಿರುವರು.

~~~

ನ್ಯೂಯೋರ್ಕಿನಲ್ಲಿಯ ಬೆಲ್‌ವ್ಯೂ ಎಂಬ ಆಸ್ಪತ್ರೆಯಲ್ಲಿ ಒಂದು ಅಸಾಧಾರಣ ತರದ ಚಿಕಿತ್ಸೆಯನ್ನು ವಾತರೋಗಕ್ಕೆ ಕಂಡುಕೊಂಡಿರುವರಂತೆ. ಅನೇಕ ಡಾಕ್ಟರರುಗಳಿಂದ ಗುಣ ಮಾಡಲು ಅಸಾಧ್ಯವಾದ ವಾತದ ನೋವಿನವನಿಗೆ ಜೇನು ನೊಣಗಳಿಂದ ನೋವಿದ್ದ ಭಾಗಗಳಲ್ಲಿ ಕಚ್ಚಿಸಿದ್ದರಿಂದ ರೋಗಿಗೆ ಕಾಹಿಲೆಯು ಗುಣವಾಗಿ ಅಂದಿನಿಂದ ಈ ವರೆಗೆ ಆ ಕಾಹಿಲೆಯ ಬಾಧೆಯೇ ಆತನಿಗಿಲ್ಲವಾಯಿತಂತೆ. ಈ ಚಿಕಿತ್ಸೆಯು ಸಾಧಾರಣ ೨೦೦೦ ವರುಷಗಳ ಮೊದಲು ಯುರೋಪ್ ಖಂಡದಲ್ಲಿ ಇತ್ತೆಂಬದಾಗಿ ತಿಳಿದು ಬರುತ್ತದೆ

~~~

ಸಂಪನ್ನ ಗೃಹಸ್ಥರುಗಳು ವಿದ್ಯೆಯು [illegible] ಪ್ರಜೆಗಳಿಗೆ ಎಷ್ಟು ಶ್ರೇಯಸ್ಕರವಾಗಿರುವುದೆಂಬದನ್ನು ತಿಳಿದು ಹಿಂದುಸ್ಥಾನದ ಕೆಲವು ಕಡೆಗಳಲ್ಲಿ ವಿದ್ಯಾಭಿವೃದ್ಧಿಯ ಸಲುವಾಗಿ ಕೊಡುತ್ತಿರುವ ದ್ರವ್ಯ ಸಹಾಯವು ವಾಚಕರೆಲ್ಲರಿಗೂ ತಿಳಿಯ ತಕ್ಕದ್ದಾಗಿರುವುದು —

ಕಲ್ಕತ್ತೆ ಕುಲಾಕಲ್ಲಾ ಎಂಬಲ್ಲಿಯ ಬಾ. ಗೋಪಿಚಂದವರ್ ಎಂಬವರು ಕಲ್ಕತ್ತೆಯಲ್ಲಿ ಧರ್ಮಾರ್ಥವಾಗಿ ವ್ಯಾಖ್ಯಾನವನ್ನು ಕೊಡುವರೆ ಒಂದು ಹಿಂದೂ ಧರ್ಮಾರ್ಥ ಶಾಲೆ ಸ್ಥಾಪನೆಗೂ ಇತರ ಧರ್ಮ ಸಂಸ್ಥೆಗಳ ಬಗ್ಯೆಯೂ ೪ ಲಕ್ಷ ರೂಪಾಯಿ ಕ್ರಯ ಬಾಳುವ ಆಸ್ತಿಗಳನ್ನು ಬಿಟ್ಟಿರುವರು.

ಪಂಜಾಬಿನ ಡಿಸ್ಟ್ರಿಕ್ಟ್ ಜಡ್ಜ ಪದವಿಯಿಂದ ಪೆನ್ಶನ್ ಹೊಂದಿದ ಗುಜರಾನ್‌ವಾಲದ ಸರದಾರ್ ಬಲವಂತ ಸಿಂಗರೆಂಬವರು ವ್ಯವಸಾಯ ವ ಇತರ ಕೈಗಾರಿಕೆಗಳಿಗೆ ಬೇಕಾದ ರಸಾಯನ ಶಾಸ್ತ್ರದ ಅಭ್ಯಾಸವನ್ನು ಇಂಗ್ಲಾಂಡ್ ಅಥವಾ ಇತರ ಯುರೋಪಿಯ ದೇಶಗಳಿಗೆ ಹೋಗಿ ಕಲಿಯುವರೆ ಒಂದು ವಿದ್ಯಾರ್ಥಿ ವೇತನವನ್ನು ಸ್ಥಾಪಿಸುವದಕ್ಕೆ ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿರುವರು

ಮಹಾರಾಜ ಮುನಿದಚಂದ್ರ ಎಂಬವರು ಕಲ್ಕತ್ತೆಯಲ್ಲಿ ಕರಕೌಶಲ್ಯ ಶಿಕ್ಷಣ ದೊರಿಯುವ ಒಂದು ಸಂಸ್ಥೆಯನ್ನು ರಚಿಸಲಿಕ್ಕೆ ವರುಷಾವಧಿಗೆ ಒಂದು ಲಕ್ಷ ರೂಪಾಯಿ ಹುಟ್ಟುವಳಿ ತರುವ ಆಸ್ತಿಯನ್ನು ಬಿಟ್ಟು ಕೊಡುವರೆ ಒಪ್ಪಿರುವರು. ಈ ಸಂಸ್ಥೆಯ ವಿಷಯ ಪ್ರಕೃತ ಸರಕಾರದವರಿಗೂ ಇವರಿಗೂ ಪತ್ರ ವ್ಯವಹಾರ ನಡಿಯುತ್ತಿರುವುದು.

ಮುಂಬಯಿಯಲ್ಲಿ ವ್ಯಾಪಾರ ಶಾಸ್ತ್ರದ ಶಿಕ್ಷಣದ ಬಗ್ಗೆ ಒಂದು ಕೊಲೇಜನ್ನು ಸ್ಥಾಪಿಸಲಿಕ್ಕೆ ಸರಕಾರ [illegible] [illegible] ಸಲ್ಲಿಸಿರುವರು

~~~

ನಮ್ಮ ದೇಶದ [illegible] ಕೈಗಾರಿಕೆಯ [illegible] ಸ್ಟ್ರೇಲ್ಯದಲ್ಲಿ ಈ ಕಸಬಿನವರೇ ಕೈಕೊಂಡಿರುವ [illegible] ಗಳನ್ನು ಹದ ಮಾಡಿ ಬೂಟ್ಸ್ ವಗೈರೆಗಳ ತಯ್ಯಾರಿಗೆ ಉಪಯೋಗಿಸುವ ವಿಧಾನವನ್ನು ಕೈಕೊಳ್ಳಬಹುದು. ಇದರಿಂದ ಮೊಲಗಳಿಂದಾಗುವ ಕಾಡುಪ್ರಾಂತ್ಯಗಳ ಹತ್ತರವಿರುವ ಬೆಳೆಯ ಹಾವಳಿಯು ನಿಲ್ಲುವುದಲ್ಲದೆ ಅದರ ಚರ್ಮವೂ ಸಹಾ ಉಪಯೋಗಕ್ಕೆ ಬಿದ್ದು ಒಂದು ಹೊಸ ವ್ಯಾಪ್ತಿಯನ್ನು ಕಲ್ಪಿಸಿದಂತಾಗುವುದು. ಮೊಲದ ಚರ್ಮವು ತೋರಿಕೆಗೆ ಆಡಿನ ಯಾ ಕುರಿಯ ಚರ್ಮಗಳ ಹಾಗೆಯೇ ಇದ್ದು ಬಾಳುವಿಕೆಗೆ ಸಹಾ ಅಷ್ಟೇ ಒಳ್ಳೇದಾಗಿರುವುದೆಂದು ಔಸ್ಟ್ರೇಲ್ಯ ದೇಶದವರ ಅನುಭವವಾಗಿರುವುದು. ಈ ಕೈಗಾರಿಕೆಗೆ ಔಸ್ಟ್ರೇಲ್ಯ ಸರಕಾರದವರ ಸಹಾಯವು ದೊರಕಬೇಕೆಂತ ಅಲ್ಲಿಯ ಚರ್ಮದ ಕೈಗಾರಿಕೆ ಸಂಘದವರು ಸರಕಾರವನ್ನು ಕೇಳಿಕೊಂಡಿರುವರು.

~~~

ವಿಲಾಯತಿ ಔಷಧಗಳನ್ನು ಮಾರುವ ಎಲ್ಲಾ ಶೋಪುಗಳಲ್ಲಿಯೂ ದೊರಿಯುವ ಪರ್‌ಮೆಂಗ್ನೇಟ್ ಒಫ್ ಪೊಟೇಷ ಎಂಬ ಔಷಧಿಯನ್ನು ಸರ್ಪ ಕಚ್ಚಿದ ಕಡಿತಕ್ಕೆ ತಿಕ್ಕಿ ಇತ್ತಲಾಗೊಬ್ಬನು ಗುಣಹೊಂದಿರುವನು. ಕಲ್ಕತ್ತಾ ಇಂಡಿಯನ್ ಕ್ಲಬ್ ಎಂಬ ವಿನೋದ ಗೃಹದ [illegible] ಸಹೋದರ [illegible] ಈ ತಿಂಗಳ ತಾರೀಕು 5ರಲ್ಲಿ ಕ್ಲಬ್ಬಿನ ಮೇಜಿನ ಸಮೀಪ ಇರುವ ಸರ್ಪವನ್ನು ಕೋಲೆಂದೆಣಿಸಿ ಕೈಯಲ್ಲಿ ಎತ್ತಲು ಅದು ತತ್‌ಕ್ಷಣವೇ ಆತನಿಗೆ ಕಚ್ಚಿತು. ಈತನು ಸ್ಮೃತಿ ತಪ್ಪಿ ಬಿದ್ದ ಅರ್ಧ ತಾಸಿನೊಳಗೆ ಕ್ಲಬ್ಬಿನ ಸೆಕ್ರೆಟರಿಗಳಾದ ಚಾರುದೇವ ಬೆನರ್ಜಿಯವರು ಆತನಿದ್ದಲ್ಲಿಗೆ ಬಂದು ಕಿಸೆಯೊಳಗಿದ್ದ ಚೂರಿಯನ್ನು ತೆಗದು ಸರ್ಪ ಕಚ್ಚಿದ ಗಾಯದಿಂದ ರಕ್ತವು ಸರಿಯಾಗಿ ಸುರಿಯುವಂತೆ ಗಾಯವನ್ನು ದೊಡ್ಡದಾಗಿ ಮಾಡಿ ಇದಕ್ಕೆ ಮೇಲೆ ಹೇಳಿದ ಪರ್‌ಮೆಂಗ್ನೇಟ್ ಪೊಟೆಷ ಎಂಬ ಔಷಧಿಯನ್ನು ವಿಷವು ಹೋಗುವ ವರೆಗೂ ಚೆನ್ನಾಗಿ ತಿಕ್ಕಿದರು. ವಿಷವು ಹಸುರು ವರ್ಣದ ತೆಳು ಪದಾರ್ಥವಾಗಿ ಈತನ ಗಾಯದಿಂದ ಸುರಿದು ಹೋದೊಡನೆಯೇ ಈತನಿಗೆ ಸ್ಮೃತಿ ಬಂತು

~~~

ಜೀನಸುಗಳ ಧಾರಣೆ, ಮಂಗಳೂರು.

ಒಳ್ಳೇ ಮುಸ್ಕತಿ ಅಕ್ಕಿ ,,,,,,,,,	5—8—0
ಗುಡ್ಡು ಮುಸ್ಕತಿ ,,,,,,,,,,	5—0—0
ಬೈಲು ಸುಗ್ಗಿ ,,,,,,,,,,,	4-14—0
ದುಯಂ ಗುಡ್ಡು ರಾಶಿ ,,,,,,,	4-11—0
ಮುಸ್ಕತಿ ಬೆಳ್ತಿಗೆ ,,,,,,,,,,	5—8—0
ರಂಗೂನ್ ಬೆಳ್ತಿಗೆ ಗೋಣಿ ,,,	8—4—0
ಹುರುಳಿ ಗೋಣಿ ೧ರ ,,,,,,,	8—8—0
ಉಪ್ಪು ಗೋಣಿ ೧ರ ,,,,,,,,	3-13—0
ಕೊಬ್ರಿ ಎಣ್ಣೆ ಮಣ ,,,,,,,	5—8—0
ಕಾಪಿ ಖಂಡಿ ೧ರ ,,,,,,,,	205—0—0
ಕಾಳು ಮೆಣಸು ಖಂಡಿ ,,,,	110—0—0
ಬಿಳಿ ಗೋಟು ಅಡಿಕೆ ,,,,,,	85—0—0
ಊರ ಬೆಲ್ಲ ಮಣ ,,,,,,,,	2-12—0

ಸ್ವದೇಶಾಭಿಮಾನಿಯ ಚೆಂದಾ ಸೌರ್ಯಯು:— ರೂ. ಆ.

ಟಪ್ಪಾಲು ಹಾಸಲು ಸೇರಿದ ವರುಷಕ್ಕೆ ... ೨—೦

" " ಇಲ್ಲದೆ ... ೧—[illegible]

ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾ[illegible]

ನಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ... ೧—[illegible]

ಟಪ್ಪಾಲು ಹಾಸಲು ಸೇರಿ [illegible] ವರುಷಕ್ಕೆ ... ೧—೧[illegible]

"ಲಾ" ಪ್ರಕಟನೆಗಳು.

———o———

ವಹಾರ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ. ೧೨ ಆಣೆ.

2. ಕನ್ನಡ ಲಾ ರಿಪೋರ್ಟ್— ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ. ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು ..ಎಂ ಮಲ್ಲಾರಾಧ್ಯರ್ಕೆ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ, ಈ ವಿಳಾಸಕ್ಕೆ ಬರೆಯುವದು.

———o———

THE HINDU SOAP MANUFACTURING CO.,

ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪನಿ.

———o———

ಕುಂದಾಪುರ ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚರುವಿ ವಿರಹಿತವಾದದ್ದು. ಮಾದರಿಗಳೂ, ವಿಶೇಷವಾಗಿಂತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳು.

ಪರಿಮಳಾಂಜನ ನಂಬ್ರ 1:—ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂದುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈ ಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0.

2 ತಾಂಬೂಲ ಸುವಾಸಿನಿ—ಸೀಸೆ ೧ರ ಕ್ರಯ 0-4-0

3 ದಂತಮಂಜನ—ಡಬ್ಬಿ ೧ರ ಕ್ರಯ 0 2 0

4. ಗಜಕರ್ಣದ ಮುಲಾಮು—ಡಬ್ಬಿ ೧ರ ಕ್ರಯ 0-6-0.

5. ನಯನಾಮೃತ ಸುರ್ಮ:—ಸೀಸೆ ೧ರ ಕ್ರಯ 0-8 0

6. ಶ್ವಾಸಕುಠಾರ:—ಡಬ್ಬಿ ೧ರ ಕ್ರಯ 0-8-0.

8. ಪರಿಮಳಾಂಜನ ನಂಬ್ರ ೨—ಡಬ್ಬಿ೧ರಕ್ರಯ 0 10-0

11 ಜ್ವರಾಂಕುಶ ಮಾತ್ರೆ ಡಜನ್ ೧ರ ಕ್ರಯ 1-8-0.

13. ಸುಗಂಧ ವಕ್ಷದ ಪುಡಿ—ಡಬ್ಬಿ ೧ರ ಕ್ರಯ 0-6-0

14 ದಶಾಂಗಧೂಪ —ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಶೇರು ೧ಕ್ಕೆ ರೂಪಾಯಿ 0-4-0

19. ದ್ರಾಕ್ಷಾರಿಷ್ಟ:—ಬಾಟ್ಲಿ ೧ರ ಕ್ರಯ 2-8-0. ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಖಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು.

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರೆಯಿರಿ

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ, ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ. ಕ.

ಪ್ರಪಂಚದಲ್ಲಿ ಪ್ರಸಿದ್ಧವಾದ ಅಗರಬತ್ತಿಗಳು ಬಟ್ಟಾಗಿಯೂ ಚಿಲ್ಲರೆಯಾಗಿಯೂ ಕ್ರಯ ವ್ಯತ್ಯಾಸದಿಂದ ಮಾರುವ ಅಗರ್ (ಊದ) ಬತ್ತಿ ಸೇರು ೧ಕ್ಕೆ ೪ ರೂ. ೩ ರೂ. ೨ ರೂ. ೧—೪—೦ ಅಲ್ಲದೆ ಅರಹಚಿ ಗಂಧದ ಬಿಲ್ಲೆಗಳೂ ದೊರೆಯುತ್ತೆ. ಬ್ಯಾಯಾರಿಕೆಯಾದ ಕಾಲದಲ್ಲಿ ಹಾಗಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸೆ ೧ಕ್ಕೆ ರೂ ೦-೪-೦. ಮಕ್ಕಳ ಬಾಲಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಪಟ್ಲೆ ೧ಕ್ಕೆ ೦-೮-೦.

ಟಿ. ಎಲ್. ಉಪಾಧ್ಯ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯುವರಿಗೂ, ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳ ಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ ಸರಕಾರಗ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ನಮ್ಮನ್ನು ಮರೆತಿರುವಿರೆ.

ಹಾಸನ್ ಟೋಪಿ ಕೂಲಿಯ ಉಲನ್‌ದಾರಗಳು,

1ಟೋಪಿ ದಾರಕ್ಕೆ 0 8-0 ಹತ್ತು ಟೋಪಿಯಾಗುವ ಒಂಡಲಿಗೆ 3 7 0 ಹಾಸನ್ ಟೋಪಿ ದರ್ಜನ್ 1ಕ್ಕೆ 8 0-0 ಮತ್ತು 15-0 0.

ದೊಡ್ಡ ಸ್ಯಾಜು ಒನಿಯನ್ 1ಕ್ಕೆ 0 8-0 ಪೋಸ್ಟು ಕಾರ್ಡು 100ಕ್ಕೆ 0-3-0 ಕೊಕ್ಕೆ ಸೂಜಿ 1ಕ್ಕೆ 0 1-6 ಪರಿಮಳ ನಶ್ಯ ಡಬ್ಬಿ 1ಕ್ಕೆ 0-2-0. ಮೆಂತೋಲ್ ಡಬ್ಬಿ 1ಕ್ಕೆ 0-3 0 ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 5 0, ರಾಯಲ್ ದಂತಮಂಜನ ಡಬ್ಬಿ 1ಕ್ಕೆ 0 1 0 ಸೆನ್‌ಸೆನ್ ತಾಂಬೂಲ ಮಿತ್ರನು 300ಕ್ಕೆ 0 3-0 ನಯನಾಮೃತ ಸುರ್ಮ ಶೀಶೆ 1ಕ್ಕೆ 0 8 0, ಕೆಪಿಟೋ ಬಾಂ ಡಬ್ಬಿ 1ಕ್ಕೆ 0-8 0, ಚಂದ್ರಪ್ರಭಾಕರ ಮಾತ್ರೆ ಡಬ್ಬಿ 1ಕ್ಕೆ 1 4 0 ರೋಮನಾಶಕ ಸಾಬೂನು ಪೆಟ್ಟಿಗೆ 0-6-0 ಮಂಗಳೂರು ಬೀಡಿ 1000ಕ್ಕೆ 1 8-0 ಪವನ್ ಭಂಗಾರದ ರೋಜಾ ಹೂವು, 1ಕ್ಕೆ 7 12-0.

ನಮ್ಮಲ್ಲಿ ಇರುವಷ್ಟು ರೀತಿಯ ಉಲ್ ಬೇರೆ ಎಲ್ಲಿಯೂ ದೊರೆಯದು, ಗ್ರಹಕರಿಗೆ ಯಾವ ರೀತಿ ಸಾಮಾನು ಬೇಕಾದರೂ ಸಿಕ್ಕುವದು.

ವಿಳಾಸ — ದಿ. ಊಲನ್ ಮಾರ್ಟ್,
ಮಂಗಳೂರು, ಬಿ, 4.

ರೋಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆ ಹಾರಿ ಮುಲಾಮು ಇದರಿಂದ ತಲೆನೋವು, ವಾತ, ಸಂಧಿವಾತ, ಜಖಮು, ಉಳುಕು, ಅರ್ಧಾಂಗವಾಯು, ಗಂಟ್ಲುನೋವು, ಸೊಂಟದ ನೋವು, ಎದೆಶೀತ, ಘಾಯ, ಆನೆಗಾಲು ಮುಂತಾದ ಎಲ್ಲಾ ತರದ ನೋವುಗಳು ಗುಣವಾಗುವವು. ಇದರಿಂದ ಗುಣ ಕಂಡು ಬರುವದಿಲ್ಲವಾದರೆ ಹಣ ಪರತು. ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು. ಬಾಟ್ಲಿ ಒಂದರ ಕಿಮ್ಮತು 0-8-0. ಆರು ಬಾಟ್ಲಿಗಳಿಗೆ 2-10-0. ರೋಯಲ್ ಇಂಡಿಯನ್ ಬಾಂ, ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು. ಅಥವಾ.

ವಿಳಾಸ:—

ರೋಯಲ್ ಟ್ರೇಡಿಂಗ್ ಕಂಪೆನಿ
ಗಿರಗಾಂ ಮುಂಬಯಿ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ) — **ಹಾಫ್‌ಬೈಂಡ್** (ಪಕ್ಕಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ) — **ಫುಲ್‌ಬೈಂಡ್** (ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3" × 8¼", 3" × 5¼", 8¼" × 6" 6 × 4 ಪರಿಮಾಣದಲ್ಲಿದ್ದು ಸಾವುಕಾರ ಅಂಗಡಿಗಾರ ವರ್ತಕಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೆಗೆ ಬಾಳುವ ಫುಲ್‌ಸ್ಕೇಪ್ ಕಾಗದದಿಂದ ತಯ್ಯಾರಿಸಲ್ಪಡುತ್ತವೆ

ಇದೇ ಕಾಗದದ ಗೆರೆ ಇಲ್ಲದ ಬಿಳಿ [illegible] ಪುಸ್ತಕಗಳು ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳಲ್ಲದವುಗಳನ್ನು ನಾವು ಇತ್ತಲಾಗ ತರಿಸಿದ ಉತ್ಕೃಷ್ಟವಾದ ಮಾರ್ಬಲ್ ಚರ್ಮ ಕಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ [illegible] ಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರೆಕೊಳ್ಳಿ.

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹಣವಿನ ಒಳ್ಳೇ ವಿನಿಯೋಗವು ಮಾಡುವುದು ಬೆಲೆಗೆ ತಕ್ಕ ಒಡವೆಗಳನ್ನು ಪಡಿಯುವುದೇ.

ಮಂಗಳೂರು ವ್ಯಾಪಾರ ಸಂಘ
ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ [illegible] ವರುಷಗಳಾದವು

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಈಗ 1902ನೇ ಇಸವಿಯಿಂದ [illegible] ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೊರ್ನ್‌ಫ್ಲೋರ್ [illegible] ಕೊಕೋವಾ ಕಾಫಿ [illegible] ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಔಷಧೋಪಚಾರದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಓಯಿಲ್ ಫಲ್ಲೊಸ್ಯಾರಪ್ [illegible] ಮೊದಲಾದವುಗಳೂ ಸಹ),

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರ ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ—

ಮ್ಯಾನೇಜರ್.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಮಂಗಳೂರು

Mangalore Trading Association.
Mangalore, S. Canara.

Printed by V. S. Kamath, at the Mangalore Trading Association's Sharada Press Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು 30ನೇ ಶುಕ್ರವಾರ ಜುಲಾಯಿ 190[illegible] ಸಂಚಿಕೆ 17.

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನೆಫಾ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯ ವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ೧ರ ಕಿಮ್ಮತು ೮ ಆಣೆ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ | ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು 2 ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿನ ಕೊಕೊ, ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದೆಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0

ಚೇಳು ಕಡತದ ಮೇಲೆ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು ತಂಪುಮಾಡಿ ಮನ ಶುದ್ಧಿ ಮಾಡುವದು. ಬಾಟ್ಲಿ ೧ರ ಕಿಮ್ಮತು ೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0—10—0.
ಖಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರೆದಲ್ಲಿ ರವಾನಿಸಲ್ಪಡುವದು.

ವಿಳಾಸ:—ವಿಲಿಯಂ ಮತ್ತು ಕಂಪೆನಿ, ಫೋರ್ಟ ಮುಂಬಯಿ. ಟೆಲಿಗ್ರಾಫ ಎಡ್ರೆಸು:—"ಅಮೃತಾಂಜನ" ಮುಂಬಾಯಿ.

ಫುಟ್‌ಬಾಲ್.

ನಂ॥	೧.	ರೂ	೩—೦—೦.
,,	೨	,,	೩—೬—೦
,,	೩.	,,	೪—೪—೦
,,	೪	,,	೫—೦—೦
,,	೫	,,	೫—೪—೦

ಬಟನ್‌ಲೆಸ್

ನಂ॥	೩	ರೂ.	೫—೦—೦
,,	೪	,,	೫—೮—೦
,,	೫	,,	೬—೦—೦

ಕವರುಗಳು

ನಂ॥	೧	ರೂ	೧—೧೨—೦
,,	೨	,	೨—೦—೦
,,	೩	,,	೨—೮—೦
ನಂ॥	೪	ರೂ	೩—೮—೦
,	೫	,,	೪—೦—೦

ಬಟನ್‌ಲೆಸ್

ನಂ॥	೩	ರೂ	೩—೮—೦
,,	೪		೪—೦—೦
,,	೫		೪—೮—೦

ಬ್ಲಾಡರ್‌ಗಳು

ನಂ॥	೧	ರೂ	೧—೧೦—೦
,,	೨	,	೧ ೧೨—೦
,	೩		೧—೧೫—೦
	೪	,	೨—೪—೦
	೫	,	೨—೬—೦

ಇನ್‌ಪ್ಲೇಟರ್

೧ಕ್ಕೆ—೧ ೧೨ ೦ ೨ ೦ ೦ ೨ ೮ ೦ ೩ ೦ ೦

ರಬ್ಬರ್ ಸಿಮೆಂಟ್

೧ಕ್ಕೆ—೦-೩ ೦ ೦ ೬ ೦



ಆಲಿಗರು ಬೀಗಗಳು

ಒಂದು ಲೀವರ್ ೩ ...

ಸೈಜು—೧ ೦ ೫ ೦ ೧ ೧೬ ೦ ೧ ೦ ೬ ೨ ೨ ೦ ೯ ೦ ೨ ೦ ೧೨ ೦ ನಾಲ್ಕು ಚಕ್ರಗಳಿರುವ ವಜ್ರವಾದ ಬೀಗಗಳು ಒಂದರ ಬೀಗದ ಕೈ ಮತ್ತೊಂದಕ್ಕೆ ಹಿಡಿಯುವದಿಲ್ಲಾ

ಹಿತ್ತಾಳೀ ಬೀಗಗಳು

ಸೈಜು—೧, ರೂ ೦ ೧೨ ೦, ೧ ೦ ೧೫ ೦ ೧ ೧ ೨ ೦ ೨, ೧ ೬ ೦ ೨ ೧ ೧೨ ೦

ಕಬ್ಬಿಣದ ಬೀಗಗಳು

ಎರಡು ಲೀವರು -೨, ೧ ೧೩ ೦ ೨|, ೧ ೦ ೦ ೨| ೧ ೩ ೦
ನಾಲ್ಕು ಲೀವರು -೧, ೦ ೧೨-೦ ೧| ೦ ೧೨ ೦ ೧|, ೦ ೧೩ ೦, ೧||, ೦ ೧೫ ೦ ೨, ೧ ೨ ೦, ೨||, ೧ ೪ ೦ ೨||, ೧ ೬ ೦ ೩, ೧ ೯ ೦
ಆರುಲೀವರು -೧||, ೧ ೦ ೦ ೨, ೧ ೮ ೦ ೨|| ೧ ೧೩ ೦

ಅಮೇರಿಕನ್ ಸ್ಪಿಂಗ್ ಬೀಗಗಳು

೧ಕ್ಕೆ ೦ ೫ ೦, ೦-೮-೦, ೦ ೧೨ ೦ ೧ ೦ ೦ ಡಿಟೋ ಮಿಲ್ಲರ್ ಬೀಗ ೧ಕ್ಕೆ ೦ ೫ ೦, ೦ ೬ ೦ ೦ ೮-೦

ಟ್ರಂಕು ಪ್ಯಾಡಲಾಕ್ ೧ಕ್ಕೆ ೦ ೮-೦

ಟ್ರಂಕುಗಳಿಗೆ ಹಾಕುವದಕ್ಕೆ ಅನುಕೂಲವಾಗಿ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ ೨ ಲೀವರು ೦ ೧೨ ೦, ೪ ಲೀವರು ೧-೦-೦

ಒಂದೇಸಲ ೩ ಬೀಗಗಳನ್ನು ವಿ ಪಿ. ಯಲ್ಲಿ ತರಿಸಿಕೊಳ್ಳುವವರಿಗೆ ಟಪಾಲು ಹಾಸಲು ಇಲ್ಲದೇ ಕಳುಹಿಸಲ್ಪಡುತ್ತೆ.

ಹೆಚ್. ಎನ್. ರಾವ್ ಬ್ರದರ್ಸ್.
ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೋಟೀಸು.

ನಮ್ಮ ಸ್ವಂತ ಕೈಗಾರಿಕೆಯಲ್ಲಿ ತಯಾರು ಮಾಡಲ್ಪಟ್ಟ ಹಸರೂ ಬ್ಲೂ ಅಂಬೂರ ಹೆಗಲ್‌ಒತ್ತಿ ಸವರನ್ ಬಣ್ಣಾ ವಗೈರೆ ನಮೂನೆ ಬಣ್ಣಗಳ ಕಲಾಬತ್ತು ಬಾವಾ ಅಂಚು ಪಿತಾಂಬ್ರಗಳೂ ೧೬-೧೪ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಡಿಟೋ ರಂಗುಗಳಲ್ಲಿ ಕಲಾಬತ್ತು ಸರಪಣಿ ರುದ್ರಾಕ್ಷಿ ಅಂಚಿನ ಕಲಾಬತ್ತು ಚೌಕಳಿ ಸಾಲಂದಿ ವಗೈರೆ ಪಿತಾಂಬರಗಳೂ ಸದರಿ ಜರತಾರದ ಕಣಗಳೂ ೧೬ ೧೪ ಮೊಳದ ಕಿರಿಗೆಗಳೂ ಸದರಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಶೀರೆಗಳೂ ೧೬ ೧೪ ಮೊಳದ ಕಿರಿಗೆಗಳೂ ಹೇವಿ ಮುಂಗಿಲಾತಿಮುಂಗಿ ಬಂಗಾರ ಚುಕ್ಕಿ ಕಾಡಿಗಣ್ಣು ಹಳದಿ ರುದ್ರಗಂಟಿ ಸಭಾಲಂಕಾರ ವಗೈರೆ ರುಮಾಲು ಶೀರೆಗಳೂ ಜರತಾರದ ಕಣಗಳೂ ೧೬ ೧೪ ಮೊಳದ ಶೀರೆಗಳೂ ಸದರಿ ಎಲ್ಲಾ ಮಾದರಿಯಲ್ಲಿಯೂ ಸಾದಾ ರುದ್ರಾಕ್ಷಿ ಸರಪಣಿ ಅಂಚಿನ ಶೀರೆಗಳೂ ೧೬ ೧೪ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಮೇಲ್ಕಂಡ ಎಲ್ಲಾ ಮಾದರಿಯ ಕುಪ್ಪಸದ ಕಣಗಳೂ ಕಲಾಬತ್ತು ಮತ್ತು ರೇಷ್ಮೆ ರುಮಾಲುಗಳೂ ರೇಷ್ಮೆ ದೊತ್ರ ವಸ್ತ್ರಗಳೂ ಸ್ಯಾಂಪ್ ಕರ್ಚಿವ್‌ಗಳೂ ಹೊಸ ನಮೂನೆ ಜನಾತೂ ತೂವ್ಯಾಟ ಬಾವಾ ಅಂಚಿನ ಶೀರೆಗಳೂ ಸಹಾ ಹಮುಮ ಕ್ರಯಕ್ಕೆ ಸಿದ್ಧವಾಗಿರುತ್ತವೆ ಇಲ್ಲದೆ ಕಂಚಿ, ಮುದರಾಸು ಕೂರಂಗೂಡು ಕುತ್ತಾಲಂ ಕುಂಬಕೋಣಂ, ಮದುರಾ ಸತಾರಾ, ಪೀರಾರ್ ಮುಂತಾದ ಸ್ಥಳಗಳಲ್ಲಿ ತಯಾರಾಗುವ ಪೂರಾ ಜರಿ ಶೀರೆಗಳೂ ಕಣಗಳೂ ಕೊಯಮುತ್ತೂರು ದಿಂಡಿಗಲ್ಲು ಈ ಸ್ಥಳಗಳಲ್ಲಿ ತಯಾರಾಗುವ ಕಲಾಬತ್ತು ರುಮಾಲುಗಳೂ ಪೇಟಗಳೂ ಕಲರ್ ಪೇಟಗಳೂ ದುಪ್ಪಟಗಳೂ ರೇಸಂ ತಾತ್ಕಾಲಿಕ ಪೇಟ ಕಲಾಬತ್ತು ಪಂಚೆಗಳೂ ಕಪ್ಪು ರುದ್ರಾಕ್ಷಿ ಜನಾರಧ್ ೮ ೯ ಮೊಳದ ಪಂಚೆ ... ದೋತ್ರಗಳೂ ರೇಷ್ಮೆ ಅಂಚಿನ ಶ್ಲಾಘನೀಯವಾದ ವ ... ಗಳೂ ಸಹಾ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತವೆ ಮೇಲ್ಕಂಡ ಎಲ್ಲಾ ಜವಳಿಗಳು ... ಯಾರಿಗೆ ... ಕೂಡಲೆ ... ಕಳುಹಿಸಲ್ಪಡುತ್ತೆ ... ದಾವತಿ ನಮ್ಮಲ್ಲಿ ಬೇಕಾದ ಜವಳಿಯನ್ನು ಕೊಂಡುಕೊಂಡು ಅಜಮಾಯಿಸಿ ನೋಡಿದಲ್ಲಿ ನಮ್ಮ ಜವಳಿಯ ಶ್ಲಾಘ್ಯವು ವ್ಯಕ್ತಪಡುತ್ತೆ ದಯವಿಟ್ಟು ... ಹ ಕೈಸುತ್ತಿದ್ದೇವೆ ಮೇಲ್ಕಂಡ ನಮ್ಮ ಸ್ವಂತ ಕೈಗಾರಿಕೆಯ ಜವಳಿಯ ಗೌರವಕ್ಕಾಗಿ ಮೈಸೂರು ಎಗ್ಸಿಬೀಷನ್‌ನಲ್ಲಿಯೂ ನಾಗಪೂರ್ ಎಗ್ಸಿಬೀಷನ್‌ನಲ್ಲಿಯೂ ಬೆಳ್ಳಿ ಮೆಡಲ್‌ಗಳೂ ಮತ್ತು ಸರ್ಟಿಫಿಕೇಟುಗಳೂ ಸಹಾ ಹೊಂದಿ ಇರುತ್ತೇವೆ

ಹೆಚ್ ಸಂಕಪ್ಪಾ ಬಸವಪ್ಪಾ,
ಜವಳಿ ವ್ಯಾಪಾರಸ್ಥರು,
ಚಿಕ್ಕಪೇಟೆ,
ಬೆಂಗಳೂರು ಸಿಟಿ.

1. ವೈದ್ಯಸಾರಸಂಗ್ರಹ(ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ).	೩—೦—೦.
2 ಶ್ರೀಶಿವಾನಂದಲಹರಿ ಈ ಗ್ರಂಥಕ್ಕೆ ಪ್ರತಿಪದ ಟೀಕಾ ತಾತ್ಪರ್ಯ.	೦—೬—೦.
3 ಉತ್ತರ ರಾಮಚರಿತ್ರೆ ಕಥೆ ಬಹಳ ಸ್ವಾರಸ್ಯವಾದದ್ದು	೦—೫—೦.
4 ಟೀಕಾ ರಾಘವೇಂದ್ರ ಸ್ತೋತ್ರ	೦—೨—೦
5 ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ ಸಮಂತ್ರಕ ಉದುತ್ಯ, ಮಹಾಸೌರ, ಆದಿತ್ಯ ಹೃದಯಾದಿ	೦—೨—೦.
6 ಉದಕಶಾಂತಿ ಶುದ್ಧವಾದ ಪುಸ್ತಕ	೦ ೨—೦.
7 ವಿಷ್ಣುಸಹಸ್ರನಾಮ ಮೂಲ ಶ್ಲೋಕ ರೂಪ ನಾಮರೂಪ ಕೂಡ ಚಿಕ್ಕ ಸೈಜು	೦—೨—೦.
೮ ವಿಷ್ಣುಸಹಸ್ರನಾಮಕ್ಕೆ ಪ್ರತಿಪದ ಟೀಕಾ ತಾತ್ಪರ್ಯ ಉತ್ತಮ ಕಾಗದ ಕಿತ್ತಾನು ವೈಂ...	೩—೦ ೦.
೯ ಕಾಲಾಮೃತ ಒಳ್ಳೇ ಕಾಗದದಲ್ಲಿ ತಪ್ಪಿಲ್ಲದೆ ಟೀಕಾ ತಾತ್ಪರ್ಯ ಸಹಾ ಪ್ರಿಂಟಾಗಿದೆ ಹಸನ್‌ಕಾಗದ ೧ನೇ ರಖಂ	೧—೦—೦.
10 ಗ್ಲೇಜು ಕಾಗದದ ೨ನೇ ರಖಂ	೦ ೧೨ ೦
11 ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦ ೨—೦
12 ಬಾಲ ರಾಮಾಯಣ ಟೀಕಾ ತಾತ್ಪರ್ಯ	೦ ೨ ೦
13 ಸ್ವರಸಹಿತವಾದ ನಮಕ ಚ ಮಕ, ಪುರುಷಸೂಕ್ತ ಶ್ರೀಸೂಕ್ತ ಭೂಸೂಕ್ತ ನಾರಾಯಣೋಪನಿಷತ್ತು	೦-೨-೦
14 ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪-೦
5 ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦—೨—೦
6 ಕೃಷ್ಣ ಕರ್ಣಾಮೃತ ಮೂಲ	೦ ೨—೦
7 ಯಕ್ಷಗಾನ ಪಂಚಬಾಣ ಕೃಷ್ಣ ಬಾಲಲೀಲೆ	೦ ೪ ೦

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್
ಚಿಕ್ಕಪೇಟೆ
ಬೆಂಗಳೂರು

—o—

ಗಿಡಗಳು—ಬೀಜಗಳು—ಹಣ್ಣು—ಹುವ್ವು ಮತ್ತು—ತರಕಾರಿ

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು ಶೇಬು, ಕಿತ್ತಾಳೆ ವಗೈರೆ ಹಣ್ಣುಗಳು ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು ಬೇಕಾದವರು ಕೆಟಲಾಗಿಗೆ ಬರದು ತರಿಸಿಕೊಳ್ಳಬಹುದು

ಟಿ. ಎಸ್. ಗಿರಿಯಪ್ಪ ಎಂಡ್ ಸನ್,
ಫ್ಲಾರಿಸ್ಟ್ ಎಂಡ್ ಸೀಡ್ಸ್‌ಮೆನ್.
ಹಾರ್ಟಿಕಲ್ಚರ್ ಗಾರ್ಡನ್ ರಸ್ತೆ,
ಬೆಂಗಳೂರು, ಸಿಟಿ.

THE SWADESHABHIMANI.

Mangalore Friday 30th July 1909.

The Late Mr. A. Subba Rau.

His life was gentle and the elements
So mixed in him that Nature might stand up
And say to all the world "This was a man."
Shakespeare.

It is with deep regret that we record the untimely death last Sunday at 4 P. M. of Mr. A. Subba Rau, one of the leading men of our District. He had suffered for many long years from rheumatism, which sometimes took a severe turn during the cold weather. The last attack, to which he succumbed, came only a week before and none thought that it would prove fatal.

In attempting to give a brief sketch of the life of this eminent man we confess to a painful feeling of our inability to do justice to the task, for, of him it may be truly said "Thy soul was like a star and dwelt apart," while like a star he shed his light over all.

Born in the year 1852 of respectable parents of the Gowd Saraswath Community, Mr. Subba Rau was the youngest of four brothers all of whom attained high position in the respective walks of life they pursued. The eldest was a vakil in Kasargode, the second brother, Mr. A Vasudeva Pai who retired as the Hazur Sheristadar is now the Vice Chairman of the Municipal Council and the Hon. Secretary of the District Agricultural Association The Third Dewan Bahadur Mr. A. Venkatramana Pai entered the Judicial service as District Munsif and rose to be a District Judge, from which post he has retired. But the youngest was perhaps the most brilliant of them all He passed the Matriculation examination in 1868 from the local Provincial School and the F. A. examination from the same School (now the Government College) in 1869. Mr Subba Rau belonged to the first batch of the Gowd Saraswaths who went to Madras to obtain the B. A Degree. He passed the B. A Examination creditably in 1872 and the B. L. with equal credit in 1876. In school, by his diligence, ability and examplary conduct towards the teachers as well as his fellow students he endeared himself to all. These brothers were the pioneers of the community in English education and devoted much of their time, money and energy for its spread among their brethren Mr Subba Rau pleaded for sometime in the High Court where he was recognised as a rising vakil but from considerations of health he had to come down to Mangalore

If sound health had not been denied to him, it is not too much to say that he would have risen to the highest position in the judicial service. His stay in Mangalore, however helped him to realise the darling object of his heart, which was to leave the community better and more enlightened than he found it. He was the President of the Managing Board of the Canara High School which was started to impart education with a special view to instil sound moral principles in the young minds. He sacrificed much for the school. But as once remarked by our Collector Khan Bahadur M. Azi-zu-ddin Saheb Bahadur, the School has kept its gates open to all without distinction of caste or creed. Any concessions or facilities for education are not restricted to the students of the community. In fact though Mr. Subba Rau felt it a sacred duty to render his best service to the community that claimed him as its own, he was singularly free from sectarian prejudice. This was proved in his life by the liberal donations he gave to all charitable purposes and the generous help he extended to students of every community. The crowds of the various communities that came to pay their last respects to his departing spirit bore testimony to the fact that all had a place in his heart. Much of his charity was however done in secret and where he knew that his subscription would be acknowledged in public prints he would contribute as 'a friend' or 'sympathiser.' The Canara Free Girl School was the result of his solicitude for female education.

The Canara Hindu Permanent Fund which was established to promote co-operation among the people and to save them from the clutches of the money-lender owes its existence to his efforts. Indeed it was his personality that made the institution an accomplished fact, when the public credit was shaken by the Arbuthnot crash. He was the President of this banking institution.

An abiding sense of religion was the motive force of Mr. Subba Rau's life and he brought it to bear upon his professional duties. An acknowledged leader of the bar, he indentified himself with the interests of his clients, and never accepted a brief against a widow or an orphan. He confined himself to civil work and to the District and Sub. Courts. Many a dispute in a family or among partners which might have developed into an expensive law-suit was settled by his arbitration to the satisfaction of all the parties.

To save his community people from the worry and expense of courts and otherwise to promote their welfare he organised the local and the Districts Punchayats, of which latter he was the elected President. The crowning act of his life was the Gowd Saraswath Brahmin Conference which was attended by men from far and near, from Goa and Cochin, from Belgaum and Shahpur, from Dharwar and Mysore, from Malabar and Sirsi. The wealth and intellect of the community were gathered in the Conference Hall but there was one man to whom all owed willing homage and need we say that that man was Mr Subba Rau.

He could wield poor Konkani or foreign English, the Dravadian Canarese or Malayalam with equal effect In all public meetings there will for a long time be felt, the conspicuous silence of a thrilling voice, the electrifying tones of which went straight to the heart and whose sweet reasonableness convinced the mind

He laboured much for the community and has laid it under an everlasting debt of gratitude. But his heart was as wide as humanity itself. The Panchama had a place in it also. He was an active promoter of the Depressed Classes Mission, a sympathiser of the Brahamo Samaj, and an ardent Theosophist. He carried out in his life the advice that he once gave to a gathering of students. "This shall be your selfishness," said he, "whenever you meet a worthy man, you will copy all that is good in him and never rest content till you have assimilated all his virtues" He was never tired of teaching the young boys to appreciate righteousness. "For I have a horror" he once said, "of all that greatness which is divorced from goodness".

In his honour the bazaar was closed the next day. When on coming to the dais the District Judge was informed of the sad event, he was visibly moved. He feelingly referred to Mr. Subba Rau's worthy qualities and ordered the Court to be closed for the day. The Sub-Court and the Munsif Court were also closed in honour of him. The telegrams of sympathy and condolence received from various parts made a small heap. Our esteemed collector came down to honour the departed and to condole with the bereaved family.

He was the one man in whom all had confidence, the educated and the uneducated whom all respected and loved, the rich and the poor. We cannot speak for other parts and other communities, but in his own community he was one without a second. Such a harmonious combination of eastern ideals and western culture, of towering intellect and wide sympathies, a soul that soared high above the tortures of a life long rheumatism and accomplished its purpose with unerring aim, we shall not find the like of him again. He worked "as ever in his Task master's eye" and died as he lived in the bosom of the Lord. Died, did we say? No. "To live in the hearts we leave behind, is not to die". He lives in his deeds and is ever an inspiration for noble effort, this man of God, Subba Rau the Beloved, for ever!

We condole with his brothers and his family in this their sad bereavement.

[illegible] ಶೇಷ ಅಮ್ಮೆಂಬಳ ಸುಬ್ರಾಯ ಪೈಗಳವರು.

ಸುಬುದ್ಧಿ ವಾಗ್ಮೀ ಪಟು ಧೀಮಾನ್
ಬ್ರಾಹ್ಮ ವೀರವ್ರತೇ ಸ್ಥಿತಃ
ಯಂತಾ ವಿದ್ಯಾದಿ ಸಂಸ್ಥಾನಾಂ
ಪೈತಾಮಹ ಪದಂ ಗತಃ

ಸುಖಪ್ರದಃ ಶ್ಲಾಘ್ಯತರಃ ಸ್ತ್ರ ಸತ್ಯೈಃ
ಬ್ರಾಹ್ಮೆ ಸ್ಥಿತೊ ವರ್ತ್ಮನಿ ದಾಕ್ಷ್ಯಶೀಲಃ
ಯತೊ ಬವತ್ಸ್ವೇಷು ಪರೇಷು ವಿದ್ಯಾ
ಪೈತ್ರ್ಯಂ ಪದಂ ಸೊಭ್ಯಗಮ ದ್ವರಿಷ್ಠಂ

ಮಂಗಳೂರು ನಾರಾಯಣಾಚಾರ್ಯ

ಕಳೆದ ಆದಿತ್ಯವಾರ ಶ್ಯಾಮ ಗಂಟೆ 4ಕ್ಕೆ ಬಹುಮಾನಪಟ್ಟ ಹೈಕೋರ್ಟು ವಕೀಲರೂ ಪ್ರಜಾಮುಂದಾಳುಗಳಲ್ಲೊಬ್ಬರೂ ಆದ ಸುಬ್ರಾಯ ಪೈಗಳವರು ತಮಗೆ ಹಲವು ವರುಷಗಳಿಂದ ಬಾಧಿಸುತ್ತಿರುವ ವಾತರೋಗದಿಂದ ಪರವನ್ನೈದಿದರೆಂಬುದನ್ನು ತಿಳಿಸಲು ವ್ಯಾಕುಲಪಡುತ್ತೇವೆ. ಇವರಿಗೆ ಛಳಿ ಮಳೆಗಾಲಗಳಲ್ಲಿ ಈ ರೋಗದ ಬಾಧೆಯು ಕೆದರುತ್ತಲಿದ್ದು ಆಗ್ಗಾಗ್ಯೆ ಇದು ಶಮನವಾಗುತ್ತಲಿತ್ತು. ಈ ಸರ್ತಿ ರೋಗದ ಬಾಧೆಯು ತೊಡಗಿದ ಒಂದು ಹಪ್ತೆಯಲ್ಲಿಯೇ ಇದು ವಿಶೇಷವಾಗಿ ವಿಪತ್ಕರವಾಗಿಯೇ ಪರಿಣಮಿಸಿತು.

ನಮ್ಮ ಜಿಲ್ಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ತಮ್ಮ ಗುಣಗಳಿಂದಲೂ ಯೋಗ್ಯತೆಯಿಂದಲೂ ಹೆಸರುವಾಸಿಯಾದ ಪೈಗಳಂತಹ ಮಹಾತ್ಮರ ಆತ್ಮವಿಶೇಷತ್ವವನ್ನು ತಿಳಿದ್ದಲ್ಲಿ ಮನುಷ್ಯರೆಲ್ಲರಲ್ಲಿಯೂ ಪರಂಜ್ಯೋತಿಸ್ವರೂಪನಾದ ಪರಮಾತ್ಮನು ವ್ಯಾಪಿಸಿರುವನೆಂದೂ ತನ್ನಂಶಗಳೇ ಆದ ಸದ್ಭಕ್ತರಿಂದ ಪರಮಾತ್ಮನು ಪ್ರಪಂಚದ ಮೋಕ್ಷ[illegible]ಯನ್ನು ಸಾಧಿಸಿ ತನ್ನ ಸೃಷ್ಟಿಯ ಉದ್ದಿಶ್ಯಗಳನ್ನು ನೆರವೇರಿಸುವನೆಂದೂ ತೋರಿಬರುವುದು.

ಸುಬ್ರಾಯ ಪೈಗಳವರು 18[illegible]2ನೇ ಇಸವಿಯಲ್ಲಿ ಗೌಡಸಾರಸ್ವತ ಬ್ರಾಹ್ಮ ಅಮ್ಮೆಂಬಳ ಪೈಗಳವರ ಮಾನ್ಯ ಕುಟುಂಬದಲ್ಲಿ ಜನ್ಮವೆತ್ತಿದರು. ಖ್ಯಾತಿ ಪಡೆದ ನಾಲ್ಕು ಜನ ಶ್ರೇಷ್ಠ ಸಹೋದರರಲ್ಲಿ ಇವರು [illegible]ವರಾಗಿದ್ದರು. [illegible] ನಾರಾಯಣ ಪೈಗಳು [illegible] ವಕೀಲರಾಗಿದ್ದರ [illegible] ಅ| ವಾಸುದೇವ ಪೈಗಳು [illegible] ಸಿವಲ್ ವ್ಯಾಸ್ ಚೆಯರ್ಮೆನ್ ಮತ್ತು [illegible] ವ್ಯವಸಾಯ ಸಂಘದ [illegible] ದರ್ಶಿಗಳಾಗಿರುವರು. ತೃತೀಯ [illegible] ವೆಂಕಟರಮಣ ಪೈಗಳವರು [illegible] ಮುನ್ಸೀಪ್ ಕೆಲಸಕ್ಕೆ ಮೊದಲು ದಾಖಲಾಗಿ ಕ್ರಮೇಣ ಡಿಸ್ಟ್ರಿಕ್ಟ್ [illegible] ಪೆನ್ಶನ್ ಪಡೆ ರುವರು.

ಆದರೆ ಕಿರಿಯ ಸಹೋದರರ [illegible] ಈಗ ಗವರ್ನಮೆಂಟ್ ಕೋಲೇಜೆಂದ [illegible] ಕರೆಯಲ್ಪಡುವ ಶಾಲೆಯಲ್ಲಿ ಇವರ ಪೂರ್ವ [illegible] ಸ್ಸಿನಲ್ಲಿ ಪ್ರವೇಶ ಪರೀಕ್ಷೆಯನ್ನೂ [illegible] ಗತಿಯಲ್ಲಿ ತೇರಿದರು. [illegible] ಔದಾರ್ಯ ಸಹನಾದಿಸು[illegible] ಪಾಂಡಿತ್ಯಗಳಿಂದಲೂ, [illegible] ನರ ಅಕೃತ್ರಿಮ ಪ್ರೀತಿಪಾತ್ರರಾಗ[illegible] ವನ್ನು ಸೆಳೆಯುತ್ತಿದ್ದರು.

ಇಂಗ್ಲೀಷು ವಿದ್ಯೆಯಲ್ಲಿ ಒಂದಿನ ವರೆಗ [illegible] ಸ್ವಜಾತಿ ಪೈಕಿ ಸಹಕಾರಿಗಳಾದ [illegible] ಜೊಂದಿಗೆ ಬಿ ಎ ಪರೀಕ್ಷೆ ಕಲಿಯಲಿಕ್ಕೆ ಮದ್ರಾಸಿಗೆ [illegible] ರಲ್ಲಿ ಪೈಗಳವರು ಬಿ ಎ ಪರೀಕ್ಷೆಯಲ್ಲಿ ಅಗ್ರಸ್ಥಾನವನ್ನು ಪಡೆದರು. [illegible] ರಲ್ಲಿ ಬಿ ಎಲ್, ದರ್ಜೆಯು ಮದ್ರಾಸಿನಲ್ಲಿ ಸ್ಥಾಪಿತವಾದೊಡನೆ ಇವರು ಅದನ್ನು [illegible] ಮಾನದಿಂದ [illegible] ರಲ್ಲಿ ಪಾಸಾಗಿ ಹೈಕೋರ್ಟಿನಲ್ಲಿ ವ್ಯವಹರಿಸಲಾರಂಭಿಸಿದರು. ಅಲ್ಲಿಯ ವಕೀಲರಲ್ಲಿ ಪೂರ್ವ ವಯಸ್ಸಿನಲ್ಲಿಯೇ ಇವರು ಹೆಸರು ಹೊಂದಿದರು. [illegible] ರು ಇವರಿಗೆ ಆರೋಗ್ಯವನ್ನು ದಯಪಾಲಿಸಿದ್ದರೆ [illegible] ತ್ಕೃಷ್ಟ ಪದವನ್ನೇರುತ್ತಿದ್ದರು. ವಾತದ ಬೇನೆಯ ನಿಮಿತ್ತ ಊರಿಗೆ ಬಂದು [illegible] ರಲ್ಲೇ ಉಳಿಯಬೇಕಾಯಿತು.

ತಾನು ಇಂಗ್ಲೀಷ ವಿದ್ಯೆಯಿಂದ ಹೊಂದಿದ ಜ್ಞಾನ ಸಂಸ್ಕಾರಗಳ ತನ್ನ ಜಾತಿ ಬಾಂಧವರಲ್ಲಿ ವ್ಯಾಪಿಸಬೇಕೆಂಬ ಉದಾರ ತೃಷ್ಣೆಯನ್ನು ತೃಪ್ತಿಗೊಳಿಸಲಿಕ್ಕೆ ಪೈಗಳವರಿಗೆ ಇಲ್ಲಿ ಅವಕಾಶವಾಯಿತು. ಈ ಉದ್ದಿಶ್ಯವೂ ತರುಣ ಪೀಳಿಗೆಯಲ್ಲಿ ದಮ[illegible]ವಾಸನೆಯನ್ನು ನೆಲೆಗೊಳಿಸಲೋಸುಗವೂ ಕೆನರಾ ಹೈಸ್ಕೂಲನ್ನು ಸ್ಥಾಪಿಸಲಾಯಿತು. ಇವರು ಅಂಗ್ಲೇಯ ವಿದ್ಯಾಸಂಪನ್ನರಾದರೂ ಸನಾತನ ಧರ್ಮಶ್ರದ್ಧೆಯು ಇವರಲ್ಲಿ ಪರಿಪೂರ್ಣವಿತ್ತು. ಇದು ಅವರ ದಿನಚರ್ಯೆಯಲ್ಲಿ ಸದಾ ವ್ಯಕ್ತವಾಗುತ್ತಿತ್ತು. ತನ್ನ ಉದ್ಯೋಗದಲ್ಲಿ ಸಹಾ ಧರ್ಮಶ್ರದ್ಧೆಯಿಂದಲೇ ವರ್ತಿಸುತ್ತಿದ್ದರು. ಕ್ರಿಮಿನಲ್ ವ್ಯವಹರಣೆಯನ್ನು ತ್ಯಜಿಸಿ ಡಿಸ್ಟ್ರಿಕ್ಟ್ ಸಬ್‌ಕೋರ್ಟುಗಳಲ್ಲಿ ವ್ಯವಹರಿಸುವದಲ್ಲದೆ ವಿಧವೆ ಯಾ ಅನಾಥರ ಎದುರು ಕಕ್ಷಿಯವರ ವ್ಯಾಜ್ಯಗಳಲ್ಲಿ ವಕಾಲತುಗಳನ್ನು ಎಂದೂ ಅಂಗೀಕರಿಸುತ್ತಿದ್ದಿಲ್ಲ. ಒಂದುಕುಟುಂಬದೊಳಗೆ, ಪಾಲುಗಾರರೊಳಗೆ ಮೊದಲಾಗಿ ವಿವಾದ್ಯವಿರುವ ವ್ಯಾಜ್ಯಗಳಲ್ಲಿ ಕಷ್ಟ ನಷ್ಟಪಡುವ ಸಂಭವವನ್ನು ಪಂಚಾಯತಿಯಿಂದ ಸರ್ವರಿಗೂ ಸಮಾಧಾನವಾಗುವಂತೆ ನಿವಾರಿಸುತ್ತಿದ್ದರು. ಈ ಬಗ್ಗೆಯೂ ಜ್ಞಾತಿ ಬಾಂಧವರ ಇತರ ಉತ್ಕರ್ಷೆಗೂ ಮಂಗಳೂರಲ್ಲಿಯೂ, ಊರುಗ್ರಾಮಗಳಲ್ಲಿಯೂ ಪಂಚಾಯತರು ನೇಮಿ ಸಲ್ಪಟ್ಟರು. ಮಂಗಳೂರು ಪಂಚಾಯತರಿಗೆ ಇವರೇ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಹೈಸ್ಕೂಲನ್ನು ಅವರು ಪಿತೃವಾತ್ಸಲ್ಯದಿಂದ ಕಂಡು ಸರ್ವವಿಧದಿಂದಲೂ ಈ ಸಂಸ್ಥೆಯ ಏಳಿಗೆಯನ್ನು ಸಾಧಿಸುತ್ತಿದ್ದರು. ಬಾಲಿಕಾ ಶಿಕ್ಷಣವೂ ಧರ್ಮಬೋಧೆಯಿಂದ ವ್ಯಾಪ್ತವಾಗುವಂತೆ ಕೆನರಾ ಗರ್ಲ್ಸ (ಹುಡುಗಿಯರ) ಸ್ಕೂಲನ್ನು ಸ್ಥಾಪಿಸಿ ಅಲ್ಲಿ ಪುರಾಣೇತಿಹಾಸಗಳಿಗೆ ದ್ವಾರವಾದ ಮರಾಠಿಯನ್ನು ಉಚಿತವಾಗಿ ಕಲಿಸಲೇರ್ಪಾಡು ಮಾಡಿದರು. ಹೈಸ್ಕೂಲಿನ ಮೇಲ್ವಿಚಾರಕ ಸಭೆಯ ಅಧ್ಯಕ್ಷರಾಗಿದ್ದರು. ವೈದಿಕರ ಬಗ್ಯೆಯೂ ಒಂದು ಪಾಠಶಾಲೆಯನ್ನು ಸ್ಥಾಪಿಸಿದ್ದರು.

ಬಡ ಜನರನ್ನು ಬಂಡವಾಳಿಕರ ಬಾಯಿಯಿಂದ ತಪ್ಪಿಸಲೋಸುಗವೂ ಜನರಲ್ಲಿ ಸದ್ಯವಹಾರ ಶೀಲವನ್ನು ಬೆಳಸುವಂತೆಯೂ ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಎಂಬ ಬ್ಯಾಂಕನ್ನು ಸ್ಥಾಪಿಸಲಿಕ್ಕೆ ಮುಖ್ಯ ಪುರುಷರಾಗಿದ್ದರು. ಇವರನ್ನೇ ಡೈರೆಕ್ಟರರು ಅದರ ಅಧ್ಯಕ್ಷರನ್ನಾಗಿ ಆರಿಸಿದರು. ಇವರಲ್ಲಿ ಜನರಿಗ ಇದ್ದ ವಿಶ್ವಾಸದ ದೆಶೆಯಿಂದಲೇ ಆ ಬ್ಯಾಂಕು [illegible] ಕ್ರೈಸಿಸ್ ವಿಪತ್ತಿನ ಕಾಲದಲ್ಲಿಯಾದರೂ ನೆಲೆಗೊಂಡಿತು.

ಗೌಡಸಾರಸ್ವತ ಪರಿಷದ ಸ್ಥಾಪನೆಯು ಈ ಮಹಾತ್ಮರ ಜೀವನಕ್ಕೆ ಮಕುಟ ಪ್ರಾಯವಾಗಿದೆ. ಇವರ ಪ[illegible]ದಿಂದೇ ಪ್ರತಿನಿಧಿಗಳು ಮಲಬಾರ, ಕೊಚ್ಚಿ, ಧಾರವಾಡ, ಬೆಳಗಾಂವ, ಶಾಹಾಪುರ [illegible]ಪುರ, ಬೊಂಬಾಯಿ ಗೋವಾ, ಮೈಸೂರು ಕಡೆಗಳಿಂದ ನೆರೆದರು. ಆ ವಿದ್ವಾಂಸ [illegible] ಮುಂದೆ ನಿಂತು ಆಮಂತ್ರಣ ಕಮ್ಮಿಟಿಯ ಅಧ್ಯಕ್ಷ ಪುಣ್ಯಪುರುಷರು ಮಾಡಿದ [illegible]ವಾದ ಸ್ವಾಗತ ಭಾಷಣದ ನೆನವರಿಕೆಯಿಂದ ಈಗಲೂ ರೋಮಾಂಚವಾಗುವದು. ಮಹಾತ್ಮರ ಹೃದಯದಿಂದ ಉದ್ಗಮವಾದ ಆ ಮಾತುಗಳ ಪ್ರವಾಹವು [illegible] ಎದೆಯಲ್ಲಿ ತುಂಬಿ ತುಳುಕುತ್ತಿತ್ತು. "ನಾನು ಆಡುವ (ಕೊಂಕಣಿ) ಭಾಷೆಯು ಬಾಲ ಬಾಷೆ. ಆದರೆ ಈ ಸಭೆಯು ಮಾತೆಯಲ್ಲವೇ. ಮಾತೃವತ್ ನನ್ನ ತೊದಲು ನುಡಿಯನ್ನು ಪ್ರೀತಿಯಿಂದ ಲಾಲಿಸದಿರಳು. ಸರಸ್ವತೀ ತೀರದಿಂದ [illegible] ಚತುರ್ದಶಗಳಿಗೆ ಹೋದ ಜ್ಞಾತಿ ಬಾಂಧವರನ್ನು ಪುನಹಾ ಒಂದೇ ಸ್ಥಳದಲ್ಲಿ [illegible] ಈ ದಿನ ದನ್ಯನಾದೆನು" ಈ ಮಾತುಗಳನ್ನು ತಕ್ಕಮಟ್ಟಿಗೆ [illegible] ಆ [illegible] ಮಧುರ ಕರುಣಾರಸಭರಿತವಾದ ಸ್ವರವನ್ನು ತರಲಾರವು. ಇಂಗ್ಲೀಷು ಕನ್ನಡ, ಕೊಂಕಣಿ, ಮಲೆಯಾಳ ಎಂಬ ಭೇದವಿಲ್ಲದೆ ಇವರ ವಾಗ್ವೈಭವವು [illegible]ಪ್ರಕಾರ ಪ್ರಕಟಿತವಾಗುತ್ತಿತ್ತು. ಈ ಮಹಾನ ಭಾವವು ಜಾತಿಗೆ [illegible] ಸಿಡಿದ [illegible] ತೀರದು.

ಪೈಗಳವರು [illegible] ಜಾತಿವೈಷಮ್ಯವಿರಲಿಲ್ಲ. ಜಾತಿ ನೋಡದೆ ವಿದ್ಯಾರ್ಥಿಗಳಿಗೆ [illegible]ವನ್ನು [illegible]ಡುತ್ತಿದ್ದರು. ಧನಾರ್ಥಿಗಳಿಗೆ ಧನವನ್ನೂ ಕೊಡುತ್ತಿದ್ದರು. [illegible] ದ್ರವ್ಯ ಸಹಾಯ ಕೊಡುತ್ತಿದ್ದರು. ಇವರ ಪ್ರೀಮ ಸ್ವಭಾವದ [illegible] ಇದ್ದಿಲ್ಲ. ಪಂಚಮರ ಶಾಲೆಯಾಗಲಿ ಬ್ರಹ್ಮಸಮಾಜವಾಗಲಿ ಬ್ರಹ್ಮಜ್ಞಾನಸಮಾಜ (ಥಿಯೊಸೊಫಿ) ವಾಗಲಿ ಎಲ್ಲರಲ್ಲಿಯೂ ಏಕಪ್ರಕಾರ [illegible] ತಾನು ಪರಂಧಾಮವನ್ನೈದುವ ವೇಳೆ ಒಂದು ದುಃಖಿಸುವ [illegible] ಇವರ [illegible]ತವಾದ ಉದಾರ ಸ್ವಭಾವಕ್ಕೆ ಸಾಕ್ಷಿ [illegible] ಸಂತಾಪಿಸಿದರು.

ಈ [illegible] ಕಂಡುಬಂತು. ಆತ್ಮಸಂಯಮದ, [illegible] ಉದಾತ್ತ [illegible] ಆ ಸತ್ಕಾರ್ಯ ಪರೋಪಕಾರ ಪರಂಪರೆಯ ಪರಿ[illegible] ಧ್ಯಾನದಲ್ಲೇ [illegible] ಗೃಹವನ್ನು ಹೊರ[illegible] ವಿಸರ್ಜಿತವಾದ [illegible] ಪರಜಾತಿ ಜನಸಮೂಹವು [illegible] ಹಿಡಿಯಲಿಕ್ಕೆ [illegible] ಕಡೇಸಾರಿ ತಾವು ನೋಡಿ ತಮ್ಮ [illegible] ಮನೆಯ [illegible] ಪಟ್ಟು [illegible] ವಾತನನ್ನು [illegible]ಮಕ್ಕೆ [illegible].

[illegible] ಸಾವುಕಾರರೆಲ್ಲರೂ [illegible] ಬಂಡಸಾಲೆಗಳನ್ನು ಮುಚ್ಚಿದರು. ಡಿಸ್ಟ್ರಿಕ್ಟ್ ಜಡ್ಜಿಯವರು ಕೋರ್ಟಿಗೆ ಬಂದಾಗ ವರ್ತಮಾನವರಿದು ಖಿನ್ನವದನರಾದರು. ತನಗೆ ನಿನ್ನೆ ತಿಳಿದಿದ್ದರೆ ತಾನು ಆ ತೇಜಸ್ವಿಯಾದ, ಸತ್ಯವಂತನಾದ, ದಾನಶೀಲನಾದ ಸದ್ಗೃಹಸ್ಥನನ್ನು ಕಡೆ ಸಾರಿ ದೃಷ್ಟಿಸುತ್ತಿದ್ದೆನೆಂದು ನಿಟ್ಟುಸುರಿಟ್ಟರು. ಕೀರ್ತಿಶೇಷರ ಹೆಸರಿಗೋಸ್ಕರ ಡಿಸ್ಟ್ರಿಕ್ಟ್ ವ ಸಬ್ ಕೋರ್ಟು ಮುನ್ಸಿಪ್ ಕೋರ್ಟುಗಳು ಮೊಖೂಫಾಯಿತು. ಜಿಲ್ಲೆ ಪರಜಿಲ್ಲೆಗಳಿಂದ ಅನೇಕಸಂತಾಪ ಸೂಚಕ ತಂತೀ ವಾರ್ತೆಗಳು ಬಂದವು. ಊರೂರುಗಳಲ್ಲಿ ಜನರು ಸಭೆ ನೆರೆದು ಸಹಸಂತಾಪಗಳನ್ನು ಸೂಚಿಸಿರುವರು. ಬಂಟ್ವಾಳದಲ್ಲಿ ಜನರು 30 ಮುಡಿ ಅಕ್ಕಿಯನ್ನು ಬಡವರಿಗೆ ದಾನಮಾಡಿದರೆಂದು ತಿಳಿದುಬರುವದು. ಮಂಗಳೂರಲ್ಲಿ ಕೀರ್ತಿಶೇಷರ ಬಗ್ಯೆ ನಾಳದು ಅದಿತ್ಯವಾರ ಜಾತಿಗೃಹಸ್ಥರ ಸಭೆಯಾಗುವದು. ಈ ಪುಣ್ಯಾತ್ಮನ ಸ್ಮರಣಾರ್ಥವಾಗಿ ತಕ್ಕ ಏರ್ಪಾಡಾಗತಕ್ಕದ್ದು. ಅವರ ಚರಿತ್ರವು ಚಿರಸ್ಥಾಯಿಯಾದ ಸ್ಮಾರಕ ಸಂಸ್ಥೆಯಾಗಿದೆ. ಅವರ ಗುಣಗಣ ಸ್ಮರಣೆಯನ್ನು ನಮ್ಮಲ್ಲಿ ಸದಾ ನೆಲೆಗೊಳಿಸಿ ಅವರ ಸನ್ಮಾರ್ಗದಲ್ಲಿ ಹೆಜ್ಜೆ ಇಡುವದು ಆ ಸುಗುಣಿ ಸುಬ್ರಾಯ ಪೈಗಳವರಿಗೆ ಪ್ರಿಯವಾದ ಸ್ಮಾರಕ ಚಿನ್ಹೆಯಾಗಿದೆ. ಅವರ ವ್ಯಥಿತ ಕುಟುಂಬದ ಕಡೆ ಸಹಾನುಭೂತಿ ಸೂಚಿಸುವೆವು.

ಪತಿತ ಕುಲೋದ್ಧರಣ.

ಈ ವಿಷಯವನ್ನು ಮೇಲ್ಜಾತಿಯ ಹಿಂದುಗಳು ವಹಿಸಿ ನಿಷ್ಕರ್ಷಿಸಲಿಕ್ಕೆ ಹೊತ್ತು ಮೀರಿ ಬಂದಿದೆ. ಇತರ ವಿಷಯಗಳಲ್ಲಿ ಭಿನ್ನಾಭಿಮತಗಳಿದ್ದರೂ ಪಂಚಮರೇ ಮೊದಲಾದ ಭ್ರಷ್ಟಕುಲಗಳನ್ನುದ್ಧರಿಸುವ ಸಂಗತಿಯಲ್ಲಿ ವಿದ್ಯಾವಂತ ಹಿಂದುಗಳು ಒಂದೇ ಮನಸ್ಸುಳ್ಳವರಾಗಿದ್ದಾರೆ. ಆರ್ಯಸಮಾಜದ ಮುಖಂಡರಾದ ಲಾಜಪತರಾಯಿಯವರು ಇವರ ಪಕ್ಷವಾಗಿ ಅನೇಕ ವಿಧದಲ್ಲಿ ವ್ಯವಹರಿಸುವರು. ಬ್ರಹ್ಮಸಮಾಜದ ಗೃಹಸ್ಥರಾದ ಆರ್. ವಿ ಶಿಂದೆಯವರು ಬೊಂಬಾಯಿ ಪ್ರಾಂತ್ಯದಲ್ಲಿಯೂ, ಮ| ರಾ| ರಾ| ಕೆ ರಂಗರಾಯರು ಮಂಗಳೂರಲ್ಲಿಯೂ ಇವರ ಅಭಿವೃದ್ಧಿಗೆ ದಿನಾಲೂ ಹೆಣಗಾಡುವರು. ಸಮಾಜ ಸಂಸ್ಕರಣೋದ್ಯುಕ್ತರಾದ ಬಹುಮಾನಪಟ್ಟ ಜಸ್ಟಿಸ್ ಚಂದಾವರಕಾರರಂಥವರು ಇವರಿಗೆ ಹಿತೈಷಿಗಳಾಗಿರುವರು. ರಾಷ್ಟ್ರೀಯ ಪ್ರವರ್ತನದಲ್ಲಿ ಪ್ರಾಚೀನ ಪಕ್ಷದ ನಾಯಕರಾದ ಬಹುಮಾನಪಟ್ಟ ಗೋಖಲೆಯವರು ಈ ಪಾಮರ ಕುಲಗಳ ಹಿತವನ್ನು ಶ್ರದ್ಧೆಯಿಂದ ಸಾಧಿಸುವರು. ನವೀನಪಕ್ಷದ ಅಗ್ರೇಸರರಾದ ಶ್ರೀಯುತ ಅಶ್ವಿನಿಕುಮಾರ ದತ್ತರನ್ನು ಕುರಿತು ಒಂದು ಕಥೆಯುಂಟು. ಇವರು ಐಕ್ಯ, ಭ್ರಾತೃಭಾವ ಸ್ವದೇಶಿ ಮೊದಲಾದ್ದನ್ನು ಕುರಿತು ಉಪನ್ಯಾಸಗಳನ್ನು ಹೇಳುತ್ತಿರಲು ಒಂದು ದಿನ ಒಬ್ಬ ಕೀಳು ಜಾತಿಯವನು ಬಂದು ಇವರನ್ನು ನಮಸ್ಕರಿಸಿ ಒಂದು ಪ್ರಶ್ನೆ ಕೇಳುವದುಂಟೆಂದು ಹೇಳಿದನು. ಆಗ್ಯೆ ಅಶ್ವಿನಿ ಬಾಬುಗಳು ಅವನನ್ನು ಕರೆದು ತನ್ನ ಹತ್ತರ ರತ್ನಕಂಬಳಿಯಲ್ಲಿ ಕುಳ್ಳಿರಿಸಿ ಪ್ರಶ್ನೆ ಕೇಳೆಂದರು. ಆಗಂತುಕನು ತನ್ನ ಪ್ರಶ್ನೆಗೆ ಉತ್ತರವೀಗಲೇ ದೊರಕಿತೆಂದು ಬಾಬುಗಳನ್ನು ಹರಸಿದನು. ಇದೇನೆಂದು ಕೇಳಲು ಆ ಪಾಮರನು — "ಸ್ವಾಮಿ, ನೀವು ಐಕ್ಯವನ್ನು ಸಾರುತ್ತಾ ನಮ್ಮನ್ನು ಮಾತ್ರ ಯಾಕೆ ಕೀಳ್ಗೆಳಸಿ ದೂರಮಾಡುವಿರೆಂದು ಕೇಳಬಂದೆನು. ಆದರೆ ನನ್ನನ್ನು ನೀವು ಆದರಿಸಿದ ಬಗೆ ನೋಡಲು ತಮ್ಮ ನಡತೆಯು ತಮ್ಮ ಮಾತಿಗೆ ಸರಿಯಾಗಿದೆ. ನಾನು ತೃಪ್ತನಾದೆನು." — ಹೀಗೆ ಬೇರೆ ಬೇರೆ ಪಂಥದ ಜನರ ಏಕೀಭಾವದಿಂದ ಕ್ರೈಸ್ತಮತ ಮತ್ತು ಹಿಂದು ಸಮಾಜಕ್ಕೆ ಸಂಬಂಧಿಸಿದ ಈ ವಿಷಯಕ್ಕೆ ನಾವು ಲಕ್ಷಕೊಡಬೇಕಾಗಿದೆ.

ಆ ಬಡ ಪತಿತ ಜನರ ಬಾಳು ಎಂತಹದು? ಇದನ್ನು ಸಹಿಸಲಿಕ್ಕೆ ಅವರು ಯಾವ ಪಾಪಕೃತ್ಯ ಮಾಡಿದ್ದಾರೆ? ಅವರ ಜನ್ಮ ಜನ್ಮದಿಂದ ಎಲ್ಲರೂ ಶೂದ್ರರೆಂದು ಶಾಸ್ತ್ರವೇ ಉಂಟಲ್ಲ? ಅವರನ್ನು ಮುಟ್ಟುವದು ನಿಷಿದ್ಧ. ಕುಡಿಯಲಿಕ್ಕೆ ನಮ್ಮ ಪಾತ್ರದಲ್ಲಿ ನೀರು ಸಿಕ್ಕದು. ಬಾಗಿಲೊಳಗೆ ಅಡಿಯಿಡ ಕೂಡದು. ನಮ್ಮ ಕೇರಿಯಲ್ಲಿ ಇರಕೂಡದು. ನಮ್ಮ ದೇವಾಲಯದಲ್ಲಿ ಹೋಗಕೂಡದು, ದೇವರಿಗೂ ಪಕ್ಷಪಾತವಿದೆ. ದಿನಾಲೂ ತಮ್ಮ ಕ್ಷುದ್ರಜೀವನವನ್ನು ಅವರು ತಿಳಿದು ಮರುಗುವರು. ಅವರಿಗೆ ಸನಾತನಧರ್ಮದ ಮಹಾತ್ಮೆಯೇನೂ ಗೊತ್ತಿಲ್ಲ. ಹಾಗಾದ ಮೇಲೆ ಇಷ್ಟು ನಿರ್ಬಂಧಪಡಿಸುವ ಹಿಂದೂ ಮತವನ್ನು ಬಿಟ್ಟು ಅವರು ಕ್ರಿಸ್ತಮತದ "ಬಿಳಿಗ ಹೊಲೆಯನೊಳ್ಳೆಯವನು" "ಮಾನಸಾಂತರ"ಪಟ್ಟ ಹೊಲೆಯನನ್ನು ನಾವೂ ಮುಟ್ಟುತ್ತೇವೆ ... ಎಂದರೆ ನಮ್ಮ ಮತವನ್ನು ನಾವೇ ಹೀನೈಸಿದಂತಾಯಿತು. ಇದು ಉಚಿತವಲ್ಲವೇ?

ಈಗ ಪತಿತರಾದ ಕುಲಗಳಿಗೆ ಇತರರಂತೆ ವಿದ್ಯಾಭ್ಯಾಸಗಳ ಮೊದಲಾದ ಅನುಕೂಲತೆಗಳು ದೊರಕಿ ಅವರಲ್ಲಿ ಎಷ್ಟೋ ಮಂದಿ ವಿಚಕ್ಷಣರಾಗಿ ಅಭಿವೃದ್ಧಿ ಹೊಂದಿದರೆ ಸಮಾಜಕ್ಕೆ ಅದೊಂದು ಲಾಭವಲ್ಲವೇ? ದೇಶಕ್ಕೆ ಶ್ರೇಯಸ್ಸಲ್ಲವೇ? ದೇಹಶ್ರಮ, ಕಷ್ಟಸಹಿಷ್ಣುತೆ ಮೊದಲಾದ ಗುಣಗಳು ಅವರಲ್ಲಿವೆ. ಇವು ವಿದ್ಯೆಯಿಂದ ವೃದ್ಧಿಯಾದರೆ ದೇಶಕ್ಕೆ ಹಿತಕರ. ನೀತಿಧರ್ಮ ಪ್ರಕಾರ ನೋಡಿದರೂ ಅವರನ್ನು ದೂರ ಮಾಡಿ ಪೀಡಿಸುವದು ಅನ್ಯಾಯವೆಂದು ಹೇಳಬೇಕು. ರಾಷ್ಟ್ರೀಯ ದೃಷ್ಟಿಯಿಂದ ನೋಡಿದರೂ ಲಕ್ಷಗಟ್ಟಲೆಯ ಭ್ರಷ್ಟ ಜನರು ವಿದ್ಯಾಹೀನರಾಗಿ ಅವನತರಾಗಿರುವಾಗ ಜನಾಂಗದಲ್ಲಿ ಐಕ್ಯವೂ ಅಭ್ಯುದಯವೂ ಆಗಲಾರದು. ಇವರನ್ನೊಡಗೊಂಡೇ ನಾವು ಮುಂದರಿಸಬೇಕು. ದೈವಯೋಗದಿಂದ ಭಾರತೀಯರು ಜನಾಂಗವಾಗಿ ಪರಿಣಮಿಸಿದರೆ ಈ ಜನರು ಆ ಜನಾಂಗಕ್ಕೆ ಸಹಕಾರಿಗಳಾಗಿ ಬೆನ್ನುಮೂಳೆಯಂತಿರುವರು. ನಾವೂ ಇವರನ್ನು ಸಮ ದೃಷ್ಟಿಯಿಂದ ನೋಡದಿದ್ದರೆ ನಮಗೂ ಬಿಳೀ ಜನರಿಗೂ ಏಕಪ್ರಕಾರ ನಡಿಸಬೇಕೆಂದೂ ಸ್ವಾತಂತ್ರ್ಯಗಳನ್ನು ಕೊಡಬೇಕೆಂದೂ ಸರಕಾರವನ್ನು ಹ್ಯಾಗೆ ಕೇಳುಹುದು? ನಮ್ಮಲ್ಲಿ ವಿಶ್ವಾಸವಿಲ್ಲದ ಈ ಜನಸ್ತೋಮವು ಅಂಥಾ ಪ್ರಾರ್ಥನೆಗಳನ್ನು ನಾವು ಮಾಡುವಾಗ್ಗೆ ನಮ್ಮ ಬೆಂಬಲಕ್ಕೆ ನಿಲ್ಲುವದೇ? ಸರಕಾರವೇ ಅವರಿಗೆ ನಮಗಿಂತ ಕರುಣಾಳುವಾಗಿರುವಾಗ ನಮ್ಮ ಏಳಿಗೆಯಿಂದ ಅವರಿಗೆ ಕೆಟ್ಟದ್ದಲ್ಲದೆ ಲಾಭವಾಗುವದೇ?

ಕಾಲಚಿಹ್ನೆಗಳನ್ನು ಕಾಣುವ ಬುದ್ಧಿಯಾದರೂ ಪತಿತ ಜಾತಿಗಳಿಗೆ ಕೈಕೊಡ ಹೇಳುವನು. ಬ್ರಿಟಿಷ್ ಸರಕಾರದ ಕೈಕೆಳಗೆ ಜಾತಿಭೇದಗಳು ಕ್ರಮೇಣ ಅಳಸಿಹೋಗುವವು. ಹ್ಯಾಗೂ ದ್ವಿಜೇತರರಿಗೆ ಆಶ್ರಯ ಸಿಕ್ಕಿ ಅವರು ಮೇಲಕ್ಕೇಳದಿರರು. ಈ ದಿನಗಳಾದರೋ ಸಾಮಾನ್ಯ ಜನ ಸ್ವಾತಂತ್ರ್ಯಗಳ ದಿನಗಳು. ನಾವು ಈಗ ಅತ್ಯರ್ಥ ಕುಲಗಳನ್ನು ತಿರಸ್ಕರಿಸಿದರೆ, ಅವರು ನಾಳೆ ಆ ನಡತೆಯನ್ನು ಮರೆಯರು. ನಮ್ಮ ನಮ್ಮೊಳಗೆ ಚಿರಕಾಲ ದ್ವೇಷಕ್ಕೆ ಕಾರಣವಾಗುವದು, ಆಗ್ಯೆ ಐಕ್ಯವೆಲ್ಲಿ? ಜನಾಂಗವೆಲ್ಲಿ?

ಧರ್ಮಮಾರ್ಗವನ್ನು ... ವಾಗಿ ಕುಲಭೇದ ಮಾತ್ರದಿಂದ ಒಬ್ಬನನ್ನು ಭ್ರಷ್ಟನೆಂದೆಣಿಸುವದು ಧರ್ಮವಿರುದ್ಧವೆಂದು ತೋರುವದು. ಇಷ್ಟೇ ಅಲ್ಲ ವೇದಶಾಸ್ತ್ರಗಳನ್ನು ಓದಿದವರು ಶ್ರುತಿಸ್ಮೃತಿಗಳ ಆಧಾರದಿಂದಲೇ ಈ ಜಾತಿಭೇದಗಳು ಶಾಸ್ತ್ರವಿರುದ್ಧವೆಂದು ಹೇಳುವರು. ಚತುರ್ವರ್ಣಗಳೂ ಒಬ್ಬನೇ ಬ್ರಹ್ಮನ ವಿವಿಧ ಅಂಗಗಳೆಂದು ಸ್ಮೃತಿಯು ಹೇಳುವಲ್ಲಿ ಎಲ್ಲರೂ ದೇಹದ ಅಂಗೋಪಾಂಗಗಳಂತೆ ಪರಸ್ಪರ ಸಹಕಾರಿಗಳಾಗಬೇಕೆಂದೂ, ಕೀಳುಮೇಲಿಲ್ಲದೆ ದೇಹದ ಕ್ಷೇಮಕ್ಕೆ ಸರ್ವರೂ ಅವಶ್ಯಕವೆಂದೂ ಆಯಿತಲ್ಲ? ಇದಲ್ಲದೆ ಶ್ರುತಿಪಠನದಿಂದ ಈ ಮೂರು ವಿಷಯಗಳು ಪ್ರತಿಪಾದಿತವಾಗುವವಂತೆ.

(1) ಪ್ರಾಚೀನ ಕಾಲದಲ್ಲಿ ಆರ್ಯರು ಅನ್ಯರನ್ನು ಶುದ್ಧಿಪೂರ್ವಕ ತಮ್ಮ ಸಮಾಜದೊಳಕೊಳ್ಳುತ್ತಿದ್ದರು. ಇಂಥವರು ಯೋಗ್ಯತೆ ಪ್ರಕಾರ ತಮಗೆ ನಿಶ್ಚಯಿಸಲ್ಪಟ್ಟ ವರ್ಣದಲ್ಲಿ ಭೋಜನ ವಿವಾಹ ಸಂಪರ್ಕಗಳನ್ನು ಬೆಳಸುತ್ತಿದ್ದರು.

(2) ವರ್ಣಗಳೊಳಗೆ ಪರಸ್ಪರ ಭೋಜನ ಸಂಪರ್ಕವೂ ರಕ್ತಸಂಬಂಧವೂ ಆಗುತ್ತಿತ್ತು. ಆದರೆ ಬ್ರಾಹ್ಮಣನಿಗೂ ಶೂದ್ರಳಿಗೂ ಹುಟ್ಟಿದ ಮಗುವಿಗೆ ಬ್ರಾಹ್ಮಣ ಜಾತಿ ಬಾರದಿದ್ದರೂ ಬ್ರಾಹ್ಮಣ ಶೂದ್ರಳ ಸಂಬಂಧವು ಮದಿವೆಯಲ್ಲದೆ ಹಾದರವೆನ್ನಿಸುತ್ತಿದ್ದಿಲ್ಲ.

(3) ಜಾತಿ ಭ್ರಷ್ಟರಾದವರಿಗೆ ಪ್ರಾಯಶ್ಚಿತ್ತ ಮೂಲಕ ಜಾತಿಯಲ್ಲಿ ಪ್ರವೇಶ ಸಿಕ್ಕುತ್ತಿತ್ತು. ಧರ್ಮಜ್ಞಾನ ಶ್ರುತಿಪಠನವನ್ನು ಬಿಟ್ಟದ್ದರಿಂದಲೂ, ಕಾಲಮಹಿಮೆಯಿಂದಲೂ, ನಾವು ಪೂರ್ವ ಪದ್ಧತಿಗಳನ್ನು ಬಿಟ್ಟಿರಬಹುದು. ಆದರೆ ಪ್ರಕೃತ ವರ್ತಮಾನ ಕಾಲಚಿಹ್ನಗಳನ್ನರಿತು ಅದಕ್ಕೆ ತಕ್ಕಂತೆ ಶಾಸ್ತ್ರಾಧಾರವೂ ಇದ್ದಲ್ಲಿ ಸಮಾಜ ವ್ಯವಸ್ಥೆಯನ್ನು ಸಮಾಜ ಹಿತಕ್ಕೋಸುಗ ಮಾರ್ಪಡಿಸುವದು ಉಚಿತ ಕರ್ತವ್ಯ.

ಪತಿತ ಜನರಿಗೆ ದ್ವಿಜರು ತೋರುವ ಆದರಣೆಯನ್ನು ನೋಡಿದೆವಷ್ಟೆ. ಮುಸಲ್ಮಾನ, ಕ್ರಿಸ್ತ ಮತಸ್ಥರು ಇವರನ್ನು ತಮ್ಮ ಧರ್ಮಕ್ಕೆ ಸೇರಿಸಿ ಇವರ ಬಾಳನ್ನು ಸಾಕಷ್ಟು ಒಳ್ಳೇ ರೀತಿಗೆ ತರುವರು. ಪುಣ್ಯಫಲದಿಂದ ಒಬ್ಬ ಪಂಚಮನು ಅಲ್ಪಸ್ವಲ್ಪ ವಿದ್ಯೆ ಕಲಿತನಾದರೆ ಅವನಿಗೆ ಇತರ ಹಿಂದುವಲ್ಲಿ ಕೆಲಸ ಸಿಕ್ಕದು. ಅವನು ಕ್ರಿಸ್ತರ ಯಾ ಮುಹಮ್ಮದೀಯರ ಮರೆ ಸೇರಬೇಕು. ಅವರು ತಮ್ಮ ಮತಪ್ರಚಾರಕ್ಕೋಸುಗ ಅವನನ್ನು ತಮ್ಮ ಮತಕ್ಕೆ ಸೆಳೆಯುವರು. ಕ್ಷಾಮ ಮುಂತಾದ ಅನಾಹುತಗಳು ಬಂದರೆ, ಜನರು ಸಾಯುತ್ತಿರುವಾಗ್ಯೆ ಮುಹಮ್ಮದೀ ಕ್ರಿಸ್ತರ ಸಂಖ್ಯೆ ಹೆಚ್ಚುತ್ತದೆ. ಅವರು ಆಕಾಲ ಬಡವರಿಗೆ ಅನ್ನದಾನ ಕೊಟ್ಟು ತಮ್ಮ ಮಂದೆಗೆ ಕೂಡಿಸಿಕೊಳ್ಳುವರು. ಪ್ರಕೃತಕ್ಕೆ ಹಿಂದುಗಳು ವಿಶೇಷವಿರುವರು. ಆದರೂ ಹಿಂದೂ ಸಮಾಜವು ವ್ಯವಸ್ಥಿತವಾಗದೆ ಪರಸ್ಪರ ದ್ವೇಷದಿಂದ ಪ್ರೇರಿತವಾದರೆ ಶಕ್ತಿಯು ಕಲಹಗಳಲ್ಲೇ ನಷ್ಟವಾಗುವದು. ಕ್ರೈಸ್ತ ಮಿಶ್ಯನರಿಗಳು ಯಾವ ಉಪಾಯಗಳಿಂದ ತಮ್ಮ ಮಂದೆಯನ್ನು ಹೆಚ್ಚಿಸುವರೆಂಬ ಕುರಿತು ... ಕುಮಾರ ಸ್ವಾಮಿಯವರು ಕೊಟ್ಟ ವರ್ಣನೆಯನ್ನು ಇನ್ನೊಂದು ಪ್ರಸ್ತಾಪದಲ್ಲಿ ವಾಚಕರ ಮುಂದಿಟ್ಟಿದ್ದೆವು. ಮುಸಲ್ಮಾನರು ಇನ್ನು ರಾಷ್ಟ್ರೀಯ ಸ್ವಾತಂತ್ರ್ಯ ಸರಕಾರಿ ನೌಕರಿಗಳಲ್ಲಿ ಮುಂದೆ ಮುಂದೆ ಬರುವದರಿಂದ ಅವರ ಮತಕ್ಕೆ ಸೇರಲಿಕ್ಕೆ ಹೀನ ಜಾತಿಗಳಿಗೆ ಪ್ರೇರಣೆ ಇರುವದು.

ಈ ಲೇಖನವನ್ನು ಲಾಲಾ ಲಾಜಪತರ್‍ಾಯವರ ಉಪನ್ಯಾಸವನ್ನು ಆಧರಿಸಿ ಬರೆದಿರುವೆವು. ಪತಿತ ಕುಲೋದ್ಧಾರಣೆಗೆ ಪ್ರತಿ ಸಂಸ್ಥಾನಕ್ಕೆ ಒಂದೊಂದು ಕಮ್ಮಿಟಿ ಸ್ಥಾಪಿಸಬೇಕೆಂದೂ ಆಯಾ ಕಮ್ಮಿಟಿ ಕೈಕೆಳಗೆ ಜಿಲ್ಲೆ ಜಿಲ್ಲೆಗಳಲ್ಲಿ ಶಾಖೆಗಳಿದ್ದು ಈ ಕೆಲಸವನ್ನು ಮನಸುಟ್ಟು ನೆರವೇರಿಸಬೇಕೆಂದೂ ಲಾಲಾರವರು ಸೂಚಿಸುವರು. ನಮ್ಮ ವಿನಚಯರ್ಗಳಿಗೆ ಈ ದೀನರ ಕಡೆಗೆ ಇಂದಿಷ್ಟು ಕರುಣೆತೋರಿ ಹಿಂದು ಮತದ ರಹಸ್ಯವಾದ ಭ್ರಾತೃಸ್ನೇಹ ಬೆಳಸಬೇಕಲ್ಲ?

ಕೆನರಾ ಗರ್ಲ್ಸ್ ಸ್ಕೂಲ್ ಯಾ ಕೆನರಾ ಹುಡುಗಿಯರ ಶಾಲೆ. ಈ ಶಾಲೆಯ ೧೯೦೮ ನೇ ವರುಷದ ರಿಪೋರ್ಟ್ ನಮ್ಮ ಹಸ್ತಗತವಾಗಿರುವುದು. ಮಂಗಳೂರು ಪಟ್ಟಣದಲ್ಲಿ ಸುಶಿಕ್ಷಿತ ಜನರ ಸಮುದಾಯವು ತಕ್ಕಮಟ್ಟಿಗಿದ್ದರೂ ಬಾಸೆಲ್ ಮಿಶ್ಯನ್ ಮತ್ತು ಜೆಜುಯಿಟ್ ಮಿಶನರಿ ಬಾಲಿಕಾ ಪಾಠಶಾಲೆಗಳಲ್ಲದೆ ಇತ್ತಲಾಗಿನವರೆಗೆ ಹಿಂದೂಗಳ ಯಾ ಇತರರ ಬಾಲಿಕಾಪಾಠಶಾಲೆಗಳೇ ಇರಲಿಲ್ಲ. ವಿದ್ಯೆಯ ಮೌಲ್ಯವನ್ನು ಬರಿಯ ರೂಪಾಯಿ ಆಣೆ ಪೈಗಳಲ್ಲಿ ಮಾತ್ರ ಗಣನೆ ಮಾಡಿ ಹತ್ತು ಹದಿನೆರಡು ವರುಷ ಪ್ರಾಯ ತುಂಬುತ್ತಲೆ ಅನ್ಯರ ಪಾಲಾಗುವ ಕನ್ಯೆರಿಗೆ ವಿದ್ಯೆಯಿಂದ ಸಾರ್ಥಕವೇನೆಂಬ ಅಭಿಪ್ರಾಯವೂ, ಸ್ತ್ರೀಶಿಕ್ಷಣ ಹೊಂದದ ಮಾತೆಯರ ವಿದ್ಯಾ ಅಭಾವವೂ ಸ್ತ್ರೀ ವಿದ್ಯಾಭಿವೃದ್ಧಿಗೆ ಮುಖ್ಯ ತೊಡಕುಗಳಾಗಿರುವವು. ಕೆನರಾ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿದವರ ಶ್ರಮ ಸಾಹಸಗಳು ಶ್ಲಾಘನೀಯವಾಗಿರುವವು. ಶಾಲೆಯಲ್ಲಿ ಉಪಾಧ್ಯಾಯಿನಿಗಳಾಗಿರುವ ನಾಲ್ಕು ಜನರಲ್ಲಿ ಇಬ್ಬರು ಶಾಲಾ ಉಪಾಧ್ಯಾಯಿನಿಯರ ಸರಕಾರಿ ಪರೀಕ್ಷೆಗಳನ್ನು ತೇರ್ಗಡೆ ಹೊಂದಿದವರಾಗಿರುವರು. ಹುಡುಗಿಯರ ಸಂಖ್ಯೆಯು ... ಆಗಿರುವದು. ಕಳೆದ ವರುಷಕ್ಕಿಂತ ಈ ವರುಷ ಶಾಲೆಯಲ್ಲಿ ಹುಡುಗಿಯರು ಹೆಚ್ಚಿರುವರಾಗಿ ತೋರುತ್ತದೆ. ಪಟ್ಟಣದ ಆಯಾ ಕಡೆಗಳಲ್ಲಿರುವ ಸಣ್ಣ ಹುಡುಗಿಯರಿಗೆ ಈ ಒಂದೇ ಶಾಲೆಗೆ ನಡೆದು ಬರುವದು ಕಷ್ಟಸಾಧ್ಯವಾದ್ದರಿಂ

ಯುತ ಶಾಲೆಗೆ ಕಟ್ಟೋಣವನ್ನು ಕಟ್ಟಿಸುವ ಮೊದಲು ಹೆಚ್ಚಿನ ಹುಡುಗಿಯರಿಗೆ ಪ್ರವೇಶ ಕೊಡುವರೆ ಸ್ಥಳದ ಅಡಚಣೆ ಇದ್ದದರಿಂದಲೂ ಶಾಲೆಯ ಹುಡುಗಿಯರ ಸಂಖ್ಯೆಯು ಇಷ್ಟು ಹೆಚ್ಚದಿರಲಿಕ್ಕೆ ಕಾರಣವಾಗಿರಬಹುದು. ಹತ್ತು ಹದಿನೆರಡು ವರುಷ ಪ್ರಾಯವಾದ ಕೂಡಲೇ ಬಹುಪಕ್ಷದಲ್ಲಿ ಬಾಲಿಕೆಯರು ತಮ್ಮ ಶಿಕ್ಷಣವನ್ನು ತೊರೆಯುವರೆಂಬ ಸಂಗತಿಯು ಈ ಸಣ್ಣ ಶಾಲೆಯಲ್ಲಿ ಸಹಾ ಕಂಡು ಬರುವುದು. ಹ್ಯಾಗೆಂದರೆ:- ಬಾಲಕ ದರ್ಜೆಯಲ್ಲಿ ೫೯ ಇರುವಾಗ ೩೨ ಹುಡುಗಿಯರು ಒಂದನೇ ದರ್ಜೆಯಲ್ಲಿರುವರು; ೨ನೇ ದರ್ಜೆಯಲ್ಲಿ ಈ ಸಂಖ್ಯೆಯು ೨೫ಕ್ಕೆ ಬಂದು, ೩ನೇದರಲ್ಲಿ ಇದು ೨೧ ಆಗಿರುವುದು; ೪ನೇ ದರ್ಜೆಯಲ್ಲಿ ಬರಿಯ ೧೦ ಹುಡುಗಿಯರು ಮಾತ್ರವಿರುವರು. ಹೀಗೆ ಹುಡುಗಿಯರಿಗೆ ೧೦ ಯಾ ೧೨ ವರುಷದಲ್ಲಿ ವಿವಾಹವಾಗುವುದರಿಂದ ಅವರ ವಿದ್ಯಾಭ್ಯಾಸಕ್ಕೆ ಅಭ್ಯಂತರ ಉಂಟಾಗುವುದು. ಪ್ರಕೃತ ಸಂದರ್ಭಗಳಲ್ಲಿ ಈ ಅಭ್ಯಂತರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ನೀಗುವರೆ ಒಂದು ಉಪಾಯವನ್ನು ಸೂಚಿಸಬಹುದು. ಈ ಶಾಲೆಯ ವರ್ಧಂತಿ ಸಭೆಯ ಅಧ್ಯಕ್ಷರಂತಹ ಸ್ತ್ರೀಯರು ಇಂತಹ ಶಾಲೆಗಳಲ್ಲಿ ಹೆತ್ತಿಗೆ ಒಂದಾವರ್ತಿ ಅಥವಾ ತತ್ಕಾಲಕ್ಕೆ ಹದಿನೈದು ದಿವಸಕ್ಕೆ ಒಮ್ಮೆಯಾದರೂ ಮದುವೆಯಾದ ಶಿಕ್ಷಿತರಾಗಲಿ, ಅಶಿಕ್ಷಿತರಾಗಲಿ, ಕುಲಸ್ತ್ರೀಗಳ ಸಭೆಯು ಕೂಡುವಂತೆ ಮಾಡಿ ಅವರೊಂದಿಗೆ ಒಡನಾಡಿ, ವಿದ್ಯಾಲಾಭದಿಂದ ಉಂಟಾಗುವ ಪ್ರಯೋಜನಗಳನ್ನು ಕಥಾರೂಪದಲ್ಲಿಯೂ ಇತರ ರೀತಿಯಲ್ಲಿಯೂ ಅವರ ಮನಸ್ಸನ್ನು ಆಕರ್ಷಿಸುವ ವಿಧಾನದಲ್ಲಿ ಅವರಿಗೆ ತಿಳಿಯಪಡಿಸ ಬೇಕು. ಆಗ್ಯಾಗ್ಯೆ ಇವರು ಸಭೆಗೆ ಬರುವಂತೆ ತಕ್ಕ ಉಪಾಯಗಳನ್ನೇರ್ಪಡಿಸ ಬೇಕು. ಬೇರೆಬೇರೆ ಸಂದರ್ಭಗಳಲ್ಲಿ ಉಪಯುಕ್ತ ವಿಷಯಗಳ ಉಪನ್ಯಾಸಗಳನ್ನು ಇವರಿಗೆ ಕೊಡುವಂತೆ ನಿಯಮವಿರ ಬೇಕು. ಈ ರೀತಿ ವಿದ್ಯಾ ವಿಶೇಷತೆಯನ್ನು ಕ್ರಮೇಣ ತಿಳಿದಲ್ಲಿ ಇವರು ಕೈಕೆಳಗಿರುವ ತಮ್ಮ ಸೊಸೆಗಳನ್ನೂ, ಮಗಳಂದಿಯರನ್ನೂ ಶಾಲೆಗೆ ಕಳುಹಿಸಲುದ್ಯುಕ್ತರಾಗುವರು. ಪ್ರಕೃತ ಪುಣೆ ಶಹಾರಿನಲ್ಲಿ ಪಾಠಶಾಲೆಗಳಿಗೆ ಹೋಗಿ ಕಲಿಯಲು ಅನುಕೂಲವಿಲ್ಲದ ಕುಲಸ್ತ್ರೀಯರಿಗೆ ತಕ್ಕ ಶಿಕ್ಷಣವು ದೊರಕುವಂತೆ ಮೇಲೆ ನಮೂದಿಸಿದ ವಿಧದಲ್ಲಿ ಮಿಸಿಸ್ ರಮಾಬಾಯಿ ರಾನಡೆಯವರು ಸ್ತ್ರೀಯರ ಸಭೆಗಳನ್ನು ಆಗ್ಯಾಗ್ಯೆ ಕೂಡಿಸಿ ಹಪ್ತೆಗೆ ಮೂರಾವರ್ತಿಯಾದರೂ ವಿವಿಧ ವಿಷಯಗಳಲ್ಲಿ ಇವರಿಗೆ ಉಪನ್ಯಾಸಗಳನ್ನು ಕೊಡಿಸುವಂತೆ ತಕ್ಕ ಏರ್ಪಾಡನ್ನು ಮಾಡಿರುವರು. ಈ ರೀತಿಯಲ್ಲಿ ಕೆನರಾ ಹುಡುಗಿಯರ ಶಾಲೆಯವರೂ ಸಹಾ ನಡೆಸಿದ್ದಲ್ಲಿ ಸ್ತ್ರೀ ವಿದ್ಯಾಭ್ಯಾಸ ಪ್ರಚಾರಕ್ಕೆ ತಕ್ಕ ಮಾರ್ಗವಾಗುವುದು.

ಶಾಲೆಯ ವರದಿಯಿಂದ ಶಾಲೆಗೆ ಗೌಡಸಾರಸ್ವತ ಕೊಂಕಣಸ್ಥ, ಸಾರಸ್ವತ, ವೈಶ್ಯ ವ ಇತರ ಜಾತಿಯ ಹುಡುಗಿಯರು ಬರುವರೆಂತ ತಿಳಿಯುತ್ತೇವೆ.

ಶಾಲೆಯಲ್ಲಿ ಪ್ರಕೃತ ಮರಾಠಿ ಮತ್ತು ಕನ್ನಡ ಭಾಷೆಯನ್ನು ಕಲಿಸುತ್ತಿರುವರು. ಇನ್ನು ಮುಂದಕ್ಕೆ ಇಂಗ್ಲೀಷ ಭಾಷೆಯನ್ನು ಸಹಾ ಕಲಿಸುವ ಆಲೋಚನೆ ಇರುವುದು. ಗಣಿತ, ಭೂಗೋಳ, ಗಾಯನ, ಹೊಲಿಗೆ, ನಕ್ಷೆ ಬಿಡಿಸುವುದು ಮತ್ತು ಕಿಂಡರ್ ಗಾರ್ಟನ್ ಮೊದಲಾದವುಗಳನ್ನು ಕಲಿಸುವರಲ್ಲದೆ, ಮೇಲಿನ ಕ್ಲಾಸುಗಳಲ್ಲಿ ಆರೋಗ್ಯ ಶಾಸ್ತ್ರ ಮತ್ತು ಗೃಹ ಪರಿಪಾಲನೆಯ ವಿಷಯವನ್ನೂ ಕಲಿಸುವರು. ಈ ಶಾಲೆಯಲ್ಲಿ ಸಂಬಳ ತಕ್ಕೊಳ್ಳದೆ ಐಶ್ವರ್ಯವಂತರ ಮಕ್ಕಳಿಗೂ ಬಡವರ ಮಕ್ಕಳಿಗೂ ಸಮರೀತಿಯಲ್ಲಿ ಶಿಕ್ಷಣವನ್ನು ಉಚಿತವಾಗಿ ಕೊಡುವ ಏರ್ಪಾಡು ಸ್ತುತ್ಯಾರ್ಹವಾಗಿರುವುದು. ಶಾಲೆಯ ಹುಡುಗಿಯರ ಪರೀಕ್ಷೇ ಫಲವು ಶಾಲೆಯಲ್ಲಿ ಸಮರ್ಪಕವಾದ ಶಿಕ್ಷಣವು ಹುಡುಗಿಯರಿಗೆ ದೊರಕುತ್ತಿರುವುದೆಂಬುದನ್ನು ವ್ಯಕ್ತಪಡಿಸುವುದು. ಮದ್ರಾಸು ವಿದ್ಯಾ ಇಲಾಖೆಯ ನಿಯಮಗಳ ಪ್ರಕಾರ ಶಾಲೆಯನ್ನು ಅಂಗೀಕರಿಸುವರೆಂದು ತೋರುತ್ತದೆ.

ಶಾಲಾ ವರದಿಯಲ್ಲಿ ಜಮಾ ಖರ್ಚ ಲೆಕ್ಕದ ವಿವರವು ಇಲ್ಲದ್ದರಿಂದ ಹೀಗೆ ಉಚಿತವಾಗಿ ಕೊಡಲ್ಪಡುವ ಸ್ತ್ರೀ ಶಿಕ್ಷಣಕ್ಕೆ ದ್ರವ್ಯಾನುಕೂಲತೆಯು ಎಲ್ಲಿಂದ ದೊರಕುವುದೆಂಬುದು ತಿಳಿಯಲು ಅಸಾಧ್ಯ. ನಾವು ತಿಳಿದಷ್ಟು ಮಟ್ಟಿಗೆ ಇದಕ್ಕೆ ಗೌಡಸಾರಸ್ವತ ಪಂಚಾಯಿತ ಸಭೆಯಿಂದಲೂ, ಇತರ ಸ್ನೇಹಸ್ಥರುಗಳಿಂದಲೂ, ಕೊಡೋಣಾಗುವ ತಿಂಗಳುಗಳ್ಲೆ ಚಂದಾ ಮೊಬಲಗಿನಿಂದ ಈ ಶಾಲೆಯನ್ನು ನಡೆಸುತ್ತಿರುವರೆಂದು ಹೇಳಬೇಕಾಗಿದೆ. ಶಾಲೆಗೆ ಬೇಕಾದ ಕಟ್ಟೋಣವನ್ನು ಕಟ್ಟಿಸುವದರಲ್ಲಿ ಹ್ಯಾಗೆ ಉದಾರ ಚಿತ್ತದ ಹಲವು ಸ್ತ್ರೀಪುರುಷರು ದ್ರವ್ಯ ಸಹಾಯವನ್ನು ಕೊಟ್ಟಿರುವರೋ ಅದೇ ರೀತಿಯಲ್ಲಿ ಈ ಶಾಲೆಯು ಶಾಶ್ವತವಾಗಿ ನಡೆಯುವಂತೆ ಇಂಥವರಿಂದ ತಕ್ಕ ದ್ರವ್ಯ ಸಂಗ್ರಹವನ್ನು ಮಾಡುವುದು ಅಗತ್ಯ.

ಶಾಲೆಯು ಮೊಂಚಿನ ಕಟ್ಟೋಣದಲ್ಲಿ ಸಾಕಷ್ಟು ಸ್ಥಳವಿಲ್ಲದೆ ಜಾಗದಡಚಣೆಯಿಂದ ಶಾಲಾಧಿಕಾರಿಗಳು ನಿರುಪಾಯರಾಗಿದ್ದಾಗ, ಕಟ್ಟೋಣದ ಖರ್ಚಿನ ಬಗ್ಯೆ ರಾ. ವಕೀಲ ತಲಚೇರಿ ಭವಾನಿರಾಯರ ಪತ್ನಿ ಅಂಬಾಬಾಯಿಯವರೂ, ಮಂಜೇಶ್ವರ ಸಾವುಕಾರ ನರಸಿಂಹ ಶ್ಯಾನುಭಾಗರ ಪತ್ನಿ ಕಲ್ಯಾಣಿಬಾಯಿಯವರೂ, ಮಂಜೇಶ್ವರ ಲಕ್ಷ್ಮಣಭಕ್ತರವರ ಪತ್ನಿ ಸಾವಿತ್ರಿಬಾಯಿಯವರೂ ಒಬ್ಬೊಬ್ಬರು ೫೦೦ ರೂಪಾಯಿಯಂತೆ ಕೊಟ್ಟು ಮಾಡಿದ ಸಹಾಯವು ಕೊಂಡಾಡ ತಕ್ಕದ್ದೇ. ಈ ಮೂವರು ಜನರುಗಳ ವಿನಹಾ ಇತರರೂ ಶಾಲೆಯ ಕಟ್ಟೋಣದ ಬಗ್ಯೆ ತಕ್ಕ ಸಹಾಯವನ್ನು ಮಾಡಿರುವರು. ಇವರಲ್ಲಿ ಡಿಪ್ಯೂಟಿ ಕಲೆಕ್ಟರ್ ಮ. ರಾ. ಉದಿಯಾವರ ರಾಮರಾಯರ ಪತ್ನಿ ಕಲ್ಯಾಣಿಬಾಯಿಯವರು ರೂಪಾಯಿ ೨೫, ಡಿಪ್ಯೂಟಿ ಕಲೆಕ್ಟರ್ ರಾ. ಉಪೇಂದ್ರಪೈಗಳು ರೂ. ೨೦೦, ಜಿಲ್ಲಾ ರಿಜಿಸ್ಟ್ರಾರ್ ರಾ. ಮಂಜೇಶ್ವರ ಮುಕುಂದರಾಯರು ರೂ. ೧೦೦ ಈ ರೀತಿ ಇನ್ನು ಹಲವರು ಸಹಾಯ ಮಾಡಿರುವರು. ಶಾಲಾ ಹುಡುಗಿಯರಿಗೆ ವರುಷಪ್ರತಿ ಕೊಡೋಣಾಗುವ ಇನಾಮು ಫಂಡಿಗೆ ಕಳೆದ ಗೌಡಸಾರಸ್ವತ ಬ್ರಾಹ್ಮಣ ಪರಿಷದದ ಅಧ್ಯಕ್ಷರಾದ ದತ್ತಾತ್ರೇಯ ಬಲವಂತ ಚಿಟ್ನಿಸರವರು ರೂ. ೨೫ ಮತ್ತು ಬೆಳಗಾವಂ ಕ್ಯಾಪುರಿನ ಸಮಾಜದವರು ರೂ. ೧೦೧ನ್ನು ಕೊಟ್ಟಿರುವರು.

ಶಾಲೆಯು ಅಭಿವೃದ್ಧಿಗೊಂಡು ಅದರ ಉದ್ದಿಷ್ಟ ಉದ್ದಿಶ್ಯಗಳನ್ನು ನೆರವೇರಿಸಲೆಂದು ಅಪೇಕ್ಷಿಸುತ್ತೇವೆ.

ಸತ್ಸಂಗ.

ಪ್ರಿಯವಾಚಕರೆ! ಇನ್ನೇನು ಗತಿ! ಇದು ಸಾಮಾನ್ಯವಾದ ಸಾಗರವಲ್ಲ—ಜನನ ಮರಣ ರೂಪವಾದ ಸಂಸಾರ ಸಾಗರ! ಇದರಲ್ಲಿ ಬಿದ್ದು ಬಹುಕಾಲವಾಯಿತು! ಅಂದಿನಿಂದ ಈ ವರೆಗೂ ಮುಳುಗುತ್ತಾ ತೇಲುತ್ತಾ ಅನೇಕ ದುಃಖಗಳನ್ನನುಭವಿಸಿದೆವು. ಇನ್ನು ಮುಂದೆ ಸಾಗದು! ತೀರವನ್ನು ಸೇರುವುದಕ್ಕೆ ಪ್ರಯತ್ನಿಸೋಣವೆಂದರೆ ದೇಹವಾರ್ಧಕ್ಯವೂ ಬಂದು ಹೋಗಿದೆ! ಇನ್ನೇನು ಗತಿ! ಬಹು ಜನ್ಮ ಸಂಸ್ಕಾರ ಬಲದಿಂದ ಲಭ್ಯವಾಗಿರುವ ಈ ಮನುಷ್ಯ ಜನ್ಮವನ್ನು ನಾವು ಸಾರ್ಥಕಪಡಿಸುವುದೆಂದಿಗೆ! ನಿಮಿಷ ನಿಮಿಷ ವ್ಯರ್ಥವಾಗಿ ಕಳೆದು ಹೋಗುತ್ತಿರುವ ಕಾಲವು ಹಿಂದಿರುಗಿ ಬರುವುದೆ! ಜೀವರಿಗೆ ಜನ್ಮಾಂತರಗಳನೇಕವಾಗಿರುವುದರಿಂದ ಮುಂದಣ ಜನ್ಮದಲ್ಲಿ ಈ ದುಃಖ ನಿವೃತ್ತಿಗೆ ತಕ್ಕ ಪ್ರಯತ್ನವನ್ನು ಮಾಡಬಹುದೆಂದರೂ ಮುಂದೆ ಮನುಷ್ಯ ಜನ್ಮವೇ ಬರುವುದೆಂಬುದಕ್ಕೆ ಗೊತ್ತೇನು! ಮಾನವ ಜನ್ಮದಲ್ಲಿ ವಿನಾ ಮತ್ತಾವ ಜನ್ಮದಲ್ಲಿಯೂ ಪ್ರಯತ್ನಕ್ಕೆ ಅವಕಾಶವೇ ಇಲ್ಲವಷ್ಟೆ? ಇದಲ್ಲದೆ ಪುಣ್ಯ ವಿಶೇಷದಿಂದ ಮೋಕ್ಷಾರ್ಥವಾಗಿ ಪ್ರಾಪ್ತವಾದ ಈ ಮಾನವ ಜನ್ಮದಲ್ಲಿ ದುಃಖದಿಂದ ವಿಮುಕ್ತರಾಗುವುದಕ್ಕೆ ಪ್ರಯತ್ನಿಸದೆ ಕಾಲಯಾಪನೆಯನ್ನು ಮಾಡಿದರೆ ಮುಂದೆ ಕ್ರಿಮಿಕೀಟಾದಿ ನೀಚ ಜನ್ಮವೇ ಬರುವುದರಲ್ಲಿ ಸಂಶಯವುಂಟೆ? ಅಯ್ಯೋ! ಈ ಸಂಸಾರ ಸಮುದ್ರದ ಆಶಾಮೋಹಗಳೆಂಬ ಅಲೆಗಳ ಹೊಡೆತದಿಂದಲೂ, ಷಡ್ವೈರಿಗಳೆಂಬ ಜಲಚರಗಳ ಬಾಧೆಯಿಂದಲೂ ತಪ್ಪಿಸಿಕೊಂಡು ಜನ್ಮಸಾರ್ಥಕ್ಯವನ್ನು ಹೊಂದುವುದು ಹೇಗೆ! ಇನ್ನು ಮುಂದೆ ಗತಿಯೇನು!

ವಾಚಕ ಮಹಾಶಯರೆ! ಭಗವಂತನು ದಯಾಮಯನಲ್ಲವೆ! ಅದೊ! ನೋಡಿ! ಸತ್ಸಂಗವೆಂಬ ನಾವೆಯನ್ನು ನಮ್ಮ ರಕ್ಷಣಾರ್ಥವಾಗಿ ನಮ್ಮ ಸಮೀಪಕ್ಕೇ ಕಳುಹಿಸಿರುವನು. ಅದನ್ನುಪೇಕ್ಷಿಸಿದರೆ ನಮಗೆ ದುರ್ಗತಿಯು ಪ್ರಾಪ್ತವಾಗದಿರದು. ಇದಲ್ಲದೆ ಇದು ಸಾಮಾನ್ಯವಾದ ನಾವೆಯಲ್ಲ—ಉಭಯಲೋಕ ಸುಖಸಂದಾಯಕವಾದ ಸತ್ಸಂಗವೆಂಬ ನಾವೆ. ಇದರಲ್ಲಿ ಪಾಮರ್‍ಯವನ್ನೂ ಪಂಡಿತನನ್ನಾಗಿ ಮಾಡುವ ಪ್ರೌಢಪಾಠಶಾಲೆಯಿರುವುದು. ಇದರ ಹಿಂಭಾಗದ ದಕ್ಷಿಣ ಪಾರ್ಶ್ವದಲ್ಲಿ ವಿರಾಗವೆಂಬ ಉದ್ಯಾನವಿರುವುದು. ಅಲ್ಲಿ ಸತ್ಸಂಕಲ್ಪಗಳೆಂಬ ಸದನಗಳು—ಮಧ್ಯದಲ್ಲಿ ಮೋಕ್ಷಾಗಾರವು ಮುಂದಕ್ಕೆ ಹೋಗುವ ದ್ವಾರ. ಇಂತಹ ನಾವೆಯನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಆದಕಾರಣ ಇದನ್ನು ಹತ್ತಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ.

ಆಹಾ! ಭಗವಂತನ ಪ್ರೀತಿ ವಾತ್ಸಲ್ಯಗಳು ಅಪಾರವಾದುವುಗಳು! ಪ್ರಾಣಿಗಳು ತಂತಮ್ಮ ಸಂಚಿತ ಸಂಸ್ಕಾರಾನುಸಾರವಾಗಿ ಸಂಸಾರ ಸಾಗರದಲ್ಲಿ ಸಂಕಟಗಳನ್ನನುಭವಿಸುತ್ತಿದ್ದರೂ ತನ್ನವಾರಕಾರ್ಥವಾಗಿ ಸತ್ಸಂಗವೆಂಬ ನಾವೆಗಳನ್ನು ನಿರ್ಮಿಸಿ ತನ್ನ ನಿಷ್ಕಾರಣಪ್ರೀತಿಯನ್ನು ವ್ಯಕ್ತಪಡಿಸುತ್ತಿರುವನು!—ಎಲೈ ಕಪಟನಾಟಕ ಸೂತ್ರಧಾರಿಯಾದ ಕರುಣಾಸಿಂಧುವೆ! ನಿನ್ನ ಕೃಪಾ ಕಟಾಕ್ಷವಿಲ್ಲದಿದ್ದರೆ ಮಾಯಾಪಾಶಬದ್ಧರಾದ ಮಾನವರ ಗತಿಯೇನು! ದಯಾಮಯನೆ! ಯೌವ್ವನ ಮದದಿಂದಲೂ, ಧನಮದದಿಂದಲೂ, ಪುತ್ರಾದಿ ಮದದಿಂದಲೂ ತನ್ನ ಜೀವಿತ ಕಾಲದಲ್ಲೊಂದುವೇಳೆಯಾದರೂ ನಿನ್ನನ್ನು ಧ್ಯಾನಿಸದ ದುಶ್ಚರಿತನನ್ನೂ ಕೂಡ ಕೈಬಿಡದೆ ಕಾಪಾಡುತ್ತಿರುವೆಯಲ್ಲ! ಆದುದರಿಂದಲೇ ಪ್ರೇಮ ಸ್ವರೂಪನೆಂಬ ಅನ್ವರ್ಥನಾಮವನ್ನು ತಳೆದಿರುವೆಯಲ್ಲವೆ!

ಆತ್ಮ ಸಾಕ್ಷಾತ್ಕಾರವನ್ನು ಹೊಂದಿರುವ ಮಹನೀಯರ ಸಹವಾಸ—ಆತ್ಮ ವಿಚಾರದಲ್ಲಿ ಅಭಿನಿವೇಶಗೊಳಿಸುವ ಸದ್ಗ್ರಂಥಗಳ ಪಠನೆ—ಇವುಗಳೇ ಸತ್ಸಂಗ. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಜನಗಳನ್ನು ನಾವೆಗಳು ಸಾಗಿಸುವಂತೆ ಇದೂ ಕೂಡ ಮಾನವರನ್ನು ಇಹದಿಂದ ಪರಕ್ಕೆ ಕರೆದೊಯ್ಯುವುದರಿಂದ ಇದಕ್ಕೆ ಸತ್ಸಂಗನಾವೆ ಎಂದು ನಾಮಾಂಕಿತವಾಗಿರುವುದು. ಆದಕಾರಣ ಭಗವತ್ಪ್ರಸಾದರೂಪವಾದ ಇಂತಹ ಸತ್ಸಂಗವನ್ನು ಸರ್ವ ಪ್ರಯತ್ನದಿಂದಲೂ ಸಂಪಾದಿಸಬೇಕಾದುದಾವಶ್ಯಕವಲ್ಲವೆ!

ಸತ್ಸಂಗವನ್ನು ಸಂಪಾದಿಸದ ಮಾನವನಿಗೆ—ಅವನೆಂತಹ ಪುಣ್ಯಕೋಟಿಗಳ ಪುತ್ರನಾದರೂ—ಸಮ್ಯಕ್ ಜ್ಞಾನವು ಕದಾಪಿ ಸ್ಫುರಿಸಲಾರದು. ಮನುಷ್ಯನು ಸತ್ಸಂಗ ದುಸ್ಸಂಗಗಳೆಲ್ಲಾವುದನ್ನೂ ಮಾಡದೆ ಕೇವಲ ಏಕಾಂತವಾಸ ಮಾಡಿದರೆ ಸದ್ಗುಣ ಸಂಪನ್ನನಾಗುವನೆಂದು ಕೆಲವರು ಅಭಿಪ್ರಾಯಪಡುವರು. ಇದು ಶುದ್ಧ ಅಸಂಗತ—ಸ್ವಾ

[illegible] ಜನಜೂನ್ಯವಾದ ವನದಲ್ಲಿ ವಾಸ [illegible] ದ ಸದ್ಗುಣವನ್ನಾಗಲಿ, ದುರ್ಗುಣವ [illegible] ಸಾಧ್ಯವಲ್ಲವಷ್ಟೆ? ಅದಕಾರಣ ಮನುಷ್ಯನ ಸದ್ವರ್ತನೆಗೂ [illegible] ಕಾರಣ.

[illegible] ಅನುಕರಣಶೀಲನಾದ ಪ್ರಾಣಿ. ತನ್ನ ಸುತ್ತಮುತ್ತಲಿರುವ ಜನ [illegible] ನೋಡಿ ತಾನೂ ಹಾಗೆಯೇ ಅಭ್ಯಾಸಮಾಡುವನು. ಮನು [illegible] ಅವನ ಜೀವನದ ಭೂಮಿಕೆಯು. ಬಾಲ್ಯದಲ್ಲಿ ಹೃದಯವು ಅತ್ಯಂತ ಕೋಮಲವಾಗಿರುವದು. ಅಂತಹ ಸಮಯದಲ್ಲಿ ಅಭ್ಯಸ್ತವಾದ ವಿಷಯವು ಮರಣ ಪರ್ಯಂತ ಮರೆಯಾಗದು. ಅದಕಾರಣ ತಂತಮ್ಮ ಬಾಲಕರು ಕುಸಂಗವನ್ನು ಮಾಡದ ಹಾಗೆ ಎಚ್ಚರಿಕೆಯಿಂದ ಕಾಪಾಡಬೇಕಾದುದು ಶಿಕ್ಷಿತ ವ್ಯಕ್ತಿಗಳ ಕರ್ತವ್ಯ. ಒಂದು ಕ್ಷಣಕಾಲ ಕುಸಂಗದಲ್ಲಿದ್ದರೂ ಅದರ ಫಲವು ಯಾವಜ್ಜೀವವೂ ಯಾತನೆಯ[illegible] ನ್ನುಂಟುಮಾಡುವ ಶಕ್ತಿಯುಳ್ಳದಾಗಿರುವುದು. [illegible] ಫಲವೂ ಇಹಪರಗಳೆರಡರಲ್ಲಿಯೂ ಸುಖವನ್ನುಂಟುಮಾಡುವ [illegible] ಕು ಸಂಗ ಪ್ರಭಾವದಿಂದ ಕೌರವನ ಕುಲಕ್ಷಯವೂ [illegible] ಗೀತಾರೂಪವಾದ ಬ್ರಹ್ಮೋಪದೇಶವೂ ಆದುದೇ [illegible] ಇಂತಹ ಐತಿಹಾಸಿಕ ದೃಷ್ಟಾಂತಗಳೆಷ್ಟೋ ಇರುವುವು [illegible] ಈ ಸಣ್ಣ ಲೇಖನದಲ್ಲಿ ಸಾಧ್ಯವಲ್ಲ. ಅದಕಾರಣ ಪ್ರಕೃತ

"ನಹ್ಯಮ್ಮಯಾನಿ ತೀರ್ಥಾನಿ ನದೇವಾ [illegible]
ತೇ ಪುನಸ್ತ್ಯುರುಕಾಲೇನ ದರ್ಶನಾದೇವ ಸಾಧವಃ"

ಎಂಬೀ ಭಗವದ್ವಾಕ್ಯವನ್ನು ನಮ್ಮ ವಾಚಕರ [illegible] ಬಯಸುವೆವು.

[illegible]

ದನವಿನ ಗೊಬ್ಬರ. ಈ ದೇಶದಲ್ಲಿ [illegible] ಉಪಯೋಗಿಸುವ ವಾಡಿಕೆ ಇರುವದಷ್ಟೆ, ಇದಕ್ಕೆ [illegible] ಉಪಯೋಗಿಸಿದರೆ ಎಷ್ಟು ಉಪಯೋಗಕರವಾಗಿರ [illegible] ದನವಿನ ಗೊಬ್ಬರದ ವ್ಯವಸಾಯಕ ಪ್ರಯೋಜನವ [illegible] ಜನ್, ಫಾಸ್ಫಾರಿಕ್ ಆಸಿಡ್ ಮತ್ತು ಪೊಟಾಷ್ [illegible] ಕೊಳ್ಳುವದರಿಂದಲೂ (೨) ಈ ಗೊಬ್ಬರವನ್ನು ಉಪಯೋ [illegible] ತ್ಪತ್ತಿ ಹೆಚ್ಚಾಗುತ್ತದೆಂಬುವದರಿಂದಲೂ ಈ ರೀತಿ [illegible] ಎರಡನೆ ವಿಧಾನದ ಮೂಲಕ ಈ ವಿಚಾರವನ್ನು ತಿಳಿದುಕೊ [illegible] ಗಳು ಇನ್ನೂ ಹೊರಪಟ್ಟಿರುವದಿಲ್ಲ. ಗೊಬ್ಬರಗಳ [illegible] ಹಾರಭೂತವಾದ ಪದಾರ್ಥಗಳು ಶೇಕಡಾ ಎಷ್ಟು [illegible] ಬೇಕಾಗುತ್ತೇ. ಹೇಗಂದರೆ ನೈಟ್ರೇಟ್ ಆಫ್ ಪೊಟಾಷ್ [illegible] (Nitrate of Potash) ಶೇಕಡಾ ೧೩ ನೈಟ್ರೋಜನ್, [illegible] ನೈಟ್ರೋಜನ್ ಒಂದು ಪೌಂಡು ತೂಕಕ್ಕೆ [illegible] ಡು ತೂಕಕ್ಕೆ ೧ ಆಣೆಯಂತೆಯೂ ಬೆಲೆಯಾ [illegible] ಈ [illegible] ನೈಟ್ರೇಟ್ ಆಫ್ ಪೊಟಾಷ್ ಗೊಬ್ಬರಕ್ಕೆ ರೂ [illegible] ದರೆ ಈ ಗೊಬ್ಬರದ ವ್ಯವಸಾಯಕ ಪ್ರಯೋಜನವು [illegible] ಕಂದರ, ಇದರಲ್ಲಿರುವ ನೈಟ್ರೋಜನ್ ಮತ್ತು ಪೊಟಾಷ್ ಪ್ರಮಾಣಗಳ [illegible] ವದಿಲ್ಲ. ಸಸಿಗಳು ಶೇಕಡಾ ೪೦ ಪೊಟಾಷಿಗೆ ಶೇಕಡಾ [illegible] ನೈಟ್ರೋಜನ್‌ನನ್ನು ಆ ಹಾರವಾಗಿ ಉಪಯೋಗಿಸುವದಿಲ್ಲವಾದಕಾರಣ ಪೊಟಾಷ್ [illegible] ಉಪಯೋಗ ಪಡದೆ [illegible] ನಿಂತುಹೋಗಿ ವ್ಯರ್ಥವಾಗುತ್ತದೆ.

[illegible] ದಲ್ಲಿಯಾದರೂ ಈ ಅಂಗಗಳು [illegible] ಪ್ರಮಾಣದಲ್ಲಿರುತ್ತ ವೆಯಾದಕಾರಣ ಪೈರುಗಳನ್ನು ಪರಿವರ್ತನೆಯಿಂದ ಕ್ರಮವಾಗಿ ಇಟ್ಟದ್ದೇ ಆದರೆ ಸಸ್ಯಾಹಾರವು ಕ್ರಮವಾಗಿ ಒರುತ್ತದೆ. ಆದ್ದರಿಂದ ಇದನ್ನು ಗೊಬ್ಬರವಾಗಿ ಉಪಯೋಗಿಸು ವದು ಒಲೆ ಉಪಯೋಗಿಸುವದಕ್ಕೆ ಮಾರುವುದರಲ್ಲಿ ಒರತಕ್ಕ ಬೆಲೆಗಿಂತ ಹೆಚ್ಚು ಲಾಭ ಕರವೆಂದು ಹೇಳಬಹುದು. ಈರೀತಿ ಮಾರುವ ಸಣಿಗೆಯಲ್ಲಿ ಶೇಕಡಾ ೧ ನೈಟ್ರೋಜನ್, ಶೇಕಡಾ ೧ ಫಾಸ್ಫಾರಿಕ್ ಆಸಿಡ್, ಶೇಕಡಾ ೧। ಪೊಟಾಷ್ ಇರುವುದೆಂದು ಲೆಕ್ಕ ಮಾಡಿದ್ದಾದರೆ ಮೇಲೆ ಹೇಳಿದ ದರದ ಮೇರಿಗೆ ೮೦ ಪೌಂಡು ಅಂದರೆ ಒಂಗಾಳ ಮಣಕ್ಕೆ ೦ ೧೧-೬ ಬೆಲೆ ಆಗುತ್ತೆಂದು ಇಟ್ಟುಕೊಳ್ಳಬಹುದು. ಒಲೆ ಉರಿಸುವದಕ್ಕೆ ಮಾರಿದ್ದಾದರೆ ಮಣಕ್ಕೆ ೦-೩-೬ ಬೆಲೆ ಸಿಕ್ಕುತ್ತೆ. ಆದ್ದರಿಂದ ಇದನ್ನು ಗೊಬ್ಬರವಾಗಿ ಉಪಯೋಗಿಸುವದು ಹೆಚ್ಚು ಲಾಭಕರವೆಂದು ಸ್ಪಷ್ಟಪಡುತ್ತದೆ.

ಕೆ. ವ್ಯ. ಗ.

ಜಪಾನ್ ದೇಶದ ಚಾಪೆ ಕೈಗಾರಿಕೆ. ಜಪಾನ್ ದೇಶದಲ್ಲಿ ಜನರು ಕೈಗಾರಿಕೆ ವಿಷಯಗಳಲ್ಲಿ ತೋರಿಸುತ್ತಿರುವ ಅಭಿವೃದ್ಧಿಯನ್ನು ತಿಳಿದುಕೊಂಡಿದ್ದಾದರೆ ಈ ದೇಶದ ಜನರು ಇದರಿಂದ ಅನೇಕ ಸಂಗತಿಗಳನ್ನು ಕಲಿಯಬಹುದು. ಈಚೆಗೆ ಕೆಲವು ವರ್ಷಗಳಿಂದ ಜಪಾನ್ ದೇಶದಲ್ಲಿ ಚಾಪೆಗಳನ್ನು ಹೆಣೆಯುವ ಒಂದು ಕೈಗಾರಿಕೆಯು ಅಭಿವೃದ್ಧಿಗೆ ಬರುತ್ತಿದೆ. ೧೯೦೮ನೇ ಇಸವಿ ಆಗಾಯಿತು ೧೯೦೭ನೇ ಇಸವಿವರೆಗೆ ಚಾಪೆ [illegible] ವ್ಯಾಪಾರವು ೩೬೦೦೦ ಪೌನಿನಿಂದ ೫೮೦೦೦೦ ಪೌನ್‌ವರೆಗೆ ಹೆಚ್ಚುತ್ತದೆ. ಈ ಚಾಪೆಗಳನ್ನು ಒಂದು ವಿಧವಾದ ಜೊಂಡಿನಿಂದ ಮಾಡುತ್ತಾರೆ. ಬತ್ತದ ಗದ್ದೆಗಳಲ್ಲಿ ಬತ್ತದ ಸಾಗುವಳಿಗೆ ಕುಂದಕವಾಗದ ರೀತಿ ಈ ಜೊಂಡನ್ನು ಬೆಳೆಯುತ್ತಾರೆ. ಇದಕ್ಕೆ ಕ್ರಮವಾಗಿ ಗೊಬ್ಬರ ಹಾಕುವದುಂಟು. ಕತ್ತರಿಸಿದ ನಂತರ ಕೆಲವು ದಿನ ಬಿಸಿಲಿನಲ್ಲಿ ಒಣಗಿಸುತ್ತಾರೆ. ನಂತರ ಇದನ್ನೆಲ್ಲಾ ಕೂಡಿಸಿ ಉದ್ದದ ಪ್ರಕಾರ ವಿಂಗಡಿಸಿ ಅವಶ್ಯಕವಿದ್ದರೆ ಬಣ್ಣ ಹಾಕುತ್ತಾರೆ. ಈ ಚಾಪೆ ವ್ಯಾಪಾರವನ್ನು ಜಪಾನ್ ದೇಶದಲ್ಲಿ ಎರಡು ತರವಾಗಿ ನಡಿಸುವದುಂಟು. (೧) ಕೊಂಡು ಕೊಳ್ಳುವವರು ಕೇಳುವ ಮಾದರಿಗಳನ್ನು ಅನುಸರಿಸಿ ತಯಾರ್ಮಾಡುವದು (೨) ಹಿಂದಿನ ಅನುಭವವನ್ನು ನೋಡಿಕೊಂಡು ಹೆಚ್ಚಾಗಿ ವಿಕರಿಯಾಗುವ ಚಾಪೆ ಮಾದರಿಗಳನ್ನೇ ತಯಾರ್ಮಾಡಿ ಕೂಡಿಡುವದು. ಪಟ್ಟಿಗಳು ಒಂದಿರುವ ೪೦ ಗಜದುದ್ದ ಚಾಪೆಯ ಸುರುಳಿಯು ಜಪಾನಿನಲ್ಲಿ ೬ ರೂಪಾಯಿ ಬೆಲೆ ಆಗುತ್ತೆ. ಈಚೆಗೆ ಈ ಚಾಪೆ ಕೈಗಾರಿಕೆಯನ್ನು ಮೇಲ್ತನಿಖೆ ಮಾಡುವದಕ್ಕಾಗಿ ಒಂದು ಇನ್ಸ್‌ಪೆಕ್ಷನ್ ಆಫೀಸ್ ಏರ್ಪಡಿಸಿರುತ್ತಾರೆ. ಕಾಟಪೊಟಿ ಕೆಲಸಕ್ಕೆ ಆಸ್ಪದ ಕೊಡದೆ ಉತ್ತಮ ತರಹೆ ಚಾಪೆಗಳನ್ನೇ ತಯಾರಾಗುವಂತೆ ಮಾಡುವದೂ ಈ ಸಂಬಂಧವಾದ ವ್ಯಾಪಾರವನ್ನು ಬದ್ರಪಡಿಸುವದೂ ಇದರ ಮುಖ್ಯೋದ್ದೇಶಗಳಾಗಿರುತ್ತವೆ. ಈ ಆಫೀಸಿನವರು ಚಾಪೆಗಳನ್ನು ನೇಯುವದು ಇವುಗಳಿಗೆ ಬಣ್ಣ ಕೊಡುವದು ಮತ್ತು [illegible] ಉತ್ತಮ ಸ್ಥಿತಿಗೆ ತರುವ ವಿಚಾರಗಳಲ್ಲಿಯೂ ಸಹ ಉಜಮಾಹಿಯಿಸಿ [illegible] ಇದಲ್ಲದೆ ಚಾಪೆಯನ್ನು ಹೆಣೆಯುವ ಅನೇಕ ತರಹೆ ಮ[illegible] ಪ್ರ[illegible] ಕೆಲ[illegible] ತೋರಿಸುತ್ತಾರೆ. ಈ ಸೀಮೆಯಲ್ಲಿ ಕೂಡ ದರ [illegible] ಇಲ್ಲಿಯೂ ಇಂಥಾ ಕಸ[illegible] ಅಭಿವೃದ್ಧಿಗೆ [illegible]

ಕೆ. ವ್ಯ. ಗ.

ಸತ್ಕಾರ್ಯ ಸಹಾರ.

[illegible]

[illegible] ನಮ್ಮ ಸಾಹುಕಾರ [illegible] "ಖಾನ್ ಸಾಹೇಬ್" [illegible] ಈ ಸಭೆ [illegible] ಈ ಊರಿನ ಎಲ್ಲಾ ಹುದ್ದೆ [illegible] ಕೆಲವರು ಸಾವುಕಾರರೂ ಇತರ [illegible] ಸಮಯಕ್ಕೆ ಸರ್ವರೂ ನಿಕ್ಕೋ [illegible] ಹಿಂದ ಮಹನೀಯರಿಗಲ್ಲ ಪ್ರತ್ಯ [illegible] ಕೂಡಿದ ಚಾ ಕಾಪಿ ಪಾನ [illegible] ಖಾನ್‌ಸಾಹೇಬರ ಪ್ರೋತ್ಸಾ [illegible] ತಮ್ಮ ವಾದ್ಯವನ್ನು ಬಾರಿಸಿ ಕರ್ಣಾ [illegible] ಹೋಗಿ ಅಲ್ಲ [illegible] ತಿಮ್ಮಯ್ಯ [illegible] ಬಾರಿಸಿದ ಜಲತ [illegible] ಹಸ್ತಲಾಘವಕ್ಕೂ [illegible] ಜ್ಞಾನಕ್ಕೂ [illegible] ಬಿ. ಎಲ್, ಇವರು [illegible] ಇಂಗ್ಲಿಷಿನಲ್ಲಿ ಓದಿ ತಿಳಿಸಿದರು. ಆ ಮೇಲೆ [illegible] ಸತ್ಯವಿಜಯ ನಾಟಕವನ್ನು ಇಲ್ಲಿಯ ನಾಟಕ ಕಂಪೆನಿಯವರು [illegible] ತೋರಿಸಿದರು.

[illegible] ಹೊತ್ತಿನ ಸಭೆಯ ಉದ್ದೇಶವನ್ನು ಸೂಚಿಸಿ [illegible] ಸಾಹೇಬರವರ ಪರೋಪಕಾರ ಬುದ್ಧಿಯನ್ನೂ, ಭೂತದಯೆ [illegible] ಉದಾರ[illegible]ವನ್ನೂ [illegible] ಸರಕಾರದವರು ಅವರಿಗೆ ದಯಮಾಡಿದ ಈ [illegible] ರವಕ್ಕೆ ತುಂಬಾ ಪಾತ್ರರೆಂತಲೂ, ಇದಕ್ಕಾಗಿ ಈ ಶಹರದ ನಿವಾಸಿಕರೆಲ್ಲರೂ ಸಂತೋಷ ಪಡುತ್ತಾರಲ್ಲದೆ ಸರಕಾರಕ್ಕೆ ಕೃತಜ್ಞತೆ ಉಳ್ಳವರಾಗಿದ್ದಾರೆಂತಲೂ ಇಂಗ್ಲಿಷಿನಲ್ಲಿ ಸೂಚಿಸಿದರು. ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿ ಖಾನ್ ಸಾಹೇಬರು ಆಸ್ಪತ್ರೆಯ ಉಪಯೋಗದ ಬಗ್ಗೆ ಒಂದು ಚಲೋ ಕಟ್ಟೋಣವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟು ಶಾಶ್ವತವಾದ ವೃತ್ತಿಯನ್ನು ಕಲ್ಪಿಸಿದ್ದೂ, ಒಂದು ಛತ್ರವನ್ನು ಕಟ್ಟಿಸಿ ಕೊಟ್ಟದ್ದೂ, ಇಲ್ಲಿ ಸ್ಥಾಪಿಸಬೇಕಾಗಿ ನಿಶ್ಚೈಸಿರುವ ಹೊಲೆಯರ ಶಾಲೆಗೆ ತಕ್ಕ ಕಟ್ಟೋಣವನ್ನು ಕಟ್ಟಿಸಿಕೊಟ್ಟು ಹೊಲೆಯರ ಮಕ್ಕಳಿಗೆ ಬೇಕಾದ ಬಟ್ಟೆಬರೆಗಳು ಕೊಡುವದಕ್ಕೆ ಸಹಾಯ ಮಾಡುವದಾಗಿ ವಾಗ್ದಾನ ಮಾಡಿದ್ದೂ, ಪ್ರತಿನಿತ್ಯ ಬಡಬಗ್ಗರಿಗೆ ಅಕ್ಕಿ, ರೊಕ್ಕ, ಅನ್ನ ಮೊದಲಾದವುಗಳ ದಾನ ಮಾಡಿಸುವದೂ ಇನ್ನೇ ಮೊದಲಾದ ಅವರ ಸದ್ಗುಣಗಳನ್ನು ಪ್ರಶಂಶಿಸಿ ಮ. ರಾ. ವಕೀಲ್ ವೆಂಕಟೇಶ ಪ್ರಭು ಬಿ. ಎ. ಇವರೂ, ಡಾಕ್ಟರ್ ಮ[illegible]ಯುಸರವರೂ, ಖಾನ್ ಸಾಹೇಬರ ಬಂಧುಗಳೊಬ್ಬರೂ ಮಾತಾಡುವ ವರಾದರು.

[illegible]ವರೆಲ್ಲರಿಗೆ ಉತ್ತರ ರೂಪವಾಗಿ ಖಾನ್ ಸಾಹೇಬರು ವಂದನ ಪೂರ್ವಕವಾಗಿ ಎದ್ದು ನಿತ್ತು ತನಗೆ ದಯಾಳು ಸರಕಾರವು ದಯಪಾಲಿಸಿದ ಈ ಬಹುಮಾನಕ್ಕಾಗಿ ಸಂತೋಷಪಡುವ ಈ ಶಹರದ ಅಶೇಷ ನಿವಾಸಿಕರೆಲ್ಲರಿಗೂ ಈ ದಿವಸ ತೋರ್ಪಡಿಸಿದ ತಮ್ಮ ವಿಶೇಷಾದರಕ್ಕಾಗಿ ಈ ಕ್ಲಬ್ಬಿನ ಮೆಂಬರುಗಳೆಲ್ಲರಿಗೂ ತಾನು ಕೃತಜ್ಞನಾಗಿರುತ್ತೇನೆಂತಲೂ; ತಾನು ಈ ವರೆಗೆ ಮಾಡಿದ ಪರೋಪಕಾರ್ಯಗಳು ಅತ್ಯಲ್ಪವಾಗಿದ್ದಾಗ್ಯೂ ಸಂದರ್ಭ ಒದಗಿದಾಗ ಸರ್ವರಿಗೂ ತನ್ನ ಕೈಲಾದ ಉಪಕಾರವನ್ನು ಮಾಡುವರೆ ಸಿದ್ಧವಾಗಿರುವೆನಾಗಿಯೂ, ಈ ದಿವಸ ಈ ಮಹನೀಯರೆಲ್ಲರು ದಯಮಾಡಿ ಸಹನೆಯಿಂದ ಈ ಸಭೆಯನ್ನು ಅಲಂಕರಿಸಿದ್ದಕ್ಕಾಗಿ ತಾನು ಸರ್ವರಿಗೂ ಪುನಃ ಪುನಃ ಮನಃಪೂರ್ವಕವಾಗಿಯೂ ವಂದಿಸುತ್ತೇನೆಂತ ಗಂಬೀರವಾದ ಇಂಗ್ಲಿಷ್ ವಾಣಿಯಿಂದ ಉತ್ತರ ಕೊಟ್ಟರು ಮ ರಾ ವೆಂಕಟೇಶ ಪ್ರಭುಗಳ ಸೂಚನಾನುಸಾರ ಇಂಡಿಯಾ ಚಕ್ರವರ್ತಿಯರಿಗೂ, ಮದ್ರಾಸು ಗವರ್ನರವರಿಗೂ, ಗವರ್ನರವರ ಪ್ರತಿನಿಧಿಯಾದ ನಮ್ಮ ಡಿವಿಜನಿನ ಕಲ್ಲೆಕ್ಟರವರಿಗೂ ಮೂರು ಮೂರಾವರ್ತಿ ಜಯ ಘೋಷ (Cheers) ಗಳನ್ನು ಅರ್ಪಿಸಿ ಸರ್ವರೂ ಸುಮಾರು ೧೦ ಘಂಟೆ ರಾತ್ರಿಗೆ ಸ್ವಸ್ಥಾನಗಳನ್ನು ಸೇರಿದರು ಖಾನ್ ಸಾಹೇಬರಿಗೂ ಅವರ ಕುಟುಂಬಕ್ಕೂ ಆಯುರಾರೋಗ್ಯೈಶ್ವರ್ಯವನ್ನೂ, ಇತೋಪ್ಯಧಿಕವಾದ ಪರೋಪಕಾರ ಬುದ್ಧಿಯನ್ನೂ ಈಯಲೆಂದು ಸರ್ವಾ[illegible]ಯಾಗಿಯೂ ಕ್ಷೇತ್ರಪಾಲಕನಾಗಿಯೂ ಇರುವ ಶ್ರೀ ಕೃಷ್ಣನನ್ನು ನಾನೂ ಪ್ರಾರ್ಥಿಸುವೆನು

ಒಂದು ಮತದ ಮುಖಂಡರಾದ ಖಾನ್ ಸಾಹೇಬರ ಸದ್ವರ್ತನೆಗಾಗಿ ಸರಕಾರದವರೂ ಇದೀ ಜಿಲ್ಲೆಯವರೂ [illegible] ಶ್ಲಾಘಿಸುತ್ತಿರುವಾಗ ಇನ್ನೊಂದು ಮತದ ಮುಖಂಡರಾದ—ಸಿಕ್ಷಿತರಾಗಿಯೂ ಮುಖಂಡರಾದ—ಇದವಾರು ಮರದ ವ್ಯಾಸಾಚಾರ್ಯರಿಗೆ [illegible] ಕ್ರಿಮಿನಲ್ ಮೊಕದಮೆಯಲ್ಲಿ [illegible]ಯಾಯಿತೆಂತ ಸ್ವದೇಶಾಭಿಮಾನಿ ಪತ್ರಿಕೆಯ [illegible] ಸಂಚಿಕೆಯಲ್ಲಿದ್ದದ್ದನ್ನು ಕಂಡು [illegible] ಖೇದ ಪಡದೆ ಇರಲಾರರು ಈ ಮೊಕದಮೆಯಲ್ಲಿ [illegible] ಅಪರಾಧಿಗಳಿಗೆ [illegible] ನಡೆಸಿ[illegible] ತಿಳಿದಿರುವ ವಿಷಯವೇ [illegible] ಅವಿವೇಕಿಗಳಾಗಿಯೂ, ದುರಹಂಕಾರಿಗಳಾಗಿಯೂ ಕೇವಲ ಸ್ವಾರ್ಥಪರರಾಗಿಯೂ [illegible]ಗಳಿಂದಲೂ ಅಲ್ಪರಾಗಿಯೂ ಇರತಕ್ಕ ಮನುಷ್ಯರನ್ನು [illegible] ಅವರ ಸ್ವರೂಪಕ್ಕಿಂತಲೂ ಹೆಚ್ಚಿನ [illegible] ಪೂಜ್ಯತೆಯನ್ನು ಕೊಟ್ಟ [illegible] ಕಷ್ಟದ [illegible] ಇನ್ನಾದರೂ ತಮ್ಮ [illegible]

ಉಡುಪಿ
೨೬ ೭ ೦೯

ಹಿಂದು

ಮಂಗಳೂರಿನ ವಕೀಲ ಮ. ರಾ. ರಾ. ಉಪೇಂದ್ರ [illegible] ಸುಬ್ರಾಯ ಪೈಗಳವರ ನಿಧನಾಷ್ಟಕವು—

ಪೈ ಇತ್ಯುಪಾಖ್ಯಾಯುಗುಪೇಂದ್ರಸೂನುಃ
ಸುಬ್ರಾಯಶರ್ಮಾ ಕೃತದಾನಧರ್ಮಃ ।
ವಿದ್ಯಾಭಿವೃದ್ಧೌ ಕುಶಲಃ ಸದಾಸೀ-
ತ್ಸ್ವರ್ಗಂ ಗತೋಽಭೂದಧುನಾ ಸ ವಿದ್ವಾನ್
ಸೋಽಯಂ ಹ್ಯಪೂರ್ವೋ ಮಹಿಮಂಡಲಾರ್ಕ—
ಸ್ತ್ಯಕ್ತ್ವಾ ಜನೋಽಸ್ತಂ ಗತವಾನಿದಾನೀಮ್ ।
ಹಾ ಗೌಡಸಾರಸ್ವತವಿಪ್ರಚಕ್ರ—
ವಾಕಪ್ರಹರ್ಷೇ ಧೃತನಿತ್ಯದೀಕ್ಷಃ ॥ ೨ ॥
[illegible]ಂತರ್ಹಿತೋಽಭೂದಿವ ಭಾಸ್ಕರೇಣ
ಮನುಷ್ಯರೂಪೋ ವಿಹಿತೋಽವತಾರಃ ।
[illegible]ಸಸ್ವಾಂತವಿಬೋಧನಾಖ್ಯ—
ಪದ್ಮಪ್ರತೋಷೀ ನಿತರಾಂ [illegible] ॥ ೩ ॥
[illegible]ಂ ನ [illegible] ರಶಾ [illegible]—
[illegible] ರಶ್ಮಿ[illegible]ತಾವಾತ್ ।
[illegible] ಕನ್ನರೀರೋ [illegible] ದಾನಾ—
[illegible]ಯಂ ದೇವಗುರುಃ ಸುವಾಕ್ಯಾತ್ ॥ ೪ ॥
[illegible] ದನಾನಾಂ [illegible]ದೋಯಮಾಸೀ—
[illegible] ದಿಷಣಶ್ಚ ಸಾಕ್ಷಾತ್ ।
[illegible]ರತ್ನಂ
[illegible]ಹಿತಂ ಸಂಪ್ರತಿ ನಃ ಕುದೈವಾತ್ ॥ ೫ ॥
[illegible]ನೇನ ಹೀನಾ ಅಧುನಾ ಜನಾಃ ಸ್ವೇ
ಪರೇ ಚ ಕೇಚಿದ್ಭುವೋ ವಿಷಣ್ಣಾ ।
ಸೂರ್ಯೇ ಗತೇಽಸ್ತಂ ಸತಿ ಚಕ್ರವಾಕಾ
ಯದಾ ಯಥಾ ವಾ[illegible] ಕೋಽರಾಃ ॥ ೬ ॥
ತಸ್ಮೈ [illegible] ಪ್ರತನೋತು ಶಾಂತಿಂ
[illegible]ಸೋಽಖಿಲ[illegible]ರ್ಮಸಾಕ್ಷಿ ।
ಲೋಕೇ [illegible] ತತಂ ನಿತಾಂತಂ
[illegible] ದಿವಂ ಗತಾಯ ॥ ೭ ॥
ತಥಾ ದದಾತೂಷ್ಣಕರೇ ಗತೇಽಸ್ತಂ
ದೇವೋ ಯದಾ ಶೀತಕರಂ ಜಗತ್ಯೈ ।
ಯಥಾಪವಾ ಶೀತಕರೇ ಗತೇಽಸ್ತಂ
ಪ್ರಭಾಕರಂ ನ ಸುಜನಂ ತದೀಯಮ್ ॥ ೮ ॥

ಉಪ್ಪಿನಂಗಡಿಸ್ಥ

ವಿದೇಶ ವೃತ್ತಾಂತ

ಲಾಹೋರಿನಲ್ಲಿರುವ ದಯಾನಂದ [illegible] ಕೊಲೇಜಿನ ವಧಂತಿ ಉತ್ಸವವನ್ನು [illegible] ತಿಂಗಳಲ್ಲಿ ಲಂಡನಿನಲ್ಲಿ [illegible] ಸೇರಿತ್ತು ಬಾಬು ಸುರೇಂದ್ರನಾಥ [illegible]ವರನ್ನು ಈ ಸಭೆಗೆ ಆಮಂತ್ರಿಸಿದ್ದರು [illegible] ಈ ಸಂದರ್ಭದಲ್ಲಿ ಸಹಾ ನೆರೆದ ವಿದ್ಯಾರ್ಥಿಗಳ [illegible] ವ್ಯತಸ್ಥರಾಗಿದ್ದು ಅದನ್ನು ಯತಾರ್ಥವಾಗಿ ಕೈಕೊಳ್ಳವೆಂದೂ ಕಾಯಿದೆಶೀರ ರೀತಿಗಳನ್ನೇ ಅವಲಂಬಿಸಬೇಕಾಗಿಯೂ ವಿಜ್ಞಾಪಿಸಿದರು

—o—

ಸರ್ ವಿಲಿಯಂ ವಿಲ್ಲಿ ಕರ್ಜನರವರನ್ನು ಕೊಂದ ಮದನ್ ಲಾಲಡಿಂಗ್ರನ ವಿಚಾರಣೆಯು ಮುಗಿದು ಆತನಿಗೆ ಮರಣದಂಡನೆಯನ್ನು ವಿಧಿಸಿರುವರು

ಮದನಲಾಲನು ವಿಚಾರಣೆಯ ಸಮಯದಲ್ಲಿ ತನ್ನ ಕಡೆಯಿಂದ ವ್ಯವಹರಿಸಲಿಕ್ಕೆ ವಕೀಲನು ಸಹಾ ಬೇಡವೆಂತ ತಿರಸ್ಕರಿಸಿರುವನಂತೆ

ಇಂಡಿಯನ್ ಸೋಶಿಯಲೋಜಿಸ್ಟ್ ಎಂಬ ಪತ್ರಿಕೆಯು ಶಾಮಾಜಿ ಕೃಷ್ಣವರ್ಮರೆಂಬವರಿಂದ ರಚಿಸಲ್ಪಟ್ಟು ಲಂಡನಿನಲ್ಲಿ ಛಾಪಿಸುತಿದ್ದ ಮುದ್ರಾಲಯದ ಮಾಲಿಕರಿಗೆ ಈ ಪತ್ರಿಕೆ[illegible] ರಾಜದ್ರೋಹಪರವಾದದ್ದೆಂತ ಪ್ರವಸ [illegible] ರದಲ್ಲಿ [illegible] ತಿಂಗಳ ಸಜಾ ವಿಧಿಸಲ್ಪಟ್ಟಿರುವದು

ಫ್ರಾನ್ಸ್ ದೇಶಕ್ಕೂ ಇಂಗ್ಲೆಂಡಕ್ಕೂ ಮಧ್ಯದ [illegible] ಕಾಲುವೆಯನ್ನು ಆಕಾಶದಲ್ಲಿ ಹಾರಿ ದಾಟಲಿಕ್ಕೆ [illegible] ಒಂದು [illegible] ವಾಹನ [illegible] ದಾಟಲಿಕ್ಕೆ ಪ್ರಯತ್ನಿಸಲು [illegible] ಮೈಲ್ [illegible] ಪತ್ರವು ೧೦೦೦ ಪವನನ್ನು [illegible]ತವಾಗಿ ಇಟ್ಟಿತ್ತು [illegible]ರವರು ಕೆಲವು ದಿವಸದ ವರೆಗ ತಕ್ಕದ [illegible] ಗಾಳಿಯು ಸಿಕ್ಕುವ ವರ[illegible] ಕಾದುಕೊಂಡು ಈ ತಿಂಗಳ [illegible]ರಲ್ಲಿ ತಮ್ಮ ಈ ನವೀನ ವಾಹನದಲ್ಲಿ ಕೆಲೈಸ್ [illegible]ಲ್ಲಿಂದ ಈ ಕಾಲುವೆಯನ್ನು ದಾಟಲು ಹೊರಟರು ಆಕಾಶದಲ್ಲಿ ಹಾರಾಡಿಕೊಂಡು 6¼ ಮೈಲುಗಳ ವರೆಗ ಏರಲು ಇವರಿಗೆ ಸಾಧ್ಯವಾಯಿತು ಆದರೆ ಈ ವಾಹನದ ಒಂದು ಯಂತ್ರವು ಇಷ್ಟರಲ್ಲಿ ಹಾಳಾದ್ದರಿಂದ ಪೂರ್ಣವಾಗಿ ದಾಟಲಿಕ್ಕೆ ಆಗಲಿಲ್ಲ

ತುರ್ಕ್ಯದಲ್ಲಿ ಹೊಸತಾಗಿ ಅಧಿಕಾರಕ್ಕೆ ಬಂದ ನವೀನ ಸರಕಾರದವರಿಂದ ೧೩ ಜನರಿಗೆ ಪ್ರಾಣಾಜ್ಞೆ ಮಾಡಲ್ಪಟ್ಟಿರುವುದು ಇವರಲ್ಲಿ ಏಳು ಜನ ಆಫೀಸರರವರೂ, ಒಬ್ಬ ಪತ್ರಿಕಾಕರ್ತರೂ ಇರುವರು.

ಅಫ್ಘಾನಿಸ್ತಾನದ ಅಮೀರರವರು ಇನ್ನೂ [illegible] ಕಾಹಿಲೆಯಲ್ಲೇ ಇರುವರೆಂತ ತಿಳಿದುಬರುತ್ತದೆ. [illegible] ಸ್ಥಿತಿಯು ಅಷ್ಟು ಕಠಿಣವಲ್ಲದಿದ್ದರೂ ಕಾಹಿಲೆ ಸ್ಥಿತಿ [illegible] ಇರುವುದು

[illegible]ಂದ ಭಯಂಕರವಾದ ಒಂದು ಸಮಾಚಾರ [illegible] ದೊರೆತದೆ [illegible]ರಲ್ಲಿ ಒಂದು ಪಂಗಡದವರ [illegible] ಒಂದು [illegible]ಯಲ್ಲಿ ಹೊಕ್ಕಿದ್ದರು ಸರಕಾರ [illegible] ಅವರನ್ನು ಶರಣಾಗತರಾಗಬೇಕೆಂದು ಹೇಳಿದ್ದಕ್ಕೆ ಈ [illegible]ಯಲ್ಲಿರುವವರು ತಿರಸ್ಕರಿಸಿದ್ದರಿಂದ [illegible] ವಾಗಿಲಲ್ಲಿ ದೊಡ್ಡ ಬೆಂಕಿಯನ್ನು ಮಾಡಿ ಈ ಬೆಂಕಿಯ ಹೊಗೆ ಎಲ್ಲಾ ಗವಿಯಲ್ಲಿ ತುಂಬಿ ಒಳಗಿರುವವರಿಗೆ ಉಸುರು ಬಿಡಲಿಕ್ಕೆ ಉಪಾಯವಿಲ್ಲದೆ ಎಲ್ಲರೂ ಉಸುರು ಕಟ್ಟಿಯೇ ಮೃತರಾದರು ಈ ರೀತಿ ೫ ಜನ ಗಂಡಸರೂ ೧೩ ಜನ ಹೆಂಗಸರೂ ೧೧ ಜನ ಮಕ್ಕಳೂ ಹತರಾದರು

ಬರುವ ತಿಂಗಳ ಪ್ರಥಮ ವಾರದಲ್ಲಿಯೇ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಹಿಂದೂಸ್ಥಾನದ ಬಜೆಟ್ ಯಾ ಆದಾಯ ವೆಚ್ಚದ ಅಂದಾಜು ಪಟ್ಟಿಯು ಚರ್ಚಿಸಲ್ಪಡುವುದು

ಬಾಬು ಸುರೇಂದ್ರನಾಥ ಬೆನರ್ಜಿಯವರು [illegible]ಯಿಂದ ಹೊರಟಿರುವರು. ಇವರು ಹೊರಡುವ ಸಂದರ್ಭದಲ್ಲಿ ಬೆನರ್ಜಿಯವರನ್ನು ವಂದಿಸಲಿಕ್ಕೆ ಹಲವು ಜನ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯವರೂ ಇತರರೂ [illegible]

ಈ ಸಭೆಯಲ್ಲಿ ಸಹಾ ಬೆನರ್ಜಿಯವರೂ ಸಭಾಧ್ಯಕ್ಷರಾದ ಸರ್ ಹೆನ್ರಿ ಕೊಟನ್‌ರವರೂ ಬಂಗಾಳದಲ್ಲಿ [illegible] ಜನರಿಗಾದ ತಿಪಾರಿನ ವಿಷಯವನ್ನೂ ವಂಗಭಂಗವನ್ನೂ ಕುರಿತು ಮಾತಾಡಿದರು

ಮೆ। ಮೆಕರ್‌ನೆಸ್ ಎಂಬ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯವರು ಬಂಗಾಳದಲ್ಲಿ ಶಾಂತತೆಯನ್ನುಂಟುಮಾಡಲಿಕ್ಕೆ ವಂಗಭಂಗದ ವಿಷಯ ಪುನರಾಲೋಚನೆ ಮಾಡುವರೋ ಏನೆಂಬದನ್ನು ಬ್ರಿಟಿಷ್ ಮಂತ್ರಿಯರ ಹತ್ತರ ವಿಚಾರಿಸಿದ್ದಲ್ಲಿ ವಂಗಭಂಗವು ನಿಶ್ಚಲವಾದ ಸಂಗತಿಯಾಗಿರುವದೆಂದೂ ಅದನ್ನು ಮಾರ್ಪಡಿಸಲಿಕ್ಕೆ ಆಗಲಿಕ್ಕಿಲ್ಲವೆಂದಾಗಿಯೂ ಉತ್ತರಕೊಟ್ಟಿರುವರು

ಉತ್ತರಹಿಂದುಸ್ಥಾನ

ಈ ತಿಂಗಳ [illegible]ನೇ ಶನಿವಾರ ಲಾಹೋರ [illegible] ಯನ್ ಎಸೋಸಿಯೇಶನ್ ಯಾ ಭಾರತೀಯ [illegible] ವರ ಸಭೆಯು ಕೂಡಿತ್ತು ಲಾಲಾ [illegible] ಸಭಾಧ್ಯಕ್ಷರಾಗಿದ್ದರು ಸಭೆಯವರು ರಿಪನ್ [illegible] ಮರಣದ ಸಹಸಂತಾಪ ಸೂಚನೆಯನ್ನು [illegible] ಟುಂಬದವರಿಗೆ ತಿಳಿಯಪಡಿಸಬೇಕೆಂದು [illegible] ಲ್ಲದೆ ಸರ್ ವಿ[illegible]ಯಂ ವಿಲ್ಲಿ, ಮತ್ತು [illegible] ಕಾಕಾರವರ ಕೊಲೆಯ ತಮ್ಮ ಅಸಹ್ಯಭಾವದ [illegible] ವನ್ನು ಸಹಾ ಮಾಡಿರುವರು ಮೋರ್ಲೆ ಪ್ರಜ[illegible] ವ್ಯಭಾರ ಮಾರ್ಪಾಟಗಳಲ್ಲಿ ಮಹಮ್ಮದೀಯರಿಗೆ ಕೊಟ್ಟ ಹಕ್ಕು ಸ್ವಾತಂತ್ರ್ಯಗಳ ವಿಷಯು ತಮ್ಮ ಸಂಶಯಗಳನ್ನು ತೋರ್ಪಡಿಸಿ ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಹಿಂದೂಸ್ಥಾನದಲ್ಲಿ ಜಾರಿಗೆ ತಂದಿರುವ ಗಡಿಪಾರಿನ ಕಾನೂನನ್ನು ತಿದ್ದಲು ಪ್ರಯತ್ನ ಪಡುತ್ತಿರುವ ಮೆ। ಮೆಕರ್‌ನೆಸ್ ಮೊದಲಾದವರಿಗೆ ಕೃತಜ್ಞತೆಯನ್ನು ತೋರಿ, ಮೆ। ಮೆಕರ್‌ನೆಸ್ ರವರಿಗೆ ಬೆಳ್ಳಿಯ ಚಾ ಕುಡಿಯುವ ಪಂಚ ಪಾತ್ರೆಗಳನ್ನು ಇನಾಮಾಗಿ ಕೊಡುವರೆ ನಿರ್ಣಯಿಸಿರುವರು

ಕಲಿಕತ್ತೆಯ ಹೈ ಕೋರ್ಟಿನಲ್ಲಿ ಕೆಲಸವು ಬಾಕಿ ಬಿದ್ದು ಇನ್ನೊಬ್ಬ ಹೈಕೋರ್ಟ ಜಡ್ಜರವರ [illegible] ಅಗತ್ಯವಿತ್ತು ಈಗಿನ ಆಕ್ಟಿಂಗ್ ಹೈಕೋರ್ಟ ಜಡ್ಜರಾದ ಸರ್ ಲೊರೆನ್ಸ್ ಜೆಂಕಿನ್ಸರವರು ಈ [illegible] ಕೆಲಸವು ಹೆಚ್ಚೆಚ್ಚಾಗಿ [illegible] ಈ ವರೆಗೆ [illegible] ಲೂ ರಜಾದಿನವಾಗಿದ್ದ ಶನಿವಾರ [illegible] ಕೋರ್ಟಿನಲ್ಲಿ ಕೆಲಸ ನಡಿಸಬೇಕಾಗಿ ಆಜ್ಞಾಪಿಸಿರುವರು ಹೀಗೆ [illegible] ನ್ನೊಬ್ಬ ಜಡ್ಜರವರ ನೇಮಕವನ್ನು [illegible] ಸಿದ್ದಿಲ್ಲದೆ ಈ [illegible] ಕದಿಂದಾಗುವ ಭಾರತೀಯರ ಭಂಡಾರದ [illegible] ಸಹಾ ಇವರು ಉಳಿಸಿದಂತಾಯಿತು

ಛಾಪಖಾನೆಗಳನ್ನಿಡುವ ಮೊದಲು ಸರಕಾರದವರಿಗೆ ಈ ವಿಷಯ ಪ್ರಮಾಣ ಮುಚ್ಚಳಿಕೆಯನ್ನು ಕೊಟ್ಟು ಸರಕಾರದವರಿಂದ ಈ ಮುಚ್ಚಳಿಕೆಯು ಅಂಗೀಕರಿಸಲ್ಪಡಬೇಕು ಕಲಿಕತ್ತೆಯ ಚೀಪ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರವರು ಗಿರಿಜಾಸುಂದರ ಚಕ್ರವರ್ತಿ ಎಂಬವರ ಮತ್ತು ಮನಮೋಹನ್ ಘೋಷರವರ ಮುಚ್ಚಳಿಕೆಗಳನ್ನು ಅಂಗೀಕರಿಸಿರುವರು. ಗಿರಿಜಾಸುಂದರ ಚಕ್ರವರ್ತಿಯವರು 'ವಂದೇ ಮಾತರಂ' ಪತ್ರಿಕೆಯ ಮೆನೇಜರರಾಗಿದ್ದು ಪ್ರಕೃತ ಗಡಿಪಾರು ಮಾಡಲ್ಪಟ್ಟ ಶಾಮಸುಂದರ ಚಕ್ರವರ್ತಿಯವರ ಸಹೋದರರಾಗಿರುವರು - ಮನಮೋಹನ್ ಘೋಷರವರು ಬಾಬು ಅರವಿಂದ ಘೋಷರವರ 'ಕರ್ಮಯೋಗಿನಿ' ಎಂಬ ಪತ್ರಿಕೆಯನ್ನು ಛಾಪಿಸಲು ಈ ಮುಚ್ಚಳಿಕೆಯ ಅಂಗೀಕಾರವನ್ನು ಪಡೆದಿರುವರು. ಮನಮೋಹನರವರು ನವಶಕ್ತಿಯನ್ನು ಛಾಪಿಸುತ್ತಲಿದ್ದು ರಾಜದ್ರೋಹ ತಪ್ಪಿಗೋಸ್ಕರ ಆರು ತಿಂಗಳ ಸಜೆಯನ್ನನುಭವಿಸಿರುವರು.

ಸಧ್ಯದಲ್ಲಿಯೇ ಹಿಂದುಸ್ಥಾನದ ಸೈನ್ಯಾಧಿಪತಿಯ [illegible] ಸದಿಂದ ನಿವೃತ್ತರಾಗುವ ಕಿಚನರ್ ಪ್ರಭುಗಳ ಬಹುಮಾನಾರ್ಥವಾಗಿ ಕಲಿಕತ್ತೆಯಲ್ಲಿ ಇವರ ಒಂದು ಪ್ರತಿಮೆಯನ್ನು ಪ್ರತಿಷ್ಠಿಸಬೇಕೆಂಬುವ ನಿರ್ಣಯವು ಹೆಚ್ಚಿನ ಉತ್ಸುಕತೆಯಿಂದ ಅಂಗೀಕರಿಸಲ್ಪಟ್ಟಿದೆ. ಸಿಮ್ಲೆಯಿಂದಲೂ ಹಿಂದೂಸ್ಥಾನದ ಸೈನ್ಯದಿಂದಲೂ ಹೆಚ್ಚಿನ ಆದರಣೆಯು ಈ ಬಗ್ಯೆ ದೊರಕುವುದೆಂಬದಾಗಿ ನಿರೀಕ್ಷಿಸಿರುವರು

ವಿನಾಯಕ ದಾಮೋದರ ಸಾವರ್‌ಕಾರ್ ಎಂಬವರಿಂದ ಮರಾಠಿಯಲ್ಲಾಗಲಿ ಅಥವಾ ಇಂಗ್ಲೀಷ್ ಭಾಷೆಯಲ್ಲಾಗಲಿ ಪ್ರಕಟಿಸಲ್ಪಟ್ಟಿಂದಾ 1857ನೇ ಇಸವಿಯ ಸಿಪಾಯಿಗಳ ದಂಗೆ ವಿಷಯವಾದ ಚಿಕ್ಕ ಪುಸ್ತಕಗಳ ಪ್ರತಿ[illegible] ಮೊದಲಾ[illegible]ದಿಂದಾಗಲಿ ಸಮುದ್ರ ಮಾರ್ಗದಿಂದಾ[illegible] ದೂಸ್ಥಾನಕ್ಕೆ ರವಾನಿಗಲಿಕ್ಕೆ ಕೂಡದೆಂಬದಾಗಿ [illegible] ಆಜ್ಞಾಪಿಸಿರುವರು

ಪೇಶಾವರದ ಹತ್ತರವಿರುವ ಬುದ್ಧಮತ ಸ್ತೂಪಗಳಲ್ಲಿ [illegible] ಸಿಕ್ಕಿರುವುದು ಈ [illegible] ಸಿಕ್ಕದೊಂದು ಪೆಟ್ಟಿಗೆಯಲ್ಲಿ ಸು[illegible] ಸಿಕ್ಕಿರುವವು ಈ [illegible] ಸಾಗಿರಬೇಕೆಂದು [illegible] ರುವರು [illegible] ಪ್ರಕಾರ [illegible] ನ್ನು [illegible] ತೋರುತ್ತದೆ [illegible] ಕಾಲದಲ್ಲಿ ಪೇಶಾವರವನ್ನು ಆಳುತ್ತಿದ್ದ ಕನಿಷ್ಕ ಚಕ್ರವರ್ತಿಯ ಬಿಂಬವನ್ನೂ ಗೌತಮ ಬುದ್ಧನ ಬಿಂಬವನ್ನೂ ಈ [illegible] ತಾಳಿಯ [illegible] ಕೆತ್ತಿರುವುದು

[illegible] ತಿಲಕರವರ 1[illegible] ತಿಳಿಸುವ [illegible] ಕೂಡಿತ್ತು ಮೆ। [illegible] ರವರು ಸಭಾಧ್ಯಕ್ಷರಾಗಿದ್ದರು

ಕಳೆದ ತಿಂಗಳ 30ನೇ ತಾರೀಕಿನಲ್ಲಿ ಕೇಳಿದ ಪ್ರಶ್ನೆಗೆ ತಕ್ಕ ಉತ್ತರವನ್ನು ಕೊಡದ [illegible] ಕ್ರಿಮಿನಲ್ ಮೊಕದ್ದಮೆಯ ಪ್ರತಿವಾದಿಯೊ[illegible] ಸಬ್ ಡಿಪ್ಯುಟಿ ಮಜಿಸ್ಟ್ರೇಟರವರು ತನ್ನ ಪೀಠದಿಂದ ಕಿವಿ ಹಿಡಿದಿರುವರು ಹೀಗೆ ಅಪಮಾನ ಪಡೆದವನು ಡಿಪ್ಯುಟಿ [illegible] ಈ ವಿಷಯವಾಗಿ [illegible] ಮಾಡಿದ್ದ[illegible]ನರವರು ಸಬ್ ಡಿಪ್ಯುಟಿ ಮೆಜಿಸ್ಟ್ರೇಟರು ಈ ವಿಧದಲ್ಲಿ ಕಿವಿ ಹಿಡಿದಿದ್ದು ಸರಿಯಲ್ಲವೆಂದು ಹೇಳಿದ್ದಲ್ಲದೆ [illegible] ದುರ್ನೀತಿಯ ನ್ಯಾಯ[illegible] ನಡಿಸಲಿಲ್ಲವಂತೆ

ಮುಂಬೈ ಪಟ್ಟಣದಲ್ಲಿರುವ ಎಲ್ಲಾ ಆಸ್ಪತ್ರೆಗಳು ರೋಗಿಗಳಿಂದ ತುಂಬಿರುವದರಿಂದ ಸಂಖ್ಯೆಯಲ್ಲಿ ಹೆಚ್ಚುತ್ತ ಒರುವ ರೋಗವು ಎಂದೂ ಗುಣಹೊಂದದ ರೋಗಿಗಳ ಬಗ್ಯೆ ಯಾವ ವಿಲೆವಾರಿಯನ್ನು ಮಾಡುವರಾಗಿ ಮುಂಬೈ ಮುನಿಸಿಪಾಲಿಟಿಯವರನ್ನು ಮುಂಬೈ ಸರಕಾರವು ಕೇಳಿರುವುದು

ಪೇಶಾವರ ಬಳಿಯಿಂದ ಪೋಲೀಸು ವ್ಯಾದೆಶಳಿಂದಾದ್ದದೆಂತ ಒಂದು ಸುಲಿಗೆ ಸಮಾಚಾರವು ಬಂದಿದೆ ಪೇಶಾವರ ಬಳಿಯಲ್ಲಿರುವ ಸದಾರ ಬಜಾರ ಎಂಬಲ್ಲಿಂದ ಒಬ್ಬ ದೊಡ್ಡ ಆಫೀಸರರ ಪತ್ನಿಯರು ಒಂದು ಗಾಡಿಯಲ್ಲಿ ಕೂತುಕೊಂಡು ಪೇಶಾವರ ಪಟ್ಟಣಕ್ಕೆ ಬರುತ್ತಿದ್ದರು. ರಾತ್ರೆ ಒಂದು ಘಂಟೆ ಸಮಯವಾಗಿತ್ತು. ಪೋಲೀಸಿನವರು ಗಾಡಿಗೆ ಒಂದೇ ಲಾಟೆನು ಉರಿಯುವುದನ್ನು ಕಂಡು ಗಾಡಿಯನ್ನು ತಡದು, ಅದು ಎಲ್ಲಿಗೆ ಹೋಗುವುದೆಂಬದನ್ನು ವಿಚಾರಿಸಿದ್ದಲ್ಲಿ ಆ ಸ್ತ್ರೀಯು ಪಟ್ಟಣದಲ್ಲಿರುವ ನೆಂಟರ ಮನೆಗೆ ಒಂದಾನೊಂದ ಸಮ್ಮಂಧವಾಗಿ ಹೋಗುವುದಾ[illegible] [illegible] ಪೋಲೀಸು ಠಾಣ್ಯಕ್ಕೆ ಕೊಂಡು ಹೋಗುವ ಪೋಲೀಸಿನವರ ಇರಾದೆಯನ್ನು ಕಂಡು ಆ ಸ್ತ್ರೀಯು ಅವರಿಗೆ ಎರಡು ರೂಪಾಯಿಗಳನ್ನು ಕೊಟ್ಟಳಂತೆ. ಇವರು ಇದು ಸಾಲದೆಂದು ತಿರಸ್ಕರಿಸಿದ್ದರಿಂದ ಆಫೀಸರರ ಹೆಂಡತಿಯು ತನ್ನ ಕುತ್ತಿಗೆಗೆ ಹಾಕಿಕೊಂಡಿರುವ ಚಿನ್ನದ ಸರದ ಮೇಲೆ ಇವರ ದೃಷ್ಟಿ ಇರುವುದೆಂದು ತಿಳಕೊಂಡು ಬೇರೇನೂ ಉಪಾಯವಿಲ್ಲದ್ದರಿಂದ ಈ ಸರವನ್ನೂ ಕೈಗಿರುವ ಬಂಗಾರದ ಉಂಗುರುಗಳನ್ನೂ ಪೋಲೀಸಿನವರಿಗೆ ಕೊಟ್ಟಳಂತೆ ಇಷ್ಟರಲ್ಲಿ ಬೇರೆ ಕಡೆಯಲ್ಲಿರುವ ಪೋಲೀಸಿನವರು ಸಹಾ ಬಂದು ಇದನ್ನು ಸರಿಯಾಗಿ ಹಂಚಿಕೊಂಡರೆಂಬದಾಗಿಯೂ ಈ ಸ್ತ್ರೀಯು ಮನೆಗೆ ಹಿಂತಿರುಗಿ ಒಂದು ಗಂಡನಿಗೆ ಈ ಸಮಾಚಾರವನ್ನು ತಿಳಿಸಲು ಗಂಡನು ಗಾಡಿಯನ್ನು ತನ್ನ ಪತ್ನಿಯ ಸಮೇತ ಪೋಲೀಸು ಠಾಣ್ಯಕ್ಕೆ ಕಳುಹಿಸಿಕೊಟ್ಟು, ಪೋಲೀಸು ಇನ್ಸ್‌ಪೆಕ್ಟರರವರಿಗೂ ಕೆಂಟೊನ್‌ಮೆಂಟ್ ಆಫೀಸರರಿಗೂ ಈ ಸಮಾಚಾರವನ್ನು ತಿಳಿಸಿದರೆಂಬದಾಗಿಯೂ ತಿಳಿಯುತ್ತೇವೆ ಪೋಲೀಸು ಆಫೀಸರರು ಇವರ ವಾಙ್ಮೂಲವನ್ನು ಪಡಕೊಂಡು [illegible] ಪೋಲೀಸಿನವರನ್ನು [illegible] ಸಮ [illegible] ಲಬರ[illegible] ಸಿಕ್ಕಿರುವವಂತೆ

ಹಿಂದುಸ್ಥಾನದಲ್ಲಿ ರೈಲ್ವೆ ಬಂಡಿಗಳಲ್ಲಿ ಪ್ರಯಾಣ ಮಾಡುತ್ತಿರುವವರ ಸಂಖ್ಯೆಯು ಹೆಚ್ಚುತ್ತಲಿರುವುದು 1907ನೇ ವರುಷದಲ್ಲಿ [illegible] ಮಿಲಿಯ ಜನರು ಹಿಂದುಸ್ಥಾನದಲ್ಲಿ ರೈಲ್ವೆ ಬಂಡಿಗಳಲ್ಲಿ ಪ್ರಯಾಣ ಮಾಡಿರುವರು ಕಳೆದ ವರುಷ ಈ ಸಂಖ್ಯೆಯು 321 ಮಿಲಿಯವಾಗಿರುವುದು ಈ ಜನಸಂಖ್ಯೆಯು ತಮ್ಮ ಪ್ರಯಾಣಗಳಲ್ಲಿ ಉಪಯೋಗವಾಗುವ ಸಾಮಾನಿನ ಫೀಸು ಕೂಡಿ ರೂಪಾಯಿ 14[illegible] ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವದು ಆಚೆ ವರುಷಕ್ಕಿಂತ 247 ಲಕ್ಷ ರೂಪಾಯಿಗಳಿಂದ ಇದು ಕಡಿಮೆಯಾಗಿರುವುದು ಕಳೆದ ವರುಷ ರೈಲ್ವೆ ಕಂಪನಿಯವರಿಗೆ ಸರಾಸರಿಯಲ್ಲಿ ತಮ್ಮ ಬಂಡವಾಳದ ಮೇಲೆ ಸೇಕಡಾ 4 3[illegible]ರಂತೆ ಮುನಾಫೆಯು ದೊರಕಿರುವುದು ಇದು ಕಳೆದ [illegible] ವರುಷದಲ್ಲಿ ಸೇಕಡಾ 5 86ರ ದರದಲ್ಲಿತ್ತು ಹೀಗೆ ಪ್ರಯಾಣಿಕರ ಫೀಸಾಗಿ ದೊರಕಿದ ಈ ಹೇರಳ ಹಣದಲ್ಲಿ ಸಿಜನ್ ಮತ್ತು ರೈಲ್ವೆ ಬಂಡಿಗಳಲ್ಲಿ ಆಹಾರ ಸಂಗ್ರಹವನ್ನು ಮಾರುತ್ತಿರುವವರ ಫೀಸನ್ನು ಎಣಿಸದೆ ಒಂದನೇ ತರಗತಿಯಲ್ಲಿ ಪ್ರಯಾಣ ಮಾಡುವವರಿಂದ ರೂ 50 48 ಲಕ್ಷ, ಎರಡನೇ ತರಗತಿಯವರಿಂದ ರೂ 71 10 ಲಕ್ಷ, ನಡು ತರಗತಿಯವರಿಂದ 93 61 ಲಕ್ಷ ಸಾಧಾರಣ ತರಗತಿಯಾದ ಮೂರನೇ ಕ್ಲಾಸಿನವರಿಂದ 13 ಕೋಟಿ ರೂಪಾಯಿಯಂತೆ ಸಿಕ್ಕಿರುವುದು ಹೀಗೆ ಯಾವ ವಿಷಯಗಳಲ್ಲಿಯೂ ಸರ್ವಸಾಮಾನ್ಯರ ಆಧರಣೆಯು ಬೇಕಲ್ಲದೆ ಶ್ರೀಮಂತರಾದ ಹಲವರ ಪ್ರೋತ್ಸಾಹವು ಎಷ್ಟರ ಮಟ್ಟಿಗೆ ಫಲದಾಯಕವಾಗಿರುವುದೆಂಬದು ಈ ವೇಲಿನ ರೈಲ್ವೆ ಕಂಪೆನಿಗಳ ಲೆಕ್ಕಗಳಿಂದ ತೋರಿಬರುವುದು 1884ನೇ ಯಿಸವಿಯಿಂದ ರೈಲ್ವೆ ಪ್ರಯಾಣಕ್ಕೆ ಸರಾಸರಿ ಮೇಲೆ ಮೈಲು ಒಂದಕ್ಕೆ 2 44 ಪೈಗಳಂತೆ ಬೀಳುವುದು ಸರಾಸರಿ ಮೇಲೆ ರೈಲ್ವೆ ಭಂಡಿಗಳು ಗಂಟೆ ಒಂದಕ್ಕೆ 38 ಮೈಲುಗಳ ಪ್ರಕಾರ ನಡದಿರುವವು.

ಸಾಮಗ್ರಿಗಳಉಪಯೋಗದಿಂದ 2,632 04ಲಕ್ಷ ರೂಪಾಯಿಗಳು ಆಮದಾಗಿ ದೊರಕಿರುವುದು ಸಾಮಗ್ರಿಗಳು ಒಟ್ಟಿನಲ್ಲಿ [illegible] 6240 ಮಿಲಿಯ ಟನ್‌ಗಳಾಗಿದ್ದವು. ಸರಾಸರಿ ಟನ್ ಒಂದಕ್ಕೆ ಒಂದು ಮೈಲಿಗೆ 5.09 ಪೈಗಳಂತೆ ತಗಲಿರುವುದು [illegible] ಹಿಂದುಸ್ಥಾನದಲ್ಲಿ ರೈಲ್ವೆ ಕಂಪೆನಿಗಳ [illegible] 535,583 [illegible] 7844 ಯುರೋಪಿಯನರೂ, 9951 [illegible]

ಯುರೋಪಿಯನ್ನರೂ, 508288 ಭಾರತೀಯರೂ ಇ ಗಿರುವರು. ಹೀಗೆ ಭರತಖಂಡದ ನಿವಾಸಿಗಳಲ್ಲಿ ಪ್ರತಿ ಮಿಲಿಯಕ್ಕೆ 1,790 ಮತ್ತು 1,800 ಒಳಗಿನ ಸಂಖ್ಯೆಯವರು ರೈಲ್ವೆ ಕೆಲಸದಲ್ಲಿರುವರು.

ಸರ್ ಕರ್ಜನ್ ವಿಲಿಯಂ ವಿಲ್ಲಿಯವರ ಜ್ಞಾಪಕಾರ್ಥವಾಗಿ ತಕ್ಕದಾದ್ದೊಂದು ಏರ್ಪಾಡನ್ನು ಮಾಡುವರೆ ಸಿಮ್ಲದ ಮೌಂಟು ಆಬು ಎಂಬಲ್ಲಿ ಒಂದು ಕಮಿಟಿಯು ಏರ್ಪಟ್ಟಿರುವುದು.

ಬಂಗಾಳ, ನಾಗಪುರ ಲೋಹಮಾರ್ಗದಲ್ಲಿ ಬರುತ್ತಲಿರುವ ಮದ್ರಾಸು ಮೈಲಿಗೆ ರಾತ್ರೆ ಸಮಯದಲ್ಲಿ ಗುಂಡು ಹೊಡೆದರು ಹೊಡೆದವರು ಅಲ್ಲಿಂದಲೇ ಪಲಾಯನ ಮಾಡಿದ್ದರಿಂದ ಯಾರೆಂದು ಇನ್ನು ಪತ್ತೆಯಾಗಲಿಲ್ಲ ಒಗನೆನ್ ಸ್ಟೇಶನಿಗೆ ಬರುತ್ತಲೇ ಗುಂಡಿನ ಶಬ್ದವು ಕೇಳಿಸಿತು ಕೆಲವರು ಇದನ್ನು ಬಂಡಿಗೆ ಹೊಡೆದ 'ಬೊಂಬ' ಎಂದಾಗಿ ತಿಳಕೊಂಡರು ಆದರೆ ಟ್ರೈನು ನಿಂತ ಕೂಡಲೇ ಇದು ಬೊಂಬಲ್ಲ ಕೋವಿಯ ಗುಂಡೆಂತ ತಿಳಿದು ಬಂತು ಕೋವಿಯ ಗುಂಡು ರೈಲ್ವೆ ಗಾರ್ಡು ಇರುವ ಕೋಣೆಯಲ್ಲಿ ಗಾಡಿಗೆ ತಾಗಿದ್ದಕ್ಕೆ ಸ್ವಲ್ಪ ಹೆಚ್ಚು ಕಡಿಮೆಯಾಯಿತು ಒಂದನೇ ಮತ್ತು ಎರಡನೇ ಕ್ಲಾಸುಗಳಲ್ಲಿರುವ ಯುರೋಪಿಯನರಿಗೆ ಹೊಡೆಯಬೇಕೆಂತ ಈ ಕೋವಿಯಿಂದ ಗುಂಡು ಹಾರಿಸಿದವನ ಉದ್ದಿಶ್ಯವಾಗಿರಬೇಕೆಂತ ಪೊಲೀಸಿನವರು ನೆನಸುತ್ತಾರೆ

ಕಲಿಕತ್ತೆಯ ಸುತ್ತಮುತ್ತಲೂ ದಿನಂಪ್ರತಿ [illegible] ಆಗುತ್ತಿರುವ ದರೋಡೆ ಕಳವು ಮೊದಲಾದವುಗಳಿಗೆ ಪೋಲೀಸಿನವರು ಸಹಾಯಮಾಡುತ್ತಿರುವರೆಂದು [illegible] ತಕ್ಕದಾದ ಆಧಾರವು ಇತ್ತಲಾಗೆ ಕಲಿಕತ್ತೆಯಲ್ಲಿ ಸಿಕ್ಕುತ್ತದಂತೆ. [illegible] ಇತ್ತಲೀಚೆಗೆ [illegible] ಸಾಧಾರಣ ರೂಪಾಯಿ 500 [illegible] ಪೋಲೀಸು [illegible] ಮಾಡಿರುವರು

[illegible] ವಾಂತಿಭೇದಿ ರೋಗವು [illegible] ತಿಲಕರವರನ್ನು [illegible] ಜೈಲಿಗೆ ಒಯ್ದಿರುವರಂತೆ

ದಕ್ಷಿಣ ಹಿಂದುಸ್ಥಾನ

ಮದ್ರಾಸು ಪ್ರಾಂತಿಕ ಕೊಂಗ್ರೆಸು ಕಮಿಟಿಯವರು [illegible] ಲಾಹೋರಿನಲ್ಲಿ ಕೂಡುವ ಕೊಂಗ್ರೆಸು ಸಭೆಗೆ ಬಹುಮಾನಪಟ್ಟ ನವಾಬ ಸಯ್ಯದ ಮಹಮದ್ ಮತ್ತು ಬಹುಮಾನಪಟ್ಟ ಪಂಡಿತ ಮದನ ಮೋಹನ ಮಾಲವಿಯಾ ಇಬ್ಬರಲ್ಲೊಬ್ಬನನ್ನು ಅಧ್ಯಕ್ಷರನ್ನಾಗಿ ಚುನಾಯಿಸಬಹುದೆಂದು ಸೂಚಿಸಿರುವವರು

ಕಳೆದ ವಾರ ಮದ್ರಾಸಿನಲ್ಲಿ [illegible] ಪ್ರಭುಗಳ ಸ್ಮರಣಾರ್ಥವಾಗಿ ತಕ್ಕ ಏರ್ಪಾಡುಗಳನ್ನು ಮಾಡುವರೆ ಮದ್ರಾಸು ಮಹಾ ಜನಗಳ ಸಭೆಯು ಸೇರಿ ಈ ಬಗ್ಗೆ ಬೇಕಾದ ನಿರ್ಣಯಗಳನ್ನು ಮಂಜೂರು ಮಾಡಿ ಒಂದು ಕಮಿಟಿಯನ್ನು ಈ ಬಗ್ಗೆ ನೇಮಕ ಮಾಡಿರುವರು

ದಕ್ಷಿಣಕನ್ನಡ

ನೋಟೀಸು. ಮಂಗಳೂರು ಟ್ರಾನ್ಸಿಟ್ ಕಂಪೆನಿಯಲ್ಲಿರುತ್ತಿದ್ದ ಮುಕ್ಕದಪ್ಪ ಅಣ್ಣಪ್ಪ ಹೆಗ್ಗಡೆಯರೂ ಮತ್ತು ಅವರ ಮಗ [illegible]ಯಪ್ಪ ಹೆಗ್ಗಡೆಯರೂ ಸಹಾ ಸದರಿ ಕಂಪೆನಿಯಿಂದ ಇದೇ ತಿಂಗಳ ಸುರು ಲಾಗ್ಯಾತು ಕೆಲಸ ನಿವೃತ್ತರಾಗಿರುವರೆಂದು ಈ ಮೂಲಕ ತಿಳಿಸಲಾಗುತದೆ.

ಪ್ರೊಪ್ರೈಟರ್, ಮಂಗಳೂರು ಟ್ರಾನ್ಸಿಟ್ ಕಂಪೆನಿ.

ಮಂಗಳೂರು ಬಿ. ಜಿ. [illegible] ಸಂಬಂಧಿಸಿದ ಕಮ್ಮರ್ಶಿಯಲ್ [illegible] ಕಾಲೇಜಿನ [illegible] ಸದರಿ ಥಿಯೊರಿ ಆಫ್ ಪ್ರೇಕ್ಟಿಸ್ [illegible] ಸಂಬಂಧ ವಿಷಯದಲ್ಲಿ ಎಲಿಮೆಂಟರಿ ಗ್ರೇಡಿನ ಪರೀಕ್ಷೆಗೆ [illegible] ಮಂದಿಯಲ್ಲಿ [illegible] ಮಂದಿ ಪಾಸಾದರೆಂಬದನ್ನು ಕೇಳಿ ಸಂತೋಷಪಡುತ್ತೇವೆ. ಈ ಕ್ಲಾಸಿನಲ್ಲಿರುವ ವಿದ್ಯಾರ್ಥಿಗಳನ್ನು ಸದರಿ ಶಾಲೆಯ ರೈಟರರಾದ ಮ. ರಾ. ರಾ. ಮೆ. ಸೋನ್ಸರು ಹೆಚ್ಚು ಕಡಿಮೆ ಸ್ವಾರ್ಥಪರಿತ್ಯಾಗ ಭಾವದಿಂದ ತರಬೇತು ಮಾಡುತ್ತಾರೆ ಇವರು ತಾನೇ ಬಹು ಸಾಹಸಿಯಾಗಿದ್ದು ಈ ವ್ಯಾಪಾರ ವ್ಯವಹಾರಿಕ ಸಂಬಂಧದ ಅನೇಕ ವಿಷಯಗಳಲ್ಲಿ ಪರೀಕ್ಷೆ ಕೊಟ್ಟು ತೇರ್ಗಡೆ ಹೊಂದಿ ಸರ್ಟಿಫಿಕೇಟುಗಳನ್ನು ಪಡೆದವರಾಗಿರುತ್ತಾರೆ ವ್ಯಾಪಾರ ವ್ಯವಹಾರಿಕ ವಿಷಯಗಳಲ್ಲಿ ಹೆಚ್ಚಿಗೆ ಖರ್ಚು ಇಲ್ಲದೆ ತರಬೇತು ಹೊಂದಲಿಕ್ಕೆ ಮನಸ್ಸುಳ್ಳವರಿಗೆ ಇಲ್ಲಿ ಒಂದು ಒಳ್ಳೆ ಸಂದರ್ಭವದೆ ಎಂತ ತಿಳಕೊಳ್ಳ ಬಹುದು

F. J.

ಮಂಗಳೂರು ಡಿಸ್ಟ್ರಿಕ್ಟ್ ಸರ್ಜನರಾದ ಮೆ। ಬೋಸರವರು ತಮ್ಮ ಚಾರ್ಜನ್ನು ಅಸಿಸ್ಟಾಂಟ್ ಸರ್ಜನ್ ಮೆ। [illegible] ವರ್ಗಿಸರಿಗೆ [illegible] ತಾರೀಕಿನಲ್ಲಿ ವಹಿಸಿ ಕೊಡುವರು ಬೋಸರವರ ಬಹುಮಾನಾರ್ಥವಾಗಿ ಆಸ್ಪತ್ರೆ [illegible] ಕೂಡಿರುವ [illegible] ನಕ್ಷೆಯ [illegible] ತೆಗಿಯಿಸುವದಲ್ಲದೆ ಇವರಿಗೆ ಒಂದು ವಿನೋದ ಪಾರ್ಟಿಯನ್ನು ಕೊಡುವರು ಇವರ ಚಿತ್ರಪಟವನ್ನು ಸಹಾ ಆಸ್ಪತ್ರೆಯಲ್ಲಿರಿಸಬೇಕೆಂಬ ಏರ್ಪಾಡನ್ನು ಮಾಡುವರಾಗಿ ಕೇಳುತ್ತೇವೆ

ಪೋಲೀಸು ಆಫೀಸಿನ ಮೆನೇಜರಾದ ಮೆ। ವೆಂಕಪ್ಪನವರಿಗೆ ವೆಲ್ಲೂರಿಗೆ ಅಲ್ಲಿಯ ಪೋಲೀಸು ಶಾಲೆಯ [illegible] ಆಗಿ [illegible] ರೂಪಾಯಿ [illegible]ಯಾಗಿದೆಂದೂ, [illegible] ಕೇಳುತ್ತೇವೆ

[illegible] ಡೆಪ್ಯುಟಿ ಕಲೆಕ್ಟರವರು [illegible] ಇವರ ಬದಲಿಗೆ [illegible] ಶಂಕರರಾಯರು ನೇಮಕವಾಗಿರುವರು

[illegible]ರಾದ ರಾ. ಸುಬ್ರಾಯ ಪೈಗಳವರ ಸ್ಮರಣಾರ್ಥವಾಗಿ [illegible] ಸಾರಸ್ವತರ ದೇವಸ್ಥಾನದಲ್ಲಿ ಪ್ರತಿ [illegible] ಸಮಾರಾಧನೆ [illegible] ಬ್ರಾಹ್ಮಣ ಸಂತರ್ಪಣೆಯನ್ನು ಮಾಡುವರೆ [illegible] ಮಾಡಿರುವರಲ್ಲದೆ ಇದೇ [illegible] ಜಾತಿ ಗೃಹಸ್ಥರು ಕೂಡಿ [illegible] ಮಾಡತಕ್ಕ ಇವರ ಸ್ಮರಣಾರ್ಥವಾದ [illegible] ತಕ್ಕ ದ್ರವ್ಯಸಹಾಯವನ್ನು ಸಹಾ [illegible] ಮಾಡಿರುವರಾಗಿ ತೋರಿಬರುತ್ತದೆ [illegible] ಇದೇ ಒರುವ ಆದಿತ್ಯವಾರ [illegible] ಹಂಚಲ್ಪಡುವುದು

ಉಪ್ಪಿನಂಗಡಿಯಲ್ಲಿಯೂ ಸಹಾ ಪೈಗಳವರ ಮರಣವಾರ್ತೆಯನ್ನು ಕೇಳಿ ಸಾವುಕಾರ ಮಾದವ ಬಟ್ಟರೇ ಮೊದಲಾದ ಅನೇಕ ಗೃಹಸ್ಥರು ಸಭೆ ಕೂಡಿ ತಮ್ಮ ದುಃಖಸಂತಾಪಗಳನ್ನು ಸೂಚಿಸಿದರಲ್ಲದೆ ತಾ 27ರಿಂದ ಮೂರು ದಿವಸಗಳವರೆಗೂ ಬಡಬಗ್ಗರಿಗೆ ಅಕ್ಕಿಯನ್ನು ಹಂಚುತ್ತಿದ್ದವರು ಇವರ ಹದಿಮೂರನೇ ದಿವಸದಲ್ಲಿ ಅಲ್ಲಿಯ ದೇವಸ್ಥಾನದಲ್ಲಿ ಬ್ರಾಹ್ಮಣ ಸಂತರ್ಪಣೆ ಮಾಡುವ ಏರ್ಪಾಡು ಮಾಡಿರುವರಾಗಿ ಅಲ್ಲಿಯ ಒಬ್ಬ ಬಾತ್ಮೀದಾರರು ನಮಗೆ ತಿಳಿಸಿರುವರು.

ಮಂಗಳೂರಲ್ಲಿ ಇದೇ ಒರುವ ಆದಿತ್ಯವಾರ ಗೌಡಸಾರಸ್ವತ ಬ್ರಾಹ್ಮಣರ ಮಹಾ ಸಭೆಯು ಕೀರ್ತಿಶೇಷ ಪೈಗಳವರ ಬಗ್ಗೆ ಕೆನರಾ ಹೈಸ್ಕೂಲಿನ- ಭುವನೇಂದ್ರ ಸಭಾಸದನದಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಕೂಡುವುದು.

ಉಡುಪಿ. [illegible]

[illegible] ಸಾಹೇಬರು [illegible]

[illegible] ದಿ. ಪಾರ್ಟಿ ಮಾಡುವವರಾಗಿಯೂ [illegible] ಮೊದಲಾದವನ್ನು [illegible]ರಾಗಿಯೂ ತಿಳಿದು ಬರುತ್ತದೆ.

ಬಹುಮಾನಪಟ್ಟ ಮಂಗಳೂರು ಹೈ ಕೋರ್ಟ್ ವಕೀಲ್ ಎ. ಸುಬ್ಬರಾಯ ಪೈ ಬಿ. ಎ. ಬಿ. ಯಲ್., ಇವರ ಅತ್ಯಂತ ದುಃಖಕರವಾದ ಮರಣವಾರ್ತೆಯನ್ನು ಕೇಳಿ ಸರ್ವರು ವ್ಯಾಕುಲ ಪಟ್ಟರು. ಅನೇಕರು ತಮ್ಮ ಅಂಗಡಿಗಳನ್ನೂ ಆಫೀಸುಗನ್ನೂ ಶಾಲೆಗಳನ್ನೂ ಆ ದುಃಖಪ್ರದರ್ಶನಕ್ಕಾಗಿ ಈ ತಾ 26ರಲ್ಲು ಮುಚ್ಚಿದರು. ಇಲ್ಲಿ ಸದ್ಯದಲ್ಲಿಯೇ ಒಂದು ಹೊಲೆಯರ ಶಾಲೆಯನ್ನು ಸ್ಥಾಪಿಸುವಂತೆ ನಮ್ಮ ಮ ರಾ ಪಿ ರಾಮಚಂದ್ರರಾಯರು ಸಾಹಸಪಡುತ್ತಿರುವರಾಗಿ ತಿಳಿದುಬರುತ್ತದೆ

ಲಂಡನಿನಲ್ಲಿ ಕಳೆದ ತಿಂಗಳಲ್ಲಿ ಒಬ್ಬ ಹಿಂದುವು ನಡಿಸಿದ ಅಸಹ್ಯವೂ ಭಯಂಕರವೂ ಆಗಿದ್ದ ಕೊಲೆಗಾಗಿ ಇಲ್ಲಿ ಅನೇಕರು ಸಂತಾಪ ಪಡುತ್ತಿರುವರು. ಈ ವಿಷಯದಲ್ಲಿ ಇಲ್ಲಿ ಒಂದು ಸಭೆ ನಡಿಯಿತು. ಆದರಲ್ಲಿ ಒಬ್ಬ ಹಿಂದುವಾಗಿರುವವರು ಸ್ವಲ್ಪವೂ ಹೇಸದೆ ಇಂಥಾ ಪಾಪಕೃತ್ಯ ನಡಿಸಿದ್ದು ಇಡೀ ಹಿಂದೂ ಜನಾಂಗಕ್ಕೆ ಒಂದು ಕೊರತೆ ಎಂದು ಅಭಿಪ್ರಾಯಪಟ್ಟರು ಹಿಂದೂ ಬಾಲಕರಿಗೆ ಶಾಲೆಗಳಲ್ಲಿ ಪೂರ್ವದಲ್ಲಿದ್ದಂತೆ ಪಾಪಪುಣ್ಯಗಳ ವಿಷಯವನ್ನೂ ಸ್ವರ್ಗನರಕಾದಿಗಳ ವಿಷಯವನ್ನೂ ಇಹಪರ ವಿಷಯವನ್ನೂ, ಜಾತಿಧರ್ಮ ಕುಲಧರ್ಮ ವಿಷಯವನ್ನೂ, ದೇವರ ವಿಷಯವನ್ನೂ, ಸೇವ್ಯ ಸೇವಕ ವಿಷಯವನ್ನೂ ಇವೇ ಮೊದಲಾದ ಸದ್ಧರ್ಮ ವಿಷಯಗಳನ್ನು ಬೋಧಿಸುವ ಅವರವರ ಜಾತಿಗನುಸಾರವಾಗಿ ವೇದ ಉಪನಿಷತ್, ಭಾರತಾದಿಗಳ ಪಾಠವನ್ನು ಕೊಡುವ ವ್ಯವಸ್ಥೆಗಳು ಇಲ್ಲದ್ದರಿಂದ ವಿದ್ಯಾರ್ಥಿಗಳಲ್ಲಿ ಹಲವರಲ್ಲಿ ಈ ಬುದ್ಧಿಭ್ರಮೆಯು ಉಂಟಾಗುವರೆ ಕಾರಣವಾಯಿತೆಂತ ಸಹಾ ಹಲವರು ಅಭಿಪ್ರಾಯಪಟ್ಟಿರುವರು

ಕಾಸರಗೋಡು ಇದೇ ತಿಂಗಳ ತಾ. 22ನೇಗೆ ನಮ್ಮ ಸ್ಟೇಶನರಿ ಮೇಜಿಸ್ಟ್ರೇಟ ಕೋರ್ಟ ಬಳಿಯಲ್ಲಿ ಪೋಕ್ರಿ ಮಾತುಗಳಾಡಿ ಹೊಡದಾಡುವ ಇಬ್ಬರು ಹುಡುಗರನ್ನು ಪೋಲೀಸಿನವರು ಹಿಡಿದು ಮೇಜಿಸ್ಟ್ರೇಟರ ಮುಂದೆ ನಿಲ್ಲಿಸಿದರು ಮೇಜಿಸ್ಟ್ರೇಟರು ಬಹಳ ರಿಯಾಯತಿಯಿಂದ 1ನೇಯವನಿಗೆ 12 ಆಣೆಯೂ, 2ನೇಯವನಿಗೆ 10 ಆಣೆಯೂ ದಂಡವನ್ನು ವಿಧಿಸಿದರು. ಸದರಿ ಪೋಕ್ರಿ ಹುಡುಗರ ಹೆತ್ತವರು ಬಂದು ಜುರುಮಾನೆಯ ಆಣೆಗಳನ್ನು ತೆತ್ತು ಹುಡುಗರನ್ನು ಬಿಡಿಸಿದರು ಇತ್ತಲಾಗೆ ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಸಮುದಾಯದ ಮುಖಂಡರು ಪ್ರತಿಯೊಬ್ಬ ಹುಡುಗ ವ ಹುಡುಗಿಯು ಶಾಲೆಗೆ ಹೋಗಿ ಕಲಿಯಬೇಕೆಂತಲೂ ಮತ್ತು ಸ್ವಜಾತಿಯವರಲ್ಲಿ ಯಾರೊಬ್ಬರೂ ವೃತ್ತಿ ಹೀನನಾಗಿ ಅಲೆಯಬಾರದಾಗಿ ಮಾಡಿದ ಸಹಾಯದ ಉದಾರಶ್ರಯವಿರುತ್ತಾ ಸದರಿ ಹುಡುಗರೂ, ಹುಡುಗರ ಹಿರಿಯರೂ ಈ ರೀತಿ ಪೋಕ್ರಿ ಕೆಲಸಗಳಲ್ಲಿರುವದು ಶೋಚನೀಯವೇ ಸರಿ.

ಬಹುಮಾನಪಟ್ಟ ಹೈ ಕೋರ್ಟ್ ವಕೀಲ್ ಮ. ರಾ. ರಾ. ಎ ಸುಬ್ರಾಯ ಪೈಗಳವರು ಇದೇ ತಾ. 25ನೇ ಸಾಯಂಕಾಲ 4½ ಘಂಟೆಗೆ ನಿತ್ಯ ವಿಶ್ರಾಂತಿ ಬಗ್ಗೆ ಸ್ವರ್ಗಸ್ಥರಾದರೆಂಬ ವಾರ್ತೆಯು ಮಂಗಳೂರಿನಿಂದ ಮೋಟರ ರೈಲು ಬಂಡಿ ಇಲ್ಲಿಗೆ ತಲ್ಪಿದಾಕ್ಷಣವೇ ನಮ್ಮ ಪೇಟೆಯಲ್ಲೆಲ್ಲಾ ಸರ್ವರೂ ತಿಳಿದು ಅತ್ಯಂತ ವ್ಯಸನ ಪಟ್ಟರು. ಮರುದಿನ ಸೋಮವಾರ ಪ್ರಾತಃಕಾಲದಿಂದ ಮಧ್ಯಾಹ್ನ 2 ಘಂಟೆವರೇಗೆ ಪೇಟೆಯ [illegible] ಭಾಗದಲ್ಲಿರುವ ಅಂಗಡಿ [illegible] ಶಾಲೆಗಳೇ [illegible]

[illegible]

"ಲಾ" ಪ್ರಕಟನೆಗಳು.

1. ವ್ಯವಹಾರ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮದೀ ಲಾಗಳು, ೩೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ—ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ ಚೀಫ್‌ಕೋರ್ಟ ತೀರ್ಪುಗಳೂ ಬ್ರಿಟಿಷ ಮತ್ತು ಮೈಸೂರು ಸರ್ಕಾರಗಳ ಕಾನೊನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ. ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ. ವಿ. ಪಿ, ಬಿಡಿಪತ್ರಿಕೆ ೧ಕ್ಕೆ ೨ ಆಣೆ.

3 ಕನ್ನಡ ಲಾ ರಿಪೋರ್ಟುಗಳ ೧ನೇ ಸಂಪುಟದ ಪುಸ್ತಕ ಕ್ರ. ವಿ ಪಿ. ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು "ಎಂ ಮಲ್ಲಾರಾಧ್ಯರ್ಕೈ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರಪೇಟೆ, ಬೆಂಗಳೂರು ಸಿಟಿ," ಈ ವಿಳಾಸಕ್ಕೆ ಬರೆಯುವದು.

———o———

THE HINDU SOAP MANUFACTURING CO.,
ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

———o———

ಕುಂದಾಪುರ ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಬಿ. ದತ್ತ ಎಂಡ್ ಬ್ರದರ್ಸ, ಮೆನೇಜಿಂಗ್ ಎಜಂಟ್ಸ.

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳ

ಪರಿಮಳಾಂಜನ ನಂಬ್ರ 1—ಇದರ ಬಾಹ್ಯಲೇಪನದಿಂದಲೇ ತಲೆನೋವು ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0

2. ತಾಂಬೂಲ ಸುವಾಸಿನಿ—ಸೀಸೆ ೧ರ ಕ್ರಯ 0-4-0

3 ದಂತಮಂಜನ.—ಡಬ್ಬಿ ೧ರ ಕ್ರಯ 0-2 0

4. ಗಜಕರ್ಣದ ಮುಲಾಮು—ಡಬ್ಬಿ ೧ರ ಕ್ರಯ 0-6 0

5. ನಯನಾಮೃತ ಸುರ್ಮ—ಸೀಸೆ ೧ರ ಕ್ರಯ 0-8-0

6. ಶ್ವಾಸಕುಠಾರ:—ಡಬ್ಬಿ ೧ರ ಕ್ರಯ 0-8-0

7. ಪರಿಮಳಾಂಜನ ನಂಬ್ರ ೨—ಡಬ್ಬಿ೧ರ ಕ್ರಯ 0-10 0.

8 ಜ್ವರಾಂಕುಶ ಮಾತ್ರೆ ಡಜನ್ ೧ರ ಕ್ರಯ 1-8-0.

9. ಸುಗಂಧ ವಶ್ಯದ ಪುಡಿ:—ಡಬ್ಬಿ ೧ರ ಕ್ರಯ 0-6-0

10. ದಶಾಂಗಧೂಪ:—ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಶೇರು ೧ಕ್ಕೆ ರೂಪಾಯಿ 0-4-0.

11. ದ್ರಾಕ್ಷಾರಿಷ್ಟ:—ಬಾಟ್ಲಿ ೧ರ ಕ್ರಯ 2-8-0. ಇದರ ಸೇವನೆಯಿಂದ ಪಿತ್ತ, ಉರಕ್ಷಯ್ಯ ಕ್ಷಯ, ಶ್ವಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು.

ಇನ್ನು ಅನೇಕ ಔಶಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರಿಯಿರಿ.

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ, ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಚೆನ್ನಾಗಿಯೂ, ಶಿಲ್ಪರೀತಿಯಾಗಿಯೂ, ಕೈಯಿಂದ ಮಾಡುವ ಅಗರ (ಊದು)ಬತ್ತಿಗಳು ಸೇರು ೧ಕ್ಕೆ ೧೦ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಿನ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಫಾಲಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ.

ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:-- ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯುವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಬದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ—ಪ್ರಖ್ಯಾತಿಗೊಂಡ ಶ್ರೀಕೃಷ್ಣಪ್ರದರ್ಶರವರ ನಾನಾ ತರದ ದೃಷ್ಟಿಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಳ್ಳಬಹುದೀತು.

ಎಲ್ಲೂರು ರಾಮರಾವ್,

ಜನರಲ್ ಏಜೆಂಟ್,

ಮಂಗಳೂರು ದ ಕನ್ನಡ

ನಮ್ಮನ್ನು ಮರೆತಿರುವಿರೆ.

ಹಾಸನ್ ಟೋಪಿ ಮೊಲಿಯ ಉಲನ್‌ದಾರಗಳು,

1ಟೋಪಿ ದಾರಕ್ಕೆ 0 8 0 ಹತ್ತು ಟೋಪಿಯಾಗುವ ಬಂಡಲಿಗೆ 3 7 0 ಹಾಸನ್ ಟೋಪಿ ದರ್ಜನ್ 1ಕ್ಕೆ 8 0 0 ಮತ್ತು 15-0 0.

ದೊಡ್ಡ ಸ್ಕ್ಯಾಜು ಎಸಿಯನ್ 1ಕ್ಕೆ 0-8 0, ಪೋಸ್ಟು ಕಾರ್ಡು 100ಕ್ಕೆ 0-3-0 ಕೊಕ್ಕ ಸೂಜಿ 1ಕ್ಕೆ 0 1 6. ಪರಿಮಳ ನಸ್ಯ ಡಬ್ಬಿ 1ಕ್ಕೆ 0 2-0. ಮೆಂತೊಲ್ ಡಬ್ಬಿ 1ಕ್ಕೆ 0-3 0, ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0-5-0, ರಾಯಲ್ ದಂತಮಂಜನ ಡಬ್ಬಿ 1ಕ್ಕೆ 0 1-0, ಸನ್‌ಸನ್ ತಾಂಬೂಲ ಮಿತ್ರನು 300ಕ್ಕೆ 0 3-0, ನಯನಾಮೃತ ಸುರ್ಮ ಶೀಶೆ 1ಕ್ಕೆ 0-8 0, ಕೆಪಿಟೋ ಬಾಂ ಡಬ್ಬಿ 1ಕ್ಕೆ 0-8 0, ಚಂದ್ರಪ್ರಭಾಕರ ಮಾತ್ರೆ ಡಬ್ಬಿ 1ಕ್ಕೆ 1-4 0. ರೋಮನಾಶಕ ಸಾಬುನು ಪೆಟ್ಟಿಗೆ 0 6 0, ಮಂಗಳೂರು ಬೀಡಿ 1000ಕ್ಕೆ 1 8-0, ಪವನ್ ಭಂಗಾರದ ರೋಜಾ ಹೂವು, 1ಕ್ಕೆ 7 12-0

ನಮ್ಮಲ್ಲಿ ಇರುವನ್ನು ರೀತಿಯ ಉಲ್ ಬೇರೆ ಎಲ್ಲಿಯೂ ದೊರೆಯದು. ಗ್ರಾಹಕರಿಗೆ ಯಾವ ರೀತಿ ಸಾಮಾನು ಬೇಕಾದರೂ ಸಿಕ್ಕುವದು.

ವಿಳಾಸ:— **ಡಿ. ಊಲನ್ ಮಾರ್ಟ.**

ಮಂಗಳೂರು, ಬಿ, 4.

ರೋಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆ ಹಾರಿ ಮುಲಾಮು. ಇದರಿಂದ ತಲೆನೋವು, ವಾತ, ಸಂಧಿವಾತ, ಜಖಮು, ಉಳಕು, ಅರ್ಧಾಂಗವಾಯು, ಗಂಟ್ಲುನೋವು, ಸೊಂಟದ ನೋವು, ಎದೆಶೀತ, ಘಾಯ, ಆನೆಗಾಲು ಮುಂತಾದ ಎಲ್ಲಾ ತರದ ನೋವುಗಳು ಗುಣವಾಗುವವು. ಇದರಿಂದ ಗುಣ ಕಂಡು ಬರುವದಿಲ್ಲವಾದರೆ ಹಣ ಪರತು. ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು. **ಬಾಟ್ಲಿ** ಒಂದರ ಕಿಮ್ಮತು 0-8-0. ಆರು **ಬಾಟ್ಲಿ**ಗಳಿಗೆ 2-10-0. **ರೋಯಲ್ ಇಂಡಿಯನ್ ಬಾಂ,** ಎಲ್ಲಾ ಔಷಧಾಲಯಗಳಲ್ಲಿ **ಮಾರಾಟಕ್ಕೆ ದೊರಕುವದು. ಅಥವಾ.**

ವಿಳಾಸ:—

ರೋಯಲ್ ಟ್ರೇಡಿಂಗ್ ಕಂಪೆನಿ

ಗಿರಗಾಂ ಮುಂಬಯಿ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	**ಹಾಫ್‌ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	**ಫುಲ್‌ಬೈಂಡ್.** (ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3 × 8¼, 3 × 5¼' 8¼ × 6¼", 6' × 4' ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕ ವ **ಆಫೀಸರುಗಳಿಗೆ ಬೇಕಾದ** ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

[illegible] ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ [illegible] ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ವಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

[illegible] ನಮೂದಿಸಿದ ಪುಸ್ತಕಗಳಲ್ಲವುಗಳನ್ನು [illegible] ಚರ್ಮ ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ [illegible]

ನಮ್ಮ ದರಗಳಿಗೆ [illegible] ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹಣದ ಒಳ್ಳೇ ಉಪಯೋಗವು ಯಾವುದು— ಬೆಲೆಗೆ ತಕ್ಕ ಒಡವೆಗಳನ್ನು ಕೊಡುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ [illegible] ವರುಷಗಳಾದವು.

[illegible] ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

([illegible] ಕಾಫಿ ಹುಡಿ ಬಿಸ್ಕೆಟ್ [illegible] ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ [illegible] ಮೊದಲಾದವುಗಳು)

ಡಾಕ್ಟರರ ಉಪಯೋಗದ ಸಮಸ್ತ ಔಷಧಿಗಳು,

([illegible] ಕೆಮಿಕಲ ಪ್ರ [illegible] ಮೊದಲಾದವುಗಳೂ ಸಹಾ)

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ ಇಂಗ್ಲಿಷ ವೈದ್ಯಶಾಸ್ತ್ರ [illegible] ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು [illegible] ತಕ್ಕದಾದ ಔಷಧಿಗಳನ್ನು [illegible] (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ [illegible] ಸ್ಟಾಂಪನ್ನು [illegible]ಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಟಾಯಿಗಳಲ್ಲಿ ಅಚ್ಚು ಹಾಕುವುದು

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರೆಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಮಂಗಳೂರು.

Mangalore Trading Association,
Mangalore, S. Canara.

S. Kamath, at the Mangalore Trading Association's Sharada Press Mangalore.

Registered [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3 | ಮಂಗಳೂರು, ತಾರೀಕು 6ನೇ ಶುಕ್ರವಾರ ಅಗೊಸ್ತು 1909 | ಸಂಚಿಕೆ 18

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು ಶಿರೋಭಾರ ಅರ್ಧಾಂಗ ವಾಯು, [illegible] ಗಂಟ್ಲು ನೋವು, ಜಖಮು, ಉಳುಕು, ಘಾಯ [illegible] ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯ ವಿರಹಿತವಾಗಿ ಹಚ್ಚಬಹುದು [illegible] ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿ ೧ರ ಕಿಮ್ಮತು ೯ ಆಣೆ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ	ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳ ಬೆಳ್ಳಗಾಗುತ್ತದೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು 2 ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ ನಿಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿನ ಕೋಕೋ, ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

ಸುಂದರೀ ಮುಲಾಮು

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0

ಚೇಳು ಕಡತದಮೇಲೆ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು ತಂಪುಮಾಡಿ ಮನಶುದ್ಧಿ ಮಾಡುವದು ಬಾಟ್ಲಿ ೧ರ ಕಿಮ್ಮತು ೧೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಜುಲಾಬು ಮಾತ್ರೆಗಳು	ರೂ	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0-10—0.
ಖಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಲವಾಗಿಗೆ ಬರದಲ್ಲಿ [illegible]

ವಿಳಾಸ:— ವಿಲಿಯಂ ಮತ್ತು ಕಂಪೆನಿ, [illegible] ಮುಂಬಯಿ. [illegible] "ಅಮೃತಾಂಜನ" ಮುಂಬಾಯಿ.

ಫುಟ್‌ಬಾಲ್.

ನಂ|| ೧ ರೂ. ೩—೦—೦.
,, ೨ ,, ೩—೬—೦.
,, ೩. ,, ೪—೪—೦.
,, ೪. ,, ೫—೦—೦.
,, ೫. ,, ೫—೪—೦.

ಬಟನ್‌ಲೆಸ್.

ನಂ|| ೩. ರೂ. ೫—೦—೦
,, ೪. ,, ೫—೮—೦
,, ೫ ,, ೬—೮—೦

ಕವರುಗಳು.

ನಂ|| ೧ ರೂ ೧—೧೨—೦.
,, ೨ ,, ೨—೦—೦
,, ೩ , ೨—೮—೦
ನಂ|| ೪ ರೂ. ೩—೮—೦
,, ೫ ,, ೪—೦—೦

ಬಟನ್‌ಲೆಸ್

ನಂ|| ೩ ರೂ ೩—೮—೦
,, ೪ , ೪—೦—೦
,, ೫ , ೪—೮—೦

ಬ್ಲಾಡರ್‌ಗಳು

ನಂ|| ೧ ರೂ ೧—೧೦—೦
, ೨ , ೧ ೧೨—೦
,, ೩ ೧—೧೫—೦
೪ , ೨—೪—೦
, ೫ , ೨—೬—೦

ಇನ್‌ಫ್ಲೇಟರ್

೧ಕ್ಕೆ—೧ ೧೨-೦ ೨ ೦ ೦ ೨ ೮ ೦, ೩ ೦ ೦

ರಬ್ಬರ್ ಸಿಮೆಂಟು

೧ಕ್ಕೆ—೦ ೩ ೦, ೦ ೬ ೦



ಆಲಿಗರು ಬೀಗಗಳು

ಎರಡು ಲೀವರು ಇರುವ ಹಿತ್ತಾಳೀ ಬೀಗಗಳು

ಸೈಜು —೧, ೦ ೫ ೦ ೧|, ೦ ೬ ೦ ೧|, ೦ ೬ ೬, ೨ ೦-೯ ೦, ೨||, ೦ ೧೨ ೦ ನಾಲ್ಕು ಚಕ್ರಗಳಿರುವ ಬದ್ರವಾದ ಬೀಗಗಳು ಒಂದರ ಬೀಗದ ಕೈ ಮತ್ತೊಂದಕ್ಕೆ ಹಿಡಿಯುವದಿಲ್ಲಾ

ಹಿತ್ತಾಳೀ ಬೀಗಗಳು

ಸೈಜು —೧, ರೂ ೦ ೧೨ ೦ ೧|, ೦ ೧೫ ೦, ೧|, ೧-೨ ೦, ೨, ೧-೬ ೦, ೨||, ೧ ೧೨ ೦

ಕಬ್ಬಿಣದ ಬೀಗಗಳು.

ಎರಡು ಲೀವರು -೨, ೧-೧೩ ೦, ೨|, ೧ ೦ ೦, ೨| ೧ ೩ ೦
ನಾಲ್ಕು ಲೀವರು —೧, ೦-೧೨-೦, ೧| ೦-೧೨ ೦, ೧|, ೦-೧೩-೦, ೧||, ೦-೧೫-೦, ೨, ೧-೨ ೦, ೨||, ೧ ೪-೦, ೨|||, ೧-೬-೦, ೩, ೧-೯-೦
ಆರುಲೀವರು.—೧||, ೧-೦ ೦, ೨, ೧ ೮-೦, ೨||, ೧-೧೪ ೦

ಅಮೇರಿಕನ್ ಸ್ಪಿಂಗ್ ಬೀಗಗಳು.

೧ಕ್ಕೆ ೦-೫ ೦, ೦-೮-೦, ೦-೧೨-೦, ೧-೦-೦ ಡಿಟೋ ಮಿಲ್ಲರ್ ಬೀಗ ೧ಕ್ಕೆ ೦ ೫-೦, ೦-೬ ೦, ೦ ೮-೦

ಟ್ರಂಕು ಪ್ಯಾಡಲಾಕ್ ೧ಕ್ಕೆ ೦ ೮-೦

ಟ್ರಂಕುಗಳಿಗೆ ಹಾಕುವದಕ್ಕೆ ಅನುಕೂಲವಾಗಿ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ ೨ ಲೀವರು ೦-೧೨-೦; ೪ ಲೀವರು ೧-೦-೦.

ಒಂದೇಸಲ ೩ ಬೀಗಗಳನ್ನು ವಿ.ಪಿ. ಯಲ್ಲಿ ತರಿಸಿಕೊಳ್ಳುವವರಿಗೆ ಟಪಾಲು ಹಾಸಲು ಇಲ್ಲದೇ ಕಳುಹಿಸಲ್ಪಡುತ್ತೆ.

ಹೆಚ್. ಎಸ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೋಟೀಸು.

ನಮ್ಮ ಸ್ವಂತ ಕೈಗಾರಿಕೆಯಲ್ಲಿ ತಯಾರು ಮಾಡಲ್ಪಟ್ಟ ಹಸರೂ ಬ್ಲೂ ಅಂಜೂರ ಹೆಗಲ್‌ಬತ್ತಿ ಸವರನ್ ಬಣ್ಣಾ ವಗ್ಯೆರೆ ನಮೂನೆ ಬಣ್ಣಗಳ ಕಲಾಬತ್ತು ಬಾವಾ ಅಂಚು ಪಿತಾಂಬ್ರಗಳೂ ೧೬-೧೪ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಡಿಟೊ ರಂಗುಗಳಲ್ಲಿ ಕಲಾಬತ್ತು ಸರಪಣಿ ರುದ್ರಾಕ್ಷಿ ಅಂಚಿನ ಕಲಾಬತ್ತು ಚೌಕಳಿ ಸಾಲಂದಿ ವಗ್ಯೆರೆ ಪಿತಾಂಬರಗಳೂ ಸದರಿ ಜರತಾರದ ಕಣಗಳೂ ೧೬ ೧೪ ಮೊಳದ ಕಿರಿಗೆಗಳೂ ಸದರಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಶೀರೆಗಳೂ ೧೬ ೧೪ ಮೊಳದ ಕಿರಿಗೆಗಳೂ ಹಳದಿ ಮುಂಗಿಲಾತಿಮುಂಗಿ ಬಂಗಾರ ಚುಕ್ಕಿ ಕಾಡಿಗಣ್ಣು ಹಳದಿ ರುದ್ರಗಂಟೆ ಸಭಾಲಂಕಾರ ವಗ್ಯೆರೆ ರಖಮುವಾರು ಶೀರೆಗಳೂ ಜರತಾರದ ಕಣಗಳೂ ೧೬ ೧೪ ಮೊಳದ ಶೀರೆಗಳೂ ಸದರಿ ಎಲ್ಲಾ ಮಾದರಿಯಲ್ಲಿಯೂ ಸಾದಾ ರುದ್ರಾಕ್ಷಿ ಸರಪಣಿ ಅಂಚಿನ ಶೀರೆಗಳೂ ೧೬ ೧೫ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಮೇಲ್ಕಂಡ ಎಲ್ಲಾ ಮಾದರಿಯ ಕುಪ್ಪಸದ ಕಣಗಳೂ ಕಲಾಬತ್ತು ಮತ್ತು ರೇಷ್ಮೆ ರುಮಾಲುಗಳು ರೇಷ್ಮೆ ದೊಡ್ಡ ವಸ್ತ್ರಗಳೂ ಸ್ಯಾಂಪಕರ್ಚಿಫ್‌ಗಳೂ ಹೊಸ ನಮೂನೆ ಬನಾತೂ ತೂಪಾಟ ಬಾವಾ ಅಂಚಿನ ಶೀರೆಗಳೂ ಸಹಾ ಹಮೇಷ ಕ್ರಯಕ್ಕೆ ಸಿದ್ಧವಾಗಿರುತ್ತವೆ ಇದಲ್ಲದೆ ಕಂಚಿ, ಮದರಾಸು ಕೊಳ್ಳೇಗಾಲ, ಕುತ್ತಾಲಂ, ಕುಂಬಕೋಣಂ, ಮದುರಾ, ಸತಾರಾ, ಪೀರಾರ್, ವಗೈರಾದ ಸ್ಥಳದಲ್ಲಿ ತಯಾರಾಗುವ ಪೂರಾ ಜತಿಂ ಶೀರೆಗಳೂ ಕಣಗಳೂ ಕೊಯಂಬುತ್ತೂರು ಡಿಂಡುಗಲ್ಲು ಈ ಸ್ಥಳಗಳಲ್ಲಿ ತಯಾರಾಗುವ ಕಲಾಬತ್ತು ರುಮಾಲುಗಳೂ ಪೇಟಾಗಳೂ ಕಲರ್ ಪೇಟಾಗಳೂ ದುಪ್ಪಟಾಗಳೂ ಶೇಲಂ ಶಾತ್ಯಂಗಾರ ಪೇಟೆ ಕಲಾಬತ್ತು ಪಂಚೆಗಳೂ ಕಪ್ಪು ರುದ್ರಾಕ್ಷಿ ಬನಾರಸ್ ೮ ೯ ಮೊಳದ ಪಂಚೆಗಳೂ ದೊಂತ್ರಗಳೂ ರೇಷ್ಮೆ ಅಂಚಿನ ಶ್ಲಾಘನೀಯವಾದ ಪಂಚೆಗಳೂ ಸಹಾ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತವೆ ಮೇಲ್ಕಂಡ ಎಲ್ಲಾ ರಂಗುಗಳೂ ಚನ್ನಾ ಗ್ಯಾರಂಟಿಯಾಗಿರುತ್ತೆ ಆರ್ಡರು ಕೊಟ್ಟಲ್ಲಿ ಕೂಡ್ಲೆ ವಿ ಪಿ ದ್ವಾರಾ ಕಳುಹಿಸಲ್ಪಡುತ್ತೆ ಒಂದಾವರ್ತಿ ನಮ್ಮಲ್ಲಿ ಬೇಕಾದ ಜವಳಿಯನ್ನು ತರಿಸಿಕೊಂಡು ಅಜಮಾಯಿಸಿ ಮಾಡಿದಲ್ಲಿ ನಮ್ಮ ಜವಳಿಯ ಶ್ಲಾಘ್ಯವು ವ್ಯಕ್ತವಾಗುತ್ತೆ ದಯವಿಟ್ಟು ಬರಿಸುವಿರೆಂದು ಹಾರೈಸುತ್ತಿದ್ದೇವೆ ಮೇಲ್ಕಂಡ ನಮ್ಮ ಸ್ವಂತ ಕೈಗಾರಿಕೆಯ ಜವಳಿಯ ಗೌರವಕ್ಕಾಗಿ ಮೈಸೂರು ಎಗ್ಸಿಬೀಷನ್‌ನಲ್ಲಿಯೂ ನಾಗಪೂರ್ ಎಗ್ಸಿಬೀಷನ್‌ನಲ್ಲಿಯೂ ಬೆಳ್ಳಿ ಮೆಡಲ್‌ಗಳೂ ಮತ್ತು ಸರ್ಟಿಫಿಕೇಟುಗಳೂ ಸಹಾ ಹೊಂದಿ ಇರುತ್ತೇವೆ

ಹೆಚ್ ಸಂಕಪ್ಪಾ ಬಸಪ್ಪಾ,
ಜವಳಿ ವ್ಯಾಪಾರಸ್ಥರು,
ಚಿಕ್ಕಪೇಟೆ,
ಬೆಂಗಳೂರು ಸಿಟಿ.

1 ... ಈ ಪುಸ್ತಕಕ್ಕೆ ಮೂಲ... ಹೇಳಿರುತ್ತೆ, ಈ ಗ್ರಂಥಕ್ಕೆ ನಂದ... ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ. ೩—೦—೦.

2. ಶ್ರೀಶಿವಾನಂದಲಹರಿ ಈ ಗ್ರಂಥಕ್ಕೆ ಪ್ರತಿಪದ ಟೀಕಾ ತಾತ್ಪರ್ಯ. ೦—೬—೦.

3 ಉತ್ತರ ರಾಮಚರಿತ್ರೆ ಕಥೆ ಬಹಳ ಸ್ವಾರಸ್ಯವಾದದ್ದು ೦—೫—...

4 ಟೀಕಾ ರಾಘವೇಂದ್ರ ಸ್ತೋತ್ರ. ೦—೨—೦

5 ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ ಸಮಂತ್ರಕ ಉದುತ್ಯ, ಮಹಾಸೌರ, ಆದಿತ್ಯ ಹೃದಯಾದಿ ೦—೨—೦.

6 ಉದಕಶಾಂತಿ ಶುದ್ಧವಾದ ಪುಸ್ತಕ ೦—೨—೦

7 ವಿಷ್ಣುಸಹಸ್ರನಾಮ ಮೂಲ ಶ್ಲೋಕ ರೂಪ ನಾಮರೂಪ ಕೂಡ ಚಿಕ್ಕ ಸೈಜು ೦—೨—೦

8. ವಿಷ್ಣುಸಹಸ್ರನಾಮಕ್ಕೆ ಪ್ರತಿಪದ ಟೀಕಾ ತಾತ್ಪರ್ಯ ಉತ್ತಮ ಕಾಗದ ಕಿತ್ತಾನು ಬೈಂಡು ೩—೦—೦.

9 ಕಾಲಾಮೃತ ಒಳ್ಳೇ ಕಾಗದದಲ್ಲಿ ತಪ್ಪಿಲ್ಲದೆ ಟೀಕಾ ತಾತ್ಪರ್ಯ ಸಹಾ ಪ್ರಿಂಟಾಗಿದೆ ಹಸನ್‌ಕಾಗದ ೧ನೇ ರಖಂ ೧—೦—೦

10 ಗ್ಲೇಜು ಕಾಗದದ ೨ನೇ ರಖಂ ೦ ೧೨ ೦

11 ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ ೦ ೨—೦

12 ಬಾಲ ರಾಮಾಯಣ ಟೀಕಾ ತಾತ್ಪರ್ಯ ೦—೨—೦.

13 ಸ್ವರಸಹಿತವಾದ ನಮುಕ ಚ-ಮಕ, ಪುರುಷಸೂಕ್ತ ಶ್ರೀಸೂಕ್ತ ಭೂಸೂಕ್ತ ನಾರಾಯಿಣೋಪನಿಷತ್ತು ೦—೨—೦.

14 ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ. ೦—೪—೦

5 ಸೂರ್ಯ ಸಹಸ್ರನಾಮ, ಶ್ಲೋಕ, ನಾಮ ೦ ೨-೦.

6 ಕೃಷ್ಣ ಕರ್ಣಾಮೃತ ಮೂಲ ೦ ೨—೦

7 ಯಕ್ಷಗಾನ ಪಂಚಭಾಷಾ ಕೃಷ್ಣ ಬಾಲಲೀಲೆ ೦—೩—೦.

ಕೆಟಲಾಗು ಬೇಕಾದಲ್ಲಿ ಒರೆದು ತರಿಸಿಕೊಳ್ಳಬಹುದು.

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್.
ಚಿಕ್ಕಪೇಟೆ,
ಬೆಂಗಳೂರು.

—o—

ಗಿಡಗಳು—ಬೀಜಗಳು—ಹಣ್ಣು—ಹುವ್ವು.
ಮತ್ತು—ತರಕಾರಿ.

ಮಾವಿನ ಗಿಡಗಳು ವಗ್ಯೆರೆ ಸಕಲ ವಿಧವಾದ ಹಣ್ಣಿನ ಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗ್ಯೆರೆ ಸಮಸ್ತ ವಿಧವಾದ ಬೀಜಗಳು ಶೇಬು, ಕಿತ್ತಾಳೆ ವಗ್ಯೆರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗ್ಯೆರೆ ಹುವ್ವುಗಳು. ಬೇಕಾದವರು ಕೆಟಲಾಗಿಗೆ ಬರದು ತರಿಸಿಕೊಳ್ಳಬಹುದು.

... ಎಸ್. ಗಿರಿಯಪ್ಪ ಅಂಡ್ ಸನ್,
... ಅಂಡ್ ಸೀಡ್ಸ್‌ಮೆನ್.
... ರಸ್ತೆ,
...

ವಿನಂತಿ.

ಮುಂಬಯಿ ಪಟ್ಟಣದಲ್ಲಿರುವ ಸೇವಾಸದನ, ಪೂನಾ ಶಹರಿನಲ್ಲಿರುವ ಅನಾಥ ಬಾಲಿಕಾಶ್ರಮ (ವಿಧವಾಗೃಹ) ಮತ್ತು ಮಹಿಳಾ ವಿದ್ಯಾಲಯವೆಂಬ ಈ ಮೂರು ಸಂಸ್ಥೆಗಳ ಉದ್ದೇಶವನ್ನು ತಿಳಕೊಳ್ಳಲಪೇಕ್ಷಿಸುವವರೂ, ಈ ಸಂಸ್ಥೆಗಳ ಪ್ರಯೋಜನವನ್ನು ತಮ್ಮ ಹೆಣ್ಣು ಮಕ್ಕಳಿಗೆ ಪ್ರಾಪ್ತವಾಗಬೇಕೆಂತ ಅಪೇಕ್ಷಿಸುವ ಹೆತ್ತವರೂ ಮತ್ತು ಬಡತನದ ಸಂಬಂಧ ತಮ್ಮ ಹೆಣ್ಣು ಮಕ್ಕಳಿಗೆ ವಿವಾಹ ಮಾಡಲಿಕ್ಕೆ ಅನುಕೂಲವಿಲ್ಲದವರೂ ಸಹ ಕೆಳಗೆ ದಸ್ಕತು ಮಾಡಿದವರನ್ನು ಕಂಡು ಪ್ರಸ್ತಾಪಿಸಿದ್ದಲ್ಲಿ ಅಂಥಹ ಮಕ್ಕಳ ಶ್ರೇಯಸ್ಕರ ಪರಿಣಾಮಾರ್ಥ ಅಗತ್ಯವಿರುವ ಅನುಭವವೂ ಸಹಾಯವೂ ಸಂಪಾದಿಸಿಕೊಳ್ಳುವ ಉಪಾಯವನ್ನು ತೋರಿಸಿಕೊಟ್ಟಾರು.

ಕುದ್ಮುಲ್ ರಂಗರಾವ್.

ಸ್ವದೇಶಾಭಿಮಾನಿ

ಮಂಗಳೂರು ಶುಕ್ರವಾರ ತಾರೀಕು 6ನೇ ಆಗೋಸ್ತು 1909.

ಪಾರಸಿ ರಾಜಕೀಯ ಪ್ರಳಯ.

ತುರ್ಕ್ಯದಲ್ಲಿ ಸುಲ್ತಾನ ಅಬ್ದುಲ್ ಹಮೀದನ ನಿರಂಕುಶ ಪ್ರವರ್ತನಕ್ಕೆ ಜನರು ಎದುರೆದ್ದು ಸುಲ್ತಾನನನ್ನು ಸಿಂಹಾಸನದಿಂದ ತಳ್ಳಿ ಅವನ ಬಂಧು ರಶೀದ್ ಎಫೆಂದಿ ಯನ್ನು ಸುಲ್ತಾನ ಐದನೇ ಮಹಮ್ಮದನೆಂಬ ಹೆಸರಿನಿಂದ ಗದ್ದಿಗೆಯಲ್ಲಿ ಕೂರಿಸಿ ಹ್ಯಾಗೆ ತುರ್ಕ್ಯದಲ್ಲಿ ಪಾರ್ಲಿಮೆಂಟ್ ಪ್ರತಿನಿಧಿಸಭೆಯನ್ನು ಸ್ಥಾಪಿಸಿದರೆಂದು ಈ ಮೊದಲೇ ತಿಳಿಸಿರುವೆವಷ್ಟೆ. ಇದು ನೆರೆರಾಜ್ಯವಾದ ಪರ್ಶಿಯಾ ದೇಶಕ್ಕೆ ಮೇಲ್ಪಙ್ತಿಯಾಯಿತು. ಅಲ್ಲಿ ಆಳುತ್ತಿದ್ದ ಶ್ಯಾಹಾ ಐದನೇ ಮಹಮ್ಮದನೆಂಬವನನ್ನು ಜನರು ತಳ್ಳಿಬಿಟ್ಟು ಅವನ ಮಗ ೧೭ ವರುಷದ ಹುಡುಗನಿಗೆ ಸುಲ್ತಾನ್ ಅಮದ್ ಶ್ಯಾ ಎಂಬ ಹೆಸರಿನಿಂದ ಪಟ್ಟ ಕಟ್ಟಿರುವರು.

ಪರ್ಶಿಯಾದೇಶಕ್ಕೆ ಈಗ ಪದಚ್ಯುತನಾದ ಸುಲ್ತಾನನ ಪೂರ್ವಜ ಮುಜಾಫರುದ್ದೀನ ಶ್ಯಾಹನು ಪ್ರತಿನಿಧಿಸಭೆಯನ್ನು ಕೊಟ್ಟಿದ್ದನು. ಆದರೆ ಐದನೇ ಮಹಮ್ಮದನ ಕಾಲದಲ್ಲಿ ಆ ವ್ಯವಸ್ಥೆಯು ಲೋಪವಾಯಿತು. ರಾಜ್ಯಭಾರವು ಬಹು ಸಂಕಷ್ಟಕರವಾಗುತ್ತಾ ಬಂತು. ಅರಸನ ಖಜಾನೆಯು ಬರಿದಾಗಿ ರುಷ್ಯ ಮುಂತಾದ ಪರರಾಜ್ಯಗಳ ಸಹಾಯ ಕೇಳಬೇಕಾಯಿತು. ಕ್ರಮೇಣ ಪರ್ಶಿಯಾವನ್ನು ವ್ಯಾಪಾರ ವಗೈರೆ ವಿಷಯಗಳಿಗೆ ಇಂಗ್ಲೀಷರೂ ರುಷ್ಯರೂ ಪಾಲು ಮಾಡಿಕೊಂಡು ಈ ಒಡಂಬಡಿಕೆಗೆ ಪರ್ಶಿಯಾದ ಸಮ್ಮತಿ ಪಡೆದರು. ಆದರೆ ಪರ್ಶಿಯಾದ ರಾಷ್ಟ್ರೀಯ ವಿಷಯಗಳಲ್ಲಿ ತಾವು ಪ್ರವೇಶಿಸುವದಿಲ್ಲವೆಂದು ಉಭಯ ಆಧಿಪತ್ಯಗಳೂ ಮಾತುಕೊಟ್ಟಿದ್ದರೂ ಪಾರಸಿ ಪ್ರಜಾಪಕ್ಷದವರು ಅವರನ್ನು ನಂಬಲಿಲ್ಲ.

ಕ್ರಮೇಣ ತುರ್ಕ್ಯದಲ್ಲಿ ನಡೆದಂತೆ ಇಲ್ಲಿಯ ರಾಜ್ಯದಲ್ಲಿ ಎರಡು ತಂಡಗಳಾಗಿ ಒಂದು ಶ್ಯಾಹನ ಕಡೆಗೂ ಇನ್ನೊಂದು ಬಲವಾದ ಭಾಗವು ಪ್ರಜೆಗಳ ಪರವಾಗಿಯೂ ನಿಂತವು. ಇವರೊಳಗೆ ಅನೇಕ ಯುದ್ಧಗಳಾದವು. ಈ ಅಂತಃಕಲಹಗಳಲ್ಲಿ ಇಂಗ್ಲೀಷರು ಪ್ರಜಾಪಕ್ಷಕ್ಕೆ ಒಳ್ಳೇದನ್ನು ಬಯಸಿದರೂ ಯಾವ ವಿಧದಲ್ಲಿಯಾದರೂ ದೇಶದ ಆ ಅಂತಃಕಲಹದಲ್ಲಿ ಕೈಹಾಕಲಿಲ್ಲ. ರುಷ್ಯದವರು ನಡೆದ ರೀತಿಯನ್ನು ನೋಡಿದರೆ ಅವರು ಶ್ಯಾಹನ ತರ್ಫಿಗೆ ವಾಲಿದ್ದರೆಂದೂ ಪರ್ಶಿಯದಲ್ಲಿರುವ ತಮ್ಮ (ರುಷ್ಯ) ಜನರನ್ನು ರಕ್ಷಿಸುವ ನೆವದಿಂದ ಸೈನ್ಯವನ್ನು ಕಳುಹಿಸಿದರೆಂದೂ ಊಹಿಸಲಿಕ್ಕೆ ಕಾರಣವಾಗುತ್ತದೆ. ಹ್ಯಾಗೂ ಪ್ರಜೆಗಳೇ ಕ್ರಮೇಣ ಗೆದ್ದು ರಾಜಧಾನಿಯಾದ ತೆಹರಾನ್ ಪಟ್ಟಣವನ್ನುಳಿದು ಎಲ್ಲವನ್ನು ವಶಮಾಡಿಕೊಂಡರು. ತೆಹರಾನದಲ್ಲಿ ರುಷ್ಯರ ಪಡೆಯಿತ್ತು. ಶ್ಯಾಹನು ತಾನೇ ಇದ್ದನು. ಜಯ ಯಾರಿಗೆ ಸಿಕ್ಕೀತೆಂದು ಸಂದೇಹವಿತ್ತು. ಆದರೂ ಪ್ರಜಾಪಕ್ಷದವರು ಒಳನುಗ್ಗಿ ಸುಲಭದಲ್ಲಿ ರಾಜಧಾನಿಯನ್ನು ಕೈವಶಮಾಡಿದರು. ತುರ್ಕ್ಯದಲ್ಲಿ ಒಳ್ಳೆ ಐದನೇ ಮಹಮ್ಮದನು ಪಟ್ಟವನ್ನೇರುವಾಗ ಪರ್ಶಿಯದ ಐದನೇ ಮಹಮ್ಮದನು ಪದಚ್ಯುತನಾಗಬೇಕಾಯಿತು. ಪಟ್ಟಕ್ಕೆ ಬಂದ ಇವನ ಮಗ ಅಹ್ಮದ್ ಶ್ಯಾಹನು ಬಾಲ್ಯಪ್ರಾಯದವನಾಗಿರುವಾಗ ಸರ್ದಾರ್ ಅಜೋದ್ ಉಲ್ ಮುಲ್ಕನನ್ನು [illegible] [illegible] ಮಾಜಿ ಶ್ಯಾಹನಿಗೆ [illegible]

[illegible] ರುಷ್ಯರ ವಶ [illegible]

ವಿಶೇಷ ಕಲಹಭರಿತವಾದ ಈ ಪರಿಣಾಮದಿಂದ ಮೂರು ಸಂಗತಿಗಳು ಸ್ಪಷ್ಟವಾಗುವವು. ಪೂರ್ವ ಖಂಡದ ಪ್ರಜೆಗಳು ಯೋಗ್ಯಯುಕ್ತ ರಾಜ್ಯಕ್ಕೆ ಅಯೋಗ್ಯರೆಂದೂ, ಅವರ ಆದರ್ಶವು ಪ್ರಭುಸತ್ತಾತ್ಮಕ ರಾಜ್ಯಪದ್ಧತಿಯೆಂದೂ, ಕೆಲವು ವಿದ್ವಾಂಸರು ಪ್ರತಿಪಾದಿಸಿದ ಸಿದ್ಧಾಂತವನ್ನು ಅಲ್ಲಗಳೆಯುವ ಇನ್ನೊಂದು ದೃಷ್ಟಾಂತವು ಪರ್ಶಿಯಾದಲ್ಲಿ ತೋರ ಬಂತು. ಆದರೂ ಪರ್ಶಿಯಾದಲ್ಲಿಯಾಗಲಿ ಈ ಮುಂಚೆ ತುರ್ಕ್ಯದಲ್ಲಿಯಾಗಲಿ ಜನರು ರಾಜನನ್ನು ತಳ್ಳಿ ಪ್ರಜಾಪ್ರಾಬಲ್ಯವನ್ನು ಸ್ಥಾಪಿಸುವರೆಂದು ಯಾರೂ ಎಣಿಸಲಿಲ್ಲ. ಅಂದರೆ ಲಾರ್ಡ ರೋಜಬರಿಯವರು ಇತ್ತಲಾಗೆ ಹೇಳಿದಂತೆ ಪೌರ್ವಾತ್ಯರು ಮಂತ್ರವನ್ನು ಅತಿ ಗೋಪ್ಯವಿಟ್ಟು ಕಾರ್ಯದಲ್ಲೇ ತೋರುವರು. ಇನ್ನೊಂದು ವಿಷಯವೇನೆಂದರೆ:—ತುರ್ಕ್ಯದಲ್ಲಿಯೂ ಪರ್ಶಿಯದಲ್ಲಿಯೂ ರಾಜಕೀಯ ಪ್ರಳಯದಲ್ಲಿ ಅನಾವಶ್ಯಕ ಕ್ರೌರ್ಯ ರಕ್ತಪಾತಗಳು ಸಂಭವಿಸಲಿಲ್ಲ. ತಮ್ಮ ಕೈ ಅಧಿಕಾರ ಸಿಕ್ಕಿದರೂ ಪರಪಕ್ಷದವರ ಪ್ರಾಣಹಾನಿಯಿಂದ ಪ್ರಜಾಮುಖಂಡರು ಪೂರ್ವ ವೈರವನ್ನು ತೃಪ್ತಿಗೊಳಿಸಲಿಲ್ಲ. ಇನ್ನು ಮುಂದೆಯೂ ಈ ರಾಜಕೀಯ ಮಾರ್ಪಾಟವು ರಕ್ತಪಾತವಿಲ್ಲದೆ ಕಡೆಗಂಡು ರಾಜ್ಯಹಿತಕರವಾದ ಆಧಿಪತ್ಯವು ಸ್ಥಾಪಿಸಲ್ಪಡುವದೆಂದು ಕೋರುವೆವು.

ಐದನೇ ಮಹಮ್ಮದನು ಪದಭ್ರಷ್ಟನಾಗಿ ಅವನ ಮಗನಿಗೆ ಪಟ್ಟಕಟ್ಟಿದ ಸಂಗತಿಯನ್ನು ಬ್ರಿಟಿಷ್ ಸರಕಾರದ ಪಾರಸಿ ಪ್ರತಿನಿಧಿಗೆ (Consul) ಪರ್ಶಿಯಾದಿಂದ ತಿಳಿಸಿದೊಡನೆ ಬೊಂಬ್ಯಾಯ ಪಾರಸಿ ಪ್ರಜೆಗಳನ್ನು ಕೂಡಿಸಿ ಅವರು ಈ ವರ್ತಮಾನವನ್ನು ಜನರಿಗೆ ತಿಳಿಸುವಾಗ "ನಮ್ಮ ರಾಜ್ಯವು ಕಠಿಣವಾದ ರೋಗದಿಂದ ಸದ್ಯ ಪಾರಾದ ರೋಗಿಯಂತೆ ಇರುವದು. ಜಾಡ್ಯಹೋದರೂ ಅದರ ಫಲವಾದ ದೌರ್ಬಲ್ಯ ಕೆಲವು ಕಾಲವಿರುವದು. ಆ ಸಮಯದಲ್ಲಿ ಅದಕ್ಕೆ ಜಾಗರೂಕತೆಯ ಆರೈಕೆ ಬೇಕು. ಆಗ್ಯೆ ಅದು ಶಕ್ತಿ ಹೊಂದುವದು. ನಾವು ನಮ್ಮ ರಾಗದ್ವೇಷಗಳನ್ನು ಜೈಸಿ ಸ್ವಾರ್ಥವನ್ನು ಕಳೆದು ಐಕ್ಯವನ್ನು ಸಂಪಾದಿಸಿದ ವಿನಹ ನಮ್ಮ ಜನಾಂಗಕ್ಕೆ ಮಹತ್ವ ಬಾರದು" ಎಂದು ಮುಂತಾಗಿ ಹೇಳಿದರು. ಈ ಮಾತುಗಳು ಅಕ್ಷರಶಃ ವಾಸ್ತವಿಕವಾಗಿವೆ. ದೇಶದ ಒಳ ವೈರಿಗಳನ್ನೂ ಹೊರಗಣ ಗಂಡಾಂತರಗಳನ್ನೂ ತಪ್ಪಿಸಲಿಕ್ಕೆ ಜನರು ಜಾಗರೂಕರಾಗಿರಬೇಕಾಗಿದೆ.

ಪಾರಸಿ ಪ್ರತಿನಿಧಿಗಳ ಮೇಲ್ಕಂಡ ಭಾಷಣದಲ್ಲಿ ಅವರು ಇನ್ನೊಂದು ಆಶೆಯನ್ನು ಪ್ರದರ್ಶಿಸಿರುವರು. ಪೂರ್ವದಲ್ಲಿ ಮುಸಲ್ಮಾನ ಸಾಮ್ರಾಜ್ಯವು ಮಹಾ ವೈಭವದಿಂದ ಮೆರೆಯುತ್ತಿತ್ತು. ಆ ಮತ ಸ್ಥಾಪಕನಾದ ಮಹಮ್ಮದನ ಜನ್ಮ ಭೂಮಿ ಅರಬಸ್ಥಾನದಿಂದ ಹಿಡಿದು ತುರ್ಕ್ಯ, ಆಫ್ರಿಕ, ಪರ್ಶಿಯಾ, ಅಫಘಾನಿಸ್ಥಾನ, ಹಿಂದೂಸ್ಥಾನ, ಮುಂತಾಗಿ, ಗ್ರೀಸ್, ಸ್ಪೇನ್ ಮೊದಲಾದ ಯುರೋಪಿಯ ದೇಶಗಳ ವರೆಗೆ ಇಸ್ಲಾಮನ ಆಧಿಪತ್ಯವು ಹರಡಿತ್ತು. ಈಗಿನ ಮುಸಲ್ಮಾನ ರಾಜ್ಯಗಳಾದ ಪರ್ಶಿಯಾ, ತುರ್ಕ್ಯ, ಅಫಘಾನಿಸ್ಥಾನ, ಮೊದಲಾದ ದೇಶಗಳು ಒಗ್ಗಟ್ಟಾಗಿ ಇನ್ನೊಮ್ಮೆ ಆ ಉಚ್ಚಸ್ಥಾನವನ್ನು ಹೊಂದಬೇಕೆಂಬ ಉತ್ಸಾಹವು ಪ್ರತಿನಿಧಿಯರಲ್ಲಿ ತುಂಬಿದೆ. ಅದಿರಲಿ, ಪಾರಸಿ ದೇಶವು ಒಮ್ಮೆ ಸೈರಸ್ ಮೊದಲಾದ ಪ್ರಭುಗಳ ಕೈಕೆಳಗೆ ಹೆಚ್ಚಿನ ಖ್ಯಾತಿ ಹೊಂದಿತ್ತು. ದರಾಯಸನು ಹಿಂದುಸ್ಥಾನದ ವರೆಗೆ ಬಂದು ಸಿಂಧು ನದಿಯ ಪ್ರಾಂತ್ಯದಲ್ಲಿ ಅಧಿಕಾರವನ್ನು ಸ್ಥಾಪಿಸಿದನು. ಪಲೆಸ್ತೀನ ಮೊದಲಾದ ಪಶ್ಚಿಮ ಪ್ರದೇಶಗಳನ್ನು ಜೈಸಿ ಪಾರಸಿ ಸೈನ್ಯ ಗ್ರೀಸ್ ದೇಶದ ವರೆಗೆ ಒಮ್ಮೆ ಮುಂದರಿಸಿತ್ತು. ಕ್ರಮೇಣ ಆ ದೇಶವನ್ನು ಅಂಧಕಾರವು ಆವರ್ತಿಸಿತು. ಈಗ ಇನ್ನೊಮ್ಮೆ ಪೂರ್ವ ಶ್ರೇಯಸ್ಸನ್ನು ಹೊಂದಲಿಕ್ಕೆ ಇವರು ಮಾಡುವ ಪೇಚಾಟಗಳು ಸ್ತುತ್ಯವಲ್ಲವೇ?

ಸ್ತ್ರೀಶಿಕ್ಷಣ.

"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ"

ಬಹುಕಾಲ ಬೆಳೆದ ಮರವನ್ನು ಕೆಡಹ ಬೇಕಾದರೆ ಕೊಡಲಿಯ ಪೆಟ್ಟು ಒಂದರ ಮೇಲೊಂದು ಬೀಳಬೇಕು. ಹಳೇ ರೋಗವು ವಾಸಿಯಾಗಲಿಕ್ಕೆ ದಿನಂಪ್ರತಿ ಔಷಧ ಕುಡಿಯುತ್ತಾ ಇರಬೇಕು. ಹಾಗೆಯೇ ಬಾಲಿಕಾ ಶಿಕ್ಷಣದ ಮೇಲಿರುವ ಹುಟ್ಟು ಹಗೆಯನ್ನೂ ಪೂರ್ವಾಚಾರ ಪಕ್ಷಪಾತವನ್ನೂ ಕೀಳಬೇಕಾದರೆ ಆ ವಿಷಯವನ್ನು ಆಗ್ಯಾಗ್ಯೆ ಜನರ ಮುಂದಿಡಲವಶ್ಯವಿದೆ. ಇದಲ್ಲದೆ ಒಂದು ಸಂಗತಿಯ ಚತುರಂಗವನ್ನು ಅರಿಯುವಂತೆ ಅದನ್ನು ಪದೇ ಪದೇ ಚರ್ಚಿಸ ತಕ್ಕದ್ದು. ಹಾಡು ಹಾಡಿದ್ದೇ ಆದರೂ ರಾಗ ಒಂದೇ ಅಲ್ಲ.

ಇಷ್ಟರ ವರೆಗೆ ಪರಿಷದಗಳಲ್ಲಿ, ಸಭೆಗಳಲ್ಲಿ, ವರ್ತಮಾನ ಪತ್ರಗಳಲ್ಲಿ, ವಗೈರೆ ನಡೆದ ವಾದವಿವಾದಗಳಿಂದ ಸ್ತ್ರೀಯರಿಗೆ ವಿದ್ಯೆ ಬೇಕೆಂಬದು ಸಿದ್ಧವಾಯಿತೆನ್ನಬಹುದು. ನಮ್ಮ ಹುಡುಗಿಯರು ಕಲಿತು ಕರಣೀಕರಾಗಬೇಡವೆಂದು ಕೆಲವು ತಾಯಿಯಂದಿರು ಹೇಳುವದುಂಟು. ಇದಕ್ಕೆ ಪ್ರತ್ಯುತ್ತರವನ್ನು ಕೆಳಗೆ ಕೊಡುವೆವು. ಮನೆಯ ನಾಲ್ಕು ಗೋಡೆಯೊಳಗೇನೇ ನಮ್ಮ ವಿದ್ಯೆಗೂ ಅವಕಾಶವುಂಟು. "ನಮ್ಮ ಹುಡುಗಿಯರು [illegible] ವಿದ್ಯೆಯಿಲ್ಲದೆ ಸುನೆಮಾಡಲಿಲ್ಲವೇ" ಎನ್ನಬಹುದು. ನಮ್ಮ ಹುಡುಗಿಯರು [illegible] [illegible] ಬಾರಲಿಲ್ಲವೇ! ಆದರೆ ಅವರ

ಬಾಳು ಹ್ಯಾಗಿತ್ತು? ತೀರ್ಥಯಾತ್ರೆಗೆ ಮುಂಚೆ ಹೋದವರಲ್ಲಿ ಎಷ್ಟು ಜನರು ಮರಳುತ್ತಿದ್ದರು? ಈ ವಿಷಯವು ಹಾಗೆಯೇ. ವಿದ್ಯೆಯು(ವಿದ್ಯೆಯೆಂದರೆ ಏನೆಂಬುದನ್ನು ಕೆಳಗೆ ವಿವರಿಸುವೆವು)ಮನೆಯಲ್ಲಿ ಸ್ವರ್ಗದ ಸುಖವನ್ನೂ ಶಾಂತಿಯನ್ನೂ ತರಲಾಪದು.

ಹೆಣ್ಣುಮಕ್ಕಳಿಗೆ ವಿದ್ಯೆ ಬೇಕೆಂಬ ಒಂದು ವಿಷಯವು ಇತ್ಯರ್ಥವಾಯಿತೆನ್ನಬಹುದಾದರೂ ಇದಕ್ಕೆ ಸಂಬಂಧ ಪಟ್ಟ ಇನ್ನು ಕೆಲವು ಪ್ರಶ್ನೆಗಳು ನಿಶ್ಚಿತವಾಗಲಿಕ್ಕಿವೆ. ನಮ್ಮ ಬಾಲವಿವಾಹ ಪದ್ಧತಿಯನ್ನೂ ಬಾಲಿಕಾ ಶಿಕ್ಷಣವನ್ನೂ ಸಮಜಾಯಿಸುವದು ಹ್ಯಾಗೆ? ಆವೆರಡನ್ನು ಒಟ್ಟಿಗೆ ಇರಗೊಡಿಸ ಸಾಧ್ಯವೇ ಎಂಬ ಸವಾಲುಂಟು. ಅದನ್ನು ಈ ಸಂದರ್ಭದಲ್ಲಿ ಚರ್ಚಿಸುವದಿಲ್ಲ. ಬಾಲೆಯರಿಗೆ ಯಾವ ತರದ ವಿದ್ಯೆ ಕೊಡಬೇಕೆಂಬದು ಇನ್ನೊಂದು ವಿಶೇಷ ಪ್ರಶ್ನೆಯದೆ.

ಭೌತಿಕ ಶಾಸ್ತ್ರದಲ್ಲಿ ತಾನು ಮಾಡಿದ ಶೋಧನೆಗಳಿಂದ ತನ್ನ ದೇಶಕ್ಕೆ ಕೀರ್ತಿ ತಂದ ಶ್ರೀಯುತ ಜಗದೀಶ ಚಂದ್ರ ಬೋಸರವರ ಸಹಧರ್ಮಿಣಿ ಶ್ರೀಮತಿ ಅಬಲಾ ಬೋಸರು ಬರೆದ ಒಂದು ಲೇಖನವನ್ನು ಈ ಪ್ರಶ್ನೆಗೆ ಉತ್ತರವಾಗಿ ತಕ್ಕೊಳ್ಳಬಹುದು. ಈ ವಿದ್ವಾಂಸ ಸ್ತ್ರೀಯು ತನ್ನ ಸ್ವಂತ ವ್ಯಾಸಂಗದಿಂದಲೂ ಪ್ರಾಜ್ಞಪತಿಯ ಸಹವಾಸದಿಂದಲೂ ಯೂರೋಪ್ ಅಮೇರಿಕದ ಸ್ತ್ರೀ ಸಮಾಜಗಳ ಸಂಪರ್ಕದಿಂದಲೂ ತನ್ನ ನಾರೀ ಸ್ವಭಾವದಿಂದಲೂ ಮೇಲ್ಕಂಡ ವಿಷಯವನ್ನು ನಿರ್ಧರಿಸಲರ್ಹಳಾಗಿದ್ದಾಳೆ. ವಿದ್ಯೆಯೆಂದರೆ ಬರೇ ಅಕ್ಷರ ಜ್ಞಾನವಲ್ಲ, ಪುಸ್ತಕಪಾಠವಲ್ಲ, ಬುದ್ಧಿ ಪರಿಪಾಕವಾಗಿದೆಯೆಂದು ಇವರ ಅಭಿಮತ. ಈ ಅರ್ಥದಲ್ಲಿ ವಿದ್ಯಾವಂತಳಾದವಳ ಮನೆಯಲ್ಲಿ ತೋರುವ ಓಜೆಯೂ, ಮಕ್ಕಳ ಒಳ್ಳೇನಡೆನುಡಿಗಳೂ, ಮಡಿಯಾದ ಉಡಿಗೆತೊಡಿಗೆಗಳೂ, ನಿರ್ದುಷ್ಟ ಗೃಹ ಪರಿಪಾಲನವೂ ಆ ವಿದ್ಯೆಯ ಪರಿಣಾಮವಾಗಿರುವವು. ವಿದ್ಯೆಯ ಉದ್ದಿಶ್ಯವು ಆ ಬಾಲೆಯರನ್ನು ತಮ್ಮ ಕರ್ತವ್ಯದಿಂದ ತಲೆತಪ್ಪಿಸಿಗೊಡುವದಲ್ಲ. ಆ ಕರ್ತವ್ಯವನ್ನೇ ಸಾಂಗವಾಗಿ ಕೈಗೂಡಿಸುವಂತೆ ಅವರನ್ನು ಸುಶೀಲೆಯರಾಗಿ ಮಾಡುವದಾಗಿದೆ. ಆ ಕರ್ತವ್ಯಗಳ್ಯಾವವು? "ಕರಣೀಕ"ರಾಗುವದಲ್ಲ. ಕುಟುಂಬದ ಆರೋಗ್ಯ ರಕ್ಷಣೆ ಮಕ್ಕಳ ಆರೈಕೆ, ಮನೆಯನ್ನೂ ಪರಿಸರವನ್ನೂ ಶುಚಿ ಇಡಿಸುವದು, ಕಾಯಿಲೆಯಲ್ಲಿ ಪರಾಂಬರಿಸುವದು, ಅಪಘಾತ, ಅಂಟುರೋಗಗಳು ಬಂದರೆ ನಿವಾರಿಸುವದು ಇವು ಮೊದಲಾದವು. ಶ್ರೀಮತಿ ಬೋಸರಂತಹ ಸ್ತ್ರೀಯರು ಹೇಳಿದ್ದರಲ್ಲಿ ಈ ಮಾತಿಗೆ ಭಾರವುಂಟು.

ಈಗ ಇಂಗ್ಲಾಂಡ್ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಹೆಂಗಸರು ತಮಗ ಗಂಡಸರ ರಾಜಕೀಯ ಸ್ವತಂತ್ರ್ಯಗಳು ಬೇಕೆಂದು ಕಳಕಳಿಸಿಸಿದ್ದಾರೆ. ಶ್ರೀಮತಿ ಬೋಸರು ಈ ಕುರಿತು ಏನು ಹೇಳುವರು? "ಸ್ತ್ರೀಯ ಮುಖ್ಯ ಸ್ವತಂತ್ರ್ಯವು ಸೇವೆಯೇ. ಗೃಹ ಪರಿಪಾಲನೆಗಿಂತ, ಸಮಾಜ ಸೇವೆಗಿಂತ ಹೆಂಗಸಿಗೆ ಜೀವನದಲ್ಲಿ ಬೇರೆ ಪವಿತ್ರ ಉದ್ದೇಶವಿಲ್ಲ. ಈ ಮೂಲಕ ಆಕೆಯು ತನ್ನ ನಮ್ರತೇ ಭಾವವನ್ನು ತೋರುವಳು. ಈ ಮೂಲಕ ಆಕೆಯ ಪ್ರಕೃತಿ ವಿಕಾಸ ಹೊಂದುವದು"

ಪಾಶ್ಚಾತ್ಯ ಸಮಾಜವನ್ನು ಅನುಸರಿಸಿ ನಾವು ಅವರ ಗತಿಯನ್ನೈದದಂತೆ ಶ್ರೀಮತಿಯವರು ಮೇಲ್ಕಂಡ ಎಚ್ಚರಿಕೆ ಕೊಟ್ಟಿರುವರು. ಯೂರೋಪ್ ಅಮೇರಿಕಗಳಲ್ಲಿ ಎರಡು ಜಾತಿಯ ಹೆಂಗಸರು ಹುಟ್ಟಿರುವರು. "ಬ್ರಿಜ್"ಮೊದಲಾದ ವಿನೋದ ನಿರತರಾದ, ದ್ಯೂತಮೋಹಿತ ವಸ್ತ್ರಾಲಂಕಾರ ಭೂಷಣ ಮಗ್ನರಾದ, ವಿಹಾರಪರರಾದ ಸಂಪನ್ನ ಸ್ತ್ರೀ ಸಮುದಾಯದೊಂದು, ಮಕ್ಕಳು ಮನೆಗಳನ್ನು ಬಿಟ್ಟು ಉದರ ನಿರ್ವಾಹಕ್ಕಾಗಿ ಕಾರ್ಖಾನೆಗಳಲ್ಲಿಯೂ ವರ್ತಕರ ಬಂಡಸಾಲೆಗಳಲ್ಲಿ ಶಾನುಭಾಗಿ ಅಥವಾ ಮಾರಾಟ ಕೆಲಸಕ್ಕೂ ಹೋಗಿ ತೊಳಲುವ ಸ್ತ್ರೀಭಾವ ವಿಮುಕ್ತರಾದ ಸ್ತ್ರೀಸಮುದಾಯವಿನ್ನೊಂದು. (ಸಂಪನ್ನರ) ಸ್ವಾರ್ಥ ವೈಭವದಿಂದ ಮತ್ತು (ದೀನರ) ಜೀವನಾರ್ಥ ಕಲಹ ಬಲುಮೆಯಿಂದ ಆರ್ದ್ರ ಹೃದಯಕ್ಕೂ ಕರ್ತವ್ಯಕ್ಕೂ ಲೋಪ ಬರುವದು. ಯಾವದು ಉದಾತ್ತ ಮಹೋದ್ದೇಶಗಳನ್ನು ಮಾಜಿ ಹೃದಯವನ್ನು ಮುದುರಿಸುವದೋ ಅದು ಶಿಕ್ಷಣವಲ್ಲ.

ಒಂದು ಮನೆಯಲ್ಲಿ ಹೆಂಗಸೂ ಗಂಡಸೂ ದುಡಿಯ ಹತ್ತಿದರೆ ಒಂದು ಮನೆಗೆ ಇಬ್ಬರು ಯಜಮಾನರಾದರು. ಇಬ್ಬರು ಅರಸರಿದ್ದ ರಾಜ್ಯ ಬಾಳುವದೇ? ತನ್ನ ಕರ್ತವ್ಯ ಮರೆತು ವಿಷಯ ಸುಖದಲ್ಲಿ ಕಾಲಕಳೆಯುವ ಸ್ತ್ರೀಯರು ಸಮಾಜಕ್ಕೆ ವ್ಯಥಪಾತ್ರರೆಂದು ಬೇರೆ ಹೇಳಬೇಕೇ? ಸ್ತ್ರೀಯರಿಗೆ ಯಾವ ಶಿಕ್ಷಣವೂ ಕೊಡದೆ ಅವರನ್ನು ಊಳಿಗದ ಮೃಗಗಳಂತೆ ಇಡುವ ಪದ್ಧತಿಯು ಇಷ್ಟೇ ಆಕ್ಷೇಪಕರ. ಗಂಡ ಹೆಂಡರಲ್ಲಿ ಯಥಾರ್ಥವಾದ ಚಿರಸ್ಥಾಯಿಯಾದ ಪ್ರೇಮಕ್ಕೆ ಆಧಾರವು ಪರಸ್ಪರಾವಲಂಬನವೇ. ಹೆಂಗಸು ತನ್ನ ಶಿಕ್ಷಣ ಬಲದಿಂದ ಗೃಹಪಾಲನ ದಕ್ಷಳಾದರೆ ಗಂಡಸು ಉದರನಿರ್ವಾಹ, ಕಾರ್ಯ ನಿಪುಣನಾದರೆ ಒಬ್ಬರಲ್ಲಿ ಇನ್ನೊಬ್ಬರಿಗೆ ಗೌರವ ಹುಟ್ಟಿ ಪ್ರೇಮ ಬೆಳೆಯುವುದೆ. ಗೃಹಕೃತ್ಯಕ್ಕೆ ತಕ್ಕುದಾದ, ಘನತೆ ಬರುವದು. ತಾಯಿಯು ಜನಾಂಗದ ಮಾತೆಯು. ಇಂಥವಳ ಉದ್ಯೋಗವು ತಿರಸ್ಕರಣೀಯವೇ? ಇಂಥ ಉಚ್ಚ ಪದವಿಗೆ ವಿದ್ಯೆ ಅನಾವಶ್ಯಕವೇ?

ಪಾತಿವ್ರತ್ಯಾದಿ ಸನಾತನಧರ್ಮವ್ಯಾಪ್ತ ಸುಧಾರಣೆಯಲ್ಲಿ ಹುಟ್ಟಿ ಬೆಳೆದ ನಮ್ಮ ಸ್ತ್ರೀಯರು ತಮ್ಮ ಆದರ್ಶವನ್ನು ಬಹುಕಾಲಕ್ಕೆ ಮರೆವ ಹಾಗಿಲ್ಲವೆಂದು ಶ್ರೀಮತಿ ಬೋಸರವರು ಹೇಳುವರು. ಅಂತಹ ಆದರ್ಶಗಳು ಯಾವವು? ಸಾವಿತ್ರಿಯ ಆದರ್ಶಗಳು, ದಮಯಂತಿಯ, ಸೀತೆಯ ಆದರ್ಶಗಳು. ಪತಿಸೇವೆ ... ಸುಖದಲ್ಲಿ ಬಾಲರ ಕಲ್ಯಾಣದಲ್ಲಿ ತಾನು ಸುಖಿಸುವ ಶೀಲ, ಅವರು ಅನುಭವಿಸದ ಯಾವ ಭೋಗವನ್ನೂ ಒಲ್ಲದ ಭಾವ, ಇಂತಹ ನಾರಿಯನ್ನು ಪಾವನಳೆಂದು ಶ್ರೀಮತಿಯವರು ಕರೆಯುವರು.

ಅಕ್ಷರಾಭ್ಯಾಸವಲ್ಲದಿದ್ದರೂ, ಪುಸ್ತಕಪಾಠವಲ್ಲದಿದ್ದರೂ, ಹಿಂದಿನ ತಲ್ಲಾಂತರ ಸ್ತ್ರೀಯರಿಗೆ ವಿದ್ಯೆಯಿತ್ತು. ಸಾವಿತ್ರಿ ಸೀತೆಯರ ಆದರ್ಶ ಪ್ರೇರಿತಳಾದ ತಾಯಿಯ ನಡತೆಯಿಂದ, ಪುರಾಣ ಶ್ರವಣದಿಂದ, ಹರಿಕಥಾಮೃತ ಸೇವನೆಯಿಂದ, ಹರಿಕೀರ್ತನ, ಭಜನೆಗಳಿಂದ, ವ್ರತೋಪವಾಸಗಳಿಂದ, ಹುಡುಗಿಯಲ್ಲಿ ಶ್ರೀಮತಿ ಬೋಸರು ಪ್ರಸ್ತಾಪಿಸಿದ ನಾಗರಿಕತೆಯು ಖಚಿತವಾಗುತ್ತಿತ್ತು. ಪುಸ್ತಕ ಜ್ಞಾನವನ್ನು ನಿಷಿದ್ಧವೆಂದು ವಿಧಿಸಿದ ಮುಂಚಿನ ಪದ್ಧತಿಯು ನಿರ್ದುಷ್ಟವೆಂದಾಗಲೀ, ಅನುಸರಣೀಯವೆಂದಾಗಲಿ ನಾವು ಹೇಳುವದಲ್ಲ. ಆದರೆ ಹೊಸ ಪದ್ಧತಿಯಿಂದ ನಿಜವಾದ ವಿದ್ಯಾಭ್ಯಾಸವು ಎಷ್ಟರಮಟ್ಟಿಗೆ ಸಾಗುವದೆಂದೂ, ಇದರಲ್ಲಿ ಯಾವ ಪರಿಷ್ಕಾರವು ಅವಶ್ಯಕವೆಂದೂ ವಿದ್ವಾಂಸರೇ ನೋಡತಕ್ಕದ್ದು.

ಕೀರ್ತಿಶೇಷ ಸುಬ್ರಾಯ ಪೈಗಳವರ ನಿರ್ಯಾಣದ ಸಹಸಂತಾಪ ಸೂಚಕ ಸಭೆ.

ಮಂಗಳೂರು. ಕಳೆದ ಆದಿತ್ಯವಾರ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈಗಳವರ ಮರಣದ ಸಹಸಂತಾಪವನ್ನು ಸೂಚಿಸುವರೆ ಗೌಡಸಾರಸ್ವತರ ಸಭೆಯು ಜರಗಿತು. ಈ ಜಾತಿಯ ಸರಕಾರಿ ಉದ್ಯೋಗಸ್ಥರೂ, ವಕೀಲರೂ, ಸಾವುಕಾರರೂ ಇತರರೂ ಆ ದಿನ ಭುವನೇಂದ್ರ ಸಭಾಸದನದಲ್ಲಿ ತುಂಬಿದ್ದರು. ಸಭೆಕೂಡುತ್ತಲೇ ಮ॥ ರಾ॥ ರಾ॥ ಎಮ್ ಶೇಷಗಿರಿ ಪ್ರಭು ಎಮ್ ಎ ಇವರನ್ನು ಸಭಾಧ್ಯಕ್ಷರಾಗಿ ಚುನಾಯಿಸಿದರು. ಸಭಾಧ್ಯಕ್ಷರವರು ಆ ಪಾವನ ಪುರುಷರಾದ ಪೈಗಳವರ ಗುಣವರ್ಣನೆಯನ್ನು ಮಾಡಿ ಜಾತಿಯವರ ಪ್ರಯೋಜನಾರ್ಥವಾಗಿ ಮಾಡಿದ ಸತ್ಕಾರ್ಯಗಳನ್ನು ಒಂದೊಂದಾಗಿಯೇ ಶ್ಲಾಘಿಸಿದರು. ಸ್ವಜಾತಸ್ಥರೆಲ್ಲರೂ ಈ ಕಾರ್ಯಗಳೆಲ್ಲವನ್ನೂ ಒಗ್ಗಟ್ಟಿನಿಂದ ಮುಂದುವರಿಯುತ್ತಿರಬೇಕಾಗಿ ಸಭಿಕರನ್ನು ಪ್ರಾರ್ಥಿಸಿದರು. ಅಧ್ಯಕ್ಷರಿಂದ ವ ಸಭೆಯಲ್ಲಿ ಮಾತಾಡಿದ ಇನ್ನು ಹಲವರ ಭಾಷಣಗಳಲ್ಲಿ ವಿರಾಮ ಚಿನ್ಹೆಗಳೇ ಅಶ್ರುಧಾರೆಗಳಾಗಿದ್ದವು. ಗುಣರಾಶಿಯಾಗಿದ್ದ ಆ ಮಹಾತ್ಮರ ಸದ್ಗುಣ ವರ್ಣನೆಯನ್ನು ಸಭೆಯಲ್ಲಿ ಹದಿನಾರು ಯಾ ಹದಿನೇಳು ಜನ ಸಭಾಸದರವರು ಮೂರು ಮೂರುವರೆ ತಾಸುಗಳ ತನಕ ಮಾತಾಡುತ್ತಿದ್ದರೂ ಸಭಿಕರಲ್ಲಿ ಈ ಪುಣ್ಯ ಶ್ಲೋಕಿಯ ನಾಮಸ್ಮರಣವನ್ನು ಕೇಳುವ ತೃಷ್ಣೆಯು ತೃಪ್ತಿಯಾಗಲಿಲ್ಲ.

ಸ್ವಜಾತಿಯವರ ವಿದ್ಯಾಭಿವೃದ್ಧಿ ಮೊದಲಾದವುಗಳನ್ನು ಸಾಧಿಸಿ ಇನ್ನು ಹಲವು ವಿಧಾನಗಳಲ್ಲಿ ಜಾತಿ ಮೇಲ್ಮೆಗೆ ತಕ್ಕದಾದ ಏರ್ಪಾಡುಗಳನ್ನು ಮಾಡಿದ ಮಹಿಮಾವಂತರಾದ ಪೈಗಳವರ ಮರಣದಿಂದ ಜಾತಿಬಾಂಧವರಲ್ಲಿ ಗಣಿಸಲಶಕ್ಯವಾದ ನಷ್ಟವುಂಟಾಗಿರುವುದೆಂಬ ನಿರ್ಣಯವನ್ನು ಮ ರಾ ರಾ ರಾವ್ ಸಾಹೇಬ ಗೋಪಾಲ ಪೈಗಳವರು ಸಭೆ ಮುಂದಿಟ್ಟರು. ಈ ನಿರ್ಣಯವನ್ನು ಅನುಮೋದಿಸಿ ರಾ ಮೊಕ್ತೇಸರ ರಂಗ ಪೈಗಳವರೂ ಸೆಂಟ್ರಲ್ ನಾಜರರಾದ ಪ ನರಸಿಂಹ ಭಂಡಾರಕಾರರವರೂ, ಹಜೂರ ಸಿರೆಸ್ತೆದಾರ ರಾ ಮ ವೆಂಕಟರಾಯರವರೂ ಮಾತಾಡಿದರು. ಪೈಗಳವರ ಸಹವಾಸದಲ್ಲಿಯೇ ಇದ್ದು ಅವರ ಕೂಡೆ ಒಡನಾಡಿಕೊಂಡಿದ್ದ ರಾ ವೆಂಕಟರಾಯರವರು ತಮ್ಮ ಈ ಪ್ರಿಯ ಮಿತ್ರನ ವಿಷಯವಾದ ಈ ನಿರ್ಣಯವನ್ನು ಅನುಮೋದಿಸುತ್ತಿದ್ದಾಗ ತಡವೆ ತಡವೆಗೆ ತಡೆಯಲಾರದ ದುಃಖ ಪರಂಪರೆಯಿಂದ ಅಧಿಕ ವ್ಯಾಕುಲ ಪಟ್ಟರು. ಸಭಿಕರೆಲ್ಲರಿಗೂ ಮುಂಬೈಯಿಯ ಕಳೆದ ಪರಿಷದದ ಅಧ್ಯಕ್ಷ ದತ್ತಾತ್ರೆಯ ಬಲವಂತ ರಾವ್ ದಿಕ್ಷಿತರೇ ಮೊದಲಾದ ಮುಂಬೈ ಗೃಹಸ್ಥರಿಂದಲೂ, ಬೆಳಗಾಂ, ಖಾನಾಪುರ, ಕುಮ್ಟಾ, ಕಾರವಾರ, ಕಲ್ಲಿಕೋಟೆ, ಕೊಚ್ಚಿ, ತಲಚೇರಿ, ಕಣ್ಣನೂರ್, ಗೋದಾವರಿ, ಕಡಪಾ, ಕೂನೂರು ಮೊದಲಾದ ಪ್ರಾಂತ್ಯಗಳಿಂದಲೂ, ಜಿಲ್ಲೆಯ ಬಯಾ ತಾಲೂಕು ಪಟ್ಟಣಗಳಿಂದಲೂ ಶ್ರೀ ಕೈವಲ್ಯ ಮಠದ ಶ್ರೀ ಪಾದಂಗಳವರಿಂದಲೂ ಶ್ರೀ ಕಾಶಿ ಮಠದ ಶ್ರೀ ಪಾದಂಗಳವರಿಂದಲೂ ಇನ್ನು ಅನೇಕ ಕಡೆಗಳಿಂದಲೂ ಬಂದ ಸಹಸಂತಾಪ ಸೂಚಕ ಟೆಲಿಗ್ರಾಮ್‌ಗಳನ್ನು ಓದಿ ಹೇಳಿದರು. ತದನಂತರ ಸಭೆಯವರೆಲ್ಲರೂ ತಮ್ಮ ಆಸನಗಳಿಂದ ಎದ್ದು ನಿಂತು ಈ ನಿರ್ಣಯವನ್ನು ಮಂಜೂರು ಮಾಡಿದರು.

ಸಭಿಕರ ಸಹಸಂತಾಪವನ್ನು ಅವರ ಪುತ್ರ, ಸಹೋದರರು ಮೊದಲಾದವರಿಗೆ ಸೂಚಿಸಬೇಕೆಂಬ ನಿರ್ಣಯವು ಮ ರಾ ರಾ. ವಕೀಲ ಅಡಿಗೆ ಶ್ರೀನಿವಾಸರಾಯರವರಿಂದ ಸಭೆಯ ಮುಂದಿಡಲಾಯಿತು. ಬೆಂಚ್ ಮೆಜಿಸ್ಟ್ರೇಟ್ ಸಾವುಕಾರ ನರಸಿಂಹ ಮರ್ತುಭಂಡಾರಿ, ತಹಶಿಲ್‌ದಾರ ರಾ. ಮ. ಪಾಂಡುರಂಗಶೆಣೈ, ಹುಂಡಿ ವಾಮನರಾಯರವರಿಂದ ಅನುಮೋದಿಸಲ್ಪಟ್ಟು ಈ ನಿರ್ಣಯವು ಸಭಿಕರೆಲ್ಲರಿಂದಲೂ ಸ್ವೀಕರಿಸಲ್ಪಟ್ಟಿತು.

ಇತರ ಊರುಗಳಲ್ಲಿರುವ ಜಾತಿಗೃಹಸ್ಥರ ಅಭಿಪ್ರಾಯಗಳನ್ನು ಸಹಾ ಕೇಳಿಕೊಂಡು ಈ ಮಹಾತ್ಮರ ಸ್ಮರಣಾರ್ಥವಾಗಿ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬ ನಿರ್ಣಯವನ್ನು ಮ. ರಾ. ರಾ. ವಕೀಲ ಬಿ. ವೆಂಕಟರಾಯರವರು ಸಭೆಯ ಮುಂದಿರಿಸಿದರು. ರಾ. ಮ. ಶ್ರೀನಿವಾಸ ಕಾಮತ್, ರಾ. ಸಾವುಕಾರ ಮ. ಶೇಷಗಿರಿ ಪೈ, ರಾ. [illegible] ವಕೀಲ ರಾ. [illegible]

ವಾಮನ ನಾಯ್ಕ ಇವರಿಂದ ಇದು ಅನುಮೋದಿಸಲ್ಪಟ್ಟು ಸಭೆಯಲ್ಲಿ ಸರ್ವಾನುಮತ ವಾಯಿತು. ಈ ನಿರ್ಣಯದ ಕುರಿತು ಸಭಾಸದರು ಮಾತಾಡುತ್ತಿರುವಾಗ ಸ್ವಜಾತಿ ಯವರು ಈ ಮೊದಲೇ ಆಲೋಚಿಸಿಟ್ಟ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿ ಸಲುವಾಗಿ ಒಂದು ಡಿಸ್ಟ್ರಿಕ್ಟ್ ಫಂಡ್. ಯಾ ದ್ರವ್ಯಸಹಾಯಕ ನಿಧಿಯನ್ನು ಈ ಸಂದರ್ಭದಲ್ಲಿ ಏರ್ಪ ಡಿಸಿ ಪೈಗಳವರ ಹೆಸರಲ್ಲಿ ಸ್ವಜಾತಿಯ ವಿದ್ಯಾರ್ಥಿಗಳಿಗೆ ಆಯಾ ವಿದ್ಯಾಭ್ಯಾಸಗಳಿಗೋ ಸ್ಕರ ವಿದ್ಯಾರ್ಥಿ ವೇತನಗಳ ಸ್ಥಾಪನೆಯ ಕುರಿತು ಸಭಿಕರಿಗೆ ಸೂಚಿಸಿರುವರಲ್ಲದೆ, ಅವರ ಜೀವನ ಚರಿತ್ರೆಯನ್ನು ಸಹಾ ಪುಸ್ತಕ ರೂಪವಾಗಿ ಪ್ರಕಟಿಸಬೇಕಾಗಿ ಅಪೇಕ್ಷಿ ಸಿರುವರು. ವಿದ್ಯಾಭಿವೃದ್ಧಿಗೆ ತನ್ನ ತನುಮನಧನವನ್ನರ್ಪಿಸಿದ ಈ ದಾನಶೀಲರ ಸ್ಮರಣಾರ್ಥವಾಗಿ ಇಂತಹ ದ್ರವ್ಯಸಹಾಯಕ ನಿಧಿಯನ್ನು ಏರ್ಪಡಿಸುವುದು ಯುಕ್ತಿ ಯುಕ್ತವಾಗಿರುವುದು. ಇನ್ನು ಯಾವ ಯಾವ ಏರ್ಪಾಡುಗಳನ್ನು ಮಾಡಬಹುದೆಂ ಬದನ್ನು ಮುಂಬಯಿಯ ಸ್ವಜಾತಿ ಬಾಂಧವರಿಂದ ಪ್ರಕಟಿಸಲ್ಪಟ್ಟು ನಮಗೆ ಕಳುಹಿಸಿ ಕೊಟ್ಟ ಪ್ರಕಟನಾ ವ ವಿಜ್ಞಾಪನಾ ಪತ್ರದಿಂದ ತಿಳಕೊಳ್ಳಬಹುದು. ಇದನ್ನು ಇನ್ನೊಂದು ಕಡೆಯಲ್ಲಿ ಮುದ್ರಿಸಿರುವೆವು.

ಮೇಲಿನ ನಿರ್ಣಯವನ್ನು ತಕ್ಕ ರೀತಿಯಲ್ಲಿ ಜಾರಿಗೆ ತರುವರೆ ಒಂದು ಉಪ ಸಭೆಯನ್ನು ನೇಮಿಸುವ ನಿರ್ಣಯವು ರಾ। ನಗರ ಗಣಪತಿರಾವ್ ಬಿ. ಎ. ಬಿ. ಎಲ್. ಇವರಿಂದ ಸೂಚಿಸಲ್ಪಟ್ಟು ರಾ। ವಕೀಲ ಸುಜೀರ ನರಸಿಂಗ ನಾಯಕರವರು ಇದನ್ನು ಅನುಮೋದಿಸಿ ಸಭೆಯಲ್ಲಿ ಇದು ಎಲ್ಲರಿಂದಲೂ ಅಂಗೀಕರಿಸಲ್ಪಟ್ಟು ಸಭೆಯು ಮುಕ್ತಾ ಯವಾಯಿತು. ಬರುವ ಆದಿತ್ಯವಾರ ತಿರುಗಿ ಸಭ ಕೂಡುವರೆ ನಿರ್ಣಯಿಸಿರುವರು.

ಉಪಸಭೆಯ ಗೃಹಸ್ಥರ ಹೆಸರುಗಳು. ಮ. ರಾ. ರಾ. ರಾವ್ ಸಾಹೇಬ್ ಮ ಗೋಪಾಲ ಪೈಗಳು, ರಾ ಮೊಕ್ತೇಸರ ರಂಗಪೈಗಳು, ರಾ ನಗರದ ದಾಮೋ ದರ ಶ್ಯಾನುಭಾಗರು ರಾ ವಕೀಲ ಎಮ್ ರಂಗಪ್ಪ ಬಂಗಾರಿಗಳು ರಾ ವಕೀಲ ಅಡಿಗೆ ಶ್ರೀನಿವಾಸರಾವ್, ಹ್ಯಾಕೋರ್ಟ ವಕೀಲ್ ಕೆ ಪಿ ರಾಮರಾಯರು ರಾ ಸಾವುಕಾರ್ ಸುಜೀರ ನಾಗಪ್ಪ ನಾಯಕರವರು ರಾ ಸಾವುಕಾರ್ ಕಸ್ತೂರಿ ಸುಬ್ರಾ ಯ ಪೈಗಳವರು, ರಾ ಸಾವುಕಾರ ಉಳ್ಳಾಲ ವಾಸುದೇವ ಮಲ್ಯರು ರಾ ಸಾವು ಕಾರ್ ಬೊಳಂತೂರ್ ಸರ್ವೋತ್ತುಮ ಪ್ರಭುಗಳು ರಾ ಎಮ್ ಗೋವಿಂದ ಪೈಗಳ ವರು ರಾ ವಕೀಲ ಬಂಟವಾಳ ವೆಂಕಟರಾವ್ ರಾ ವಕೀಲ ಹುಂಡಿ ವಾಮನ್ ರಾವ್, ರಾ ವ ಶ್ರೀನಿವಾಸ ಕಾಮತ್ ರಾ. ವಕೀಲ ಮಿಜಾರ ಗಣೇಶಪೈಗಳು ರಾ ವಕೀಲ ಕಾಸರಗೋಡ್ ವಾಸುದೇವಕಾಮತ್, ರಾ ಕೆನರಾ ಹ್ಯಾಸ್ಕೂಲ್ ಹೆಡ್ ಮಾಸ್ಟರ್ ಅರ್ಕಳ ವಾಸುದೇವರಾವ್, ರಾ ಸಾವುಕಾರ್ ಎಮ್ ವೆಂಕಟ ರಾಯ ನಾಯಕರವರು, ರಾ ಬೆಂಚ್ ಮೆಜಿಸ್ಟ್ರೇಟ್ ಸಾವುಕಾರ್ ಎಮ್ ನರಸಿಂಗ ಮರ್ತುಬಂಡಾರಿಗಳು, ರಾ ಹ್ಯಾಕೋರ್ಟ ವಕೀಲ ಉಳ್ಳಾಲ ವಾಮನ ನ್ಯಾಕ ರವರು, ರಾ ವಕೀಲ ಸುಜೀರ ನರಸಿಂಗ ನ್ಯಾಕರವರು ಯುಕ್ತ ಕಂಡಲ್ಲಿ ಈ ಮೇಲ ಹೆಸರು ಕಾಣಿಸಿದವರು ಈ ಉಪಸಭೆಗೆ ಇನ್ನು ಹೆಚ್ಚು ಮೆಂಬರನ್ನು ಕೂಡಿಸಿ ಕೊಳ್ಳ ಬಹುದು.

ಡಿ। ಮೆ ಆಫೀಸರರಾಗಿದ್ದ ಕೆಪ್ಟನ್ ಬೋಸರವರು.

ನಮ್ಮ ಜಿಲ್ಲಾ ಸರ್ಜನರಾಗಿದ್ದ ಮೆ ಬೋಸರವರಿಗೆ ಎರಡು ವರುಷದ ರಜಾ ಸೆಂಕ್ಷನ್ ಆಗಿತ್ತಷ್ಟೆ. ಇವರು ಕಳೆದ ಶನಿವಾರ ತಮ್ಮ ಬದಲಿಗ ನೇಮಕರಾದ ಮೆ। ವರ್ಗೀಸರಿಗೆ ಚಾರ್ಜು ವಹಿಸಿಕೊಟ್ಟರು. ಅದೇ ಸಾಯಂಕಾಲ ಮೆ' ಬೋಸರಿಗೆ ಬಹುಮಾನಾರ್ಥ ಮಿಷನ್ ಶಾಲೆಯ ಕಮ್ಪೋಣದಲ್ಲಿ ಇದ್ದಿಯ ಮುಸಲ್ಮಾನರು ವಿನೋದ ಸಭೆಯನ್ನು ನೆರಸಿದರು. ಜಿಲ್ಲಾ ಕಲೆಕ್ಟರ್, ಜಡ್ಜಿ ಧೊರೆಗಳವರೇ ಮೊದಲಾದ ಉದ್ಯೋಗಸ್ಥರು, ಮ। ರಾ। ರಾ। ಧಾ ಅನಂತಯ್ಯರವರು, ಕಬಾಡ್ ರಾಮರಾಯರು, ಸುಜೀರ ರಘುನಾಥಯ್ಯರವರು, ಬ್ಯಾರಿಸ್ಟರ್ ಮ ರಾ। ರಾಮಮೋಹನರಾಯರು ಮೊದ ಲಾದ ಸದ್ಗೃಹಸ್ಥರೂ ಬಂದಿದ್ದರು. ನೆರೆದಿದ್ದ ಮಿತ್ರಮಂಡಳಿಗೆ ಫಲಹಾರ ಚಾ ಗಳಿಂದ ತೃಪ್ತಿಪಡಿಸಿದ ನಂತರ ಫೊನೊಗ್ರಾಫಿನ ಗಾಯನವಾಯಿತು. ಪುಷ್ಪ ಹಾರಗಳು ಹಂಚ ಲಾದವು. ಮಂಡಳಿಯ ಒಂದು ನಕ್ಷೆಯು ತೆಗಿಯಲಾಯಿತು.

ಬ್ಯಾರಿಸ್ಟರ್ ಲ್ಯಾಯವರು ಡಿ। ಮೆ। ಆಫಿಸರರು ಮಾಡಿದ ಅನೇಕ ಉಪಕಾರ ಗಳನ್ನು, ಮುಖ್ಯವಾಗಿ ನಮ್ಮ ಪಟ್ಟಣಕ್ಕೆ ಒದಗಿದ ಪ್ಲೇಗನ್ನು ನಿವಾರಿಸಲಿಕ್ಕೆ ಅವರು ನಮ್ಮ ಕಲ್ಲೆಕ್ಟರ ಧೊರೆಗಳಿಗೆ ಮಾಡಿದ ಸಹಾಯವನ್ನು ವರ್ಣಿಸಿ ಅವರು ರಜೆಯಲ್ಲಿ ದೊರಕುವ ವಿರಾಮದಿಂದ ಆರೋಗ್ಯವಂತರಾಗಿ ನಮ್ಮ ಜಿಲ್ಲೆಗೆ ಬರುವಂತಾಗಬೇಕೆಂದು ತಾವು ಪ್ರಾರ್ಥಿಸುತ್ತೇವೆಂದರು. ಮೆ। ಬೋಸರು ಇದಕ್ಕೆ ಪ್ರತ್ಯುತ್ತರವಾಗಿ ತಾನು ಮಾಡಿದ ಕೆಲಸ ಬಹು ಸ್ವಲ್ಪವೆಂದೂ ಈ ಜಿಲ್ಲೆಯಲ್ಲಿ ತನಗಿರುವ ಅನುರಾಗದ ನಿಮಿತ್ತ ಇಲ್ಲೇ ಬರಲಿಕ್ಕೆ ಅಪೇಕ್ಷೆಯದೆಯೆಂದೂ ಹೇಳಿದರು. ತದನಂತರ ಪ್ರತ್ಯಪ್ರತ್ಯೇಕವಾಗಿ ಮಿತ್ರರೊಡನೆ ಹೋಗಿ ಬರಲನುಮತಿ ಪಡೆದರು. ಆನಂದ ಘೋಷದಿಂದ ಸಮಾರಂಭ ವು ಮುಗ್ಗಿಯಿತು. ಆ ದಿನ ರಾತ್ರಿ ಮೆ। ಬೋಸರವರಿಗೂ ಯುರೋಪೀಯ ಸದ್ಗೃಹಸ್ಥ ರಿಂದೂ ಕಲ್ಲೆಕ್ಟರ್ ಧೊರೆಗಳಲ್ಲಿ ಔತಣವಾಯಿತು.

[illegible] ಕೃಷ್ಣ ಮತ್ತ [illegible] ರಜೆಯಿಂದ [illegible] ಹಿತರಾಗಿ ಬರುವರೆಂದು ವರ್ತಮಾನವಿದೆ. ಇವರು ಜನರಿಗೆ ಮಾಡಿದ ಉಪಕಾರ ಗಳಿಗೆ ದೇವರು ಇವರಿಗೆ ಅಭಿವೃದ್ಧಿಯನ್ನು ಕೊಡಲೆಂದು ಬಯಸುತ್ತೇವೆ.

ದುರ್ಭಿಕ್ಷ ಕಾಲದಲ್ಲಿ ಅಧಿಕಮಾಸ.

(ನಮ್ಮ ಬಾತ್ಮೀದಾರರಿಂದ)

ಭಾರತೀಯರ ಸಮುದಾಯದಲ್ಲಿ ಮೊಳೆತು ಬೆಳದು ಫಲವಾಗುವ ಅವಸ್ಥೆಯ ನ್ನು ಸಮೀಪಿಸಲು ಭಗೀರಥ ಪ್ರಯತ್ನ ಗೈಯುತ್ತಿದ್ದ ಜನಾಂಗ ಭಾವದ ಅಂಕುರದ ಪೌಷ್ಟ್ಯಕ್ಕೆ ದುರದೃಷ್ಟದ ದೃಷ್ಟಿದುರಿತವು ಫಕ್ಕನೆ ತಗಲಿತೋಯೆಂಬಂತೆ ಪ್ರಥಮದಲ್ಲಿ ವಂಗಬಂಗದ ದೆಶೆಯಿಂದ ಉಂಟಾದ ವಿವೇಕ ವೈಕಲ್ಪದಿಂದಾಗಲಿ ಪ್ರಜೆಗಳ ದುರಾಗ್ರಹ ವಾಗಿ ತೋರಿದ ಪ್ರತಿಭಟನೆಯಿಂದಾಗಲಿ ರಾಜಾಗ್ರಹಕ್ಕೆ ದಾರಿಯಾಯಿತು. ಆಳ್ಮರ ಲ್ಲಿಯೂ ಪ್ರಜೆಗಳಲ್ಲಿಯೂ ತ್ರಿಕರಣಶುದ್ಧಿಯಿಂದ ಮೆರೆಯತಕ್ಕ ಪರಸ್ಪರಾನುರಾಗದ ಸತ್ಪ್ರವರ್ತನೆಯ ವೃಕ್ಷಮೂಲಕ್ಕೇನೆ ಹುಳಹಿಡಿಯುವ ಸಂಭವವು ಒದಗಿತು. ಅಖಂಡ ಮುಖಂಡರು ತಮ್ಮ ಕೈಲಾಗುವ ಮಟ್ಟಿಗೆ ವ್ಯಕ್ತಪಡಿಸಿದ ಸುಮನೋನುರಾಗದ ಚಿನ್ಹೆ ಗಳೇ ರಾಜದ್ರೋಹದ ಬೀಜಗಳೆಂಬ ಭಾವನೆಯು ಚಿಗುರಿ ದಿನೇ ದಿನೇ ವೃದ್ಧಿಯಾಗು ತ್ತಿರುವ ಕಾಲದಲ್ಲಿ ದುರ್ಭಿಕ್ಷದಲ್ಲಿ ಅಧಿಕ ಮಾಸವೆಂಬಂತೆ ಬೊಂಬ್ ಎಂಬ ಸಿಡಿತೋಟಿ ಗಳ ಪ್ರಯೋಗವು ಕಲ್ಕತ್ತದಲ್ಲಿಯೂ ಅದರ ನೆರೆಯಲ್ಲಿಯೂ ಅನಿರ್ವಚನೀಯವಾದ ಬಯವನ್ನೂ ಅನರ್ಥವನ್ನೂ ಜರಗಿಸಿತು. ಕಾಡ್ಗಿಚ್ಚು ಬೇರೆ ಮರಗಳೊಂದಿಗೆ ಗಂಧದ ಅಮೂಲ್ಯವಾದ ವೃಕ್ಷಗಳನ್ನು ಪರಿಗಣಿಸದೆ ನಾಶಪಡಿಸುವಂತೆ ದುಷ್ಟರೂ ಶಿಷ್ಟರೂ ಏಕರೀತಿಯಾಗಿ ರಾಜದ್ವಾರದಲ್ಲಿ ನಿಗ್ರಹಿಸಿಲ್ಪಟ್ಟ ಪ್ರಭೃತಿಗಳ ಅವಶ್ಯವಾಗ್ನಿಗೆ ತಮ್ಮ ದೇಹ ಸ್ವಾತಂತ್ರ್ಯಗಳನ್ನು ಬಲಿಕೊಡುವ ಹೋಲುವೆಯು ಹೆಚ್ಚುಕಡಿಮೆ ಕಷ್ಟ ಕರವಾಗಿ ಕಂಡು ಬಂದಿತು. ನಷ್ಟ ಭ್ರಷ್ಟ ಕಷ್ಟವೆಂಬ ಶಾಕಿನಿ ಡಾಕಿನಿಗಳು ನಿರಾತಂ ಕವಾಗಿ ಕುಣಿಯುತ್ತಿರುವ ಕಾಲದಲ್ಲಿ ಬಂಗಾಲ ಹ್ಯಾಕೋರ್ಟಿನಲ್ಲಿ ಚೀಫ್ ಜಸ್ಟಿಸ್ ಜಂಕಿನ್ಸ್ ಪ್ರಭುಗಳು "ಸತ್ಯಮೇವಜಯತೆ ನಾನೃತಂ" ಎಂಬ ವಚನದ ನೈಜವನ್ನು ಘಂ ಟಾಘೋಷವಾಗಿ ಸಾರಿದರೆಂಬ ರೀತಿಯಲ್ಲಿ ತಮ್ಮೆದುರಿಗೆ ಬಂದ ಮೊಕದ್ದಮೆಗಳನ್ನು ವಾದಿಗಾಣಿಸಿದರು. ಈಗ ಕ್ರಮೇಣ ಮೊದಲಿನ ಕಾಠಿಣ್ಯದ ಪ್ರತಿಕ್ರಿಯೆಯು ತೊ ರಗಿ ಶಾಂತಿಯು ನೆಲಗೊಳ್ಳುವ ಸುಸಮಯವು ದೇವಾನುಗ್ರಹದಿಂದ ಉದಯಿಸುತ್ತಿರು ವಾಗ ವಿಲಾಯತಿಯ ಲಂಡನ್ ಪಟ್ಟಣದಲ್ಲಿ ಕಲಿಯಲಿಕ್ಕೆ ಹೋಗಿದ್ದ ಒಬ್ಬ ವಿದ್ಯಾ ರ್ಥಿಯು ಪಥ್ಯಹಾಕುವವನ ಬೆರಳನ್ನು ಕಚ್ಚಿದಂತೆ ತನ್ನ ಶುಭಚಿಂತಕರಾದ ಸರ್ ಕರ್ಜ ನ್ ವಿಲ್ಲೀ ದೊರೆಗಳನ್ನೂ ಅವರ ಪ್ರಾಣರಕ್ಷಣೆಗೆ ಸ್ವದೇಹವನ್ನು ಗಂಡಾಂತರಕ್ಕೆ ಒಡ್ಡಿ ದ ಲಾಲ್ ಕಾಕಾ ಎಂಬ ಪಾರ್ಸಿಗೃಹಸ್ಥರನ್ನು ಅಗ್ನ್ಯಾಸ್ತ್ರದಿಂದ ಕೊಂದನು. ಈ ಘೋರ ಪಾಪವು ಪುನಃ ಕಾಚೀನ ಕೋಚಯ ಎಂಬ ಅವಸ್ಥೆಯು ಹಿಂದುಸ್ಥಾನಕ್ಕೆ ತಲೆದೋರಿ ದಂತಹ ಅನುಮಾನಕ್ಕೆ ಅವಕಾಶವನ್ನು ಕೊಟ್ಟಿತೇ? ಎಂಬ ಪ್ರಶ್ನೆಯನ್ನು ಮುಂದಕ್ಕೆ ತಂದಿದೆ. ಈ ಕುರಿತು ತಪ್ಪು ಗ್ರಹಿಕಗೆ ಕೆಲವು ಜನರಲ್ಲಿ ಎಡೆದೊರಕಿರಬಹುದಾದ ರೂ ಸುಜ್ಞರನೇಕರು ಆ ರೀತಿ ಎಣಿಸಲಾರರು. ಎವಂಚ ಸಾತ್ವಿಕ ಶ್ರೇಷ್ಠರಾದ ಮೋರ್ಲೆ ಪ್ರಭುಗಳು ಕಣ್ಣಾರೆ ಕಂಡರೂ ಪರಾಮರಿಸ್ಸಿ ನೋಡಬೇಕೆಂಬ ನ್ಯಾಯವನ್ನ ನುಸರಿಸುವ ಶಾಂತಗುಣಯುತರಾದದರಿಂದ ಏಕಾಏಕಿ ಮೈದೋರಿದ ದುರಿತವು ಪ್ರಫು ಲ್ಲತೆಯಲ್ಲಿ ಪರಿಣಮಿಸುವದೆಂಬ ಭಯಕ್ಕೆ ಆಸ್ಪದವಾಗದು. ಏತನ್ಮಧ್ಯ ಲಂಡನಿನಲ್ಲಿ ರುವ ಹಿಂದು ವಿದ್ಯಾರ್ಥಿಗಳಿಗೆ ಸಾಂಘಿಕ ಜ್ಞಾನ ಬೋಧೆಯನ್ನು ಉಪನ್ಯಾಸಗಳ ಮೂ ಲಕ ಬೇಗನೆ ಕೊಡಲು ಸಾದುವಾದ ಏರ್ಪಾಡನ್ನು ಮಾಡುವದರಲ್ಲಿ ಶ್ರೇಷ್ಠ ಉಪ ನ್ಯಾಸಕ ಲೀ ಸ್ಮಿತ್ ಧೊರೆಗಳು ಅಮರಿಕೊಂಡಿದ್ದಾರೆಂದು ವಿಲಾಯತಿಯಿಂದ ವರ್ತಮಾ ನ ಪತ್ರಿಕೆಗಳಿಗೆ ತಲಪಿದ ತಂತಿವದಂತಿಯಿಂದ ತಿಳಿಯುವದು. ಈ ಸಂತೋಷಕರವಾ ದ ವಾರ್ತೆಯನ್ನು ನಮ್ಮ ವಾಚಕರಿಗೆ ಸಕಾಲದಲ್ಲಿ ತಿಳಿಸಲಾತುರ ಪಡುತ್ತೇವೆ. ಈ ಸತ್ಕಾರ್ಯವು ಬಗವಂತನ ದಯದಿಂದ ಸಂಪೂರ್ಣ ನೆರವೇರಲೆಂದು ಕೋರೋಣ.

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಮುಂಬಯಿ, 28. 7. 09.

ಅಯ್ಯಾ ಪತ್ರಿಕಾಕರ್ತರೇ,

ಕಳದ ತಿಂಗಳ ತಾರೀಕು ೨೫ನೇ ದಿನಾನುಸಾರ ಸರ್ವಜನಹಿತಸಾಧಕರಾದ ಲೋಕ ಮಾನ್ಯ ರಾ। ಅಮ್ಮೆಂಬಳ ಸುಬ್ಬರಾಯ ಪೈ ಬಿ. ಏ. ಬಿ. ಎಲ್. ರವರು ದಿವಂಗತರಾದ ವಾರ್ತೆಯು ವಜ್ರಪ್ರಹಾರದಂತೆ ಈ ಪ್ರಾಂತ್ಯದ ಸರ್ವಜಾತಿಬಾಂಧವರ ಹೃದಯಾತ್ಮ ನನ್ನು ಪೂರ್ಣ ಭೇದಿಸಿರುವದು.

ಪುರಾಣ ಪ್ರಸಿದ್ಧಿಯ ಮೇರೆಗೆ ಸುರಾಸುರರು ಸಮುದ್ರ ಮಥನವನ್ನು ಮಾಡಿ ದಾಗ ಉತ್ಪನ್ನವಾದ ಅಮೃತವು ಯೋಗ್ಯರಾದ ಅಮರರಿಗೆ ದೊರಕಿ ಯುಕ್ತ ರೀತಿಯಲ್ಲಿ ಉಪಯೋಗಿಸಲ್ಪಡದೆ ಅಸುರರ ಪಾಲಾದಾಗ ಎದೆ ಗುಂದಿದ ದೇವತೆಗಳಿಗೆ ಪರಮಾತ್ಮನು ಹೇಗೆ ಆ ಅಮೃತವನ್ನು ಸಾಧಿಸಿ ಕೊಟ್ಟನೋ, ಹಾಗೆಯೇ ಈ ಮಹಾತ್ಮರು ಮಾಡಿದ ನಮ್ಮ ಜಾತಿ ಮಥನದ ಸುಫಲವು ಜನಿಸಿ ವ್ಯರ್ಥವಾಗದ ಹಾಗೆ ಅವರ ಸುಪುತ್ರ ಅತ್ಮನಾದರೂ ಕನಿಕರದಿಂದ ಅದನ್ನು ನಮಗೆ ಸಂಚಯಿಸಿ ಕೊಡುವನೆಂಬ ಧೈರವಸೆಯಿಂದ ಸಮಸ್ತರು ಅವರು ನಿರೂಪಿಸಿದ ಹಾದಿಯನ್ನು ಮೀರದೆ ಅನುಸರಿಸಬೇಕಾಗುವದು.

ಈ ಸ್ವಾರ್ಥತ್ಯಾಗಿಯು,ತಾನು ಪ್ರಬಲನಾದ ಹ್ಯಾ ಕೋರ್ಟು ವಕೀಲರಾಗಿದ್ದು ಹೆಚ್ಚು ಕೆಲಸವಿದ್ದಾಗ್ಯೂ ಜಾತಿ ಸಂಪತ್ತಿಯೇ ತನ್ನ ಮುಕ್ತಿ ಎಂದು ಭಾವಿಸಿ ಅವರ ಪಾಲಿಗೆ ಬಂದ ಸತ್, ಚಿತ್, ವಿತ್ತದಲ್ಲಿ ಸಾಧ್ಯವಾದದ್ದನ್ನು ಲೋಕೋಪಕಾರದ ಕಾರ್ಯಗಳಿಗೆ ನಿಯೋಗಿಸಿ, ಫಲಾಪೇಕ್ಷೆಯಿಲ್ಲದೆ ನಡಿಸಿದ ಕೆಲಸಗಳನ್ನು ನೋಡುವಾಗ ಇವರಲ್ಲಿ ಅಪ್ರತಿಮ ಗುಣಗಳಿದ್ದುವೆಂದು ಕಂಡುಬರುವದು

ಎಂದಾದರೂ ಲೋಕದಲ್ಲಿ ಅಕೃತ್ಯಗಳು ಹೆಚ್ಚಿ ಜನೋಭಿವೃದ್ಧಿಗೆ ಅನಕವಾಗುವಾಗ್ಯೆ ಹೇಗೆ ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ. ಶ್ರೀ ಮಧ್ವಾಚಾರ್ಯರಂತಹ ಮಹನೀಯರು ಜನಿಸಿ, ತಪ್ಪುಗಳನ್ನು ಸರಿಗೊಳಿಸಿ ಸಿಮುಮುಕ್ತ ತರುವರ್ರೋ, ತದ್ವತ್ ನಮ್ಮ ಜಾತಿಯ ಚರಿತ್ರೆಯಲ್ಲಿ ಈ ಪುಣ್ಯ ಪುರುಷರನ್ನು ಒಂದು ಉದಾಹರಣೆಯನ್ನಾಗಿ ಗ್ರಹಿಸ ಬಹುದು. ನಮ್ಮ ಜಾತಿಯ ಅಭಿವೃದ್ಧಿಗಾಗಿ ಇವರು ಗೈದ ಕಾರ್ಯಗಳು ಎಂದೆಂದಿಗೂ ಪ್ರತಿ ಜಾತಿ ಬಾಂದವರ ಸ್ಮರಣೆಯಲ್ಲಿ ಉಚಿತವಾಗಿರುವದು.

ಜಾತಿ ಬಂಧುಗಳು ಅಶಿಕ್ಷಿತರಾದದ್ದನ್ನು ಕಂಡು ವಿವಿದ ಸ್ತ್ರೀ ಪುರುಷರ ವಿದ್ಯಾ ಸಂಸ್ಥೆಗಳನ್ನೂ, ವೈದಿಕರ ಅಬಲತ್ವವನ್ನು ನೋಡಿ ಸಂಸ್ಕೃತ ಪಾಠಶಾಲೆಗಳನ್ನೂ, ವೈದಿಕ ತರ್ಕಸಭೆಗಳನ್ನೂ ಸ್ಥಾಪಿಸಿದರು ಇವುಗಳನ್ನು ತಾಸಿರುವ ಮಂಗಳೂರಲ್ಲಿಯೇ ಮಾತ್ರವಲ್ಲದೆ ಜಾತಿ ಇರುವ ವಿವಿಧ ರಾಜ್ಯಗಳಲ್ಲಿ ಆಗುವಂತೆ ಉತ್ತೇಜನ ಕೊಟ್ಟರು. ಪರಸ್ಪರ ಅಭಿವೃದ್ಧಿಗೆ ಸಹಾಯಕವಾಗುವಂತೆ "ಕೆನರಾ ಹಿಂದೂ ಪರ್ಮನೆಂಟ್ ಫಂಡ್ ಲಿಮಿಟೆಡ್" ಎಂಬ ಬೇಂಕನ್ನು ಸೃಷ್ಟಿಸಿ ತನ್ನ ವ್ಯಾಪಾರ ವ್ಯವಸಾಯಕ ಬ್ರಾಹ್ಮಣರ ಗೋಳನ್ನು ನಿವಾರಿಸಿದರು ಇನ್ನೂ ಅನೇಕ ಜಾತಿ ಹಿತಕೃತ್ಯಗಳಲ್ಲದೆ ಸ್ವಜಾತಿಯ ಪರಸ್ಪರ ಸ್ನೇಹ ಪರಿಚಯವನ್ನು ವರ್ಧಿಸುವದಕ್ಕಾಗಿ "ಗೌಡ ಸಾರಸ್ವತ ಬ್ರಾಹ್ಮಣ ಪರಿಷದ"ವೆಂಬ ಮಹ ಸಭೆಯನ್ನು ನಿರ್ಮಿಸಿ ಅದು ಪ್ರತಿ ವರುಷವೂ ಕೂಡುವಂತೆ ಮಾಡಿದರು. ವಿದ್ಯಾತುರರಾದ ವಿದ್ಯಾರ್ಥಿಗಳು ಅವರಲ್ಲಿ ನಿರಂತರ ಪ್ರೋತ್ಸಾಹವನ್ನು ಕಾಣುತ್ತಿದ್ದರು. ವಿದ್ಯಾದಾನದಲ್ಲಿ ಜಾತಿ ಮತ ಭೇದವನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ತಾನು ಸ್ವತಃ ವಿದ್ಯಾ ಶೇಖರರಾಗಿದ್ದು ಪಂಡಿತರಿಗೆ ಪರಮ ಮಿತ್ರರಾಗಿದ್ದರು

ಚಂದನ ತರುವಿಗೆ ಬೇಗನೇ ಹುಳು ಹಿಡಿಯುತ್ತ ಇರುವಂತೆ ಈ ನಂದನದ ವೃಕ್ಷವು ನೀಚನಾದ ವಾತಹುಳುವಿಗೆ ಈಡಾಯಿತು. ಪರಂತು ಚಂದನದ ಸುಗಂಧಶಕ್ತಿಯನ್ನು ಮಲಯಾನಿಲವೇ ಒಲ್ಲದು ಅದು ಶಾಶ್ವತವಾಗಿ ನಿಲ್ಲುವದು

ಕಡೆಗೆ ನಮ್ಮ ದೀನ ಪ್ರಾರ್ಥನೆ ಏನಂದರೆ — ಈ ಪುಣ್ಯ ಪುರುಷರ ಸ್ವಾರ್ಥ ಬ್ರಾತೃಪುತ್ರರಲ್ಲಾಗಲಿ ಜಾತಿಯಲ್ಲಿ ಯೋಗ್ಯರಾದ ಸ್ವಾರ್ಥತ್ಯಾಗಿಗಳಲ್ಲಾಗಲಿ ಯಾರಾದರೂ ಈ ಮಹನೀಯರ ಪ್ರವರ್ತನೆಯನ್ನು ಕೈಕೊಂಡು ಎದೆಗುಂದಿದ ಜಾತಿ ವರ್ಗಕ್ಕೆ ಧೈರ್ಯಕೊಟ್ಟು ಆ ಮಹತ್ಕಾರ್ಯಗಳನ್ನು ಕೈಸೇರಿಸಿ ಎಸಿಸುವ ಪಲಾಮೃತವನ್ನು ಸರ್ವರೂ ಕೂಡಿ ಸೇವಿಸುವಂತೆ ಮಾಡುವರಾಗಿ ನಂಬುತ್ತೇವೆ ಈ ಸಾಧನೆಯಲ್ಲಿ ಅವರ ಶಾಶ್ವತನಾದ ಆತ್ಮನು ಯಾವಾಗಲೂ ಹೊಂದಿಕೊಂಡಿದ್ದು ಎದೆ ಸೂತ್ರಕ್ಕನೇ ನಡೆಯುವ ಹಾಗೆ ಯೋಗ್ಯರೀತಿಯಲ್ಲಿ ನಡಿಸುವನೆಂಬುದಕ್ಕೆ ಸಂದೇಹ ತಲೆದೋರದು ಅಲ್ಲದೆ ಲೋಕಕ್ಕೆ ಇವರ ಕಾರ್ಯಗಳು ಚಿರಸ್ಮರಣಾಯವಾಗುವಂತೆ ಸರ್ವ ದಿಕ್ಕಿನ ಸರ್ವಜಾತಿ ಗೃಹಸ್ಥರು ಕೂಡಿ ಇವರ ಒಂದು ಶಿಲಾ ಪ್ರತಿಮೆಯನ್ನು ಕೆನರಾ ಹ್ಯಾಸ್ಕೂಲಿನಲ್ಲಿ ಪ್ರತಿಷ್ಠಿಸುವದು ಯೋಗ್ಯವಾಗಿರುವದು

ಪರಂತು ಈ ಘೋರ ನಷ್ಟಕ್ಕಾಗಿ ಅವರ ಧರ್ಮಪತ್ನಿ ಭ್ರಾತಾ ಪುತ್ರ ಪುತ್ರಿಯರ ಶೋಚನೆಯನ್ನು ನಾವು ಸರಿ ಹಂಚಿಕೊಳ್ಳುತ್ತೇವೆ

ಪೋ, ಸಚ್ಚಿದಾನಂದನಾದ ಜಗತ್ಪತಿಯೇ ಇಹಲೋಕದಲ್ಲಿಯ ಅಪಾರ ಶ್ರಮಕ್ಕಾಗಿ ಅವರ ಸದಾತ್ಮನಿಗೆ ಶಾಂತಿಯನ್ನೀಯು! ಅವರ ದುಃಖಿತರಾದ ಕುಟುಂಬಕ್ಕೆ ಧೈರ್ಯದಂಡವನ್ನು ತೋರಿಸು! ಸೇನಾನಿ ಇಲ್ಲದ ಪಡೆಯಂತಿರುವ ನಮ್ಮ ಜಾತಿ ವರ್ಗಕ್ಕೆ ಸತ್ವರವಾಗಿ ಒಬ್ಬ ನಾಯಕನನ್ನು ದಯಪಾಲಿಸು !

ಇತಿ ಸ್ವಜಾತಿ ಗೃಹಸ್ಥರು.

———o———

ಸ್ವಾಮಿ,

ತಮ್ಮ ಘನವಾದ ಪತ್ರಿಕೆಯಲ್ಲಿ ಕೆಳಗಣ ವಿಷಯಕ್ಕೆ ಸ್ಥಳ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇಲ್ಲಿಯ ವಿರಕ್ತ ಮಠದಲ್ಲಿ ಜುಲಾಯಿ ೨೧-೨೨ ತಾರೀಖುಗಳಲ್ಲಿ ವೇ|| ಘಿರಜೆ ಪಣ್ಣ ತಮ್ಮಪ್ಪ ಶಾಸ್ತ್ರಿಗಳವರ ಅಧ್ಯಕ್ಷತೆಯಿಂದ ಇಲ್ಲಿಯ ಪ್ರಮುಖ ವೀರಶೈವರ ಸಭೆ ಸೇರಿತು. ಈ ಸಭೆಯಲ್ಲಿ ಮೈಸೂರಿನ "ವೃತ್ತಾಂತ ಪತ್ರಿಕೆ" ಎಂಬ ಮಿಶನರಿ ಪತ್ರಿಕೆಯು ಹಿಂದೂ ಧರ್ಮಕ್ಕೆ ವಿರೋಧವಾದ ಲೇಖನಗಳನ್ನು ಬರಿಯುತ್ತಿರುವದರಿಂದ ಅಂತಹ ಪತ್ರಿಕೆಯನ್ನು ತ್ಯಜಿಸಬೇಕೆಂತಲೂ, ಇಲ್ಲಿರುವ ಮಿಶನರಿ "ಬಾಲಿಕಾ ಪಾಠಶಾಲೆಗೆ" ಹೆಣ್ಣುಮಕ್ಕಳ ಕಳುಹಿಸದೆ, ಆರ್ಯಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಬೇಕೆಂತಲೂ, ಮತ್ತು ಧರ್ಮ ಕಾರ್ಯಗಳು ಜರಗುವದಕ್ಕಾಗಿ ಪ್ರತಿಯೊಬ್ಬ ಮನೆಯವರು ಪ್ರತಿದಿನ ಒಂದು ಮುಷ್ಟಿ ಜೋಳವನ್ನು ತೆಗದಿಟ್ಟು "ಮುಷ್ಟಿ ಫಂಡ್" ಸ್ಥಾಪಿಸಬೇಕೆಂತಲೂ ನಿರ್ಣಯಿಸಿತು. ಇದರಂತೆ ಪ್ರತಿಯೊಬ್ಬ ಹಿಂದೂದರ್ಮಾಭಿಮಾನಿಗಳು ಆ ಮಿಶನರಿ ಪತ್ರಿಕೆಗೆ ಬಹಿಷ್ಕರಿಸಿ ಹಿಂದೂ ಧರ್ಮೋನ್ನತಿಯ ಪತ್ರಿಕಾಕರ್ತರಿಗೆ ಆಶ್ರಯ ಕೊಡಬೇಕೆಂದು ಪ್ರಾರ್ಥಿಸುತ್ತೇನೆ

ಪುರನಿವಾಸಿ ದಾವಣಗೆರೆ.

———

ಅಯ್ಯಾ ಪತ್ರಿಕಾಕರ್ತರೇ.

ದಿವಂಗತ ಪೈಗಳವರ ವಿಯೋಗ ದುಃಖ ಪ್ರದರ್ಶನಾರ್ಥವಾಗಿ ಕಳದ ತಾರೀಕು ೨೮-೭ ೨೮ನೇ ಬುಧವಾರ ದಿವಸ ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ಛತ್ರದಲ್ಲಿ ನಮ್ಮ ಊರ ಗೌಡಸಾರಸ್ವತರ ಸಭೆಯು ನೆರೆಯಿತು. ಸಭಾಕಾರ್ಯಕ್ಕೆ ಪ್ರಾರಂಭವಾಗುತ್ತಲೆ ರಾ ಮುಕುಂದರಾಯರು ಸಭೆಗೆ ಆಮಂತ್ರಣದ ಕಾರಣವನ್ನು ತಿಳಿಸಿ ದಿವಂಗತ ಪೈಗಳವರ ದಾತೃತ್ವ, ಪರೋಪಕಾರ ಬುದ್ಧಿ, ನೀತಿ ಪ್ರಿಯತೆ, ಸ್ವಾರ್ಥತ್ಯಾಗ ಇವೇ ಮೊದಲಾದ ಗುಣಗಳ ವಿಷಯ ಶೋಕಿಸಿ ವಾಗ್ಸರಣುಕ್ತಿಕ್ಕಿಂತಲೂ ಅಧಿಕವಾದ ಅಶ್ರುಧಾರೆಗಳನ್ನು ಸುರಿಸುತ್ತಾ ತಮ್ಮ ಭಾಷಣವನ್ನು ಮುಕ್ತಾಯ ಪಡಿಸಿದರು. ದಿವಂಗತರ ವಿಯೋಗ ದುಃಖವು ಲೋಕ ಸಂದೋಹಕ್ಕೆ ಎಷ್ಟರ ಮಟ್ಟಿಗೆ ನಾಟಿರುತ್ತದೆಂಬದು ಆ ಕಾಲದಲ್ಲಿ ನೆರೆದ ಸಭಿಕರ ನಯನಗಳಿಂದ ಇಳಿದ ಅಶ್ರುಧಾರೆಗಳು ತಿಳಿಸುತ್ತಿದ್ದವು. ನಂತರ ಸಭೆಗೆ ಬಂದ ತರುಣ ಯುವಕರೊಬ್ಬರು ಎದ್ದು ಆ ಮಹಾತ್ಮರು ಮಾಡಿದ ಲೋಕೋಪಕಾರವನ್ನು ವರ್ಣಿಸಲಿಕ್ಕೆ ತಾನು ಅಸಮರ್ಥನಾದರೂ ಆ ವಿಷಯ ನಾಲ್ಕು ಮಾತುಗಳನ್ನು ಆಡದಿರಲಿಕ್ಕೆ ತನ್ನ ಮನೋದೇವತೆಯು ಸಮ್ಮತಿಸುವದಿಲ್ಲವೆಂದು ವಿನಂತಿಸಿ ಲೋಕದಲ್ಲಿ ಅಮೂಲ್ಯವಾದ ವಸ್ತುಗಳಿಗೆ ರತ್ನಗಳನ್ನುವರೆಂದೂ, ಇಂಥಾ ನವರತ್ನಗಳ ತೇಜವು ಧನಸಂಪತ್ತುಳ್ಳ ಶ್ರೀಮಂತರಿಗೆ ಮಾತ್ರ ದೊರಕುವದಾದರೂ, ನರರತ್ನಗಳ ತೇಜವು ಸರ್ವ ಸಾಮಾನ್ಯರಿಗೂ ಏಕ ಪ್ರಕಾರವಾಗಿ ಲಭಿಸುವದೆಂದೂ ನವರತ್ನಗಳ ಕಾಂತಿಯು ಪ್ರತ್ಯಕ್ಷದಲ್ಲಿ ಕಂಗೊಳಿಸುವದಾದರೂ ನರರತ್ನಗಳ ಕೀರ್ತಿ ಧ್ವಜದ ಪ್ರಭೆಯು ಪರೋಕ್ಷದಲ್ಲಿ ಕೂಡಾ ಪ್ರಕಾಶಿಸುವದೆಂದೂ ಇಂಥಾ ಪ್ರಕಾಶವೇ ಸದಾಚಾರ ಪ್ರಿಯರಿಗೆ ಮಾರ್ಗದರ್ಶಕವೆಂದೂ ಇಂಥಾ ನರರತ್ನವನ್ನು ಕಳಕೊಂಡದ್ದು ನಮ್ಮ ಜನಾಂಗದ ದುರ್ಭಾಗ್ಯವೆಂದೂ ಸೂಕ್ತಿಸಿ. "ದಾನಾಯ ಲಕ್ಷ್ಮೀ ಸುಕೃತಾಯ ವಿದ್ಯಾ| ಚಿಂತಾ ಪರಬ್ರಹ್ಮ ವಿನಿಶ್ಚಯಾಯ ಪರೋಪಕಾರಾಯ ವಚಾಂಸಿಯಸ್ಯ | ವಂದ್ಯಸ್ತ್ರಿಲೋಕ ತಿಲಕ ಸಪುರುಷ" ಎಂಬ ಶ್ಲೋಕಾರ್ಥವು ಆ ಮಹಾತ್ಮರ ಜೀವಿತ ಚರಿತ್ರೆಯಲ್ಲಿ ಸ್ಪಷ್ಟ ಪ್ರತಿಬಿಂಬಿಸುತ್ತಿದ್ದುದನ್ನು ವ್ಯಕ್ತಪಡಿಸಿ ಆ ಮಹಾತ್ಮರ ಕರ್ತವ್ಯ ಸಂಬವಗಳಾದ ಹ್ಯಾಸ್ಕೂಲ್ ಬ್ಯಾಂಕ್ ಪರಿಷದ ಈ ಸತ್ಕಾರ್ಯಗಳ ಮೂಲಕ ಆ ಮಹಾತ್ಮರು ಗೈದ ಲೋಕೋಪಕಾರವನ್ನು ವರ್ಣಿಸಿ ಪ್ರಿಯ ಮಾತೆಯನ್ನಗಲಿದ ಈ ಶಿಶುತ್ರಯಗಳ ಸಂರಕ್ಷಣೆಯನ್ನೂ, ಶೋಕಾರ್ಣವದಲ್ಲಿ ಮುಳುಗಿದ ಆ ಮಹಾತ್ಮರ ಕುಟುಂಬಕ್ಕೆ ಸಮಾಧಾನವನ್ನೂ, ಆತ್ಮಕ್ಕೆ ನಿತ್ಯ ವಿಶ್ರಾಂತಿಯನ್ನೂ ದಯಾಪರನಾದ ಭಗವಂತನೇ ಪಾಲಿಸಲೆಂದೂ ಪ್ರಾರ್ಥಿಸಿ ತನ್ನ ಭಾಷಣವನ್ನು ಮುಗಿಸಿದರು ನಂತರ ಬಡಬಗ್ಗರಿಗೆ ಅಕ್ಕಿಯನ್ನು ಹಂಚಿದ ವಿಷಯ ಸಭೆ ಕಡೆಯಿಂದ ರಾ ಕೃಷ್ಣವಾಸುದೇವ ಪ್ರಭುಗಳನ್ನು ವಂದಿಸಿ ಸಭೆಯು ವಿಸರ್ಜನವಾಯಿತು ಈ ವಿಷಯ ಸಹ ಸಂತಾಪ ಸೂಚಕ ತಂತಿಯು ಕೊಡಲಾಯಿತು. ಮರು ದಿವಸ ಕೆಲ ಸದ್ಗೃಹಸ್ಥರು ಕೂಡಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ದಿವಂಗತರ ಸ್ಮರಣಾರ್ಥವಾಗಿ ಬಡಬಗ್ಗರಿಗೆ ಅಕ್ಕಿಯನ್ನೂ ಗೋವುಗಳಿಗೆ ಗೋಗ್ರಾಸವನ್ನೂ ಇಕ್ಕಿದರು ಪರವಸ್ಥೆವಿದ ೧೨ನೇ ದಿವಸ ಶ್ರೀ ಸನ್ನಿಧಿಯಲ್ಲಿ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿ ವೈದಿಕರ ಮಂತ್ರಾಕ್ಷತೆಗಳನ್ನು ದಿವಂಗತರ ಉತ್ತರಾಧಿಕಾರಿಗಳಿಗೆ ತಲುಪಿಸುವರಾಗಿ ತಿಳಿದು ಬರುತ್ತದೆ ಘನ ಪತ್ರಕರ್ತರೇ ಪತ್ರ ವಿಸ್ತಾರವೆಂದು ಬಾವಿಸದೆ ಮಹಾತ್ಮನ ಕೀರ್ತಿ ವಿಸ್ತಾರವನ್ನು ನೋಡಿ ಆಶ್ರಯ ಕೊಡಿರಿ.

ಮುಲ್ಕಿ ತಾ 30 7 09

T N. Shenai

ಪ್ರಿಯರೇ,

ಈ ಕೆಳಗಿನ ಬಾತ್ಮಿಯನ್ನು ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುವೆನು

ಇಲ್ಲಿ ಮ. ರಾ. ರಾ.- ಬಹುಮಾನಪಟ್ಟ ಹ್ಯಾ ಕೋರ್ಟ್ ವಕೀಲ್ ಅಮ್ಮೆಂಬಳ ಸುಬ್ರಾಯ ಪೈಗಳವರು ಸ್ವರ್ಗಸ್ಥರಾದರೆಂದು ಕಳದ ತಾ. ೨೬ನೇ ಸೋಮವಾರ ಶು. ಮಾರು ೩ ಘಂಟೆಗೆ ವರ್ತಮಾನ ಬಂದ ಕೂಡಲೆ ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣರೆಲ್ಲ ಸಭೆ ಕೂಡಿ ಅವರ ಪರೋಪಕಾರವನ್ನು ನೆನದು ಬಹಳ ಸಂತಾಪಿಸಿದರು. ಮತ್ತು ಸದರಿ ಪೈಗಳವರ ಸ್ಮರಣಾರ್ಥವಾಗಿ ತಾ. ೨೭ನೇ ಮಂಗಳವಾರ ದಿವಸ ಸೂರ್ಯೋದಯದಿಂದ ಅಸ್ತಮಾನದವರೆಗೆ ಅನೇಕ ಬಡಬಗ್ಗರಿಗೆ ಅಕ್ಕಿ ವಸ್ತ್ರ ಹಂಚಿದರು. ಮತ್ತು

ಅವರ ದ್ವಾದಶ ದಿವಸ [illegible] ದೇವಸ್ಥಾನದಲ್ಲಿ ಬ್ರಾಹ್ಮಣ [illegible] ಗಾಗಿ ನಿಶ್ಚಯಿಸಿರುತ್ತಾರೆ.

ಶ್ಲೋಕ. ಸುವೃತ್ತಂ ಸುಶ್ಲಾಘ್ಯಂ ವಿತರಣರತಂ ಸೂನೃತಗಿರಂ
ಸದಾಧಾರಂ ವಿದ್ಯಾವಿನಯ ಭವನಂ ಸ್ವೈರಮಮಲಂ॥
ವರಂ ಸುಬ್ಬ್ರಾಯಾಖ್ಯಂ ಮಹಿತ ಮಹಿಮಂ ಭಾರತ [illegible]ವಃ
ಪ್ರಿಯಂ ಪುತ್ರಂ ಹೃತ್ವಾ ಹತಕ! ಕಿಮರೇ ಲಬ್ಧ ಮಧುನಾ ॥೧॥
ವಿದ್ಯಾಂ ವಿತ್ತಂ ವಿವೇಕಂ ವಿಮಲ ವಿತರಣಂ ವಿಶ್ರುತಾಂ ವಿಶ್ರುತತ್ವಂ
ಹ್ಯೇಕೀಕೃತ್ಯ ಪ್ರಮಧ್ಯೋದ್ಗಲಿತ ಮಿದಮಹೋಸಾರ ಮುದ್ಧೃತ್ಯಧಾತಾ॥
ನಿರ್ಮಾಯ ಪ್ರೌಢಸಾರಸ್ವತ ವರ ಪರಿಷತ್ಪದ್ಮಿನೀ ಪದ್ಮ ಬಂಧುಂ
ಧೀಶಾರ್ಯಮೃಂತಮೇನಂ ವಿಹಿತು ಮಮಲಧೀರ್ಬಾಲ ಭಾವಂಪ್ರಪೆದೆ॥

ಜಿ ಕೆ ಯಸ್ ಬಿ

ಕೀರ್ತಿಶೇಷ ಸುಬ್ಬ್ರಾಯ ಪೈಗಳವರ ಸ್ಮರಣಾರ್ಥವಾಗಿ ಮುಂಬಯಿಯ ಸ್ವಜಾತಿ ಬಾಂಧವರ ಸೂಚನೆ ವ ವಿಜ್ಞಾಪನೆಯೂ ಸಹಾ — ಈ ವಿಜ್ಞಾಪನಾ ಪತ್ರಿದಲ್ಲಿ ದಿವಂಗತ ಪೈಗಳವರ ಬಗ್ಯೆ ತಕ್ಕ ಸ್ಮಾರಕ ಸಂಸ್ಥೆಗಳ ಅವಶ್ಯಕತೆಯನ್ನು ತೋರಿಸಿಕೊಟ್ಟು ಜಾತಿಬಾಂಧವರೆಲ್ಲರೂ ಏಕಮನಸ್ಸಿನಿಂದ ತಾವು ತೋರಿಸಿಕೊಟ್ಟ ಏರ್ಪಾಡುಗಳನ್ನು ಕೈಕೊಳ್ಳಬೇಕಾಗಿ ಬೆಸಗೊಂಡಿರುವರು

(೧) ಪೈಗಳವರ ಸಮ್ಮಂಧಿಕ ಯಾ ಸ್ನೇಹಿತರಲ್ಲಿ ಇಬ್ಬರು ಯಾ ಮೂವರು ಇವರ ಜೀವನಚರಿತ್ರವನ್ನು ಬರಿಯಬೇಕು ಸುಬ್ರಾಯ ಪೈಗಳವರ ಜೀವಚರಿತ್ರವೆಂದರೆ ಜಾತಿಯ ೩೦ ಯಾ ೩೫ ವರುಷಗಳ ಚರಿತ್ರವಾಗುವುದು ಇಂತಹ ಚರಿತ್ರೆಯೊಂದನ್ನು ಪ್ರಕಟಿಸಿ ಛಾಪಾ ಖರ್ಚು ಕಳೆದು ಇದರಿಂದ ಉಳಿಯುವ ಹಣವನ್ನು ಯಾವದಾದರೂ ಒಂದು ಬಾಲಿಕಾ ಪಾಠಶಾಲೆ ಯಾ ಸಂಸ್ಕೃತ ವಿದ್ಯಾಶಾಲೆಗೆ ವಿನಿಯೋಗಿಸತಕ್ಕದ್ದು

(೨) ದಕ್ಷಿಣಕನ್ನಡದ ಹಲವು ತಾಲೂಕುಗಳಲ್ಲಿರುವ ಗೌಡಸಾರಸ್ವತ ಬ್ರಾಹ್ಮಣರ ದೇವಸ್ಥಾನಗಳಲ್ಲಿ ದೇವಸ್ಥಾನಗಳ ಬಂಡಾರದಿಂದಲೇ ಇವರ ವರ್ಧಂತಿ ಉತ್ಸವವನ್ನು ಆಚರಿಸುವಂತೆ ತಕ್ಕ ಏರ್ಪಾಡು ಮಾಡಿ ಆ ಉತ್ಸವ ದಿನ ಸಾಯಂಕಾಲದಲ್ಲಿ ಜಾತಿಗೃಹಸ್ಥರೆಲ್ಲರೂ ಸಭೆಕೂಡಿ ಅವರಿಂದ ಏರ್ಪಡಿಸಿದ ಸಂಸ್ಥೆಯ ಅಭಿವೃದ್ಧಿ ಒಗ್ಯೆ, ಅವರ ಆತ್ಮದ ನಿತ್ಯಶಾಂತಿಯ ಒಗ್ಯೆ ಪ್ರಾರ್ಥನೆಗಳನ್ನು ನಡಿಸುವಂತೆ ನಿಯಮಿಸಬೇಕು

(೩) ಅವರ ವರ್ಧಂತಿ ದಿನ ಅವರ ಸ್ನೇಹಿತರಿಂದ ಯಾ ಸಮ್ಮಂಧಿಕರಿಂದ ಅವರ ವಿಷಯವಾದ ಒಂದು ಉಪನ್ಯಾಸವು ಕೊಡಲ್ಪಡುವಂತೆ ಮಾಡಬಹುದು ಈ ಏರ್ಪಾಡಿನಿಂದ ಶಾಲಾ ಹುಡುಗರಲ್ಲಿಯೂ ಉಪನ್ಯಾಸವನ್ನು ಕೇಳಲು ಕೂಡಿದ ಇತರರಲ್ಲಿಯೂ ಮಹಾತ್ಮರ ಗುಣವರ್ಣನೆಯಿಂದ ಸುಗುಣಗಳುಂಟಾಗಲು ಅವಕಾಶವಾಗುವುದು ಇವರ ಪೂರ್ಣಾಂಗ ಚಿತ್ರಪಟವನ್ನು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿರಿಸತಕ್ಕದ್ದು

(೪) ತತ್ಕಾಲಿನ ಮಟ್ಟಿಗೆ ರೂ ೨೫,೦೦೦ಗಳ ಫಂಡನ್ನು ಈ ಕೆಳಗಿನ ಉದ್ದಿಶ್ಯಗಳಿಗಾಗಿ ಕೂಡಿಸಬೇಕಾಗಿರುವುದು —

(*a*) ಸರ್ವ ಜಾತಿಯವರ ಪ್ರಯೋಜನಾರ್ಥವಾಗಿ ಒಂದು ದರ್ಮಾಸ್ಪತ್ರಿ

(*b*) ರೋಗಿಗಳ ಚಿಕಿತ್ಸೆ ಬಗ್ಯೆ ಒಂದು ಚಿಕಿತ್ಸಾ ಸಂಸ್ಥೆ

(*c*) ಕೆನರಾ ಹ್ಯಾಸ್ಕೂಲಿನ ವಿದ್ಯಾರ್ಥಿಗಳಿಗೆ ತಕ್ಕದಾದ ವಿದ್ಯಾರ್ಥಿವೇತನ ವ ಇನಾಮುಗಳನ್ನು ಕೊಡುವ ಏರ್ಪಾಟು

(*d*) ಒಳ್ಳೇ ಪ್ರಬಂಧಗಳನ್ನು ಬರೆಯುವುದರಲ್ಲಿ ಪರೀಕ್ಷೆಯನ್ನು ಏರ್ಪಡಿಸಿ ಈ ಪರೀಕ್ಷೆಯನ್ನು ಗೆದ್ದು ಪ್ರಥಮಸ್ಥಾನವನ್ನು ಪಡೆದವರಿಗೆ ತಕ್ಕದಾದ ಇನಾಮು.

ಈ ಬಗ್ಯೆ ಕೂಡಿಸಿದ ಎಲ್ಲಾ ಹಣವನ್ನು ಅವರಿಂದಲೇ ಸ್ಥಾಪಿಸಲ್ಪಟ್ಟ ಕೆನರಾ ಹಿಂದು ಪರ್ಮನೆಂಟ್ ಬೇಂಕಿನಲ್ಲಿ ರೇವಹಾತಿಯಾಗಿಡತಕ್ಕದ್ದು

ಇಷ್ಟು ಹಣವನ್ನು ಕೂಡಿಸುವುದು ಕಷ್ಟಸಾಧ್ಯವೆಂತ ತೋರಬಹುದು ಆದರೆ ಅದು ಹಾಗೆ ಆಗಿರುವುದಿಲ್ಲ.

ಹಲವು ಕಾರಣಗಳಿಗೋಸ್ಕರ ಈ ಸಹಾಯದ್ರವ್ಯವನ್ನು ಕೊಡುವುದರಲ್ಲಿ (೧) ಶ್ರೀ ಕಾಶೀ ಮಠದ ಶ್ರೀ ಪಾದಂಗಳವರು ಪ್ರಥಮ ಸಹಾಯವನ್ನು ಮಾಡಬೇಕಾಗಿರುವುದು. (೨) ಪೈಗಳವರ ಕುಟುಂಬಿಕರೂ, (೩) ಅವರಿಂದ ಸಹಾಯವನ್ನು ಪಡೆದುಕೊಂಡಿದ್ದ ಸಮ್ಮಂಧಿಕರೂ ವ ಇತರರೂ, (೪) ದೊಡ್ಡ ವರ್ತಕರೂ ಜಮೀನುದಾರರೂ ಆಗಿರುವ ಅವರ ಸ್ನೇಹಿತರೂ, (೫) ಕುಟುಂಬಗಳಲ್ಲಿ ಉಂಟಾದ ನ್ಯಾಯ ತೀರ್ಮಾನವನ್ನು ಇವರಿಂದ ಹೊಂದಿ ಸಹಸ್ರ ಸಂಖ್ಯೆಯಲ್ಲಿ ಹಣ ನಷ್ಟವಾಗುವುದನ್ನು ಉಳಿಸಿಕೊಂಡವರೂ, (೬) ವಿದ್ಯಾಭ್ಯಾಸಂಗವನ್ನು ಪಡೆದ ಗೌಡಸಾರಸ್ವತ ಸ[illegible]ರೂ, (೭) ದಯಾಸ್ವಭಾವ [illegible] ಪೈಗಳವ[illegible] [illegible] (೮) ಮುಲ್ಕಿ, ಕುಂದಾಪುರ, ಉಡುಪಿ, ಕಾರ್ಕಳ, ಬಂಟವಾಳ, ಉಪ್ಪಿನಂಗಡಿ, ಕಾಸರಗೋಡು, ನಗರ ಮೊದಲಾದ ಪ್ರಾಂತ್ಯಗಳಲ್ಲಿರುವ ಸಾವುಕಾರರೂ ಇತರರೂ, ತಂತಮ್ಮ ತಾರತಮ್ಯಾನುಸಾರವಾಗಿ ಸಹಾಯದ್ರವ್ಯವನ್ನು ಕೊಡುವರು. ಪ್ರತಿಯೊಂದು ಊರಲ್ಲಿಯೂ ಹೀಗೆ ಚಂದಾ ದ್ರವ್ಯವನ್ನು ಕೂಡಿಸಿ ಕೆನರಾ ಹಿಂದೂ ಪರ್ಮನೆಂಟ್ ಫಂಡಿಗೆ ಕಳುಹಿಸಿಕೊಡುವಂತೆ ಮೂರು ಯಾ ನಾಲ್ಕು ಜನರ ಸಬ್ ಕಮಿಟಿಗಳನ್ನು ಅಲ್ಲಲ್ಲಿ ನಿರ್ಮಿಸಬೇಕು. ೧, ೨, ೩, ೪ ಮತ್ತು ೫ನೇಯವರು ಈ ಸಂದರ್ಭದಲ್ಲಿ ಸಾವಿರಗಟ್ಟಲೆಯಲ್ಲಿ ಸಹಾಯಮಾಡಬೇಕು ಈ ರೀತಿ ವಿಜ್ಞಾಪನಾ ಪತ್ರದಲ್ಲಿ ಮೇಲೆ ನಮೂದಿಸಿರುವ ಹಲವು ಏರ್ಪಾಡುಗಳು ಸೂಚಿಸಲ್ಪಟ್ಟಿರುವುದಲ್ಲದೆ ಅವುಗಳನ್ನು ಕಾರ್ಯತಃ ಹ್ಯಾಗೆ ಸಾಧಿಸಬಹುದೆಂಬದನ್ನು ಸಹಾ ವಿವರಿಸಿರುವರು

ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ ॥

(ಮನುಸ್ಮೃತಿ)

ವಿಜ್ಞಾಪನೆ.

ಭಗಿನಿಗಳಿರಾ,

ಕಳೆದ ತಿಂಗಳ ೨೫ನೇ ತಾರೀಕು ಆದಿತ್ಯವಾರ ಮಾನಾದಿಕರಾದ ಅಮ್ಮೆಂಬಳ ಸುಬ್ರಾಯ ಪೈಗಳು ದಿವಂಗತರಾದ ವಿಷಯವು ನಿಮಗೆಲ್ಲರಿಗೂ ತಿಳಿದಿದೆ ಈ ಮಹಾತ್ಮರ ನಿರ್ಯಾಣದ ದೆಸೆಯಿಂದ ನಮ್ಮ ಜಿಲ್ಲೆಗೆ ಎಷ್ಟು ನಷ್ಟವಾಯಿತೆಂಬುವುದನ್ನು ಲೆಕ್ಕಿಸುವುದು ಅಸಾಧ್ಯ ಅಧರ್ಮದ ಕತ್ತಲನ್ನು ತೊಲಗಿಸಿ ಧರ್ಮದ ಹಾದಿಯಲ್ಲಿ ಬೆಳಕನ್ನು ತೋರಿಸುತ್ತಲಿದ್ದ ದೀಪಸ್ತಂಭವು ಇಂದು ನಂದಿತು ರವಷ್ಟಾದರೂ ವಿದ್ಯೆಯಿಲ್ಲದೆ ಅಜ್ಞಾನದ ಮಂಜಿನಿಂದ ತುಂಬಿದಂತಹ ಈ ಜಿಲ್ಲೆಯಲ್ಲಿ ಅವರ ಪ್ರಯತ್ನದಿಂದ ಬಹುತೇಕ ಕಡೆಗಳಲ್ಲೆಲ್ಲ ವಿದ್ಯೆಯು ಪ್ರಸರಿಸಿ, ವಿದ್ಯೆಗೆ ವಸಂತಕಾಲವು ಬಂದೊದಗಿತು ಅವರು ಪ್ರಯಾಸಪಟ್ಟದಲ್ಲವಾದರೆ, ನಮ್ಮ ಭಗಿನಿಯರಲ್ಲಿ ಎಷ್ಟೋ ಮಂದಿಗೆ ಈಹೊತ್ತು "ಓನಾಮ" ಬಾರದಿರುವುದಿತ್ತು ಇಂತಹ ಉದಾರ ಹೃದಯರಿಗೆ ನಾವು ಎಷ್ಟು ಕೃತಜ್ಞತರಾದರೂ ಅದು ಸ್ವಲ್ಪವೇ ಇಂತಹರ ಜೀವನವೇ ಧನ್ಯ

ಈಗ ಅವರ ಮರಣದ ನಂತರ, ಅವರ ಉದಾರತೆಯಿಂದ ನಾವು ಹೊಂದಿದ ಉಪಕಾರದ ಬಗ್ಯೆ ಅವರ ನೆನಪು ನಮ್ಮಲ್ಲಿ ಚಿರಸ್ಥಾಯಿಯಾಗಿರುವಂತೆ, ಯಾವುದೊಂದಾದರೂ ಸತ್ಕಾರ್ಯವನ್ನು ಮಾಡುವುದು ನಮ್ಮ ಕರ್ತವ್ಯವು ಮತ್ತು ಈ ಕರ್ತವ್ಯವನ್ನು ಮಾಡುವುದರಲ್ಲಿ ನಿಮ್ಮಲ್ಲಿ ಅನೇಕರಿಗೆ ಉತ್ಕಂಠೆ ಇರಬಹುದು ಆದರೂ ಸ್ವಾಭಾವಿಕವಾದ ಲಜ್ಜೆಯಿಂದ ನೀವು ಹಿಂಜರಿಯುತ್ತೀರೆಂದು ನಂಬಿ ನಾವು ನಮ್ಮ ಈ ವಿಜ್ಞಾಪನೆಯನ್ನು ನಿಮಗೆ ಸಮರ್ಪಿಸುತ್ತೇವೆ ಆ ಮಹಾತ್ಮರ ಪ್ರಯತ್ನದಿಂದ ಸ್ಥಾಪಿತವಾದ ಬಾಲಿಕಾ ಪಾಠಶಾಲೆಯಲ್ಲಿ (The Canara Girls' School, Mangalore) ಕಲಿಯುವ ಬಾಲಿಕೆಯರಲ್ಲಿ ಬಡವರಾದಂತಹರಿಗೆ ವಸ್ತ್ರಪುಸ್ತಕಾದಿಗಳನ್ನು ಕೊಡುವುದೇ ಮುಂತಾದ ಕೃತ್ಯಗಳಿಂದ ಅವರು ಪ್ರಾರಂಭಿಸಿದ ಆ ಶಾಲೆಯನ್ನು ಮುಂದುಸಾಗಿಸಬಹುದು ಇಂತಹ ಆ ಕಾರ್ಯವನ್ನು ನಮ್ಮ ಭಗಿನಿಯರೇ ನೆರವೇರಿಸಿದರೆ, ಅವರು ಹೊಂದಿದ ವಿದ್ಯೆಯು ಸಫಲವೇ!

ಸ್ತ್ರೀವಿದ್ಯಾಭ್ಯಾಸವನ್ನು ಸರ್ವತ್ರ ಪ್ರಸರಿಸಬೇಕೆಂದು ಆ ಮಹಾತ್ಮರ ಮುಖ್ಯವಾದೊಂದು ಆಲೋಚನೆ ಇತ್ತು ಮತ್ತು ಈ ಆಲೋಚನೆಯನ್ನು ಕಾರ್ಯರೂಪಗೊಳಿಸಲಿಕ್ಕೆ ಅವರು ವಿಶೇಷ ಸಾಧನಮಾಡಿದರು ಅವರು ಅದನ್ನು ಯಾವ ಸ್ಥಳದಲ್ಲಿ ಬಿಡಬೇಕಾಗಿ ಪರಿಣಮಿಸಿತೋ ಅಲ್ಲಿಂದ ಅದನ್ನು ಮುಂದುವರಿಸುವುದು ನಮ್ಮೆಲ್ಲವರ ಧರ್ಮವು ಆದ್ದರಿಂದ ಅವರು ನಮಗೆ ತೋರಿಸಿಕೊಟ್ಟ ಮಾರ್ಗದಲ್ಲಿ ನಾವು ಈಗ ಮಾಡತಕ್ಕ ಕಾರ್ಯಗಳಲ್ಲಿ ನೀವು ಸಹಾ ನಮ್ಮ ಮೇಲೆ ಕೃಪೆಯಿಂದ ನಿಮ್ಮಿಂದ ಆಗುವ ಸಹಾಯವನ್ನು ಮಾಡಿ ನಮ್ಮನ್ನು ಕೃತಾರ್ಥರಾಗುವಂತೆ ಮಾಡಬೇಕೆಂದು ನಿಮ್ಮೊಡನೆ ವಿನಯದಿಂದ ನಾವು ಪ್ರಾರ್ಥಿಸುತ್ತೇವೆ. ಈ ವಿಷಯದಲ್ಲಿ ನಿಮಗೂ ಪ್ರೀತಿಯಿದೆ ಎಂದು ನಮಗೆ ಭರವಸೆ ಇದೆ.

M. Govind Pai **A. Varada Rau.**

K. Vaikunta Kamath. **B Krishna Bhandary.**

ತಾಜಾ ಕಲಂ—ಈ ಪಟ್ಟಣದಲ್ಲಿರುವ ನಮ್ಮ ಸ್ವಜಾತೀಯ ಭಗಿನಿಯರೂ ಸಾರಸ್ವತ ಭಗಿನಿಯರೂ ನಮ್ಮ ಈ ವಿಜ್ಞಾಪನೆಗೆ ಉದಾರ ಆಶ್ರಯವನ್ನಿತ್ತದ್ದಕ್ಕೆ ನಾವು ಪದೇ ಪದೇ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಪರಸ್ಥಳೀಕರಾದ ಭಗಿನಿಯರು ಈ ಕೆಳಗಿನ ವಿಳಾಸಕ್ಕೆ ಅವರ ಸಹಾಯದ್ರವ್ಯವನ್ನು ಕಳುಹಿಸಿದ್ದಲ್ಲಿ ನಾವು ಅದನ್ನು ಕೃತಜ್ಞತೆಯಿಂದ ಅಂಗೀಕರಿಸಿ ಅದಕ್ಕೆ ರಶೀದಿಯನ್ನು ಕಳುಹಿಸಿಕೊಡುವೆವು.

M. Govind Pai.

C/o "Swadeshabhimani" Mangalore.

ವಿದೇಶ ವೃತ್ತಾಂತ.

ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಗಳ ಅಂಡರ್ ಸೆಕ್ರೆಟರಿಗಳಾದ ಮ॥ ಮಾಸ್ಟರ್ ಓಫ್ ಎಲಿಬೆಂಕ ಎಂಬವರು ವೂಡ್‌ಫೋರ್ಡ್ ಎಂಬಲ್ಲಿ ಭಾಷಣ ಮಾಡುತ್ತಿರುವಾಗ ಮೋರ್ಲೆ ಪ್ರಭುಗಳು ಹಿಂದೂಸ್ಥಾನದ ರಾಜ್ಯಭಾರದಲ್ಲಿ ತಮ್ಮ ಕರ್ತವ್ಯವನ್ನು ಎಲ್ಲಾ ಸಂದರ್ಭಗಳಲ್ಲಿಯೂ ಪೂರೈಸುವರೆಂದೂ, ತಾವು ಸ್ವತಹಾ ಮರೆಯಲ್ಲಿ ನಿಂತುಕೊಂಡು ರಾಜದ್ರೋಹವನ್ನು ಹುಟ್ಟಿಸುತ್ತಿರುವಂಥವರನ್ನು ಕಠಿಣವಾಗಿ ಶಿಕ್ಷಿಸುವರೆಂಬದಾಗಿಯೂ ಅಪ್ಪಣೆ ಕೊಟ್ಟಿರುವರು

ಕಳೆದ ತಿಂಗಳ ೩ನೇ ತಾರೀಕಿನಿಂದ ಮಾಲಟ್ಟಾ ಎಂಬಲ್ಲಿ ಸಮುದ್ರವು ಪ್ರತಿ ಘಂಟೆಗೆ ಒಂದಾವರ್ತಿ ಕೆರೆಯೋಪಾದಿ ಶಾಂತವಾಗಿದ್ದು ಮತ್ತೊಂದಾವರ್ತಿ ತೆರೆಗಳೆದ್ದು ಅಲ್ಲೋಲಕಲ್ಲೋಲವಾಗುವುದು ಹೀಗಾಗುತ್ತಿರುವಾಗ ಸಮುದ್ರದಿಂದ ಪ್ರಲಾಪ ಸ್ವರದಂತೆ ಒಂದು ಸ್ವರವು ಕೇಳಿಸುತ್ತಿರುವುದು. ಮಸ್ಸೀನಾದಲ್ಲಿ ಭಯಂಕರವಾದ ಭೂಕಂಪವಾಗುವ ಮೊದಲು ಈ ರೀತಿ ಸಮುದ್ರದಲ್ಲಿ ಉತ್ಪಾತಗಳು ಉಂಟಾಗುತ್ತಿದ್ದವೆಂಬದಾಗಿ ತಿಳಿದು ಮಾಲಟ್ಟಾದಲ್ಲಿಯ ಜನರೆಲ್ಲರೂ ಭೂಕಂಪದ ಹೆದರಿಕೆಯಿಂದ ಮನೆಯಲ್ಲಿ ಮಲಗದೆ ಬೀದಿಗಳಲ್ಲಿ ಮಲಗುತ್ತಿರುವರಂತೆ

ಲೆಡಿ ಎಡ್ವರ್ಡ್ ಸೆಸೂನರವರು ಪೇರಿಸ್ ನಗರದಲ್ಲಿ ಮೃತಪಟ್ಟಿರುವರು

ಪ್ರೊಫೆಸರ್ ಲೀ ಸ್ಮಿತ್ತರವರು ಭಾರತೀಯರ ರಾಜಕೀಯ ಶಿಕ್ಷಣದ ಬಗ್ಗೆ ಇಂಗ್ಲಾಂಡದಲ್ಲಿ ತಕ್ಕ ಏರ್ಪಾಡು ಮಾಡಿರುವರು ಭಾರತೀಯ ವಿದ್ಯಾರ್ಥಿಗಳಿಗೆ ಬ್ರಿಟಿಷ ರಾಜ್ಯಭಾರ ಸಂಸ್ಥೆಗಳ ಬಳಕನ್ನು ತಿಳಿಯ ಹೇಳಿ ಹಿಂದೂಸ್ಥಾನದ ಸಮಾಜಕ್ಕೆ ತಕ್ಕಂತೆ ಇವನ್ನು ಯಾವ ರೀತಿ ಮಾರ್ಪಡಿಸ ಬೇಕೆಂಬದನ್ನೂ ಸಹಾ ಸೂಚಿಸಿ ಇಂಗ್ಲೀಷರ ಸಮಾಜ ಸ್ಥಿತಿಯು ಈ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಕೆಲವು ಬ್ರಿಟಿಷ ಕುಟುಂಬಗಳೊಂದಿಗೆ ಸಹವಾಸವು ದೊರಿಯುವಂತೆ ಏರ್ಪಡಿಸಿರುವರು ಇಂತಹ ಶಿಕ್ಷಣವು ರಾಜದ್ರೋಹವನ್ನು ಕಿತ್ತು ಬಿಸಾಡಲಿಕ್ಕೆ ತಕ್ಕ ಉಪಾಯವಾಗಿರುವುದೆಂದು ಲೀ ಸ್ಮಿತ್ತರವರು ಅಭಿಪ್ರಾಯ ಪಡುವರು ಈ ಶಿಕ್ಷಣವನ್ನು ಹೊಂದುವ ಬಗ್ಗೆ ಹಿಂದೂಸ್ಥಾನದಿಂದ ಅನೇಕ ವಿದ್ಯಾರ್ಥಿಗಳು ಇಂಗ್ಲಾಂಡಕ್ಕೆ ಬರುವ ಒಕ್ಟೋಬರ ತಿಂಗಳಲ್ಲಿ ಹೋಗುವರು

ಸರ್ ವಿಲಿಯಂ ವಿಲ್ಲಿ ಕರ್ಜನರವರ ವಿಧವೆಗೆ ಇಂಡಿಯಾ ಸರಕಾರದವರಿಂದ ವರುಷಕ್ಕೆ ೫೦೦ ಪವನುಗಳ ಪೆನ್ಶನ್ ಕೊಟ್ಟಿರುವುದು

ಸಿಂಹಾಸನದಿಂದ ತೆಗೆಯಲ್ಪಟ್ಟ ಪರಸಿಯದ ಷಹಾ ಪರಸಿಯವನ್ನು ಕೂಡಲೇ ಬಿಟ್ಟು ಹೋದದ್ದಕ್ಕೆ ೫೦೦೦ ಪವನುಗಳನ್ನು ವರುಷಂಪ್ರತಿ ಪೆನಶನಾಗಿ ಕೊಡುವದೆ ಪರಸಿಯಾ ಸರಕಾರದವರು ಒಪ್ಪಿರುವರಂತೆ

ಈ ತಿಂಗಳ ೧೭ನೇ ತಾರೀಕಿನಲ್ಲಿ ಮದನ ಲಾಲ ಧಿಂಗ್ರನನ್ನು ಗಲ್ಲಕ್ಕೆ ಹಾಕುವರು

ಸರ್ ಕರ್ಜನ್ ವಿಲಿಯಂ ವಿಲ್ಲಿಯವರ ಸ್ಮರಣಾರ್ಥವಾಗಿ ತಕ್ಕ ಏರ್ಪಾಡನ್ನು ಮಾಡುವದೆ ಲೊರ್ಡ್ ರೊಬರ್ಟ್ಸ್, ಲೊರ್ಡ್ ಮೋರ್ಲೆ, ಲೊರ್ಡ್ ಎಮ್ಟಿಲ್, ಲೊರ್ಡ್ ಲೆಮಿಂಗ್‌ಟನ್ ಮೊದಲಾದವರು ಕೂಡಿರುವ ಒಂದು ಕಮಿಟಿಯನ್ನು ಏರ್ಪಡಿಸಿರುವರು.

ಲಿವರ್‌ಪೂಲಿನಲ್ಲಿ ಅರಳೆ ಕಾರ್ಖಾನೆಗಳಲ್ಲಿ ಹತ್ತಿಗೆ ಬೆಂಕಿ ಬಿದ್ದು ೧೫,೦೦೦೦ ಪವನುಗಳ ಮೌಲ್ಯದ ಅರಳೆಯು ಸುಟ್ಟು ಹೋಗಿರುವುದು. ಈ ಬೆಂಕಿಯು ಯಾರೋ ಬೇಕೆಂತಲೇ ಕೊಟ್ಟಿರುವರೆಂಬ ಸಂಶಯವಿರುವುದರಿಂದ ಅಪರಾಧಿಯನ್ನು ತೋರಿಸಿಕೊಟ್ಟವರಿಗೆ ೫೦೦ ಪವನುಗಳನ್ನು ಉಚಿತವಾಗಿ ಕೊಡುವದಾಗಿ ಪ್ರಕಟಿಸಲ್ಪಟ್ಟಿರುವುದು.

ಉತ್ತರಹಿಂದುಸ್ಥಾನ.

ಸ್ಟೇಟ್ ಸೆಕ್ರೆಟರಿಗಳ ಅನುಮತಿ ಮೇರೆಗೆ ದವಸುಧಾನ್ಯಗಳ ಕ್ರಯವೇರಿದ ವಿಷಯವನ್ನು ತನಿಖಿ ಮಾಡುವದೆ ಒಬ್ಬ ಆಫೀಸರರನ್ನು ನೇಮಿಸಿರುವರು.

ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದ ಒಳ್ಳೇ ವಾಕ್ಪಟುತ್ವ ಇರುವ ಗಾಯತ್ರಿದೇವಿ ಎಂಬ ಸ್ತ್ರೀಯು ಕಲಿಕತ್ತೆಗೆ ಬಂದಿರುವಳು ಇವರಿಗೆ ಇಂಗ್ಲೀಷು ಭಾಷೆಗೊತ್ತಿಲ್ಲವಾದರೂ ಸ್ತ್ರೀ ಶಿಕ್ಷಣದ ವಿಷಯ ಒಳ್ಳೇ ಭಾಷಣಗಳನ್ನು ಕೊಡುವದಾಗಿ ತಿಳಿದು ಬರುತ್ತದೆ.

ಮೋರ್ಲೆ ಪ್ರಭುಗಳ ಭರತಖಂಡದ ರಾಜ್ಯಭಾರ ಮಾರ್ಪಾಟಗಳು ಬರುವ ಫೆಬ್ರವರಿ ತಿಂಗಳೊಳಗೆ ಪೂರ್ಣ ಜಾರಿಗೆ ಬರುವವೆಂಬದಾಗಿ ತಿಳಕೊಳ್ಳುತ್ತೇವೆ

ರಾ॥ ಪಿ ಮುಕರ್ಜಿಯವರು ತನ್ನ ೬೯ ವರುಷದ ಪ್ರಾಯದ ಮಗನಿಗೆ ಮೈದಾನಿನಲ್ಲಿ ತಿರುಗಾಡಲಿಕ್ಕೆ ಹೋದಲ್ಲಿ ಮ॥ ಫೂರ್‌ಡ್ಯ್ಸ್ ಹಾರ್ವೆ ಎಂಬವರ ನಾಯಿಗಳು ಕಚ್ಚಿ ವಿಶೇಷ ಘಾಯ ಮಾಡಿರುವದರಿಂದ ಹ್ಯಾಕೋರ್ಟಿನಲ್ಲಿ ಹಾರ್ವೆಯರ ಮೇಲೆ 5000 ರೂಪಾಯಿ ನಷ್ಟ ಕೇಳಿ ಮಾಡಿದ ವ್ಯಾಜ್ಯದಲ್ಲಿ ಮುಕರ್ಜಿಯವರಿಗೆ ಕಲಿಕತ್ತೆ ಹ್ಯಾಕೋರ್ಟು ಜಡ್ಜಿ ಬಕುಮಾನವಟ್ಟ ಫ್ಲೆಚ್ಚರರವರು ೧೦೦೦ ರೂಪಾಯಿಗಳನ್ನು ಕೊಡಿಸಿದ್ದಲ್ಲದೆ ವ್ಯಾಜ್ಯದ ಖರ್ಚನ್ನು ಸಹಾ ಕೊಡಿಸಿರುವರು

ಬಾಬು ಸುರೇಂದ್ರನಾಥ ಬೆನರ್ಜಿಯವರು ಈ ತಿಂಗಳ 6ನೇ ತಾರೀಕಿಗೆ ವಿಲಾಯತಿಯಿಂದ ಮುಂಬಯಿಗೆ ಬಂದು ತಲ್ಪುವರಾಗಿ ತಿಳಿದು ಬರುತ್ತದೆ ಇವರು ಸ್ವಲ್ಪ ದಿವಸ ಮುಂಬಯಿಯಲ್ಲಿ ನಿಲ್ಲುವರಂತೆ

ಕಳೆದ ತಿಂಗಳ ತಾ 30ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ 623 ಪ್ಲೇಗು ಮರಣಗಳು ಇದ್ದುವು ಮುಂಬಯಿ ಸಂಸ್ಥಾನದಲ್ಲಿ 152, ಮದ್ರಾಸು 90, ಬಂಗಾಳ 26, ಸಂಯುಕ್ತ ಸಂಸ್ಥಾನ 193 ಪಂಜಾಬು 15, ಬರ್ಮಾ 98, ಮೈಸೂರು 37, ಮಧ್ಯ ಹಿಂದುಸ್ಥಾನ 3

ಶ್ರೀಯುತ ಬಿಪಿನ ಚಂದ್ರಪಾಲರವರು ಲಂಡನಿನಲ್ಲಿ ಪ್ರಕಟಿಸುತ್ತಿರುವ ಸ್ವರಾಜ್ಯ ಎಂಬ ಮಾಸ ಪತ್ರಿಕೆಯ ಮುಂಬಯಿಯ ಏಜಂಟರಾದ 'ವರ್ತಮಾನ ಏಜಸ್ಸಿಯ' ಗಿರಿಗಾಂವಲ್ಲಿ ಈ ಮಾಸಪತ್ರಿಕೆಯನ್ನು ಹಂಚುತ್ತಿರುವ ಗಣೇಶ ಬಲವಂತ ಮೋದಕರೆಂಬವರನ್ನು ಸ್ವರಾಜ್ಯ ಪತ್ರಿಕೆಯಲ್ಲಿ ಪ್ರಕಟವಾದ ರಾಜದ್ರೋಹ ಲೇಖನಗಳನ್ನು ಪ್ರಕಟಿಸುವರೆಂಬ ತಪ್ಪಿನ ಮೇಲೆ ಪೋಲೀಸು ವಾರಾಂಟಿನ ಮೇಲೆ ಹಿಡಿದಿರುವರು.

ಕಲಿಕತ್ತಾ ಹ್ಯಾಕೋರ್ಟಿನಲ್ಲಿ ಹ್ಯಾಕೋರ್ಟು ಜಡ್ಜಿ ಕೆಲಸದ ಬದಲಿ ನೋಡುತ್ತಿದ್ದ ರಾ॥ ದಿಗಂಬರ ಚೆಟರ್ಜಿಯಂಬವರನ್ನು ಹ್ಯಾಕೋರ್ಟು ಜಡ್ಜಿ ಕೆಲಸಕ್ಕೆ ಕಾಯಂ ಮಾಡಿರುವರು.

ಚಾಲ್ತಿ ವರುಷದಲ್ಲಿ ಇಲ್ಲಿವರೆಗೆ ಇಂಡಿಯಾ ಸರಕಾರದವರಿಗೆ ಅಫೀಮು ತೆರಿಗೆಯಲ್ಲಿ ಬಜೆಟ್ ಮತ್ತು ಖರ್ಚಿನ ಪಟ್ಟಿ ಯಾ ಬಜೆಟಿನಲ್ಲಿ ಅಂದಾಜಮಾಡಿದಕ್ಕಿಂತ 11 ಯಾ 12 ಲಕ್ಷ ರೂಪಾಯಿ ಕಡಿಮೆಯಾಗಿರುವುದೆಂದು ತಿಳಿಯುತ್ತೇವೆ. ಆದರೆ ಭೂತೆರಿಗೆಯಾಗಿ ನಿರೀಕ್ಷಿಸಿದಕ್ಕಿಂತ 60 ಲಕ್ಷ ರೂಪಾಯಿ ಹೆಚ್ಚು ದೊರಕಿರುವುದಂತೆ.

ಮುಂಬಯಿಯಲ್ಲಿ ಈ ಮೊದಲು ಸೂಚಿಸಿದಂತೆ ವಾರಾಂಟಿನಲ್ಲಿ ಹಿಡಿದ ಮೋದಕರೆಂಬವರನ್ನು ಜಾಮೀನಿನ ಮೇಲೆ ಬಿಟ್ಟಿರುವರು

ಕಲಿಕತ್ತೆಯಲ್ಲಿ ಹಿಂದೂಸ್ಥಾನದ ಸರ್ವ ಸೇನಾಧಿಪತಿಯಾದ ಕಿಚ್ನರ್ ಪ್ರಭುಗಳ ಸ್ಮರಣಾರ್ಥವಾಗಿ ಅಶ್ವಾರೂಢವಾದ ಅವರದೊಂದು ಪ್ರತಿಮೆಯನ್ನು ಸ್ಥಾಪಿಸುವದೆ ಹ್ಯಾಕೋರ್ಟ ಚೀಫ್ ಜಸ್ಟೀಸರಾದ ಸರ್ ಲೊರೆನ್ಸ ಜಂಕಿನ್ಸರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಕೂಡುವುದು.

ಅಲಿಪುರದ ಬೊಂಬ ಮೊಕದಮೆಯ ಅಪೀಲು ತನಿಖಿಯನ್ನು ಈ ತಿಂಗಳ ತಾ 9ಕ್ಕೆ ಇಟ್ಟಿರುವರು

ಅಲಿಪುರದಲ್ಲಿಯ ಕೋಲೇಜಿನ ಸಂಬಂಧ ರಸಾಯನಶಾಸ್ತ್ರಭ್ಯಾಸವನ್ನು ಮಾಡುವ ಬಗ್ಗೆ ತಕ್ಕ ಸಂಸ್ಥಾಸ್ಥಾಪನೆಗೆ ಯಾರೋ ಒಬ್ಬರು ತನ್ನ ಹೆಸರನ್ನು ಕಾಣಿಸದೆ ಒಂದು ಲಕ್ಷ ರೂಪಾಯಿಗಳ ಗುಪ್ತದಾನವನ್ನು ಮಾಡಿರುವರು

ಕಲಿಕತ್ತೆಯ ಕೈಗಾರಿಕೆ ಮತ್ತು ರಸಾಯನಶಾಸ್ತ್ರ ವಿದ್ಯಾಭಿವೃದ್ಧಿ ಸಂಘದವರು ಇನ್ನು ನಾಲ್ಕು ಜನ ವಿದ್ಯಾರ್ಥಿಗಳನ್ನು ಕೈಗಾರಿಕೆ ಮೊದಲಾದವುಗಳಲ್ಲಿ ತರಬೇತಿ ಹೊಂದುವದೆ ಪೆರಿಸ ಮೊದಲಾದ ಯೂರೋಪ ದೇಶಗಳಿಗೆ ಕಳುಹಿಸಿರುವರು

ಬಂಕುರಾ ಎಂಬಲ್ಲಿಯ ಮುನ್ಸಿಪರವರು ತಿರುಗಾಡಿಕೊಂಡು ಮನೆಗೆ ಬರುತ್ತಿರುವಾಗ ಹಾದಿಯಲ್ಲಿ ಕೆಲವರು ಮರೆನಿಂತು ಇವರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರವರ ಬಂಗ್ಲೆಯ ಹತ್ತರ ಬರುತ್ತಲೇ ಇವರ ಮೈ ಮೇಲೆ ಬಿದ್ದು ಚನ್ನಾಗಿ ಹೊಡೆದು ಇವರು ಇಟ್ಟುಕೊಂಡಿದ್ದ ಚಿನ್ನದ ಕನ್ನಡಕವನ್ನು ಬಲತ್ಕಾರದಿಂದ ಕೊಂಡು ಹೋಗಿರುವರು

ಮೈಮಾನ ಸಿಂಗನಲ್ಲಿ ಫೂಟ್ ಬೋಲ್ ಯಾ ಕಾಲಿನಿಂದ ಹೊಡೆದು ಆಡುವ ಚಂಡಾಟದಲ್ಲಿ ಉಭಯತಂಡದವರಿಗೂ ಚರ್ಚೆ ಎದ್ದು ಅದರ ತೀರ್ಮಾನದ ಬಗ್ಗೆ ಆಂತ ಆಟ ಆರಂಭಿಸುವಾಗಲೇ ನೇಮಿಸಲ್ಪಟ್ಟ ಕಾಳೂ ಎಂಬವನನ್ನು ಕೇಳಿಕೊಳ್ಳುತ್ತಿರುವಾಗ್ಯೆ ಈ ಆಟದವರಲ್ಲಿ ಒಬ್ಬೊನು ಕಾಳೂವನ್ನು ತಿವಿದು ಕೊಂದಿರುವನೆಂತ ತಿಳಿದು ಬರುತ್ತದೆ

ಮೋರ್ಲೆ ಪ್ರಭುಗಳ ಹಿಂದೂಸ್ಥಾನದ ರಾಜ್ಯಭಾರ ಮಾರ್ಪಾಟಗಳನ್ನು ಕಳೆದ ಶನಿವಾರದ ಗಜೆಟಿನಲ್ಲಿ ಪ್ರಕಟಿಸಿರುವರು

ಹಿಂದೂಸ್ಥಾನದ ಸರ್ವ ಸೇನಾನಾಯಕರಾಗಿ ನೇಮಕಪಟ್ಟ ಜನರಲ್ ಸರ್. ಒ. ಮೂರ್ ಕ್ರೆಗ್ ಎಂಬವರು ಈ ತಿಂಗಳ 27ನೇ ತಾರೀಕಿಗೆ ಲಂಡನಿನಿಂದ ಹೊರಟು ಬರುವ ಸಪ್ಟಂಬರ ತಿಂಗಳ ೧೫ನೇ ತಾರೀಕಿಗೆ ಮುಂಬಯಿಗೆ ಬಂದು ತಲ್ಪುವರು. ಅದೇ ರಾತ್ರಿ ಇವರು ಪುನೆಗೆ ಹೋಗಿ ಅಲ್ಲಿ ಕಿಚ್ನರ್ ಪ್ರಭುಗಳಿಂದ ಚಾರ್ಜು ವಹಿಸಿಕೊಳ್ಳುವರು.

ಕಲಿಕತ್ತೆಯಲ್ಲಿ ಒಂದು ಪತ್ರವು ಕೆಳಗಿನ ವೃತ್ತಾಂತದ ಒಂದು ಫಿರಿಯಾದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಲ್ಲಿ ದಾಖಲಾಗಿರುವುದೆಂತ ತಿಳಿಸುತ್ತಿರುವುದು, ರಾಮಚರಣದೇವನೆಂಬವನೊಬ್ಬನು ಒಂದು ಕಳವು ಮೊಕದಮೆಯಲ್ಲಿ ದಕ್ಷಿಣ

ಸಿಲ್ಹತ್ ಎಂಬಲ್ಲಿಯ ಸಬ್ ಡಿವಿಜನ್ ಮೆಜಿಸ್ಟ್ರೇಟರಾದ ಮೆ| ಡೊಸನರವರ ಮುಂದೆ ಸಾಕ್ಷಿ ಹೇಳಲಿಕ್ಕೆ ಹೋಗಿದ್ದನು. ಮೇಜಿಸ್ಟ್ರೇಟರವರು ಆತನ ಬಾಯಿಯಲ್ಲಿ ತಾಂಬೂಲವಿರುವ ಚಿನ್ಹೆಗಳನ್ನು ನೋಡಿ ರಾಮಚರಣದೇವನು ತನ್ನ ಕೈಗಳಿಂದಲೇ ದವಡೆಗೆ ತಪರಾಕು ಹೊಡೆದುಕೊಳ್ಳಬೇಕಾಗಿ ಆಜ್ಞಾಪಿಸಿದರು ಸಾಕ್ಷಿಗಾರನು ಮೇಜಿಸ್ತ್ರೇಟರು ಹೇಳಿದಂತೆ ನಡೆದುಕೊಂಡರೂ ಇದರಿಂದ ಮೇಜಿಸ್ತ್ರೇಟರು ತೃಪ್ತಿ ಪಡದೆ ತನ್ನ ಇಬ್ಬರು ಪೇದೆಗಳಿಂದ ದವಡೆಗೆ ಚನ್ನಾಗಿ ಪೆಟ್ಟು ಹೊಡಿಸಿದರು ಈ ವಿದ್ಯಮಾನಗಳಲ್ಲಿ ವಿಚ್ಞಾರಣೆಯನ್ನು ಮಾಡಿ ನ್ಯಾಯಸಿದ್ಧಂತೆ ತನ್ನ ತಕ್ಷೀರನ್ನು ತೀರ್ಮಾನಿಸಬೇಕಾಗಿ ಡಿಸ್ಟ್ರಿಕ್ಟ್ ಮೇಜಿಸ್ತ್ರೇಟರಲ್ಲಿ ಪಿರಿಯಾದು ಮಾಡಿರುವನಾಗಿ ತಿಳಿದು ಬರುತ್ತದೆ

~~~~~

ನಾಗಪುರದಲ್ಲಿಯ ಲೆಂಡ್ ರಿಕೊರ್ಡ್ಸ್ ಸುಪರಿಂಟೆಂಡಂಟರಾಗಿರುವ ರಾ| ನಾರಾಯಣ ಸಖಾರಾಮ ಪರಾಂಜಪೆಯವರ ಮೇಲೆ ನಾಗಪುರದಲ್ಲಿ ಮಹಾರಾಜ ಬಾಗದಲ್ಲಿರುವ ಕೀರ್ತಿಶೇಷ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆ ವಿರೂಪ ಪಡಿಸಿದ ತಪ್ಪು ಆರೋಪಿಸಲ್ಪಟ್ಟು ನಡೆದ ಮೊಕದಮೆಯಲ್ಲಿ ಪರಾಂಜಪೆಯರ ಮೇಲೆ ತಪ್ಪು ಸ್ಥಾಪಿತವಾಗುವದಿಲ್ಲವೆಂಬದಾಗಿ ಬಿಟ್ಟುಬಿಟ್ಟಿರುವರು ಇವರನ್ನು ಈಗ ಲೆಂಡ್ ರಿಕಾರ್ಡ್ಸ್ ಸುಪರಿಂಟೆಂಡಂಟರ ಕೆಲಸದಿಂದ ತೆಗದು ಹಾಕಿರುವರಂತೆ

~~~~~

ಮುಂಬಯಿಯಲ್ಲಿ ಕೂಡಿದ ವೈದ್ಯ ಪರಿಷತ್ತಿನಿಂದಾದ ಹನ್ನೊಂದು ಯಾ ಹದಿನೆರಡು ಸಾವಿರ ರೂಪಾಯಿಗಳನ್ನು ಮುಂಬಯಿ ಗವರ್ನರರ ಪುತ್ರಿಯಾದ ಗತಿಸಿದ ಮಿಸ್ ಕ್ಲಾರ್ಕರ ಸ್ಮರಣಾರ್ಥವಾಗಿ ರೋಗಿಗಳ ಚಿಕಿತ್ಸೆಗಳ ಬಗ್ಗೆ ಒಂದು ಸಂಸ್ಥೆಯನ್ನು ಏರ್ಪಡಿಸುವುದರಲ್ಲಿ ವಿನಿಯೋಗಿಸುವರಾಗಿ ತಿಳಿದು ಬರುತ್ತದೆ

~~~~~

ದಕ್ಷಿಣ ಹಿಂದುಸ್ಥಾನ

——o——

ಕೃಷ್ಣರಾಜ ಅಣೆಕಟ್ಟಿನಲ್ಲಿ ಒಂದು ದೋಣಿಯು ಕವಚಿ ಬಿದ್ದು ಕೆಲವರು ಮುಳುಗಿ ಹೋಗಿರುವರೆಂಬದಾಗಿ ಮೈಸೂರಿನಿಂದ ವರ್ತಮಾನವಿರುವುದು ಈ ಆಪತ್ತಿನ ವಿವರವೂ ಇನ್ನೂ ಪೂರ್ಣವಾಗಿ ತಿಳಿದುಬರಲಿಲ್ಲ ಮೈಸೂರ ಸರಕಾರದವರ ಆಕ್ಟಿಂಗ್ ಚೀಫ್ ಇಂಜನಿಯರು ಆದ ಕೆಪ್ಟನ್ ಡೊಸ್ ಎಂಬವರು ಈ ಅಣೆಕಟ್ಟಿನ ಹತ್ತಿರ ಒಂದು ದೋಣಿಯಲ್ಲಿ ಅತ್ತಿತ್ತ ಹೋಗುತ್ತಿರುವಾಗ ದೋಣಿಯು ಕವಚಿಬಿತ್ತು ಕೆಪ್ಟನ್ ಡೊಸರ ವಿನಹಾ ಕಲವರು ಕರೆಗೆ ಬಂದಿರುವರಂತೆ ಕೆಪ್ಟನ್ ಡೊಸರ ವಿಷಯ ಯಾವ ಸಮಾಚಾರವೂ ಇಷ್ಟರವರೆಗೆ ತಿಳಿದಿಲ್ಲ

——o——

ಮದ್ರಾಸು ಗವರ್ನ್‍ಮೆಂಟಿನವರು ಈ ಕೆಳಗಿನ ಅಪ್ಪಣೆಯನ್ನು ಕೊಟ್ಟಿರುವರು — ಸರ್ಕೀಟಿನ ಮೇಲೆ ತಿರುಗುತ್ತಿರುವ ಎಲ್ಲಾ ಇಲಾಖೆಗಳ ಆಫೀಸರರೂ ತಮಗೆ ಸರ್ಕೀಟು ಸಮಯದಲ್ಲಿ ಆದ ಸರಬರಾಯಿ ಬಗ್ಗೆ ತಂದು ಕೊಟ್ಟ ಎಲ್ಲಾ ಸಾಮಾನುಗಳಿಗೆ ಬಜಾರ ಧಾರಣೆ ಪ್ರಕಾರ ಕ್ರಯ ಕೊಡಬೇಕೆಂದೂ ಮತ್ತು ಹೀಗೆ ಕೊಟ್ಟ ಕ್ರಯವು ಸಾಮಾಗ್ರಿಗಳನ್ನು ಯಾರಿಂದ ತರಿಸಿರುವುದೋ ಅವರಿಗೇನೇ ಸಲ್ಲುವಂತೆ ತಕ್ಕ ಜಾಗ್ರತೆ ತಕೊಳ್ಳಬೇಕೆಂದೂ ಸೂಚಿಸಲ್ಪಟ್ಟಿರುವುದು

~~~~~

ವಾಲ್ಟಾಟಿನಲ್ಲಿ ಒಂದು ಹಂಚಿನ ಕಾರ್ಖಾನೆಯು ಸದ್ಯದಲ್ಲಿ ಸ್ಥಾಪಿಸಲ್ಪಡುವುದು,

~~~~~

ಮದುರೆಯಲ್ಲಿ ವಸ್ತ್ರಗಳಿಗೆ ಜರಿತಾರನ್ನು ಇಡುವ ಬಗ್ಗೆ ಇದನ್ನು ಹೇರಳವಾಗಿ ಪೇರಿಸಿನಿಂದ ತರಸಿರುತ್ತಿರುವರು ಪೆರಂಬೂರ ಜರಿತಾರಿನ ಕಾರ್ಖಾನೆಯ ಒಬ್ಬ ಫ್ರೆಂಚ ಸ್ತ್ರೀಯು ಮದುರೆಗೆ ಬಂದಿರುವಳು. ಇವಳ ಸಹಾಯದಿಂದ ಮದುರೆಯಲ್ಲಿ ಜರಿಗೋಟಿನ ಒಂದು ಕಾರ್ಖಾನೆಯನ್ನು ಸ್ಥಾಪಿಸುವಂತೆ ಏರ್ಪಾಟು ನಡಿಯುತ್ತಿರುವುದು

~~~~~

ಇಂಡಿಯಾ ಸರಕಾರದವರು ಮದ್ರಾಸಿನ ಮೆ| ಕೇಶವ ಮೆನನ್ ಎಂಬವರಿಗೆ ವಿಲಾಯ್ತಿಗೆ ಹೋಗಿ ಸಾಬೂನು ಮಾಡುವ ವಿಧಾನಗಳನ್ನು ಮತ್ತು ದೇಶದಲ್ಲಿ [illegible] ತಯ್ಯಾರಾಗುವ ಎಣ್ಣೆಯ ಉಪಯೋಗವನ್ನು ಕಲಿತು ಬರುವರೆ ವಿದ್ಯಾರ್ಥಿ ವೇತನವನ್ನು ಕೊಟ್ಟಿರುವರು.

~~~~~

ಮೈಸೂರು ಮಹಾರಾಜರವರ ಕೋಲೇಜಿನ ಮುಖ್ಯೋಪಾಧ್ಯಾಯರಾಗಿದ್ದ ಮೆ| ವಿಯರ್. ಎಂ. ಎ ರವರು ಮೆ| ಬಾಭಾ ಎಂ ಎ ಇವರಿಂದ ಇನ್ನು ಮೂರು ಯಾ ನಾಲ್ಕು ಹಪ್ತೆಗಳಲ್ಲಿ ಚಾರ್ಜು ವಹಿಸಿಕೊಳ್ಳುವರು ಅಷ್ಟರಲ್ಲಿ ಮೆ| ಮೆಕೊಂಬ, ಲಿಂಕನಿನಲ್ಲಿಯ ಗ್ರಾಮರ್ ಸ್ಕೂಲಿನ ಸಹಾಯಕ ಉಪಾಧ್ಯಾಯಕರಾಗಿದ್ದವರನ್ನು ಈ ಮುಖ್ಯೋಪಾಧ್ಯಾಯರ ಕೆಲಸಕ್ಕೆ ನೇಮಕ ಮಾಡಿದ್ದರಿಂದ ಇವರು ಇನ್ನು ಮೂರು ಹಪ್ತೆಗಳಲ್ಲಿ ಮೈಸೂರಿಗೆ ಬಂದು ತಲಪುವರಾಗಿ ತಿಳಿದುಬರುತ್ತದೆ

ಮೈಸೂರು ದೇಶದ ಸರಕಾರದವರು ನ್ಯಾಯ ವಿಧಾಯಕ ಸಭೆಯ ಮೆಂಬರರಾಗಿ ಜನರಿಂದ ಚುನಾಯಿಸಲ್ಪಟ್ಟು ಈ ಚುನಾವಣೆಯು ಗವರ್ನ್‍ಮೆಂಟಿನವರಿಂದ ಅಂಗೀಕರಿಸಲ್ಪಡವಿದ್ದಲ್ಲಿ ಹೀಗೆ ಇಂಥ ಚುನಾವಣೆಯಲ್ಲಿ ಆರಿಸಲ್ಪಟ್ಟ ಮೆಂಬರರನ್ನು ಪುನಹಾ ಆರಿಸದ ಹಾಗೆ ತಕ್ಕ ಕಾನೂನನ್ನು ಮಾಡುವರಂತೆ

~~~~~

ಬರುವ ಈಷ್ಟರ್ ರಜಾದಿನಗಳಲ್ಲಿ ದಕ್ಷಿಣ ಪ್ರಾಂತ್ಯದ ಸನ್ಸ್ ಓಫ್ ಇಂಡಿಯಾ ಎಂಬ ಸಂಘ ಶಾಖೆಗಳ ಪಿಡರೇಶನ್ ಯಾ ಪರಿಷತ್ತು ಕಲಿಕೋಟೆಯಲ್ಲಿ ಜರಗುವಂತೆ ನಿರ್ಣಯಿಸಿರುವರು ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಕೃತ ಈ ಸಂಘ ಶಾಖೆಗಳು, ಮದರಾಸು ಚಂಗಲ್ಪಟ್ಟ್ ದಕ್ಷಿಣ ಆರ್ಕಾಡು, ಉತ್ತರ ಆರ್ಕಾಡು ಸೇಲಂ ಕೊಯಂಬುತ್ತೂರು, ತಂಜಾವೂರು, ತಿರುಚಿನಾಪಳ್ಳಿ ನೀಲಗಿರಿ ಮಲಬಾರ ದಕ್ಷಿಣ ಕನ್ನಡ ಮದುರಾ ತಿನ್ನವೆಲ್ಲಿ ತಿರುವಂಕೋಡು ಕೊಚ್ಚಿ ಮೈಸೂರು ಈ ಜಿಲ್ಲೆಗಳಲ್ಲಾ ಇರುವವು

~~~~~

ದಕ್ಷಿಣ ಕನ್ನಡ

~~~~~

Notice The past Students of the Canara High School are requested to meet in the Bhuvanendia Hall at 8 A M on Sunday the 8th inst to take steps for the perpetuation of the memory of the late respected Mr A Subba Rau the President of the Canara High School Managing Board

R S Sanji a Rau } *K Naga Raja*
B A B L }
S B Bhide } *M Imam Sahib*
B A B L }
A B Shetty } *V S Kamath*

— —

ನೋಟೀಸು ಪತ್ರದ ಮುದ್ರಣ ಕೆಲಸವನ್ನು ಪೂರೈಸುತ್ತಿರುವಾಗ ಈ ಕೆಳಗಿನ ಬಾತಮಿಗಳು ಬಂದು ತಲಪಿದ್ದರಿಂದ ಅವುಗಳನ್ನು ಪ್ರಕಟಿಸುವರೆ ಆಗಲಿಲ್ಲ ನಾದುವರ್ಮ ಅ ಸುಬ್ರಾಯಪೈಗಳವರ ನಿರ್ಯಾಣ ಮದ್ರಾಸಿನ ಗೌಡಸಾರಸ್ವತ ಬ್ರಾಹ್ಮಣರ ಸಭೆಯ ವೃತ್ತಾಂತ, ಯಮಾರ್ಗಳಿನ ಬಾತಮಿ

— o

ಮಂಗಳೂರು ಮುನಿಸಿಪಾಲಿಟಿಯಲ್ಲಿ ಕಳದ ಜುಲಾಯಿ ತಿಂಗಳಲ್ಲಿ ೧೯೨ ಜನನಗಳೂ ೧೧೪ ಮರಣಗಳೂ ಇದ್ದವು ಕಳದ ವರುಷ ಈ ಸಂಖ್ಯೆಗಳು ೧೬೩, ೧೬೦ ಆಗಿದ್ದವು ೧೧೪ ಮರಣಗಳಲ್ಲಿ ಪ್ಲೇಗಿನಿಂದ ಮೃತಪಟ್ಟವರ ಸಂಖ್ಯೆಯು ೩ ಆಗಿರುವುದು

ಗೌಡಸಾರಸ್ವತ ಲಿಟರೆರಿ ಸೊಸ್ಯಾಟಿಯವರು ಕಳದ ವಾರ ತಮ್ಮ ಸಂಘದ ಮೆಂಬರರಲ್ಲಿ ಒಬ್ಬರಾದ ದಿವಂಗತ ಸುಬ್ರಾಯ ಪೈಗಳವರ ಮರಣದ ಸಹಸಂತಾಪ ಪ್ರದರ್ಶನಾರ್ಥವಾಗಿ ಸಭೆ ಕೂಡಿದ್ದರು.

ಕಳದ ಆದಿತ್ಯವಾರ ಬ್ರಹ್ಮಮಂದಿರದಲ್ಲಿ ದೇವಪ್ರಾರ್ಥನೆಯು ಮುಗಿದ ನಂತರ ಬ್ರಹ್ಮಸಮಾಜದ ಸೆಕ್ರೆಟರಿಗಳವ [illegible] ಸ್ವರ್ಗಸ್ಥ ಸುಬ್ರಾಯ ಪೈಗಳವರ ಬಹುಮಾನಾರ್ಥವಾಗಿ ನೆರೆದ ಆರಾಧಕರೆಲ್ಲರಿಗೂ ಪೈಗಳವರ ಗುಣಮಹಾತ್ಮ್ಯವನ್ನು ವರ್ಣಿಸಿ ಪ್ರಸಂಗವು ಮುಕ್ತಾಯವಾಗುತ್ತಲೆ ಆರಾಧಕರೆಲ್ಲರೂ ಎದ್ದು ನಿಂತು ನಿತ್ಯಸುಖವೂ ಶಾಂತಿಯೂ ಅವರ ಆತ್ಮಕ್ಕೆ ದೊರಕುವಂತೆ ದೇವಪ್ರಾರ್ಥನೆಯನ್ನು ಮಾಡಿದರು

ಹಜೂರು ಕಚೇರಿ ಮುದ್ರಾಲಯದೊಳಗೆ ಪ್ರೆಸ್ ಸುಪರಿಂಟೆಂಡೆಂಟರವರ ಕಪಾಟಿನ ಬೀಗವನ್ನು ಇದ್ದಹಾಗೆಯೇ ಬಿಟ್ಟು ಬೀಗವನ್ನು ಕುತುಕೊಳ್ಳಿಸುವರೆ ಹೊಡದಿರುವ ಮೊಳೆಗಳನ್ನು ತೆಗದು ಕಪಾಟಿನಲ್ಲಿರುವ ೩೭ ರೂಪಾಯಿಯನ್ನು ಯಾರೋ ಕದ್ದಿರುವರಂತೆ

ಇಲ್ಲಿಯ ಅಸಿಸ್ಟಾಂಟ್ ಸರ್ಜನರಾಗಿ ಮೆ| ಗ್ರೇವಿಯರ್ ಎಂಬವರು ನೇಮಕಪಟ್ಟಿರುವರು

~~~~~

ಕಾಸರಗೋಡು. ಇದೇ ಕಳದ ಜೂನ್ ತಿಂಗಳ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ರಾ ಚಂದಾವರ ರಾಘವೇಂದ್ರ ರಾಯರ ಮೇಲೆ ರಾ| ಯಂ| ಕೃಷ್ಣ ಬಟ್ಟಿಯವರು ಮಾನನಷ್ಟಕ್ಕಾಗಿ ಮಾಡಿದ ಕ್ರಿಮಿನಲ್ ಮೊಕದಮೆಯು ಪುತ್ತೂರು ಡಿವಿಜನ್ ಡಿಪ್ಯುಟಿ ಮೇಜಿಸ್ತ್ರೇಟರವರು ಹೊಸದುರ್ಗ ಮೊಕ್ಕಾಮಿನಲ್ಲಿ ಕಳದ ತಿಂಗಳ ತಾ 27ನೇಗೆ ಸದರಿ ರಾಘವೇಂದ್ರ ರಾಯರಿಗೆ ರೂಪಾಯಿ ೧೦೦ ನೂರನ್ನು ದಂಡ ವಿಧಿಸಿ ತೀರ್ಮಾನಿಸಿದ್ದಾರಾಗಿ ಕೇಳುತ್ತೇನೆ

ಉಡುಪಿಪ್ರದೇಶ ದ್ರಾವಿಡ ಬ್ರಾಹ್ಮಣ (ಶಿವಳ್ಳಿ ಬ್ರಾಹ್ಮಣ) ಕುಮಾರ ೨೦ ವರುಷ ಪ್ರಾಯದ ತರುಣನೊಬ್ಬನು ಇಲ್ಲಿಯ ಬಾಸ್ಲೆಲ್ ಮಿಶ್ಶನ್ ಕ್ರೈಸ್ತ ದೇವಾಲಯದಲ್ಲಿ ಇದೇ ತಾ ೧ನೇ ಆದಿತ್ಯವಾರ ದಳಿಗ್ಯ ಕ್ರೈಸ್ತಮತಾವಲಂಬನೆಯಿಂದ ಸ್ನಾನಹೊಂದಿರುತ್ತಾನೆ ಈತನ ಮೊದಲಿನ ಜಾತಿಯ ಅಪ್ರಾಯದ ಹೆಂಡತಿಯೂ ಬೇರೆ ಕುಟುಂಬದವರೂ ಉಡುಪಿಯಲ್ಲಿ ಇದ್ದಾರಂತೆ ಈತನಿಗೆ ಕುಂಬಳೆ ಮಿಶ್ಶನ್ ಶಾಲಾ ಮಾಸ್ತರ ಕೆಲಸ ಮೊಕ್ರೂರಾಗಿ ನಿನ್ನೆ ಇಲ್ಲಿಂದ ಕುಂಬಳೆಗೆ ಹೋಗಿರುತ್ತಾನಾಗಿ ಕೇಳುತ್ತೇನೆ

ಕೀರ್ತಿಶೇಷ ಮಹಾತ್ಮರಾದ ಅ| ಸುಬ್ರಾಯ ಪೈಗಳವರ ಅಕಾಲ ಮರಣದ ಸಂತಾಪದ ಕುರಿತು ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಸಮುದಾಯದವರು ನಾಳೆ ಬುಧವಾರ ಮಧ್ಯಾನ್ಹಕ್ಕೆ ಶ್ರೀ ವೆಂಕಟರಮಣ ದೇವಾಲಯದಲ್ಲಿ ಸಭೆ ಕೂಡುವರೆ ನಿಶ್ಚಯಿಸಿರುತ್ತಾರೆ ಈ ಸಭೆಯಲ್ಲಿ ಆಲೋಚಿಸಿ ನಿರ್ಧಾರವಾಗುವ ಸಂಗತಿಗಳು ಮುಂದಿನ ಸಂಚಿಕೆಯಲ್ಲಿ ತಿಳಿಸುತ್ತೇನೆ

~~~~~

ಪುತ್ತೂರು ಪುತ್ತೂರಲ್ಲಿರುವ ಗೌಡಸಾರಸ್ವತ ಬ್ರಾಹ್ಮಣ ಮಂಡಳಿಯವರು ೧೯೦೯ನೇ ಇಸವಿ ಅಗೋಸ್ತು ತಾರೀಕು ೧ಲ್ಲು ತಮ್ಮ ಸ್ವಜಾತಿ ಗೃಹಸ್ಥರಾದ ಅಮ್ಮೆಂಬಳ ಸುಬ್ರಾಯ ಪೈಗಳವರು ಸ್ವರ್ಗಸ್ಥರಾದ್ದರಿಂದ ಅವರ ಪರೋಪಕಾರ ಔದಾರ್ಯಗುಣ, ಬಂಧುವಾತ್ಸಲ್ಯ, ದಾನಶೀಲತೆ, ಐಕ್ಯಭಾವ, ಸ್ವಾರ್ಥತ್ಯಾಗ ಸ್ಮರಣಾರ್ಥವಾಗಿ ಬಡಜನರಿಗೆ ಅಕ್ಕಿಯನ್ನೂ ತೆಂಗಿನ ಎಣ್ಣೆಯನ್ನೂ ಹಂಚಿದರು ದಿವಂಗತರಾದ ಗೃಹಸ್ಥರ ಮುಕ್ತಿಸಾಧನಾರ್ಥವಾಗಿ ತಮ್ಮ ದೇವಾಲಯದಲ್ಲಿ ಪ್ರತ್ಯೇಕ ಸೇವೆಯನ್ನು ಅರ್ಪಿಸುವರೆ ನಿರ್ಣೈಸಿರುತ್ತಾರೆ

ಹೊಸದುರ್ಗ ರೇಂಜ್ ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್ ವಾಸುದೇವಯ್ಯರು ಅಜಾನೂರು ಗ್ರಾಮದ ತಿಯನ್ ರಾಮ ವಗೈರೆಳ ಜನರಿಂದ ರೂಪಾಯಿ ೨೮ ಪ್ರಕಾರ ೫೬ ರೂಪಾಯಿ ಲಂಚ ಪಡಕೊಂಡದ್ದರ ಕುರಿತು ಸದರಿ ರಾಮನು ಕೊಟ್ಟ ಫಿರಿಯಾದಿಯು ಡಿವಿಜನ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನ್ಕಿ ನಡದು ಇದೇ ತಿಂಗಳ ತಾ ೩ಂಲ್ಲು ಮುದ್ದೆಯಾಲೆ ರಾದ, ವಾಸುದೇವಯ್ಯರನ್ನು ವಿಮೋಚನೆ ಪಡಿಸುವದಲ್ಲದೆ ಫಿರಿಯಾದಿ ಕೊಟ್ಟದ್ದಾಗಿ ಮುಡ್ಡೆ [illegible] ತಿಯನ್ ರಾಮನಿಗೆ ೫೦ ರೂಪಾಯಿ ಜುರುಮಾನೆ ವಿಧಿಸಿದರು.

ಕುಂಬ್ಳಾಲದ ನೆರೆಯಾದ ಕೊಕ್ಕಡದಲ್ಲಿ ವಾಸವಾಗಿರುವ ಜಯ್ಯದ್ಯಾರಿ ಈತನ ತಮ್ಮ ಸಯ್ಯ ಯಾನೆ [illegible]

ಚಾಯಟ್ಟಾರ್, ಕೊಡಿಂಬಳ ಗ್ರಾಮದ ಗಾಣಿಗ ವೆಂಕ್ಟ, ಕಂಚಿಗ್ಗಾರ ಶೀತಪ್ಪ ಎಂಬವರು ಕೆಲವು ಕಾಲದ ಮೊದಲು ಉಪ್ಪಿನಂಗಡಿ ಕಸಬಾ ಪೆರಾಜೆ ರಾಮಪ್ಪೈಗಳವರ ಹಟ್ಟಿಗಳಿಂದ ರಾತ್ರಿಕಾಲ ಕೆಲವು ನಡೆ ಜಾನುವಾರುಗಳನ್ನು ಕಳವು ಮಾಡಿ ಮಾರಿದ್ದರ ಕುರಿತು ಕಡಬ ಸ್ಟೇಶನ್ ಹೆಕೊ ಮಂಜೋಡಿಯವರು ಈ ತಕ್ಷೀರು ತಲಾಶಿಯಿಂದ ಇಲ್ಲಿಯ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನ್ಕಿ ನಡಿಯುತ್ತಾ ಇದ್ದ ಈ ಮೊಕದಮೆಯಲ್ಲಿ ಮುದ್ದೈಆಲಿಗೆ ತಾ ೨೭ರಲ್ಲು ಪ್ರತಿ ಒಬ್ಬನಿಗೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿರುವರು ಇವರು ಕೊಡಿಂಬಳ ಗ್ರಾಮದ ಬೋವಿ ಶೇಷಪ್ಪ ಕೊಂಬಾರ ಗೌಡ, ಸೋಮ್ಮ, ಇವರ ಬಾಬ್ತು ಜಾನುವಾರ ಕಳವು ಮಾಡಿದರ ಕುರಿತು ನಂಬ್ರಗಳು ಇಲ್ಲಿಯ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನ್ಕಿಗೆ ಬಾಕಿ ಇರುವವು -

— —o—

ಉಡುಪಿ ಸ್ವರ್ಗವಾಸಿಗಳಾದ ಅ ಸುಬ್ಬರಾಯ ಪೈಗಳವರ ಹೆಸರಲ್ಲಿ ಈ ತಾ ೧ಲ್ಲು ಇಲ್ಲಿಯ ವೆಂಕಟ್ರಮಣ ದೇವಸ್ಥಾನದಲ್ಲಿ ೭ ಡವರಿಗೆ ಅಕ್ಕಿಯನ್ನೂ ರೊಖ್ಖವನ್ನೂ ಹಂಚಿದರು ತಾ ೫ಲ್ಲು ದೇವಸ್ಥಾನದಲ್ಲಿ ಸಂತರ್ಪಣೆಯೂ ನಡಿಯಿತು ಇದೇ ರೀತಿ ಅವರ ದಿವಸದಲ್ಲಿ ಪ್ರತಿ ವರುಷವು ನಡಿಸುತ್ತಾ ಬರುವಂತೆ ಒಂದು ಫಂಡ ಮಾಡಬೇಕೆಂಬ ಉದ್ದೇಶದಿಂದ ಇಲ್ಲಿಯ ಗೃಹಸ್ಥರು ೬ ೮ ಸುಮಾರು ೪೦೦೦ [illegible] ಯನ್ನು ವಂತಿ [illegible] ಮಾಯಿಸಿರುವರಂತ

ಮ ರಾ ಕೊಂಕಣ್ ರಾ ಗೋಪಾಲಕೃಷ್ಣರಾವರ ಮನೆ ಸಮೀಪ ಒಂದು ದಿವಸ ಪೋಕುಕೋಂ [illegible] ಸರಿಯಾದ ಕಾರಣ ಕೊಡದೆ ಇದ್ದುದರಿಂದ [illegible] ಡಿ [illegible] ಪೋಲೀಸ್ [illegible] ಕೋರ್ಟ [illegible] ಪ್ರಕಾ [illegible]

[illegible] ಪ್ರಾರಂಭ [illegible] ದಕ್ಕಾಗಿ ಹರವಾರಿ ದೂರದಿಂದ [illegible] ಬರುತ್ತಿರುವರು [illegible] ಕರ್ಕಾಟಕ ತಿಂಗಳಲ್ಲಿ [illegible] ತುಂಬಾ ಅನುಕೂಲವೇ

[illegible] ಇಲ್ಲಿನ [illegible] ಮಾಪ್ಳಿ ಜಾತಿಯ ಯುವಕನ [illegible] ಯದಲ್ಲಿ ಗಂಡಸರು [illegible] ಮನೆಗೆ ಹೋಗಿ [illegible] ನೀರು [illegible] ಒಂದು ಹಂಗಸು ಒಂದು [illegible] ಕೊಟ್ಟದ್ದನ್ನು ಕುಡಿದು ಅಲ್ಲಿಯೇ ಸ್ವಲ್ಪ ಹೊತ್ತು ಕೂತಿದ್ದು ಕಡೆಗೆ ಆ ತಂಬಿಗೆಯನ್ನೇ ಹಿಡಿದುಕೊಂಡು ಹೋಗುತ್ತಿದ್ದದ್ದನ್ನು ಆ ಹಂಗಸು ಕಂಡು "ಎಲೋ ತಂಬಿಗೆಯನ್ನು ಎಲ್ಲಿಗೆ ಕೊಂಡುಹೋಗುತ್ತಿಯೋ" ಎಂತ ಕೂಗಲು ಆ ಕಳ್ಳನು "ಇಲ್ಲ ಇಲ್ಲ, ನಾನು ಇದನ್ನು ಲಿಷ್ಟಕ್ಕೆ ಕೊಡಲಾರೆ ಹಾಗೆಲ್ಲ ಕಂಡಾಬಟ್ಟೆ ಕೊಡುವದಕ್ಕೆ ನಮಗೆ ಕದ್ದು ತಂದದ್ದಲ್ಲ"ವೆಂತ ವದರುತ್ತಾ ಗುಡ್ಡ ಹತ್ತಿ ಊದ್ದಕ್ಕೆ ನಡಿಯುತ್ತಿದ್ದನಂತೆ ಹೆಂಗಸರೇ ಎಚ್ಚರಿಕೆ!

ರಜಾ ಮೇಲಿದ್ದ ಇಲ್ಲಿ ಪೋಲೀಸು ಇನ್ಸಪೆಕ್ಟರರಾದ ಮ ರಾ ರಾ ಕೋಡಿಕಲ್ಲ ರಾಮರಾಯರವರು ಕೆಲಸಕ್ಕೆ ಕಳದ ಹಪ್ತೆಯಲ್ಲಿ ಹಾಜರಾಗಿ ಇಲ್ಲಿಗೆ ಸಬ್ ಇನ್ಸಪೆಕ್ಟರರಾಗಿ ಬಂದ ಕಾಪಿನ ಸಬ್ ಇನ್ಸಪೆಕ್ಟರು ಬೆಳ್ತಂಗಡಿ ನಾರಾಯಣ ರಾಯರು ತನ್ನ ಕೆಲಸಕ್ಕೆ ತಿರುಗಿ ಸೇರಿದರು

ವರ್ಗವಾದ ಇಲ್ಲಿಯ ಸಬ್ ರಿಜಿಸ್ಟ್ರಾರು ಮ ರಾ ರಾ ಫೋಬ್ಸ್ನರು ಇಲ್ಲಿಗೆ ನೇಮಿಸಿಲ್ಪಟ್ಟ ಈ ಮುಂಚೆ ಸ್ವಲ್ಪ ಸಮಯ ಇಲ್ಲಿಯ ಕೆಲಸ ಆಕ್ಟಿಂಗ್ ಆಗಿ ನೋಡಿದ ಮ ರಾ ರಾ ಮಂಜೇಶ್ವರ ಪದ್ಮನಾಭ ಪ್ರಭುಗಳ ಕೂಡೆ ಈ ತಿಂಗಳ ತಾ 2ಲ್ಲು ಚಾರ್ಜು ವಹಿಸಿಕೊಟ್ಟರು

ಇಲ್ಲಿಯ ತಾಲೂಕು ಕಚೇರಿಯ ಶಿರಸ್ತೆದಾರ ಮ ರಾ ರಾ ಕೃಷ್ಣಾಚಾರ್ಯರು ರಜಾ ಪಡದ್ದರಿಂದ ರೆವಿನ್ಯು ಇನ್ಸಪೆಕ್ಟರರಾಗಿರುವ ಮ ರಾ ರಾ ದಾರೇಶ್ವರ ವೆಂಕಟರಾಯರವರು ನೇಮಿಸಲ್ಪಟ್ಟು ಇದೇ ಕಳದ ತಿಂಗಳ ತಾರೀಕು ೩೧ರಲ್ಲು ಚಾರ್ಜು ವಹಿಸಿಕೊಂಡರು.

ಇಲ್ಲಿ ಸಮೀಪವಿರುವ ಹಿರೇ ಬೆಟ್ಟು ಗ್ರಾಮದ ರಾಜಾಪುರಿ ಜ್ಞಾತಿಯವರಾದ ಲಕ್ಷ್ಮಣ ಪ್ರಭು ಎಂಬವನು ಪಾಂಡು ನ್ಯಾಕನೆಂಬವನನ್ನು ಕೊಂದ ಮೊಕದಮೆಯು ಇಲ್ಲಿಯ ಸ್ಟೇಶನರಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಖಿಯಾಗಿ ಸೆಶ್ಶನ್ ಕೋರ್ಟಿಗೆ ಕಮಿಟು ಮಾಡಲ್ಪಟ್ಟಾಗಿಯದೆ

ಮಂಗಳೂರು ಟ್ರೈನ್ಸಿಟ್ ಕಂಪೆನಿಯ 3 ಜಟ್ಕಗಳ 3 ಚಕ್ರಗಳನ್ನು ಮೊನ್ನೆ ಶನಿವಾರ ದಿವಸ ರಾತ್ರಿ ಯಾರೋ ಇವರ ವೈರಿಗಳು ಜಾರಿಸಿದ ವರ್ತಮಾನವು ಪೋಲೀಸಿನವರಿಗೆ ತಿಳಿಸಿದ್ದಲ್ಲಿ ತನ್ಕಿಯಲ್ಲಿ ಅಲ್ಲಿಯೇ ಸಮೀಪವಿರುವ ಒಂದು ಬಾವಿಯಲ್ಲಿ ಚಕ್ರಗಳು ಸಿಕ್ಕಿದವು ಈ ಕಳ್ಳರನ್ನು ಇಲ್ಲಿಯ ಪೋಲೀಸು ಆಪೀಸರರು ಪತ್ತೆ ಮಾಡುವರೆಂತ ನಂಬುತ್ತೇನೆ

~~~

ವಿವಿದ ವಿಷಯ

~~~

ರಂಗೂನ್ ಪಟ್ಟಣದ ಸಿವಿಲ್ ಜನರಲ್ ಆಸ್ಪತ್ರೆಯಲ್ಲಿ ಶಸ್ತ್ರಪ್ರಯೋಗದಿಂದ ಅನೇಕಾಲನ್ನು [illegible] ಕಟ್ಟ [illegible] ಬಾತ [illegible] ಯಾಗುವದು [illegible] ಈ ರೋಗವು [illegible] ದೇಹದ [illegible] ರಕ್ತ [illegible] ಹ್ಯಾಗ ರಕ್ತ ತುಂಬ [illegible] ಕ್ಕೆ ಪುಷ್ಟಿಯನ್ನು [illegible] ದೇಹದ [illegible] [illegible]

[illegible] ರೆಂಟ್ಸ್ ಪಟ್ಟಣ್ಣು ಸಿಗಿಟ್ಟದ್ದರಿಂದ ಯಾವ ಅನಾನುಕೂಲತೆಯು ಪಡಿಯುವದಿಲ್ಲ ಕಾಲು ಸಹ ಗಾತ್ರದಲ್ಲಿ ಸ್ವನ್ನವಾಗಿ [illegible] ಸ್ವಾಭಾವಿಕ ವಿಕಾರವನ್ನು ಪಡದಿರುವುದು

~~~

ಕೆಲವು ದೇಶಗಳಲ್ಲಿ ಜನ ಸಂಖ್ಯೆಯಲ್ಲಿ ಗಂಡಸರಿಗಿಂತ ಹೆಚ್ಚಾಗಿದ್ದ ಹೆಂಗಸರ ರಕ್ಷಣೆ ಬಗ್ಗೆ ಕೆಲವು ಏರ್ಪಾಡುಗಳನ್ನು ಆಲೋಚಿಸುತ್ತಿರುವರು ಅಮೇರಿಕದ ಸಂಯುಕ್ತ ಸಂಸ್ಥಾನದ ಬೋಸ್ಟನ್ ಎಂಬಲ್ಲಿಯ ೧೦೦೦೦೦ ವಿವಾಹವಾಗದ ಸ್ತ್ರೀಯರ ಬಗ್ಗೆ ತಕ್ಕ ಏರ್ಪಾಡನ್ನು ಮಾಡಲಿಕ್ಕ ಇತ್ತಲಾಗ ಒಂದು ಸಭೆ ಕೂಡಿತ್ತು ಅವಿವಾಹಿತರ ಬಗ್ಗೆ ಸ್ಥಳಗಳನ್ನು ಪಡಕೊಂಡು ಅದರ ನಾಗುವಳಿಯಿಂದ ಅವರು ಜೀವನೋಪಾಯವನ್ನು ಒದಗಿಸಿಕೊಳ್ಳಬಹುದೆಂತ ಅಲ್ಲಲ್ಲಿ ಸ್ಥಳಗಳನ್ನು ಕ್ರಯಕ್ಕೆ ಪಡಕೊಂಡು ಇಂತಹ ಸ್ತ್ರೀಯರಿಗ ಕೊಡುವ ಹಾಗೆ ಒಂದು ಸಂಘವನ್ನು ರಚಿಸಲುದ್ಯುಕ್ತರಾಗಿರುವರು ಅಮೇರಿಕದ ಒಬ್ಬ ಸ್ತ್ರೀಯು ಈ ಫಂಡಿಗೆ ೬೦,೦೦೦ ಪವನುಗಳನ್ನು ಕೊಟ್ಟಿರುವಳು ಮೈನ್ ಎಂಬ ಸಂಸ್ಥಾನದಲ್ಲಿ ಮದುವೆಯಾಗದ ಗಂಡಸರಿಲ್ಲವರ ಮೇಲೆ ತಲೆತೆರಿಗೆಯನ್ನು ವಿಧಿಸಿ ಈ ಹುಟ್ಟುವಳಿಯಿಂದ ಅವಿವಾಹಿತ ಸ್ತ್ರೀಯರನ್ನು ಪೋಷಿಸ ಬೇಕೆಂಬ ಆಲೋಚನೆಯು ನಡಿಯುತ್ತಿರುವುದು. ೨೫ರಿಂದ ೪೫ ವರುಷ ಪ್ರಾಯದೊಳಗಿನ ಬ್ರಹ್ಮಚಾರಿಗಳಿಗೆ ವರುಷಕ್ಕೆ ಒಬ್ಬೊಬ್ಬನಿಗೆ ೨ ಪವನೂ ವಿಧುರರಿಗೆ ೫ ಪವನೂ ತಲೆತೆರಿಗೆಯಾಗಿ ವಿಧಿಸಬೇಕೆಂತ ನಿರ್ಣಯಿಸಿರುವುದು.

ಭರತಖಂಡದಲ್ಲಿ ಕಾಗದವನ್ನು ತಯ್ಯಾರಿಸುವ ಕಾರ್ಖಾನೆಗಳು ಇದ್ದರೂ ಪರದೇಶದಿಂದ ಹಿಂದೂಸ್ಥಾನಕ್ಕೆ ರಫ್ತಾಗುವ ಕಾಗದವು ಕಳದ ಐದು ವರುಷಗಳಿಂದ ೫೩ ೧೮, ೬೪.೩೭, ೭೦ ೪೮, ೮೦ ೧೧, ಮತ್ತು ೯೯ ೨೪, ಲಕ್ಷ ರೂಪಾಯಿಗಳಿಗೆ ಕ್ರಮವಾಗಿ ಹೆಚ್ಚುತ್ತಲಿರುವುದು ಒಳ್ಳೇ ತರದ ಕಾಗದವನ್ನು ತಯ್ಯಾರಿಸುವ ತಕ್ಕದಾದ ಪ್ಯಾಬರ್ (ನಾರು) ಪದಾರ್ಥವು ದೊರಕುವುದು ಹಿಂದೂಸ್ಥಾನದಲ್ಲಿ ಕಷ್ಟಸಾಧ್ಯವಾದ್ದರಿಂದ ಕಾಗದ ಕೈಗಾರಿಕೆಯು ಹೆಚ್ಚಿನ ಅಭಿವೃದ್ಧಿಗೆ ಬರಲಿಲ್ಲವೆಂತ ತಿಳಿದು ಬರುತ್ತದೆ ಟ್ರಿನಿದಾದ ಎಂಬಲ್ಲಿ ಸಕ್ಕರೆ ಬಗ್ಗೆ ಕಬ್ಬನ್ನು ಹಿಂಡಿರಸ ತೆಗದಬಳಿಕ ಉಳಿಯುವ ಕಬ್ಬಿನ ಶಿಪ್ಪೆಯಿಂದ ಉತ್ಕೃಷ್ಟವಾದ ಕಾಗದವನ್ನು ತಯ್ಯಾರಿಸುತ್ತಾರೆ ಸಕ್ಕರೆ ಕೈಗಾರಿಕೆಗೆ ಯಂತ್ರ ಸಹಾಯದಿಂದ ಈ ಕಬ್ಬಿನ ಶಿಪ್ಪೆಯನ್ನು ಕಾಗದಕ್ಕೆ ಬೇಕಾದ ರೀತಿಯಲ್ಲಿ ಹವಣಿಸಿಕೊಳ್ಳುವದು ಅನುಕೂಲವಾದ್ದರಿಂದ ಹೇರಳವಾಗಿ ಕಬ್ಬು ಬೆಳೆಯುವ ಪ್ರಾಂತ್ಯಗಳಲ್ಲಿ ಸಕ್ಕರೆ ಮತ್ತು ಕಾಗದ ಕಾರ್ಖಾನೆಗಳನ್ನು ಏರ್ಪಡಿಸಬಹುದು ಹೀಗೆ ಹವಣಿಸಿದ ಈ ಕಬ್ಬಿನ ಶಿಪ್ಪೆ ಟನ್ ಒಂದಕ್ಕೆ ೨೫ ರೂಪಾಯಿ ಪ್ರಕಾರ ಕ್ರಯ ದೊರಕುವುದರಿಂದ ಕಬ್ಬನ್ನು ಈ ಗೋಸ್ಕರವಾಗಿಯೇ ಬೆಳೆಸಿದ್ದಲ್ಲಿ ನಷ್ಟವಾಗಲಿಕ್ಕಿಲ್ಲವೆಂತಲೂ, ಇದರಿಂದ ಸಕ್ಕರೆಯನ್ನು ಸಹಾ ತಯ್ಯಾರಿಸ ಬಹುದೆಂತಲೂ ಅಭಿಪ್ರಾಯಪಡುತ್ತಾರೆ ಹಿಂದೂಸ್ಥಾನದಲ್ಲಿ ಕಬ್ಬು ಪೈದಾಸಾಗುವ ಸ್ಥಳಗಳು ಬಹಳವಿರುವುದರಿಂದ ಕಾಗದ ಮತ್ತು ಸಕ್ಕರೆ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲತೆಗಳು ಹೆಚ್ಚಿರುವವು ಪಂಜಾಬು ಸರಕಾರದವರು ಹೀಗ ಕಬ್ಬಿನ ಶಿಪ್ಪೆಯನ್ನು ಕಾಗದ ಕ್ಕಾಗಿ [illegible] ಹವಣಿಸುವದೆ ಪ್ರ [illegible] ತ್ತಿ [illegible] ಪಂಜಾಬ್ ಸರಕಾರದವರು ತಮ್ಮ ಪ್ರಯತ್ನಗಳಲ್ಲಿ [illegible] ಹೊಂದಿದ್ದಲ್ಲಿ ಹಿಂದೂಸ್ಥಾನದಲ್ಲಿ ಸಕ್ಕರೆ ಮತ್ತು ಕಾಗದ ಕೈಗಾರಿಕೆಗಳನ್ನು ಸ್ಥಾಪಿಸುವರೆ ಪ್ರೋತ್ಸಾಹ ದೊರಕಿದಂತಾಗುವುದು

~~~

ಕಲ್ಕತ್ತೆಯಲ್ಲಿಯ ಕಾಳೀಘಾಟಿನ ಬಾಬು ಸಂತೋಷ ಮಲ್ಲಿಕ್ ಎಂಬವರು ರೂಪಾಯಿ, ಆಣೆ ಪೈ ಮತ್ತು ಪೌಂಡ್ ಶಿಲ್ಲಿಂಗ್, ಪೆನ್ಸ್ ಲೆಕ್ಕದಲ್ಲಿ ಗುಣಾಕಾರ ಭಾಗಾಕಾರ, ಕಳೆಯುವುದು, ಕೂಡಿಸುವುದು ಇವುಗಳನ್ನು ಅದರ ಮು [illegible] ವಲ್ಲಿಯೂ ತಪ್ಪಿಲ್ಲದೆಯೂ ಮಾಡುವಂತ ಒಂದು ನೂತನ ಸಣ್ಣ ಯಂತ್ರವನ್ನು ರಚಿಸಿರುವರು ಇದೇ ನಮೂನೆ ವಿದೇಶೀ ಯಂತ್ರಗಳಿಗಿಂತ ಇದು ಬೆಲೆಯಲ್ಲಿ ಅಗವಾಗಿರುವುದೆಂತಲೂ, ಕೆಲಸವನ್ನು ಸಹಾ ಇದರಲ್ಲಿ ಅವುಗಳಿಗಿಂತ ಬೇಗನೇ ಮಾಡ ಬಹುದೆಂತಲೂ ತಿಳಿಯುತ್ತೇವೆ ಒಂದು ಇಂಥಾ ಯಂತ್ರಕ್ಕೆ ವಿದೇಶಿಯರದಕ್ಕೆ ೪೦೦ ರೂಪಾಯಿಗಳಾಗಿರುವಾಗ ಮಲ್ಲಿಕರವರ ಯಂತ್ರಕ್ಕೆ ನೂರು ರೂಪಾಯಿಗಳಾಗಿರುವುದು

~~~

ಜೀವಸುಗಳ ಧಾರಣೆ, ಮಂಗಳೂರು

ಒಳ್ಳೇ ಮಸ್ಕತಿ ಅಕ್ಕಿ, ,	5—8—0
ಗಡುಸು ಮಸ್ಕತಿ, , , , ,	5—0—0
ಬೈಲು ಸುಗ್ಗಿ, , , , , , , , , ,	4-14—0
ದುಯಂ ಗುಡ್ಡು ರಾಶಿ , , ,	4-11—0
ಮಸ್ಕತಿ ಬೆಳ್ತಿಗೆ , ,	5—8—0
ರಂಗೂನ್ ಬೆಳ್ತಿಗೆ ಗೋಣಿ , , ,	8—4—0
ಹುರುಳಿ ಗೋಣಿ ೧ರ, , , , , , ,	8—8—0
ಉಪ್ಪು ಗೋಣಿ ೧ರ , , , , , ,	3-13—0
ಕೊಬ್ರಿ ಎಣ್ಣೆ ಮಣ , , , , , , ,	5-10—0
ಕಾಪಿ-ಖಂಡಿ ೧ರ , , , , , , , ,	205—0—0
ಕಾಳು ಮೆಣಸು ಖಂಡಿ, , , ,	110—0—0
ಬಿಳಿ ಗೋಟು ಅಡಿಕೆ, , , , , , ,	85—0—0
ಊರ ಬೆಲ್ಲ ಮಣ, , , , , , , , ,	2-12—0

ಸ್ವದೇಶಾಭಿಮಾನಿಯ ಚಂದಾ ನಿರ್ಣಯ —	ರೂ ಆ.
ಟಪ್ಪಾಲು ಹಾಸಲೂ ಶೇರಿಗ ವರುಷಕ್ಕೆ	೨—೧.
„ „ ಇಲ್ಲದೆ „	೧—೪.
ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಶೇರಿ	೧—೯.
ವಿದ್ಯಾರ್ಥಿಗಳು ಹಾಸಲು ಸಹಿತ ಅರ್ಧ ವರುಷಕ್ಕೆ	೧—೧.
~~~

"ಲಾ" ಪ್ರಕಟನೆಗಳು.

—o—

1. ವ್ಯವಹಾರ ನಿರ್ಣಯ—ಫುಟಗಳು ೫೪೬ ಹಿಂದೂ ಮಹಮದೀ ಲಾಗಳು ೨೯ ಕಾನೂನುಗಳು ಇವುಗಳ ಸಂಗ್ರಹವೂ ೪೨ ದಸ್ತಾವೇಜ ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2 ಕನ್ನಡ ಲಾ ರಿಪೋರ್ಟ್ರ ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ ಯಾ ವಿ ಪಿ ಬಿಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು ಎಂ ಮಲ್ಲಾರಾಧ್ಯರೈ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯ ಪದ

—o—

THE HINDU SOAP MANUFACTURING CO ,
ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ

—o—

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಖರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜೆಂಟರಿಂದ ದೊರಕುವವು ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೆಳ್ಳಬಹುದು

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳ

ಪರಿಮಳಾಂಜನ ನಂಬ್ರ 1—ಇದರ ಬಾಹ್ಯಲೇಪನದಿಂದ ಶೀತ ಶೋಷ ಶಿರೋಭಾರ, ಒರ್ಕೆನ್ನು, ಅರ್ಧಾಂಗವಾಯು ವಾತ ಸಂಧುವಾತ ಶೀತ ಕೆಮ್ಮು ಗಂಟ್ಲುನೋವು, ಜಖಮ್, ಉಳುಕು, ಗಾಯಗಳು ಪಕ್ಷವಾತ ಬಸ್ಸುನೋವು ಕೈ ಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ಸಿಲ್ಲುವವು ಡಬ್ಬಿ ೧ರ ಕ್ರಯ 0-8 0

2 ತಾಂಬೂಲ ಸುವಾಸಿನಿ—ಸೀಸ ೧ರ ಕ್ರಯ 0 4-0

3 ದಂತಮಂಜನ—ಡಬ್ಬಿ ೧ರ ಕ್ರಯ 0 2-0

4 ಗಜಕರ್ಣದ ಮುಲಾಮು—ಡಬ್ಬಿ ೧ರ ಕ್ರಯ 0-6 0

5 ನಯನಾಮೃತ ಸುರ್ಮ—ಸೀಸೆ ೧ರ ಕ್ರಯ 0 8-0

6 ಶ್ವಾಸಕುಠಾರ—ಡಬ್ಬಿ ೧ರ ಕ್ರಯ 0-8 0

7 ಪರಿಮಳಾಂಜನ ನಂಬ್ರ ೨—ಡಬ್ಬಿ೧ರ ಕ್ರಯ 0 10 0

8 ಜ್ವರಾಂಕುಶ ಮಾತ್ರೆ ಡಜನ್ ೧ರ ಕ್ರಯ 1-8 0

9 ಸುಗಂಧ ನಶ್ಯದ ಪುಡಿ—ಡಬ್ಬಿ ೧ರ ಕ್ರಯ 0 6-0

10 ದಶಾಂಗಧೂಪ—ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಸೇರು ೧ಕ್ಕೆ ರೂಪಾಯಿ 0 4 0

11. ದ್ರಾಕ್ಷಾರಿಷ್ಠ:—ಬಾಟ್ಲಿ ೧ರ ಕ್ರಯ 2 8 0 ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಶ್ವಾಸಕ್ಕಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರೆಯಿರಿ

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ (ಊದು)ಬತ್ತಿಗಳು ಸೇರು ೧ಕ್ಕೆ೧೨ ರೂ ೫ ರೂ ೩ ರೂ ೨ ರೂ ೮೮. ೧೮೩. ೪.೮ ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಟಿ ಎಲ್ ಉಪಾಧ್ಯಾಯ.
ಮೈಸೂರು

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ ಮತ್ತು ಮದ್ರಾಸು

ಟ್ರಸ್ಟೀ - ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಶ್ರೀಮಂತರಿಗೂ ಬಡವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳ ಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ಕೃಷಿ ಯಂತ್ರಗಳನ್ನು ಕಳ್ಳ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾಗುತ್ತದೆ

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ ಕನ್ನಡ

ನಮ್ಮನ್ನು ಮರೆತಿರುವಿರಿ.

ಹಾಸನ್ ಟೋಪಿ ಹೊಲಿಯ ಉಲನ್‌ದಾರಗಳು,

1ಟೋಪಿ ದಾರಕ್ಕೆ 0 8 0 ಹತ್ತು ಟೋಪಿಯಾಗುವ ಉಂಡಲಿಗೆ 3 7 0 ಹಾಸನ್ ಟೋಪಿ ಡಜನ್ 1ಕ್ಕೆ 8 0 0 ಮತ್ತು 15 0 0

ದೊಡ್ಡ ಸ್ಯಾಂಪಿಯನ್ 1ಕ್ಕೆ 0 8 0, ಪೋಸ್ಟು ಕಾರ್ಡು 100ಕ್ಕೆ 0 3 0 ಕೊಕ್ಕ ಸೂಜಿ 1ಕ್ಕೆ 0 1 6 ಪರಿಮಳ ನಶ್ಯ ಡಬ್ಬಿ 1ಕ್ಕೆ 0 2 0 ಮೆಂತೋಲ್ ಡಬ್ಬಿ 1ಕ್ಕೆ 0 3 0 ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 5 0, ರಾಯಲ್ ದಂತಮಂಜನ ಡಬ್ಬಿ 1ಕ್ಕೆ 0 1 0, ಸೆನ್‌ಸೆನ್ ತಾಂಬೂಲ ಮಿತ್ರನು 300ಕ್ಕೆ 0 3 0, ನಯನಾಮೃತ ಸುರ್ಮ ಶೀಶೆ 1ಕ್ಕೆ 0 8 0, ಕೆಪಿಟೋ ಬಾಂ ಡಬ್ಬಿ 1ಕ್ಕೆ 0-8 0, ಚಂದ್ರಪ್ರಭಾಕರ ಮಾತ್ರೆ ಡಬ್ಬಿ 1ಕ್ಕೆ 1 4 0 ರೋಮನಾಶಕ ಸಾಬುನು ಪೆಟ್ಟಿಗೆ 0 6 0, ಮಂಗಳೂರು ಬೀಡಿ 1000ಕ್ಕೆ 1 8 0 ಪವನ್ ಬಂಗಾರದ ರೋಜಾ ಹೂವು, 1ಕ್ಕೆ 7 12 0

ನಮ್ಮಲ್ಲಿ ಇರುವಷ್ಟು ರೀತಿಯ ಉಲ್ ಬೇರೆ ಎಲ್ಲಿಯೂ ದೊರೆಯದು ಗ್ರಹಕರಿಗೆ ಯಾವ ರೀತಿ ಸಾಮಾನು ಬೇಕಾದರೂ ಸಿಕ್ಕುವದು

ವಿಳಾಸ — **ಡಿ. ಊಲನ್ ಮಾರ್ಟ.**
ಮಂಗಳೂರು, ಬಿ, 4/

ರೋಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇಸಿ ಕಾರಿ ಮುಲಾಮು ಇದರಿಂದ ತಲೆನೋವು, ವಾತ, ಸಂಧಿವಾತ, ಜಖಮು, ಉಳುಕು, ಅರ್ಧಾಂಗವಾಯು, ಗಂಟ್ಲುನೋವು, ಸೊಂಟದ ನೋವು, ಎದೆಶೀತ ಗಾಯ, ಬನೆಗಾಲು ಮುಂತಾದ ಎಲ್ಲಾ ತರದ ನೋವುಗಳು ಗುಣವಾಗುವವು ಇದರಿಂದ ಗುಣ ಕಂಡು ಬರುವದಿಲ್ಲವಾದರೆ ಹಣ ಪರತು ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು. ಬಾಟ್ಲಿ ಒಂದರ ಕಿಮ್ಮತು 0-8-0 ಆರು ಬಾಟ್ಲಿಗಳಿಗೆ 2-10-0. ರೋಯಲ್ ಇಂಡಿಯನ್ ಬಾಂ, ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು. ಅಥವಾ.

ವಿಳಾಸ:—

ರೋಯಲ್ ಟ್ರೇಡಿಂಗ್ ಕಂಪೆನಿ

ಗಿರ್ಗಾಂ ಮುಂಬಯಿ.

ಚಾಯ್ಯಬ್ಯಾರಿ, ಕೊಡಿಂಬಳೆ ಗ್ರಾಮದ ಗಾಣಿಗ ವೆಂಕ್ಟ ಕಂಚಿಗಾರ ಶೀನಪ್ಪ ಎಂಬವರು ಕೆಲವು ಕಾಲದ ಮೊದಲು ಉಪ್ಪಿನಂಗಡಿ ಕಸಬಾ ವೆರಾಜೆ ರಾಮಪೈಗಳವರ ಹಟ್ಟಿಗಳಿಂದ ರಾತ್ರಿಕಾಲ ಕೆಲವು ನಡೆ ಜಾನುವಾರುಗಳನ್ನು ಕಳವು ಮಾಡಿ ಮಾರಿದ್ದರ ಕುರಿತು ಕಡಬ ಸ್ಟೇಶನ್ ಹೆಕೊ. ಮಂಜೋಡಿಯವರು ಈ ತಕ್ಷೀರು ತಲಾಶಿಯಿಂದ ಇಲ್ಲಿಯ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನ್ಕಿ ನಡಿಯುತ್ತಾ ಇದ್ದ ಈ ಮೊಕದಮೆಯಲ್ಲಿ ಮುದ್ದೈಆಲೆರಿಗೆ ತಾ ೨೭ರಲ್ಲು ಪ್ರತಿ ಒಬ್ಬನಿಗೆ ೬ತಿಂಗಳ ಕಠಿಣ ಶಿಕ್ಷೆ ವಿಧಿಸಿರುವರು ಇವರು ಕೊಡಿಂಬಳ ಗ್ರಾಮದ ಬೋವಿ ಶೇಷಪ್ಪ, ಕೊಂಬಾರ ಗೌಡ, ಸೋಮ, ಇವರ ಬಾಬ್ತು ಜಾನುವಾರ ಕಳವು ಮಾಡಿದರ ಕುರಿತು ನಂಬ್ರಗಳು ಇಲ್ಲಿಯ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನ್ಕಿಗೆ ಬಾಕಿ ಇರುವವು

——o——

ಉಡುಪಿ ಸ್ವರ್ಗವಾಸಿಗಳಾದ ಶ್ರೀ ಸುಬ್ಬರಾಯ ಪೈಗಳವರ ಹೆಸರಲ್ಲಿ ಈ ತಾ ೧ಲ್ಲು ಇಲ್ಲಿಯ ವೆಂಕಟ್ರಮಣ ದೇವಸ್ಥಾನದಲ್ಲಿ ೭ ಡವರಿಗೆ ಅಕ್ಕಿಯನ್ನೂ ಬೊಳ್ಳುವನ್ನೂ ಹಂಚಿದರು ತಾ ೫ಲ್ಲು ದೇವಸ್ಥಾನದಲ್ಲಿ ಸಂತರ್ಪಣೆಯೂ ನಡಿಯಿತು ಇದೇ ರೀತಿ ಅವರ ದಿವಸದಲ್ಲಿ ಪ್ರತಿ ವರುಷವು ನಡಿಸುತ್ತಾ ಬರುವಂತೆ ಒಂದು ಫಂಡು ಮಾಡಬೇಕೆಂಬ ಉದ್ದೇಶದಿಂದ ಇಲ್ಲಿಯ [illegible] ಸುಮಾರು ೪೦೦ ರೂಪಾಯಿಗಳನ್ನು ವಂತಿಗೆಯಿಂದ ಜಮಾಯಿಸಿರುವರಂತ

ಮ ರಾ ಕಡಕಾರ್ ರಾಜಗೋಪಾಲ ಕೃಷ್ಣರಾಯರ ಮನೆ ಸಮೀಪ ಒಂದು ದಿವಸ ಕೂತುಕೊಂಡು ಇದ್ದದ್ದಕ್ಕೆ ಸರಿಯಾದ ಕಾರಣ ಕೊಡದೆ ಇದ್ದುದಕ್ಕಾಗಿ [illegible] ಡಿ ಯಾದ ವಡುವಿದ್ರೆ ಪೊಗು ಪೂಜಾಂಗ ಇಲ್ಲಿಯ ಸ್ಟೇ ಮೇಜಿಸ್ಟ್ರೇಟರು [illegible] ಪ್ರಕಾರ ೬ತಿಂಗಳ [illegible]

ಒರುವ ಪಯಾ [illegible] ಪುರ ಮಠದವರು [illegible] ಪ್ರಾರಂಭಿಸಿರುವರಂತೆ [illegible] ದಕ್ಕಾಗಿ ಹರದಾರ ದೂರದಿಂದಲೂ ಸಾವಿರಾರು ಜನರು ಬರುತ್ತಿರುವರು ಜೀವನಕ್ಕೆ [illegible] ಈ ಕರ್ಕಾಟಕ ತಿಂಗಳಲ್ಲಿ [illegible] ತುಂಬಾ ಅನುಕೂಲವೇ

ಕಳೆದ ತಾ [illegible] ಇಲ್ಲಿ [illegible] ಒಬ್ಬ ಮಾಪ್ಪಿಳ್ಳ ಜಾತಿಯ ಯುವಕನು ಮಧ್ಯಾಹ್ನದ [illegible] ಯದಲ್ಲಿ ಗಂಡಸರು ಇಲ್ಲದ ಒಂದು ಬ್ರಾಹ್ಮಣರ ಮನೆಗೆ ಹೋಗಿ ಬಾಯಾರಿಕೆ ನೀರು ಕೇಳಿದನಂತೆ ಒಂದು ಹೆಂಗಸು ಒಂದು ಕಂಚಿನ [illegible] ನೀರ [illegible] ಕೊಟ್ಟಿದ್ದನ್ನು ಕುಡಿದು ಅಲ್ಲಿಯೇ ಸ್ವಲ್ಪ ಹೊತ್ತು ಕೂತಿದ್ದು ಕಡೆಗೆ ಆ ತಂಬಿಗೆಯನ್ನೇ ಹಿಡಿದುಕೊಂಡು ಹೋಗುತ್ತಿದ್ದದ್ದನ್ನು ಆ ಹೆಂಗಸು ಕಂಡು "ಎಲೋ ತಂಬಿಗೆಯನ್ನು ಎಲ್ಲಿಗೆ ಕೊಂಡುಹೋಗುತ್ತಿಯೋ" ಎಂತ ಕೂಗಲು ಆ ಕಳ್ಳನು "ಇಲ್ಲ, ಇಲ್ಲ, ನಾನು ಇದನ್ನು ಅಷ್ಟಕ್ಕೆ ಕೊಡಲಾರೆ ಹಾಗಲ್ಲ ಕಂಚಿಬಟ್ಟೆ ಕೊಡುವದಕ್ಕೆ ಇದು ಕದ್ದು ತಂದದ್ದಲ್ಲ"ವೆಂತ ವದರುತ್ತಾ ಗುಡ್ಡ ಹತ್ತಿ ಉದ್ದಕ್ಕೆ ನಡಿಯುತ್ತಿದ್ದನಂತೆ ಹೆಂಗಸರೇ ಎಚ್ಚರಿಕೆ!

ರಜಾ ಮೇಲಿದ್ದ ಇಲ್ಲಿ ಪೊಲೀಸು ಇನ್ಸಪೆಕ್ಟರಾದ ಮ ರಾ ರಾ ಕೋಡಿಕಲ್ಲ ರಾಮರಾಯರವರು ಕೆಲಸಕ್ಕೆ ಕಳೆದ ಹಪ್ತೆಯಲ್ಲಿ ಹಾಜರಾಗಿ, ಇಲ್ಲಿಗೆ ಸಬ್ ಇನ್ಸಪೆಕ್ಟರರಾಗಿ ಬಂದ ಕಾಪಿನ ಸಬ್ ಇನ್ಸಪೆಕ್ಟರು ಬೆಳ್ತಂಗಡಿ ನಾರಾಯಣ ರಾಯರು ತನ್ನ ಕೆಲಸಕ್ಕೆ ತಿರುಗಿ ಸೇರಿದರು

ವರ್ಗವಾದ ಇಲ್ಲಿಯ ಸಬ್ ರಿಜಿಸ್ಟ್ರಾರು ಮ ರಾ ರಾ ರೋಬರ್ಟ್ಸರು ಇಲ್ಲಿಗೆ ನೇಮಿಸಲ್ಪಟ್ಟ ಈ ಮುಂಚೆ ಸ್ವಲ್ಪ ಸಮಯ ಇಲ್ಲಿಯ ಕೆಲಸ ಆಕ್ಟಿಂಗ್ ಆಗಿ ನೋಡಿದ ಮ ರಾ ರಾ ಮಂಜೇಶ್ವರ ಪದ್ಮನಾಭ ಪ್ರಭುಗಳ ಕೂಡೆ ಈ ತಿಂಗಳ ತಾ. 2ಲ್ಲು ಛಾರ್ಜು ವಹಿಸಿಕೊಟ್ಟರು

ಇಲ್ಲಿಯ ತಾಲೂಕು ಕಚೇರಿಯ ಶಿರಸ್ತೆದಾರ ಮ ರಾ. ರಾ ಕೃಷ್ಣಾಚಾರ್ಯರು ರಜಾ ಪಡದ್ದರಿಂದ ರೆವಿನ್ಯೂ ಇನ್ಸಪೆಕ್ಟರರಾಗಿರುವ ಮ. ರಾ ರಾ. ದಾರೇಶ್ವರ ವೆಂಕಟರಾಯರವರು ನೇಮಿಸಲ್ಪಟ್ಟು ಇದೇ ಕಳೆದ ತಿಂಗಳ ತಾರೀಕು ೩೧ರಲ್ಲು ಛಾರ್ಜು ವಹಿಸಿಕೊಂಡರು.

ಇಲ್ಲಿ ಸಮೀಪವಿರುವ ಹಿರೇ ಬೆಟ್ಟು ಗ್ರಾಮದ ರಾಜಾಪುರಿ ಜ್ಞಾತಿಯವರಾದ ಲಕ್ಷ್ಮಣ ಪ್ರಭು ಎಂಬವನು ಪಾಂಡು ನ್ಯಾಕನೆಂಬವನನ್ನು ಕೊಂದ ಮೊಕದಮೆಯು ಇಲ್ಲಿಯ ಸ್ಟೇಶನರಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಖಿಯಾಗಿ ಸೆಶ್ಶನ್ ಕೋರ್ಟಿಗೆ ಕಮಿಟು ಮಾಡೋಣಾಗಿಯದೆ

ಮಂಗಳೂರು ಟ್ರಿನ್ಸಿಟ್ ಕಂಪೆನಿಯ 3 ಜಟ್ಕಗಳ 3 ಚಕ್ರಗಳನ್ನು ಮೊನ್ನೆ ಶನಿವಾರ ದಿವಸ ರಾತ್ರೆ ಯಾರೋ ಇವರ ವೈರಿಗಳು ಜಾರಿಸಿದ ವರ್ತಮಾನವು ಪೊಲೀಸಿನವರಿಗೆ ತಿಳಿಸಿದ್ದಲ್ಲಿ ತನ್ಕಿಯಲ್ಲಿ ಅಲ್ಲಿಯೇ ಸಮೀಪವಿರುವ ಒಂದು ಬಾವಿಯಲ್ಲಿ ಚಕ್ರಗಳು ಸಿಕ್ಕಿದವು ಈ ಕಳ್ಳರನ್ನು ಇಲ್ಲಿಯ ಪೊಲೀಸು ಆಪೀಸರರು ಪತ್ತೆ ಮಾಡುವರೆಂತ ನಂಬುತ್ತೇನೆ

ವಿವಿಧ ವಿಷಯ

ರಂಗೂನ್ ಪಟ್ಟಣದ ಸಿವಿಲ್ ಜನರಲ್ ಆಸ್ಪತ್ರೆಯಲ್ಲಿ ಶಸ್ತ್ರಪ್ರಯೋಗದಿಂದ ಎನೆಕಾಲನ್ನು [illegible] ಕಟ್ಟಿ ನೀರು ಇಳಿದು [illegible] ಮಾಡುವುದು [illegible] ರುವರು ಈ ರೋಗವು [illegible] ಎಂದು ಹಲವರಿಗೆ ಗೊತ್ತಿಲ್ಲ [illegible] ನಮ್ಮ ದೇಶದಲ್ಲಿ ದೇಹದ ಎಲ್ಲಾ ಕಡೆಗಳಿಗೂ ರಕ್ತ ಚಲಿಸುವಂತೆ ಹ್ಯಾಗ ರಕ್ತ ತುಂಬಿದ [illegible] ದೇಹಕ್ಕೆ ಪುಷ್ಟಿಯನ್ನು [illegible] ದೇಹದ [illegible] [illegible]

[illegible]

[illegible] ರಂಗೂನ್ [illegible] ಪ್ರತಿ [illegible] ಶಸ್ತ್ರಪ್ರಯೋಗ [illegible] ಆಸ್ಪತ್ರೆಯಲ್ಲಿ [illegible] ಈ ಪುಷ್ಪಿಕ [illegible] ಯಾವ ಅನಾನುಕೂಲತೆಯೂ [illegible] ಕಾಲು ಸಹ ಗಾತ್ರದಲ್ಲಿ ಸಣ್ಣದಾಗಿ [illegible] ಪಡವಿರುವುದು

ಕೆಲವು ದೇಶಗಳಲ್ಲಿ ಜನ ಸಂಖ್ಯೆಯಲ್ಲಿ ಗಂಡಸರಿಗಿಂತ ಹೆಚ್ಚಾಗಿದ್ದ ಹೆಂಗಸರ ರಕ್ಷಣೆ ಬಗ್ಗೆ ಕೆಲವು ಏರ್ಪಾಡು ಗಳನ್ನು ಆಲೋಚಿಸುತ್ತಿರುವರು ಅಮೇರಿಕದ ಸಂಯುಕ್ತ ಸಂಸ್ಥಾನದ ಬೋಸ್ಟನ್ ಎಂಬಲ್ಲಿಯ ೧೦೦ ೦೦೦ ವಿವಾಹವಾಗದ ಸ್ತ್ರೀಯರ ಬಗ್ಗೆ ತಕ್ಕ ಏರ್ಪಾಡನ್ನು ಮಾಡಬೇಕ್ಕಾ ಇತ್ತಲಾಗೆ ಒಂದು ಸಭೆ ಕೂಡಿತ್ತು ಅವಿವಾಹಿತರ ಬಗ್ಗೆ ಸ್ಥಳಗಳನ್ನು ಪಡಕೊಂಡು ಅದರ ಸಾಗುವಳಿಯಿಂದ ಅವರು ಜೀವನೋಪಾಯವನ್ನು ಒದಗಿಸಿಕೊಳ್ಳ ಬಹುದೆಂತ ಅಲ್ಲಲ್ಲಿ ಸ್ಥಳಗಳನ್ನು ಕ್ರಯಕ್ಕೆ ಪಡಕೊಂಡು ಇಂತಹ ಸ್ತ್ರೀಯರಿಗೆ ಕೊಡುವ ಹಾಗೆ ಒಂದು ಸಂಘವನ್ನು ರಚಿಸಲುದ್ಯುಕ್ತರಾಗಿರುವರು ಅಮೇರಿಕದ ಒಬ್ಬ ಸ್ತ್ರೀಯು ಈ ಫಂಡಿಗೆ ೬೦,೦೦೦ ಪವನುಗಳನ್ನು ಕೊಟ್ಟಿರುವಳು ಮೈನ್ ಎಂಬ ಸಂಸ್ಥಾನದಲ್ಲಿ ಮದುವೆಯಾಗದ ಗಂಡಸರೆಲ್ಲವರ ಮೇಲೆ ತಲೆತೆರಿಗೆಯನ್ನು ವಿಧಿಸಿ ಈ ಹುಟ್ಟುವಳಿಯಿಂದ ಅವಿವಾಹಿತ ಸ್ತ್ರೀಯರನ್ನು ಪೋಷಿಸ ಬೇಕೆಂಬ ಆಲೋಚನೆಯು ನಡಿಯುತ್ತಿರುವುದು. ಅದರಿಂದ ೪೫ ವರುಷ ಪ್ರಾಯದೊಳಗಿನ ಬ್ರಹ್ಮಚಾರಿಗಳಿಗೆ ವರುಷಕ್ಕೆ ಒಬ್ಬೊಬ್ಬನಿಗೆ ೨ ಪವನೂ ವಿಧುರರಿಗೆ ೫ ಪವನೂ ತಲೆ ತೆರಿಗೆಯಾಗಿ ವಿಧಿಸಬೇಕೆಂತ ನಿರ್ಣಯಿಸಿರುವುದು.

ಭರತಖಂಡದಲ್ಲಿ ಕಾಗದವನ್ನು ತಯ್ಯಾರಿಸುವ ಕಾರ್ಖಾನೆಗಳು ಇದ್ದರೂ ಪರದೇಶದಿಂದ ಹಿಂದೂಸ್ಥಾನಕ್ಕೆ ರಫ್ತಾಗುವ ಕಾಗದವು ಕಳೆದ ಐದು ವರುಷಗಳಿಂದ ೫೭ ೧೪, ೬೪೩೭, ೭೦ ೪೪, ೮೦ ೧೧, ಮತ್ತು ೯೯ ೨೪, ಲಕ್ಷ ರೂಪಾಯಿಗಳಿಗೆ ಕ್ರಮವಾಗಿ ಹೆಚ್ಚುತ್ತಲಿರುವುದು. ಒಳ್ಳೇ ತರದ ಕಾಗದವನ್ನು ತಯ್ಯಾರಿಸುವ ತಕ್ಕದಾದ ಪ್ಯಾಬರ್ (ನಾರು) ಪದಾರ್ಥವು ದೊರಕುವುದು ಹಿಂದೂಸ್ಥಾನದಲ್ಲಿ ಕಷ್ಟಸಾಧ್ಯವಾದ್ದರಿಂದ ಕಾಗದ ಕೈಗಾರಿಕೆಯು ಹೆಚ್ಚಿನ ಅಭಿವೃದ್ಧಿಗೆ ಬರಲಿಲ್ಲವೆಂತ ತಿಳಿದು ಬರುತ್ತದೆ ಟ್ರಿನಿದಾದ ಎಂಬಲ್ಲಿ ಸಕ್ಕರೆ ಬಗ್ಗೆ ಕಬ್ಬನ್ನು ಹಿಂಡಿರಸ ತಗದಬಳಿಕ ಉಳಿಯುವ ಕಬ್ಬಿನ ಶಿಪ್ಪೆಯಿಂದ ಉತ್ಕೃಷ್ಟವಾದ ಕಾಗದವನ್ನು ತಯ್ಯಾರಿಸುತ್ತಾರೆ ಸಕ್ಕರೆ ಕೈಗಾರಿಕೆಗಳ ಯಂತ್ರ ಸಹಾಯದಿಂದ ಈ ಕಬ್ಬಿನ ಶಿಪ್ಪೆಯನ್ನು ಕಾಗದಕ್ಕೆ ಬೇಕಾದ ರೀತಿಯಲ್ಲಿ ಹವಣಿಸಿಕೊಳ್ಳುವದ ಅನುಕೂಲವಾದ್ದರಿಂದ ಹೇರಳವಾಗಿ ಕಬ್ಬು ಬೆಳೆಯುವ ಪ್ರಾಂತ್ಯಗಳಲ್ಲಿ ಸಕ್ಕರೆ ಮತ್ತು ಕಾಗದ ಕಾರ್ಖಾನೆಗಳನ್ನು ಏರ್ಪಡಿಸ ಬಹುದು ಹೀಗೆ ಹವಣಿಸಿದ ಈ ಕಬ್ಬಿನ ಶಿಪ್ಪೆ ಟನ್ ಒಂದಕ್ಕೆ ೬೫ ರೂಪಾಯಿ ಪ್ರಕಾರ ಕ್ರಯ ದೊರಕುವುದರಿಂದ ಕಬ್ಬನ್ನು ಈ ಗೋಸ್ಕರವಾಗಿಯೇ ಬೆಳಿಸಿದ್ದಲ್ಲಿ ನಷ್ಟವಾಗಲಿಕ್ಕಿಲ್ಲವೆಂತಲೂ, ಇದರಿಂದ ಸಕ್ಕರೆಯನ್ನು ಸಹಾ ತಯ್ಯಾರಿಸ ಬಹುದೆಂತಲೂ ಅಭಿಪ್ರಾಯ ಪಡುತ್ತಾರೆ ಹಿಂದೂಸ್ಥಾನದಲ್ಲಿ ಕಬ್ಬು ಪೈದಾಸಾಗುವ ಸ್ಥಳಗಳು ಬಹಳವಿರುವುದರಿಂದ ಕಾಗದ ಮತ್ತು ಸಕ್ಕರೆ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲತೆಗಳು ಹೆಚ್ಚಿರುವವು ಪಂಜಾಬು ಸರಕಾರದವರು ಹೀಗ ಕಬ್ಬಿನ ಶಿಪ್ಪೆಯನ್ನು ಕಾಗದ ಕೈಗಾರಿಕೆ ಬಗ್ಗೆ ಹವಣಿಸುವದೆ ಪ್ರಯತ್ನಿಸುತ್ತಿರುವರು ಪಂಜಾಬ್ ಸರಕಾರದವರು ತಮ್ಮ ಪ್ರಯತ್ನಗಳಲ್ಲಿ ಜಯ ಹೊಂದಿದ್ದಲ್ಲಿ ಹಿಂದೂಸ್ಥಾನದಲ್ಲಿ ಸಕ್ಕರೆ ಮತ್ತು ಕಾಗದ ಕೈಗಾರಿಕೆಗಳನ್ನು ಸ್ಥಾಪಿಸುವದೆ ಪ್ರೋತ್ಸಾಹ ದೊರಕಿದಂತಾಗುವದು

ಕಲ್ಕತ್ತೆಯಲ್ಲಿಯ ಕಾಳಿಘಾಟಿನ ಬಾಬು ಅಶುತೋಷ ಮಲ್ಲಿಕ್ ಎಂಬವರು ರೂಪಾಯಿ, ಆಣೆ ಪೈ ಮತ್ತು ಪೌಂಡ್ ಶಿಲ್ಲಿಂಗ್, ಪೆನ್ಸ್ ಲೆಕ್ಕದಲ್ಲಿ ಗುಣಾಕಾರ, ಭಾಗಾಕಾರ, ಕಳೆಯುವುದು, ಕೂಡಿಸುವುದು ಇವುಗಳನ್ನು ಬಹು ಸ್ವಲ್ಪ ಸಮಯದಲ್ಲಿಯೂ ತಪ್ಪಿಲ್ಲದೆಯೂ ಮಾಡುವಂತ ಒಂದು ನೂತನ ಸಣ್ಣ ಯಂತ್ರವನ್ನು ರಚಿಸಿರುವರು ಇದೇ ನಮೂನ ವಿದೇಶಿ ಯಂತ್ರಗಳಿಗಿಂತ ಇದು ಬೆಲೆಯಲ್ಲಿ ಅಗ್ಗವಾಗಿರುವುದೆಂತಲೂ, ಕೆಲಸವನ್ನು ಸಹಾ ಇದರಲ್ಲಿ ಅವುಗಳಿಗಿಂತ ಬೇಗನೇ ಮಾಡ ಬಹುದೆಂತಲೂ ತಿಳಿಯುತ್ತೇವೆ ಒಂದು ಇಂಥಾ ಯಂತ್ರಕ್ಕೆ ವಿದೇಶಿಯರದಕ್ಕೆ ೪೦೦ ರೂಪಾಯಿಗಳಾಗಿರುವಾಗ ಮಲ್ಲಿಕರವರ ಯಂತ್ರಕ್ಕೆ ನೂರು ರೂಪಾಯಿಗಳಾಗಿರುವುದು

ಜೀವಸುಗಳ ಧಾರಣೆ, ಮಂಗಳೂರು

ಒಳ್ಳೇ ಮಸ್ಕತಿ ಅಕ್ಕಿ , , , ,	5—8—0
ಗಡ್ಡು ಮಸ್ಕತಿ , , , , , , ,	5—0—0
ಬೈಲು ಸುಗ್ಗಿ , , , , , , , , , ,	4-14—0
ದುಯಂ ಗುಡ್ಡು ರಾಶಿ , , , , , ,	4-11—0
ಮಸ್ಕತಿ ಬೆಳ್ತಿಗೆ , , , , , , , , ,	5—8—0
ರಂಗೂನ್ ಬೆಳ್ತಿಗೆ ಗೋಣಿ , ,	8—4—0
ಹುರುಳಿ ಗೋಣಿ ೧ರ, , , , , , ,	8—8—0
ಉಪ್ಪು ಗೋಣಿ ೧ರ , , , , , , ,	3-13—0
ಕೊಬ್ಬರಿ ಎಣ್ಣೆ ಮಣ , , , , , ,	5-10—0
ಕಾಪಿ-ಖಂಡಿ ೧ರ , , , , , , ,	205—0—0
ಕಾಳು ಮೆಣಸು ಖಂಡಿ, , , ,	110—0—0
ಬಿಳಿ ಗೋಟು ಅಡಿಕೆ, , , , , ,	85—0—0
ಊರ ಬೆಲ್ಲ ಮಣ, , , , , , , ,	2-12—0

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—	ರೂ ಆ.
ಟಪ್ಪಾಲು ಹಾಸಲೂ ಸೇರಿಗ ವರುಷಕ್ಕೆ .	೨—೧.
,, ,, ಇಲ್ಲದೆ ,, ...	೧—೪.
ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ...	೧—೯.
ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ	೧—೧.

ಕ್ರಾ ಪ್ರಕಟನೆಗಳು.

1. ವ್ಯವಹಾರ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು, ಅವುಗಳ ಸಂಗ್ರಹವೂ, ೬೨ ದಸ್ತಾವೇಜು, ೪೩ ಅರ್ಜಿ ಅವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್ - ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು ಎಂ ಮಲ್ಲಾರಾಧ್ಯರ್ಯ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ, ಈ ವಿಳಾಸಕ್ಕೆ ಬರೆಯ ಬಹುದು.

THE HINDU SOAP MANUFACTURING CO.,

ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರೆಕೊಳ್ಳಬಹುದು.

ಬಿ. ದತ್ತ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳು.

ಪರಿಮಳಾಂಜನ ನಂಬ್ರ 1.—ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನಿ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0

2 ತಾಂಬೂಲ ಸುವಾಸಿನಿ—ಸೀಸೆ ೧ರ ಕ್ರಯ 0 4-0

3 ದಂತಮಂಜನ:—ಡಬ್ಬಿ ೧ರ ಕ್ರಯ 0-2-0.

4. ಗಜಕರ್ಣದ ಮುಲಾಮು—ಡಬ್ಬಿ ೧ರ ಕ್ರಯ 0-6-0

5. ನಯನಾಮೃತ ಸುರ್ಮ:—ಸೀಸೆ ೧ರ ಕ್ರಯ 0-8-0.

6. ಶ್ವಾಸಕುಠಾರ:—ಡಬ್ಬಿ ೧ರ ಕ್ರಯ 0-8-0.

7. ಪರಿಮಳಾಂಜನ ನಂಬ್ರ ೨:—ಡಬ್ಬಿ೧ರಕ್ರಯ 0-10 0

8 ಜ್ವರಾಂಕುಶ ಮಾತ್ರೆ - ಡಜನ್ ೧ರ ಕ್ರಯ 1-8-0.

9. ಸುಗಂಧ ವಕ್ಷದ ಪುಡಿ—ಡಬ್ಬಿ ೧ರ ಕ್ರಯ 0-6-0

10. ದಶಾಂಗಧೂಪ—ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಶೇರು ೧ಕ್ಕೆ ರೂಪಾಯಿ 0-4-0.

11. ದ್ರಾಕ್ಷಾರಿಷ್ಟ:—ಬಾಟ್ಲಿ ೧ರ ಕ್ರಯ 2 8-0. ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಖಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚೆನ್ನಾಗಿ ಆಗಿ ಶರೀರ ಪುಷ್ಟಿಯಾಗುವದು.

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರಿಯಿರಿ.

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ.ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಉದುಬತ್ತಿಗಳು.

ಒಟ್ಟಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ.

ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಆನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೆ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಿಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿ ಮಾಡಿಕೊಟ್ಟಿರುವದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು ಅಲ್ಪ ಮೋಲಗಳಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾಗುತ್ತದೆ

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ. ಕನ್ನಡ.

ನಮ್ಮನ್ನು ಮರೆತಿರುವಿರೆ.

ಹಾಸನ್ ಟೋಪಿ ಮೊಲಿಯ ಉಲನ್‌ದಾರಗಳು,

1ಟೋಪಿ ದಾರಕ್ಕೆ 0 8 0 ಹತ್ತು ಟೋಪಿಯಾಗುವ ಉಂಡಲಿಗೆ 3 7 0. ಹಾಸನ್ ಟೋಪಿ ದರ್ಜನ್ 1ಕ್ಕೆ 8 0 0 ಮತ್ತು 15-0 0

ದೊಡ್ಡ ಸ್ವಾಚು ಬಿಸಿಯನ್ 1ಕ್ಕೆ 0 5 0. ಪೋಸ್ಟು ಕಾರ್ಡು 100ಕ್ಕೆ 0-3-0 ಕೊಕ್ಕೆ ಸೂಜಿ 1ಕ್ಕೆ 0 1-6 ಪರಿಮಳ ನಸ್ಯ ಡಬ್ಬಿ 1ಕ್ಕೆ 0-2-0. ಘೆಂತೊಲ್ ಡಬ್ಬಿ 1ಕ್ಕೆ 0 3 0, ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 5-0, ರಾಯಲ್ ದಂತ ಮಂಜನ ಡಬ್ಬಿ 1ಕ್ಕೆ 0 1-6, ಸೆನ್‌ಸೆನ್ ತಾಂಬೂಲ ಮಿತ್ರನು 300ಕ್ಕೆ 0-3-0, ನಯನಾಮೃತ ಸುರ್ಮ ಶೀಶೆ 1ಕ್ಕೆ 0-8-0, ಕೆಪಿಟೋ ಬಾಂ ಡಬ್ಬಿ 1ಕ್ಕೆ 0-8-0, ಚಂದ್ರಪ್ರಭಾಕರ ಮಾತ್ರೆ ಡಬ್ಬಿ 1ಕ್ಕೆ 1 4-0, ರೋಮನಾಶಕ ಸಾಬುನು ಪೆಟ್ಟಿಗೆ 0-6-0, ಮಂಗಳೂರು ಬೀಡಿ 1000ಕ್ಕೆ 1 8 0. ಪವನ್ ಭಂಗಾರದ ರೋಜಾ ಹೂವು, 1ಕ್ಕೆ 7-12-0.

ನಮ್ಮಲ್ಲಿ ಇರುವಷ್ಟು ರೀತಿಯ ಉಲ್ ಬೇರೆ ಎಲ್ಲಿಯೂ ದೊರೆಯದು. ಗ್ರಹಕರಿಗೆ ಯಾವ ರೀತಿ ಸಾಮಾನು ಬೇಕಾದರೂ ಸಿಕ್ಕುವದು.

ವಿಳಾಸ — **ದಿ. ಊಲನ್ ಮಾರ್ಟ್.**

ಮಂಗಳೂರು, ಬಿ, 4/.

ರೋಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆ ಹಾರಿ ಮುಲಾಮು. ಇದರಿಂದ ತಲೆನೋವು, ವಾತ, ಸಂಧಿವಾತ, ಜಖಮು, ಉಳುಕು, ಅರ್ಧಾಂಗವಾಯು, ಗಂಟ್ಲುನೋವು, ಸೊಂಟದ ನೋವು, ಎದೆಶೀತ, ಘಾಯ, ಆನೆಗಾಲು ಮೊಂತಾದ ಎಲ್ಲಾ ತರದ ನೋವುಗಳು ಗುಣವಾಗುವವು. ಇದರಿಂದ ಗುಣ ಕಾಣು ಬರುವದಿಲ್ಲವಾದರೆ ಹಣ ಪರತು. ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು. ಬಾಟ್ಲಿ ಒಂದರ ಕಿಮ್ಮತು 0-8-0. ಆರು ಬಾಟ್ಲಿಗಳಿಗೆ 2-10-0. ರೋಯಲ್ ಇಂಡಿಯನ್ ಬಾಂ, ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು. ಅಥವಾ.

ವಿಳಾಸ:—

ರೋಯಲ್ ಟ್ರೇಡಿಂಗ್ ಕಂಪೆನಿ

ಗಿರ್ಗಾಂ, ಮುಂಬಯಿ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)

ಹಾಫ್‌ಬೈಂಡ್ (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)

ಫುಲ್‌ಬೈಂಡ್ (ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3″ × 8¼″, 3″ × 5¼′, 8¼ × 6′ 6′ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ಗದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು.

ಬಹಳ ಸಮಯದ ವರೆಗೆ ಬಾಳುವ [illegible] ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ [illegible] ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು [illegible] ಮಾರ್ಬಲ್, ಚರ್ಮ ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಟ್ಟು [illegible] ತಯ್ಯಾರಿಸಿಕೊಡುವೆವು

ನಮ್ಮ ದರಗಳ ದಯವಾಡಿ ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹಣ್ಣಿನ ಒಳ್ಳೇ ವಿನಿಯೋಗವು ಯಾವುದು. ಬೆಲೆಗೆ ತಕ್ಕ ಔಷಧಿಗಳನ್ನು ಹಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ [illegible] ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಈಗ 1902ನೇ [illegible] ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್ ಬಾರ್ಲಿ ಕೊರ್ನ ಫ್ಲೋರ್ - [illegible] ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫುಡ್ ಮೊದಲಾದವುಗಳು)

ಡಾಕ್ಟರರ ಉಪಯೋಗಕ್ಕಾಗಿರುವ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್ [illegible] ಮೊದಲಾದವುಗಳೂ ಸಹಾ)

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ. ಇಂಗ್ಲೀಷ ವೈದ್ಯಶಾಸ್ತ್ರದಲ್ಲಿ [illegible] ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಗಳನ್ನು ಪಡಿಯಬಹುದು. (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮುಗಳ, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳ

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರೆಯುವ ವಿಳಾಸ —

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್
ಮಂಗಳೂರು.

Mangalore Trading Association.
Mangalore, S. Canara

Printed by V S Kamath, at the Mangalore Trading Association's Sharada Press, Mangalore.

Registered No. M. 498.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3 | ಮಂಗಳೂರು, ತಾರೀಕು 13ನೇ ಶುಕ್ರವಾರ ಅಗೋಸ್ತು 1909 | ಸಂಚಿಕೆ 19.

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ವೇದನಾ ಮುಲಾಮು ಇದರಿಂದ ವಾತ ಸಂಧಿವಾತ, ತಲೆನೋವು ಶಿರೋರೋಗ, ಅಜೀರ್ಣ, ಗಾಯ ಸೊಂಟದ ನೋವು ಗಂಟು ನೋವು ಜ್ವರ, ಉಳುಕು ಘಾಯ, ಶೀತ ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು. ಇದು ಸಣ್ಣ ಮಕ್ಕಳಿಗೆ ದೇಹಕ್ಕೆ ... ನಿರ್ಭಿತವಾಗಿ ಹಚ್ಚಬಹುದು ... ವಹ ... ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಬಂಗಾರ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷದಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿ ಒಂದರ ಕಿಮ್ಮತ್ತು 8 ಆಣೆ

ಕಿಮ್ಮತು		ಕಿಮ್ಮತು
ಆರು	SAFE ★ EFFICACIOUS ★ SURE WILLIAM & Co. BOMBAY PILLS ★ OINTMENTS ★ POWDERS	ಆರು
ಆಣೆ		ಆಣೆ
ಈ		ಈ
ನಮೂನೆ		ನಮೂನೆ
ಡಬ್ಬಿ		ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಲಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯುವ ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಲಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ಒಂದರ ಕಿಮ್ಮತು 6 ಆಣೆ 12 ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ಒಂದರ ಕಿಮ್ಮತು 2 ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಲಾಗಿಸುವದರಿಂದ ಮೋರೆಯ ಮೇಲಿರುವ ಮುಗ್ದೆಗಳನ್ನು ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗೆದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ, ಡಬ್ಬಿ ಒಂದರ ಕಿಮ್ಮತು 6 ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಹೆಮೋಯಿನ ಕೋಕೊ, ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೨೦ ಗುಟಿಕೆಗಳ ಡಬ್ಬಿ ಒಂದರ ಕಿಮ್ಮತು ರೂ 1

ಚೇಳು ಕಡತದ ಮೇಲೆ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ಒಂದರ ಕಿಮ್ಮತು 8 ಆಣೆ

ಕೇಶವರ್ಧನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಸ್ಸನ್ನು ... ಮಾಡುವದು. ಬಾಟ್ಲಿ ಒಂದರ ಕಿಮ್ಮತು ೧ ರೂ ಮೂರು ಬಾಟ್ಲಿಗಳಿಗೆ ರೂ 2—4—0.

ಜುಲಾಬು ಮಾತ್ರೆಗಳು	ರೂ	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0-10—0.
ಕಜ್ಜಿ ಮುಲಾಮು	,,	0—3—0
ನೇತ್ರಾಂಜನ	,,	0—4—0.

ಈ ಕಂಪೆನಿಯವರು ಹೇಳು ನಮೂನೆಯ ಔಷಧಗಳನ್ನು ... ದರಿಂದ ಕೆಟಲಾಗಿಗೆ ಬರದಲ್ಲಿ ರವಾನಿಸಲ್ಪಡುವದು.

ವಿಳಾಸ— ವಿಲಿಯಂ ಮತ್ತು ಕಂಪೆನಿ. ಫೋರ್ಟ್ ಮುಂಬಾಯಿ. ಟೆಲಿಗ್ರಾಫ ಎಡ್ರೆಸು— "ಅಮೃತಾಂಜನ" ಮುಂಬಾಯಿ.

ಫುಟ್‌ಬಾಲ್.

ನಂ|| ೧. ರೂ. ೩—೦—೦.
,, ೨. ,, ೩—೬—೦.
,, ೩. ,, ೪—೪—೦.
,, ೪. ,, ೫—೦—೦.
,, ೫. ,, ೫—೪—೦

ಬಟನ್‌ಲೆಸ್.

ನಂ|| ೩ ರೂ. ೫—೦—೦
,, ೪ ,, ೫—೮—೦.
,, ೫. ,, ೬—೦—೦.

ಕವರುಗಳು.

ನಂ|| ೧ ರೂ ೧—೧೨—೦.
,, ೨ ,, ೨—೦—೦
,, ೩ ,, ೨—೮—೦
ನಂ|| ೪ ರೂ ೩—೮—೦
,, ೫ ,, ೪—೦—೦

ಬಟನ್‌ಲೆಸ್

ನಂ|| ೩ ರೂ. ೩—೮—೦
,, ೪ ೪—೦—೦
,, ೫ ,, ೪—೮—೦

ಬ್ಲಾಡರ್‌ಗಳು.

ನಂ ೧ ರೂ ೦—೧೦—೦
,, ೨ ೦—೧೨—೦
,, ೩ ,, ೦ ೧೫—೦
,, ೪ ,, ೧—೪—೦
,, ೫ ,, ೧—೬—೦

ಇನ್‌ಫ್ಲೇಟರ್

೧ಕ್ಕೆ—೦ ೧೦ ೦, ೨ ೦ ೦, ೨—೮ ೦, ೩ ೦ ೦

ರಬ್ಬರ್ ಸಿಮೆಂಟ್.

೧ಕ್ಕೆ—೦ ೬ ೦, ೦ ೬ ೦



ಆರಿಗರು ಬೀಗಗಳು.

ಸೈಜು—೧ ೦ ೩ ೦ ೧ ೨ ೬ ೦ ೧. ೦ ೬ ೬, ೨. ೦-೯-೦, ೨, ೦ ೧೦ ೦ ನೀಲ್ಸ ಚಕ್ಕರ್‌ಗಳಿರುವ ಪಟ್ಟ ವಾದ ಬೀಗಗಳು ಒಂದರ ಬೀಗದ ಕೈ ಮತ್ತೊಂದಕ್ಕೆ ಹಿಡಿಯುವದಿಲ್ಲ

ಹಿತ್ತಾಳೀ ಬೀಗಗಳು.

ಸೈಜು—೧, ರೂ ೦ ೧೦ ೦, ೦ ೧೪ ೦, ೧. ೧-೨ ೦, ೨, ೧ ೬ ೦, ೨, ೧ ೧೦ ೦

ಕಬ್ಬಿಣದ ಬೀಗಗಳು.

ಎರಡು ಲೀವರು ೩,೧-೧೫ ೦, ೨, ೧ ೦ ೦ ೨ ೧ ೫ ೦ ನಾಲ್ಕು ಲೀವರು. ೧, ೦ ೧೦ ೦, ೧| ೦-೧೨ ೦ ೧, ೦ ೧೩ ೦, ೧||, ೦ ೧೫ ೦, ೨, ೧ ೨ ೦, ೨ ೧-೪-೦, ೩||, ೧-೬ ೦, ೩, ೧ ೯-೦

ಆರುಲೀವರು ೧||,೧ ೦ ೦, ೩,೧ ೫ ೦, ೩|,೧ ೧೬-೦

ಅಮೇರಿಕನ್ ಸ್ಪ್ರಿಂಗ್ ಬೀಗಗಳು.

೧ಕ್ಕೆ ೦-೫ ೦, ೦-೮ ೦, ೦ ೧೦ ೦, ೧ ೦-೦. ಡಿಟೋ ಮಿಲ್ಲರ್ ಬೀಗ ೧ಕ್ಕೆ ೦ ೩ ೦, ೦-೬-೦, ೦ ೮-೦

ಟ್ರಂಕು ಪ್ಯಾಡಲಾಕ್ ೧ಕ್ಕೆ ೦-೮-೦.

ಟ್ರಂಕುಗಳಿಗೆ ಹಾಕುವದಕ್ಕೆ ಅನುಕೂಲವಾಗಿ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ ೨ ಲೀವರು ೦-೧೨-೦; ೪ ಲೀವರು ೧-೦-೦.

ಒಂದೇಸಲ ೩ ಬೀಗಗಳನ್ನು ವಿ.ಪಿ. ಯಲ್ಲಿ ತರಿಸಿಕೊಳ್ಳು ವವರಿಗೆ ಟಪಾಲು ಹಾಸಲು ಇಲ್ಲದೇ ಕಳುಹಿಸಲ್ಪಡುತ್ತೆ.

ಹೆಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೋಟೀಸು.

ನಮ್ಮ ಸ್ವಂತ ಕೈಗಾರಿಕೆಯಲ್ಲಿ ತಯಾರು ಮಾಡಲ್ಪಟ್ಟ ಹಸರೂ ಬ್ಲೂ ಅಂಬೂರ ತೆಗಲ್‌ಬತ್ತಿ ಸೆವರಸ್ ಒಣ್ಣಾ ವಗೈರೆ ನಮೂನೆ ಒಣ್ಣಗಳ ಕಲಾಬತ್ತು ಬಾವಾ ಅಂಚು ಪಿತಾಂಬ್ರಗಳೂ ೧೬-೧೪ ಮೊಳದ ಕಿರಿಗಗಳೂ ಜರತಾರದ ಕಣಗಳೂ ಡಿಟೊ ರಂಗುಗಳಲ್ಲಿ ಕಲಾಬತ್ತು ಸರಪಣಿ ರುದ್ರಾಕ್ಷಿ ಅಂಚಿನ ಕಲಾಬತ್ತು ಚೌಕಳಿ ಸಾಲಂದಿ ವಗೈರೆ ಪಿತಾಂಬರಗಳೂ ಸದರಿ ಜರತಾರದ ಕಣಗಳೂ ೧೬ ೧೪ ಮೊಳದ ಕಿರಿಗೆಗಳೂ ಸದರಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಶೀರೆಗಳೂ ೧೬ ೧೪ ಮೊಳದ ಕಿರಿಗೆಗಳೂ ಹೇದಿ ಮುಂಗಿಲಾತಿಮುಂಗಿ ಬಂಗಾರ ಚುಕ್ಕಿ ಕಾಷಿಗಣ್ಣು ಹುಣಿ ರುದ್ರಗಂಟಿ ಸಭಾಲಂಕಾರ ವಗೈರೆ ರಮಾವಾರು ಶೀರೆಗಳೂ ಜರತಾರದ ಕಣಗಳೂ ೧೬ ೧೪ ಮೊಳದ ಶೀರೆಗಳೂ ಸದರಿ ಎಲ್ಲಾ ಮಾದರಿಯಲ್ಲಿಯೂ ಸಾದಾ ರುದ್ರಾಕ್ಷಿ ಸರಪಣಿ ಅಂಚಿನ ಶೀರೆಗಳೂ ೧೬ ೧೪ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಮೇಲ್ಕಂಡ ಎಲ್ಲಾ ಮಾದರಿಯ ಕುಪ್ಪಸದ ಕಣಗಳೂ ಕಲಾಬತ್ತು ಮತ್ತು ರೇಷ್ಮೆ ರುಮಾಲುಗಳೂ ರೇಷ್ಮೆ ದೊತ್ರ ವಸ್ತ್ರಗಳೂ ಪ್ಯಾಂಟು ಕೋಟಿನ ಪೀಸ್‌ಗಳೂ ಹೊಸ ನಮೂನೆ ಬನಾತೂ ಕೂರ್ಪಾಟ ಬಾವಾ ಅಂಚಿನ ಶೀರೆಗಳೂ ಸಹಾ ಮಾಮೂಲು ಕ್ರಯಕ್ಕೆ ಸಿದ್ಧವಾಗಿರುತ್ತವೆ ಇಲ್ಲದೆ ಕಂಚಿ, ಮದರಾಸು ಕೋಲಂ ಗೋಡು ಕುತ್ತಾಲಂ, ಕುಂಭಕೋಣಂ, ಮಧುರಾ, ಸತಾರಾ, ಮೀರಜ್, ಮುಂತಾದ ಸ್ಥಳದಲ್ಲಿ ತಯಾರಾಗುವ ಪೂರಾ ಜಾತಿ ಶೀರೆಗಳೂ ಕಣಗಳೂ ಕೊಯಮತ್ತೂರು ಪಿಂಡುಗಲ್ಲು ಈ ಸ್ಥಳಗಳಲ್ಲಿ ತಯಾರಾಗುವ ಕಲಾಬತ್ತು ರುಮಾಲುಗಳೂ ಪೇಟಾಗಳೂ ಕಲರ್ ಪೇಟಾಗಳೂ ಮಷ್ಟ್ರು ಗಳೂ ಸೇಲಂ ತಾತ್ಕೆಂಗಾರ ಪೇಟೆ ಕಲಾಬತ್ತು ಪಂಚೆಗಳೂ ಕಪ್ಪು ರುದ್ರಾಕ್ಷಿ ಆನಾರವ್ ೮ ೯ ಮೊಳದ ಪಂಚೆಗಳೂ ದೊಂತ್ರಗಳೂ ರೇಷ್ಮೆ ಅಂಚಿನ ಶ್ಲಾಘನೀಯವಾದ ಪಂಚೆಗಳೂ ಸಹಾ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತವೆ ಮೇಲ್ಕಂಡ ಎಲ್ಲಾ ರಕಂಗಳು ಎಲ್ಲಾ ಗ್ಯಾರಂಟಿ ಯಾಗಿರುತ್ತೆ ಆರ್ಡರು ಕೊಟ್ಟಲ್ಲಿ ಕೂಡ್ಲೆ ವಿ ಪಿ ದ್ವಾರಾ ಕಳುಹಿಸಲ್ಪಡುತ್ತೆ ಒಂದಾವರ್ತಿ ನಮ್ಮಲ್ಲಿ ಬೇಕಾದ ಜವಳಿಯನ್ನು ತರಿಸಿಕೊಂಡು ಅಜಮಾಯಿಸಿ ಮಾಡಿದಲ್ಲಿ ನಮ್ಮ ಜವಳಿಯ ಶ್ರೇಷ್ಠತ್ವವು ವ್ಯಕ್ತವಾಗುತ್ತೆ ನಂಬಿಸಿ ಬಂದುದರೆಂದು ಇಚ್ಛೈಸುತ್ತಿದ್ದೇವೆ ಮೇಲ್ಕಂಡ ನಮ್ಮ ಸ್ವಂತ ಕೈಗಾರಿಕೆಯ ಜವಳಿಯ ಗೌರವಕ್ಕಾಗಿ ಮೈಸೂರು ಎಗ್ಸಿಬಿಷನ್‌ನಲ್ಲಿಯೂ ನಾಗಪೂರ್ ಎಗ್ಸಿಬಿಷನ್‌ನಲ್ಲಿಯೂ ಬೆಳ್ಳಿ ಮೆಡಲ್‌ಗಳೂ ಮತ್ತು ಸರ್ಟಿಫಿಕೇಟುಗಳೂ ಸಹಾ ಹೊಂದಿ ಇರುತ್ತೇವೆ

ಹೆಚ್ ಸಂಕಪ್ಪಾ ಬಸಪ್ಪಾ,
ಜವಳಿ ವ್ಯಾಪಾರಸ್ಥರು,
ಚಿಕ್ಕಪೇಟೆ,
ಬೆಂಗಳೂರು ಸಿಟಿ.

1. ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ ಔಷಧಿಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ).	೩-೦-೦.
2 ಶ್ರೀಶಿವಾನಂದಲಹರಿ ಈ ಗ್ರಂಥಕ್ಕೆ ಪ್ರತಿಪದ ಟೀಕಾ ತಾತ್ಪರ್ಯ.	೦-೬-೦.
3. ಉತ್ತರ ರಾಮಚರಿತ್ರೆ ಕಥೆ ಬಹಳ ಸ್ವಾರಸ್ಯವಾದದ್ದು	೦-೫-೦.
1 ಟೀಕಾ ರಾಘವೇಂದ್ರ ಸ್ತೋತ್ರ.	೦ ೨-೦.
5 ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ ಸಮಂತ್ರಕ ಮಹಾತ್ಮ್ಯ, ಮಹಾಸೌರ, ಆದಿತ್ಯ ಹೃದಯಾದಿ	೦-೨-೦.
6 ಉದಕಶಾಂತಿ ಶುದ್ಧವಾದ ಪುಸ್ತಕ	೦ ೨ ೦.
7 ವಿಷ್ಣುಸಹಸ್ರನಾಮ ಮೂಲ ಶ್ಲೋಕ ರೂಪ ನಾಮರೂಪ ಕೂಡ ಚಿಕ್ಕ ಸೈಜು	೦-೨-೦.
8 ವಿಷ್ಣುಸಹಸ್ರನಾಮಕ್ಕೆ ಪ್ರತಿಪದ ಟೀಕಾ ತಾತ್ಪರ್ಯ ಉತ್ತಮ ಕಾಗದ ಕಿತ್ತಾನು ಬೈಂಡು	೩-೦-೦.
9 ಕಾಲಾಮೃತ ಬಿಳೀ ಕಾಗದದಲ್ಲಿ ತಪ್ಪಿಲ್ಲದೆ ಟೀಕಾ ತಾತ್ಪರ್ಯ ಸಹಾ ಪ್ರಿಂಟಾಗಿದೆ ಹಸನ್‌ಕಾಗದ ೧ನೇ ರಕಂ	೧-೦-೦.
10 ಗ್ಲೇಜು ಕಾಗದದ ೨ನೇ ರಕಂ	೦ ೧೨ ೦.
11 ಚಾಣಿಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦ ೨-೦.
12 ಬಾಲ ರಾಮಾಯಣ ಟೀಕಾ ತಾತ್ಪರ್ಯ	೦-೨-೦.
13 ಸ್ವರಸಹಿತವಾದ ನಮಕ ಚಮಕ, ಪುರುಷಸೂಕ್ತ ಶ್ರೀಸೂಕ್ತ ಭೂಸೂಕ್ತ ನಾರಾಯಣೋಪನಿಷತ್ತು.	೦ ೨-೦.
11 ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ.	೦-೪-೦.
5 ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦-೨ ೦.
6 ಕೃಷ್ಣ ಕರ್ಣಾಮೃತ ಮೂಲ.	೦-೨-೦.
7 ಯಕ್ಷಗಾನ ಪಂಚಬಾಷಾ ಕೃಷ್ಣ ಬಾಲಲೀಲೆ	೦-೪ ೦.

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು

ವಿಳಾಸ.— ಬಿ ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಪೀಸ್.
ಚಿಕ್ಕಪೇಟೆ,
ಬೆಂಗಳೂರು

—o—

ಗಿಡಗಳು—ಬೀಜಗಳು—ಹಣ್ಣು—ಹುವ್ವು.

ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಶೇಬು, ಕಿತ್ತಾಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಣ್ಣು ವಗೈರೆ ಹುವ್ವುಗಳು. ಬೇಕಾದವರು ಕೆಟಲಾಗಿಗೆ ಬರ ದ್ದು ತರಿಸಿಕೊಳ್ಳಬಹುದು

ಟಿ. ಎಸ್. ಗಿರಿಯಪ್ಪ ಎಂಡ್ ಸನ್,
ಫ್ಲಾರಿಸ್ಟ್ ಎಂಡ್ ಸೀಡ್ಸ್‌ಮೆನ್,
ಲಾಲ್‌ಬಾಗ್ ಕೋಟೆ ರಸ್ತೆ.

ವಿನಂತಿ.

ಮುಂಬಯಿ ಪಟ್ಟಣದಲ್ಲಿರುವ ಸೇವಾಸದನ, ಪೂಣೆ ಶಹರಿನಲ್ಲಿರುವ ಅನಾಥ ಬಾಲಿಕಾಶ್ರಮ (ವಿಧವಾಗ್ರಹ) ಮತ್ತು ಮಹಿಳಾ ವಿದ್ಯಾಲಯವೆಂಬ ಈ ಮೂರು ಸಂಸ್ಥೆಗಳ ಉದ್ದೇಶವನ್ನು ತಿಳಕೊಳ್ಳಲಪೇಕ್ಷಿಸುವವರೂ, ಈ ಸಂಸ್ಥೆಗಳ ಪ್ರಯೋಜನವನ್ನು ತಮ್ಮ ಹೆಣ್ಣು ಮಕ್ಕಳಿಗೆ ಪ್ರಾಪ್ತವಾಗಬೇಕೆಂತ ಅಪೇಕ್ಷಿಸುವ ಹೆತ್ತವರೂ ಮತ್ತು ಬಡತನದ ಸಂಬಂಧ ತಮ್ಮ ಹೆಣ್ಣು ಮಕ್ಕಳಿಗೆ ವಿವಾಹ ಮಾಡಲಿಕ್ಕೆ ಅನುಕೂಲವಿಲ್ಲದವರೂ ಸಹ ಕೆಳಗೆ ದಸ್ಕತು ಮಾಡಿದವರನ್ನು ಕಂಡು ಪ್ರಸ್ತಾಪಿಸಿದ್ದಲ್ಲಿ ಅಂಥಹ ಮಕ್ಕಳ ಶ್ರೇಯಸ್ಕರ ಪರೀಕ್ಷಾರ್ಥ ಅಗತ್ಯವಿರುವ ಅನುಭವವೂ ಸಹಾಯವೂ ಸಂಪಾದಿಸಿಕೊಳ್ಳುವ ಉಪಾಯವನ್ನು ತೋರಿಸಿಕೊಟ್ಟಾರು

ಕುದ್ಮುಲ್ ರಂಗರಾವ್.

ಸ್ವದೇಶಾಭಿಮಾನಿ

ಮಂಗಳೂರು ಶುಕ್ರವಾರ ತಾರೀಕು 13ನೇ ಆಗೋಸ್ತು 1909

ಬರುವ ಕೊಂಗ್ರೆಸು ಸಭೆ.

ಇದೇ ಬರುವ ದಶಂಬರ ತಿಂಗಳಲ್ಲಿ ರಾಷ್ಟ್ರೀಯ ಸಭೆಯು ಲಾಹೋರ ನಗರದಲ್ಲಿ ನೆರೆಯ ಬೇಕೆಂದು ಕಳೆದ ಮದ್ರಾಸ್ ಸಭೆಯಲ್ಲಿ ನಿಶ್ಚಯಿಸಲಾಯಿತಷ್ಟೆ. ಈ ಎಗ್ಯ ಪಂಜಾಬದಲ್ಲಿ ನಡಿಯುವ ವಿದ್ಯಮಾನಗಳನ್ನು ಕಾಣುವಾಗ ಕೊಂಗ್ರೆಸ್ ಸಭೆಯು ಸುರಾತ ಅನಾಹುತದ ದಿನದಿಂದ ದೀನದಶೆಯನ್ನೈದಿದಂತೆ ತೋರುವದು. ಗಲಾಲರಲ್ಲಿ ಕೊಂಗ್ರೆಸ್ ಲಾಹೋರದಲ್ಲಿ ಮೊದಲನೇ ಸಾರಿ ಕೂಡಿದಾಗ ವಿಶೇಷ ಸಮಾರಂಭವಿತ್ತು. ಅಸಂಖ್ಯಾತ ಜನರು ಅತ್ಯುತ್ಸಾಹ ಜನಿತಜಯಘೋಷದಿಂದ ಅಧ್ಯಕ್ಷರಾದ ದಾದಾಭಾಯಿ ನೌರೋಜಿಯವರನ್ನು ಮೆರೆವಣಿಗೆಯಲ್ಲಿ ಒಯ್ಯುವಾಗ ಮಾಳಿಗೆಯಿಂದ ಸ್ತ್ರೀಯರು ಪುಷ್ಪವೃಷ್ಟಿಯನ್ನು ಕರೆದಿದ್ದರು. ಈಗ ಅದೇ ಪಂಜಾಬಿಗಳು ಕೊಂಗ್ರೆಸ್ ಕಡೆಗೆ ಶೋಚನೀಯವಾದ ಔದಾಸೀನ್ಯವನ್ನು ತಾಳಿರುವರು. ರಾಯ ಬಹದ್ದೂರ ರಾ. ರಾ. ಲಾಲಚಂದ, ರಾಯಬಹದ್ದೂರ್ ಬಕ್ಷಿ ಸೋಹನ್‌ಲಾಲ್, ರಾಯಸಾಹೇಬ್ ಮುರಲಿಧರ, ಲಾಲಾ ಹಂಸರಾಜ, ಲಾಲಾ ಅಮಲೋಕರಾಮನೇ ಮೊದಲಾದ ಅನೇಕ ಪಂಜಾಬಿ ಮುಖಂಡರು ಕೊಂಗ್ರೆಸ್ ಈ ವರುಷ ಲಾಹೋರದಲ್ಲಿ ಜರಗ ಬಾರದೆಂದು ಅಭಿಪ್ರಾಯಪಡುತ್ತಾರೆ. ಮತ್ತು ತಾನೂ ಹಾಗೆಯೇ ಎಣಿಸುವೆನೆಂದು ಲಾಲಾ ಲಾಜಪತರಾಯಿಗಳು ಒಂದು ಪ್ರಕಟಿತ ಪತ್ರದಲ್ಲಿ ತಿಳಿಸುವರು. ಕೊಂಗ್ರೆಸ್ ಸಂಬಂಧ ಆ ಪ್ರಾಂತ್ಯದಲ್ಲಿ ಎರಡು ಪಕ್ಷಗಳಾಗಿ ಒಂದು ಜನರನ್ನು ಕೊಂಗ್ರೆಸ್ ಕಡೆಗೂ, ಇನ್ನೊಂದು ಎದುರು ಕಡೆಗೂ ಎಳಿಯುತ್ತದೆ. ಅಂದರೆ ಕೊಂಗ್ರೆಸ್ ನಿಮಿತ್ತ ಐಕ್ಯದ ಬದಲಾಗಿ ದ್ವೇಷ ಬೆಳೆಯುವಂತಾದೀತು. ಆಕಾರಣ ಈ ವರುಷ ಸಭೆಯನ್ನು ಅಲ್ಲಿ ಕೂಡಿಸ ಬಾರದು ಎಂದು ಲಾಲಾರವರು ಎಚ್ಚರಿಸುವರು. ಕೊಂಗ್ರೆಸ್ ಆಮಂತ್ರಣ ಸಭೆಯ ಮೆಂಬರ ಯಾ ಅಧ್ಯಕ್ಷನೆನಿಸುವದು ಗೌರವಾಸ್ಪದವೆಂದು ಮಾನ್ಯರು ನೆನಸುತ್ತಿದ್ದರು. ಈಗ ಆ ಪದವಿಗೆ ಯೋಗ್ಯರಾದ ಗ್ರಹಸ್ಥರು ಅದನ್ನೊಲ್ಲದೆ ದೂರ ನಿಲ್ಲುವರು.

ಕೊಂಗ್ರೆಸ್ ಪಂಜಾಬದಲ್ಲಿಯೇ ಅಲ್ಲ ಬೇರೆ ಯಾವ ಸೀಮೆಯಲ್ಲಿ ನೆರೆದರೂ ಮುಂಚಿನಷ್ಟು ಉತ್ಸಾಹವಿರದು. ಪಂಜಾಬದಲ್ಲಿ ವಿಶೇಷ ಕಾರಣಗಳಿಂದ ಇನ್ನಷ್ಟು ನಿಸ್ತೇಜವಾಗುವದು. ಇದರ ಮುಖ್ಯ ಕಾರಣಗಳು, ಕೆಲವು ಪಂಜಾಬಿ ಗೃಹಸ್ಥರ ಲೇಖನಗಳಿಂದ ವ್ಯಕ್ತವಾಗುವವು.

ಅಲ್ಲಹಾಬಾದ್ ಕನ್ವೆನ್‌ಷನ್‌ದ ನಂತರ ನವೀನ ಪಕ್ಷವು ಕೊಂಗ್ರೆಸ್ ಸಭೆಯಿಂದ ತೊಲಗ ಬೇಕಾಯಿತು. ಮದ್ರಾಸ್ ಕೊಂಗ್ರೆಸ್ ಸಭೆಗೆ ಎರಡು ಪಕ್ಷಗಳನ್ನು ಒಡಂಬಡಿಸಿ ತರಬೇಕೆಂದು ಬಾಬು ಉಪೇಂದ್ರನಾಥ ಬೋಸರಂತಹ ಬಂಗಾಳಿಗಳು ಬಹಳ ವ್ಯವಹರಿಸಿದರು. ಆದರೆ ಸಫಲವಾಗಲಿಲ್ಲ. ಇದರಿಂದ ನವೀನ ಯಾ ವಿಪರೀತ ಪಕ್ಷ ಮಾತ್ರವಲ್ಲ, ಇತ್ತಂಡದವರೂ ಕೂಡಿ ಕೊಂಗ್ರೆಸ್ ನಡಿಯಬೇಕೆಂದು ವಾದಿಸುವ ಜನರೂ ಸಭೆಯನ್ನು ಬಿಟ್ಟು ಹೋದರು. ಪಕ್ಷಭೇದವಿಲ್ಲದೆ ಮುಂಚಿನಂತೆ ಕೊಂಗ್ರೆಸ್ ಸಭೆಯಲ್ಲಿ ಇಡೀ ಜನಾಂಗದ ಪ್ರತಿನಿಧಿಗಳಿರಬೇಕೆಂದು ಲಾಜಪತರಾಯಿಗಳು ಅಭಿಪ್ರಾಯಪಡುತ್ತಾರೆ. ಇಲ್ಲದಿದ್ದರೆ ಅದನ್ನು ರಾಷ್ಟ್ರೀಯ ಸಭೆಯೆಂದು ಹ್ಯಾಗೆ ಕರೆಯ ಬಹುದು? ಕೊಂಗ್ರೆಸ್ಸಿನ ಸರ್ವಾಧಿಕಾರವು ಪೂರ್ವ (ಸೌಮ್ಯ) ಪಕ್ಷದವರ ಕೈಯಲ್ಲಿರಲಿ, ಬಹು ಪಕ್ಷವೂ ಅವರೇ ಆಗಲಿ; ಆದರೆ ಅವರು ಪರಪಕ್ಷವನ್ನೊಳಕೊಂಡು ವರ್ತಿಸಬೇಕು. ಇಲ್ಲದಿದ್ದರೆ ಇಬ್ಬರಿಗೂ ಕೇಡದೆ. ವರುಷಕ್ಕೊಮ್ಮೆ ಜರಗುವ ಸಭೆಯಲ್ಲಿ ವಿಪರೀತರೊಡನೆ ಕೂಡಿದ ಮಾತ್ರಕ್ಕೆ ರಾ. ಗೋಖಲೆ, ಸರ್. ಫೆರೋಜಿಶಾ ಮೇಥಾ ಮೊದಲಾದವರ ರಾಷ್ಟ್ರೀಯ ಮತಗಳನ್ನು ಕುರಿತು ಯಾರಾದರೂ ಬದಲೆಣಿಸಲಾರರು. ಪೂರ್ಣ ಸ್ವತಂತ್ರ್ಯವಾದಿಗಳಾದ ವಿಪರೀತ ಪಕ್ಷವನ್ನು ತಳ್ಳಿಬಿಟ್ಟು "ಸ್ವರಾಜ್ಯ"ವು ತಮ್ಮ ಆದರ್ಶವೆಂದು ಸೌಮ್ಯ ಪಕ್ಷದವರು ಕೊಂಗ್ರೆಸ್ಸಿನಲ್ಲಿ ಸಾರುವರು. ಆದರೆ ಬ್ರಿಟಿಷ್ ರಾಜ್ಯಾಧಿಕಾರವು ಪಾರ್ಲಿಮೆಂಟಿನ ಲಿಬರಲ್ ಪಕ್ಷದವರ ಕೈತಪ್ಪಿ ಕನ್ಸರ್ವೇಟಿವರಿಗೆ ಸೇರಿದೊಡನೆ ಈ ಆದರ್ಶವನ್ನು ಅವರು ಇರಗೊಡರೆಂದು ಊಹಿಸಬೇಕು. ಆದ್ದರಿಂದ ಕೂಡಿನಡೆಯುವದು ಶ್ರೇಯಸ್ಕರವೆಂದು ಮೊದಲಾಗಿ ಲಾಲಾರವರು ಬೋಧಿಸುವರು.

ಕೊಂಗ್ರೆಸ್ ಸಭೆಯನ್ನು ತಮ್ಮ ಪ್ರಾಂತ್ಯಕ್ಕೆ ಬರಬೇಕೆಂದು ಮದ್ರಾಸಿನಲ್ಲಿ ಆಮಂತ್ರಿಸಿದವರು ರಾ. ಹರಿಕೃಷ್ಣಲಾಲರು. ಇವರು ಸೌಮ್ಯ ಪಕ್ಷದವರೆಂದು ಅನೇಕ ಪಂಜಾಬಿಗಳು ಕೊಂಗ್ರಸ್ ಸಭೆಗೇನೆ ವಿಮುಖರಾಗಿರುವರು. ಇವರ ಮೇಲಿನ ಖಾಸಗಿ ದ್ವೇಷದಿಂದ ಕೆಲವರು ತೊಲಗಿರುವರು. ಪಂಜಾಬದಲ್ಲಿ ಮಹಮ್ಮದೀಯರೇ ಹೆಚ್ಚು. ಒಬ್ಬಿಬ್ಬರನ್ನು ಬಿಟ್ಟು, ಇವರು ಕೊಂಗ್ರೆಸ್ಸನ್ನು ಮುಂಚಿನಿಂದ ಸೇರಲೇ ಇಲ್ಲ. ಇದ್ದ ಹಿಂದುಗಳಲ್ಲಿ ಅನೇಕರು ವಿಪರೀತ ಪಕ್ಷದವರು, ಅಥವಾ ಆರ್ಯ ಸಮಾಜದವರು. ಈ ಸಮಾಜಕ್ಕೆ ಹೊಸ ಕೊಂಗ್ರೆಸ್ಸಿನ ಮೇಲೆ ವಿಶ್ವಾಸವಿಲ್ಲ. "ಪಂಜಾಬಿ" ಪತ್ರವೂ ಕೊಂಗ್ರೆಸ್ ಸಭೆಗೆ ವಿಮುಖವಾಗಿ ಪ್ರಕಟಿಸಿದ ಲೇಖನ ಶ್ರೇಣಿಯಿಂದ ಇನ್ನಷ್ಟು ಹಾನಿಯಾಗಿದೆ.

ಪಂಜಾಬಿ ಹಿಂದೂಗಳಿಗೆ ಕೊಂಗ್ರೆಸ್ ಸಭೆಯ ಮೇಲೆ ಸಂತಾಪವಾಗಲಿಕ್ಕೆ ಕಾರಣವೇನೆಂದರೆ: ರಾಷ್ಟ್ರೀಯ ಸಭೆಯು, ಇಂಡಿಯನ್ ನೇಷನಲ್ ಕೊಂಗ್ರೆಸ್ಸೆಂಬ ಹೆಸರಿಟ್ಟು ತಾವು ಜಾತಿಮತ ಭೇದವಿಲ್ಲದೆ ಭಾರತೀಯರ ಸ್ವಾತಂತ್ರ್ಯವಾದಿಗಳೆಂದು ಸಾರುತ್ತಾರೆ. ಇವರು ಇಷ್ಟು ಕಾಲ ಪಕ್ಷಪಾತವಿಲ್ಲದೆ ಭಾರತೀಯರೆಲ್ಲರ ಪರವಾಗಿ ವ್ಯವಹರಿಸಿದರೂ ಮಹಮ್ಮದೀಯರು ಬೇರೆ ನಿಂತು ಪ್ರತ್ಯೇಕ ಸಂಘಗಳನ್ನು ಸ್ಥಾಪಿಸಿ ತಮ್ಮ ಸ್ವಂತ ಪ್ರಯೋಜನವನ್ನೇ ಹುಡುಕುವರು. ಸರಕಾರದವರು ಅವರ ಇಚ್ಛೆಗಳನ್ನು ಪೂರೈಸುವರು. ಪಂಜಾಬದಲ್ಲಿ ಮುಸಲ್ಮಾನರು ಬಹುಪಕ್ಷವಿರಲು ಹೊಸ ಏರ್ಪಾಡುಗಳಲ್ಲಿ ತಾವು ದುರ್ದಶೆಯನ್ನೈದಬೇಕಾಗುವದು. ಈ ವಿಷಯವನ್ನು ಕೊಂಗ್ರೆಸ್ ಸಭೆಯಾಗಲಿ ಗೋಖಲೆಯಂತಹ ಮುಖಂಡರಾಗಲೀ ಹಿಡಿದು ಪಂಜಾಬ ಹಿಂದೂಗಳ ಸಂಕಷ್ಟಗಳನ್ನು ನಿವಾರಿಸಲಿಲ್ಲ. ಆದಕಾರಣ ಆ ಕೊಂಗ್ರೆಸ್ಸಿನ ಗೋಜು ನಮಗೆ ಬೇಡವೆಂಬ ಉದಾಸೀನಭಾವವು ಅನೇಕ ಪಂಜಾಬಿಗಳಲ್ಲಿರುವದು. ಮೇಲ್ಕಂಡ "ಪಂಜಾಬಿ" ಪತ್ರದ ಒಬ್ಬ ಲೇಖಕನು ಕೊಂಗ್ರೆಸಿನ ವರ್ಚಸ್ಸವು ತೀರಿತೆಂದೂ ಅದು ಹಿಂದೂ ಸಮಾಜವೆಂಬ ದೇಹದಲ್ಲಿ ವಿಷಕರ ಪದಾರ್ಥವಾಗಿ ಪರಿಣಮಿಸಿದೆಂದೂ ಹೇಳುವನು.

ಕೊಂಗ್ರೆಸ್ ಸಭೆಯ ಉದ್ದಿಶ್ಯವು ಪ್ರಜಾ ಸಮೂಹದಲ್ಲಿ ಐಕ್ಯವನ್ನು ಬೆಳಸಿ ಭಾರತೀಯ ಜನಾಂಗವನ್ನು ನಿರ್ಮಿಸುವದಾಗಿತ್ತು. ಒಂದರ ಹಿಂದೆ ಒಂದು ಪಕ್ಷವು ಕೊಂಗ್ರೆಸನ್ನು ಬಿಟ್ಟುಹೋದರೆ ಈ ಉದ್ದಿಶ್ಯವು ನೆರವೇರುವುದೇ? ಪ್ರಜೆಗಳಲ್ಲಿ ಅನೇಕರಿಗೆ ಕೊಂಗ್ರೆಸ್ ಸಭೆಯಲ್ಲಿ ವಿಶ್ವಾಸ ಕುಂದಿದೆ. ಸರಕಾರಕ್ಕೆ ಪ್ರಜೆಗಳ ರಾಷ್ಟ್ರೀಯ ಚಲನಗಳಲ್ಲಿ ವಿಶ್ವಾಸ ಕುಂದಿದೆ. ವರುಷಕ್ಕೊಮ್ಮೆ ಒಂದು ಸಭೆಯಾಗಿ ತಮ್ಮ ಅರಿಕೆಗಳನ್ನು ನಿರ್ಣಯ ರೂಪದಲ್ಲಿ ಸರಕಾರಕ್ಕೆ ನಿವೇಧಿಸಿದರೆ ರಾಷ್ಟ್ರೋನ್ನತಿಯಾಗುವದೇ? ಕೊಂಗ್ರೆಸ್ ರಾಜನೀತಿಯು ಬಿಕ್ಷುಕ ನೀತಿಯೆಂದು ನವೀನ ಪಕ್ಷದವರು ಹಿಯ್ಯಾಳಿಸುವರು. ನಮ್ಮ ಪ್ರಾರ್ಥನೆಯನ್ನಲ್ಲ ಯೋಗ್ಯತೆಯನ್ನು ನೋಡಿ ಸರಕಾರದವರು ನಮಗೆ ಸ್ವಾತಂತ್ರ್ಯಗಳನ್ನು ಕೊಡುವರು. ಆದ್ದರಿಂದ ಬಹು ವೈಷಮ್ಯಕಾರಣವಾದ ವಿಷಯಗಳನ್ನು ಬಿಟ್ಟು ಕೊಂಗ್ರೆಸ್ ಸಭೆಯು ಪ್ರಜೆಗಳ ಕಡೆಗೆ ಮುಖ ತಿರುಗಿಸಿ ಅವರಲ್ಲಿ ಯೋಗ್ಯತೆಯನ್ನು ಹೆಚ್ಚಿಸುವ ಮಾರ್ಗವನ್ನು ಅನುಸರಿಸ ಬೇಕು. ಪ್ರಜಾಹಿತದ ಮಟ್ಟಿಗೆ ಎಲ್ಲಾ ಪಕ್ಷದವರು ಒಟ್ಟಾಗ ಬಹುದು. ಹೊಸ ಏರ್ಪಾಡುಗಳಿಂದ ಪ್ರಜೆಗಳಿಗೆ ಸಿಕ್ಕುವ ಸ್ವಾತಂತ್ರ್ಯಕ್ಕೆ ಅವರು ಯೋಗ್ಯರೆನಿಸ ಬೇಕಾದರೆ ಸಹಕಾರ, ವಿದ್ಯೆ, ಕರ್ತವ್ಯಜ್ಞಾನಗಳು ಅವರಲ್ಲಿ ಬೆಳಗಬೇಕು. ಈ ವಿಷಯಗಳಲ್ಲಿ ಯಾ ಇತರ ಅನೇಕ ಮಾರ್ಗಗಳಲ್ಲಿಯೂ ಸಾಮಾನ್ಯರಿಗೆ ಶಿಕ್ಷಣವಿತ್ತು ಅವರನ್ನು ಉದ್ಧರಿಸುವ ಕೆಲಸವು ಕೊಂಗ್ರೆಸ್ ಸಭೆಗೆ ಶ್ರೇಯಸ್ಕರ, ಪಕ್ಷಭೇದ ನಿವಾರಕ, ಸರಕಾರದ ಸಂಶಯ ನಿರ್ಮೂಲಕಾರಿಯಾಗಿರುವುದು. ರಾಷ್ಟ್ರೀಯ ಕಮ್ಮಿಟಿ ಕೈಕೆಳಗೆ ಹಳ್ಳಿಹಳ್ಳಿಗಳಲ್ಲಿಯೂ ನಗರ ಸಂಸ್ಥಾನಗಳಲ್ಲಿಯೂ ಅಲ್ಲಲ್ಲಿ ಸಂಘಗಳನ್ನು ಸ್ಥಾಪಿಸಿ, ತನ್ಮೂಲಕ ಪ್ರಜಾಹಿತಕರವಾದ ಕಾರ್ಯಗಳನ್ನು ಈಡೇರಿಸಿದರೆ ಕೊಂಗ್ರೆಸ್ ಸಭೆಯು ವಿಶ್ವಾಸಕ್ಕೆ ಪಾತ್ರವಾಗುವದು. ಯಾವ ಸಂಸ್ಥೆಯಾದರೂ ಕಾಲಕ್ಕೆ ಸರಿಯಾಗಿ ಮಾರ್ಪಡ ಬೇಕು. ಕೊಂಗ್ರೆಸ್ ಸಭೆಯು ಈ ನಿಯಮಕ್ಕೆ ಪ್ರತಿಷೇಧವಾಗುವದು.

ಮೂಲಗೇಣಿ ಒಕ್ಕಲಿಗೂ ಧನಿಗೂ ಇರುವ ಸೆಟ್ಲ್‌ಮೆಂಟಿನಲ್ಲಿ ಏರಿದ ಕೀರ್ತಿಯ ವಿವಾದ. ಬಾಬ್ತು ಹೈಕೋರ್ಟಿನವರು ಮಾಡಿದ ನಿಶ್ಚಯ. ಮೂಲಗೇಣಿ ಒಕ್ಕಲು ವ ಧನಿ ಇವರಿಗೆ ಮೂಲಗೇಣಿ ಕಾರಣವಾದ ಆಸ್ತಿ ಮೇಲೆ ಸೆಟ್ಲ್‌ಮೆಂಟಿನಲ್ಲಿ ಮೊದಲನೆ ... ಹೆಚ್ಚಿಗೆ ... ವಿಷಯದಲ್ಲಿ ನಡಿಯುವ ವಿವಾದವು

ಮದ್ರಾಸ ಹ್ಯಾಕೋರ್ಟನಲ್ಲಿ ಧನಿಗಳೇ ಕೊಡಬೇಕೆಂತ ತೀರ್ಮಾನದ ವರ್ತಮಾನವನ್ನು ನಾವು ಈ ಮೊದಲು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ್ದೆವು ಸದರಿ ತೀರ್ಮಾನ ಧನಿಗಳಿಗೆ ಅನ್ಯಾಯವಾಯಿತೋ ಎಂಬ ಅನುಮಾನದಿಂದ ನಮ್ಮ ಅಭಿಪ್ರಾಯವನ್ನು ಸಹಾ ನಾವು ಕೊಟ್ಟಿದ್ದೆವು ಆದರೆ ಇದೇ ಪ್ರಶಂಸೆವಿಷಯದಲ್ಲಿ ಮದ್ರಾಸ್ ಹ್ಯಾಕೋರ್ಟಿನಲ್ಲಿ ಜಸ್ಟೀಸ್ ಮಿಲ್ಲರ ವ ಶಂಕರನ್ ನಾಯರ್ ಮೇಲಿನ ತೀರ್ಪಿಗೆ ವ್ಯತಿರಿಕ್ತವಾಗಿ ತೀರ್ಮಾನ ಪಡಿಸಿದ್ದಾರೆ ಮದ್ರಾಸ್ ಹ್ಯಾಕೋರ್ಟು ಎರಡನೇ ಅಪೀಲು ನಂಬ್ರ $\frac{582}{1908}$ ನೇ ವ್ಯಾಜ್ಯದಲ್ಲಿ ಇದೇ ಜುಲ್ಯಾ ತಿಂಗಳ ತಾ [illegible] ಕೊಟ್ಟ ತೀರ್ಮಾನ ಸಾರಾಂಶ ಎಲ್ಲವರ ತಿಳುವಳಿಕೆ ಬಗ್ಗೆ ಇದರಲ್ಲಿ ಛಾಪಿಸಿರುವುದು

ಸದರಿ ಎರಡನೇ ಅಪೀಲಿಗೆ ಕಾರಣವಾದ ಮೂಲ ವ್ಯಾಜ್ಯದಲ್ಲಿ ಮೂಲಗಾರನಾದ ವಾದಿಯು ತನಗೆ ಬರತಕ್ಕ ಮೂಲಗೇಣಿಯನ್ನು ಮೂಲಗೇಣಿ ವಕ್ಲಿಗ ಇರುತ್ತಿದ್ದ ಹಕ್ಕಿನ ಒವಾಬ್ದಾರಿಯಿಂದ ಒರಮಾಡಿಕೊಳ್ಳುವರೆ ದಾವೆ ತಂದಿದ್ದನು ಪ್ರತಿವಾದಿಯಾದ ವಕ್ಲು ಸದರಿ ವ್ಯಾಜ್ಯದಲ್ಲಿ ಸಾಧಿಸಿದ್ದೇನೆಂದರೆ—ಸದರಿ ಮೂಲಗೇಣಿಗೆ ಕಾರಣವಾದ ಆಸ್ತಿ ಮೇಲೆ ಸೆಟ್ಲ್‌ಮೆಂಟಿನ ಮೊದಲು ಹೊರಿಸಿದ ಬೇರೇಜಿನಕ್ಕಿಂತಲೂ ಸೆಟ್ಲ್‌ಮೆಂಟಿನಲ್ಲಿ ಏರಿದ ತೀರ್ವೆಯನ್ನು ತಾನು ತನ್ನ ಸ್ವಂತದಿಂದ ಕೊಟ್ಟಿರುವ ಕಾರಣ ಅದನ್ನು ತನ್ನಿಂದ ಸಲ್ಲತಕ್ಕ ಮೂಲಗೇಣಿಯಿಂದ ಸಹಾ [illegible] ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫರು ಏರಿದ ತೀರ್ವೆ ಮೂಲಗೇಣಿ ವಕ್ಕಲೇ ತೆರುವಂತೆ ವಾದಿಯ ಗುಣಕ್ಕೆ ತೀರ್ಮಾನಿಸಿದರು [illegible] ಅಪೀಲಿನಲ್ಲಿ ಮೂಲ ತೀರ್ಪನ್ನು ಡಿಸ್ಟ್ರಿಕ್ಟ್ ಜಡ್ಜರು ರದ್ದುಪಡಿಸಿದರು ಮೂಲಗೇಣಿಯಲ್ಲಿ ಕಂಡಾಕ್ಕಿತವಾಗಿ ಬೇರೇಜು ನಮೂದಿಸಿರುತ್ತಾ ಅದಕ್ಕಿಂತಲೂ ಜಾಸ್ತಿಯಾಗಿ ಕೊಟ್ಟ ಬೇರೇಜನ್ನು ಧನಿಯು ಕೊಡಲಿಕ್ಕೆ ಜವಾಬ್ದಾರನು [illegible] ಡಿಸ್ಟ್ರಿಕ್ಟ್ ಜಡ್ಜರು ಮೂಲತೀರ್ಪು ರದ್ದುಪಡಿಸಿದರು ಈ ತೀರ್ಪಿನ ಮೇಲೆ ಮದ್ರಾಸ್ ಹ್ಯಾಕೋರ್ಟಿಗೆ ಮೇಲಿನ ಎರಡನೇ ಅಪೀಲು [illegible] ಹ್ಯಾಕೋರ್ಟು [illegible] ತೀರ್ಮಾನಿಸಿದ್ದೇನೆಂದರೆ —

ಆಸ್ತಿಯು ತೀರ್ವೆಗೆ ಪ್ರಥಮತಃ ಜವಾಬ್ದಾರಿಯಾಗಿರುತ್ತದೆ [illegible] ತೀರ್ವೆಯನ್ನು ದಸಿಯೇ ಕೊಡಬೇಕೆಂತ [illegible] ವದಿಲ್ಲ ಭೂಮಿಯನ್ನು [illegible] ರಿಂದ ಹಾಗ [illegible] ಜಾಸ್ತಿ ಮಾಡಿ ಆ ಮೂಲಕ ಸರಕಾರದವರು ವಸೂಲುಮಾಡಿಕೊಳ್ಳುತ್ತಾರೆ [illegible] ನಗದು ಹಣವಾದರೆ [illegible] ಅಕ್ಕಿ ಮುಂತಾದ [illegible] ಭೂಮಿಯಲ್ಲಿ [illegible] ಉತ್ಪತ್ತಿಯು ವಕ್ಲಿಗೂ ದಸಿಗೂ [illegible] ವಕ್ಲು ಸೈಕೆಯಾರು ಕೊಡತಕ್ಕದ್ದು [illegible] ಒಹುದಾದ ಉತ್ಪತ್ತಿ ಪ್ರಯೋಜನದ ಮೇಲೆ ನಿಶ್ಚಯಿಸತಕ್ಕದ್ದಾಗಿರುತ್ತದೆ ಭೂಮಿಯಲ್ಲಿ ಮಾಡಿದ ಕೃತ [illegible] ಪ್ರಯೋಜನವು ವಕ್ಲುವ ದಸಿಯೊಳಗೆ ಯಾವ [illegible] ಪ್ರಕಾರ ಏರಿದ ತೀರ್ವೆಯನ್ನು [illegible] ಈ ತೀರ್ಪು [illegible] ದಸಿ ವಕ್ಲುಗಳಿಗೂ ಸಮಾಧಾನಕರವಾದ್ದೆಂತ ನಾವು [illegible]

ಇಂಡಿಯಾದ ಒಜೆಟ್.

ಅಂಡರ್ ಸೆಕ್ರೆಟರಿಯವರ ಭಾಷಣ

ಪಾರ್ಲಿಮೆಂಟ್ ಸಭೆಯಲ್ಲಿ ಇಂಡಿಯದ [illegible] ಪಟ್ಟಿಯನ್ನು ಚರ್ಚಿಸುವಾಗ ಸ್ಟೇಟ್ ಸೆಕ್ರೆಟರಿಯ ಕಡೆಯಿಂದ ಮಾಸ್ಟರ್ ಅಪ್ ಎಲಿಬ್ಯಾಂಕರು ಮಾಡಿದ ಭಾಷಣವು ಸಂತೋಷ ಸಂತಾಪಗಳೆರಡನ್ನೂ ಹುಟ್ಟಿಸುವಂಥಾದ್ದಾಗಿದೆ

ಇಂಡಿಯಾ ಸರಕಾರವು ಸೈನ್ಯ ವಗೈರೆಗಳಿಗೆ ಕರತಕ್ಕೊಂಡ ಹಣದ ಬಡ್ಡಿ ಬಗ್ಗೆಯೂ, ಇಂಗ್ಲಿಷ್ ಹುದ್ದೆದಾರರ ಪೆನ್ಶನ್ ಬಗ್ಗೆಯೂ, ವರುಷಂಪ್ರತಿ ಹಿಂದು ದೇಶದಿಂದ ಇಂಗ್ಲಾಂಡಿಗೆ ಲಕ್ಷಕಟ್ಲೆ ಹಣ ಹೋಗುವದರಿಂದ ಹಿಂದುದೇಶವು ದರಿದ್ರಸ್ಥಿತಿಗೆ ಬಂತೆಂಬದು ನಿರಾಧಾರವಾದ ಹೇಳಿಕೆಯೆಂದು ಎಲಿಬ್ಯಾಂಕರವರು ಅಪ್ಪಣೆಕೊಡಿಸಿದರು ಈ ವಿಷಯದಲ್ಲಿ ದಾದಾಬಾಯಿ ನೌರೋಜಿ, ಸರ್ ಹೆನ್ರಿಕೊಟ್ಟನ್, ವಿಲ್ಲಿಯಂ ಡಿಗ್ಬಿ ಮೊದಲಾದ ಗೃಹಸ್ಥರಿಗೂ ಇಂಡಿಯಾ ಸರಕಾರಕ್ಕೂ ಅನೇಕ ಕಾಲ ಚರ್ಚೆ ನಡೆದು ಆ ಗೃಹಸ್ಥರು ಅನೇಕ ದಾಖಲೆಗಳನ್ನೂ ಸಬಬುಗಳನ್ನೂ ಹೇಳಿದರು ಸರಕಾರದವರು ಅವರ ಅಭಿಪ್ರಾಯವನ್ನು ಒಪ್ಪುವದಿಲ್ಲ.

ಮದನಲಾಲ ದಿಂಗ್ರನು ಮಾಡಿದ ಕೊಲೆಪಾತಕವು ಖಾಸಗಿ ಕೃತ್ಯವಲ್ಲದೆ ಇಂಗ್ಲಿಷರ ಮೇಲೆ ಭಾರತೀಯರು ಯಾವ ಪಿತೂರಿಯನ್ನೂ ನಡಿಸಲಿಲ್ಲವೆಂದೂ-ಭಾರತೀಯ ಜನಾಂಗಕ್ಕೆ ಬ್ರಿಟಿಷ್ ಆಧಿಪತ್ಯದಲ್ಲಿ ಶ್ರದ್ಧೆ ವಿಶ್ವಾಸಗಳುಂಟೆಂದು ಹೇಳಿದರು. ಅಶ್ವಿನಿಕುಮಾರದತ್ತ, ಕೃಷ್ಣಕುಮಾರ ಮಿತ್ರ ಮೊದಲಾದ ಗೃಹಸ್ಥರನ್ನು ತನಖಿ ಶಿವಾಯಿ ಬಂಧೀಖಾನೆಯಲ್ಲಿಡ ಕಾರಣವೇನು? ಎಲಿಬ್ಯಾಂಕರು ಹೇಳುತ್ತಾರೆ:—ಜನರು (ಮುಖ್ಯಂಡರ [illegible] ಸಮಾಜದ) ಹೆದರಿಕೆಯಿಂದ ಅಥವಾ ಸರಕಾರದ ದ್ವೇಷದಿಂದ ಅಪರಾಧಿಗಳ ಮೇಲೆ ಕಾನೂನು ಜಾರಿಮಾಡಲಿಕ್ಕೆ ಸಹಾಯಮಾಡುವದಿಲ್ಲವಾದ್ದಲ್ಲಿ ಅಂಥಹ ಅಪರಾಧಿಗಳನ್ನು ದೇಶದ ಸಮಾಧಾನಕ್ಕೋಸ್ಕರ ತನಖಿ ಶಿವಾಯಿ ಬಂಧಿಸಬೇಕಾಗುತ್ತದೆ. ಸರಕಾರದ ಮೇಲೆ ಜನರಿಗೆ ಅನುರಾಗವೇ ಉಂಟೆಂದು ಎಲಿಬ್ಯಾಂಕರವರೇ ಹೇಳುವಾಗ ದ್ವೇಷವೆಲ್ಲಿಂದ ಬಂತು? ಒಂದು ವೇಳೆ ಕೆಲಕಡೆಗಳಲ್ಲಿ ಅಸಂತುಷ್ಟಿ ಇದ್ದರೆ ಅದರ ಕಾರಣಗಳನ್ನು ಹುಡುಕಿ ಸಂತುಷ್ಟಿ ಹುಟ್ಟಿಸಬೇಕಲ್ಲದೆ ಮಾನ್ಯರನ್ನೂ ಪ್ರಜಾಪ್ರೀತಿಪಾತ್ರರನ್ನೂ ಅವರ ನಡುವಿಂದ ಸೆಳೆದು ಆ ಅಸಂತುಷ್ಟಿಯನ್ನು ಇನ್ನಷ್ಟು ಹೆಚ್ಚಿಸುವರೇ? ಜನರು ತಮ್ಮವರನ್ನು ಹಿಡಿದು [illegible] ಕೊಡುವದಿಲ್ಲವೆನ್ನುವಾ ಹಾಗಾದರೆ ಸರಕಾರದವರು ಗೊತ್ತು [illegible] ಇಲ್ಲದೆ ಸಂಭಾವಿತರನ್ನು ಕಾರಾಗೃಹಕ್ಕೊಯ್ದು ಆ ದೊಡ್ಡ ಹೆದರಿಕೆಯನ್ನು ಹುಟ್ಟಿಸಿ [illegible] ಹೆದರಿಕೆಯನ್ನು ನಿವಾರಿಸುವರೇ? ಜನರನ್ನು ಬೆಯದಿಂದಲ್ಲ ಬಕ್ತಿಯಿಂದ ವಶಪಡಿಸುವದೇ [illegible] ಬಂಧನೆಯಲ್ಲಿದ್ದ ಗೃಹಸ್ಥರು ಜನರಿಗೆ ಭಯಕಾರರಾಗಿದ್ದರೆ ಅವರು ಹೋದ ದೆಸೆಯಿಂದ ಜನರು ಸಂತುಷ್ಟರಾಗಬೇಕಿತ್ತಲ್ಲ. ಅದರೆ ಆ ಮುಂದಿನ ಪ್ರಾಂತ್ಯದ ಪ್ರಜೆಗಳು ಇನ್ನಷ್ಟು ಖಿನ್ನರಾಗಿದ್ದಾರೆ

ಹೊಸ [illegible] ಉದಾರಮನಸ್ಸಿನಿಂದ ಕೊಟ್ಟರೆ ಅವು ಫಲಿಸುವವೆಂದೂ ಆ [illegible] ಮೂಲಕ ಸರಕಾರದ ಮತ್ತು ಪ್ರಜೆಗಳೊಳಗೆ ಸಹಕಾರವನ್ನು ಬೆಳಸಿ [illegible] ಅಸಂತುಷ್ಟಿಯಿಂದ ವ್ಯಾಕುಲಿತವಾಗುತ್ತಿತ್ತೆಂದೂ ಎಲಿಬ್ಯಾಂಕರವರು ಅಪ್ಪಣೆಕೊಡಿಸಿದರು ಜಪಾನ, ತುರ್ಕ್ಯ, ಪರ್ಶಿಯಾ ರಾಜ್ಯಗಳಲ್ಲಿ ಆದ [illegible] ಹಿಂದುಸ್ಥಾನವನ್ನು ತಟ್ಟುವ ಕುರಿತು ಪ್ರಸ್ತಾಪಿಸಿದರು ಭಾರತೀಯರಿಗೆ ಇಂಗ್ಲಿಷು ವಿದ್ಯಾಭ್ಯಾಸವನ್ನು ಉದಾರಮನದಿಂದ ಕೊಟ್ಟು ಸ್ವಾತಂತ್ರ್ಯ [illegible] ನಿರಂಕುಶ ಪ್ರಭುತ್ವಕ್ಕೂ ಪಾರತಂತ್ರ್ಯಕ್ಕೂ [illegible] ಉದ್ದೇಶಿಸುವ ಇಂಗ್ಲಿಷು ಪುಸ್ತಕಗಳನ್ನು ಸಹಾ ಅವರಿಗೆ ಓದಬಿಟ್ಟಿದ್ದೇವೆಂದರು [illegible] ಇಂಗ್ಲಿಷು ವಿದ್ಯಾಭ್ಯಾಸಕ್ಕಾಗಿ ಇಂಗ್ಲಾಂಡಿಗೆ ಹೋಗುವ ಯುವಕರನ್ನು ಕಷಕ [illegible] ರಕ್ಷಿಸುವ ಬಗ್ಗೆ ಒಂದು ಸಂಸ್ಥೆಯನ್ನು ಸ್ಥಾಪಿಸುವರೆಂದೂ ಅದಕ್ಕೆ [illegible] ಇಂಡಿಯನರಲ್ಲಿ ಕಮ್ಮಿಟಿಯನ್ನು ಏರ್ಪಡಿಸಿ ತನ್ಮೂಲಕ ಆ ಯುವಕರ ಹತ್ತರಿಗೆ [illegible] ಸಹಾಯ ಕೊಡುವರೆಂದೂ ಈ ಏರ್ಪಾಡುಗಳಿಗೆ ಬೇಕಾದ ದ್ರವ್ಯವು ಇಂಡಿಯಾ ಸರಕಾರದ ಬಂಡಾರದಿಂದ ವಿನಿಯೋಗಿಸಲ್ಪಡುವದೆಂದೂ ಸಭೆಗೆ ತಿಳಿಸಿದರು

[illegible] ಹೊಸ ಏರ್ಪಾಡುಗಳು ಬೇಗನೆ ಜ್ಯಾರಿಗೆ ಬರುವ ವಿಲೆವಾರಿಯಾಗುತ್ತದೆಂದು ಎಲಿಬ್ಯಾಂಕರ ಭಾಷಣದಿಂದ ತೋರುತ್ತದೆ ಅವು ಆಚರಣೆಗೆ ಬರುವ ದಿನವಾದರೂ ಮೇಲ್ಕಂಡ ಸದ್ಗೃಹಸ್ಥರನ್ನು ಬಂಧನೆಯಿಂದ ವಿಮೋಚಿಸಿದರೆ ಈ ಕಾಲವು [illegible] ಎಲಿಬ್ಯಾಂಕರು ಸೂಚಿಸಿದಂತೆ ಹಿಂದೂದೇಶದ ಚರಿತ್ರದಲ್ಲಿ ಚಿರಸ್ಮರಣೀಯವೂ ವಿಶೇಷ ಫಲಗರ್ಭಿತವೂ ಆಗುವದು

ಹಿಂದುಸ್ಥಾನದ ಅರಳೆಕೈಗಾರಿಕೆ.

ವ್ಯಾಪಾರ ವೈಪಾಟಗಳು ಈ ವರುಷ ಮಂದವಾಗಿದ್ದರೂ, 'ಕೊಟನ್ ಎಕ್ಸೈಜ್ ಡ್ಯೂಟಿ' ಎಂಬ ಸುಂಕವು ಈ ಕೈಗಾರಿಕೆಯ ಬೆಳವಣಿಗೆಗೆ ತೊಡಕಾಗಿದ್ದರೂ 'ಸ್ವದೇಶಿ' ಚಳವಳಿಯಿಂದ ಹಿಂದುಸ್ಥಾನದ ಅರಳೆ ಕೈಗಾರಿಕೆಯು ಅಭಿವೃದ್ಧಿಸಿರುವುದು ಈ ಕೆಳಗಿನ ಲೆಕ್ಕವೃತ್ತಾಂತದಿಂದ ಈ ಅಭಿವೃದ್ಧಿಯು ರುಜುವಾಗುವದು

ವರುಷ	ಕಾರ್ಖಾನೆಗಳು	ಕೂಲಿಯಾಳುಗಳ ಸಂಖ್ಯೆ	ಭಂಡವಾಳವನು
೧೮೭೭-೮	೫೧	೪೪,೬೦೦	೯,೪೫೭,೦೦೦
೧೮೮೨-೩	೬೨	೮೦,೬೦೦	೬,೧೦೮,೦೦೦
೧೮೮೭-೮	೧೧೪	೧೫೦,೯೦೦	೭,೯೪೯,೦೦೦
೧೮೯೨-೩	೧೩೬	೧೪೮,೭೫೦	೯,೯೪೫,೦೦೦
೧೮೯೭-೮	೧೭೩	೧೬೮,೪೦೦	೧೧,೬೯೮,೦೦೦
೧೯೦೭-೮	೨೪೭	೨೨೫,೪೦೦	೧೩,೧೬೦,೦೦೦

ಹೀಗೆ ವರುಷಂಪ್ರತಿಯೂ ಈ ಕೈಗಾರಿಕೆಯು ಅಭಿವೃದ್ಧಿಸುತ್ತಾ ಬಂದು ೧೮೭೭ ರ ವರುಷಕ್ಕಿಂತ ಪ್ರಕೃತ ಕಾರ್ಖಾನೆಗಳ ಸಂಖ್ಯೆಯು ನೇಕಡಾ ೩೬೬ರಂತೆಯೂ ಭಂಡವಾಳವು ಸಹಾ ಮೂರಾವರ್ತಿ ಹೆಚ್ಚಿರುವುದೆಂದು ತೋರಿಬರುವುದು. ೧೯೦೭-೮ ನೇ ವರುಷದಲ್ಲಿ ೯೮ ಗಿರಣಿಗಳಲ್ಲಿ ನೂಲನ್ನೂ, ೧೩ ಕಾರ್ಖಾನೆಗಳಲ್ಲಿ ವಸ್ತ್ರನೇಯುವುದನ್ನೂ ೧೩೬, ಕಾರ್ಖಾನೆಗಳಲ್ಲಿ ವಸ್ತ್ರವನ್ನೂ ನೂಲನ್ನೂ ಸಹಾ ತಯ್ಯಾರಿಸುತ್ತಿರುವರು. ಈ ಸಂಖ್ಯೆಗಳೇ ೫ ವರುಷಗಳ ಮೊದಲು ೧೧೩, ೪ ಮತ್ತು ೮೪ ಆಗಿದ್ದವು. ಹೀಗೆ ನೂಲನ್ನು ಸಹಾ ತಯ್ಯಾರಿಸುವುದನ್ನು ಹೆಚ್ಚಾಗಿ ಕೈಕೊಂಡಿರುವರು.

ಮುಂಬಯಿ ಸಂಸ್ಥಾನವು ಈ ಕೈಗಾರಿಕೆಗಳ ಮುಖ್ಯಸ್ಥಳವಾಗಿರುವುದು. ಮುಂಬಯಿ ಸಂಸ್ಥಾನದಲ್ಲಿಯೇ ೧೮೧ ಕಾರ್ಖಾನೆಗಳಿರುವವು. ಮುಂಬಯಿ ಪಟ್ಟಣದಲ್ಲಿಯೇ ಹಲವು ಗಿರಣಿಗಳಿದ್ದರೂ, ಅಹಮದಾಬಾದಿನಲ್ಲಿ ಸಹಾ ಈ ಕೈಗಾರಿಕೆಯು ಬಹಳೆ ಅಭಿವೃದ್ಧಿಗೊಳ್ಳುತ್ತಿರುವದು. ಇಲ್ಲಿ ಪ್ರಸ್ತುತ ೫೦ ಕಾರ್ಖಾನೆಗಳಿರುವವು

ಕಳೆದ ೭ ವರುಷಗಳಲ್ಲಿ ಈ ಕಾರ್ಖಾನೆಗೆಳೆಲ್ಲವುಗಳು ಪ್ರತಿವರುಷ ತಯ್ಯಾರಿಸಿದ ನೂಲು ಸರಾಸರಿ ಮೇಲೆ ೫೫೫ ಮಿಲಿಯ ರಾತ್ತುಲುಗಳಿಗಿಂತ ಹೆಚ್ಚಿರುವುದು. ೧೯೦೫-೬ ವರುಷದಲ್ಲಿ ಚೀನಾದೇಶದ ವ್ಯಾಪಾರ ವೃದ್ಧಿಯಿಂದ ೬೫೬ ಮಿಲಿಯ ರಾತ್ತುಲುಗಳು ತಯ್ಯಾರಿಸಲ್ಪಟ್ಟಿದ್ದವು. ೧೯೦೬-೭ ಮತ್ತು ೦೭-೦೮ ವರುಷಗಳಲ್ಲಿ ಚೀನಾದೇಶದಲ್ಲಿ ಬಹಳ ಮಹಾಲು ಆಮದಾಗಿರುವುದರಿಂದ ಗಿರಾಕಿಯು ಸ್ವಲ್ಪ ಕಡಿಮೆಯಾಗಿ ೬೩೧ ಮತ್ತು ೬೧೪ ಮಿಲಿಯ ರಾತ್ತುಲ ನೂಲು ತಯ್ಯಾರಿಸಲ್ಪಟ್ಟಿರುವುದು ಹೀಗೆ ಮಂದವಾಗುತ್ತ ಬರುತ್ತಿದ್ದ ಈ ನೂಲಿನ ವ್ಯಾಪಾರವು ಕಳೆದ ೧೦ ತಿಂಗಳುಗಳಿಂದ ಹೆಚ್ಚುತ್ತಲಿರುವುದು ನಂಬ್ರ ೩೦ರಕ್ಕಿಂತ ಹೆಚ್ಚಿನ ನಂಬ್ರದ ನೂಲು ತಯ್ಯಾರಿಯು ಸಹಾ ಅಧಿಕವಾಗುತ್ತ ಬರುತ್ತಿರುವುದು ೧೯೦೭-೮ ವರುಷದಲ್ಲಿ ಈ ನಮೂನೆಗಳ ನೂಲು ೫೭ ಮಿಲಿಯ ಪೌಂಡು ತಯ್ಯಾರು ಮಾಡಿತ್ತೆಂಬದಾಗಿಯೂ ಅಂದರೆ ಕಾರ್ಖಾನೆಗಳಲ್ಲಿ ತಯ್ಯಾರಾಗುತ್ತಿರುವ ಎಲ್ಲಾ ನಮೂನೆಯ ನೂಲಿನ ಪರಿಮಾಣಾಯಿಯಲ್ಲಿ ಇದು ಸೇಕಡಾ ೯ರಂತೆ ಇರುವುದಾಗಿ ತಿಳಿಯುತ್ತೇವೆ ಹತ್ತು ವರುಷಗಳ ಮೊದಲು ಇದು ಸೇಕಡಾ ೬ರಂತೆ ಇತ್ತು ಐಗುಪ್ತದೇಶದ ಅರಳೆ ಮೊದಲಾದ ಸೂಕ್ಷ್ಮ ಜಾತಿಯ ಅರಳೆಯಿಂದ ಮುಂಬಯಿ ಗಿರಣಿಗಳಲ್ಲಿ ನಂಬ್ರ ೪೦ ಯಾ ಇದಕ್ಕಿಂತ ಹೆಚ್ಚಿನ ನಂಬ್ರದ ನೂಲನ್ನು ಸಿದ್ಧಪಡಿಸುತ್ತಿರುವರು ೧೯೦೭-೦೮ ವರುಷದಲ್ಲಿ ಇದು ೮ ಮಿಲಿಯ ರಾತ್ತುಲುಗಳಾಗಿತ್ತು ಹೀಗೆ ಹಿಂದುಸ್ಥಾನದಲ್ಲಿಯೇ ಹೆಚ್ಚು ನಂಬ್ರದ ನೂಲನ್ನು ತಯ್ಯಾರಿಸುತ್ತಿರುವದಾದರೂ ವಿದೇಶಗಳಿಂದ ಇವುಗಳ ರಫ್ತು ನಮ್ಮ ದೇಶಕ್ಕೆ ಕಡಿಮೆಯಾಗಲಿಲ್ಲ

ವಸ್ತ್ರನೇಯಿಗೆಯು ಸಹಾ ಈ ಕಾರ್ಖಾನೆಗಳಲ್ಲಿ ಇನ್ನಷ್ಟು ಅಭಿವೃದ್ಧಿಸಿರುವುದು. ೧೯೦೭-೦೮ ವರುಷದಲ್ಲಿ ೧೯೫ ಮಿಲಿಯ ರಾತ್ತುಲ ವಸ್ತ್ರವು ನೇಯಲ್ಪಟ್ಟಿತ್ತು ಹತ್ತು ವರುಷಗಳ ಹಿಂದೆ ಇದು ೧೦೭ ಮಿಲಿಯ ರಾತ್ತುಲುಗಳಾಗಿತ್ತು ೧೯೦೬-೦೭ನೇ ವರುಷಕ್ಕಿಂತ ೦೭-೦೮ನೇ ವರುಷದಲ್ಲಿ ಇದು ಸೇಕಡಾ ೧೪ರಂತೆ ಹೆಚ್ಚಿತ್ತು ಹೀಗೆ ನೇಯಿದು ತಯ್ಯಾರಾದ ವಸ್ತ್ರದಲ್ಲಿ ಸೇಕಡಾ ೬೦ರಷ್ಟು ವಸ್ತ್ರವು ಮುಂಬಯಿಯಲ್ಲಿ ತಯ್ಯಾರಾಗುವುದು ಶರ್ಟಿನ ಅರುವೆ, ದೋತ್ರಗಳು, ಮೋರಿನ ಅರುವೆ, ಟವೆಲುಗಳು, ಚಾದರುಗಳು ಮೊದಲಾದ ಮನೆ ಉಪಯೋಗಕ್ಕೆ ಬೇಕಾದ ಸರೇವಸ್ತ್ರಗಳು ಹೆಚ್ಚಾಗಿ ನೇಯಲ್ಪಡುವವು ಹಿಂದುಸ್ಥಾನದಲ್ಲಿ ಹೀಗೆ ತಯ್ಯಾರಾಗುವ ವಸ್ತ್ರವು ಪರದೇಶಗಳಿಂದ ರವಾನ್ಯಾಗುವ ಇದೇ ಜಾತಿಯ ವಸ್ತ್ರಗಳ ಮೂರನೇ ಒಂದಂಶವಾಗಿರುವುದು

೧೯೦೭-೦೮ನೇ ವರುಷದಲ್ಲಿ ಅರಳೆ ಕೈಗಾರಿಕೆಯ ಚಟುವಟಿಕೆಯು ಚೀನಾ ಮೊದಲಾದ ಪೌರ್ವಾತ್ಯ ದೇಶಗಳ ಗಿರಾಕಿಯು ಕಡಿಮೆಯಾಗಿ ಬಂದದ್ದರಿಂದಲೂ ಬೇಳೆಯು ಈ ವರುಷದಲ್ಲಿ ಸಮನಾಗಿ ಆಗದೆ ಜನರಿಗೆ ಬಡಸ್ಥಿತಿಯು ಪ್ರಾಪ್ತವಾದ್ದರಿಂದಲೂ ಮಂದವಾಗುತ್ತ ಬಂದಿತ್ತು ಆದರೆ ೧೯೦೮ ೦೯ ವರುಷದಲ್ಲಿ ಚೀನಾ ದೇಶದಲ್ಲಿ ದಾಸ್ತಾನು ನಿಂತಿದ್ದ ಜವಳಿ ಮುಂತಾದ್ದೆಲ್ಲವೂ ಖರ್ಚಾಗುತ್ತ ಬರುತ್ತಿರುವುದು ಚೀನಾ ದೇಶಕ್ಕೆ ಹಿಂದುಸ್ಥಾನದಿಂದ ಮಹಾಲು ಹೆಚ್ಚಾಗಿ ರವಾನ್ಯಾಗುತ್ತಿರುವುದು ಹಿಂದೂಸ್ಥಾನದ ಈ ವರುಷದ ಬೆಳೆಯು ಸಹಾ ಒಳ್ಳೇ ಸ್ಥಿತಿಯಲ್ಲಿ ಇರುವುದರಿಂದ ೧೯೦೯-೧೦ನೇ ವರುಷದಲ್ಲಿ ಅರಳೆ ಕೈಗಾರಿಕೆಯು ಇನ್ನಷ್ಟು ಅಭಿವೃದ್ಧಿಯಾಗುವುದೆಂಬ ಕೋರಿಕೆ ಇದೆ ಯೂರೋಪು ಖಂಡದಲ್ಲಿ ಪಸರಿಸಿದ್ದ ಹಿಂದುಸ್ಥಾನದ ಈ ಕೈಗಾರಿಕೆಯ ವ್ಯಾಪಾರವು ಯೂರೋಪು ದೇಶಗಳ ಇದೇ ಕೈಗಾರಿಕೆಯ ಮೇಲಾಟದಿಂದ ಕುಂದುತ್ತ ಬರುತ್ತಿರುವುದಾದರೂ, ಚೀನಾ ದೇಶದಲ್ಲಿ ರೈಲ್ವೆ ಮಾರ್ಗಗಳು ಹಾಕಲ್ಪಡುವುದರಿಂದ ವ್ಯಾಪಾರ ಸೌಕರ್ಯಗಳು ಹೆಚ್ಚಾಗಿ ಚೀನಾದೇಶದಿಂದ ಈ ಕೈಗಾರಿಕೆಗೆ ಪ್ರೋತ್ಸಾಹವು ದೊರಕೀತೆಂಬ ಭಾವನೆಯುದೆ

ನಮ್ಮ ಅರಳೆ ಕಾರ್ಖಾನೆಗಳೆಲ್ಲವುಗಳಿಗೂ ದೇಶದಲ್ಲಿಯೇ ಬೆಳೆಸಿದ ಹತ್ತಿಯನ್ನು ಉಪಯೋಗಿಸುವರು ಹತ್ತಿ ಬೆಳೆಯಿಂದ ಹತ್ತಿಯು ೧೯೦೭ ೦೮ನೇ ವರುಷಕ್ಕಿಂತ ೧೯೦೮-೦೯ ವರುಷದಲ್ಲಿ ಸೇಕಡಾ ೧೭ರಂತೆ ಹೆಚ್ಚುವುದಾಗಿ ಅಜಮಾಯಿಷು ಮಾಡಿರುವರು ೧೯೦೭-೦೮ನೇ ವರುಷದಲ್ಲಿ ಬೆಳೆದ ಹತ್ತಿಯಲ್ಲಿ ಸೇಕಡಾ ೪೨ರಷ್ಟು ಹತ್ತಿ ಕಾರ್ಖಾನೆಗಳಲ್ಲಿಯೂ ೧೭ರಷ್ಟು ಗೃಹಕೃತ್ಯದ ಕೆಲಸಗಳಿಗೋಸ್ಕರ ಉಪಯೋಗಿಸಲ್ಪಟ್ಟಿರುವುದೆಂದೂ ಉಳಿದ ಸೇಕಡಾ ೪೧ರಷ್ಟು ಅನ್ಯದೇಶಗಳಿಗೆ ರಫ್ತಾಗಿರುವುದೆಂಬದಾಗಿಯೂ ಒಬ್ಬ ಪರಿಶೋಧಕರು ಕಂಡುಹಿಡಿದಿರುವರು

ಲಕ್ಷದ್ವೀಪಗಳು. ಇವು ದಕ್ಷಿಣಕನ್ನಡ ಜಿಲ್ಲೆಗೆ ಸೇರಿದ ಅಮೀನ್ ದೀವಿಗಳ ನೆರೆಯಲ್ಲಿರುವ ದ್ವೀಪ ಸಮುದಾಯವಾಗಿವೆ. ಲಕ್ಷದ್ವೀಪಗಳ ಆಡಳಿತೆಯು ಮಲಬಾರ ಕಲೆಕ್ಟರರ ಸ್ವಾಧೀನವಿದೆ. ಈ ದ್ವೀಪಗಳು ಮೊದಲು ಕಣ್ಣಾನೂರ ಬೀಬಿಯ ಸ್ವಾಧೀನವಿದ್ದು ಬೀಬಿಯು ಸರಕಾರಕ್ಕೆ ವರ್ಷಂಪ್ರತಿ ಪೇಷಕಾಶವನ್ನು (ತೆರಿಗೆ) ಕೊಡುತ್ತಿದ್ದರು. ಈ ಪೇಷಕಾಶ ಬಾಕಿ ಇಟ್ಟ ಕಾರಣ ದ್ವೀಪಗಳನ್ನು ಸರಕಾರದವರು ಸ್ವಾಧೀನಪಡಿಕ್ಕೊಂಡರು. ಈ ಸ್ವಾಧೀನತೆಯು ತಾತ್ಕಾಲಿಕವೋ ಅಥವಾ ಬೀಬಿಯ ಪೂರ್ಣ ಹಕ್ಕು ಸ್ವಾತಂತ್ರ್ಯಗಳು ಸರಕಾರಕ್ಕೆ ಪರಾಧೀನವಾದವೋ ಎಂಬದು ಸ್ಪಷ್ಟವಾಗುವದಿಲ್ಲ.

ಅಮೀನ ದೀವಿಗಳಲ್ಲಿಯಾಗಲಿ ಲಕ್ಷದ್ವೀಪಗಳಲ್ಲಿಯಾಗಲಿ ಭತ್ತ ... [illegible] ಆಗುವದಿಲ್ಲ ಈ ಭೂಮಿಯು ... [illegible] ಸುತ್ತ ಸಮುದ್ರವಿರುವ ಈ ದೀವಿಗಳಲ್ಲಿ ತೆಂಗು ಧಾರಾಳ ಬೆಳೆಯುವದು. ಅಲ್ಲಿಯ ಮುಖ್ಯ ವ್ಯಾಪಾರವು ಕೊಬ್ಬರಿ, ಹಗ್ಗ, ಕವಡೆ ಮತ್ತು ಆಮೆಯ ಬೆನ್ನುಗೆರಸೆಗಳು, ಇವುಗಳಲ್ಲಿ ಮುಖ್ಯವಾದದ್ದು ಹಗ್ಗದ ವ್ಯಾಪಾರ. ಕಳೆದ ೨೦ ವರುಷಗಳಲ್ಲಿ ೧,೪೦೦ ಖಂಡಿ ಹಗ್ಗವು ರಫ್ತಾಗಿದೆ.

ನೆಲವು ಫಲವತ್ತಲ್ಲದ್ದರಿಂದಲೂ ದ್ವೀಪನಿವಾಸಿಗಳಲ್ಲಿ ಕೈಗಾರಿಕೆ ವ್ಯಾಪಾರ ವಿಶೇಷವಿಲ್ಲದ್ದರಿಂದಲೂ ಸರಕಾರಕ್ಕೆ ಕಂದಾಯ ಹೊರಿಸಲಿಕ್ಕೆ ಉಪಾಯವಿಲ್ಲ. ದ್ವೀಪನಿವಾಸಿಗಳು ತಮ್ಮ ಕೊಬ್ಬರಿ, ಹಗ್ಗ ವಗೈರೆಗಳನ್ನು ಭೂಖಂಡಕ್ಕೆ ವೈದು ಅಲ್ಲಿಂದ ಅಕ್ಕಿ ಕೊಂಡುಕೊಂಡು ಜೀವಿಸುವರು ಕಣ್ಣಾನೂರ ಬೀಬಿಯ ಪೂರ್ವಜ ಸುಲ್ತಾನರ ಕಾಲದಲ್ಲಿ ದೀವಿಗಾರರು ತಮ್ಮ ಯಾವತ್ತು ಸಾಮಗ್ರಿಗಳನ್ನು ಸುಲ್ತಾನನಿಗೆ ವಿಕ್ರಯಿಸಬೇಕೆಂದು ಶಾಸನವಿತ್ತು ಸುಲ್ತಾನನು ತನ್ನ ಮುನಾಸಬ ಪ್ರಕಾರ ಕ್ರಯ ಕೊಡುತ್ತಿದ್ದರಿಂದ ದೀವಿ ಸಾಮಗ್ರಿಗಳ ಬಂದರದ ಕ್ರಯ ಮತ್ತು ಅವಕ್ಕೆ ಸುಲ್ತಾನನು ಕೊಡುವ ಕ್ರಯ ಇವೆರಡರ ವ್ಯತ್ಯಾಸದಿಂದ ಸುಲ್ತಾನನಿಗೆ ಸಿಕ್ಕುವ ಲಾಭವು ಕಂದಾಯದ ಬದಲಿಗೆ ಆಗುತ್ತಿತ್ತು ಈ ಪ್ರಕಾರ ವರುಷಕ್ಕೆ ೭೦ ಸಾವಿರದಿಂದ ೧ ಲಕ್ಷ ರೂಪಾಯಿ ವರೇಗೆ ಲಾಭ ಸಿಕ್ಕುತ್ತಿತ್ತಂತೆ ದೀವಿಗಾರರು ತಮಗೆ ಈ ಮೂಲಕವಾಗುವ ನಷ್ಟದ ದೆಸೆಯಿಂದ ಗುಂಗುಟ್ಟ ಹತ್ತಿದರು ೭ಗ್ಗೆ ಅವರ ವ್ಯಾಪಾರದ ಕ್ರಯದ ಒಂದು ಪಾಲಿಗೆ ಬದಲಾಗಿ ಅಕ್ಕಿ ಕೊಡುವದೆಂತ ನಿಶ್ಚಯವಾಯಿತು ಕ್ರಮೇಣ ಅಕ್ಕಿಗೆ ಕ್ರಯವೇರುತ್ತಾ ಬಂದದರಿಂದ ದೀವಿಗಾರರಿಗೆ ತಮ್ಮ ಸಾಮಗ್ರಿಗಳಿಗೆ ಅಕ್ಕಿ ಮೂಲಕ ಈಗ ಒಳ್ಳೇ ಕ್ರಯ ಸಿಕ್ಕುವದರಿಂದ ತೃಪ್ತಿಯದೆ ತನ್ಮಧ್ಯ ದೀವಿಗಳು ಬೀಬಿಯಿಂದ ಸರಕಾರಕ್ಕೆ ಸೇರಿರುವದರಿಂದ ಆ ವ್ಯಾಪಾರದ ಗುತ್ತೆ ಸರಕಾರಕ್ಕೇನೆ ಬಂತು ಆದರೆ ಸರಕಾರಕ್ಕೆ ಈ ಗುತ್ತೆಯಲ್ಲಿ ಲಾಭವಿಲ್ಲ ದೀವಿಯ ಮುಖ್ಯ ವ್ಯಾಪಾರವಾದ ಹಗ್ಗದ ಕ್ರಯವು ಇಲ್ಲಿಂದ ಅವರಿಗೆ ಬದಲಿಗೆ ಕೊಡುವ ಅಕ್ಕಿಯ ಕ್ರಯವು ಅತ್ಯಾತ್ಯ ತಪ್ಪೀಲು ಆಗುವದು ಎಷ್ಟೋ ಸ್ವಲ್ಪ ವ್ಯಾಪಾರ ಬಿದ್ದುಹೋದರೆ ಸರಕಾರಕ್ಕೆ ಕಂದಾಯವೇ ಇಲ್ಲದಂತಾಗುವದು ಆ ಸರಕಾರವು ಫಕ್ತ ತೆಂಗಿನ ರೂಪದಲ್ಲಿ ಕಂದಾಯ ವಸೂಲು ಮಾಡುವದು ಯುಕ್ತವೆಂದು ಕೆಲವು ಅಧಿಕಾರಿಗಳು ಅಭಿಪ್ರಾಯ ಕೊಟ್ಟಿದ್ದಾರೆ ಕೆಲವರು ಮರ ತೆರಿಗೆಯನ್ನು ವಿಧಿಸಬೇಕೆಂದೂ, ಕೆಲವರು ಹಗ್ಗದ ಪೈದಾಸನ್ನು ಇಂತಿಷ್ಟು ಖಂಡಿಗೆ ಕಡಿಮೆಯಾಗದಂತೆ ಕಟ್ಟುಮಾಡಿ ಆ ಮೂಲಕ ದೃಢವಾದ ಕಂದಾಯವನ್ನು ಫಳಿಸಬೇಕೆಂದೂ ಇನ್ನೂ ಕೆಲವರು ಸಾಯರ ತೆರಿಗೆಯನ್ನು ವಿಧಿಸಬೇಕೆಂದೂ ಸೂಚಿಸುವರು ಸರಕಾರದವರು ಈ ವಿಷಯದ ತೀರ್ಮಾನವನ್ನು ಸದ್ಯಾ ಬಾಕಿ ಇಟ್ಟಿದ್ದಾರೆ ಹಗ್ಗ ವಗೈರೆ ಗುತ್ತೆ ಕುರಿತು ದೀವಿಗಾರರು ಮುಂಚೆ ಗುಂಗುಟ್ಟುತ್ತಿದ್ದರೆಂದು ಹೇಳಿದೆಷ್ಟೆ ಈಗ ಆ ಗುತ್ತೆಯನ್ನು ಸರಕಾರವೇ ಇಟ್ಟುಕೊಂಡು ತಮಗೆ ಎಂದಿನಂತೆ ಅಕ್ಕಿ ಕೊಡಬೇಕೆಂದು ಅವರು ಕೇಳುವರು ಯಾಕಂದರೆ ಸರಕಾರದವರು ಹಗ್ಗವನ್ನು ದಾಸ್ತಾನು ಇಟ್ಟು ಕ್ರಯವೇರಿದಂತೆ ಮಾರಬಹುದು ವ್ಯಾಪಾರಿಗಳು ಒಂದಾಗಿ ಕಮ್ಮಿ ಕ್ರಯ ಕೇಳಿದರೆ ಸರಕಾರದವರು ಹಗ್ಗವನ್ನು ಮಾರದೆ ಇಟ್ಟುಕೊಳ್ಳಬಹುದು ದೀವಿಗಾರರಾದರೆ ಜಿಲ್ಲೆಗೆ ಬಂದಾಗ ಇದ್ದ ಕ್ರಯಕ್ಕೆ ಮಾರಿ ಹೋಗಬೇಕಲ್ಲದೆ ಇಲ್ಲಿ ಇಳಕೊಳ್ಳಲಿಕ್ಕೂ ಹಗ್ಗ ವಾಪಾಸು ವೈಯ್ಯಲಿಕ್ಕೂ ಉಪಾಯವಿಲ್ಲ ಗಿರಾಕಿಗಳು ಒಂದಾಗಿ ಕ್ರಯ ತಗ್ಗಿಸಿದರೆ ಅವರು ಕೇಳಿದ ಕ್ರಯಕ್ಕೆ ಮಾರಬೇಕಾದೀತು ಸರಕಾರಕ್ಕೂ ಈ ವ್ಯಾಪಾರದಿಂದ ಇಷ್ಟರವರೇಗೆ ಲಾಭವಲ್ಲದೆ ನಷ್ಟವಿರಲಿಲ್ಲ ಕಳೆದ ೧೦ ವರುಷಗಳಲ್ಲಿ ವರುಷಕ್ಕೆ ಸರಾಸರಿ ೫,೭೫೪ ರೂಪಾಯಿ ಆದಾಯವಿತ್ತು ಲಕ್ಷದ್ವೀಪಗಳಿಗೆ ವರುಷಕ್ಕೊಮ್ಮೆ ಮಲಬಾರದಿಂದ ಒಬ್ಬ ಅಸಿಸ್ಟಾಂಟ್ ಕಲ್ಲೆಕ್ಟರವರು ಹೋಗಿ ದ್ವೀಪಗಳ ಸ್ಥಿತಿಯ ಕುರಿತು ಸರಕಾರಕ್ಕೆ ರಿಪೋರ್ಟು ಬರೆಕೊಳ್ಳುವರು ಕಳೆದ ವರುಷ ಹೋದ ಮಿ। ಎಲ್ಲಿಸರು ಮೇಲ್ಕಂಡ ಗುತ್ತೆಯು ಸರಕಾರಕ್ಕೂ ಜನರಿಗೂ ಲಾಭಕರವಾಗಿರುವದರಿಂದ ಅದು ಹಾಗೆ ಇತ್ತಂತಕ್ಕೂ ಪ್ರಯೋಜನಕರವಾಗಿರುವಷ್ಟರ ವರೆಗೆ ಸರಕಾರದವರು ಗುತ್ತೆಯನ್ನು ತೆಗದುಹಾಕುವದು ಬೇಡವೆಂದು ಅಭಿಪ್ರಾಯಪಡುತ್ತಾರೆ

ಮುಲ್ಕಿಯಿಂದ ಕಳುಹಿಸಿಕೊಟ್ಟ ಅಲ್ಲಿಯ ಅಬಾಲವೃದ್ಧರ ಮುಖೋದ್ಗೀತವಾದ ರಾ। ತಲಚೇರಿ ವಾಸುದೇವ ಶ್ಯಾನುಭಾಗರಿಂದ ರಚಿಸಲ್ಪಟ್ಟ ಕೀರ್ತಿ ಶೇಷ ಅಮ್ಮೆಂಬಳ ಸುಬ್ರಾಯ ಪೈಗಳವರ ನಿರ್ಯಾಣದ ಸಂತಾಪ ಸೂಚಕ ಗೀತವನ್ನು ಈ ಕೆಳಗೆ ಪ್ರಕಟಿಸಿರುವೆವು

॥ ತಾಳಿ ॥ ಆಹಾ ವಿಧಿಯೇ । ಈ ವಿಧಮಾದುದೆ ಆಹಾ । ವಿಧಿಯೇ ॥

॥ ಮರವೇ-। ವಿದ್ವತ್ಕುಲ ರತ್ನವೆ ಯೆಂತು । ಮರವೆ ॥ ॥ ಪಲ್ಲ ॥

ಘರಶುವೋಲೆಸವಮ್ಮಂ
ಬಳ ಸುಬ್ರಾಯ ಪೈಗಳ
[illegible] ॥ ೧ ॥
ಮುಖರ ತಂನಿಂದ
[illegible]
[illegible] ॥ ೨ ॥

ಪರರ ಕಷ್ಟಕೆ ಮನ
ಕರಗಿ ಸಹಾಯವ
ಮಾಡೀ ನೋಡೀ ಈಡೇರಿಸಿದನೆಂತು ॥ ೦ ॥ ೩ ॥
ಬಡ ವಿದ್ಯಾರ್ಥಿಗಳಿಂಗೆ
ವೊಡವೆ ಧನ ವಿತ್ತತಿ
ಪ್ರಾಜ್ಞ ಸೂಜ್ಞ ಕೃತಜ್ಞರಾಗಿಸಿದುದ ॥ ४ ॥
ವಿದೇಶ ವಿದ್ಯ ಸದನ
ಸ್ವದೇಶ ಕೋಶ ಭವನ
ಇಡಿಸೀ ನಡಸೀ ಪಡದ ಕೀರ್ತಿಯನೆಂತು । ೫ ।
ಊರೂರುಗಳ ಗೌಡ
ಸಾರಸ್ವತರನೊಟ್ಟು
ನೆರಹೀ ಅರುಹೀ ಸರಿಯಿಲ್ಲೆಂದೆನಿಸಿದ ೬ ।
ರಾಜ ದ್ವಾರದೊಳತಿ
ಪೂಜ್ಯನಾಗಿ ಗೈದ
ವಾದ ಬೋಧಸಾಧನೆಗಳನೆಂತು । ೭ ।
ನಂಬಿದವರನೆಲ್ಲ
ತುಂಬಿ ಪೋಧ್ಯೆ ಮುಂದೆ
ಪೊರೆವಾ ಪೊರವಾ ಕರು[illegible]ರೆಂತು ೮
ವಾಸುದೇವ ರಮೇಶ
ದಾಸಗೆ ವೈಕುಂಠ
ವಾಸ ಸಂತೋಷ ಸುಖಸು[illegible] ನೀಡೆಸ್ಯ –

~~~~~~

ನಮ್ಮ ಅಗ್ರಲೇಖನದ ಶಿರೋಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ವಿನಂತಿಯಲ್ಲಿ ತೋರುವ ಮುಂಬಯಿಯ 'ಸೇವಾಸದನ'ದ ಭಗಿನಿಯರಲ್ಲೊಬ್ಬರಾದ ಮಮರಾಬಾಯಿ ಎಂಬವರಿಂದ ರಚಿಸಲ್ಪಟ್ಟ ಸೇವಾಸದನದ ವಸಂತಿ ಸಮಯದಲ್ಲಿ ಹಾಡಿದ ಗೀತವನ್ನು ನಮ್ಮ ವಾಚಕರಲ್ಲಿ ಸ್ತ್ರೀಸಮುದಾಯದ ಅಭ್ಯಾಸದ ಬಗ್ಗೆ ಈ ಕೆಳಗೆ ಪ್ರಕಟಿಸಿರುವೆವು. ಭಾರತೀಯರ ಉದ್ಧರಣೆ ಬಗ್ಗೆ ದೇಶದ ಹಲವು ಕಡೆಗಳಲ್ಲಿ ಸ್ಥಾಪಿತವಾದ ಸಂಸ್ಥೆಗಳ ಶಾಖೆಗಳನ್ನು ಇಲ್ಲಿ ಸಹ ಸ್ಥಾಪಿಸಿ ಇಲ್ಲಿಯ ಪ್ರಜೆಗಳ ಅಭಿವೃದ್ಧಿಯನ್ನು ಸಾಧಿಸುತ್ತಿರುವ ಮ. ರಾ. ರಾ. ವಕೀಲ್ ಕುದ್ಮುಲ್ ರಂಗರಾಯರವರು ಈ ಹಾಡನ್ನು ನಮಗೆ ಕಳುಹಿಸಿಕೊಟ್ಟದ್ದಕ್ಕೆ ಅವರಿಗೆ ಕೃತಜ್ಞರಾಗಿರುವೆವು. ಸೇವಾಸದನದ ಉದ್ದೇಶ್ಯಗಳನ್ನೂ ಅಲ್ಲಿಯ ಇತರ ವೃತ್ತಾಂತವನ್ನೂ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

(ಪದ ೧ [illegible])

ವಸ್ಯ ವಸ್ಯ ನರವರ ಹೆ [illegible] ರಸ್ಮಿ
ಅತ್ಮೈಕ್ಯವ [illegible] ಜೋತಾಂಸೀ [illegible] [illegible] ೧ ।
ಅನಾಥ ದೀನ ಸ್ಥಿತಿ [illegible] ಹೃದಯ ಕಳವಳ
ಸೇವಾಸ್ಯೈಕ ಸ್ಥಾಪಕ್ಕ್ಯಾಂತ ಸದಸುತಾ [illegible] ೨ ।
ಶಾಂತ ಮನೆ [illegible] ಕಾರ್ಯಕಸ್ಟಿ [illegible] ತಲೆ
ಪರಸೆವೆ ಸುಲಭ ಮಾ[illegible] [illegible] ೩
ಪರಾರ್ಥ ಬೊತ [illegible] ತತ್ವ [illegible]
ಅಧಿಕಾರ ಯೋಗ ವಿಸರುಸಿಯಾ ಜೋಗೀ ಜಾಹಲೆ । ४ ।
"ದಯಾರಾಮ" ನಾಂವ ಲೋಕೀಸಾರ್ಥಕಾ ಲಿ
"ಗಜ್ಜರ ಮಲಬಾರೀನ್ನೀ" [illegible] ತ್ಯಾ ಪಿಲ ೫ ।
ಕಾರ್ಯಸಿದ್ಧೀ ತ್ಯಾ ದ್ಯಾವೀ ಈಶ ಕೃಪಾಲೇ
ಆಯು ಅರೋಗ ಹೋಇಜ್ಯಾ ಪ್ರಭುಸೀ ವಿನವಿಲ ೬ ।

ಪದ ೨

ಚಾಲ [illegible]

ಬಾಲಕಾಚೀ ಹೀ ವಿನತಿ । ಶ್ರೀ ಪ್ರಭುವರ ಘ್ಯಾವೀ ಚಿತೀ । ಧೃ ।
ಸೇವಾಸದನಾ ಸಿದ್ಧೀ ದ್ಯಾವೀ । ಕಾರ್ಯೇಂ ತ್ಯಾಚೀ ವಿತ್ಯ ಘಡಾವೀ ।
ಲೊಕೀಂ ಪ್ರೀತೀ ತ್ಯಾ ವಾಢಾವೀ । ಆಶಾ ಹೀ ವಸತೆ ಚಿತೀ । ೧ ॥
ಭೂತಪ್ರೀತೀ ಜಾಗ್ರತ ಹೋಯಿೞ । ಸ್ವಾರ್ಥೀ ಬುದ್ಧೀ ನಾಸೂನಿ ಜಾಯಿೞ ॥
ಸ್ಥಾನ ಮಹಾತ್ಮ್ಯಕೀಂ ಗಮತೇ ಬಾಯಿೞ । ಆಶೀ ಹೋತೆ ಅಂತರ್ಗೀಂ ಸ್ಥಿತಿ ॥ ೨ ॥
ಆಕರಾ ಜುಲಯಿೞ ದಿನ ಭಾಗ್ಯಾಚಾ । ಪ್ರತಿ ವರ್ಷೀಂ ಹೋ ಸುಖಕರ ಸಾಚಾ ॥
ಯಾಸ್ತವ ವಿನವೂಂ ಪ್ರಭು ಜಗತೀಶಾ । ದಯಾಘನ ಪಾವೆ ಅಂತೀ । ಬಾಲಕಾಂಚೀ ಹೀ ವಿನತಿ.

ಪದ ೩

ದಹನ ಸ್ವಾರ್ಥ ಕೆಲಾ ॥
ಯೋಗಿಲೆ ಸುರಪ್ವಾಲಾ.
ರಾಗ ಪರಿ ಧರಿಯೆಲಾ ॥
ಮಹತ್ವ ತ್ಯಾ ನರಾಲಾ ॥
ಭಾವ ಆತ್ಮ ಸರ್ವ ಭೂತೀಂ ॥
ಈಶ ರುಪೀ ಜಗದ್ ವ್ಯಾಪ್ತಿ ॥
ಗಿರೀಂ ದರೀಂತುನಿ ನೆ ಯುವತೀ ॥
ಝುಬಲ್ಯಾ ರುಡಿಲಾ ॥
ಮದುರ ಕಾರ್ಯ ಯೋಜಿಲೇಂ ॥
ಒಪ್ಪ ಇಷ್ಟ ಜಾಹಲೇಂ ।
ಸ್ವಸ್ತಿ ಸ್ವಸ್ತಿ ತ್ಯಾಜಲಾ । ೩ ।
ದಹನ ಸ್ವಾರ್ಥ ।

ಪದ ४

। ಚಾಲ [illegible] ॥

ಪ್ರಭುರಾಯಾ [illegible] ತುಜ್ಯಾಪದೀಂ ಬಾಲಾ ಯೆವೋನಿ ವಿನವಿತೀ ಸಿದ್ಧೀಸಿ ಸೇವಾಸ್ಯೈಕ ಕಾರ್ಯಾಲಾ
ಪ್ರೇಮ [illegible] [illegible] [illegible] ಆಸ್ತ ತಮಾ ದಯತೇಜ್ಯಾ ಹಾ [illegible]
ತತ್ವ[illegible] [illegible] [illegible] ಸತತ ಅಸೋ ಹ್ಯಾಸ್ತವ ಪ್ರಾರ್ಥೂಂ [illegible] ಕರ [illegible] । ೨ ॥

———

ಗೌಡಸಾರಸ್ವತ ಬ್ರಾಹ್ಮಣರ ಸುಬ್ರಾವ್ ಮೆಮೊರಿಯಲ್ ಫಂಡ್ ಮಂಗಳೂರು. ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ ಗೌಡಸಾರಸ್ವತರ ಸಭೆಯು ಆದಿತ್ಯವಾರ ದಿನ ಜರಗಿ ಸುಬ್ರಾಯ ಪೈಗಳ ಸ್ಮರಣಾರ್ಥವಾಗಿ ವಿದ್ಯಾಭಿವೃದ್ಧಿ ಬಗ್ಗೆ ಮೇಲೆ ಹೆಸರು ಕಾಣಿಸಿದ ದ್ರವ್ಯಸಹಾಯ ನಿಧಿಯನ್ನು ಸ್ಥಾಪಿಸಿರುವರು. ಪೈಗಳವರು ತನ್ನ ಜಾತಿ ಬಂಧುಗಳ ಅಭಿವೃದ್ಧಿ ಬಗ್ಗೆ ಆಗಿಂದಾಗ್ಗೆ ಕೊಟ್ಟ ಹಿತವಾದವೂ ಅವರು ಪಟ್ಟ ಶ್ರಮ ಸಾಹಸಗಳೂ ವ್ಯರ್ಥವಾಗಲಿಲ್ಲವೆಂಬುದು ಈ ಸಭೆಯ ವೃತ್ತಾಂತದಿಂದ ವ್ಯಕ್ತವಾಗುವುದು. ಕಳೆದ ವರ್ಷದ ಸಮಯದಲ್ಲಿ ಆಯ್ಕೆಯಾದ ಕಮಿಟಿಯವರ ಸೆಕ್ರೆಟರಿಗಳಾಗಿ ರಾ. ಸುಜೀರ ನರಸಿಂಗನ್ನಾಕರವರನ್ನು ಚುನಾಯಿಸಿರುವರು. ಹೀಗೆ ಸೆಕ್ರೆಟರಿಗಳ ನೇಮಕವಾಗುತ್ತಲೇ ಸಭೆಯು ಏಳಲಿಲ್ಲ. ಸೆಕ್ರೆಟರಿಗಳು 'ಶುಭಸ್ಯ ಶೀಘ್ರಂ' ಎಂಬ ತತ್ವ ಆಧಾರದ ಮೇಲೆ ಮೆಮೊರಿಯಲ್ ಫಂಡಿನ ಕಾರ್ಯನಿರ್ವಾಹವನ್ನು ಕೂಡಲೇ ಮಾಡಲು ಪ್ರಾರಂಭಿಸಿದರು. ಸಭೆಯವರ ಸಮಕ್ಷಮದಲ್ಲಿ ರಾ. ವಕೀಲ ನರಸಿಂಗನ್ನಾಕರವರು ಎದ್ದು ನಿಂತು ಈ ದ್ರವ್ಯಸಹಾಯ ನಿಧಿಯ ಕೆಲಸಗಳನ್ನು ಯಾವ ರೀತಿಯಲ್ಲಿ ಕೈಕೊಳ್ಳಬೇಕೆಂಬುದನ್ನು ಆಜ್ಞಾಪಿಸಿದರು. ಇವರ ಈ ಭಾಷಣಕ್ಕನುಗುಣವಾಗಿ ರಾ. ವಕೀಲ ಕಾಸರಗೋಡು ವಾಸುದೇವ ಕಾಮತ್‌ರವರು ಬಾಷಣ ಕೊಟ್ಟರು. ಸಭಾಸದರೆಲ್ಲರೂ ಕಾರ್ಯ ಉದ್ಯುಕ್ತರಾದ್ದರಿಂದ ಈ ಸಭೆಯಲ್ಲಿ ಬಾಷಣಗಳಿಗೆ ಅವಕಾಶವಿರಲಿಲ್ಲ. ಕಾರ್ಯಾರಂಭದ ತವಕವು ಎಲ್ಲರಲ್ಲಿಯೂ ಪರಿಪೂರ್ಣವಾಗಿತ್ತು. ಕೂಡಲೇ ದ್ರವ್ಯಸಹಾಯ ನಿಧಿಗೆ ಬೇಕಾದ ದ್ರವ್ಯಸಂಗ್ರಹದ ಬಗ್ಗೆ ವಂತಿಗೆ ಪಟ್ಟಿಯಾಯಿತು. ನೆರೆದವರೆಲ್ಲರೂ ಕ್ರಮವಾಗಿ ತಂತಮಗೆ ಯುಕ್ತ ಕಂಡಂತೆ ತಾವು ಕೊಡಲು ಸಿದ್ಧವಾಗಿರುವ ಐವಜಿನ ಮೊಬಲಗುಗಳನ್ನು ಪಟ್ಟಿಯಲ್ಲಿ ಸೂಚಿಸಿದರು. ಇದಾದ ಮೇಲೆ ಸಭೆಯಲ್ಲಿ ನೆರೆದವರೆಲ್ಲರೂ ಪಟ್ಟಿಯಲ್ಲಿ ಹಾಕಿದ ಐವಜುಗಳನ್ನು ಸೆಕ್ರೆಟರಿಗಳು ಓದಿಹೇಳಿ ಒಟ್ಟಿಗೆ ಹೆಚ್ಚು ಕಡಿಮೆ ೨೫೦೦ ರೂಪಾಯಿ ಜಮಾ ತೋರಿಬಂತು. ಆವರೆ ನೆರೆದ ಸಭಿಕರು ಇದು ಸಾಲದೆಂತ ತಿಳಕೊಂಡು ಒಬ್ಬೊಬ್ಬರೇ ಎದ್ದು ನಿಂತು ತಾವು ಪಟ್ಟಿಯಲ್ಲಿ ಸೂಚಿಸಿರುವ ಐವಜುಗಳನ್ನು ಇಮ್ಮಡಿಸಿದರು. ರಾ। ಸರಾಫ ನಗರದ ದಾಮೋದರ ಶ್ಯಾನುಭಾಗರವರು ತನ್ನ ೬೦೦ ರೂಪಾಯಿಗಳ ಸಂಖ್ಯೆಯನ್ನು ೧೦೦೦ಕ್ಕೆ ಏರಿಸಬೇಕಾಗಿ ಕೇಳಿಕೊಂಡರು. ರಾ। ಹ್ಯಾಕೋರ್ಟು ವಕೀಲ ಕೆ. ಪಿ. ರಾಮರಾಯರು ತನ್ನ ೩೦೦ ರೂಪಾಯಿಗಳ ಸಂಖ್ಯೆಯನ್ನು ೫೦೦ರೆಂತ ತಿದ್ದಿದರು. ರಾ। ಸುಜೀರ ನರಸಿಂಗನ್ನಾಕರವರು ೨೫೦ನ್ನು ೨೦೦ಕ್ಕೆ ಬದಲಾಯಿಸಿದರು. ನರಸಿಂಗ ಮರ್ತುಭಂಡಾರಿಗಳು ೧೦೦ನ್ನು ೨೦೦ರಾಗಿ ಮಾಡಿದರು. ಈ ರೀತಿ ಆ ದಿನ ಭುವನೇಂದ್ರ ಸಭಾಸದನದಲ್ಲಿ ಆ ಮಹಾತ್ಮರ ಗುಣಗಣನೆಯಲ್ಲಿ ದ್ರವ್ಯಗಣನೆಯನ್ನು ಮರೆತಿರುವರೆಂತ ತೋರಿಬಂತು. ಸಭಿಕರು ಈ ರೀತಿ ತಮ್ಮ ಚಂದಾಹಣವಿನ ಮೊಬಲಗುಗಳನ್ನು ಆತ್ಮಸಂತೋಷದಿಂದ ತಿದ್ದುತ್ತಿರುವಾಗ ಬಾರಿಬಾರಿಗೂ ಕೈಚಪ್ಪಳೆ ಗದ್ದಲವಾಯಿತು. ಈ ರೀತಿ ವಂತಿಗೆ ಪಟ್ಟಿಯಲ್ಲಿ ೫೦೦೦ ರೂಪಾಯಿಗಳು ಶೇಖರಿಸಲ್ಪಟ್ಟಿರುವವು. ಇನ್ನೂ ಮಂಗಳೂರಲ್ಲಿಯೇ ೩೦೦೦ ರೂಪಾಯಿಗಳಾದರೂ ಸಿಕ್ಕಬಹುದೆಂಬದಾಗಿ ಕೋರುತ್ತಾರೆ. ಬರುವ ಆದಿತ್ಯವಾರದೊಳಗೆ ಇಲ್ಲಿಯ ವಂತಿಗೆ ಕೆಲಸ ತೀರಿಸಿ ಈ ಜಿಲ್ಲೆಯ ಇತರ ತಾಲೂಕು ಪಟ್ಟಣಗಳಿಗೂ ಇತರ ಊರುಗಳಿಗೂ ಈ ಕಮಿಟಿಯ ಮೆಂಬರರಲ್ಲಿ ಹಲವರು ತೆರಳುವರಾಗಿ ಕೇಳುತ್ತೇವೆ. ಈ ಸಂದರ್ಭದಲ್ಲಿ ಸೆಕ್ರೆಟರಿಗಳಾದ ರಾ। ಸುಜೀರ ನರಸಿಂಗ ನ್ನಾಕರವರ ಕಾರ್ಯತತ್ಪರತ್ವವು ತುಂಬಾ ಶ್ಲಾಘನೀಯವಾಗಿರುವುದು. ರಾ। ಸರಾಫ ನಗರ ದಾಮೋದರ ಶ್ಯಾನುಭಾಗರವರು ಹೆಚ್ಚಿನ
~~~~~~

ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ಈ ಫಂಡಿನ ಬಗ್ಗೆ ಸಾಹಸಪಡುತ್ತಿರುವರು. ಗೌಡ ಸಾರಸ್ವತ ಸಮಾಜದ ಇತರ ಊರು ನಿವಾಸಿಕರಲ್ಲಿಯೂ ಇಲ್ಲಿಯವರಲ್ಲಿಯೂ ಸಹಾ ಸಂಪನ್ನರೂ ಸಾಮಾನ್ಯರೂ ಈ ಫಂಡಿಗೆ ಸಾಕಷ್ಟು ದ್ರವ್ಯಸಹಾಯವನ್ನು ಕೊಟ್ಟು ಕೀರ್ತಿಶೇಷರಿಂದ ಪ್ರಾರಂಭಿಸಲ್ಪಟ್ಟ ತಮ್ಮ ಸಮಾಜ ಅಭಿವೃದ್ಧಿಯ ಪ್ರಯತ್ನಗಳನ್ನು ಮುಂದುವರಿಯಬೇಕಾಗಿ ನಮ್ಮ ಪ್ರಾರ್ಥನೆಯಾಗಿರುವುದು.

ಫಂಡನ್ನು ಯಾವ ರೀತಿಯಲ್ಲಿ ವಿನಿಯೋಗಿಸಬೇಕೆಂಬದನ್ನು ಫಂಡಿಗೆ ಸಾಕಷ್ಟು ದ್ರವ್ಯಸಂಗ್ರಹವಾದ ಮೇಲೆ ದ್ರವ್ಯಸಹಾಯವನ್ನು ಕೊಟ್ಟ ಸದ್ಗೃಹಸ್ಥರ ಅಭಿಪ್ರಾಯಗಳ ಮೇರೆಗೆ ತೀರ್ಮಾನಿಸುವರು. ಈ ವರೆಗೆ ಸಹಾಯವನ್ನು ವಾಗ್ದತ್ತ ಮಾಡಿದವರ ಹೆಸರುಗಳನ್ನೂ ಅವರವರು ಕೊಟ್ಟ ಮೊಬಲಗುಗಳನ್ನೂ ನಮ್ಮ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಪತ್ರವ್ಯವಹಾರ.

ಅಯ್ಯಾ ಪತ್ರಿಕಾಕರ್ತರೇ,

ಬಹುಮಾನಪಟ್ಟ ಹ್ಯಾಕೋರ್ಟ್ ವಕೀಲ ಅಮ್ಮೆಂಬಳ ಸುಬ್ರಾಯ ಪೈಗಳವರ ಮರಣವಾರ್ತೆಯು ಕಾಡ್ಗಿಚ್ಚಿನಂತೆ ಸರ್ವ ಕಡೆಗಳಲ್ಲಿಯೂ ಅಲ್ಪಕಾಲದಲ್ಲಿ ವ್ಯಾಪಿಸಿ ಸರ್ವರನ್ನು ಶೋಕಾಗ್ನಿಯಲ್ಲಿ ಮುಳುಗಿಸಿತು. ಸ್ವಜಾತಿಯವರಿಗೆ ಕಿರೀಟ ರಹಿತನಾದ ಅರಸನಾಗಿಯೂ, ಅಶ್ರು ಪಡೆಯದ ಜಗದ್ಗುರುವಿನಂತೆಯೂ, ಸರ್ವ ಪೂಜ್ಯರೂ ನಿಷ್ಕಾಮಿಯೂ, ಸ್ವಾರ್ಥತ್ಯಾಗಿಯೂ, ಪರೋಪಕಾರಿಯೂ ಆದ ಅವರ ಮರಣದಿಂದ ಉಂಟಾದ ನಮ್ಮಗಳೆಲ್ಲರ ಸಂಕಷ್ಟವು ಎಷ್ಟೆಂತ ಬರದು ತೀರದು. ಈ ದುಃಖವಾರ್ತೆಯು ಪಸರಿಸಿದೊಡನೆಯೇ ಮರುದಿವಸ ತಾಲೂಕಿನ ಸ್ವಜಾತಿ ಗೃಹಸ್ಥರು ಸಭೆಯಾಗಿ [illegible] ದುಃಖಸಾಗರದಲ್ಲಿ ಮುಳುಗಿರುವ ಮೃತರ ಕುಟುಂಬದವರಿಗೆ ಈ ತಾಲೂಕಿನಲ್ಲಿರುವ ಸ್ವಜಾತಿ ಮಂಡಳಿಯವರ ಸಹಸಂತಾಪವನ್ನು ಸೂಚಿಸಿ ಒಂದು ತಂತಿಯನ್ನು ಬಿಡಬೇಕೆಂತಲೂ ಮೃತರ ಸ್ಮಾರಕಾರ್ಥವಾಗಿ ಒಂದು ಶಾಶ್ವತ ನಿಧಿಯನ್ನು ಸ್ಥಾಪಿಸುವದು ಅಗತ್ಯವೆಂತಲೂ ಮೃತರ ೧೧ನೇ ದಿವಸದಲ್ಲಿ ಬಡಬಗ್ಗರಿಗೆ ಅಕ್ಕಿ ವ ಎಣ್ಣೆಯ ಧರ್ಮವನ್ನೂ ೧೩ನೇ ದಿವಸದಲ್ಲಿ ಬ್ರಾಹ್ಮಣ ಸಂತರ್ಪಣೆಯನ್ನೂ ಮಾಡಿಸಿ ಸ್ವರ್ಗಸ್ಥರಾದ ಮಹಾತ್ಮ ಸುಬ್ರಾಯ ಪೈಗಳವರ ಜೀವಾತ್ಮಕ್ಕೆ ದೇವರು ನಿತ್ಯ ಸುಖವನ್ನೂ ಶಾಂತಿಯನ್ನೂ ಕೊಡಲೆಂದು ಶ್ರೀ ದೇವರ ಸನ್ನಿಧಿಯಲ್ಲಿ ಪ್ರಾರ್ಥಿಸಬೇಕೆಂತಲೂ ನಿರ್ಣಯಗಳು ಸರ್ವಸಮ್ಮತದಿಂದ ಏರ್ಪಾಟಾದವು. ಸದರಿ ನಿರ್ಣಯಗಳ ಪ್ರಕಾರ ದುಃಖಿತರಾದ ಅವರ ಕುಟುಂಬದವರಿಗೆ ತಂತೀ ದ್ವಾರಾ ಈ ತಾಲೂಕಿನವರ ಸಹಸಂತಾಪವನ್ನು ತಿಳಿಸಿದ್ದಲ್ಲದೆ ೧೧ನೇ ದಿವಸ ಬಡಬಗ್ಗರಿಗೆ ಅಕ್ಕಿ ವ ಎಣ್ಣೆಯನ್ನು ಸರ್ವರಿಗೂ ಪ್ರೇಮರಾದ ನಮ್ಮ ಜಿಲ್ಲಾ ಹೆಡ್ ಅಸಿಸ್ಟಾಂಟ ಕಲ್ಲೆಕ್ಟರ ಹಜರತ್ ಡ್ಯೂಗ್ ದೊರೆಗಳ ಸಮಕ್ಷಮದಲ್ಲಿ ಬಟ್ವಾಡೆ ಆಯಿತು. ಹಜರತ್ ಡ್ಯೂಗ್ ದೊರೆಗಳಿಗೆ ಈ ವಿಷಯ ನಾವೆಲ್ಲರೂ ಕೃತಜ್ಞರಾಗಿರುತ್ತೇವೆ. ಮರು ದಿವಸ ಬ್ರಾಹ್ಮಣ ಸಂತರ್ಪಣೆಯು ಬಹಳ ವಿಜ್ರಂಭಣೆಯಿಂದ ನಡದು ರಾತ್ರೆ ಶ್ರೀ ದೇವರ ಪೂಜೆ ಸಮಯ ಸರ್ವರೂ ಕೂಡಿ ಕೀರ್ತಿವಂತರಾದ ಸುಬ್ರಾಯ ಪೈಗಳವರ ಆತ್ಮನಿಗೆ ನಿತ್ಯ ಸುಖವೂ ವಿಶ್ರಾಂತಿಯೂ ಕೈವಲ್ಯ ಪದವಿಯೂ ದೊರೆಯಲೆಂದು ಶ್ರೀ ದೇವರನ್ನು ಪ್ರಾರ್ಥಿಸಿದರು.

ಕುಂದಾಪುರ,
ತಾ. 10—8—09. } ಸ್ವಜಾತಿ ಸೇವಕ.

ವಿದೇಶ ವೃತ್ತಾಂತ.

ರುಶ್ಯ ದೇಶದ ಸೈಂಟ್ ಪಿಟರ್ಸ್‌ಬರ್ಗ್ ಎಂಬಲ್ಲಿಂದ ವೊಲ್ಲೀಕಿ ಎಂಬ ಹಳ್ಳಿಯಲ್ಲಿ ನಡೆದ ಒಂದು ಭಯಂಕರ ಕೊಲೆಯ ವೃತ್ತಾಂತವು ಬಂದಿರುವುದು. ವೊಲ್ಲೀಕಿ ಹಳ್ಳಿಯಲ್ಲಿ ಮದುವೆಯಾದ ವ ಮದುವೆಯಾಗದ ಪುರುಷರ ಕೂಡೆ ತನ್ನ ಒಯ್ಯಾರಗಳಿಂದ ಹಳ್ಳಿಯ ಸ್ತ್ರೀಯರೆಲ್ಲರ ದ್ವೇಷಕ್ಕೆ ಗುರಿಯಾದ ಒಬ್ಬ ಸುಂದರಳಾದ ಒಯ್ಯಾರೆಯು ಇದ್ದಳು. ಮತ್ತೊಬ್ಬಳನ್ನು ಮದುವೆ ಮಾಡಿಕೊಳ್ಳುತ್ತೇನೆಂತ ಮಾತುಕೊಟ್ಟ ಒಬ್ಬ ಯುವಕನು ಈ ಒಯ್ಯಾರೆಯ ದೆಶೆಯಿಂದ ತನ್ನ ವಾಗ್ದಾನವನ್ನುಲ್ಲಂಘಿಸಿದನು. ಈ ಸಂಗತಿಯು ಆ ಹಳ್ಳಿಯ ಎಲ್ಲಾ ಸ್ತ್ರೀಯರಲ್ಲಿ ಇನ್ನಷ್ಟು ದ್ವೇಷವನ್ನುಂಟುಮಾಡಿತು. ಒಂದು ದಿನ ಆದಿತ್ಯವಾರ ದೇವಾಲಯದಿಂದ ಸ್ತ್ರೀಯರೆಲ್ಲರೂ ಹೊರಟುಕೊಂಡು ಬರುವಾಗ ಇವರು ಈ ಒಯ್ಯಾರೆಯ ಮೇಲೆ ಬಿದ್ದು ಅವಳು ಉಟ್ಟುಕೊಂಡಿದ್ದ ವಸ್ತ್ರಗಳನ್ನೆಲ್ಲಾ ಎಳದು ಚೂರುಚೂರಾಗಿ ಹರಿದುಬಿಟ್ಟು ಕಲ್ಲು ಮುಂತಾದವುಗಳಿಂದ ಹೊಡೆದು ಅವಳನ್ನು ಘಾಯಪಡಿಸಿ ಜುಟ್ಟಿಗೆ ಹಿಡಿದು ಎಳಕೊಂಡು ಹೋದರು. ಈ ಎಲ್ಲಾ ಗದ್ದಲವನ್ನು ನೋಡಿ ಪುರುಷರು ತಮಾಷೆ ಎಂತ ಎಣಿಸಿಕೊಂಡು ನಗುತ್ತಿದರು. ಆದರೆ ನಿಜಸ್ಥಿಯು ತಿಳಿದು ಹೆಂಗಸರು ಹೀಗೆ ಹಿಂಸಿಸುವುದನ್ನು ತಡಿಯುವರೆ ಗಂಡಸರು ಬಂದರೂ ಇವರೆಲ್ಲರನ್ನು ಹೆಂಗಸರು ಹೊಡೆದು ಓಡಿಸಿಬಿಟ್ಟರು. ಹೀಗೆ ಜುಟ್ಟು ಹಿಡಿದು ಆಕೆಯನ್ನು ಹಳ್ಳಿಯ ಹೊರ ಪ್ರದೇಶಕ್ಕೆ ಕೊಂಡು ಹೋಗಿ ದೊಡ್ಡದಾದ ಮರದ ಗೆಲ್ಲಿನಲ್ಲಿ ಇವಳನ್ನು ತೂಗಹಾಕಿ ಅಡಿಯಿಂದ ಬೆಂಕಿಮಾಡಿದರು. ಪೋಲೀಸಿನವರು ಒಂದು ನೋಡುವಾಗ್ಯೆ ಕರಿಯಂತೆ ಕರ್ರಗಾದ ಅವಳ ಶವವು ಮರದ ಅಡಿಯಲ್ಲಿತ್ತು.

ಲಂಡನಿನ ಟ್ಯಾಮ್ಸ್ ಪತ್ರಿಕೆಯಲ್ಲಿ ಸರ್. ವಿಲಿಯಂ ಕರ್ಜನ್ ವಿಲ್ಲಿಯವರ ಕೊಲೆಯನ್ನು ಸಮರ್ಥಿಸಿ ತನ್ನ ರಾಜದ್ರೋಹಪರವಾದ ಅಭಿಪ್ರಾಯಗಳನ್ನು ಕೊಟ್ಟು ಬ್ಯಾರಿಸ್ಟರ್ ಪರೀಕ್ಷೆಗೆ ಕಲಿಯುತ್ತಿದ್ದ ವಿರೇಂದ್ರನಾಥ ಚಟ್ಟೋಪಾಧ್ಯಾಯ ಎಂಬವರನ್ನು ಈ ಪರೀಕ್ಷೆಗೆ ಕಲಿಯದಂತೆ ತಳ್ಳಿಹಾಕಬೇಕೆಂಬದಾಗಿ ನಿರ್ಣಯಿಸಿರುವದು.

ಒಸಾಕಾದಲ್ಲಿ ಬೆಂಕಿಬಿದ್ದು ಬಹಳ ಹಾನಿಯುಂಟಾಗಿರುವುದು. ೪ ಚಚೌಕ ಮೈಲುಗಳು ವಿಸ್ತೀರ್ಣದಲ್ಲಿರುವ ಮನೆಮಾರುಗಳೆಲ್ಲವೂ ಸುಟ್ಟು ಬೂದಿಯಾಗಿ ಹೋಗಿರುವವು. ೧೩,೦೦೦ ಮನೆಗಳೂ ಒಂದು ಬೌದ್ಧರ ಪ್ರಖ್ಯಾತ ದೇವಾಲಯವೂ ಸಹಾ ನಾಶವಾಗಿ ಹೋಗಿವೆ.

ಮದನಲಾಲ ಡಿಂಗ್ರನು ತನ್ನ ಶವವನ್ನು ಹೂಣಿಸದೆ ಸುಡಬೇಕೆಂಬದಾಗಿ ಹೋಮ್ ಸೆಕ್ರೆಟರಿಯವರಿಗೆ ಅರ್ಜಿ ಮಾಡಿದ್ದನಂತೆ.

ಸರ್ ವಿಲಿಯಂ ಕರ್ಜನ್ ವಿಲ್ಲಿಯವರನ್ನು ಕೊಲೆಯಿಂದ ರಕ್ಷಿಸುವರೆ ಪ್ರಯತ್ನ ಮಾಡಿ ಈ ಪ್ರಯತ್ನದಲ್ಲಿ ಮಡಿದ ಡಾಕ್ಟರ್ ಲಾಲಾ ಕಾಕರವರ ಶೂರತ್ವವನ್ನು ಯಾವ ರೀತಿ ಮನ್ನಿಸಬೇಕೆಂಬವನ್ನು ಸ್ಟೇಟ್ ಸೆಕ್ರೆಟರಿಗಳು ಆಲೋಚಿಸುವರಂತೆ.

ಮಾಜಿ ವ್ಯಾಸ್‌ರಾಯ ಧೊರೆಗಳಾಗಿದ್ದ ಕರ್ಜನ್ ಪ್ರಭುಗಳ ಭರತಖಂಡದ ರಾಜ್ಯ ಪರಿಪಾಲನೆಯ ವಿಷಯ ಬ್ರಿಟಿಷರ ಈಗಿನ ಮಂತ್ರಿವರ್ಯರಿಗೆ ಸಹಾ ಯಾವ ರೀತಿ ಅಭಿಪ್ರಾಯವಿರುವುದೆಂಬದು ಅಂಗ್ಲಾಳದ ಆದಾಯ ವೆಚ್ಚದ ಮಂತ್ರಿಗಳಾದ ಮೆ| ಲ್ಲೊಯಿಡ್ ಜೋರ್ಜರವರ ಅಭಿಪ್ರಾಯದಿಂದ ಕಂಡು ಬರುವುದು. ಅಂಗ್ಲಾಳದ ಬಡ ಪ್ರಜಾಹಿತಕರವಾದ ಮಾರ್ಪಾಟುಗಳು ಕೂಡಿರುವ ಬ್ರಿಟಿಷರ ಬಜೇಟನ್ನು ವಿರೋಧಿಸಿ ಕರ್ಜನ್ ಪ್ರಭುಗಳು ಮಾಡಿದ ಭಾಷಣದ ಪ್ರತ್ಯುತ್ತರವಾಗಿ—ಶಾಂತ ಸ್ವಭಾವದ ಹಿಂದುಗಳಿಗೆ ಸಹಾ ವಿಪರೀತವೆಂತ ತೋರಿಬಂದ ಕರ್ಜನ್ ಪ್ರಭುಗಳ ಅಹಂಕಾರಯುತವಾದ ವರ್ತನೆಯನ್ನು ಪ್ರಭುಗಳು ಇಲ್ಲಿ ಸಹಾ ತೋರಿಸುವರೆ ಪ್ರಯತ್ನಿಸುತ್ತಿರುವರು. ಆದರೆ ಈ ವರ್ತನೆಯು ನಮ್ಮಿಂದ ಎಂದೂ ಅಂಗೀಕರಿಸಲ್ಪಡಲಿಕ್ಕಿಲ್ಲ--ಎಂದು ಮೆ| ಲ್ಲೊಯಿಡ್ ಜೋರ್ಜರವರು ತಮ್ಮ ಭಾಷಣದಲ್ಲಿ ಅಪ್ಪಣೆಕೊಟ್ಟಿರುವರು.

ಅಮೇರಿಕದ ವೊಷಿಂಗ್‌ಟನ್ ಸಂಸ್ಥಾನದಲ್ಲಿ ನೂತನ ವಿಧಾನದಲ್ಲಿ ಒಂದು ಮದುವೆಯ ಸಮಾರಂಭವು ನಡೆಯಿತು. ಕ್ರೈಸ್ತ ಸಮಾಜದಲ್ಲಿ ಮದುವೆಯ ವಿಧಿಯನ್ನು ನಡಿಸುವರೆ ಮತಬೋಧಕನಾದ ಪಾದರಿಯು ಅಗತ್ಯ. ವಿವಾಹ [illegible] ರಿಸಲ್ಪಟ್ಟ ವಾಯುವಿಮಾನ ಯಾ ಬೆಲೂನಿನಲ್ಲಿ ಆರೂಢರಾಗಿ ಅಂತರಿಕ್ಷದಲ್ಲಿ ಮೇಲಕ್ಕೇರಿದರು. ಬೆಲೂನಿನಲ್ಲಿಯೇ ವಿವಾಹ ವಿಧಿಯು ನಡಿಸಲ್ಪಡುವಂತೆ ಕೆಳಗೆ ನೆಲದ ಮೇಲೆ ನಿಂತಿರುವ ಪಾದರಿಗಳು ದಂಪತಿಗಳೊಟ್ಟಿಗೆ ಮಾತನಾಡುವಂತೆ ತಂತಿಗಳಿಲ್ಲದ ಟೆಲಿಗ್ರಾಫಿನ ವಿಲೆವಾರಿಯಿತ್ತು. ಹೀಗೆ ಈ ಟೆಲಿಗ್ರಾಫುಗಳ ಮುಖಾಂತರ ಈ ವಿವಾಹ ವಿಧಿಯು ಪಾದರಿಗಳಿಂದ ನಡಿಸಲ್ಪಟ್ಟಿತು. ದಂಪತಿಗಳಿಗೆ ಒಂದು ದಿವಸ ಪರಿಯಂತ ಭಕ್ಷಭೋಜ್ಯಗಳ ಸಾಮಗ್ರಿಗಳು ಆ ವಾಯುವಿಮಾನದಲ್ಲಿರಿಸಿದ್ದರು. ದಂಪತಿಗಳು ಕೆಳಕ್ಕಿಳಿದ ಕೂಡಲೇ ಆ ಊರಿನವರು ಇವರಿಗೆ ಒಂದು ಚೀಲ ತುಂಬ ಹೊನ್ನನ್ನೂ ಎಲ್ಲಾ ಸಾಮಗ್ರಿಗಳಿರುವ ಒಂದು ಮನೆಯನ್ನೂ ಉಚಿತವಾಗಿ ಕೊಟ್ಟರು.

ರುಶ್ಯ ದೇಶದ ಚಕ್ರವರ್ತಿಯವರಿಗೂ ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿಯವರಿಗೂ ಸಂದರ್ಶಣೆಯಾಗಿ ರುಶ್ಯ ದೇಶದ ಚಕ್ರವರ್ತಿಯವರು ತಮ್ಮ ದೇಶಕ್ಕೆ ತೆರಳಿರುವರು.

ಹಿಂದೂಸ್ಥಾನದ ಆದಾಯ ವೆಚ್ಚದ ಪಟ್ಟಿ ಯಾ ಬಜೇಟು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡುತ್ತಿರುವಾಗ ರಾಜದ್ರೋಹತಪ್ಪಿತಸ್ಥರೆಲ್ಲರಿಗೂ ನವೀನ ಮಾರ್ಪಾಟುಗಳು ಜ್ಯಾರಿಗೆ ಬರುತ್ತಿರುವಾಗ ಅವರ ತಪ್ಪುಗಳೆಲ್ಲವನ್ನೂ ಮಾಫುಮಾಡಿ ಸೆರೆಯಿಂದ ಬಿಡುಗಡೆ ಮಾಡಬೇಕಾಗಿ ಸೂಚಿಸಲ್ಪಟ್ಟಾಗ, ಅಂಡರ್ ಸೆಕ್ರೆಟರಿಗಳಾದ ಮೆ| ಮಾಸ್ಟರ್ ಒಫ್ ಎಲಿಬೆಂಕರವರು ವಿಧಿಸೋಣಾದ ಶಿಕ್ಷೆಗಳೆಲ್ಲವೂ ಪ್ರತಿ ಆರು ತಿಂಗಳಿಗೊಮ್ಮೆ ವ್ಯಾಸರಾಯ ಪ್ರಭುಗಳ ಗಮನಕ್ಕೆ ತರೋಣಾಗುವುದರಿಂದ ವ್ಯಾಸರಾಯ ಪ್ರಭುಗಳು ಈ ಸಂದರ್ಭದಲ್ಲಿ ಸೂಚಿಸಿದಂತೆ ಗವರ್ನಮೆಂಟಿನವರು ನಡೆಯುವರಾಗಿ ಉತ್ತರಕೊಟ್ಟರು.

ಉತ್ತರಹಿಂದುಸ್ಥಾನ.

ಬೊಂಬಾಯಿ ಕೋರ್ಟ್ ಯಾ ಬಹುವ್ಯಾರ ದಿನಾ [illegible] ಬಗ್ಗೆ ಪುಣೆಯಲ್ಲಿ ಸಾರ್ವಜನ ಸಭಾಸದನದಲ್ಲಿ ನೆರೆಯಬೇಕೆಂದಿದ್ದ ಸಭೆಯು ಅಲ್ಲಿಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ತಾಕೀತಿನ ಪ್ರಕಾರ ನೆರೆಯಲಿಲ್ಲವೆಂತ ಕೇಳುತ್ತೇವೆ.

ಬಾಬು ಸುರೇಂದ್ರನಾಥ ಬೆನರ್ಜಿಯವರು ವಿಲಾಯತಿಯಿಂದ ಮುಂಬಯಿಗೆ ಬಂದು ತಲ್ಪಿರುವರು. ಇವರ ಬಹುಮಾನಾರ್ಥವಾಗಿ ಬೆನರ್ಜಿಯವರು ಬಂದು ಇಳಿಯುತ್ತಲೇ ಇವರು ಕೂತುಕೊಂಡಿದ್ದ ಕುದುರೆಗಾಡಿಯ ಕುದುರೆಗಳನ್ನು ಬಿಚ್ಚಿ ಜನರೆಲ್ಲರೂ ಕೂಡಿ ಗಾಡಿಯನ್ನು ಮುಂಬಯಿಯ ಕಷ್ಟೆಕ್ ಬಂದರದಿಂದ ತಾಜಮಹಾಲ್ ಹೋಟೇಲಿನವರೆಗೂ ಎಳಕೊಂಡು ಹೋದರು. ಇವರಿಂದ ಅದೇ ದಿವಸ ಗುಜರಾತಿ ಗೃಹಸ್ಥರುಗಳಿಂದ ಏರ್ಪಡಿಸಿದ ಹಿಂದ್‌ಕೊ. ಒಪರೇಟಿವ್ ಸ್ಟೋರ್ ಎಂಬ ಸ್ವದೇಶಿ ವ್ಯಾಪಾರ ಭಂಡಸಾಲೆಯು ತೆರೆಯಲ್ಪಟ್ಟಿತು. ಈ ಸಂದರ್ಭದಲ್ಲಿ ಬೆನರ್ಜಿಯವರಿಂದ ಸೂಚಿಸೋಣಾದ ಸಂಗತಿಗಳು ಹಿಂದೂಸ್ಥಾನದ ಎಲ್ಲಾ ಸಂಸ್ಥಾನಗಳ ಪ್ರಜೆಗಳಿಂದಲೂ ಅನುಸರಿಸತಕ್ಕದ್ದಾಗಿರುವವು. ಜಪಾನದೇಶವು ಸಾವಿರಾರು ವಿದ್ಯಾರ್ಥಿಗಳನ್ನು ಅನ್ಯದೇಶಗಳಿಗೆ ಕಳುಹಿಸಿ ದೇಶದ ಕೈಗಾರಿಕೆ ಅಭಿವೃದ್ಧಿಯನ್ನು ಸಾಗಿಸಿತು. ಬಂಗಾಳದವರು ಪ್ರತಿ ವರುಷವೂ ನೂರಾರು ಜನ ವಿದ್ಯಾರ್ಥಿಗಳನ್ನು ಈ ಉದ್ದೇಶಕ್ಕಾಗಿ ಅನ್ಯದೇಶಕ್ಕೆ ಕಳುಹಿಸುತ್ತಿರುವರು. ಇದೇ ರೀತಿ ಮುಂಬಯಿ ಸಂಸ್ಥಾನದವರೂ ಇತರರೂ ವರ್ತಿಸಬೇಕೆಂದಾಗಿ ಅಪ್ಪಣೆಕೊಡಿಸಿದರು. ಇವರು ಅಪ್ಪಣೆಕೊಡಿಸಿದ ಮುಖ್ಯ ಇನ್ನೊಂದು ವಿಷಯವು ಯಾವದಂದರೆ.— ಹಿಂದುಸ್ಥಾನದ ರಾಷ್ಟ್ರೀಯ ಸಭೆಯಾದ ಕೊಂಗ್ರೆಸು ಸಭೆಯನ್ನು ಒಂದಾವರ್ತಿಯಾದರೂ ಲಂಡನ್ ಪಟ್ಟಣದಲ್ಲಿ ಜರುಗುವಂತೆ ಮಾಡಬೇಕು. ಅಥವಾ ಹಿಂದೂಸ್ಥಾನದ ಕೆಲವು ಪ್ರತಿನಿಧಿಗಳು ಇಂಗ್ಲಾಂಡಕ್ಕೆ ಹೋಗಿ ಭಾರತೀಯ ಸಂಕಷ್ಟಗಳನ್ನು ಇಂಗ್ಲೀಷ ಪ್ರಜೆಗಳ ಮುಂದಿಡಬೇಕು. ಬೆನರ್ಜಿಯವರ ಈ ಸೂಚನೆಯು ಸಮಯೋಚಿತವಾಗಿರುವುದು. ಭಾರತೀಯರ ವಿಷಯ ಇಂಗ್ಲಾಂಡದಲ್ಲಿ ವಿಶೇಷ ಮಾಹಿತಿಯಿಲ್ಲ. ನಮ್ಮ ಸರಕಾರಗಳನ್ನು ನಡಿಸುವದಕ್ಕೆ ನೇಮಕವಾದಂಥಾ ಅಧಿಕಾರಿಗಳಲ್ಲಿ ಸಹಾ ಈ ಮಾಹಿತಿಯು ಎಷ್ಟರ ಮಟ್ಟಿಗಿರುವುದೆಂದು ಇತ್ತಲಾಗೆ ಬ್ರಿಟಿಷ್ ಪಾರ್ಲಿಮೆಂಟ್ ಸದನದಲ್ಲಿ ಹಿಂದುಸ್ಥಾನದ ಅಂಡರ್ ಸೆಕ್ರೆಟರಿಗಳಾದ ಮಿ. ಮಾಸ್ಟರ್ ಓಫ್ ಎಲಿಬೆಂಕರವರು ಪಾರ್ಲಿಮೆಂಟ್ ಸಭೆಯಲ್ಲಿ ಮಿ ಮೆಕನೈಲ್ ಎಂಬವರು ಕೇಳಿದ ಪ್ರಶ್ನೆಗೆ ಕೊಟ್ಟ ಉತ್ತರದಿಂದ ವ್ಯಕ್ತವಾಗುವುದು. ಇತ್ತಲಾಗದ ಬಂಗಾಳ ಎಡ್ವೋಕೇಟ್ ಜನರಲರ ನೇಮಕದ ಕುರಿತು, ಇಂಗ್ಲಾಂಡಿನಿಂದಲೇ ಇಂತಹ ನೇಮಕ ಹಿಂದೆ ಯಾವ ಸಮಯದಲ್ಲಾಯಿತು ಎಂದು ಕೇಳಿದ್ದಕ್ಕೆ ಮದ್ರಾಸಿನಲ್ಲಿ ೧೮೮೦ರಲ್ಲಿ ಒಂದು ನೇಮಕವು ಆಯಿತೆಂತ ಉತ್ತರ ಕೊಟ್ಟಿರುವರಂತೆ. ಇಂಗ್ಲೀಷ ಪ್ರಜಾವರ್ಗಕ್ಕೆಲ್ಲ ಇನ್ನು ಭರತಖಂಡದ ಸಂಕಷ್ಟಗಳೆಲ್ಲವೂ ತಿಳಿಸಿದ್ದಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಮುಖೇನ ನಮ್ಮ ಸಂಕಷ್ಟಗಳು ನಿವಾರಣೆಯಾಗುವದರಲ್ಲಿ ಅನುಮಾನವಿಲ್ಲ.

~~~~~~

ವಿಧವಾವಿವಾಹ ಪ್ರೋತ್ಸಾಹಕಸಭೆಯು ಮುಂಬಯಿಯಲ್ಲಿ ಕಳೆದ ತಿಂಗಳಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಬಹುಮಾನಪಟ್ಟ, ಹೈಕೋರ್ಟ ಜಡ್ಜಿಯರಾದ ಚಂದಾವರಕಾರರವರು ಸಭೆಯಲ್ಲಿ ವಿಧವಾ ವಿವಾಹವು ಕಾನೂನು ಪ್ರಕಾರ ಸಿದ್ಧವಾಗ ಬೇಕಾದರೆ ಇದಕ್ಕೆ ಉಪಯುಕ್ತವಾದ ಕಾನೂನು ಮಸೂದೆಯನ್ನು ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾಗುವಂತೆ ಸಾಹಸಪಟ್ಟ ಮಿ. ಗ್ರೇಂಟ್ ಮೊದಲಾದವರ ಸಾಹಸವನ್ನು ಕೊಂಡಾಡಿ ಸಭೆಯನ್ನು ಮುಕ್ತಾಯಪಡಿಸಿದರು. ವರುಷಂಪ್ರತಿ ಈ ಸಭೆಗೆ ಸಾಧಾರಣ ೨೦೦ ಯಾ ೩೦೦ ಸಭಿಕರು ಬರುತ್ತಿದ್ದರು. ಈ ಸರ್ತಿ ಸಭೆಯು ಕೂಡುವ ಸ್ವಲ್ಪ ದಿವಸಗಳ ಮುಂಚೆಯೇ ಸಭೆಗೆ ಜನರು ಬರುವಂತೆಯೂ ಜನರಲ್ಲಿ ವಿಧವಾ ವಿವಾಹಗಳ ಸಹಾನುಭೂತಿಯು ಉಂಟಾಗುವಂತೆಯೂ ೫, ೧೫, ೩೦ ವರುಷಗಳ ವಿತಂತುಗಳ ಅನಾಥ ಸ್ಥಿತಿಯನ್ನು ಪ್ರದರ್ಶಿಸಿ ಇವರ ಚಿತ್ರಪಟಗಳು ಕೂಡಿರುವ ಪ್ರಕಟಣಾ ಪತ್ರಗಳನ್ನು ಊರಲ್ಲೆಲ್ಲಾ ಅಂಟಿಸಿದ್ದರು. ಆದಕಾರಣ ಈ ಸರ್ತಿ ನೆರೆದ ಜನರಿಗೆ ಸಭಾಸದನದಲ್ಲಿ ಸ್ಥಳವಿಲ್ಲದೆ ಸಾವಿರಾರು ಜನರಿಗೆ ಬರಬಿಡುವದೇ ಸಾಧ್ಯವಾಗಲಿಲ್ಲ.

~~~~~~

ಮಂಗಗಳ ಸ್ವಾಮಿ ಭಕ್ತಿ: ಮರಾಟ ಸಯ್ಯಾಜಿ ವಿಜಯವೆಂಬ ವರ್ತಮಾನ ಪತ್ರಕ್ಕೆ ಶೋಲಾಪುರ ಜಿಲ್ಲೆಯ ಮೇಧಾ ತಾಲೂಕಿನ ಏಕರಾಜ ಎಂಬ ಹಳ್ಳಿಯಿಂದ ಒಬ್ಬ ಬಾತ್ಮೀದಾರನು ಈ ಕೆಳಗಿನ ಬಾತ್ಮೀಯನ್ನು ಬರದಿರುವನು. ಡೊಂಬರ ಜಾತಿಯ ಒಬ್ಬ ಮಂಗ ಕುಣಿಸುವವನು ಮೂರು ಮಂಗಗಳು ಮತ್ತು ಒಂದು ಆಡಿನೊಟ್ಟಿಗೆ ಆ ಹಳ್ಳಿಗೆ ಬಂದಿದ್ದನು. ಈ ಡೊಂಬರರವನು ಇವುಗಳ ಆಟವನ್ನು ಆಡಿಸಿಯೇ ತನ್ನ ಹೊಟ್ಟೆ ತುಂಬಿಸಬೇಕಾಗಿತ್ತು. ಕೆಲವು ಹಳ್ಳಿಯವರು ಈ ಆಡನ್ನು ತಮಗೆ ಮಾಂಸದ ಒಗ್ಗೆ ಕೊಡಬೇಕೆಂದು ಕೇಳಿದರು. ತನ್ನ ಜೀವನಾಧಾರವೇ ಈ ಆಡಾದ್ದರಿಂದ ಈ ಆಡನ್ನು ಕೊಡುವದೆ ಆತನು ನಿರಾಕರಿಸಿದನು. ಆದರೆ ಯಾವ ವಿಧದಲ್ಲಿ ಬೆಸಗೊಂಡರೂ ಈ ಹಳ್ಳಿಗಾರರು ತೃಪ್ತಿ ಹೊಂದಲಿಲ್ಲ. ಆಡು ಬೇಕೇ ಬೇಕೆಂದರು. ಡೊಂಬರರವನು ತನ್ನ ಹತ್ತರವಿರುವ ನಾಲ್ಕು ರೂಪಾಯಿಗಳನ್ನು ಕೊಡುತ್ತೇನೆಂಬದಾಗಿ ಹೇಳಿದರೂ ಆತನ ಈ ದೀನ ಪ್ರಾರ್ಥನೆಯು ವ್ಯರ್ಥವಾಯಿತು. ಕಟ್ಟಕಡೆಗೆ ಈ ಹಳ್ಳಿ ಗೃಹಸ್ಥರು ಬಲಾತ್ಕಾರದಿಂದ ಆ ಆಡನ್ನು ಸೆಳದುಕೊಂಡು ಹೋಗಿ ಅದನ್ನು ಕೊಂದು ತಿಂದು ಬಿಟ್ಟರು. ತದನಂತರ ಈ ಬಡ ಡೊಂಬರರವನನ್ನು ಕಾಡಿಗೆ ತಕ್ಕೊಂಡು ಹೋಗಿ ಅಲ್ಲಿ ಅವನನ್ನು ಕೊಂದು ಗುಪ್ತಸ್ಥಳದಲ್ಲಿ ಹೂಣಿಟ್ಟರು. ಇದೆಲ್ಲಾ ಸಂಭವಿಸುತ್ತಿರುವಾಗ ಮಂಗಗಳು ಈ ಕೊಲೆಪಾತಕಿಗಳನ್ನು ನೋಡಿಕೊಂಡಿದ್ದವು. ತಮ್ಮ ಯಜಮಾನನನ್ನು ಈ ರೀತಿ ಕೊಂದು ಹೂಣಿಟ್ಟಾದ ಮೇಲೆ, ಒಂದು ಮಂಗವು ಯಜಮಾನನನ್ನು ಹೂಣಿಟ್ಟ ಸ್ಥಳದ ಮೇಲಿರುವ ಮರದಲ್ಲಿ ನಿಂತುಕೊಂಡಿತ್ತು. ಇನ್ನೊಂದು ಈ ಕೊಲೆಪಾತಕಿಗಳನ್ನು ಹಿಂಬಾಲಿಸಿ ಅವರ ಮನೆತನಕ ಹೋಗಿ ಅಲ್ಲಿರುವ ಆಡಿನ ಚರ್ಮವನ್ನು ಸೆಳಕೊಂಡು ಪುನಹ ಕಾಡಿಗೆ ಬಂದು ತನ್ನ ಸ್ನೇಹಿತನಿರುವ ಮರದ ಮತ್ತೊಂದು ಕೊಂಬೆಯ ಮೇಲೆ ಕುಳಿತುಕೊಂಡಿತು. ಮೂರನೇದು ಪಟೇಲ ಮತ್ತು ಪೋಲೀಸಿನವರು ಬರುತ್ತಲೇ ಪಟೇಲನಿಗೆ ಆತನು ಉಟ್ಟುಕೊಂಡಿದ್ದ ದೋತ್ರಕ್ಕೆ ಹಿಡಕೊಂಡು ತನ್ನ ಯಜಮಾನನ್ನು ಹೂಳಿಟ್ಟಂಥಾ ಸ್ಥಳಕ್ಕೆ ದಾರಿ ತೋರಿಸಿ ಅಲ್ಲಿ ತನಕ ಪಟೇಲನೊಂದಿಗೆ ಹೋಗಿ ಹೂಣಿಟ್ಟ ಸ್ಥಳವನ್ನು ತನ್ನ ಕೈಗಳಿಂದ ಪರಚಲು ಪ್ರಾರಂಭಿಸಿತು. ಮರದ ಮೇಲೆ ಕಾದುಕೊಂಡಿದ್ದ ಮಂಗವು ತನ್ನ ಗೆಳೆಯನ ಸಹಾಯಕ್ಕೆ ಬಂದು ಯಜಮಾನನ ಶವವು ಪೋಲೀಸು ಮತ್ತು ಪಟೇಲರಿಗೆ ಕಂಡುಬರುವ ತನಕ ಆ ಸ್ಥಳವನ್ನು ಅಗೆದವು. ಶವವನ್ನು ನೋಡುತ್ತಲೇ ಪಟೇಲ ಮತ್ತು ಪೋಲೀಸಿನವರಿಗೆ ಎಲ್ಲಾ ಸಮಾಚಾರವು ತಿಳಿಯಿತು. ಇಷ್ಟಾದ ಕೂಡಲೇ ಆ ಎರಡು ಮಂಗಗಳು ತಿರುಗಿ ಪಟೇಲನ ದೋತ್ರ ಹಿಡಿದು ಆತನನ್ನು ಈ ಕೊಲೆಪಾತಕಿಯ ಮನೆಗೆ ಕರಕೊಂಡು ಹೋಗಿ ಕೊಲೆಪಾತಕಿಯನ್ನು ತಮ್ಮ ಉಗುರುಗಳಿಂದ ಪರಚಲೂ ಕಚ್ಚಲೂ ಪ್ರಾರಂಭಿಸಿದವು. ಇಷ್ಟರಲ್ಲಿ ಮೂರನೇ ಮಂಗವು ತನ್ನ ಹತ್ತರವಿರುವ ಚರ್ಮವನ್ನು ಅಲ್ಲಿಯೇ ತಂದಿರಿಸಿ ಆ ಮನುಷ್ಯನನ್ನೇ ಅದು ಸಹಾ ಕಚ್ಚಲು ಪ್ರಾರಂಭಿಸಿತು. ಈ ಅಪರಾಧಿಯನ್ನೂ ಈ ಮಂಗಗಳನ್ನೂ ತನಿಖೆ ಬಗ್ಗೆ ಸೋಲಾಪುರದ ಕೋಜೆಯಲ್ಲಿಟ್ಟಿರುವರು.

~~~~~~

ಅಲಿಪುರದ ಬೊಂಬ್ ಮೊಕದಮೆಯ ಅಪೀಲು ತನಿಖೆಗೆ ಪ್ರಾರಂಭವಾಗಿರುವುದು.

ಕಲ್ಕತ್ತೆಯಲ್ಲಿ ವಿದೇಶಿ ವಸ್ತು ಬಹಿಷ್ಕಾರ ದಿನದ ವರ್ಧಂತಿಯು ಬಹಳ ಸಂಭ್ರಮದಿಂದಲೂ ಉತ್ಸುಕತೆಯಿಂದಲೂ ನಡೆಯಿತು. ಘಾಳಿಮಳೆಯು ಈ ದಿವಸ ವಿಪರೀತವಾಗಿದ್ದರೂ ಜನರು ಬಹಳ ಹೆಚ್ಚಾಗಿ ವರ್ಧಂತಿಯುತ್ಸವದ ಮೆರವಣಿಗೆಗೆ ಬಂದಿದ್ದರು. ರಾ! ರಾಮಾನಂದ ಚಟರ್ಜಿ ಮತ್ತು ಅರವಿಂದ ಘೋಷರವರು ನಾಯಕತ್ವವನ್ನು ವಹಿಸಿಕೊಂಡಿದ್ದ ವಿದ್ಯಾರ್ಥಿಗಳ ಮೆರವಣಿಗೆಯೂ ಸಹಾ ಇತ್ತು. ಈ ಮೆರವಣಿಗೆಗೆ ಸೌಮ್ಯ ಪಕ್ಷದ ಮುಖಂಡರು ಯಾರು ಸೇರಲಿಲ್ಲವಂತೆ. ವಾಡಿಕೆಯಂತೆ ವಿದೇಶಿ ವಸ್ತು ಬಹಿಷ್ಕಾರದ ಆಣೆಯನ್ನು [illegible] ಘೋಷ[illegible] ದ್ರನಾಥ ಬೋಸರವರು ಅಧ್ಯಕ್ಷರಾಗಿದ್ದರು. ಇವರು ಈ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ವಂಗಭಂಗವೇ ಬಂಗಾಳದ ಅಸಮಾಧಾನಕ್ಕೆ ಕಾರಣವಾಗಿರುವುದೆಂದೂ, ಸರಕಾರದವರು ಪ್ರಜೆಗಳ ಯಾವ ಹೇಳಿಕೆಗಳನ್ನಾದರೂ ಮನ್ನಿಸುವುದಿಲ್ಲವೆಂಬದಾಗಿಯೂ ಅಪ್ಪಣೆಕೊಟ್ಟಿರುವರು.

~~~~~~

ಈ ತಿಂಗಳ ತಾರೀಕು ೭ನೇಗೆ ಅಂತ್ಯವಾಗುವ ವಾರದಲ್ಲಿ ಪ್ಲೇಗು ಮರಣಗಳು ಸ್ವಲ್ಪಮಟ್ಟಿಗೆ ಹೆಚ್ಚಿರುವುವೆಂದು ತೋರಿಬರುವುದು. ಮುಂಬಾಯಿ ಸಂಸ್ಥಾನದಲ್ಲಿ ೨೧೯, ಮದ್ರಾಸು ೧೦೦, ಬಂಗಾಳ ೩೦, ಸಂಯುಕ್ತ ಸಂಸ್ಥಾನಗಳಲ್ಲಿ ೧೨೪, ಪಂಜಾಬಿನಲ್ಲಿ ೨, ಬರ್ಮಾದಲ್ಲಿ ೧೩೩, ಮಧ್ಯ ಸಂಸ್ಥಾನದಲ್ಲಿ ೩೬, ಮೈಸೂರು ಸಂಸ್ಥಾನದಲ್ಲಿ ೬೫ ಈ ರೀತಿ ಪ್ಲೇಗು ಮರಣಗಳಿದ್ದವು.

~~~~~~

ಈ ತಿಂಗಳ ಒಂದನೇ ತಾರೀಕಿನಲ್ಲಿ ಜಲಂಧರದ ಪತಿತ ಜನರ ಸಲುವಾಗಿ ಜಲಂಧರ ಆರ್ಯ ಸಮಾಜದವರು ಪತಿತ ಜನರನ್ನು ಶುದ್ಧಮಾಡಿ ಆರ್ಯಸಮಾಜಕ್ಕೆ ಕೂಡಿಸಬೇಕೆಂಬದಾಗಿ ನಿರ್ಣಯಿಸಿದ್ದರು. ಇವರ ಶುದ್ಧೀಕರಣದಲ್ಲಿ ತಲೆಬೋಳಿಸುವ ವಿಧಾನವಿರುವುದು. ಸಿಕ್ಕ ಮತಸ್ಥರು ಇದಕ್ಕೆ ವಿರೋಧವಾಗಿ ಸಿಕ್ಕ ಮತದವರಾದ ಈ ಪತಿತ ಜನರನ್ನು ತಲೆಬೋಳಿಸುತ್ತಿರುವರೆಂತ ಗ್ರಹಿಸಿ ತಮ್ಮ ಸಮಾಜದಲ್ಲಿಯೇ ಈ ಪತಿತರನ್ನು ತಕ್ಕೊಳ್ಳುವರೆ ನಿರ್ಣಯಿಸಿ ಇವರನ್ನು ಸಹಪಂಕ್ತಿ ಭೋಜನಕ್ಕೆ ತಕ್ಕೊಂಡಿರುವರು.

——o——

ಪೇಷಾವರ ಹತ್ತರ ಸಿಕ್ಕಿರುವ ಬುದ್ಧನ ಅಸ್ಥಿ ಮುಂತಾದವುಗಳು ವ್ಯಾಸರಾಯ ಪ್ರಭುಗಳಿಂದ ಪರೀಕ್ಷಿಸಲ್ಪಟ್ಟವು. ಸಿಲೋನ್, ಬರ್ಮಾ, ಚೀನಾ, ಜಪಾನ ಈ ರಾಜ್ಯಗಳೊಳಗೆ ಇವುಗಳನ್ನು ಹಂಚಿಕೊಡುವರೆ ನಿರ್ಣಯಿಸಿರುವುದು. ಇವುಗಳನ್ನು ಪಡೆಯಲಿಕ್ಕೆ ಪ್ರತಿನಿಧಿಗಳು ಬರಲಿಕ್ಕೆ ಸಾಕು. ಅಥವಾ ರಾಯಭಾರಿಗಳನ್ನು ಇವುಗಳೊಡನೆ ಆಯಾ ದೇಶಗಳಿಗೆ ಕಳುಹಿಸುವರಂತೆ

~~~~~~

ವ್ಯಾಸರಾಯ ಪ್ರಭುಗಳಾದ ಮಿಂಟೊ ಪ್ರಭುಗಳು ಬರುವ ನವಂಬರ ತಿಂಗಳ ೨೩ ನೇ ತಾರೀಕಿನಲ್ಲಿ ಬರೋಡಾ ಸಂಸ್ಥಾನವನ್ನು ಸಂದರ್ಶಿಸುವರೆ ಬರುವರಾಗಿ ತಿಳಿಯುತ್ತೇವೆ. ಲೋರ್ಡ ಕರ್ಜನ್ ಪ್ರಭುಗಳು ವ್ಯಾಸರಾಯರಾಗಿದ್ದಾಗ ಈ ಸಂಸ್ಥಾನವನ್ನು ಸಂದರ್ಶಿಸದೆ ಉಂಟಾದ ಅಭಾವವು ಈ ಸರ್ತಿ ಶಮನಿಸುವುದು.

~~~~~~

ರಾಜದ್ರೋಹದ ಬಗ್ಗೆ ಕಠಿಣ ಕಾಮಗಾರಿಯ ಸಜೆಯನ್ನು ಅನುಭವಿಸುತ್ತಿರುವ 'ಕಾಳ' ಎಂಬ ಮರಾಟಿ ಪತ್ರದ ಸಂಪಾದಕರಾಗಿದ್ದ ಶಿವರಾಮ ಮಹಾದೇವ ಪರಂಜಪೆಯವರು ದೇಹದಲ್ಲಿ ಬಹಳ ಕ್ಷೀಣತೆಯನ್ನು ಹೊಂದಿರುವರೆಂದೂ, ತೂಕದಲ್ಲಿ ೨೦ ರಾತ್ತಲು ಕಮ್ಮಿಯಾಗಿರುವರೆಂದೂ 'ಮರಾಟಾ' ಎಂಬ ಪತ್ರದಿಂದ ತಿಳಿದುಬರುವುದು.

——o——

ಬಾಬು ಸುರೇಂದ್ರನಾಥ ಬೆನರ್ಜಿಯವರನ್ನು ಹಿಂದುಸ್ಥಾನಕ್ಕೆ ಸ್ವರಾಜ್ಯವು ಎಷ್ಟು ಕಾಲದಲ್ಲಿ ದೊರಕುವುದೆಂಬದಾಗಿ ಕೇಳಿದ್ದಲ್ಲಿ ಅದು ಇನ್ನು ೨೦ ವರುಷಗಳಲ್ಲಿಯೇ ಪ್ರಾಪ್ತಿಸುವುದೆಂದು ಅಪ್ಪಣೆ ಕೊಟ್ಟಿರುವರು. ವಂಗಭಂಗವನ್ನೂ ಸಹಾ ಯಾವದಾದರೊಂದು ವಿಧಾನದಲ್ಲಿ ಮಾರ್ಪಡಿಸುವರೆಂಬ ಕೋರಿಕೆಯು ತನಗಿರುವುದೆಂತ ಸಹಾ ಹೇಳಿರುವರು.

~~~~~~

ಪೋಲೀಸಿನವರ ಪ್ರಕಟಣೆಗೆ ಅನುಗುಣವಾಗಿ ಮುಂಬಯಿಯ ನೆಶನಲ್ ಯುನಿಯನಿಷ್ಟ್ ಸಭೆಯವರು ವಿದೇಶಿ ಬಹಿಷ್ಕಾರದ ದಿನವನ್ನು ಮುಂಬಯಿ ಪಟ್ಟಣದಲ್ಲಿ ಆಚರಿಸದೆ ಬೆಂಡೂರಾ ಎಂಬಲ್ಲಿಗೆ ಹೋಗಿ ಬಹಳ ಸಂಭ್ರಮದಿಂದ ಈ ದಿನವನ್ನಾಚರಿಸಿದರು. ಹಲವು ಸ್ತ್ರೀಯರು ಸಹಾ ಅಲ್ಲಿ ಹಾಜರಿದ್ದರು.

~~~~~~
~~~~~~

ಬಾಬು ಅರವಿಂದ ಘೋಷರವರು ಕರ್ಮಯೋಗಿನಿ ಎಂಬ ತಮ್ಮ ಪತ್ರದಲ್ಲಿ ತನ್ನದೊಂದು ಲೇಖನವನ್ನು ಪ್ರಕಟಿಸಿರುವರು ಇದರಲ್ಲಿ ತನ್ನನ್ನು ಗಡಿಪಾರು ಮಾಡುವ ಸಂಭವವಿರುವುದೆಂಬದನ್ನು ಸೂಚಿಸಿ ಹಾಗೆ ಗಡಿಪಾರು ಮಾಡಲ್ಪಟ್ಟಲ್ಲಿ ಈ ಲೇಖನವೇ ನನ್ನ ಕಡೇ ಲೇಖನವಾಗಿರುವುದೆಂತ ಸೂಚಿಸಿರುವರು

ದಕ್ಷಿಣಹಿಂದುಸ್ಥಾನ.

ಮದ್ರಾಸಿನಲ್ಲಿ ವಾಸಿಸಿಕೊಂಡಿರುವ ಗೌಡಸಾರಸ್ವತರ ಸಭೆಯು ಅ। ಸುಬ್ರಾಯ ಪೈಗಳವರ ಮರಣದಿಂದುಂಟಾದ ಸಹಸಂತಾಪ ಸೂಚನಾರ್ಥವಾಗಿ ಈ ತಿಂಗಳ ೧ನೇ ತಾರೀಕಿನಲ್ಲಿ ಜರಗಿತು ಮಂಗಳೂರಲ್ಲಿ ಈ ಉದ್ದಿಶ್ಯದ ಸಲುವಾಗಿ ನೇಮಿಸಲ್ಪಟ್ಟ ಕಮ್ಮಿಟಿಯವರ ಅಭಿಪ್ರಾಯಗಳನ್ನು ಕೇಳಿಕೊಂಡು ಮೃತರ ಸ್ಮರಣಾರ್ಥವಾಗಿ ತಕ್ಕ ಏರ್ಪಾಡು ಮಾಡುವ ಬಗ್ಗೆ ಮದ್ರಾಸಿನಲ್ಲಿಯೂ ಸಹಾ ಒಂದು ಕಮ್ಮಿಟಿಯು ನೇಮಕವಾಗಿರುವುದು ರಾ ಮಂಗಳೂರು ರಾಮಚಂದ್ರ ಪೈಗಳವರು ಇದರ ಕಾರ್ಯದರ್ಶಿಗಳಾಗಿರುವರು

ಮದ್ರಾಸಿಗೆ ಬರುವ ದಕ್ಷಿಣದ ತೀರ್ಥಕ್ಷೇತ್ರ ಯಾತ್ರೆ ಮಾಡುವ ಪ್ರಯಾಣಿಕರಿಗೆ ತಕ್ಕದಾದ ಸ್ಥಾನವನ್ನು ಕೊಡಬೇಕೆಂದು ಮದ್ರಾಸು ಮಹಾಜನ ಸಭೆಯಲ್ಲಿ ನಿರ್ಣಯಿಸಿರುವರು

ದಕ್ಷಿಣ ಮಲಬಾರಿನ ಕರಾವಳಿಯಲ್ಲಿಯೂ ಇದರಿಂದ ಉತ್ತರ ಕರಾವಳಿಯಲ್ಲಿಯೂ ಸಹಾ ವಿರುಪಾಕ್ಷಿಯು ಸದ್ಯದಲ್ಲಿರುವುದಾಗಿ ಸಿಮ್ಲಾದಿಂದ ತಿಳಿಸಿರುವರು

ಈ ತಿಂಗಳ ತಾ ೧೯ರಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಮೀಟಿಂಗ್ ಇರುವುದು

ಎಸ್ ಎಮ್ ಆರ್ ರೈಲ್ವಿಯ ಎರಡು ಗಾಡಿಗಳ ನಡುವೆ ಒಬ್ಬ ಅನಾಥ ಹುಡುಗಿಯು ನಜ್ಜುಗುಜ್ಜಾಗಿ ಮೃತಪಟ್ಟಿರುವಳು

ಮೈಸೂರಿನ ಡಿಪ್ಯುಟಿ ಕಮಿಶನರಾಗಿರುವ ಮ ಕಾಂತರಾಜ ಅರಸುವರು ೨ ತಿಂಗಳ ಪ್ರಿವಿಲೇಜ್ ರಜೆಯನ್ನು ಬರುವ ೧೬ನೇ ತಾರೀಕಿನಿಂದ ಪಡೆದಿರುವರು ಸೀನಿಯರ್ ಅಸಿಸ್ಟಾಂಟ್ ಕಮಿಶನರ್ ಮ। ಕೆ ಚೆಂಡಿ ಬಿ ಎ ಇವರಿಗೆ ಮೈಸೂರಿಗೆ ವರ್ಗವಾಗಿರುವುದು

ಈ ವರುಷ ಮೈಸೂರು ದಸರಾ ವಸ್ತುಪ್ರದರ್ಶನವು ಬರುವ ಅಕ್ಟೋಬರ ತಿಂಗಳ ೧೮ನೇ ತಾರೀಕಿನಲ್ಲಿ ಪ್ರಾರಂಭವಾಗಿ ಅದೇ ತಿಂಗಳ ೩೦ನೇ ತಾರೀಕಿಗೆ ಅಂತ್ಯವಾಗುವದು ಜಾನುವಾರುಗಳ ಪ್ರದರ್ಶನವು ಸಹಾ ಈ ಸಂದರ್ಭದಲ್ಲಿಯೇ ಏರ್ಪಡಿಸಲ್ಪಡಲಾಗಿ ಕೇಳುತ್ತೇವೆ ಮೈಸೂರಿನಲ್ಲಿ ಒಳ್ಳೇ ಜಾನುವಾರುಗಳನ್ನು ತಕ್ಕೊಳ್ಳುವರೆ ಈ ಸಂದರ್ಭವು ತಕ್ಕದ್ದಾಗಿರುವದು ದರ್ಬಾರ್ ಸರಕಾರದವರು ಚುಂಚುನ್ ಕಟ್ಟೆ ಮೊದಲಾದ ಜಾತ್ರೆ ಸಮಯಗಳಲ್ಲಿ ಹೆಚ್ಚಿನ ಜಾನುವಾರುಗಳನ್ನು ಕ್ರಯಕ್ಕೆ ತಕ್ಕೊಂಡಿರುವರು ಪ್ರದರ್ಶನದ ಬಗ್ಗೆ ೨೭ ಜನರ ಒಂದು ಕಮಿಟಿಯು ನೇಮಕವಾಗಿರುವುದು ಸರ್ಕಾರಿ ಉದ್ಯಾನಗಳ ಸುಪರಿಂಟೆಂಡೆಂಟರಾದ ಮ ಕ್ರಂಬಿಜೇಡ್‌ರವರು ಈ ಸರ್ತಿ ಪ್ರದರ್ಶನ ಕಮ್ಮಿಟಿಯ ಅಧ್ಯಕ್ಷರೂ, ಸರಕಾರಿ ಕಲಾಶಾಲೆಯ ಮುಖ್ಯೋಪಾಧ್ಯಾಯರಾದ ಮ ಜಿ ಸುಬ್ಬಸ್ವಾಮಿ ಬಿ ಎ ಎಲ್ ಟಿ ಯವರು ಕಾರ್ಯದರ್ಶಿಯೂ ಆಗಿ ನೇಮಕವಟ್ಟಿರುವರು

ದಕ್ಷಿಣ ಕನ್ನಡ.

ಸಿದ್ಧಲಕ್ಷ್ಮೀವಿಲಾಸವೆಂಬ ಔಷಧಿಯ ಪ್ರಕಟಣೆಯನ್ನು ಈ ಸರ್ತಿ ನಮ್ಮ ಪತ್ರದಲ್ಲಿ ಛಾಪಿಸಿರುವನು ಔಷಧಿಯ ಪ್ರಯೋಜನವು ಎಲ್ಲರಿಗೂ ದೊರಕಲು ಸಾಧ್ಯವಾಗುವಂತೆ ...

ಮಂಗಳೂರು. ಕಳೆದ ತಾ ೧೧ರಲ್ಲಿ ಬೋಳೂರಲ್ಲಿ ಲಕ್ಷ್ಮಣ ತಂತ್ರಿಯರ ಮಗ ಸುಮಾರು ೯ ವರುಷ ಪ್ರಾಯದ ಹುಡುಗನಿಗೆ ಅದೇ ದಿವಸ ಸಾಯಂಕಾಲ ಸುಮಾರು ೫ ಘಂಟೆಗೆ ಈ ಹುಡುಗನ ಚಿಕ್ಕ ತಂದೆಯಾದ ಅನಂತ ತಂತ್ರಿ ಎಂಬವನು ತಿನ್ನಲಿಕ್ಕೆ ಮಿಠಾಯಿ ಕೊಡುತ್ತೇನೆಂತ ಹತ್ತಿರದ ಗುಡ್ಡೆಗೆ ಕರಕೊಂಡುಹೋಗಿ ಮೈಯಲ್ಲಿದ್ದ ಆಭರಣಗಳನ್ನೆಲ್ಲಾ ತೆಗದು ಸದರಿ ಹುಡುಗನನ್ನು ಕತ್ತಿಯಿಂದ ತಿವಿದು ಕೊಂದುಬಿಟ್ಟನಂತೆ ೧೧ ನೇ ತಾರೀಕಿನಲ್ಲಿ ಪೋಲೀಸಿನವರು ಆ ಕೊಲೆಪಾತಕಿಯನ್ನು ಕೈದು ಮಾಡಿರುತ್ತಾರೆ ಮತ್ತು ಜಡ್ತಿ ಮಾಡಿದ್ದಲ್ಲಿ ಅವನ ಹತ್ತರ ಎಲ್ಲಾ ಆಭರಣಗಳು ಸಿಕ್ಕಿರುತ್ತವಂತೆ

ಕಳೆದ ತಾ ೯ರಲ್ಲು ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರು ಕುಂದಾಪುರ ತಾಲೂಕು ಬೈಂದೂರಿನಲ್ಲಿರುವ ಯಡ್ತರೆ ವೆಂಕಟರಾಯ ಎಂಬವರಿಗೆ ಒಂದು ಖೂನಿ ಮೊಕದ್ದಮೆಯಲ್ಲಿ ಸುಳ್ಳು ಸಾಕ್ಷಿ ಹೇಳಿದ್ದಕ್ಕೆ ೬ ತಿಂಗಳ ಸಜೆಯನ್ನೂ ೫೦ ರೂಪಾಯಿ ಜುಲ್ಮಾನೆಯನ್ನೂ ಜುಲ್ಮಾನೆ ಕೊಡಲಿಕ್ಕೆ ತಪ್ಪಿದ್ದಲ್ಲಿ ೧ ತಿಂಗಳು ಹೆಚ್ಚು ಸಜೆಯನ್ನೂ ವಿಧಿಸಿರುವರು

ಕಳೆದ ತಾ ೮ರಲ್ಲು ಸರ್ಜನ್ ಜನರಲ್‌ರಾದ ಕರ್ನಲ್ ಲಫ್ಟನೆಂಟ್ ಕೆಮ್ ಪ್‌ಸ್, ಐ ಎಮ್ ಎಸ್ ಎಂಬವರು ಮಂಗಳೂರಿಗೆ ಬಂದಿದ್ದರು ತಾ ೯ ಮತ್ತು ೧೦ಕ್ಕೆ ಪೋಲೀಸ್ ಆಸ್ಪತ್ರೆಯನ್ನೂ ಲೇಡಿಸ್ ಆಸ್ಪತ್ರೆಯನ್ನೂ ವೆನ್ಲೂಕ್ ಆಸ್ಪತ್ರೆಯನ್ನೂ ತನಿಕೆ ಮಾಡಿ ಹೋದರು

ಪೋಲೀಸು ಇನ್ಸ್‌ಪೆಕ್ಟರರಾಗಿದ್ದ ಸೋಮಪ್ಪನವರ ವಿಧವೆ ಜಾನಮ್ಮನವರನ್ನು ಒಂದು ಸೀಮಂತ ಔತಣದ ಸಂದರ್ಭದಲ್ಲಿ ಹೊರಪಡಿಸಿದ್ದಕ್ಕಾಗಿ ಡಿವಿಜನಲ್ ಮೇಜಿಸ್ಟ್ರೇಟರವರು ಹೀಗೆ ಹೊರಪಡಿಸಲು ಕಾರಣರಾದ ಮೂವರಿಗೆ ಜುರುಮಾನೆ ವಿಧಿಸಿದ್ದರು ಈ ಜುರುಮಾನೆಯು ಅಪೀಲಿನಲ್ಲಿ ಜಡ್ಜರವರಿಂದ ತೆಗದು ಹಾಕಲ್ಪಟ್ಟಿರುವುದು

ಕೆನರಾ ಹಿಂದೂ ಪರ್ಮನೆಂಟ್ ಫಂಡಿನ ಅಧ್ಯಕ್ಷರನ್ನಾಗಿ ಮಾಜಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ಮ ರಾ ರಾ ಅ ವೆಂಕಟರಮಣ ಪೈ ದಿವಾನ್ ಬಹದೂರ್ ಇವರನ್ನು ಆರಿಸಿರುವರು

ಕಳದ ಶುಕ್ರವಾರ ದಿವಂಗತ ಅಮ್ಮೆಂಬಳ ಸುಬ್ರಾಯ ಪೈಗಳವರ ಸಲುವಾಗಿ ಅವರ ೧೩ನೇ ದಿವಸದಲ್ಲಿ ಜಾತಿಯವರೆಲ್ಲರಿಗೂ ಕೆನರಾ ಹೈಸ್ಕೂಲಿನಲ್ಲಿ ಔತಣವಿತ್ತು ಇದೇ ದಿನ ರಾತ್ರಿ ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಪುಷ್ಪ ಪೂಜೆಯು ಸಹಾ ಇತ್ತು

ಕಳದ ಆದಿತ್ಯವಾರ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳಾಗಿದ್ದ ಪಾಸ್ಟ್ ಸ್ಟುಡೆಂಟ್ಸರವರ ಸಭೆಯು ಕೂಡಿತ್ತು ಈ ಸಭೆಯಲ್ಲಿ ಅ। ಸುಬ್ರಾಯ ಪೈಗಳವರ ಹೆಸರಲ್ಲಿ ಒಂದು ವಿದ್ಯಾರ್ಥಿವೇತನ ಯಾ ಇನಾಮನ್ನು ವರುಷಂಪ್ರತಿ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳಲ್ಲೊಬ್ಬನಿಗ ದೊರಕುವಂತೆ ಒಂದು ಫಂಡನ್ನು ಏರ್ಪಡಿಸಬೇಕಾಗಿ ನಿರ್ಣಯಿಸಿರುವರು ಈ ಬಗ್ಗೆ ರಾ। ಅತ್ತಾವರ ಬಾಲಕೃಷ್ಣ ಶೆಟ್ರು, ರಾ। ವಕೀಲ ಎಸ್ ಬಿ ಬೀಡೆ ಬಿ ಎ ಬಿ ಎಲ್ ರಾ। ವಕೀಲ ಮಂಗಳೂರ ನರಸಿಂಹ ವೆಂಕಟೇಶ ಪೈ ಬಿ ಎ ಎಲ್ ಎಲ್ ಬಿ, ರಾ। ವಕೀಲ ಮ ಮಾಧವರಾವ್ ಬಿ ಎ ಬಿ ಎಲ್, ರಾ। ಅಡಿಗೆ ವರದರಾವ್ ಬಿ ಎ ರಾ। ಹೈಕೋರ್ಟು ವಕೀಲ ಯು ವಾಮನ ನ್ಯಾಕರವರು ಬಿ ಎ ಬಿ ಎಲ್ ಮತ್ತು ರಾ। ವಿ ಎಸ್ ಕಾಮತ್, ಈ ಏಳು ಜನರ ಕಮ್ಮಿಟಿಯು ಸಭೆಯವರಿಂದ ಆರಿಸೋಣಾಯಿತು ರಾ। ಬಾಲಕೃಷ್ಣ ಶೆಟ್ರು ಕಮ್ಮಿಟಿಯವರ ಟ್ರೆಜರರಾಗಿಯೂ ರಾ. ವಕೀಲ ಭೀಡೆಯುವರು ಇದರ ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿರುವರು. ಈ ವರೆಗೆ ರೂ. ೧೧೦೦ ಚಂದಾಹಣ ಕೂಡಿರುವದು. ಬರುವ ಸಂಚಿಕೆಯಿಂದ ವಸೂಲು ಕೊಟ್ಟವರ ಹೆಸರುಗಳನ್ನು ಕ್ರಮವಾಗಿ ಪ್ರಕಟಿ...

ವೆಲ್ಲೂರಿಗೆ ವರ್ಗವಾಗಿ ಹೋದ ಪೋಲೀಸು ಆಫೀಸು ಮೆನೇಜರರಾದ ಮ। ವೆಂಕಪ್ಪನವರ ಬಗ್ಗೆ ಕಳದ ೫ನೇ ತಾರೀಕಿನಲ್ಲಿ ಬ್ರಹ್ಮಸಮಾಜದವರ ರಾಮ್ ಮೋಹನ್ ರಾಯ ಬಾಲಿಕಾ ಪಾಠಶಾಲೆಯಲ್ಲಿ ಸಭೆಕೂಡಿ ಒಂದು ವಿನೋದ ಪಾರ್ಟಿಯಾಯಿತು

ಕಾಸರಗೋಡು ಇಲ್ಲಿಯ ಗೌಡ ಸಾರಸ್ವತ ಬ್ರಾಹ್ಮಣರು ಇದೇ ತಾ ೪ನೇ ಬುಧವಾರ ದಿವಸ ತಮ್ಮ ಸ್ವಜಾತಿ ಶಿಖಾಮಣಿಯಾದ ಕೀರ್ತಿಶೇಷ ಅ ಸುಬ್ರಾಯ ಪೈಗಳವರ ಅಕಾಲ ಮರಣದ ಸಹ ಶೋಕವನ್ನು ಕುರಿತು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಮ ರಾ ಕಾರ್ಕಳ ಸ್ವಾಮಿರಪ್ರಭುಗಳ ಅಧ್ಯಕ್ಷತೆಯಿಂದ ಸಭೆ ನೆರೆದರು ಸದರಿ ಪೈಗಳವರ ಕುಟುಂಬಕ್ಕೆ ಸಹಶೋಕಪತ್ರ ಬರಿಯುವದಾಗಿ ನಿರ್ಣಯಿಸಿದರು ಪೈಗಳವರ ೧೩ನೇ ದಿನ ಸಾಯಂಕಾಲ ಸದರಿ ದೇವಸ್ಥಾನದಲ್ಲಿ ಸರ್ವರೂ ಕೂಡಿ ಪೈಗಳವರ ಆತ್ಮಕ್ಕೆ ನಿತ್ಯಶಾಂತಿಯಾಗುವಂತೆಯೂ ಅವರ ಜೀವಮಾನದಲ್ಲಿ ಅವರು ಮಾಡಿದ ಸತ್ಕಾರ್ಯ ಕೀರ್ತಿಯು ಆಚಂದ್ರಾರ್ಕ ಶಾಶ್ವತವಾಗಿರುವಂತೆಯೂ ಸಹ ಪ್ರಾರ್ಥಿಸಿದರು ಪೈಗಳವರ ಸ್ಮರಣಾರ್ಥವಾಗಿ ಶಕ್ತ್ಯಾನುಸಾರ ಸರ್ವರೂ ದ್ರವ್ಯ ಸಂಗ್ರಹಿಸಿ ಒಂದು ವಿದ್ಯಾರ್ಥಿ ವೇತನವನ್ನು ಮಂಗಳೂರು ಕೆನರಾ ಹೈಸ್ಕೂಲಿಗೆ ಕಲಿಯುವ ಸ್ವಜಾತಿ ಯುವಕನಿಗೆ ಕೊಡುವರೆ ಸಹ ಆಲೋಚಿಸಿದ್ದಾರೆ

ಇಲ್ಲಿಯ ಕೋರ್ಟ್ ವಕೀಲರೇ ಮುಂತಾದ ಮುಖಂಡರಿಂದ ಸ್ಥಾಪಿಸಲ್ಪಟ್ಟ ಬಹಳ ಕಾಲದಿಂದ ಇರುವ ಇಂಗ್ಲೀಷ್ ಪತ್ರಾದಿಗಳ ವಾಚನಾಲಯವು (Club) ದೀರ್ಘ ಶ್ವಾಸವನ್ನೆಳೆಯುತ್ತದೆ ಸದ್ಯದಲ್ಲಿಯೇ ಅಂತ್ಯವಾಗುವದಾಗಿ ಕೇಳಿ ತುಂಬಾ ವ್ಯಸನಪಡುತ್ತೇನೆ

ಮಂಜೇಶ್ವರ ಸ್ವರ್ಗಸ್ಥರಾದ ಸುಬ್ರಾಯ ಪೈಗಳ ಆತ್ಮ ಶಾಂತ್ಯರ್ಥವಾಗಿ ಇಲ್ಲಿಯ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಹಗಲು ಪಂಚಾಮೃತ ಅಭಿಷೇಕವೂ, ಬ್ರಾಹ್ಮಣ ಸಂತರ್ಪಣೆಯೂ, ರಾತ್ರಿಯಲ್ಲಿ ಪುಷ್ಪ ಪೂಜೋತ್ಸಹವೂ ಕೂಡಾ ಶ್ರೀ ಭಂಡಾರದ ಖರ್ಚಿನಿಂದ ಸಾಂಗವಾಗಿ ನಡೆದವು ಇದಲ್ಲದೆ ಊರಿನ ಬಡ ಬಗ್ಗರಿಗ ತೃಪ್ತಿಯಾಗುವಂತೆಯೂ ಸ್ವರ್ಗಸ್ಥರಿಗೆ ಪ್ರೀತಿಯಾಗುವಂತೆಯೂ ಸುಮಾರು ೧೫೫ ಮುಡಿ ಅಕ್ಕಿಯನ್ನು ಬಡವರಿಗೆ ಹಂಚಿದರು ಈ ಸಹಾಯವನ್ನು ಪಡೆಯಲಿಕ್ಕೆ ಬಂದಂಥವರಿಗೂ ಮತ್ತು ಇತರ ಎಲ್ಲಾ ಜನರಿಗೂ ಆ ದಿವಸದಲ್ಲಿ ದಾಟಲಿಕ್ಕೆ ಅಸಾಧ್ಯವಾದ ಬಂಗ್ರಮಂಜೇಶ್ವರ ನದಿಯನ್ನು ಧರ್ಮಾರ್ಥವಾಗಿ ದಾಟಿಸಿದಂಥಾ ಮ। ರಾ। ರಾ। ಬಂಗ್ರಮಂಜೇಶ್ವರ ರಘುನಾಥ ವೈಕುಂಠ ಕಮ್ತಿಯವರ ಸರ್ವ ಜನೋಪಕಾರವಾದ ಈ ಕೆಲಸವು ಶ್ಲಾಘನೀಯವೇ

ಇದಲ್ಲದೆ ಆ ಮಹಾನುಭಾವರ ನಿರಂತರ ಸ್ಮರಣಾರ್ಥವಾಗಿ ಇಲ್ಲಿಯ ಶ್ರೀ ದೇವಸ್ಥಾನದ ಮುಂಬಾಗದಲ್ಲಿ ಐದು ದೀಪಗಳ ಒಂದು ಸ್ತಂಭವನ್ನು ಸದರಿ ಶ್ರೀ ಭಂಡಾರದ ಖರ್ಚಿನಿಂದ ಸದ್ಯದಲ್ಲಿಯೇ ಸ್ಥಾಪಿಸುವರೆಂಬ ವದಂತಿಯು ಕೂಡಾ ಇರುತ್ತದೆ

ಇಲ್ಲಿಯ ಸ್ವಜಾತಿಯ ಗೃಹಸ್ಥರಿಗೆ ಈ ವಿಷಯದಲ್ಲಿರುವ ಉತ್ಸಾಹವನ್ನೂ ಔದಾರ್ಯವನ್ನೂ ಇತರ ಜಾತಿಬಾಂಧವರಿಗೆ ಕೂಡಾ ತಿಳಿಸಲಿಕ್ಕೆ ಬಹಳ ಸಂತೋಷಪಡುತ್ತೇನೆ.

ಬಾತ್ಮೀದಾರ.

ಪುತ್ತೂರು. ಮಲಬಾರ ಜಿಲ್ಲಾ ಪಯ್ಯಂಗಾಡಿ ಫಿಶ್ ಕ್ಯೂರಿಂಗ್ ಯಾರ್ಡಿನಲ್ಲಿ ಸಬ್ ಇನ್ಸ್‌ಪೆಕ್ಟರರಾಗಿದ್ದ ರಾ. ಮ. ರಾಮಕೃಷ್ಣ ಕಮ್ತಿಯರು ವ ಬೇರೆಯವರ ಮೇಲೆ ಪುತ್ತೂರು ಡಿಪ್ಯುಟಿ ಮೇಜಿಸ್ಟ್ರೇಟರ ಮುಂದೆ ನಡೆಯುತ್ತಿದ್ದ...

ಸುಲಿಗೆ ನಂಬ್ರವು ತೀರ್ಮಾನವಾಗಿ ಎಲ್ಲಾ ಮುದ್ದೈಯಾಳಿಯರನ್ನು ಖುಲಾಸ ಪಡಿಸಲಾಯಿತು.

ಇದೇ ತಿಂಗಳ ತಾ. ೧ನೇ ರಾತ್ರಿ ಪುತ್ತೂರು ಕಸಬಾ ಶರಾಬ ಡಿಪೋವಿನ ಬೀಗ ಮುರಿದು ಕಳ್ಳರು ಒಳ ಹೊಕ್ಕು ರೂ. ೩೫ರ ರೊಖ್ಖ ಸಮೇತ ಪೆಟ್ಟಿಗೆಯನ್ನು ಮತ್ತು ಪೀಪದಿಂದ ೩ಗೆಲನ್ ಶರಾಬು ಕಳವು ಮಾಡಿದರು ಪೆಟ್ಟಿಗೆಯನ್ನು ಖಣಿಯಲ್ಲಿ ಬಿಸಾಡಿದ್ದು ಶಿಕ್ಕಿಯದೆ ಈ ಕುರಿತು ಪೋಲೀಸಿನವರು ತನಖಿ ನಡಿಸಿದರು ಕಳ್ಳರು ಶಿಕ್ಕಲಿಲ್ಲ.

ಈ ಮೊದಲಿನ ಸಂಚಿಕೆಯಲ್ಲಿ ಹೇಳಿದ ಮೇರೆಗೆ ಐತುರ ಶ್ಯಾನುಭಾಗ ನಾಗಪ್ಪಯ್ಯ ವಗೈರೆರ ಮೇಲೆ ಮುಜುರು ಬ್ಲೊಕಿನಲ್ಲಿ ರಸ್ತೆ ಮಾಡಿದ್ದರೆಂಬ ಕುರಿತು ತನಖಿ ನಡಿಯುತ್ತಿದ್ದ ಮೊಕದಮೆಯು ಮೇಜಿಸ್ಟ್ರೇಟರವರು ಮುದ್ದೈಯಾಲೆರ ಮೇಲೆ ತಕ್ಷೀರು ಸಾಬಿತಾಗುವದಿಲ್ಲವೆಂತ ಮೊಕದಮೆ ಖುಲಾಸೆ ಪಡಿಸಿದರು.

ಪುತ್ತೂರು ಸಮೀಪ ಅರಿಯಡ್ಕ ಗ್ರಾಮದ ಶೇಕಮಲೆ ಎಂಬಲ್ಲಿ ಶೇಂದಿ ಅಂಗಡಿಯಲ್ಲಿರುವ ಬಿಲ್ಲ ಅಮ್ಮು [illegible] ವನಲ್ಲಿ ಇದೇ ಕಳದ ಜುಲಾಯಿ [illegible] ಪೆಟ್ಟಿಗೆಯನ್ನು ಯಾರೋ ಕಳವು ಮಾಡಿ ಅದರಲ್ಲಿದ್ದ ನಗದಿ ಐವಜು [illegible]ತ್ತಿಕೊಂಡು ಪೆಟ್ಟಿಗೆಯನ್ನು ರಿಕಾರ್ಡು ಕೂಡ ಮನೆ ಹಿಂದೆ ಗುಡ್ಡೆಯಲ್ಲಿ ಸುಟ್ಟಿದ್ದಾಗಿ ತಿಳದು ಬಂದದೆ ಕಳ್ಳರು ಈ ವರೆಗೆ ಶಿಕ್ಕಲಿಲ್ಲ

ಫರಂಗಿಪೇಟೆ ಇದಕ್ಕೆ ಸಮೀಪದಲ್ಲಿರುವ [illegible] ಮಜಲು ಶಾಲೆಯ [illegible]ನೇ ವರುಷದ ವರ್ಷಂತಿಯು ಇದೇ ಆಗೋಸ್ತು ತಾರೀಕು ೭ರಲ್ಲು ಸದರಿ ಶಾಲೆಯ [illegible] ದಲ್ಲಿ ಒರಗಿತು ರವರಂಡ್ ಪಾವಲ್ [illegible] ವಾಸರು ಅಧ್ಯಕ್ಷಸ್ಥಾನವನ್ನು ಅಲಂಕರಿಸ್ಸಿದ್ರ

ಈ ತಿಂಗಳ ತಾ ೪ರಲ್ಲಿ ಇಲ್ಲಿಯ [illegible] ಸಾರಸ್ವತ ಬ್ರಾಹ್ಮಣರೆಲ್ಲರೂ ಸುಮಾರು ಐವತ್ತು [illegible] ಸುಮುಕ್ಕೆ ಫರಂಗಿಪೇಟೆಯ ಶಾಲೆಯಲ್ಲಿ ದಿವಂಗತ ಸುಬ್ರಾಯ ಪೈಗಳವರ ನಿಯಾಮದ [illegible] ಪ್ರದರ್ಶನವಾಗಿ [illegible] ದ್ದರು

ಮುಲ್ಕಿ ಸ್ವದೇಶಾಭಿಮಾನಿಯ [illegible] ಯಲ್ಲಿ ಪ್ರಕಟಿಸಿದಂತೆ ದಿವಂಗತ ಪೈಗಳವರ ವರವ್ಯಕ್ತಿ ೧೫ನೇ ದಿವಸ ಶ್ರೀ ಸನ್ನಿಧಿಯಲ್ಲಿ ಬ್ರಾಹ್ಮಣ ಸಂತರ್ಪಣೆಯೂ ತದ್ದಿನ ಬಳಿಗ್ಯೆ ಸ್ವಜಾತಿ ತರು [illegible] ವಿಕೆಯಿಂದ [illegible] ಊಟವೂ [illegible] ವಾಗಿ ಮಾಡಲ್ಪಟ್ಟವು ಆ ದಿವಸ ಊರಿನ [illegible] ತಿ ಜಂಡಸಾಲೆಗಳಲ್ಲಾ ಸಂತಾಪ ಸೂಚಕವಾಗಿ [illegible] ಮಾಡಲ್ಪಟ್ಟಿದ್ದವು ಒರದಂತೆ ದಿವಂಗತರ ಉತ್ತರಾದಿ ಕಾರಿಗಳಿಗೆ ವೈದಿಕರ ಮಂತ್ರಾಕ್ಷತೆಗಳನ್ನು ತಲಪಿಸಿರುವರು ದೇವರಿಗೆ ಬಕ್ತಿಪೂರ್ವಕವಾಗಿ ಸಮಪಿ ಸಿದ ನೈವೇದ್ಯಾದಿ ಉಪಹಾರಗಳು ವೈದಿಕರ ಉದರ ನಿರ್ವಾಹವನ್ನುಂಟು ಮಾಡುವಂತೆ ಇಂದಾ ಪುಣ್ಯ ಪುರುಷರ ಉಪಕಾರ ಸ್ಮರಣೆಗಾಗಿ ಮಾಡಿದ ಕೃತ್ಯಗಳು ಬಡಬಗ್ಗರ ಉದರ ತೃಪ್ತಿಯನ್ನುಂಟು ಮಾಡುವವು

ಇಲ್ಲಿಗೆ ಸಬ್ ಇನ್ಸಪೆಕ್ಟರರಾಗಿ ಮ ರಾ ಬೇಕಲ ರಾಮರಾಯರು ಬಂದಿರುವರು

ಪುಂಜಾಲಕಟ್ಟೆ ಲೋಕೋಪಕಾರಿಗಳಾದ, ಸದ್ಗುಣಿಯಾದ, ಅಮ್ಮೆಂಬಳ ಸುಬ್ರಾಯ ಪೈಗಳವರು ಸ್ವರ್ಗಸುಖವನ್ನು ಹೊಂದಿದರಾದ ಕಾರಣ ಅವರ ಉದ್ದಿಶ್ಯ ಇಲ್ಲಿ ಕೃಷ್ಣ ಬಾಳಿಗರ ಮಗ ಕೊಗ್ಗಬಾಳಿಗರು ಕಳದ ತಾ ೬ನೇ ಶುಕ್ರವಾರ ಬೆಳಿಗ್ಗೆ ೭ ಗಂಟೆ ಲಾಗಾಯಿತು ಸಾಯಂಕಾಲ ೭ ಗಂಟೆವರೆಗೆ ಬಡಬಗ್ಗರಿಗೆ ಅಕ್ಕಿ ಧರ್ಮವನ್ನು ಹಂಚಿ ಸಂತೋಷ ಪಡಿಸಿದರು. ಶ್ರೀ ಗೋಪಾಲ ಕೃಷ್ಣ ದೇವರಿಗೆ ಬೆಳಿಗ್ಗೆ ಪಂಚಾಮೃತದ ಅಭಿಷೇಕವನ್ನೂ ರಾತ್ರಿ ಪೂಜೆಯನ್ನೂ ಮಾಡಿಸಿದರು.

ಕಟ್ಟಪಾಡಿ ನಮ್ಮ ಪರಮಪ್ರಿಯ ಬಂಧುಗಳಾದ ಇತ್ತಲಾಗೆ ಸ್ವರ್ಗಸ್ಥರಾದ ಅಮ್ಮೆಂಬಳ ಸುಬ್ರಾಯ ಪೈಗಳವರ ಸ್ಮರಣಾರ್ಥವಾಗಿ ಈ ಪೇಟೆಯ ಗೃಹಸ್ಥರು ತಮ್ಮ ಸ್ವಕೀಯ ದೇವಾಲಯದಲ್ಲಿ ಸಮಾರಾಧನೆ ರಾತ್ರಿ ಪುಷ್ಪ ಪೂಜೆ ಸಹಾ ಬಹು ಸಂಭ್ರಮದಿಂದ ಶ್ರೀ ದೇವರಿಗೆ ಅರ್ಪಿಸಿ ಪೈಗಳವರ ಆತ್ಮಕ್ಕೆ ಸಾಯುಜ್ಯ ಮುಕ್ತಿ ದಯಪಾಲಿಸಬೇಕಾಗಿಯೂ ಇವರಂಥಾ ಸತ್ಪುರುಷರು ನಮ್ಮ ಜಾತಿಯಲ್ಲಿ ಬೇಗನೆ ಉದಯಕ್ಕೆ ಒರಬೇಕಾಗಿಯೂ ಅತನನ್ನು ಯೇಕೊ ಭಾವದಿಂದ ಪ್ರಾರ್ಥಿಸಿದರು *P V N*

ಗಂಗೊಳ್ಳಿ ಮಹಾರಾಜೇಶ್ರಿ ಬಹುಮಾನಪಟ್ಟ ಹ್ಯಾ ಕೋರ್ಟ್ ವಕೀಲ ಅಮ್ಮೆಂಬಳ ಸುಬ್ರಾಯ ಪೈಗಳವರು ಸ್ವರ್ಗಸ್ಥರಾದ ವರ್ತಮಾನ ಕೇಳುತ್ತಲೇ ಇಲ್ಲಿ ಎಲ್ಲಾ ಸಾವುಕಾರರು ಹೆಚ್ಚು ದುಃಖಾಕ್ರಾಂತರಾಗಿ ಮ ರಾ ರಾ ಗಂಗೊಳ್ಳಿ ಸಾವುಕಾರ ನಾಗಪ್ಪ ತಿಮ್ಮಪ್ಪ ನಾಯ್ಕರವರ ಅಧ್ಯಕ್ಷತೆಯಿಂದ ಅವರ [illegible] ವಾಗಿ ಎಲ್ಲಾ ಸಾವುಕಾರರ ವಂತಿಗೆಯಿಂದ ಸುಮಾರು ಅರವತ್ತು ರೂಪಾಯಿ [illegible] ಕಲಸಿ ಆ ಪೈಕಿ ಹತ್ತು ಮುಡಿ ರಂಗೂನ ಬೆಳ್ತಿಗೆ ಅಕ್ಕಿಯನ್ನು ಈ ಗಂಗೊಳ್ಳಿ ಬಂದರದಲ್ಲಿ [illegible] ಜನರಿಗ ಅವರ ೧೫ನೇ ದಿವಸಕ್ಕೆ ದರ್ಮಮಾಡಿರುತ್ತದೆ ಬಾಕಿ ಉಳಿದ ಮೊಬಲಗಿನಿಂದ ಅವರ ೧೬ನೇ ದಿವಸದಲ್ಲಿ ಗಂಗೊಳ್ಳಿ ದೇವಸ್ಥಾನದಲ್ಲಿ ನೂರು [illegible] ಬ್ರಾಹ್ಮಣ ಸಂತರ್ಪಣೆ ಮಾಡಿರುತ್ತದೆ

ಎರ್ಮಾಳ ಇಲ್ಲಿಯ [illegible] [illegible] [illegible] ಶಾಲೆಯನ್ನು ಕಟ್ಟಿಸಿರುವರು

[illegible]

[illegible] ಕುಂದಾಪುರ [illegible] ಸಬ್ [illegible] ಸ್ಪಾಂಟ್ ಇನ್ಸಪೆಕ್ಟರವರಾದ ಮ ರಾ ರಾ ಕೆ [illegible] [illegible] ಬೋರ್ಡ್ [illegible] ಶಾಲೆ [illegible] [illegible] ಶಾಲೆಯ ಸ್ಥಿತಿ [illegible] ಸಂತೋಷಪಡುವವರಾದರು ಶಾಲಾ ಮಾಸ್ತರರು [illegible] ಹೊಸ ಕ್ರಮ [illegible] ವಾಗಿ ತಯಾರಿಸುವ ವಸ್ತು ಪ್ರದರ್ಶನದ ಸಾಮಾನುಗಳನ್ನು ನೋಡಿ ಒಹಳ ಸಂತಸಗೊಂಡರು ಮಾಸ್ತರುಗಳು ಕ್ರಮಗೊಂಡು ಮಾಡಿಸದ ತೋಟಕ್ಕೆ [illegible] ಭಾವಿಯೂ ವಿದ್ಯಾರ್ಥಿಗಳು ದಿನಂ ದಿನೇ ಅಭಿವರ್ಧಿಸುತ್ತಾ ಇರುವದರಿಂದ ಶಾಲೆಯ ಕಟ್ಟೋಣವನ್ನು ದೊಡ್ಡದಾಗಿ ಮಾಡುವದೂ, ಶಾಲೆಗೆ ಒಂದು ಕುರ್ಚಿ ೪ ಬೆಂಚುಗಳೂ ಆಗತ್ಯವಿದೆ ಎಂಬದಾಗಿಯೂ ಸಂದರ್ಶನೆ ಪುಸ್ತಕದಲ್ಲಿ ಬರೆದಿರುವರು ಕೃಪಾಳುವಾದ ಇನ್ಸಪೆಕ್ಟರವರು ಮಾಡಿದ ಮಂಜೂರಾತಿ ಬೋರ್ಡಿನವರು ಜಾರಿಗೆ ತರುವರಾಗಿ ನಂಬಿರುವೆವು

ಮದ್ವಾಚಾರ್ಯರು ಓರ್ವ ಸಾಹುಕಾರರಿಗೆ ಕೊಟ್ಟಂತಾ ಉಡುಪಿಯ ಶ್ರೀ ಕೃಷ್ಣನ ಮೂರ್ತಿಗೆ ಸರಿಯಾದ ಮೂರ್ತಿಯು ಇಲ್ಲಿ ಜನಾರ್ಧನ ಎಂಬ ನಾಮಾಂಕಿತದಿಂದ [illegible] ನಾರ್ಧನ ಮೂರ್ತಿಯ ಕಳೆಯು ಬಹಳವಾಗಿದ್ದರೂ ಈಗ ಜನಾರ್ಧನನಿಗೆ ಶನಿ ದೆಶೆ ಬಂದೊದಗಿದೆಯೋ ಎಂಬದಾಗಿ ಅಲೋಚನೆ ಹುಟ್ಟುತ್ತೆ. ದೇವರ ವಿನಿಯೋಗ ನಿತ್ಯ ಕರ್ಮಗಳು ಮಾಡುವಂತೆ ಬಹಳ ಆಸ್ತಿಯು ಉತ್ತಾರವಾಗಿ ಬಿಟ್ಟಿದ್ದರೂ ಸರಕಾರದವರು ತಸ್ತೀಕಾಗಿ ಹಣವನ್ನು ದಯಪಾಲಿಸಿದರೂ ಈ ವರುಷದ ಮಳೆಯಲ್ಲಿ ಮೂರ್ತಿ ತೇಲಿಕೊಂಡು ಹೋಗುತ್ತದೋ ಎಂಬ ಭಯವಿತ್ತು. ಈ ಬಯವನ್ನು ಇಲ್ಲಿಯ ಮರಂಬ ಹೆಗ್ಗಡೆಯವರು ಹುಲ್ಲಿನಿಂದ ದೇವಸ್ಥಾನದ ಮೇಲ್ಮೈಯನ್ನು ಹೊದಿಸಿ ನಿವಾರಿಸಿರುವರು ದೇವಸ್ಥಾನಗಳಲ್ಲಿ ಸರಿಯಾಗಿ ವಿನಿಯೋಗ ನಿತ್ಯಕರ್ಮಗಳು ನಡಯುವಂತೆ ದೇವಸ್ಥಾನಗಳ ಕಮ್ಮಿಟಿ ಮೆಂಬರರೆನಿಸಿಕೊಳ್ಳುವವರು ಹೆಚ್ಚು ಉತ್ತೇಜನದಿಂದ ಕೆಲಸ ಮಾಡಿದೆ ಪಕ್ಷ ಹಳ್ಳಿಪಳ್ಳಿಗಳಲ್ಲಿ ಒಹಳ ಹೀನಸ್ಥಿತಿಗೆ ಒಂದಂಥಾ ಬ್ರಾಹ್ಮಣ ದೇವಾಲಯಗಳು ಅಬಿವೃದ್ಧಿಗೊಂಡಾವು ಎಂದು ನಂಬುತ್ತೇವೆ

ಬ್ರಹ್ಮಾವರ ನಮ್ಮ ಜಿಲ್ಲೆಯಲ್ಲಿ ಅದ್ವಿತೀಯ ಪುರುಷರೂ ಅಸಾಮಾನ್ಯ ಹ್ಯಾ ಕೋರ್ಟ್ ವಕೀಲರೂ ಆಗಿದ್ದ ದಿವಂಗತರಾದ ಕೀರ್ತಿಶೇಷ ಅ ಸುಬ್ರಾಯ ಪೈಗಳವರ ಸ್ಮರಣಾರ್ಥವಾಗಿ ಕೊಡ್ಡಿಕಾರ ಸುಬ್ರಾಯ ಪೈಗಳವರ ಪರಿಶ್ರಮದಿಂದ ಶ್ರಿ ವೆಂಕಟ್ರಮಣ ದೇವಸ್ಥಾನದಲ್ಲಿ ತಾ ೫ನೆ ಗುರುವಾರ ಹಗಲು ಬ್ರಾಹ್ಮಣ ಸಂತರ್ಪಣೆಯೂ, ರಾತ್ರಿ ಪೂಜಾ ಸಮಾರಂಭವೂ ನಡಧು ಮಹಾತ್ಮರ ಆತ್ಮ ಚರಿತ್ರದ ಕೆಲವಂಶಗಳು ವರ್ಣಿಸಲ್ಪಟ್ಟವು ಹಾಗೆಯೇ ಮಹಾತ್ಮರಾದ ಸತ್ಪುರುಷರಾದ ಸುಬ್ರಾಯ ಪೈಗಳವರಿಗೆ ನಿತ್ಯ ಸಾಯುಜ್ಯವು ಸಿಕ್ಕಲೆಂದು ಪ್ರಾರ್ಥಿಸಿಕೊಂಡರು

ಬಾರಕೂರು ನಮ್ಮ ಜಿಲ್ಲೆಯಲ್ಲಿ ದಾತಾರರಾಗಿ ಪ್ರಖ್ಯಾತರಾಗಿದ್ದ ವೈಕುಂಠವಾಸಕ್ಕೆ ತೆರಳಿಹೋದ ಅಮ್ಮೆಂಬಳ ಸುಬ್ರಾಯ ಪೈಗಳವರ ಸ್ಮರಣಾರ್ಥವಾಗಿ ಪೇಟೆಯ ಸ್ವಜಾತಿ ಬಂಧುಗಳು ಸೇರಿ ನಗರ ಬಜನೆಯನ್ನು ಮಾಡಿ ಶ್ರಿ ಗಣಪತಿ ದೇವಸ್ಥಾನಕ್ಕೆ ಒಂದು, ಪೂಜೆಯಾದ ನಂತರ ಸಬೆ ಸೇರಿ, ಸ್ಕೂಲ್ ಹೆಡ್ ಮಾಸ್ತರ್ ಕುಭೇರ ಮಂಜುನಾಥಯ್ಯನವರಿಂದ ಪೈಗಳವರ ಗುಣಗಣಗಳು ವರ್ಣಿಸಲ್ಪಟ್ಟು ಅನಂತರ ಸ್ಮಾರಕಕ್ಕೆ ಕೆಲವು ವಂತಿಗಯೂ ಸ್ವೀಕರಿಸಲ್ಪಟ್ಟಿತು ನಂತರ ಮಹಾನುಭಾವರಿಗೆ ವೈಕುಂಠದಲ್ಲಿ ಸಾಯುಜ್ಯ ಮುಕ್ತಿಯು ಸಿಕ್ಕಲೆಂದು ಪ್ರಾರ್ಥಿಸಲ್ಪಟ್ಟಿತು

ನಮ್ಮ ಪೇಟೆಯಲ್ಲಿ ಶ್ರೀಮಂತ ಸದ್ಗೃಹಸ್ಥರಲ್ಲೊಬ್ಬರಾದ ಪೆರ್ನಾರು ಪದ್ಮನಾಬ ಕಮ್ತಿಯರೆಂಬವರು ಒಂದರೆ ಕ್ರಿಮಿನಲ ತಕ್ಷೀರಿನಿಂದ ಚಾರ್ಜು ಮಾಡಲ್ಪಟ್ಟು ೭ ಅತಿಂಗಳಿಂದ ಹೆಡ್ ಅಸಿಸ್ಟಾಂಟ್ ಕಲೆಕ್ಟರವರಲ್ಲಿ ನಡಿಯುತ್ತಿದ್ದ ಮೊಕದಮೆಯು ತೀರಿ ಕಮ್ತಿಯರವರು ನಿರಪರಾಧಿಗಳಾಗಿಯೇ ಬಿಡುಗಡೆಯಾಗಿ ಒಂದರು "ಸತ್ಯಮೇವ ಜಯತೆ ನಾನೃತಂ" ಎಂಬ ವಚನಾನುಸಾರವಾಗಿ ಅವರ ಸತ್ಯವೇ ಅವರನ್ನು ಕಾಪಾಡಿತು

ಇತಿ **B M**

ಜೀವಸುಗಳ ಧಾರಣೆ, ಮಂಗಳೂರು

ಒಳ್ಳೇ ಮಸ್ಕತಿ ಅಕ್ಕಿ ,,,,,,,	5—8—0
ಗುಡ್ಡು ಮಸ್ಕತಿ ,,,,,,,,,,	5—0—0
ಬೈಲು ಸುಗ್ಗಿ ,,,,,,,,,,,,	4-14—0
ದುಯಂ ಗುಡ್ಡು ರಾಶಿ ,,,,,,,	4-11—0
ಮಸ್ಕತಿ ಬೆಳ್ತಿಗೆ ,,,,,,,,,,	5—8—0
ರಂಗೂನ್ ಬೆಳ್ತಿಗೆ ಗೋಣಿ ,,,,	8—4—0
ಹುರುಳಿ ಗೋಣಿ ೧ರ ,,,,,,,	8—8—0
ಉಪ್ಪು ಗೋಣಿ ೧ರ ,,,,,,,,	3—13—0
ಕೊಬ್ರಿ ಎಣ್ಣೆ ಮಣ ,,,,,,,,	5—10—0
ಕಾಫಿ ಹಿಂಡಿ ೧ರ ,,,,,,	205—0—0
ಕಾಳು ಮೆಣಸು ಹಿಂಡಿ ,,,,	110—0—0
ಬೆಳಿ ಗೋಟು ಹಿಂಡಿ	35—0—0
[illegible]	[illegible]—12—0

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ, ಇದೆ ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು

ಬಾಟ್ಲ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೆಗೆ ಹೋಗುವದಿಲ್ಲ

ಬಾಟ್ಲ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆ ಬೀಳುವದು

ಬಾಟ್ಲ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೆಗೆ ಹೋಗುವದಿಲ್ಲ

ಬಾಟ್ಲ ಒಂದರ 6 ಆಣೆ

ರೋಯಲ್ ಟ್ರೇಡಿಂಗ್ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ ಸಂಧಿವಾತ ಜಖಮು, ಗಾಯ, ಉರಿ, ಶೀತ, ಕೆಮ್ಮು ಎದೆಶೀತ ಸೊಂಟದ ನೋವು ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲ ಒಂದಕ್ಕೆ 8 ಆಣೆ, 6 ಬಾಟ್ಲಗಳಿಗೆ 2 ರೂ 10 ಆಣೆ 12 ಬಾಟ್ಲಗಳಿಗೆ 5 ರೂ ಒಹಳ ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ. ರಾ. ಪಾಠಕ್ ಮತ್ತು ಕಂಪೆನಿ,

ಠಾಕುರ್‌ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕುಒಪರೇಟಿವ್ ಇನ್ಸುರೆನ್ಸ್ ಸೊಸ್ಯಾಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ

ಹೆಡ್ ಆಪೀಸು —41 ಪೇರ ಸ್ಟ್ರೀಟ್ ಕಲ್ಕತ್ತಾ.

ಬ್ರೆಂಚ್ ಆಫೀಸು —42 ಎಲ್ಫಿನ್‌ಸ್ಟನ್ ಸರ್ಕಲ್ ಮುಂಬಯಿ.

1906ರಲ್ಲಿ ಸ್ಥಾಪಿಸಲ್ಪಟ್ಟಿತು.

ಸಂಘದ ನಿಯಮಿತ ಬಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಬೊಬಲುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು

1908 ದಂಶಬರ ತಿಂಗಳ ವರೆಗೆ ರೂ 13,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುದ್ದಾರಿಕರಿಗೆ ಸೇಕಡಾ 7ರಂತೆ ಮುನಾಫೆಯು ಪ್ರಥಮ ವರುಷದಲ್ಲಿ ಕೊಟ್ಟಿರುವುದು ವಿಮೇ ಬೊಬಲುಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದಲ್ಲಿಯೇ ವಿಮೇದಾರನ ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಾಯಿಸಬಹುದು ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಭಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು ವಿಶೇಷ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಬಿ. ಬಾಬುರಾವ್ ಎಂಡ್ ಸನ್,

ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಪತ್ರ ಬಾಟ್ಲಯೊಂದಿಗೆ ಗಿರುವುದು. { ಸಿದ್ಧಲಕ್ಷ್ಮೀ ವಿಲಾಸ. } ಕ್ರಯ ಬಾಟ್ಲ 1ಕ್ಕೆ 10 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಅಸನದಲ್ಲಿ) ಗುದದ್ವಾರದ ಹತ್ತರ ಬೀಳು ...

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್' ಈ ವಿಷಯ ಹೆಚ್ಚು ಬರಿಯುವುದೇ ಅಗತ್ಯವಿಲ್ಲ. ಒಂದುಸಾರಿ ಪರೀಕ್ಷಿಸಿದೊಡನೆ ತಿಳಿದು ಬರುವುದು. ಬಾಟ್ಲ ಒಂದರ ಕ್ರಯ ರೂಪಾಯಿ 1—0—0.

ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಇದು ... ಕ್ರಯಕ್ಕೆ ದೊರೆಕುವುದು.

ಮಂಗಳೂರು ...

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಪಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨ ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ

೩ ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೋಲೆಗೆ ೨ ರೂ

೪. ಪಂಚಜೀರಕ ಪಾಕ ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟುವ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೫ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಸೌಖ್ಯಕರವಾಗಿದೆ ರಾತಲಿಗೆ ೨ ರೂ

೬ ಪ್ಲೀಹೋದರಾರಿ ಚೂರ್ಣ ಎರಡು ತಿಂಗಳೊಳಗಾಗಿ ಆಯಾಸವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಪಟ್ಟಿ ೧ ರೂ ೮ ಆಣೆ

೭ ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತಿ ಮಂಜನದಷ್ಟೇ ಸೂಕ್ಷ್ಮವಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೋಲೆಗೆ ೧೦ ಆಣೆ

೮ ಸರಳಭೇದಿ ಮಾತ್ರೆ ಶಿಯಾಳವನ್ನುಂಟುಮಾಡದ ಸುಖ ವಿರೇಚಕವು ತೊಲಿಗೆ ೨ ರೂ

೯ ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೋಲೆಗೆ ೨ ರೂ.

೧೦ ವಾಸಾವ ಲೇಹ ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೂಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ.

೧೨ ವಾತೆವಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ದಿವಸದೊಳಗಾಗಿ ಗೆಲ್ಲುವದು ಉರಿಯು ಇಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ

೧೪ ಸವ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ ಅಪಸ್ಮಾರ, ಉನ್ಮಾದ ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಔಷಧಗಳಲ್ಲದೆ ಆಯುರ್ವೇದೀಯ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ — ಬಿ. ಎಮ್. ನಾಥ ಮತ್ತು ಕಂಪೆನಿ,
ಬಾಂದ್ರಾ (ಮುಂಬಯಿ ಹತ್ತಿರ)
Bandra (near Bombay)

ROYAL TRADING Co. CIRGAUM BOMBAY.
ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು, ಗಂಟ್ಲು ನೋವು,

ದೆಶೀತ, ಉಳುಕು ಆನೆಕಾಲು, ಗಾಯ, ಚೇಳುಕಡಿತ ಉರಿ, ಈ ಎಲ್ಲಾ ತರದ ನೋವುಗಳ ಮೇಲೆ ಇದು ಅತೀ ಉತ್ತಮವಾದದ್ದು ಇದು ಹಾನಿಕಾರಿಯಲ್ಲ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು
ಕ್ರಯ ಕಮ್ಮಿ ಗುಣ ಹೆಚ್ಚು ಬಂದುಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು
ಬಾಟ್ಲಿ ಒಂದರ ಕಿಮ್ಮತು ೪ ಆಣೆ.

ಇನಾಮುಗಳು —ಒಂದೇ ಸಾರಿ ೬ ಬಾಟ್ಲಿಗಳನ್ನು ತರಿಸಿಕೊಂಡರೆ ಒಂದು ಎಲ್ಯುಮಿನಿಯಮ್ ಗ್ಲಾಸು. ೧೨ ಬಾಟ್ಲಿಗಳನ್ನು ತರಿಸಿಕೊಂಡರೆ ರೇಶ್ಮೆಯಲವಸ್ತ್ರ. ಸಾವಿರಾರು ಜನರಿಗೆ ಗುಣಕೊಟ್ಟಿರುವ ಈ ನಮ್ಮ ರೊಯಲ್ ಇಂಡಿಯನ್ ಬಾಂ ವನ್ನು ಪ್ರತಿ ಒಬ್ಬರೂ ತರಿಸಿ ಉಪಯೋಗಿಸುವಿರಾಗಿ ನಂಬುತ್ತೇವೆ. ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು.

ನಮ್ಮಲ್ಲಿಯ ಈ ಔಷಧಿಯು ಅನೇಕ ಕಡೆಗಳಲ್ಲಿ ಪ್ರಸಿದ್ಧಿಯಾಗಿದ್ದು ತನ್ನಿಮಿತ್ತ ಕಡೆಯಲ್ಲಿಯು ಸಹ ಪ್ರಸಿದ್ಧಿಯಾಗುವದೆಂಬದಾಗಿ ದೃಢಚಿತ್ತದಿಂದ ನಂಬುತ್ತೇವೆ.

ವಿಳಾಸ:— ರೊಯಲ್ ಟ್ರೇಡಿಂಗ್ ಕಂಪನಿ,
ಗಿರಗಾಂ ಮುಂಬಯಿ.

Sole Agent in Mangalore Town:—
Mangalore Trading Association,
Mangalore.

ನೋಟೀಸು.

ಕಾಸರಗೋಡು ನಿವಾಸಿಕ ಸಾರಸ್ವತ ಬ್ರಾಹ್ಮಣ ಹತ್ತು ಸಮಸ್ಥರ ಹಕ್ಕಾನ ಶ್ರೀ ಪಾಂಡುರಂಗ ದೇವಸ್ಥಾನದ ಭಂಡಾರಕ್ಕೆ ತಾ ೧೫—೧೦—೧೯೦೭ಲ್ಲು ರೂಪಾಯಿ ೧೫೩—೧೨—೦ಕ್ಕೆ ಕೂಡ್ಲು ಮಾಲಿಂಗ ಬಂಟನು ಬರಕೊಟ್ಟ ರಿಜಿಸ್ಟ್ರಿ ಆದವು ದಸ್ತಿವೆ ಪ್ರಕಾರ ಬಾಕಿ ಅಸಲು ಬಡ್ಡಿ ವಸೂಲಿಗೆ ಸದರಿ ಹತ್ತು ಸಮಸ್ಥರ ಕಡೆಯಿಂದ ಕೋರ್ಟಿನವರ ಅನುಮತಿ ಪಡಕೊಂಡ ಕಾಸರಗೋಡು ಕಸಬೆಯಲ್ಲಿರುವ ಶಿಬಾಡ ದತ್ತಯ್ಯನವರ ಮಗ ಸುಬ್ರಾಯನು ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಕ್ರಮ ನಂಬ್ರ ೩೪ ನೇ ವ್ಯಾಜ್ಯ ದಾಖಲು ಮಾಡಿರುತ್ತಾನೆ

ಆದ್ದರಿಂದ ಸದರಿ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರಮನಸ್ಸುಳ್ಳವರು ಈ ಕೋರ್ಟಿನ ಮುಂದೆ ತಾರೀಕು ೨—೯—೦೯ಲ್ಲು ಹಗಲು ೧೦ ಘಂಟೆಗೆ ಹಾಜರಾಗಿ ವ್ಯವಹರಿಸಬಹುದು

ಸಂ ೧೯೦೯ ನೇ ಇಸವಿ ಆಗೋಸ್ತು ತಿಂಗಳು ೫ನೇ ತಾರೀಕು ಕೋರ್ಟು ಮೊಹರ ನಿಶಾನಿ ನಮ್ಮ ದಸ್ಕತೊಡನೆ ಕೊಡೋಣಾಗಿರುತ್ತದೆ.

V. B. Ramaswami Aiyar,
District Munsif.

ಲಾ ಪ್ರಕಟನೆಗಳು.

—o—

1. ವ್ಯವಹಾರ ನಿರ್ಣಯ—ಫಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು ೧೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2 ಕನ್ನಡ ಲಾ ರಿಪೋರ್ಟ್ ಮಾಸಪತ್ರಿಕೆ ಪ್ರಿವಿಕೌನ್ಸಿಲ್ ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ವ ಂಗಡ ಯಾ ವಿ ಪಿ ಒಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟುಗಳ ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು ಎಂ ಮಲ್ಲಾರಾಧ್ಯರೈ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ ಬೆಂಗಳೂರು ೧೬ ಈ ವಿಳಾಸಕ್ಕೆ ಒರೆಯ ವಚ

೧ — —

THE HINDU SOAP MANUFACTURING CO,
ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ

——o——

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಇದರ ಪರಿಚಿತವಾದದ್ದು ಮಾದರಿಗಳೂ ವಿಶೇಷವಾಹಿತಿಯೂ ಮೇನೇಜಿಂಗ್ ಏಜಂಟರ ರ ದೊರಕುವವು ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಬಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳು

ಪರಿಮಳಾಂಜನ ನಂಬ್ರ 1 —ಇದರ ಬಾಹ್ಯಲೇಪದಿಂದಲೇ ತಲೆಶೂಲೆ ಶಿರೋಭಾರ, ಒರ್ಕೆನ್ನೆ ಅರ್ಧಾಂಗವಾಯು, ವಾತ, ಸಂಧುವಾತ ಶೀತ ಕಮ್ಮು ಗಂಟ್ಲುನೋವು, ಜಖಮ್, ಉಳುಕು, ಘಾಯಗಳು ಪಕ್ಷವಾತ ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8 0

2 ತಾಂಬೂಲ ಸುವಾಸಿನಿ —ಸೀಸ ೧ರ ಕ್ರಯ 0-4-0

3 ದಂತಮಂಜನ —ಡಬ್ಬಿ ೧ರ ಕ್ರಯ 0 2 0

4 ಗಜಕರ್ಣದ ಮುಲಾಮು —ಡಬ್ಬಿ ೧ರ ಕ್ರಯ 0 6 0

5 ನಯನಾಮೃತ ಸುರ್ಮ —ಸೀಸ ೧ರ ಕ್ರಯ 0 8 0

6 ಶ್ವಾಸಕುಠಾರ —ಡಬ್ಬಿ ೧ರ ಕ್ರಯ 0 8 0

7 ಪರಿಮಳಾಂಜನ ನಂಬ್ರ ೨ —ಡಬ್ಬಿ ೧ರ ಕ್ರಯ 0 10 0

8 ಜ್ವರಾಂಕುಶ ಮಾತ್ರೆ ಡಜನ್ ೧ರ ಕ್ರಯ 1 8-0

9 ಸುಗಂಧ ನಶ್ಯದ ಪುಡಿ —ಡಬ್ಬಿ ೧ರ ಕ್ರಯ 0-6-0

10 ದಶಾಂಗಧೂಪ —ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಶೇರು ೧ಕ್ಕೆ ರೂಪಾಯಿ 0 4 0

11. ದ್ರಾಕ್ಷಾರಿಷ್ಟ —ಬಾಟ್ಲಿ ೧ರ ಕ್ರಯ 2 8 0 ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಕಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಜನ್ನಾಗ್ನಿ ಅಭಿ ಶರೀರ ಪುಷ್ಟಿಯಾಗುವದು

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರಿಯಿರಿ.

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ, ಪಿ, ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ,
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ ೩ ರೂ ೨ ರೂ ೮ ಆ. ೧೨ ಆ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಳ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಟಿ ಎಲ್ ಉಪಾಧ್ಯಾಯ
ಮೈಸೂರು

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ -- ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

[illegible] ಅನುಕೂಲತೆಯುವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವದು

೧೦೦ ರೂಪಾಯಿಯಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ [illegible] ಬದ್ರವಾದ [illegible] ದರಗಳಲ್ಲಿ ಉತ್ತರವಾಯಿಸ [illegible]

[illegible] ಉತ್ತರವಾಯಿಸುವ ಮೊದಲು ನಮ್ಮ ದರಗಳ [illegible] ದೊರಕುವ ಇತರ ಪ್ರಯೋಜನಗಳನ್ನು [illegible] ತಿಳಿ ಕೊಳ್ಳಿ

[illegible] ಬದ್ರತಾಪತ್ರಗಳಲ್ಲಿ [illegible]

[illegible]

[illegible] ಈ ಕೆಳಗಿನ ವಿಳಾಸಕ್ಕೆ [illegible]

ವಿಶೇಷ ಸೂಚನೆ —[illegible] ನಾನಾ ತರದ [illegible] ಪರೀಕ್ಷಿಸಿ ತರಿಸಿಕೊಡಲಾ ದೀತು

ಎಲ್ಲೂರು ರಾಮರಾವ್
ಜನರಲ್ ಏಜೆಂಟ್,
ಮಂಗಳೂರು — ಕನ್ನಡ.

ನಮ್ಮನ್ನು ಮರೆತಿರುವಿರೆ.

ಹಾಸನ್ ಟೋಪಿ [illegible] ಲನ್‌ದಾರರಳು

1 [illegible] ಡಜನ್‌ಕ್ಕೆ 0 8 [illegible] 3 7 0 ಹಾಸನ್ ಟೋಪಿ ಡಜನ್ 1ಕ್ಕೆ 8 0 0 ಮತ್ತು 1 0 0

ದೊಡ್ಡ ಸ್ಕಾ [illegible] ಒನಿಯನ್ 1ಕ್ಕೆ 0 [illegible] 0 ಫೋಟೋ ಕಾರ್ಡು 100ಕ್ಕೆ 0 3 0 ಕೊಕ್ಕ [illegible] 1ಕ್ಕೆ 0 1 6 ಪರಿಮಳ ಸ್ಯಡಬ್ಬ 1ಕ್ಕೆ 0 2 0 ಮಂತೋಲ್ ಡಬ್ಬಿ 1ಕ್ಕೆ 0 3 0 ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 [illegible] 0 ರಾಯಲ್ ದಂತಮಂಜನ ಡಬ್ಬಿ 1ಕ್ಕೆ 0 1 6, ಸೆನ್‌ಸೆನ್ ತಾಂಬೂಲ ಮಿತ್ರನು 300ಕ್ಕೆ 0 3 0 ನಯನಾಮೃತ ಸುರ್ಮ ಶೀಶೆ 1ಕ್ಕೆ 0 8 0, ಕಪಿಟೋ ಬಾಂ ಡಬ್ಬಿ 1ಕ್ಕೆ 0 8 0, ಚಂದ್ರಪ್ರಭಾಕರ ಮಾತ್ರ ಡಬ್ಬಿ 1ಕ್ಕೆ 1 4 0 ಚೋಮನಾಶಕ ಸಾಬೂನು ಪೆಟ್ಟಿಗೆ 0 6 0, ಮಂಗಳೂರು ಬೀಡಿ 1000ಕ್ಕೆ 1 8 0 ಪವನ್ ಬಂಗಾರದ ಪೋಜಾ ಹೂವು, 1ಕ್ಕೆ 7 12 0

ನಮ್ಮಲ್ಲಿ ಇರುವಷ್ಟು ರೀತಿಯ ಉಲ್ ಬೇರೆ ಎಲ್ಲಿಯೂ ದೊರೆಯದು ಗ್ರಾಹಕರಿಗೆ ಯಾವ ರೀತಿ ಸಾಮಾನು ಬೇಕಾದರೂ ಸಿಕ್ಕುವದು

ವಿಳಾಸ — **ಡಿ. ಊಲನ್ ಮಾರ್ಟ್,**

ಮಂಗಳೂರು, ಬಿ, 4/

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ	೫೨ ಸಾರಿ
ಇಡೀ ಪಾನು	ರೂ ೧೦	ರೂ ೩೨	ರೂ. ೭೨	ರೂ ೧೧೦	ರೂ ೧೫೦.
ಅರ್ಧ ಪಾನು	,, ೬	,, ೧೮	,, ೩೮	,, ೬೦	,, ೮೦.
ಕಾಲು ಪಾನು	,, ೪	,, ೧೨	,, ೨೦	,, ೩೨	,, ೪೫.
ಅರೆಕಾಲು ಪಾನು	,, ೨	,, ೭	,, ೧೨	,, ೧೮	,, ೩೫.

ಸೂಚನೆ:—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರೆಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ೩ ರೂ. ೧ ಆ. ಟಪ್ಪಾಲು ಹಾಸಲು ಅಲ್ಲದೆ ೧ ರೂ. ೪ ಆ. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ೧ ರೂ. ೯ ಆ. ಟಪ್ಪಾಲು ಹಾಸಲು ಸಹಿತ ಪರ ವರುಷಕ್ಕೆ ೧ ರೂ. ೧೪ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)

ಹಾಫ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)

ಫುಲ್‌ಬೈಂಡ್
(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3" × 8¼", 3" × 5¼", 8¼" × 6¼", 6 × 4" ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕದಾರ ವ ಆಪೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು.

ಬಹಳ ಸಮಯದ ವರೆಗೆ [illegible] ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ [illegible] ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳಲ್ಲವುಗಳನ್ನು ಪಾಪ್ತ [illegible] ಉತ್ಕೃಷ್ಟವಾದ ಮಾ[illegible]ಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ [illegible] ತಯ್ಯಾರುಮಾಡುವೆವು

ನಮ್ಮ ದರಗಳ [illegible] ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹಣವಿನ ಒಳ್ಳೇ ವಿನಿಯೋಗವು ಯಾವುದು ಬೆಲೆಗೆ ತಕ್ಕ ಒಡವೆಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ [illegible] ವರುಷಗಳಾದವು.

ಪ್ರಥಮದಲ್ಲಿ [illegible] ವ್ಯಾಪಾರ [illegible] 1[illegible] ಇಸವಿಯಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೋರ್ನ್ ಫ್ಲೋರ್ [illegible] ಬಿಸ್ಕೀಟು ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟ್ರರ ಉಪಯೋಗಕ್ಕಾಗಿರುವ ಸಮಸ್ತ ಔಷಧಿಗಳು,

(ಕೊಡ್ಲಿವರ್ [illegible] ಕೆಮಿಕಲ್ ಫುಡ್ [illegible] ಮೊದಲಾದವುಗಳೂ ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರದಲ್ಲಿ [illegible] ಡಾಕ್ಟರರಿಂದ ರೋಗಗಳು ಚಿಕಿತ್ಸೆಯನ್ನು ಹೊಂದಬಹುದು. ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಒಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಮಂಗಳೂರು.

Mangalore Trading Association.
Mangalore, S. Canara.

Registered No. M. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು 20ನೇ ಶುಕ್ರವಾರ ಅಗೋಸ್ತು 1909. ಸಂಚಿಕೆ 20.

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನೆಹಾರಿ ಮುಲಾಮು ಇದರಿಂದ ವಾತ ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯ ವಿರಹಿತ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲ ೧ರ ಕಿಮ್ಮತು 8 ಆಣೆ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

SAFE ★ EFFICACIOUS ★ SURE ★ PILLS ★ OINTMENTS ★ POWDERS
WILLIAM & Co. BOMBAY

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತದೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು 2 ಆಣೆ.

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ತಾಗಿಸುವದರಿಂದ ಮೋರೆಯ್ಹು ಮೇಲಿರುವ ಮುಟ್ಟಿಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ. 2—4—0.

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು [illegible] ಮನಸ್ಸು ಶುದ್ಧಿ ಮಾಡುವದು. ಬಾಟ್ಲ ೧ರ [illegible] ಮೂರು ಬಾಟ್ಲುಗಳ ರೂ. 2—4—0.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮೆಯಿಸ ಕೊಕೊ, ಲೆಸೆತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೩೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಚೇಳು ಕಡತದಮೇಲೆ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲ ೧ರ ಕಿಮ್ಮತು 8 ಆಣೆ

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	„	0—8—0.
ಕಸ್ತೂರಿ ಮಾತ್ರೆ 50	„	0—10—0.
ಖಜ್ಜಿ ಮುಲಾಮು		0—3—0.
ನೇತ್ರಾಂಜನ		[illegible]

[illegible] ತಯಾರಿಸುವದರಿಂದ ಕಾಗದ ಬರೆದಲ್ಲಿ [illegible]

[illegible] ಅಮೃತಾಂಜನ [illegible]

ಫುಟ್‌ಬಾಲ್.

ನಂ॥ ೧. ರೂ ೩—೦—೦.
,, ೨ ,, ೩—೬—೦
,, ೩ ,, ೪—೪—೦
,, ೪ ,, ೫—೦—೦
,, ೫ ,, ೫—೪—೦

ಬಟನ್‌ಲೆಸ್.

ನಂ॥ ೩ ರೂ. ೫—೦—೦
,, ೪ ,, ೫—೮—೦
೫ ,, ೬—೦—೦

ಕವರುಗಳು.

ನಂ॥ ೧ ರೂ ೧—೧೨—೦
,, ೨ ,, ೨—೦—೦
,, ೩ ,, ೨—೮—೦
ನಂ॥ ೪ ರೂ ೩—೮—೦
,, ೫ ,, ೪—೦—೦

ಬಟನ್‌ಲೆಸ್

ನಂ॥ ೩ ರೂ ೩—೮—೦
,, ೪ , ೪—೦—೦
,, ೫ ೪—೮—೦

ಬ್ಲಾಡರ್‌ಗಳು

ನಂ॥ ೧ ರೂ ೦—೧೦—೦
,, ೨ ೦ ೧೨—೦
,, ೩ ೦ ೧೫—೦
,, ೪ ೧—೪—೦
೫ ,, ೧—೬—೦

ಇನ್‌ಫ್ಲೇಟರ್

೧ಕ್ಕೆ—೦ ೧೨ ೦ ೧ ೦ ೦ ೧ ೮ ೦, ೩-೦ ೦

ರಬ್ಬರ್ ಸಿಮೆಂಟ್.

೧ಕ್ಕೆ—೦ ೩ ೦, ೦-೬ ೦



ಆಲಿಗರು ಬೀಗಗಳು

ಒಂದು ಲೀವರ್ ...

ಸೈಜು —೧, ೦ ೫ ೦ ... ೦-೯ ೦, ೨|, ೦ ೧೦ ೦ ... ಚಕ್ರಾಕಾರವಾದ ಬೀಗಗಳು ಒಂದರ ಹಿಂದ ಕೈ ಮತ್ತೊಂದಕ್ಕ ಹಿಡಿಯುವದಿಲ್ಲಾ

ಹಿತ್ತಾಳೀ ಬೀಗಗಳು

ಸೈಜು —೧, ರೂ ೦ ೧೦ ೦, ೧ ೦ ೧೫ ೦, ೧|, ೦ ೨-೦, ೨, ೦-೬ ೦ ೨|, ೦ ೨೬ ೦

ಕಬ್ಬಿಣದ ಬೀಗಗಳು

ಎರಡು ಲೀವರು -೨, ೦ ೧೩ ೦, ೨| ೧ ೦ ೦, ೪| ೧ ೩ ೦
ನಾಲ್ಕು ಲೀವರು -೧, ೦ ೧೨ ೦, ೧| ೦-೧೨ ೦, ೧||, ೦-೧೩-೦, ೧|||, ೦ ೧೫ ೦, ೨, ೧-೨ ೦, ೨||, ೧-೪-೦, ೨|||, ೧-೬-೦, ೩, ೧ ೯-೦
ಆರುಲೀವರು -೧||, ೧ ೦ ೦, ೨, ೧ ೮ ೦, ೨||, ೧ ೧೪-೦

ಅಮೇರಿಕನ್ ಸ್ಪಿಂಗ್ ಬೀಗಗಳು

೧ಕ್ಕೆ ೦-೫ ೦, ೦-೮-೦, ೦-೧೨-೦, ೧ ೦-೦ ಡಿಟೋ ಮಿಲ್ಲರ್ ಬೀಗ ೧ಕ್ಕೆ ೦ ೫ ೦, ೦ ೬ ೦, ೦ ೯-೦

ಟ್ರಂಕು ಪ್ಯಾಡಲಾಕ್ ೧ಕ್ಕೆ ೦-೮-೦

ಟ್ರಂಕುಗಳಿಗೆ ಹಾಕುವದಕ್ಕೆ ಅನುಕೂಲವಾಗಿ ಕೋಡಿ ಬಗ್ಗಿಸಿರುವ ಬೀಗ ೧ಕ್ಕೆ ೨ ಲೀವರು ೦-೧೨-೦, ೪ ಲೀವರು ೧-೦-೦.

ಒಂದೇಸಲ ೩ ಬೀಗಗಳನ್ನು ವಿ.ಪಿ. ಯಲ್ಲಿ ತರಿಸಿಕೊಳ್ಳುವವರಿಗೆ ಟಪಾಲು ಹಾಸಲು ಇಲ್ಲದೇ ಕಳುಹಿಸಲ್ಪಡುತ್ತೆ.

ಹೆಚ್. ಎನ್. ರಾವ್ ಬ್ರದರ್ಸ್.
ಚಿಕ್ಕಪೇಟೆ. ಬೆಂಗಳೂರು ಸಿಟಿ.

ನೋಟೀಸು.

ನಮ್ಮ ಸ್ವಂತ ಕೈಗಾರಿಕೆಯಲ್ಲಿ ತಯಾರು ಮಾಡಲ್ಪಟ್ಟ ಹಸರೂ ಬ್ಲೂ ಅಂಬೂರ ಹೆಗಲ್‌ಬತ್ತಿ ಸವರನ್ ಬಣ್ಣಾ ವಗೈರೆ ನಮೂನೆ ಬಣ್ಣಗಳ ಕಲಾಬತ್ತು ಬಾವಾ ಅಂಚು ಪಿತಾಂಬ್ರಗಳೂ ೧೬-೧೪ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಡಿಟೊ ರಂಗುಗಳಲ್ಲಿ ಕಲಾಬತ್ತು ಸರಪಣಿ ರುದ್ರಾಕ್ಷಿ ಅಂಚಿನ ಕಲಾಬತ್ತು ಚೌಕಳಿ ಸಾಲಿಂದಿ ವಗೈರೆ ಪಿತಾಂಬರಗಳೂ ಸದರಿ ಜರತಾರದ ಕಣಗಳೂ ೧೬-೧೪ ಮೊಳದ ಕಿರಿಗೆಗಳೂ ಸದರಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಶೀರೆಗಳೂ ೧೬-೧೪ ಮೊಳದ ಕಿರಗೆಗಳೂ ಹೇಟಿ ವಂಗಿಟಾತಿಮುಂಗ ಅಂಗಾರ ಚುಕ್ಕಿ ಕಾಡಿಣ್ಣು ಹೇಟಿ ರುದ್ರಗಂಟಿ ಸಭಾಲಂಕಾರ ವಗೈರೆ ... ವಾರು ಶೀರೆಗಳೂ ಜರತಾರದ ಕಣಗಳೂ ೧೬ ೧೪ ಮೊಳದ ಶೀರೆಗಳೂ ... ಎಲ್ಲಾ ಸಾದರಿಯಲ್ಲಿಯೂ ಸಾದಾ ರುದ್ರಾಕ್ಷಿ ಸರಪಣಿ ಅಂಚಿನ ಶೀರೆಗಳೂ ೧೬ ೧೪ ಮೊಳದ ಕಿರಿಗೆಗಳೂ ಜರತಾರದ ಕಣಗಳೂ ಮೇಲ್ಕಂಡ ಎಲ್ಲಾ ಮಾದರಿಯ ಕುಪ್ಪಸದ ಕಣಗಳೂ ಕಲಾಬತ್ತು ಮತ್ತು ರೇಷ್ಮೆ ರುಮಾಲುಗಳೂ ರೇಷ್ಮೆ ದೊಡ್ಡ ವಸ್ತ್ರಗಳೂ ಹ್ಯಾಂಡ್‌ಕರ್ಚೀಫ್‌ಗಳೂ ಹೊಸ ನಮೂನೆ ಎನಾಕ ತೂಪ್ಟಾಟಿ ಬಾವಾ ಅಂಚಿನ ಶೀರೆಗಳೂ ಸಹಾ ಕ್ರಮಮ ಕ್ರಯಕ್ಕೆ ಸಿದ್ಧವಾಗಿರುತ್ತವೆ ಅಲ್ಲದೆ ಕಂಚಿ, ಮದರಾಸು ಕೂಳಂಗೋಡು, ಕುತ್ತಾಲಂ, ಕುಂಬಕೋಣಂ, ಮದುರಾ ಸತಾರಾ, ಪೀರಾಳ್, ಮುಂತಾದ ಸ್ಥಳದಲ್ಲಿ ತಯಾರಾಗುವ ಪೂರಾ ಇಟಿ ಶೀರೆಗಳೂ ಕಣಗಳೂ ಕೊಯಂಬುತ್ತೂರು ಬಿಂಡುಗಲ್ಲು ಈ ಸ್ಥಳಗಳಲ್ಲಿ ತಯಾರಾಗುವ ಕಲಾಬತ್ತು ರುಮಾಲುಗಳೂ ಪೇಟಾಗಳೂ ಕಲರ್ ಪೇಟಾಗಳೂ ದುಪ್ಪಟ್ಟಾಗಳೂ ಶೇಲಂ ತಾತ್ಯೆಂಗಾರ ಪೇಟ ಕಲಾಬತ್ತು ಪಂಚೆಗಳೂ ಕಪ್ಪು ರುದ್ರಾಕ್ಷಿ ಒನಾರಪ್ ಒ ಕ ಮೊಳದ ಪಂಚೆಗಳೂ ದೋತ್ರಗಳೂ ರೇಷ್ಮೆ ಅಂಚಿನ ಶ್ಲಾಘನೀಯವಾದ ಪಂಚೆಗಳೂ ಸಹ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುತ್ತವೆ ಮೇಲ್ಕಂಡ ಎಲ್ಲಾ ಸಾಮಾನುಗಳು ಎಣ್ಣೆ ಗ್ಯಾರಂಟಿಯಾಗಿರುತ್ತೆ ಆರ್ಡರು ಕೊಟ್ಟಲ್ಲಿ ಕೂಡಲೆ ವಿ ಪಿ ದ್ವಾರಾ ಕಳುಹಿಸಲ್ಪಡುತ್ತೆ ಒಂದಾವರ್ತಿ ನಮ್ಮಲ್ಲಿ ಬೇಕಾದ ಜವಳಿಯನ್ನು ತರಿಸಿಕೊಂಡು ಅಜಮಾಯಿಸಿ ಮಾಡಿದಲ್ಲಿ ನಮ್ಮ ಜವಳಿಯ ಶ್ಲಾಘ್ಯವು ವ್ಯಕ್ತಪಡುತ್ತೆ ದಯವಿಟ್ಟು ಬರಿಸುವಿರೆಂದು ಹಾರೈಸುತ್ತಿದ್ದೇವೆ ಮೇಲ್ಕಂಡ ನಮ್ಮ ಸ್ವಂತ ಕೈಗಾರಿಕೆಯ ಜವಳಿಯ ಗೌರವಕ್ಕಾಗಿ ಮೈಸೂರು ಎಗ್ಸಿಬೀಷನ್‌ನಲ್ಲಿಯೂ ನಾಗಪೂರ್ ಎಗ್ಸಿಬೀಷನ್‌ನಲ್ಲಿಯೂ ಬೆಳ್ಳಿ ಮೆಡಲ್‌ಗಳೂ ಮತ್ತು ಸರ್ಟಿಫಿಕೇಟುಗಳೂ ಸಹಾ ಹೊಂದಿ ಇರುತ್ತೇವೆ

ಹೆಚ್ ಸಂಕಪ್ಪಾ ಬಸಪ್ಪಾ,
ಜವಳಿ ವ್ಯಾಪಾರಸ್ಥರು,
ಚಿಕ್ಕಪೇಟೆ,
ಬೆಂಗಳೂರು ಸಿಟಿ.

1.	ವೈದ್ಯಸಾರ ಸಂಗ್ರಹ(ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ; ಈ ಗ್ರಂಥಕ್ಕೆ ನಂಜರಾಜೇ ಅರಸಿನವರೂ ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ).	೩—೦—೦.
2	ಶ್ರೀಶಿವಾನಂದಲಹರಿ ಈ ಗ್ರಂಥಕ್ಕೆ ಪ್ರತಿಪದ ಟೀಕಾ ತಾತ್ಪರ್ಯ.	೦—೬—೦.
3	ಉತ್ತರ ರಾಮಚರಿತ್ರೆ ಕಥೆ ಬಹಳ ಸ್ವಾರಸ್ಯವಾದದ್ದು	೦—೫—೦.
4	ಟೀಕಾ ರಾಘವೇಂದ್ರ ಸ್ತೋತ್ರ	೦—೨—೦.
5	ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ ಸಮಂತ್ರಕ ಉದುತ್ಯ, ಮಹಾಸೌರ, ಆದಿತ್ಯ ಹೃದಯಾದಿ	೦—೨—೦.
6	ಉದಕಶಾಂತಿ ಶುದ್ಧವಾದ ಪುಸ್ತಕ	೦—೨—೦.
7	ವಿಷ್ಣುಸಹಸ್ರನಾಮ ಮೂಲ ಶ್ಲೋಕ ರೂಪ ನಾಮರೂಪ ಕೂಡ ಚಿಕ್ಕ ಸೈಜು	೦—೨—೦.
8	ವಿಷ್ಣುಸಹಸ್ರನಾಮಕ್ಕೆ ಪ್ರತಿಪದ ಟೀಕಾ ತಾತ್ಪರ್ಯ ಉತ್ತಮ ಕಾಗದ ಕಿತ್ತಾನು ಬೈಂಡು	೩—೦—೦.
9	ಕಾಲಾಮೃತ ಒಳ್ಳೇ ಕಾಗದದಲ್ಲಿ ತಪ್ಪಿಲ್ಲದೆ ಟೀಕಾ ತಾತ್ಪರ್ಯ ಸಹಾ ಪ್ರಿಂಟಾಗಿದೆ ಹಸರ್ ಕಾಗದ ೧ನೇ ರಖಂ	೧—೦—೦.
10	ಗ್ಲೇಜು ಕಾಗದ ೨ನೇ ರಖಂ	೦ ೧೨ ೦.
11	ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦ ೨—೦
12	ಬಾಲ ರಾಮಾಯಣ ಟೀಕಾ ತಾತ್ಪರ್ಯ	೦—೨ ೦.
13	ಸ್ವರಸಹಿತವಾದ ನಮಕ ಚಮಕ, ಪುರುಷಸೂಕ್ತ ಶ್ರೀಸೂಕ್ತ ಭೂಸೂಕ್ತ ನಾರಾಯಣೋಪನಿಷತ್ತು	೦—೨—೦.
14	ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦ ೪—೦.
5	ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦—೨—೦.
6	ಕೃಷ್ಣ ಕರ್ಣಾಮೃತ ಮೂಲ	೦—೨—೦.
7	ಯಕ್ಷಗಾನ ಪಂಚಭಾವಾ ಕೃಷ್ಣ ಬಾಲಲೀಲೆ	೦—೪—೦

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು.

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್.
ಚಿಕ್ಕಪೇಟೆ,
ಬೆಂಗಳೂರು

ಗಿಡಗಳು—ಬೀಜಗಳು—ಹಣ್ಣು—ಹುವ್ವು ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು ಶೇಬು, ಕಿತ್ತಾಳಿ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಕೆಟಲಾಗಿಗೆ ಬರದು ತರಿಸಿಕೊಳ್ಳಬಹುದು

ಟಿ. ಎಸ್. ಗಿರಿಯಪ್ಪ ಅಂಡ್ ಸನ್,
ನರ್ಸರಿಮನ್ ಅಂಡ್ ಸೀಡ್ಸ್‌ಮನ್.
... ರಸ್ತೆ,
ಬೆಂಗಳೂರು ಸಿಟಿ.

ವಿನಂತಿ

ಮುಂಬಯಿ ಪಟ್ಟಣದಲ್ಲಿರುವ ಸೇವಾಸದನ, ಪೂಣೆ ಶಹರಿನಲ್ಲಿರುವ ಅನಾಥ ಬಾಲಿಕಾಶ್ರಮ (ವಿಧವಾಗ್ರಹ) ಮತ್ತು ಮಹಿಳಾ ವಿದ್ಯಾಲಯವೆಂಬ ಈ ಮೂರು ಸಂಸ್ಥೆಗಳ ಉದ್ದೇಶವನ್ನು ತಿಳಕೊಳ್ಳಲಪೇಕ್ಷಿಸುವವರೂ, ಈ ಸಂಸ್ಥೆಗಳ ಪ್ರಯೋಜನವನ್ನು ತಮ್ಮ ಹೆಣ್ಣು ಮಕ್ಕಳಿಗೆ ಪ್ರಾಪ್ತವಾಗಬೇಕೆಂತ ಅಪೇಕ್ಷಿಸುವ ಹೆತ್ತವರೂ ಮತ್ತು ಬಡತನದ ಸಂಬಂಧ ತಮ್ಮ ಹೆಣ್ಣು ಮಕ್ಕಳಿಗೆ ವಿವಾಹ ಮಾಡಲಿಕ್ಕೆ ಅನುಕೂಲವಿಲ್ಲದವರೂ ಸಹ ಕೆಳಗೆ ದಸ್ಕತು ಮಾಡಿದವರನ್ನು ಕಂಡು ಪ್ರಸ್ತಾಪಿಸಿದ್ದಲ್ಲಿ ಅಂಥಹ ಮಕ್ಕಳ ಶ್ರೇಯಸ್ಕರ ಪರಿಣಾಮಾರ್ಥ ಅಗತ್ಯವಿರುವ ಅನುಭವವೂ ಸಹಾಯವೂ ಸಂಪಾದಿಸಿಕೊಳ್ಳುವ ಉಪಾಯವನ್ನು ತೋರಿಸಿಕೊಟ್ಟಾರು

ಕುದ್ಮುಲ್ ರಂಗರಾವ್.

ವಿಜ್ಞಾಪನೆ.

ಸ್ವರ್ಗಸ್ಥರಾದ ನಮ್ಮ ದೇಶ ಬಂಧುಗಳಾದ ಸತ್ಪುರುಷ ಮಹಾರಾಜೇಶ್ರೀ ವಕೀಲ ಅಮ್ಮೆಂಬಳ ಸುಬ್ರಾಯ ಪೈಗಳ ಜೀವ ಚರಿತ್ರೆಯನ್ನು ಬರಿಯಬೇಕಾಗಿ ಆಲೋಚಿಸಿರುತ್ತದೆ. ಆದದರಿಂದ ಅವರ ಸ್ನೇಹಿತರಲ್ಲಿಯೂ ಪರಿಚರ್ಯಸ್ಥರಲ್ಲಿಯೂ ಯಾರಿಗಾದರೂ ಅವರ ಚರಿತ್ರೆಯಲ್ಲಿ ಬರಿಯಲಿಕ್ಕೆ ಯೋಗ್ಯವಾದ ಯಾವದೊಂದು ಸಂಗತಿ ತಿಳಿದಿದ್ದರೆ ಅದನ್ನು ದಯಮಾಡಿ ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ಕಳುಹಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ

ಮಂಗಳೂರು ವೆಂಕಟ ರಾವ್
ಹಜೂರ ಶಿರಸ್ತೆದಾರ
ಮಂಗಳೂರು, ದ ಕ

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 20ನೇ ಆಗೋಸ್ತು 1909

ಸ್ವದೇಶಿ ಕಳಕಳ

"ಸ್ವದೇಶಿ"ಯು ಹಿಂದುಸ್ಥಾನದಲ್ಲಿ ಪ್ರತಿಷ್ಠಿತವಾಗಿ ೪ ವರುಷಗಳಾದವು ದಿನದಿಂದ ದಿನಕ್ಕೆ ಈ ಶಿಶುವು ಬೆಳೆದು ಇಷ್ಟು ಕಾಲ ಹೋಗುತ್ತಾ, ಇನ್ನೂ ಪುಷ್ಟಿಯಾದ್ದರಿಂದ ಅಕಾಲ ಮೃತ್ಯುವಿನಿಂದ ತಪ್ಪಿತೆನ್ನ ಬಹುದು ಸ್ವದೇಶಿಯಿಂದ ವೃದ್ಧಿಗೆ ಬಂದ ಕೈಗಾರಿಕೆಗಳ ಪೈಕಿ ಅರಳೆ ಕೈಗಾರಿಕೆಯು ಮೊದಲನೇದು ದೇಶೀಯ ವಸ್ತ್ರಗಳಿಗೆ ಗಿರಾಕಿ ಹೆಚ್ಚಿದಷ್ಟು ವಿಲಾಯತಿ ಗಿರಾಕಿ ತಪ್ಪಿ ಲೆಂಕಶಾಯರ್ ಕಾರ್ಖಾನೆಗಳ ವ್ಯಾಪಾರವು ಶೇಕಡ ೨೦ರಷ್ಟು ತಗ್ಗಿತೆಂದು ಅಲ್ಲಿಯ ವರ್ತಕ ಸಂಘದ ಅಧ್ಯಕ್ಷ ಮಿ ಎಶ್ವರ್ತರ ಅಭಿಪ್ರಾಯವದೆ. ಸ್ವದೇಶಿಯ ಪ್ರಾಬಲ್ಯದಿಂದ ಹಿಂದೂಸ್ಥಾನದಲ್ಲಿ ಸದ್ಯದಲ್ಲಿ ವರುಷಕ್ಕೆ ಒಂದು ಸಾವಿರ ಮಿಲ್ಯ ಯಾರ್ಡು ಬಟ್ಟೆಯ ಪ್ರಕಾರ ತಯ್ಯಾರಾಗುವದೆಂದು ಅದೇ ಗೃಹಸ್ಥರು ಹೇಳುವರು. ಇಷ್ಟೇ ಅಲ್ಲ, ವಿದೇಶಿ ವಸ್ತ್ರಗಳು ಸ್ವದೇಶಿಯೆಂತ ತೋರುವ ಹಾಗೆ ಅವುಗಳ ಮೇಲೆ "ವಂದೆಮಾತರಂ" ಎಂಬ ವಾಕ್ಯವನ್ನು ಛಾಪಿಸ ಬೇಕೆಂದು ಕೆಲವು ವರ್ತಕರು ಲೆಂಕಶಾಯರ್ ಕಾರ್ಖಾನೆಗಳಿಗೆ ಸೂಚಿಸಿದರಂತೆ ಇದರಿಂದ ಸ್ವದೇಶಿಯ ಅಭಿವೃದ್ಧಿಯು ವ್ಯಕ್ತವಾಗುವದು

ಆದರೆ ಸ್ವದೇಶಿಯು ಬಹಿಷ್ಕಾರದ ಬಲದಿಂದ ಮೆರೆಯ ಬೇಕು ನದಿಯ ತಲವನ್ನು ನೆಲ್ಲಕ್ಕೆ ಕೂಡಿಸಿಕೊಳ್ಳ ಬೇಕಾದರೆ ದೊಡ್ಡ ಅಣೆಕಟ್ಟು ಪ್ರವಾಹವನ್ನು ತಡದು ಮಣ್ಣು ತುಂಬಿಕೊಳ್ಳುತ್ತೇವೆ. ಹಾಗೆಯೇ ವಿದೇಶಿ ಸಾಮಾಗ್ರಿಯ ಪ್ರವಾಹದಿಂದ ಸ್ವದೇಶಿಯು ಅಳಸಿ ಹೋಗದಂತೆ ಬಹಿಷ್ಕಾರದ ಕಟ್ಟಹುಣಿ ಬೇಕು.

ಬಹಿಷ್ಕಾರದ ಆಧಾರ ತತ್ವವೇನೆಂದು ವಿಚಾರಿಸುವಾ. ಹಿಂದೂಸ್ಥಾನದ ಕೈಗಾರಿಕೆಗಳ ಚರಿತ್ರವೇ ಇದನ್ನು ವ್ಯಕ್ತಗೊಳಿಸುವದು. ೧೮ನೇ ಶತಮಾನದ ವರೆಗೆ ಹಿಂದೂಸ್ಥಾನದ ವಸ್ತ್ರಗಳು [illegible] ವಿಲಾಯತಿಗೆ [illegible] [illegible] ಅಲ್ಲಿಯ [illegible] ವಸ್ತ್ರಗಳು ಅಲ್ಲಿಯವುಗಳಿಗಿಂತ [illegible]

೭೦ರಷ್ಟು ಕಮ್ಮಿ ದರದಲ್ಲಿ ಮಾರಲಾಗುತ್ತಿತ್ತು. ಹಿಂದೂಸ್ಥಾನದ ಈ ವ್ಯಾಪಾರದಿಂದ ತಮ್ಮ ದೇಶದ ಕೈಗಾರಿಕೆಗೆ ಹಾನಿಯಾಗುತ್ತದೆಂದು ನೆನಸಿ ಪಾರ್ಲಿಮೆಂಟಿನವರು ಇಲ್ಲಿಂದ ಹೋಗುವ ವಸ್ತ್ರಗಳ ಮೇಲೆ ಶೇಕಡ ೭೦ರಿಂದ ೮೦ರಂತೆ ಸುಂಕ ಹೊರಿಸಿದರು. ಕೆಲವು ಬಣ್ಣಗಳ ಕೆಲಿಕೊ ವಸ್ತ್ರಗಳನ್ನು ಉಪಲೇ ಕೂಡದೆಂದೂ, ಉಟ್ಟರೆ ತಕ್ಷೀರಿಗೊಳಗಾಗುವರೆಂದೂ ವಿಧಿಸಿದರು ಒಬ್ಬ ಸ್ತ್ರೀಗೆ "ಫ್ರೆಂಚ್ ಕ್ಯಾಂಬ್ರಿಕ್" ಕೈವಸ್ತ್ರವನ್ನು ಇಟ್ಟುಕೊಂಡ ಬಗ್ಗೆ ೨೦೦ ಪವನು ಜುರುಮಾನೆಯಾಯಿತು ಈ ಮೂಲಕ ಇಂಡ್ಯಾದ ವ್ಯಾಪಾರ ನಿಂತಿತು ಅಲ್ಲಿಯ ಕೈಗಾರಿಕೆಗೆ ಆಶ್ರಯ ಸಿಕ್ಕಿತು ಇದಲ್ಲದೆ ಕಂಪೆನಿಯ ಸರ್ಕಾರದವರು ಇಲ್ಲಿಯ ನೇಯಿಗೆಗಾರರನ್ನು ನಿರ್ಬಂಧಿಸಿ ಒಣ್ಣದ ವಸ್ತ್ರಗಳ ಒಳಹನ್ನು ಅರಿತು, ಅದನ್ನು ವಿಲಾಯತಿಯ ನೇಯಿಗಾರರ ಒಗ್ಗೆ ಪ್ರಕಟಿಸಿದರು ಇಲ್ಲಿಗೆ ವಿಲಾಯತಿಯಿಂದ ಬರುವ ವ್ಯಾಪಾರದ ಮೇಲೆ ಸುಂಕವಿಡಲಿಲ್ಲ ಇದರ ಪರಿಣಾಮವು ಬೇಗನೆ ಕಂಡುಬಂತು ೧೮೧೩ರಲ್ಲಿ ಹಿಂದೂಸ್ಥಾನದಿಂದ ೨ಮಿಲಿಯ ಪವನು ಕ್ರಯದ ವಸ್ತ್ರ ವಿಲಾಯತಿಗೆ ಹೋಗಿತ್ತು ಮೇಲ್ಕಂಡ ಕಾನೂನುಗಳ ದೆಶೆಯಿಂದ ಈ ವ್ಯಾಪಾರವು ಕ್ಷಯಿಸಿ ೧೮೩೦ರಲ್ಲಿ ಇಂಡ್ಯಾಕ್ಕೇನೆ ೨ ಮಿಲಿಯ ಪವನು ಕ್ರಯದ ಸಾಮುಗ್ರಿ ವಿಲಾಯತಿಯಿಂದ ಆಮದಾಯಿತು ಈಗ ನಾವು ಹೆಚ್ಚು ಕಡಿಮೆ ೨೨೦೦ ಮಿಲಿಯ ಯಾರ್ಡು ಆಮದು ಮಾಡುತ್ತೇವೆ ಹತ್ತಿಕೈಗಾರಿಕೆಯು ವಿಶೇಷ ಲಾಭಕರವಾಗಿದೆ. ಇದರಿಂದ ಇಂಗ್ಲಿಷ ಒನಾಂಗದ ೫ ಪಾಲು ಜನರ ಉದರ ಪೋಷಣವಾಗುವದಲ್ಲದೆ ಸರಕಾರದ ಕಂದಾಯದ ೧ ಅಂಶವು ಅಂದರೆ ವರುಷಂಪ್ರತಿ ೧೨ ಮಿಲಿಯ ಪವನುಗಳಿಗೆ ಜಾಸ್ತಿಯಾದ ಕಂದಾಯವು ಇಂಗ್ಲೀಷರ ಖಜಾನೆಗೆ ಸಲ್ಲುತ್ತದೆ ಯಾವ ಸರಕಾರವಾದರೂ ತಮ್ಮ ದೇಶದಲ್ಲಿ ಒಂದು ಕೈಗಾರಿಕೆಯು ಪರದೇಶದ ಮೇಲಾಟದಿಂದ ಹಾಳಾಗದೆ ವೃದ್ಧಿಯಾಗ ಬೇಕೆಂದು ತೋರಿದರೆ ಅನ್ಯ ದೇಶದ ವ್ಯಾಪಾರದ ಮೇಲೆ ಸುಂಕವಿಡುವರು. ಸ್ವದೇಶೀಯ ವ್ಯಾಪಾರಿಗಳಿಗೆ ದ್ರವ್ಯ ಸಹಾಯ ಮೊದಲಾದ ಉತ್ತೇಜನ ಕೊಡುವರು. ಅಂತಹ ಸುಂಕ ಅಥವಾ ಇತರ ಉತ್ತೇಜನಗಳ ಮೂಲಕ ಊರ್ಜಿತಬರಲು ಸಾಧ್ಯವಾದ ಕೈಗಾರಿಕೆಗಳೇ ಆತರದ ಆದರಣೆಗೆ ಯೋಗ್ಯವಾದವು ನಮ್ಮ ವಸ್ತ್ರದ ಕೈಗಾರಿಕೆಯು ನಿಜವಾಗಿಯೂ ಈ ವರ್ಗಕ್ಕೆ ಸೇರಿದೆ

ಆದರೆ ಸರಕಾರದವರು ವಿಲಾಯತಿ ಬಟ್ಟೆಗಳ ಮೇಲೆ ಸುಂಕವಿಡುವದಿರಲಿ, ಸ್ವದೇಶಿ ನೇಯಿಗೆಗೆ ಪ್ರತಿಕೂಲವಾದ "ಎಕ್ಸೈಜ್" ಸುಂಕವನ್ನು ತೆಗದುಹಾಕ ಸಮ್ಮತಿಸುವದಿಲ್ಲ ಆದ್ದರಿಂದ ರಾಜ ಶಾಸನದಿಂದ ವಿದೇಶಿ ವಸ್ತ್ರಕ್ಕೆ ಬಹಿಷ್ಕಾರವಿಡ ಸಾಧ್ಯವಿಲ್ಲವಾಯಿತು ಜನರು ಆತ್ಮ ಸಂತೋಷದಿಂದ ಸ್ವದೇಶಿ ವ್ರತವನ್ನು ಕೈಕೊಳ್ಳುವದು ಇದಕ್ಕ ಪ್ರತಿಕ್ರಿಯೆಯೆಂದು ಬಂಗಾಳಿಗಳು ಸ್ವದೇಶಿ ವ ಬಹಿಷ್ಕಾರದ ಉಜ್ಜೆಗಳನ್ನು ವರುಷಂಪ್ರತಿ ಆಗೋಸ್ತು ೭ನೇಗೆ ಇಟ್ಟುಕೊಳ್ಳುವರು ಈ ರೀತಿ ಸ್ವದೇಶದ ಔದ್ಯೋಗಿಕ ಪುನರುಜ್ಜೀವನಾರ್ಥ ಆಚರಿಸುವ ಬಹಿಷ್ಕಾರವು ನಿರಾಕ್ಷೇಪಕರ ಇದನ್ನು ಇಕೊನೊಮಿಕ್ ಬೊಯ್‌ಕೊಟ್ (Economic boycote) ಅಥವಾ ಸಾಂಪತ್ತಿಕ ಬಹಿಷ್ಕಾರವೆನ್ನುವರು

ಇನ್ನೊಂದು ರಾಜಕೀಯ ಬಹಿಷ್ಕಾರವೆಂದರೆ ಕರ್ಜನ್ ಪ್ರಭುಗಳು ವಂಗಭಂಗವನ್ನು ವಿಧಿಸಿದರು ಈ ನಿರ್ಣಯವು ಮಂಜೂರಾಗುವ ಮೊದಲು ಬಂಗಾಳಿಗಳು ತಮ್ಮ ಶೀಮೆಯನ್ನು ವಿಭಾಗಿಸ ಬಾರದೆಂದು ಬಹು ವಿಧದಲ್ಲಿ ಪ್ರಾರ್ಥಿಸಿದರು, ಸಾವಿರಾರು ಸಭೆಗಳು ಕೂಡಿ ಆಕ್ಷೇಪಿಸಿದರು, ಲೆ ಗವರ್ನರವರಿಗೂ ಗವರ್ನರ್ ಜನರಲ್‌ರವರಿಗೂ ಸ್ಟೇಟ್ ಸೆಕ್ರೆಟರಿಗಳಿಗೂ ಮನವಿ ಮಾಡಿದರು, ಪಾರ್ಲಿಮೆಂಟಿಗೆ ೪೦,೦೦೦ಕ್ಕೆ ಮಿಕ್ಕಿದ ಜನರು ಕೂಡಿ ಅರ್ಜಿ ಮಾಡಿಕೊಂಡರು ಇಷ್ಟೆಲ್ಲವೂ ವ್ಯರ್ಥವಾಯಿತು ಈ ಅಕಾಂಡ ಭಂಗದಿಂದ ಉಂಟಾದ ವ್ಯಥೆಯಲ್ಲಿ ಬಂಗಾಳಿಗಳಿಗೆ ಒಂದು ಮಾರ್ಗ ಸೂಚಿಸಿತು. ವಿಲಾಯತಿಯ ಸಾಮಾನ್ಯ ಪ್ರಜಾವರ್ಗಗಳನ್ನು ಎಬ್ಬಿಸಿದರೆ ಕೃತಾರ್ಥರಾಗ ಬಹುದೆಂದೆಣಿಸಿದರು ಅವರ ಕೈಗಾರಿಕೆಗೆ ವಿಘ್ನ ಬಂದರೆ ಕಣ್ಣು ತೆರೆಯುವರು ಇದಕ್ಕನುಸಾರವಾಗಿ ಅವರ ವಸ್ತ್ರ ವಗೈರೆಗಳನ್ನು ಕೊಂಡುಕೊಳ್ಳ ಬಾರದೆಂದು ಆಣೆ ಇಟ್ಟುಕೊಂಡರು ಆದಕಾರಣ ಬಹಿಷ್ಕಾರಕ್ಕೆ ರಾಜಕೀಯ ಕಳೆ ಕೂಡಿತು. ಆದರೂ ಈ ಬಹಿಷ್ಕಾರದ ಉದ್ದಿಶ್ಯವು ಇಂಗ್ಲಿಷ ಜನರನ್ನು ಜಾಗರಿಸಬೇಕೆಂದಲ್ಲದೆ ಸರಕಾರಕ್ಕೆ ಪ್ರತಿಕೂಲವಾಗಿ ವರ್ತಿಸ ಬೇಕೆಂದಲ್ಲ ಯಾಕಂದರೆ ಬಹಿಷ್ಕಾರ ವರ್ಧಂತಿ ಉತ್ಸವದ ಅಧ್ಯಕ್ಷ ಬಾಬು ಉಪೇಂದ್ರನಾಥ ಬೋಸರು ಹೇಳಿದಂತೆ ಬ್ರಿಟಿಷ್ ಸರಕಾರವು ಇಂಡ್ಯಾ ದೇಶದ ಉತ್ಕರ್ಷಗಾಗಿ ಪರಮೇಶ್ವರನ ಆಜ್ಞಾನುಸಾರ ಸ್ಥಾಪಿತವಾಗಿದೆ. ನಮಗೆ ಈಗ ಎಷ್ಟು ಸಂಕಷ್ಟಗಳಿದ್ದರೂ ನಮ್ಮ ಉತ್ತರೋತ್ತರ ಅಭಿವೃದ್ಧಿಗೆ ಇದೇ ಸರಕಾರವು ಆವಶ್ಯಕ ಈ ದೇಶದ ವಿವಿಧ ಜಾತಿ ಮತಾವಲಂಬಿಗಳನ್ನು ಪಕ್ಷಪಾತವಿಲ್ಲದೆ ನಡೆಸುವ ನಮ್ಮ ಸಮಾಜಿಕ, ಧಾರ್ಮಿಕ, ವಿದ್ಯಾಭಿವೃದ್ಧಿಗಳಿಗೆ ಅಡ್ಡಿ ಬಾರದ, ನಾವು ಭಾರತೀಯ ಜನಾಂಗವಾಗಿ ಏಕೀಭವಿಸುವ ನಮ್ಮ ಕಲ್ಪನೆಗೆ ಆಶ್ರಯ ಕೊಟ್ಟು ಆ ಕಲ್ಪನೆಯನ್ನು ಹಸ್ತಗತ ಮಾಡಲು ಎಡೆಗೊಡುವ ಸರಕಾರವು ಇದೊಂದೇ.

ಹೀಗಿರುತ್ತಾ ಹಿಂದೂಸ್ಥಾನದಲ್ಲಿ ಮುಖ್ಯವಾಗಿ ಬಂಗಾಳದಲ್ಲಿ ಅಸಂತುಷ್ಟಿಯು ವ್ಯಾಪಿಸಲಿಕ್ಕೆ ಕಾರಣವೇನು? ಕರ್ಜನ್ ಪ್ರಭುಗಳ [illegible] [illegible]

ಜುಲುಮ್, ರಾಜಕೀಯ ಖಟ್ಲೆಗಳು, ಮಾನ್ಯರ ಮೇಲೆ ಮಾಡಿದ ಆರೋಪಣೆಗಳು, ಗಡಿಪಾರು ಕಾನೂನಿನ ಜ್ಯಾರಿಗಳಿಂದ ಈ ಅಸಂತುಷ್ಟಿಯು ಬೆಳೆಯಿತು. ಹೀಗೆ ವ್ಯಾಪಿತರಾದ ಬಂಗಾಳಿ ಜನರಿಗೆ ಮೋರ್ಲೆ ಪ್ರಭುಗಳ ಹೊಸ ಏರ್ಪಾಡುಗಳಿಂದ ಸಹಾ ಉಲ್ಲಾಸವಾಗಲಿಲ್ಲ.

ಇವರನ್ನು ಪ್ರೀತಿಪಾಶದಿಂದಲೇ ಚಕ್ರವರ್ತಿಯ ಸಿಂಹಾಸನಕ್ಕೆ ಕಟ್ಟಬೇಕು. ವಂಗಭಂಗವನ್ನು ವಜಾ ಮಾಡಿದರೆ ಪೂರ್ವದಂತೆ ಸಂತುಷ್ಟಿಯಾಗುವದು. ಅದನ್ನು ತಪ್ಪಿಲ್ಲಾದರೂ ಮಾಡಬೇಕೆಂದು ಬಾಬು ಸುರೇಂದ್ರನಾಥ ಬ್ಯಾನರ್ಜಿಗಳು ಪ್ರಾರ್ಥಿಸುವರು. ಕೊಲೊನ್ಯಾಜೇಶನ್ ಆಕ್ಟ್ ನಿಮಿತ್ತ ಪಂಜಾಬದಲ್ಲಿ ಮನಸ್ತಾಪ ಹಬ್ಬಿತು. ಅದನ್ನು ನಜಾ ಮಾಡಿದೊಡನೆ ಪಂಜಾಬವು ಸುಮ್ಮನಾಯಿತು. ಸರಕಾರದ ಕೀರ್ತಿ ಕುಂದಿತೇ? ಹಾಗೆಯೇ ವಂಗಭಂಗದ ಕೃತ್ಯವನ್ನು ಪುನರಾಲೋಚಿಸಿದರೆ ಸರಕಾರದ ಯಶಸ್ಸು ಕುಂದದು. ಜನರಲ್ಲಿ ಪ್ರೀತಿ ವಿಶ್ವಾಸಗಳು ಹೆಚ್ಚುವವು.

ಬಾಬು ಉಪೇಂದ್ರನಾಥರು ತಮ್ಮ ಭಾಷಣದಲ್ಲಿ ಎರಡು ಸಂಗತಿಗಳನ್ನು ಸ್ಪಷ್ಟೀಕರಿಸಿದರು. ಬಹಿಷ್ಕಾರ ನಿರ್ಣಯದ ಉದ್ದಿಶ್ಯವು ಸರಕಾರದ ವ ಬ್ರಿಟಿಷ ಜನರ ಲಕ್ಷ್ಯಕ್ಕೆ ವಂಗಭಂಗದ ಸಂಕಷ್ಟವನ್ನು ತರುವದಲ್ಲದೆ ಸರಕಾರವನ್ನು ತೊಲಗಿಸಲ್ಲುವದಲ್ಲವೆಂದು ಹೇಳಿದರು. ವಿಪರೀತ ಪಕ್ಷದಲ್ಲಿ ಕೆಲವರು ಬಹಿಷ್ಕಾರವನ್ನು ವಿದೇಶಿ ಸಾಮಾಗ್ರಿಗಳಿಗೆ ಮಾತ್ರವಲ್ಲ, ಎಲ್ಲಾ ಸರಕಾರಿ ಇಲಾಖೆಗಳ ಮೇಲೆಯೂ ಇಡಬೇಕು; ಸರಕಾರಿ ನ್ಯಾಯಸ್ಥಾನಗಳಿಗೆ ಹೋಗಬಾರದು, ಸರಕಾರಿ ಹುದ್ದೆಗಳನ್ನು ತ್ಯಜಿಸಬೇಕು, ವಿದ್ಯಾಖಾತೆಗೆ ಅಧೀನವಾದ ಶಾಲೆಗಳ್ನು ಬಿಡಬೇಕು ಎಂದು ಮುಂತಾಗಿ ವಾದಿಸುತ್ತಾರೆ. ಇದು ಸಾಧ್ಯವೂ ಅಲ್ಲ ದೇಶಕ್ಕೆ ಹಿತಕರವೂ ಅಲ್ಲ ಎಂದು ಬೋಸರು ಅಪ್ಪಣೆ ಕೊಡಿಸಿದರು.

ಉಪೇಂದ್ರನಾಥ ಬಾಬುಗಳು ದೃಢವಾಗಿ ಹೇಳಿದ ಇನ್ನೊಂದು ಸಂಗತಿಯು ತಮ್ಮ ಆದರ್ಶವು ಆಶ್ರಿತ ಸ್ವರಾಜ್ಯ ಇಲ್ಲದೆ ಸ್ವತಂತ್ರ ಇಲ್ಲವೆಂಬ ... ಸಂಗತಿಯು. ಬೋಯರರು ದಕ್ಷಿಣ ಆಫ್ರಿಕದಲ್ಲಿ ಬ್ರಿಟಿಷರ ಬಳಿಗೆ ಸ್ವರಾಜ್ಯವನ್ನು ಪಡೆದು ತೃಪ್ತರಾಗಿದ್ದಾರೆ. ಉತ್ತರ ಅಮೇರಿಕದ ಕೆನಡಾ ದೇಶದ ಫ್ರೆಂಚರು ಅದೇ ತರದ ಸ್ವರಾಜ್ಯಕ್ಕೆ ಒಪ್ಪಿರುವರು. ಆ ಪದವಿಗೆ ನಾವೂ ಬಂದರೆ ಕೃತಾರ್ಥರಾಗುವೆವು ಎಂದು ಬೋಸರ ಅಭಿಮತ. ಇದಕ್ಕೆ ತಾರತಮ್ಯ ವಿವೇಕವುಳ್ಳವರು ಒಪ್ಪುವರು. ಅಧ್ಯಕ್ಷರು ಹೇಳಿದಂತೆ ಈ ಎರಡು ವಿಷಯಗಳನ್ನು ... ಸರಕಾರಕ್ಕೆ ... ಮನೋರಥವು ಖಂಡಿತ ತಿಳಿದು ... ಮುಂದಿನ ಗುರಿಯು ಇಂತಹದೇ ಎಂದು ತಿಳಿದು ... ಸಲಾಗುವದು.

ಈ ಮನೋರಥವನ್ನು ಸಿದ್ಧಿಸುವದೇ ... ತೋರಿದ ಉಪಾಯಗಳನ್ನು ಇಲ್ಲಿ ಸಂಗ್ರಹಿಸುವದು ಅವಶ್ಯಕ. ... ವಿಕಾಸದಿಂದಲೂ ಸಂಸ್ಕಾರ ಹೊಂದಿರಿ. ಕಲಾಶಾಸ್ತ್ರ ಕೈಗಾರಿಕೆಗಳ ಉತ್ಕರ್ಷಕ್ಕೆ ಮನಸ್ಸು ಕೊಡಿರಿ. ಸಾಮಾಜಿಕ ಅರಿಷ್ಟಗಳನ್ನು ಕಳೆದು ಬಿಡಿರಿ. ಪತಿತರನ್ನು ಉದ್ಧರಿಸಿರಿ. ... ಖಲೆಯನ್ನು ಮುರಿಯಿರಿ. ಕಷ್ಟಗಳ ... ಸಹಿಸಿರಿ. ... ಔದಾರ್ಯ ತೋರಿರಿ. ಆಗ್ಯೆ ವಿನವು ರಾಷ್ಟ್ರವನ್ನು ... ರಾಷ್ಟ್ರೀಯ ಸ್ವಾತಂತ್ರ್ಯಗಳು ಪ್ರತೀಕ ದೊರೆಯುವವು. ... ತಿಯಲ್ಲ, ಅಪದೆಶೆಯೇ ಪ್ರಾಪ್ತವಾಗುವದು. ನಮ್ಮ ... ಜನವನ್ನು ಧರ್ಮ, ಸತ್ಯವೆಂಬ ಒಂದೆಯ ಮೇಲೆ ಕಟ್ಟಬೇಕು.

ಮದ್ರಾಸು ಸಂಸ್ಥಾನದ ಭೂಕಂದಾಯದ ವರದಿ

೧೯೦೮ನೇಯ ಜೂನ್ ತಿಂಗಳ ೩೦ಕ್ಕೆ ಅಂತ್ಯವಾಗುವ ವರುಷದ ಭೂಕಂದಾಯದ ವರದಿಯು ಇತ್ತಲಾಗೆ ಸರಕಾರದವರಿಂದ ಪ್ರಕಟಿಸಲ್ಪಟ್ಟಿರುವುದು. ೧೯೦೭ನೇ ಫಸ್ಲಿಯ ಈ ವರದಿಯು ಪ್ರಕಟಿಸುವದೆ ಇಷ್ಟು ವಿಳಂಬವಾದ ವಿಷಯಕ್ಕೆ ಸರಕಾರದವರು ತಕ್ಕ ಗಮನಕೊಡಬೇಕಾಗಿದೆ. ಸಂಸ್ಥಾನದ ಹಲವು ಕಡೆಗಳಲ್ಲಿ ತಕ್ಕದಾದ ಮಳೆಯಾಗದೆ ಸಾಗುವಳಿಗೆ ನೀರಾಶ್ರಯವು ಬಹಳ ಕಮ್ಮಿಯಾಗಿ ಬೆಳೆಯ ಸ್ಥಿತಿಯು ತೃಪ್ತಿಕರವಾಗಿರಲಿಲ್ಲ. ಐದು ಯಾ ಆರು ಜಿಲ್ಲೆಗಳ ಹೊರತು ಬಾಕಿ ಎಲ್ಲಾ ಕಡೆಗಳಲ್ಲಿಯೂ ಸರಾಸರಿ ಮೇಲೆ ಬೀಳುವ ಮಳೆಯ ಪ್ರಮಾಣಾಯಿಕ್ಕಿಂತಲೂ ಮಳೆಯಾದದ್ದು ಕಡಿಮೆಯಾಗಿರುವುದು. ಗಂಜಾಮಿನ ಕೆಲವು ಕಡೆಗಳಲ್ಲಿ ಬರಗಾಲದ ನಿಮಿತ್ತ ಸಂಸ್ಥಾನದ ಸರಕಾರದ ಕಡೆಯಿಂದ ಪ್ರಜೆಗಳು ಕ್ಷಾಮನಿವಾರಣೆಯನ್ನು ಹೊಂದುತ್ತಲಿದ್ದರು. ಹೀಗೆ ಸಾಗುವಳಿಗೆ ನೀರಾಶ್ರಯ ಸೌಕರ್ಯವು ಕಮ್ಮಿಯಾಗಿದ್ದರೂ ಈ ಫಸ್ಲಿಯಲ್ಲಿ ರೈತವಾರಿ ಜಮೀನುಗಳಲ್ಲಿ ಕಳೆದ ಫಸ್ಲಿಗಿಂತ ೧೪೦,೦೦೦ ಎಕ್ರೆ ಜಮೀನು ಹೆಚ್ಚಿರುವುದೆಂಬದಾಗಿ ತಿಳಿದುಬರುತ್ತದೆ. ಕಳೆದ ವರುಷ ರೈತವಾರಿ ಜಮೀನಿನಲ್ಲಿ ೧೧೦,೦೦೦ ಎಕ್ರೆಗಳು ಮಾತ್ರ ಹೆಚ್ಚಿದ್ದವು. ಅದೇ ಫಸ್ಲಿಯಲ್ಲಿ ಮಳೆಯು ಸರಾಸರಿ ಮೇಲೆ ತೃಪ್ತಿಕರವಾಗಿದ್ದದರಿಂದ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ರೈತವಾರಿ ಜಮೀನು ಏಕರೀತಿಯಲ್ಲಿ ಹೆಚ್ಚಾಗಿತ್ತು. ೧೯೧೬ನೇ ಫಸ್ಲಿಯಲ್ಲಿ ... ಫಸ್ಲಿಗಿಂತ [illegible] ವಾರಿ ಜಮೀನು ಅಧಿಕವಾಗಿದ್ದರೂ, ಸಾಗುವಳಿ ಮಾಡಿದ ಜಮೀನು ಈ ಫಸ್ಲಿಯಲ್ಲಿ ಸೇಕಡಾ ೮೧ ಆಗಿರುವಾಗ ೧೯೧೬ನೇ ಫಸ್ಲಿಯಲ್ಲಿ ಇದು ಸೇಕಡಾ ೮೩ರಂತೆ ಇತ್ತು. ಮೇಲೆ ಪ್ರಸ್ತಾಪಿಸಿದಂತೆ ಸರಿಯಾಗಿ ಮಳೆಯಾಗದಿದ್ದದ್ದೇ ಇದರ ಕಾರಣವಾಗಿರುವುದು. ಇಡೀ ಸಂಸ್ಥಾನದಲ್ಲಿ ಈ ವರಧಿ ಪ್ರಕಾರ 24⅓ ಮಿಲಿಯ ಎಕ್ರೆಗಳಷ್ಟು ವಿಸ್ತೀರ್ಣವುಳ್ಳ ರೈತವಾರಿ ಜಮೀನು ಇರುವದಾಗಿ ತಿಳುಕೊಳ್ಳುತ್ತೇವೆ. ಭತ್ತ, ನೆಲಕಡಲೆ, ಹರಳೆಣ್ಣೆ ಬೀಜ, ಹತ್ತಿ ಇವುಗಳ ಬೆಳೆಯು ಅಧಿಕವಾಗಿದ್ದು, ಇತರ ದವಸಧಾನ್ಯಗಳ ಪೈರು ಕಡಿಮೆಯಾಗಿತ್ತು. ಒಟ್ಟಾರೆ ಎಲ್ಲಾ ದವಸಧಾನ್ಯಗಳ ಬೆಳೆಯು ನೇಮಪ್ರಕಾರವಾಗುವದಕ್ಕಿಂತ ಕಡಿಮೆಯಾಗಿರುವುದು.

ಸರಕಾರಕ್ಕೆ ಭೂಕಂದಾಯ ವಸೆಸ್ಸುಗಳಿಂದ ೬.೨೭ ಕೋಟಿ ರೂಪಾಯಿ ದೊರಕಿರುವುದು. ಕಳೆದ ಫಸ್ಲಿಯಲ್ಲಿ ಇದು ೬.೧೮ ಆಗಿತ್ತು. ಇದರಲ್ಲಿ ರೈತವಾರಿ ಜಮೀನುಗಳ ತೆರಿಗೆಯು ರೂ. ೪೯೦.೬ ಲಕ್ಷವಾಗಿತ್ತು. ಅಂದರೆ ಕಳೆದ ಫಸ್ಲಿಗಿಂತ ಈ ಫಸ್ಲಿಯಲ್ಲಿ 1½ ಲಕ್ಷ ರೂಪಾಯಿಯಷ್ಟು ತೆರಿಗೆಯು ಹೆಚ್ಚಾಗಿ ದೊರಕಿರುವುದು. ರೈತವಾರಿ ವರ್ಗಗಳು ಹೆಚ್ಚಿರುವುದರಿಂದಲೂ ಕಡಪಾ ಜಿಲೆಯಲ್ಲಿ ಪುನಃ ಏರ್ಪಡಿಸಲ್ಪಟ್ಟ ಸೆಟ್ಲ್‌ಮೆಂಟು ದರಗಳಿಂದಲೂ ಈ ತೆರಿಗೆಯು ಹೆಚ್ಚಾಗಿರಬಹುದು. ನೆರೆಗಳಿಂದಲೂ ನೀರಿಲ್ಲದೆಯೂ ಯಾ ಇತರ ಕಾರಣಗಳಿಂದ ಬೆಳೆಯು ಹಾಳಾದ್ದಲ್ಲಿ ಸರಕಾರದವರು ತೆರಿಗೆಗಳನ್ನು ಯುಕ್ತ ಕಂಡ ರೀತಿಯಲ್ಲಿ ಮಾಫು ಬಿಟ್ಟಿರುವರು.

ಸಾಗುವಳಿಗೆ ಆಕ್ಷೇಪವಿಲ್ಲದ ಪರಂಭೋಗು ಸ್ಥಳಗಳಲ್ಲಿ ಸಾಗುವಳಿಯು ವಿಸ್ತೀರ್ಣದಲ್ಲಿ ೩೦,೩೧೭ ಎಕ್ರೆಗಳಷ್ಟು ಏರಿರುವುದು. ಆಕ್ಷೇಪಕರವಲ್ಲದ ಪರಂಭೋಗು ಸ್ಥಳಗಳನ್ನು ತೀರ್ವೆ ವಿಧಿಸಿಕೊಡಬೇಕೆಂತ ಪ್ರಜೆಗಳು ಮಾಡಿದ ಮನವಿಗಳಿಗೆ ಶೀಘ್ರದಲ್ಲಿಯೇ ಕಲೆಕ್ಟರರುಗಳು ಅಪ್ಪಣೆಕೊಡಬೇಕಾಗಿ ಸೂಚಿಸಿರುವರು. ಆಕ್ಷೇಪಕರ ಸ್ಥಳಗಳನ್ನು ಅತಿಕ್ರಮಿಸಿ ಅನುಭೋಗಿಸಿದ್ದಲ್ಲಿ ಅಂತಹ ಭೋಗೋಪಿದಾರರ ಮೇಲೆ ಎನ್ಕ್ರೋಚ್‌ಮೆಂಟ್ ಆಕ್ಟಿನ ಕಾನೂನುಗಳನ್ನು ಜಾರಿಗೆ ತಕ್ಕ ರೀತಿಯಲ್ಲಿ ತರಬೇಕೆಂತ ಸಹಾ ಸೂಚಿಸಿರುವರು. ಹೀಗೆ ಅತಿಕ್ರಮ ಅನುಭೋಗಗಳಿಂದ ದಂಡನೆಯಾಗಿ ರೂಪಾಯಿ ೨.೩೪ ಲಕ್ಷ ವಸೂಲಾಗಿರುವುದು. ಈ ಮೊಬಲಗು ೩೦,೦೦೦ ಎಕ್ರೆ ಭೂಮಿಯಿಂದ ದೊರಕಿರುವುದು. ಈ ರೀತಿ ದಂಡನೆಯ ತೀರ್ವೆಯು ಎಕ್ರೆ ಒಂದಕ್ಕೆ ಸರಾಸರಿ ಎಂಟು ರೂಪಾಯಿಗಳ ಮೇರೆಗೆ ವಿಧಿಸಲ್ಪಟ್ಟಂತಾಯಿತು. ಕಳೆದ ಫಸ್ಲಿಯಲ್ಲಿ ಇದು ಎಕ್ರೆಗೆ ೧೦ ರೂಪಾಯಿಗಳಂತೆ ಇತ್ತು. ಗೋದಾವರಿ, ಮಧುರಾ, ತಿರ್ನಲ್ವೆಲ್ಲಿ ಜಿಲ್ಲೆಗಳಲ್ಲಿ ಇದರ ದರವು ರೂ. ೧೦೭, ೮೩ ಮತ್ತು ೬೧ ಈ ಪ್ರಕಾರವಾಗಿರುವುದು. ಗವರ್ನಮೆಂಟಿನವರು ಈ ವಿಪರೀತ ದರಗಳಿಗೆ ತಕ್ಕ ಕಾರಣಗಳನ್ನು ರೆವೆನ್ಯು ಬೋರ್ಡಿನವರಿಂದ ಕೇಳಿರುವರು.

ಸರಕಾರದ ಭೂಕಂದಾಯದ ವಸೂಲಿಯು ಬಹಳ ತೃಪ್ತಿಕರವಾದ ರೀತಿಯಲ್ಲಿ ಆಗುತ್ತಿರುವುದು. ಫಸ್ಲಿಯೊಳಗೆಯೇ ತೀರ್ವೆಯು ಸೇಕಡಾ ೯೮ರಂತೆ ವಸೂಲಾಗಿರುವುದು. ಜಪ್ತಿ ಮೊದಲಾದವುಗಳಿಂದ ತೀರ್ವೆ ವಸೂಲು ಮಾಡುವ ಸಂದರ್ಭಗಳು ಈ ಫಸ್ಲಿಯಲ್ಲಿ ಕಡಿಮೆಯಾಗಿದ್ದವು. ತೀರ್ವೆ ಬಗ್ಗೆ ಸರಕಾರದವರಿಂದ ಮಾಡಲ್ಪಟ್ಟ ಆಸ್ತಿಗಳ ಹರಾಜುಗಳ ಸಂಖ್ಯೆಯು ಸಹಾ ಬಹಳ ತಗ್ಗಿರುವುದು. ೧೯೧೬ನೇ ಫಸ್ಲಿಯ ವರಧಿಯಲ್ಲಿ ರೆವಿನ್ಯು ರಿಜಿಸ್ತ್ರಿಗಳಲ್ಲಿ ನಮೂದಿಸಲ್ಪಟ್ಟ 'ಕೇಸು'ಗಳ 'ಪಡಿಚಾ' ವಗೈರೆಗಳು ಬಹಳ ಬಾಕಿ ಬಿದ್ದಿರುವುದರಿಂದ ಅವುಗಳ ತನಖಿ ವಗೈರೆಗಳನ್ನು ಡಿವಿಜನಲ್ ಆಫೀಸರರು ಹಳ್ಳಿಗಳಲ್ಲಿ ಖುದ್ದಾಗಿ ಮಾಡಬೇಕಾಗಿ ಸೂಚಿಸಲ್ಪಟ್ಟಿತು. ಈ ಸೂಚನೆಯನ್ನು ಆಯಾ ಜಿಲ್ಲೆಯವರು ಎಷ್ಟರಮಟ್ಟಿಗೆ ಜ್ಯಾರಿಗೆ ತಂದಿರುವರೆಂಬದನ್ನು ತಿಳಿಸಬೇಕೆಂದು ಸರಕಾರದವರು ಈ ವರದಿಯಲ್ಲಿ ಅಪೇಕ್ಷಿಸಿರುವರು.

ಗೋಪೂಜೆ ಅಂದರೆ ನಾಚಿಕೆಪಡುವಿರಾ?

ಗೋಪೂಜೆಯನ್ನು ಮಾಡುತ್ತಿರುವ ಹಿಂದುಗಳ ಮೂಢಭಕ್ತಿಯನ್ನು ಕ್ರೈಸ್ತ ಮಿಶನರಿಗಳೇ ಮೊದಲಾದ ಪಾಶ್ಚಾತ್ಯರು ತುಚ್ಛೀಕರಿಸುತ್ತಿರುವರು. ಆದರೆ ಇತ್ತಲಾಗೆ ಅಮೇರಿಕಾ ಮತ್ತು ಯುರೋಪ್ ಖಂಡಗಳಲ್ಲಿ ಗೋರಕ್ಷಣೆಯನ್ನೂ ಅವುಗಳ ಆರೈಕೆಯನ್ನೂ ಅಲ್ಲಿಯ ಆರೋಗ್ಯ ಶಾಸ್ತ್ರಜ್ಞರಾದ ಪ್ರಖ್ಯಾತ ಪಂಡಿತರ ಅಭಿಪ್ರಾಯಗಳ ಮೇರೆಗೆ ಯಾವ ರೀತಿಯಲ್ಲಿ ನಡಿಸುತ್ತಿರುವರೆಂಬದನ್ನು ವಿಚಾರಿಸಿದ್ದಲ್ಲಿ, ಹಿಂದೂಗಳ ಗೋಪೂಜಾ ವಿಶೇಷತ್ವವು ಪಾಶ್ಚಾತ್ಯ ದೇಶದ ಅನ್ಯಮತಸ್ಥರೆಲ್ಲರಿಗೂ, ತಕ್ಕ ಕಾರಣಗಳಿಲ್ಲದೆ ಪೂರ್ವಾಚಾರ ಪದ್ಧತಿಯನ್ನುಲ್ಲಂಘಿಸಿ ನಡೆಯುವ ಭಾರತೀಯರಲ್ಲಿ ಹಲವರಿಗೂ, ಸಹಾ ವ್ಯಕ್ತವಾಗುವುದು.

ಹಲವು ವರುಷಗಳ ಹಿಂದೆ ಪಾಶ್ಚಾತ್ಯ ದೇಶಗಳಲ್ಲಿ ಆರೋಗ್ಯಕರವಾದ ಹಾಲನ್ನು ದನಗಳಿಂದ ದೊರೆಯಬೇಕಾದರೆ ದಯಾಭಾವದಿಂದಲೂ ಪ್ರೀತಿಯಿಂದಲೂ ಹಸುಗಳನ್ನು ಸಾಕುವದೂ, ಶುಚಿತ್ವದಿಂದ ಅವುಗಳ ಹಾಲನ್ನು ಕರೆಯುವದೂ, ಅತ್ಯವಶ್ಯಕವೆಂಬದನ್ನು ರುಜುಪಡಿಸಿರುವರು. ಹಾಲಿನ ಗುಣವು ಬಹಳ ಮಟ್ಟಿಗೆ ಅವುಗಳ ಪಾಲನೆಯನ್ನನುಸರಿಸುವುದೆಂಬದು ಸಹಾ ಇದರಿಂದಾಗಿ ರುಜುಪಡಿಸಿರುವರು. ಕೆಲವು [illegible]

ಅನಾರೋಗ್ಯಕರವಾಗುವುದೋ ಅದೇ ಮಾದರಿಯಲ್ಲಿ ಹಸುಗಳನ್ನು ತಕ್ಕ ರೀತಿಯಲ್ಲಿ ಪೋಷಿಸದೆ ಹೊಡೆದು ಉಪದ್ರವಿಸಿದರೆ ಅವುಗಳ ಹಾಲೂ ಸಹಾ ಪ್ರಕೃತಿಯಲ್ಲಿ ವ್ಯಾಪಕ ಚಿತ್ತವಾಗಿ ಅನಾರೋಗ್ಯಕರವಾಗುವದೆಂದು ನಿಶ್ಚಯಿಸಿರುವರು. ಯುರೋಪಿನಲ್ಲಿ ಈಗೀಗ ದನಗಳ ಪಾಲನೆಗೆ ಮೂಢ ಭಕ್ತಿಯ ಹಿಂದೂಗಳ ಪೂಜೆಗಿಂತಲೂ ಹೆಚ್ಚಿನ ಗಮನವನ್ನು ಕೊಡುತ್ತಿರುವರು. ಪೇರಿಸಿನ ಪೆಸ್ಟ್ಯೂರ್ ಇನ್ಸಿಟಿಟ್ಯೂಟ್ ಎಂಬ ಮೃಗರೋಗ ಶೋಧನಾಗೃಹದ ಪಂಡಿತರಾದ ಮೆ| ಪ್ರೊಫೆಸ್ಸರ್ ಮೆಚೆಂಕೊಫ್ ಎಂಬವರು, ಚಿಕ್ಕ ಮಕ್ಕಳ ಆರೋಗ್ಯವು ದನದ ಹಾಲಿನ ಶುಚಿತ್ವವನ್ನು ಆಧರಿಸಿಕೊಂಡಿರುವದರಿಂದ ದನಗಳನ್ನು ಯಾವಾಗಲೂ ರೋಗರಹಿತಗಳವುಗಳಾಗಿರಿಸಲಿಕ್ಕೆ ಅವುಗಳ ಹಲ್ಲುಗಳನ್ನು ದಿವಸಕ್ಕೆ ಒಂದೆರಡು ಸರ್ತಿಯಾದರೂ ಉಜ್ಜಿ ಚನ್ನಾಗಿ ಬಾಯಿಯಲ್ಲಿ ನೀರನ್ನು ಅವುಗಳು ಮುಕ್ಕಳಿಸುವಂತೆ ಮಾಡಬೇಕಾಗಿ ಹೇಳಿರುವರು. ಹಸುಗಳಿಗೆ ಹೀಗೆ ತಮ್ಮಷ್ಟಕ್ಕೆನೇ ಬಾಯಿಯಲ್ಲಿ ನೀರು ಮುಕ್ಕಳಿಸುವರೆ ತಿಳಿಯದಿದ್ದಲ್ಲಿ ಅವುಗಳ ದೊಂಡೆಯನ್ನೂ ಬಾಯಿಯನ್ನೂ ದಿವಸಕ್ಕೆ ಒಂದಾವರ್ತಿಯಾದರೂ ತೊಳೆಯುವುದು ಆವಶ್ಯವೆಂತ ಅಭಿಪ್ರಾಯಪಟ್ಟಿರುವರು. ಹತ್ತು ವರುಷಗಳ ಮೊದಲು ಇಂತಹ ಸಿದ್ಧಾಂತಗಳನ್ನು ಯುರೋಪಿಯರು ಕೇಳುತ್ತಿದ್ದರೆ ಇವುಗಳು ಒರಿಯ ಮೂಢತನದ ವಿಚಾರಗಳೆಂದು ನಗುವರಿತ್ತು. ಆದರೆ ಪಾಶ್ಚಾತ್ಯ ದೇಶದವರೇ ಆಗಿದ್ದ ಪಂಡಿತ ಶಿರೋಮಣಿಯೆಂತ ಹೆಸರುವಾಸಿಯಾದ ಮೆ| ಮೆಚೆಂಕೊಫರವರ ಈ ಕಾರಣಯುಕ್ತವಾದ ಪರಿಶೋಧನೆಯು ಸರ್ವಮಾನ್ಯವಾಗಿರುವುದು. ಹಸುಗಳ ಬಾಯಿ, ಹಲ್ಲು ಮತ್ತು ದೊಂಡೆಗಳಲ್ಲಿ ರೋಗರೇಣುಗಳಿಗೆ ಆಶ್ರಯ ದೊರಕುವರೆ ಹೆಚ್ಚಿನ ಅಪ್ಪದವಿರುವುದೆಂತ ಸೂಕ್ಷ್ಮದರ್ಶಕ ಯಂತ್ರಗಳಿಂದ ಕಂಡುಹಿಡಿದು ಈ ಪಂಡಿತ ಶಿಖಾಮಣಿಗಳು ತಮ್ಮ ಈ ನೂತನ ಸಿದ್ಧಾಂತವನ್ನು ಪ್ರತಿಪಾದಿಸಿರುವರು.

ಐರೋಪ್ಯ ದೇಶಗಳಲ್ಲಿ ದನಕರುಗಳ ಪಟ್ಟಿಗಳು ಸಹಾ ಬಹಳ ನಿರ್ಮಲವಾಗಿರುವವು. ಹಟ್ಟಿಯ ನೆಲಕಟ್ಟು ವ ಅಡಿಸ್ಥಳಕ್ಕೆ ಸಿಮೆಂಟಿನ ಮೊರಿಕೆ ಇದ್ದು ನೀರು ಅದರಲ್ಲಿ ಒಂದು ತಟಕಾದರೂ ನಿಲ್ಲದು. ಈ ಒಡಿಸ್ಥಳವನ್ನು ಅದರಲ್ಲಿ ರೋಗ ಕ್ರಿಮಿಗಳು ಯಾವವೂ ನಿಲ್ಲದಂತೆ ದಿವಸಕ್ಕೆ ಎರಡು ಮೂರಾವರ್ತಿ ನೀರಿನಿಂದ ತೊಳೆಯುವರು. ಆಹಾರ ಹಾಕುವ ಗೋದಲಿಯನ್ನು ಸಹಾ ಸಿಮೆಂಟಿನಿಂದಲೇ ತಯ್ಯಾರಿಸಿ, ಅದನ್ನು ಆಗಾಗ್ಯೆ ತೊಳೆಯುವರು. ಅವುಗಳ ಸೆಗಣಿ ಮತ್ತು ತಿಂದುಳಿದ ಆಹಾರವು ಅಲ್ಲಲ್ಲಿಯೇ ಇದ್ದುಕೊಂಡು ಅವುಗಳಿಗೆ ಅನಾರೋಗ್ಯಕರವಾಗದಂತೆ ತಕ್ಕ ಏರ್ಪಾಡು ಮಾಡಿರುತ್ತದೆ. ದನಗಳನ್ನು ದಿವಸಕ್ಕೆ ಮೂರಾವರ್ತಿಯೂ ಹಾಲು ತೆಗೆಯುವ ಗೊಲ್ಲತಿಯು ಅತೀ ಸ್ವಚ್ಛವಾದ ಒಂದು ಬಿಳೀ ಮೇಲ್ಪಟ್ಟೆಯನ್ನು ಹಾಕಿಕೊಂಡು ಹಾಲು ಕರೆಯುವಳು. ಹೀಗೆ ಒಂದು ಸರ್ತಿ ಹಾಕಿದ ಪಟ್ಟಿಗಳನ್ನು ಇನ್ನೊಂದು ಸರ್ತಿ ಧರಿಸದೆ ಅವುಗಳನ್ನು ಕೂಡಲೇ ಮಡಿ ಮಾಡಲಿಕ್ಕೆ ಕೊಡುವರು. ದನವಿನ ಕೆಚ್ಚಲನ್ನು ಹಾಲು ತೆಗಿಯುವ ಮೊದಲು ರೋಗರೇಣುಗಳನ್ನು ನಾಶಪಡಿಸುವ ಔಷಧಿ ನೀರಿನಿಂದ ತೊಳೆಯುವುದಲ್ಲದೆ ಗೊಲ್ಲತಿಯು ಸಹಾ ಇದೇ ನೀರಿನಿಂದ ತನ್ನ ಕೈಗಳನ್ನು ತೊಳೆಕೊಳ್ಳುವಳು. ಆದರೆ ಇತ್ತಲಾಗಿನ ಕ್ಷೀರಾಗಾರಗಳಲ್ಲಿ ಶುದ್ಧ ಮಾಡಲ್ಪಟ್ಟ ರಬ್ಬರಿನ ಕೈಕವಚಗಳನ್ನು ಹಾಲು ಕರೆಯುವಾಗ ಕೈಗಳಿಗೆ ಹಾಕಿಕೊಳ್ಳುವರೆ ಉಪಯೋಗಿಸುತ್ತಿರುವರು. ಹಾಲು ತೆಗಿಯುವ ಪಾತ್ರಗಳೊಳಗೆ ಯಾವ ತರದದ್ದಾಗಲೂ ಆರೋಗ್ಯಕ್ಕೆ ಹಾನಿಕರವಾದ ಕೊಳೆಇಲ್ಲದಂತೆ ತಕ್ಕ ಜಾಗರೂಕತನವಿರುವುದು.

ಆರೋಗ್ಯಕರವೂ ಪುಷ್ಟಿಕರವೂ ಆದ ಹಾಲು ಸರಬರಾಜಿನ ಒಗ್ಗೆ ಮೇಲೆ ಕಾಣಿಸಿದ ರೀತಿಯ ಏರ್ಪಾಟುಗಳು, ಅಮೇರಿಕ ಮತ್ತು ಯುರೋಪ್ ಖಂಡಗಳ ಅನೇಕ ಕಡೆಗಳಲ್ಲಿರುವವು. ಈ ವಿವರವೆಲ್ಲವೂ ಹೀಗೆ ಆಯಾ ಕಡೆಗಳಲ್ಲಿರುವ ಹಟ್ಟಿಗಳದ್ದಾಗಿರುವುದು ವಿನಹಾ ಒರಿಯ ಪುಸ್ತಕಗಳಲ್ಲಿ ಪ್ರಕಟಿಸಿರುವ ವೃತ್ತಾಂತವಲ್ಲವೆಂತ ಅಮೇರಿಕಾ ಖಂಡಕ್ಕೆ ಹೋಗಿ ಇದನ್ನೆಲ್ಲವನ್ನೂ ನೋಡಿರುವ ಸದ್ಗೃಹಸ್ಥರೊಬ್ಬರು ಬರೆದಿರುವರು. ಅತೀ ಶುದ್ಧವಾದ ಹಾಲು ದೊರಕುವಂತೆ ಕೆಲವು ಕಡೆಗಳಲ್ಲಿ ಕೈಯಿಂದ ಮುಟ್ಟದೆ ಯಂತ್ರಗಳಿಂದ ಹಾಲನ್ನು ತೆಗಿಯುತ್ತಿರುವರು.

ಸಭೆಗಳನೇಕ—ಆದರೂ ಬೇಕಾದವನು

ಒಬ್ಬನೇ.

ಜೀವನವು ಕಷ್ಟವಾಗಿದೆ. ಸದ್ಗತಿಜೀವನವು ದುರ್ಲಭವಾಗಿದೆ. ಓದಿದರೆ ಒಬ್ಬ "ಗುಮಾಸ್ತೆ" ಯಾಗಿಯೋ ಅಥವಾ "ವಕೀಲ" ನಾಗಿಯೋ ಹೋಗಬೇಕಾಗಿದೆ. ಎಲ್ಲರೂ ಈ ಮಾರ್ಗದಲ್ಲಿಯೇ ಹೋಗುತ್ತಿರುವರು. ಪೂರ್ವದ ವರ್ಣಾಶ್ರಮಧರ್ಮಗಳನ್ನು ಆಚರಿಸಲು ಈ ಕಾಲದಲ್ಲಿ ಅವಕಾಶವಿಲ್ಲವಾಗಿದೆ. ಆದುದರಿಂದ ಬೇರೆ ಬೇರೆ ಮಾರ್ಗಗಳನ್ನು ಹುಡುಕಿಕೊಳ್ಳುವದಕ್ಕೆ ಸಮಯವು ಒದಗಿದೆ. ಸಕಲ ಜಗತ್ತೂ ದೈವಸೃಷ್ಟಿಯ್ದೇ ಅಲ್ಲವೆ? ಇದರೊಳಗಣ ವ್ಯಾಪಾರಗಳೆಲ್ಲವೂ ದೈವ ಲೀಲೆಯೇ ಅಲ್ಲವೆ? ಈ ಭಾವದಿಂದ ತನ್ನ ಸ್ವರೂಪ ಜ್ಞಾನವನ್ನು ತಿಳಿದು ಒಬ್ಬನು ಲೋಕದಲ್ಲಿ ತನ್ನ ಜೀವನವನ್ನು ಯಾವುದೋ ಒಂದು ಮಾರ್ಗದಲ್ಲಿ ನಡೆಯಿಸಿಕೊಳ್ಳುವುದಕ್ಕೆ ಯಾವ ಆಕ್ಷೇಪಣೆಯಾದರೂ ಏತಕ್ಕೆ ಉಂಟಾದೀತು? ಚೆನ್ನಾಗಿ ಯೋಚಿಸೋಣ. ಇದಕ್ಕೋಸ್ಕರವೇ ಅಲ್ಲವೆ ನಮ್ಮ ದೇಶದಲ್ಲಿ ಈಗ ಅನೇಕ ಜನರು ಸಂಘಗಳನ್ನೇರ್ಪಡಿಸಿಕೊಂಡು ಮಹಾತ್ಮರುಗಳನ್ನು [illegible] ಪ್ರಯತ್ನ ಮಾಡುತ್ತಿರುವುದು? [illegible] ಸಭೆಗಳಲ್ಲಿ [illegible]

[illegible] ಗಿಯೂ, ಒಂದು, ಕೈಗಾರಿಕೆಯನ್ನು ವೃದ್ಧಿಪಡಿಸುವದಕ್ಕಾಗಿಯೂ, ಒಂದು, ನಮ್ಮ ದೇಶದವರಿಗೆ ಮಹಾ ಸರ್ಕಾರದವರಿಂದ ಹೆಚ್ಚು ಸ್ವಾತಂತ್ರ್ಯವನ್ನು ಸಂಪಾದಿಸಿಕೊಡುವದಕ್ಕಾಗಿಯೂ, ಒಂದು, ಸ್ತ್ರೀಯರ ಪುರೋಭಿವೃದ್ಧಿಗಾಗಿಯೂ, ವ್ಯಾಖ್ಯಾನ ಮಾಡಿತು. ಇವೆಲ್ಲವುಗಳಿಗೂ ಆಧಾರಭೂತವಾದ ಬ್ರಹ್ಮವಿದ್ಯಾಸಮಾಜವೂ ಸಹ ಅದ್ಭುತವಾಗಿ ಪ್ರಸಂಗಮಾಡಿತು. ಈ ಸಭೆಗಳಲ್ಲಿ ನಮ್ಮ ದೇಶದ ಸ್ಥೈರ್ಯ, ಗಾಂಭೀರ್ಯಾದಿ ಸದ್ಗುಣಗರಿಷ್ಠರಾದ ಪಂಡಿತೋತ್ತಮರನೇಕರು ಸೇರಿರುವರು. ಈ ಸಭೆಗಳಿಂದ ಕ್ರಮಕ್ರಮವಾಗಿ ದೇಶದಲ್ಲಿ ಅನೇಕ ಅಭಿವೃದ್ಧಿಗಳುಂಟಾಗಿರುವುವು. ಇದರಮೇಲೆ ಆಯಾ ಸಭೆಗಳಲ್ಲಿ ಸೇರಿರುವ ಮಹಾಶಯರುಗಳು ಮತ್ತಷ್ಟು ಹೆಚ್ಚಾಗಿ ಕಷ್ಟಪಟ್ಟು ಲೋಕಸೇವೆ ಮಾಡಬೇಕೆಂದು ಕೋರುತ್ತಿರುವೆವು. ಪ್ರತಿ ಮನುಷ್ಯನೂ ತನ್ನ ಶಕ್ತ್ಯಾನುಸಾರವಾಗಿ ಪಾಟುಪಡದಿದ್ದರೆ ಅಧಿಕ ಪ್ರಯೋಜನವುಂಟಾಗಲಾರದು. ಹೀಗೆ ಜನಗಳು ಪಾಟುಪಡದಿರುವುದರಿಂದಲೇ ಈ ದೇಶದಲ್ಲಿ ಅನೇಕರು ಹೇಗೆ ಜೀವಿಸಬೇಕೆಂಬುದನ್ನೇ ಅರಿಯದೆ ಕಾಲಕಳೆಯುತ್ತಿರುವರು. ಕೆಲವರು ಪುಣ್ಯಕಾರ್ಯಗಳಲ್ಲಿ ಪ್ರವೇಶಿಸಿ ವಿಫಲಮನೋರಥರಾಗಿ ನಿರಾಶೆಯನ್ನು ಹೊಂದಿರುವರು. ಮತ್ತೆ ಕೆಲವರು ತಮ್ಮ ಜೀವನವನ್ನು ಸಾರ್ಥಕವಾಗಿ ನಡೆಯಿಸಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದರೂ ಸ್ನೇಹಿತರಾಗಲಿ, ಪೋಷಕರಾಗಲಿ, ಮೂಲಧನವಾಗಲಿ ಇಲ್ಲದೆ ಕಾರ್ಯಕ್ಕೆ ಪ್ರಯತ್ನಿಸದೆ ಇರುವರು. ಆದರೆ ಕೇವಲ ದರಿದ್ರವಂಶದಲ್ಲಿ ಬೆಳೆದ ಮಕ್ಕಳೇ ಲೋಕಗಳನ್ನು ಪಾಲಿಸುವ ಮಹಾನುಭಾವರಾದರೆಂದು ಅನೇಕ ಚರಿತ್ರೆಗಳಿಂದ ಸ್ಪಷ್ಟವಾಗುತ್ತಿರುವುದು. ಎಷ್ಟು ಆಟಂಕಗಳು ಬಂದರೂ ಚಲಿಸದ ಮನಸ್ಸಿನಿಂದ ಕಾರ್ಯವನ್ನು ಮಾಡಿದರೆ ಜಯವಾಗುವುದೆಂದೂ ಪ್ರತಿಕಾರ್ಯವನ್ನೂ ಶ್ರದ್ಧೆಯಿಂದಲೂ, ಆಸಕ್ತಿಯಿಂದಲೂ ಮಾಡಬೇಕೆಂದೂ ಹಿರಿಯ ಜನಗಳು ಸಾಧನಭೂತಗಳೆಂದೂ, ಯಾವ ಕಾರ್ಯವಾದರೂ ನಿಶ್ಚಯ ದೃಢವಾದ ಮನಸ್ಸಿನಿಂದ ಮಾಡಿದರೆ ಜಯಪ್ರದವಾಗುವುದೆಂದೂ ತಿಳಿಯಬರುತ್ತಿರುವುದು. ಸಭೆಗಳು ಅನೇಕವಾಗಿ ನಡೆದರೂ ಶ್ರದ್ಧೆಯಿಂದ ಕೆಲಸ ಮಾಡುವವರು ಸಾವಿರಕ್ಕೊಬ್ಬರಾದರೂ ಇಲ್ಲವು. ಆದುದರಿಂದಲೇ ಈ ದೇಶದಲ್ಲಿ ಯಾವ ಕೆಲಸಗಳೇ ಆಗಲಿ ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ನಡೆಯುವುದಿಲ್ಲ. ದೇಶದಲ್ಲೆಲ್ಲಾ ನವನಾಗರಿಕ ಘೋಷ ನಡೆಯುತ್ತಿದ್ದರೂ, ಒಂದು ಪಟ್ಟಣದಲ್ಲಾಗಲಿ ಒಂದು ಗ್ರಾಮದಲ್ಲಾಗಲಿ ಒಂದು ಪಾಠಶಾಲೆಯನ್ನಾದರೂ, ಕೈಗಾರಿಕೆಯ ಮಂದಿರವನ್ನಾಗಲೀ ಜನರು ಯಾರಾದರೂ ಸ್ಥಾಪನೆ ಮಾಡುವರೆ? ಈ ವಿಷಯವನ್ನು ವಾಚಕರೇ ವಿಚಾರಿಸಿ ವಿಶದಿಸಬೇಕಾಗಿರುವುದು.

ಮನೆಯ ಸೌಕರ್ಯವು ಗೋಡೆಗಳಾಗಿ ಏರ್ಪಟ್ಟ ಇಟ್ಟಿಗೆಗಳನ್ನನುಸರಿಸಿರುವಂತೆ ದೇಶವು ಪ್ರತಿಮನುಷ್ಯನ ಯೋಗ್ಯತೆಯನ್ನೂ ಅನುಸರಿಸಿಕೊಂಡಿರುವುದು ಆದಕಾರಣ-

ಈಗ ಬೇಕಾಗಿರುವವನು—ಒಂದು ದೊಡ್ಡ ಗುಂಪಿನಲ್ಲಿ ತನ್ನ ಗೌರವವನ್ನು ನಿಸಿಕೊಂಡು, ತನ್ನ ಮನಸ್ಸಿಗೆ ತೋಚಿತದ ಹಾಗೆ ಧೈರ್ಯವಾಗಿ ನಡೆಯುವ ಧೈರ್ಯಶಾಲಿ ಪ್ರಪಂಚವೆಲ್ಲ ಅಲ್ಲವೆಂದರೂ ಅಹುದೆಂದು ಹೇಳಲು ಬಯಸುವಂತಹವನು.

ಈಗ ಬೇಕಾಗಿರುವವನು—ಒಂದು ಮಹತ್ಕಾರ್ಯವನ್ನು ಕೈಗೊಂಡಿದ್ದರೂ ತನ್ನ ಯೌವನದೆಸೆಯಲ್ಲಿ ಒಂದು ಸುಗುಣವನ್ನಾದರೂ ಮರೆಯದೆ, ಸಂಕೋಚಮಾಡದೆ, ಬಚ್ಚಿಟ್ಟುಕೊಳ್ಳುವ ಯತ್ನಮಾಡದೆ ನಡೆಯುವವನು.

ಈಗ ಬೇಕಾಗಿರುವವನು—ಜೀವನಕ್ಕೋಸುಗವೇ ಕೇವಲ ಕಷ್ಟಪಡುವುದು ನಿಕೃಷ್ಟವೆಂದು ಭಾವಿಸುತ್ತಾ ದೊಡ್ಡ ಕಾರ್ಯಗಳಲ್ಲಿ ದೃಷ್ಟಿಯನ್ನಿಡುವವನು.

ಈಗ ಬೇಕಾಗಿರುವವನು—ಸಮನಾಗಿ, ಶಾಂತನಾಗಿ ತನ್ನ ಶಕ್ತಿಯನ್ನು ಕೆಲಸಕ್ಕೆ ಬಾರದಹಾಗೆ ಉಪಯೋಗಿಸುವ ಬುದ್ಧಿಲೋಪವಿಲ್ಲದವನು—ಯಾವವಿಧವಾದ ಹೆದರಿಕೆಯೂ ಇಲ್ಲದವನು.

ಈಗ ಬೇಕಾಗಿರುವವನು—ಒಂದು ವಿಷಯವನ್ನು ಮಾತ್ರವೇ ಗ್ರಹಿಸದೆ ಸಮಸ್ತ ವಿಷಯಗಳನ್ನೂ ಗ್ರಹಿಸಿದವನು. ವಸ್ತು ಸ್ವರೂಪಗಳನ್ನು ಅಸಂಪೂರ್ತಿಯಾಗಿ

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ [illegible]

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು.

ಪ್ರತಿಗಳು ದೊರೆಯುವ ಸ್ಥಳ.

[illegible]

ವಿಚಾರಿಸದೆ ವಿಶೇಷ ಉದಾರಬುದ್ಧಿಯಿಂದ ವಿಚಾರಮಾಡುವವನು. ಓದಿದ ಜ್ಞಾನದೊಂದಿಗೆ ವ್ಯವಹಾರಜ್ಞಾನವನ್ನು ಬೆರಸಿ ವರ್ತಿಸುವವನು. ಧಾಂಧಿಕವು ಪ್ರಯೋಜಕರವಾದುದಲ್ಲವೆಂತಲೂ, ನಿಜವೇ ಶ್ರೇಷ್ಠವಾದುದೆಂತಲೂ, ತನ್ನ ಒಳ್ಳೆಯ ಹೆಸರನ್ನೇ ಅಮೂಲ್ಯಧನವೆಂತಲೂ ಗಣಿಸುವವನು

ಈಗ ಬೇಕಾಗಿರುವವನು—ಕಾಷಾಯವಸ್ತ್ರಧಾರಿಯಾದ ಸನ್ಯಾಸಿಯಂತಲ್ಲದೆ ಅಚಂಚಲವಾದ ಬುದ್ಧಿಯಿಂದ ವಿಷಯವಾಸನೆಗಳನ್ನು ಅಣಗಿಸಿದವನು. ಸಕಲ ಸೌಂದರ್ಯಗಳನ್ನೂ ನೋಡಿ ಆನಂದಿಸುವವನು, ಸಕಲ ನೀಚಕೃತ್ಯಗಳನ್ನು ದ್ವೇಷಿಸುವವನು ತನ್ನಂತೆ ಇತರರಿಗೂ ಮರ್ಯಾದೆಯನ್ನು ಮಾಡತಕ್ಕವನು

ಈಗ ಬೇಕಾಗಿರುವವನು—ಎಲ್ಲಾ ವಿಧವಾದ ವಿದ್ಯೆಗಳನ್ನೂ ಕಲಿತವನು ಓಜಸ್ಸಿನಿಂದ ಕೂಡಿದ ಜ್ಞಾನತಂತುಗಳನ್ನುಳ್ಳವನು ಸಂಸ್ಕರಿಸಲ್ಪಟ್ಟು ತೀವ್ರವಾಗಿ, ಉದಾರವಾಗಿ, ದೀರ್ಘವಾಗಿ ವಿಚಾರಮಾಡುವ ಮೇಧೋಶಕ್ತಿಯುಳ್ಳವನು ಕಾರ್ಯಾಸಕ್ತವಾದ ಕರಗಳನ್ನುಳ್ಳವನು ಎಚ್ಚರಿಕೆಯೂ, ಸೂಕ್ಷ್ಮದೃಷ್ಟಿಯೂ ಉಳ್ಳ ಕಣ್ಣುಗಳನ್ನುಳ್ಳವನು. ಮೃದುವಾದ, ವಿಶಾಲವಾದ, ಗಂಭೀರವಾದ, ಸತ್ಯವಾದ ಹೃದಯವನ್ನುಳ್ಳವನು

ಇಂತಹ ಮಹಾತ್ಮನೊಬ್ಬನು ಬೇಕಾಗಿರುವವನೆಂದು ಈ ಭೂದೇವಿಯು ಕಾದುಕೊಂಡಿರುವಳಂತೆ ಅನೇಕ ಕೋಟಿ ಮನುಷ್ಯರಿದ್ದರೂ ಇಂತಹವರು ಹುಟ್ಟುವುದು ದುರ್ಲಭವಂತೆ. ಆದರೆ ಇಂತಹವರೊಬ್ಬರನ್ನು ಭೂದೇವಿಯು ಶೀಘ್ರದಲ್ಲಿಯೇ ಪಡೆಯುವ ಪ್ರಯತ್ನದಲ್ಲಿರುವಳಂತೆ ಇಂತಹವರಿಗೆ ಯಾವ ಕಾರ್ಯವು ಅಸಾಧ್ಯವಾದೀತು! ನಮ್ಮ ಪೂರ್ವಿಕರು ಗುಣಾಢ್ಯರಂತೆ ಇಂತಹ ಗುಣಗಳನ್ನು ಸಂಪಾದಿಸುವುದು ನಮ್ಮ ಮೊದಲನೆಯ ಕೆಲಸ, ಇದರ ಹಿಂದೆ ಸಕಲೈಶ್ವರ್ಯಗಳೂ ಸಿದ್ಧವಾಗಿರುವುವು

ವಿವೇಕೋದಯ

ಜಪಾನದೇಶದಲ್ಲಿ ತಯಾರಾಗುವ ಕಾಲುಚೀಲ ಮುಂತಾದವುಗಳ ವ್ಯಾಪಾರವು ಇಂಡಿಯಾದೇಶದಲ್ಲಿ ಪ್ರಬಲವಾಗಿದೆ ಇದಕ್ಕೆ ಕಾರಣವೇನೆಂದರೆ ಜಪಾನದೇಶೀಯರು ಈ ಸಾಮಾನುಗಳನ್ನು ತಯಾರು ಮಾಡುವದರಲ್ಲಿ ಹೆಚ್ಚು ಕೌಶಲ್ಯವನ್ನು ತೋರಿಸುತ್ತಿದ್ದಾರೆ ಇವರು ಉಪಯೋಗಿಸುವ ಯಂತ್ರವು ಮತ್ತು ಇವುಗಳಲ್ಲಿ ಕೆಲಸ ಮಾಡುವ ವಿಧಾನವು ಕೇವಲ ಸುಲಭವಾಗಿರುವದರಿಂದ ವಿಶೇಷ ಲಾಭವೇನೂ ಮುಟ್ಟುವದಿಲ್ಲ. ಅಲ್ಲಿ ಕೂಲಿ ಜನರು ಸಹಾ ಸುಲಭವಾಗಿ ದೊರಕುತ್ತಾರೆ ... ಇದಕ್ಕೆ ಇಂಡಿಯಾದೇಶದಲ್ಲಿರುವ ಗಿರಾಕಿಯನ್ನು ಸಹ ಇವರು ಚೆನ್ನಾಗಿ ಹೊಂದಿಟ್ಟು ಮಾಡಿಕೊಂಡಿರುತ್ತಾರೆ ಜಪಾನ ಸರಕಾರದವರು ಇತರ ದೇಶಗಳಲ್ಲಿ ಈ ವ್ಯಾಪಾರವನ್ನು ಯಾವರೀತಿ ಪ್ರಚುರಪಡಿಸಬೇಕೆಂಬುವದನ್ನು ವರ್ತಕ ಜನರುಗಳಿಗೆ ತಿಳಿಸುತ್ತಾರೆ ಜಪಾನದೇಶದಲ್ಲಿ ಈ ವ್ಯಾಪಾರವು ಬಹಳ ಪ್ರಾಶಸ್ತ್ಯವಾಗಿ ಅಭಿವೃದ್ಧಿಗೆ ಬಂದಿರುತ್ತದೆ ೧೯೦೭ನೇ ಸಾಲಿನಲ್ಲಿ ೧೧೦೦೦ ಪೌನ್ ಬಾಳುವ ಸರಕುಗಳು ಇಲ್ಲಿಗೆ ರಫ್ತಾದವು, ೧೯೦೭ ರಲ್ಲಿ ೩೭೬,೦೦೦ ಪೌನ್ ಬಾಳುವ ಸರಕುಗಳು ರಫ್ತಾಗಿರುತ್ತೆ ಈ ಸರಕುಗಳಿಗೆ ಇಂಡಿಯಾದೇಶದಲ್ಲಿ ಗಿರಾಕಿ ಜಾಸ್ತಿ ಈ ಕೈಗಾರಿಕೆಯನ್ನು ಹೆಚ್ಚು ಖರ್ಚಿಲ್ಲದೆ ನಮ್ಮ ದೇಶದಲ್ಲಿಯೂ ಸ್ಥಾಪಿಸಿ ಪ್ರಾಪ್ತವಾಗುವ ಈ ಲಾಭವನ್ನು ನಾವೇ ಉಳಿಸಿಕೊಳ್ಳಬಹುದು

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಹಿಂದೂಸ್ಥಾನದ ಮುಂದಿನ ಸ್ಥಿತಿ

ಅಯ್ಯಾ ಪತ್ರಿಕಾಕರ್ತರೇ,

ತಮ್ಮ ಪತ್ರದಲ್ಲಿ ಕಳೆದ ಸರ್ತಿ ಪ್ರಕಟವಾದ 'ಬರುವ ಕೊಂಗ್ರೆಸು ಸಭೆ' ಎಂಬ ಲೇಖನವನ್ನು ಓದಿನೋಡಿದೆನು ಪ್ರಜಾಮುಖಂಡರಲ್ಲಿ ಭೇದವುಂಟಾಗಿರುವುದೆಂಬುದು ಭಾರತೀಯರ ಶೋಚನೀಯ ಸ್ಥಿತಿಯ ಚಿನ್ಹೆಯಾಗಿರುವುದು ಯಾರ್ಯಾರು ಪ್ರಯತ್ನಿಸಿದರೂ ಈ ಅಂತಃಕಲಹವನ್ನು ಲೋಪಿಸುವುದು ತತ್ಕಾಲಕ್ಕೆ ಸಾಧ್ಯವಲ್ಲವೆಂತ ತೋರಿಬರುವುದು ಕೊಂಗ್ರೆಸು ಸಭೆಯು ಈ ಜೀರ್ಣಸ್ಥಿತಿಯಲ್ಲಿರುವಾಗ ಮೊನ್ನೆ ಅಂಗ್ಲಾಳದಿಂದ ಬಂದ ಬಾಬು ಸುರೇಂದ್ರನಾಥ ಬೆನರ್ಜಿಯವರು ಸಭೆಯು ಒಂದಾವರ್ತಿಯಾದರೂ ಲಂಡನ್ ಪಟ್ಟಣದಲ್ಲಿ ಜರಗಬೇಕೆಂದು ಸೂಚಿಸುತ್ತಿರುವರು ಸುರೇಂದ್ರನಾಥರವರ ಸೂಚನೆ ಯುಕ್ತಿಯುಕ್ತವಾದದ್ದೇ ಆದರೆ ಇತ್ತಂಡದವರ ಐಕ್ಯವನ್ನು ಸಾಧಿಸುವ ಪರಿಯಂತು? ಒಂದೆಡೆಯಲ್ಲಿ ಹೀಗೆ ಪ್ರಜಾಮುಖಂಡರಲ್ಲಿಯ ಈ ವೈಷಮ್ಯವು ಪ್ರಜಾವೃದ್ಧಿಗೆ ತಡೆಯಾಗಿರುತ್ತಾ ಇನ್ನೊಂದು ಕಡೆಯಿಂದ ಹಿಂದೂ ಮುಸಲ್ಮಾನರೆಂಬ ಜಾತಿಭೇದ ಪಿಶಾಚಿಯ ಉಪದ್ರವು ಸಹಾಸಾಶಕ್ಯವಾಗಿರುವುದು ಈ ಸಂದರ್ಭಗಳಲ್ಲಿ ಹಿಂದುಸ್ಥಾನದ ಮುಂದಿನ ಸ್ಥಿತಿಯು ಯಾವ ರೀತಿ ಪರಿಣಮಿಸುವುದು? ವಿಸ್ತೀರ್ಣದಲ್ಲಿ ದೊಡ್ಡದಾದ ಭೂಖಂಡದಷ್ಟೇ ವಿಶಾಲವಾಗಿದ್ದು ಬೇರೆ ಬೇರೆ ಭಾಷೆಗಳನ್ನು ಆಡುತ್ತಿರುವ ಸಾವಿರಾರು ಜಾತಿಭೇದಗಳುಳ್ಳ ನಿವಾಸಿಕರಿರುವ ಈ ಭರತಖಂಡದ ಮುಂದಿನ ಸ್ಥಿತಿಯನ್ನು ಪ್ರವಾದಿಸುವದು ಯಾರಿಗೆ ತಾನೇ ಸಾಧ್ಯ? ... ಭಾಷೆಗಳಿದ್ದರೂ ಐಕ್ಯಕ್ಕೆ ಸಾವಿರಾರು ಅಭ್ಯಂತರಗಳಿದ್ದರೂ ಒಂದು ಭಾವನೆಯು ಎಲ್ಲರಲ್ಲಿಯೂ ತಲೆದೋರಿರುವುದೆಂಬುದು ಎಲ್ಲೆಲ್ಲಿಯೂ ತೋರಿಬರುವುದು. ನಾವೆಲ್ಲರೂ ಏಕೀಭವಿಸದೆ ನಮ್ಮ ಯಾವ ಅಭಿವೃದ್ಧಿಯೂ ಕಷ್ಟಸಾಧ್ಯವೆಂಬದು ಎಲ್ಲರೂ ಕಂಡಿರುವರು ಮುಂದಿನ ಸ್ಥಿತಿಯನ್ನು ಹೀಗೆ ಪ್ರವಾದಿಸುವುದು ನಮ್ಮಿಂದ ಕಷ್ಟಸಾಧ್ಯವಾದರೂ ಅಂಗ್ಲೇಯರಲ್ಲಿ ಹಲವರು ಈ ಸ್ಥಿತಿಯನ್ನು ಯಾವ ರೀತಿಯಲ್ಲಿ ಎದುರು ನೋಡುತ್ತಿರುವರೆಂಬದು ತಿಳಕೊಳ್ಳಲು ಅವಶ್ಯವಾಗಿರುವುದು

ಲಂಡನ್ ಪಟ್ಟದಲ್ಲಿ ಟೈಮ್ಸ್ ಪತ್ರಿಕೆ ಎಂಬದೊಂದು ಭಾರಿ ಪತ್ರವು ಪ್ರಕಟವಾಗುತ್ತಿರುವುದು ಇತ್ತಲಾಗೆ ಭರತಖಂಡದಲ್ಲಿ ಪ್ರಾಪ್ತವಾದ ಅಸಂತುಷ್ಟಿಯ ವರ್ತಮಾನವು ಅಂಗ್ಲಾಳವನ್ನು ಸೇರುತ್ತಿರುವಾಗ ಅದು ದೊಡ್ಡ ಭೀಕರ ಸ್ವಭಾವದ ರಾಕ್ಷಸನ ತೊಡಿಗೆಗಳಿಂದ ತೊಡಿಸಲ್ಪಟ್ಟು ಅಂಗ್ಲೇಯರ ಕೆಲವು ಪತ್ರಗಳಲ್ಲಿ ತೋರಿಕೊಂಡು ಬ್ರಿಟಿಷರೆಲ್ಲರನ್ನು ನಿಷ್ಕಾರಣವಾಗಿ ತಲ್ಲಣಿಸುತ್ತಿರುವುದು ಇದರ ನಿಜತ್ವವನ್ನು ತಿಳಕೊಂಡು ಬರುವರೆ ಟೈಮ್ಸ್ ಪತ್ರಿಕೆ ಕಡೆಯಿಂದ ಮಿ। ಲೊವೆಟ್ ಫ್ರೇಜರರೆಂಬವರು ಹಿಂದೂಸ್ಥಾನಕ್ಕೆ ಒಂದು ಸಾರಿ ತೋಚಿದಂತೆ ಇಲ್ಲಿಯ ವೃತ್ತಾಂತವನ್ನು ತಿಳಕೊಂಡು ಈ ಪತ್ರಿಕೆಗೆ ಹಿಂದೂಸ್ಥಾನದ ಮುಂದಿನ ಸ್ಥಿತಿಯ ವಿಷಯ ಹಲವು ಸೂಚನೆಗಳಿರುವ ಲೇಖನವನ್ನು ಪ್ರಕಟಿಸಿರುವರು ಇಷ್ಟು ವಿಸ್ತಾರವಾದ ಈ ಭರತಖಂಡದಲ್ಲಿ ಸರ್ವ ಸಾಮಾನ್ಯ ವರ್ಗದವರಾದ ನಮ್ಮಂಥವರಲ್ಲಿಗೂ ಇವರ ಬರೋಣವೂ ಇವರ ಲೇಖನವೂ ಏಕಕಾಲದಲ್ಲಿಯೇ ತಿಳಿಯುಂತೆಂದರೆ ಎಷ್ಟು ಸಮಯ ಇವರು ಇಲ್ಲಿ ಇದ್ದುಕೊಂಡು ತಮ್ಮ ಅನುಭವದಿಂದ ಈ ಲೇಖನವನ್ನು ಬರೆದರೆಂಬುದು ವ್ಯಕ್ತವಾಗುವುದು ಸರ್ ವಿಲಿಯಂ ವೆಡರ್ ಬರ್ನರವರ ಅಭಿಪ್ರಾಯದ ಮೇರೆಗೆ ಇವರ ಈ ಲೇಖನವು ಭಾರತೀಯ ಪ್ರಜಾವರ್ಗಕ್ಕೂ ಯಾ ಇವರನ್ನು ಆಳುತ್ತಿರುವ ಸರಕಾರದವರಿಗೂ ಶ್ರೇಯಸ್ಕರವಾಗಿರುವುದಿಲ್ಲ ಕಾಯಿದೆಯರ ರೀತಿಗಳಲ್ಲಿ ರಾಜ್ಯಪರಿಪಾಲನೆಯಲ್ಲಿ ಭಾಗಿಗಳಾಗುವರೆ ಭಾರತೀಯರು ಅಪೇಕ್ಷಿಸುವುದು ನೈಸರ್ಗಿಕವೂ ಕಾರಣ ಯುಕ್ತವಾಗಿರುವುದೂ ಎಂತ ಇವರು ವಾದಿಸಿದರೂ ಇವರು ವ್ಯಕ್ತಪಡಿಸಿದಂಥಾ ಭಾರತೀಯ ಪ್ರಜಾವರ್ಗಕ್ಕೆ ತಮ್ಮ ಸರಕಾರದಲ್ಲಿರುವ ಭಾವವು ಕೆಲಸಿಲ್ಲದ್ದಾಗಿರುವುದು ಮಿ। ಲೊವೆಟ್ ಫ್ರೇಜರರವರು ಅಭಿಪ್ರಾಯಪಟ್ಟ ಮೇರೆಗೆ ಪ್ರಜೆಗಳು ಮತ್ತು ಅನ್ಯ ದೇಶೀಯರಾದ ಇವರ ಸರಕಾರಗಳೊಳಗಿರುವ ಅಭಾವದ ಗಸಿಯನ್ನು ವೃದ್ಧಿಸುವುದೇ ಹೊರತು ಪರಸ್ಪರ ಅನುರಾಗವು ಇವರಲ್ಲಿ ಉಂಟಾಗುವದ ಆಸ್ಪದವಿಲ್ಲವೆಂತ ತೋರುತ್ತದೆ ಆಧಾರವಿಲ್ಲದ ಈ ಅಭಿಪ್ರಾಯಗಳನ್ನು ಬ್ರಿಟಿಷ ಪ್ರಜೆಗಳು ಈ ಸಂದರ್ಭದಲ್ಲಿ ತಿಳಕೊಳ್ಳುವುದು ಭಾರತೀಯರಿಗೆ ಕ್ಷೇಮಕರವಲ್ಲವೆಂದು ತಿಳಕೊಂಡು ಸರ್ ವಿಲಿಯಂ ವೆಡರ್ ಬರ್ನರವರು ಇವರ ಈ ಅಭಿಪ್ರಾಯಗಳನ್ನು ತಕ್ಕ ರೀತಿಯಲ್ಲಿ ಖಂಡಿಸಿರುವರು ಇಷ್ಟರಲ್ಲಿಯೇ ಮಿ। ಫ್ರೇಜರರವರ ಅಭಿಪ್ರಾಯ ಸೂಚನೆಯು ತೀರಲಿಲ್ಲ ಪ್ರತಿನಿಧಿಗಳಾದ ವಿದ್ಯಾರ್ಥಿಗಳಿಂದ ಅಲ್ಲಲ್ಲಾದ ಒಂದೆರಡು ಕೊಲೆಗಳಿಂದ ಸಂಗ್ರಹಿಸಿದ ಇವರ ಭಾರತೀಯ ಅನಾಯಕತ್ವದ ಅಭಿಪ್ರಾಯವು ಶೋಚನೀಯವಾಗಿರುವುದು ಅನಾಯಕತ್ವ ಪಂಗಡದವರ ವ್ಯವಸ್ಥೆಯು ಇನ್ನಷ್ಟು ಪ್ರಬಲವಾಗುವುದೆಂದೂ ಅಂಗ್ಲಾಳವು ಬೇರೆ ಯಾವ ಕಡೆಗಳಲ್ಲಿಯಾದರೂ ಕಷ್ಟಗಳಲ್ಲಿ ಸಿಲುಕಿದ ಕೂಡಲೇ ಇದು ಇನ್ನೂ ಹೆಚ್ಚುವದೆಂಬ ಅಂಜಿಕೆಯನ್ನೂ ಇವರು ಬ್ರಿಟಿಷ್ ಪ್ರಜೆಗಳಿಗೆ ತಿಳಿಸಿ ಹೇಳಿರುವರ ... ಕೋಟಿ ಸಂಖ್ಯೆಯಲ್ಲಿರುವ ಭಾರತೀಯ ಪ್ರಜೆಗಳಲ್ಲಿ ಬೆಟ್ಟಿಷ್ಟ ಹುಡುಗರ ಕೃತ್ಯಗಳನ್ನು ಗ್ರಹಿಸಿಕೊಂಡು ಈ ರೀತಿ ತಮ್ಮ ಊಹನೆಗಳಿಗೆ ರೂಪಕೊಡುವುದು ನ್ಯಾಯವಲ್ಲ ಇಂಡಿಯದ ಅಂಡರ್ ಸೆಕ್ರೆಟರಿಗಳಾದ ಮಾಸ್ಟರ್ ಆಪ್ ಎಲಿಬೆಂಕರವರು ತಮ್ಮ ಇತ್ತಲಾಗಿನ ಭಾಷಣದಲ್ಲಿ ಭಾರತೀಯ ಪ್ರಜೆಗಳ ಅಸಾಧಾರಣವಾದ ರಾಜಭಕ್ತಿಯನ್ನು ನಿರೂಪಿಸಿರುವರು ಪ್ರಜೆಗಳಲ್ಲಿ ಅಧಿಕಾಂಶದವರಿಗೆ ಈ ಕೊಲೆ ವರ್ತಮಾನಗಳು ಸಹಾ ಇಲ್ಲದೆ ಸ್ವಸ್ಥಚಿತ್ತರಾಗಿ ಬ್ರಿಟಿಷ್ ಆಧಿಪತ್ಯದಿಂದ ರಾಜ್ಯದಲ್ಲಿ ಉಂಟಾದ ಶಾಂತತ್ವವನ್ನು ಅನುಭವಿಸುತ್ತಿರುವಾಗ ಹಿಂದುಸ್ಥಾನದ ಯಾವ ಭಾಗವನ್ನು ನೋಡಿ ಈ ಅಭಿಪ್ರಾಯವು ಇವರ ತಲೆಗಡರಿತೋ? ಹ್ಯಾಗೂ ಈ ಅಭಿಪ್ರಾಯಗಳನ್ನೆಲ್ಲಾ ನಮ್ಮೆಲ್ಲವರ ಪ್ರೀತಿಪಾತ್ರರಾದ ಸರ್ ವಿಲಿಯಂ ವೆಡರ್ ಬರ್ನರವರು ಒಂದೊಂದಾಗಿಯೇ ಖಂಡಿರಿಸಿ ಇವರ ಈ ಲೇಖನಕ್ಕೆ ಪ್ರತಿ ಲೇಖನವನ್ನು ಬರೆದಿರುವರು

ಹಿಂದುಸ್ಥಾನದ ಸರಕಾರದ ವಿಷಯ ಇವರ ಅಭಿಪ್ರಾಯವೇನು? ಮೊರ್ಲೆ ಪ್ರಭುಗಳ ರಾಜ್ಯಭಾರಮಾರ್ಪಾಟಗಳು ಈ ಅಸಮಾಧಾನ ಸ್ಥಿತಿಯಲ್ಲಿರುವ ದೇಶಕ್ಕೆ ಶಾಂತಿಯನ್ನುಂಟುಮಾಡವೆಂದು ಹೇಳಿರುವರು ಅಂಗ್ಲಾಳದಲ್ಲಿರುವ ಬ್ರಿಟಿಷ್ ಪ್ರಜೆಗಳಿಗೆ ಹಿಂದುಸ್ಥಾನದ ವೃತ್ತಾಂತಗಳಲ್ಲಿ ಹೆಚ್ಚಿನ ಅಭಾವವಿರುವುದರಿಂದಲೂ ಬ್ರಿಟಿಷರು ವಾದಿಸುತ್ತಿರುವ ಚಾಲ್ತಿ ವಿಷಯಗಳಲ್ಲಿ ಹಿಂದುಸ್ಥಾನದ ಹೆಸರೇ ಇಲ್ಲದ್ದರಿಂದ ಸಹಾ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಭಾರತೀಯರ ರಾಜಾಡಳಿತೆಯು ತೃಪ್ತಿಕರವಲ್ಲ. ಹಿಂದುಸ್ಥಾನವನ್ನು ವಿಲಾಯತಿಯಲ್ಲಿರುವ ಇಂಡಿಯಾ ಆಫೀಸಿನಿಂದ ಆಳುವುದಕ್ಕಿಂತ ಹಿಂದುಸ್ಥಾನದಲ್ಲಿಯೇ ಇದ್ದು ಅದನ್ನು ಆಳಬೇಕೆನ್ನುವರು. ಆದರೆ ಹೀಗೆ ಹಿಂದುಸ್ಥಾನವನ್ನು ಇಲ್ಲಿಯೇ ಆಳುತ್ತಿರುವ ಸಿವಿಲಿಯನ್ ಆಫೀಸರರ ವಿಷಯ ಇವರ ಅಭಿಪ್ರಾಯಗಳ್ಯಾವವು? ಈ ಅಭಿಪ್ರಾಯವು ಸಹಾ ... ಈ ಹುದ್ದೆ ... ಭಾರತೀಯ ... ಸರ್ವ ...

ತಿ ಕಿಯುರಗಳಿಂದ ಕೆಳಗಿಳಿದು ಬಂದು ಪ್ರಜಾ ವರ್ಗಗಳೊಂದಿಗೆ ಬೆರೆಯಬೇಕೆನ್ನುವರು, ಭರತಖಂಡದಲ್ಲಿ ಆಫೀಸರರು ಪ್ರಜೆಗಳ ರಾಜ್ಯಭಾರ ವಿಷಯದ ಕೇಳಿಗೆ ಸಿಟ್ಟುಗೊಳ್ಳ ವರೆಂದೂ ಪ್ರಜೆಗಳ ಸ್ವತಂತ್ರ ಅಭಿಪ್ರಾಯಗಳನ್ನು ಕೇಳಿಕೊಳ್ಳತಕ್ಕ ಔದಾರ್ಯವು ಆಫೀಸರರಲ್ಲಿ ಇರಬೇಕೆಂದೂ, ಪ್ರಜಾಭಿಪ್ರಾಯಕ್ಕೆ ತಕ್ಕ ಗವನವನ್ನು ಕೊಟ್ಟು ತಕ್ಕದಾದ ಉತ್ತರಗಳನ್ನು ಕೊಡಬೇಕು ವಿನಹ ಅವುಗಳನ್ನು ಸುಮ್ಮನೆ ತಿರಸ್ಕರಿಸಬಾರದೆಂದೂ ಪ್ರಕಟಿಸಿರುವರು ಹೀಗೆ ಹುದ್ದೆದಾರರಲ್ಲಿರುವ ಇನ್ನು ಕೆಲವು ಗುಣದೋಷಗಳನ್ನು ತೋರಿಸಿಕೊಟ್ಟಿರುವರು ಸರ್ ವಿಲಿಯಂ ವೆಡರ್ಬರ್ನರು ಹುದ್ದೆದಾರರು ಈ ತಪ್ಪಿಗೆ ಜವಾಬ್ದಾರರೆಲ್ಲರೆಂದೂ ಸಿವಿಲ್ ಸರ್ವಿಸಿನ ಕ್ರಮದಲ್ಲಿಯೇ ಕುಂದುಕಗಳಿರುವವೆಂಬದಾಗಿಯೂ ವಾದಿಸಿರುವರು

ಈ ರೀತಿ ಆಂಗ್ಲೇಯರಲ್ಲಿ ಹಲವರಿಗೆ ಹಿಂದ ಸ್ಥಾನದ ಮುಂದಿನ ಸ್ಥಿತಿ ವಿಷಯ ವಾದವಿರುವುದು ಬ್ರಿಟಿಷರ ನ್ಯಾಯ ಶೀಲತೆಯಲ್ಲಿಯೂ ಔದಾರ್ಯದಲ್ಲಿಯೂ, ಸುಸ್ವಭಾವದಲ್ಲಿಯೂ ನಮಗೆಲ್ಲರಿಗೂ ನಿಶ್ಚಲವಾದ ನಂಬಿಕೆ ಇರುವದು ಆದರೆ ನಮ್ಮ ಮುಂದಿನ ಸುಸ್ಥಿತಿಯನ್ನು ಅವರಿಂದ ಹವಣಿಸಿಕೊಳ್ಳಬೇಕಾದರೆ ಭಾರತೀಯ ವಿಷಯಗಳ ಪರಿಚಿತಿಯನ್ನು ಅವರಲ್ಲಿ ಉಂಟುಮಾಡಬೇಕು ಬಾಬು ಸುರೇಂದ್ರ ನಾಥ ಬೆನರ್ಜಿಯವರು ಸೂಚಿಸಿದಂತೆ ಕಾಂಗ್ರಸ ಸಭೆಯನ್ನು ಲಂಡನ್ ಪಟ್ಟಣದಲ್ಲಿ ಏರ್ಪಡಿಸಿ ಮಾತ್ರವಲ್ಲ, ಭಾರತೀಯ ಪ್ರಜಾಮುಖಂಡರು ಆಂಗ್ಲಾಕ್ಕೆ ಪದೇ ಪದೇ ಹೋಗಿ ನಿರಂತರವಾಗಿ ನಮ್ಮೆಲ್ಲವರ ಸಂಕಟಗಳನ್ನು ಅವರಿಗೆ ತಿಳಿಯ ಹೇಳಿದ್ದಲ್ಲಿ ಭಾರತೀಯರ ಮುಂದಿನ ಸ್ಥಿತಿಯು ಶುಭಕರವಾಗುವುದೆಂಬುದರಲ್ಲಿ ಸಂದೇಹವಿಲ್ಲ

ಇತಿ ದೇಶಭಕ್ತ

ನೋಟೀಸು.

ಕಾಸರಗೋಡು ನಿವಾಸಿಕ ಸಾರಸ್ವತ ಬ್ರಾಹ್ಮಣ ಹತ್ತು ಸಮಸ್ಥರ ಹಕ್ಕಿನ ಶ್ರೀ ಪಾಂಡುರಂಗ ದೇವಸ್ಥಾನದ ಬಂಡಾರಕ್ಕೆ ತಾ ೧೧—೧೦—೯೯ಲ್ಲು ರೂಪಾಯಿ ೧೩೩—೧೨—೦ಕ್ಕೆ ಕೂಡ್ಲು ಮ್ಹಾಲಿಂಗ ಬಂಟನು ಬರಕೊಟ್ಟ ರಿಜಿಸ್ತ್ರಿ ಅಡವು ದಸ್ತೈವಜು ಪ್ರಕಾರ ಬಹಾ ಅಸ್ಲು ಬಡ್ಡಿ ಐವಜಿನ ಬಗ್ಗೆ ಸದರಿ ಹತ್ತು ಸಮಸ್ಥರ ಕಡೆಯಿಂದ ಕೋರ್ಟಿನವರ ಅನುಮತಿ ಪಡಕೊಂಡ ಕಾಸರಗೋಡು ಕಸಬೆಯಲ್ಲಿರುವ ಶಿಬಾಡ ದತ್ತಯ್ಯನವರ ಮಗ ಸುಬ್ರಾವನು ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ ಕ್ರಮ ನಂಬ್ರ ೨೬೩/೦೯ ನೇ ವ್ಯಾಜ್ಯ ದಾಖಲು ಮಾಡಿರುತ್ತಾನೆ

ಆದ್ದರಿಂದ ಸದರಿ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರಮನಸ್ಸುಳ್ಳವರು ಈ ಕೋರ್ಟಿನ ಮುಂದೆ ತಾರೀಕು ೨—೯—೦೯ಲ್ಲು ಹಗಲು ೧೦ ಘಂಟೆಗೆ ಹಾಜರಾಗಿ ವ್ಯವಹರಿಸಬಹುದು

ಸಂ ೧೯೦೯ ನೇ ಇಸವಿ ಅಗೋಸ್ತು ತಿಂಗಳು ೫ನೇ ತಾರೀಕು ಕೋರ್ಟಿನ ಮೊಹರ ನಿಶಿಂ ನಮ್ಮ ದಸ್ಕತೊಡನೆ ಕೊಡೋಣಾಗಿರುತ್ತದೆ

V B Ramaswami Aiyar,

District Munsiff

ವಿದೇಶ ವೃತ್ತಾಂತ.

ಕಾಬೂಲಿನ ಅಮೀರರವರು ಡಿಲ್ಲಿಯಲ್ಲಿರುವ ಜುಮ್ಮಾ ಮಸೀದಿಗೆ ೫೦೦೦ರೂಪಾಯಿ ಕ್ರಯಬಾಳುವ ಸಾಮಗ್ರಿಗಳನ್ನು ಕಳುಹಿಸಿಕೊಡುವರು

—o—

ಚಕ್ರವರ್ತಿನಿಯವರಿಗೆ ಆಂಗ್ಲಾಕದಲ್ಲಿ ಸ್ತ್ರೀಯರು ಒಂದು ಮನವಿಯನ್ನು ಬರಕೊಂಡಿರುವರು ಮೋಟರ್ ಬಂಡಿಗಳ ಅಪಾಯಗಳಿಂದ ತಮ್ಮನ್ನು ರಕ್ಷಿಸಬೇಕೆಂಬುದೇ ಈ ಮನವಿಯ ಮುಖ್ಯ ಸಾರಾಂಶವಾಗಿರುವುದು ತಮ್ಮ ಮಕ್ಕಳಿಗೆ ಈ ಬಂಡಿಗಳು ಬಹಳ ಅಪಾಯಕರವಾಗಿರುವುವೆಂದೂ, ಇವುಗಳು ಓಡುತ್ತಿರುವಾಗ್ಗೆ ಏಳುವ ದೂಳಿಯಿಂದ ತಮ್ಮ ಮನೆ ಸಾಮಾಗ್ರಿಗಳೆಲ್ಲ ಹಾಳಾಗಿ ಹೋಗುವವೆಂದೂ, ತಮ್ಮ ಮನೆ ಕಿಟಕಿಗಳ ಬಾಗಿಲುಗಳನ್ನು ತೆಗಿಯುವುದು ಅಸಾಧ್ಯವೆಂದೂ, ಇವುಗಳ ಶಬ್ದಗಳಿಂದ ಇಡೀ ರಾತ್ರಿ ನಿದ್ರೆಯಿಲ್ಲದೆ ಸಂಕಟ ಪಡುತ್ತಿರುವೆವೆಂಬದಾಗಿಯೂ ಈ ಮನವಿಯಲ್ಲಿ ತಮ್ಮ ಸಂಕಷ್ಟಗಳನ್ನು ಕಾಣಿಸಿದುವರು

ಜಪಾನ ದೇಶದಲ್ಲಿ ಭೂಕಂಪದಿಂದ ೩೦ ಜನರು ಹತರಾಗಿರುವರೆಂದೂ, ೮೦ ಜನರು ಗಾಯ ಪಡೆದಿರುವರೆಂದೂ ತಿಳಿದು ಬರುವುದು ಆದರೆ ಇನ್ನೂ ಈ ಭೂಕಂಪದಿಂದ ಹೆಚ್ಚಿನ ಹಾವಳಿಯುಂಟಾಗುವದಂತೆ ೩೬೦ ಕಟ್ಟೋಣಗಳು ಪೂರ್ಣ ನಾಶವಾಗಿ ಹೋಗಿವೆ ೧೦೫೬ ಕಟ್ಟೋಣಗಳು ನಜ್ಜುಗುಜ್ಜಾಗಿವೆ

ಲಂಡನ್ ಪಟ್ಟಣದಲ್ಲಿ ಮದನಲಾಲ್ ಥಿಂಗ್ರನ ವಿಚಾರಣೆಯು ನಡಿಯುತ್ತಿರುವಾಗ ಅವನ ಸ್ನೇಹಿತ ಯಾ ಇವನಲ್ಲಿ ಸಹಾನುಭೂತಿ ಇರುವವರು ಯಾವದಾದರೊಂದು ವಿಧದಲ್ಲಿ ತಮ್ಮ ಸಹಾನುಭೂತಿ ವಗೈರೆಯನ್ನು ಪ್ರದರ್ಶಿಸದಂತೆಯೂ ಅವನನ್ನು ವಿಚಾರಿಸುತ್ತಿರುವ ಲೋರ್ಡ್ ಚೀಫ್ ಜಸ್ಟಿಸರವರ ಅಂಗರಕ್ಷಣೆ ಬಗ್ಗೆಯೂ ಕೋರ್ಟಿನಲ್ಲಿ ಕೆಲ ಪೋಲೀಸು [illegible] ಕೋರ್ಟಿನವರ ಗುರ್ತಿಲ್ಲದವರಿಗೆ [illegible] ಒಳಗೆ ಪ್ರವೇಶಿಸದಂತೆಯೂ [illegible] ಆಫೀಸರರುಗಳನ್ನು ನೇಮಿಸಿದ್ದರಂತೆ.

ಅಮೇರಿಕದ ಸಂಯುಕ್ತ ಸಂಸ್ಥಾನದವರು ತಮ್ಮ ನೌಕಾಸೈನ್ಯವನ್ನು ೩೦೦೦೦ ಟನ್‌ಗಳ ಯುದ್ಧ ನಾವೆಗಳನ್ನು ಕಟ್ಟಿಸಿ ಬಲಪಡಿಸುವರಂತೆ

ಬ್ರಿಟಿಷ್ ಸಾಮ್ರಾಜ್ಯದ ಭದ್ರತೆಯನ್ನು ಸುರಕ್ಷಿತಪಡಿಸುವರೆ ಕೂಡಿದ ಕನ್ಫರೆನ್ಸ್ ಯಾ ಸಭೆಯ ತೀರ್ಮಾನಗಳು ಪೂರ್ಣವಾಗುತ್ತಿರುವವು ಸಾಮ್ರಾಜ್ಯದ ಎಲ್ಲಾ ದೇಶದವರೂ ಬ್ರಿಟಿಷ್ ನೌಕಾಸೈನ್ಯವನ್ನು ಬಲಪಡಿಸುವರೆ ಬೇಕಾದ ಖರ್ಚನ್ನು ವಹಿಸಿಕೊಳ್ಳುವರೆ ಒಪ್ಪಿರುವರೆಂದಾಗಿ ತಿಳಿದು ಬರುತ್ತದೆ

ಸರ್ ವಿಲಿಯಂ ಕರ್ಜನ್ ವಿಲ್ಲಿಯವರನ್ನು ರಕ್ಷಿಸಲು ಪ್ರಯತ್ನಿಸಿದ ಡಾಕ್ಟರ ಲಾಲಾ ಕಾಕಾರವರ ಶೌರ್ಯವನ್ನು ಪೆನಶನು ಮೊದಲಾದವುಗಳನ್ನು ಕೊಟ್ಟು ಮನ್ನಿಸುವುದು ಲಾಲಾ ಕಾಕಾರವರಿಗೆ ಮದುವೆಯಾಗದೆ ಇದ್ದದರಿಂದಲೂ ಅವರ ಸಮ್ಮಂದಿಕರು ಸಂಪನ್ನರಾಗಿರುವದರಿಂದಲೂ, ಅನಾವಶ್ಯಕವೆಂತ ಮಾಸ್ಟರ್ ಒಫ್ ಎಲಿಬೆಂಕರವರು ಅಪ್ಪಣೆಕೊಟ್ಟಿರುವರು

ಎಡ್ವರ್ಡ್ ಮಹಾಚಕ್ರವರ್ತಿಯವರು ಮೇರಿನ್ಬಾದ್ ಎಂಬಲ್ಲಿಗೆ ಒಂದು ತಲ್ಪಿರುವರು

ವಾಯುವಿಮಾನಗಳಲ್ಲಿ ತಿರುಗಾಡಲು ಅಭ್ಯಾಸಮಾಡಿಕೊಂಡಿದ್ದ ಇಟೆಲಿ ದೇಶದ ಕೆಪ್ಟನ್ ಸ್ಪೆಲ್ಟರಿನಿ ಎಂಬವರು ವಾಯುವಿಮಾನದಲ್ಲಿ ಎರಡು ಜನ ಪ್ರಯಾಣಿಕರ ಸಂಗಾತ ಕಮೋನಿಕ್ಸ್ ಎಂಬಲ್ಲಿಂದ ಆಲ್ಪ್ಸ ಪರ್ವತದ ಮೇಲಕ್ಕೇರಿ ಅದನ್ನು ದಾಟಿರುವರು ೧೬೦೦೦ ಅಡಿಗಳಷ್ಟು ಮೇಲೆ ವರೇಗೆ ಇವರ ವಾಯುವಿಮಾನವು ತೇಲಿಕೊಂಡಿತ್ತೆಂಬದಾಗಿ ತಿಳಿದುಬರುವುದು

ಟ್ರಾನ್ಸ್‌ವಾಲಿನ ಭಾರತೀಯರ ಪ್ರತಿನಿಧಿಗಳಾದ ಮೆ ಪೋಲಕರವರಿಗೆ ಈ ತಿಂಗಳ ತಾರೀಕು ೧೩ರಲ್ಲಿ ಮುಂಬಯಿಗೆ ಟ್ರಾನ್ಸ್‌ವಾಲದಲ್ಲಿರುವ ಭಾರತೀಯರ ದೀನ ಸ್ಥಿತಿಯ ಕುರಿತು ಒಂದು ತಂತೀದ್ವಾರ ಸಮಾಚಾರವು ಬಂದಿರುವುದು. ಸೆರೆಯಲ್ಲಿದ್ದ ಭಾರತೀಯರಿಗೆ ಆಹಾರವು ತಕ್ಕ ರೀತಿಯಲ್ಲಿ ದೊರೆಯದೆ ಅರ್ಧ ಉಪವಾಸ ಬೀಳುತ್ತಿರುವುದರಿಂದಲೂ [illegible] [illegible]

[illegible] ದಿರುವರಾಗಿಯೂ, ಇವರು ಹೀಗೆ ಗಡಿಪಾರು ಮಾಡಲ್ಪಟ್ಟರೂ ತಮ್ಮ ಟ್ರಾನ್ಸ್‌ವಾಲಿನ ವಾಸ್ತವ್ಯದ ಹಕ್ಕನ್ನು ಸ್ಥಾಪಿಸುವರೆ ಟ್ರಾನ್ಸ್‌ವಾಲಿಗೆ ಬಂದಿರುವುದರಿಂದ ಅವರನ್ನು ತಿರಿಗಿ ಕೈದಿಗಳಾಗಿ ಮಾಡಿ ಆರು ತಿಂಗಳ ಶಿಕ್ಷೆ ವಿಧಿಸಿರುವರೆಂತಲೂ ಈ ಸಮಾಚಾರಗಳಿಂದ ತಿಳಿದು ಬರುವುದಲ್ಲದೆ, ಕಾರಾಗ್ರಹದಲ್ಲಿಯೇ ಅಧಿಕಾರಿಗಳ ಬಾಧೆಯಿಂದ ಮೃತಪಟ್ಟ ತಮ್ಮ ಬಾಂದವನಾದ ನಾಗಪ್ಪನ್ ಎಂಬವನ ಮರಣದಿಂದುಂಟಾದ ಕೋಪವನ್ನೂ ಶೋಕವನ್ನೂ ಪ್ರದರ್ಶಿಸುವಗೋಸ್ಕರ ಒಂದು ಸಭೆಯು ಸಹಾ ಕೂಡಿತ್ತೆಂಬದಾಗಿಯೂ ತಿಳಿಯುತ್ತೇವೆ

ತುರ್ಕ್ಯದ ಸುಲ್ತಾನ್ ಪದವಿಯಿಂದ ತಳ್ಳಲ್ಪಟ್ಟ ಅಬ್ದುಲ್ ಹಮೀದರವರನ್ನು ತಪ್ಪಿಗೋಸ್ಕರ ಅಲ್ಲಿಯ ಹಾಯ್ ಕೋರ್ಟಿನಲ್ಲಿ ವಿಚಾರಿಸುವರೆ ತುರ್ಕ್ಯದ ಹೊಸ ಸರಕಾರದವರು ನಿರ್ಣಯಿಸಿರುವರು

—o—

ದಕ್ಷಿಣ ಆಫ್ರಿಕದಲ್ಲಿ ಬ್ರಿಟಿಷ ಸರಕಾರದವರು ದಯಪಾಲಿಸಿದ ಯುನಿಯನ್ ಪಾರ್ಲಿಮೆಂಟು ಯಾ ಪ್ರಜಾ ಪ್ರತಿನಿಧಿಗಳ ಸಭೆಯು ಪ್ರಿನ್ಸ್ ಒಫ್ ವೇಲ್ಸರವರಿಂದ ತೆರೆಯಲ್ಪಡುವುದು

ಜಪಾನೀಯರು ರಿಪೇರಿ ಮಾಡುವಂಥಾ ಎಂಟಂಗ್ ಮುಕಡನ್ ರೈಲ್ವೆ ಮಾರ್ಗಕ್ಕೆ ಗಾರ್ಡುಗಳಾಗಿ ಚೀನಾ ಸರಕಾರದವರು ಚೀನೀಯರನ್ನು ನೇಮಿಸಬೇಕೆನ್ನುವರು.

'ಸ್ಲೀಪಿಂಗ್ ಸಿಕ್‌ನೆಸ್' ಯಾ ನಿದ್ರೆರೋಗಕ್ಕೆ ಒಂದು ದಾಕಿನ ದ್ರವವನ್ನು ಅಮೇರಿಕದಲ್ಲಿ ಕಂಡುಹಿಡಿದಿರುವರು.

ಸರ್ ಕರ್ಜನ್ ವಿಲ್ಲಿಯವರ ಸ್ಮರಣಾರ್ಥವಾಗಿ ತಕ್ಕ ಏರ್ಪಾಡನ್ನು ಮಾಡುವರೆ ನೇಮಿಸಲ್ಪಟ್ಟ ಕಮಿಟಿಯವರು ಇವರ ಘೋರಿಯ ಮೇಲೆ ಸೆಂಟ್ ಪೋಲ್ ದೇವಾಲಯದಲ್ಲಿ ಇವರ ಹೆಸರು ಹಾಕಿ ಒಂದು ಚಂದ್ರಕಾಂತ ಶಿಲೆಯನ್ನಿಡುವರೆ ಆಲೋಚಿಸಿರುವರಲ್ಲದೆ, ಆಸ್ತ್ರಖಂಡದ [illegible] ರಿಚಿತ ಪ್ರಯಾಣಸ್ಥರ ಆಲಯದ ಬಗ್ಗೆ ಬಾಕಿ ಉಳಿದಿರುವ ಹಣವನ್ನು ವಿನಿಯೋಗಿಸುವರೆ ನಿಶ್ಚಯಿಸಿರುವರು. [illegible] ಖಂಡದವರಲ್ಲಿ ಮೃತರಿಗೆ ಹೆಚ್ಚಿನ ಸಹಾನುಭೂತಿ ಇದ್ದದರಿಂದ ಈ ಏರ್ಪಾಡು ಸಮರ್ಪಕವಾಗಿರುವುದೆಂತ ಅಭಿಪ್ರಾಯ ಪಡುವರು.

ಉತ್ತರಹಿಂದುಸ್ಥಾನ.

———o———

ವ್ಯಾಸರಾಯ ಪ್ರಭುಗಳಾದ ಮಿಂಟೋ ಪ್ರಭುಗಳ ದೇಶ ಸಂಚಾರವು ಕೆಳಗಡೆ ಕಾಣಿಸಿದಂತೆ ನಡಿಯುವುದಾಗಿ ವರ್ತಮಾನವಿರುವುದು ಬರುವ ಅಕ್ಟೋಬರ ೨೫ರಲ್ಲಿ ಸಿಮ್ಲಾದಿಂದ ಹೊರಟು, ಆಳ್ವಾರ್ ಸಂಸ್ಥಾನಕ್ಕೆ ೨೭ರಲ್ಲಿ ಬಂದು ತಪ್ಪಿ ೨೭ರಲ್ಲಿ ಅಲ್ಲಿಂದ ಹೊರಟು ೨೮ರಲ್ಲಿ ಜಯಪುರಕ್ಕೆ ಬಂದು ೩೧ಕ್ಕೆ ಉದಯಪುರಕ್ಕೆ ತಲ್ಪುವರು. ಅಲ್ಲಿಂದ ನವಂಬರ ೬ಕ್ಕೆ ಗ್ವಾಲಿಯರ್ ಸಂಸ್ಥಾನಕ್ಕೆ ತಪ್ಪಿ ೯ರಲ್ಲಿ ಹೊರಟು ಭೋಪಾಲಕ್ಕೆ ೧೦ರಲ್ಲಿ ಬಂದಿಳಿಯುವರು. ಅಲ್ಲಿಂದ ಬರೋಡಾ ಸಂಸ್ಥಾನಕ್ಕೆ ೧೫ರಲ್ಲಿ ಹೊರಡುವರು. ತಾ ೧೬ರ ವರೇಗೆ ಬರೋಡಾದಲ್ಲಿದ್ದು ಆದಿನ ಅಲ್ಲಿಂದ ಹೊರಟು ಮುಂಬಯಿಗೆ ತಾ ೧೭ಕ್ಕೆ ಬಂದು ತಲಪುವರು. ತಾ ೨೦ರಲ್ಲಿ ಮುಂಬಯಿಂದ ಹೊರಟು ೨೧ರಲ್ಲಿ ಬಿಜಾಪುರವನ್ನು ನೋಡಿ ೨೨ರಲ್ಲಿ ಮರ್ಮಗೋವೆಯ ಪ್ರಾಂತಕ್ಕಾಗಿ ೨೩ಕ್ಕೆ ಗೆರೆಸೊಪ್ಪೆಗೆ ಬರುವರು ಅಲ್ಲಿಂದ ೨೫ಕ್ಕೆ ಮೈಸೂರಿಗೆ ಬಂದು ಆನೆಗಳ ಸಿಕಾರಿಯನ್ನು ನೋಡಿಕೊಂಡು ಡಿಸೆಂಬರ ೩ರಲ್ಲಿ ಶ್ರೀರಂಗಪಟ್ಟಣದಿಂದ ಬೆಂಗಳೂರಿಗೆ ಬಂದು ಅಲ್ಲಿಂದ ತಾ ೬ರಲ್ಲಿ ಹೊರಟು ಮಧುರೆ, ತಂಜಾವೂರು, ತಿರುಚಿನಾಪಳ್ಳಿಯಿಂದ ೯ನೆಯ ತಾರೀಕಿನಲ್ಲಿ ಮದ್ರಾಸಿಗೆ ಬಂದು ತಪ್ಪಿ ೧೩ಕ್ಕೆ ಅಲ್ಲಿಂದ ಕಲ್ಕತ್ತೆಗೆ ಹೊರಡುವರು

~~~~~~

ಸ್ವಲಕ್ಷ ರೂಪಾಯಿಗಳ ನಿಯಮಿತ ಬಂಡವಾಳವುಳ್ಳ ಒಂದು ಹತ್ತೀಕಾರಖಾನೆಯು ಲಾಹೋರಿನಲ್ಲಿ ಸ್ಥಾಪಿತವಾಗುವುದು ಸರ್ ಪಿ ಸಿ ಚಟರ್ಜಿಯವರೂ, ಲಾಲಾ ಲಜಪತರಾಯರವರೂ ಈ ಕಾರಖಾನೆಯ ಇತರ ಡಿರೆಕ್ಟರುಗಳೊಂದಿಗೆ ಡಿರೆಕ್ಟರುಗಳಾಗಿರುವರು

~~~~~~

ಬಹುಮಾನ ಪಟ್ಟ ನವಾಬ ಸಯ್ಯದ್ ಮಹಮ್ಮದ್ ಸಾಹೇಬರವರು ಬರುವ ಕೊಂಗ್ರೆಸು ಸಭೆಯ ಅಧ್ಯಕ್ಷರಾಗುವರೆ ನಿರಾಕರಿಸಿರುವುದರಿಂದ ಬಂಗಾಳ ಪ್ರಾಂತಿಕ ಕೊಂಗ್ರೆಸ್ ಕಮಿಟಿಯವರು ಬಾಬು ಸುರೇಂದ್ರನಾಥ ಬೆನರ್ಜಿಯವರನ್ನು ಅಧ್ಯಕ್ಷರನ್ನಾಗಿ ಆರಿಸಬೇಕಾಗಿ ಸೂಚಿಸಿರುವರು

~~~~~~

ಕಪೂರಥಲಾ ಮತ್ತು ಫರೀದಕೋಟೆಗಳ ರಾಜರುಗಳೂ ಮಲೆರ್ ಕೊಟ್ಲದಲ್ಲಿಯ ನವಾಬರೂ ಬರುವ ಡಿಸೆಂಬರ ತಿಂಗಳಲ್ಲಿ ಲಾಹೋರಿನಲ್ಲಿ ಏರ್ಪಡಿಕ್ಕಿರುವ ವಸ್ತು ಪ್ರದರ್ಶನದ ಆಶ್ರಯದಾತರಾಗುವರೆ ಸಮ್ಮತಿಸಿರುವರು. ಇವರಲ್ಲಿ ಶುರುವಿಗೆ ಹೆಸರು ಕಾಣಿಸಿದ ರಾಜರುಗಳು ೨೦೦೦ರೂಪಾಯಿಗಳಂತೆ ದ್ರವ್ಯಸಹಾಯವನ್ನು ಈ ಪ್ರದರ್ಶನಾರ್ಥವಾಗಿ ಕೊಟ್ಟಿರುವರು

~~~~~~

ಕಲ್ಕತ್ತೆಯ ಹೈಕೋರ್ಟ್ ಜಡ್ಜಿಗಳಾದ ಬಹುಮಾನಪಟ್ಟ ಮಿ ಫ್ಲೆಚ್ಚರ್ ದೊರೆಗಳನ್ನು ಮುಂಬಯಿಯ ಹೈಕೋರ್ಟಿನ ಚೀಫ್‌ಜಡ್ಜರಾಗಿ ನೇಮಿಸುವರೆಂಬ ವದಂತಿ ಇರುವುದು.

~~~~~~

ಪುನೆಯ ನೇಟಿವ್ ಜನರಲ್ ಲೈಬ್ರೆರಿಯ ಆಡಳಿತೆ ಕಮಿಟಿಯ ಮೆಂಬರರಾದ ಬಹುಮಾನ ಪಟ್ಟ ಡಾಕ್ಟರ್ ಭಂಡಾರಕಾರರವರೂ, ರಾವ್ ಬಹದೂರ್ ಜಿ ವಿ ಜೋಶಿಯವರೂ, ಈ ಲೈಬ್ರೆರಿಗೆ ಬೆಪಿನ ಚಂದ್ರಪಾಲರವರಿಂದ ರಚಿಸಲ್ಪಡುವಂಥಾ ಸ್ವರಾಜ್ಯವೆಂಬ ಮಾಸ ಪತ್ರಿಕೆಯನ್ನು ತರಿಸುವುದರಿಂದ ತಮ್ಮ ಮೆಂಬರುತನಕ್ಕೆ ರಾಜಿ ಕೊಟ್ಟಿರುವರು.

~~~~~~

ಬಂಗಾಳದ ಹೊಸ ಸಂಸ್ಥಾನದಲ್ಲಿ ವಿದೇಶವಸ್ತು ಬಹಿಷ್ಕಾರದ ಚಳವಳವನ್ನು ಪ್ರದರ್ಶಿಸುವರೆ ಸಭೆ ಮುಂತಾದವುಗಳು ಕೂಡಿ ಈ ಚಳವಳವನ್ನು ಅಭಿವೃದ್ಧಿಸಲು ಪ್ರಯತ್ನಿಸಿದ್ದಲ್ಲಿ, 'ಸಿಡಿಸಿಯಸ್ ಮೀಟಿಂಗ್ಸ್ ಆಕ್ಟ್' ಕಾನೂನನ್ನು ಜಾರಿಗೆ ತರಬೇಕಾದೀತೆಂಬದಾಗಿ ಅಲ್ಲಿಯ ಸರಕಾರದವರು ಪ್ರಜಾ ಮುಖಂಡರುಗಳಿಗೆ ಸೂಚಿಸಿರುವರಂತೆ.

~~~~~~

ಲಾಹೋರಿನಲ್ಲಿ ಬರುವ ದಶಂಬರ ತಿಂಗಳಲ್ಲಿ ಜರಗಲಿಕ್ಕಿರುವ ವಸ್ತು ಪ್ರದರ್ಶನದಲ್ಲಿ ನೋಡಲಿಕ್ಕೆ ಬಂದವರನ್ನು ವಿನೋದಗೊಳಿಸುವರೆ ಯಾವ ಏರ್ಪಾಡುಗಳನ್ನು ಮಾಡಬೇಕೆಂಬದನ್ನು ನಿರ್ಣಯಿಸುವರೆ ಒಂದು ಕಮಿಟಿಯು ಏರ್ಪಡಿಸಿರುವುದು ಈ ಕಮಿಟಿಯವರು ವಿನೋದಾರ್ಥವಾಗಿ ಪ್ರದರ್ಶನ ಮಂಟಪದಲ್ಲಿ ವೇಶ್ಯಾ ಸ್ತ್ರೀಯರ ನಾಟ್ಯವಿರಬೇಕೆಂತ ನಿರ್ಣಯಿಸಿ ಈ ಬಗ್ಗೆ ಚಲೋ ನಾಟ್ಯ ಮಾಹಿತಿ ಇರುವ ವೇಶ್ಯಾ ಸ್ತ್ರೀಯರು ಪಂಜಾಬು ಅತ್ತ ಕಡೆಯಲ್ಲಿ ದೊರಕುವರೆಂಬದನ್ನು ತಿಳಕೊಳ್ಳುವರೆ ಒಬ್ಬ ಏಜಂಟರನ್ನು ಸಹಾ ನೇಮಕ್ಕೂರು ಮಾಡಿದ್ದರು ಏಜಂಟರವರು ತಮ್ಮ ರಿಪೋರ್ಟನ್ನು ಸಭೆಯ ಮುಂದಿರಿಸಿದ್ದರು ಪ್ರದರ್ಶನದ ಸೆಕ್ರಿಟೆರಿಗಳಾದ ರುಚಿಪ್ರಕಿರಮ್ ಎಂಬವರು ಇದಕ್ಕೆ ಆಕ್ಷೇಪ ತೆಗದು ಈ ಏರ್ಪಾಡನ್ನು ತೆಗದು ಹಾಕದಿದ್ದರೆ ತಾನು ಪ್ರದರ್ಶನದ ಕಾರ್ಯದರ್ಶಿ ಪದವಿಗೆ ರಾಜಿನಾಮೆ ಕೊಡುವೆನೆಂಬದಾಗಿ ಭಿಕ್ಷರಿಸಿದ್ದರಿಂದ ವೇಶ್ಯಾ ಸ್ತ್ರೀಯರ ನಾಟ್ಯವು ಬೇಡವೆಂತ ತೆಗದುಹಾಕಿರುವರೆಂತ ಲಾಹೋರಿನ ಒಂದು ವಾರ್ತಾಪತ್ರದಿಂದ ತಿಳಿದು ಬರುವುದು

~~~~~~

ಮುಂಬಯಿಯಲ್ಲಿ ಬೆಪಿನ ಚಂದ್ರಪಾಲರವರ 'ಸ್ವರಾಜ್ಯ' ಪತ್ರಿಕೆಯನ್ನು ಮಾರುತ್ತಿದ್ದ ಮೋದಕರವರ ವಿಚಾರಣೆಯು ಮುಂಬಯಿ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ನಡಿಯುತ್ತಿರುವುದು. ವಿಲಾಯತಿಯಲ್ಲಿ ಅಚ್ಚಾಗುತ್ತಿರುವ ಈ ಮಾಸ ಪತ್ರಿಕೆಯ ಪ್ರತಿಗಳು ಮೋದಕರವರಿಗೆ ದೊರಕುವ ಮುಂಚೆಯೇ ಇವುಗಳು ಎರಡು ವಾರಗಳ ತನಕ ಕಷ್ಟಮ್ ಆಫೀಸಿನಲ್ಲಿದ್ದು ಕಷ್ಟಮ್ ಕಲೆಕ್ಟರರವರಿಂದ ಓದಲ್ಪಟ್ಟು ತರುವಾಗಿ ಕೊಟ್ಟಿರುವವಾಗಿಯೂ, ಇವುಗಳಲ್ಲಿ ರಾಜದ್ರೋಹಪರವಾದ ಲೇಖನಗಳಿಲ್ಲದ್ದರಿಂದ ಕಷ್ಟಮ್ ಆಫೀಸಿನವರು ಈ ಪ್ರತಿಗಳನ್ನು ಬಿಟ್ಟುಕೊಟ್ಟಿರುವರೆಂಬದಾಗಿ ನಿವೇದಿಸುವನೆಂತಲೂ, ತಾನು ಇವುಗಳಲ್ಲಿರುವ ಲೇಖನಗಳನ್ನು ಓದಲಿಲ್ಲವೆಂಬದಾಗಿಯೂ ವಾಗ್ಮೂಲಿ ಕೊಟ್ಟಿರುವನಂತೆ

~~~~~~

ಮುಂಬಯಿಯಲ್ಲಿಯ ಮಂಗ್ರೋಲ್ ಜೈನ ಸಭೆಯವರು ತಮ್ಮ ಜಾತಿಯ ಒಬ್ಬ ವಿದ್ಯಾರ್ಥಿಯನ್ನು, ಇಂಗ್ಲಾಂಡಕ್ಕೆ ಕಳುಹಿ ಪ್ರೊಫೆಸರ ದಿಸ್ಮಿತ್ರರವರಿಂದ ಭಾರತೀಯ ವಿದ್ಯಾರ್ಥಿಗಳ ಬಗ್ಗೆ ಏರ್ಪಡಿಸಿದಂಥಾ ವಿದ್ಯಾವ್ಯಾಸಂಗವನ್ನು ಮಾಡಿಸುವರೆ ರೂಪಾಯಿ ೧೨,೦೦೦ ಕೂಡಿಸಿಕೊಂಡಿರುವರು.

~~~~~~

ಅಲಿಪುರದ ಬೊಂಬ ಕೇಸಿನ ಅಪೀಲು ನಡಿಯುತ್ತಿರುವುದು ಅಪರಾಧಿಗಳಲ್ಲಿ ಒಬ್ಬರಾದ, ಕಾಪಿಲೆಡೆಯಿಂದ ಜಾಮೀನಿನ ಮೇಲೆ ಬಿಟ್ಟಿರುವ ಅಶೋಕ ಚಂದ್ರನಂದಿ ಎಂಬವರು ಮೃತಪಟ್ಟ ವರ್ತಮಾನವನ್ನು ಕಲ್ಕತ್ತಾ ಚೀಫ್ ಜಡ್ಜರವರಿಗೆ ಈ ವ್ಯವಹರಣೆಯನ್ನು ನಡಿಸುತ್ತಿರುವ ವಕೀಲರು ತಿಳಿಸಿದರು

~~~~~~

ವಿದೇಶಿ ಬಹಿಷ್ಕಾರದಿನದಾಚರಣೆಯನ್ನು ಕೈಕೊಂಡ ಕಾಳಿ ಪ್ರಸನ್ನ ಘೋಷರವರೆಂಬ ಶಾಲಾ ಉಪಾಧ್ಯಾಯರನ್ನು ತಮ್ಮ ಕೆಲಸದಿಂದ ತೆಗದುಹಾಕಿರುವರು.

~~~~~~

ಮುಂಬಯಿಯಲ್ಲಿ ಪೋರಬಂದರ ಜೈಲಿನಲ್ಲಿ ತಮ್ಮ ಜೈಲರರನ್ನು ಕೊಂದ ನಾಲ್ಕು ಜನ ಬಂದಿವಾನರಿಗೆ ಮರಣದಂಡನೆಯು ವಿಧಿಸಲ್ಪಟ್ಟಿರುವುದು.

~~~~~~

ಕಲ್ಕತ್ತೆಯ ಯುವಕರು ಬಾಬು ಅರವಿಂದ ಘೋಷರವರ ಜನ್ಮದಿನವನ್ನಾಚರಿಸಿದರು. ಈ ಸಂದರ್ಭದಲ್ಲಿ ಯುವಕರು ಘೋಷರವರನ್ನು ಹೂಮಾಲೆಗಳಿಂದ ಚಂದನ ಲೇಪದಿಂದಲೂ ಅಲಂಕರಿಸಿದ್ದಲ್ಲದೆ ಅವರಿಗೆ ಉಚಿತವಾಗಿ ಅನೇಕ ದೋತ್ರ ಮುಂತಾದವುಗಳನ್ನು ಕೊಟ್ಟಿರುವರು.

~~~~~~

ಪಂಜಾಬಿನ ಹಿಂದೂ ಮುಖಂಡರವರು ಕೊಂಗ್ರೆಸು ಸಭೆಯ ಕಾರ್ಯನಿರ್ವಾಹದಲ್ಲಿ ಕೂಡಿರುವ ಇತರ ಹಿಂದೂ ಮುಖಂಡರಿಗೆ ಈ ಸರ್ತಿ ಕೊಂಗ್ರೆಸು ಸಭೆಗೆ ಸೇರಬಾರದೆಂಬದಾಗಿ ಒಂದು ಪ್ರಸಿದ್ಧ ಪತ್ರಿಕೆ ಪ್ರಕಟಿಸಿರುವರಂತೆ ಹಿಂದೂ ಸಮಾಜಕ್ಕೆ ಕೊಂಗ್ರೆಸು ಸಭೆಯು ಹಾನಿಕರವಾಗಿರುವುದೆಂದು ಇವರು ಅಭಿಪ್ರಾಯಪಟ್ಟಿರುವರು.

~~~~~~

ಕಳದ ಜೂನ್ ತಿಂಗಳಲ್ಲಿ ಪುಣೆಯಲ್ಲಿ ಕೂಡಿದ ಮುಂಬಯಿ ನ್ಯಾಯವಿಧಾಯಕ ಸಭೆಯಲ್ಲಿ ಗವರ್ನರರವರು ಸೂಚಿಸಿದಂತೆ ಮುಂಬಯಿಯಲ್ಲಿ ಎಲ್ಲಾ ಜಾತಿಮತ ಗೃಹಸ್ಥರ ಒಂದು ದೊಡ್ಡ ಸಭೆಯು ಸೇರಿತು. ಆಯಾ ಜಾತಿಗಳಿಗೆ ಬೇರೆ ಬೇರೆ ಪ್ರತಿನಿಧಿಗಳನ್ನು ಆರಿಸುವ ಕ್ರಮವು ದೇಶಾಭಿವೃದ್ಧಿಗೆ ಶ್ರೇಯಸ್ಕರವೋ ಏನೆಂಬ ವಿಷಯವನ್ನು ನಿರ್ಣರಿಸುವುದು ಇದರ ಉದ್ದೇಶ್ಯವಾಗಿತ್ತು ಡಾಕ್ಟರ ದೊಂಡೆಕಾರರವರು ಸಭಾಧ್ಯಕ್ಷರಾಗಿದ್ದರು. ಸಭೆಯಲ್ಲಿ ಎರಡು ಜನ ಹಿಂದುಗಳೂ, ಎರಡು ಜನ ಮಹಮ್ಮದೀಯರೂ, ಎರಡು ಜನ ಪಾರ್ಶಿಯರೂ, ಒಬ್ಬ ಜೈನರೂ, ಒಬ್ಬ ಕ್ರೈಸ್ತರೂ ಭಾಷಣಮಾಡಿದರು. ಜಾತಿ ಜಾತಿಗಳಿಗೆ ಬೇರೆ ಬೇರೆಯಾಗಿ ಪ್ರತಿನಿಧಿಗಳನ್ನು ಆರೈಸುವ ಕ್ರಮವನ್ನು ಏರ್ಪಡಿಸುವುದು ದೇಶಾಭಿವೃದ್ಧಿಗೆ ಯುಕ್ತವಲ್ಲವೆಂತ ಎಲ್ಲರೂ ನಿರ್ಣಯಿಸಿದರು

———o———

ಕಲ್ಕತ್ತೆಯಲ್ಲಿ ವಿವಾಹ ಸನ್ನಿಧರಾದ ಮದುಮಗ ಮದುಮಗಳಿಬ್ಬರಲ್ಲಿ ಯಾವ ದೇವಾಲಯದಲ್ಲಿ ಮದುವೆ ನ್ಯಾಚರಿಸ ಬೇಕೆಂಬ ಚರ್ಚೆಯೆದ್ದು ಮದುಮಗಳು ಮದುಮಗನು ಇಚ್ಛಿಸಿದ ದೇವಾಲಯದಲ್ಲಿ ಬರಲಿಕ್ಕೆ ತಿರಸ್ಕರಿಸಿದ್ದರಿಂದ ವರನು ವರಳನ್ನು ಗುಂಡುಹೊಡೆದು ಕೊಂದು ಅದೇ ಅಗ್ನ್ಯಸ್ತ್ರದಿಂದ ತನ್ನನ್ನು ಸಹಾ ತಿವಿದುಕೊಂಡಿರುವನು ಈ ವರನು ಬದುಕುವುದು ಕಷ್ಟಸಾಧ್ಯವಂತೆ. ವರನು ಯುರೋಪಿಯನೂ, ವರಳು ಯಹೂದ್ಯಳೂ ಆಗಿರುವರಂತೆ

~~~~~~

ಡಾರ್ಜಲಿಂಗ್ ಹತ್ತರವಿರುವ ಸಿಯೊಂಗ್ ಎಂಬ ಮಿಲಿಟರಿ ಠಾಣ್ಯದಲ್ಲಿ ೯ ವರುಷ ಪ್ರಾಯದ ಒಬ್ಬ ಸಣ್ಣ ಹುಡುಗಿಯ ಮೇಲೆ ಜುಲುಮ್ ನಡಿಸಿ, ಇದು ಸಾಲದೆಂಬಂತೆ ಆ ಹುಡುಗಿಯನ್ನು ಒಂದು ಖಣಿವೆಯಲ್ಲಿ ಬಿಸಾಟಿರುವರಂತೆ ಹುಡುಗಿಯ ಶವವು ಮರುದಿವಸ ಖಣಿವೆಯಲ್ಲಿ ತೋರಿ ಬಂದಿರುವುದು

~~~~~~

ಈ ಮೊದಲೇ ಬಂಗಾಳ ಚೆಂಬರ್ ಆಫ್ ಕೊಮರ್ಸ್ ಸೂಚಿಸಿರುವಂತೆ ನವೀನ ಏರ್ಪಾಟಾಗುವ ಕೌನ್ಸಿಲುಗಳಲ್ಲಿ ಯುರೋಪಿಯ ಪ್ರತಿನಿಧಿಗಳಿಗೋಸ್ಕರ ತಕ್ಕ ಏರ್ಪಾಡು ಮಾಡಿರದಿದ್ದರೆ, ಇವರು ಈ ಕುರಿತು ತಿರುಗಿ ಇಂಡಿಯಾ ಗವರ್ನಮೆಂಟಿನವರನ್ನು ಎಚ್ಚರಿಸುವರಾಗಿ ತಿಳಿದು ಬರುವುದು.

~~~~~~

ದಕ್ಷಿಣಹಿಂದುಸ್ಥಾನ.

~~~~~~

ಬಂಗೋಲಿನ ಮಿಶನರಿಗಳಾದ ಜೆ. ಎಮ್. ಬೇಕರರವರು ಬರುವ ನವಂಬರ ತಿಂಗಳ ೨೦ನೇ ತಾರೀಕಿನಿಂದ ೨೫ನೇ ತಾರೀಕಿನವರೇಗೆ ಇಲ್ಲೀ ಭೂಲೋಕದ ಕ್ರೈಸ್ತರ ಪ್ರತಿನಿಧಿಗಳ ಒಂದು ಸಭೆಯು [illegible] ಕೂಡುವದಾಗಿ ಪ್ರಕಟಿಸಿರುವರು.
~~~~~~

ಮದ್ರಾಸು ನೆಶ್ಯನಲ್ ಫಂಡ್ ಮತ್ತು ಇಂಡಸ್ಟ್ರಿಯಲ್ ಎಸ್ಸೋಶಿಯೇಶನವರಿಂದ ಕೈಗಾರಿಕೆಗಳನ್ನು ಕಲಿತು ಬರುವರೆ ಅನ್ಯ ದೇಶಗಳಿಗೆ ಕಳುಹಿಸಿದ ವಿದ್ಯಾರ್ಥಿಗಳಲ್ಲಿ ರಾ। ಕೆ. ಟಿ. ಆಚಾರ್ಯ ಎಂಬವರು ಸದ್ಯದಲ್ಲಿ ಮದ್ರಾಸಿಗೆ ಬಂದು ತಲಪುವರು. ಇವರು ಎರಡುವರೆ ವರುಷಗಳಿಂದ ಹಲವು ವಿದೇಶಗಳಲ್ಲಿ ಸಂಚರಿಸಿ ಜಪಾನ ಮತ್ತು ಫ್ರಾನ್ಸಿನಲ್ಲಿ ರೇಶ್ಮೆ ಕೈಗಾರಿಕೆಯನ್ನು ಕಲಿತಿರುವರಾಗಿ ತೋರುತ್ತೆ.

ಬೆಂಗಳೂರು. ಮೈಸೂರು ಸರಕಾರದ ಮಿಲಿಟರಿ ಅಸಿಸ್ಟಾಂಟರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಜೋನ್ಸರವರು ಈ ತಿಂಗಳ ೧೧ನೇ ತಾರೀಕಿಗೆ ಇಲ್ಲಿಗೆ ಬಂದು ತಲಪಿರುವರು. ಇವರು ಒಂದುವರೆ ವರುಷದ ರಜಾನಂತರ ಇಲ್ಲಿಗೆ ಬಂದಿರುವರು. ಇವರು ರಜೆ ಮೇಲಿದ್ದಾಗ ಮಿಲಿಟರಿ ಅಸಿಸ್ಟಾಂಟರ ಹುದ್ದೆಯನ್ನು ತೆಗೆದುಹಾಕಿ ಇವರಿಗೆ ಪ್ರಕೃತ ಮೈಸೂರು ಸಂಸ್ಥಾನದಲ್ಲಿ ಹುದ್ದೆಯು ಇರುವುದಿಲ್ಲವಾದ್ದರಿಂದ ಸರಕಾರದವರು ಇವರಿಗೋಸ್ಕರ ಒಂದು ಹುದ್ದೆಯನ್ನು ಏರ್ಪಡಿಸಬೇಕಾಗಿರುವುದು. ಪ್ರಭು ಶ್ರೀ ವ್ಯಾಸರಾಯ ಪ್ರಭುಗಳ ಆಗಮನ ಕಾರ್ಯ ನಿರ್ವಾಹಕಗಳಲ್ಲಿ ಇವರಿಗೆ ಒಂದು ಹುದ್ದೆ ಸಿಕ್ಕಲಿಕ್ಕೆ ಸಾಕು.

ಮೈಸೂರು ದಿವಾನ ಸಾಹೇಬರವರು ತಮ್ಮ ಆರೋಗ್ಯಕ್ಕೋಸ್ಕರ ರಜೆ ತಕ್ಕೊಳ್ಳುವರೆಂತ ತಿಳಿದು ಬರುತ್ತದೆ.

ಧಾರವಾಡದಲ್ಲಿ ನೂತನ ವಿದ್ಯಾಲಯವೆಂಬದೊಂದು ಸ್ಥಾಪಿತವಾಗಿರುವದು. ಈ ಪಾಠಶಾಲೆಯಲ್ಲಿ ಬೆಂಕಿಕಡ್ಡಿ, ಮೇಣದ ಬತ್ತಿ, ನೇಯಿಗೆ, ಬಡಗಿ ಕೆಲಸ, ಪೆನ್ಸಿಲ್ ತಯಾರಿ ಮೊದಲಾದ ಕೆಲಸಗಳು ಕಲಿಸಲ್ಪಡುತ್ತವೆ. ಕನ್ನಡ ಭಾಷೆಯು ಗೊತ್ತಿದ್ದವರಿಗೆ ಈ ವಿದ್ಯಾಭ್ಯಾಸವು ದೊರಕುವ ಏರ್ಪಾಡು ಮಾಡಿರುವರಂತೆ.

ದಕ್ಷಿಣ ಕನ್ನಡ.

ಕೆನರಾ ಹಿಂದೂ ಪರ್ಮನೆಂಟ್ ಫಂಡಿನ ಪ್ರೊಗ್ರೆಸ್ ಯಾ ಅಭಿವೃದ್ಧಿ ಸ್ಟೇಟ್‌ಮೆಂಟನ್ನೂ, ಫಂಡಿನ ವ್ಯವಹಾರ ನಿಯಮುಗಳನ್ನೂ, ಕೂಡಿರುವ ಸಪ್ಲಿಮೆಂಟು ಈ ಸಂಚಿಕೆಯೊಂದಿಗೆ ನಮ್ಮ ವಾಚಕರ ಅವಗಾಹನೆ ಬಗ್ಗೆ ಕಳುಹಿಸಲ್ಪಟ್ಟಿರುವುದು. ಮೂರು ವರುಷಗಳಲ್ಲಿಯೇ ಇಷ್ಟು ಅಭಿವೃದ್ಧಿಯನ್ನು ಪಡೆದಿರುವ ಈ ಫಂಡಿಗೆ ಇನ್ನಷ್ಟು ಪ್ರೋತ್ಸಾಹವು ದೊರೆಯಲೆಂಬದು ನಮ್ಮ ಅಪೇಕ್ಷೆಯಾಗಿರುವದು.

ಮಂಗಳೂರು. ಮುನಿಸಿಪಲ್ ಚೆಯರ್ಮನರ ಚುನಾವಣೆಯು ಸಪ್ಟಂಬರ ತಾ ೧ಕ್ಕೆ ಇಟ್ಟಿರುತ್ತದೆ.

ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರು ಈ ತಿಂಗಳ ತಾ ೧೭ಕ್ಕೆ ಬಂಟವಾಳ ಅತ್ತಕಡೆ ಸರ್ಕೀಟಿಗೆ ಹೋಗಿದ್ದಾರೆ.

ಜಿಲ್ಲಾ ಕಲೆಕ್ಟರರವರು ಈ ತಿಂಗಳ ತಾ ೧೬ಕ್ಕೆ ಬಜಪೆ ಅತ್ತಕಡೆ ಸರ್ಕೀಟಿಗೆ ಹೋಗಿರುವರು. ತಾ ೩೧ರ ವರೆಗೆ ಅಲ್ಲಿಯೇ ನಿಲ್ಲುವರು.

ಕಾರ್ಕಳದಲ್ಲಿ ಮೆಜಿಸ್ಟ್ರೇಟರಾಗಿದ್ದ ರಾ। ರಾಮವರ್ಮರಾಜಾರವರು ಇಲ್ಲಿ ಸರ್ವೆ ಟ್ರೇನಿಂಗ್ ಬಗ್ಗೆ ಬಂದಿರುತ್ತಾರೆ.

ಬಂಟವಾಳ. ಕೇಶವ ಸುಬ್ಬರಾಯ ಶೆಣೈಗಳವರ ಹೆಸರಲ್ಲಿ ಸಾರಸ್ವತರೂ ಗೌಡ ಸಾರಸ್ವತರೂ ಕೂಡಿ ಒಂದು ವಾಚನ ಗೃಹವನ್ನು ಏರ್ಪಡಿಸಿರುವರು.

ಇಲ್ಲಿಯ ಗ್ರಾಮ ಮುನ್ಸೀಫರ ಬೆಂಚು ಕೋರ್ಟಿನಲ್ಲಿ ಅನೇಕ ವ್ಯಾಜ್ಯಗಳು [illegible] ಸರಕಾರದವರಿಂದ ಏರ್ಪಡಿಸಲ್ಪಟ್ಟ [illegible] ಗಳಿಗೆ ಹೋಗಿ ವಕೀಲು ರುಸುಂ ಮೊದಲಾದ ಖರ್ಚನ್ನು ಉಳಿಸುವರೆಯೂ, ಪ್ರಯಾಣಗಳ ಅನಾನುಕೂಲತೆ ಮೊದಲಾದವುಗಳು ಇಲ್ಲದಂತೆಯೂ ನಮ್ಮ ಮಾನ್ಯ ಜಿಲ್ಲಾ ಕಲೆಕ್ಟರ ದೊರೆಗಳಾದ ಖಾನ್ ಬಹದೂರ್ ಎಮ್. ಅಜೀಜುದ್ದಿನ್ ಸಾಹೇಬರು ಈ ಜಿಲ್ಲೆಗೆ ದಯಮಾಡಿದಂದಿನಿಂದ ಈ ಗ್ರಾಮ ಮುನ್ಸಿಫ್ ಕೋರ್ಟುಗಳಿಂದ ಪ್ರಜೆಗಳಿಗೆ ಕ್ಷೇಮ ಉಂಟಾಗುವ ರೀತಿಯಲ್ಲಿ ಇವುಗಳಿಗೆ ತಕ್ಕ ಗಮನಕೊಟ್ಟು ಇವುಗಳು ಸರಿಯಾಗಿ ನಡಿಯುವಂತೆ ತಕ್ಕದಾದ ಮೇಲ್ವಿಚಾರಣೆಯನ್ನು ಸಹಾ ಇಟ್ಟದ್ದು ಶ್ಲಾಘನೀಯವೇ. ಆದರೆ "ದೇವರು ಕೊಟ್ಟರೂ ಪೂಜಾರಿ ಬಿಡ" ಯಾವ ಉದ್ದಿಶ್ಯಗಳ ಬಗ್ಗೆ ಈ ಕೋರ್ಟುಗಳು ರಚಿಸಲ್ಪಟ್ಟವೋ ಆ ಉದ್ದಿಶ್ಯಗಳು ಎಷ್ಟರಮಟ್ಟಿಗೆ ನಮ್ಮ ಬಂಟವಾಳ ಬೆಂಚು ಕೋರ್ಟಿನಿಂದ ನೆರವೇರುತ್ತಿರುವುದೆಂಬದನ್ನು ಒಂದು ಸರ್ತಿ ಪರೀಕ್ಷಿಸಿ ನೋಡುವ ಅವಶ್ಯಕತೆಯುಂಟಾಗಿರುವುದು.

ಈ ಕೋರ್ಟುಗಳಲ್ಲಿ ಇತ್ತಲಾಗಿಂದಿನಿಂದ ೪ ಆಣೆ ಮೀರಿ ಇರುವ ಜತ್ತೆ ಫೀಸನ್ನು ಬಂದಾಣೆಯಾಗಿ ಮಾಡಿರುವರು.

ಪುತ್ತೂರು. ಇದೇ ತಿಂಗಳ ತಾ ೬ಲ್ಲು ರಾತ್ರಿ ಆರಿಯಡ್ಕ ಗ್ರಾಮದ ರೇಕಮಲೆಯಲ್ಲಿರುವ ಚಕ್ಕುಲಿ ದೋಸ ಮಾರುವ ಶೇಠಿ ದಾಸ್ತಿ ಮನೆಗೆ ಕಳ್ಳರು ಹೊಕ್ಕಿ ಹೊರಗೆ ಮಲಗಿದವಳ ಸಮೀಪ ಇದ್ದ ಕಡಕಲ್ಲು ಎತ್ತಿ ಅವಳ ಮೇಲೆ ವಿಸಾಡಿದ್ದು ಅವಳ ಹೊಟ್ಟೆ ಒಡೆದು ಹೋಯಿತು. ಅವಳಿಗೆ ಆಸ್ಪತ್ರಿ ವೈದ್ಯ ಚಿಕಿತ್ಸೆ ಮಾಡುತ್ತಿರುವರು. ಕಾವು ಪೋಲೀಸರು ಕೇಸು ಮಾಡಿದರು. ಇದರ ತಲಾಶಿಯಿಂದ ಪೋರ್ಮೊಗ್ರು ಅಮ್ಮಾತ್ಯಾರಿ ಎಂಬವನ ಮೇಲೆ ತಕ್ಸೀರು ಏರ್ಪಡಿಸಿ ಮುದ್ದೈಯಾಲೆಯನ್ನು ರಿಮಾಂಡಿನಲ್ಲಿಟ್ಟಿರುವರು.

ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರೂ ತಾಲೂಕ ತಹಶಿಲ್ದಾರರವರೂ ಅಬ್ಕಾರಿ ಗುತ್ತೆ ಏಲಂಮಿನ ಸಂಬಂಧ ಬೆಳ್ತಂಗಡಿಗೆ ಹೋಗಿ ತಾ ೧೧ಲ್ಲು ಅಲ್ಲಿಯ ಶೇಂದಿ ಗುತ್ತೆಗಳ ಏಲಂ ತೀರಿಸಿ ಪುತ್ತೂರಿಗೆ ತಿರ್ರಿರುವರು. ತಾ ೧೭ಲ್ಲು ಇಲ್ಲಿ ಅಬ್ಕಾರಿ ಶೇಂದಿ ಗುತ್ತೆಗಳನ್ನು ಏಲಂ ಮಿಗೆ ಆರಂಭಿಸಿರುವರು.

ಸುಬ್ರಮಣ್ಯ ಸಮೀಪ ಕುಟ್ರುಪಾಡಿ ಎಂಬಲ್ಲಿ ಈ ಮೊದಲು ಹಜಾಮು ದೇವಪ್ಪನಲ್ಲಿ ಕಳವು ಇದ್ದ ಸಮ್ಮಂಧ ೩ ಜನರಿಗೆ ಶಿಕ್ಷೆ ಆದದ್ದಾಗಿ ತಿಳಿಸಿರುತ್ತದಷ್ಟೆ. ಆ ಕಳವಿನ ಸಮ್ಮಂಧಪಟ್ಟು ತಪ್ಪಿಸಿಕೊಂಡು ಇದ್ದ ೩ ಜನರ ಪೈಕಿ ತಲಾಶಿಯಿಂದ ಹಜಾಮ ಕುಂಞ ಎಂಬವನನ್ನು ಹಿಡಿದು ಡಿಪ್ಯುಟಿ ಮೆಜಿಸ್ಟ್ರೇಟ ಕೋರ್ಟಿನಲ್ಲಿ ತನಕಿ ನಡದು ಮುದ್ದೈಯಾಲೆಗೆ ತಾ ೧೭ಲ್ಲು ೩ ವರುಷ ಕಠಿಣ ಶೀಕ್ಷೆ ವಿದಿಸಲಾಯಿತು.

ಮಂಗಳೂರು ಮದ್ಯೇರಿ ಲೋಕಲ್ ಫಂಡ್ ರಸ್ತೆಗೆ ಹಾಕುವರೆ ತಯಾರಿಸಿದ ಕರಿಕಲ್ಲು ರಾಶಿಗಳಲ್ಲಿ ಮೆಸ್ತ್ರಿ ಕಣ್ಣ ಎಂಬವನು ಮಣ್ಣು ಬೆರಸಿದರ ಕುರಿತು ಕಂಟ್ರಾಕ್ಟರ ಸುಲ್ತಾನ ಮಹಮ್ಮದ್ ಬ್ಯಾರಿಯು ಇಲ್ಲಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ದಾಕಲು ಮಾಡಿದ ಪಿರಿಯಾದಿ ತನಕಿ ನಡದು ಮುದ್ದೈಯಾಲೆಗೆ ೪ ತಿಂಗಳ ಕಠಿಣ ಸಜಾ ವಿದಿಸಿದ್ದರು.

ಸದರಿ ಮದ್ಯೇರಿ ರಸ್ತೆಯಲ್ಲಿ ಪಾಣೆಮಂಗಳೂರು ದಾವಿದ ಸೋಜ ಪೆಗ್ರೇರೆ ತಯಾರಿಸಿದ ಕರಿಕಲ್ಲು ರಾಶಿಯಲ್ಲಿ ಮಣ್ಣು ಮಿಶ್ರ ಮಾಡಿದ್ದಾಗಿ ಕಂಟ್ರಾಕ್ಟರ ತಿಮ್ಮೋತಿ ಪಿಂತರ ಕಡೆಯಿಂದ ಹೆಡ್ ಕೂಲಿ ತನಿಯ ಎಂಬವನು ಕೊಟ್ಟ ಪಿರಿಯಾದಿ ತನಕಿ ನಡದು ಮುದ್ದೈಯಾಲೆರನ್ನು ತಪ್ಪುಗಾರರಲ್ಲ ಎಂತ ವಿಮೋಚನೆ ಪಡಿಸಿದರು.

ಇದೇ ತಿಂಗಳ ತಾ ೧೭ನೇ ಆಗಾಯಿತು ಇಲ್ಲಿ ಸರ್ವೆ ಶಾಲೆ ಶುರುವಾಗಿರುತ್ತದೆ. ವಿದ್ಯಾರ್ಥಿಗಳು [illegible] ರೇರು ಸುಮಾರು ೩೦ ಜನ ಉಮೇದ್ವಾರರು ಇರುತ್ತಾರೆ.

ಮುಲ್ಕಿ. ಇಲ್ಲಿಯ ಲೋಕಲ್ ಫಂಡ್ ಬಾಲಿಕಾ ಶಾಲೆಯು ಹರಕು ಮುರುಕು ಸ್ಥಿತಿಯಲ್ಲಿ ರುವದರಿಂದಲೂ, ಮಕ್ಕಳ ಸಂಖ್ಯೆಯು ಮಿಕ್ಕಿ ಸ್ಥಳ ಸಂಕೋಚವಾಗಿರುವದರಿಂದಲೂ ಈಗಿನ ಶಾಲೆಯ ಸಮೀಪವೇ ಇರುವ ಗದ್ದೆಯೊಂದನ್ನು ಬೋರ್ಡಿನವರು ಕ್ರಯಕ್ಕೆ ಪಡೆದು ಹೊಸತೊಂದು ಶಾಲೆಯನ್ನು ಕಟ್ಟಿಸಿ ಕೊಡುವರಾಗಿ ತಿಳಕೊಳ್ಳುತ್ತೇವೆ.

ಇಲ್ಲಿ ಉಲ್ಬಣವಾಗಿರುವ ರಕ್ತಾತಿಸಾರವನ್ನು ಶಮನಿಸುವರೆ ಇಲ್ಲಿಯ ಹೊಸ್ಪಿಟಲ್ ಅಸಿಸ್ಟಾಂಟರಾದ ರಾ। ಕೆ ರಾಮರಾಯರು ವಿಶೇಷ ಪ್ರಯತ್ನ ನಡಿಸುತ್ತಿರುವರು.

ಬ್ರಾಹ್ಮಣಿಕೆಯು ತಿಲಂಶವಾದರೂ ಇಲ್ಲದೆ ಜನಿವಾರ ಧಾರಣೆ ಮಾತ್ರದಿಂದ ಈ ಪದವಿಗೆ ಅರ್ಹರಾದ ಬ್ರಾಹ್ಮಣರ ಬಗ್ಗೆ ಸಂತರ್ಪಣೆಗಳಿಗೆಂದು ಅನೇಕ ದ್ರವ್ಯ ನಾಶವನ್ನು ಮಾಡುವದಕ್ಕಿಂತಲೂ, ದೇವರ ಮಹತ್ತಿಕೆಯನ್ನು ತಿಳಕೊಳ್ಳುವರೆಯೂ, ಕ್ಷಯಿಸುತ್ತಾ ಬರುತ್ತಿರುವ ಬ್ರಾಹ್ಮಣ ಧರ್ಮವನ್ನು ಅಭಿವೃದ್ಧಿಸಲೂ ಬೇಕಾದ ವಿದ್ಯಾರ್ಜನೆಯಲ್ಲಿ ದೇವಸ್ಥಾನಗಳ ಹಣದೊಂದಂಶವನ್ನು ವಿನಿಯೋಗಿಸುವುದು ಪ್ರಕೃತ ಕಲಿಕಾಲದಲ್ಲಿ ಅವಶ್ಯವಲ್ಲವೇ? ಅಥವಾ ಕಲಿಕಾಲವೆಂತ ತಿಂದುಕೊಂಡು ಸಕಲ ದುರ್ಮಾರ್ಗಗಳನ್ನು ಈ ಯುಗದಲ್ಲಿ ಅವಲಂಬಿಸ ಬೇಕೆಂಬ ಭಾವನೆಯಿಂದ ಕಪ್ಪೋಣ ಕಟ್ಟಿಸಿ ಯಾ ಚಿನ್ನ ಬೆಳ್ಳಿ ಮೊದಲಾದ ಆಭರಣಗಳನ್ನು ಮಾಡಿಸುತ್ತೇವೆ ಎಂತೆಂದುಕೊಂಡು ಇವುಗಳಲ್ಲಿ ಹೇರಳ ಡಿಸ್ಕೌಂಟಿಗೆ ಅಸ್ಪದವಿರುವಂತೆ ದೇವಸ್ಥಾನಗಳ ಹಣಗಳನ್ನು ಉಪಯೋಗಿಸುವುದು ಉಚಿತವೋ? ಬಂಗಾರವಾಗಿ ಈ ಕ್ಷೇತ್ರದಲ್ಲಿರುವ ಅಂಗಡಿಗಳಲ್ಲಿಯೂ ಮನೆಗಳಲ್ಲಿಯೂ ಇತ್ತಲಾಗಿಂದ ಒಂದು ನವೀನ ಚರ್ಚೆಯು ತಲೆದೋರಿರುವುದು. ಇಲ್ಲಿಯ ಯಾವ ದೇವಸ್ಥಾನಗಳಾದರೂ ಹೋಗಿ ಈ ಚರ್ಚೆಯು ಹ್ಯಾಗೆ ಜನಿಸಿತೆಂಬದನ್ನು ಪರೀಕ್ಷಿಸುವನೆಂದರೆ ಕೊರಳಿಗೆ ಜನಿವಾರವೂ ಇಲ್ಲಾ ತಲೆಗೆ ಜುಟ್ಟೂ ಇಲ್ಲವಲ್ಲಾ!

ಉಡುಪಿ. ಈ ತಾರೀಕು ೧೩ರಲ್ಲು ಮಿ। ಆರ್ ಕೃಷ್ಣಮೇನನ್ ಎಂಬವರು ಇಲ್ಲಿಯ ಅನಂತೇಶ್ವರ ದೇವಸ್ಥಾನದಲ್ಲಿ ಸುಶೋಪನ್ಯಾಸವನ್ನು ಮಾಡಿದರು. ಇವರ ಸ್ವಭಾವವು ಮಲಯಾಳಿ ವಿದ್ವಾಂಸರು ಕನ್ನಡ ಭಾಷೆಯಲ್ಲಿ ಮಾತಿನ ಪ್ರಮೂಲವಾಗಿ ಬಹು ರಸವತ್ತಾಗಿಯೂ ಯುಕ್ತಿಯುಕ್ತವಾಗಿಯೂ ಮಾತಾಡಿದರು. ನೂರಾರು ಜನರು ಕೇಳಿ ಸಂತೋಷಪಟ್ಟರು. ತಾ ೧೭ಕ್ಕೆ [illegible] ಸರಾದ ನ ಮ ಸಂಕರಂಬಳ್ಳಿ ಪದ್ಮನಾಭಾಚಾರ್ಯರು ದ್ವೈತ ಮತದ ಕುರಿತು ಉಪನ್ಯಾಸ ಮಾಡುವರು. ಈ ಕಾಲದಲ್ಲಿ ಮತಗಳ ವಿಷಯದಲ್ಲಿ ಬಗ್ಗ್ಯಾಗ್ಯ ಉಪನ್ಯಾಸವಾಗುತ್ತಿರುವದು ಒಳ್ಳೆಯದೆ.

ಕುಂಡಡ್ಕ. ಇಲ್ಲಿ ಗುಡ್ಡಪ್ಪ ರೈಗಳಿಂದ ಸ್ಥಾಪಿಸಲ್ಪಟ್ಟ ಹೊಸ ಶಾಲೆಯ ಪ್ರಥಮ ಸಂದರ್ಶನೆಗೆ ಕಾಸರಗೋಡು ರೇಂಜು ಶಾಲೆಯ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾ ಪಿ ಮಂಗೇಶರಾಯರವರು ಇದೇ ತಿಂಗಳ ತಾ ೩ಲ್ಲು ಬಂದಿದ್ದರು. ಹಾಜರುಪಟ್ಟಿಯಲ್ಲಿರುವ ೬೧ ಹುಡುಗರ ಪೈಕಿ ೫೫ ಹುಡುಗರು ಹಾಜರಿರುವುದನ್ನೂ ನೋಡಿ ಬಹಳ ತೃಪ್ತಿಹೊಂದಿದ್ದಲ್ಲದೆ ಗುಡ್ಡಪ್ಪ ರೈಗಳವರು ಮೇಹನತ್ತು ಪಡದು ಈ ಶಾಲೆ ಸ್ಥಾಪಿತವಾಯಿತೆಂಬದನ್ನು ಕೇಳಿ ಬಹಳ ಸಂತೋಷಪಟ್ಟರು. ಇನ್ನೂ ರೂ ೧೦೦ರ ವರೆಗೆ ಖರ್ಚು ಮಾಡಿ ಶಾಲೆಗೆ ಬೇಕಾದ ಸಾಮಗ್ರಿಗಳನ್ನೂ ತರಿಸಿಕೊಡುವರೆ ರೈಗಳವರು ವಾಗ್ದತ್ತ ಮಾಡಿರುವರು.

ಎರ್ಮಾಳ. - ಸ್ವದೇಶಾಭಿಮಾನಿಯ ಕಳೆದ ೧೧ನೇ ಸಂಚಿಕೆಯಲ್ಲಿ ಇಲ್ಲಿಯ ಪೋಸ್ಟಾಫೀಸಿನಿಂದ ಪ್ರಜೆಗಳು ಹೊಂದುವ ಕಷ್ಟಗಳ ಕುರಿತು ಸೂಚಿಸಿದೆಯಷ್ಟೆ. ಇದೇ ತಿಂಗಳಲ್ಲಿ ಪೋಸ್ಟಾಫೀಸು [illegible] ಮೇಲಾಧಿಕಾರಿಗಳಿಂದ [illegible]

ಖುಳಿಯೋಣಾದ ಬೇಚಾಟಗಳು ಆದಷ್ಟು ಬೇಗ ನಿವಾರಿಸಲ್ಪಡುವದಾಗಿ ಕೋರುತ್ತೇವೆ.

ಕಳೆದ ಬಿರುಗಾಳಿಯ ಸಮಯ ಇಲ್ಲಿ ಸಮುದ್ರ ಕಿನಾರೆಯಲ್ಲಿ ತೇಲಿಬಂದ ಸುಮಾರು ೫೦,೦೦೦ ತೆಂಗಿನಕಾಯಿಗಳನ್ನು ಪಟೇಲರು ಜಮಾಯಿಸಿರುವರಷ್ಟೆ. ಅವುಗಳ ಏನೊಂದು ವಿಲೆವಾರಿಯು ಈ ವರೆಗೆ ಆಗಲಿಲ್ಲ. ಆದಷ್ಟು ಬೇಗನೆ ಅವುಗಳ ವಿಲೆವಾರಿ ಮಾಡದಿದ್ದರೆ ಅವನ್ನು ತೆಗದುಕೊಳ್ಳುವ ಅಸಾಮಿಯರು ತಮ್ಮ ತೋಟದಲ್ಲಿ ಸಸಿಗಳನ್ನು ನಡುವರೆ ಗುಳಿಗಳನ್ನು ಅಗಿಸುವ ಕಾಲವು ಒದಗುವುದು.

ಇಲ್ಲಿಯ ಮಾಜಿ ಪಟೇಲರಾದ ಮಾರಂ[illegible] ಹೆಗ್ಗಡೆಯವರು ಮಾಡಿಸಿದ ನೆಲಕಡಲೆಯ ಕೃಷಿಯು ಬಹಳ ಒಳ್ಳೇ ಸ್ಥಿತಿಗೆ ಬಂದಿರುತ್ತದೆ. ಇವರ ಮಾದರಿಯನ್ನನುಸರಿಸಿ ಅನುಕೂಲವಿದ್ದಲ್ಲಿ ಈ ಕೃಷಿಯನ್ನು ಮಾಡಿಸಬಾರದೇ?

ವಿವಿಧ ವಿಷಯಗಳು

ಮನುಷ್ಯರ ಕೂದಲುಗಳನ್ನು ಕ್ರಯಕ್ಕೆ ಕೊಂಡುಕೊಳ್ಳುವ ವ್ಯಾಪಾರವು ಚೀನಾದೇಶದಲ್ಲಿ ಇತ್ತಲಾಗೆ ಹೆಚ್ಚುತ್ತಲಿರುವುದು. ಅಮೇರಿಕದ ಸಂಯುಕ್ತ ಸಂಸ್ಥಾನದ ಬಗ್ಗೆ ಚೀನಾದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಸಿಕ್ಕುವ ಮನುಷ್ಯರ ಕೂದಲನ್ನು ಸಂಗ್ರಹಿಸಿ ಹೋಂಕ್ಕೋಂಗ್ ಪಟ್ಟಣಕ್ಕೆ ತರುವರು. ಇಲ್ಲಿ ಇದನ್ನು ಅವುಗಳ [illegible] ಗನುಗುಣವಾಗಿ ವಿಂಗಡಿಸಿ ವೈದ್ಯ ಇಲಾಖೆಯವರ ನಿಯಮಗಳಿಗನುಸಾರವಾಗಿ ಇವುಗಳನ್ನು ಸ್ವಚ್ಛಗೊಳಿಸಿದನಂತರ ಸಣ್ಣ ಕಟ್ಟುಗಳಾಗಿ ಕಟ್ಟಿ ಅಮೇರಿಕಕ್ಕೆ ಕಳುಹಿಸಿಕೊಡುವರು. ೧೯೦೭ನೇ ವರುಷದಲ್ಲಿ [illegible] ರಾತ್ತಲು ಕೂದಲು ಚೀನಾದೇಶದಿಂದ ಅಮೇರಿಕದ [illegible] ಸಂಸ್ಥಾನಕ್ಕೆ ರಫ್ತಾಗಿತ್ತು. ೧೯೦೮ನೇ ವರುಷದಲ್ಲಿ [illegible] ರಾತ್ತಲುಗಳಿಗೆ ಇದು ಏರಿರುವುದು. ಅಮೇರಿಕದ ನ್ಯೂಯೋರ್ಕ್ ಪಟ್ಟಣದಲ್ಲಿ ಕೂದಲಿನ [illegible] ರಚನೆಯನ್ನೂ ಮಾಡಿಸಿ ಸ್ತ್ರೀಯರ ಮತ್ತು ಕೂದಲಿಲ್ಲದವರ ಅಲಂಕಾರದ ಬಗ್ಗೆ ವಿಧವಿಧವಾ[illegible] ಇದನ್ನು ಉಪಯೋಗಿಸುವರು.

ಘರದಿಪ್ರರದ ಜಿಲ್ಲೆಯ ಕೋಟ[illegible] ದೇಶೋನ್ನತಿ ಬಗ್ಗೆ ಉಮೇದುವಾರರಾಗಿ [illegible] ವಂಥಾ ಯುವಕರು, ಅಥವಾ "[illegible]ಳು" ಅಲ್ಲಿಯ ಜನರಿಗೆ ಕುಡಿಯುವದಕ್ಕೆ [illegible] ಲ್ಲಿ ಹ್ಯಾಗೆ ನಾದುರಸ್ತಿಯಲ್ಲಿರುವ [illegible] ಕೆರೆಗಳನ್ನು [illegible] ದು ಜನರಿಗೆ ನೀರನ್ನು ದೊರಕಿಸಿ ಕೊಟ್ಟರೆಂ[illegible] ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಈ ಯುವಕರೇ ಇತ್ತಲಾಗೆ ತಮ್ಮ ಹಳ್ಳಿಯ [illegible] ದುರಸ್ತಿ ಮಾಡಿದ್ದಲ್ಲದೆ ಹಲವು ಹೊಸ ರಸ್ತೆಗಳನ್ನು ಸಹಾ ಮಾಡಿರುವರು. ಈ ಯುವಕರಲ್ಲಿ ಅನೇಕ [illegible] ವಂತರ ಮಕ್ಕಳೂ ಬ್ರಾಹ್ಮಣ ಜಾತಿಯವರೂ ಸಹಾ ಇರುವರು. ರಾಷ್ಟ್ರೀಯ ಭಾವವು ಹೀಗೆ ಪ್ರತಿ ಹಳ್ಳಿಯ ಯುವಕರಲ್ಲಿ ಸಹ ತಲೆದೋರಿದ್ದಲ್ಲಿ ಭಾರತೀಯರ ಮೇಲ್ಮೆಯು ತನ್ನಂತೆಯೇ ಸಾಧಿಸಿದಂತಾಗುವದು.

ಮದ್ರಾಸು ಸಂಸ್ಥಾನದಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಕಲಿಸುವ ೨೬೨ ಸಂಸ್ಕೃತ ವಿದ್ಯಾಶಾಲೆಗಳಿರುವವು. ಇವುಗಳಲ್ಲಿ ಹೆಚ್ಚು ಕಡಿಮೆ ೫,೦೦೩ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಹೊಂದುತ್ತಿರುವರು. ಇವುಗಳಲ್ಲಿ ೩೧ ಶಾಲೆಗಳಿಗೆ ಮಾತ್ರ ಸರಕಾರದವರಿಂದ ಯಾ ಲೋಕಲ್ ಫಂಡು ಬೋರ್ಡುಗಳಿಂದ ಗ್ರೆಂಟ್ಸ್ ಇನ್ ಐಡ್ ಅಂದರೆ ದ್ರವ್ಯ ಸಹಾಯವು ಕೊಡಲ್ಪಡುವುದು. ಹೀಗೆ ದ್ರವ್ಯ ಸಹಾಯವನ್ನು ಪಡಿಯುವ ಶಾಲೆಗಳಲ್ಲಿ ೧೮೭ ಜನ ವಿದ್ಯಾರ್ಥಿಗಳಿರುವರು. ಈ ೩೧ ಶಾಲೆಗಳ ಬಗ್ಗೆ ವರುಷ ಒಂದಕ್ಕೆ ರೂ. ೩,೭೦೦ ದೊರಕುವುದು.

ಹಿಂದಿನ ಒಂದು ಸಂಚಿಕೆಯಲ್ಲಿ ಜೇನುನೊಣಗಳನ್ನು ಕಚ್ಚಿಸಿ ವಾತರೋಗವನ್ನು (Rheumatism) ಗುಣಪಡಿಸುವ ಉಪಾಯವನ್ನು ಕಂಡುಹಿಡಿದಿರುವರೆಂಬದನ್ನು ಸೂಚಿಸಿದ್ದಾಯಿತು. ಡಾಕ್ಟರ್ ಸ್ಟೋನ್ಸ್ ಎಂಬವರು ಈ ವಾತರೋಗದ ಚಿಕಿತ್ಸೆಯನ್ನು ಪರೀಕ್ಷೆ ಮಾಡುವ ಬಗ್ಗೆ ಅನೇಕ ಶೋಧನೆಗಳನ್ನು ನಡಿಸುತ್ತಿರುವರು. ಈ ಡಾಕ್ಟರರು ಇತ್ತಲಾಗೆ ನಡಿಸಿದ ಈ ಚಿಕಿತ್ಸೆಯ ವೃತ್ತಾಂತದಿಂದ ಇದರ ವಿಧಾನವನ್ನು ತಿಳಕೊಳ್ಳಬಹುದು. ಡಾಕ್ಟರ್ ಸ್ಟೋನ್ಸ್‌ರವರು ವೈದ್ಯೋಪಚಾರ ನಡಿಸುತ್ತಿದ್ದ ರೋಗಿಗೆ ವಾತದಿಂದ ಕೈಕಾಲುಗಳೆಲ್ಲ [illegible] ಕಟ್ಟಿದ್ದವು. ವಾತದ ಬೇನೆಯಿಂದ ರಾತ್ರಿ ನಿದ್ರೆ [illegible] ಬೇಕಾದರೆ ಏನಾದರೂ [illegible] ವಿಸಬೇಕಿತ್ತು. ಡಾಕ್ಟರರವರು [illegible] ಜೇನುನೊಣವನ್ನು ಹಿಡಿದು [illegible] ಗಾಜಿನ ತಟ್ಟೆಯಲ್ಲಿ ಹಾಕಿ ಆ ಗಾಜಿನ ತಟ್ಟೆಯನ್ನು [illegible] ಮೇಲೆ ಕವಚಿಟ್ಟು ನೊಣವು ಕಚ್ಚುವಂತೆ ಅದನ್ನು ಪ್ರೇರೇಪಿಸಿದರು. ನೊಣವು ಗಾಜಿನ ತಟ್ಟೆಯಲ್ಲೆಲ್ಲಾ ತಿರುಗಾಡಿ [illegible] ಕಚ್ಚಿತು. ಕಚ್ಚಿಯಾದ ಕೆಲವು ನಿಮಿಷಗಳ [illegible] ನೋವು ಸ್ವಲ್ಪ ಕಡಿಮೆಯಾಯಿತು. ರೋಗಿಯ ಅಪೇಕ್ಷೆ ಪ್ರಕಾರ ಇನ್ನರಡು ಜೇನುನೊಣಗಳನ್ನು ಹಿಡಿದು ಆ [illegible] ಯಲ್ಲಿರಿಸಿ ಅದೇ ರೀತಿ ಕಚ್ಚಿಸಿದರು. ರಾತ್ರೆಯಲ್ಲಿ ಯಾವ ಔಷಧಿಯನ್ನು ತಕೊಳ್ಳದೆ ರೋಗಿ [illegible] [illegible] ಸಾಧಾರಣ [illegible] [illegible] ಕಚ್ಚಿಸಿ [illegible] ದೆ.

[illegible]

[illegible] ಲಾಲಜೀಯವರು ಈ ವರ್ಗದವರಾಗಿರುವರು. ಮೊದಲನೇ ವರ್ಗದ ಪ್ರಜಾರಂಜಕರಾಗಬೇಕಾದರೆ ಅಪೂರ್ವ ಸದ್ಗುಣಗಳು ಹಲವು ಸಂದರ್ಭಗಳಲ್ಲಿ ಬೇಕಾಗುವವು. ಆದರೆ ಹಾಜೀಭಾಯಿ ಲಾಲಜೀಯವರಂತೆ ಸಾಹಸಿಕರಾಗಿ ದೇಶಸೇವೆಯನ್ನು ಮಾಡುವುದು ಎಲ್ಲರಿಗೂ ಅಸಾಧ್ಯವಲ್ಲ. ಲಾಲಜೀಯವರು ತಾನು ಜನಿಸಿದ ಕಚ್ ಪಟ್ಟಣದಲ್ಲಿ ತನ್ನ ಸ್ವಜಾತಿಯವರ ಉನ್ನತಿ ಬಗ್ಗೆ ಪಾಠಶಾಲೆಗಳನ್ನೂ, ಮಸೀದಿಗಳೆಂಬ ಮಹಮ್ಮದೀಯರ ದೇವಾಲಯಗಳನ್ನೂ, ಆಸ್ಪತ್ರೆಗಳನ್ನೂ ಕಟ್ಟಿಸಿದರು. ಬಡಜನರೆಲ್ಲರಿಗೂ ಇವರು ದಾನಿಗಳಾಗಿದ್ದು ತನ್ನ ಸ್ವಜಾತಿಯವರ ಅಭಿವೃದ್ಧಿ ಬಗ್ಗೆ ರೂ. [illegible] ಗಳನ್ನು ಕೊಟ್ಟಿರುವರು. ಈ ಹೊರತಿ ಅವರ ಕುಟುಂಬದವರು [illegible],೦೦೦ ರೂಪಾಯಿಗಳನ್ನು ಕೊಡಿಸಿರುವರು. ತಾನು ಸ್ವತಹಾ ದೊಡ್ಡ ಸಾಹುಕಾರರಾಗಿದ್ದು ತಮ್ಮ ವೃತ್ತಿಯಲ್ಲಿ ಉನ್ನತ ಪದವಿಯನ್ನು ಪಡೆದರು. ಅರಬಿಯಾ, ಆಫ್ರಿಕಾ, ಎಡೆನ್ ಮೊದಲಾದ ಪ್ರಾಂತ್ಯಗಳಲ್ಲಿಯೂ ಇನ್ನೂ ಹಲವು ದೇಶದ ಬಂದರುಗಳಲ್ಲಿಯೂ ಇವರ ವ್ಯಾಪಾರವು ನಡೆಯುತ್ತಿತ್ತು. ಮುಂಬಯಿಯ ಆಕ್ಟರ್ ಮೆನ್ಯುಫೆಕ್ಚರಿಂಗ್ ಎಂಡ್ ಪ್ರೆಸ್ ಕಂಪೆನಿ ಎಂಬ ಕಾರಖಾನೆಯ ಪಾಲುಗಳ ಮೌಲ್ಯವು ಇವರ ಅಧೀನತೆಯಲ್ಲಿ ಬರುವಾಗ ೧೫೦ರಲ್ಲಿ ರೂಪಾಯಿ ೧೮೦ ಇದ್ದದ್ದು ಈಗ ರೂ. ೫೦೦ ಆಗಿರುವುದು. ಪಕ್ಕದ ಪರ್ಸುತ್ತಿರುವ ಬರಹನ್ಪೂರ ತಪತೀ ಮಿಲ್ಸ್ ಎಂಬ ಅರಳೆ ಕಾರ್ಖಾನೆಯು ಇವರ ಆಡಳಿತೆಯಲ್ಲಿತ್ತು. ಬಹಳ ವಿಶೇಷವಾದ ವಿದ್ಯಾಭ್ಯಾಸಂಗವನ್ನು ಪಡೆಯದಿದ್ದರೂ ತಮ್ಮ ನೈಸರ್ಗಿಕವಾದ ಸಾಮರ್ಥ್ಯದಿಂದಲೂ ಚಟುವಟಿಕೆಯಿಂದಲೂ ಈ ಮಹಮ್ಮದೀಯ ಪುರುಷನು ದೇಶಸೇವೆಯನ್ನು ಮಾಡಿದನೆಂಬದು ಎಲ್ಲರಿಗೂ ವ್ಯಕ್ತವಾಗುವದು.

ನಿಂಬೆಹಣ್ಣಿನ ರಸವು ಮಿಳಿತವಾದ ನೀರನ್ನು ಸ್ನಾನಮಾಡಿದ್ದಲ್ಲಿ ಮೈ ಬಣ್ಣವು ಕುಂದದೆ ಈ ಸ್ನಾನವು ದೇಹದ ಚರ್ಮ ಮುಖೇನ ಧಾತುಪುಷ್ಟಿಯನ್ನು ಕೊಡುವುದೆಂಬದಾಗಿ ತಿಳಕೊಳ್ಳುತ್ತೇವೆ. ಹೊಲ್ಲೆಂಡ್ ದೇಶದ ವಿಲ್‌ಹೆಲ್ಮಿಯಾ ರಾಣಿಯು ತನ್ನ ದಿನಚರ್ಯದ ವ್ಯಾಯಾಮ ಅಭ್ಯಾಸದಿಂದಲೂ ಸ್ನಾನದಿಂದಲೂ ಬಹಳ ಆರೋಗ್ಯವಂದಿರುವರಂತೆ. ಈ ನಿಂಬೆಹಣ್ಣಿನ ರಸಮಿಳಿತವಾದ ಸ್ನಾನದ ನೀರನ್ನು ಈ ರೀತಿ ತಯ್ಯಾರಿಸುವರು — ಐದು ಯಾ ಆರು ನಿಂಬೆಹಣ್ಣುಗಳನ್ನು ಚೂರುಚೂರಾಗಿ ತುಂಡುಮಾಡಿ ಅರ್ಧತಾಸಿನ ವರೆಗೆ ಒಂದು ಹವಿಪಾಣೆ ನೀರಿನಲ್ಲಿ ಈ ಚೂರುಗಳನ್ನಿಡುವರು. ಸ್ನಾನಕ್ಕೆ ತಕ್ಕಷ್ಟು ನೀರು ತಯ್ಯಾರಾಗುತ್ತಲೇ ಈ ಹವಿಪಾಣದ ನಿಂಬೆಹಣ್ಣಿನ ನೀರನ್ನು ಸ್ನಾನದ ನೀರಿನಲ್ಲಿ ಹಾಕಿ ಅದನ್ನು ಚನ್ನಾಗಿ ಕದಡಿಸುವರು.

— o —

[illegible]ಲದಲ್ಲಿ ಸಾಕಷ್ಟು ಬಿಸಿಲು ಇರುವಂತೆಯೂ [illegible]ದಲ್ಲಿ ಅತಿರೇಕ ತಂಡಿಯು ವ್ಯಾಪಿಸದಂತೆಯೂ [illegible]ದೇಶದಲ್ಲಿ ಹಂಚುಗಳನ್ನು ಹಾಕುವ ಮೊದಲು ತಾವು ಹಚ್ಚಿದ ದಪ್ಪ ಕಾಗದವನ್ನು ಮಾಡುಗಳಿಗೆ ಹಾಕುತ್ತಿರುವರಾಗಿ ತಿಳಿದು ಬರುತ್ತದೆ.

ಅನ್ಯದೇಶದಲ್ಲಿ ತಯ್ಯಾರಾದ ಚಿಕ್ಕ ಬೀಡಿ ಯಾ ಸಿಗರೇಟ್ ಪ್ರಿಟಿಷ ಹಿಂದೂಸ್ಥಾನದಲ್ಲಿ ಬಹಳವಾಗಿ ಆಮದಾಗುತ್ತಿರುವವು. ೧೯೦೭-೦೮ನೇ ವರುಷದಲ್ಲಿ ರೂಪಾಯಿ [illegible] ಮೌಲ್ಯದ ೩,೦೬೩,೪೧೯ ರಾತಲು [illegible] ೧೯೦೮-೦೯ ವರುಷದಲ್ಲಿ ರೂ. ೫೭,೭೯,೧೬೫ ಮೌಲ್ಯದ [illegible] ರಾತ್ತಲುಗಳೂ ರಫ್ತಾಗಿರುವವೆಂದು ಕಂಡುಬರುತ್ತದೆ. ಇದರಲ್ಲಿ ಇಂಗ್ಲಾಂಡದಿಂದ ಮಾತ್ರ ೧೯೦೭-೦೮ನೇ ವರುಷದಲ್ಲಿ ರೂ. ೪೩,೭೭,೨೫೧ ಮೌಲ್ಯದ [illegible] ರಾತ್ತಲುಗಳೂ ೧೯೦೮-೦೯ನೇ ವರುಷದಲ್ಲಿ ರೂ. ೪೪,[illegible] ಮೌಲ್ಯದ ೨,೧೯೮,೪೮೦ ರಾತ್ತಲುಗಳೂ ರಫ್ತಾಗಿದ್ದವು. ಅಮೇರಿಕದ ಸಂಯುಕ್ತ ಸಂಸ್ಥಾನದಿಂದಲೂ ಜರ್ಮನಿ ಟರ್ಕಿ ಚೀನ ಮೊದಲಾದ ದೇಶಗಳಿಂದ ಸಹಾ ಸಿಗರೇಟು ನಮ್ಮ ದೇಶಕ್ಕೆ ರಫ್ತಾಗುತ್ತಿರುವುದು.

ಜೀವಸುಗಳ ಧಾರಣೆ, ಮಂಗಳೂರು.

ಒಳ್ಳೇ ಮಸ್ಕತಿ ಅಕ್ಕಿ ,,,,,,,,	5—8—0
ಗುಡ್ಡು ಮಸ್ಕತಿ ,,,,,,,,,	5—0—0
ಬೈಲು ಸುಗ್ಗಿ ,,,,,,,,,,,,,	4-14—0
ದುಯಂ ಗುಡ್ಡು ರಾಶಿ ,,,,,,,	4-11—0
ಮಸ್ಕತಿ ಬೆಳ್ತಿಗೆ ,,,,,,,,,,,	5—8—0
ರಂಗೂನ್ ಬೆಳ್ತಿಗೆ ಗೋಣಿ ,,,,	8—4—0
ಹುರುಳಿ ಗೋಣಿ ೧ರ ,,,,,,,	8—8—0
ಉಪ್ಪು ಗೋಣಿ ೧ರ ,,,,,,,,	3-13—0
ಕೊಬ್ರಿ ಎಣ್ಣೆ ಮಣ ,,,,,,,,,	5—3—0
ರಾಶಿ ಖಂಡಿ ೧ರ ,,,,,,,	205—0—0
ಕಾಳು ಮೆಣಸು ಖಂಡಿ ,,,,	110—0—0
[illegible]	75—0—0
[illegible]	2—12—0

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ, ಇದೆ ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ ಕಪ್ಪಾಗಿಯೂ ಬೆಳೆಯುವವು ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು ಮತ್ತು ಸುಖಕರವಾಗಿ ನಿದ್ದೆ ಬೀಳುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲಿ ಒಂದರ 6 ಆಣೆ

ರೋಯಲ್ ಟ್ರೇಡಿಂಗ್ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಜಖಮು, ಘಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬುದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲಿ ಒಂದಕ್ಕೆ 8 ಆಣೆ ೬ ಬಾಟ್ಲಿಗಳಿಗೆ 2 ರೂ 10 ಆಣೆ ೧೨ ಬಾಟ್ಲಿಗಳಿಗೆ ೫ ರೂ ಬಹಳ ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ ರಾ. ಪಾಠಕ್ ಮತ್ತು ಕಂಪೆನಿ,
ಠಾಕುರ್‌ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೊಒಪರೇಟಿವ್ ಇನ್ಸ್ಯುರೆನ್ಸ್ ಸೊಸೈಟಿ ಲಿಮಿಟೆಡ್,
ಎಂಬ

ಜೀವವಿಮೇ ಉತ್ತರಿಸುವ ಸಂಘ

ಹೆಡ್ ಆಪೀಸು —41 ಹೇರ್ ಸ್ಟ್ರೀಟ್ ಕಲ್ಕತ್ತಾ
ಬ್ರೆಂಚ್ ಆಪೀಸು —42 ಎಲ್ಫಿನ್‌ಸ್ಟನ್ ಸರ್ಕಲ್ ಮುಂಬಯಿ
1906ರಲ್ಲಿ ಸ್ಥಾಪಿಸಲ್ಪಟ್ಟಿತ
ಸಂಘದ ನಿಯಮಿತ ಬಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವವು

ಪಾಲುಗಳ ಮೇಲಣ ಮುನಾಫಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಎಹುದು

1908 ದಶಂಬರ ತಿಂಗಳ ವರೆಗೆ ರೂ 13,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸಂಗತಿಗಳು ಕಂಪೆನಿಯ ಪಾಲುದ್ದಾರಿಕರಿಗ ಸೇಕಡಾ 7ರಂತೆ ಮುನಾಫೆಯು ಪ್ರಥಮ ವರುಷದಲ್ಲಿ ಕೊಟ್ಟಿರುವುದು ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಲ್ಪಿದ ಒಂದು ವಾರದಲ್ಲಿಯೇ ವಿಮೇದಾರನ ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಾಯಿಸಬಹುದು ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಭಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಬಿ. ಬಾಬುರಾವ್ ಎಂಡ್ ಸನ್ಸ್
ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ

ಅನುಮಾನಪತ್ರ ಬಾಟ್ಲಿಯೊಂದಿಗಿರುವುದು. | **ಸಿದ್ಧಲಕ್ಷ್ಮೀ ವಿಲಾಸ.** | ಕ್ರಯ ಬಾಟ್ಲಿಗೆ 12 ಆಣೆ.

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ ಸೇವನೆಗೂ ... ಯುಕ್ತವಾಗಿರುವುದು (ಅಸನದಲ್ಲಿ) ಗುದದ್ವಾರದ ಹತ್ತರ ಬೀಳು ... ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ... ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು.

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್' ... ವದೇ ಅಗತ್ಯವಿಲ್ಲ. ಒಂದು ಸಾರಿ ... ಬರುವದು. ಬಾಟ್ಲಿ ಒಂದರ ಕ್ರಯ ...

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾನಂದ ತೈಲವು** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨ **ಪ್ರಮೇಹರಿಪು ಬಿಂದು** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ

೩ **ಕಾಮೇಶ್ವರ ಮಾತ್ರೆ** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ ರೂ

೪. **ಪಂಚಜೀರಕ ಪಾಕ** ಎಲ್ಲ ಪ್ರದರಗಳನ್ನೂ ... ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ... ೨ ರೂ

೫ **ಸೂರಣಾವ ಲೇಹ** ... ಮೇಲೆ ಅತ್ಯುತ್ತಮವು ... ಕವಾಗಿದೆ ... ೨ ರೂ

೬ **ಪ್ಲೀಹೋದರಾರಿ ಚೂರ್ಣ** ... ದಾರುಣವಾದ ಜ್ವರದ ... ಪಡಿಸುವದು ತಿಂಗಳ ಔಷಧಕ್ಕೆ ...

೭ **ಜಗನ್ಮೋಹನ ದಂತಮಂಜನ** ... ಗಳನ್ನು ಪರಿಹರಿಸತಕ್ಕ ... ವನೌಷಧಗಳಿಂದ ತಯಾರಿಸಿ ... ೧೦ ತೊ ... ೧೦ ...

೮ **ಸರಳಬೇದಿ ಮಾತ್ರೆ** ... ತೊಲೆಗೆ ೨ ರೂ

೯ **ಮಹಾಜ್ವರಾಂಕುಶ ಮಾತ್ರೆ** ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೧೦ **ವಾಸಾವ ಲೇಹ** ಕಮ್ಮು ... ಕಫ, ಕ್ಷಯಗಳ ಮೇಲೆ ರಾಮಬಾಣವು ... ೨ ರೂ

೧೧ **ಶಾಲ್ಮಲೀ ಪಾಕ** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ ಕಾಂತಿ ... ಕೊಡುವದು ... ೨ ರೂ

೧೨ **ವಾತಮುರಾರಿ ಬಾಮ್** ತಲೆನೋವು, ಎದೆನೋವು, ಸೊಂಟನೋವು, ... ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು ಬಾಟ್ಲಿಗೆ ... ಆಣೆ ... ಬಾಟ್ಲಿಗೆ ೧ ರೂ ೬ ಆಣೆ

೧೩ **ಗಜಕರ್ಣ ಕೇಸರಿ ಮುಲಾಮು** ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ... ಲೇಪನದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ ... ೪ ಆಣೆ ೩ ಕರಡಿಗೆಗ ೧೧ ಆಣೆ

೧೪ **ಪನ್ನೀರಾಂಜನ (ಸುರುಮಾ)** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ... ತೊಲೆಗೆ ೧ ರೂ

೧೫ **ಪ್ರಜ್ಞಾ ಸಾರಸ್ವತ ಚೂರ್ಣ** ಉನ್ಮಾದ, ಅಪಸ್ಮಾರ, ಉಗ್ಗು ಮಾತು ... ಸ್ಮರಣಶಕ್ತಿಯನ್ನು ಬೆಳೆಯಿಸುವದು ... ಕೊಡುವದು ಕಂಠಸ್ವರವನ್ನು ಮಧುರವಾಗಿಸುವದು. ... ೧೦ ತೊಲೆಗೆ ೨ ರೂ ೮ ಆಣೆ

☞ ... ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ... ದೊರೆಯುವವು ನಮ್ಮ ದೊಡ್ಡ ಕನ್ನಡ ಕಟಲಾಗು ... ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿದಾನ ಮಾಡಿ ಔಷಧ ... ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ — ಬಿ ... ನಾಥ ಮತ್ತು ಕಂಪನಿ,
ಬಾಂದ್ರಾ (ಮುಂಬಯಿ ಹತ್ತಿರ)
Bandra (near Bombay)

ROYAL TRADING Co. CIRCAUM BOMBAY.

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂದಿವಾತ ತಲೆನೋವು ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು ಗಂಟ್ಲು ನೋವು,

... ತಲೆ ನೋವು ...

ಇದರಿಂದ ಗುಣ ಕಂಡುಬರದವರಿಲ್ಲವಾದರೆ ಹಣ ಮರತು ... ಕ್ರಯ ಕಮ್ಮಿ ಗುಣ ಹೆಚ್ಚು ಒಂದುಸಾರಿ ಪರೀಕ್ಷಿಸಿ ...
ಬಾಟ್ಲಿ ಒಂದರ ಕಿಮ್ಮತ್ತು ೬ ಆಣೆ.

ಇನಾಮುಗಳು — ಒಂದೇ ಸಾರಿ ೬ ಬಾಟ್ಲಿಗಳನ್ನು ತರಿಸಿಕೊಂಡರೆ ಒಂದು ಅಲ್ಯುಮಿನಿಯಮ್ ಗ್ಲಾಸು ... ಬಾಟ್ಲಿಗಳನ್ನು ತರಿಸಿಕೊಂಡರೆ ... ಸಾವಿರಾರು ಜನರಿಗೆ ಗುಣಕೊಟ್ಟಿರುವ ಈ ನಮ್ಮ ರೊಯಲ್ ಇಂಡಿಯನ್ ಬಾಂಮನ್ನು ಪ್ರತಿ ಒಬ್ಬರೂ ತರಿಸಿ ಉಪಯೋಗಿಸುವಿರಾಗಿ ನಂಬುತ್ತೇವೆ ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು

ನಮ್ಮಲ್ಲಿಯ ಈ ಔಷಧಿಯು ಅನೇಕ ಕಡೆಗಳಲ್ಲಿ ಪ್ರಸಿದ್ಧಿಯಾಗಿದ್ದು ತಮ್ಮತ್ತ ಕಡೆಯಲ್ಲಿಯು ಸಹ ಪ್ರಸಿದ್ಧಿಯಾಗುವದೆಂಬದಾಗಿ ದೃಢಚಿತ್ತದಿಂದ ನಂಬುತ್ತೇವೆ

ವಿಳಾಸ — ರೊಯಲ್ ಟ್ರೇಡಿಂಗ್ ಕಂಪನಿ,
ಗಿರಗಾಂ ಮುಂಬಯಿ.

Sole Agent in Mangalore Town:—
Mangalore Trading Association,
Mangalore.



ಸುರಂಗಿ ಅತ್ತರು.

... ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ... ಇದರ ಪರಿಮಳವು ಹೆಚ್ಚು ಇದರ ಪರಿಮಳವು ... ಹೋಗುವದಿಲ್ಲ ಬಾಟ್ಲಿ ಒಂದರ ಕ್ರಯ No I· ... ರಿಲ್‌ಯುಸ್ ೧-೯-೦ ... ೦—೧೩—೦ ... ೦—೯—೦ ಚಂಪೋಲಿ ೦—... —೦

ಕೇಶವರ್ಧಿನಿ ಎಣ್ಣೆ ... ಪ್ರೀತಿಕರವಾದ ಎಣ್ಣೆ ಇದರಿಂದ ಕೂದಲು ... ಬಾಟ್ಲಿ ಒಂದರ ಕಿಮ್ಮತ್ತು ೦—೮—೦.

ಗಜಕರ್ಣದ ಮುಲಾಮು ೦—೪—೦

ರೊಯಲ್ ಟ್ರೇಡಿಂಗ ಕಂಪನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂದಿವಾತ ಸತತವಾತ, ಚೇಳುಕಡಿತ ತಲೆನೋವು, ಶೀತ, ಶಿರೋವಾಯು, ಗಂಟ್ಲುನೋವು, ಎದೆಶೀತ ಚಳಿಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ ಇನ್ನೂ ಸಾವಿರಾರು ಜನರು ಗುಣಹೊಂದುವರು ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ ಇದು ಎಳೇ ಮಗುವಿನ ದೇಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು.

ಬಾಟ್ಲಿ ಒಂದರ ಕಿಮ್ಮತ್ತು ರೂ. ೦—೬—೦ ... ಬಾಟ್ಲಿಗಳಿಗೆ ... ೧—೯—...

ವಿಳಾಸ:— ... ರಾಮರಾವ ...

ಸ್ವದೇಶಾಭಿಮಾನಿಯ ... [illegible]

Canara Hindu Permanent Fund, Ltd, Mangalore

ESTABLISHED JULY 1906.

ಕೆನೆರಾ ಹಿಂದೂ ಪರ್ಮನೆಂಟ್ ಫಂಡು, ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟದ್ದು.

1. Authorised Capital Rs.... ... ... 200,000.
Subscribed Capital... ... ... 145,000.
Paid up Capital ... ... 134,464.
Working Capital including deposits Rs. 321,874—3—1.
Uncalled Capital Rs. ... ... 6000.

2. **Reserve Fund**:- 25% of the net profits are set apart for Reserve annually and invested in Government Securities.

3. During the last 3 years dividends paid at not less than 6%.

4. Current deposit accounts opened free of charge.

5. Fixed deposits are received for periods of 3, 6 and 12 months at 4, 4½ and 5% respectively. For periods over 12 months and for deposits on behalf of religious and charitable institutions, public bodies, etc., special terms to be ascertained on application.

6. Short-notice deposits requiring one week's notice of withdrawl after one month received at 2½%.

7. Savings-Bank accounts opened and interest at 4½% allowed.

8. Loans and cash-credits:- The Fund grants accomodation on terms to be arranged against approved security.

9. Government Securities and shares purchased and sold and received for safe-custody. Dividends and interest collected.

10. Parcels for Safe-custody are received on terms to be ascertained.

11. Every description of banking and money agency business transacted.

For rules of business and other particulars apply to;—

Mangalore, August, 1st 1909. — **P. Gopal Naik**, *Secretary.*

೧. ನಿಯಮಿತ (ಅಧಿಕೃತ) ಮೂಲಧನವು ರೂಪ್ಯಾ ... ... ೨೦೦,೦೦೦.
ಪ್ರತಿಜ್ಞಾತ ಮೂಲಧನವು ರೂಪ್ಯಾ ... ... ೧೪೫,೦೦೦.
ಆಗತ ಮೂಲಧನವು ರೂಪ್ಯಾ ... ... ೧೩೪,೪೬೪.
ವ್ಯವಹಾರ ಯೋಗ್ಯವಾದ ಮೂಲಧನವು (ಠೇವಣಾತಿಯ ಹಣ ಕೂಡಾ) ರೂಪ್ಯಾ ೩೨೧,೮೭೪—೩—೧.
ಅಪ್ರಪ್ತ (ಕೇಳಲ್ಪಡದಿರುವ) ಮೂಲಧನವು ರೂಪ್ಯಾ ... ... ೬,೦೦೦.

೨. ರಕ್ಷಿತ ಧನವು (ಆಪದ್ಧನ):-- ವರುಷಂಪ್ರತಿ ಫಂಡಿಗೆ ಸಿಕ್ಕುವ ಶುದ್ಧಲಾಭದಿಂದ ಶೇಕಡಾ ೨೫ರ ಪ್ರಕಾರ ತೆಗೆದು ರಕ್ಷಿತ ಧನವಾಗಿ ಗವರ್ನಮೆಂಟ್ ಸೆಕ್ಯೂರಿಟಿಗಳಲ್ಲಿ ಇಡಲ್ಪಡುವದು.

೩. ಕಳೆದ ಮೂರು ವರುಷಗಳಲ್ಲಿ ಶೇಕಡಾ ೬ಕ್ಕೆ ಕಡಿಮೆಯಾಗದಂತೆ ಲಾಭವು ಪಾಲು ಮಾಲೀಕರಿಗೆ ಕೊಡಲ್ಪಟ್ಟದೆ.

೪. ಚಾಲ್ತಿ ಠೇವಣಾತಿ ಲೆಕ್ಕಗಳು ಠೇವಣೆದಾರರಿಗೆ ಖರ್ಚು ತಾಗದಂತೆ ಇಡೋಣಾಗುವವು.

೫. ಕಾಯಂ ಠೇವಣಾತಿಗಳು ತಿಂಗಳು ೩, ೬ ಮತ್ತು ೧೨ರ ಅವಧಿಗಳಿಗೆ ಕ್ರಮವಾಗಿ ಶೇಕಡಾ ೪, ೪½ ಮತ್ತು ೫ರ ಪ್ರಕಾರ ಪಡಕೊಳ್ಳಲಾದಾವು. ೧೨ ತಿಂಗಳುಗಳಿಗಿಂತ ಹೆಚ್ಚಿನ ಅವಧಿಯ ಠೇವಣಾತಿಗಳ ವಿಷಯದಲ್ಲಿಯೂ ಮತ ಸಮ್ಬಂಧವಾದ ಮತ್ತು ಧರ್ಮ ಸಮ್ಬಂಧವಾದ ಸಂಸ್ಥೆಗಳ ಕಡೆಯಿಂದಲೂ ಸಾರ್ವಜನಿಕ ಸಂಘ ಮೊದಲಾದವುಗಳ ಕಡೆಯಿಂದಲೂ ಇಡೋಣಾಗುವ ಠೇವಣಾತಿಗಳ ವಿಷಯದಲ್ಲಿಯೂ ಇರಬೇಕಾದ ವಿಶೇಷ ನಿಯಮಗಳನ್ನು ಕೇಳಿ ತಿಳಿದುಕೊಳ್ಳಬಹುದು.

೬. ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳ ಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡ ಬೇಕಾದ ಅಲ್ಪಕಾಲ ಸೂಚನಿಯ ಠೇವಣಾತಿಗಳು ಶೇಕಡಾ ೨½ರ ದರದಲ್ಲಿ ಪಡಕೊಳ್ಳಲಾದಾವು.

೭. ಸೇವಿಂಗ್ಸ್ ಬೇಂಕು ಆರಂಭಿಸಲ್ಪಟ್ಟಿದೆ; ಮತ್ತು ಶೇಕಡಾ 4½ರ ದರದಲ್ಲಿ ಬಡ್ಡಿಯು ಕೊಡೋಣಾಗುವದು.

೮. ಈಡಿನ ಸಾಲಗಳು ಮತ್ತು ಕರಾರು ಮೂಲಕ ಮೊದಲೇ ನಿರ್ಣಯಿಸಲ್ಪಟ್ಟ ಪ್ರಕಾರ ಮಿತಿಗೆ ಕೊಡುವ ಸಾಲಗಳು:— ಯೋಗ್ಯ ಜವಾಬ್ದಾರಿ ಕುರಿತು ಮಾಡಲ್ಪಡಬಹುದಾದ ನಿಯಮಗಳಿಗನುಸಾರವಾಗಿ ಫಂಡಿನಿಂದ ಹಣವು ಕೊಡೋಣಾಗುವದು.

೯. ಗವರ್ನಮೆಂಟ್ ಸೆಕ್ಯೂರಿಟಿಗಳನ್ನೂ ಶೇರುಗಳನ್ನೂ ಮಾರುವುದೂ, ಕೊಂಡುಕೊಳ್ಳುವುದೂ ಭದ್ರರಕ್ಷಣೆಗಾಗಿ ಇಟ್ಟುಕೊಳ್ಳುವುದೂ ಮಾಡಲ್ಪಡುವದು. ಅವುಗಳ ಲಾಭ (ಮುನಾಫೆ) ಮತ್ತು ಬಡ್ಡಿಯು ಸಂಗ್ರಹಿಸಲ್ಪಡುವದು (ವಸೂಲು ಮಾಡಲ್ಪಡುವುದು).

೧೦. ಫಂಡಿನಿಂದ ತಿಳಿದುಕೊಳ್ಳಬಹುದಾದ ನಿಯಮಗಳಿಗನುಸಾರವಾಗಿ ಗಂಟುಗಳು ಭದ್ರ ರಕ್ಷಣೆಗಾಗಿ ಪಡಕೊಳ್ಳಲಾದವು.

೧೧. ಎಲ್ಲಾ ಬಗೆಯ ಧನ ವ್ಯವಹಾರವೂ ಹಣದ ದಲಾಲಿಯೂ ನಡೆಸಲ್ಪಡುವವು. ಕಾರ್ಯ ನಿರ್ವಾಹದ (ವ್ಯವಹಾರ) ನಿಯಮಗಳನ್ನೂ ಬೇರೆ ವಿಶೇಷ ವಿಷಯಗಳನ್ನೂ ಸೆಕ್ರೆಟರಿಗಳಿಂದ ತಿಳಿದುಕೊಳ್ಳಬಹುದು.

ಮಂಗಳೂರು, ೧ನೇ ಆಗೋಸ್ತು, ೧೯೦೯. — **ಪಾಂಗಾಳ ಗೋಪಾಲ ನ್ಯಾಕ,** ಸೆಕ್ರೆಟರಿ.

Progress Statement of the affairs of the Fund during 3 years 1906-'07 to 1908-'09.

No.	Year.	Net income during the period.	Capital	Working Capital including deposits.
1.	31st March 1907.	Rs. 2420—11—9.	Rs. 54,045—0—0.	Rs. 96,464—15—9.
2.	„ „ 1908.	„ 6854—0—7.	„ 90,362—0—9.	„ 195,039—12—5.
3.	„ „ 1909.	„ 9259—9—8.	„ 124,246—0—0.	„ 272,544—9—10.

Mangalore, 1st August 1909. — **P. Gopal Naik,** *Secretary.*

ಕಳೆದ ಮೂರು ವರುಷಗಳ ಕೆನರಾ ಹಿಂದೂ ಪರ್ಮನೆಂಟ್ ಫಂಡಿನ ಅಭಿವೃದ್ಧಿಯ ಪ್ರೊಗ್ರೆಸ್ ಸ್ಟೇಟ್‌ಮೆಂಟು

[illegible]	[illegible]	[illegible]	[illegible]	[illegible]
೧.	[illegible] 1907	ರೂ. 2420—11—9	[illegible]	ರೂ. 96,464—15—9

"ಲಾ" ಪ್ರಕಟನೆಗಳು.

—o—

1 ವ್ಯವಹಾರ ನಿರ್ಣಯ—ಫುಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್ ಮಾಸಪತ್ರಿಕೆ, ಪ್ರಿವಿಕೌಂಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗಪಿ[illegible]ತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ ಪಿ ಬಿಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ. ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು ... ಮಲ್ಲಾರಾಧ್ಯರೈ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯುವದು

—o—

THE HINDU SOAP MANUFACTURING CO,
ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

—o—

- ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚರಬಿ ವಿರಹಿತವಾದದ್ದು ಮಾದರಿಗಳಿಗೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಬಿ. ದತ್ತ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳು

ಪರಿಮಳಾಂಜನ ನಂಬ್ರ 1 —ಇದರ ಬಾಹ್ಯಲೇಪನದಿಂದಲೇ ತಲೆನೋವ ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂದುವಾತ, ಶೀತ, ಕೆಮ್ಮು ಗಂಟ್ಲುನೋವು, ಜಖಮ್, ಉಳುಕು, ಗಾಯಗಳು, ಪಕ್ಷವಾತ, ಬೆನ್ನುನೋವು, ಕೈ ಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯ ಇಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0

2 ತಾಂಬೂಲ ಸುವಾಸಿನಿ —ಸೀಸೆ ೧ರ ಕ್ರಯ 0-4-0

3 ದಂತಮಂಜನ —ಡಬ್ಬಿ ೧ರ ಕ್ರಯ 0 2-0

4. ಗಜಕರ್ಣದ ಮುಲಾಮು —ಡಬ್ಬಿ ೧ರ ಕ್ರಯ 0 6-0

5. ನಯನಾಮೃತ ಸುರ್ಮ —ಸೀಸೆ ೧ರ ಕ್ರಯ 0 8-0

6. ಶ್ವಾಸಕುಠಾರ —ಡಬ್ಬಿ ೧ರ ಕ್ರಯ 0-8 0

7. ಪರಿಮಳಾಂಜನ ನಂಬ್ರ ೨ —ಡಬ್ಬಿ೧ರಕ್ರಯ 0 10 0

8 ಜ್ವರಾಂಕುಶ ಮಾತ್ರೆ ಡಜನ್ ೧ರ ಕ್ರಯ 1-8-0

9. ಸುಗಂಧ ವಶ್ಯದ ಪುಡಿ —ಡಬ್ಬಿ ೧ರ ಕ್ರಯ 0-6-0

10. ದಶಾಂಗಧೂಪ.—ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಶೇರು ೧ಕ್ಕೆ ರೂಪಾಯಿ 1 4-0

11. ದ್ರಾಕ್ಷಾರಿಷ್ಟ —ಬಾಟ್ಲಿ ೧ರ ಕ್ರಯ 2 8 0. ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಖಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು.

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರಿಯಿರಿ.

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಪೀಸು ವಿಶಾಖಪಟ್ನ ಮತ್ತು ಮದ್ರಾಸು

ಟ್ರಸ್ಟೀ -- ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ [illegible]ದವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಜಪ್ಪವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನು ನಮ್ಮ ಕಂಪೆನಿಯಿಂದ ದೊರೆಯುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ [illegible]ಕಾರದ ಪದ್ರುತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವದು

[illegible] ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರಖ್ಯಾತಿಹೊಂದ ಶ್ರೀಕೃಷ್ಣಪ್ರದರ್ಶರವರ ನಾನಾ ತರದ ದೃಷ್ಟಿಕನ್ನಡಿಗಳನ್ನು ಕಡಿಮೆ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾಗುವದು.

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು ದ ಕನ್ನಡ

ನಮ್ಮನ್ನು ಮರೆತಿರುವಿರೆ.

ಹಾಸನ್ ಟೋಪಿ ಮೊಲಿಯ ಉಲನ್‌ದಾರಗಳು,

1 ಟೋಪಿ ದಾರಕ್ಕೆ 0 4 0 ಹತ್ತು ಟೋಪಿಯಾಗುವ ಉಂಡೆಲಿಗೆ 3 7-0 ಹಾಸನ್ ಟೋಪಿ ದರ್ಜನ್ 1ಕ್ಕೆ 8 0 0 ಮತ್ತು 15 0 0

ದೊಡ್ಡ ಸ್ಟ್ಯಾಂಪು ಆಲ್ಬಮ್ 1ಕ್ಕೆ 0 ೬ 0, ಪೋಸ್ಟು ಕಾರ್ಡು 100ಕ್ಕೆ 0-3-0 ಕೂಕ್ಕೆ ಸೂಜಿ 1ಕ್ಕೆ 0 1 6 ಪರಿಮಳ ನಶ್ಯ ಡಬ್ಬಿ 1ಕ್ಕೆ 0 2-0 ಮೆಂತೋಲ್ ಡಬ್ಬಿ 1ಕ್ಕೆ 0-3 0 ಗಜಕರ್ಣದ ಮುಲಾಮು ಡಬ್ಬಿ 1ಕ್ಕೆ 0 ೬-0, ರಾಯಲ್ ದಂತಮಂಜನ ಡಬ್ಬಿ 1ಕ್ಕೆ 0 1 6, ಸೆನ್‌ಸೆನ್ ತಾಂಬೂಲ ಮಿತ್ರನು 300ಕ್ಕೆ 0 3-0, ನಯನಾಮೃತ ಸುರ್ಮ ಶೀಶೆ 1ಕ್ಕೆ 0 8 0, ಕಪಿಚೋ ಬಾಂ ಡಬ್ಬಿ 1ಕ್ಕೆ 0-8-0, ಚಂದ್ರಪ್ರಭಾಕರ ಮಾತ್ರೆ ಡಬ್ಬಿ 1ಕ್ಕೆ 1 4 0, ರೋಮನಾಶಕ ಸಾಬೂನು ಪೆಟ್ಟಿಗೆ 0-6-0, ಮಂಗಳೂರು ಬೀಡಿ 1000ಕ್ಕೆ 1 8-0 ಪವನ್ ಭಂಗಾರದ ರೋಜಾ ಹೂವು, 1ಕ್ಕೆ 7-12-0.

ನಮ್ಮಲ್ಲಿ ಇರುವಷ್ಟು ರೀತಿಯ ಉಲ್ ಬೇರೆ ಎಲ್ಲಿಯೂ ದೊರೆಯದು ಗ್ರಹಕರಿಗೆ ಯಾವ ರೀತಿ ಸಾಮಾನು ಬೇಕಾದರೂ ಸಿಕ್ಕುವದು.

ವಿಳಾಸ — **ಡಿ. ಊಲನ್ ಮಾರ್ಟ್,**
ಮಂಗಳೂರು, ಬಿ, 4/.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ	೫೨ ಸಾರಿ.
ಇಡೀ ಪಾನು	ರೂ ೧೦	ರೂ ೩೨	ರೂ ೭೨	ರೂ ೧೧೦	ರೂ. ೧೫೦.
ಅರ್ಧ ಪಾನು	,, ೬	,, ೧೮	,, ೩೮	,, ೬೦	,, ೮೫.
ಕಾಲು ಪಾನು	,, ೪	,, ೧೨	,, ೨೦	,, ೩೨	,, ೫೫.
ಅರೆಕಾಲು ಪಾನು	,, ೨	,, ೬	,, ೧೨	,, ೧೮	,, ೩೫.

ಸೂಚನೆ.—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ೩ ರೂ. ೧ ಆ. ಟಪ್ಪಾಲು ಹಾಸಲು ಇಲ್ಲದೆ ೧ ರೂ. [illegible] ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ [illegible] ಟಪ್ಪಾಲು [illegible] ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ) — **ಹಾಫ್‌ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ) — **ಫುಲ್‌ಬೈಂಡ್** (ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಯಾನೆಗಳಿದ್ದು ಗರಗಳುಳ್ಳವುಗಳು

3" × 8½", 3" × ೨½, 8½ × 6½" 6½ × 4' ಪರಿಮಾಣದಲ್ಲಿದ್ದು ಸಾವುಕಾರ ಅಂಗಡಿಗಾರ ವರ್ತಕರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಒಳಕೆ ಸಮಯದ ವರೆಗ ಬಾಳುವ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಬೇರೆ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಿಯಾ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯವಾಡಿ ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹಣವಿನ ಒಳ್ಳೇ ವಿನಿಯೋಗವು ಯಾವುದು ಬೆಲೆಗ ತಕ್ಕ ಒಡವೆಗಳನ್ನು ಪಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷದಿ ವ್ಯಾಪಾರಸ್ಥರಾಗಿದ್ದು ಈಗ 190[illegible]ನೇ ಇಸವಿಯಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್ ಬಾರ್ಲಿ ಕೊರ್ನ್‌ಫ್ಲೋರ್ ... ಕೋಕೋವಾ ಕಾಫಿ ಹುಡಿ ಬಿಸ್ಕೊಟು ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟ್ರರ ಔಷದೋಪಚಾರದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್ ಎಲ್ಲೊಸ್ಟಾರವ್ ಕೆಮಿಕಲ್ ಫುಡ್, ಗಜಕರ್ಣದ ಮುಲಾಮು, ಮೊದಲಾದವುಗಳೂ ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವಶಾಲಿಗಳೂ ಆದ ಡಾಕ್ಟ್ಯಾರರುಗಳಿಂದ ರೋಗಗಳು ಚಿಕಿತ್ಸೆಯನ್ನು ಹೊಂದಬಹುದು. ಪರಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಆಗುಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಒಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ಷಾಮೆಗಳು ವ ರಿಯಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ —

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಮಂಗಳೂರು.

Mangalore Trading Association.
Mangalore, S. Canara.

Registered No. M. 400.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು 27ನೇ ಶುಕ್ರವಾರ ಅಗೋಸ್ತು 1909 ಸಂಚಿಕೆ 21.

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನಿನಂತ ಮುಲಾಮು ಇದರಿಂದ ವಾತ ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು, ಜಖಮು ಉಳುಕು ಛಾಯೆ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸರ್ಕಾರ ... ದೇಹಸ್ವಾಸ್ಥ್ಯ ... ವಿದ್ಯುತವಾಗಿ ಹೆಚ್ಚಬಹುದ ... ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿಗೆ ಕಿಮ್ಮತು 8 ಆಣೆ

ಕಿಮ್ಮತು	ಕಿಮ್ಮತು
ಆರು	ಆರು
ಆಣೆ	ಆಣೆ
ಈ	ಈ
ನಮೂನೆ	ನಮೂನೆ
ಪಟ್ಟಿ	ಪಟ್ಟಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ತುರ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿಗೆ ಕಿಮ್ಮತು 6 ಆಣೆ. ೧೨ ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿಗೆ ಕಿಮ್ಮತು 2 ಆಣೆ

ವಜ್ರಗುಟಿಕ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿಸ ಕೊಕೊ, ಲೆಸಿತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೩೦ ಗುಟಿಕೆಗಳ ಡಬ್ಬಿಗೆ ಕಿಮ್ಮತು ರೂ 1

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ಧೆಗಳನ್ನೂ ಛಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿಗೆ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0

ಚೇಳು ಕಡತದ ಮೇಲ್ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿಗೆ ಕಿಮ್ಮತು 8 ಆಣೆ.

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನ ಶುದ್ಧಿ ಮಾಡುವದು. ಬಾಟ್ಲಿಗೆ ಕಿಮ್ಮತು ೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಜುಲಾಬು ಮಾತ್ರೆಗಳು	ರೂ	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0—10—0.
ಬಚ್ಚಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಲವಾಗಿಗೆ ...

ವಿಳಾಸ:— ವಿಲಿಯಂ ಕುಂಪ್ನಿ, ಕಂಪೆನಿ, ಫೋರ್ಟ್ ಮುಂಬಯಿ ...

ಫುಟ್‌ಬಾಲ್.

ನಂ॥ ೧ ರೂ ೩ ೦ ೦
೨ ,, ೩ ೬ ೦
,, ೩ ,, ೪ ೪ ೦
,, ೪ ,, ೫ ೦ ೦
,, ೫ , ೫ ೪ ೦

ಬಟನ್‌ಲೆಸ್

ನಂ॥ ೩ ರೂ ೫ ೦ ೦
, ೪ , ೫ ೮ ೦
೫ ,, ೬ ೦ ೦

ಕವರುಗಳು

ನಂ ೧ ರೂ ೧—೧—೦
, [illegible] —೧—೦
೩ —೬—೦
ನಂ॥ ೪ ರೂ ೭—೬—[illegible]
೫ ೯—೦—[illegible]

ಬಟನ್‌ಲೆಸ್

[illegible]

ಬ್ಲಾಡರ ಗಳು

[illegible]

ಇನ ಪ್ಲೇಟರ್

[illegible]

ರಬ್ಬರ ಸಿಮೆಂಟು

[illegible]



ಅಲಿಗಢ ಬೀಗಗಳು

[illegible]

ಹಿತ್ತಾಳೀ ಬೀಗಗಳು

[illegible]

ಕಬ್ಬಿಣದ ಬೀಗಗಳು

[illegible]

ಅಮೇರಿಕನ್ ಸ್ಟ್ರಿಂಗ್ ಬೀಗಗಳು

ಒಕ್ಕೆಂ [illegible] ಮಿಲ್ಲರ್ ಬೀಗ ಒಕ್ಕೆ [illegible]

ಟ್ರಂಕು ನ್ಯಾಲಾಕ್ ಒಕ್ಕೆ [illegible]

ಟ್ರಂಕುಗಳಿಗೆ ಹಾಕುವದಕ್ಕೆ ಅನುಕೂಲವಾಗಿ ಕೊಂ ತಿ ಒಗ್ಗಿಸಿರುವ ಬೀಗ ಒಕ್ಕೆ ೨ ಲೀವರು [illegible] ಲೀವರು ೧ ೦ ೦

ಒಂದೇಸಲಕ್ಕೆ ಬೀಗಗಳನ್ನು ವಿ ಪಿ ಯಲ್ಲಿ ತರಿಸಿಕೊಳ್ಳು ವವರಿಗೆ ಟಪಾಲು ಹಾಸಲು ಇಲ್ಲದೇ ಕಳುಹಿಸಲ್ಪಡುತ್ತೆ

ಹೆಚ್ ಎನ್ ರಾವ್ ಬ್ರದರ್ಸ್.
ಚಿಕ್ಕಪೇಟೆ, ಬೆಂಗಳೂರು ಸಿಟಿ.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು ಹಗಲ್ ಒತ್ತಿ ವಗೈರೆ ರಂಗು ಗಳ ವಸ್ತ್ರಾ 1ಕ್ಕೆ ರೂ 0—12—0

ಸೈಜು ಇಂಚು 22×22 ವಸ್ತ್ರಾ ಒಕ್ಕೆ, 1— 1—0

ಸೈಜ ಇಂಚು 15×15 ಬಿಳೀ ರೇಷ್ಮೆ ಮೇಲೆ ಕಲಾ ತ್ತು ಚೌಕ ಹೊಸ ನಮೂನೆ ವಸ್ತ್ರಾ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು

[illegible] 2 [illegible] ರೇಷ್ಮೆ ವಸ್ತ್ರಾ 1ಕ್ಕೆ [illegible] 12 13 14 1 16 17 [illegible] 1ಕ್ಕೆ [illegible] 9 10

ರೇಷ್ಮೆ [illegible]ಗಳು

[illegible] 1ಕ್ಕೆ [illegible] 1 4 0
1 [illegible] 1 1 10 0 1 12 0 2 0 0 [illegible] 0

[illegible]ಗಳು.

[illegible] 1ಕ್ಕೆ [illegible] 1 6 , 1 12 0

[illegible] 1ಕ್ಕೆ [illegible] 10 [illegible] 12 13 [illegible]

[illegible] 1ಕ್ಕೆ [illegible] 9 4 0 [illegible] 0 2 10 0

[illegible] 1ಕ್ಕೆ [illegible] 1 4 0 1 [illegible] 1 [illegible] 0

[illegible] 1ಕ್ಕೆ [illegible] 2 10 [illegible] 2 12 0 [illegible] 0 0

[illegible] ರಂಗುಗಳ ಕೀರ [illegible] 1ಕ್ಕೆ ರೂ [illegible] 6 0 3 [illegible] 0 3 12 0

[illegible] 1ಕ್ಕೆ ರೂ 4 12-0, [illegible]

ಹೆಚ್ ಸಂಕಪ್ಪಾ ಬಸಪ್ಪನವರು,
ಜವಳಿ ವ್ಯಾಪಾರಸ್ಥರು,
ಚಿಕ್ಕಪೇಟೆ,
ಬೆಂಗಳೂರು ಸಿಟಿ.

1 ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ) ಇದರಲ್ಲಿ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರ ಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಸಿದ್ದಾರೆ).

2 ಶ್ರೀಶಿವಾನಂದಲಹರಿ ಈ ಗ್ರಂಥಕ್ಕೆ ಪ್ರತಿಪದ ಟೀಕಾ ತಾತ್ಪರ್ಯ [illegible]-೦.

3, ಉತ್ತರ ರಾಮಚರಿತ್ರೆ ಕಥೆ ಬಹಳ ಸಾರಸ್ಯವಾದದ್ದು ೦-೫-೦.

4 ಟೀಕಾ ರಾಘವೇಂದ್ರ ಸ್ತೋತ್ರ ೦-೨-೦

5 ತೃಚಕಲ್ಪರೀತ್ಯಾ ಸೂರ್ಯ ನಮ ಸ್ಕಾರ ಸಮಂತ್ರಕ ಉದುತ್ಯ, ಮಹಾಸೌರ, ಆದಿತ್ಯ ಹೃದಯಾದಿ ೦-೨-೦

6 ಉದಕಶಾಂತಿ ಶುದ್ಧವಾದ ಪುಸ್ತಕ ೦-೨-೦.

7 ವಿಷ್ಣುಸಹಸ್ರನಾಮ ಮೂಲ ಶ್ಲೋ ಕ ರೂಪ ನಾಮರೂಪ ಕೂಡ ಚಿಕ್ಕ ಸೈಜು ೦-೨-೦.

8 ವಿಷ್ಣುಸಹಸ್ರನಾಮಕ್ಕೆ ಪ್ರತಿಪದ ಟೀಕಾ ತಾತ್ಪರ್ಯ [illegible] ಕಾಗದ ಕೆತ್ತಾನು [illegible] ೩-೦-೦.

9 [illegible] ಕಾಗದದಲ್ಲಿ ತಪ್ಪಿಲ್ಲದೆ ಟೀಕಾ ತಾತ್ಪರ್ಯ ಸಹಾ ಪ್ರಿಂಟಾ ಗಿದೆ ಹನ್ನೊಂದನೇ ರಖಂ ೧-೦-೦

10 [illegible] ರಖಂ ೦ ೧೨ ೦

11 [illegible] ಟೀಕಾ [illegible] ೦ ೨-೦

12 [illegible] ಟೀಕಾ ತಾ ತ್ಪರ್ಯ ೦-೨ ೦.

13 [illegible] ಪ [illegible] ಜೊಸೂಕ್ತ ನಾರಾ [illegible] ೦ ೨-೦

14 ಯಕ್ಷಗಾನ [illegible] ತಪ್ಪಿಲ್ಲದೆ [illegible] ಪ್ರಿಂಟು ಸರಿಯಾಗಿ ಪ್ರಿಂಟುಮಾಡಿದೆ ೦-೪-೦

15 ಸೂರ್ಯಸಹಸ್ರನಾಮ ಶ್ಲೋಕ, ನಾಮ ೦-೨ ೦

16 ಕೃಷ್ಣ [illegible] ಮೂಲ ೦-೨ ೦

17 ಯಕ್ಷಗಾನ ಪಂಚಬಾಣ ಕೃಷ್ಣ [illegible] ೦-೪-೦.

ಕಟಿಗಾಗಿ [illegible] ಬರೆದು ತರಿಸಿಕೊಳ್ಳಬಹುದು

[illegible] ಬಿ ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್
ಚಿಕ್ಕಪೇಟೆ,
ಬೆಂಗಳೂರು

— ೦ —

ಗಿಡಗಳು—ಬೀಜಗಳು—ಹಣ್ಣು—ಹುವ್ವು
ಮತ್ತು—ತರಕಾರಿ

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು ಲೇಬು, ಕಿತ್ತಳ ವಗೈರೆ ಹಣ್ಣುಗಳು ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾ ರಾ ವಗೈರೆ ಹುವ್ವಗಳು ಬೇಕಾದವರು ಬರದು ತರಿಸಿ ಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸ ಲ್ಪಡುತ್ತೆ

ಜಿ. ಎಸ್. ಗಿರಿಯಪ್ಪ ಅಂಡ್ ಸನ್ಸ್,
ಫ್ಲಾರಿಸ್ಟ್ ಅಂಡ್ ಸೀಡ್ಸಮೆನ್,
ಲಾಲಬಾಗ್ ಕೋಟೆ ರಸ್ತೆ,
ಬೆಂಗಳೂರು ಸಿಟಿ.

ವಿನಂತಿ.

ಮುಂಬಯಿ ಪಟ್ಟಣದಲ್ಲಿರುವ ಸೇವಾಸದನ, ಪೂಣೆ ಶಹರಿನಲ್ಲಿರುವ ಅನಾಥ ಬಾಲಿಕಾಶ್ರಮ (ವಿಧವಾಗ್ರಹ) ಮತ್ತು ಮಹಿಳಾ ವಿದ್ಯಾಲಯವೆಂಬ ಈ ಮೂರು ಸಂಸ್ಥೆಗಳ ಉದ್ದೇಶವನ್ನು ತಿಳಕೊಳ್ಳಲಪೇಕ್ಷಿಸುವವರೂ, ಈ ಸಂಸ್ಥೆಗಳ ಪ್ರಯೋಜನವನ್ನು ತಮ್ಮ ಹೆಣ್ಣು ಮಕ್ಕಳಿಗೆ ಪ್ರಾಪ್ತವಾಗಬೇಕೆಂತ ಅಪೇಕ್ಷಿಸುವ ಹೆತ್ತವರೂ ಮತ್ತು ಬಡತನದ ಸಂಬಂಧ ತಮ್ಮ ಹೆಣ್ಣು ಮಕ್ಕಳಿಗೆ ವಿವಾಹ ಮಾಡಲಿಕ್ಕೆ ಅನುಕೂಲವಿಲ್ಲದವರೂ ಸಹ ಕೆಳಗೆ ದಸ್ಕತು ಮಾಡಿದವರನ್ನು ಕಂಡು ಪ್ರಸ್ತಾಪಿಸಿದ್ದಲ್ಲಿ ಅಂಥಹ ಮಕ್ಕಳ ಶ್ರೇಯಸ್ಕರ ಪರಿಣಾಮಾರ್ಥ ಅಗತ್ಯವಿರುವ ಅನುಭವವೂ ಸಹಾಯವೂ ಸಂಪಾದಿಸಿಕೊಳ್ಳುವ ಉಪಾಯವನ್ನು ತೋರಿಸಿಕೊಡುತ್ತಾರು.

ಕುದ್ಮುಲ್ ರಂಗರಾವ್.

ವಿಜ್ಞಾಪನೆ.

ಸ್ವರ್ಗಸ್ಥರಾದ ನಮ್ಮ ದೇಶ ಬಂಧುಗಳಾದ ಸತ್ಪುರುಷ ಮಹಾರಾಜಶ್ರೀ ವಕೀಲ ಅಮ್ಮೆಂಬಳ ಸುಬ್ರಾಯ ಪೈಗಳ ಜೀವ ಚರಿತ್ರೆಯನ್ನು ಬರಿಯಬೇಕಾಗಿ ಆಲೋಚಿಸಿರುತ್ತದೆ. ಆದದರಿಂದ ಅವರ ಸ್ನೇಹಿತರಲ್ಲಿಯೂ ಪರಿಚರ್ಯಸ್ಥರಲ್ಲಿಯೂ ಯಾರಿಗಾದರೂ ಅವರ ಚರಿತ್ರೆಯಲ್ಲಿ ಬರಿಯಲಿಕ್ಕೆ ಯೋಗ್ಯವಾದ ಯಾವದೊಂದು ಸಂಗತಿ ತಿಳಿದ್ದರೆ ಅದನ್ನು ದಯಮಾಡಿ ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ಕಳುಹಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಮಂಗಳೂರು ವೆಂಕಟ ರಾವ್.

ಹಜೂರ ಶಿರಸ್ತೆದಾರ.

ಮಂಗಳೂರು, ದ. ಕ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 27ನೇ ಆಗೋಸ್ತು 1909.

ಮೆ. ಸ್ಟ್ರಿಂಗರವರೂ ನಮ್ಮ ಶಿಕ್ಷಣ ಪದ್ಧತಿಯೂ.

ನಮ್ಮ ಶಿಕ್ಷಣ ಪದ್ಧತಿಯು ರಾಜದ್ರೋಹಕ್ಕೆ ಕಾರಣವಾಯಿತೆಂದು ಕೆಲವು ಪ್ರಜಾವಿರೋಧಿಗಳು ವಾದಿಸುವದುಂಟು. ಇಂಗ್ಲಿಷರ ಚರಿತ್ರವನ್ನೂ, ಸ್ವತಂತ್ರವನ್ನೂ ಪ್ರತಿಪಾದಿಸಿ ಬರದ ಇಂಗ್ಲಿಷ ಗ್ರಂಥ ಕಾವ್ಯಗಳನ್ನು ದೇಶೀಯರಿಗೆ ಕಲಿಸಿಕೊಟ್ಟದ್ದರಿಂದ ಅವರು ಅಸಂತುಷ್ಟರಾಗಿ ಅನರ್ಥಕ್ಕೆ ದಾರಿಯಾಯಿತೆನ್ನುವರು. ಅಸಂತುಷ್ಟಿಯೇನೋ ಅಭಿವೃದ್ಧಿಗೆ ಮೂಲ, ಆದರೆ ರಾಜದ್ರೋಹಕ್ಕೂ ಇಂಗ್ಲಿಷ ವಿದ್ಯಾಭ್ಯಾಸಕ್ಕೂ ಎಲ್ಲಿಯ ಗಂಟು? ಇಂಗ್ಲಿಷ ವಿದ್ಯಾಸಂಪನ್ನರು ಆ ವಿದ್ಯೆಯ ಲಾಭಕ್ಕಾಗಿ ಇಂಗ್ಲಿಷರಿಗೆ ಕೃತಜ್ಞರಾಗಿರುವದರಿಂದಲೂ, ಅವರು ತಮ್ಮ ವಿದ್ಯೆಯ ಮುಖಾಂತರ ಮುಂದೆ ವ್ಯವಹಾರದಲ್ಲಿ ವರ್ಧಿಸುವಂತೆ ಇಂಗ್ಲಿಷ ಸರಕಾರವೇ ನೆಲೆಗೊಳ್ಳುವದು ಅವಶ್ಯಕವಾದ್ದರಿಂದಲೂ, ದೇಶಶಾಂತಿಗೂ ದೇಶಾಭಿವೃದ್ಧಿಗೂ ಇಂಗ್ಲಿಷ ಆಧಿಪತ್ಯವೇ ಸಹಕಾರಿಯೆಂದು ವಿದ್ಯಾವಂತ ವರ್ಗವು ತಿಳಿದಿರುವದರಿಂದಲೂ, ಮೇಲ್ಕಂಡ ಆರೋಪಣೆಗೆ ಯಾವ ಆಧಾರವೂ ಇಲ್ಲ. ಆದ್ದರಿಂದ ನಮ್ಮ ಶಿಕ್ಷಣಪದ್ಧತಿಯ ಕುರಿತು ಮಾಡತಕ್ಕ ಉದ್ಗಾರವು ನಮ್ಮ ಶಾಲೆಗಳಲ್ಲಿ ಕಲಿಸಕೂಡದ್ದ ಅಂಶಗಳನ್ನು ಕಲಿಸುತ್ತಾರೆಂಬದಲ್ಲ, ಕಲಿಸಬೇಕಾದ ಅಂಶಗಳನ್ನು ಲೋಪಿಸಿದ್ದಾರೆಂಬದಾಗಿರುವುದು. ಆ ನ್ಯೂನತೆಯು ಯಾವದು?

ಕಳೆದ ಕಾಲ ಮದ್ರಾಸು ಗವರ್ನರರವರು ಕೈಗಾರಿಕೆಗಳ ಉತ್ಕರ್ಷೆಯನ್ನು ಚರ್ಚಿಸುವ ಬಗ್ಗೆ ನೀಲಗಿರಿಯಲ್ಲಿ ಒಂದು ಕೋನ್ಫರೆನ್ಸ್ ಯಾ ಪರಿಷದವನ್ನು ಕೂಡಿಸಿದರಷ್ಟೆ. ಈ ವಿಷಯ ಆ ಸಭೆಗೆ ಮದ್ರಾಸ್ ಹಾರ್ಬರ್ ಟ್ರಸ್ಟಿನ ಅಧ್ಯಕ್ಷರಾದ ಮೆ| ಸ್ಟ್ರಿಂಗ್ ಸಿ. ಐ. ಇ. ಇವರು ಒಂದು ಲೇಖನವನ್ನು ಒಪ್ಪಿಸಿದ್ದರು. ಅದರಲ್ಲಿ ಅವರು ಶಿಕ್ಷಣ ಪದ್ಧತಿಯನ್ನು ಎರಡು ವಿಧವಾಗಿ ವಿಂಗಡಿಸಿ ಒಂದನ್ನು ದ್ವಿಪರಿಮಾಣ ಪದ್ಧತಿಯೆಂದೂ ಇನ್ನೊಂದನ್ನು ತ್ರಿಪರಿಮಾಣ ಪದ್ಧತಿಯೆಂದೂ ಕರೆಯುವರು. ನಮ್ಮ ವಿದ್ಯಾ ಶಾಲೆಯ ಪ್ರಕೃತ ಪದ್ಧತಿಯು ದ್ವಿಪರಿಮಾಣ ಪದ್ಧತಿಯಾಗಿದೆ. ಹ್ಯಾಗೆಂದರೆ ಇದರಲ್ಲಿ ವಿದ್ಯಾರ್ಥಿಯು [illegible] ಇಂದ್ರಿಯಗಳ ಸಹಾಯದಿಂದ ಕಲಿಯುತ್ತಾನೆ. ಈ ಪದ್ಧತಿಯನ್ನು ಪಾಶ್ಚಾತ್ಯರು [illegible] ಇಂದ್ರಿಯಗಳಿಗೆ [illegible] ಕ್ರಿಯವನ್ನು ಸೇರಿಸಿ ಅದನ್ನು ತ್ರಿಪರಿಮಾಣವಾಗಿ ಮಾರ್ಪಡಿಸಿರುವರು. ಅಂದರೆ ಚಿಕ್ಕ ದರ್ಜೆಗಳಲ್ಲಿಯೇ ಹುಡುಗನ ಕೈಗಳಿಗೂ ಕೆಲಸ ಕೊಡುವ ಬಡಿಗೆ ಮೊದಲಾದ ಕೈಗಾರಿಕೆಗಳನ್ನು ಕಲಿಸುವರು. ಈ ದಿನಗಳು ತ್ರಿಪರಿಮಾಣ ಪದ್ಧತಿಯ ಕಾಲವೆಂದೂ ದ್ವಿಪರಿಮಾಣದ ದಿನಗಳು ಕಳೆದು ಹೋದವೆಂದೂ ಮೆ| ಸ್ಟ್ರಿಂಗರವರು ಅಭಿಪ್ರಾಯಪಡುತ್ತಾರೆ.

ಯಾವದಾದರೊಂದು ಇಂದ್ರಿಯದ ದಕ್ಷತೆಯು ಅಭ್ಯಾಸವನ್ನು ಹೊಂದಿರುವದು. ಆತ್ಮರಕ್ಷಣಾರ್ಥ ಹುಲಿ, ಸಿಂಹ ಮೊದಲಾದ ಹಿಂಸ್ರ ಜಂತುಗಳ ಗರ್ಜನೆಗೆ ಕಿವಿಕೊಟ್ಟೇ ಇರಬೇಕಾದ್ದರಿಂದ ಕಾಡುಮೃಗಗಳ ಶ್ರೋತ್ರೇಂದ್ರಿಯವು ನಾಡುಮೃಗಗಳದಕ್ಕಿಂತ ತೀಕ್ಷ್ಣವಾಗಿದೆ. ಮತ್ತು ಚಿಕ್ಕಪ್ರಾಯದಲ್ಲಿ ಮಾಡದ ಅಭ್ಯಾಸವೂ ಕಲಿಯದ ವಿದ್ಯೆಯೂ ಮುಂದೆ ದುರ್ಲಭ. ಆದಕಾರಣ ಕೈಗಾರಿಕೆಗೆ ಅವಶ್ಯವಿರುವ ಹಸ್ತಲಾಘವವನ್ನು ಹುಡುಗರು ತಾರುಣ್ಯದಲ್ಲಿಯೇ ಕಲಿಯುವಂತೆ ಮೂಲ ಶಿಕ್ಷಣದ ಜೊತೆಯಲ್ಲಿ ಕೈಗಾರಿಕೆಯ 'ಓನಾಮವನ್ನು' ಕಲಿಸ ಬೇಕು. ಶಿಕ್ಷಣವು ಆ ರೀತಿ ಏರ್ಪಟ್ಟರೆ ಕೈಗಾರಿಕೆಯಲ್ಲಿ ಅಭಿರುಚಿ ಇರುವ ಹುಡುಗನಿಗೆ ಅದು ಚಿಕ್ಕ ಪ್ರಾಯದಲ್ಲೇ ತಿಳಿಯಬಂದು ತನ್ನ ಮುಂದಿನ ವೃತ್ತಿಯ ಕಡೆಗೆ ಮೊದಲಿಂದಲೇ ದೃಷ್ಟಿಯಿಡ ಬಹುದು. ತನಗೆ ಇಷ್ಟವಾದ ಕಸಬಿನಲ್ಲಿ ವೃದ್ಧಿ ಹೊಂದ ಬಹುದು. ಪಾಶ್ಚಾತ್ಯರಲ್ಲಿ ಈ ವಿಧದ ತ್ರಿಪರಿಮಾಣ ಪದ್ಧತಿಯು ಪ್ರಚಾರದಲ್ಲಿದೆ. ಸರಕಾರಿ ನೌಕರಿಗೆ ಬೇಕಾದ ಗುಮಾಸ್ತರು ಹುದ್ದೆದಾರರು ವಗೈರೆ ಇನ್ನು ಕಡಿಮೆ ಬೇಕೆಂದೂ, ಆದಕಾರಣ ಬರೇ ವಾಙ್ಮಯ ಶಿಕ್ಷಣದಲ್ಲಿ ತೃಪ್ತಿಪಡದೆ ಸರಕಾರದವರು ಔದ್ಯೋಗಿಕ ಶಿಕ್ಷಣಕ್ಕೆ ಮನಸ್ಸು ಕೊಡಬೇಕೆಂದೂ, ಮೆ| ಸ್ಟ್ರಿಂಗರವರು ಸೂಚಿಸುವರು.

ಈ ಗೃಹಸ್ಥರನ್ನು ನಾವು ಯಥಾರ್ಥ ಸ್ವದೇಶಿಯೆಂದು ಕರೆಯುವೆವು. ಭರತಖಂಡದ ಸಂಪತ್ತೂ ಪ್ರಜಾಸಮುದಾಯದ ಸೌಖ್ಯವೂ ವರ್ಧಿಸಬೇಕಾದರೆ, ಒಂದೇ ಒಂದು ಮಾರ್ಗವಿದೆ. ದೇಶೀಯರ ಭಂಡವಾಳದ ಸಹಾಯದಿಂದ ದೇಶೀಯ ಆಡಳಿತೆಯಲ್ಲಿ ಸ್ವದೇಶಿ ಕೈಗಾರಿಕೆಗಳು ಬೇಕಷ್ಟು ಊರ್ಜಿತಕ್ಕೆ ಬರಬೇಕು ಎಂದು ಮೆ| ಸ್ಟ್ರಿಂಗರವರು ಹೇಳುವರು. ಇದಲ್ಲವೇ ಯಥಾರ್ಥ ಸ್ವದೇಶೀಭಾವ. ವಸ್ತು ಸ್ಥಿತಿಯೇನು? ಬಿ. ಎ., ಎಂ. ಎ. ಪರೀಕ್ಷೆ ಪಾಸಾದರೂ ಕಾರ್ಖಾನೆಗಳ ಆಡಳಿತೆಗೆ ಬೇಕಾದ ವ್ಯವಹಾರಜ್ಞಾನ ವಗೈರೆಯಲ್ಲಿ ಶಿಕ್ಷಣ ಹೊಂದದ್ದರಿಂದ ನಮ್ಮ ಯುವಕರಲ್ಲಿ ದೇಶೀಯ ಭಂಡವಾಳಿಕರಿಗೆ ವಿಶ್ವಾಸವಿಲ್ಲ. ಆದ್ದರಿಂದ ಅಂಥವರು ಕೈಕೊಂಡ ಕೈಗಾರಿಕೆಯ ಸಾಹಸಕ್ಕೆ ಧನಸಹಾಯ ದೊರೆಯುವುದು ದುರ್ಲಭ. ಒಂದು ವೇಳೆ ಒಬ್ಬ ಧನಿಕನು ಒಂದು ಕೈಗಾರಿಕೆಯನ್ನು ಸ್ಥಾಪಿಸಿ ಸುಶಿಕ್ಷಿತ ಪರದೇಶೀಯ ಗೃಹಸ್ಥನಿಗೆ ಪಾರುಪತ್ಯ ಕೊಟ್ಟರೆ ಅವನು ನಾಳೆ ಬಿಟ್ಟು ಹೋಗ ಬಹುದು, ವಂಚಿಸ ಬಹುದು, ಸಾಯ ಬಹುದು. ಅಗ್ಯ ಇನ್ನೊಬ್ಬನು ದೊರಕುವಷ್ಟರೊಳಗೆ ಅವನ ಸಂಸ್ಥೆಯೇ ಜರಿದು ಬೀಳುವದು. ಒಂದೆರಡಲ್ಲ ಸಾವಿರಾರು ಯೋಗ್ಯ ಪುರುಷರಿಲ್ಲದೆ ಕೈಗಾರಿಕೆಗೆ ನಿಲವಿಲ್ಲ. ಹೀಗೆ ಸಾಕಷ್ಟು ಮಂದಿ ದೊರೆಯುವಂತೆ ದೇಶೀಯರೇ ಶಿಕ್ಷಿತರಾಗ ಬೇಕು.

ಹಿಂದೂಸ್ಥಾನದ ಕೈಗಾರಿಕೆಗಳು ದೇಶೀಯರ ಕೈಯಿಂದಲೇ ಊರ್ಜಿತಕ್ಕೆ ಬರುವ ದಿನವು ಮೂಡಿದೆ. ಸ್ವದೇಶಿಯು ಅದರ ಕುರುಹಾಗಿದೆ. ಇಂಥಾ ಸಮಯದಲ್ಲಿ ಸರಕಾರದವರು ಮೇಲ್ಕಂಡ ತ್ರಿಪರಿಮಾಣ ಪದ್ಧತಿಯನ್ನು ಇಲ್ಲಿ ಸ್ಥಾಪಿಸಬೇಕೆಂದು ಮೆ| ಸ್ಟ್ರಿಂಗರು ಬೋಧಿಸುವರು. ಈ ನವೀನ ಏರ್ಪಾಡಿಗೆ ಮುಂಚಿನ ಪದ್ಧತಿಗಿಂತ ಹೆಚ್ಚು ಖರ್ಚು ತಗಲುವದೇನೋ ನಿಜ. ಆದರೆ ಅದರಿಂದ ನೂರು ಪಾಲಷ್ಟು ಲಾಭ ದೊರೆಯುವದೆಂದು ಅವರು ನಂಬಿದ್ದಾರೆ.

ಈ ಗೃಹಸ್ಥರು ಕಂಠೋಕ್ತವಾಗಿ ಸರಕಾರಕ್ಕೆ ಅರಿಕೆ ಮಾಡುವದೇನು? ಮದ್ರಾಸ್, ರೂರ್ಕೀ, ಪೂಣೆ ಮುಂತಾಗಿ ಸಂಸ್ಥಾನಕ್ಕೆ ಒಂದರಂತೆ ಅತಿ ವಿರಳವಾಗಿ ಕಲಾಶಾಲೆಗಳಿಟ್ಟರೆ ಸಾಲದು. ಇದರ ಬದಲಿಗೆ ಈ ದೇಶಕ್ಕೆ ಇಂತಹ ನೂರು ಕೊಲೆಜುಗಳು ಬೇಕು. ಆ ಮಾದರಿಯಲ್ಲಿ ಒಂದು ಸಾವಿರಕ್ಕೆ ಕಡಿಮೆಯಾಗದ ಹ್ಯಾಸ್ಕೂಲುಗಳಿರಬೇಕು. ಈ ಹ್ಯಾಸ್ಕೂಲುಗಳ ಸೌಕರ್ಯಗಳು ಎಂತಹದಾಗಬೇಕೆಂದರೆ ಒಬ್ಬ ವಿದ್ಯಾರ್ಥಿಗೆ ಕೈಗಾರಿಕೆಯಲ್ಲಿ ತೀಕ್ಷ್ಣವಾದ ಅಭಿರುಚಿಯಿದ್ದರೆ ಅದನ್ನು ಅವನು ಅಲ್ಲಿಯ ಶಿಕ್ಷಣದ ಮೂಲಕ ಕಂಡುಕೊಳ್ಳುವಂತಾಗ ಬೇಕು. ಮತ್ತು ಅಲ್ಲಿಯ ಶಿಕ್ಷಣವು ಎಷ್ಟು ಪರಿಷ್ಕೃತವಾಗಬೇಕೆಂದರೆ, ಅದರ ಮೂಲಕ ಆ ವಿದ್ಯಾರ್ಥಿಗೆ ತಾನು ಇಲ್ಲಿ ಕಲಿತ ವಿದ್ಯೆಯನ್ನು ಮೇಲ್ಕಂಡ ಕೊಲೆಜುಗಳಲ್ಲಿ ಅಭಿವೃದ್ಧಿಪಡಿಸಬೇಕೆಂಬ ಅನಿವಾರ್ಯ ತೃಷ್ಣೆ ಹುಟ್ಟಬೇಕು. ಇಂತಹ ಸೌಲಭ್ಯವು ಯುರೋಪ್ ಅಮೇರಿಕ ಖಂಡಗಳ ಹುಡುಗರಿಗಿದೆ. ಒಂದು ಜನಾಂಗದ ಅಭ್ಯುದಯವು ಅದರ ಕೈಗಾರಿಕೆಗಳ ಉತ್ಕರ್ಷೆಯನ್ನು ಆಧರಿಸಿದೆಯೆಂಬ ವಿಷಯವನ್ನು, ಈಗಿನ ಇಂಗ್ಲಿಷ ವಿದ್ಯಾಭ್ಯಾಸ ಪದ್ಧತಿಯು ಹುಡುಗರ ಮನಸ್ಸಿಗೆ ಖಚಿತಮಾಡುವದಿಲ್ಲ.

ನಮ್ಮ ಗವರ್ನರ್ ಧೊರೆಗಳವರು ಪ್ರಜೆಗಳ ಹಿತಾಕಾಂಕ್ಷಿಗಳೆಂದು ನೀಲಗಿರಿಯ ಔದ್ಯೋಗಿಕ ಪರಿಷದದ ಮೂಲಕ ತೋರಿ ಬಂದಿದೆ. ಆದಕಾರಣ ಮೆ| ಸ್ಟ್ರಿಂಗರವರ [illegible] ಮಾನ್ಯ ಗೃಹಸ್ಥರು [illegible] ನಮ್ಮ ವಿದ್ಯಾಭ್ಯಾಸ [illegible]

ಅದನ್ನು ಸರಿಪಡಿಸುವ ಮಾರ್ಗವನ್ನು ಸೂಚಿಸುವಾಗ ಅಂತಹ ಯೋಗ್ಯರ ಮಾತುಗಳಿಗೆ ಗವರ್ನರ್ ಸಾಹೇಬರು ಕಿವಿಕೊಡುವರೆಂದು ನಂಬಬೇಕು. ಇಂಗ್ಲಿಷರು ಕೆಲವು ಕಾಲಕ್ಕೆ ಮುಂಚೆವರೆಗೆ ಕೈಗಾರಿಕೆಗಳಲ್ಲಿ ಅಪ್ರತಿಮರೆಂದು ಹೆಸರು ಗೊಂಡಿದ್ದಾರೆ ಜರ್ಮನ್ ಸರಕಾರದವರು ತಮ್ಮ ದೇಶದಲ್ಲಿ ಯಥೇಷ್ಟ ಕಲಾಭವನಗಳನ್ನು ಸ್ಥಾಪಿಸಿ ಕಲಾವಿದ್ಯೆಯನ್ನು ಪ್ರಜೆಗಳಿಗೆ ಧಾರಾಳ ನೀಡಿದರು ಈ ದಿನ ಜರ್ಮನಿಯ ಸಾಮಾಗ್ರಿಗಳು ಎಲ್ಲೆಲ್ಲಿಯೂ ಖಾಯಸಿಯಾಗುವಲ್ಲಿ "ಮೇಡ್ ಇನ್ ಜರ್ಮನಿ" (ಜರ್ಮನಿಯಲ್ಲಿ ತಯ್ಯಾರಾದ್ದು) ಎಂಬ ಬರಹವೂ ಕಂಡಕಂಡ ವಿದೇಶಿ ವಸ್ತುವಿನಲ್ಲಿ ಬೆಳಗುವದು ಜರ್ಮನಿಯ ಏಳಿಗೆಯಿಂದ ತಾವು ಹಿಂದೆಬೀಳ ಬೇಕಾಗುವದೆಂಬ ಯೋಚನೆಯು ಇಂಗ್ಲಿಷ ವ್ಯಾಪಾರಿಗಳನ್ನು ಹಿಡಿದದೆ

ಪ್ರಕೃತಕ್ಕೆ ನಮ್ಮಲ್ಲಿ ಅನೇಕ ಯುವಕರು ಬಿ ಎ ಪಾಸಾಗಿ ಅಲ್ಪ ಪ್ರತಿಫಲದ ವೃತ್ತಿಯನ್ನು ಸೇರಬೇಕಾಗುವದು ಇದರಿಂದ ಅನೇಕರಲ್ಲಿ ಮನಗುಂದಿಕೆ ಕಾಣಾವಾಗುವದು ಇದು ಎಷ್ಟು ವ್ಯಾಪ್ತವಾಗಿದೆ ಅಂದರೆ ಆ ಡಿಗ್ರಿ ಪಡೆದವರು "ಅಸಂತುಷ್ಟಿ ಬಿ ಎ" ಎಂಬ ನಾಮಾಂಕಿತವನ್ನು ಪಡೆದಿದ್ದಾರೆ [illegible] ಸೂಚಿಸಿದಂತೆ ಶಿಕ್ಷಣವು ಪರಿಷ್ಕೃತವಾದರೆ ಅನೇಕರಿಗೆ ಫಲಕಾರಿಯಾದ ವೃತ್ತಿ ದೊರಕುವದು ಅಸಂತುಷ್ಟಿಯ ಬೀಜ [illegible] ಬೆಂಗಳೂರಲ್ಲಿ ರಾಷ್ಟ್ರೀಯ ಶಿಕ್ಷಣ ಸಂಘವು ಒಂದು ಕೊಲೆಜನ್ನೂ, ಅಶಾಲೆಗಳನ್ನೂ [illegible] ಯುವಕರನ್ನು ತರಬೇತು ಮಾಡುವದು, [illegible] ಈ ಸಂಸ್ಥೆಯ ಸಾಧ್ಯವಾಯಿತು ಇಡೀ ದೇಶದಲ್ಲಿ ಹೊಸ ಪದ್ಧತಿಯ [illegible]

〰〰〰

'ಬ್ರಾಹ್ಮಣನು' 'ಕೃಷಿಕ'ನಾಗ ಬಹುದೇ?

[illegible]

ಉತ್ತರವೇನು? [illegible] ಕೆಲವರ [illegible] ಬ್ರಾಹ್ಮಣರಲ್ಲನ್ನಿಸಿಕೊಂಡಿರುತ್ತಾ, ಬ್ರಾಹ್ಮಣ [illegible] ಈ ವೃತ್ತಿಯು ನಲ್ಲದು! [illegible] ಧಾರಿಗಳಾದ ಇತರ ವರ್ಣ [illegible] ಬ್ರಾಹ್ಮಣರಂತೆಯೇ ಈ ವೃತ್ತಿಯು [illegible] ಈ ವೃತ್ತಿಯಲ್ಲಿ [illegible] ತೋರಿದರೆ, ತಮ್ಮ ಉಪವಾಸ [illegible] ಕೃಷಿಕರಾಗಿರುವರು

ವ್ಯಾಪಾರವು ವೃದ್ಧಿಸದೇ [illegible] ದೇಶದ ಐಶ್ವರ್ಯವನ್ನು [illegible] ರುತ್ತಿರುವರು ಈ ಕಾಲದ [illegible] ಯಾವ ರೀತಿ ಮಾಡಬೇಕೆಂಬುದನ್ನು [illegible] ಪೂರ್ವಕಾಲದಲ್ಲಿ [illegible] ಡುವರು [illegible] ದ್ದಲ್ಲಿ ಶ್ರೇಷ್ಠ [illegible] ಕೃಷಿ ವೃತ್ತಿಯ [illegible] ವ್ಯಕ್ತವಾಗುವುದು

'ಮಹಿ ಕಾಮದು [illegible], ವೃಷ್ಟಿಯು [illegible] ವುದೆಂಬ ಶ್ರೇಷ್ಠ ವಚನವನ್ನು [illegible] ಹ ಗೈದು ತಿನ್ನುವರೆ ಸಾಕಷ್ಟು ಅನ್ನ ಇದ್ದರೂ [illegible] ಕಟ್ಟಿಕೊಟ್ಟು ವಕ್ಕಲು [illegible] ದ್ರವಾಜೆಯೋ [illegible] ನಾಲದಿದ್ದಲ್ಲಿ ಈ ವೇಸಾಯ [illegible] ವ್ಯಾಪಾರವ ಕೈಗಾರಿಕೆಗಳನ್ನು ನಡಿಸುವೆವೆಂತ ಹಲವು [illegible] ತಮ್ಮ ಈ [illegible] ಕಳಕೊಳ್ಳುವರೂ ಉಂಟು ಭಾರತೀಯರು ಪೂರ್ವಕಾಲದಲ್ಲಿ ಕೃಷಿವೃತ್ತಿಯ [illegible] ಸಂಪತ್ತಿಗೆ ಮೂಲ ಕಾರಣವಾಗಿರುವದೆಂದು [illegible] ತಿಳಕೊಂಡದ್ದರಿಂದ ಈ ವೃತ್ತಿಯು ಹೆಚ್ಚಿನ ಗೌರವಾಸ್ಪದವಾಗಿತ್ತು ಇತರ ವರ್ಗಗಳೆಲ್ಲವುಗಳಿಗೆ ತಿಂಡಿಯನ್ನು ತಯ್ಯಾರಿಸಿಕೊಡುವ ರೈತನು ಈಗಲೂ ಭೂಲೋಕದ ಸ್ವತಂತ್ರ ರಾಜ್ಯಗಳಾದ ಇತರ ಪ್ರಾಂತ್ಯಗಳಲ್ಲಿ ಎಲ್ಲರ ಮನ್ನಣೆಗೆ ಪಾತ್ರನಾಗಿರುವನು ಗಲಲನೇ ವರುಷದಲ್ಲಿ ನ್ಯೂಪೋರ್ಟು ಎಂಬಲ್ಲಿ ಜರಗಿದ ವ್ಯವಸಾಯಕ ಪ್ರದರ್ಶನದಲ್ಲಿ ಪ್ರಿನ್ಸ್ ಒಫ್ ವೇಲ್ಸರಿಂದ, (ಪ್ರಕೃತ್ತ ನಮ್ಮ ಚಕ್ರವರ್ತಿಯವರು) ಸಾಕಲ್ಪಟ್ಟ ದನಕರುಗಳೂ, ಹಂದಿಗಳೂ ಮೊದಲನೇ ಇನಾಮನ್ನು ಪಡೆದವು. ಪ್ರಾಚೀನ ಕಾಲದಲ್ಲಿ ನಮ್ಮ ಈ ಭರತಭೂಮಿಯಲ್ಲಿ ಅರಸರು ಸಹಾ ಗದ್ದೆ ಬೇಸಾಯ, ಗೋಪಾಲನೆ ಮೊದಲಾದವುಗಳನ್ನು ಸ್ವತಹ ಮಾಡುತ್ತಿದ್ದರೆಂಬದು ರಾಮಾಯಣ, ಮಹಾಭಾರತಗಳಿಂದ ತೋರಬರುವುದು. ವಿದೇಹ ದೇಶದ ಅರಸನಾದ ಜನಕರಾಯನು ತನ್ನ ಮಗಳಾದ ಸೀತಾದೇವಿಯ ಸ್ವಯಂವರ ಕಾಲದಲ್ಲಿ ವಿಶ್ವಾಮಿತ್ರ ಮುನೀಶ್ವರರನ್ನು ಕುರಿತು—ನಾನು ಗದ್ದೆಯನ್ನು ಉಳುತ್ತಿರುವಾಗ ನೆಗಿಲಿನಿಂದಾದ ಸರೆವಿನಿಂದ ಎದ್ದು ನಿಂತು, ನಾನು [illegible] ತೆಗೆಯುತ್ತಿರುವಾಗ ನನಗೆ ಸಿಕ್ಕದಂಥಾ ಸೀತೆಯನ್ನು ನನ್ನ ಮಗಳಾಗಿ ಸಾಕಿರುವೆನು—ಎಂದು ಹೇಳಿದ ಮಾತುಗಳಿಂದ ಅರಸರೂ ಸಹಾ ಈ ಘನ ವೃತ್ತಿಯನ್ನನುಸರಿಸಿದ್ದರೆಂತ ತೋರುವುದು. ಪೂರ್ವಕಾಲದಲ್ಲಿ ಬ್ರಾಹ್ಮಣರು ಸಹಾ ಆಯಾ ಸಮಯಗಳಲ್ಲಿ ಉಳುವುದು ಶಾಸ್ತ್ರವಿರುದ್ಧವಲ್ಲವೆಂತ ಅನೇಕ ಶಾಸ್ತ್ರಾಧಾರಗಳಿಂದ ತಿಳಿದುಬರುವುದು. ತನ್ನಿಂದಲೇ ಉಳಲ್ಪಟ್ಟ ಗದ್ದೆಯಿಂದ ಅಕ್ಕಿಯನ್ನು ತಾನೇ ಸಂಗ್ರಹಿಸಿಕೊಂಡು ಪಂಚಯಜ್ಞಗಳನ್ನು ಬ್ರಾಹ್ಮಣರು ಮಾಡಬೇಕೆಂದು ಪರಾಶರ ಸಂಹಿತೆಯಿಂದ ಕಾಣುತ್ತದೆ ಪ್ರತಿ ಬ್ರಾಹ್ಮಣನು ಬ್ರಹ್ಮಚಾರಿಯಾಗಿ ತನ್ನ ಗುರುವಿನ ಶಿಶ್ರೂಷೆಯನ್ನು ನೋಡಿಕೊಂಡಿರುವಾಗ ವ್ಯವಸಾಯ ಕೆಲಸಗಳನ್ನು ಸಹಾ ಮಾಡುತ್ತಿದ್ದನೆಂದು ಮಹಾಭಾರತದಲ್ಲಿ ಹೇಳಿರುವುದು. ಧೌಮ್ಯ ಋಷಿಯ ಶಿಷ್ಯನಾದ ಅರುಣಿ ಎಂಬವನನ್ನು ಋಷಿಯು ತನ್ನ ಗದ್ದೆ ಸಮೀಪವಿರುವ ಅಣೆಕಟ್ಟಿನಿಂದ ಹರಿದು ಹೋಗುವ ನೀರಿಗೆ ತಡೆ ಕಟ್ಟುವರೆ ಆಜ್ಞಾಪಿಸಿದಾಗ, ಅರುಣಿಯು ಎಷ್ಟು ಕಷ್ಟಪಟ್ಟರೂ ಈ ಕೆಲಸವು ಸಾಗದೇ ಇದ್ದದ್ದು ನೋಡಿ ನೀರು ಹರಿದುಬರುವ ಎಡೆಯಲ್ಲಿ ತಾನೇ ಮಲಗಿಕೊಂಡು ನೀರು ಹರಿಯುವುದನ್ನು ನಿಲ್ಲಿಸಿ ತನ್ನ ಗುರುವಿನ ಗದ್ದೆಯನ್ನು ಕಾಪಾಡಿದಂತೆ ಕಾಣಾಡಿದ ವೃತ್ತಾಂತವು ಭಾರತವನ್ನೋದಿದ ಸರ್ವರಿಗೂ ಗೊತ್ತಿರಬಹುದು ಧೌಮ್ಯನ ಇನ್ನೊಬ್ಬ ಶಿಷ್ಯನಾದ ಉಪಮನ್ಯು ಎಂಬಾತನು ಗುರುಗಳ ದನಕರುಗಳನ್ನು ಮೇಯಿಸಿಕೊಂಡಿದ್ದನು ಬೃಹಸ್ಪತಿ ಪುತ್ರನಾದ ಕಚನು ಶುಕ್ರಾಚಾರ್ಯರಲ್ಲಿ ಅಧ್ಯಯನವನ್ನು ಮಾಡುತ್ತಿರುವಾಗ ಗುರುಸೇವೆಯಲ್ಲಿ ದನಕರುಗಳನ್ನು ಮೇಯಿಸುವುದು ಸಹಾ ಇತ್ತು

ಈ ವೃತ್ತಿಯ ಘನತೆಯನ್ನು ತೋರಿಸುವ ದೃಷ್ಟಾಂತಗಳನ್ನು ಮಹಾಭಾರತದಿಂದ ಇನ್ನೂ ಹಿಡಿದು ಕೊಡಬಹುದು ಪರಮಾತ್ಮನ ಅವತಾರಗಳಾದ ಕೃಷ್ಣಬಲರಾಮರು ಗೋಕುಲದಲ್ಲಿ ನಂದಗೋಪನ ಸಂರಕ್ಷಣೆಯಲ್ಲಿರುವಾಗ ಶ್ರೀ ಕೃಷ್ಣನು 'ಗೋಪಾಲ'ನಾಗಿದ್ದನು ಸರ್ವಸಾಮಾನ್ಯರಾದ ಜನರಾಶಿಯು ಶ್ರೀ ವಿಷ್ಣುವಿನ ಈ ಅವತಾರ ಮಹಿಮೆಯನ್ನು ಹ್ಯಾಗೆ ತಿಳಕೊಂಡಿರುವರು? ಲೋಕಕಂಟಕರಾದ ಕಂಸ ಶಿಶುಪಾಲರ ವಧೆಯಾಗಲಿ, ಕುರುಕ್ಷೇತ್ರದಲ್ಲಿ ಕಾದಾಡಿದಂಥಾ ಅರಸುಪುತ್ರರಾದ ಇತ್ತಂಡದವರಲ್ಲಿಯೂ ಐಕ್ಯವನ್ನುಂಟುಮಾಡುವರೆ ಪಟ್ಟ ಪ್ರಯತ್ನಗಳಾಗಲಿ, ಅದವಾ ರಣರಂಗದಲ್ಲಿ ವಿಶ್ವರೂಪವನ್ನು ತೋರಿ ಅರ್ಜುನನಿಗೆ ಭಗವದ್ಗೀತೆಯನ್ನು ಭೋದಿಸಿದ ಜ್ಞಾನಪೂರ್ಣತೆಯಾಗಲಿ, ಇವೆಲ್ಲವುಗಳಿಗಿಂತ ವೇಣುಧಾರಿಯೂ ಗೊಲ್ಲನೂ ಆಗಿದ್ದ ಶ್ರೀ ಗೋಪಾಲಕೃಷ್ಣನ ಗೋರಕ್ಷಣೆಯ ಲೀಲೆಯು ಜನರಾಶಿಯಲ್ಲಿ ಹೆಚ್ಚಿನ ಭಕ್ತಿಭಾವವನ್ನುಂಟುಮಾಡುವುದು ಒಂದು ಹಪ್ತೆಯ ವರೆಗೆ ಎಡೆಬಿಡದೆ ಸುರಿಯುತ್ತಿದ್ದ ಮಳೆಯಿಂದ ದನಗಳನ್ನು ರಕ್ಷಿಸುವುದಕ್ಕಾಗಿ ಗೋವರ್ಧನ ಪರ್ವತವನ್ನು ಮಳೆ ಬಿಡುವ ತನಕವೂ ಎತ್ತಿ ಹಿಡಿದ ಆ ಪರಮಾತ್ಮನ ಲೀಲೆಯು ಎಲ್ಲರಿಗೂ ಮುಂದಟ್ಟಾಗುವುದು. ಹಲಧರ ಎಂಬ ನಾಮಾಂಕಿತವನ್ನು ಸಮರ್ಥಿಸುವ ಬಲರಾಮನು ರೈತವೃತ್ತಿಯನ್ನೇ ಅವಲಂಬಿಸಿಕೊಂಡಿದ್ದನು ರಾಮಾಯಣ, ಭಾರತಗಳಲ್ಲಿ ಅರಸರು ರೈತರ ಯೋಗಕ್ಷೇಮಗಳನ್ನು ತಕ್ಕದಾದ ರೀತಿಯಲ್ಲಿ ಅರಿತುಕೊಂಡು ರೈತರನ್ನು ಒಳ್ಳೇ ರೀತಿಯಲ್ಲಿ ನಡಿಸುತ್ತಿದ್ದರೆಂದು ಅಲ್ಲಲ್ಲಿ ತೋರಿಸಿರುವುದು

ಪುರಾತನ ಕಾಲದಲ್ಲಿ ಕೃಷಿವೃತ್ತಿಯ ಗೌರವವನ್ನೂ ಬ್ರಾಹ್ಮಣನು ಕೃಷಿಕನಾಗ ಬಹುದೋ [illegible] ತಿಳಕೊಳ್ಳಬಹುದು ಬ್ರಾಹ್ಮಣತೆಯು ಎಂದಿಗೂ ಶ್ರೇಷ್ಠವಾಗಿದ್ದರೂ ಇದು ಬ್ರಾಹ್ಮಣರಲ್ಲಿ ಜನ್ಮವೆತ್ತಿದ ಮಾತ್ರದಿಂದಲೇ ಪ್ರಾಪ್ತವಾಗದು ಈ ಪದವಿಗೆ ಅರ್ಹನಾದ ವಿದ್ಯಾವಿನಯವೂ ಇತರ ಗುಣಗಳೂ ಶೂದ್ರನಲ್ಲಿಯಾಗಲಿ, ವೈಶ್ಯನಲ್ಲಿಯಾಗಲಿ, ಕ್ಷತ್ರಿಯನಲ್ಲಾಗಲಿ ಕಂಡುಬಂದರೆ ಆತನೇ ಶುದ್ಧ ಬ್ರಾಹ್ಮಣನಾಗುವನು ಜಾತಿಯಿಂದವು ವೃತ್ತಿಗೆ ತೊಡಕಾಗಕೂಡದು.

ಲಕ್ಷ್ಯಕ್ಕೆ ಬಾರದ ಹಲವು ಸಂಕಷ್ಟಗಳು.

ಪ್ಲೇಗು, ಕೋಲರಾ, ಮೈಲ್ಬೇನೆ, ಕ್ಷಾಮ ಮೊದಲಾದವುಗಳಿಂದ ಮೃತಪಟ್ಟವರ ಸಂಖ್ಯೆಯನ್ನೂ, ಇವುಗಳ ಬಾಧೆಯು ತಗಲಿರುವವರನ್ನೂ, ನಿರ್ಣಯಿಸಿ ಇವರ ಸಂಖ್ಯೆಯು ಪ್ರತಿವಾರ, ತಿಂಗಳು, ವರುಷದೊಳಗೆ ಎಷ್ಟಾಗುವದೆಂತ ಪ್ರಕಟಿಸುತ್ತಿರುವರು ಹೀಗೆ ಈ ಅಂಟುರೋಗಗಳಲ್ಲಿಯೂ ಕ್ಷಾಮ ಬಾಧೆಯಲ್ಲಿಯೂ ಸಿಲುಕಿ ಇಹಲೋಕದ ಯಾತನೆಗಳಿಂದ ಮುಕ್ತರಾಗಿ ನಿವಾರಣೆಯನ್ನು ಹೊಂದುತ್ತಿರುವವರ ಸಂಖ್ಯೆಯು ನಮಗೆ ಆಗಾಗ್ಯೆ ತಿಳಿಯುವುದು. ಅಂಟುರೋಗಗಳ ಬಾಧೆಗಳಲ್ಲಿಲ್ಲದೆ, ಬಡಪತ್ತಿನಿಂದ ನಿರಂತರವೂ ಯಾತನೆಯನ್ನನುಭವಿಸುವವರ ಸಂಖ್ಯೆಯನ್ನು ಗೊತ್ತು ಮಾಡುವರೆ ಯಾವ ವ್ಯವಸ್ಥೆಯೂ ಇಲ್ಲದ್ದರಿಂದ ಇಂತಹ ಸಂಕಷ್ಟಗಳನ್ನು ಅನುಭವಿಸುತ್ತಿರುವವರೂ, ಅವರ ಸಂಕಷ್ಟ ಸ್ಥಿತಿಯೂ ಇಷ್ಟೆಂದು ಗೊತ್ತು ಮಾಡುವುದು [illegible] ವಿದ್ಯಮಾನಗಳಲ್ಲಿ ದುಸ್ಸಾಧ್ಯವಾಗಿರುವುದು. ಹಿಂದುಸ್ಥಾನದಲ್ಲಿ [illegible] ದುಃಖ ದಾರಿದ್ರ್ಯವನ್ನು ಈ ಕೆಳಗೆ ಸಂಗ್ರಹವಾಗಿ [illegible] ಬಂದದ್ದು ದೃಷ್ಟಾಂತಗಳಿಂದ ನಿರ್ಣಯಿಸ ಬಹುದು.

"ಪತಿವಿಯೋಗವನ್ನು ಹೊಂದಿದ ಅನಾಥಳಾದ ವಿತಂತು ತನ್ನ ೧೦ ವರುಷ ಪ್ರಾಯದ ಪುತ್ರಿ ಮತ್ತು ೯ ವರುಷ ಪ್ರಾಯದ ಪುತ್ರನೊಂದಿಗೆ ಜೀವನಕ್ಕೆ ಯಾವ ಉಪಾಯವೂ ಇಲ್ಲದೆ ಕ್ರೈಸ್ತಮತವನ್ನವಲಂಬಿಸಿರುವಳು".

"ಮೂರುಮಂದಿ ಮಕ್ಕಳನ್ನೂ ತನ್ನ ಹೆಂಡತಿಯನ್ನೂ ಸಾಕಲಿಕ್ಕೆ ಬಹಳ ಪ್ರಯತ್ನ ಪಟ್ಟರೂ ತನ್ನಿಂದ ಕೊಡದೆ ತನ್ನ ದುರದೃಷ್ಟವನ್ನೇ ಯೋಚಿಸಿ ಸಾಲಗಾರರ ಬಾಧೆಯನ್ನು ತಾಳಲಾರದ ಪತಿಯು ಪಕ್ಷವಾತ ರೋಗಕ್ಕೆ ಬಲಿಯಾದನು. ಔದಾರ್ಯ ಚಿತ್ತದ ಒಬ್ಬ ಡಾಕ್ಟ್ರರನು ಅರ್ಧ ಫೀಸು ತಕ್ಕೊಂಡು ಆತನ ಚಿಕಿತ್ಸೆಯನ್ನು ಕೈಕೊಳ್ಳುವೆನೆಂತ ಹೇಳಿದರೂ ಈ ಅರ್ಧ ಫೀಸನ್ನು ಸಹಾ ತೆರಬೇಕಾಗಿತ್ತು. ಇವನ ಮೂರು ಮಕ್ಕಳಲ್ಲಿ ಇಬ್ಬರು ಹುಟ್ಟಿದಂದಿನಿಂದಲೇ ಹುಚ್ಚು ಹಿಡಿದವರಾದ್ದರಿಂದ ಅವರನ್ನು ಹುಚ್ಚರ ಚಿಕಿತ್ಸಾಲಯಕ್ಕೆ ಕಳುಹಿಸ ಬೇಕಾಯಿತು. ತಾಯಿಯು ತನಗೆ ಪ್ರಾಪ್ತವಾದ ಈ ದುರ್ದಶೆಯ ನಿಮಿತ್ತ ನಿರಂತರ ಪ್ರಲಾಪಿಸುತ್ತಿರುವಳು. ಈ ಮೂರು ಮಕ್ಕಳಲ್ಲೊಬ್ಬಳಾದ ಒಂಬತ್ತು ಯಾ ಹತ್ತು ವರುಷಪ್ರಾಯದ ಬಾಲಿಕೆಯು ಕಲಿಯುವದರಲ್ಲಿ ಬಹಳ ವಿಚಕ್ಷಣಳಾಗಿದ್ದು ತನ್ನ ಪಾಠಶಾಲೆಯಲ್ಲಿ ಪ್ರಥಮಸ್ಥಾನವನ್ನು ಪಡೆದಿರುವಳು. ಆದರೆ ತಂದೆ ತಾಯಿಗಳಿಗೆ ಒದಗಿದ ದಾರಿದ್ರ್ಯ ನಿಮಿತ್ತ ಶಾಲೆಯನ್ನು ಬಿಡಬೇಕಾಗಿ ಬಂತು. ಹುಡುಗಿಯು ಶಾಲೆಗೆ ಹೋಗ ಬೇಕೆಂದು ಇಚ್ಛಿಸುತ್ತಿರುವಳು"

"ಒಬ್ಬ ಮುಲತಾಯಿಯು ಹನ್ನೊಂದು ವರುಷ ಪ್ರಾಯದ ತನ್ನ ಮಗನನ್ನು ಚನ್ನಾಗಿ ಹೊಡೆದು ಮನೆಕಿಟಿಕಿಯಿಂದ ಆಕೆಯನ್ನು ಹೊರಗೆ ದಿಸಾಡಿದಳು. ಹಾದಿಯಲ್ಲಿ ಹೋಗುತ್ತಿರುವವರಲ್ಲೊಬ್ಬರು ಈ ಹುಡುಗಿಯು ಮೇಲೆ ಕನಿಕರಪಟ್ಟು ಕಿಟಿಕಿಯಿಂದ ಬಿದ್ದು ಉಂಟಾದ ಘಾಯಗಳ ಚಿಕಿತ್ಸೆಗೆ ಆಕೆಯನ್ನು ಆಸ್ಪತ್ರೆಯಲ್ಲಿರಿಸಿರುವರು. ಆಸ್ಪತ್ರೆಯಲ್ಲಿ ಘಾಯಗಳನ್ನು ತನಖಿ ಮಾಡಿ ನೋಡಿದ್ದಲ್ಲಿ ಹುಡುಗಿಯ ಬೆನ್ನೆಲುಬು ಪೂರ್ಣವಾಗಿ ಮುರಿದು ಹೋಗಿದ್ದದರಿಂದ ಜೀವಾಂತದವರೆಗೆ ಆಕೆಯು ಆಸ್ಪತ್ರೆಯಲ್ಲಿಯೇ ಇರಬೇಕಾಗಿರುವುದು"

"ಒಬ್ಬ ವಿಧವೆಗೆ ಒಬ್ಬನೇ ಮಗನಿದ್ದನು. ಆತನು ಮದಿವೆಯಾದನಂತರ ತನ್ನ ತಾಯಿಯನ್ನು ತೊರೆದಿರುವನು. ತಾಯಿಯು ಪ್ರಕೃತ ಆಸ್ಪತ್ರೆಯಲ್ಲಿರುವಳು. ಪಕ್ಷವಾತದಿಂದ ನಾಲಿಗೆಯನ್ನಲ್ಲಾಡಿಸಲಿಕ್ಕಾಗದೆ ಮಾತಾಡಲಶಕ್ಯಳಾಗಿರುವಳು. ಯಾವಾಗಲೂ ತನ್ನ ದುರದೃಷ್ಟವನ್ನು ಕುರಿತು ಕಣ್ಣೀರು ಸುರಿಸುತ್ತಿರುವಳು."

"ಐದು ಜನ ಹೆಣ್ಣು ಮಕ್ಕಳಿರುವ ಹೆಂಡತಿಯನ್ನೊಬ್ಬನು ಬಿಟ್ಟಿರುವನು"

ಈ ಮಾದರಿಯ ಸಂಕಷ್ಟಗಳಿಂದ ಪೀಡಿತರಾದ ಜನರಾತಿಯು ಅನೇಕವಿರುವುದು. ಇವುಗಳ ವರ್ಣನೆಯು ಯಾರಿಗೂ ಸಾಧ್ಯವಲ್ಲ. ಇಂತಹ ಸಂಕಷ್ಟ ನಿವಾರಣೆಗಾಗಿಯೂ, ಸಮಾಜದಲ್ಲಿ ವಿದ್ಯಾಭಿವೃದ್ಧಿಯನ್ನು ಅನೇಕ ವಿಧಾನಗಳಲ್ಲಿ ಸಾಧಿಸುವದೆಯೂ, ಔಷಧೋಪಚಾರ ಮೊದಲಾದವುಗಳಿಂದ ಸಮಾಜ ಸೇವೆಯನ್ನು ಕೈಕೊಂಡು ಮಾತೃವಾತ್ಸಲ್ಯದಿಂದಲೂ, ಸ್ವಂತ ಕುಟುಂಬದಲ್ಲಿಯೇ ಸೇವೆಗೈವರೆಂಬ ಮನೋಭಾವದಿಂದಲೂ, ತಮ್ಮ ಜೀವಮಾನವನ್ನರ್ಪಿಸಿ ಸಮಾಜದ ಸರ್ವಾರಿಷ್ಟಗಳನ್ನು ನಿವಾರಿಸುವದೆ ಸಿದ್ಧವಿರುವ ಭಗಿನಿಯರ ಒಂದು ವರ್ಗವನ್ನು ಸ್ಥಾಪಿಸುವದಕ್ಕೆ ಮುಂಬಯಿಯ ಸೇವಾಸದನವು ಕೈಕೊಂಡಿರುವುದು. ಈ ಸೇವಾಸದನಕ್ಕೆ ಸೇರಿದ ಭಗಿನಿಯರಲ್ಲೊಬ್ಬರ ಆರು ತಿಂಗಳ ಕೆಲಸ ವೃತ್ತಾಂತದಿಂದ ಮೇಲೆ ಸೂಚಿಸೋಣಾದ ಹಲವು ಲಕ್ಷ್ಯಕ್ಕೆ ಬಾರದ ಸಂಕಷ್ಟಗಳನ್ನು ಸಂಗ್ರಹಿಸಿರುವೆವು. ಈ ಸಂಕಷ್ಟಗಳೆಲ್ಲವೂ ಮುಂಬಯಿಯಲ್ಲಿ ಈ ಭಗಿನಿಯರಿಂದ ಬಹಳ ಪಟ್ಟಿಗೆ ನಿವಾರಿಸಲ್ಪಟ್ಟಿರುವವು. ಪ್ರತಿ ಊರೂ ಪ್ರತಿಗ್ರಾಮವೂ ಈ ಸಂಕಷ್ಟಗಳಿಂದ ಪೀಡಿತವಾಗಿರುವುದು. ಅಲ್ಲಲ್ಲಿ ಸೇವಾಸದನದ ಭಗಿನಿಗಳು ಬೇಕಾಗಿರುವರು. ಈ ನಿಮಿತ್ತ ಇಡೀ ಹಿಂದೂಸ್ಥಾನದಲ್ಲಿಯೂ ಸೇವಾಸದನದ ಶಾಖೋಪಶಾಖೆಗಳನ್ನು ನಿರ್ಮಿಸುವದೆ ಅವಕಾಶವಿರುವುದು.

ನಮ್ಮ ಈ ಚಿಕ್ಕದಾದ ಜಿಲ್ಲೆಯಲ್ಲಿ ಸಹಾ ಹೀಗೆ ಲಕ್ಷ್ಯಕ್ಕೆ ಬಾರದ ಸಂಕಷ್ಟಗಳು ಅನೇಕವಿರುವವು. ಬ್ರಾಹ್ಮಣ ವರ್ಗಕ್ಕೆ ಸೇರಿದ ಹಳ್ಳಿಯಲ್ಲಿದ್ದ ಹಲವರು ಸಹಾ ಹೊಟ್ಟೆ ತುಂಬಿಸುವುದು ಅಸಾಧ್ಯವೆಂತ ಕಂಡು ನಮ್ಮ ಪಟ್ಟಣಕ್ಕೆ ಬಂದು ವೇಶವನ್ನು ವಲ್ಲಟಿಸಿ ದಿನಂಪ್ರತಿ ಬೀದಿಬೀದಿ ತಿರುಗಾಡುವ ಭಿಕ್ಷುಕ ವರ್ಗವನ್ನು ಸೇರುತ್ತಿರುವರು. ಇನ್ನು ಕೆಲವರು ಈ ವೃತ್ತಿಯಲ್ಲಿ ಸಹಾ ಉದರನಿರ್ವಾಹವಾಗುವುದು ಅಸಾಧ್ಯವೆಂದರಿತು ತಮ್ಮ ಚಿಕ್ಕ ಮಕ್ಕಳೊಂದಿಗೆ ಕ್ರೈಸ್ತಮತವನ್ನು ಸೇರಿ, ಧರಿಸಿಕೊಂಡಿರುವ ಈ ಭಿಕ್ಷುಕ ವೇಷವನ್ನು ಕಳೆದುಬಿಡುವುದೂ ಉಂಟು. ಮುಂಬಯಿಯಲ್ಲಿ ಏರ್ಪಡಿಸಿದ ಸೇವಾಸದನದ ಒಂದು ಶಾಖೆಯನ್ನು ಇಲ್ಲಿ ಸಹಾ ರಚಿಸುವ ಅವಕಾಶವಿರುವುದು. ಸೇವಾಸದನದ ಶಿಕ್ಷಣಾಕ್ರಮ ಮೊದಲಾದವುಗಳ ಕುರಿತು ಇನ್ನೊಂದು ಸಂದರ್ಭದಲ್ಲಿ ತಿಳಿಸುವೆವು.

ತುಳಸೀ ಗಿಡವು.

ಈ ಗಿಡವು ತಿಳಿಯದೇ ಇದ್ದ ಮನುಷ್ಯರು ಈ ಭರತಖಂಡದಲ್ಲಿಯೇ ಇಲ್ಲ. ತುಳಸೀಗಿಡವು ೮ ವಿಧವಾದ ಜಾತಿಯವುಗಳಿರುವವೆಂದು ಶಾಸ್ತ್ರಾಂತರ ಶೋಧನೆಯಿಂದ ತಿಳಿಯುತ್ತದೆ. ಅದರ ಈ ಸಾಧಾರಣವಾಗಿ ಭೂಮಿಯಲ್ಲಿ ಎರಡೇ ಮುಂಗಟ್ಟಾಗಿರುವವು. ಈ ಪ್ರತಿಯೊಂದರಲ್ಲಿ ರಾಮತುಳಸಿ, ಕೃಷ್ಣತುಳಸಿ ಎಂದು ಭೇದಗಳುಂಟು. ಇದರಲ್ಲಿ—೨೫ ಜಾತಿಗಳಿರುವವು.

ಸುಭಗ, ತೀವ್ರ, ಗ್ರಾಮನಿ, ವಿಷ್ಣುವಲ್ಲಭ ಸುರೇಷ್ಟ, ಸುರಸ ಕಾಯಸ್ಥ ಸುರಭಿ, ಸುರದುಂದುಭಿ, ಬಹುಪತ್ರಿ ಮಂಜರಿ ಹರಿಪ್ರಿಯ ಶಾಮ ಅಪೇತರಾಕ್ಷಸಿ, ಗೌರಿ, ಭೂತಘ್ನಿ, ಭೂತಪತ್ರಿ, ಪಾಪಘ್ನ ಕಠಿಂಜರ ಸ್ಕಂದ ಕಠೋರಕ, ವೈಷ್ಣವಿ, ಪುಣ್ಯಾ, ಮಾಧವಿ, ಅಮೃತ, ಪತ್ರಪುಷ್ಪ, ಗಂಧಹಾರಿಣಿ ಸುರವಲ್ಲಿ, ಪ್ರೇತರಾಕ್ಷಸಿ, ಸುವಾಹ, ಗ್ರಾಮ್ಯ, ಸುಲಭ, ಶ್ವೇತತುಳಸಿ ಭೇದ—ಚತುಷ್ಕ ಸೀತಾರ್ಜಕ, ಕೃಷ್ಣತುಳಸಿ ಭೇದ—ಕೃಷ್ಣವರ್ಣ, ಕಾಲಿಕ, ಕಾಲಪರ್ಣಿ ಸುರಭಿ, ಕರಾಲಕ, ಕೃಷ್ಣಪರ್ಣಿ ವನವರತುಳಸಿ—ಸುರಭಿ, ಸುರಸ ಪರ್ಣಾಸ ಕುಠೇರಕ, ಖರಪುಷ್ಪ, ಅಜಗಂದ ಗಂಧತುಳಸಿ ಭೇದ—ಸುಗಂಧಕ ಗಂಧನಾಮ, ತೀಕ್ಷ್ಣಗಂಧ, ಗಂಧ, ಪರ್ಣಿಜಭುಕ, ಸುಗಂಧ, ದೇವದುಂದುಭಿ, ವೈಕುಂಠಕ ಬಿಲ್ವಗಂಧ ತುಳಸಿ—ಬಿಲ್ವಗಂಧ, ಬಿಲ್ವಮಾನ ಏಕ್ಷಗಂಧ ತುಳಸಿ— ಕ್ಷುದ್ರಪತ್ರ, ತುಳಸಿಭೇದ ಖರಪತ್ರ, ಜಂಭೀರ, ಪತ್ರಪುಷ್ಪ, ಫಣಿಜಝಕ, ಬಿಲ್ವಪತ್ರ, ಸುಮುಖ, ಮರ್ದಕ, ಪ್ರಸ್ಥಪುಷ್ಪ. ಕೃಷ್ಣತುಳಸಿ, ರಾಮತುಳಸಿ, ಕಾಡುತುಳಸಿ, ನಾಯಿತುಳಸಿ ಇವು ಮುಖ್ಯವಾದ ಭೇದಗಳು.

ಈ ಗಿಡಿಯಲ್ಲಿ ಹವೆಯನ್ನು ಶುದ್ಧಿ ಮಾಡತಕ್ಕ ಗುಣ ಧರ್ಮವಿರುವದೆಂದು ಋಷೀಶ್ವರರು ಅದರ ಪೂಜೆ ಪ್ರದಕ್ಷಿಣೆ ಮುಂತಾದ ಯೋಗ ಸೋಪಾನಗಳನ್ನು ಮಾಡಿಟ್ಟಿರುವದರಿಂದಲೇ ಈ ಗಿಡವು ನಿರಂತರವಾಗಿ ಹಿಂದೂ ಜನರ ಮನೆಯಲ್ಲಿರುವದು. ಇದರ ಎಲೆರಸವು ನೆಗಡಿ, ಕೆಮ್ಮು ಶೀತಜ್ವರ ಮೊದಲಾದವುಗಳಿಗೆ ತುಂಬಾ ಶ್ರೇಷ್ಠವಾದದ್ದು. ಸ್ವರಸಾದಿ ಅನುಪಾನದಲ್ಲಿ ತುಂಬಾ ಪ್ರಾಶಸ್ತ್ಯ ಉಳ್ಳದ್ದು. ಸಣ್ಣ ಮಕ್ಕಳಿಗೆ ಉಂಟಾಗುವ ಶೀತವಿಕಾರವು ಕೃಷ್ಣತುಳಸಿಯ ರಸ, ಹಸಿಶುಂಠಿಯ ರಸ, ಜೇನುತುಪ್ಪ ಇವುಗಳನ್ನು ಮಿಶ್ರಮಾಡಿ ಕೊಟ್ಟರೆ ತುಂಬಾ ಉಪಯೋಗವಾಗುತ್ತೇ. ಇದು ಮಕ್ಕಳಿಗೆ ಕೇವಲ ಸೌಮ್ಯವಾದ ಉಪಚಾರವು. ಲೇಪಾನಿಕರು ತುಳಸಿಯ ಸೊಪ್ಪನ್ನು ನೆರಳಲ್ಲಿ ಒಣಗಿಸಿ ತೇಯಲೆಯಂತೆ ಉಪಯೋಗಿಸುತ್ತಾರೆ. ಇದರ ಬೀಜವೂ ತುಂಬಾ

ನೋಟೀಸು.

ಕಾಸರಗೋಡು ನಿವಾಸಿಕ ಸಾರಸ್ವತ ಬ್ರಾಹ್ಮಣ ಪತ್ತು ಸಮಸ್ಥರ ಪಕ್ಕಿನ ಶ್ರೀ ಪಾಂಡುರಂಗ ದೇವಸ್ಥಾನದ ಭಂಡಾರಕ್ಕೆ ತಾ ೧೧—೧೦—೯೦ರಲ್ಲಿ ರೂಪಾಯಿ ೧೩೩—೧೨—೦ಕ್ಕೆ ಕೂಡ್ಲು ಮಾಣಿಂಗ ಬಂಟನು ಬರಕೊಟ್ಟ ರಿಜಿಸ್ಟ್ರಿ ಆದವು ದಸ್ತೈವಜು ಪ್ರಕಾರ ಬಹಾ ಅಸ್ಲು ಬಡ್ಡಿ ಐವಜಿನ ಬಗ್ಗೆ ಸದರಿ ಹತ್ತು ಸಮಸ್ಥರ ಕಡೆಯಿಂದ ಕೋರ್ಟಿನವರ ಅನುಮತಿ ಪಡಕೊಂಡ ಕಾಸರಗೋಡು ಕಸಬೆಯಲ್ಲಿರುವ ಶಿಬಾಡ ದತ್ತಯ್ಯನವರ ಮಗ ಸುಬ್ರಾವನು ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಕ್ರಮ ನಂಬ್ರ 263/09 ನೇ ವ್ಯಾಜ್ಯ ದಾಖಲು ಮಾಡಿರುತ್ತಾನೆ.

ಆದ್ದರಿಂದ ಸದರಿ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರಮನಸ್ಸುಳ್ಳವರು ಈ ಕೋರ್ಟು ಮುಂದೆ ತಾರೀಕು ೨—೯—೦೯ರಲ್ಲು ಹಗಲು ೧೦ ಘಂಟೆಗೆ ಹಾಜರಾಗಿ ವ್ಯವಹರಿಸಬಹುದು.

೧೯೦೯ನೇ ಇಸವಿ ಆಗೋಸ್ತು ತಿಂಗಳು ೫ನೇ ತಾರೀಕು ಕೋರ್ಟು ಮೊಹರು ಸಹಿತ ನಮ್ಮ ದಸ್ತಕತ್ತೊಡನೆ ಕೊಡಲ್ಪಟ್ಟಿದ್ದಾಗಿರುತ್ತದೆ.

B. Ramaswami Aiyar,
District Munsif.

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6 ಪೈ.

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು.

ಪ್ರತಿಗಳು ದೊರೆಯುವ ಸ್ಥಳ.

ಸಾಮರ್ಥ್ಯವುಳ್ಳದ್ದು. ಈ ಬೀಜವನ್ನು ಸೇಮಿ ಅಕ್ಕಿಯ ಬದಲಾಗಿ ಉಪಯೋಗಿಸಬಹುದು. ಇದು ಉಷ್ಣಹರ. ಇದು ನೀರಿನಲ್ಲಿ ನೆನೆದ ಕೂಡಲೆ ಪಾರದರ್ಶಕವಾಗುತ್ತೆ. ಇದರ ಗಂಜಿಯನ್ನು ಮಾಡಿ ಉಪವಾಸಕ್ಕೆ ಸೇವಿಸುವರು. ಈ ಬೀಜವು ಮಕ್ಕಳಿಗೆ ಪುಷ್ಟಿಕರ, ದೊಡ್ಡವರಿಗೆ ಶಕ್ತಿವರ್ಧನ, ಕೆಮ್ಮು ಮುಂತಾದಕ್ಕೆ ಶ್ರೇಷ್ಠವಲ್ಲದೆ ಜೀರ್ಣಶಕ್ತಿಯನ್ನು ಶೋಧಿಸುವ ಸಾಮರ್ಥ್ಯವಿರುವದರಿಂದ ಸಂಗ್ರಹಿಣೀ ಚಿಕಿತ್ಸೆಯಲ್ಲಿ ಇದನ್ನು ಉಪಯೋಗಿಸುವದರಲ್ಲಿ ತುಂಬಾ ಪ್ರಯೋಜನವುಂಟು. ದಾಹ ಶಮನಕ್ಕಾಗಿ ಈ ಬೀಜವನ್ನು ನೀರಿನಲ್ಲಿ ನೆನಸಿ ಸಕ್ಕರೆ ಹಾಕಿ ಸೇವಿಸುತ್ತಾರೆ. ಇದು ಗುಟ್ಟ ಬೆಟ್ಟದಲ್ಲಿಯೂ ಕಾಡಿನಲ್ಲಿಯೂ ಹೇರಳವಾಗಿ ಬೆಳೆಯುತ್ತದೆ.

ವೈದ್ಯಬಂಧು

—o—

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಕಾರ್ಕಳ ಹಿಂದೂ ಬಾಲಿಕಾ ಪಾಠಶಾಲಾ.

ಕಾರ್ಕಳದಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಬೇಕಾಗಿ ಇಲ್ಲಿಯ ಗೃಹಸ್ಥರು ಹಲವು ವರುಷಗಳಿಂದ ಆಗ್ಗಾಗ್ಗೆ ಪ್ರಸ್ತಾಪಿಸುತ್ತಾ ಇದ್ದರೂ, ಆ ಕಾರ್ಯ ಆಗದೆ ಇದ್ದದ್ದು ಹಾಸ್ಯಾಸ್ಪದವಾಗಿತ್ತು. ಆದರೆ ಲೋಕವಿಖ್ಯಾತ [illegible] ಯ ಪೈಗಳವರು ಲೋಕಾಂತರವನ್ನೈದಿದರು. [illegible] ಅತ್ಯಂತ [illegible] ಕಳೆದ ಜುಲ್ಯಾ ತಾರೀಕು [illegible] ಇಲ್ಲಿಗೆ ತಪ್ಪಿ, ಅದೇ ದಿನ ಶಾಮ [illegible] ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸ್ವಜಾತಿ ಗೃಹಸ್ಥರು ಸಭೆಕಟ್ಟಿ ಪೈಗಳವರು ವಿದ್ಯಾಭಿವೃದ್ಧಿಯಲ್ಲಿ ಹೆಚ್ಚಿನ ಆಸಕ್ತಿ ಇದ್ದವರಾದದರಿಂದ ಅವರ ಸ್ಮಾರಕವಾಗಿ ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸುವದೇ ಶ್ರೇಯಸ್ಕರವೆಂತ [illegible] ರೂ ನಾಲ್ಕು ಸಾವಿರದ ಮೊಬಲಗು ವಂತಿಗೆಯಿಂದ [illegible] ಮಾಡಿದರು. ಸದರಿ [illegible] ಕಟ್ಟೋಣದ ಖರ್ಚು ಕಳೆದು ಉಳಿಯುವ ಮೊಬಲಗಿನ ಬಡ್ಡಿ ಅಂಶದಿಂದ ಸದರಿ ಶಾಲೆಯನ್ನು ನಡಿಸುವ ಖರ್ಚು ಉಂಟಾಗುವದು. [illegible] ಗೋನೇ ಆದಿತ್ಯವಾರ ದಿವಸ [illegible] ಪೈಗಳವರ ಸ್ಮಾರಕವಾಗಿ [illegible] ಹಿಂದೂ ಬಾಲಿಕಾ ಪಾಠಶಾಲೆಯನ್ನು ಶ್ರೀ ವೆಂಕಟರಮಣ ದೇವಸ್ಥಾನದ ಕಡೆಯಿಂದ ಸ್ಥಾಪಿಸಬೇಕಾಗಿಯೂ, ಸದರಿ ವಂತಿಗೆ [illegible] ರೂ [illegible] ದಲ್ಲಿ [illegible] ಸದರಿ ಶಾಲೆಯನ್ನು ಭಂಡಾರದ ಕಡೆಯಿಂದ ಶಾಶ್ವತವಾಗಿ [illegible] ಸದರಿ ಶಾಲಾ ಕಟ್ಟೋಣಕ್ಕೆ ಅಗತ್ಯವುಳ್ಳ [illegible] ಯೋಗ್ಯವಾದ ಸ್ಥಳವನ್ನು ಭಂಡಾರದ ಕಡೆಯಿಂದಲೇ ಒದಗಿಸಿಕೊಡಬೇಕಾಗಿಯೂ [illegible] ಬಾಕಿ [illegible] ಶಾಲಾ ಕಟ್ಟೋಣ ಕಟ್ಟಿಸಬೇಕಾಗಿಯೂ, ಹೊಸ ಕಟ್ಟೋಣ [illegible] ವರೆಗ ಶಾಲೆಯನ್ನು ದೇವಳ ಅಗ್ರಶಾಲೆ ಕಟ್ಟೋಣದಲ್ಲಿ [illegible] ಮಾಡಬೇಕಾಗಿಯೂ [illegible] ಯಿತು. ನಂತರ ತಾರೀಕು [illegible] ನೇ [illegible] ವಾರ ದಿವಸ ಸದರಿ ಹಿಂದೂ ಬಾಲಿಕಾ ಪಾಠಶಾಲೆಯ ಸ್ಥಾಪನೆಯ ಪ್ರಾರಂಭದ ಉತ್ಸವವು ಬಹಳ ಸಂಭ್ರಮದಿಂದ ಜರಗಿತು. ಆ ದಿನ ಬೆಳಿಗ್ಗೆ ಆರುವರೆ ಘಂಟೆ ಸಮಯಕ್ಕೆ ಸಾವಕಾರರೂ ವಕೀಲರೂ, ಸರಕಾರಿ ಉದ್ಯೋಗಸ್ಥರೂ ಮೊದಲಾದ ಸರ್ವರೂ ದೇವಸ್ಥಾನದಲ್ಲಿ ಕೂಡಿ ರೂ [illegible] ನ್ನು ಭಂಡಾರಕ್ಕೆ ಅರ್ಪಿಸಿ ಸದರಿ ಪಾಠಶಾಲೆಯನ್ನು ಭಂಡಾರದ ಕಡೆಯಿಂದ ನಡಿಸಬೇಕಾಗಿಯೂ, ಅದು ಸ್ಥಿರವಾಗಿ ನೆಲೆಗೊಂಡು ಅಲ್ಲಿ ಶಿಕ್ಷಣ ಹೊಂದುವ ಬಾಲಿಕೆಯರಿಗೆ ಒಳ್ಳೇ ವಿದ್ಯೆ ಬುದ್ಧಿ ಕೊಟ್ಟು ಅವರು ಧಾರ್ಮಿಕ ಗೃಹಿಣಿಯರಾಗುವಂತೆ ಅನುಗ್ರಹಿಸಬೇಕಾಗಿ ಶ್ರೀ ದೇವರಿಗೆ ಪ್ರಾರ್ಥಿಸಿಕೊಂಡು ಶ್ರೀ ದೇವರ ವ ಗುರುಗಳವರ ಮತ್ತು ಪೈಗಳವರ ಛಾಯಾಚಿತ್ರಗಳ ಸಮೇತ ವಾದ್ಯಘೋಷ ಮುಂತಾದ ಸಂಭ್ರಮದಿಂದ ಶಾಲಾ ಗೃಹಕ್ಕೆ ಚಿತ್ತೈಸಿದರು. ಅಲ್ಲಿ ಪ್ರಥಮತಾ ಬಾಲಿಕೆಯರು ಸ್ವಾಗತ ಹಾಡನ್ನು ಹಾಡಿದರು. ನಂತರ ಸರ್ವಸಮ್ಮತದಿಂದ ಹೈಕೋರ್ಟು ವಕೀಲ ಕೆ ಸದಾಶಿವ ಭಟ್, ಬಿ ಎ ಬಿ ಎಲ್. ಅವರ್‌ಗಳ್‌ರವರನ್ನು ಅಧ್ಯಕ್ಷರಾಗಿ ಆರಿಸೋಣಾಯಿತು. ದೇವಳ ಮೊಕ್ತೇಸರ ಕಡೆಯಿಂದ ಶಾಲೆಯ ಆಡಳತೆ ನೋಡಲಿಕ್ಕೆ ನೇಮಕಪಟ್ಟ ಮೆನೇಜಿಂಗ್ ಕಮ್ಮಿಟಿಯ ಕಾರ್ಯದರ್ಶಿ ಪಿ. ಶೇಷಗಿರಿ ಪ್ರಭು, ಬಿ ಎ. ಇವರು ಸಭೆಯ ಉದ್ದಿಶ್ಯವನ್ನು ಸಂಕ್ಷೇಪವಾಗಿ ಹೇಳಿ ಶ್ರೀದೇವರನ್ನು ವ ಗುರುಹಿರಿಯರನ್ನು ಸ್ಮರಿಸಿ ಪೈಗಳವರ ನೆನವರಿಕೆ ಮಾಡಿ ಕಾರ್ಕಳ ಹಿಂದೂ ಬಾಲಿಕಾ ಪಾಠಶಾಲೆಯನ್ನು ಪ್ರಾರಂಭ ಪಡಿಸಿ ಕೊಡಬೇಕಾಗಿ ಅಧ್ಯಕ್ಷರಿಗೆ ಅರಿಕೆ ಮಾಡಿದರು. ಆ ರೀತಿ ಅಧ್ಯಕ್ಷರು ಸವಿಯಾದ ನಯನುಡಿಗಳಿಂದ ಪೈಗಳವರ ಧಾರ್ಮಿಕ ಔದಾರ್ಯಕ ಗುಣಗಳನ್ನು ವರ್ಣಿಸಿ ಕಾರ್ಕಳ ಹಿಂದೂ ಬಾಲಿಕಾ ಪಾಠಶಾಲೆಯನ್ನು ಪ್ರಾರಂಭಪಡಿಸಿ ಕೊಟ್ಟರು. ಬಾಲಿಕೆಯರು ದೇವರ ಸ್ತೋತ್ರದ ಹಾಡನ್ನು ಹಾಡಿದರು. ನಂತರ ಶ್ರೀಯುತ ವಕೀಲ ಕೆ. ಲಕ್ಷ್ಮಣ ಪೈಗಳವರು ಹಿಂದುಸ್ಥಾನದಲ್ಲಿ ವೇದಗಳ ಪ್ರಾಚೀನ ಕಾಲದ ಸ್ತ್ರೀ ವಿದ್ಯಾಸ್ಥಿತಿ, ನಂತರ ಉಪನಿಷತ್ತು ಪುರಾಣಗಳ ಕಾಲದ ಸ್ತ್ರೀ ವಿದ್ಯಾಸ್ಥಿತಿ, ಬುದ್ಧರ ಕಾಲದ ಸ್ತ್ರೀ ವಿದ್ಯಾಸ್ಥಿತಿ, ನಂತರ ಸ್ತ್ರೀ ವಿದ್ಯೆಗೆ ಬಂದ ಅಧೋಪತನ ಈಗಿನ ಕಾಲ ಸ್ಥಿತಿಯಿಂದ ಮತ ಧರ್ಮಯುಕ್ತವಾದ ಸ್ತ್ರೀ ವಿದ್ಯಾ ಶಿಕ್ಷಣದ ಅತ್ಯಾವಶ್ಯಕತೆ ಮುಂತಾದ ವಿಷಯಗಳ ಕುರಿತು ಸೊಗಸಾದ ಮಾತುಗಳಿಂದ ಉಪನ್ಯಾಸ ಮಾಡಿದರು. ಬಳಿಕ ಶ್ರೀಯುತ ವಕೀಲ ಇಷ್ಟೆ ಕೃಷ್ಣಯ್ಯನವರೇ ಮೊದಲಾದ ಕೆಲವು ಗೃಹಸ್ಥರು ಬಾಲಿಕಾ ಪಾಠಶಾಲೆಯ ಉಪಯೋಗಗಳನ್ನು ಸರ್ವರೂ ಆಸಕ್ತಿಯಿಂದ ಸ್ಥಿರವಾಗಿ ವಹಿಸಿಕೊಂಡು ಬರುವದು ಅಗತ್ಯವೆಂಬದರ ಕುರಿತು ಭಾಷಣಮಾಡಿದರು. ನಂತರ ಶ್ರೀಮತಿ ಅಂಬಾಬಾಯಿಯವರು ಬಾಲಿಕೆಯರ ಕಡೆಯಿಂದ ಬಾಲಿಕೆಯರ ಜ್ಞಾನಾಂಧಕಾರವನ್ನು ತೊಲಗಿಸುವ ಈ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿದ್ದಕ್ಕೆ ಬಾಲಿಕೆಯರ ಕೃತಜ್ಞತೆಯನ್ನು ಸೂಚಿಸುವ ಅಂದವಾದ ಭಾಷಣವನ್ನು ಮಾಡಿದರು. ಶಾಲೆಯ ಸ್ಥಾಪನೆಯಲ್ಲಿ ಹೆಚ್ಚು ಆತುರಪಟ್ಟವರಾದ ಮತ್ತು ಮೆನೇಜಿಂಗ್ ಕಮ್ಮಿಟಿಯ ಅಧ್ಯಕ್ಷರಾದ ಶ್ರೀಯುತ ಕು. ಸುಬ್ರಾಯ ಕಮ್ತಿಯವರು ಅಧ್ಯಕ್ಷರಿಗೂ ಸಭಿಕರಿಗೂ ವಂದಿಸಿದ ನಂತರ, ಬಾಲಿಕೆಯರ ಮಹಾರಾಜರ [illegible] ಮಂಗಲದ ಹಾಡು ಸಭಿಕರಿಗೆ ಹೂ ಪನ್ನೀರು ಪಂಚಕಜ್ಜಾಯ [illegible] ಮುಂತಾದ ವಿಭವಗಳಿಂದ ಸಭೆಯು ಪೂರ್ಣ ಪಡಿಸೋಣಾಯಿತು. ಈ ರೀತಿ ಹಲವು ವರುಷಗಳಿಂದ ತೋರಿಕೊಂಡಿದ್ದ ಬಾಲಿಕಾ ಪಾಠಶಾಲೆಯು ಈಗ ಸ್ಥಾಪಿಸಲ್ಪಟ್ಟಿತು. ಪೈಗಳವರು ವಿದ್ಯಾಭಿವೃದ್ಧಿಯಲ್ಲಿ ಅತ್ಯಂತ ಆಸಕ್ತಿವುಳ್ಳವರಾಗಿದ್ದು ಅವರ ಸ್ಮಾರಕವಾಗಿ ಈ ಪಾಠಶಾಲೆ ಸ್ಥಾಪಿಸಲ್ಪಟ್ಟದ್ದಾದರಿಂದ, ಆ ಮಹಾಪುರುಷರ [illegible] ಪ್ರಭಾವದಿಂದಲೂ, ದೇವಸ್ಥಾನದಿಂದ ಸ್ಥಾಪಿಸಲ್ಪಟ್ಟದ್ದಾದುದರಿಂದಲೂ, ಶ್ರೀ ದೇವತಾನುಗ್ರಹದಿಂದ ಈ ಪಾಠಶಾಲೆಯು ಸ್ಥಿರವಾಗಿ ನಡದೀತೆಂದು ನಂಬುತ್ತೇವೆ. ಮತ್ತು ಆ ರೀತಿ ಅದು ಸ್ಥಿರವಾಗಿ ನೆಲೆಗೊಂಡು ಅದರಲ್ಲಿ ಬಾಲಿಕೆಯರು ಒಳ್ಳೇ ವಿದ್ಯೆ ವ ಬುದ್ಧಿಯನ್ನೂ ಗಳಿಸಿಕೊಂಡು ಧಾರ್ಮಿಕ ಗೃಹಿಣಿಯರು ಆಗಲಿ ಎಂತ ಪ್ರಾರ್ಥಿಸುತ್ತೇವೆ.

P S Prabhu,
Secretary.

ಶ್ರೀಯುತ ಪತ್ರಿಕಾಕರ್ತರೇ,

ಇಲ್ಲಿಯ ಕಲೆಕ್ಟರ್ ದೊರೆಗಳವರಾದ ಖಾನ್‌ಬಹದೂರ ಎಮ್ ಅಜಿಜುದ್ದೀನ್ ಸಾಹೇಬ್ ಬಹದೂರರವರೂ ಈ ಪಟ್ಟಣದ ಮುನ್ಸಿಪಲ್ ಕೌನ್ಸಿಲಿನವರೂ ಈ ಕೆಳಗಿನ ವಿಷಯಕ್ಕೆ ತಕ್ಕ [illegible] ನಂತೆ ಈ ಲೇಖನವನ್ನು ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಪಶ್ಚಿಮ ಕರಾವಳಿಯಲ್ಲಿ ಮಂಗಳೂರೆಂಬದು ಅತೀ ಸುಂದರವಾದ ಪಟ್ಟಣವಾಗಿರುವದು. ತಕ್ಕಮಟ್ಟಿಗೆ ಇಲ್ಲಿಯ ಹವೆಯು ಸಹಾ ಚಲೋದಾಗಿರುವುದೆಂದೂ ಹೇಳಬಹುದು. ಜನರೂ ಸಹಾ ಶಾಂತಸ್ವಭಾವದವರೇ ಆಗಿದ್ದು, ಎಲ್ಲಾ ವಿಷಯಗಳಲ್ಲಿ ಇವರಿಗೆ ಅಭಿಮಾನ ಹೆಚ್ಚು. ಮುನಿಸಿಪಲ್ ಆಡಳಿತೆಯು ಇಲ್ಲಿ ಸ್ಥಾಪಿತವಾಗಿ ಅನೇಕ ವರುಷಗಳಾದರೂ ಈ ನಾಡಿನಲ್ಲಿ ಮುನಿಸಿಪಾಲಿಟಿಗಳ ಕರ್ತವ್ಯ ಜ್ಞಾನವು ಕಡಿಮೆ. [illegible] ಪ್ರಯೋಜನವನ್ನು ಮುನಿಸಿಪಾಲಿಟಿಯವರು ಪಡೆಯದೆ ಪಟ್ಟಣದ ಸೌಂದರ್ಯಕ್ಕೂ ಆರೋಗ್ಯಕ್ಕೂ ಜನರ ಅನುಕೂಲತೆಗಳಿಗೂ ಆಗ್ಗಾಗ್ಗೆ ಬರುತ್ತಿರುವ ಅಭ್ಯಂತರಗಳನ್ನು ಶೀಘ್ರದಲ್ಲಿಯೇ ತೆಗದುಹಾಕ ಬೇಕಾಗಿ ನನ್ನ ಅಪೇಕ್ಷೆಯಾಗಿರುವದು.

ಸಾಯಂಕಾಲ ಸಮಯದಲ್ಲಿ ಅನೇಕ ಮಂದಿ ವಿದ್ಯಾರ್ಥಿಗಳೂ, ಚಿಕ್ಕ ಮಕ್ಕಳೂ, ಇತರರೂ ತಿರುಗಾಟಕ್ಕೆ ಹೋಗಿ ವಿಶ್ರಮಿಸಿಕೊಳ್ಳುವ ಅನೇಕ ಸ್ಥಳಗಳು ಮುನಿಸಿಪಾಲಿಟಿಯೊಳಗೆ ಇರುವವು. ಇವುಗಳಲ್ಲಿ ಮಂಗಳೂರು ಯುರೋಪಿಯನರ ಕ್ಲಬ್ಬಿನ ಹತ್ತಿರ "ಲೈಟ್‌ಹೌಸ್ ಹಿಲ್" ಅಥವಾ "ಬಾವುಟಗುಡ್ಡೆ" ಎಂಬದೊಂದಾಗಿರುವುದು. ನಾಲ್ಕೈದು ವರುಷಗಳ ಹಿಂದೆ ಇಲ್ಲಿ ಬಂದಂಥಾ ಜನರು ಕೂತುಕೊಳ್ಳುವರೆ ಅಂದವಾಗಿ ಕಟ್ಟಿಸಿದ ಮೂರು 'ಸೀಟು'ಗಳಿದ್ದವು. ಇವರಲ್ಲಿ ಒಂದು, ಯಾವ ಪುಣ್ಯಾತ್ಮರ ಔದಾರ್ಯದಿಂದಲೋ ತಕ್ಕಮಟ್ಟಿಗೆ ಸಮನಾಗಿರುವುದು. ಬಾಕಿ ಎರಡು ಹಾಳಾಗಿ ಎರಡು ಯಾ ಮೂರು ವರುಷಗಳಾದವು ಎಂದು ಹೇಳಬಹುದು. ಈ ಕಲ್ಲುಗಳಿಂದ ಕಟ್ಟಿದ ಆಸನಗಳ ಕಲ್ಲುಗಳು ಜಾರಿಬಿದ್ದು ಇವುಗಳ ಪಾಯದಲ್ಲಿಯೂ, ಮೇಲ್ಭಾಗದಲ್ಲಿಯೂ, ಅನೇಕ ಬಿಲಗಳುಂಟಾಗಿರುವವು. ಬಿಲಗಳಲ್ಲಿ ಇಲಿಗಳು, ಇಲಿಗಳನ್ನು ಹುಡುಕಾಡಿ ಬರುವ ನಾಗರಹಾವು ಮುಂತಾದವುಗಳು ಒಮ್ಮಿಂದೊಮ್ಮೆ ಹೊರಗೆ ತಲೆಹಾಕಿ ನೋಡುವುದೂ ಉಂಟು. ಆಸನಕಲ್ಲುಗಳ ಮೇಲೆ ಹಲವು ಸರ್ತಿ ಚಿಕ್ಕ ಮಕ್ಕಳು ಹೋಗಿ ಕೂತುಕೊಳ್ಳುತ್ತಿರುವರು. ಹೆಚ್ಚು ಸಮಯದಿಂದ ಈ 'ಸೀಟು'ಗಳನ್ನು ಇಂಥಾ ಅಪಾಯಕರ ಸ್ಥಿತಿಯಲ್ಲಿರಿಸಿದ್ದು ಯಾವ ಉದ್ದಿಶ್ಯದಿಂದ ಎಂತ ಹೇಳಕೂಡದು. "ಅಹಿಂಸಾ ಪರಮೋಧರ್ಮ" ಎಂಬ ಸಿದ್ಧಾಂತದ ಮೇರೆಗೆ ಮುನಿಸಿಪಲ್ ಕೌನ್ಸಿಲಿನವರು ನಡಕೊಂಡು ಈ ಆಸನಗಳ ತಳ್ಳಿಗೆ ಹೋಗದೆ ಇಲಿಗಳ ಪ್ರಾಣಹಾನಿ ಮಾಡದೆ ಇರುವರೆಂದರೆ, ನಮ್ಮಲ್ಲಿ ಪ್ರತಿನಿತ್ಯವೂ ಪ್ಲೇಗು ಬಾಧೆಯನ್ನು ನಿಲ್ಲಿಸುವರೆ ನೂರಾರು ಇಲಿಗಳನ್ನು ಹಣಕೊಟ್ಟು ಕೊಲ್ಲಿಸುತ್ತಿರುವರು. ಒಂದು ವೇಳ್ಯ ನಿವಾಸಿಕರ ಅನುಕೂಲತೆ ಬಗ್ಗೆ ಈ ಆಸನಗಳನ್ನು ಸರಿಪಡಿಸುವುದು ಯೋಗ್ಯವಲ್ಲವೆಂತ ಕಂಡುಬಂದರೆ ಅವುಗಳನ್ನು ಸಹಮೂಲವಾಗಿ ತೆಗದು ಹಾಕುವರೆ ತಕ್ಕ ನಿರ್ಣಯವನ್ನು ಕೌನ್ಸಿಲಿನವರು ಮಂಜೂರು ಮಾಡಿ ಈ ನಿರ್ಣಯವನ್ನು ತಕ್ಕ ರೀತಿಯಲ್ಲಿ [illegible] ಶೀಘ್ರದಲ್ಲಿಯೇ ಈ ಆಸನಗಳ [illegible] ಸಹಾ ತೆಗದು ಹಾಕುವದು ಯೋಗ್ಯವಲ್ಲವೇ? [illegible]

...ಳನ್ನು ಉದ್ಯಾನಗಳಿಂದಲೂ ಒಳ್ಳೇ ಆಸನಗಳಿಂದಲೂ ಪಟ್ಟಣವನ್ನು ಅಲಂಕರಿಸು ತ್ತಿರುವಾಗ ನಮ್ಮ ಮುನಿಸಿಪಾಲಿಟಿಯವರು ಈ ವಿಷಯದಲ್ಲಿ ತೋರುವ ಅಭಾವವು ಯುಕ್ತವೇ?

ಶಾಂತಸ್ವಭಾವದ ಈ ಪಟ್ಟಣ ನಿವಾಸಿಕರಿಗೆ ವಿರಾಮಿಸಲು ಪಟ್ಟಣದ ಮಧ್ಯ ಭಾಗದಲ್ಲಿ ದೊಡ್ಡದೊಂದು ಮೈದಾನು ಇರುವುದು ಇಲ್ಲಿ ಸಹಾ ನೂರಾರು ಜನರು ಪ್ರತಿನಿತ್ಯವೂ ಬಂದು ಮೈದಾನಿನಲ್ಲಿ ನಿಂತು, ನಿಂತು, ಕೈಕಾಲು ಒಜ್ಜಿ ಕಟ್ಟಕಡೆಗೆ ಅತ್ತಿತ್ತ ನೋಡಿ, ಜನರ ಉಗುಳೂ, ತಕ್ಕಷ್ಟು ದೂಳಿಯೂ ಇರುವಂಥಾ ಒರೇ ನೆಲದ ಮೇಲೆ ಕೂತುಕೊಳ್ಳುವರು. ಇತರ ಪಟ್ಟಣಗಳಲ್ಲಿ ಇರುವಂತೆ ಇಂದಾ ಮೈದಾನುಗಳ ಒದಿಯಲ್ಲಿ ಕೂತುಕೊಳ್ಳುವರೆ ಸಾಕಷ್ಟು ಬೆಂಚುಗಳು ಸಹಾ ಇಲ್ಲಿ ಇರುವುದಿಲ್ಲ

ಧರ್ಮಶಾಲೆಗಳ ವಿಷಯವಾಗಿಯೂ, ಆಸ್ಪತ್ರೆಗಳಲ್ಲಿ ಮುನಿಸಿಪಾಲಿಟಿಯವರಿಂದ ಕೊಡೋಣಾಗುವ ಔಷಧಿಗಳ ವಿಷಯವಾಗಿಯೂ ಯಾ ಮುನಿಸಿಪಾಲಿಟಿಯವರ ಇತರ ಆಡಳಿತೆ ವಿಷಯ ತಮ್ಮ ಪತ್ರದ ಮುಂದಿನ ಸಂಚಿಕೆಗಳಲ್ಲಿ ಬರಕೊಳ್ಳುವೆನು. ಈ ಲೇಖನವು ಬಹಳ ವಿಸ್ತಾರವಾಗುವುದೆಂಬ ಭಯದಿಂದ ಅದನ್ನು ಈ ಸರ್ತಿ ಬರಿಯುವರೆ ಆಗಲಿಲ್ಲ ಪ್ರಜೆಗಳ ಸಂಕಷ್ಟಗಳನ್ನು ಆಗ್ಯಾಗ್ಯೆ ಕೇಳಿಕೊಂಡು ಅವುಗಳನ್ನು ಯುಕ್ತ ತೋರಿದಲ್ಲಿ ನಿವಾರಿಸಿ ನಮ್ಮೆಲ್ಲವರ ಪ್ರೀತಿ ಪಾತ್ರದರಾದ ಕಲೆಕ್ಟರ್ ದೊರೆಗಳು ಸಹಾ ನನ್ನ ಸೂಚನೆಗಳ ನಿಜತ್ವವನ್ನು ತಿಳಕೊಳ್ಳ ಬೇಕಾಗಿ ನನ್ನ ವಿನಯಪೂರ್ವಕ ವಿಜ್ಞಾಪನೆಯಾಗಿರುವುದು

ಮುನಿಸಿಪಲ್ ತೆರಿಗೆ ಕೊಡುವವ

—o—

ವಿದೇಶ ವೃತ್ತಾಂತ

ಹಿಂದೂಸ್ಥಾನದಲ್ಲಿ ವೈದ್ಯ ಇಲಾಖೆಯ ಮೇಲುದ್ಯೋಗಸ್ಥರಾಗಿ ನೇಮಕ ಪಡುವ ಬಗ್ಗೆ ಇಂಡಿಯನ್ ಮೆಡಿಕಲ್ ಸರ್ವಿಸ್ ಪರೀಕ್ಷೆಗೆ ೪೮ ಜನ ಉಮೇದವಾರರು [illegible] ಜನ ಉದ್ಯೋಗಸ್ಥರು ಬೇಕಾಗಿದ್ದರು [illegible] ಳದಲ್ಲಿ ಆದ ಈ ಪರೀಕ್ಷೆಯಲ್ಲಿ ತೇರ್ಗಡೆಪಟ್ಟವರಲ್ಲಿ [illegible] ತೀಯ ೪ ಜನರಿಗೆ ಈ ಕೆಲಸ ದೊರಕಿರುವುದು

ವೆಸ್ಟನ್ ಎಂಬ ೭೦ ವರುಷ ಪ್ರಾಯದ ಅಮೇರಿಕ ದವನೊಬ್ಬನು ನ್ಯೂಯೋರ್ಕ್ ಪಟ್ಟಣದಿಂದ [illegible] ಮೈಲುಗಳು ದೂರವಿರುವ ಸೆನ್ ಫ್ರಾನ್ಸಿಸ್ಕೊ ಪಟ್ಟಣಕ್ಕೆ ಕಾಲು ನಡೆಯಿಂದ ಪ್ರಯಾಣ ಮಾಡಿರುವನು ಈತನು [illegible] ಮಾರ್ಚಿ ತಿಂಗಳ ೧೫ನೇ ತಾರೀಕಿನಲ್ಲಿ ನ್ಯೂಯೋರ್ಕ್ ಪಟ್ಟಣದಿಂದ ಹೊರಟು ಪ್ರತಿ ಆದಿತ್ಯವಾರ ಮಾತ್ರ ವಿಶ್ರಾಂತಿಸಿಕೊಂಡು ೧೦೫ ದಿವಸಗಳಲ್ಲಿ ಸನ್ ಫ್ರಾನ್ಸಿಸ್ಕೊ ಪಟ್ಟಣಕ್ಕೆ ಬಂದು ತಲಪಿರುವನು ಹೀಗೆ ಆದಿತ್ಯವಾರಗಳನ್ನು ಕೂಡಿಸಿದ್ದಲ್ಲಿ ಈತನು ದಿವಸ ಒಂದಕ್ಕೆ ಸರಾಸರಿಯಲ್ಲಿ ೩೪ ಮೈಲುಗಳ ಪ್ರಕಾರ ನಡದಿರುವನು ದಿವಸಕ್ಕೆ ೭೭ ಮೈಲುಗಳ ಪ್ರಕಾರ ಸಹಾ ಈತನು ತನ್ನ ಪ್ರಯಾಣದಲ್ಲಿ ನಡದಿರುವನಂತೆ

ಕೃಷ್ಣವರ್ಮರವರಿಂದ ರಚಿಸಲ್ಪಡುವ ಇಂಡಿಯನ್ ಸೋಶಿಯಲೋಜಿಸ್ಟ್ ಎಂಬ ಪತ್ರಿಕೆಯು ತಿರುಗಿ ಆಂಗ್ಲಾಳದಲ್ಲಿ ಅಚ್ಚಾಗುತ್ತಲಿರುವುದಂತೆ [illegible] ಖಾನಾ ಮಾಲಿಕರವರು ತಾನು ಕೃಷ್ಣವರ್ಮರ [illegible] ಯುದವನಲ್ಲವಾದರೂ ಮುದ್ರಣ ಸ್ವಾತಂತ್ರ್ಯಕ್ಕೋಸ್ಕರ ಈ ಪತ್ರವನ್ನು ಛಾಪಿಸುತ್ತಿರುವೆನೆಂಬದಾಗಿ ಹೇಳುತ್ತಿರುವರಂತೆ.

—o—

ಫ್ರಾನ್ಸ್ ದೇಶದಲ್ಲಿ "ಯರಿಯೊಪ್ಲೇನ್" ಎಂಬ ವಾಯು ವಿಮಾನಗಳ ಮೇಲಾಟದ ಓಟವು ನಡೆಯಿತು ಈ ಪಂಥದ ಓಟದ ಬಗ್ಗೆ ೩೭ ವಾಯುವಿಮಾನಗಳು ಬಂದಿದ್ದವು. ಅರ್ದ ಮಿಲಿಯಕ್ಕಿಂತ ಹೆಚ್ಚು ಜನ ಪ್ರೇಕ್ಷಕರು ಈ ಮೇಲಾಟವನ್ನು ನೋಡಲು ನೆರೆದಿದ್ದರು ಗಾಳಿಯು ಬಹಳ ಬಿರುಸಾದ್ದರಿಂದ ಮೇಲಾಟದ ಕೆಲವು ವಾಯು ವಿಮಾನಗಳಿಗೆ ಓಡಾಡಲು ಆಗಲಿಲ್ಲ [illegible] ಮಿನಿಟು ೫೮ ಸೆಕುಂಡಗಳಲ್ಲಿ ಆರುಕಾಲು ಮೈಲುಗಳ ಓಟವನ್ನು ಎಮ್ ಲೆಪ್‌ಬುರೆ ಎಂಬವರು ಮಾಡಿರುವರಾಗಿ ತಿಳಿಯುತ್ತೇವೆ

ಗ್ಲೆಸ್ಗೊ ಪಟ್ಟಣದ ಮಧ್ಯಭಾಗದಲ್ಲಿರುವ ವ್ಯಾಪಾರ ಸ್ಥಳಕ್ಕೆ ಬೆಂಕಿ ಬಿದ್ದು, ಬೆಂಕಿಯು ಕೆಲವು ದಿವಸಗಳವರೆಗೆ ಉರಿಯುತ್ತಿತ್ತೆಂಬದಾಗಿ ಕೇಳುತ್ತೇವೆ ಕಾಲು ಮಿಲಿಯ ಪವನುಗಳಷ್ಟು ನಷ್ಟವು ಉಂಟಾಗಿರುವುದಂತೆ

ಎನಿ ಬಿಸೆಂಟಮ್ಮನವರು ಮೆಂಛೆಸ್ಟರ್ ಗಾರ್ಡಿಯನ್ ಎಂಬ ಆಂಗ್ಲಾಳದ ಪತ್ರದಲ್ಲಿ ಸೆಂಟ್ರಲ್ ಹಿಂದೂ ಕೊಲಿಜಿಗೆ ೫೦,೦೦೦ ಪವನುಗಳನ್ನು ಆಂಗ್ಲೇಯರು ಚಂದಾ ಕೊಡಿಸಿ ಕೊಡಬೇಕೆಂತ ಬಂದು ವಿಜ್ಞಾಪನಾ ಪತ್ರವನ್ನು ಪ್ರಕಟಿಸಿರುವರಾಗಿ ಕೇಳಿದು ಬರುತ್ತದೆ

[illegible] ಈ ತಿಂಗಳ ೧೭ನೇ ತಾರೀಕಿನಲ್ಲಿ [illegible] ಕ್ಕೆ ಹಾಕಿರುವರು ಆತನ ಅಪೇಕ್ಷೆಯ ಪ್ರಕಾರ [illegible] ಹೂಣಿಸಿರುವರು

[illegible] ಪತ್ರಿಕೆಗೆ [illegible] ಉಪವಾಸ [illegible] ಪ್ರತಿ ಉಪವಾಸ [illegible] ಪ್ರತಿ [illegible] ಮೈಲು [illegible] ಉಪವಾಸ ಸಮ [illegible] ನೀರನ್ನು ಕುಡಿಯುತ್ತಿದ್ದರು ಪ್ರತಿ ದಿವಸವೂ [illegible] ಉಪವಾಸ ೩೦ ದಿವಸ [illegible] ತಮ್ಮ ಸ್ವಂತ [illegible]

ಉತ್ತರಹಿಂದುಸ್ಥಾನ.

ಪಟಿಯಾಲಾ ಸಂಸ್ಥಾನದವರು [illegible] ವಿದ್ಯಾಭ್ಯಾಸವನ್ನು [illegible] ಮಾಡಿರುವರು ಲಾಹೋರಿನಲ್ಲಿ [illegible] ವಸ್ತುಪ್ರದರ್ಶನಕ್ಕೆ ೫೦೦೦ ರೂಪಾಯಿಗಳನ್ನು ಈ ಸಂಸ್ಥಾನದವರು ಕೊಟ್ಟಿರುವರು

ಬಾಬು [illegible] ರವರು ದರ್ಮವೆಂಬ ಹೆಸರಿನ ಒಂದು ವಾರಪತ್ರಿಕೆಯನ್ನು ಪ್ರಕಟಿಸುವರಾಗಿ ತಿಳಿಯುತ್ತೇವೆ

ಲಾಹೋರಿನ ಪ್ರಾಂತಿಕ ಕೊಂಗ್ರೆಸು ಕಮಿಟಿಯವರು ಸರ್ ಫೀರೋಜಷಹಾ ಮೇಥಾರವರನ್ನು ಬರುವ ಕೊಂಗ್ರೆಸು ಸಭೆಯ ಅದ್ಯಕ್ಷರನ್ನಾಗಿ ಚುನಾಯಿಸುವರೆ ನಿಶ್ಚಯಿಸಿರುವರು ಇವರಿಗೆ ಅನಾನುಕೂಲವಾದಲ್ಲಿ ಬಾಬು ಸುರೇಂದ್ರನಾಥ ಬೆನರ್ಜಿಯವರನ್ನು ಆರಿಸಲಿಕ್ಕೆ ನಿರ್ಣಯಿಸಿರುವರು

ಸರಕಾರದ ಕಡೆ ವಕೀಲರಾಗಿದ್ದು ಆಲಿಪುರದ ಬೊಂಬ ಮೊಕದ್ದಮೆಯಲ್ಲಿ ನೊರ್ಟನರವರಿಗೆ ಸಹಾಯವನ್ನು ಮಾಡುತ್ತಿದ್ದು ಗುಂಡು ಹೊಡೆದು ಕೊಲ್ಲಲ್ಪಟ್ಟ ಆಶು [illegible]

[illegible] ಯಿ ಹುಟ್ಟುವಳಿಯ ಮೂರು ಹಳ್ಳಿಗಳನ್ನು ಜಹಗೀರಾಗಿ ಬಿಟ್ಟಿರುವರು ಭೂಕಂದಾಯವಿಲ್ಲದೆ ಈ ಜಮೀನು ಮುಕರ್ಜಿಯವರ ವಿದವೆಯರಿಂದಲೂ ಅವರ ಹಿರೇ ಮಗನಿಂದಲೂ ಅನುಭವಿಸಲ್ಪಟ್ಟ ಮೇಲೆ ಮುಕರ್ಜಿಯವರ ಮೊಮ್ಮಗನು ಈ ಜಹಗೀರಿನಲ್ಲಿ ೨೫೦೦ ರೂಪಾಯಿಗಳಿಗೆ ಮಾತ್ರ ಬದ್ಧನಾಗಿರುವನೆಂತ ವಿಧಿಸಿರುವುದು

ಮುಂಬಯಿ ಹತ್ತರವಿರುವ ಬೆಸಿನ್ ಎಂಬಲ್ಲಿ ರೋಮನ್ ಕೆಥೋಲಿಕ್ ಪಾದ್ರಿಯಾದ ಪಾದರ್ [illegible] ಎಂಬವರನ್ನು ಅವರ ದೇವಾಲಯದ ಹತ್ತರ [illegible] ಕೊಂದು ತಂದುಹಾಕಿರುವರೆಂಬದಾಗಿ ತಿಳಿಯುತ್ತೇವೆ ಅನುಮಾನದ ಮೇಲೆ ಪೋಲೀಸಿನವರು ಮೃತಪಟ್ಟವರ ಸಹಕಾರಿಯಾಗಿದ್ದ ಪಾದರ್ ಜೆ ವಿ. [illegible] ಇನ್ನು ಎರಡು ಜನ ನೌಕರರನ್ನೂ ಕೈದುಮಾಡಿರುವರಂತೆ

ಮುಂಬಯಿಯ ಜನರಲ್ ಪೋಸ್ಟ್ ಆಫೀಸಿನಲ್ಲಿ ಸ್ಟಾಂಪುಗಳನ್ನು ವಿಕ್ರಯಿಸುವರೆ ಒಂದು ನವೀನ ಯಂತ್ರವನ್ನು ಪರೀಕ್ಷಾರ್ಥವಾಗಿ ಇಟ್ಟಿರುವರು ಈ ಯಂತ್ರದ ಒಂದು ಕಡೆಯಲ್ಲಿ ಅದಾಣೆಯನ್ನು ಹಾಕಿ ಇಟ್ಟ ಕೂಡಲೇ ಈ ಅರ್ಧಾಣೆಯು ಒಳಗಡೆಯಲ್ಲಿ ಬಿದ್ದು ಚೀಟು ಹೊರಗೆ ಬರುವುದು ಸದ್ಯಕ್ಕೆ ಅರ್ಧಾಣೆ ಮತ್ತು ಮೂರು ಪೈಗಳ ಸ್ಟಾಂಪುಗಳಿಗೆ ಈ ರೀತಿಯ ಯಂತ್ರಗಳನ್ನಿಟ್ಟಿರುವರು

[illegible] ದಿಂದ ಬಂದ ಬಾಬು ಸುರೇಂದ್ರನಾಥ ಬೆನರ್ಜಿಯವರ ಬಹುಮಾನಾರ್ಥವಾಗಿ ಈ ತಿಂಗಳ ತಾ 20ರಲ್ಲಿ ಕಲ್ಕತ್ತಾ ಟೌನ್ ಹೋಲಿನಲ್ಲಿ ಎಲ್ಲರೂ ಸಭ ಕೂಡಿ ಬೆನರ್ಜಿಯವರಿಗೆ ಸ್ವಾಗತ ಉಪಚಾರಗಳನ್ನು ಮಾಡಿದ್ದಲ್ಲದೆ ಚಾ ಕುಡಿಯುವ ಬೆಳ್ಳಿಯ ಪಂಚಪಾತ್ರೆಗಳನ್ನು ಸಹಾ ಉಚಿತವಾಗಿ ಕೊಟ್ಟಿರುವರು

ಮಲೆಜ್ವರದ ನಿವಾರಣೆಯನ್ನು ಯಾವ ರೀತಿಯಲ್ಲಿ ಪ್ರತಿ ಸಂಸ್ಥಾನದಲ್ಲಿಯೂ ಮಾಡಬಹುದೆಂದು ನಿಶ್ಚಯಿಸುವರೆ ಬರುವ ಅಕ್ಟೋಬರ ತಿಂಗಳ 11 ನೇ ತಾರೀಕಿನಲ್ಲಿ ವ್ಯಾಸರಾಯ ಪ್ರಭುಗಳ ಸಮಕ್ಷಮದಲ್ಲಿ ಸಿಮ್ಲದಲ್ಲಿ ಒಂದು ಸಭೆಯು ಕೂಡುವುದು ಸಭೆಯಲ್ಲಿ ಈ ವಿಷಯವು ಒಂದು ಹಪ್ತೆಯ ತನಕ ಚರ್ಚಿಸಲ್ಪಡುವುದು ಆಯಾ ಸಂಸ್ಥಾನದ ವೈದ್ಯ ಇಲಾಖೆಯ ಪ್ರತಿನಿಧಿಗಳೂ ಸಂಸ್ಥಾನಗಳ ಅಧಿಕಾರಿಗಳಲ್ಲದ ಇತರ ಪ್ರಜಾಮುಖಂಡರೂ ಸಹಾ ಈ ಸಭೆಗೆ ಹೋಗುವರು

ಡಾಕ್ಟರ್ ಲಾಲ್‌ಕಾಕಾರವರ ಸ್ಮರಣಾರ್ಥವಾಗಿ ಏರ್ಪಡಿಸಿದ ಫಂಡಿಗೆ ಮುಂಬಯಿಯಲ್ಲಿ ರೂ. ೧೧,೫೪೧-೭೦ ಚಂದಾಹಣವು ದೊರಕಿರುವುದು. ಇಂಡಿಯಾ ಸರಕಾರದವರು ಈ ಫಂಡಿಗೆ ರೂ. ೧೫೦೦ನ್ನು ಕೊಟ್ಟಿರುವರು.

ಫಿನೆನ್ಸ್ ಇಲಾಖೆಯ ಸಕ್ರೆಟರಿಯಾದ ಸರ್ [illegible] ಮದ್ರಾಸು ಗವರ್ನಮೆಂಟಿ [illegible]

ಈವರು ಬರುವ ... ತಿಂಗಳ ಪ್ರಥಮ ಹಪ್ತೆಯೊಳಗೆ ಮದ್ರಾಸಿಗೆ ಬಂದು ... ಮಾಡಿಕೊಳ್ಳುವರು.

—o—

ರೈಲ್ವೆ ಕಂಪೆನಿಗಳಿಗೆ ಈ ತಿಂಗಳ ತಾ 7ರ ವರೆಗೆ, ... ಕೋಟಿ, ... ಲಕ್ಷ ... ಸಾವಿರ ರೂಪಾಯಿಗಳು ಹುಮ್ಲಾ ಆದಾಯವಾಗಿ ದೊರಕಿರುವುದು

—o—

ರೈಲ್ವೆಗಳಲ್ಲಿ ಪ್ರಯಾಣಮಾಡುತ್ತಿರುವಾಗ ಕಳ್ಳರು ಪ್ರಯಾಣಿಕರನ್ನು ಸುಲುಕೊಳ್ಳಲು ವಿಶೇಷ ಪ್ರಯತ್ನಗಳನ್ನು ನಡಿಸುತ್ತಿರುವರು ಪ್ರಯಾಣಿಕರ ಬಗ್ಯೆ ತಿಂಡಿಗಳನ್ನು ಮಾರಲಿಕ್ಕೆ ತರುವವರ ವೇಷಗಳನ್ನು ಧರಿಸಿಕೊಂಡು ಈ ತಿಂಡಿಗಳಲ್ಲಿ ಅಮಲುಕರ ಪದಾರ್ಥಗಳನ್ನು ಹಾಕಿ ಪ್ರಯಾಣಿಕರಿಗೆ ಬಹಳ ಅಲ್ಪ ಕ್ರಯಕ್ಕೆ ಮಾರುತ್ತಿರುವರು. ಪ್ರಯಾಣಿಕರು ಇವನ್ನು ತಿಂದ ಕೂಡಲೇ ಅಮಲೇರಿ ಬೀಳಲು ಅವರ ಹತ್ತರವಿರುವ ಸೊತ್ತುಗಳನ್ನೆಲ್ಲಾ ಈ ವೇಷಧಾರಿಗಳು ಹಿಡಿದು ಪಲಾಯನ ಮಾಡುವರು

~~~~~

ಮೋರ್ಲೆ ಪ್ರಭುಗಳ ರಾಜ್ಯಭಾರ ಮಾರ್ಪಾಟುಗಳನ್ನು ಜ್ಯಾರಿಗೆ ತರುವರೆ ಇಂಡಿಯಾ ಸರಕಾರದವರು ... ಲವಿಕೆಯಿಂದ ಕೆಲಸ ನಡಿಸುತ್ತಿರುವರು ಎಲ್ಲಾ ಸಂಸ್ಥಾನಗಳ ಸರಕಾರ ಕಡೆಯಿಂದ ಪ್ರತಿನಿಧಿಗಳನ್ನು ಸಿರಿಕ್ಷಿಸುತ್ತಿರುವರು ಮದ್ರಾಸು ಸರಕಾರದವರು ಈ ಉದ್ದಿಶ್ಯದಿಂದ ಕಲ್ಲಿಕೋಟೆ ಮೊದಲಾದ ಪ್ರಾಂತ್ಯಗಳಿಗೆ ಕಲೆಕ್ಟರ್ ಆಗಿದ್ದ ಮೆ| ಬಟರ್‌ವರ್ತರವರನ್ನೂ ಮುಂಬೈಯಿಂದ ಮೆ| ಎನ್ಥೊವೆನ್ ಎಂಬವರನ್ನೂ, ಸಂಯುಕ್ತ ಸಂಸ್ಥಾನದಿಂದ ಮೆ| ಡ್ಯೂಕ್ ಎಂಬವರನ್ನೂ, ಪಂಜಾಬಿನಿಂದ ಮೆ| ಫೆಂಟನ್ ಎಂಬವರನ್ನೂ, ಪೂರ್ವಬಂಗಾಳ ಮತ್ತು ಅಸ್ಸಾಮಿನಿಂದ ಮೆ| ಲಾಯನ್ ಎಂಬವರನ್ನೂ ಸಿರಿಕ್ಷಿಸುತ್ತಿರುವರು.

—

ಗಡಿಪಾರು ಮಾಡಲ್ಪಟ್ಟ ಬಾಬು ಅಶ್ವಿನಿ ಕುಮಾರ ದತ್ತರವರನ್ನು ಲಕ್ನೊ ಜೈಲಿನಿಂದ ಬರೇಲಿ ಜೈಲಿಗೆ ... ರುವರು.

~~~~~

ಮುಂಬಯಿ ಸರಕಾರದವರು ಡಿಸ್ಟ್ರಿಕ್ಟ್ ಕಲೆಕ್ಟರುಗಳಿಗೆ ಪ್ರಜಾಕ್ಷೇಮಾರ್ಥವಾಗಿ ಒಂದು ಹೊಸ ಸೂಚನೆಯನ್ನು ಕೊಟ್ಟಿರುವರು ಅಗಿಂದಾಗ್ಯ ಕಲೆಕ್ಟರರು ತಾವು ಹೋಗುತ್ತಿರುವ ಪಟ್ಟಣಗಳಲ್ಲಿ ಜನರ ಸಂಕಷ್ಟಗಳನ್ನು ತಿಳಕೊಳ್ಳುವರೆ ಸಭೆ ಕೂಡಿಸಿ ಈ ಸೂಚನೆ ಮೇರೆಗೆ ನಡಕೊಳ್ಳಬೇಕಾಗಿರುವುದು ಮುಂಬಯಿ ಸಂಸ್ಥಾನದಲ್ಲಿ ಈ ಸೂಚನೆಯು ಜಾರಿಗೆ ಬಂದಿರುವುದು ಇತರ ಸಂಸ್ಥಾನಗಳಲ್ಲಿಯೂ ಕಲೆಕ್ಟರ್ ದೊರೆಗಳವರು ಈ ಸೂಚನೆಯನ್ನು ಜಾರಿಗೆ ತರುತ್ತಿದ್ದರೆ ಪ್ರಜಾಸಂಪರ್ಕಕ್ಕೆ ಸರಕಾರದವರಿಗೆ ಹೆಚ್ಚಿನ ಅವಕಾಶವಾಗುತ್ತಿತ್ತು

~~~~~

ಲಾಹೋರಿನಲ್ಲಿ ಈ ಸರ್ತಿ ಕೊಂಗ್ರೆಸು ಸಭೆಯು ಸೇರಿಯಕೂಡದೆಂತ ಪ್ರತಿವಾದಿಸುವ ಒಂದು ನಿಷೇಧ ಪತ್ರಕ್ಕೆ ಅನೇಕ ಹಿಂದೂ ಪ್ರಜಾಮುಖಂಡರ ಸಹಿ ಆಗುತ್ತಿರುವುದು ಆಯಾ ಜಿಲ್ಲೆಗಳ ಕೊಂಗ್ರೆಸು ಕಮಿಟಿಯವರೂ ಸಹಾ ಈ ಪತ್ರಕ್ಕೆ ಸಹಿ ಹಾಕಿರುವರು ಪಂಜಾಬಿನ ಚೀಫ್ ಕೋರ್ಟಿನ ಮಾಜಿ ಜಡ್ಜರಾಗಿದ್ದ ರೈ ಬಹದೂರ್ ಲಾಲಾಚಂದರವರೇ ಮೊದಲಾದ ಅನೇಕರ ದಸ್ಕತು ಸಹಾ ಈ ಪತ್ರದಲ್ಲಿರುವುದು.

~~~~~

ಲಾಹೋರಿನಲ್ಲಿ ಕೂಡುವ ವಸ್ತುಪ್ರದರ್ಶನಕ್ಕೆ ರೂ. ೬,೫೫,೦೦೦ ಬೇಕಾಗಿರುವುದೆಂತ ಅಂದಾಜು ಮಾಡುತ್ತದೆ. ಇದರಲ್ಲಿ ರೂ. ... ಬೇಕಾದ ಕಟ್ಟೋಣಗಳಿಗೆನೇ ಖರ್ಚು ಮಾಡುವರು ಪ್ರದರ್ಶನಕ್ಕಾಗಿ ಈ ವರೆಗೆ ಕೂಡಿಸಿದ ಚಂದಾವೊಬ್ಬಲಗಿನಲ್ಲಿ ಅಂದಾಜು ಮೇರೆಗೆ ಇನ್ನೂ ರೂ. ೮೦,೦೦೦ ಬೇಕಾಗಿರುವುದು. ಇನ್ನೂ ಬೇಕಾದ ದ್ರವ್ಯ ಸಂಗ್ರಹದ ಬಗ್ಯೆ ಪ್ರದರ್ಶನ ಕಮಿಟಿಯವರು ದಿಲ್ಲಿ ಅತ್ತಕಡೆ ಹೋಗಿರುವರು ಪ್ರದರ್ಶನವನ್ನು ನೋಡಲಿಕ್ಕೆ ಬಂದವರ ಪ್ರವೇಶ ಹಾಸಲಿನಿಂದ ರೂಪಾಯಿ ೫೦,೦೦೦ ಜಮೆಯಾಗಬಹುದೆಂದು ಸಹಾ ಅಂದಾಜು ಮಾಡಿರುವರು

~~~~~

ದಕ್ಷಿಣಹಿಂದುಸ್ಥಾನ

—o—

ಮದ್ರಾಸು ಸಂಸ್ಥಾನದೊಳಗಿರುವ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿ ಮಹಮ್ಮದೀಯ ಮುನಿಸಿಪಲ್ ಕೌನ್ಸಿಲರವರು ಎಷ್ಟು ಇರುವರೆಂಬದಾಗಿಯೂ ಮುನಿಸಿಪಲ್ ಕೌನ್ಸಿಲರರ ಆರಿಸೋಣದಲ್ಲಿ ಓಟ ಕೊಡುವ ಮಹಮ್ಮದೀಯರು ಎಷ್ಟು ಇರುವರೆಂಬವನ್ನೂ ತಿಳಿಸಬೇಕಾಗಿ ಮದ್ರಾಸು ಸರಕಾರದವರ ಸಂಸ್ಥಾನದ ಎಲ್ಲಾ ಮುನಿಸಿಪಲ್ ಕೌನ್ಸಿಲುಗಳಿಗೆ ಅಪ್ಪಣೆಕೊಟ್ಟಿರುವರು

~~~~~

ಕಲವು ಸಮಯದ ಮುಂಚೆ ದಕ್ಷಿಣಹಿಂದುಸ್ಥಾನದ ... ಪ್ಲೆಂಟರ್ ಅಸೋಸಿಯೇಶನ್‌ನವರ ತಮ್ಮ ಕಾಪಿ ಮೊದಲಾದವುಗಳ ಅಭಿವೃದ್ಧಿ ... ವ್ಯವಸಾಯದ ಶಾಸ್ತ್ರೀಯ ... ಮಾಹಿತಿ ... ಸರಕಾರದವರು ... ಬೇಕೆಂದು ... ಗವರ್ನಮೆಂಟಿನವರು ... ತಿದ್ದರು ... ಅಧಿಕಾರರ ... ದೊರೆಕವೆ ... ನೇಮಕಕ್ಕೆ ತಗಲುವ ... ರೂಪಾಯಿ ... ಗವರ್ನಮೆಂಟಿನವರು ಪ್ಲೆಂಟರುಗಳ ಈ ... ಅಂಗೀಕರಿಸಿ ... ಇಂಥಾ ... ಅಧಿಕಾರಿಗಳ ... ಇಲ್ಲಿಯ ... ಕೆಲಸ ... ಕೈಲ್ಲವಾದ್ದರಿಂದ ಈ ಅಧಿಕಾರರ ನೇಮಕವು ... ವರುಷ ... ಇರುವುದರಿಂದ ... ಅಧಿಕಾರರ ... ವರುಷ ... ರೂ ... ೦೦೦ ಬೇಕಾಗುವುದೆಂದೂ ಇದರಲ್ಲಿ ಪ್ಲೆಂಟರರು ... ೬೦೦೦ವನ್ನು ಕಳದು ಉಳಿಯುವ ರೂ ... ಯಲ್ಲಿ ತಾವು ೪೫೦೦ ಕೊಡುವೆವೆಂದೂ, ಬಾಕಿ ... ೪೫೦೦ನ್ನು ತಿರುವಾಂಕೋಡು, ಮೈಸೂರು ಕೊಡಗು ಮತ್ತು ಕೊಚ್ಚಿ ಸಂಸ್ಥಾನದ ಸರಕಾರದವರು ... ಸಹಾ ಇಂತಹ ಅಧಿಕಾರರ ನೇಮಕದಿಂದ ಪ್ರಯೋಜನ ಉಂಟಾಗುವುದರಿಂದ ಈ ಸಂಸ್ಥಾನದವರ ತೆರಬೇಕೆಂತಲೂ ಅಭಿಪ್ರಾಯ ಪಟ್ಟಿದ್ದರು ಸೆಕ್ರೆಟರಿ ಒವ್ ಸ್ಟೇಟರವರೂ ಇಂಡಿಯಾ ಗವರ್ನಮೆಂಟಿನವರೂ ಮದ್ರಾಸು ಗವರ್ನಮೆಂಟಿನವರ ಈ ಸಿಫಾರಸುಗಳನ್ನು ಮಂಜೂರು ಮಾಡಿ ರೂ ೫೦೦–೭೦೦ ತಲಬಿನ ಒಬ್ಬ ಅಧಿಕಾರರನ್ನು ಈ ಹುದ್ದೆಗೆ ಮೊಕ್ರೂರು ಮಾಡಿರುವರು ಈ ಅಧಿಕಾರರ ನೇಮಕವು ವ್ಯವಸಾಯ ಇಲಾಖೆಗೆ ಅಗಿದ್ದು ಇವರು ಪ್ಲೆಂಟರರ ಸಭೆಯವರಿಗನುಗುಣವಾಗಿ ತಮ್ಮ ಕೆಲಸಗಳನ್ನು ನಡಿಸಬೇಕಾಗಿರುವುದು ಮೆ| ರುಡೊಲ್ಫ ಬಿ ಎನ್‌ಸ್ಟೆಡ್ ಎಂಬವರು ಈ ಹುದ್ದೆಗೆ ನೇಮಕವಾಗಿರುವರು

~~~~~

ದಕ್ಷಿಣ ಕನ್ನಡ.

~~~~~

Notice: - Swami Yogiswarananda of Bangalore (a Calcutta M. A.) who is expected here in the course of the next week will deliver a series of lectures on Hindu religion and philosophy in the Canara High School Bhuvanendra Hall (kindly lent for the purpose) under the auspices of the Students' Brotherhood

ಸ್ವೀಕಾರ ಉಡುಪಿ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಶಾಲೆಯ ಉಪಯೋಗಾರ್ಥವಾಗಿ ರಚಿಸಲ್ಪಟ್ಟು ರಾ ಪಾವಂಜೆ ಗುರುರಾಯರಿಂದ ಪ್ರಕಟಿಸಲ್ಪಟ್ಟ ಪ್ರಾತರಾಹ್ನಿಕ ಪದ್ಧತಿ ಉಡುಪಿ ಪ್ರಭಾಕರ ಛಾಪಖಾನೆಯವರಿಂದ ಪ್ರಕಟಿಸಲ್ಪಟ್ಟ 'ನಾಗಪಂಚಮಿ' ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು

ತಿದ್ದುಪಡಿ ನಮ್ಮ ಈ ತಿಂಗಳ ೧೩ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟಿಸಿದಂಥಾ ಮಂಜೇಶ್ವರ 'ಬಾತ್ಮಿದಾರರು ಬರದ ವರ್ತಮಾನದಲ್ಲಿ ಸ್ವರ್ಗಸ್ಥ ಸುಬ್ರಾಯ ಪೈಗಳವರ ಸ್ಮರಣಾರ್ಥವಾಗಿ ದೇವಸ್ಥಾನದ ಬಂಡಾರದಿಂದಲೇ ಸಂತರ್ಪಣೆ, ಪಂಚಾಮೃತ ಅಭಿಷೇಕ, ಬಡವರಿಗೆ ಅಕ್ಕಿ ಮೊದಲಾದವುಗಳು ಹಂಚಲ್ಪಟ್ಟವೆಂಬದು ನಿಜವಾಗಿರುವುದಿಲ್ಲವೆಂತ ಮದನಂತೇಶ್ವರ ದೇವಸ್ಥಾನದ ಆಡಳಿತೆದಾರರು ನಮಗೆ ತಿಳಿಸಿರುವರು ಬಾತ್ಮೀದಾರರು ನಿಜವೃತ್ತಾಂತಗಳನ್ನೇ ತಿಳಿದು ಪತ್ರಗಳಿಗೆ ಪ್ರಕಟಣೆ ಒಗ್ಯೆ ಬರದು ಕಳುಹಿಸ ಬೇಕು ವಿನಹಾ ಸುಳ್ಳು ವರ್ತಮಾನಗಳನ್ನು ಮಾನ್ಯರಿಗೆ ಬರೆದು ಕಳುಹಿಸಿ ಅನೇಕ ಅನರ್ಥಗಳಿಗೆ ಎಡಕೊಡುವುದು ಶೋಚನೀಯವಾಗಿರುವುದು ಸುಳ್ಳು ವರ್ತಮಾನಗಳ ಪ್ರಕಟಣೆಗಳಿಗೆ ಪತ್ರಗಳು ಅನಾವಶ್ಯಕ

ಕನರಾ ಹೈ ಸ್ಕೂಲ್, ಕೆನರಾ ಗರ್ಲ್ಸ್ ಸ್ಕೂಲ್, ಮೊದಲಾದ ಸ್ಥಾಪನೆಗಳಿಗೆ ಉದಾರ ಮನಸ್ಸಿನಿಂದ ಪದೇ ಪದೇ ಹೆಚ್ಚಿನ ದ್ರವ್ಯ ಸಹಾಯವನ್ನು ಮಾಡಿದ ಮಂಜೇಶ್ವರ ಸಾವುಕಾರ ವೈಕುಂಟಬಕ್ತರವರು ಕೀರ್ತಿಶೇಷ ಸುಬ್ರಾಯ ಪೈಗಳವರ ಬಹುಮಾನಾರ್ಥವಾಗಿ ಮೇಲೆ ಸಮೂದಿಸಿರುವ ಸಂತರ್ಪಣೆಗಳು ಮೊದಲಾದವುಗಳನ್ನು ನಡಿಸಿರುವರೆಂದಾಗಿ ನಾವು ತಿಳಿದಿರುತ್ತೇವೆ

ಇದೇ ಸಂಚಿಕೆಯ ೭ನೇ ಪುಟದಲ್ಲಿ ಗೌಡಸಾರಸ್ವತ ಬ್ರಾಹ್ಮಣರ ಸುಬ್ರಾವ್ ಮೆಮೋರಿಯಲ್ ಫಂಡ್ ಮಂಗಳೂರು, ಇದರಲ್ಲಿ ರಾ ಸುಜೀರ ನರಸಿಂಹ ನ್ಯಾಕರವರು ೨೦ನ್ನು ೫೦ ಎಂತ ತಿದ್ದಿದರು ಎಂತ ಓದಬೇಕು

—o—

ಮಂಗಳೂರು ಬೆಂಗಳೂರಿನ ಯೋಗೀಶ್ವರಾನಂದ ಸ್ವಾಮಿಯವರು ಬರುವ ತಿಂಗಳ ೨ನೇ ತಾರೀಕಿನಲ್ಲಿ ಇಲ್ಲಿಗೆ ಒಂದು ತಲಪುವರಂತೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಹಿಂದೂ ಧರ್ಮದ ವಿಷಯ ಕೆಲವು ಉಪನ್ಯಾಸಗಳನ್ನು ಇವರು ಕೊಡುವರಾಗಿ ಕೇಳುತ್ತೇವೆ

ಮಂಗಳೂರ ತಾಲೂಕು ಆಫೀಸಿನಲ್ಲಿ ಈ ವರುಷ ಸಂಬಂಧಿ ಅಂದಾಜಿಗೆ ದರಕಾಸ್ತಿನಿಂದ ಕಳದ ವರುಷಕ್ಕಿಂತ ಸಾಧಾರಣ ರೂ ೫,೦೦೦ ಹೆಚ್ಚು ದೊರಕಿರುವುದೆಂತ ತಿಳಿದುಬರುತ್ತದೆ

ರೆವಿನ್ಯು ಇನ್ಸ್‌ಪೆಕ್ಟರ್ ಉಪ್ಪಿನಂಗಡಿ ರಾಮನ್ಯಾಕರವರು ಇನ್ನೂ ೪ ತಿಂಗಳ ರಜೆ ಬಗ್ಯೆ ಅರ್ಜಿಮಾಡಿರುವರಂತೆ

ಇಲ್ಲಿಯ ರೆವಿನ್ಯು ಇನ್ಸ್‌ಪೆಕ್ಟರರಾಗಿದ್ದ ರಾ ಮಗಣೇಶರಾಯರಿಗೆ ಉಡಿಪಿ ಲೆಂಡ್‌ರಿಕಾರ್ಡ್ ಇನ್ಸ್‌ಪೆಕ್ಟರರವರ ಕೆಲಸಕ್ಕೆ ನೇಮಕವಾಗಿರುವುದು ಮಂಗಳೂರ ಡಿವಿಜನ್ ಇನ್ಸ್‌ಪೆಕ್ಟರರಾಗಿ ರಾ. ಉಪ್ಪಿನಂಗಡಿ ರಾಮನ್ಯಾಕರು ನೇಮಕಮಾಡಲ್ಪಟ್ಟಿರುವರು.

ಈ ತಿಂಗಳ ತಾ. ೩೦ರಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಸಭೆ ನೆರೆದಿತ್ತು.

... ಹೆಡ್‌ಕ್ವಾರ್ಟರ್ ಡೆಪ್ಯುಟಿ ... ಈ ತಿಂಗಳ ... ಸೇರಿದ ... ಕಾರ್ಯ ...

ಕಳೆದ ವಾರ ಮುನಿಸಿಪಾಲಿಟಿಯಲ್ಲಿ ಏರಡು ಪ್ಲೇಗು ಮರಣಗಳಾದವು.

ಮ| ರಾ| ರಾ| ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟ್ ವಕೀಲ್ರ ರಂಗಪ್ಪ ಭಂಡಾರಿಗಳ ಗುಮಾಸ್ತ ರಾ| ವಿಟ್ಠಪ್ಪ ಕಮ್ತಿಯವರಿಂದ ಕೆಲವು ಪವನುಗಳ ಚಿಲ್ಲರೆ ಬೇಕೆಂತ ನಗದಾಗಿ ರೂಪಾಯಿಗಳನ್ನು ಪಡಕೊಂಡು, ಪವನುಗಳನ್ನು ತೋರಿಸಿ ಕಾಗದದಲ್ಲಿ ಕಟ್ಟಿಟ್ಟು ರಕಾಯಿಸಿ ತಾಂಬ್ರದ ನಾಣ್ಯಗಳನ್ನು ಬದಲಾಗಿ ಕೊಟ್ಟ ಶ್ರೀನಿವಾಸ ಬಟ್ಟ ಎಂಬವನಿಗೆ ಒಂದು ವರುಷದ ಸಜೆಯೂ 120 ರೂಪಾಯಿ ಜುರುಮಾನೆಯೂ ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿಕಲೆಕ್ಟರರವರಿಂದ ವಿಧಿಸಲ್ಪಟ್ಟಿತು ಜುರುಮಾನೆ ಹಣದಲ್ಲಿ ರೂ 100ನ್ನು ಸದರಿ ವಿಟ್ಠಪ್ಪ ಕಮ್ತಿಯವರಿಗೆ ಪರಿಹಾರ ದ್ರವ್ಯವಾಗಿ ಕೊಡಬೇಕೆಂತ ತೀರ್ಮಾನಿಸಿರುವರು

ಕಳೆದ ಆದಿತ್ಯವಾರ ಮಂಜೇಶ್ವರದಲ್ಲಿ ಸರಸ್ವತಿವಿದ್ಯಾಲಯದ ವರ್ಧಂತಿಯುತ್ಸವವು ಬಹಳ ಸಂಭ್ರಮದಿಂದ ನೆರವೇರಿತು ಮಂಗಳೂರು, ಕಾಸರಗೋಡು ಕುಂಬಳೆ ಮೊದಲಾದ ಪ್ರಾಂತ್ಯಗಳಿಂದ ಹಲವು ಗೃಹಸ್ಥರು ಬಂದಿದ್ದರು ರೈ ಸಾಹೇಬ್ ಎಮ್ ಗೋಪಾಲ ರಾವ್ ಬಿ ಎ ಬಿ ಎಲ್ ಇವರು ಸಭಾಧ್ಯಕ್ಷರಾಗಿದ್ದರು ಶಾಲಾಪರೀಕ್ಷೆಯಲ್ಲಿ ಉತ್ತೀರ್ಣರಾದ ಹುಡುಗ ಹುಡುಗಿಯರಲ್ಲಿ ಒಂದನೇ ಎರಡನೇ ಮೂರನೇ ತರಗತಿಯಲ್ಲಿ ಪಾಸಾದವರಿಗೆ ಇನಾಮುಗಳು ಕೊಡೋಣಾದವು ಈ ಶಾಲೆಯಲ್ಲಿ ಬಾಲ ಬಾಲಿಕೆಯರಿಗೆ ಉಚಿತವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡುತ್ತಿರುವುದು ಸ್ತುತ್ಯವಾಗಿರುವುದು ಶಾಲೆಯ ಕಟ್ಟೋಣದ ಬಗ್ಯೆ ಈ ಸಂದರ್ಭದಲ್ಲಿ ನೆರೆದ ಗೃಹಸ್ಥರು ಅಲ್ಪಸ್ವಲ್ಪ ದ್ರವ್ಯ ಸಹಾಯವನ್ನು ಕೊಡುವರೆ ನಿಶ್ಚಯಿಸಿ ತಮ್ಮ ಚಂದಾಹಣವಿನ ಮೊಬಲಗುಗಳನ್ನು ಪಟ್ಟಿಯಲ್ಲಿ ಸೂಚಿಸಿರುವರು ಉಚಿತವಾಗಿ ಶಿಕ್ಷಣವನ್ನು ಕೊಡುವಂಥಾ ಇಂತಹ ಶಾಲೆಗೆ ತಕ್ಕ ಪ್ರೋತ್ಸಾಹ ದೊರಕಲೆಂತ ಅಪೇಕ್ಷಿಸುವೆವು

ಉತ್ತರಕನ್ನಡಾ ಜಿಲ್ಲೆಯಲ್ಲಿ ನವೀನವಾಗಿ ಸ್ಥಾಪಿಸಲ್ಪಟ್ಟ ನ್ಯೂ ಇಂಗ್ಲಿಷ್ ಸ್ಕೂಲ್ ಎಂಬದರ ಸ್ಥಾಪನೆಯನ್ನು ಮುಂಬಯಿ ವಿದ್ಯಾ ಇಲಾಖೆಯವರು ಮಂಜೂರು ಮಾಡಿರುವರೆಂಬ ವರ್ತಮಾನವನ್ನು ತಿಳಿದು ಸಂತೋಷಪಡುತ್ತೇವೆ ಈ ಶಾಲೆಯವರು ಕೀರ್ತಿಶೇಷ ಆ ಸುಬ್ರಾಯ ಪೈಗಳ ಸ್ಮರಣಾರ್ಥವಾಗಿ ಒಂದು ಪುಸ್ತಕಾಲಯವನ್ನೂ ಇದಕ್ಕೆ ಬೇಕಾದ ಕಟ್ಟೋಣವನ್ನೂ ಕಟ್ಟಿಸುವದಾಲೋಚಿಸುತ್ತಿರುವರೆಂತ ಸಹಾ ಕೇಳಿರುವೆವು

ಕಾಸರಗೋಡು ಇಲ್ಲಿಯ ವಕೀಲ್ ರಾ| ಚಂ| ರಾಮರಾಯರಲ್ಲಿಗೆ ಮಂಗಳೂರಿಂದ ಮ| ರಾ| ಧಾರೇಶ್ವರ ಅನಂತಯ್ಯನವರ ಚಿಕ್ಕತಾಯಿ ರಾದಮ್ಮ ಎಂಬವರು ಕಳೆದ ವಾರ ಬಂದಿದ್ದರು ಇವರು ಇಲ್ಲಿ ಜ್ವರದಕಾಯಿಲೆಯಿಂದಲೂ ಪ್ರಾಯಾಧಿಕ್ಯವಾದ್ದರಿಂದಲೂ ಹೆಚ್ಚು ದಿನ ಆಯಾಸಪಡದೆ ಮೃತಪಟ್ಟರು ಸದರಿಯವರ ಮಂಗಳೂರಿಂದ ಬರುವಾಗ್ಯೆ ಪ್ಲೇಗ್ ರಹದಾರಿಯು ತಂದು ವೈದ್ಯ ಉದ್ಯೋಗಸ್ಥರ ಸಮಕ್ಷಮ ಹಾಜರಾಗತಕ್ಕ ದಿವಸಗಳ ಒಳಗೆಯೇ ಮೃತಪಟ್ಟ ಕಾರಣ ವೈದ್ಯ ಉದ್ಯೋಗಸ್ಥರೂ ಈ ಊರ ಅಧಿಕಾರಿಗಳೂ, ಮೃತಪಟ್ಟ ಸ್ಥಳದಲ್ಲಿ ಹೋಗಿ ಮನೆಯವರಿಗೆ ಪ್ಲೇಗ್ ರಹದಾರಿ ಕೊಟ್ಟು ಕೆಲವು ವಸ್ತ್ರಗಳನ್ನು ಸುಟ್ಟು ಮನೆವಠಾರ ಸುಚಿಪಡಿಸಿ ಅಲ್ಲಿ ಏಳು ದಿವಸಗಳ ವರೇಗೆ ಯಾರೂ ಹೋಗದಂತೆ ಪೋಲೀಸ್ ಪಹರೆಯನ್ನು ಇಡಿಸಿದರು ಸದರಿಮರಣವು ಅನುಮಾನದ ಪ್ಲೇಗ್ ಎಂತ ಅಭಿಪ್ರಾಯಪಟ್ಟಿರುವದಾಗಿ ಕೇಳುತ್ತೇನೆ

ನಮ್ಮ ತಾಲೂಕಿನ ಉತ್ತರಭಾಗದ ಮಂಜೇಶ್ವರದಲ್ಲಿ ಬಂಗ್ರಮಂಜೇಶ್ವರ ಸರಸ್ವತೀ ವಿದ್ಯಾಲಯವೆಂಬ ಮೂಲ ಪಾಠಶಾಲೆಯು ಸ್ಥಾಪಿಸಲ್ಪಟ್ಟು ೩ನೇ ವರುಷದ ವರ್ಧಂತಿ ಉತ್ಸವದ ಆಮಂತ್ರಣ ಪತ್ರಿಕೆಯು ಈ ಕಳೆದ ವಾರ ಈ ಊರ ಮಾನ್ಯ ಗೃಹಸ್ಥರಿಗೆಲ್ಲಾ ಬಂದಿತ್ತು. ಆ ಪ್ರಕಾರ ಈ ಊರ ಗೃಹಸ್ಥರು ಕೆಲವರು ಇದೇ ತಾ. ೩೨ನೇ ಆದಿತ್ಯವಾರ ದಿವಸ ೩ನೇ ವರ್ಧಂತಿ ಉತ್ಸವಕ್ಕೆ ದಯಮಾಡಿದರು. ಸದರಿ ವಿದ್ಯಾಲಯ ಸ್ಥಾಪನಾಕರ್ತರು, ಮು [illegible]

[illegible]

ಉದಾರ ಸಹಾಯವು ಇನ್ನೂ ಹೆಚ್ಚಾಗಿ ಬರಲೆಂದು ಕೋರುತ್ತೇನೆ

ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರ್ ಮ| ರಾ| ಪಿ ಸೀತಾರಾಮ ರಾಯರ ಸವಾರಿಯು ಸರ್ಕೀಟಿನ ಮೇಲೆ ಇದೇ ತಾ ೨೨ನೇಗೆ ಇಲ್ಲಿಗೆ ತಲ್ಪಿರುತ್ತದೆ. ನಾಳೆ ತಾ. ೨೬ನೇಯಿಂದ ಅಬಕಾರಿ ಗುತ್ತೆವಾರು ಶುರುವಾಗುವದು ಈ ತಿಂಗಳ ಅಖೈರ ವರೇಗೆ ಇಲ್ಲಿಯೇ ಮೊಕ್ಕಾಮು ಮಾಡುತ್ತಾರಾಗಿ ಕೇಳುತ್ತೇನೆ

ಪುತ್ತೂರು ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರು ಕಾಸರಗೋಡು ತಾಲೂಕಿನ ಅಬ್ಕಾರಿ ಗುತ್ತೆ ಏಲಂ ಸಮ್ಮಂಧ ಇದೇ ತಾ ೨೦ಲ್ಲು ಕಾಸರಗೋಡಿಗೆ ಹೋಗಿರುವರು

ಈ ಮೊದಲು ಶಿರಾಡಿಯಲ್ಲಿ ಒಬ್ಬ ಗೌಡನನ್ನು ಕೊಂದ ಆನೆಯನ್ನು ಗುಂಡು ಹೊಡದು ಕೊಂದರೆ ೧೦೦೦ ರೂಪಾಯಿ ಇನಾಮು ಕೊಡುವದಾಗಿ ಹುಕುಂ ಇತ್ತು ಸದರಿ ಆನೆಯು ಇತ್ತಲಾಗೆ ಗ್ರಾಮಗಳಲ್ಲಿ ರೈತರಿಗೆ ಉಪದ್ರ ಕೊಡತೊಡಗಿದ ಸಂಗತಿ ಕಡಬ ಸ್ಟೇಶನ್ ಹೆ| ಕೊ ಮಂಜೋಜಿಯವರು ಸಾಹಸಪಟ್ಟು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಧೊರೆಯವರಿಗೆ ತೋರಿಸಲು ಅವರು ಅದನ್ನು ತಾ ೧೦ಲ್ಲು ಮು ಊರು ಬ್ಲೋಕಿನ ಕೊಂಬಾರ ಗ್ರಾಮದಲ್ಲಿ ಗುಂಡು ಹೊಡದು ಕೊಂದರೆಂಬ ವರ್ತಮಾನವಿದೆ

ಬಂಟವಾಳ ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣರ ಕೂಟ ಈ ಕೆಳಗಿನ ಗೃಹಸ್ಥರನ್ನು ಪಂಚಾಯತರನ್ನಾಗಿ ಆರಿಸಿರುವರು

೧ ಮ ರಾ ರಾ ಸಾವ್ಕಾರ ರಾಮಕೃಷ್ಣ ಬಾಳಿಗರು, ೨ ಮ ರಾ ರಾ ಸರ್ವೋತ್ತಮ ಬಾಳಿಗರು ೩ ಮ ರಾ ರಾ ಗಣಪತಿ ಪ್ರಭುಗಳು ೪ ಮ ರಾ ರಾ ನರಶಿಂಹ ಪ್ರಭುಗಳು ಬಿ ಎ ೫ ಮ ರಾ ರಾ ನಾರಾಯಣ ಬಾಳಿಗರು ೬ ಮ ರಾ ರಾ ನಂದಾವರ ಜನಾರ್ದನ ಶ್ಯಾನಭಾಗರು ೭ ಮ ರಾ ರಾ ಭಾಮಿ ಕೇಶವ ಶ್ಯಾನಭಾಗರು, ೮ ಮ ರಾ ರಾ ಹೆಬ್ಬಲಸಿನ ಕಟ್ಟೆ ವಿಠಲ ಪೈಗಳು, ೯ ಮ ರಾ ರಾ. ವಾಸುದೇವ ಭಂಡಾರಿಗಳು, ೧೦ ಮ ರಾ ರಾ ರಾಮಚಂದ್ರ ಪೈಗಳು, ೧೧ ಮ ರಾ ರಾ ವೇದಮೂರ್ತಿ ಅಣ್ಣಪ್ಪ ಭಟ್ರು ಸದರಿ ಪಂಚಾಯತರು ಆಗ್ಯಾಗ್ಯೆ ಇಲ್ಲಿಯ ದೇವಸ್ಥಾನದಲ್ಲಿ ಸಭೆ ಕೂಡಿ ಸ್ವಜಾತಿಯವರೊಳಗೆ ಇರುವ ವಿವಾದವನ್ನೂ ವಾದಾವಿವಾದಗಳನ್ನೂ ತೀರ್ಮಾನಿಸುವುದಲ್ಲದೆ, ಸರ್ವ ಜನರ ಉಪಯೋಗದ ಬಗ್ಯೆ ಒಂದು ಸಂಸ್ಕೃತ ವಿದ್ಯಾಶಾಲೆಯನ್ನೂ, ಒಂದು ಇಂಗ್ಲೀಷು ವಿದ್ಯಾಶಾಲೆಯನ್ನೂ ಒಂದು ದರ್ಮ ಪಂಪನ್ನೂ ಸ್ಥಾಪಿಸಿದ್ದಾರೆ ಈ ಮೂರು ಸಂಸ್ಥೆಗಳು ಸದಾ ಕಾಲವು ಇರುವ ಹಾಗೆ ತಕ್ಕ ಏರ್ಪಾಡು ಮಾಡಬೇಕಾಗಿ ಆಲೋಚಿಸುತ್ತಾರೆ ಮತ್ತು ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಬೇಕಾಗಿ ಮಾಡಿದ ಆಲೋಚನೆಯನ್ನು ಈಗ ಸದ್ಯದಲ್ಲಿ ಬಾಕಿ ಇಟ್ಟಿರುತ್ತಾರೆ ಇವರು ಬಾಕಿ ಇಟ್ಟಿರುವ ಈ ಆಲೋಚನೆಯನ್ನು ಶ್ರೀ ದೇವರು ಬೇಗನೆ ನೆರವೇರಿಸಬೇಕೆಂತ ನನ್ನ ಪ್ರಾರ್ಥನೆ

ಮಂಗಳೂರು ತಾಲೂಕಿಗೆ ಒಳಪಟ್ಟ ಅಳ್ವ, ಕುಳಲೂರು, ಕಿಲೆಂಜಾರ, ಮುತ್ತೂರು ಈ ಗ್ರಾಮಗಳಲ್ಲಿರುವ ಬಾಲಕರಿಗೆ ವಿದ್ಯಾಭ್ಯಾಸ ಕೊಡಿಸಲಿಕ್ಕೆ ಸರಕಾರಿ ಅಥವಾ ಖಾಸಗಿಯಾಗಿ ಸಹಾ ಯಾವದೊಂದು ಪಾಠಶಾಲೆಗಳು ಇಲ್ಲದಿರುವದನ್ನು ನೋಡಿ ಲೋಕೋಪಕಾರಾರ್ಥವಾಗಿ ವಿದ್ಯಾಚಿಂತಕರಾದ ಶ್ರೀಯುತ ಅಳ್ವದ ಗುಮ್ಮಣ್ಣ ಶೆಟ್ಟರೆಂಬ ಮಹನೀಯರು ತನ್ನ ಮೊಕ್ತೇಸರಿಕೆಗೆ ಒಳಪಟ್ಟ ಅಳ್ವ ಗ್ರಾಮದ ಮುರಿಪಟ್ನಣ ಚಂದ್ರನಾಥ ದೇವರ ಸ್ಥಾಪನೆಗೆ ಸಮ್ಮಂಧಪಟ್ಟ ಸ್ಥಳದಲ್ಲಿ ನವೀನ ಚಿತ್ರವಿಚಿತ್ರವಾದ ಮತ್ತು ಬಾಲಕರ ಆರೋಗ್ಯಕ್ಕೆ ಹಿತಕರವಾದ ಒಂದು ಪಾಠಶಾಲೆಯನ್ನು ಸ್ವಂತ ಖರ್ಚಿನಿಂದ ಕಟ್ಟಿಸಿ ಇದೇ ತಿಂಗಳ ತಾ. ೨೦ನೇ ಶುಕ್ರವಾರ ದಿನಾ ಆಳಿಗೆ [illegible]

[illegible]

ಮುಂತಾದ ಅನೇಕ ವಾದ್ಯಂಗಳಿಯಿಂದ ಶಾಲಾ ಮುಹೂರ್ತವನ್ನು ಮಾಡಿಸಿದರು.

ಈ ಮುಹೂರ್ತಕ್ಕೆ ಸ್ವಸ್ತಿ ಶ್ರೀ ಕಾರ್ಕಳ ನೇಮಿಸಾಗರ ವರ್ಣಿಯವರು, ಮೂಡಬಿದ್ರೆ ದಿಗಂಬರ ಜೈನ್ ಪಾಠಶಾಲೆಯ ಸಮಸ್ತ ವಿದ್ಯಾರ್ಥಿಗಳು, ಉಪಾಧ್ಯಾಯರುಗಳು, ಪೇಟೆ ಸಮಸ್ತರು ಮತ್ತು ಆಸ್ಪಾಸದ ಹಳ್ಳಿಗಳಾದ ಆಳ್ವ, ಕ್ಯೊಲ, ಕುರಿಯಾಳ, ಬೆಳ್ವೂರು, ಕುಳಲೂರು, ಕಿಲೆಂಜಾರ, ಮುತ್ತೂರು ಮುಂತಾದ ಗ್ರಾಮಗಳ ಜಮೀನ್ದಾರರಾದ ರಹಿತರು, ಸಾವಕಾರರು ಕೂಡಾ ಸುಮಾರು ೫೦೦ಜನರ ಮಟ್ಟಿಗೆ ಶಾಲಾ ಕಟ್ಟೋಣದಲ್ಲಿ ನೆರದಿದ್ದರು.

ಕೂಡಿದ ಸಭೆಯಲ್ಲಿ ಅಗ್ರಾಸನಾರೂಢರಾಗಿದ್ದ ಶ್ರೀ ನೇಮಿಸಾಗರ ವರ್ಣಿಯವರ ಅನುಜ್ಞೆ ಪ್ರಕಾರ ಮೂಡಬಿದ್ರೆ ದಿಗಂಬರ ಜೈನ್ ಪಾಠಶಾಲೆಯ ಸಂಸ್ಕೃತ ಹೆಡ್ ಮಾಸ್ತರರಾದ ಮ ರಾ ರಾ ಸಮ್ಮದ ನೇಮಿರಾಜಯ್ಯನವರು ದೇವತಾ ವಂದನಾ ಪುರಸ್ಸರವಾಗಿ ಮಧುರ ಭಾಷಣದಿಂದ ವಿದ್ಯೆಯ ಮಹಾತ್ಮೆ, ವಿದ್ಯೆಯ ಪ್ರಯೋಜನ ಮುಂತಾದ ವಿಷಯಗಳನ್ನು ಸಭಿಕರಿಗೆ ಉಪದೇಶ ಮಾಡಿದರು. ರಾ| ಗುಮ್ಮಣ್ಣ ಶೆಟ್ಟರವರ ಔದಾರ್ಯವನ್ನು ಅಧ್ಯಕ್ಷರು ಶ್ಲಾಘಿಸಿ ತಮ್ಮ ಭಾಷಣವನ್ನು ಮುಗಿಸುತ್ತಲೇ ವೈದಿಕರಿಗೆ ದಕ್ಷಿಣೆ, ಕೂಡಿದ ಸಭಿಕರಿಗೆ ಮತ್ತು ಬಡ ಬಗ್ಗರಿಗೆ ಸಹಾ ಗಂಧ, ಪುಷ್ಪ, ಪನ್ನೀರು ಗಂಧದೆಣ್ಣೆ, ಲೆವೆಂಡರ್, ತಾಂಬೂಲ, ಸಕ್ಕರೆ ಇತ್ಯಾದಿ ಉಪಚಾರಗಳಿಂದ ಸಂತೋಷಪಡಿಸಿದರು.

ಈ ಪಾಠಶಾಲೆಗೆ ಹೆಚ್ಚು ಮಂದಿ ವಿದ್ಯಾರ್ಥಿಗಳು ಕೂಡುವ ಸಂಭವ ಇರುವದರಿಂದ ಪ್ರಜೆಗಳ ವಿದ್ಯಾಭಿವೃದ್ಧಿ ಚಿಂತಕರಾದ ನಮ್ಮ ದಯಾಳು ಸರಕಾರದವರು ಇದನ್ನು ಬೋರ್ಡ್ ಶಾಲೆಯನ್ನಾಗಿ ಮಾಡಿ ವಿದ್ಯಾಭಿವೃದ್ಧಿಗೊಳಿಸ ತಕ್ಕ ಶಿಕ್ಷಣ ಕ್ರಮವನ್ನು ಸರಿಯಾಗಿ ಏರ್ಪಡಿಸಿದರೆ ಬಾಲಕರಿಗೆ ಬಹಳ ಅನುಕೂಲವಾದೀತೆಂದು ಪ್ರಾರ್ಥಿಸುತ್ತೇನೆ.

V S R

—o—

ಪಾಣೆಮಂಗಳೂರು ನಮ್ಮ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರವರು ಇದೇ ತಿಂಗಳ ತಾರೀಕು ೧೮ರ ಲಾಗಾಯಿತು ೨೧ರ ವರೇಗೆ ಈ ಮೊಕ್ಕಾಮಿನಲ್ಲಿರುತ್ತಿದ್ದರು ಈ ಪ್ರಾಂತ್ಯದಲ್ಲಿ ಹುಲಿಗಳ ಬಾಧೆಯು ಹೆಚ್ಚಿರುವದೆಂತಲೂ, ಒಂದು ಹುಲಿಯನ್ನು ಬೋನಿನಲ್ಲಿ ಹಿಡಿದು ಕೊಂದಿದ್ದಾರೆಂತಲೂ ಕೇಳಿ ಧೊರೆಗಳವರು ನಾಯಿಗಳನ್ನು ಕಟ್ಟಿಸಿ, ಬೇಟೆಯಾಡಲಿಕ್ಕೆ ಯತ್ನಿಸಿದರು ಈ ಊರಿನಲ್ಲಿಯೂ, ನೆರೆಗ್ರಾಮಗಳಲ್ಲಿಯೂ ಹಗಲಿನಲ್ಲಿಯೇ ದನಕರುಗಳನ್ನು ಆಗ್ಯಾಗ್ಯೆ ಹಿಡಿಯುತ್ತಾ ಇರುವಲ್ಲಿ, ಧೊರೆಗಳವರು ೨ ೩ದಿನ ಪ್ರಯತ್ನಪಟ್ಟಾಗ್ಯೂ ಹುಲಿಗಳು ಕಾಣಲಿಕ್ಕೆ ಸಹಾಸಿಕ್ಕದಿರುವದು ಜಾನುವಾರ ಮಾಲಿಕರ ದುರಾದೃಷ್ಟವೆಂತಲೇ ಹೇಳಬಹುದು

ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ, ಪ್ರಸಿದ್ಧ ದರೋಡೆ ಕಳ್ಳ ಇದ್ದಿನ ಬ್ಯಾರಿಯನ್ನು ದಸ್ತಗಿರಿ ಮಾಡುವಲ್ಲಿ ಸಬ್ ಇನ್ಸ್‌ಪೆಕ್ಟರ್ ಚೆಮ್ನಾಡರಿಗ ನೆರವಾದ ೫ ಮಂದಿ ಗ್ರಾಮಸ್ಥರಿಗ ಪೋಲೀಸ್ ಇಲಾಖೆಯಿಂದ ಇನಾಮು ಬಟವಾಡೆ ಮಾಡುವಾಗ್ಯೆ, ಈ ಊರ ನಿವಾಸಿಕರೆಲ್ಲರೂ, ಡಿ| ಬೋರ್ಡು ಮೆಂಬರರಾದ ಮ ರಾ. ರಾ ಕೊಳ್ಕೆರೆ ರಾಮನ್ನಾಕರು ಕಟ್ಟಿಸಿದ ಛತ್ರದಲ್ಲಿ ಸಭೆಕೂಡಿದ್ದರು. ಪೋಲೀಸ್ ಸುಪರಿಂಟೆಂಡೆಂಟರವರು ನೆರದವರೆಲ್ಲರ ಮುಂದೆ, ಕಳ್ಳನನ್ನು ಹಿಡಿಯಲಿಕ್ಕೆ ಗ್ರಾಮಸ್ಥರು ಮಾಡಿದ ಸಹಾಯವನ್ನು ಕೆಲವು ಮಾತುಗಳಿಂದ ಶ್ಲಾಘಿಸಿ, ಇನ್ನು ಮುಂದೆಯೂ ಅದೇ ರೀತಿಯಲ್ಲಿ ಪ್ರಜೆಗಳು ಅವಶ್ಯವಾದ್ದಾಗೆಲ್ಲಾ ಸರಕಾರದವರಿಗೆ ಸಹಕಾರಿಗಳಾಗಬೇಕೆಂದು ಕೋರಿ ಪ್ರತಿ ಒಬ್ಬಗೆ ಐದೈದು ರೂಪಾಯಿಯ ನೋಟನ್ನು ಕೊಟ್ಟರು.

ಇದೇ ಬಾಬಿನಲ್ಲಿ ನಮ್ಮ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಚೆಮ್ನಾಡರಿಗೂ, ಬೇರೆ ಕೆಲವು ಪೋಲೀಸ್ ಅಬ್ಕಾರಿ ಜವಾನರಿಗೂ ಯಥಾಯೋಗ್ಯ ನಗದು ಸಂಭಾವನೆ ದೊರಕಿರುವದು.

[illegible]

[illegible] ತಲಾಣವನ್ನು ಹೊಂದುತ್ತಲಿರುವದಾದರೂ ಎತ್ತು ಕುದುರೆಗೆ ಸಂಕಟವನ್ನು ಹೇಳಿ ಪೂರೈಸದು.

ರಾಜ ರಸ್ತೆಗಳ ಬದಿಗಳಲ್ಲಿಯೂ ಗದ್ದೆಗಳ ಬದಿಗಳಲ್ಲಿಯೂ ಇರುವ ಅನೇಕ ಭಾವಿ ಕೆರೆ ಕುಂಟೆಗಳಿಗೆ ಆವರಣ ಇಲ್ಲದಿರುವದು ಪ್ರಯಾಣಸ್ಥರಿಗೂ ಮುಖ್ಯವಾಗಿ ಗೋವುಗಳಿಗೂ ಅಪಾಯಕರವಾಗಿರುವದರಿಂದ ಗ್ರಾಮ ಪಟೇಲರುಗಳು ಈ ವಿಷಯ ಚಿತ್ತಕ್ಕೆ ತಂದು ವರ್ತಿಸುವದು ಉಚಿತವು.

ಆಯಾ ಶಾಲೆಗಳಿಗೆ ಇನ್ಸ್‌ಪೆಕ್ಟರುಗಳೂ ಇನ್ನು ಬೋರ್ಡ್‌ಸ್ಕೂಲು ಕಮಿಟಿ ಮೆಂಬರುಗಳೆಂಬವರೂ ಚಿತ್ತೈಸಿ ಶಾಲೆಗಳ ಉನ್ನತಿಯನ್ನಾಗಲೀ ನ್ಯೂನತೆಯನ್ನಾಗಲೀ ಪರಿಶೀಲಿಸಿ ಒಂದು ಪುಸ್ತಕದಲ್ಲಿ ಬರದು ಹೋಗುತ್ತಾರೆಂಬದು ಜನಜನಿತವಾಗಿದೆಯಷ್ಟೆ. ಆದರೆ ಅನೇಕ ಶಾಲೆಗಳ ಹೆಡ್ ಮಾಸ್ತರುಗಳು ಈ ಪುಸ್ತಕದ [illegible] ಇತರ ಮಾಸ್ತರುಗಳಿಗೆ ತೋರಿಸದೆಯೂ ಹೇಳದೆಯೂ ಇರುತ್ತಾರೆಂಬದಾಗಿ ಉಪಾಧ್ಯಾಯರೊಳಗೆ ಒಂದು ಮಾತು ಎದ್ದಿರುವದು. ಹೀಗೆ ಮಾಡಿದರೆ ಮೇಲಾಪಿಸರರು ಉಪಾಧ್ಯಾಯನಲ್ಲಾಗಲೀ [illegible] ಕಂಡುಕೊಂಡ ನ್ಯೂನತೆಗಳನ್ನು [illegible]

ಉಡುಪಿ. ಈ ತಿಂಗಳ [illegible] ರಾತ್ರೆ ಸುಮಾರು ೮ ಘಂಟೆಗೆ ಇಲ್ಲಿಯ ಒಂದು ದೇವಸ್ಥಾನದ [illegible] ರು ಒಂದು ಓಣಿಯ ಮಾರ್ಗವಾಗಿ ದೇವಸ್ಥಾನಕ್ಕೆ ಹೋಗುತ್ತಿರುವಾಗ, ಸಮೀಪದಲ್ಲಿ [illegible] ಕೇಳಿ ಅಲ್ಲಿಯೇ ಹತ್ತರ[illegible] ನೋಡುವಾಗ [illegible] ಜನನವಾದ ಒಂದು ಹೆಣ್ಣು [illegible] ಆವರಿಸಿಕೊಂಡಿತ್ತಂತೆ [illegible] ಗೇಯುತ್ತಿದ್ದ [illegible] ವನ್ನು ಪೋಷಿಸ[illegible] ಮಾಡಿದೆನೆಂತ ಹೇಳಿದ[illegible] ಯಲ್ಲಿ ಕ್ಷೇಮದಲ್ಲಿರುವದು. [illegible] ಮಾಡಿಸುವುದು!!

ಮ. ರಾ [illegible] ಗುರುರಾಯ[illegible] ಪದ್ಧತಿ ಎಂಬ ಒಂದು ಚಿಕ್ಕ ಪುಸ್ತಕವನ್ನು [illegible] ಪ್ರಕಟಿಸಿರುವರು. ಇದರಲ್ಲಿ ಅನೇಕ [illegible] ಆಣೆ ಮಾತ್ರ. [illegible] ಚಾರಗಳನ್ನು ಸರಿಪಡಿಸಿಕೊಳ್ಳುವದಕ್ಕೆ ಅತ್ಯಂತ [illegible] ವಾದ ಈ ಕಾಲದಲ್ಲಿ ಒಂದೊಂದೇ [illegible] ದದ ಚಿಕ್ಕ ಚಿಕ್ಕ [illegible] ಪ್ರಕಟಿ[illegible] ಅನುಸರಿಸಿ ಸನಾತನಧರ್ಮವನ್ನು [illegible] ದರೂ ಪರಿಪಾಲಿಸುವದಕ್ಕೆ ಯತ್ನಿಸುವದು [illegible]

ವಿವಿಧ ವಿಷಯಗಳು

ಇಂಪಿರಿಯಲ್ ಲೈಬ್ರೆರಿ [illegible] ಪುಸ್ತಕಾಲಯದ ಮೇಲ್ವಿಚಾರಕರಾದ ಹರಿನಾಥ ಧೆ ಎಂಬವರ ವಿಷಯವಾಗಿ, ಎಂಪಾಯರ್ ಎಂಬ ಪತ್ರವು ಈ ಸಮಾಚಾರವನ್ನು ಪ್ರಕಟಿಸಿರುವುದು. ಸಂಸ್ಕೃತ ಭಾಷೆಯಲ್ಲಿ ಗವರ್ನಮೆಂಟಿನವರಿಂದ ಬಹುಮಾನಾರ್ಥವಾಗಿ ಏರ್ಪಡಿಸಿದ ಪರೀಕ್ಷೆಯನ್ನು ಒಂದನೇ ತರಗತಿಯಲ್ಲಿ ಪಾಸಾಗಿ ೫೦೦೦ರೂಪಾಯಿಗಳನ್ನು ಉಚಿತವಾಗಿ ಸರಕಾರದವರಿಂದ ಪಡೆದಿರುವರಲ್ಲದೆ, ಇನ್ನೂ ಅನೇಕ ಭಾಷೆಗಳ ಪಂಡಿತರಾಗಿರುವರು. ಗ್ರೀಕ, ಲತೀನು, ಪಾಳಿ ಭಾಷೆಗಳಲ್ಲಿ ಸಹಾ ಬಹುಮಾನ ಹೊಂದಿ ಪ್ರಥಮ ಸ್ಥಾನವು ಇವರಿಗೆ ದೊರಕಿರುವುದು. ಉರಿಯ, ಅರಬಿ, ಜರ್ಮನ್, ಫ್ರೆಂಚ, ಸ್ಪೆನಿಷ್, ರುಶ್ಯಯನ್ ಈ ಭಾಷೆಗಳನ್ನು ಸಹಾ ಚನ್ನಾಗಿ ಕಲಿತಿರುವರು. ಇಂಗ್ಲೀಷು ಭಾಷೆಯಂತೂ ಗೊತ್ತಿರುವುದು. ಹೀಗೆ ಹರಿನಾಥರವರು ತನ್ನ ಸ್ವಂತ ಭಾಷೆ ವಿನಹಾ ಹನ್ನೊಂದು ಭಾಷೆಗಳಲ್ಲಿ ಸಹಾ ಪಾಂಡಿತ್ಯವನ್ನು ಪಡೆದಿರುವರು.

ಕಸಿ ಮಾವಿನ ಹಣ್ಣಿನ ವ್ಯಾಪಾರದಿಂದ ವಿಶೇಷ ಲಾಭವಿರುವುದೆಂತ ತಿಳಿಯುತ್ತೇವೆ. ಕಿಂಗ್ಸ್ಟನ್ ಎಂಬಲ್ಲಿಯ ಮ. ಎ. ದುಬ್ಬು [illegible] ಗಾರ್ಡನರ್ ಎಂಬವರು ಲಂಡನ್ ಪಟ್ಟಣಕ್ಕೆ ಮಾವಿನ ಹಣ್ಣುಗಳನ್ನು ಕಳುಹಿಸಿಕೊಟ್ಟು ಮರ ಒಂದರಿಂದಾದ ಮಾವಿನ ಹಣ್ಣುಗಳ ವಿಕ್ರಯದಿಂದ ೩೦ ಪವನುಗಳಂತೆ ಅವರಿಗೆ ದೊರಕಿರುವುದಂತೆ. ಪ್ರತಿ ಒಂದು ಮಾವಿನ ಹಣ್ಣಿಗೆ ೧೩ಶಿಲಿಂಗ್ ೬ಪೆನ್ಸ್‌ನಿಂದ ೨೧ಶಿಲಿಂಗ್ ೬ಪೆನ್ಸಿನ ವರೇಗೆ ಕ್ರಯ ದೊರಕಿರುವುದು.

ಹತ್ತಿಯ ತೊಟ್ಟುಗಳಿಂದ ಮುದ್ರಣಾಲಯಗಳಿಗೆ ಛಾಪಾಕೆಲಸದ ಒಗ್ಗೆ ಬೇಕಾಗುವ ಕಾಗದವನ್ನು ತಯ್ಯಾರಿಸುವರೆ ೧೦೦,೦೦೦ ಪವನುಗಳ ಬಂಡವಾಳವುಳ್ಳ ಒಂದು ಕಾರಖಾನೆಯು ಅಮೇರಿಕದ ಕೊರ್ಡಿಲೆ ಎಂಬಲ್ಲಿ ಸ್ಥಾಪಿತವಾಗುವುದು. ಈ ಕಾರಖಾನೆಯಲ್ಲಿ ಸರಾಸರಿ ದಿವಸ ಒಂದಕ್ಕೆ ೨೫ ಟನ್ ಕಾಗದವು ತಯಾರಾಗುವುದು. ಹತ್ತಿಯ ತೊಟ್ಟನ್ನು ಟನ್ನಿಗೆ ೪ ಡೊಲ್ಲರ್ [illegible] ಪಾಯಿಗಳ ಪ್ರಕಾರ ಕಾರ್ಖಾನೆಗೆ ಸಾಗಿಸಿಕೊಟ್ಟಲ್ಲಿ [illegible] ಕೊಳ್ಳುವರು. [illegible] ಟನ್ ತೊಟ್ಟಿ[illegible] ರಣ ಒಂದು ಟನ್ ಕಾಗದವು ತಯಾರಾಗುವುದು.

ಬೆಂಕಿ [illegible] ತಯಾರಿಸುವ ಕಾರ[illegible] [illegible] ದೆಂತ ಸರಕಾರ[illegible] ಪಡುತ್ತಾರಂತೆ. [illegible] ತಕ್ಕ [illegible] [illegible] ಮಾಡಿದ್ದಲ್ಲಿ [illegible] ಹೇಳಿ [illegible]

[illegible] ಕಾಲೇಜಿನ [illegible] ವಿದ್ಯಾಶಾಲೆಯವರೂ [illegible] ಈ ಕಾಲೇಜಿನಲ್ಲಿ [illegible] ವಿದ್ಯಾಶಾಲೆಯವರಂತೆ [illegible] [illegible] ಈ ವಿದ್ಯಾಲಯದಲ್ಲಿ ಕೊಡಲ್ಪಡುವುದು. ಈ ಕಾಲೇಜಿನ ವಿದ್ಯಾರ್ಥಿಗಳಲ್ಲಿ [illegible] ತಮ್ಮ ದೇಶ ಬಾಂಧವರ [illegible] ಮಾಡಿಸುತ್ತಿರುವರು [illegible] ವಾಸ್ತವ್ಯಗಳ [illegible] ಹೋಗಿ ಸಂಭಾ[illegible] ತಿಳಿಯ ಹೇಳುವರು. [illegible] ಶಾಲೆಗಳ [illegible] ಪ್ರೋತ್ಸಾಹ ಕೊಡುವರು. [illegible] ಹೋಗಿ [illegible] ಬೋಧಿಸುವರು. [illegible] ಸ್ಥಾಪಿತವಾಗುವಂತೆ ಪ್ರಯತ್ನಿಸುವರು. [illegible] ಬೇಕಾದ ಶಿಕ್ಷಣವನ್ನು ಕೊಡುವರು. [illegible] ಲೂ ಗೊತ್ತಿಲ್ಲದವರಿದ್ದಲ್ಲಿ ಒಳ್ಳೇ ಪುಸ್ತಕಗಳನ್ನು ಓದಿ ಹೇಳುವರು. ಈ [illegible] ಕಾಲೇಜಿನ ವಿದ್ಯಾರ್ಥಿಗಳ ವರ್ತನೆಯನ್ನು ಇಲ್ಲಿ ನಮ್ಮ ಹುಡುಗರೂ ಕೈಕೊಳ್ಳಬಹುದು.

ಎಳೆ ಪ್ರಾಯದ ಹುಡುಗರು ಬೀಡಿ ಸೇದುವ ಅಭ್ಯಾಸವನ್ನು ನಿಲ್ಲಿಸುವರೆ ಕಲವು ಪ್ರಯತ್ನಗಳು ನಡಿಯುತ್ತಿರುವವು. ಹೆತ್ತವರು ತಮ್ಮ ಮಕ್ಕಳನ್ನು ದುರಾಭ್ಯಾಸದಿಂದ ರಕ್ಷಿಸಲು ತಪ್ಪಿದ್ದಲ್ಲಿ ಸರಕಾರದವರು ಇದನ್ನು ಕೈಕೊಳ್ಳಬೇಕೆಂಬ ಅಭಿಪ್ರಾಯದಿಂದ ಸಿರ್‌ಮೂರ್ ಎಂಬಲ್ಲಿಯ ರಾಜರವರು ಬೀಡಿ, ಸಿಗರೆಟ್ ಮುಂತಾದವುಗಳನ್ನು ಸೇದದಂತೆ ಇತ್ತಲಾಗೆ ಕಾನೂನನ್ನು ವಿಧಿಸಿರುವರು. ಈ ಕಾನೂನು ಮೇರೆಗೆ ೧೬ವರುಷ ಪ್ರಾಯಕ್ಕಿಂತ ಕಡಿಮೆ ವಯಸ್ಸಿನವರು ಬೀಡಿ, ಸಿಗರೆಟ್, ಚುರುಟು ಮೊದಲಾದವುಗಳ ಉಪಯೋಗದಿಂದಲೂ ಅಥವಾ ಬೇರೆ ಯಾವ ವಿಧಾನದಿಂದಾಗಲಿ ಹೊಗೆಸೊಪ್ಪನ್ನು ಉಪಯೋಗಿಸಿದಲ್ಲಿ, ಅಥವಾ [illegible] [illegible] [illegible] ಘಗಳನ್ನು ಔಷಧಿ ಬಗ್ಗೆ ಹೊರತು ಬೇರೆ ಯಾವ ಉದ್ದೇಶ್ಯಗಳಿಂದಾದರೂ ಉಪಯೋಗಿಸಿದರೆ, ಸಿರಮೂರಿನಲ್ಲಿ ಜ್ಯಾರಿಯಲ್ಲಿರುವ ಪೆನಲ್ ಕೋಡಿನ ಪ್ರಕಾರ ಹತ್ತು ರೂಪಾಯಿಗಳಿಗೆ ಮೀರದ ಜುರುಮಾನೆ, ಯಾ ೧೫ ದಿವಸಗಳ ಸಾಧಾರಣ ಸಜೆ, ಯಾ ೧೫ಕ್ಕೆ ಮೀರದ ಕೊರಡೆ ಪೆಟ್ಟುಗಳು, ಅಥವಾ ಇವುಗಳಲ್ಲಿ ಯಾವದಾದರೂ ಎರಡು ವಿಧಗಳಿಂದ ಕೂಡಿರುವ ಶಿಕ್ಷೆ, ಈ ವಿಧಾನದಲ್ಲಿ ಶಿಕ್ಷಾಕ್ರಮವನ್ನು ಏರ್ಪಡಿಸಿರುವರು.

———o———

ಭೂಲೋಕದ ಜನ ಸಂಖ್ಯೆ. ಇಡೀ ಭೂಲೋಕದ ಜನ ಸಂಖ್ಯೆಯು ೧,೪೬೭ ಮಿಲಿಯವಾಗಿರುವುದು. ಆದರೆ ಈ ಜನ ಸಂಖ್ಯೆಯು ಏಕರೀತಿಯಲ್ಲಿ ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ಸಮನಾಗಿ ಹಂಚಿ ಇರುವುದಿಲ್ಲ. ಸರಾಸರಿ ಮೇಲೆ ಒಂದು ಚಚೌಕ ಮೈಲಿಗೆ ೩೧ ನಿವಾಸಿಕರಂತಿರುವರು. ಇಡೀ ಭೂತಳವು ವಿಸ್ತೀರ್ಣದಲ್ಲಿ ೪೬ಮಿಲಿಯ ಚಚೌಕ ಮೈಲುಗಳಿಗಿಂತ ಸ್ವಲ್ಪ ಹೆಚ್ಚಾಗಿರುವುದು. ಇದರಲ್ಲಿ [illegible] ವಿಸ್ತೀರ್ಣವುಳ್ಳ ಸ್ಥಳವು ಫಲವತ್ತಾದದ್ದು, ೧[illegible] ಮಿಲಿಯ ಚಚೌಕ ಮೈಲುಗಳು ಹುಲ್ಲುಕಾಡು ಯಾ [illegible] ಬೈಲೂ, ೪ಮಿಲಿಯ ಚಚೌಕ ಮೈಲುಗಳು [illegible] ಭೂಮಿಯೂ ಆಗಿರುವುದು. ರೆವನ್‌ಸ್ಟೀನ್ [illegible] ಚಚೌಕ ಮೈಲಿಗೆ ಹೆಚ್ಚಾದರೆ ೨೦೭ ಜನರು [illegible] ಬಹುದೆಂಬದಾಗಿ ನಿಶ್ಚಯಿಸಿರುವರು. ಹುಲ್ಲು ಕಾ[illegible] ಹೀಗೆ ಚಚೌಕ ಮೈಲಿಗೆ ೧೦ಜನರ ಸರಾಸರಿಯನ್ನು ಹಿಡಿದಿರುವರು. ಈ ಲೆಕ್ಕದಲ್ಲಿ ಇಡೀ ಭೂಲೋಕದಲ್ಲಿ ನಿವಾಸಿಸಬಹುದಾದ ಜನರು ೫,೯೯೪ಮಿಲಿಯ ಎಂತ ನಿಶ್ಚಯಿಸಿರುವರು. ಪ್ರಕೃತ ೧೦ ವರುಷಗಳಲ್ಲಿ ಸರಾಸರಿ ಮೇಲೆ ಯುರೋಪಿನಲ್ಲಿ ನೇಕಡಾ ೮ರಂತೆಯೂ ಏಸ್ಯದೊಳಗೆ ೬ರಂತೆಯೂ, ಆಫ್ರಿಕದಲ್ಲಿ ೧೦ರಂತೆಯೂ, ಆಸ್ಟ್ರೇಲ್ಯ ಮತ್ತು ಓಸೇನಿಯಾದಲ್ಲಿ ೩೦ರಂತೆಯೂ, ಉತ್ತರ ಅಮೇರಿಕದಲ್ಲಿ ೨೦ರಂತೆಯೂ ದಕ್ಷಿಣ ಅಮೇರಿಕದಲ್ಲಿ ೧೫ರಂತೆಯೂ ಜನ ಸಂಖ್ಯೆಯು ಏರುತ್ತಿರುವುದು. ಇಡೀ ಭೂಲೋಕದಲ್ಲಿ ಸರಾಸರಿ ಮೇಲೆ ನೇಕಡಾ ೮ರಂತೆ ಪ್ರತಿ ಹತ್ತು ವರುಷಗಳಲ್ಲಿಯೂ ನಿವಾಸಿಕರು ಹೆಚ್ಚುತ್ತಿರುವರು. ಈ ಲೆಕ್ಕದಲ್ಲಿ ೨೦೭೨ನೇ ಇಸವಿಯಲ್ಲಿ ಭೂಲೋಕವೆಲ್ಲವೂ ಅದರಲ್ಲಿ ನಿವಾಸಿಸಬಹುದಾದ ೫,೯೯೪ಮಿಲಿಯ ಜನಸಂಖ್ಯೆಯಿಂದ ತುಂಬುವುದು. ಅಂದರೆ ೧೮೩ವರುಷಗಳಲ್ಲಿ ಭೂಲೋಕ ತುಂಬಾ ಜನರಾಗುವರೆಂದು ಎಣಿಸಲ್ಪಟ್ಟಿರುವುದು.

PILLS ★ OINTMENTS ★ POWDERS

ಗಜಕರ್ಣದ ಮುಲಾಮು.

ಇದನ್ನು ಹಚ್ಚುವದರಿಂದ ಎಲ್ಲಾ ತರದ ಬಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬಹಳವಾಗಿ ... ವು ಉಂಟಾಗುವದಿಲ್ಲ ... ಸಹಿತ ... ಗಜಕರ್ಣವು ... ಡಬ್ಬಿಗಿರ ಕಿಮ್ಮತು 6 ಆಣೆ 12 ಡಬ್ಬಿಗಳಿಗೆ ರೂ 4

ವಜ್ರಗುಟಿಕೆ

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ... ಗುವದು ನಿಲ್ಲಿಸುತ್ತದೆ ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ ರಕ್ತ ಶುದ್ಧ ... ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ... ಎಂಬ ಧಾತುಪುಷ್ಟಿ ಔಷಧಗಳಿವೆ 20 ಗುಟಿಕೆಗಳ ಡಬ್ಬಿಗಿರ ಕಿಮ್ಮತು ರೂ 1

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿಗಿರ ಕಿಮ್ಮತು 2 ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದೆಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗೆದು ಕಾಂತಿಯುಳ್ಳ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿಗಿರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0

ಚೇಳು ಕಡತದ ಮೇಲಿನ ಔಷಧ

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ... ಹಾಕಿದರೆ ನೋವು ಬಿಮ್ಮಗಲೇ ಕಮ್ಮಿಯಾಗುತ್ತದೆ. ಕಣಜ ... ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ... ಉಪಯೋಗಿಸಬಹುದು. ಬಾಟ್ಲಿಗಿರ ಕಿಮ್ಮತು 8 ಆಣೆ.

... ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪು ಮಾಡಿ ಮನ ಶುದ್ಧ ಮಾಡುವದು. ಬಾಟ್ಲಿಗಿರ ಕಿಮ್ಮತು ... ಮೂರು ಬಾಟ್ಲಿಗಳಿಗೆ ರೂ. ...—4—0.

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0-10—0.
ಬಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪನಿಯವರು ... ನಮೂನೆಯ ಔಷಧಗಳನ್ನು ತಯಾರಿಸುವದೆಂತೆಂದ್ದ ಕಟಲೋಗಿಗೆ ಬರೆದಲ್ಲಿ ... ಕಳುಹಿಸಲ್ಪಡುವದು.

... ಮುಂಬಯಿ ... ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ" ಮುಂಬಾಯಿ.

[illegible] ಸಂಗ್ರಹ (ಉತ್ತಮವಾದ ಪುಸ್ತಕ ಛಕ್ತಿ ಮೂಲಿಕ್ಷಾ [illegible] ರಾಜ್ಯದ ಹೀರರತ್ನ ಈ ಗ್ರಂಥಕ್ಕೆ ನಂಜರಾಜೇ ಅರಸಿನವರು [illegible] ಸಂಸ್ಥಾನ ಸಹಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ).	೩-೦-೦.
ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ.	೦-೭-೦
ಉತ್ತರ ರಾಮಚರಿತ್ರ ಕಥೆ.	೦-೫-೦
ಟೀಕಾ ರಾಘವೇಂದ್ರ ಸ್ತೋತ್ರ.	೦-೨-೦
ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ.	೦-೨-೦.
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦-೨-೦
ಚಾಣಿಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦-೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦-೨-೦
ಸ್ವರಸಹಿತವಾದ ನಮಕ ಚ ಮಕ	೦-೬-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦-೨-೦
ಕೃಷ್ಣ ಕರ್ಣಾಮೃತ ಮೂಲ	೦-೨-೦
ದೇವರ ಸೇವೆ ಹೊಸ ಪುಸ್ತಕ	೦-೪-೦
ಮುಕುಂದ ಮಾಲಾ (ಟೀಕಾ)	೦-೪-೦
ಶಿವ ನಾಮಾ	೦-೦-೬
ಹನುಮನ್ನಾಮಾ	೦-೦-೬
ಹರಿ ನಾಮಾ	೦-೦-೬
ಯಾಜುಷ ಪ್ರಯೋಗ	೦-೬-೦
ಬೃಹತ್ಕಥಾ ಮಂಜರಿ	೦-೮-೦
ಕೃಷ್ಣ ಬೋಧಾಮೃತ	೦-೬-೦

೦-೪-೦ ಕಮ್ಮಿ ವಿ ಪಿ ರವಾನಿ ಇಲ್ಲ

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ,

ವಿದ್ಯಾನಂದ ಆಫೀಸ್ ಮೈಸೂರು

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು, ಹಗಲ್ ಬತ್ತಿ ವಗೈರೆ ರಂಗುಗಳ ವಸ್ತ್ರಾ 1ಕ್ಕೆ ರೂ. 0—12—0.

ಸೈಜು ಇಂಚು 22×22 ವಸ್ತ್ರಾ 1ಕ್ಕೆ ... 1—1—0.

ಸೈಜು ಇಂಚು 15×15 ಬೀಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರಾ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು.

ಸೈಜು ಉದ್ದ 5 ಮೊಳ, ಅಗಲ 2½ ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರಾ 1ಕ್ಕೆ ರೂ 12, 13, 14, 15, 16, 17. ಡಿಟೋ ಸಪ್ಪೆ ರೇಷ್ಮೆ ಚಾಬತು 1ಕ್ಕೆ ರೂ 6 7, 8, 9, 10

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೂವಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5-6 ಮೊಳ, ಅ 2-3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1-4-0, 1 8 0, 1 10 0 1 12-0 2-0-0, 2-8-0

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ, ಕಾಡಿಗಣ್ಣು, ಹಂಸ ಪಪ್ಪಳ ಶೃಂಗಾರ ಪಪ್ಪಳ, ಜಗನ್ನಾಥ ಟೀಲಾಕೆ [illegible] ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ 1 6-0 1-12 0

ಡಿಟೋ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ 1-0-0, 1 2 0, 1-3-0. ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2 4 0, 2 8 0, 2-10-0

ಡಿಟೋ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ 1-4-0, 1-6-0, 1 8-0

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2 10 0 2-12-0, 3-0-0

ಡಿಟೋ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಸೀರೆ ಕಣ 1ಕ್ಕೆ ರೂ 3 6 0, 3 8 0, 3-12 0

ಡಿಟೋ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳಿ ಸೀರೆ ಕಣಾ 1ಕ್ಕೆ ರೂ 4 12 0 5-0 0

ಹೆಚ್ ಸಂಕಪ್ಪಾ ಬಸಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಜರವರು — ಇದನ್ನು ಉಪಯೋಗಿಸಿ ಕೇಶವರ್ಧನ ತೈಲಗಳಲ್ಲಾ [illegible] ಅತ್ಯುತ್ತಮವಾಗಿದೆ

ಮೈಮೆನ್‌ಸಿಂಗ್ ಮಹಾರಾಣಿಯವರ — ನಾವು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತೇವೆ

ಹದ್ವಾ ಮಹಾರಾಣಿಯವರು—ಇದನ್ನು ನಮ್ಮ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—[illegible] ಕ ವೈದ್ಯರುಗಳ್ಳ ತೈ [illegible] ವರ್ಣಿಸ [illegible] ಒಳ್ಳೆಯದು

ಶ್ರೀ ಸುರೇಂದ್ರನಾಥ ಬಾನರ್ಜಿಯವರು — ನಾನು ಉಪಯೋಗಿಸಿದ್ದೇನೆ ನವ ರೂ [illegible] ಉಪಯೋಗಿಸ ಕೂಡ

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವವರಕ್ಕೂ ತಲೆಬಾಚಿಕೊಳ್ಳುವವರಕ್ಕೂ ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳೆಲ್ಲಕ್ಕಿಂತ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು

ಕವಿರಾಜ ಆರ್. ಸಿ. ಸೆನ್, ಎಲ್ ಎಮ್ ಎಸ್,
216 ಕಾರನ್ ವಾಲಿಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎನ್ ಎ. ಸ್ಟಾರುವ್ಯಾಟ್ ಅಂಡ್ ಕೋ,
ಚಿಕ್ಕಪೇಟೆ, ಬೆಂಗಳೂರು.

ವಿ ಪಿ. ಆರ್ಡರುಗಳಿಗೆ ಸುಲಭ ಕ್ರಯ.

[illegible] 1ಕ್ಕೆ ೦ ೮ ೦, ೧ ೦ ೦, ೨ ೦-೦, ೩-೦-೦, ೪-೦-೦, ೫ ೦ [illegible] 1ಕ್ಕೆ ರೂ ೨, ೪, ೮, ೬, ೧೨, ೧೬. - [illegible] ತೊಲ 1ಕ್ಕೆ ೧-೦-೦, ೧-೮-೦

ಬೆಳ್ಳಿ ಗಣೇಶಗಳು 1ಕ್ಕೆ ೦ ೮-೦, ೩-೦-೦, ೩-೮-೦, ೪-೦-೦, ೫ ೦-೦

ಶುದ್ಧ ರೇಷ್ಮೆ ಅನಂತನ ದಾರಗಳು ಜೊತೆ 1ಕ್ಕೆ ೨, ೪, ೬ ೮, ೧೦, [illegible]

ಉಲನ ಚವುಕಗಳು ಕೆಂಪು ಹಸುರು, ನೀಲಿ, ಗುಲಾಬಿ, ಎಣ್ಣೆ ರಂಗು [illegible] 1ಕ್ಕೆ ರೂ ೧೬ ೦ ೨-೦೦ ೩ ೦ ೦

ಉಲನ್ ಶಹಲುಗಳು 1ಕ್ಕೆ ೩ ೮ ೦, ೭ ೧೨ ೦, ೪ ೦-೦

ಕಾಶ್ಮೀರ ಶಹಲುಗಳು ಎಲ್ಲಾ ರಂಗುಗಳಲ್ಲಿಯೂ, 1ಕ್ಕೆ ರೂ ೯ ೦-೦, ೧೦ ೦ ೦ ೧೨ ೦ ೦ ೧೫ ೦-೦ ೧೭ ೦ ೦, ೧೮ ೦ ೦, ೨೦ ೦-೦

ಹಾಸನದ ಟೋಪಿ ಹಣಿಯುವ ಉಲನ್ ದಾರಗಳು ಕೆಂಪು, ಎಣ್ಣೆ ಗೆಂಪು, ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦-೭-೦, ೦-೧೧ ೦, ೦ ೧೪ ೦ ೦ ೧೫-೦ ಡಿಟೋ ಸೂಜಿ 1ಕ್ಕೆ ೦ ೧ ೬, ೦ ೨-೦

ಉಲನ್‌ನಿಂದ ಹಣಿದ ಟೋಪಿಗಳು ಡಜನ್ 1ಕ್ಕೆ ೪ ೮-೦, ೫-೦ ೦, ೬ ೦ ೦, ೭-೮-೦, ೮ ೦ ೦, ೯ ೦ ೦, ೧೦ ೦ ೦, ೧೨-೦ ೦.

ಹೆಚ್ ಎನ್. ರಾವ್ ಬ್ರದರ್ಸ್,
262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ ಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಸೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿ ಪಲ್ಯಗಳೂ (ತರಕಾರಿ) ತ್ವರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್,
[illegible] ಅಂಡ್ ಸೀಡ್ಸ್‌ಮನ,
[illegible] ರಸ್ತೆ, ಬೆಂಗಳೂರು ಸಿಟಿ.

ವಿಜ್ಞಾಪನೆ.

ಸ್ವರ್ಗಸ್ಥರಾದ ನಮ್ಮ ದೇಶ ಬಂಧುಗಳಾದ ಸತ್ಪುರುಷ ಮಹಾರಾಜೇಶ್ರೀ ವಕೀಲ ಅಮ್ಮೆಂಬಳ ಸುಬ್ರಾಯ ಪೈಗಳ ಜೀವ ಚರಿತ್ರೆಯನ್ನು ಬರಿಯಬೇಕಾಗಿ ಆಲೋಚಿಸಿರುತ್ತದೆ. ಆದದರಿಂದ ಅವರ ಸ್ನೇಹಿತರಲ್ಲಿಯೂ ಪರಿಚರ್ಯಸ್ಥರಲ್ಲಿಯೂ ಯಾರಿಗಾದರೂ ಅವರ ಚರಿತ್ರೆಯಲ್ಲಿ ಬರಿಯಲಿಕ್ಕೆ ಯೋಗ್ಯವಾದ ಯಾವದೊಂದು ಸಂಗತಿ ತಿಳಿದಿದ್ದರೆ ಅದನ್ನು ದಯಮಾಡಿ ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ಕಳುಹಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಮಂಗಳೂರು ವೆಂಕಟ ರಾವ್
ಹುಜೂರ ಶಿರಸ್ತೆದಾರ
ಮಂಗಳೂರ, ದ. ಕ.

——o——

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 17ನೇ ಸಪ್ಟಂಬರ 1909 ನೇ [illegible]

ಪ್ರಾಥಮಿಕ ವಿದ್ಯಾಭ್ಯಾಸವೂ ದೇಶೋದ್ಧಾರಣೆಯೂ.

ದೇಶಾಭಿವೃದ್ಧಿಯನ್ನು ಸಾಧಿಸಬೇಕೆಂಬ ಉತ್ತಮ ಭಾವವು ಪ್ರಜಾಮುಖಂಡರಾದ ಹಲವರಲ್ಲಿ ಮೂಡಿರುವುದು. ದೇಶದ ಹಲವು ಕಡೆಗಳಲ್ಲಿ ಈ ಬಗ್ಗೆ ಬಹಳ ಪ್ರಯತ್ನಗಳು ನಡಿಯುತ್ತಿರುವವು. ಕೈಗಾರಿಕೆ ಮತ್ತು ವ್ಯಾಪಾರಗಳನ್ನು ಉನ್ನತಿಕ್ಕೆ ತರುವುದೂ, ವಿದ್ಯಾಪ್ರಚಾರವನ್ನು ಬಲಪಡಿಸುವುದೂ, ನಮ್ಮ ಜನರ ದುಸ್ಥಿತಿಗಳನ್ನು ಹೋಗಲಾಡಿಸುವುದೂ, ಮೊದಲಾದ ಪ್ರಯತ್ನಗಳು ನಡಿಯುತ್ತಿರುವವು. ಸ್ವಸಾಧನೆಯೂ, ಸ್ವಾವಲಂಬನೆಯೂ ಎಲ್ಲಾ ಪ್ರಯತ್ನಗಳಿಗೆ ಪಾಯವಾಗಿರಬೇಕೆಂಬ ತತ್ವ ವಿಚಾರವು ಸರ್ವಸಮ್ಮತವಾಗಿ ಅಂಗೀಕರಿಸಲ್ಪಟ್ಟರೂ ಕಾರ್ಯಸಾಧನೆಯಲ್ಲಿ ಈ ಭಾವವು ಇನ್ನಷ್ಟು ಹೆಚ್ಚಾಗಿ ದೃಢಮೂಲವಾಗಬೇಕಾಗಿದೆ. ದೇಶಾಭಿವೃದ್ಧಿಯ ಸಂಸ್ಕಾರ ವಿಧಿಗಳನ್ನು ಸರಕಾರದ ಪುರೋಹಿತ್ಯವಿಲ್ಲದೆ ನಡಸಬಹುದೆಂಬದು ಇತ್ತೀಚಿಗೆ ಪ್ರಜೆಗಳು ತಿಳಿದಿರುವರು. ಮೂವತ್ತು ನಾಲ್ವತ್ತು ವರುಷಗಳಿಂದ ರಾಜ್ಯಪರಿಪಾಲನೆಯಲ್ಲಿ ನಮ್ಮನ್ನು ಸಮಭಾಗಿಗಳನ್ನಾಗಿ ಮಾಡಬೇಕೆಂದು ನಾವು ಕೇಳುತ್ತಿರುವೆವಾದರೂ, ಸರಕಾರದವರು ಕೈಹಾಕದಂಥಾ ಅದವಾ ಕೈಹಾಕಲು ಕೂಡದಂಥಾ ಸಮಾಜ ಅಭಿವೃದ್ಧಿಯ ವಿಷಯಗಳನ್ನು ನಾವೇ ನಿರ್ವಹಿಸಬೇಕೆಂಬದು ನಮಗೆ ಇತ್ತಲಾಗಿನವರೆಗೆ ತಿಳಿದಿರಲಿಲ್ಲ. ದೇಶಾಭಿವೃದ್ಧಿಯನ್ನು ನಾವೇ ಕೈಕೊಳ್ಳಬೇಕೆಂಬ ಭಾವವು ಇತ್ತಲಾಗೆ ಹಲವರಲ್ಲಿ ತಲೆದೋರಿರುವುದರಿಂದ, ಇಷ್ಟರವರೆಗೆ ಪ್ರಜಾಮುಖಂಡರ ಲಕ್ಷ್ಯಕ್ಕೆ ತಕ್ಕ ರೀತಿಯಲ್ಲಿ ಬಾರದಿರುವ ಪ್ರಾಥಮಿಕ-ಶಿಕ್ಷಣವನ್ನು ಪ್ರಜೆಗಳು ಯಾವ ರೀತಿಯಲ್ಲಿ ಕೈಕೊಳ್ಳಬೇಕಾಗಿರುವುದೆಂಬದನ್ನು ಸೂಚಿಸುವುದು ಯುಕ್ತಿಯುಕ್ತನಾಗಿರುವುದು.

ಎಲ್ಲಾ ವಿಧದ ವೃದ್ಧಿಗೂ ವಿದ್ಯೆಯೇ ಮೂಲವೆಂತ ಈ ಸಂದರ್ಭದಲ್ಲಿ ಹೇಳುವುದು ಅನಾವಶ್ಯಕ. ಜಪಾನ್, ಜರ್ಮನಿ ಮೊದಲಾದ ದೇಶಗಳ ಪ್ರಕೃತದ ಅಭಿವೃದ್ಧಿಸ್ಥಿತಿಯೇ ಇದಕ್ಕೆ ದೃಷ್ಟಾಂತವಾಗಿರುವುದು. ಜನರಲ್ಲಿ ಇತ್ತಲಾಗೆ ವ್ಯಾಪಿಸಿಕೊಂಡಿರುವ ಸ್ವದೇಶಿಭಾವದ ದೆಶೆಯಿಂದ ಹೆಚ್ಚಿನವರು ಸ್ವದೇಶಿ ಕಾರ್ಖಾನೆಗಳನ್ನು ಮತ್ತು ವ್ಯಾಪಾರ ಅಭಿವೃದ್ಧಿಯನ್ನು ಮಾತ್ರ ಸಾಧಿಸುತ್ತಿರುವರು. ಎಲ್ಲಾ ತರದ ಪ್ರಜಾವರ್ಗಗಳಲ್ಲಿಯೂ ತಕ್ಕದಾದ ವಿದ್ಯಾಪ್ರಸರಣೆಯು ಇಲ್ಲದೆ, ಕೈಗಾರಿಕೆಗಳಲ್ಲಿ ನಮ್ಮನ್ನು ಹಿಂದುಳಿಸಿದ ಅನೇಕ ದೇಶಗಳ ಮೇಲಾಟದಿಂದ ನಮ್ಮಲ್ಲಿಯ ಕೈಗಾರಿಕೆಗಳೂ, ವ್ಯಾಪಾರವೂ ಅಭಿವೃದ್ಧಿಸದು. ಕೈಗಾರಿಕೆ ಭಂಡಸಾಲೆಗಳಲ್ಲಿ ತಯ್ಯಾರಾದ ವಸ್ತುಗಳಿಗೆ ಸರ್ವಸಾಧಾರಣರೆಲ್ಲರಲ್ಲಿಯೂ ಗಿರಾಕಿಯನ್ನುಂಟುಮಾಡಬೇಕಾದರೆ, ವಿದ್ಯಾಲಾಭದಿಂದ ಅವರ ದೀನಸ್ಥಿತಿಯನ್ನು ದೂರಮಾಡಿ ಅವರನ್ನು ಸಂಪನ್ನರಾಗಿ ಮಾಡಬೇಕು. ಕೈಗಾರಿಕೆಗಳಲ್ಲಿ ಪ್ರಥಮಸ್ಥಾನವನ್ನೈದಿರುವ ಜರ್ಮನದೇಶವು ವಿದ್ಯಾಭಿವೃದ್ಧಿಯಲ್ಲಿ ಸಹಾ ಇದೇ ಸ್ಥಾನವನ್ನು ಹೊಂದಿರುವುದು. ಬೆಲ್ಜಿಯಂ ಮತ್ತು ಹೊಲೆಂಡ್ ದೇಶಗಳು ತಮ್ಮ ವಿದ್ಯಾಭಿವೃದ್ಧಿಯ ಏರ್ಪಾಟುಗಳಿಂದ ಕೈಗಾರಿಕೆಗಳಲ್ಲಿ ಖ್ಯಾತಿಗೊಂಡಿರುವವು. ವಿದ್ಯಾಭಿವೃದ್ಧಿಯನ್ನೇ ಕೈಗಾರಿಕೆಗಳ ಅಭಿವೃದ್ಧಿಯ ಅಸ್ತಿವಾರವಾಗಿ ನಾವು ಮಾಡಿಕೊಳ್ಳಬೇಕಾಗಿರುವದು.

ಭಾರತೀಯ ಪ್ರಜಾಮುಖಂಡರು ಅನೇಕ ವರುಷಗಳಿಂದ ವಿದ್ಯಾಭಿವೃದ್ಧಿಗೆ ಸಾಹಸಪಡುತ್ತಿರುವರೆಂಬದು ನಿರ್ವಿವಾದ. ದೇಶದ ಅನೇಕ ಕಡೆಗಳಲ್ಲಿ ಸ್ಥಾಪಿಸಲ್ಪಟ್ಟ ಅನೇಕ ಖಾಸಗಿ ಹ್ಯಾಸ್ಕೂಲುಗಳೂ, ಕೊಲೇಜುಗಳೂ ಮೊದಲಾದ ವಿದ್ಯಾಸಂಸ್ಥೆಗಳೇ ಇದನ್ನು ರುಜುಪಡಿಸುವವು. ಅಲಿಘರದಲ್ಲಿ ಮಹಮ್ಮದೀಯರ ಬಗ್ಗೆ ಸ್ಥಾಪಿಸಲ್ಪಟ್ಟ ಕೊಲೇಜು, ಕಾಶಿ, ಲಾಹೋರ್ ಮೊದಲಾದ ಕಡೆಗಳಲ್ಲಿ ಹಿಂದೂಗಳ ಬಗ್ಗೆ ಇರುವ ಅನೇಕ ಪ್ರೌಢ ವಿದ್ಯಾಸಂಸ್ಥೆಗಳು, ಬಂಗಾಳ ಮೊದಲಾದ ಪ್ರಾಂತ್ಯಗಳಲ್ಲಿ ವಿದ್ಯಾರ್ಥಿಗಳನ್ನು ಪರದೇಶಗಳಿಗೆ ಕಳುಹಿಸಿಕೊಟ್ಟು, ಕೈಗಾರಿಕೆಗಳನ್ನು ಕಲಿತು ಬರುವರೆ ಏರ್ಪಡಿಸಲ್ಪಟ್ಟ ಫಂಡುಗಳು ಮೊದಲಾದ ಇತರ ಅನೇಕ ಸಂಸ್ಥೆಗಳು ರಚಿಸಲ್ಪಟ್ಟು, ವಿದ್ಯಾಭಿವೃದ್ಧಿ ಬಗ್ಗೆ ವಿಶೇಷ ಪ್ರಯತ್ನಗಳು ನಡಿಯುತ್ತಿರುವುದಾದರೂ, ಯುರೋಪದ ಮತ್ತು ಅಮೇರಿಕದ ದೇಶಗಳ ವಿದ್ಯಾಭಿವೃದ್ಧಿಯ ಸಾಧನೆಗಳಿಗೆ ಇವನ್ನು ಸರಿಹೋಲಿಸಿದ್ದಲ್ಲಿ ನಮ್ಮ ಈ ಪ್ರಯತ್ನಗಳೆಲ್ಲವೂ ಬಹಳ ಅಲ್ಪವೇ ಎಂತ ತೋರಿಬರುವುದು. ನಮ್ಮ ದೇಶದಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೋಸ್ಕರ ಅಲ್ಲಲ್ಲಿ ಪ್ರಜೆಗಳ ಪ್ರಯತ್ನ ನಡದಿರುವುದು.

ಆದರೆ ಪ್ರಾಥಮಿಕ ಶಿಕ್ಷಣದಲ್ಲಿ ನಮ್ಮ ಸಾಹಸವು ಬಹಳಮಟ್ಟಿಗೆ ಶೂನ್ಯವಾಗಿರುವುದು. ಭರತಖಂಡದಲ್ಲಿ ಅನೇಕ ಮತಭೇದಗಳೂ, ಜಾತಿಭೇದಗಳು ಇದ್ದರೂ, ಅವರವರ ಧರ್ಮಾನುಸಾರವಾಗಿ ಮತಬೋಧನೆಯನ್ನು ಕೊಡುವರೆ ಏರ್ಪಡಿಸಲ್ಪಟ್ಟ ಶಾಲೆಗಳು ಬಹಳ. ಕೆಲವು ಕಡೆಗಳಲ್ಲಿ ಕೊರಾನ್ ಶಾಲೆಗಳು, ಸಂಸ್ಕೃತ ಪಾಠಶಾಲೆಗಳು ಇದ್ದರೂ ಅವುಗಳಲ್ಲಿ ವಿದ್ಯಾಭ್ಯಾಸವನ್ನು ಹೊಂದುತ್ತಿರುವವರ ಸಂಖ್ಯೆಯು ಅತ್ಯಲ್ಪವಾಗಿರುವುದು. ಧಾರ್ಮಿಕ ಸ್ವಭಾವದ ವ್ಯುತ್ಪತ್ತಿಯ ಮೂಲಭೂಮಿಯಾದ ಈ ದೇಶದಲ್ಲಿ ಇಂತಹ ಶಿಕ್ಷಣ ಸಂಸ್ಥೆಗಳು ಇಲ್ಲದಿರುವುದು ಆಶ್ಚರ್ಯವೇ. ಧರ್ಮಬೋಧೆಯು ವ್ಯಕ್ತಿಯಲ್ಲಿ [illegible] ಸದ್ವರ್ತನೆಯಲ್ಲಿ [illegible] ಇಂತಹ ಬೋಧೆಯು ದೊರಕುವಂತೆ ಏರ್ಪಾಡು [illegible] ಮಕ್ಕಳಿಗೆ ಮತಶಿಕ್ಷಣವು ದೊರೆಯುವಂತೆ ಭರತಖಂಡದ ಯಾವ ಮತಸ್ಥರಾದರೂ ಯುಕ್ತವಾದ ಪ್ರಾಥಮಿಕ ವಿದ್ಯಾಶಿಕ್ಷಣವನ್ನು ಕೈಕೊಳ್ಳದೆ. ದೇಶದಲ್ಲೆಲ್ಲಾ ಸರಕಾರದವರಿಂದಲೇ [illegible] ಮತಶಿಕ್ಷಣವಿಲ್ಲದ ಪ್ರಾಥಮಿಕ ವಿದ್ಯಾಶಾಲೆಗಳಿರುವವು. ಸರಕಾರದವರಿಂದ ಅಂಗೀಕರಿಸಲ್ಪಟ್ಟ ಖಾಸಗಿ ಶಾಲೆಗಳಲ್ಲಿ ಇತರ ಪಾಠದೊಂದಿಗೆ ಮತಶಿಕ್ಷಣವನ್ನು ಕೊಡಬಹುದಾದರೂ ಯಾವ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಾದರೂ ಈ ಮತಬೋಧೆಯ ಏರ್ಪಾಡು ಅಪರೂಪವಾಗಿರುವುದು. ಸರಕಾರದವರಿಂದ ಮೊದಲೇ ನಿರ್ಣಯಿಸಲ್ಪಟ್ಟ ಪಾಠಪುಸ್ತಕಗಳನ್ನು ಹೊರತು ಬೇರೆ ಯಾವ ವಿಷಯವನ್ನೂ ಕಲಿಸರು. ಇಂಥಾ ಖಾಸಗಿ ಶಾಲೆಗಳು ಇದ್ದಲ್ಲಿ ಸಹಾ ಪ್ರಾಥಮಿಕ ಶಿಕ್ಷಣವು ವಿಶೇಷ ಫಲದಾಯಕವಾಗದು. ಪ್ರಾಥಮಿಕ ವಿದ್ಯೆಯನ್ನು ಕಲಿಸಿಕೊಡುವ ಉಪಾಧ್ಯಾಯರಿಗೆ ಖಾಸಗಿ ಶಾಲೆಗಳಲ್ಲಿ ಸಿಗುವ ಸಂಬಳವು ಬಹಳ ಕಡಿಮೆಯಾದ್ದರಿಂದಲೂ, ಪ್ರಜೆಗಳಿಂದ ಇಂತಹ ಶಿಕ್ಷಕರಿಗೆ ತಕ್ಕ ಪ್ರೋತ್ಸಾಹವು ದೊರಕದಿರುವುದರಿಂದಲೂ ಇಂಥಾ ಶಾಲೆಗಳನ್ನು ಬಹಳ ಸಮಯದವರೆಗೆ ಖಾಸಗಿಯಿಂದ ನಡಿಸಲಾರದೆ ಡಿಸ್ಟ್ರಿಕ್ಟ್ ಬೋರ್ಡಿನವರು ಯಾ ಸರಕಾರದವರು ಇವುಗಳನ್ನು ವಹಿಸಿಕೊಳ್ಳಬೇಕಾಗುವದು.

ಕೈಗಾರಿಕೆ ಮತ್ತು ವ್ಯಾಪಾರ ಅಭಿವೃದ್ಧಿಯನ್ನೇ ಪ್ರಕೃತ ಸಮಯದಲ್ಲಿ ಸಾಧಿಸಬೇಕೆಂದು ಹಲವರು ವಾದಿಸಿದರೂ ಇಂಥಾ ಕೈಗಾರಿಕೆ ವ ವ್ಯಾಪಾರ ಶಿಕ್ಷಣವೇ ಆಗಲಿ, ಇವುಗಳ ಅಭಿವೃದ್ಧಿಯ ಯಾವ ಏರ್ಪಾಡುಗಳೇ ಆಗಲಿ ಜನಸಾಮಾನ್ಯರು ಪ್ರಾಥಮಿಕ ಶಿಕ್ಷಣ ಸಹಾ ವಿಹಿತರಾದರೆ, ಆ ದೇಶದಲ್ಲಿ ಇವುಗಳು ಶಾಶ್ವತವಾಗಿ ನೆಲೆಗೊಳ್ಳುವವು. ಕೈಗಾರಿಕೆ ಕಾರ್ಖಾನೆಗಳಲ್ಲಿ ಪ್ರಾಥಮಿಕ ಶಿಕ್ಷಣ ಹೊಂದಿದ ಕೂಲಿಯಾಳುಗಳು ಈ ಶಿಕ್ಷಣವನ್ನು ಹೊಂದದವರಿಗಿಂತ ಕೆಲಸ ನಿಪುಣರಾಗುವರು. ಕೈಗಾರಿಕೆಯಲ್ಲಿಯೂ ವ್ಯಾಪಾರದಲ್ಲಿಯೂ ಉಚ್ಚಸ್ಥಾನಗಳನ್ನು ಹೊಂದಿದ ಅಮೇರಿಕದ ಸಂಯುಕ್ತ ಸಂಸ್ಥಾನ, ಜರ್ಮನಿ, ಬೆಲ್ಜಿಯಂ ದೇಶಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಔದ್ಯೋಗಿಕ ಶಿಕ್ಷಣ ಮೊದಲಾದ ವಿದ್ಯಾಭ್ಯಾಸಗಳಿಗಿಂತ ಹೆಚ್ಚಿನ ಗಮನ ಕೊಟ್ಟಿರುವರೆಂತ ತಿಳಿದುಬರುತ್ತದೆ. ಭಾರತೀಯರು ನಿರಕ್ಷರಕುಕ್ಷಿಗಳಾಗಿರುತ್ತಾ ಯಾವ ಪ್ರಕಾರದ ಔದ್ಯೋಗಿಕ ಶಿಕ್ಷಣವು ಸಾಧ್ಯವಾಗುವುದು?

ಪ್ರೌಢ ವಿದ್ಯಾಭ್ಯಾಸ ಮತ್ತು ಔದ್ಯೋಗಿಕ ಶಿಕ್ಷಣಗಳನ್ನು ಮಾತ್ರ ಪ್ರಜೆಗಳು ಕೈಕೊಳ್ಳಬೇಕೆಂತಲೂ, ಜನಸಾಮಾನ್ಯರೆಲ್ಲರಿಗೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡುವ ಕರ್ತವ್ಯವು ಪೂರ್ಣವಾಗಿ ಸರಕಾರದವರದೇ ಆಗಿರುವದೆಂತ ವಾಡಿಕೆಯಾದ ಅಭಿಪ್ರಾಯವಾಗಿರುವುದು. ಈ ಅಭಿಪ್ರಾಯವನ್ನು ಅಲ್ಲಗಳೆಯುವುದು ನಮ್ಮ ಉದ್ದಿಶ್ಯವಲ್ಲ. ಸರಕಾರದವರೂ ತಮ್ಮ ಈ ಕರ್ತವ್ಯವನ್ನರಿತುಕೊಂಡು ಪ್ರಾಥಮಿಕ ವಿದ್ಯೆಯನ್ನು ಬಹಳವಾಗಿ ಪ್ರೋತ್ಸಾಹಿಸುತ್ತಲಿರುವರು. ಆದರೆ ಸರಕಾರದವರ ಪ್ರೋತ್ಸಾಹವು ಮಾತ್ರ ಸಾಕೋ, ಅಥವಾ ನಾವು ಸಹಾ ಈ ಪ್ರೋತ್ಸಾಹಕ್ಕೆ ತಕ್ಕ ಸಹಕಾರವನ್ನು ಕೊಡಬೇಕೋ ಎಂಬದು ನಿರ್ಣಯಿಸಬೇಕಾಗಿರುವದು. ಸರಕಾರದವರಿಂದ ಏರ್ಪಡಿಸಲ್ಪಟ್ಟ ಪ್ರಾಥಮಿಕ ವಿದ್ಯಾಶಾಲೆಗಳಲ್ಲಿ ನಮಗೆ ಬೇಕಾದಂಥಾ ಮತಶಿಕ್ಷಣವು ದೊರೆಯುವಂತೆ ಮಾಡುವುದು ಸಾಧ್ಯವಲ್ಲ. ಅಕ್ಷಿತನಾದ ಮಹಮ್ಮದೀಯ ಮತಸ್ಥನಿಗಾಗಲಿ, ಹಿಂದೂವಿಗಾಗಲಿ, ಮಕ್ಕಳಿಗೆ ಮತಬೋಧೆಯನ್ನು ಕೊಡುವರೆ ಪ್ರಕೃತ [illegible]

[illegible]ವಲ್ಲ. ಪ್ರಾಥಮಿಕ ಶಾಲೆಗಳ ಮುಖಾಂತರವೇ ಈ ಶಿಕ್ಷಣವನ್ನು ಕೊಡಬೇಕಾಗಿರುವುದು. ಪ್ರತಿ ಮತಸ್ಥರೂ ತಮ್ಮ ಪೀಳಿಗೆಯು ಧರ್ಮಾವಲಂಬಿಗಳಾಗಬೇಕಾದರೆ ತಂತಮ್ಮ ಮತಧರ್ಮವನ್ನು ಬೋಧಿಸುವ ಪ್ರಾಥಮಿಕ ಶಾಲೆಗಳನ್ನು ರಚಿಸಬೇಕಾಗಿರುವುದು. ಪಾಶ್ಚಾತ್ಯ ದೇಶಗಳಲ್ಲಿ ಸಹಾ ಪ್ರಾಥಮಿಕ ಶಾಲೆಗಳಲ್ಲಿ ಮತಶಿಕ್ಷಣವು ಇರುತ್ತ, ಅನೇಕ ಮತಸ್ಥಾಪಕರ ಜನ್ಮಭೂಮಿಯಾದ ಹಿಂದೂಸ್ಥಾನದಲ್ಲಿ ಇಂಥಾ ಶಿಕ್ಷಣವು ಇಲ್ಲದಿರುವುದರ ಕಾರಣವು ಪ್ರಜೆಗಳ ಅಭಾವವೇ ಆಗಿರುವುದು

ಜನಾಂಗವು ಅಭಿವೃದ್ಧಿಸಬೇಕಾದರೆ ಈ ಬಗ್ಯೆ ನಾನಾತರದ ಸಾಧನೆಗಳನ್ನು ಮಾಡುತ್ತಿರಬೇಕು. ಯಾವದಾದರೂ ಒಂದೇ ಬಗೆಯ ಸಾಧನೆಯನ್ನು ಮಾಡಿದ್ದಲ್ಲಿ ಸಮಾಜ ಅಭಿವೃದ್ಧಿಯು ಕಾಲಕ್ಕನುಗುಣವಾಗಿ ಮುಂದೆ ಸಾಗದು ಪ್ರೌಢ ವಿದ್ಯಾಭ್ಯಾಸದ ಬಗ್ಯೆ ಕೊಲೇಜು ಮುಂತಾದವುಗಳನ್ನು ಸ್ಥಾಪಿಸಬೇಕಾದರೆ ವಿಶೇಷ ದ್ರವ್ಯ ಸಹಾಯವು ಬೇಕಾಗುವುದು ಪ್ರಾಥಮಿಕ ವಿದ್ಯಾಶಾಲೆಗಳನ್ನು ಸ್ಥಾಪಿಸುವದೆ ಬಹಳ ಖರ್ಚು ತಗಲದು. ಖಾಸಗಿ ಮೂಲಪಾಠಶಾಲೆಗಳನ್ನು ಅವುಗಳ ಸ್ಥಾಪನೆಯು ಸರಕಾರದವರಿಂದ ಮಂಜೂರು ಮಾಡುವ ರೀತಿಯಲ್ಲಿ ಏರ್ಪಡಿಸ ಬಹುದು ಹೀಗೆ ಮಂಜೂರಾದ ಶಾಲೆಗಳಿಗೆ ಸರಕಾರಿ ಸಹಾಯವು ದೊರಕುವುದು ಇಂತಹ ಶಾಲೆಗಳಲ್ಲಿ ಮತಶಿಕ್ಷಣವನ್ನೂ ಕೈಗಾರಿಕೆಯ ಶಿಕ್ಷಣವನ್ನೂ ಕೊಟ್ಟು ಚಿಕ್ಕಪ್ರಾಯದಿಂದಲೇ ವಿದ್ಯಾರ್ಥಿಗಳನ್ನು ತಮ್ಮ ಮುಂದಿನ ಜೀವನಾವೃತ್ತಿಗೆ ಯೋಗ್ಯವಾದ ರೀತಿಯಲ್ಲಿ ತರಬೇತಿ ಮಾಡಬಹುದು ದೊಡ್ಡದೊಡ್ಡ ಪಟ್ಟಣಗಳಲ್ಲಿ ವಾಸಿಸಿರುವ ಪ್ರಜಾಮುಖಂಡರಿಗೂ ಬಿರಾದ ದೇವಸ್ಥಾನಗಳಿಗೂ, ಮಠಾಧಿಪತಿಗಳಿಗೂ ಶ್ರೀಮಂತರಿಗೂ ವಿಶೇಷ ಖರ್ಚಿಲ್ಲದೆ ಇಂತಹ ಶಾಲೆಗಳನ್ನು ಪಟ್ಟಣದ ನೆರೆಯಲ್ಲಿ ಸ್ಥಾಪಿಸಲ ಅನುಕೂಲವಿರುವದು ದೇಶಾಭಿವೃದ್ಧಿಯ ಸಾಧನೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೂ ವಿಶೇಷವಾಗಿ ಗಮನ ಕೊಡಬೇಕಾಗಿರುವುದು ಪ್ರಜಾವರ್ಗದ ಪ್ರೀತಿಗೆ ಪಾತ್ರರಾಗಲಿಕ್ಕೆ ದೇಶಾಭಿಮಾನಿಗಳಿಗೆ ಇದು ಮುಖ್ಯ ದಾರಿಯಾಗಿರುತ್ತದೆ

ಮದ್ರಾಸು ಸರಕಾರದವರ ಪ್ಲೇಗು ರಹದಾರಿ ಯಾ 'ಪಾಸ್‍ಪೋರ್ಟು'ಗಳ ಕ್ರಮವು ಮದ್ರಾಸು ಸಂಸ್ಥಾನದಲ್ಲಿ ಪ್ಲೇಗು ರೋಗವು ಕಳದ [illegible] ಸರಕಾರದವರು ಇದನ್ನು ಎದುರಿಸಲು ಮಾಡಿದ ಪಲವು ಪ್ರಯತ್ನಗಳಲ್ಲಿ ಪ್ಲೇಗು ರಹದಾರಿ ಕ್ರಮವು ಒಂದಾಗಿರುವುದು ಪ್ರತ್ಯೇಕವಾಗಿ [illegible] ಕ್ರಮವು [illegible] ವುದೆಂಬದು ನಿಸ್ಸಂದೇಹವಾಗಿರದು [illegible] ದೇಶದಲ್ಲಿ ಪ್ಲೇಗು [illegible] ಅದರ ಸೋಂಕು ಎಲ್ಲೆಲ್ಲಿ ತಗಲತ್ತಿರುವದೆಂ [illegible] ಪ್ಲೇಗು ರೋಗವ ಆ ಸಮಯದಲ್ಲಿ ನವೀನವಾಗಿದ್ದ [illegible] ಮಾಹಿತಿಯು [illegible] ರಿಂದಲೂ, ಪ್ಲೇಗು ರಹದಾರಿ ಕ್ರಮವನ್ನು [illegible] ಜ್ಯಾರಿಗೆ ತರುವುದು ಅಗತ್ಯವಾಗಿತ್ತು [illegible] ಪ್ಲೇಗು ರೋಗವು [illegible] ನುಷ್ಯರಿಗೆ ವಯ್ಯೋಹಾಗುವದೆಂತ [illegible] ಸೋಂಕನ್ನು ಕೂಡಲೇ ಗೊತ್ತು ಮಾಡಿ [illegible] ಮಾಡುವದೆ ಪಾಸ್‍ಪೋರ್ಟು ಕ್ರಮವು [illegible] ಸರಕಾರದವರಿಂದ ನಡಿಸಲ್ಪಟ್ಟ [illegible] ರೋಗ ತಗಲಿದ ಮನುಷ್ಯನ ಸೋಂಕಿನಿಂದ [illegible] ರುವರು ಮದ್ರಾಸು ಸರಕಾರದವರು ಪ್ಲೇಗು [illegible] ಪರಿಶೋಧನೆಯ ನವೀನ ಸಿದ್ಧಾಂತಗಳಿಗನುಗುಣವಾಗಿ ತಿದ್ದುವದನ್ನು [illegible] ಬೇಕಾಗಿ ಮದ್ರಾಸಿನ ಎಂಟಿಸಪ್ಟಿಕ್ ಎಂಬ ಮಾಸಪತ್ರಿಕೆಯು ಸೂಚಿಸಿರುವದು ಈ ಪರಿಶೋಧನೆಯಿಂದ ರುಜುವಾದ ಮುಖ್ಯ ಸಿದ್ಧಾಂತಗಳು ಯಾವವೆ ದರೆ —

೧ ಮನುಷ್ಯನಿಗೆ ತಗಲುವ ಬ್ಯುಬೊನಿಕ್ ಪ್ಲೇಗುರೋಗವು ಈ ರೋಗ ತಗಲಿದ ಇಲಿಗಳಿಂದಲೇ ಮನುಷ್ಯನಿಗೆ ಪ್ರಾಪ್ತವಾಗುವದು

೨ ಇಲಿಗಳ ಮೈಯಲ್ಲಿರುವ ರೋಗಚಿಕ್ಕಾಡುಗಳಿಂದ ಈ ರೋಗವು [illegible] ಯಿಂದ ಇಲಿಗೆ ತಗಲಿ ಈ ರೋಗಚಿಕ್ಕಾಡುಗಳು ಮನುಷ್ಯ ದೇಹದಲ್ಲಿ ಪ್ರವೇಶಿಸಿದೊಡನೆ ಪ್ಲೇಗುರೋಗವು ಮನುಷ್ಯರಿಗೆ ಪ್ರಾಪ್ತವಾಗುವದು

೩ ಮನುಷ್ಯನಲ್ಲಿ ಪ್ರಾಪ್ತವಾದ ಈ ರೋಗದ ಸೋಂಕು ತನ್ನಷ್ಟಕ್ಕೆ [illegible]ನಿಂದ ಇನ್ನೊಬ್ಬನಿಗೆ ತಗಲದು

೪ ಆರೋಗ್ಯಕ್ಕೆ ಹಾನಿಕರವಾದ ಅಶುಚಿ ಯಾ ಅನಿರ್ಮಲತೆಯೇ ಈ ರೋಗದ ಕಾರಣವಾಗಿರುವುದಿಲ್ಲ ಆದರೆ ಇಲಿಗಳಿಗೆ ಆಶ್ರಯಕೊಡುವ ಕಸಕೊಳೆ ಮುಂತಾದವು ಇದ್ದಲ್ಲಿ ಇಲಿಗಳಿಂದ ಈ ರೋಗವು ಸಂಭವಿಸುವುದು

೫ ರೋಗ ತುಂಬಿದ ಇಲಿಗಳ ಚಿಕ್ಕಾಡುಗಳು ಒಂದೆಡೆಯಿಂದ ಮತ್ತೊಂದು ಕಡೆಗೆ ಮನುಷ್ಯರ ದೇಹ ಮುಖಾಂತರವೂ ಅಥವಾ ಬೇರೆ ಯಾವ ಸಾಮಗ್ರಿಗಳ ಮುಖಾಂತರವೂ ಒಯ್ಯಲ್ಪಟ್ಟು ಈ ರೋಗವು ಉಲ್ಬಣವಾಗುವುದು. ಮನುಷ್ಯನಿಗೆ ಅನೇಕ ಸಂದರ್ಭಗಳಲ್ಲಿ ಈ ಚಿಕ್ಕಾಡುಗಳ ಸೋಂಕು ತಗಲದಿರುವದೂ ಉಂಟು.

ಈ ಸಿದ್ಧಾಂತಗಳನ್ನು ಆದರಿಸಿ ಮದ್ರಾಸು ಗವರ್ನಮೆಂಟಿನವರು ತಮ್ಮ ಪ್ಲೇಗು ನಿಬಂಧನೆಗಳನ್ನು ತಿದ್ದಬೇಕಾಗಿರುವುದು. ಪ್ರತಿ ಮುನಿಸಿಪಾಲಿಟಿಯವರೂ, ಲೋಕಲ್ ಫಂಡಿನವರೂ, ಪ್ಲೇಗು ಕ್ರಮಗಳನ್ನು ಜ್ಯಾರಿಗೆ ತರುವಾಗ್ಯೆ ತಂತಮ್ಮ ಆಡಳಿತೆಯಲ್ಲಿರುವ ಪಟ್ಟಣಗಳಲ್ಲಿ ಕಸಕೊಳೆಗಳ ರಾಶಿಗಳನ್ನು ಬೀದಿಯಲ್ಲಿಯೂ ಜನರ ವಾಸ್ತವ್ಯಗಳ ಸುತ್ತುಮುತ್ತಲೂ ಇರಗೊಡಿಸದಂತೆ ಪ್ರಯತ್ನಿಸಿದ್ದಲ್ಲಿ 'ಪಾಸುಪೋರ್ಟು' ಯಾ ಪ್ಲೇಗು ರಹದಾರಿಗಿಂತಲೂ ಇವರ ಈ ಪ್ರಯತ್ನಗಳು ವಿಶೇಷ ಫಲದಾಯಕಗಳಾಗಿ ಪರಿಣಮಿಸುವವು

ಮುಂಬಯಿ ಪ್ಲೇಗು ಕಮಿಶನಿನವರ ಈ ರೋಗದ ನವೀನ ಸಿದ್ಧಾಂತಗಳನ್ನು ಪರೀಕ್ಷಿಸಿ ಮದ್ರಾಸು ಗವರ್ನಮೆಂಟಿನವರು ಲೋಕಲ್ ಬೋರ್ಡಿನವರಿಗೂ, ಸರಕಾರಕ್ಕೂ, ವಿಶೇಷ ಖರ್ಚು ತಗಲುವ ಈ ಪ್ಲೇಗು ರಹದಾರಿ ಕ್ರಮಗಳನ್ನು ಇನ್ನೂ ಊರ್ಜಿತವಿಡುವುದು ಯೋಗ್ಯವೊ ಎಂತ ಪರ್ಯಾಲೋಚಿಸುವುದು ಯುಕ್ತವಾಗಿರುವುದು,

---

ಪರಮಾತ್ಮನೆಲ್ಲಿರುವನು?

(ದ್ವಿಪದಿ)

ಪರಮಾತ್ಮನಾರೆಂದು ತಿಳಿಯಲಿಸುವೆಯಾ |
ಇರುವನೆತ್ತ ನುತ್ತ ಕೇಳಿದ್ದಿಹೆಯಾ | ೧ |
[illegible] ತ್ರ[illegible] [illegible]ಳಿರುವನವನು |
ಕಣ್ಣುಗಳ ತೆರೆದವನ [illegible] ಪೂಜಿಸುತಿಹನು | ೨ |
ದಿನಪನಲ್ಲಿ ತನ್ನ ಪತಿಸಲನಿಟ್ಟಿಹನು |
ಮನುಜರ ತನ್ನ ಪದಿಮೆಯನು ಹುಯ್ದಿಹನು | ೩ ||
ಕೈಗಳ ಮಿನುಗಿನಿಂದವೆ ಬಿಕ್ಕುತಿಹನು
ಉಕ್ಕಿ ಮಳೆ ಸುರಿವ ಮುಗಿಲಲ್ಲಿ ಯಡುತಿಹನು |
ಇಳಿಯುಸುರು ತಂಪೆಲರನುಸುರು ಬಿಡುತಿಹನು |
ಬಳಿಗಾಲದಿರುಳಿನಲಿ ಕನಸನಾಂತಿಹನು | ೫ ||
ತೊಪಲುರಿವ ಹಕ್ಕಿಯಲಿ ಮೆಲ್ಲಡಿಯಿಡುವನು |
ಗರ್ಜಿಪ ನೆರೆಯ ಕೆಯಿಂದಲೋಡುವನು | ೬ ||
ದೆಸೆಗಳ ತೆರೆದು ಕಿವಿಯಾರೆ ಕೇಳುವನು
[illegible]ಯಾಗದಿ ಕೇನುಡಿಯ ನುಡಿಯುವನು || ೭ |
ಸಾಗಿಪ ವಸಂತ ಕಾಲದೊಳು ಕುಕಿಹನು
ಕೂಗಿ [illegible] ಕಂಠದಿಂ [illegible]ಡುತಿಹನು | ೮ |
[illegible] ಮುಗು[illegible] ನಗುತಿಹನು |
[illegible] ಸಿರುಕಿಹನು | ೯ |
[illegible] ತಿಹನು |
[illegible] ತೂಗುತಿಹನು | ೧೦ ||
[illegible] ದೆಲ್ಲವನುಪಪನು
[illegible] ಜಾಗಿಪನು | ೧೧ |
[illegible] |
[illegible] ನಡೆಸುವನು ಮೂರಿ | ೧೨ |

ಶ್ರೀಕೃಷ್ಣ ಚರಿತ್ರ.

([illegible] ದರಿದುದು)

"[illegible] ಆಕಾಶವು ಮೋಡಗಳಿಂದ ಪೂರಾ ಬಿಡಲ್ಪಟ್ಟಿತು ನೀರಿ[illegible]ದ ತುಂಬಿರುವ ಶ್ಯಾಮಲವಾದ ವನದ ಶೋಭೆಯು ಕಣ್ಣುಗಳಿಗೆ ಆನಂದವನ್ನು [illegible] ತೋರಿತು. ಗೊಲ್ಲರ ಮಕ್ಕಳು ನನ್ನ ಬಳಿಗೆ ಬಂದು 'ನಮ್ಮ ಪ್ರಾಣವು ಹಸಿವಿನ ವ್ಯಾಕುಲವಾಗಿದೆ ನಾವು ಏನನ್ನು ತಿನ್ನುವೆವು?' ಎಂದರು ನಾನು ಅತ್ತಿತ್ತ ನೋಡಲು ಋಷಿಗಳ ಒಂದು ಆಶ್ರಮವು ಬಳಿಯಲ್ಲಿಯೇ ಇರುವುದು ಕಂಡು ಬಂತು 'ಮಿತ್ರರೇ, ಅಲ್ಲಿಗೆ ಹೋಗಿ ಭಿಕ್ಷೆಯನ್ನು ಬೇಡಿರಿ ಎಂದು ನಾನು ಹೇಳಿದೆನು ಆದರೆ ಬ್ರಾಹ್ಮಣರು ಯಜ್ಞದ ಅನ್ನವನ್ನು ಗೋವಳರಿಗೆ ಕೊಡರು, ಯಾಕೆಂದರೆ, ಗೋವಳರು ನೀಚ ಜಾತಿಯವರೆನ್ನುವರು ಮುಂಚೆಯೇ ದಣಿದಿರುವ ಗೋವಳರು ಈ ಅಪಮಾನದಿಂದ ದುಃಖಿತರಾಗಿ ಮರಳಿ ಬಂದರು ಆಗ ಬಲರಾಮನು ಕೋಪದಿಂದ ಘರ್ಜಿಸಿ 'ನೋಡುವುದೇನು? ನಾವು ಹೋಗಿ ಆ ಆಶ್ರಮವನ್ನು ಸುಲಿಗೆ ಮಾಡುವಾ' ಎಂದನು ನಾನು ಅವನ ಕೋಪವನ್ನು ನಿವಾರಿಸಿ, 'ನೀವು ಮೆಲ್ಲನೆ ಋಷಿಪತ್ನಿಯರು

---

[1] ಪ್ರತಿರೂಪ, [2] ಪ್ರತಿಮೆ; ಮೂರ್ತಿ. [3] ನಕ್ಷತ್ರ, [4] ಭೂಲೋಕಕ್ಕೆ [illegible]ಧಾರವಾಗಿರುವ, [5] ಚಿಕ್ಕ ಬೆಣಚು ಕಲ್ಲುಗಳ ಮೇಲೆ ನೀರು ಹರಿಯುವಾಗ ಒಂದು ವಿಧದ ಧ್ವನಿಯಾಗುತ್ತದೆ. ಅದಕ್ಕೆ 'ತೊದಲು' ಎನ್ನುವುದು ಕವಿಸಮಯವು, [6] ದೊಡ್ಡ ಶಬ್ದ ಮಾಡುವ, [7] [illegible] [8] ಸೂರ್ಯೋ[illegible] [illegible] ಮುಂಜಿ, ಮತ್ತು ಸೂರ್ಯಾಸ್ತ[illegible] [illegible] [10] [illegible] [11] [illegible] ಗರ್ಜಿಸುವ [illegible] [12] [illegible] [13] [illegible] [14] [illegible] [15] [illegible]

[illegible] ಹೋಗಿ [illegible]ಯನ್ನು ಬೇಡಿರಿ ಎಂದೆನು. ಈ ಸಂಸಾರದಲ್ಲಿ ಸ್ತ್ರೀಯರ ಹೃದಯವೆಂಬುದು ಸಾಕ್ಷಾತ್ ಗಂಗೆಯೇ; ಅದು ಎಂದಿಗೂ ಕರಗದಿರದು. ಆ ಋಷಿಪತ್ನಿಯರು ಯಾರಿಗೂ ತಿಳಿಯದಂತೆ ಅನ್ನವನ್ನು ತೆಗೆದುಕೊಂಡು ಅರಣ್ಯಕ್ಕೆ ಬಂದು ಈ ಗೊಲ್ಲರ ಮಕ್ಕಳ ಹಸುವನ್ನು ನಿವಾರಿಸಿದರು. ಆ ಅರಣ್ಯದಲ್ಲಿ ಅವರ ದಯೆಯೂ ಪ್ರೀತಿಯೂ ಧಾರೊಂದು ಮಳೆ ಎಂಬಂತೆ ಕರೆಯಿತು. ಇಬ್ಬರು ಮಕ್ಕಳು ಮಾತ್ರವೇ ಅನ್ನವನ್ನು ಮುಟ್ಟಲಿಲ್ಲ. ಅವರು ಯಾರೆಂದರೆ, ನಾನು ಮತ್ತು ಬಲರಾಮನು.

"ಒಂದೆಡೆಯಲ್ಲಿ ವೃಕ್ಷದ ನೆಳಲಿನಲ್ಲಿ ಮಲಗಿ ಆಕಾಶವನ್ನು ದಿಟ್ಟಿಸುತ್ತ ನಾನು ಹೀಗೆ ವಿಚಾರವನ್ನು ಮಾಡುತ್ತಿದ್ದೆನು 'ಮನುಷ್ಯರೆಲ್ಲರು ಅಷ್ಟುಮಂದಿಯೂ ಒಂದೇ. ಅವರ ಶರೀರಗಳು, ನೆತ್ತರು, ಮಾಂಸ, ಮತ್ತು ಇಂದ್ರಿಯಗಳು ಎಲ್ಲರಿಗೂ ಒಂದೇಲೆಕ್ಕವಾಗಿವೆ. ಜನ್ಮ ಮತ್ತು ಮರಣವು ಎಲ್ಲರಿಗೂ ಒಂದೇ ಪ್ರಕಾರವಿದೆ. ಆದರೆ ಗೊಲ್ಲರು ಮಾತ್ರ ಜಾತಿಯಲ್ಲಿ ಹೀನರೇಕೆ, ಬ್ರಾಹ್ಮಣರು ಸರ್ವರಲ್ಲಿ ಶ್ರೇಷ್ಠರೇಕೆ? ನಾಲ್ಕು ವರ್ಣಗಳು, ನಾಲ್ಕು ವೇದಗಳು, ಅಸಂಖ್ಯರಾದ ದೇವತೆಗಳು, ಪ್ರಾಣಿಗಳನ್ನು ಹಿಂದು ಮುಂದು ನೋಡದೆ ನಿರ್ದಯತೆಯಿಂದ ಕೊಲ್ಲುವ ಯಜ್ಞಗಳು, ಜನ್ಮ ಮೃತ್ಯು, ಧರ್ಮಾದರ್ಮಗಳು ಇವೇ ಮೊದಲಾದವುಗಳ ವಿಚಾರ ಮಾಡುತ್ತಾ ನನಗೆ ಜಂಪು ಹತ್ತಿತು. ಮತ್ತು ನಾನು ಒಂದು ಕನಸನ್ನು ಕಂಡೆನು —'ಮೆಲ್ಲ ಮೆಲ್ಲನೆ ದಿಙ್ಮಂಡಲವು ಅನೇಕ ಕೋಟಿ ಚಂದ್ರರ ಪ್ರಭೆಗಳಿಂದ ಪ್ರಕಾಶಿತವಾಯಿತು, ಮತ್ತು ಶೀತಲವಾದ ತೇಜೋರೂಪವಾದ ಸಾಗರದಲ್ಲಿ ಒಂದು ಸಾವಿರ ಎಸಳುಗಳುಳ್ಳ ಒಂದು ಕಮಲವನ್ನು ನಾನು ಕಂಡನು. ಆ ಕಮಲದ ಮೃಣಾಲದಲ್ಲಿ ಈ ಪೃಥ್ವಿಯು ಇದ್ದಿತು. ಎಸಳುಗಳಲ್ಲಿ ಅಸಂಖ್ಯವಾದ ಸೂರ್ಯಮಂಡಲಗಳಿದ್ದವು. ನನ್ನ ಕಣ್ಣುಗಳು ಕುಕ್ಕಿ ಹೋದಂತಾದವು. ಆ ಕಮಲದಲ್ಲಿ ಅಧಿಷ್ಠಿತವಾದ ಒಂದು ವಿರಾಣ್ಮೂರ್ತಿಯನ್ನು (ವಿಶ್ವರೂಪವನ್ನು) ನಾನು ಕಂಡೆನು. ಅದಕ್ಕೆ ನಾಲ್ಕು ಕೈಗಳಿದ್ದು ಆ ಕೈಗಳಲ್ಲಿ ಶಂಕ ಚಕ್ರ, ಗಧಾ ಮತ್ತು ಪದ್ಮ ಇವುಗಳಿದ್ದವು. ಇಂದ್ರನೀಲಮಣಿಯ ಕಾಂತಿಯುಳ್ಳ ಆ ಮೂರ್ತಿಯು ತೇಜೋರೂಪವಾದ ಪೀತಾಂಬರವನ್ನು ತೊಟ್ಟಿತ್ತು. ಸೂರ್ಯನಿಂದ ಬೆಳಗುವ ಕಿರಣಗಳಿಂದ ಸ್ಫಟಿಕವು ಯಾವ ವಿಧದಿಂದ ಪ್ರಕಾಶಿತವಾಗುತ್ತದೋ, ಅದೇ ಪ್ರಕಾರ ಈ ವಿರಾಣ್ಮೂರ್ತಿಯಿಂದ ಒಂದು ಅನಂತವಾದ ಮತ್ತು ಅಚಿಂತ್ಯವಾದ ಶಕ್ತಿಯು ಹೊರ ಬಂದು ಆ ಮಹಾ ಪದ್ಮದ ಮೇಲೆ ಒಂದೇ ಪ್ರಕಾರವಾಗಿ ಅದರ ಭ್ರಮಣವಾಗ ತೊಡಗಿತು. ಆ ಮಹಾ ಪದ್ಮದ ಚಿಕ್ಕ ಚಿಕ್ಕ ಪರಮಾಣುಗಳು ಕ್ಷಣೇ ಕ್ಷಣೇ ರೂಪಾಂತರವನ್ನು ಹೊಂದುತ್ತಿದ್ದವು. ಇಷ್ಟರಲ್ಲಿಯೇ ಅಲ್ಲಿ ಒಂದು ವಿರಾಟ್ ಧ್ವನಿಯಾಯಿತು — ಯಾವುದು? ಏಕಮೇವಾದ್ವಿತೀಯವೋ, (ಎಂದಿಗೂ ಎರಡಲ್ಲದೆ ಒಂದೇಯಾಗಿರುವ ಕೆಯ್ಯೋದ್ದು) ಸತ್ಯವೋ, ಪೂರ್ಣವೋ, ಮತ್ತು ಸನಾತನವೋ ಅಂತಹ ಪ್ರಕೃತಿ ಪುರುಷರ ಮಹಾ ಸಂಯೋಗವನ್ನು ನೋಡು! ಶಕ್ತಿರೂಪಿಯಾದ ಸರ್ವ ಭೂತಮಯನಾದ ಶ್ರೀಮನ್ನಾರಾಯಣನು ಯಾವನೋ ಆತನ ಪತ್ನಿಯೇ ಈ ಪ್ರಕೃತಿಯು. ಇವರೂ ಅನಂತ ನಿತ್ಯ, ಮತ್ತು ಅವ್ಯಯರು. ಜನ್ಮ ಮತ್ತು ಮರಣವಿವು ರೂಪಾಂತರಗಳಲ್ಲದೆ ಬೇರೆ ಅಲ್ಲ. ವಿಶ್ವವೆಂಬ ಈ ಕಮಲದಲ್ಲಿ ವಿಶ್ವೇಶ್ವರನಾದ ಶ್ರೀಮನ್ನಾರಾಯಣನು ಅಧಿಷ್ಠಿತನಾಗಿ ಇರುವುದನ್ನು ನೋಡು! ಜ್ಞಾನ ಸ್ವರೂಪವಾದ ಪಾಂಚಜನ್ಯವೆಂಬ ಶಂಖದ ದೆಸೆಯಿಂದ ನೀತಿ ಚಕ್ರದ ಸ್ವರೂಪವುಳ್ಳ ಸುದರ್ಶನದ ಬೋಧವು ಉಂಟಾಗುತ್ತದೆ. ನೀತಿಯನ್ನು ಉಲ್ಲಂಘಿಸುತ್ತಲೇ ಬಯಂಕರವಾದ ಗದೆಯಿಂದ ಆ ಪಾಪಕ್ಕೆ ಶಾಸನವಾಗುತ್ತದೆ. ಪುಣ್ಯ ಮತ್ತು ನೀತಿ ಇವುಗಳ ಪಾಲನ ಪೋಷಣೆಗಳು ಸುಖಮಯವಾದ ಪದ್ಮದಿಂದಾಗುತ್ತವೆ. ಎಲ್ಲಾ ಮಾನವ ವರ್ಗಕ್ಕೂ ಜಾತಿಯೊಂದೇ! ಅನಂತವಾದ ಈ ವಿಶ್ವವೆಂಬುದೇ ಒಂದು ವೇದವಾಗಿದೆ ಮತ್ತು ಅದರ ಅಧ್ಯಯನವನ್ನು ಮಾಡುವುದರಲ್ಲಿ ಮನುಷ್ಯಮಾತ್ರದವರೆಲ್ಲರಿಗೂ ಏಕ ಪ್ರಕಾರವಾದ ಅಧಿಕಾರವಿದೆ. ತಮ್ಮ ಧರ್ಮವನ್ನು ರಕ್ಷಿಸುವುದೇ ಮಹಾ ಯಜ್ಞವು, ಮತ್ತು ಶ್ರೀಮನ್ನಾರಾಯಣನೇ ಇದಕ್ಕೆ ಯಜ್ಞೇಶ್ವರನು. ಅಶ್ರದ್ಧೆಯಿಂದ ಕಣ್ಣು ಕುರುಡಾದ ಮನುಷ್ಯನೇ! ಪವಿತ್ರವಾದ ಗಂಗೆಯ ಪ್ರವಾಹದಂತೆ ಹರಿದು ಹೋಗುವ ನಿನ್ನ ಕರ್ತವ್ಯದ ಹೊನಲು ಯಾವ ದೆಸೆಯಿಂದ ಹರಿಯುತ್ತದೆಂಬುದನ್ನು ಜ್ಞಾನದ ಪ್ರಕಾಶದಿಂದ ಚನ್ನಾಗಿ ಕಂಡು ಹಿಡಿದು ಕರ್ಮ ಕ್ಷೇತ್ರದಲ್ಲಿ ಅಗ್ರೇಸರನಾಗು. ಅಂತಃಕರಣದಿಂದ ಸುದರ್ಶನವೆಂಬ ಆ ನೀತಿ ಚಕ್ರಕ್ಕೆ ಪ್ರಣಾಮ ಗೈದು ಕರ್ಮದ ಪ್ರವಾಹದಲ್ಲಿ ನಿನ್ನ ಜೀವನದ ನೌಕೆಯನ್ನು ಬಿಟ್ಟುಬಿಡು.

"ಮೆಲ್ಲಮೆಲ್ಲನೆ ಆ ಕಮಲದ ಎಸಳುಗಳು ಗ್ರಹಮಾಲೆಯಲ್ಲಿ ಸೇರಿದುವು. ಮೃಣಾಲ ಸೂತ್ರವು ಪೃಥ್ವಿಯಲ್ಲಿ ಅಡಗಿತು. ನೀಲಶರೀರವು ಅನಂತನೀಲವಾದ ಆಕಾಶದಲ್ಲಿ ವಿಲೀನವಾಯಿತು. ನಾನು ಎಚ್ಚತ್ತೆನು. ಮಗುವು ಏಳುತ್ತಲೇ ತನ್ನ ತಾಯಿಯ ಪ್ರೇಮಪೂರ್ಣವಾದ ಮುಖವನ್ನು ನೋಡುವಂತೆ, ನಾನು ವನಸೃಷ್ಟಿಯ ಮುಖವನ್ನು ನಿರೀಕ್ಷಿಸಿದೆನು. ಆಗ್ಯೆ ನನಗೆ ಎಲ್ಲಾ ಕಡೆಯಲ್ಲಿಯೂ ನವೀನವಾಗಿ ಕಂಡುಬಂದಿತು. ಶೋಭೆ, ಪ್ರಕಾಶ, ಕೋಮಲತೆ, ಶಾಂತಿ ಮತ್ತು ಪವಿತ್ರತೆ—ಇವುಗಳಿಂದ ಸೃಷ್ಟಿಯು ತದಿಯುಕ್ಕುವಂತೆ ತುಂಬಿರುತ್ತದೆಂದು ಭಾಸವಾಯಿತು. ಬಾಲಕನಾದ ನನ್ನ ಹೃದಯವೂ ಪ್ರಾಣವೂ ಪ್ರಕೃತಿಯಲ್ಲಿ ಕರಗಿ ಹೋದುವು. ಇದೀ ಜಗತ್ತೆಂಬುದು ನನ್ನ ಶರೀರವು, ಮತ್ತು ಸರ್ವ ಪ್ರಾಣಿಗಳಲ್ಲಿ ನನ್ನ ಹೃದಯವು ಪ್ರಾಣಸ್ವರೂಪವಾದಿದೆ ಎಂದು ನನ್ನ ಮನಸ್ಸಿಗೆ ಹೊಳೆಯಿತು. ಆನಂದದಿಂದ ಉತ್ಸಾಹದಿಂದ ನನ್ನ ಎದೆಯು ತುಂಬಿಬಂದಿತು. [illegible]

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6 ಪೈ

ವ್ಯಾಪಾರಸ್ಥರಿಗ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನಾ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು, ದ. ಕ.

ಅಶ್ರುಧಾರೆಯು ಸುರಿಯ ತೊಡಗಿತು. ಇಷ್ಟರಲ್ಲಿಯೇ ಯಾರೋ ನನ್ನನ್ನು ಕರೆದಂತಾಯಿತು. ಹಿಂದೆ ನೋಡುತ್ತಲೇ ಅಲ್ಲಿಯೊಬ್ಬ ಅಸುರನು ನಿಂತಿದ್ದನು. ಕೂಡಲೇ ನಾನು ನನ್ನ ಬಿಲ್ಲನ್ನೆತ್ತಿದೆನು. ಲಗ್ಗೆ ತುಸ ನಗುತ ಆ ಅಸುರನು 'ವೀರನೇ! ಬಿಲ್ಲನ್ನು ಕೆಳಗಿಡು. ನಾನು ನಿನ್ನ ಶತ್ರುವಲ್ಲವು. ಶತ್ರುವಾಗಿದ್ದರೆ ನೀನು ಈ ವರೆಗೆ ಜೀವದಿಂದಿರುತ್ತಿರಲಿಲ್ಲ. ನಿನ್ನೊಡನೆ ಮೈತ್ರಿ ಮಾಡುವುದು ನನ್ನ ಮನಸ್ಸಿನಲ್ಲಿದೆ. ಯುದ್ಧ ಮಾಡುವುದಲ್ಲ. ಕೃಷ್ಣಾ, ಕಂಸನ ದುಷ್ಕೃತ್ಯಗಳನ್ನು ಕುರಿತು ನೀನು ಕೇಳಿರುವುದಿಲ್ಲವೇ?" ಎಂದನು.

"ನಾನು— ಹೌದು ಕೇಳಿರುವೆನು.

"ಅಸುರನು— ಹಾಗಾದರೆ ಬಡೆ. ನಾವು ಹುಲಿಯನ್ನು ಕೊಂದು ಅದರ ರಕ್ತ ತೃಷ್ಣೆಯನ್ನು (ರಕ್ತವನ್ನು ಹೀರಬೇಕೆಂಬ ಬಾಯಾರಿಕೆ) ಒಂದು ಬಾರಿ ಇಲ್ಲದಂತೆ ಮಾಡುವ.

"ಆಗ್ಯ ನಾನು ಹೀಗೆಂದು ವಿಚಾರಿಸಿದೆನು. ಆದರೆ ಅದು ಹೇಗಾದೀತು? ಕಂಸನು ಮಧುರೆಯ ಅರಸನು. ನಾನಾದರೋ ಯಾರೊಬ್ಬ ಯಃಕಶ್ಚಿತ್ ಗೊಲ್ಲರ ಪೋರನ. ಕಂಸನ ಮುಂದೆ ನಾನೊಂದು ನುಸಿಯಂತೂ ಅಲ್ಲ.

"ಅಸುರನು— ಕೃಷ್ಣಾ, ಈ ಅರಣ್ಯದಲ್ಲಿ ನೀನು ಯಾವ ಯಾವ ಸಾಹಸಕೃತ್ಯಗಳನ್ನು ಮಾಡಿರುವೆಯೋ ಅವು ನುಸಿಯಿಂದ ಆದವುಗಳಲ್ಲ.

"ನಾನು— ಆದರೆ ಈ ಕೆಲಸದಲ್ಲಿ ನನಗೆ ಯಾರ ಸಹಾಯವೂ ಇಲ್ಲ."

"ಅಸುರನು— ನಾನು ನಿನಗೆ ಸಹಾಯವನ್ನು ಮಾಡುವೆನು. ಅಸಂಖ್ಯರಾದ ಗೋವಳರು ಸಹಾಯ ಮಾಡುವರು. ಇಷ್ಟು ಅಲ್ಲದೆ ಮಧುರೆಯಲ್ಲಿರುವ ಜನರೆಲ್ಲರೂ ನಿನ್ನ ಪಕ್ಷವನ್ನೇ ಹಿಡಿಯುವರು.

"ನಾನು— ಕಂಸನ ವಧೆಯು ದೇವಕಿಯ ಎಂಟನೆಯ ಮಗನಿಂದಲೇ ಆದೀತಲ್ಲದೆ ಬೇರೆ ಯಾವಾತನಿಂದಲೂ ಆಗಲಾರದೆಂದು ನಾನು ಕೇಳಿರುವೆನು.

"ಅಸುರ— ದೇವಕಿಯ ಆ ಮಗನೆಲ್ಲಿರುವನು?

"ನಾನು— ನಾಗರಾಜ ನಾಯರ್ಯರಾದ ಜನರ ಒಡೆಯನಾದ ವಾಸುಕಿಯು ಆತನನ್ನು ಎತ್ತಿಕೊಂಡು ಹೋಗಿ ಎಲ್ಲಿಯೋ ಬಚ್ಚಿಟ್ಟಿರುವನೆಂದು ನಾನು ಕೇಳಿರುತ್ತೇನೆ'

"ಅಸುರನು— ಕೃಷ್ಣಾ, ದೇವಕಿಯ ಆ ಮಗನು ನೀನೇ! ಎಂದನು.

"ಉಗ್ರಸೇನನ ಸೆರೆ ಮತ್ತು ವಸುದೇವದೇವಕಿಯರ ಶೋಕ, ಇವುಗಳಿಂದ ನನಗೆ ಬಹಳ ಸಂತಾಪವಾಗುತ್ತಿತ್ತು. ಮಾನವ ಜಾತಿಯ ಹೃದಯದಲ್ಲಿ ಬೋಧೆಯಾಗುವ ಧರ್ಮವು ಬುದ್ಧಿಗೆ ಅಗಮ್ಯವಾಗಿದೆ. ಮಧುರಾಪುರಿಯನ್ನು ಉದ್ಧರಿಸುವುದಕ್ಕೇನೋ ನಾನು ನಿರ್ಧರಿಸಿದೆನು. ನನ್ನ ಕರ್ತವ್ಯವೇನೆಂಬುದನ್ನು ಹೃದಯಪಟದಲ್ಲಿ ಬರೆದಿಟ್ಟೆನು. ಈ ಕರ್ತವ್ಯವನ್ನನುಸರಿಸಿ ನಾನು ಯಜ್ಞಾದಿಗಳನ್ನು ನಿಲ್ಲಿಸಿದೆನು.'

ಇಂದ್ರನಾರು? ಮೋಡಗಳು ಸೃಷ್ಟಿಕ್ರಮದ ಮೇರೆಗೆ ಮಳೆಯನ್ನು ಸುರಿಸುತ್ತವೆ. ಸೂರ್ಯ, ಚಂದ್ರ, ನಕ್ಷತ್ರಗಳೇ ಮೊದಲಾದವುಗಳು ತಮತಮಗೆ ಹಂಚಿಕೊಟ್ಟ ಕಾರ್ಯಗಳಲ್ಲಿ ಆಯಾ ನಿಯಮಗಳನ್ನನುಸರಿಸಿ ಸುತ್ತುತ್ತವೆ. ಸೃಷ್ಟಿಯ ಗುಣಧರ್ಮಗಳ ನಿಯಮನ ಮಾಡುವವನು, ಅಖಿಲ ವಿಶ್ವದ ಒಡೆಯನಾದ ವಿಷ್ಣು ಒಬ್ಬನೇ ಆಗಿರುವನು. ಆ ವಿಶ್ವರೂಪನಾದ ನಾರಾಯಣನನ್ನು ಆರಾಧಿಸಿರಿ' ಎಂದು ಎಲ್ಲೆಲ್ಲಿಯೂ ನಾನು ಪ್ರತಿಪಾದಿಸಿದೆನು.

(ಮುಂದೆ ಸಾಗುವುದು)

ಸಾಹಸಿಕ ಗುಜರಾತಿಯವರು.

ಭೂಲೋಕದ ಹಲವು ಪ್ರಾಂತ್ಯಗಳಲ್ಲಿ ವಾಸಿಸಿಕೊಂಡಿರುವ ಗುಜರಾತಿಯವರ ಸಾಹಸ ಚಟುವಟಿಕೆಯು ಇತರ ಭಾರತೀಯರಿಂದ ಅನುಸರಣೀಯವಾಗಿರುವುದು. ನಮ್ಮ ಪ್ರಾಂತ್ಯಗಳಲ್ಲಿ ಸಹಾ ಅನೇಕ ವರುಷಗಳ ಹಿಂದೆ ಬಂದು ನೆಲಸಿ ವ್ಯಾಪಾರ [illegible]ಗಳಲ್ಲಿ ಮುಂದಾಳುಗಳಾಗಿರುವ ಗುಜರಾತಿಯವರ ಸಾಹಸ [illegible]

ಭೂಲೋಕದ ಇತರ ಕಡೆಗಳಲ್ಲಿರುವ ನಮ್ಮ ದೇಶಬಾಂಧವರಾದ ಗುಜರಾತಿಯವರ ವೃತ್ತಾಂತವು ವಾಚಕರೆಲ್ಲರ ಅವಗಾಹನೆಗೆ ಯೋಗ್ಯವಾಗಿರುವುದು.

ಗುಜರಾತಿಯವರು ಮುಖ್ಯವಾಗಿ ಗುಜರಾತ, ಕಾತ್ಯಾವಾಡ ಮತ್ತು ಕಚ್ ದೇಶದ ನಿವಾಸಿಗಳಾಗಿರುವರು. ಇವರಲ್ಲಿ ಹಿಂದು, ಪಾರ್ಸಿ, ಮಹಮ್ಮದಿ ಈ ಮೂರು ಜಾತಿಗಳಿರುವವು. ಹಿಂದುಗಳಲ್ಲಿ, ಬ್ರಾಹ್ಮಣರು, ಬನಿಯಾ, ಲೋಹನಾ ಮತ್ತು ಭಟಿಯಾ ಎಂಬ ಮೇಲು ದರ್ಜೆಯವರೂ, ಕೊಲಿಸ್ ಮತ್ತು ಮೀನುಹಿಡಿಯುವರೆಂಬ ಕೀಳು ಜಾತಿಯವರೂ ಇರುವರು. ಮಹಮ್ಮದೀಯರಲ್ಲಿ ಖೋಜರು, ಮೇಮನ್ಸ್ ಮತ್ತು ಇನ್ನು ಅನೇಕ ಒಳಜಾತಿಯವರು ಇರುವರು. ಇವರ ನಿವಾಸಸ್ಥಾನವಾದ ಕಚ್, ಕಾತ್ಯಾವಾಡ ಮತ್ತು ಗುಜರಾತ ದೇಶಗಳಿಗೆ ತಾಗಿ ಹಿಂದೂ ಸಾಗರದ ಸಮುದ್ರಕರಾವಳಿಯು ಇರುವುದರಿಂದ ಪ್ರಾಚೀನಕಾಲದಿಂದಲೇ ಸಮುದ್ರ ಮಾರ್ಗವಾಗಿ ವಿಶೇಷ ವ್ಯಾಪಾರ ವೈವಾಟಗಳನ್ನು ನಡಿಸುವ ಅಭಿರುಚಿಯು ಇವರಿಗಿತ್ತು. ಈ ಕಾರಣ ಇವರು ಪ್ರಕೃತ ಚೀನಾ, ಜಪಾನ್, ಲಂಡನ್, ನ್ಯುಯೋರ್ಕ್, ಜೆಂಜಿಬಾರ್, ಪ್ರಿಟೋರಿಯ, ಮನಿಲ್ಲಾ ಮತ್ತು ಮೊರಿಸಿಯಸ್ ಮೊದಲಾದ ಪ್ರಮುಖ ವ್ಯಾಪಾರ ಸ್ಥಳಗಳಲ್ಲಿ ವಿಶೇಷವಾಗಿ ವಾಸಿಸಿಕೊಂಡಿರುವರು. ಸ್ಟೀಮರು ಮತ್ತು ರೈಲುಬಂಡಿಗಳ ಆಗಮನದ ಮೊದಲೇ ಗುಜರಾತಿಯವರು ವ್ಯಾಪಾರದ ಬಗ್ಗೆ ಮಸ್ಕತ, ಜೆಂಜಿಬಾರ್, ಮೊರಿಸಿಯಸ್ ಮೊದಲಾದ ದೇಶಗಳಿಗೆ ಹೋಗಿದ್ದರೆಂದಾಗಿ ತಿಳಿಯಬರುತ್ತದೆ.

ಪಾರ್ಸಿ, ಹಿಂದೂ, ಮಹಮ್ಮದೀಯ ಮೊದಲಾದ ಎಲ್ಲಾ ಜಾತಿಯವರೆಲ್ಲರ ಮಾತೃಭಾಷೆಯು ಗುಜರಾತಿಯೇ ಆಗಿರುವುದು. ಭೂಲೋಕದ ಯಾವ ಪ್ರಾಂತ್ಯಗಳಿಗೆ ಹೋದರೂ, ತಮ್ಮ ವ್ಯಾಪಾರ ವೈವಾಟ ಮೊದಲಾದವುಗಳಲ್ಲಿ ಗುಜರಾತಿ ಭಾಷೆಯನ್ನೇ ಉಪಯೋಗಿಸುತ್ತಿರುವರು. ಬ್ರಿಟಿಷ್ ಸಾಮ್ರಾಜ್ಯದ ಕೆಳಗಿರುವ ಹಿಂದುಸ್ಥಾನದ ಇತರ ಕಡೆಗಳಲ್ಲಿಯೂ ಭೂಲೋಕದ ಇನ್ನು ಹಲವು ದೇಶಗಳಲ್ಲಿಯೂ, ಕುಟುಂಬಗಳ ಸಮೇತ ಬಂದು ವಾಸಿಸುತ್ತಿರುವರು. ದಕ್ಷಿಣ ಅಫ್ರಿಕ ಮೊದಲಾದ ಕೆಲವು ದೇಶಗಳಲ್ಲಿ ಗುಜರಾತಿ ನಿವಾಸಿಕರ ಸಂಖ್ಯೆಯು ಬಹು ಹೆಚ್ಚಿ ಸ್ಥಳ ನಿವಾಸಿಕರ ಅಸೂಯಾಬಾಧವು ಗುಜರಾತಿ ಜನರ ಮೇಲೆ ಉಂಟಾಗಿರುವುದು. ಹೀಗೆ ಪ್ರಬಲವಾಗಿ ಗುಜರಾತಿ ನಿವಾಸಿಕರು ಇದ್ದಲ್ಲಿ ಆ ಸ್ಥಳಗಳ ಸರಕಾರದವರು ಸಹಾ ಇವರ ಏಳಿಗೆಗೆ ತಕ್ಕ ರೀತಿ ಗಮನಕೊಡಬೇಕಾಗಿ ಬಂದಿರುವುದು. ಆಸ್ಯಖಂಡದ ಏಡನ್, ಮಸ್ಕತ್ ಮೊದಲಾದ ಅರೇಬಿಯ ದೇಶದಲ್ಲಿರುವ ಪಟ್ಟಣಗಳಲ್ಲಿಯೂ, ಮನಿಲ್ಲಾ ಮತ್ತು ಜಾಪಾನ್ [illegible] ಪ್ರಾಂತ್ಯಗಳಲ್ಲಿಯೂ, ಚೀನಾದೇಶದಲ್ಲಿಯೂ, ಗುಜರಾತಿಯವರು [illegible] ಗಳೂ, ದೇವಸ್ಥಾನಗಳೂ, ಮಸೀದಿಗಳೂ ಮೊದಲಾದವುಗಳು [illegible] ಇರುವವು. ಅಫ್ರಿಕದಲ್ಲಿ ಜೆಂಜಿಬಾರ್, ಮೊಂಬಾಸಾ [illegible] ಮತ್ತು ಅಫ್ರಿಕದ ಪೂರ್ವ ಕರಾವಳಿಯ ಪಟ್ಟಣಗಳಲ್ಲಿ ಬನಿಯಾ, ಲೋಹನಾ [illegible] ಮತ್ತು ಮೇಮನ್ ಜಾತಿಯ ಗುಜರಾತಿಯವರ ಸಂಖ್ಯೆಯು ಬಹು ವಿಶೇಷವಾಗಿದ್ದು ಈ ಪಟ್ಟಣಗಳಲ್ಲಿ ಸಹಾ ಗುಜರಾತಿಯವರ ದೇವಾಲಯಗಳೂ, ವಿದ್ಯಾಶಾಲೆಗಳೂ, ಮಸೀದಿಗಳೂ ಆಯಾ ಜಾತಿಯವರ ಪುರೋಹಿತ ವರ್ಗ ಮೊದಲಾದವುಗಳೂ ಸಹಾ ಇರುವವು. ತಮ್ಮ ಸ್ವದೇಶದಲ್ಲಿ ನಡಿಯುತ್ತಿರುವ ಎಲ್ಲಾ ಧರ್ಮಾಚಾರ, ಮತಾಚಾರ ಮೊದಲಾದವುಗಳನ್ನು ಇಲ್ಲಿಯೂ ಅನುಸರಿಸುತ್ತಿರುವರು. ಪೂರ್ಸಾಗುವಳಿ ಮೊದಲಾದವುಗಳನ್ನು ಮಾಡುವ ಎಷ್ಟೋ ಗುಜರಾತಿಯವರು ಅಫ್ರಿಕದಲ್ಲಿ ಐಶ್ವರ್ಯವಂತರಿಗಿಂತ ಹೆಚ್ಚಾಗಿರುವರು. ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಒಂದು ವರ್ತಮಾನಪತ್ರವು ಸಹಾ ನಡಿಸಲ್ಪಡುತ್ತಿರುವುದು. ಲಂಡನ್ ಪಟ್ಟಣದಲ್ಲಿಯೂ ಪಾರೀಸ ನಗರದಲ್ಲಿಯೂ ಗುಜರಾತಿ ನಿವಾಸಿಕರ ಸಂಖ್ಯೆಯು ಹೆಚ್ಚುತ್ತಲಿರುವುದು.

ಹಿಂದುಸ್ಥಾನದ ಇತರ ಕಡೆಗಳಲ್ಲಿ ವ್ಯಾಪಾರಸ್ಥಳಗಳಲ್ಲಿರುವವರೆಲ್ಲಿ ಗುಜರಾತಿಯವರಿರುವರು. ಖಾನಪುರ, ಢಿಲ್ಲಿ, ಕಲಿಕತ್ತಾ, ಮುಂಬೈ, ಮದ್ರಾಸ, ರಂಗೂನ್ ಮತ್ತು ಬರ್ಮಾ ಮೊದಲಾದ ಭರತಖಂಡದ ಪ್ರಮುಖ ವ್ಯಾಪಾರ ಪಟ್ಟಣಗಳಲ್ಲಿ ಇವರ ಸಂಖ್ಯೆಯು ಹೆಚ್ಚುತ್ತಲಿರುವುದರಿಂದ ಗುಜರಾತಿ ಭಾಷೆಯನ್ನು ಕಲಿಸುವ ಶಾಲೆಗಳು ಅಲ್ಲಲ್ಲಿ ಏರ್ಪಟ್ಟವೆ. ಸರಕಾರದವರೂ ಸಹಾ ಕೋರ್ಟುಗಳಲ್ಲಿ ಗುಜರಾತಿಯವರ ವ್ಯವಹರಣೆ ಮೊದಲಾದವುಗಳ ಬಗ್ಗೆ ಗುಜರಾತಿ ಭಾಷೆ ಗೊತ್ತಿರುವ ಗುಮಾಸ್ತರುಗಳನ್ನು ನೇಮಕಮಾಡಿರುವರು.

ಈ ಗುಜರಾತಿಯವರ ವೃತ್ತಾಂತದ ಮುಖ್ಯಸಾರವೇನು? ಪ್ರಾಚೀನಕಾಲದಿಂದ ಸಹಾ ಭಾರತೀಯ ಜನಾಂಗದವರಾದ ಗುಜರಾತಿಯವರು ಸಾಹಸಿಕರಾಗಿರುವರೆಂತಲೂ, ಭೂಲೋಕದ ಹಲವು ಕಡೆಗಳಲ್ಲಿ ಇವರು ಖ್ಯಾತಿಗೊಂಡಿರುವರೆಂತಲೂ, ತಿಳಿಯುತ್ತೇವೆ. ಇದರಂತೆ ಭೂಲೋಕದ ಪ್ರತಿ ಒಂದು ಕಡೆಯಲ್ಲಿಯೂ ಇವರು ಇನ್ನಷ್ಟು ಪ್ರಬಲವಾಗಿ ಇತರ ಭಾರತೀಯರು ಇವರ ಮಾದರಿಯನ್ನನುಸರಿಸಬೇಕಾಗಿರುವುದು.

ಹಿಂದುಸ್ಥಾನ ಕೋಓಪರೇಟಿವ್ ಇನ್ಸುರೆನ್ಸ್ ಸೊಸ್ಯಾಟಿ ಲಿಮಿಟೆಡ್, ಎಂಬ ಜೀವವಿಮೇ ಸಂಘವು. ಈ ಸಂಘದವರ ದ್ವಿತಿಯ ವರುಷದ ವರದಿಯು ನಮ್ಮ ಹಸ್ತಗತವಾಗಿರುವುದು. ದ್ವಿತಿಯ ವರುಷದಲ್ಲಿಯೇ ಈ ಕಂಪೆನಿಯವರು ಕಂಪೆನಿಯ ಹಿಸೆದಾರರಿಗೆ ಸೇಕಡಾ ೪ರ ದರದಲ್ಲಿ ಮುನಾಫೆಯನ್ನು ಕೊಟ್ಟಿರುವರು. ಕಂಪೆನಿಯು ಎಲ್ಲರ ವಿಶ್ವಾಸಕ್ಕೂ ಪಾತ್ರವಾದ್ದರಿಂದ ಎರಡು ವರುಷಗಳಲ್ಲಿಯೇ ಈ ರೀತಿ ಇದು ಅಭಿವೃದ್ಧಿಸಿ ೪ರ ದರದ ಮುನಾಫೆಯನ್ನು ಕೊಡಲಿಕ್ಕೆ ಕಾರಣವಾಯಿತು. ಕಂಪೆನಿಯವರಿಂದ ತೆರಬೇಕೆಂತ ಸೂಚಿಸಿಸೋಣಾದಂತೆ [illegible] ಹಿಸೆಗಳ ಪ್ರಥಮ ಕಂತನ್ನು ಕಂಪೆನಿಯ ಮೆಂಬರರು ತೆತ್ತಿರುವರು. ಹೀಗೆ ಪ್ರಥಮ ಕಂತುಗಳನ್ನು ತೆತ್ತ ಹಿಸೆಗಳ ನಿಯಮಿತ ಮೌಲ್ಯವು ರೂ. ೧೭,೪೪,೦೦೦ ಆಗಿರುವುದು. ರೂ. [illegible] ಮೌಲ್ಯದ ವಿಮೇ ಪತ್ರಗಳನ್ನು ಸ್ವೀಕರಿಸೋಣಾಗಬೇಕೆಂಬ ೩೬೧೦ ಮನವಿಗಳಿದ್ದವೆಂತಲೂ, ಇವುಗಳಲ್ಲಿ ೧೯೬೬ ಮನವಿಗಳು ಸ್ವೀಕರಿಸಲ್ಪಟ್ಟು ವಿಮೇ ಹಣದ ಪ್ರಥಮ ಕಂತುಗಳು ವಸೂಲಾಗಿರುವುದೆಂತಲೂ, ೧೫೫೭ ಮನವಿಗಳು ಸ್ವೀಕಾರದ ಬಗ್ಗೆ ಶಿಫಾರಸು ಹೊಂದಿವೆಯೆಂತಲೂ ತಿಳಿದುಬರುತ್ತದೆ. ವಿಮೇ ಹಣವಾಗಿ ಈ ವರುಷದಲ್ಲಿ ರೂ. ೮೭,೦೦೦ ವಸೂಲಾಗಿರುವುದು. ಕಂಪೆನಿಯ ವ್ಯವಸ್ಥಾ ಕ್ರಮವು ಬಹಳ ಚೊಕ್ಕದಾಗಿರುವುದು. ವಿಮೇದಾರರನ್ನು ಸಂರಕ್ಷಿಸುವ ವಿಧಾನಗಳು ಸಹಾ ಸ್ತುತ್ಯವಾಗಿವೆ. ಕಲಿಕತ್ತೆಯ ಕೊಸಿಂಬಜಾರಿನ ಮಹಾರಾಜಾ ಮನೀಂದ್ರ ಚಂದ್ರನಂದಿ ಬಹದೂರ ಎಂಬವರು ಪ್ರೆಸಿಡೆಂಟರಾಗಿದ್ದು ಯತಾರ್ಥವಾದಿಗಳೂ ಖ್ಯಾತಿವಂತರೂ ಆದ ಡಿರೆಕ್ಟರುಗಳ ಮೇಲ್ವಿಚಾರದಲ್ಲಿ ಈ ಕಂಪೆನಿಯು ಇರುವುದು. ಮೆಸರ್ಸ್ ಬಿ ಬಾಬುರಾವ್ ಎಂಡ್ ಸನ್ಸ್ ಮಂಗಳೂರು ಇವರು ನಮ್ಮಲ್ಲಿಯ ಈ ಕಂಪೆನಿಯ ಸ್ಪೆಶ್ಯಲ್ ಏಜಂಟರಾಗಿರುವರು.

ಬೇರೆ ಬೇರೆ ಜನಾಂಗಗಳಲ್ಲಿ ಪರಸ್ಪರ ವಿವಾಹವು ಹಿತಕರವೇ? ಜಪಾನ್ ದೇಶದ ಮಿ. ಕೆಂಟಾರೊ ಕಾನೆಕೊ ಎಂಬವರು ಜಪಾನ ಜನಾಂಗದವರು ಅನ್ಯ ಯುರೋಪಿಯ ಮೊದಲಾದ ಜನಾಂಗಗಳೊಡನೆ ಪರಸ್ಪರ ವಿವಾಹ ಮೊದಲಾದವುಗಳನ್ನು ನಡಿಸಿಕೊಳ್ಳಬಹುದೋ ಎಂಬ ವಿಷಯವನ್ನು ಪ್ರಖ್ಯಾತ ತತ್ವಜ್ಞಾನಿಗಳಾದ ಮಿ। ಹರ್ಬರ್ಟ್ ಸ್ಪೆನ್ಸರರವರ ಹತ್ತರ ಕೇಳಿದ್ದರು. ಮಿ। ಸ್ಪೆನ್ಸರರವರು ಜಪಾನಿನವರ ಪ್ರಶ್ನೆಗೆ ಈ ಸಂದರ್ಭದಲ್ಲಿ ಕೊಟ್ಟ ಉತ್ತರವು ಮೇಲ್ಕಂಡ ಪ್ರಶ್ನೆಗೆ ಸಹಾ ತಕ್ಕದಾಗಿರುತ್ತದೆ. ಮಿ. ಸ್ಪೆನ್ಸರರವರ ಉತ್ತರವಿರುವ ಈ ಪತ್ರವು ಮಾಜಿ ಮದ್ರಾಸು ವಿದ್ಯಾ ಖಾತೆಯ ಡಿರೆಕ್ಟರರಾಗಿದ್ದ ಡಾಕ್ಟರ್ ಡಂಕನ್‌ರವರಿಂದ ಪ್ರಕಟಿಸಲ್ಪಟ್ಟ ಮಿ। ಸ್ಪೆನ್ಸರರ ಜೀವನ ಚರಿತ್ರೆಯಲ್ಲಿ ಪ್ರಕಟಿಸಲ್ಪಟ್ಟಿರುವುದು. ತನ್ನ ಜೀವಾಂತದ ವರೆಗೆ ಈ ಪತ್ರವನ್ನು ಪ್ರಕಟಿಸಕೂಡದೆಂದು ಸ್ಪೆನ್ಸರರವರು ಅಪೇಕ್ಷಿಸಿದ್ದರಿಂದ ೧೯೦೩ನೇ ಇಸವಿಯಲ್ಲಿ ಸ್ಪೆನ್ಸರರವರು ಮೃತಪಟ್ಟ ಸ್ವಲ್ಪ ಕಾಲದಲ್ಲಿಯೇ ಈ ಪತ್ರವನ್ನು ಪ್ರಕಟಿಸಿರುವರು. ಈ ಪತ್ರದ ಮುಖ್ಯ ಸಾರಾಂಶವನ್ನು ಈ ಕೆಳಗೆ ಸಂಗ್ರಹವಾಗಿ ಕೊಟ್ಟಿರುವೆವು.

ಬೇರೆ ಬೇರೆ ಜನಾಂಗಗಳು ಪರಸ್ಪರ ವಿವಾಹಗಳನ್ನು ಸರ್ವಥಾ ಮಾಡಕೂಡದಾಗಿ ಸ್ಪೆನ್ಸರರವರ ಖಚಿತ ಅಭಿಪ್ರಾಯವಾಗಿರುವುದು. ಸಾಮಾಜಿಕ ತತ್ವಗಳ ಯಾ ಪ್ರಾಣಿಗುಣಧರ್ಮಶಾಸ್ತ್ರದ ವಿಚಾರವು ಈ ಪ್ರಶ್ನೆಗೆ ಉತ್ತರಕೊಡುವದಕ್ಕೆ ಬೇಕಾಗಿಲ್ಲ. ಜನಾಂಗಗಳ ಪರಸ್ಪರ ವಿವಾಹದ ಮತ್ತು ಗುಣಗಳಲ್ಲಿ ವಿಶೇಷ ಬೇಧವುಳ್ಳ ಮೃಗಗಳ ಸಂಪರ್ಕದಿಂದುಂಟಾದ ಸಂತತಿಯು ಯಾವಾಗಲೂ ಕೆಡಕುಳ್ಳದ್ದಾಗಿರುವುದೆಂಬದು ಇವರ ಅನುಭವಸಿದ್ಧವಾಗಿರುವುದು. ಅನೇಕ ವರುಷಗಳಿಂದ ಸ್ಪೆನ್ಸರರವರು ಈ ವಿಷಯಕ್ಕೆ ಗಮನಕೊಡುತ್ತಿದ್ದು ಅಗ್ರ್ಯಾಗ್ರ್ಯ ಕಂತಂಥಾ ದೃಷ್ಟಾಂತಗಳಿಂದ ತಮ್ಮ ಈ ಅನುಭವವನ್ನು ಬರೆದಿರುವರು. ಸಂಪರ್ಕ ಹೊಂದುವ ಜನಾಂಗದವರಲ್ಲಿ ಇರಬೇಕಾದ ಸ್ವಲ್ಪವಾದ ಬೇಧಕ್ಕಿಂತ ಹೆಚ್ಚು ಭೇದವು ಇದ್ದಲ್ಲಿ ಈ ಸಂಪರ್ಕದಿಂದ ಉಂಟಾಗುವ ಸಂತತಿಯು ಮೊದಲನೇ ತಲಾಂತರದಲ್ಲಿ ಹಲವು ಸಂದರ್ಭಗಳಲ್ಲಿ ಬಹಳ ಕೆಟ್ಟದ್ದಲ್ಲವಾದರೂ ಕ್ರಮೇಣ ಇಂಥಾ ಸಂಪರ್ಕದಿಂದ ಜನಿಸುವ ಸಂತಾನವು ನಿಸ್ಸಾರ್ಥಕದ್ದಾಗುವುದು. ಹಿಂದುಸ್ಥಾನದಲ್ಲಿರುವ ಯೂರೇಸಿಯನರನ್ನೂ ಅಮೇರಿಕದ ಹಾಫ್‌ಬ್ರೀಡರೆಂಬವರನ್ನೂ ತಮ್ಮ ಈ ಅನುಭವದ ದೃಷ್ಟಾಂತಗಳನ್ನಾಗಿ ಕೊಟ್ಟಿರುವರು. ಸ್ಪೆನ್ಸರರವರು ಕೊಟ್ಟ ತಮ್ಮ ಅನುಭವವನ್ನು ದೃಢೀಕರಿಸುವ ಮತ್ತೊಂದು ದೃಷ್ಟಾಂತವು ಯಾವುದಂದರೆ— ಆಡು, ಕುರಿ, ಕುದುರೆ ಮೊದಲಾದವುಗಳನ್ನು ಸಾಕುವಂಥ ತನ್ನ ಸ್ನೇಹಿತನೊಬ್ಬನನ್ನು ಈ ವಿಷಯವಾಗಿ ವಿಚಾರಿಸಿದ್ದಲ್ಲಿ ಅವನ ಅನುಭವವು ಸಹಾ ಸ್ಪೆನ್ಸರರವರ ಅನುಭವದಂತೆಯೇ ಆಗಿತ್ತು. ಬೇರೆ ಬೇರೆ ವಿಂಗಡವಾದ ಜಾತಿಯ ಕುರಿಗಳ ಸಂಪರ್ಕದಿಂದುದ್ಭವಿಸಿದ ಕುರಿಯು ಎರಡನೇ ತಲಾಂತರವು ಬಹಳ ಕುಂದುಕವುಳ್ಳದ್ದಾಗಿರುವುದೆಂದು ಕಂಡುಬರುತ್ತದೆ. ಪ್ರಾಣಿಗಳ ಗುಣಧರ್ಮ ಶಾಸ್ತ್ರ ಪ್ರಕಾರ ಒಂದು ಜನಾಂಗದ ದೇಹಸ್ಥಿತಿಯು ಹಲವು ಶತಮಾನಗಳಿಂದ ತಂತನ್ನು ವಿದ್ಯಮಾನಗಳಿಗೆ ತಕ್ಕದಾದ ದೇಹಪ್ರಕೃತಿಯನ್ನು ಹೊಂದುತ್ತಿರುವುದರಿಂದ, ಈ ವಿಂಗಡ ವಿಂಗಡವಾದ ದೇಹಪ್ರಕೃತಿಗಳುಳ್ಳ ಜನಾಂಗಗಳ ಸಂಪರ್ಕದಿಂದುಂಟಾದ ಸಂತತಿಯಲ್ಲಿ ಯಾವದಾದರೊಂದು ಜನಾಂಗದ ದೇಹಪ್ರಕೃತಿಯು ಸ್ವಭಾವಿಕವಾಗಿರದೆ ಯಾವ ಅವಸ್ಥೆಗೂ ಸಲ್ಲದ ಪ್ರಕೃತಿ ಗುಣವುಳ್ಳ ಸಂತಾನವು ಇಂತಹ ಸಂಪರ್ಕದಿಂದ ಜನಿಸುವುದು. ಮಿ। ಸ್ಪೆನ್ಸರವರ ಈ ಅಭಿಪ್ರಾಯವು ಸರ್ವಮಾನ್ಯವಾಗಿರುವುದು.

—o—

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಅಯ್ಯಾ ಪತ್ರಿಕಾಕರ್ತರಿರಾ,

ಮೂಲ್ಕಿಯು ಪ್ರಾಕಾರದ್ಯ ಸನ್ಮಾನಿತ [illegible] ನಮ್ಮ ಸಂಘದವರಲ್ಲಿ [illegible]

ಕೀರ್ತಿಶೇಷ ಎ| ಸುಬ್ರಾಯ ಪೈಗಳವರನ್ನೂ, ಜನ್ಮಕ್ಕೆ ತಂದ ಭೂಷಣಗಳಿಂದ ಅಲಂಕೃತವಾದ ಕ್ಷೇತ್ರವಾಗಿರುವದು ಈ ಕ್ಷೇತ್ರದವರು "ಮಾಡಿದವನ ಪಾಪ ಆಡಿದವನ ತಲೆಯ ಮೇಲೆ" ಎಂಬ ಲೋಕೋಕ್ತಿಯನ್ನು ಅಂಗೀಕರಿಸಿದ್ಧಾರಾಗಿ, ಒಬ್ಬ ಪ್ರಯಾಣಸ್ಥನು ಬರದ ಬಾತ್ಮಿಯನ್ನು, ತಮ್ಮ ಪತ್ರದಲ್ಲಿ ಪ್ರಕಟಿಸಿರುತ್ತದಷ್ಟೇ? "ಆನೆಯು ದರದಲ್ಲಿ ಕತ್ತೆಯು ಜನ್ಮಕ್ಕೆ ಬಂದೀತೆ", ಎಂದೂ ಬಾರದು ಪ್ರಯಾಣಸ್ಥನು ಬರದ ಬಾತ್ಮಿಯು ಅನುಮಾನಕರದ್ದು ಯಾಕಂದರೆ, ಮಹಾ ಜ್ಞಾನಭರಿತರಾದ ಆ ತೆನ್ನಾಲರಾಯರೆಂಬವರು, ಬಡ ವೈದಿಕನು ಹೇಳಿದಂಥಾ ಸಂಗತಿ ನಿಜವಾಗಿದ್ದರೆ ಅದನ್ನು ತನ್ನ ಮನಸ್ಸಾಕ್ಷಿಗೆ ವಿರೋಧವಾಗಿ, ದೇವಸ್ಥಾನದ ಅಧಿಕಾರಿಗಳಿಗೆ ಈ ಕುರಿತು ದೂರು ಹೇಳುವರೆ ಕಾರಣವಿರಲಿಕ್ಕಿಲ್ಲ ಅವರ ಖಾಸಗಿ ದ್ವೇಷಗಳಿಂದ ದೂರು ಕೊಟ್ಟರು ಎಂಬದಾಗಿ ಊಹಿಸುವದಾದರೆ ದೇವಸ್ಥಾನದ ಅಧಿಕಾರಿಗಳು ಇದರ ನಿಜತ್ವವನ್ನು ನಿಶ್ಚಯಿಸಲಾರದಷ್ಟು ಮೂರ್ಖರೋ? ಅಥವಾ ಅಧಿಕಾರಿಗಳಿಗೂ ದ್ವೇಷವಿತ್ತೆಂಬದಾಗಿ ಊಹಿಸುವದಾದರೆ ಅಧಿಕಾರಿಗಳು ಮಾಡಿದ ಕಟ್ಟನ್ನು ಕ್ಷೇತ್ರಿಕರು ಅನುಮೋದಿಸಿ ನಡಕೊಳ್ಳುವರೆ ಕಾರಣವೇನೋ? ಈ ಎಲ್ಲಾ ವಿಷಯಗಳನ್ನು ಆಲೋಚಿಸಲು ಪ್ರಯಾಣಸ್ಥನು ಅಪೂರ್ಣ ತನಿಕೆಯಿಂದ ಬರದದ್ದಾಗಿ ತಿಳಕೊಳ್ಳಬೇಕಾಗುವದು. ಪ್ರಯಾಣಸ್ಥನು ತಾನು ಬರದ ಸಂಗತಿ ಅಲ್ಪ-ವಿಷಯವಾಗಿಯೂ ಸಾರ್ವಜನಿಕ ಪ್ರಯೋಜನವನ್ನು ಸಾಧಿಸುವ ಪತ್ರದಲ್ಲಿ ಪ್ರಕಟಣೆಗೆ ಯೋಗ್ಯವಲ್ಲವಾಗಿಯೂ ಬರದದ್ದು ವಾಚಿಬಿಯಲ್ಲ. ಯಾಕಂದರೆ, ಪ್ರಯಾಣಸ್ಥನು ಬರದ ಸಂಗತಿ ನಿಜವೆಂಬದಾಗಿ ಆತನು ನಿಶ್ಚಯಪಡುವದಾದರೆ ಒಂದು ಕ್ಷೇತ್ರವು ಇಂಥಾ ಸೋಂಕಿಗೆ ಒಳಪಟ್ಟದ್ದಾಗಿ, ಇತರ ಕ್ಷೇತ್ರಿಕರು ತಿಳಕೊಂಡರೆ, ತಮ್ಮ ಕ್ಷೇತ್ರಕ್ಕೆ ಅಂಥಾ ಸೋಂಕು ತಗಲಿದವರು ಬಂದರೆ, ಅವರಿಗೆ ವ್ಯಾಪಿಸಿದ ಸೋಂಕು ತಮಗೆ ತಗಲದಂತೆ ಅವರನ್ನು ತಕ್ಕ ಸ್ಥಾನದಲ್ಲಿ ಇಡಬಹುದಾಗುತ್ತದೆ. ಆದ್ದರಿಂದ ಪ್ರಯಾಣಿಕನು ಬರದ ವಿವರವು ನಿಜವಾಗಿದ್ದರೆ, ಸಾರ್ವಜನಿಕ ಪ್ರಯೋಜನಕರವಾದದ್ದೆ

ಅನ್ಯಕ್ಷೇತ್ರಿಕ

ವಿದೇಶ ವೃತ್ತಾಂತ

ಬರ್ಲಿನ್‌ನಲ್ಲಿ ಹಲ್ಲಿನ ವೈದ್ಯರ ಒಂದು ಪರಿಷದವು ಕೂಡಿತ್ತು ಭೂಲೋಕದ ಎಲ್ಲಾ ಕಡೆಗಳಿಂದಲೂ ೨೦೦೦ ಪ್ರತಿನಿಧಿಗಳು ಬಂದಿದ್ದರು ಇಂಗ್ಲಾಂಡು ದೇಶದಿಂದಲೇ ಈ ಪರಿಷದಿನ ಬಗ್ಗೆ ೫೦ ಜನ ಪ್ರತಿನಿಧಿಗಳು ಹೋಗಿದ್ದರು ಹಲ್ಲಿನ ಚಿಕಿತ್ಸೆಯ ನಾನಾ ವಿಧದ ಔಷಧಗಳ ಮತ್ತು ಶಸ್ತ್ರಗಳ ವಸ್ತುಪ್ರದರ್ಶನವು ಇತ್ತು ಜರ್ಮನಿಯ ಚಕ್ರವರ್ತಿಯವರು ಪುರಾತನ ದಂತಶಸ್ತ್ರಗಳ ಚಿತ್ರಗಳನ್ನು ಈ ಪ್ರದರ್ಶನಕ್ಕೆ ಕಳುಹಿಸಿದ್ದರು

ಬರುವ ವರುಷದ ಆಗೋಸ್ತು ತಿಂಗಳಲ್ಲಿ ಕೆಪ್ಟನ್ ಸ್ಕೋಟ್ ಎಂಬವರು ದಕ್ಷಿಣ ಧ್ರುವಕ್ಕೆ ಇನ್ನೊಮ್ಮೆ ಹೋಗುವರೆ ನಿರ್ಣಯಿಸಿರುವರು ಇವರ ಈ ಸರ್ತಿಯ ಸಂಚರಣೆಯ ಮುಖ್ಯ ಉದ್ದಿಶ್ಯವು ದಕ್ಷಿಣ ಧ್ರುವವನ್ನು ಮುಟ್ಟುವದಲ್ಲದೆ, ಕಿಂಗ್ ಎಡ್ವರ್ಡ ಲೇಂಡ್ ಎಂಬ ಪ್ರದೇಶವನ್ನು ಶೋಧಿಸುವುದೂ ಆಗಿರುವುದು ಈ ಬಗ್ಗೆ ಆದಾಜು ಖರ್ಚು ೪೦,೦೦೦ ಪವನು ತಗಲುವದೆಂತ ನಿರ್ಧರಿಸಿ ಪ್ರವ್ಯಸಹಾಯದ ಬಗ್ಗೆ ಮಿ| ಸ್ಕೋಟರವರು ವಿಜ್ಞಾಪಿಸಿಕೊಂಡಿರುವರು

ಕಿಚ್ನರ್ ಪ್ರಭುಗಳಿಗೆ 'ಫೀಲ್ಡ್ ಮಾರ್ಶಲ್ ಎಂಬ ನವೀನ ಪದವಿ ದೊರಕಿರುವುದು

ಇಂಡಿಯನ್ ಸೋಶಿಯಲೋಜಿಸ್ಟ್ ಎಂಬ ಪತ್ರವನ್ನು ಮುದ್ರಿಸಿದ ಎಲ್ಡ್ರೆಡ್ ಎಂಬವರಿಗೆ ಒಂದು ವರುಷದ ಸೆರೆಯು ವಿಧಿಸಲ್ಪಟ್ಟಿರುವುದು

ಕಳದ ಅಗೋಸ್ತು ತಿಂಗಳಲ್ಲಿ ಬ್ರಿಟಿಷ್ ವ್ಯಾಪಾರವು ಹೆಚ್ಚಿರುವುದೆಂದೂ ೫,೬೭೦,೩೦೬ ಪವನುಗಳ ಮೌಲ್ಯದ ಸಾಮಗ್ರಿಗಳು ಆಮದಾಗಿವೆಯಾಗಿಯೂ ೧,೭೭೨,೦೨೪ ಪವನುಗಳ ಸರಕು ರಫ್ತಾಗಿದೆಂದೂ ತಿಳಿದುಬರುತ್ತದೆ ಇದರಲ್ಲಿ ಬಟ್ಟೆಗಳ ರಫ್ತು ೭೦೧,೬೨೦ ಪವನುಗಳಿಂದಲೂ, ಉಣ್ಣೆಯ ಬಟ್ಟೆಯ ರಫ್ತು ೪೧೯,೩೦೬ ಪವನುಗಳಿಂದಲೂ ಹೆಚ್ಚಿರುವುದು

ಜಪಾನಿನ ರಾಜಪುತ್ರ ಕ್ಯನಿಯವರು ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೆ ಭೇಟಿಕೊಡುವರಾದ್ದರಿಂದ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಇವರನ್ನು ಬಹುಮಾನದಿಂದ ಎದುರುಗೊಳ್ಳುವರೆ ವಿಶೇಷ ರೀತಿಯ ತಯ್ಯಾರಿಯು ನಡಿಯುತ್ತಿರುವುದು

ಅಮೇರಿಕ ದೇಶದ ನ್ಯೂಯೋರ್ಕ ಪಟ್ಟಣದಲ್ಲಿ ಪೋಲೀಸು ಕಮಿಶನರ್ ಕೆಲಸದಿಂದ ತಳ್ಳಿ ಹಾಕಲ್ಪಟ್ಟ ಜನರಲ್ ಬಿಂಗ್‌ಹೇಮ್ ಎಂಬವರು ನ್ಯೂಯೋರ್ಕ ಪಟ್ಟಣದ ಪೋಲೀಸಿನವರಲ್ಲಿ ಅನೇಕರು ಲಂಚಕೋರರಾಗಿರುವರೆಂ[illegible] ಹಾರಪರ್ಸ್ ಮೆಗಜೀನ್ ಎಂಬ ಮಾಸಪತ್ರಕ್ಕೆ ಬರದಿರುವರು ಪೋಲೀಸು ಖಾನರಲ್ಲಿ ೨೦೦೦ ಜನರು ಯಾವಾಗಲೂ ಲಂಚವನ್ನು ತಕ್ಕೊಳ್ಳುತ್ತಿರುವರಾಗಿಯೂ ಪ್ರತಿ ವರುಷ ೩೦ ೦೦೦,೦೦೦ ಪವನುಗಳಿಗಿಂತ ಹೆಚ್ಚು ದ್ರವ್ಯವು ಪೋಲೀಸಿನವರಿಗೆ ಕೈದಿಗಳಿಂದಲೂ ಇನ್ನು ಹಲವು ಅಪರಾಧಿಗಳಿಂದಲೂ ಕೊಡೋಣಾಗುತ್ತದೆಂದೂ ಬರೆದಿರುವರು

ಉತ್ತರಹಿಂದುಸ್ಥಾನ.

ಬಾಲಗಂಗಾಧರ ತಿಲಕರವರ ರಾಜದ್ರೋಹ ಮೊಕದಮೆಯ ಪ್ರಿವಿಕೌನ್ಸಿಲಿನವರ ತನಿಖೆ ಖರ್ಚಿನ ಬಗ್ಗೆ ಎತ್ತು ಕೂಡಿಸಿದ ದ್ರವ್ಯವನ್ನು ಖರ್ಚುಮಾಡುವರೆ ಸಂದರ್ಭವು ದೊರಕದೆ ಇದ್ದದ್ದರಿಂದ ಈ ಹಣವನ್ನು ಚಂದಾದಾರರಿಗೆ ಪರತ್ತು ಕೊಟ್ಟಿರುವರೆಂತ ಪಂಜಾಬಿ ಎಂಬ ಪತ್ರಿಕೆಯಿಂದ ತಿಳಿದು ಬರುತ್ತದೆ

ಬಕಲ್ ಧಾತುವಿನ ಒಧಾ ಣೆಯ ನಾಣ್ಯಗಳು ಸದ್ಯದಲ್ಲಿ ತಯ್ಯಾರಿಸೋಣಾಗುವದಿಲ್ಲವೆಂಬದಾಗಿಯೂ, ಬಂದಾಣೆಯ ನಾಣ್ಯದ ಮಾಹಿತಿಯು ಜನರಲ್ಲಿ ಪೂರ್ಣವಾಗಿ ಉಂಟಾಗುವ ವರೇಗೆ ಈ ಅರ್ಧಾಣೆ ನಾಣ್ಯಗಳನ್ನು ತಯ್ಯಾರಿಸುವುದು ಅಗತ್ಯವಿಲ್ಲವೆಂತಲೂ ಸೂಚಿಸೋಣಾಗಿರುವದೆ

ಹಲವು ದರೋಡೆ ಕಳ್ಳರು ಬಾಬು ಭೂಪೇಂದ್ರನಾಥ ಬೋಸರವರಿಗೆ ತಾವು ಬೋಸರಲ್ಲಿ ದರೋಡೆ ಕಳವನ್ನು ಸದ್ಯದಲ್ಲಿಯೇ ಮಾಡುವೆವೆಂಬದಾಗಿ ಒಂದು ಹೆಸರಿಲ್ಲದ ಕಾಗದದಿಂದ ಸೂಚಿಸಿರುವರು

ಮುಂಬಯಿಯ ನೆಶನಲ್ ಯುನಿಯನ್ ಸಂಘದವರ ಪ್ರತಿನಿಧಿಗಳು ದಾದಾಭಾಯಿಯವರ ಜನ್ಮದಿನಾಚರಣೆ ಕ್ಕೋಸುಗ ಒಂದು ಬಿನ್ನಹ ಪತ್ರವನ್ನು ದಾದಾಭಾಯಿಯವರಿಗೆ ಸಮರ್ಪಿಸುವರೆ ಹೋಗಿದ್ದರು ಈ ಸಂದರ್ಭದಲ್ಲಿ ದಾದಾಭಾಯಿಯವರು ಕೊಂಗ್ರೆಸು ಸಭೆಯ ವಿಷಯ ಮಾತಾಡುತ್ತಿರುವಾಗ್ಯೆ ಈ ರೀತಿ ಅಪ್ಪಣೆ ಕೊಟ್ಟರು — ಲಂಡನ್ ಪಟ್ಟಣದಲ್ಲಿ ಕೊಂಗ್ರೆಸು ಸಭೆಯನ್ನು ಜರಗುವಂತೆ ಮಾಡುವುದು ಅವಶ್ಯಕವೆಂತಲೂ ಇಂಗ್ಲಾಂಡಕ್ಕೆ ಭಾರತೀಯ ಪ್ರತಿನಿಧಿಗಳು ಇಲ್ಲಿಯ ಸಂಕಷ್ಟಗಳನ್ನು ಬ್ರಿಟಿಷ ಜನರಿಗೆ ತಿಳಿಯ ಹೇಳಲಿಕ್ಕೆ ಆಗಿಂದಾಗ್ಯೆ ಹೋಗಬೇಕೆಂತಲೂ, ಭಾರತೀಯ ಪ್ರಜೆಗಳಿಗೆ ಅವರ ಹಕ್ಕು ಸ್ವಾತಂತ್ರ್ಯಗಳನ್ನು ವ್ಯಕ್ತಪಡಿಸಿ, ಭರತಖಂಡದ ಉದ್ಧರಣೆಯನ್ನು ಸ್ವಾರ್ಥತ್ಯಾಗದಿಂದಲೂ, ಧೈರ್ಯದಿಂದಲೂ ಸಾಧಿಸಬೇಕಾಗಿಯೂ ಅಪ್ಪಣೆ ಕೊಟ್ಟಿರುವರು

ಹಿಂದುಸ್ಥಾನದ ಆಯಾ ಸಂಸ್ಥಾನಗಳ ಮಾಜಿ ಗವರ್ನರರವರು ಹಿಂದುಸ್ಥಾನದ ಪ್ರಜಾನುರಾಗವನ್ನುಂಟುಮಾಡಬೇಕೆಂದು ವಿಲಾಯತಿಯಲ್ಲಿ ಬೋಧಿಸುತ್ತಿರುವಾಗ್ಯೆ [illegible]

ರೆಂಬದು ಈ ಕಳಗಿನ ಕಲಿಕತ್ತೆ ಅತ್ತಕಡೆಯ ಒಬ್ಬ ಬಾತ್ಮೀದಾರನು ಪ್ರಕಟಿಸಿದ ವೃತ್ತಾಂತದಿಂದ ತಿಳಿದುಬರುವುದು ಫುರ್ಣಿಯದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮಿ| ವರ್ನೆಡಯರ ಕೈಕೆಳಗಿರುವ ಬಂಗಾಳಿ ಸರಕಾರಿ ಆಫೀಸರರಲ್ಲಿ ಇಷ್ಟರ ವರೆಗೆ ೧೨—೧೩ ಜನರು ಕೆಲಸದಿಂದ ತಳ್ಳಿ ಹಾಕಲ್ಪಟ್ಟಿರುವರು ಅಥವಾ ಕೆಲಸಕ್ಕೆ ಪತ್ತಾಯದಿಂದ ರಾಜಿಕೊಟ್ಟಿರುವರು ಕಿಷನ್‌ಗಂಜ ಎಂಬಲ್ಲಿಯ ಬಾಲಿಕಾಶಾಲೆಯನ್ನು ನಾಲ್ಕು ಬಂಗಾಳಿ ಬಾಬುಗಳು ಅಲ್ಲಿಯ ಮಾರವಾಡಿಯವರ ಖರ್ಚಿನಿಂದ ಈ ವಿದ್ಯಾಶಾಲೆಯನ್ನು ಕಟ್ಟಿಸಿದ್ದು ತುಚ್ಛವೆಂತ ಬರೆದಿರುವರು

ಮುಂಬಯಿಯಲ್ಲಿ ಕೆಲವು ದಿವಸಗಳ ಹಿಂದೆ ಡಾಕ್ಟ್ರರ ಸರ್ ಬಾಲಚಂದ್ರ ಕೃಷ್ಣರವರ ಅಧ್ಯಕ್ಷತೆಯಲ್ಲಿ ಸಭೆಕೂಡಿ ವೈದ್ಯ ಪರೀಕ್ಷೆಯನ್ನು ಕಲಿತು ಪಾಸಾದ ಭಾರತೀಯರಿಗೆ ವೈದ್ಯ ಇಲಾಖೆಯಲ್ಲಿ ದೊಡ್ಡ ಹುದ್ದೆಗಳನ್ನು ಸರಕಾರದವರು ಕೊಡುವಂತೆ ಒಂದು ಮನವಿಯನ್ನು ಬರಕೊಂಡಿರುವರು ಪ್ರೈಕೋರ್ಟು, ಎಸ್ಜಿ, ಎಕ್ಸಿಕ್ಯೂಟೀವ್ ಕೌನ್ಸಿಲುಗಳ ಮೆಂಬರುಗಳಾಗತಕ್ಕ ಯೋಗ್ಯತೆಯು ಭಾರತೀಯರಲ್ಲಿರುವಾಗ ಸರಕಾರಿ ವೈದ್ಯ ಇಲಾಖೆ ಕೊಲೇಜುಗಳ ಪಂಡಿತ ಪದವಿಗಳನ್ನೂ ಈ ವರೆಗೆ ಇಂಗ್ಲಿಷರಿಂದಲೇ ಅನುಭವಿಸಲ್ಪಡುತ್ತಿರುವ ವೈದ್ಯ ಇಲಾಖೆಯ ಇತರ ಕೆಲಸಗಳನ್ನೂ ಭಾರತೀಯರಿಗೆ ಕೊಡಬೇಕಾಗಿ ವಿಜ್ಞಾಪಿಸಿಕೊಂಡಿರುವರು

ಆಲಿಪುರ ಬೊಂಬ ಮೊಕದಮೆಯ ಮಿ| ನೊರ್ಟನರವರ ಸರಕಾರಿ ಕಡೆ ವ್ಯವಹರಣೆಯು ಇನ್ನೆರಡು ದಿವಸಗಳಲ್ಲಿ ತೀರುವಂತಿದೆ

ದಕ್ಷಿಣಹಿಂದುಸ್ಥಾನ.

ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಕೋರ್ಟುಗಳಲ್ಲಿಯೂ ಸಬ್ ಕೋರ್ಟುಗಳಲ್ಲಿಯೂ ಗುಮಾಸ್ತರ ಸಂಬಳವನ್ನು ರೂ ೨೦ಕ್ಕೆ ಕಡಿಮೆಯಾಗದಂತೆ ಹೆಚ್ಚಿಸಬೇಕಾಗಿ ಮದ್ರಾಸು ಸರಕಾರದವರು ನಿರ್ಣಯಿಸಿರುವರು

ಮದ್ರಾಸು ಸಂಸ್ಥಾನದಲ್ಲಿ ಸಂಸ್ಕೃತ ಪಾಠಶಾಲೆಗಳ ಸರಕಾರಿ ಮೇಲಾಫೀಸರರಾದ ರಾ| ಆರ್ ಕೃಷ್ಣಾಚಾರ್ಯ ಎಂ ಎ ಇವರಿಗೆ ನದ್ಧಿಯಾದಲ್ಲಿಯ ಸಂಸ್ಕೃತ ಪಂಡಿತರ ಕೊಲೇಜಿನವರು 'ವಿದ್ಯಾನಿಧಿ' ಎಂಬ ಬಿರುದನ್ನು ಕೊಟ್ಟಿರುವರು

ಸೇಲಂ ಪಟ್ಟಣದಲ್ಲಿ ಕಳದ [illegible] ಗಳಲ್ಲಿ ಪಟ್ಟಣನಿವಾಸಿಕರೆಲ್ಲರೂ ಸಭೆಕೂಡಿ ಯುದ್ಧನ ಅಸ್ತ್ರಯನ್ನು ಯಾರಿಗೂ ಹಂಚಿಕೊಡದೆ ಹಿಂದುಸ್ಥಾನದಲ್ಲಿಯೇ ಇರಿಸಬೇಕೆಂಬದಾಗಿ ಇಂಡಿಯಾ ಸರಕಾರದವರಿಗೆ ಬರಕೊಳ್ಳುವರೆ ನಿರ್ಣಯಿಸಿರುವರು.

ಮದ್ರಾಸು ಗವರ್ನಮೆಂಟಿನವರು ಪ್ರಾಚೀನಕಾಲದಿಂದ ಹಾಳುಬಿದ್ದು ಕಟ್ಟೋಣಗಳಿಲ್ಲದಿರುವ ಪಾಯಸ್ಥಳಗಳನ್ನು ಅಗಿಯುವರೆ ರೂ. ೪೦೦೦ನ್ನೂ ರೂ. ೧೨೦೦ನ್ನು ಮೇಲೆ ನಮೂದಿಸಿದ ಕೆಲಸ ನಿರ್ವಹಿಸುವರೆ ಬೇಕಾದ ಸಿಬಂದಿ ಬಗ್ಯೆಯೂ, ರೂ. ೩೦,೦೦೦ನ್ನು ೧೯೦೯-೧೦ ವರುಷದಲ್ಲಿ ಹಾಳು ಬೀಳುತ್ತಿರುವ ಪುರಾತನ ಸ್ಮಾರಕ ಸಂಸ್ಥೆಗಳ ದಾಗುದೂಜಿ ಬಗ್ಯೆಯೂ ಸೆಂಕ್ಷನ್ ಮಾಡಿರುವರಾಗಿ ಕೇಳುತ್ತೇವೆ

ಮೈಸೂರು ಮಹಾರಾಜಾ ಕೊಲೇಜಿನಲ್ಲಿ ಚರಿತ್ರೆಯನ್ನು ಕಲಿಸುತ್ತಲಿದ್ದ ಮಿ। ಟಿ। ಡೆನ್‌ಹೆಮ್‌ರ ಬದಲಿಗೆ ರಾ। ಸಿ ಆರ್ ರಡ್ಡಿಯವರನ್ನು ನೇಮಕಮಾಡಿರುವರು.

ಸಿಡುಬು ರೋಗದಿಂದ ಮದ್ರಾಸು ಸಂಸ್ಥಾನದಲ್ಲಿ ೧೯೦೭-೦೮ನೇ ವರುಷಕ್ಕಿಂತ ೧೯೦೮-೦೯ನೇ ವರುಷದಲ್ಲಿ ಮೃತಪಟ್ಟ ಜನರ ಸಂಖ್ಯೆಯು ಕಡಿಮೆಯಾಗಿರುವುದು ೧೯೦೭-೦೮ನೇ ವರುಷದಲ್ಲಿ ೨೩,೭೬೦ ಜನರೂ ೧೯೦೮-೦೯ನೇ ವರುಷದಲ್ಲಿ ೨೦,೨೧೭ ಜನರೂ ಈ ರೋಗದಿಂದ ಮೃತಪಟ್ಟಿರುವರು

ದಕ್ಷಿಣಕನ್ನಡ.

ಸ್ವೀಕಾರ ಉಡುಪಿ ಪ್ರಭಾಕರ ಮುದ್ರಾಲಯದಲ್ಲಿ ರಚಿಸಲ್ಪಟ್ಟ 'ಶ್ರೀ ಕೃಷ್ಣ ಜನ್ಮಾಷ್ಟಮೀ ವ್ರತ ಕಥೆ' ಬೆಂಗಳೂರು ಮ। ರಾ। ರಾ। ಸಿಂಗಟೇರೆಯಲ್ಲಿರುವ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳಿಂದ ರಚಿಸಲ್ಪಟ್ಟ 'ದೇವರ ಸೇವೆ' ೧ನೇ ಭಾಗ, ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು.

ತಿದ್ದುವಡಿ ಕಳೆದ ಸಂಚಿಕೆಯಲ್ಲಿ ಮಂಗಳೂರು ವೃತ್ತಾಂತದಲ್ಲಿ ಶಿಶುಹತ್ಯವನ್ನು ಮಾಡಿದವನು "ಲಕ್ಷ್ಮೀ ತಂತ್ರಿ'ಯಲ್ಲ ಅನಂತ ತಂತ್ರಿಯೆಂಬವನು

ಮಂಗಳೂರು ಕಳೆದವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣವಾಯಿತು

ಇಲ್ಲಿಯ ತಾಲೂಕು ಸ್ಟೇಶನರಿ ಮೇಜಿಸ್ಟ್ರೇಟರ ಕಛೇರಿಯನ್ನು ಇದೇ ಕಳೆದ ತಾ ೭ನೇ ಸೋಮವಾರ ಮೊದಲು ಡಿಸ್ಟ್ರಿಕ್ಟ್ ಫ್ರೆಂಡ್ಡ ಕಮ್ಪೌಂಡಿಗೆ ಒಪ್ಪಿಸಿರುವರು

ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಉಪ್ಪುಂದ ಗ್ರಾಮದ ಪಟೇಲರ ಮೇಲೆ ಲಂಚ ತಿಂದುದಾಕ್ಕಾಗಿ ತನಿಖೆ ನಡೆಯುತ್ತಿದ್ದ ಕ್ರಿಮಿನಲ್ ಮೊಕದ್ದಮೆಯನ್ನು ತೆಗೆದುಹಾಕಿರುವರು

ಈ ತಿಂಗಳ ೨೦ನೇ ತಾರೀಕಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಸಭೆ ಕೂಡುವುದಾಗಿ ಕೇಳುತ್ತೇವೆ

ನಿನ್ನೆ ಬೆಳಗ್ಗೆ ಸುಮಾರು ೭ ಗಂಟೆಗೆ ಬೋಳಾರದಲ್ಲಿ ಒಬ್ಬ ಮಿಶನ್ ಜಾತಿಯ ಹುಡುಗಿಯು ಬಾವಿಯಲ್ಲಿ ಬಿದ್ದು ಮುಳುಗುತ್ತಿರುವಾಗ್ಯೆ ಅಲ್ಲಿಯೇ ಸಮೀಪದಲ್ಲಿದ್ದ ಕಂಟ್ರಾಕ್ಟರ್ ದೂಮಪ್ಪ ಎಂಬವರು ಅವಳನ್ನು ಭಾವಿಯಿಂದ ಮೇಲಕ್ಕೆ ತೆಗೆದರು ಬಾವಿಗೆ ಆವರಣವಿಲ್ಲದಿರುವದೇ ಈ ಅಪಾಯದ ಮುಖ್ಯ ಕಾರಣವು

ಕಾಸರಗೋಡು ಇದೇ ಕಳೆದ ಜುಲಾಯಿ ತಾ ೧೬ನೇ ಸಂಚಿಕೆಯಲ್ಲಿ ಪ್ರಕಟಿಸಿದ ಇಲ್ಲಿಯ ವ್ಯಾಕ್ಸಿನೇಷನ್ ಡಿ। ಇನ್ಸ್‌ಪೆಕ್ಟರ್ ಮ. ರಾ ಸೇಶಯ್ಯರಲ್ಲಿ ಕಳವು ಮಾಡಿದ ಇಬ್ಬರು ಸಣ್ಣ ಪೋರರನ್ನು ನಮ್ಮ ಡಿ। ಮೇಜಿಸ್ಟ್ರೇಟರವರು ತನಿಖೆಯಿಂದ ೧ ವರುಷದವರೆಗೆ ಒಳ್ಳೇ ನಡತೆ ಬಗ್ಯೆ ರೂ. ೨೫-೨೫ರ ಜಾಮೀನು ತೆಗದುಕೊಂಡು ಬಿಟ್ಟಿರುತ್ತಾರೆ. ಕಳವಿನ ಸೊತ್ತು ಸಿಕ್ಕಿದ ಸ್ಥಳದ ಯಜಮಾನಿ ಹೆಂಗಸನ್ನು ಪ್ರಥಮತಾ ಸ್ಟೇಶನರಿ ಮೇಜಿಸ್ಟ್ರೇಟರೇ ಖುಲಾಸು ಮಾಡಿರುವರು.

ಇನ್ನು ಸುಮಾರು ೨೫ ಬೇಗಾರಿ ಕಳ್ಳ ಹುಡುಗರು ಈ ಪೇಟೆಯಲ್ಲಿ ನಿರುದ್ಯೋಗಿಗಳಾಗಿ ಅಲೆದಾಡುತ್ತಾರಾಗಿ ಸದರಿ ಸಂಚಿಕೆಯಲ್ಲಿಯೇ ಪ್ರಸ್ತಾಪಿಸಿಯದಷ್ಟೆ. ಆದರೆ ಇದೇ ಕಳೆದ ಅಗೋಸ್ತು ತಿಂಗಳ ತಾ. ೨೭ನೇ ದಿವಸದಲ್ಲಿ ಡಿಪ್ಯುಟಿ ಮೇಜಿಸ್ಟ್ರೇಟರ ಖಚೇರಿಯ ಮುಂದೆ ಸಾವಿರಾರು ಜನ ಕೂಡಿ ಅಬ್ಕಾರಿ ಗುತ್ತೆ ಏಲಾಮಿನ ಸಮಯದಲ್ಲಿ ೪ ಜನ ಹುಡುಗರು ಸೇರಿ ಒಬ್ಬ ಬಿಲ್ಲವನ ಸೆರಗಿಗೆ ಕಟ್ಟಿರುವ ರೂ ೧೫ನ್ನು ಬಿಚ್ಚಿ ಪಲಾಯನವಾದ ಕೂಡಲೇ ಆತನಿಗೆ ಗೊತ್ತಾಗಿ ತಲಾಸಿಗೆ ಪ್ರಯತ್ನಪಟ್ಟನು ಈ ಸಂದರ್ಭದಲ್ಲಿ ಅಲ್ಲಿ ಹಾಜರಿರುವ ಕಸಬಾ ಉಗ್ರಾಣಿಯು ಗುಮಾಸ್ತಿನ ಮೇಲೆ ಸದರಿ ಕಳ್ಳ ಹುಡುಗರ ಪೈಕಿ ಇಬ್ಬರನ್ನು ಹಿಡಿದು ಕಳವು ಮಾಡಿದ ರೂ ೧೫ ಪೈಕಿ ೧೦ ರೂಪಾಯಿ ಚಿಲ್ಲರೆ ಸಿಕ್ಕಿತು ಬಾಕಿ ಇಷ್ಟರಲ್ಲಿ ಬೇರೆಯವರ ಕೈಗೆ ಸೇರಿತು ಬಳಿಕ ಪೋಲೀಸಿನವರ ಸಾಹಸದಿಂದ ೪ ಜನ ಹುಡುಗರನ್ನೂ ಕೈದು ಮಾಡಿ ಮೇಜಿಸ್ಟ್ರೇಟರ ಮುಂದೆ ಹಾಜರು ಮಾಡಿ ತನಿಖೆ ನಡೆಯುತ್ತದೆ ಸದರಿ ನಾಲ್ವರ ಪೈಕಿ ಒಬ್ಬನು ಸುಮಾರು ೧೮ ವರುಷ ಪ್ರಾಯದವನಾಗಿ ಅನೇಕ ಸರ್ತಿ ಚಿಲ್ಲರೆ ಕಳವು ಮಾಡಿ ಇತ್ತಲಾಗೆ ಕಣ್ಣಾನ್ನೂರ ಜೈಲಿನಲ್ಲಿ ೯ ತಿಂಗಳ ಶಿಕ್ಷೆ ಅನುಭವಿಸಿ ಬಂದ ನಂತರ ಮಾಡಿದ ಪ್ರಥಮ ಕಳವು ಇದಾಗಿರುತ್ತದೆ ಇಂಥಾ ಕಳ್ಳ ಹುಡುಗರ ಮೇಲೆ ಗ್ರಾಮಾಧಿಕಾರಿಗಳೂ ಪೋಲಿಸ್ ಅಧಿಕಾರಿಗಳೂ ವಿಶೇಷ ದೃಷ್ಟಿ ಇಡುವದು ಅತ್ಯಗತ್ಯವೇ ಸರಿ

ಸಪ್ಟಂಬರ ತಾ ೧೦ನೇ ವರೆಗೆ ಮಳೆಯು ರಾತ್ರಿ ಹಗಲೂ ಅಗ್ಯಾಗ್ಯೆ ಚನ್ನಾಗಿ ಸುರಿಯಿತು. ಬೆಳೆಯು ಒಲ್ಲ ಕ್ರ ೭ ಯಾ ೧೦ ದಿವಸಗಳಲ್ಲಿ ಕಟಾವಾಗಲಿಕ್ಕೆ ಸಾಕು ಬಿಲಾಯಿ ತಿಂಗಳಲ್ಲಿ ಜೋರಾಗಿ ಬಂದ ಮಳೆ ನೆರೆಯಿಂದ ಕೊಳತು ಹೋದ ಕೆಲವು ಕಡೆಗಳ ಹೊರತು ಬಾಕಿ ಕಡೆ ಎಲ್ಲಾ ಉತ್ತಮ ಬೆಳೆಯಾಗಿರುತ್ತದಾಗಿ ಕೇಳುತ್ತೇವೆ

ಪುತ್ತೂರು ಪುತ್ತೂರು ಡಿವಿಜನ್ ರೆವೆನ್ಯು ಇನ್ಸ್‌ಪೆಕ್ಟರು ಮ ಕೆ ಲಕ್ಷ್ಮಣ ರಾಯರಿಗೆ ಮಂಗಳೂರು ತಾಲೂಕಿಗೆ ವರ್ಗಾವಣೆಯಿಂದ ಇವರ ಬದಲಿಗೆ ಜೆ. ಕೃಷ್ಣ ಪೈಯವರಿಗೆ ಮೊಕ್ತೆಸರು ಆಗಿದ್ದಾಗಿಯೂ, ಇಲ್ಲಿಯ ತಾಲೂಕು ಕ್ಲಾರ್ಕನ ಜಾಗೆಗೆ ಮುಕುಂದ ರಾಯರಿಗೆ ಕಾರ್ಕಳದಿಂದ ತಾಲೂಕು ಅಬ್ಕಾರಿ ಹೆಡ್ ಕ್ಲಾರ್ಕ ಕೆಲಸಕ್ಕೆ ನೇಮಕವಾಗಿರುವದಾಗಿಯೂ ತಿಳಿದು ಬರುತ್ತದೆ

ಕಳೆದ ಅಗೋಸ್ತು ಸಂಚಿಕೆಯಲ್ಲಿ ತಿಳಿಸಿದ ಬೆಳ್ಳಿಪ್ಪಾಡಿ ಗ್ರಾಮದ ಅಮ್ಮಿತಾಳಿ ಎಂಬವನ ಮೇಲೆ ಆಗ ಪಿರಿಯಾದಿಯು ಇಲ್ಲಿಯ ಮೇಜಿಸ್ಟ್ರೇಟ ಕೋರ್ಟಿನಲ್ಲಿ ವಿಚಾರಣೆಯಾಗಿ ಮುದ್ದೈಲೆಗೆ ಖುಲಾಸ ಹಡಿಸಿದ್ದಲ್ಲದೆ, ಸುಳ್ಳು ಪಿರಿಯಾದಿ ಮಾಡಿದ ಆ ಮುದ್ದೈಗಳಿಗೆ ೧೫ ರೂಪಾಯಿ ಜುಲ್ಮಾನೆ ಮಾಡಿ ಸದರಿ ಹಣವನ್ನು ಮುದ್ದೈಲೆಯಿಗೆ ಪರಿಹಾರದ್ರವ್ಯವಾಗಿ ಕೊಟ್ಟರೆಂದು ತಿಳಿದು ಬರುತ್ತದೆ

ಪುತ್ತೂರು ಸಮೀಪ ನರಿಮೊಗ್ರು ರಿಜರ್ವಿನಲ್ಲಿ ಫೋರೆಸ್ಟ್ ಇಲಾಖೆಯವರು ಕಡಿದು ದಾಸ್ತಾನು ಮಾಡಿದ ಕಟ್ಟಿಗೆಯು ಕಳೆದ ಬೇಸಿಗೆಯಲ್ಲಿ ಪುತ್ತೂರಿಗೆ ತಂದಿರುವರು ಹೆಚ್ಚಾಗಿ ಕಾಡುಗೇರು ವಗೈರೆ ಕಾಡುಜಾತಿ ಮರವೆಂತ ಇಲ್ಲಿಯ ನಿವಾಸಿಕರು ಖ್ಯಾಸಮಾಡದೆ ಅದು ಬಾಕಿ ಉಳಿದಿರುತ್ತದೆ ಆದರೆ ಅಂಥಾ ಕಟ್ಟಿಗೆಯನ್ನು ಉಪ್ರಂಗಡಿಗಾಗಿ ಮಂಗಳೂರಿಗಾಗಲಿ ಸಾಗಿಸುವ ವಿಲೆವಾರಿ ಮಾಡುವ ಬಗ್ಯೆ ಇಲ್ಲಿಯ ರೇಂಜರೂ ಅ. ಕನ್ಸರವೇಟರೂ ಕೂಡ ಉಪ್ರಂಗಡಿಗೆ ಇದೇ ತಾ. ೭ಲ್ಲು ಹೋಗಿರುವರು.

ಪುತ್ತೂರು ಡಿವಿಜನ್ ಡಿಪ್ಯುಟಿ ಮೆಜಿಸ್ಟ್ರೇಟರಲ್ಲಿ ರಾ। ಚಂದಾವರ ರಾಘವೇಂದ್ರ ರಾಯರವರ ಮೇಲೆ ದಾಖಲಾದ ಮಾನನಷ್ಟದ ದಾವೆಯಲ್ಲಿ ರಾಘವೇಂದ್ರ ರಾಯರು ೧೦೦ ರೂಪಾಯಿ ಮಾನನಷ್ಟವನ್ನು ತೆರಬೇಕೆಂತ ತೀರ್ಮಾನಿಸಿತ್ತಷ್ಟೆ. ಈ ತೀರ್ಮಾನದ ಮೇಲೆ ಡಿಸ್ಟ್ರಿಕ್ಟ್ ಜಡ್ಜರಲ್ಲಿ ಅಪೀಲಾಗಿ ಡಿಪ್ಯೂಟಿ ಮೆಜಿಸ್ಟ್ರೇಟರವರ ತೀರ್ಮಾನವನ್ನು ರದ್ದು ಪಡಿಸಿರುವರು. ಮಾನನಷ್ಟವಾಗಿ ರಾ। ರಾಘವೇಂದ್ರ ರಾಯರಿಂದ ವಸೂಲು ಮಾಡಲ್ಪಟ್ಟ ರೂ. ೧೦೦ ಅವರಿಗೆ ಪುನಹ ತೆರಬೇಕೆಂತ ಸಹಾ ಅಪೀಲಿನಲ್ಲಿ ತೀರ್ಮಾನಿಸಿರುತ್ತದೆ

—o—

ಕುಂಡಡ್ಕ ನಮ್ಮ ಇಲ್ಲಿಯ ಜಮೀನ್‌ದಾರ ಗುಡ್ಡಪ್ಪರೈಗಳವರು ಇತ್ತಲಾಗೆ ಮಂಗಳೂರಿಗೆ ಹೋದವರು ಕೆನರಾ ಹ್ಯಾಸ್ಕೂಲಿಗೆ ದಯಮಾಡಿ ಅಲ್ಲಿ ಇರುವ ಪಟವಗೈರೆಗಳನ್ನು ನೋಡಿ ಆನಂದಪಟ್ಟು ಅದೇ ರೀತಿಯ ೭೩ ಪಟಗಳನ್ನು ಇಲ್ಲಿಯ ಶಾಲೆಗೆ ತಂದಿರುವರು. ರೈಗಳವರು ಶಾಲೆ ವಿಷಯ ಹೆಚ್ಚು ಮನಸ್ಸು ಇಟ್ಟಿರುವರೆಂಬದಕ್ಕೇನೂ ಸಂದೇಹವಿಲ್ಲ

ಬಂಟ್ವಾಳ ಇಲ್ಲಿಯ ಜಮೀನುದಾರರೂ ಧನಿಕರೂ ಆದ ಒಬ್ಬ ಸಾರಸ್ವತರ ಮನೆಯಲ್ಲಿ ಕೆಲವು ಕಾಲದಿಂದ ಒಬ್ಬ ಸಾರಸ್ವತ ವಯೋವೃದ್ಧರು ಬಿಡಾರವಿದ್ದರು ಇವರು ಸುಮಾರು ೩, ೪ ಸಾವಿರ ರೂಪಾಯಿ ಕ್ರಯಬಾಳುವ ಚಿನ್ನದ ಆಭರಣಗಳೇ ಮೊದಲಾದವುಗಳಿದ್ದ ಒಂದು ಪೆಟ್ಟಿಗೆಯನ್ನು ಕೆಲವು ಕಾಲ ಮೊದಲು ಮನೆಯ ಯಜಮಾನರ ಜಪ್ರತೆಯಲ್ಲಿ ಸದರಿ ವಯೋವೃದ್ಧರು ಇಟ್ಟಿದ್ದರಂತೆ ಈ ಪೆಟ್ಟಿಗೆಯನ್ನು ಈಗ ಕೆಲವು ದಿವಸಗಳ ಮೊದಲು ಪೆಟ್ಟಿಗೆಯ ಯಜಮಾನರು ಮನೆಯ ಯಜಮಾನರ ಕೂಡೆ ಕೇಳಿದರೂ ಮನೆಯೆಲ್ಲಾ ಹುಡುಕಿದರೂ ನೋಡಲು ಸಿಕ್ಕದೆ ಹೋಗಲು ಈ ವರ್ತಮಾನ ಪೋಲಿಸಿನವರ ತಿಳುವಳಿಕೆಗೆ ಬಂದು ಅವರು ಸದರಿ ಜಮೀನದಾರರ ಮನೆಯಲ್ಲಿ ಜಪ್ತಿಮಾಡಿ ಸಂಶಯ ಕಂಡಲ್ಲಿ ಅಗದು ಸಹ ನೋಡಿದರು ಆದರೆ ಪೆಟ್ಟಿಗೆ ಈ ವರೇಗೆ ಪತ್ತೆಯಾಗಲಿಲ್ಲ ಒಳಗಿನ ಗುಟ್ಟು ಶಿವನೇ ಬಲ್ಲ *B K P*

ಪುಂಜಾಲಕಟ್ಟೆ ಇಲ್ಲಿಯ ಜಮೀನುದಾರನಾದ ... ಮಾಡಿಳೆಯು ಕೆಲವು ದಿವಸಗಳ ಮೊದಲು ಮಧ್ಯರಾತ್ರಿ ಕಾಲದಲ್ಲಿ ಒಬ್ಬ ಗೌಡಸಾರಸ್ವತರ ಮನೆಬಾಗಿಲು ಒಡೆದು ಒಳಕ್ಕೆ ನುಗ್ಗಿ ಎದುರಿಗೆ ಸಿಕ್ಕಿದವರನ್ನೆಲ್ಲ ದೊಣ್ಣೆಯಿಂದ ಹೊಡೆದು ಮನೆಯ ಯಜಮಾನನು ಎಷ್ಟು ಕೇಳಿಕೊಂಡರೂ ಕೇಳದೆ ಅವರನ್ನು ಬಾಯಿಗೆ ಬಂದಂತೆ ಬೈದು ಚನ್ನಾಗಿ ಹೊಡದು ಪರಾರಿಯಾಗಿದ್ದನಂತೆ, ಈ ಕುರಿತು ಬೆಳ್ತಂಗಡಿ ಮೆ. ಕೋರ್ಟಿನಲ್ಲಿ ಫಿರ್ಯಾದು ದಾಖಲಾಗಿ ಮುದ್ದೈಯಾಳೆಯನ್ನು ಕೈದು ಮಾಡಿರುವರಂತೆ ಈ ಮುದ್ದೈಯಾಳೆ ಮೇಲೆ ದಾಖಲಾದ ಫಿರ್ಯಾದಿಗಳಲ್ಲಿ ಇದು ಕೂಡ ೩ ಫಿರ್ಯಾದುಗಳು ತೀರ್ಮಾನಕ್ಕೆ ಬಾಕಿ ಇರುವದಾಗಿಯೂ ಕೇಳುತ್ತೇನೆ ಮುದ್ದೈ ಕಡೆ ಸಾಕ್ಷಿಗಾರರಲ್ಲಿ ಕೆಲವರು ಸಮನ್ಸ್ ಪಡಕೊಂಡರೂ ಮುದ್ದೈಯಾಳೆಯು ಬೆಳ್ತಂಗಡಿಗೆ ಹೋಗುವ ದಾರಿಯಲ್ಲಿ ನಿಂತು ತಮ್ಮ ಮೇಲೆ ಶಿಟ್ಟಾದಾನೆಂಬ ಭೀತಿಯಿಂದ ಹೆಚ್ಚಿನ ಯೋಚನೆಯಲ್ಲಿದ್ದರು ತನ್ಮಧ್ಯ ಮುದ್ದೈಯಾಳೆಯನ್ನು ಕೈದು ಮಾಡಿರುವರೆಂಬ ವರ್ತಮಾನ ಕೇಳಿ ನಿಶ್ಚಿಂತರಾಗಿ ತಮ್ಮ ಪ್ರಯಾಣವನ್ನು ಬೆಳಸಿದರು. *B.K.P.*

—o—

ಮುಲ್ಕಿ. ಶಾಲಾ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾಗಿರುವ ಮ। ಕೃಷ್ಣರಾಯರವರು ಕ್ಷೇತ್ರದ ಆಯಾ ಎಲಿಮೆಂಟರಿ ಶಾಲೆಗಳನ್ನು ಪರೀಕ್ಷಿಸುತ್ತಾ ಉಪಾಧ್ಯಾಯರ ಮೆಹನತನ್ನೂ ಮಕ್ಕಳ ಕುಶಲತ್ವಗಳನ್ನೂ ಕಂಡು ಹರ್ಷಿತರಾಗಿರುವರು.

ಇಲ್ಲಿಗೆ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾಗಿ ಮೊಕರ್ರೂರಾಗಿ ಬಂದಿದ್ದ ರಾ। ಬಿ। ರಾಮರಾಯರು ಮಂಗಳೂರ ಟೌನ್ ಚಾರ್ಜು ನೋಡುವ ಬಗ್ಯೆ ಪುನಃ ಹಿಂದೆ ಕರೆಯಲ್ಪಟ್ಟಿರುವರು.

ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಯ ಹೊಸ್ಪಿಟಲ್ ಅಸಿಸ್ಟಾಂಟರಾದ ಕೆ ರಾಮರಾಯರವರ ಚಾತುರ್ಯದಿಂದ ಕ್ಷೇತ್ರಕರಿಗೆ ಮಹಾ ಪ್ರಯೋಜನವು ಉಂಟಾಗುತ್ತದೆಂದು ಹೇಳಬಹುದಾದರೂ ಮೇಲಾಧಿಸರರು ನಮ್ಮ ದಾಕ್ಟ್ರರರನ್ನು ಆಗ್ಯಾಗ್ಯೆ ಉಡ್ಪಿಗೂ, ಮಂಗಳೂರಿಗೂ ಬದಲಿ ನೋಡುವ ಒಗ್ಯೆ ಕಳುಹಿಸುವದರಿಂದ ಕ್ಷೇತ್ರದ ರೋಗಿಷ್ಟರಿಗೆ ಉಂಟಾಗುವ ತೊಂದರೆಯನ್ನು ಹೇಳಿ ಪೂರೈಸದು ಮುಂದಕ್ಕೆ ಮೇಲಾಧಿಸರರು ತದ್ರೀತಿ ವರ್ತಿಸದೆ ನಮ್ಮವರನ್ನು ನಮ್ಮಲ್ಲಿಯೇ ಇರಗೊಡಿಸಬೇಕಾಗಿ ಬಿನ್ನೈಸುವೆವು

ಉಡುಪಿ. ಮಘಾ, ಹುಬ್ಬಾ ನಕ್ಷತ್ರಗಳ ಮಳೆಗಳು ಸರಿಯಾಗಿ ಒಂದುದರಿಂದ ಈ ವರುಷದ ಕಾರ್ತಿ ಬೆಳೆಯು ಎಲ್ಲಾ ಕಡೆಯಲ್ಲಿಯೂ ಚನ್ನಾಗಿರುವದು

ತಾ ೭ರಿಂದ ಬೊಂಬ್ಯಾಯಿಂದ ಸ್ಟೀಮರು ಕ್ರಮವಾಗಿ ಮಲ್ಪೆ ಬಂದರಕ್ಕೆ ಒರುವುದಕ್ಕೆ ಪ್ರಾರಂಭವಾಗಿದೆ ಯಥಾ ಪ್ರಕಾರ ವ್ಯಾಪಾರವು ಪುನರುಜ್ಜೀವಿಸುತ್ತಿರುವದು

ಕೃಷ್ಣಾಷ್ಟಮಿ ಮರುದಿವಸ ವಿಟ್ಲಪಿಂಡಿ ಎಂಬ ಮೊಸರು ಕುಡುಕೆ ಹಬ್ಬವನ್ನು ಬಹು ವಿಜೃಂಭಣೆಯಿಂದ ಆಚರಿಸಿದರು ಆ ದಿವಸ ಜರಗುವ ಅನೇಕ ತರಧ ಆಟಗಳಲ್ಲಿ ಒಂದು ಯಾವದೆಂದರೆ— ಒಂದು ಹಸಿ ಅಡಿಕೆ ಮರವನ್ನು ನಯವಾಗಿ ಹೆರಸಿ ಚನ್ನಾಗಿ ಜಾರುವಂತೆ ಎಣ್ಣೆ ಮೊದಲಾದವನ್ನು ಹಚ್ಚಿ ತುದಿಗೆ ಒಂದು ವಸ್ತ್ರದಲ್ಲಿ ಕೆಲವು ಹಣವನ್ನು ಕಟ್ಟಿ, ನೆಟ್ಟಗೆ ನಡುವರು. ಅದನ್ನು ತೆಗೆಯುವದಕ್ಕೆ ಅನೇಕರು ಹತ್ತಿ ಹತ್ತಿ ಇಳಿದು ಸೋತು, ಕೊನೆಗೆ ಹ್ಯಾಗೂ ಒಬ್ಬನು ಆ ಹಣವನ್ನು ತೆಗದುಕೊಂಡು ಹೋಗುವನು ಈ ವರುಷ ಹಾಗೆಯೇ ಒಬ್ಬನು ಹತ್ತಿ ವಸ್ತ್ರ ಬಿಚ್ಚಿ ಇಳಿಯುತ್ತಿರುವಾಗ ಜಾರಿ ಹೋಗಿ ಕೆಳಗೆ ಬಿದ್ದ ಮನೇ ದಿವಸದಲ್ಲಿ ಸತ್ತು ಹೋದನು

ತೆಂಕು ಪೇಟೆ (ಯಜುರ್ವೇದಿ) ಕೃಷ್ಣ ಉಪಾಧ್ಯಾಯ ಎಂಬವನು ಪಡುಬಿದ್ರೆ ಬೀಮಾಚಾರ್ಯ ಎಂಬವರ ಸುಮಾರು ೧೦೦ ರೂಪಾಯಿ ಬೆಲೆ ಬಾಳುವ ಸೊತ್ತುಗಳಿರುವ ಒಂದು ದೇವತಾರ್ಚನೆ ಪೆಟ್ಟಿಗೆಯನ್ನು ಕಳವು ಮಾಡಿದ ಸಂಬ್ರವನ್ನು ಕಾರ್ಕಳ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಈ ತಾ ೧೫ಕ್ಕೆ ತನ್ನಿಗೆ ಇಟ್ಟಿರುವರು

ಪರಾ ವಿದ್ಯಾ (T S.) ಸಂಘದ ಇನ್ಸಪೆಕ್ಟರರಾದ ಮ ರಾ ಜಂಗಂ ಕೋಟೆ ಶ್ರೀನಿವಾಸ ರಾಯರು ಇಲ್ಲಿಯ ಕ್ಲಬ್ಬಿನಲ್ಲಿ ತಾ ೯ರಿಂದ ೧೧ರ ವರೆಗೆ ೪ ಉಪನ್ಯಾಸಗಳನ್ನು ಮಾಡಿದರು ಪ್ರಥಮ ದಿವಸದಲ್ಲಿ "ಥಿಯಾಸಫಿ" ಎಂಬದು ಯಾವ ಮತವನ್ನೂ ವಿರೋಧಿಸದೆ ಸನಾತನವಾದ ಹಿಂದು ಧರ್ಮವನ್ನೇ ವಿಶೇಷವಾಗಿ ಬೋಧಿಸುವ ಬ್ರಹ್ಮ ವಿದ್ಯೆ ಎಂತಲೂ, ೨ನೇ ದಿವಸ ಧರ್ಮದ ವಿಷಯವಾಗಿಯೂ, ೩ನೇ ದಿವಸ ಕರ್ಮ ಮತ್ತು ಪುರುಷ ಪ್ರಯತ್ನದ ವಿಷಯದಲ್ಲಿಯೂ, ೪ನೇ ದಿವಸ ಗೃಹಸ್ಥಾಶ್ರಮ ಧರ್ಮ ಮತ್ತು ವಿವಾಹದ ವಿಷಯದಲ್ಲಿಯೂ, ಉಪನ್ಯಾಸವಾಗಿತ್ತು ಈ ಎಲ್ಲಾ ಉಪನ್ಯಾಸಗಳನ್ನು ಚಲೋ ಕನ್ನಡ ಭಾಷೆಯಲ್ಲಿಯೇ ಮಾಡಿದರು

ಜಿಲ್ಲಾ ಕಲ್ಲೆಕ್ಟರ್ ಸಾಹೇಬರು ತಾ ೧೫ಲ್ಲು ಸರ್ಕಿಟಿನಲ್ಲಿ ಇಲ್ಲಿಗೆ ಬಂದಿರುವರು

ಮದ್ರಾಸ್ ಗವರ್ನರ್ ಸಾಹೇಬರ ಒಬ್ಬನೇ ಕುಮಾರನ ಅಕಾಲ ಮರಣದ ದುಃಖವಾರ್ತೆಯನ್ನು ಕೇಳಿ ಇಲ್ಲಿಯ ಮಹಾಜನಗಳು ಒಂದು ಸಭೆ ಸೇರಿ, ಗವರ್ನರ್ ಸಾಹೇಬರಿಗೆ ಅನುತಾಪದ ಒಂದು ತಂತಿವಾರ್ತೆಯನ್ನು ಈ ತಾ. ೧೫ಲ್ಲು ಕಳುಹಿಸಿಕೊಟ್ಟರು.

ಇಲ್ಲಿಯ ಸಂಸ್ಕೃತ ಪಾಠಶಾಲೆಯ ೧ನೇ ವರ್ಷೋದ್ವರ್ಧಂತಿಯನ್ನು ಈ ತಾ. ೨ಲ್ಲು ಆಚರಿಸಿದರು. ಶಾಲೆಯ ರಿಪೋರ್ಟಿನಿಂದ ಶಾಲೆಯು ಇನ್ನೂ ಅಭಿವೃದ್ಧಿಯನ್ನು ಹೊಂದುವ ಚಿನ್ಹೆ ಕಾಣದಿರುವದು ತುಂಬಾ ಶೋಚನೀಯವು.

ವಿವಿಧ ವಿಷಯಗಳು

ಇಲಿಗಳ ಕುಷ್ಠರೋಗವು ಹಲವು ವರುಷಗಳಿಂದೆ ಹಿಂದೂಸ್ಥಾನದಲ್ಲಿಯೂ ಅಮೇರಿಕದ ನ್ಯೂಯೋರ್ಕ್ ಪಟ್ಟಣದಲ್ಲಿಯೂ ಕುಷ್ಠರೋಗದ ರೇಣು ಯಾ ಬೀಜಗಳನ್ನು ಇಲಿಗಳಲ್ಲಿ ಕಂಡುಕೊಂಡಿದ್ದರು ಈ ವರುಷದ ಆದಿಭಾಗದಲ್ಲಿ ಜಪಾನದೇಶದ ಡಾಕ್ಟರ್ ಕಾವಮೂರಾ ರೊಕುರೋ ಎಂಬವರು ಸಹಾ ಈ ರೋಗದ ಬೀಜಗಳನ್ನು ಇಲಿಗಳಲ್ಲಿ ಕಂಡಿರುವರು ಇತ್ತಲಾಗೆ ಇನ್ನೊಬ್ಬ ಜಪಾನ ಡಾಕ್ಟರನಿಗೆ ಸಹಾ ಇದೇ ರೀತಿ ಈ ರೋಗದ ಬೀಜಗಳು ಇಲಿಗಳಲ್ಲಿ ದೊರಕಿರುವವು ಮೂರು ಯಾ ನಾಲ್ಕು ಸಾವಿರ ಇಲಿಗಳಲ್ಲಿ ಒಂದಕ್ಕೆ ಹೀಗೆ ಕುಷ್ಠರೋಗದ ಬೀಜಗಳಿರುವವೆಂದು ಈ ಡಾಕ್ಟರರು ಪರಿಶೋಧಿಸಿರುವರು ಈ ಬೀಜಗಳಿರುವ ಇಲಿಯ ನರಗಳು ಬಾತುಕೋಗಿರುತ್ತವೆ ಆದರೆ ಪ್ಲೇಗು ರೋಗಕ್ಕೆ ಸಹಾ ಈ ರೀತಿ ನರಗಳು ಇಲಿಗಳಲ್ಲಿ ಬಾತುಕೋಬಹುದಾದರೂ ಪ್ಲೇಗ್ ರೋಗದ ನರಗಳನ್ನು ಈ ರೋಗದ ನರಗಳಿಂದ ಪ್ರತ್ಯೇಕಿಸ ಒಹುದಂತೆ ಮನುಷ್ಯರಲ್ಲಿರುವ ಕುಷ್ಠರೋಗದ ಕ್ರಿಮಿ ಯಾ ಬೀಜಗಳನ್ನೂ, ಇಲಿಗಳಲ್ಲಿರುವ ಈ ರೋಗದ ಬೀಜಗಳನ್ನೂ ಈ ವರೆಗೆ ಸರಿಹೋಲಿಸಿದ್ದಲ್ಲಿ ಒಂದೇ ಆಕಾರವುಳ್ಳದ್ದಾಗಿರುವವು ಆದರೆ ಗುಣಭೇದವನ್ನು ಈ ವರೆಗೆ ಪರೀಕ್ಷಿಸಲಿಲ್ಲ ಜಪಾನಿನ ಡಾಕ್ಟರ್ ಕ್ಯೊಯಾಮಾ ಎಂಬವರು ಇಲಿಗಳಲ್ಲಿರುವ ಈ ಕುಷ್ಠರೋಗದ ಬೀಜಗಳನ್ನು ಮಂಗಗಳಿಗೆ ಹಾಕಿ ಪರೀಕ್ಷಿಸುತ್ತಿರುವರು ಈ ಪರಿಶೋಧನೆಯನಂತರ ಮನುಷ್ಯರ ಕುಷ್ಠರೋಗದ ಬೀಜಗಳನ್ನು ಮೃಗಗಳಿಗೆ ಹಾಕಿ ಎರಡರ ಭೇದಗಳನ್ನು ಕಂಡುಹಿಡಿಯುವರಂತೆ

ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ಲೇಗ್ ರಹದಾರಿ ಕ್ರಮವನ್ನು ತೆಗೆದುಹಾಕುವ ವಿಷಯವನ್ನು ಮದ್ರಾಸ್ ಸರಕಾರದವರು ಪರ್ಯಾಲೋಚಿಸಲೇ ಬೇಕೆಂತ ಪ್ರಕಟಿಸಿರುವದಷ್ಟೆ ಈ ವಿಷಯಕ್ಕೆ ಸರಕಾರವು ಯಾವ ರೀತಿ ಗಮನ ಕೊಡುತ್ತಿರುವರೆಂದು ಅವರು ಬಿನ್ನಿ ಎಂಡ್ ಕೊ ಮತ್ತು ಮದ್ರಾಸ್ ಮುನಿಸಿಪಲ್ ಪ್ರೆಸಿಡೆಂಟರ ಈ ವಿಷಯವಾದ ಪತ್ರಗಳಿಗೆ ಕೊಟ್ಟ ಉತ್ತರಗಳಿಂದ ತಿಳಿದು ಒರುವುದು ಮುಂಬಯಿ ಸಂಸ್ಥಾನದ ಅನೇಕ ಪಟ್ಟಣಗಳಲ್ಲಿ ಪ್ಲೇಗ್‌ರೋಗವು ಒಹಳವಾಗಿ ತಲೆದೋರುತ್ತಿರುವಾಗ ಮದ್ರಾಸ್ ಪಟ್ಟಣದಲ್ಲಿಯೂ ಮದ್ರಾಸ್ ಸಂಸ್ಥಾನದ ಹಲವು ಜಿಲ್ಲೆಗಳಲ್ಲಿಯೂ ಪ್ಲೇಗ್ ಬಾಧೆಯು ಕಾಣದಿರಲು ಕಾರಣವೇನೆಂಬದನ್ನು ಇತ್ತಲಾಗೆ ಪ್ಲೇಗ್ ಸರ್ವೆ ಕಮಿಶನಿನವರು ಪರಿಶೋಧಿಸುತ್ತಿರುವರು ಪ್ಲೇಗ್ ಕಮಿಶನಿನ ಸೀನಿಯರ್ ಮೆಂಬರರಾದ ಕೆಪ್ಟನ್ ಗ್ಲೆನ್ ಲಿಸ್ಟನ್ ಎಂಬವರು ಈ ಒಗ್ಯೆ ಇತ್ತಲಾಗೆ ಮದ್ರಾಸಿಗೆ ಒಂದಿದ್ದರು "ಪಾಸ್ ಪೋರ್ಟ್" ಯಾ ಪ್ಲೇಗ್ ರಹದಾರಿಯ ಕ್ರಮಗಳು ಈ ಸಂಸ್ಥಾನದಲ್ಲಿ ವಿಶೇಷವಾಗಿ ಜಾರಿಯಲ್ಲಿರುವುದರಿಂದ ಪ್ಲೇಗ್‌ರೋಗದ ಹಬ್ಬುವಿಕೆಯು ಒಹಳಮಟ್ಟಿಗೆ ಈ ಪ್ಲೇಗ್ ರಹದಾರಿಗಳಿಂದ ತಡೆಯಲ್ಪಟ್ಟಿರುವುದೆಂದು ಒಂದು ವೇಳ್ಯ ಈ ಪರಿಶೋಧನೆಯಿಂದ ಕಂಡುಒರಲಿಕ್ಕೂ ಸಾಕೆಂಬದಾಗಿ ನಿರೀಕ್ಷಿಸಲ್ಪಟ್ಟಿರುವದರಿಂದ ಪ್ಲೇಗ್‌ರಹದಾರಿ ಕ್ರಮವನ್ನು ಆ ಪರಿಶೋಧನೆಯ ಫಲಿತಾಂಶವು ಪೂರ್ಣ ಪ್ರಕಟವಾಗುವವರೆಗೆ ತಿದ್ದುವುದು ಯುಕ್ತವಲ್ಲವೆಂತ ಮದ್ರಾಸ್ ಸರಕಾರದವರು ಅಭಿಪ್ರಾಯಪಟ್ಟಿರುವರು. ಮದ್ರಾಸ್ ಬಂದರಕ್ಕೆ ಪ್ಲೇಗ್‌ರೋಗದ ಸೋಂಕಿರುವ ಪ್ರಾಂತ್ಯಗಳ ನಿವಾಸಿಕರಾದ ಪ್ರಯಾಣಿಕರು ಬಂದಿಳಿದರೆ ಅವರ ವಸ್ತ್ರ ಮುಂತಾದವುಗಳನ್ನು ಔಷಧಿ ಉಗಿಯಿಂದ ಶುದ್ಧಪಡಿಸಿದ ಮೇಲೆ ಅಂಥವರಿಗೆ ಪುನಹಾ ಪಾಸ್‌ಪೋರ್ಟುಗಳನ್ನು ಕೊಡುವುದು ಅಗತ್ಯವಿಲ್ಲವೆಂತ ಸೂಚಿಸಿರುವರು.

ವಸ್ತ್ರ ಪರಿಹಾರದ ವ್ಯಾಜ್ಯವು ಮಂಗಳೂರಿನಲ್ಲಿ ಹಂಚು ಕಾರ್ಖಾನೆಯ ಮಾಲಿಕರಾದ ಮೆಸರ್ಸ್ ಮೋರ್ಗನ್ ಎಂಡ್ ಸನ್ಸ್‌ರವರಿಗೂ ರಾಮ ಭಂಡಾರಿ ಎಂಬ ಕ್ಷೌರಿಕನಿಗೂ ಇದ್ದ ದಾವೆಯು ಇತ್ತಲಾಗೆ ಹ್ಯಾಕೋರ್ಟಿನಲ್ಲಿ ತೀರ್ಮಾನವಾಯಿತು. ರಾಮ ಭಂಡಾರಿಯು ಈ ಹಂಚು ಕಾರ್ಖಾನೆಯವರಿಗೆ ತನ್ನ ಆಸ್ತಿಯಲ್ಲಿರುವ ಆವೆ ಮಣ್ಣನ್ನು ಮಾರಿ ಅದನ್ನು ಕಾರ್ಖಾನೆಯವರು ಸಾಗಿಸುತ್ತಿರುವಾಗ ರಾಮಭಂಡಾರಿಯ ಕಡೆಯಿಂದ ಏನಾದರೂ ಅಭ್ಯಂತರವಾದ ಪಕ್ಷದಲ್ಲಿ ಅದರಿಂದಾಗುವ ನಷ್ಟಕ್ಕೆ ಒಂದು ಕರಾರು ಮುಖಾಂತರ ಜವಾಬ್ದಾರಿ ಬರಕೊಟ್ಟಿದ್ದನು ರಾಮಭಂಡಾರಿಯ ವಕ್ಕಲುಗಳು ಹೀಗೆ ಆವೆ ಮಣ್ಣನ್ನು ತೆಗಿಯುತ್ತಿರುವಾಗ ಅಭ್ಯಂತರಪಡಿಸಿದ್ದರಿಂದ ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ರೂ ೫೦೦೦ಕ್ಕೆ ಮೆಸರ್ಸ್ ಮೋರ್ಗನ್ ಎಂಡ್ ಸನ್ಸರವರು, ಈತನ ಮೇಲೆ ದಾವೆ ದಾಖಲು ಮಾಡಿದರು ನಮ್ಮ ಡಿಸ್ಟ್ರಿಕ್ಟ್ ಜಡ್ಜರವರು ದಾವೆಯ ಕಾರಣಗಳನ್ನು ಸ್ಥಿರಪಡಿಸಿಕೊಂಡು ರೂ ೧೦೦೦ ನಷ್ಟವನ್ನು ರಾಮಭಂಡಾರಿಯು ತೆರಬೇಕೆಂತ ತೀರ್ಮಾನಿಸಿದರು ಈ ತೀರ್ಮಾನದ ಮೇಲೆ ಪ್ರತಿವಾದಿ ಕಡೆಯಿಂದ ಅಪೀಲೂ ವಾದಿ ಕಡೆಯಿಂದ ಆಕ್ಷೇಪಣೆಗಳೂ ಹ್ಯಾಕೋರ್ಟಿನಲ್ಲಿ ದಾಖಲಾದವು ವಾದಿ ಕಡೆಯಿಂದ ಒಹುಮಾನಪಟ್ಟ ಎಡ್ವೊಕೇಟ್ ಜನರಲ್‌ರವರೂ ಮ ರಾ| ರಾ| ರಾಮನಾಥ ಶೆಣೈ ಬಿ ಎ ಬಿ ಎಲ್ ಎಡ್ವೊಕೇಟ್ ಇವರೂ ಈ ವ್ಯವಹರಣೆಯನ್ನು ನಡಿಸಿದರು ಹ್ಯಾಕೋರ್ಟಿನವರು ಡಿಸ್ಟ್ರಿಕ್ಟ್ ಜಡ್ಜರವರ ತೀರ್ಮಾನವನ್ನು ಊರ್ಜಿತವಿರಿಸಿ ಅಪೀಲನ್ನೂ ಆಕ್ಷೇಪಣೆಗಳನ್ನೂ ತೆಗದು ಹಾಕಿದರು.

ಖಾಸಗಿ ಆದಾಯವ್ಯಯದ ಲೆಖ್ಖಗಳ ಉಪಯೋಗವು ದೊಡ್ಡ ವ್ಯಾಪಾರಗಳನ್ನು ನಡಿಸುತ್ತಿರುವವರು ಸಹಾ ತಮ್ಮ ಖಾಸಗಿ ಆದಾಯವ್ಯಯದ ಲೆಖ್ಖವನ್ನು ಕ್ರಮವಾಗಿ ಒರೆವುದು ಒಹಳ ಅಪರೂಪ ತಮ್ಮ ಕಾರಖಾನೆಗಳಲ್ಲಿ ಅಥವಾ ತಮ್ಮ ಕೈಕೆಳಗಿರುವ ಸಿಬಂದಿ ಮೊದಲಾದವುಗಳ ಖರ್ಚನ್ನೂ ಇತರ ಅನಾವಶ್ಯಕ ಖರ್ಚನ್ನೂ ತೆಗದುಹಾಕಿ ತಾವು ಕೈಕೊಂಡಿರುವ ವೃತ್ತಿಯಲ್ಲಿ ವಿಶೇಷ ಲಾಭವನ್ನುಂಟುಮಾಡುವ ನಿಪುಣತೆಯಿದ್ದವರಿಗೆ ಸಹಾ ತಮ್ಮ ಖಾಸಗಿ ಲೆಖ್ಖವನ್ನು ಕ್ರಮವಾಗಿ ಒರಿಯಲು ಹೆಚ್ಚಿನ ಅಭಾವವು ಇರುವುದು ಖಾಸಗಿ ಲೆಖ್ಖಗಳನ್ನು ಕ್ರಮವಾಗಿಡುವುದರಿಂದ ಅನಾವಶ್ಯಕ ಖರ್ಚಾಗುವಂಥಾದ್ದನ್ನು ನಾವು ಕಂಡುಹಿಡಿದು ಅಂಥಾ ಖರ್ಚಾಗದಂತೆ ನೋಡಿಕೊಳ್ಳ ಒಹುದು

ಈ ಖಾಸಗಿ ಲೆಖ್ಖಗಳನ್ನಿಡಲು ಆದಾಯ ಮತ್ತು ವ್ಯಯದ ಎರಡೇ ಖಿತಾನೆಗಳಲ್ಲಿ ಎಲ್ಲಾ ಲೆಕ್ಕಾಚಾರವನ್ನು ಸಂಗ್ರಹವಾಗಿ ಒರೆಯ ಬೇಕು ವರುಷದ ಶುರುವಿನಿಂದಲೇ ಖರ್ಚಿನ ಮತ್ತು ಜಮೆಯ ಲೆಖ್ಖಗಳನ್ನು ಈ ಖಿತಾನೆಗಳಲ್ಲಿ ಕ್ರಮವಾಗಿ ಒರೆಯುತ್ತಿರಬೇಕು ದೊಡ್ಡ ಶಹರುಗಳಲ್ಲಿರುವವರು ತಮ್ಮ ಆದಾಯವನ್ನು ಅವರವರು ಯುಕ್ತಕಂಡ ಬೇಂಕುಗಳಲ್ಲಿರಿಸಿ ಖರ್ಚಿಗೆ ಬೇಕಾದಂತೆ ಕ್ರಮವಾಗಿ ಬೆಂಕಿನಿಂದ ಚೆಕ್ಕು ಮುಖಾಂತರ ಹಣ ತರಿಸಿದ್ದಲ್ಲಿ ಖರ್ಚಿನ ಲೆಖ್ಖವು ಒಂದುವೇಳೆ ತತ್‌ಕ್ಷಣ ಬರದಿಡಲಿಕ್ಕಾಗದಿದ್ದರೂ ಖರ್ಚಿನ ಲೆಕ್ಕಾಚಾರವನ್ನು ಈ ಚೆಕ್ಕು ಟಿಪ್ಪಣಿಗಳಿಂದ ಒಂದು ಹಪ್ತೆಗೆ ಒಂದು ಸಲವಾದರೂ ಲೆಖ್ಖ ಪುಸ್ತಕದಲ್ಲಿ ಬರೆದಿಡ ಒಹುದು ಖರ್ಚು ವಿಶೇಷವಾಗಿ ಬೆಳೆಯುತ್ತಿರುವ ಈ ಕಾಲದಲ್ಲಿ ಪ್ರತಿ ಒಬ್ಬನು ತನ್ನ ಆದಾಯ ವೆಚ್ಚಗಳ ಖರ್ಚನ್ನು ಒರೆದಿಟ್ಟಲ್ಲಿ ವರುಷಾಂತ್ಯದಲ್ಲಿ ಯಾವ ಯಾವ ತಿಂಗಳಲ್ಲಿ ವಿಶೇಷವಾದ ಖರ್ಚು ಬೇಕಾಗಿರುವುದೆಂಬದನ್ನು ನಿರ್ಧರಿಸ ಒಹುದು. ವರುಷದ ಶುರುವಿನಲ್ಲಿಯೇ ಇದಕ್ಕನುಗುಣವಾಗಿ ತನ್ನ ಆದಾಯವನ್ನು ಸಂಗ್ರಹಿಸುವರೆ ಇದು ಉತ್ತೇಜನವಾಗುವುದು.

ಅಮೇರಿಕದಲ್ಲಿ ದನ, ಎಮ್ಮೆ ಮೊದಲಾದವುಗಳ ಹಾಲನ್ನು ಕರೆಯಲು ಒಂದು ನವೀನ ಯಂತ್ರವನ್ನು ರಚಿಸಿರುವರು. ೩೦ ಯಾ ೪೦ ದನ ಎಮ್ಮೆಗಳನ್ನು [illegible]

ನ ವ್ಯಾಪಾರವನ್ನು ಮಾಡುವವರಿಗೆ ಹಾಲು ತೆಗಿಯುವರೆ ಜನರನ್ನು ನಿಲ್ಲಿಸುವುದಕ್ಕಿಂತ ಇದರ ಉಪಯೋಗವು ಅಗ್ಗವಾಗಿರುವುದು ಕೆಚ್ಚಲಿನ ತೊಟ್ಟುಗಳಿಗೆ ರಬ್ಬರಿನ ನಳಿಗೆಗಳನ್ನು ಒತ್ತಿ ಹಿಡಿಯುವಂತೆ ಮಾಡಿ ಈ ನಳಿಗೆಗಳ ಮತ್ತೊಂದು ತುದಿಯನ್ನು ಹಾಲುಪಾತ್ರೆಯಲ್ಲಿಟ್ಟು ಪಂಪುಗಳ ಮುಖಾಂತರ ಈ ನಳಿಗೆಗಳಿಂದ ಘಾಳಿಯನ್ನು ಹೀರಿ ತೆಗಿಯುತ್ತಿರುವಾಗ ಹಾಲು ಈ ನಳಿಗೆಗಳಿಂದ ಪಾತ್ರಕ್ಕೆ ಸಮನಾಗಿಳಿಯುವುದು ಇಂಥಾ ಯಂತ್ರಗಳನ್ನು ಉಪಯೋಗಿಸುವುದರಿಂದ ಬಹಳ ಶುದ್ಧವಾದ ರೀತಿಯಲ್ಲಿ ಹಾಲು ದೊರಕುವುದಲ್ಲದೆ ದನ ಎಮ್ಮೆಗಳ ಕೆಚ್ಚಲುಗಳಿಗ ಇದರಿಂದ ಯಾವ ಅಪಾಯವೂ ಉಂಟಾಗದು

ಜ್ಯೋತಿಷಜ್ಞರಾದ ಪಂಡಿತ ಮಿ| ಕ್ಲೆಮೆಂಟ್ ರೆಗ್ಗೆ ಎಂಬವರು ಸೂರ್ಯಗೋಲದ ವಿಷಯ ತಾನು ಕಂಡುಹಿಡಿದ ಸಮಾಚಾರವನ್ನು ಇತ್ತಲಾಗೆ ಪ್ರಕಟಿಸಿರುವರು. ಸೂರ್ಯಗೋಲದಲ್ಲಿ ಒಂದು ತುಫಾನೆದ್ದು ಇದು ಆ ಗೋಲದಲ್ಲಿ ೪೦,೦೦೦ ಮೈಲುಗಳ ವಿಸ್ತಾರಕ್ಕೆ ಹಬ್ಬಿರುವುದೆಂತಲೂ ಈ ಸೂರ್ಯಗೋಲದಲ್ಲಿ ಉಂಟಾದ ತುಫಾನಿನ ನಿಮಿತ್ತ ಭೂಗೋಲದಲ್ಲಿ ಕಂಪನಗಳಾಗುವುವೆಂದೂ ಹೇಳಿರುವರು

ಸ್ವದೇಶಾಭಿಮಾನಿ ಪ ಸಂಗ್ರಹ [illegible] ತಿಂಗಳ ತಾ ೬ನೇ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ ಮ| ರಾ| ರಾ| ಮ ಗೋವಿಂದ ಪೈ ಕೆ ವೈಕುಂಠ ಕಾಮತ್ ಒ ವರದ ರಾವ್, ಒ ಕೃಷ್ಣ ಬಂಡಾರಿ ಇವರ ಸಹಿಗಳಿರುವ ವಿಜ್ಞಾಪನೆಯನ್ನು ಮನ್ನಿಸಿ ರಾ ಅ ಸ ಬ್ರಾಹ್ಮಣರ ಸ್ಮರಣಾರ್ಥವಾಗಿ ಕೆನರಾ ಬಾಲಿಕಾ ಪಾಠಶಾಲೆಗೋಸ್ಕರ ದ್ರವ್ಯ ಸಹಾಯವನ್ನು ವಸೂಲು ಕೊಟ್ಟವರ ಹೆಸರನ್ನು ರಾ ಗೋವಿಂದ ಪೈ ಮತ್ತು ಇತರರು ನಮ್ಮ ಬಳಿಗ ಕಳುಹಿಸಿರುವುದನ್ನು ಈ ಕೆಳಗೆ ಪ್ರಕಟಿಸಿರುವೆವು

ಶ್ರೀಮತಿ ಮಂಗಳೂರು ಕು ಲಕ್ಷ್ಮಿ ಶೆಣೈ ಯವರು ರೂ ೫ ಶ್ರೀಮಾನ್ ಪಂಡಿತ ಬವಾನಿ ಶಂಕರರಾಯರು ರೂ ೧೦ ಸವೂರ ಆನಂದಿ ಬಾಯಿಯವರು ರೂ ೨ ಕಲ್ಯಾಣಿ ಬಾಯಿಯವರು ರೂ ೫ ಇಂದಿರಾ ಬಾಯಿಯವರು ರೂ ೫ ಗಿರಿಜಾ ಬಾಯಿಯವರು ರೂ ೫ ಮ ಶೀತಾ ಬಾಯಿಯವರು ರೂ ೬ ಕ ಪದ್ಮಾವತಿ ಬಾಯಿಯವರು ರೂ ೪ ರುಕ್ಮಾ ಬಾಯಿಯವರು ರೂ ೨ ಸ್ವರ್ಗಸ್ಥ ಅ ಲಕ್ಷ್ಮೀಬಾಯಿಯವರು ರೂ ೪ ಮು ಬವಾನಿ ಬಾಯಿಯವರು ರೂ ೨ ಶ್ರೀದೇವಿ ಶೆಣಾಯಿಣಿಯವರು ಆಣೆ ೮ ಕೆ ಪಿ ಶೀತಾ ಶೆಣ್ಯಾಣಿಯವರು ರೂ ೧೦ ಸತ್ಯಭಾಮಾ ಪಂಡಾರ್ಕಾಣಿಯವರು ರೂ ೧ ಕು ರುಕ್ಮಿಣಿ ಬಾಯಿಯವರು ರೂ ೧ ಅ ರಮಾ ಬಾಯಿಯವರು ಆಣೆ ೮ ಕೆ ಬವಾನಿ ಶೆಣೈಣಿಯವರು ಆಣೆ ೪ ಬೆ ರಾದಾಬಾಯಿಯವರು ಆಣೆ ೮ ಮ ಲಕ್ಷ್ಮಿಪೈಣಿಯವರು ರೂ ೧ ಭಾ ಶಿವರಾಯರ ಪತ್ನಿಯವರು ರೂ ೨ ಸ್ತ್ರಿ ವಿದ್ಯಾಬಿಮಾನಿ ರೂ ೫ ಕೆ ಪಿ. ಸಾವಿತ್ರಾ ಸೇಣಾಯಿಣಿಯವರು ರೂ ೪ ದುರ್ಗಮ್ಮ ಪ್ರಾಣ್ಕೈಣಿಯವರು ರೂ ೨ ವಿಮಲಾ ಬಾಯಿಯವರು ರೂ. ೨ ಕು ಸರಸ್ವತಿ ಬಾಯಿಯವರು ರೂ ೧ ಪ. ಸೌಭದ್ರಿ ಭಂಡಾರ್ಕಿಣಿಯವರು ರೂ ೧. ಕ ವೇದಾವತಿ ಬಾಯಿಯವರು ರೂ ೧ ಶಾಂತೇರಿಯಾನೆ ಸರಸ್ವತಿ ಶೈಣಿಯವರು ರೂ. ೫. ಉ. ಸರಸ್ವತಿ ಬಾಯಿಯವರು ರೂ. ೫ ಮ. ಶೀತಾ ಬಾಯಿಯವರು ರೂ. ೫. ಸ್ವರ್ಗಸ್ಥ ಉಳ್ಳಾಲ ಮೂಕಾಂಬಾ ಬಾಯಿಯವರು ರೂ. ೫೦. ಬ. ರುಕ್ಮಿಣಿ ಪಾಲ್ಗೆಣಿಯವರು ರೂ. ೧. ಮ. ಶ್ರೀದೇವಿ ಶೈಣೆಯವರು ರೂ. ೫. ಮ. ಶ್ರೀದೇವಿ ಕಮ್ತಿಣಿಯವರು ರೂ. ೧. ಉ. ಲಕ್ಷ್ಮಿ ಬಾಯಿಯವರು ರೂ. ೨. ತೊ.

ತುಳಸಿ ಕಮ್ತಿಣಿಯವರು ರೂ. ೧. ಕ. ಶ್ರೀದೇವಿ ಕಮ್ತಿಣಿಯವರು ರೂ ೧ ಮ ಗಂಗ ಪರ್ಬಿಣಿಯವರು ಆಣೆ ೮ ಮ ಕಲ್ಯಾಣಿ ಯಾನೆ ಲಕ್ಷ್ಮಿ ಪೈಣಿಯವರು ರೂ ೩ ಮು ಶೀತ ಕಮ್ತಿಣಿಯವರು ರೂ ೧, ಉ ಸತ್ಯಬಾಮಾ ಕಿಣಿಯವರು ರೂ ೨ ಮ ಕಲ್ಯಾಣಿ ಕಮ್ತಿಣಿಯವರು ರೂ ೫ ಕ ಲಕ್ಷ್ಮಿ ಶೆಣಾಯ್ಣಿಯವರು ರೂ ೨ ಮಿ ಸತ್ಯಭಾಮಾ ಕಮ್ತಿಣಿಯವರು ರೂ ೨ ಮ ಲಕ್ಷ್ಮಿ ಬೆಟ್ಟಣಿಯವರು ರೂ ೧ ಗು ಲಕ್ಷ್ಮಿ ಪರ್ಬಿಣಿಯವರು ರೂ ೨ ಜ ಲಕ್ಷ್ಮಿ ಪೈಣಿಯವರು ರೂ ೧ ಉ ಮ್ಹಾಮ್ಮಾಯಿ ಮಹ್ವಾಲ್ಕೈಣಿಯವರು ರೂ ೫ ಒ ರುಕ್ಮಿಣಿ ಕಮ್ತಿಣಿಯವರು ರೂ ೫ ಮ ಕಮಲಾ ಕಮ್ತಿಣಿಯವರು ರೂ ೧ ಸು ರುಕ್ಮಿಣಿ ಕಮ್ತಿಣಿಯವರು ರೂ ೧ ಕ ಚಂದ್ರಭಾಗಿ ಬಂಡಾರ್ಕಿಣಿಯವರು ರೂ ೧ ಒ ಪದ್ಮಾವತಿ ಶೆಣೈಣಿಯವರು ರೂ ೫ ಒ ಬವಾನಿ ಶೆಣ್ಯಾಣಿಯವರು ರೂ ೧ ಅ ಬವಾನಿ ಬಾಯಿಯವರು ರೂ ೧ ಸ್ತ್ರಿ ವಿದ್ಯಾಭಿಲಾಷಿ ರೂ ೫ ಕು ಲಕ್ಷ್ಮಿ ಪರ್ಬಿಣಿಯವರು ರೂ ೫ ಕ ಕಮಲಾ ಬಂಡಾರ್ಕಿಣಿಯವರು ರೂ ೧ ಕಾ ಪದ್ಮಾವತಿ ಪೈಣಿಯವರು ರೂ ೧ ಪ ಪದ್ಮಾವತಿ ಪರ್ಬಿಣಿಯವರು ರೂ ೨ ಕ ಬವಾನಿ ಬಾಯಿಯವರು ರೂ ೫ ಒ ರತ್ನಿ ಬಾಯಿಯವರ ರೂ ೨ ನ ರಾಧಾ ಬಾಯಿಯವರು ರೂ ೫ ನ ಸರಸ್ವತಿ ಬಾಯಿಯವರು ರೂ ೫ ಗುಂಡೆ [illegible] ಬಾಯಿ ವ [illegible] ಗೌರಿಬಾಯಿಯವರು ಕೂಡಾ ರೂ ೫೦ ಶೃಂಗೇರಿ ರಾಜೀವ ಪೈಣಿಯವರು ರೂ ೧ ಚಂದ್ರಭಾಗಿ ಪರ್ಬಿಣಿಯವರು ರೂ ೧೦ ಒ ಲಕ್ಷ್ಮಿ ಪಾಲ್ಗೆಣಿಯವರ ರೂ ೫ ಕಾ ಸತ್ಯಭಾಮ ಶೆಣ್ಯಾಣಿಯವರು ರೂ ೬ [illegible] ಬಾಯಿಯವರು ರೂ ೧ ಕ ಬವಾನಿ ಮಾಲ್ಕಿಣಿಯವರು ರೂ ೧ ವ ವೇದಾವತಿ ಬಾಯಿಯವರು ರೂ ೫ ಓ ಸುನಂದಾ ಬಾಯಿಯವರು ರೂ ೫ ಸ ಸೇವಂತಿ ಪೈಣಿಯವರು ಆ ೮ ವ ಸರಸ್ವತಿ ಬಾಯಿಯವರು ರೂ ೧

ಗೌಡಸಾರಸ್ವತ ಬ್ರಾಹ್ಮಣರ ಸುಬ್ಬರಾವ್ ಮೆಮೋರಿಯಲ್ ಫಂಡ್

	ರೂ ಆ ಪೈ
ಕಳೆದ ಎರಡು ಸಂಚಿಕೆಯಲ್ಲಿ ಪ್ರಕಟಿಸಿದಂತೆ ಫಂಡಿಗೆ ಕೊಡುವರೆ ವಾಗ್ದತ್ತ ಮಾಡಿದ ಒಂದಾ ಎರಡುಗಳ ಜುಮುಲಾ ಮೊಬಲಗು	೫೭೮೪-೪-೦
ನಂತರ ಫಂಡಿಗೆ ಕೊಡುವರೆ ವಾಗ್ದತ್ತ ಮಾಡಿದವರ ಹೆಸರು ವ ಮೊಬಲಗು—	
ಮ| ರಾ| ರಾ| ಅಮ್ಮೆಂಬಳ ವಾಸುದೇವ ಪೈ, ದಿವಾನ್ ಬಹದೂರ್ ವೆಂಕಟರಮಣ ಪೈ ಮತ್ತು ಕುಟುಂಬದವರು	೧೦೦೦-೦-೦
ಮ| ರಾ| ರಾ| ಮಂಜೇಶ್ವರ ಸಾವುಕಾರ ನರಸಯ್ಯ ಕ್ಯಾನುಭಾಗರವರು	೧೦೦೦-೦-೦
ಮ| ರಾ| ರಾ| ವರ್ಕಾಡಿ ರಾಮರಾವ್	೧೦೫-೦-೦.
ಈ ವರೆಗಿನ ಜುಮುಲಾ	೭೮೮೯-೪-೦.

ಜೀವಸ್ತುಗಳ ಧಾರಣೆ, ಮಂಗಳೂರು.

ಒಳ್ಳೇ ಮಸ್ಕತಿ ಅಕ್ಕಿ,,,,,,,,	5—8—0
ಗುಡ್ಡು ಮಸ್ಕತಿ,,,,,,,,,,	5—0—0
ಬೈಲು ಸುಗ್ಗಿ,,,,,,,,,,,,	5—0—0
ದುಯಂ ಗುಡ್ಡು ರಾಶಿ,,,,,,,	4-10—0
ಮಸ್ಕತಿ ಬೆಳ್ತಿಗ,,,,,,,,,,,	5—6—0
ರಂಗೂನ್ ಬೆಳ್ತಿಗೆ ಗೋಣಿ,,,,	7—15—0
ಹುರುಳಿ ಗೋಣಿ ೧ ಮುಡಿ 2ರ,,,	8-0—0
ಉಪ್ಪು ಗೋಣಿ ೧ರ,,,,,,,,	3-8—0
ಕೊಬ್ರಿ ಎಣ್ಣೆ ಮಣ,,,,,,,,,,	5—8—0
ಕಾಫಿ ಖಂಡಿ ೧ರ ,,,,,,,	205—0—0
ಕಾಳು ಮೆಣಸು ಖಂಡಿ,,,,,	105—0—0
ಬಿಳಿ ಗೋಟು ಅಡಿಕೆ,,,,,,,	70—0—0
ಊರ ಬೆಲ್ಲ ಮಣ,,,,,,,,	2—12—0

ಯುವತೀರೋಗಿಯರಗೋಸ್ಕರ ತಯಾರಿಸಿದ

ಸೂಲಗಿತ್ತಿಯರಾದ ಕಮಲಾಬಾಯಿಯವರ

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷದವಾಗಿ ಕಂಡುಬಂದಿದೆ ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ ಕಡಿಮೆಯಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷದವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ ದೇಹದಲ್ಲಿ ಯಾವದೊಂದು ಅಕ್ರಮಗುರುತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು ಉಪಯೋಗಿಸಿದವರು ಅವುಗಳ ಒಳ್ಳೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು ಔಷಧಿ ಕ್ರಯ ೧ ರೂ ವಿ ಪಿ ಅಂತೆ ಹಾಸಲು ೪ ಆಣೆ

ಸೂಲಗಿತ್ತಿಯರಾದ ಕಮಲಾಬಾಯಿ, ೫ ಎವ ೬
ಕಲ್ಬಾದೇವಿ ರೋಡ್, ಮುಂಬೈ.

THE MANGALORE WEAVING Co MANGALORE

ಮಂಗಳೂರು ವಿವಿಂಗ್

ಕಂಪೆನಿ, ಮಂಗಳೂರು.

ಕುಲಪತ್ರಯು!! ಹೆಚ್ಚಿನ ಡಿಸ್‌ಕೌಂಟು!!
ಮೆಡಲ್ ಯಾ ಬಹುಮಾನದ ಪದಕುಗಳನ್ನು ಪಡೆದಿರುವುದು.

ಈ ಮಗ್ಗದ ಕಾರ್ಖಾನೆಯಲ್ಲಿ ಪ್ರಖ್ಯಾತಿಪಟ್ಟ ಮಂಗಳೂರು ಮತ್ತು ಕಲ್ಲಿ ಕೋಟೆ ಲಂಗೀ ವಸ್ತ್ರಗಳು, ಟ್ವೀಡ್ ಮಾದರಿ ಆರುವೆ, ಪಟ್ಟೆಕ್ಸ್ ಯಾ ಒಳಂಗಿ ಅರುವೆ, ಹೊದ್ದುಕೊಳ್ಳುವ ವ ಹಾಸಿಗೆಗಳಿಗೆ ಹಾಸುವ ಬಟ್ಟೆಗಳು, (Bed Sheets) ಟೇಬಲುಗಳು ಮುಂತಾದವುಗಳು ತಯಾರಿಸಲ್ಪಡುವುದಲ್ಲದೆ ವಸ್ತ್ರಗಳ ರಂಗು ಹಾಕಲ್ಪಡುವುದು.

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ, ಇದೆ ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು. ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆ ಬೀಳುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ. ಇದರಿಂದ ಮೆದುಳು ತಂಪಾಗುವದು. ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲಿ ಒಂದರ 6 ಆಣೆ

ರೋಯಲ್ ಟ್ರೇಡಿಂಗ್ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ಜಂತು, ಗಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ. ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ. ನಾವಿದನ್ನು ಒಮ್ಮೆಗೆ ಗ್ಯಾರಂಟಿ ಕೊಟ್ಟಿರುತ್ತೇವೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಮರತು. ಬಾಟ್ಲಿ ಒಂದಕ್ಕೆ 8 ಆಣೆ, 6 ಬಾಟ್ಲಿಗಳಿಗೆ 2 ರೂ 10 ಆಣೆ 12 ಬಾಟ್ಲಿಗಳಿಗೆ 5 ರೂ ಎಂದು ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ. ರಾ. ಪಾಠಕ್ ಮತ್ತು ಕಂಪೆನಿ,

ಠಾಕುರದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೋಓಪರೇಟಿವ್ ಇನ್ಸ್ಯುರೆನ್ಸ್ ಸೊಸ್ಯಾಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ

ಹೆಡ್ ಆಪೀಸು.—41 ಸ್ಟ್ರಾಂಡ್ ಸ್ಟ್ರೀಟ್ ಕಲ್ಕತ್ತಾ

ಬ್ರೆಂಚ್ ಆಪೀಸು —42 ಎಲ್ಫಿನ್ಸ್ಟನ್ ಸರ್ಕಲ್ ಮುಂಬಯಿ.

1906ರಲ್ಲಿ ಸ್ಥಾಪಿಸಲ್ಪಟ್ಟತು.

ಸಂಘದ ನಿಯಮಿತ ಭಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ಪರಿಸಂಪತ್ತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು. ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು. ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ಜಮಾ ಮಾಡಿ ತೆರಲೂ ಬಹುದು

1908 ದಶಂಬರ ತಿಂಗಳ ವರೆಗೆ ರೂ 13,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು.

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುದ್ದಾರರಿಗೆ ಸೇಕಡಾ 7ರಂತೆ ಮುನಾಫೆಯು ಪ್ರಥಮ ವರುಷದಲ್ಲಿ ಕೊಟ್ಟಿರುವುದು. ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಲ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಾಯಿಸಬಹುದು. ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಭಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು. ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಬಿ. ಬಾಬುರಾವ್ ಎಂಡ್ ಸನ್,

ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಪತ್ರ ಬಾಟ್ಲಿಯೊಂದಿಗಿರುವುದು. { ಸಿದ್ಧಲಕ್ಷ್ಮೀ ವಿಲಾಸ. } ಕ್ರಯ ಬಾಟ್ಲಿ ಒಂದಕ್ಕೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಅಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತುರುತುಗಳೂ, ಮೇಹ ಶ್ಲೇಷ್ಮಾಂಥವಾದ ಎಲ್ಲಾ ಮೂತ್ರದೋಷಗಳೂ, ವೃಣಾದಿ ಬಾವುಗಳೂ, ಬಚ್ಚೆ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸ್ಯೇಶನ್, ಮಂಗಳೂರು, ಮುಲ್ಕಿ ಸುಬ್ರಾಯ ಮುಕುಂದ ಪ್ರಭು ಮತ್ತು ಕಂಪೆನಿ, ಮಂಗಳೂರು. ರಾಮಚಂದ್ರ ಸ್ಟೋರ್ಸ್, ಮಂಗಳೂರು. ಇವರಲ್ಲಿ ದೊರಕುವುದು.

ಮನೋಹರಾ ಅತ್ತರ್

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್' ಈ ವಿಷಯ ಹೆಚ್ಚು ಬರೆಯುವುದೇ ಅಗತ್ಯವಿಲ್ಲ. ಒಂದು ಸಾರಿ ಪರೀಕ್ಷಿಸಿದರೆ ತಿಳಿದು ಬರುವುದು. ಬಾಟ್ಲಿ ಒಂದರ ಕ್ರಯ ರೂಪಾಯಿ ...

ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಇದು ... ಆಣೆ ಕ್ರಯಕ್ಕೆ ದೊರಕುವುದು.

ಮಂಗಳೂರು ... [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ ೬ ಬಾಟ್ಲಿಗೆ ೫ ರೂ ೧೦ ಆಣೆ

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ

೩ ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ ಎಲ್ಲ ಪ್ರದರಗಳನ್ನೂ ಸೂಟ್ಕಿ ಕಟ್ಟಿಗಾಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೫ ಸೂರಣಾವ ಲೇಹ ರಕ್ತ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೬ ಪ್ಲೀಹೋದರಾರಿ ಚೂರ್ಣ ... ದಾರುಣವಾದ ಜ್ವರದ ... ಪಡಿಸುವದು ತಿಂಗಳ ಔಷಧಕ್ಕೆ ... ೩ ರೂ ೮ ಆಣೆ

೭ ಜಗನ್ಮೋಹನ ದಂತಮಂಜನ ದಂತ ... ಬಾಧೆಗಳನ್ನು ಪರಿಹರಿಸತಕ್ಕ ... ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ... ಆಣೆ

೮ ಸರಳಭೇದಿ ಮಾತ್ರೆ ... ತೊಲೆಗೆ ೨ ರೂ

೯ ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೧೦ ಶ್ವಾಸಾವ ಲೇಹ ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ ಮೂತ್ರದಲ್ಲಿ ಧಾತುಪತನ, ದುಷ್ಟ ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೂಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ.

೧೨ ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ... ವಾತಬಾಧಗಳನ್ನೂ ಕೂಡಲೆ ಗೆಲ್ಲುವದು, ಬಾಟ್ಲಿಗೆ ೮ ಆಣೆ ... ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ

೧೪ ಸಪ್ಪೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ — ಬಿ. ಎಮ್. ನಾಥ ಮತ್ತು ಕಂಪನಿ,
ಬಾಂದ್ರಾ (ಮುಂಬಯಿ ಹತ್ತಿರ)
Bandra (near Bombay)

ROYAL TRADING Co. GIRGAUM BOMBAY.

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು, ಗಂಟ್ಲು ನೋವು

ದಶೀತ ... ಎಲ್ಲಾ ತರದ ನೋವುಗಳ ಮೇಲೆ ... ಉತ್ತಮವಾ ... ಯಲ್ಲ

ಇದರಿಂದ ಗುಣ ಕಂಡುಬರದಿದ್ದರೆ ಹಣ ವಾಪಸು
ಕ್ರಯ ಕಮ್ಮಿ, ಗುಣ ಹೆಚ್ಚು ಒಂದುಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು
ಬಾಟ್ಲು ಒಂದರ ಕಿಮ್ಮತ್ತು ೬ ಆಣೆ.

ಇನಾಮುಗಳು —ಒಂದೇ ಸಾರಿ ೬ ಬಾಟ್ಲಿಗಳನ್ನು ತರಿಸಿಕೊಂಡರೆ ಒಂದು ಎಲ್ಯುಮಿನಿಯಮ್ ಗ್ಲಾಸು ೧೨ ಬಾಟ್ಲಿಗಳನ್ನು ತರಿಸಿಕೊಂಡರೆ ರೇಶ್ಮೆಯ ವಸ್ತ್ರ ಸಾವಿರಾರು ಜನರಿಗೆ ಗುಣಕೊಟ್ಟಿರುವ ಈ ನಮ್ಮ ರೊಯಲ್ ಇಂಡಿಯನ್ ಬಾಂಮನ್ನು ಪ್ರತಿ ಒಬ್ಬರೂ ತರಿಸಿ ಉಪಯೋಗಿಸುವಿರಾಗಿ ನಂಬುತ್ತೇವೆ ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು

ನಮ್ಮಲ್ಲಿಯ ಈ ಔಷಧಿಯು ಅನೇಕ ಕಡೆಗಳಲ್ಲಿ ಪ್ರಸಿದ್ಧಿಯಾಗಿದ್ದು ತಮ್ಮಿತ್ತ ಕಡೆಯಲ್ಲಿಯು ಸಹ ಪ್ರಸಿದ್ಧಿಯಾಗುವದೆಂಬದಾಗಿ ಧೃಢಚಿತ್ತದಿಂದ ನಂಬುತ್ತೇವೆ

ವಿಳಾಸ:— ರೊಯಲ ಟ್ರೇಡಿಂಗ ಕಂಪನಿ,
ಗಿರಗಾಂ ಮುಂಬಯಿ.

Sole Agent in Mangalore Town:—
Mangalore Trading Association,
Mangalore.



ಸುರಂಗಿ ಅತ್ತರು.

ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು ಇದರ ಪರಿಮಳವು ಹೆಚ್ಚು ದಿನಗಳ ವರೆಗೆ ಹೋಗುವದಿಲ್ಲ ಬಾಟ್ಲಿ ಒಂದರ ಕ್ರಯ No I. ೧—೪—೦ No 2 ೧—೦—೦ ವಿಲ್‌ಯಿಷ್ ೧— ೦—೦ ದಣಾಣಾ ೦—೧೫—೦ ಜಾಯಿ ೦—೧೪—೦ ಚಂಬೋಲಿ ೦—೧೪—೦

ಕೇಶವರ್ಧಿನಿ ಎಣ್ಣೆ ಹೆಂಗಸರ ಪ್ರೀತಿಕರವಾದ ಎಣ್ಣೆ ಇದರಿಂದ ಕೂದಲು ... ಕಪ್ಪಾಗುವವು, ಮತ್ತು ಬೆಳೆಯುವವು ಬಾಟ್ಲಿ ಒಂದರ ಕಿಮ್ಮತ್ತು ೦—೮—೦
ಗಜಕರ್ಣದ ಮುಲಾಮು ೦—೪—೦

ರೊಯಲ್ ಟ್ರೇಡಿಂಗ ಕಂಪನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂದಿವಾತ, ಸತತವಾತ, ಚೇಳುಕಡಿತ, ತಲೆನೋವು, ಶೀತ, ಘಾಯ, ಗಂಟ್ಲುನೋವು, ಎದೆಶೀತ ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ. ಇನ್ನೂ ಸಾವಿರಾರು ಜನರು ಗುಣಹೊಂದುವರು ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ, ಇದು ಎಳೇ ಮಗುವಿನ ದೇಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು.

ಬಾಟ್ಲು ಒಂದರ ಕಿಮ್ಮತ್ತು ರೂ. ೦—೮—೦, ಆರು ಬಾಟ್ಲಿಗಳಿಗೆ ರೂ. ೨—೧೦—೦.

ವಿಳಾಸ:— ರಾಮರಾವ್ ನಾರಾಯಣ ಕಾಳೆ,
ಗಿರಗಾಂ ಮುಂಬಯಿ

"ಲಾ" ಪ್ರಕಟನೆಗಳು.

—o—

1 ವ್ಯವಹಾರ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೪ ಕ್ಸಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜ ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2 ಕನ್ನಡ ಲಾ ರಿಪೋರ್ಟ—ಮಾಸಪತ್ರಿಕೆ ಪ್ರಿವಿಕೌನ್ಸಿಲ್, ಹೈಕೋರ್ಟ ಚೀಫ್‌ಕೋರ್ಟ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಪ್ರಕಟವಾಗುತ್ತವೆ ವರುಷದ ಚಂದಾ ೯ ರೂಪಾಯಿ ಮುಂಗಡ ಯೂ ವಿ ಪಿ ಬಿಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು ಎಂ ಮಲ್ಲಾರಾಧ್ಯರೈ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆದು ಪಡೆ.

THE HINDU SOAP MANUFACTURING CO.,
ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ

—o—

ಕುಂದಾಪುರ ದಕ್ಷಿಣ ಕನ್ನಡ

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ಬಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳ

ಪರಿಮಳಾಂಜನ ನಂಬ್ರ 1 —ಇದರ ಬಾಹ್ಯಲೇಪನದಿಂದಲೇ ತಲನೋವು ಶಿರೋಭಾರ, ಒಕೆಣ್ಣೆ, ಅರ್ಧಾಂಗವಾಯು ವಾತ ಸಂಧುವಾತ ಶೀತ, ಕಮ್ಮು ಗಂಟ್ಲುನೋವು, ಜಖಮ್ಸ್, ಉಳುಕು, ಘಾಯಗಳು ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0

2 ತಾಂಬೂಲ ಸುವಾಸಿನಿ —ಸೀಸೆ ೧ರ ಕ್ರಯ 0 4-0

3 ದಂತಮಂಜನ —ಡಬ್ಬಿ ೧ರ ಕ್ರಯ 0 2 0

4 ಗಜಕರ್ಣದ ಮುಲಾಮು —ಡಬ್ಬಿ ೧ರ ಕ್ರಯ 0 6 0

5 ವಯಸ್ಸಾಮೃತ ಸುರ್ಮ —ಸೀಸೆ ೧ರ ಕ್ರಯ 0 8 0

6 ಶ್ವಾಸಕುಠಾರ —ಡಬ್ಬಿ ೧ರ ಕ್ರಯ 0-8 0

7 ಪರಿಮಳಾಂಜನ ನಂಬ್ರ ೨ —ಡಬ್ಬಿ೧ರ ಕ್ರಯ 0 10 0

8 ಜ್ವರಾಂಕುಶ ಮಾತ್ರೆ —ಡಜನ್ ೧ರ ಕ್ರಯ 1 8 0

9 ಸುಗಂಧ ವಶ್ಯದ ಪುಡಿ —ಡಬ್ಬಿ ೧ರ ಕ್ರಯ 0 6-0

10 ದಶಾಂಗಧೂಪ —ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಸೇರು ೧ಕ್ಕೆ ರೂಪಾಯಿ 1 4 0

11. ದ್ರಾಕ್ಷಾರಿಷ್ಠ —ಬಾಟ್ಲಿ ೧ರ ಕ್ರಯ 2 8 0 ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಖಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರಿಯಿರಿ

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಬಟ್ಟಾಗಿಯೂ ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗ್ರ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜಾ ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಛಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಟಿ ಎಸ್ ಉಪಾಧ್ಯಾಯ.
ಮೈಸೂರು

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಬದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣಪ್ರದರ್ಶಕರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಬಲಾದೀತು

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು ದ ಕನ್ನಡ.

ANGLO INDIAN DRUG & CHEMICAL Co's.

ಕೇಫಿಟೋ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ ಸಂದಿವಾತ ಒಳಿಮು ಘಾಯ, ಉರಿ, ಶೀತ, ಕೆಮ್ಮು ಎದೆಶೀತ, ಸೂಂಟದ ನೋವು, ಬೆನ್ನುನೋವು ಪಕ್ಷವಾತ ಬಿನೆಗಾಲು, ಈ ಎಲ್ಲಾ ನೋವುಗಳಿಗ ಉತ್ತಮ ಎಲ್ಲಾ ಬಾಮಿಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲಿ ಒಂದಕ್ಕೆ ೮ ಆಣೆ

ದಿಲ ಬಾರ್ ಮತ್ತು ಗುಲ ಸನ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು ಬಾಟ್ಲಿ ಒಂದರ ೧—೮—೦

ವಿಳಾಸ — ದಿ. ಊಲನ್ ಮಾರ್ಟ.
ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ	೫೨ ಸಾರಿ
ಇಡೀ ಪಾನು	ರೂ ೧೦	ರೂ ೩೨	ರೂ ೭೨	ರೂ ೧೧೦	ರೂ ೧[illegible]
ಅರ್ಧ ಪಾನು	,, ೬	,, ೧೮	,, ೩೮	,, ೬೦	,, [illegible]
ಕಾಲು ಪಾನು	,, ೪	,, ೧೨	,, ೨೦	,, ೩೨	,, [illegible]
ಅರೆಕಾಲುಪಾನು	,, ೨	,, ೭	,, ೧೨	,, ೧೮	,, [illegible]

ಸೂಚನೆ —ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಸೇರಿ ವರುಷಕ್ಕೆ ೨ ರೂ. ೧೮ ಆ. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪ ಆ. [illegible] ಅಂಚೆ ವೆಚ್ಚ [illegible] ೧ ರೂ. [illegible] ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ) | ಹಾಫ್‌ಬೈಂಡ್ (ಪಕ್ಕಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ) | ಫುಲ್‌ಬೈಂಡ್ (ಪೂರ್ಣ ಚರ್ಮ)

ಈ ಮೂರು ಎದವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು

3 × 8¼, 3 × 5¼, 8¼ × 6, 6¼ × 4 ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕದಾರ ವ ಆಫೀಸರವುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

... ಸಮುಯದ ವರೆಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು ...

ಲೆಕ್ಕದ ಪುಸ್ತಕಗಳನ್ನು ಜೋಕರು ಮಾಡುವ ...

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಿಯಾ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯವಿಟ್ಟು ಬರೆಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

... ಯಾವುದು— ಬೆಲೆಗೆ ತಕ್ಕ ಒಡವೆಗಳನ್ನು ಕೊಡುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೨ ವರುಷಗಳಾದವು

ಪ್ರಥಮ ... ಇದು ನಮ್ಮ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೂಟ್, ... ಕೋಕ ... ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರವಾದ ಮೇಲಿನ್ಸ್ ಫುಡ್ ...)

ಡಾಕ್ಟರರ ಔಷಧೋಪಚಾರದ ಸಮಸ್ತ ಔಷಧಿಗಳು,

(... ಕಪ್ಸೂಲ್ ಫುಡ್, ಗುಳಿಗೆ ವ ಮುಲಾಮು, ಮೊದಲಾದವುಗಳೂ ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರು ಅನುಭವಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಶೀಘ್ರವಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್.

Mangalore Trading Association,
Mangalore, S. Canara.

... S. Kamath, at the Mangalore Trading Association's Sharada Press, Mangalore.

Registered No. M. 408.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು 24ನೇ ಶುಕ್ರವಾರ ಸಪ್ಟಂಬರ 1909 ಸಂಚಿಕೆ 25.

William & Co. Fort Bombay.

ಅಮೃತಾಂಜನ.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇಸಿಹಾ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅಜೀರ್ಣದ ವಾಯು, ಸೊಂಟದ ನೋವು, ಗಂಟ್ಲು ನೋವು, ಜ[illegible]ಮು, ಉಳುಕು, ಘಾಯ, ಶೀತ ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದನ್ನು [illegible] ದೇಹ[illegible] [illegible] ಹೆಚ್ಚುಬಹುದ [illegible] ಪ್ರದರ್ಶನಗಳಲ್ಲಿ ಈ ಅಮೃತಾಂಜನಕ್ಕೆ ಒಂದು [illegible] ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ [illegible]ದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿಗೆ ಕಿಮ್ಮತು 8 ಆಣೆ

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳ ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿಗರ ಕಿಮ್ಮತು 2 ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದೆಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗೆದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ. ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ. ಡಬ್ಬಿಗರ ಕಿಮ್ಮತು 8 ಆಣೆ. 6 ಡಬ್ಬಿಗಳ ಕಿಮ್ಮತು ರೂ. 2—4—0.

ಕೇಶವರ್ಧಿನೀ ಎಣ್ಣೆ.

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು ತಂಪುಮಾಡಿ ಮನಶುದ್ಧಿ ಮಾಡುವದು. ಬಾಟ್ಲಿಗರ ಕಿಮ್ಮತು 1 ರೂ. [illegible] ಬಾಟ್ಲಿಗಳಿಗೆ ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು [illegible]ದಿಂದ ಎಲ್ಲಾ ತರದ ಬಜ್ಜಿಯು ನಾಶವಾಗಿ ಹೋಗುವದು. ಇದರಿಂದ [illegible] ಉರಿ ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, [illegible] ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿಗರ ಕಿಮ್ಮತು 6 ಆಣೆ [illegible] ಡಬ್ಬಿಗಳಿಗೆ ರೂ. 4

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. [illegible] ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮಿಯಿನ ಕೋಕೋ, ಲೆಸಿತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ. 40 ಗುಟಿಕೆಗಳ ಡಬ್ಬಿಗರ ಕಿಮ್ಮತು ರೂ. 1

ಚೇಳು ಕಡಿತದ ಮೇಲ್ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು. ಬಾಟ್ಲಿಗರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0—10—0.
ಬಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪೆನಿಯವರು [illegible] ನಮೂನೆಯ ಔಷಧಗಳನ್ನು [illegible]

ವಿಳಾಸ:— ವಿಲಿಯಂ ಮತ್ತು ಕಂಪೆನಿ, ಫೋರ್ಟ [illegible] ಮುಂಬಯಿ. [illegible] "ಅಮೃತಾಂಜನ" ಮುಂಬಾಯಿ.

ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ ಭಕ್ತ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೀ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ೩-೦-೦.

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ.	೦-೬-೦.
ಉತ್ತರ ರಾಮಚರಿತ್ರೆ ಕಥೆ.	೦-೫-೦.
ಟೀಕಾ ರಾಘವೇಂದ್ರ ಸ್ತೋತ್ರ.	೦-೨-೦.
ತೈಚಕಲ್ಪರೀತ್ಯಾ ಸೂರ್ಯ ನಮಸ್ಕಾರ.	೦-೨-೦.
ವಿಷ್ಣುಸಹಸ್ರನಾಮ ಮೂಲಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು.	೦-೨-೦.
ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ.	೦-೨-೦.
ಬಾಲ ರಾಮಾಯಣ ಟೀಕಾ ತಾತ್ಪರ್ಯ.	೦-೨-೦.
ಸ್ವರಸಹಿತವಾದ ನಮಕ ಚ-ಮಕ.	೦-೨-೦.
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ.	೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ.	೦-೨-೦.
ಕೃಷ್ಣ ಕರ್ಣಾಮೃತ ಮೂಲ.	೦-೨-೦.
ದೇವರ ಸೇವೆ ಹೊಸ ಪುಸ್ತಕ.	೦-೪-೦.
ಮುಕುಂದ ಮಾಲಾ (ಜೀತಾ)	೦-೪-೦
ಸಿವ ನಾಮಾ	೦-೦-೬.
ಹನುಮನ್ನಾಮಾ.	೦-೦-೬.
ಹರಿ ನಾಮಾ	೦-೦-೬.
ಯಾಜುಹ ಪ್ರಯೋಗ	೦-೮-೦
ಬೃಹತ್ಕಥಾ ಮಂಜರಿ.	೦-೮-೦.
ಕೃಷ್ಣ ಬೋಧಾಮೃತ	೦-೬-೦.

೦-೪-೦ ಕಮ್ಮಿ ವಿ. ಪಿ. ರವಾನಿಸುವದಿಲ್ಲ
ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು

ವಿಳಾಸ:— ಬಿ. ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್, ಬೆಂಗಳೂರು.

ಕುಂತಳ ಕೌಮುದಿ ತೈಲ.

ಕಾಶ್ಮೀರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳೆಲ್ಲಾ ಇದೇ ಉತ್ಕೃಷ್ಟವಾದುದು.

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿ ಒಪ್ಪಿದರು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಅಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,
216 ಕಾರನ್ ವಾಲಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎನ್. ಎ. ಪಾರುವಾಟ್ ಎಂಡ್ ಕೋ.,
ಚಿಕ್ಕಪೇಟೆ, ಬೆಂಗಳೂರು.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು, ಹಗಲ್ ಬತ್ತಿ ವಗೈರೆ ರಂಗುಗಳ ವಸ್ತ್ರ 1ಕ್ಕೆ ... ... ರೂ. 0—12—0.

ಸೈಜು ಇಂಚು 22×22 ವಸ್ತ್ರ ೧ಕ್ಕೆ ... ... „ 1—1—0.

ಸೈಜು ಇಂಚು 15×15 ಬಿಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳಿ ಹೊಸ ನಮೂನೆ ವಸ್ತ್ರ 1ಕ್ಕೆ 8 ಆಣೆ.

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ 2½ ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರ 1ಕ್ಕೆ ರೂ. 12, 13, 14, 15, 16, 17. ಡಿಟೋ ಸಪ್ಪೆ ರೇಷ್ಮೆ ಬಾಬತು 1ಕ್ಕೆ ರೂ. 6, 7, 8, 9, 10.

ರೇಷ್ಮೆ ನಡುಕಟ್ಟುಗಳು.

ಕೆಂಪು, ವೂದಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5–6 ಮೊಳ, ಅ 2 3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ. 1-4-0 1-8-0, 1-10-0, 1-12-0, 2-0-0, 2-8-0.

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ, ಕಾಡಿಗಣ್ಣು, ಹಂಸ ಪಪ್ಪಳ, ಶೃಂಗಾರ ಪಪ್ಪಳ, ಜಗನ್ನಾಥರಟ ಲಾಕಿಮುಂಗಿ, ಹಳದ ಮುಂಗಿ, ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ. 1-6-0, 1-12-0.

ಡಿಟೊ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ. 1-0-0, 1-2-0, 1-3-0. ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ. 2-4-0, 2-8-0, 2-10-0.

ಡಿಟೊ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ 1-4-0, 1-6-0, 1-8-0.

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ. 2-10-0, 2-12-0, 3-0-0.

ಡಿಟೊ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಶೀರೆ ಕಣ 1ಕ್ಕೆ ರೂ. 3-6-0, 3-8-0, 3-12-0.

ಡಿಟೊ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳಿ ಶೀರೆ ಕಣಾ 1ಕ್ಕೆ ರೂ. 4-12-0, 5-0-0.

ಹೆಚ್. ಸಂಕಪ್ಪಾ ಬಸಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ವಿ. ಪಿ. ಆರ್ಡರುಗಳಿಗೆ ಸುಲಭ ಕ್ರಯ.

ಊದುಬತ್ತಿ ಸೇರು ೧ಕ್ಕೆ ೦-೮-೦, ೧-೦-೦, ೨-೦-೦, ೩-೦-೦, ೪-೦-೦, ೫-೦-೦ ಗಂಧದ ಬಿಲ್ಲೆ ತೊಲೆ ೧ಕ್ಕೆ ರೂ. ೨, ೪, ೮, ೬, ೧೨, ೧೬.

ಅರಗಜ (ಕಸ್ತೂರಿ ಗಂಧ) ತೊಲೆ ೧ಕ್ಕೆ ೧-೦-೦, ೧-೮-೦.

ಬೆಳ್ಳಿ ಗಣೇಶಗಳು. ೧ಕ್ಕೆ ೨-೮-೦, ೩-೦-೦, ೩-೮-೦, ೪-೦-೦, ೫-೦-೦.

ಶುದ್ಧ ರೇಷ್ಮೆ ಅನಂತನ ದೋರಗಳು. ಜೊತೆ ೧ಕ್ಕೆ ೨, ೪, ೬, ೮, ೧೦, ೧೨, ೧೪.

ಉಲನ್ ಚವುಕಗಳು. ಹಳದಿ, ಹಸುರು, ನೀಲಿ, ಗುಲಾಬಿ, ಎಣ್ಣೆ ರಂಗುಗಳಲ್ಲಿ ೧ಕ್ಕೆ ರೂ. ೧-೬-೦, ೨-೦-೦, ೩-೦-೦.

ಉಲನ್ ಶಹಲುಗಳು. ೧ಕ್ಕೆ ೩-೮-೦, ೬-೧೨-೦, ೪-೦-೦.

ಕಾಶ್ಮೀರ ಶಹಲುಗಳು. ಎಲ್ಲಾ ರಂಗುಗಳಲ್ಲಿಯೂ, ೧ಕ್ಕೆ ರೂ. ೯-೦-೦, ೧೦-೦-೦, ೧೬-೦-೦, ೧೫-೦-೦, ೧೭-೦-೦, ೧೮-೦-೦, ೩೦-೦-೦.

ಹಾಸನದ ಟೋಪಿ ಹಣಿಯುವ ಉಲನ್ ದಾರಗಳು. ಕೆಂಪು, ಎಣ್ಣೆ ಗೆಂಪು, ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦-೬-೦, ೦-೧೦-೦, ೦-೧೬-೦, ೦-೧೪-೦, ಡಿಟೋ ಸೂಜಿ ೧ಕ್ಕೆ ೦-೧-೬, ೦-೨-೦.

ಉಲನ್‌ನಿಂದ ಹಣಿದ ಟೋಪಿಗಳು ಡಜನ್ ೧ಕ್ಕೆ ೪-೮-೦, ೫-೦-೦, ೬-೦-೦, ೭-೮-೦, ೮-೦-೦, ೯-೦-೦, ೧೦-೦-೦, ೧೨-೦-೦.

ಹೆಚ್. ಎನ್. ರಾವ್ ಬ್ರದರ್ಸ್,
262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಶೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷ್ ಮತ್ತು ನೇಟೀವ್ ಕಾಯಿ ಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್,
ಫ್ಲಾರಿಸ್ಟ್ ಅಂಡ್ ಸೀಡ್ಸ್‌ಮನ್,
[illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 24ನೇ ಸಪ್ಟಂಬರ 1909

ನವಸುಧಾರಣೆ

ನಂ ೩

ಸ್ವದೇಶದ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕೆಂಬ ಭಾವವು ಹಿಂದುಸ್ಥಾನದಲ್ಲಿ ಹಲವು ವರುಷಗಳ ಮುಂಚೆಯೇ ತಲೆದೋರಿತ್ತು. ಆದರೆ ಇದು ವಂಗಭಂಗದಿಂದ ಉದ್ದೀಪಿತವಾಯಿತು. ಆ ಆಪತ್ತಿನಿಂದ ಬಂಗಾಳಿಗಳಲ್ಲಿ ಮನಸ್ತಾಪ ಹುಟ್ಟಿ ಅವರು ತಮ್ಮ ಸಂಕಷ್ಟಗಳನ್ನು ಬ್ರಿಟಿಷರು ತಿಳಿಯಬೇಕಾದರೆ ಅವರ ವ್ಯಾಪಾರಕ್ಕೆ ಹಾನಿ ತರಬೇಕೆಂದೆಣಿಸಿ ವಿದೇಶಿ ವಸ್ತು ಬಹಿಷ್ಕಾರವನ್ನು ಬೋಧಿಸಿದರು. ಬಲುಮಟ್ಟಿಗೆ ಆಚರಣೆಗೂ ತಂದರು. ಸ್ವದೇಶಿ ವಸ್ತು ಪ್ರಚಾರಣ ಅಗ್ಯ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕಲ್ಲ. ಹೀಗೆ ಸ್ವದೇಶವಾತ್ಸಲ್ಯದವರು ಬಹಿಷ್ಕಾರವನ್ನು ಕೈಕೊಂಡರು. ವಿದೇಶವೈರಾಗ್ಯದವರು ಬಹಿಷ್ಕಾರವನ್ನು ಸಾರಿದರು. ತನ್ಮಧ್ಯ ವೈಸರಾಯ ಪ್ರಭು ಮೊದಲ್ಗೊಂಡು ನಮ್ಮ ಸರಕಾರದವರು "ಯಥಾರ್ಥ ಸ್ವದೇಶಿ"ಯೊಂದನ್ನೆ ಬೋಧಿಸಿರುವರು. ಈ ಯಥಾರ್ಥ ಸ್ವದೇಶಿಯೆಂದರ (ನಾವು ತಿಳಿದ ಮಟ್ಟಿಗೆ) ಬಹಿಷ್ಕಾರ ವಿರಹಿತವಾದ ಸ್ವದೇಶೀ ಕೈಗಾರಿಕೆಗಳ ಅನುರಾಗ. ನಮ್ಮ ದೇಶದಲ್ಲಿ ಊರ್ಜಿತಕ್ಕೆ ಬರಲನುಕೂಲವುಳ್ಳ ಜಾತಿಯ ವಿದೇಶಿ ವಸ್ತುಗಳನ್ನು ತ್ಯಜಿಸದೆ ದೇಶೀಯ ಕೈಗಾರಿಕೆಗೆ ಅನುರಾಗವನ್ನು ತೋರುವದು ಹ್ಯಾಗೆ ಸಾಧ್ಯವೆಂದು ನಾವರಿಯೆವು. ವೈಸರಾಯಪ್ರಭುಗಳ "ಯಥಾರ್ಥ ಸ್ವದೇಶಿ"ಗೆ ಪರದೇಶ, ಪರಜನ ದ್ವೇಷ ವಿರಹಿತ ಸ್ವದೇಶಿಯೆಂಬ ಅರ್ಥವು ಇರಬಹುದು. ದ್ವೇಷವು ದೇಶೋನ್ನತಿಗೆ ಸಹಕಾರಿಯಲ್ಲವೆಂಬದು ವಾಸ್ತವಿಕವೇ.

ನಾವು ಇಲ್ಲಿ [illegible] ಪದವನ್ನು ಮೇಲಿನ ಎರಡು ಅರ್ಥಗಳಲ್ಲಿಯೂ ಉಪಯೋಗಿಸಲಿಲ್ಲ. ಯಾವ ವ್ಯಕ್ತಿಯಲ್ಲಿಯಾದರೂ ಸ್ವದೇಶೋನ್ನತಿ ಕಡೆಗೆ ಲಕ್ಷ್ಯವನ್ನು ಪ್ರೇರಿಪಿಸುವ ಬುದ್ಧಿಯೇ ಯಥಾರ್ಥ ಸ್ವದೇಶಿ. ಯಾಕಂದರೆ ದೇಶಾಭಿವೃದ್ಧಿಗೆ ಕೈಗಾರಿಕೆಯೊಂದೇ ಸಾಲದು. ಆದ್ದರಿಂದ ಯಥಾರ್ಥವಾಗಿ 'ಸ್ವದೇಶಿ' ಪದವು ದೇಶಹಿತಾರ್ಥವಾದ ಎಲ್ಲಾ ಪ್ರಯತ್ನಗಳನ್ನೊಳಕೊಳ್ಳಬೇಕು. ದೇಶವಾತ್ಸಲ್ಯವೇ ಸ್ವದೇಶಿಗೆ ಮೂಲ. ನಮ್ಮ ಪೂರ್ವ ಸುಧಾರಣೆಯೇ ದೇಶವತ್ಸಲರ ಪ್ರೀತಿಗೆ ಪಾತ್ರವಾದ ಅತ್ಯುತ್ತಮ ವಸ್ತು. ಯಾಕಂದರೆ ಅದು ಅನೇಕ ಶತಮಾನಗಳಿಂದ ಅನೇಕ ಅವಾಂತರಗಳನ್ನು ಸಹಿಸಿ ತನ್ನ ವರ್ಚಸ್ಸವನ್ನು ಸರ್ವತ್ರ ಹರಡಿದೆ. ಭಾರತೀಯರಿಗೆ ದೊರೆಯುವ ಮನ್ನಣೆಗೂ ಅವರ ಆತ್ಮಗೌರವಕ್ಕೂ ಕಾರಣವು ಅದೇ. ಒಂದು ಜನಾಂಗಕ್ಕೆ ವ್ಯಕ್ತಿತ್ವಕ್ಕಿಂತಲೂ ಪ್ರಿಯಕರ ವಸ್ತುವಿಲ್ಲ. ನಮ್ಮ ವ್ಯಕ್ತಿತ್ವವನ್ನು ನಾವು ಉಳಿಸಿಕೊಂಡು ಜನಾಂಗವಾಗುವಂತೆ ಈ ಸುಧಾರಣೆಯನ್ನು ಕಾಯಬೇಕಲ್ಲ. ಆದ್ದರಿಂದ ಈ ವಸ್ತುವು ಸ್ವದೇಶಿ ಭಾವದ ಅತ್ಯುತ್ತಮ ಆದರಣೆಗೆ ಪಾತ್ರವಾಗಿದೆ.

ಆರ್ಯರು, ರೋಮಾಯರು ಮೊದಲಾದ ಕೆಲವು ಪೂರ್ವ ಜನಾಂಗಗಳ ಚರಿತ್ರೆಗಳನ್ನೋದಿದರೆ ಒಂದು ಸಂಗತಿಯು ವ್ಯಕ್ತವಾಗುವದು. ಅವರು ತಾವು ಜಯಿಸಿದ ಜನಾಂಗಗಳ ಮೇಲೆ ತಮ್ಮ ಸುಧಾರಣೆಯ ಮುದ್ರೆಯನ್ನು ಮಾಚದಂತೆ ಒತ್ತಿದರು. ಈಗ ಯೂರೋಪ ಖಂಡದಲ್ಲಿ ಊರ್ಜಿತಕ್ಕೆ ಬಂದ ಜನಾಂಗಗಳ ಕಾಯಿದೆ ಕಾನೂನುಗಳಲ್ಲಿ, ವಾಙ್ಮಯಕಲೆಗಳಲ್ಲಿ [illegible] ಸುಧಾರಣೆಯ ಕುರುಹುಗಳು ಸ್ಪಷ್ಟ ಕಾಣುವವು. ಕಾಸ್ಪಿಯೋ ಮಧ್ಯ [illegible]ದಲ್ಲೋ ಧ್ರುವಪ್ರದೇಶದಿಂದಲೋ ಬಂದ ಆರ್ಯರು ಸಿಂಧು ನದಿಯಿಂದ ಕನ್ಯಾಕುಮಾರಿ ಭೂಶಿರ ಪರ್ಯಂತವೂ ತಮ್ಮ ಜಯಧ್ವಜವನ್ನೂ, ಸುಧಾರಣೆಯನ್ನೂ ಏಕಕಾಲದಲ್ಲೇ ನೈದು ಅವನ್ನು ಒಟ್ಟಿಗೆ ಪರಾಜಿತ ಪ್ರಜೆಗಳ ಮಧ್ಯದಲ್ಲಿ ನೆಟ್ಟರು. ಕ್ರಮೇಣ ದ್ರಾವಿಡರೇ ಮೊದಲಾದ ಮೂಲ ನಿವಾಸಿಗಳು ಆರ್ಯರ ಮತ ಸಂಪ್ರದಾಯಗಳನ್ನೂ, ನಡೆನುಡಿ ಆಚಾರಗಳನ್ನೂ ಅನುಸರಿಸಿ ಜಂಬು ದ್ವೀಪವು ಹಿಂದುಸ್ಥಾನವಾಯಿತು. ತದನಂತರ ಬುದ್ಧ ಶಕದಲ್ಲಿ ಬುದ್ಧ ಸನ್ಯಾಸಿಗಳ ಹಿಂದೆ ಇಲ್ಲಿಂದ ಸುಧಾರಣೆಯ ಪ್ರವಾಹವೊಂದು ಲಂಕಾದ್ವೀಪಕ್ಕೂ ಸುಮಾತ್ರ ಮೊದಲಾದ ದ್ವೀಪಾವಳಿಗೂ, ಟಿಬೆಟ್, ಬರ್ಮಾ, ಚೀನಾದೇಶಗಳಿಗೂ ಹರಿದು ಹೋಯಿತು. ಕಾಲಕ್ರಮದಲ್ಲಿ ಹಿಂದುಸ್ಥಾನವು ಆರ್ಯರ ಕೈತಪ್ಪಿ ಮುಸಲ್ಮಾನರ ವಶವಾಯಿತು. ಮೊಘಲು ಅಫಘಾನರ ಹಲವು ವಂಶಗಳು, ನಂತರ ಹಲವು ಶತಮಾನಗಳ ವರೆಗೆ ಮೊಗಲ ಬಾದಶಹರು ಹಿಂದುದೇಶವನ್ನಾಳಿದರು. ಇಂದಿನ ವರೆಗೆ ಈ ದೇಶದ ನಾಗರೀಕತೆಯು ಹಿಂದು ಸುಧಾರಣೆಯಾಗಿ ಉಳಿದದೆ. ಇಷ್ಟರ ವರೆಗೆ ಇದು ಕಡಿಯ ಮರದಂತೆ ಪರ [illegible]

[illegible]

ಧಾರೆಗೆ [illegible] ಅದನ್ನು ಬಲಪಡಿಸುವದು ನಮ್ಮ ಕರ್ತವ್ಯವಾಗಿದೆ. ಸುಧಾರಣೆಯೆಂಬ ಈ ಹಗ್ಗದ ಮುಖ್ಯ ನೂಲುಗಳ್ಯಾವವು?

ಮೊದಲನೇದು ಮತ. ಎಷ್ಟರ ವರೆಗೆ ಸನಾತನಧರ್ಮವೂ, ಹಿಂದೂಮತವೂ ಉಳಿಯುವುವೋ ಅಷ್ಟು ತನಕ ನಮ್ಮ ಸುಧಾರಣೆಯ ಮೇಲಿನ ನಮ್ಮ ವಿಶ್ವಾಸವು ಕುಂದದು. ಒಂದೆರಡು ತಲಾಂತರಕ್ಕೆ ಮುಂಚೆ ಬ್ರಿಟಿಷ ನಾಸ್ತಿಕ ಸಂಶಯವಾದಿಗಳ ವರ್ಚಸ್ಸದಿಂದಲೂ, ನಮ್ಮ ಶಾಸ್ತ್ರ ಶಿಕ್ಷಣದ ಅಭಾವದಿಂದಲೂ, ಭಾರತೀಯ ವಿದ್ಯಾವಂತರನೇಕರು ಪೂರ್ವಧರ್ಮವನ್ನು ನಿಂದಿಸತೊಡಗಿದರು. ಆದರೆ ಆರ್ಯಧರ್ಮ ಪುನರುಜ್ಜೀವನದಿಂದ ಈ ಭಯವು ನಿವಾರಣವಾಯಿತು. ಹಿಂದೂ ಮತವನ್ನು ಬಿಟ್ಟು ಮುಸಲ್ಮಾನ ಯಾ ಕ್ರೈಸ್ತ ಮತಕ್ಕೆ ಹೋದ ಸಮುದಾಯಗಳು ಮಹಮ್ಮದೀಯ ಅಥವಾ ಕ್ರೈಸ್ತ ನವಸುಧಾರಣೆಗಳಲ್ಲಿ ಅನುರಾಗವುಳ್ಳವರಲ್ಲದೆ ಹಿಂದುಗಳ ಪೂರ್ವಚರಿತ್ರೆಯಲ್ಲಿ ಅವರಿಗೆ ಗೌರವವಿಲ್ಲ.

ವಾಙ್ಮಯ ಇತಿಹಾಸಗಳು ಇನ್ನೊಂದು ನೂಲು. ಪೂರ್ವಚರಿತ್ರದಿಂದ ಪೂರ್ವೋನ್ನತಿಯು ತಿಳಿದು ಬರುವದು. ಆರ್ಯರ ಪೂರ್ವಜರ ಮಹಾತ್ಮ್ಯವನ್ನು ಕಂಡಾಗ ಆತ್ಮಗೌರವವು ಮೊಳೆತು ನಾವು ಆ ಧನವನ್ನು ಕಳಕೊಳ್ಳಬಾರದೆಂಬ ಇಚ್ಛೆ ಹುಟ್ಟುವುದು. ಇಂಗ್ಲಿಷ ಮೊದಲಾದ ಪರಭಾಷೆಗಳಲ್ಲಿ ಕಾಣುವ ಉತ್ಕೃಷ್ಟ ಗ್ರಂಥಗಳನ್ನು ಕಂಡು ಬೆರಗಾದರೆ ಸಾಲದು. ಹಾಗೆಯೇ ನಮ್ಮ ವಾಙ್ಮಯವನ್ನು ಊರ್ಜಿತಕ್ಕೆ ತರಬೇಕೆಂಬ ತೃಷ್ಣೆಯು ನಮ್ಮಲ್ಲಿ ಜನಿಸಬೇಕು. ಆಗ್ಯೆ ನಮ್ಮ ಪೂರ್ವಸುಧಾರಣೆಯ ರೀಪಕ್ಕೆ ಬಣ್ಣ ಏರದಂತಾಗುವದು.

ಹಾಗೆಯೇ ಹಿಂದೂ ಜನರ ಕಲಾಶಾಸ್ತ್ರಗಳು ಇನ್ನೊಂದು ವಿಷಯವಾಗಿದೆ. ಎಷ್ಟೋ ಪೂರ್ವ ಹಿಂದೂ ರಾಜರ ಕಾಲದಲ್ಲಿ ಹಿಂದೂ ಕಲೆಗಳು ಉನ್ನತ ಪದವಿಯನ್ನೇರಿದವು. ಕ್ರಮೇಣ ಪ್ರೋತ್ಸಾಹವಿಲ್ಲದೆಯಾಗಿ ಇತರ ಕಾರಣಗಳಿಂದಾಗಲಿ ಇವು ಕ್ಷೀಣಿಸಿ ನೊಂದಿಹೋಗುವಂತಿವೆ. ಕರ್ಜನ್ ಪ್ರಭುಗಳು ನಮ್ಮ ಪೂರ್ವಜರ ಹಸ್ತಕೌಶಲ್ಯವನ್ನು ಹೊಗಳಿದರೆಂದರೆ ಅದು ನಿಜವಾಗಿ ಶ್ಲಾಘನೀಯವಾಗಿರಬೇಕಲ್ಲ.

ವೈದ್ಯಶಾಸ್ತ್ರವಾದ ಆಯುರ್ವೇದವು ಈಗ ಹೀನದಶೆಯನ್ನು ಹೊಂದಿದೆ. ಇಂಗ್ಲಿಷರ ಮೊದಲಾದ ಪಾಶ್ಚಾತ್ಯ ಜನರು ಶಾಸ್ತ್ರವಿದ್ಯೆಯಲ್ಲಿಯೂ ಇತರ ವೈದ್ಯಾಂಗಗಳಲ್ಲಿಯೂ ಹೊಸ ಮಾರ್ಗಗಳನ್ನು ಕಂಡು ಹಿಡಿದಿರಬಹುದು. ಆದರ ಋಷಿವರ್ಯರು ಶೋಧಿಸಿದ ವಿಷಯಗಳನ್ನೂ ಅಶೋಕ ಮೊದಲಾದ ಬೌದ್ಧ ಭೂಪಾಲಕರ ಪ್ರೋತ್ಸಾಹದಲ್ಲಿ ವೃದ್ಧಿ ಹೊಂದಿ ವಿಶೇಷಫಲಕಾರಿ ಎಂದು ಎಣಿಸಲ್ಪಟ್ಟ ಶಾಸ್ತ್ರವನ್ನೂ ಅನ್ಯ ಜನಾಂಗಗಳು ಕಲಿತು ಅನುಸರಿಸಿದ ಆಯುರ್ವೇದವನ್ನೂ ಮೂಲೆಗೊತ್ತಲೇಕೆ? ಪಾಶ್ಚಾತ್ಯರ ಪರಿಶೋಧನೆಗಳಿಂದ ಅದನ್ನು ಬಲಗೊಳಿಸ ಕೂಡದೇ?

ಮೇಲ್ಕಂಡ ಧರ್ಮೇತಿಹಾಸ, ವಾಙ್ಮಯ ಮೊದಲಾದ ವಿಷಯಗಳೂ ಸಮಾಜ ಪದ್ಧತಿಯೂ ಒಂದು ಜನಾಂಗದ ವ್ಯಕ್ತಿತ್ವಕ್ಕೆ ಆಧಾರ ಭೂತವಾಗಿವೆ. ಇದರ ನಾಶವೇ ಜನಾಂಗದ ಮರಣ. ಕೈಗಾರಿಕೆಗಳೇನೋ ನಮ್ಮ ಮೇಲ್ಮೆಗೆ ಆವಶ್ಯಕ, ಆದರೆ ವ್ಯಕ್ತಿತ್ವವು ಸರ್ವಸ್ವವಾಗದೆ. ಇದನ್ನು ಕಾಪಾಡುವುದೇ ವಿಶೇಷ ಧರ್ಮವಾಗಿದೆ.

ಮೂಲಗೇಣಿಯ ಕುರಿತು ಹ್ಯಾಕೋರ್ಟು ತೀರ್ಪುಗಳು

ದಕ್ಷಿಣಕನ್ನಡದಲ್ಲಿ ಮತ್ತು ಉತ್ತರಕನ್ನಡದಲ್ಲಿ ಸಹ ನೆಲವು ಬಹಳ ಮೇಲು ತಗ್ಗು [illegible]ಸಾಗುವಳಿಗೆ ಬಹಳ ಶ್ರಮವಿರುವದರಿಂದ, ಒಕ್ಕಲುಗಳಿಗೆ ಅವರ ಕೆಲಸದಲ್ಲಿ ಹೆಚ್ಚು ಪ್ರೋತ್ಸಾಹವಾಗುವ ಹಾಗೆ ಬಹಳ ಜಮೀನುಗಳನ್ನು ಮೂಲಗೇಣಿಗೆ ಕೊಟ್ಟಿದ್ದಾರೆ. ಈ ಮೂಲಗೇಣಿಯು ಎಷ್ಟು ಶಾಶ್ವತವೆಂದರೆ, ಮೂಲಗೇಣಿಗಾರನು ನಿಸ್ಸಂತತಿಯಾಗಿ ಸತ್ತರೆ ಆತನ ಹಕ್ಕು ಆತನ ಧನಿಗೆ ಬಿಟ್ಟುಹೋಗದೆ ಸರಕಾರದವರೇ ವಹಿಸಿಕೊಳ್ಳುತ್ತಾರೆ. ದಕ್ಷಿಣಕನ್ನಡದಲ್ಲಿ ಮತ್ತು ಉತ್ತರ ಕನ್ನಡದಲ್ಲಿ (ಇವೆರಡು ಕೆನರಾ ಜಿಲ್ಲೆ ಎಂಬದಾಗಿ ಮುಂಚೆ ಒಂದಾಗಿತ್ತು) ಮನ್ರೊಸಾಹೇಬರು ಮಾಡಿದ ಕಂದಾಯವು ಕಾಯಮ್ ಕಂದಾಯವೆಂಬ ಊಹನೆಯಿಂದ ಮೂಲಗೇಣಿ ಕರಾರುಗಳಲ್ಲಿ ಮುಂದೆ ಹೆಚ್ಚು [illegible]ಜಿನ ವಿಷಯದಲ್ಲಿ [illegible] ಸ್ಥಿತಿಯಿಂದ ಹೆಚ್ಚದೆ ಬೇರೀಜನ್ನು ಯಾರು ಕೊ[illegible] ಇದ್ದದ್ದು ನಮ್ಮ ವಾಚಕರಿಗೆ ಗೊತ್ತಿದ್ದ ಸಂಗತಿಯೇ.

ಮನ್ರೊಸಾಹೇಬರ ಬೇರೀಜನ್ನು ಬದಲಾಯಿಸಿದ್ದು ಮುಖ್ಯವಾಗಿ ಉತ್ತರಕನ್ನಡದಲ್ಲಿ, ಆದ್ದರಿಂದ ಸುಮಾರು ೩೦ ವರುಷಗಳ ಹಿಂದೆಯೇ ಈ ಚರ್ಚೆಯು ಮುಂಬಾಯಿ ಹ್ಯಾಕೋರ್ಟಿನಲ್ಲಿ ತೀರ್ಮಾನವಾಗಿದೆ.

I. [illegible] ಅಲ್ಲಿ I. L. R. 3. Bombay 15ನೇ ಪುಟದಲ್ಲಿ [illegible]

[illegible]

ಇಷ್ಟು ಬೇರೇಜಿಗೆ, ಇಷ್ಟು ಮೂಲಗಾರನ ಮುನಾಫೆಗಿಂತ ಏಂಗಡಿಸಿಟ್ಟಿದ್ದರೆ, ಮೂಲಗಾರನು ಅನುಭವಿಸುವ ಹುಟ್ಟುವಳಿಯು ಈ ಮುನಾಫೆಗಿಂತ ಕಡಿಮೆಯಾಗಬಾರದು ಎಂದು ಹೇಳುವದರೆ ಅವಕಾಶವಿರಬಹುದು. ಇಂಥಾ ಶರ್ತವು ಕೆಲವು ಮೂಲಗೇಣಿ ಕರಾರುಗಳಲ್ಲಿ ಇದೆ, ಬೇರೆಯವುಗಳಲ್ಲಿ ಬಹುಶಾ ಕ್ಲುಪ್ತವಾಗಿ ಇರಲೂ ಬಹುದು".

II. I. L. R. 4. Bombay 473ನೇ ಪುಠದಲ್ಲಿ, ಈ ತೀರ್ಪಿಗನೇ ಅನುಸರಿಸಿ ಹೆಚ್ಚಿದ ತೀರ್ವೆಯನ್ನು ಮೂಲಗಾರನೇ ಕೊಡಬೇಕೆಂಬದಾಗಿ ವಿಧಿಸಿದ ತೀರ್ಮಾನದ ರಿಪೋರ್ಟು ಇದೆ.

ದಕ್ಷಿಣಕನ್ನಡದ ಮೂಲಗೇಣಿಯ ವಿಷಯದಲ್ಲಿ 1907ನೇ ಇಸವಿಯ ವರೆಗೆ ಮದ್ರಾಸ್ ಹೈಕೋರ್ಟಿನಲ್ಲಿ ತೀರ್ಮಾನವಾಗಲಿಲ್ಲ—ಕಾರಣವೇನಂದರೆ ಇಲ್ಲಿಯ ಸೆಟ್ಲ್ಮೆಂಟ್ ಈಚೆಗಯೇ ಆಗಿದ್ದದ್ದು.

III. 30. Madras 375ನೇ ಪುಠದಲ್ಲಿನ ಅಪೀಲಿನಲ್ಲಿ ಸರಕಾರದವರು (ನಿಸ್ಸಂತತಿಯಾಗಿ ಸತ್ತ ಮೂಲಗೇಣಿ ಒಕ್ಕಲಿನ ಆಸ್ತಿಯು ತಮಗೆ ಬಂದದ್ದರಿಂದ) ಮೂಲಗೇಣಿ ಒಕ್ಕಲಾಗಿ ಮೂಲಗಾರನಿಂದ ಬರುವ ಹೆಚ್ಚಿನ ತೀರ್ವೆಯನ್ನು ಸರಕಾರದವರೇ ಕೊಟ್ಟಿದ್ದರಿಂದ ಇಂಡಿಯನ್ ಕಂಟ್ರಾಕ್ಟ್ ಏಕ್ಟಿನ 69ನೇ ಪ್ರಕರಣದ ಪ್ರಕಾರ ಅದು ಮೂಲಗಾರನಿಂದ ತಮಗೆ ತಿರಿಗಿ ಬರಬೇಕೆಂಬದಾಗಿ ವಾದಿಸಿದರು. ಸರಕಾರದವರಿಗೆ ಸಲ್ಲುವ ರಿವೇಜನ್ನು ಸರಕಾರದವರೇ ಕೊಟ್ಟದ್ದು, ಹಣವು ಒಂದು ಕೈಯಿಂದ ಇನ್ನೊಂದು ಕೈಗೆ ಕೊಟ್ಟ ಹಾಗಾಯಿತು. ಇಂಥಾ ಸಂಗತಿಗೆ ಸದ್ರಿ 69ನೇ ಪ್ರಕರಣವು ತಗಲುವದಿಲ್ಲವೆಂಬ ಆಧಾರದ ಮೇಲೆ ಹೈಕೋರ್ಟಿನವರು ಅಪೀಲನ್ನು ತೆಗದು ಹಾಕಿದರು. ಆದ್ದರಿಂದ ಇದರಲ್ಲಿ ಹೆಚ್ಚಿದ ತರಿಗೆಯನ್ನು ಯಾರು ಕೊಡಬೇಕೆಂಬ ಪ್ರಶ್ನೆಯನ್ನು ತೀರ್ಮಾನ ಮಾಡಲಿಲ್ಲ.

IV. 1908ನೇ ಆಗೋಸ್ತಿನಲ್ಲಿ ಬಹುಮಾನಪಟ್ಟ ಮನ್ರೋ ಮತ್ತು ಅಬ್ದುರ ರಹಿಮ್ ನ್ಯಾಯಾಧಿಪತಿಗಳು. ಕಾರಣಗಳನ್ನು ಹೆಚ್ಚು ಚರ್ಚಿಸದೆ ಬಹಳ ಚುಟುಕಾದ ತೀರ್ಪಿನಲ್ಲಿ, ಹೆಚ್ಚಿನ ತರಿಗೆಯನ್ನು ಮೂಲಗಾರನು ಕೊಡಬೇಕೆಂಬದಾಗಿ ವಿಧಿಸಿದರು. (ಈ ಮತ್ತು ಇದರ ಕೆಳಗೆ ತೋರಿಸಿದ ತೀರ್ಪಿನ ವಿಷಯದಲ್ಲಿ ಹಿಂದಿನ ಸ್ವದೇಶಾಭಿಮಾನಿಯ ಸಂಚಿಕೆಗಳಲ್ಲಿ ಹೇಳಿಯದೆ.)

V. 1909ನೇ ಜುಲಾಯಿಯಲ್ಲಿ ಬಹುಮಾನಪಟ್ಟ ಮಿಲ್ಲರ್ ಮತ್ತು ಶಂಕ್ರನ್ ನಾಯರ್ ಇವರು ಕೊಟ್ಟ ತೀರ್ಪಿನ ಅಭಿಪ್ರಾಯ ಹ್ಯಾಗಂದರೆ:—

ವ್ಯಾಜ್ಯಕ್ಕೆ ಸಮ್ಮಂಧಿಸಿದ ಮೂಲಗೇಣಿ ಕರಾರಿನ ಸಮಯದಲ್ಲಿ, ಇನ್ನುಮುಂದೆ ತೀರ್ವೆ ಹೆಚ್ಚಿಸ್ಯಾರೆಂಬ ಊಹನೆಯು ಕರಾರು ಮಾಡಿದವರ ಮನಸ್ಸಿನಲ್ಲಿ ಇರಲಿಲ್ಲ. ಬೇರೆ ಸನಾವರೂ ಬಂಬಾಯಿತು ಇಲ್ಲದ್ದಕ್ಕೆ, ಮೂಲಗಾರನೇ ಹೆಚ್ಚಿದ ತೀರ್ವೆ ಕೊಡತಕ್ಕೆ ಬದ್ಧನಾಗಿರುತ್ತಾನೆ, ಎಂದು ಎಲ್ಲಾ ಸಂಗತಿಗಳಲ್ಲಿ ಸರ್ವಸಾಧಾರಣ ಕ್ರಮವನ್ನು ಇದುವರೆ ಅಸಾಧ್ಯ. ಸರಕಾರದವರ ಹೇಳಿಕೆಪ್ರಕಾರ, ಬೇರೆಜು ಹೆಚ್ಚಿಸುವದು ಧಾನ್ಯಗಳ ಧಾರಣೆ ಹೆಚ್ಚಿದ್ದರಿಂದ ಕೈತರಿಗೆ ಆಗುವ ನಷ್ಟದಲ್ಲಿ ಸರಕಾರದವರಿಗೂ ಪಾಲುಬೇಕೆಂಬ ಕಾರಣದಿಂದುಂಟಾಗಿರುತ್ತದೆ. ಆದ್ದರಿಂದ ಮೂಲಗೇಣಿ ಒಕ್ಕಲು ನಗ್ದುಗೇಣಿ ಕೊಡುವದಾದರೆ, ಹೆಚ್ಚಿದ ಬೇರೆಜನ್ನು ಆತನೇ ಕೊಡುವದೆ, (ಮೂಲಗೇಣಿಯಲ್ಲಿ ಇದಕ್ಕೆ ವಿರೋಧವಾದ ಶರ್ತವಿದ್ದರೆ) ಬದ್ಧನಾಗಬೇಕು. ಮತ್ತು ನೆಗ್ದು ಗೇಣಿ ಕೊಡುವ ಒಕ್ಕಲಿನ ಕೃತಗಳಿಂದ ಬೇರೆಜು ಹೆಚ್ಚಿದ್ದಾದರೆ, ಕೃತಗಳ ಫಲನೆಲ್ಲಾ ಆತನೇ ಅನುಭವಿಸುವದರಿಂದ, ಹೆಚ್ಚಿದ ಬೇರೆಜನ್ನು ಆತನೇ ಕೊಡಬೇಕು. ಆದರೆ ನಮ್ಮ ಮುಂದೆ ಇರುವ ಸಂಗತಿಯ ಪ್ರಕಾರ, ಗೇಣಿಯು, ಆಸ್ತಿಯಲ್ಲಿ ಹುಟ್ಟಿದ ಪೈದಾಸರೂಪವಾಗಿ ಅಥವಾ ಸ್ವಲ್ಪ ಸ್ವಲ್ಪ ನಗ್ದಾಗಿ ಕೊಡುವದಾದರೆ, ಹೆಚ್ಚಿದ ಬೇರೆಜನ್ನು ಧನಿಗೂ ಒಕ್ಕಲಿಗೂ ಅವರವರು ಅನುಭವಿಸುವ ಹುಟ್ಟುವಳಿಯ ಅಂಶದ ಪ್ರಮಾಣದ ಮೇರೆಗೆ ಹಂಚಿಹಾಕುವದು ವಿಹಿತವಾಗಿ ತೋರುತ್ತದೆ; ಅದು ಹ್ಯಾಗಂದರೆ ಪೈದಾಸಿನ ಅರ್ಧವನ್ನು ಒಕ್ಕಲು ಅನುಭವಿಸಿ, ಅರ್ಧವನ್ನು ಮೂಲಗಾರನು ಅನುಭವಿಸುವದಾದರೆ, ಹೆಚ್ಚಿದ ಬೇರೇಜಿನ ಅರ್ಧಾಂಶವನ್ನು ಇಬ್ಬರೂ ಸಮವಾಗಿ ಕೊಡಬೇಕು.

ಈ ತೀರ್ಪಿನಿಂದ ಮೂಲಗಾರರಿಗೆ ಬಹಳ ಸಮಾಧಾನವಾಗಿರಬೇಕು. ಆದರೆ ಈ ತೀರ್ಪಿಗೆ ದಸ್ಕತು ಹಾಕಿದ ಬಹುಮಾನಪಟ್ಟ ಮಿಲ್ಲರ್ ನ್ಯಾಯಾಧಿಪತಿಗಳೇ ಈ ತೀರ್ಪುಕೊಟ್ಟ 7 ದಿವಸದನಂತರ ಇನ್ನೊಂದು ತೀರ್ಪುಕೊಟ್ಟರು.

VI. ಜಸ್ಟಿಸ್ ಮಿಲ್ಲರ್ ಧೊರೆಗಳು ಒಂಟಿಯಾಗಿ ಕೊಟ್ಟ ಮೇಲೆ ಸೂಚಿಸಿದ ತೀರ್ಪಿನ ಅಭಿಪ್ರಾಯ:

ಈ ವ್ಯಾಜ್ಯಕ್ಕೆ ಸಮ್ಮಂಧಪಟ್ಟ ಮೂಲಗೇಣಿ ಕರಾರಿಗೂ ಸೆಕೆಂಡ್ ಅಪೀಲು No. 528 of 1908, (ಅಂದರೆ ನಾವು ಇಲ್ಲಿ ಹಾಕಿದ Vನೇ ನಂಬ್ರದ ತೀರ್ಪು) ಇದಕ್ಕೆ ಸಮ್ಮಂಧಪಟ್ಟ ಕರಾರಿಗೂ ವ್ಯತ್ಯಾಸವುಂಟು. ಈ ಕರಾರಿನ ಪ್ರಕಾರ ಮೂಲಗೇಣಿ ಒಕ್ಕಲು ಬೇರೇಜು ತೆರುವದೆ ಬದ್ಧನೇ ಅಲ್ಲ. ಆದ್ದರಿಂದ ಆ ತೀರ್ಪು ಈ ಸಂಗತಿಗೆ ತಗಲುವದಿಲ್ಲ. ಆದ್ದರಿಂದ ಈ ಅಪೀಲನ್ನು ಸೆಕೆಂಡ್ ಅಪೀಲು No. 1245 of 1907 (ನಾವು ಇಲ್ಲಿ ಕೊಟ್ಟ IVನೇ ನಂಬ್ರದ ತೀರ್ಪು) ಪ್ರಕಾರ, ತೀರ್ಮಾನ ಮಾಡಿದರು.

ಆದ್ದರಿಂದ ಇದರಲ್ಲಿ ಮೂಲಗಾರನೇ ಹೆಚ್ಚಿದ ಬೇರೇಜನ್ನು ಕೊಡಬೇಕೆಂಬದಾಗಿ ವಿಧಿಸಿದರು.

ಬಹುಮಾನಪಟ್ಟ ಮಿಲ್ಲರ್ ಧೊರೆಗಳು ಕೊಟ್ಟ ತೀರ್ಪಿನ ಪ್ರಕಾರ, ಬೇರೇಜನ್ನು ಮೂಲಗಾರನು ಕೊಡುವ ಸಂದರ್ಭದಲ್ಲಿ ಪೂರಾ ಹೆಚ್ಚಿದ್ದನ್ನೂ ಆತನೇ ವಹಿಸಬೇಕು; ಒಕ್ಕಲು ಕೊಡುವ ಪಕ್ಷದಲ್ಲಿ (ನಗದುಗೇಣಿ ಅಲ್ಲದ ಸಂದರ್ಭಗಳಲ್ಲಿ) ಹೆಚ್ಚಿದ ಬೇರೇಜಿನ ಅಂಶವನ್ನೂ ಮೂಲಗಾರನೇ ಕೊಡಬೇಕು. ಆದರೆ ಇಲ್ಲಿ ಕೊಟ್ಟ ನಂಬ್ರ Iನೇ ತೀರ್ಪಿನಲ್ಲಿ ಜಸ್ಟಿಸ್ ವೆಸ್ಟರು ಕೊಟ್ಟ ಅಭಿಪ್ರಾಯದ ಮೇರೆಗೆ ಹೋಗುವದಾದರೆ; ಕೆಲವು ಸಂದರ್ಭದಲ್ಲಿ ಹೆಚ್ಚಿದ ಬೇರೇಜನ್ನು ಪೂರಾ ಮೂಲಗಾರನೇ ಕೊಡಬೇಕು. ಕೆಲವು ಸಂದರ್ಭದಲ್ಲಿ ಒಕ್ಕಲೇ ಕೊಡಬೇಕು. ಮೂಲಗೇಣಿ ಕರಾರಿಗೇನೇ ಆಧರಿಸಿ ಹೋಗುವದಾದರೆ, ಈ ಎರಡನೇ ಅಭಿಪ್ರಾಯವು ಹೆಚ್ಚು ನ್ಯಾಯವೆಂದು ತೋರುತ್ತದೆ.

ಈ ಹಲವು ತರದ ತೀರ್ಪುಗಳಿಂದ ಮೂಲಗೇಣಿ ಆಸ್ತಿಗಳ ಕ್ರಯವು ಬಹಳ ಚಂಚಲವಾಗಿ ಕೈತರಿಗೆ ಬಹಳ ತೊಂದರೆಯಾಗುವದರಿಂದ, ಈ ಚರ್ಚೆಯನ್ನು ಮದ್ರಾಸ್ ಹೈಕೋರ್ಟಿನಲ್ಲಿ ಫುಲ್‌ಬೆಂಚಿನ ಮುಂದೆ ಇಟ್ಟು ಬೇಗ ಖಂಡಿತವಾಗಿ ತೀರ್ಮಾನಿಸುವರೆಂದು ನಂಬುತ್ತೇವೆ. ಮತ್ತು ಈ ಸಂಗತಿಯಲ್ಲಿ ಕಾನೂನು ಎಂತಹ ಇರಲಿ ಮೂಲಗಾರರಿಗೂ ಒಕ್ಕಲುಗಳಿಗೂ ನ್ಯಾಯವಾಗುವ ಹಾಗೆ ಹೊಸ ಕಾನೂನನ್ನು ಏರ್ಪಡಿಸುವದು ಸರಕಾರದವರಿಗೆ ಅಸಾಧ್ಯವಲ್ಲ. ಸರಕಾರದವರು ಮಾಡಿದ ಸೆಟ್ಲ್ಮೆಂಟಿನಿಂದಲೇ ಈ ಚರ್ಚೆಯು ಉತ್ಪತ್ತಿಯಾದ್ದರಿಂದಲೂ, ಬೇರೆಜು ಶಾಶ್ವತವೆಂದು ಸರಕಾರದ ಅಧಿಕಾರಿಗಳು ಜನರಿಗೆ ಹೇಳಿದ್ದರಿಂದಲೂ, ಮೂಲಗಾರರಿಗೆ ಇಂಥಾ ಕಷ್ಟ ಬಂದಿದ್ದರಿಂದಲೂ, ಸರಕಾರದವರು, ನ್ಯಾಯನಿರ್ಮಾಣ ಸಭೆಯಲ್ಲಿಯೇ ಈ ಚರ್ಚೆಯನ್ನು ತೀರಿಸುವದು ವಿಹಿತವಾಗಿ ತೋರುತ್ತದೆ.

B. L.

ಶ್ರೀಕೃಷ್ಣ ಚರಿತ್ರ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದುದು.)

"ಭಾದ್ರಪದ ಮಾಸದಲ್ಲಿ, ನಾನು ಸ್ವಪ್ನದಲ್ಲಿ ಕಂಡ ಮಹಾಮೂರ್ತಿಯನ್ನು ಗೋವರ್ಧನ ಗಿರಿಯ ಶಿಖರದ ಮೇಲೆ ಸ್ಥಾಪಿಸಿದೆನು. ಗೋವಳರ ನಿರ್ಮಲವಾದ ಹೃದಯಂಗಳಲ್ಲಿ, ಆಕಾಶದಲ್ಲಿ ನಕ್ಷತ್ರಗಳು ಉದಯವಾಗುವ ತೆರದಿಂದ, ವೈಷ್ಣವ ಧರ್ಮವು ಬೇಗ ತೊಡಗಿತು. ನನ್ನ ಈ ಕೃತ್ಯದಿಂದ ಇಂದ್ರನ ಉಪಾಸಕರಾದ ಅನೇಕ ಮೂಢರಾದ ಬ್ರಾಹ್ಮಣರು ಅತ್ಯಂತ ಕೋಪಾವಿಷ್ಟರಾಗಿ, ತಮ್ಮ ಅನುಚರರನ್ನು ಕೂಡಿಕೊಂಡು, ಗೋವರ್ಧನ ಪರ್ವತವನ್ನು ಮುತ್ತಿದರು. ಬಾಣಗಳ ಮಳೆಯು ಮುಸಲಧಾರೆಯಿಂದ ಬಿದ್ದಿತು. ಆದರೆ ನಾರಾಯಣನ ಕೃಪೆಯಿಂದ ಮತ್ತು ಬಲರಾಮನೇ ಮೊದಲಾದ ಗೋವಳರ ಸಹಾಯದಿಂದ, ಇಂದ್ರನ ಈ ಮೂಢ ಉಪಾಸಕರ ದೆಸೆಯಿಂದ ಗೋವರ್ಧನವನ್ನು ನನ್ನ ತೋಳುಗಳ ಬಲದಿಂದ ಏಳು ದಿನಗಳ ವರೆಗೆ ರಕ್ಷಣೆ ಮಾಡಿದೆನು. ಶತ್ರುಗಳು ಸೋತುಹೋಗಿ, ಗಾಳಿಯಿಂದ ಮುಗಿಲುಸೆರಣಿಯು ದಿಕ್ಕುಪಾಲಾಗಿ ಹೋಗುವಂತೆ, ಎಲ್ಲೆಲ್ಲಿಯೋ ಚದರಿಹೋದರು. ಈ ತೆರದಿಂದ ವೈಷ್ಣವ ಧರ್ಮದ ಧ್ವಜವನ್ನು ನಾನು ಗೋವರ್ಧನ ಗಿರಿಯ ಶಿಖರದಲ್ಲಿ ಎತ್ತಿದೆನು. ನೀಲ ವರ್ಣದ ಪತಾಕೆಯಲ್ಲಿ ಶುಭ್ರವಾದ ಸುದರ್ಶನ ಚಕ್ರವು ಎಂಟು ದಿಕ್ಕುಗಳಲ್ಲಿಯೂ ಹಾರಲಾರಂಭಿಸಿತು. ಈ ಪವಿತ್ರವಾದ ಪತಾಕೆಯು ತಂಪಾದ ನೆಳಲು ಇಡೀ ಭರತಖಂಡವನ್ನು ವ್ಯಾಪಿಸಿ, ಅದನ್ನು ಉದ್ಧಾರ ಮಾಡದಿರುವುದೇ? ಆ ದಿನದಿಂದ ಗೊಲ್ಲರೂ ಗೊಲ್ಲತಿಯರೂ ಭಕ್ತಿರಸದ ಕಡಲಿನಲ್ಲಿ ತೇಲ ತೊಡಗಿದರು.

"ಮಳೆಗಾಲವು ಹೋಯಿತು—ಶರತ್ಕಾಲವು ಬಂದಿತು. ಯಮುನೆಯ ತೀರದಲ್ಲಿರುವ ವೃಂದಾವನದಲ್ಲಿ ಶರದೃತುವಿನ ಹುಣ್ಣಿಮೆಯು ಅಪೂರ್ವವಾದ ಶೋಭೆಯನ್ನು ಹುಯ್ಯುತ್ತದೆ. ಇಂತಹ ಸಮಯದಲ್ಲಿ ಗೋವರೂ ಗೋಪಿಕೆಯರೂ ರಾಸೋತ್ಸವವನ್ನು ಕೈಗೊಂಡರು. ಹಣ್ಣುಹಂಪಲು, ಹೂವುಗಳು ಮೊದಲಾದವುಗಳಿಂದ ಪದ್ಮದಲ್ಲಿ ವಿರಾಜಮಾನನಾಗಿರುವ ನಾರಾಯಣನನ್ನು ಪೂಜಿಸಿದರು. ಗಂಡಸರು, ಹೆಂಗಸರು, ಮಕ್ಕಳು ಎಲ್ಲವರು ಕೂಡಿ ಭಕ್ತಿರಸದಲ್ಲಿ ಮಗ್ನರಾಗಿ ಹರಿನಾಮವನ್ನು ಹಾಡಿದರು. ಪ್ರೇಮಭರದಿಂದ ಎಷ್ಟೋ ಮಂದಿ ಮೈಮರೆತರು! ವೃದ್ಧರು, ಪ್ರೌಢರು, ತರುಣರು ಒಬ್ಬರೊಬ್ಬರ ಕೈಯನ್ನು ಹಿಡಿದು ಪ್ರೇಮದಿಂದ ಕರಗಿಹೋಗಿ, ನನ್ನ ಸುತ್ತಲು ಮಂಡಲಾಕಾರದಿಂದ ಕುಣಿಯ ತೊಡಗಿದರು; ನಾನೂ ಅದರಲ್ಲೇ ವಿಲೀನನಾಗಿ, ಕೊಳಲನ್ನು ಊದುತ್ತ ನರ್ತಿಸಲಾರಂಭಿಸಿದೆನು.

"ನಿರ್ಮಲವಾದ ನಭೋಮಂಡಲದಲ್ಲಿ ಹಿಂದೇಸವನೇ ಶಂಖಧ್ವನಿಯಾಯಿತು. ಸುದರ್ಶನ ರೂಪದಿಂದ ಚಂದ್ರನು ಮುಂದು ನಡೆದನು. ನಿದ್ರೆಯಿಂದೆದ್ದು ನಡೆಯುವ ಮನುಷ್ಯನಂತೆ ನಾನು ವಿಮತನಾಗಿ ಹಿಂದುಗಡೆಯೇ ಹೋಗುತ್ತ, ನಿಬಿಡವಾದ ವನವನ್ನು [illegible]

ನಾನು ಎಚ್ಚೆತ್ತು ನೋಡಲು, ಯಶೋದೆಯೂ ಬೇರೆ ಗೋಪಿಕೆಯರೂ ನನ್ನನ್ನು ಅಗಲಿದ್ದು ದರಿಂದ ವ್ಯಥಿತರಾಗಿ ನನ್ನನ್ನು ಹುಡುಕುತ್ತಿದ್ದರೆಂದು ತಿಳಿಯಬಂದಿತು. ಮರಳಿ ನಾನು ಅವರಿಗೆ ಕಾಣ ಸಿಕ್ಕುವುದೇ, ಅವರು ಆನಂದದಿಂದ ನನ್ನ ಕೈ ಹಿಡಿದು ನನ್ನ ಗುಣಗಳನ್ನು ಬಣ್ಣಿಸುತ್ತ ಕುಣಿಯಲಾರಂಭಿಸಿದರು. ನದಿಯ ದಂಡೆಯಲ್ಲಿ ಕೆಲವು ಗೊಲ್ಲತಿಯರು ಮೈಮರೆತು ಬಿದ್ದಿದ್ದರು, ಬೇರೆ ಕೆಲವರು ತೊತ್ತುಗಳಂತೆ ನನ್ನ ಚರಣ ಸೇವೆಯನ್ನು ಮಾಡಿದರು, ಎಷ್ಟೋ ಗೋಪಿಕೆಯರ ಹೃದಯದಲ್ಲಿ ನನ್ನನ್ನು ನೋಡುತ್ತಲೇ ಮಾತೃಪ್ರೇಮವು ಅಂಕುರಿಸಿ, ಅವರು ನನ್ನನ್ನು ಮುದ್ದಿಟ್ಟರು, ಕೆಲವರು ಸಖೀಭಾವದಿಂದ ನನ್ನನ್ನು ತಮ್ಮ ಎದೆಗೆ ಒತ್ತಿಕೊಂಡರು. ಬೇರೆ ಕೆಲವರು ಪ್ರೇಮಾತಿಶಯದಿಂದ ನನ್ನನ್ನು ಗಾಢವಾಗಿ ಆಲಿಂಗಿಸಿದರು. ಪತಿ ಪುತ್ರ, ತಂದೆ, ತಾಯಿ, ಮನೆಮಾರು, ಹೆಚ್ಚೇನು, ಅವರ ಜೀವನ ಸರ್ವಸ್ವವನ್ನು ಕೂಡಾ—ಒಂದು ಕ್ಷಣಕಾಲಕ್ಕೆ ಅವರೆಲ್ಲರು ನನ್ನಲ್ಲಿ ಮರೆತುಬಿಟ್ಟರು. ಅವರ ಆ ಭಕ್ತಿ, ಅವರ ಆ ಪ್ರೇಮ, ಒಬ್ಬ ಚಿಕ್ಕ ಮಗುವಿನಲ್ಲಿ ತಮ್ಮ ಆತ್ಮವನ್ನು ಸಮರ್ಪಿಸಿ, ಅತನಲ್ಲಿ ವಿಲೀನವಾಗುವಂತಹ ಆ ಭಕ್ತಿಯ ಪರಮಾವಸ್ಥೆ, ಈ ಎಲ್ಲವನ್ನು ವಿಚಾರಿಸಲು ಅರ್ಜುನನೇ, ಸ್ತ್ರೀಯರ ಹೃದಯವೆಂಬುದು ದುರ್ಗಮದ ಕ್ಷೇತ್ರವೇ ಆಗಿಯದೆ ಎಂದು ನಿನಗೆ ತಿಳಿಯಬಂದೀತು!

"ಆ ತರುವಾಯ ವಸಂತಕಾಲವು ಬಂದಿತು. ಪಕ್ಷಿಗಳು ಹಾಡ ತೊಡಗಿದವು ಮೊಗ್ಗೆಗಳು ಅರಳಿ ಹೂತವು. ತೆಂಗಾಳಿಯು ಮಂದಮಂದವಾಗಿ ಬೀಸಲಾರಂಭಿಸಿತು. ವಸಂತದ ಕಡೆಯ ಹುಣ್ಣಿಮೆಯಲ್ಲಿ ನಾವು ವರುಣ ನಾರಾಯಣನ ಪೂಜೆಯನ್ನು ಮಾಡಿ ವಸಂತೋತ್ಸವವನ್ನು ಆಚರಿಸಿದೆವು. ಬಾಲಕ ಬಾಲಕಿಯರು, ಯುವಕ ಯುವತಿಯರು ಮೊದಲಾದವರು ತಮ್ಮತಮ್ಮ ವಯೋಮಾನಗಳಿಗನುಸಾರವಾಗಿ ಒಟ್ಟುಗೂಡಿ ಆನಂದೋತ್ಸವದಿಂದ ಅರಣ್ಯವನ್ನು ಅಲ್ಲೋಲಕಲ್ಲೋಲ ಮಾಡಿದರು. ಕೇಸರ ಬಾವನ್ನ (ಗಂಧ) ಕುಂಕುಮ ಮುಂತಾದವುಗಳನ್ನು ಎರಚುವುದರಿಂದ ಆಕಾಶವು ಸಂಧ್ಯಾಕಾಲದ ಮೋಡಗಳಿಂದ ಮುಚ್ಚಿ ಹೋದಂತೆ ತೋರಿಬಂದಿತು. ಹೆಂಗಸರು ಮತ್ತು ಗಂಡಸರು, ತಾವು ಬೇರಬೇರೆಯಾಗಿ ಎರಡು ಗುಂಪುಗಳನ್ನು ಕಟ್ಟಿಕೊಂಡು, ಎಲ್ಲಾ ಕಡೆ ನಾಡಲಾರಂಭಿಸಿದರು. ಸ್ತ್ರೀಯರ ಗುಂಪಿನಲ್ಲಿ,—ಎಳೆಬಿಸಿಲುಗಳಲ್ಲಿ ಸೂರ್ಯನಿಗೆ ಅರಳಿದ ತಾವರೆಯಂತಹ ಮೋರೆಗಳು, ಗುಂಗುರುಗುಂಗುರಾಗಿರುವ ಮುಂಗುರುಳುಗಳು, ಗಿರಿಗೆಯ ವರೆಗೆ ಹರಿಯುವ ದಟ್ಟವಾಗಿ ಹೆಣೆದ ತುಂಬಿಯ ಸಾಲುಗಳಂತಿರುವ ಕೂದಲುಗಳು, ಉನ್ನತವಾದ ವಕ್ಷಸ್ಥಲಗಳು, ಕುಂಕುಮದಿಂದ ರಂಗಾಯಿಸಿರುವ ಕಿನ್ನದ ಕಮಲದ ಎಳೆನಾಳದಂತಿರುವ ಬಾಹುಗಳು, ಮತ್ತು ಕ್ಷಣಕಾಲ ಒಂದೆಡೆಯಲ್ಲಿ ನಿಲ್ಲದೆ, ಎಂದಿಗೂ ಅತ್ತಿತ್ತ ಓಲಾಡುವ ಬೇಟವುಳ್ಳ ಕಣ್ಣುಗಳು,—ಇವು ಸರ್ವತ್ರ ಕಂಡುಬರುತ್ತಿದ್ದವು. ಪುರುಷರ ಸಂದಣಿಯಲ್ಲಿ—ಸೂರ್ಯನಂತಹ ತೇಜದಿಂದ ಹೊಳೆಯುವ ವದನಗಳು, ವಿಶಾಲವಾದ ಮತ್ತು ಜಗತ್ತನ್ನು ಹೊರಲು ಅವಕಾಶವುಳ್ಳ ಎದೆ ಮತ್ತು ಹೆಗಲುಗಳು, ಉದ್ದವಾಗಿ ಮೊಳಕಾಲನ್ನು ಮುಟ್ಟುವ ಕೈಗಳು ಮತ್ತು ಶಾಂತವಾಗಿ ಗಂಭೀರವಾಗಿ ಕೆಂಪಾದ ಕುಡಿಗಳುಳ್ಳ ಕಣ್ಣುಗಳು—ಎಲ್ಲಾ ಕಡೆಯಲ್ಲಿಯೂ ನೋಡ ಸಿಕ್ಕುತ್ತಿದ್ದವು. ಮುಖ್ಯತಃ ಒಂದು ಕಡೆಯಲ್ಲಿ ಕೋಮಲತೆಯು ಶರೀರವಾಗಿ ತೋರುತ್ತಿತ್ತು, ಮತ್ತು ಬೇರೊಂದು ಕಡೆಯಲ್ಲಿ ಶೌರ್ಯವು ಆವಿರ್ಭವಿಸಿತ್ತು.

"ಯಮುನೆಯ ತೀರದಲ್ಲಿ ಸಂಗೀತ ಧ್ವನಿಯು ಕೇಳಬರುತ್ತಿತ್ತು. ಕೆಲವರು ಕುಣಿಯುತ್ತಿದ್ದರು, ಕೆಲವರು ಹಾಡುತ್ತಿದ್ದರು. ಬೇರೆ ಕೆಲವರು ಮರಗಳ ಬಗ್ಗಿರುವ ಕೊಂಬೆಗಳನ್ನು ಉಯ್ಯಾಲೆಯಂತೆ ಕಟ್ಟಿ ಅದರಲ್ಲಿ ತೂಗುತ್ತಿದ್ದರು—ತೂಗುತ ತೂಗುತ, ವಸಂತ ಮಾರುತನಿಂದ ಆಂದೋಲಿತವಾಗಿ ಸಜೀವವಾದೊಂದು ಹೂವುಗಳ ಗೊಂಚಲು ತೂಗುತ್ತದೋ ಎಂತೆ ತೋರುತ್ತಿತ್ತು. ಪ್ರೇಮದ ಪ್ರವಾಹದಲ್ಲಿ ಮುಳುಗಿ ಹೋದ ಆ ಆನಂದಕಾನನದಲ್ಲಿ ಸಾವಿರಾರು ಮಂದಿ ಬನಾರ್ಯ ಜಾತಿಯ ನಾಗರೆಂಬವರು, ಗೋಪವೇಷ ವೇಷದಿಂದ ಬಂದು ಈ ಉತ್ಸವದಲ್ಲಿ ಸೇರಿದರು. ನಡು ಇರುಳು ದಾಟಿದ ಮೇಲೆ, ಈ ನಾಗರ ಮತ್ತು ಗೋಪವೇಷರ ಸೈನ್ಯವು, ಏನೊಂದು ಸಪ್ಪಳನ್ನು ಮಾಡದೆ, ಯಮುನೆಯ ಪ್ರವಾಹದ ಎಡಬದಿಯಿಂದ ಮಥುರೆಯ ಕಡೆಗೆ ನಡೆಯಿತು. ಹಾಗೆಯೇ ಈ ದಳದ ಸಮೇತವಾಗಿ ನಾವು ಮಥುರೆಯನ್ನು ಪ್ರವೇಶಿಸಿದೆವು. ಅಲ್ಲಿಯ ಯಜ್ಞ ಧನುಸ್ಸನ್ನು ನಾನು ಮುರಿದುಹಾಕಿದೆನು. ಮತ್ತು ದ್ವಂದ್ವ ಯುದ್ಧದಲ್ಲಿ ಕಂಸನನ್ನು ವಧಿಸಿ, ಬೇರೆ ಕದಿದಾಟವಿಲ್ಲದೆ ಮಥುರೆಯನ್ನು ಸ್ವೈವಶ ಮಾಡಿಕೊಂಡೆವು.

"ಅರ್ಜುನನೇ, ಈ ಕಥೆಯನ್ನು ನೀನು ಕೇಳಿಯೇ ಇರುವೆ. ಇದಾದನಂತರ, ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸುವುದಕ್ಕೆ, ಮುಂಚೆ ನಾನು ಅವರನ್ನಿಟ್ಟಿರುವ ಕಾರಾಗೃಹಕ್ಕೆ ಹೋದೆನು. ಅಲ್ಲಿ ಎಂತಹ ಶೋಕಕಾರಕವಾದ ಮತ್ತು ಹೃದಯ ವಿದಾರಕವಾದ ನೋಟವು ನನ್ನ ಕಣ್ಣುಗಳನ್ನು ಕುಕ್ಕಿತೆಂಬುವುದನ್ನು ನಿನಗೆ ಹೇಳುವುದು ನನಗೆ ಅಸಾಧ್ಯ. ನನ್ನ ತಂದೆತಾಯಿಯರ ಮೋರೆಗಳು ತಮ್ಮ ಎಂಟು ಮಂದಿ ಮಕ್ಕಳ ಮೃತ್ಯು ಶೋಕದಿಂದ ಮತ್ತು ಬೇರೆ ಅನೇಕ ಕ್ಲೇಶಗಳಿಂದ ಒಣಗಿ ಬಾಡಿಹೋಗಿದ್ದವು. ನನ್ನನ್ನು ನೋಡುತ್ತಲೇ ಅವರ ಕಣ್ಣುಗಳಿಂದ ಅಶ್ರುಗಳ ಧಾರೆಯು ಸುರಿಯಿತು. ಅವರು ನನ್ನನ್ನು [illegible] ಮುಂದೆಯೂ ಮತ್ತು [illegible]

ಕೀರ್ತಿಶೇಷ ಅಮ್ಮೆಂಬಳ
ಸುಬ್ರಾಯ ಪೈಗಳವರ
ಭಾವ ಚಿತ್ರಗಳು.
ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6 ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ.

ಕವಿ ಎಂಡ್ ಸನ್ಸ್ ಮಂಗಳೂರು, ದ. ಕ.

ವೀರೇಂದ್ರನೇ, ಇದೋ ನಿನ್ನ ತಾಯಿ ತಂದೆಯರು ಇಲ್ಲಿ ನಿನ್ನ ಮುಂದೆ ಇರುವರು'. ನನಗೆ ಕವಲು ಬಂದು ನಾನು ಅವರ ಕಾಲಡಿಗಳ ಬಳಿಯಲ್ಲಿ ಮೈಮರೆತು ಬಿದ್ದೆನು.

"ಅರ್ಜುನನೇ, ತನ್ನ ಅಳಿಯನ ವಧೆಯಿಂದ ಕ್ರುದ್ಧನಾಗಿ ಮಗಧ ದೇಶದೊಡೆಯನಾದ ಜರಾಸಂಧನು ಹದಿನೇಳು ಬಾರಿ ಪ್ರಬಲನಿಯಾದ ಮಥುರೆಯ ಮೇಲೆ ದಂಡೆತ್ತಿ ಬಂದನು—ಹದಿನೇಳು ಬಾರಿಯೂ ಅವನು ಸೋತು ಮರಳಿದನು. ಆದರೆ ಈ ಕದನಗಳಲ್ಲಿ ನನ್ನ ಸಹಚರರಾದ ಹಸಿನಾರು ಸಾವಿರ ಮಂದಿ ಮಹಾಯೋಧರು ಬೂತಲಶಾಯಿಯರಾಗಿ ವೀರಸ್ವರ್ಗವನ್ನು ಪಡೆದರು. ಅನಾಥರಾದ ಅವರ ವಿಧವೆಯರ ಗೋಳುಗಳಿಂದ ಮಥುರಾ ನಗರಿಯು ತುಂಬಿತು. ಮತ್ತು ನಾಗರಾಜನು, ತನ್ನ ಸೈನ್ಯವನ್ನು ಕೂಡಿ, ನನ್ನನ್ನು ಬಿಟ್ಟು ತೆರಳಿದನು. ಆಗ್ಗೆ ಈ ರಕ್ತ ಪ್ರವಾಹದಲ್ಲಿ ನನ್ನ ಜೀವನದ ವ್ರತವು ಒಂದು ಪಕ್ಕದಲ್ಲಿ ತೇಲಿ ಹೋದೀತು ಎಂದು ನಾನು ಆಲೋಚಿಸಿ, ಈ ತಂಟೆಗಳನ್ನು ಕಡಿಗಾಣಿಸಿ, ಈ ರಕ್ತ ಪ್ರವಾಹವು ಇನ್ನೆಂದಿಗೂ ಮರಳಿಯಾಗದಂತೆ ಮಗಧೇಶ್ವರನ ಬೀಗನಾದ ಉಗ್ರಸೇನ ರಾಜನನ್ನು ಮಥುರೆಯ ಸಿಂಹಾಸನದಲ್ಲಿ ಕುಳ್ಳಿರಿಸಿದೆನು, ಮತ್ತು ಸಾಗರಮಧ್ಯದಲ್ಲಿ ಈ ದ್ವಾರಕಾ ನಗರಿಯನ್ನು ಸ್ಥಾಪಿಸಿ, ಕರಗಿಹೋದ ಚಿತ್ತ ಕರಣದಿಂದ ಆ ವ್ರಜ ಭೂಮಿಯನ್ನು ಬಿಟ್ಟುಬಿಟ್ಟು, ಅನಾಥೆಯರಾದ ಆ ಹದಿನಾರು ಸಾವಿರ ಸ್ತ್ರೀಯರನ್ನು ನನ್ನೊಡನೆ ಕರೆದುಕೊಂಡು ಅಲ್ಲಿಂದ ಬಂದು ಇಲ್ಲಿ ನಿಂತೆನು. ಇಲ್ಲಿಗೆ ನನ್ನ ಚರಿತ್ರದ ಮೊದಲನೆಯ ಅಂಕವು ಮುಗಿದು ಎರಡನೆಯಂಕವು ಆರಂಭಿಸುವುದು."

(ಮುಂದೆ ಸಾಗುವುದು).

ಬಹುಮೂತ್ರದ ವ್ಯಾಧಿಯು. ಪ್ಲೇಗು ಕಾಲರಾ ಮತ್ತು ಮಲೆಜ್ವರ ರೋಗಗಳು ಹಿಂದುಸ್ಥಾನದಲ್ಲಿ ಆಗಿಂದಾಗ್ಗೆ ಅಧಿಕವಾಗಿ ಕೋಟಿ ಸಂಖ್ಯೆಯಲ್ಲಿ ಜನರನ್ನು ಆಹುತಿಗೊಳ್ಳುವಂತೆಯೇ ಬಂಗಾಳದಲ್ಲಿ ಪ್ರಬಲವಾಗುತ್ತಿರುವ ಈ ವ್ಯಾಧಿಯು ಸಹಾ ತಕ್ಕ ಕಾಲದಲ್ಲಿ ಇದನ್ನು ನಿವಾರಿಸಲು ಪ್ರಯತ್ನಿಸದಿದ್ದರೆ, ಜನರಲ್ಲಿ ಬಹಳ ಹಾವಳಿಯನ್ನುಂಟುಮಾಡುವದೆಂದಾಗಿ ಒಬ್ಬ ಬಂಗಾಳಿ ಡಾಕ್ಟರರು ಅಭಿಪ್ರಾಯಪಟ್ಟು ಈ ರೋಗ ನಿವಾರಣೆ ಬಗ್ಗೆ ಕೆಲವು ಸೂಚನೆಗಳನ್ನು 'ಬಂಗಾಳಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಬಂಗಾಳದಲ್ಲಿ ಬಹುಮೂತ್ರ ರೋಗವು ಸ್ತ್ರೀಯರಿಗೂ ಸಣ್ಣ ಪ್ರಾಯದವರಿಗೂ ಸಹಾ ಒಂದೇ ಸಮನಾಗಿ ತಗಲುತ್ತಿರುವುದರಿಂದ ಆ ಪ್ರಾಂತ್ಯದವರಿಗೆ ಈ ಡಾಕ್ಟರರ ಸೂಚನೆಗಳಿಂದ ಪರಿಹಾರ ದೊರಕುತ್ತಿರುವಾಗ, ನಮ್ಮ ಪ್ರಾಂತ್ಯದಲ್ಲಿ ಈ ರೋಗವು ಬಂಗಾಳದಲ್ಲಿಯಂತೆ ಬಹಳ ಪ್ರಬಲವಾಗಿಲ್ಲವಾದರೂ ಈಚೀಚೆಗೆ ಕ್ರಮವಾಗಿ ಹೆಚ್ಚುತ್ತಲಿರುವುದರಿಂದ ಆ ಬಂಗಾಳಿ ಡಾಕ್ಟರರ ಅನುಭವವು ನಮ್ಮ ಪ್ರಾಂತ್ಯದಲ್ಲಿಯೂ ನಿರರ್ಥಕವಾಗಲಾರದು.

ಐಶ್ವರ್ಯವಂತರೂ, ಪುಸ್ತಕ ಪಾಠಗಳೇ ಮೊದಲಾದವುಗಳನ್ನು ಅತಿ ವಿಶೇಷವಾಗಿ ಅಭ್ಯಾಸಿಸುವವರೂ ಆದ ಹೆಚ್ಚು ಪ್ರಾಯಸ್ಥರಿಗೆ ಈ ರೋಗವು ಪ್ರಾಪ್ತವಾಗುತ್ತಲಿತ್ತು. ಈಗೀಗ ಇದು ಚಿಕ್ಕ ಮಕ್ಕಳಲ್ಲಿಯೂ, ಸ್ತ್ರೀಯರಲ್ಲಿಯೂ, ಯೌವನಸ್ಥರಲ್ಲಿಯೂ, ಐಶ್ವರ್ಯವಂತ ಯಾ ಬಡವನೆಂಬ ಭೇದವಿಲ್ಲದೆ ತಲೆದೋರುತ್ತಲಿರುವುದು. ಈ ರೋಗವು ಅನೇಕರಲ್ಲಿ ದೆಯಾದರೂ ಅದು ವಿಶೇಷವಾಗಿ ಪರಿಣಮಿಸುವವರೆಗೆ ಯಾವ ಔಷಧಿ ಯಾ ಚಿಕಿತ್ಸೆಯು ಅಗತ್ಯವಿರುವುದೆಂತ ತೋರಿಬರುವುದಿಲ್ಲ. ರೋಗ ಬಾಧೆಯು ತಡೆಯಲಸಾಧ್ಯವಾದಾಗ ಮಾತ್ರ ಈ ರೋಗಕ್ಕೆ ಚಿಕಿತ್ಸೆಯನ್ನು ಹೊಂದುವರು. ಚಿಕಿತ್ಸೆಯ ಕ್ರಮವಾದರೋ ಎಲ್ಲರಿಗೂ ಗೊತ್ತಿರುವಂಥಾದ್ದೆ. [illegible] ನ್ನು ಇನ್ನು ಇತರ [illegible] ಪದಾರ್ಥಗಳನ್ನು ವರ್ಜಿಸಲಿ [illegible]

ಗುವುದು. ಇದರಿಂದ ರೋಗವು ಶಮನವಾಗಿದ್ದರೆ ಅಫೀಮು ಕೂಡಿರುವ ಔಷಧಿಗಳಿಂದ ಚಿಕಿತ್ಸೆಯು ನಡಿಸಲ್ಪಡುವುದು. ಚಿಕಿತ್ಸೆಯ ಪ್ರಥಮದಲ್ಲಿ ನಿರಂತರವಾಗಿರುವ ಚಿಂತೆ ಯಾ ಯೋಚನೆಯನ್ನು ಬಿಡಲು ಪ್ರಯತ್ನಿಸಬೇಕಾಗಿ ವೈದ್ಯರು ಉಪದೇಶಿಸುವರು. ಈ ಎಲ್ಲಾ ಚಿಕಿತ್ಸೆ ಕ್ರಮಗಳು ಉಪಯುಕ್ತವಾದವುಗಳೇ. ಹೀಗೆ ಆಹಾರ ಮಾರ್ಪಾಟದಿಂದ ಈ ರೋಗವನ್ನು ಶಮನಿಸ ಬಹುದಾದ್ದರಿಂದ, ಈ ಮಾರ್ಪಾಟಗಳನ್ನು ರೋಗ ತಗಲದಿದ್ದವರೂ ಎಷ್ಟರ ಮಟ್ಟಿಗೆ ತಮ್ಮ ಅನುದಿನದ ಅನುಪಾನಗಳಲ್ಲಿ ಅನುಸರಿಸಿ ಬಹುಮೂತ್ರ ಬಾಧೆಯು ತಗಲದಂತೆ ಮಾಡಿಕೊಳ್ಳಬಹುದೆಂಬದನ್ನು ಆ ಬಂಗಾಳಿ ಡಾಕ್ಟರರು ಪರ್ಯಾಲೋಚಿಸಿ ಕೆಳಗಿನ ಆಹಾರ ಕ್ರಮಗಳನ್ನು ನಿರ್ಧರಿಸಿರುವರು.

ಅಕ್ಕಿಯ ಅನ್ನವನ್ನು ಊಟ ಸಮಯದಲ್ಲಿ ದಿವಸಕ್ಕೆ ಒಂದಾವರ್ತಿ ಮಾತ್ರ ತಕೊಳ್ಳಬೇಕು. ಅಕ್ಕಿಯಿಂದ ಅನ್ನವನ್ನು ತಯ್ಯಾರಿಸುವುದಕ್ಕೆ ಉಪಯೋಗಿಸುವ ನೀರನ್ನು ಅನ್ನವು ಬೆಂದು ಸಿದ್ಧವಾಗುವಾಗ ಪೂರ್ಣವಾಗಿ ಹೀರಿಹೋಗುವ ಪರಿಮಾಣದಲ್ಲಿಡಬೇಕು. ಅನ್ನಕ್ಕೆ ಬೇಯುತ್ತಿರುವಾಗ ಒಂದು ಚಿಮಿಟಿ ಉಪ್ಪನ್ನು ಹಾಕಿದರೆ ಅದು ಬಹಳ ಜೀರ್ಣಕರವಾಗುವುದು. ಹೀಗೆ ನೀರು ಪೂರ್ಣ ಹೀರುವ ರೀತಿಯಲ್ಲಿ ಅನ್ನವನ್ನು ತಯ್ಯಾರಿಸುವಾಗ ಅದು ವಿಪರೀತ ಬೆಂದು ಹೋಗ ಬಾರದಂತೆ ನೋಡಿಕೊಳ್ಳಬೇಕಾಗಿರುವುದು. ಊಟಕ್ಕೋಸ್ಕರ ಉಪಯೋಗಿಸುವಂಥಾ ಅಕ್ಕಿಯು ಬಹಳ ಉತ್ತಮ ಜಾತಿಯದಾಗಬೇಕೆಂತಿಲ್ಲ. ಯಾಕಂದರೆ ಒಳ್ಳೆ ಜಾತಿಯ ಅಕ್ಕಿಯು ಬಹುಮೂತ್ರ ದೋಷವನ್ನು ಇನ್ನಷ್ಟು ವೃದ್ಧಿಸುವುದು. ಜೀರ್ಣಕ್ಕೆ ತಕ್ಕದಾಗಿರುವ ದೊಡ್ಡನು ಅಕ್ಕಿಯು ಉತ್ತಮ ತರದ ಅಕ್ಕಿಗಿಂತ ಉಪಯೋಗಕ್ಕೆ ಯೋಗ್ಯವಾಗಿರುವುದು. ಅಕ್ಕಿಯಲ್ಲಿರುವ ಸ್ಟಾರ್ಚ್ ಎಂಬ ಪದಾರ್ಥದ ದೋಷವು ನಿವೃತ್ತಿಯಾಗುವಂತೆ ಅನ್ನದೊಂದಿಗೆ ಬೇಕಾದ ಹಾಗೆ ತುಪ್ಪ, ಬೆಣ್ಣೆ, ಮೊಸರು ಮೊದಲಾದ್ದನ್ನು ಧಾರಾಳವಾಗಿ ಸೇವಿಸಬೇಕಾಗಿರುವುದು. ಅನ್ನದೊಂದಿಗೆ ಉಪಯೋಗಿಸುವ ಪದಾರ್ಥಗಳಲ್ಲಿ ಸಹಾ ಸ್ಟಾರ್ಚ್ ಇಲ್ಲದ ಪದಾರ್ಥಗಳನ್ನೇ ಹೆಚ್ಚಾಗಿ ಉಪಯೋಗಿಸಿಕೊಳ್ಳಬೇಕು. ಹೀಗೆ ದಿವಸಕ್ಕೊಂದಾವರ್ತಿ ಅನ್ನವನ್ನು ತಕೊಳ್ಳಬಹುದು. ಮತ್ತೊಂದಾವರ್ತಿಗೆ ಹೊಟ್ಟು ಮಿಶ್ರವುಳ್ಳ ಗೋದಿ ಹಿಟ್ಟಿನಿಂದ ಊಟವನ್ನು ಏರ್ಪಡಿಸಿಕೊಳ್ಳಬೇಕಾಗಿರುವುದು. ಇಂಥಾ ಗೋದಿ ಹಿಟ್ಟಿನಿಂದ ಚಪಾತಿಗಳನ್ನು ಮಾಡಿ ಇದನ್ನು ಪದಾರ್ಥಗಳೊಂದಿಗೂ ಹಾಲಿನೊಂದಿಗೂ ಸೇವಿಸಬಹುದು. ಮುಖ್ಯವಾಗಿ ಮೇಲೆ ಸೂಚಿಸಿದಂತೆ ಸ್ಟಾರ್ಚ್ ಕಡಿಮೆಯುಳ್ಳ ಪದಾರ್ಥಗಳನ್ನೇ ಉಪಯೋಗಿಸಬೇಕಾಗಿರುವುದು. ಮಾಂಸಾಹಾರಿಗಳು ಮಾಂಸವನ್ನು ಗೋದಿ ಪದಾರ್ಥಗಳೊಂದಿಗೆ ತಕೊಳ್ಳದೆ ಅಕ್ಕಿಯ ಅನ್ನದೊಂದಿಗೆ ತಕೊಳ್ಳಬಹುದು.

ಹೀಗೆ ಈ ಎರಡು ಮುಖ್ಯ ಊಟಗಳ ಹೊರತು ಫಲಾಹಾರವುಗಳಿಗೆ ಗೋದಿ ಹಿಟ್ಟಿನಿಂದ ತಯ್ಯಾರಿಸಿದ ಪದಾರ್ಥಗಳನ್ನೂ, ಒಳ್ಳೆ ಪಕ್ವವಾದ ಹಣ್ಣುಗಳನ್ನೂ ಉಪಯೋಗಿಸಿಕೊಳ್ಳಬೇಕಾಗಿರುವುದು. ಸಕ್ಕರೆ ಮತ್ತು ಸ್ಟಾರ್ಚ್ ಕೂಡಿರುವ ಖಾದ್ಯಗಳನ್ನು ಬಹು ಅಲ್ಪಪ್ರಮಾಣವಾಗಿ ಉಪಯೋಗಿಸಿಕೊಳ್ಳುವ ಸೂತ್ರವನ್ನೇ ಆಹಾರಗಳನ್ನು ತಕೊಳ್ಳುವಾಗ ನೆನಪಿಡಬೇಕು. ಹೊಟ್ಟೆ ಹಸಿವು ಜಾಸ್ತಿಯಾಗಿರುವಾಗ ಮಾತ್ರ ಆಹಾರಪಾನಾದಿಗಳನ್ನು ತಕೊಳ್ಳುವುದೂ, ರುಚಿಗೆ ತಕ್ಕದಾದ ಪದಾರ್ಥಗಳನ್ನು ಕಂಡರೆ ಹಸಿವಿಲ್ಲದ ಸಮಯದಲ್ಲಿ ಅವುಗಳನ್ನು ತಿನ್ನದಿರುವುದೂ ಆರೋಗ್ಯದ ಪ್ರಥಮ ಕ್ರಮವಾಗಿರುತ್ತದೆ. ಆಹಾರವನ್ನು ನಾವು ಜೀವಿಸುವುದಕ್ಕೋಸ್ಕರ ತಕೊಳ್ಳಬೇಕೇ ಹೊರತು ತಿನ್ನುವುದೇ ನಮ್ಮ ಬಾಳಿನ ಮುಖ್ಯ ಉದ್ದಿಶ್ಯವಾಗಿ ಮಾಡಿಕೊಳ್ಳಕೂಡದು. ಈ ರೀತಿ ಆಹಾರ ಕ್ರಮಗಳನ್ನು ವಿವರಿಸಿ ಹಣ್ಣು ಮತ್ತು ಕಾಯಿಗಳಲ್ಲಿ ಯಾವಯಾವುದನ್ನು ಸೇವಿಸಬಹುದೆಂಬದನ್ನು ಸಹಾ ಸೂಚಿಸಿರುವರು. ಕಾಯಿಗಳಲ್ಲಿ ತೆಂಗಿನಕಾಯಿಯು ಫಲಹಾರದ ಬಗ್ಗೆ ಬಹು ಒಳ್ಳೆಯದಾಗಿರುವುದೆಂದೂ ಇದರ ಪದಾರ್ಥ ಮೊದಲಾದವುಗಳು ಬಹಳ ಆರೋಗ್ಯಕರವಾಗಿರುವುವೆಂದೂ ಸಹಾ ಹೇಳಿರುವರು.

ವ್ಯಾಯಾಮವನ್ನು ಕ್ರಮದಿಂದ ತಕೊಳ್ಳುವುದು ಡಾಕ್ಟರರವರು ಸೂಚಿಸಿದ ಮತ್ತೊಂದು ವಿಷಯವಾಗಿರುವುದು. ಎಲ್ಲಾ ಕೆಲಸಗಳನ್ನು ಬೆಳಗಿನ ಸಮಯದಲ್ಲಿ ಮತ್ತು ಮಧ್ಯಾಹ್ನ ದಾಟಿದ ಘಳಿಗೆಗಳಲ್ಲಿ ನಿರ್ವಹಿಸಿ ದಿವಸದಲ್ಲಿ ಮಾಡುವ ಮುಖ್ಯ ಊಟದನಂತರ ತುಸ ವಿಶ್ರಮಿಸಿ ರಾತ್ರೆಯಲ್ಲಿ ೬ ತಾಸಾದರೂ ಸುಖನಿದ್ರೆಯನ್ನು ಗೈಯ್ಯುವ ನಿಯಮವನ್ನು ಸದಾ ಮಾಡಿಕೊಳ್ಳಬೇಕು. ಚಿಂತೆ ಮತ್ತು ಯೋಚನೆಯನ್ನು ಬಿಡಲಿಕ್ಕೆ ತೋರಿಸಿಕೊಟ್ಟ ಉಪಾಯವು ಯಾವುದು? ಹಿಂದೂ ಧರ್ಮಶಾಸ್ತ್ರಗಳಿಗನುಗುಣವಾಗಿ ಎಲ್ಲಾ ಸುಖದುಃಖಗಳು ಪ್ರಾಚೀನ ಕರ್ಮದೋಷಗಳ ನಿಮಿತ್ತ ಪ್ರಾಪ್ತವಾಗುವುದರಿಂದ ಯೋಚನೆಯಾ ಚಿಂತೆಯು ಕರ್ಮಬಂಧವಾದ ಈ ಲೋಕದಲ್ಲಿ ನಿಷ್ಪ್ರಯೋಜಕವಾಗಿರುವುದು.

ಚಿಕ್ಕಪ್ರಾಯದಲ್ಲಿಯೇ ಬ್ರಹ್ಮಚರ್ಯವನ್ನು ತೊರೆದು ಪ್ರಾಯಸ್ಥರಾದಾಗ ವಿಷಯಲಂಪಟರಾಗುವುದು ಬಹುಮೂತ್ರರೋಗದ ಮುಖ್ಯ ಕಾರಣವಾಗಿರುವುದು. ಶಾಲೆ ಹುಡುಗರಿಗೆ ಚಿಕ್ಕ ಪ್ರಾಯದಲ್ಲಿಯೇ ಮದುವೆಮಾಡುವ ದುರಭ್ಯಾಸವನ್ನು ನಿಲ್ಲಿಸಿಬಿಡಬೇಕು. ಬಹುಮೂತ್ರ ವ್ಯಾಧಿಯು ತನ್ನ ಕ್ಷೇಮದ ಬಗ್ಗೆ ಯಾ ತನ್ನಿಂದುಂಟಾಗುವ ಸಂತತಿಯ ಆರೋಗ್ಯದ ಬಗ್ಗೆ [illegible]ವನ್ನು ಮಾಡಬೇಕು.

ಔಷಧಿಕ್ಕಿಂತ ಅನುಪಾನವೇ ಮುಖ್ಯವಾದದ್ದೆಂದು ಈ ಬಂಗಾಳಿ ಡಾಕ್ಟರರು ತಿಳಿದುಕೊಂಡು ಪ್ರಕಟಿಸಿದ ಈ ಅನುಭವನ್ನು ನಮ್ಮಲ್ಲಿಯ ವೈದ್ಯರೂ ಸಹಾ [illegible]

ಕೊಟ್ಟು ತಮ್ಮ ಬಳಿಗೆ ಚಿಕಿತ್ಸೆ ಬಗ್ಗೆ ಬರುವ ರೋಗಿಗಳಿಗೆ [illegible] ಔಷಧಗಳೆಂದೆ ಹೊಟ್ಟೆಗಳನ್ನು ತುರುಬುವ ಮೊದಲು ಸಂದರ್ಭಾನುಸಾರ [illegible] ವಿಷಯವನ್ನು ಅವರಿಗೆ ತಿಳಿಯ ಹೇಳಿ ವೈದ್ಯ ವಿದ್ಯೆಯನ್ನು ಸಾರ್ಥಕಗೊಳಿಸಬೇಕಾಗಿರುವುದು.

ದಿವಂಗತ ಲಾಲ್ ಮೋಹನ್ ಘೋಷರವರು. ಕಳೆದ ಶನಿವಾರ ಶ್ರೀಯುತ ಲಾಲ್ ಮೋಹನ್ ಘೋಷರವರು ಕಲ್ಕತ್ತೆಯಲ್ಲಿ ಮೃತಪಟ್ಟರೆಂಬದಾಗಿ ತಿಳಿಸಲು ವಿಷಾದಪಡುತ್ತೇವೆ. ಭರತದೇಶೋದ್ಧರಣೆಯನ್ನು ಹಲವು ಬಗೆಯಲ್ಲಿ ಸಾಧಿಸಿದ ಪ್ರಮುಖ ದೇಶಾಭಿಮಾನಿಗಳಲ್ಲಿ ಘೋಷರವರೊಬ್ಬರಾಗಿರುವರು. ಲಾಲ್ ಮೋಹನರ ಕೀರ್ತಿಯನ್ನು ಕೇಳಿ ತಿಳಿದವರಲ್ಲಿ ಇವರ ಮರಣದ ದುಃಖವಾರ್ತೆಯು ವಿಷಾದವನ್ನುಂಟುಮಾಡದಿರದು. ಅದ್ವಿತೀಯ ಪಾಂಡಿತ್ಯದಿಂದಲೂ ಉಜ್ವಲವಾದಂಥಾ ದೇಶಾಭಿಮಾನದಿಂದಲೂ ಅಪ್ರತಿಮ ವಾಕ್ಪಟುತ್ವದಿಂದಲೂ ಘೋಷರವರು ಸರ್ವ ಮಾನ್ಯರಾಗಿದ್ದರು. ಅವರಿಗೆ ಪ್ರಾಪ್ತವಾದ ದೇಹಾಲಸ್ಯದ ನಿಮಿತ್ತ ಇತ್ತಲಾಗಿನ ದೇಶಾಭಿವೃದ್ಧಿಯ ಸಾಧನೆಗಳಲ್ಲಿ ಪ್ರಯತ್ನಪಡುವರೆ ಇವರಿಗೆ ಅನಾನುಕೂಲವಾಗಿದ್ದರೂ, ಈ ಸಾಧನೆಗಳೆಲ್ಲವುಗಳಲ್ಲಿಯೂ ಪೂರ್ಣ ಅನುರಾಗವುಳ್ಳವರಾಗಿದ್ದರು. ೧೯೦೩ನೇ ವರುಷದಲ್ಲಿ ಮದ್ರಾಸಿನಲ್ಲಿ ಜರಗಿದ ಕೊಂಗ್ರೆಸು ಸಭೆಯ ಅಧ್ಯಕ್ಷಪದವಿಯು ಇವರಿಂದ ಅಲಂಕೃತವಾಗಿತ್ತು.

ಲಾಲ್ ಮೋಹನ ಘೋಷರವರು ೧೮೪೯ರಲ್ಲಿ ಕೃಷ್ಣನಗರ ಎಂಬಲ್ಲಿ ಜನಿಸಿದ್ದರು. ಚಿಕ್ಕಂದಿನಿಂದಲೇ ತನ್ನ ಪಾಠಶಾಲೆಗಳಲ್ಲಿ ಜಾಣನೆನ್ನಿಸಿಕೊಂಡು ಪ್ರತಿವರ್ಗದಲ್ಲಿಯೂ ತನ್ನ ಜಾಣ್ತನಕ್ಕೋಸ್ಕರ ಇನಾಮು ಪಡೆದಿರುವರು. ಬ್ಯಾರಿಷ್ಟರಿ ಪರೀಕ್ಷೆಗೆ ಕಲಿಯುವ ಬಗ್ಗೆ ವಿಲಾಯತಿಗೆ ಹೋಗಿ ಅಲ್ಲಿ ಸಹಾ ತನ್ನ ನಿಪುಣತೆಯನ್ನು ತೋರಿ ತನ್ನ ವಾಗ್ಮಿತ್ವ ಚಾತುರ್ಯದಿಂದ ಪಡೆದು ಖ್ಯಾತಿಪಡೆದ ವಾಕ್ಚತುರನೆಂಬದಾಗಿ ಕರೆಯಲ್ಪಟ್ಟರು. ಮಾಜಿ ವ್ಯಾಸರಾಯ ಪ್ರಭುಗಳಾದ ಲಿಟನ್ ಪ್ರಭುಗಳಿಂದ ದೇಶಕ್ಕೆ ಪ್ರಾಪ್ತವಾದ ಸಂಕಷ್ಟಗಳನ್ನು ಇಂಗ್ಲೀಷರಿಗೆ ತಿಳಿಯ ಹೇಳಿ ಅವುಗಳನ್ನು ನಿವಾರಿಸುವ ಬಗ್ಗೆ ೧೮೭೯ರಲ್ಲಿ ಭಾರತೀಯರ ಪ್ರತಿನಿಧಿಗಳಾಗಿ ಇಂಗ್ಲಾಂಡಿಕ್ಕೆ ಹೋಗಿ ಅಲ್ಲಿ ತನ್ನ ಸಾಹಸಗಳಿಂದ ಆ ಕಾಲದ ಪ್ರಮುಖ ಇಂಗ್ಲೀಷ ಮಂತ್ರಿಯಾದ ಮಿ। ಗ್ಲೇಡ್‌ಸ್ಟನರ ಸ್ನೇಹವನ್ನು ಮಾಡಿಕೊಂಡು ದೇಶಭಾಷಾಪತ್ರಗಳಿಗೆ ತೊಡಕಾಗಿದ್ದ ವರ್ನಕ್ಯುಲರ್ ಪ್ರೆಸ್ ಆಕ್ಟನ್ನು ರದ್ದುಪಡಿಸುವಂತೆ ಪ್ರಯತ್ನಿಸಿದರು. ಇವರ ಪ್ರಯತ್ನಗಳಿಂದ ಈ ಆಕ್ಟು ರದ್ದಾಯಿತು. ಪಾರ್ಲಿಮೆಂಟ್ ಸಭೆಯ ಮೆಂಬರರಾಗಿ ಆರಿಸಲ್ಪಡುವರೆ ಇವರು ಪ್ರಯತ್ನಪಟ್ಟಿದ್ದರು. ಮಿ। ಗ್ಲೇಡ್‌ಸ್ಟನ್, ಬ್ರ್ಯಾಟ್ ಮೊದಲಾದ ಬ್ರಿಟಿಷ ಪ್ರಜಾಗ್ರೇಸರರ ಸಹಾಯವು ಈ ವಿಷಯದಲ್ಲಿ ಇವರಿಗಿದ್ದರೂ, ಇವರ ಈ ಪ್ರಯತ್ನಗಳು ಫಲಿಸಲಿಲ್ಲ. ದೇಶಬಾಂಧವರಾದ ಮಿ। ಲಾಲ್ ಮೋಹನ ಘೋಷರಂಥವರ ಮರಣವು ಭಾರತೀಯರೆಲ್ಲರಿಗೂ ದುಃಖಾಸ್ಪದವಾಗಿರುವುದು.

ಟ್ರಾನ್ಸ್‌ವಾಲ ಭಾರತೀಯರ ದೀನ ಸ್ಥಿತಿಯು.

ಟ್ರಾನ್ಸ್‌ವಾಲ ಭಾರತೀಯರ ದೀನ ಸ್ಥಿತಿಯನ್ನು ಇಂಡಿಯಾ ಸರಕಾರದವರಿಗೂ, ಮೋರ್ಲೆ ಪ್ರಭುಗಳಿಗೂ, ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಮಂತ್ರಿವರ್ಗಕ್ಕೂ ಇನ್ನೊಮ್ಮೆ ಜಾಹೀರುಮಾಡಿಕೊಳ್ಳುವ ಬಗ್ಗೆ ಮುಂಬಯಿಯಲ್ಲಿ ಕಳೆದ ವಾರ ಸಭೆ ಕೂಡಿತ್ತು. ಸಭೆಯಲ್ಲಿ ಮಾಡಿದ ನಿರ್ಣಯಗಳು ಒಂದೊಂದಾಗಿಯೇ ಸರ್ವ ಸಮ್ಮತವಾಗುತ್ತಿರುವಾಗ ಬಹುಮಾನಪಟ್ಟ ಗೋಖಲೆಯವರೇ ಮೊದಲಾದ ಪ್ರಜಾಗ್ರೇಸರು ಮಾಡಿದ ಭಾಷಣಗಳಿಂದ ಟ್ರಾನ್ಸ್‌ವಾಲ ಭಾರತೀಯರು ಅನುಭವಿಸುತ್ತಿರುವ ಸಂಕಟಗಳ ಸ್ಥಿತಿಯು ಯಾವ ರೀತಿ ಪರಿಣಮಿಸಿರುವುದೆಂಬದು ಮನದಟ್ಟಾಗದಿರದು. ಬಹುಮಾನಪಟ್ಟ ಗೋಖಲೆಯವರು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದ ಟ್ರಾನ್ಸ್‌ವಾಲ ಭಾರತೀಯರ ಪೂರ್ಣ ವೃತ್ತಾಂತದ ಕೆಲವಂಶಗಳನ್ನು ಈ ಕೆಳಗೆ ಸಂಗ್ರಹಿಸಿ ಪ್ರಕಟಿಸಿರುವೆವು.

ಮುಂಬಯಿಯಲ್ಲಿಯೇ ಕಳೆದ ವರುಷದಲ್ಲಿ ಈ ವಿಷಯವನ್ನೇ ಜಾಹೀರುಮಾಡಿಕೊಳ್ಳಲಿಕ್ಕೆ ಆಗಾಖಾನರವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ೧೮ ತಿಂಗಳುಗಳಾದವು. ಆದರೂ ಅಂದಿನಿಂದ ಟ್ರಾನ್ಸ್‌ವಾಲ ಭಾರತೀಯರ ಸ್ಥಿತಿ ಮಾರ್ಪಾಟವು ಏನೊಂದು ಆಗದಿದ್ದರಿಂದ ತಿರಿಗೊಮ್ಮೆ ಇದೇ ವಿಷಯವನ್ನು ಜಾಹೀರುಮಾಡಿಕೊಳ್ಳಲಿಕ್ಕೆ ಪುನಹ ಸಭೆ ಕೂಡಬೇಕಾಯಿತು. ಈ ೧೮ ತಿಂಗಳುಗಳಲ್ಲಿ ಟ್ರಾನ್ಸ್‌ವಾಲಿನಲ್ಲಿರುವ ಭಾರತೀಯರ ಸಂಕಷ್ಟಗಳು ಇನ್ನಷ್ಟು ಅಧಿಕವಾಗಿರುವವು. ಈ ಸಂದರ್ಭದಲ್ಲಿ ಟ್ರಾನ್ಸ್‌ವಾಲವು ಬೂರರ ಆಧಿಪತ್ಯದಲ್ಲಿದ್ದ ಕಾಲದಿಂದ, ಅಲ್ಲಿದ್ದ ಭಾರತೀಯರ ಸ್ಥಿತಿಯು ಈಗಿನ ವರೆಗೆ ಯಾವ್ಯಾವ ಮಾರ್ಪಾಟಗಳನ್ನು ಹೊಂದಿರುವುದೆಂಬದನ್ನು ಮಿ। ಗೋಖಲೆಯವರು ಕ್ರಮವಾಗಿ ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿರುವರು. ಬೂರರ ಕಾಲದಲ್ಲಿ ೧೮೮೫ನೇ ಇಸವಿಯ ನಂತರ ಟ್ರಾನ್ಸ್‌ವಾಲ ದೇಶಕ್ಕೆ ಪ್ರವೇಶಿಸಿದ [illegible] ದವರೆಲ್ಲರೂ ತಮ್ಮ ಹೆಸರುಗಳನ್ನು ರಿಜಿಸ್ಟರುಗಳಲ್ಲಿ ದಾಖಲುಮಾಡಿಸಿ[illegible] ಸ್ತ್ರ ದಾಖಲುಗಳ ಬಗ್ಗೆ ಪ್ರತಿಯೊಬ್ಬನಿಗೂ ಮೂರು ಪವನುಗಳನ್ನು [illegible] ಬೇಕೆಂತ ನಿಯಮವಿತ್ತು. ಹೀಗೆ ಟ್ರಾನ್ಸ್‌ವಾಲ ದೇಶಕ್ಕೆ ಅಸ್ಯ[illegible] ಜನರೂ ಬರಬಹುದಿತ್ತು. ಬೂರ್ ಯುದ್ಧದ ತೊಡಲು ಟ್ರಾನ್ಸ್‌ವಾಲ[illegible] ಮತ್ತು ಮಕ್ಕಳ ಹೊರತು ಭಾರತೀಯ[illegible] ಬೂರ ಸರಕಾರದವರು [illegible]

ಆದರೆ ಈ ಕಾನೂನನ್ನು ಬೋರರವರು ಕಾರಣವಾಗಿ ಜಾರಿಗೆ ತರಲಿಲ್ಲ. ಈ ಕಾನೂನನ್ನು ಜಾರಿಗೆ ತರದಂತೆ ತಡೆಯುವರೆ ಪ್ರಯತ್ನಿಸಿದ್ದು ಬ್ರಿಟಿಷರು ಮತ್ತು ಬೋರರ ಯುದ್ಧದ ಕಾರಣಗಳಲ್ಲಿ ಒಂದಾಗಿತ್ತೆಂಬದಾಗಿ ಆ ಕಾಲದ ಬ್ರಿಟಿಷ್ ಮಂತ್ರಿಗಳೂ ಸಹಾ ಹೇಳಿದ್ದರು. ಯುದ್ಧದ ಮೊದಲು ಟ್ರಾನ್ಸ್‌ವಾಲಿನಲ್ಲಿರುವ ಭಾರತೀಯರ ರಕ್ಷಣೆಯು ಬ್ರಿಟಿಷ್ ಸಾಮ್ರಾಜ್ಯ ಸರಕಾರದವರಿಂದಲೇ ನಿರ್ವಹಿಸಲ್ಪಡುತ್ತಿತ್ತು. ಬೂರ್ ಯುದ್ಧದ ಪ್ರಾರಂಭದಲ್ಲಿ ಅನೇಕ ಭಾರತೀಯ ನಿವಾಸಿಕರು ಟ್ರಾನ್ಸ್‌ವಾಲು ಬಿಟ್ಟು ಹೋಗುವಾಗ ಯುದ್ಧವು ಪೂರ್ಣವಾಗಿ ಮುಗಿದ ನಂತರ ಪುನಹ ಒಂದು ಊಳ ಕೊಳ್ಳುವರೆ ಬೂರ್ ಸರಕಾರದವರಿಂದ ಪಾಸನ್ನು ಪಡೆದಿದ್ದರು. ೧೯೦೨ನೇ ಇಸವಿಯಲ್ಲಿ ಬೂರ್ ಯುದ್ಧವು ಪೂರ್ಣವಾಗಿ ಟ್ರಾನ್ಸ್‌ವಾಲ ದೇಶವು ಬ್ರಿಟಿಷ್ ಸಾಮ್ರಾಜ್ಯಕ್ಕೆ ಕೂಡಿಸಲ್ಪಟ್ಟಿತು. ಆದರೆ ಹೀಗೆ ಟ್ರಾನ್ಸ್‌ವಾಲ್ ಬ್ರಿಟಿಷ್ ಕೈಕೆಳಗೆ ಬಂದಿದ್ದರೂ ಭಾರತೀಯರ ಸಂಕಷ್ಟಗಳು ಇವರಿಂದೇನು ನಿವಾರಿಸಲ್ಪಡದೆ ಇನ್ನಷ್ಟು ಹೆಚ್ಚಿದವು. ಭಾರತೀಯರು ಟ್ರಾನ್ಸ್‌ವಾಲ ವಸಾಹತಿಯಲ್ಲಿ ಬರು ಹೆಚ್ಚಿರುವದರಿಂದ ಇನ್ನು ಮುಂದೆ ಅವರ ಬರೋಣವನ್ನು ನಿಲ್ಲಿಸುವ ಪ್ರಯತ್ನಗಳನ್ನು ಮಾಡಬೇಕೆಂದು ತಿಳಕೊಂಡರು. ಆದರೆ ಬೂರರ ಯುದ್ಧದ ನಂತರ ಭಾರತೀಯರ ಜನಸಂಖ್ಯೆಯು ಬಹಳವಾಗಿಯೂ ಕಡಿಮೆಯಾಗಿತ್ತು. ಬೂರರ ಯುದ್ಧದ ಮೊದಲು ಹೆಂಗಸರು ಮತ್ತು ಮಕ್ಕಳ ಹೊರತು ೧೫೦೦೦ ವಿದ್ದ ಜನಸಂಖ್ಯೆಯು ೧೯೦೩ರಲ್ಲಿ ಹೆಂಗಸರು ಮತ್ತು ಮಕ್ಕಳು ಕೂಡಿ ೧೦,೦೦೦ ಆಯಿತು. ೧೯೦೭ರಲ್ಲಿ ಸಹಾ ಇದಕ್ಕಿಂತ ಹೆಚ್ಚು ಇರದೆ ೧೦,೦೦೦ಕ್ಕೆ ಮಿಕ್ಕಿರಲಿಲ್ಲವೆಂತ ತಿಳಿಯುತ್ತದೆ. ೧೯೦೭ರಲ್ಲಿ ಭಾರತೀಯರ ಬರೋಣವನ್ನು ನಿಲ್ಲಿಸುವರೆ ಏಸ್ಯಾಟಿಕ್ ಲೊ ಎಮೆಂಡ್‌ಮೆಂಟ್ ಆರ್ಡಿನೆನ್ಸ್ ಎಂಬ ಕಾನೂನನ್ನು ವಿಧಿಸಿದರು. ಇದಕ್ಕನುಗುಣವಾಗಿ ಭಾರತೀಯರು ಹಾಗೂ ಅವರ ಅಸ್ಯಖಂಡದವರೆಲ್ಲರೂ ಅವರ ಮಾನಭಂಗವಾಗುವ ತೆರದಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟ್ರಿಯಲ್ಲಿ ಪುನಹ ದಾಖಲು ಮಾಡಬೇಕೆಂತಾಯಿತು. ಈ ಕಾನೂನನ್ನು ಟ್ರಾನ್ಸ್‌ವಾಲಿನ ಭಾರತೀಯರು ಸ್ವೀಕರಿಸದೆ ಇದಕ್ಕೆ ನ್ಯಾಯವಾಗಿ ವಿರೋಧಿಸಿದರು. ಬ್ರಿಟಿಷ್ ಸಾಮ್ರಾಜ್ಯಕ್ಕೆ ಕೂಡಿದ ಟ್ರಾನ್ಸ್‌ವಾಲದಲ್ಲಿ ಬ್ರಿಟಿಷ್ ಪ್ರಜೆಗಳಾದ ಭಾರತೀಯರ ಸಂಕಷ್ಟಗಳು ಹೆಚ್ಚಲು ಪ್ರಾರಂಭವಾಯಿತು. ೧೯೦೭ ಜುಲಾಯಿ ತಿಂಗಳಿಂದ ಭಾರತೀಯರ ಜನಸಂಖ್ಯೆಯು ಇನ್ನಷ್ಟು ಕಡಿಮೆಯಾಗುತ್ತಾ ಬಂದು ಪ್ರಕೃತ ಅದು ೬೦೦೦ಕ್ಕಿಂತಲೂ ಕಡಿಮೆಯಾಗಿರುವುದು.

ಟ್ರಾನ್ಸ್‌ವಾಲ ಸರಕಾರದವರ ಈ ಹೊಸ ಕಾನೂನನ್ನು ಉಲ್ಲಂಘಿಸಿ ನಡೆದ್ದರಿಂದ ಮಿ. ಗಂಧಿ ಮೊದಲಾದವರಿಗೆ ಸೆರೆಮನೆಯು ಪ್ರಾಪ್ತವಾಯಿತು. ೧೯೦೮ನೇ ಜನವರಿ ತಿಂಗಳಲ್ಲಿ ಟ್ರಾನ್ಸ್‌ವಾಲಿನ ಜನರಲ್ ಸ್ಮಟ್ಸ್ ಮತ್ತು ಗಂಧಿಯವರಿಗೆ ಈ ಹೊಸ ಕಾನೂನು ಜಾರಿ ವಿಷಯ ಒಂದು ಒಪ್ಪಂದವಾಯಿತು. ಒಪ್ಪಂದದ ಮೇರೆಗೆ ಟ್ರಾನ್ಸ್‌ವಾಲ ಭಾರತೀಯರೆಲ್ಲರೂ ಮೂರು ತಿಂಗಳುಗಳೊಳಗೆ ರಿಜಿಸ್ಟ್ರಿ ಮಾಡಿಸಿಕೊಳ್ಳಬೇಕೆಂತಲೂ, ಅಪಮಾನ ಕರವಾದ ರಿಜಿಸ್ಟ್ರಿಮಾಡಿಸಿಕೊಳ್ಳೋಣದ ಕೆಲವು ನಿಯಮಗಳನ್ನು ತೆಗೆಯಬೇಕೆಂತಲೂ, ಎಸ್ಯಾಟಿಕ್ ಲೊ ಎಮೆಂಡ್‌ಮೆಂಟ್ ಆಕ್ಟನ್ನು ರದ್ದು ಮಾಡಬೇಕೆಂತಲೂ, ಟ್ರಾನ್ಸ್‌ವಾಲಿನಲ್ಲಿ ಊಳಕೊಳ್ಳುವ ಅನ್ಯ ನಿವಾಸಿಕರೆಲ್ಲರಿಗೆ ಯುರೋಪಿಯ ಮತ್ತು ಅಸ್ಯಖಂಡದವರೆಂಬ ಬೇಧವಿಲ್ಲದಿರುವ ಈ ಮೊದಲೇ ಟ್ರಾನ್ಸ್‌ವಾಲದಲ್ಲಿರುವ ರಿಜಿಸ್ಟ್ರಿ ನಿಯಮಗಳನ್ನೇ ಭಾರತೀಯರಿಗೋಸ್ಕರವೂ ಸಹಾ ಜ್ಯಾರಿಗೆ ತರಬೇಕೆಂತಲೂ ನಿರ್ಣಯಿಸಲ್ಪಟ್ಟಿತು. ಒಪ್ಪಂದದ ಪ್ರಕಾರ ಭಾರತೀಯರೆಲ್ಲರೂ ತಮ್ಮ ಹೆಸರುಗಳನ್ನು ರಿಜಿಸ್ಟ್ರಿಗೆ ದಾಖಲು ಮಾಡಿಕೊಂಡು ಹೊಸ ರಹದಾರಿಗಳನ್ನು ಪಡೆದರು. ಆದರೆ ಟ್ರಾನ್ಸ್‌ವಾಲ ಗವರ್ನಮೆಂಟಿನವರು ರಾಜಿ ಶರ್ತಗಳಿಗನುಸಾರವಾಗಿ ನಡಿಯುವರೆ ತಿರಸ್ಕರಿಸಿದರು. ಭಾರತೀಯರು ನಿರುಪಾಯರಾದ್ದರಿಂದ ಹೊಸ ಕಾನೂನನ್ನು ಉಲ್ಲಂಘಿಸಿ ನಡಿಯುವರೆ ತಿರಿಗಿ ಪ್ರಾರಂಭಿಸಿದರು. ರಹದಾರಿಗಳನ್ನು ಪಡೆದವರಲ್ಲಿ ೨೫೦೦ ಜನರು ತಮ್ಮ ರಹದಾರಿಗಳನ್ನು ಸುಟ್ಟುಹಾಕಿದರು. ಭಾರತೀಯರು ಕಾನೂನನ್ನು ಉಲ್ಲಂಘಿಸಿ ನಡಿಯುತ್ತಿರುವುದರಿಂದ ಅನುಭವಿಸುತ್ತಿರುವ ಕಷ್ಟಪರಂಪರೆಗಳನ್ನು ಈ ಮೊದಲು ಸ್ವದೇಶಾಭಿಮಾನಿಯಲ್ಲಿ ಆಗಿಂದಾಗ್ಯ ಪ್ರಕಟಿಸಿರುತ್ತೇವೆ. ಈ ವರೆಗೆ ೨೫೦೦ ಕಠಿಣ ಕಾಮಗಿರಿ ಸಜೆಯ ತೀರ್ಮಾನಗಳು ಭಾರತೀಯರಲ್ಲಿ ವಿಧಿಸಲ್ಪಟ್ಟಿರುವವು. ಸಾವಿರಕ್ಕಿಂತ ಹೆಚ್ಚು ಜನರು ಪೂರ್ಣ ನಾಶಹೊಂದಿರುವರು. ಸಾವಿರಾರು ಜನರು ಟ್ರಾನ್ಸ್‌ವಾಲನ್ನೇ ಬಿಟ್ಟಿರುವರು. ಆದರೆ ಇನ್ನೂ ಭಾರತೀಯರು ಟ್ರಾನ್ಸ್‌ವಾಲ ಸರಕಾರದವರ ಈ ಹೊಸ ಕಾನೂನನ್ನು ಶೂರತನದಿಂದ ಎದುರಾಡುತ್ತಿರುವರು.

ಈ ಪ್ರಕಾರ ಬಹುಮಾನಪಟ್ಟ ಗೋಖಲೆಯವರು ಟ್ರಾನ್ಸ್‌ವಾಲ ಭಾರತೀಯರ ಸಂಕಷ್ಟಗಳ ವೃತ್ತಾಂತವನ್ನು ಸಂಕ್ಷೇಪವಾಗಿ ಹೇಳಿ ಗಂಧಿ ಮೊದಲಾದ ವೀರರು ಭರತಖಂಡದ ಅಭಿಮಾನಕ್ಕೋಸ್ಕರವಾಗಿಯೇ ಕಷ್ಟಗಳನ್ನು ಅನುಭವಿಸುತ್ತಿರುವರೆಂತ ಅಪ್ಪಣೆಕೊಡಿಸಿದರು. ಬ್ರಿಟಿಷ್ ಸಾಮ್ರಾಜ್ಯ ಸರಕಾರದವರು ಈ ವಿಷಯಕ್ಕೆ ತಕ್ಕದಾದ ಗಮನಕೊಡಬೇಕೆಂತಲೂ, ಎಲ್ಲಾ ವಿವಾದವು ಪೂರ್ಣ ತೀರ್ಮಾನವಾಗುವ ವರೆಗೆ ನೇಟಾಲಕ್ಕೆ ಕೂಲಿಕೆಲಸಕ್ಕೆ ಇಂಡಿಯಾ ಸರಕಾರದವರ ಮುಖಾಂತರ ಹೋಗುತ್ತಿರುವ ಭಾರತೀಯರನ್ನು ಹೋಗಬಿಡಬಾರದೆಂತಲೂ ಸೂಚಿಸಿರುವರು.

ಸ್ವದೇಶವನ್ನು ಬಿಟ್ಟು ಬ್ರಿಟಿಷ್ ಸಾಮ್ರಾಜ್ಯದ ವಸಾಹತಿಗಳಲ್ಲಿರುವ ಭಾರತೀಯರ ದೀನಸ್ಥಿತಿಯ ಕಾರಣವೇನು? ನಮ್ಮ ದೇಶದಲ್ಲಿಯೇ ನಮಗೆ ಗೌರವವು ಇಲ್ಲದಿರುವುದೇ. ಹಿಂದುಸ್ಥಾನದಲ್ಲಿ ಭಾರತೀಯರಿಗೆ ಭೇದವಿಲ್ಲದೆ ಒಂದೇ ಸಮನಾದ ಮನ್ನಣೆಯು ಆಂಗ್ಲೇಯರಿಂದ ದೊರೆಯದಿರುವುದರಿಂದ ಭರತಖಂಡದಲ್ಲಿಯೇ ಈ ದಿನಾಂಗದ ದ್ವೈತವನ್ನುವನ್ನು ಮಾಡುವರೆ ಪ್ರಯತ್ನಿಸಿ ಈ ಮೂಲಕ ಟ್ರಾನ್ಸ್‌ವಾಲ ಭಾರತೀಯರ ದೀನಸ್ಥಿತಿಯನ್ನು [illegible]

ಗೋಖಲೆಯವರು ಅಪ್ಪಣೆಕೊಟ್ಟು ತಮ್ಮ ಭಾಷಣವನ್ನು ಮುಕ್ತಾಯ ಪಡಿಸಿದರು.

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ).

ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಹಿಂದುಸ್ಥಾನದ ಕವಿಗಳು.

ಇಂಗ್ಲಿಷ್ ಭಾಷೆಯಲ್ಲಿ ಸುಮಾರು ಅರ್ಧ ಶತಮಾನದಿಂದೀಚೆ ಹಿಂದುಸ್ಥಾನದ ಜನರು ಶಿಕ್ಷಿತರಾದರೂ ಇಂಗ್ಲಿಷ್ ಭಾಷೆಗೆ ಗದ್ಯರೂಪದಿಂದಾಗಲೀ ಪದ್ಯರೂಪದಿಂದಾಗಲೀ ಒಂದು ಸುಲಕ್ಷಣವಾದ ಗ್ರಂಥವನ್ನು ಯಾರೊಬ್ಬನೂ ಕೂಡಿಸಲಿಲ್ಲ. ಆದರೆ ಸಾಧಾರಣ ಉನ್ನತಿಯನ್ನು ಹೊಂದಿದವರು ಹಲವರಿರುವರು. ಬಂಗಾಳದ ಸ್ತ್ರೀರತ್ನವಾದ ತೋರುದತ್ತ ಎಂಬವರು ಬಾಲ್ಯದಲ್ಲಿ ಫ್ರಾನ್ಸ್ ರಾಜ್ಯದಲ್ಲಿ ವಿದ್ಯಾಭ್ಯಾಸ ಪಡೆಕೊಂಡು ಇಂಗ್ಲಿಷ್ ಮತ್ತು ಫ್ರೆಂಚ್ ಕವಿತೆಯಲ್ಲಿ ಅಸಾಧಾರಣ ನಿಪುಣರಾಗಿದ್ದರು. ಅವರು ಪ್ರಾಯ ಬರುವಷ್ಟರಲ್ಲಿ ಮೃತಪಡದೆ ಇದ್ದರೆ ಅವರು ಎಷ್ಟು ಮಹತ್ವಿಕೆಯನ್ನು ಪಡೆಯುತ್ತಿದ್ದರೋ ನಾವು ಹೇಳಲಾರೆವು. ಅವರ ವಿಷಯ ಇಂಗ್ಲಿಷ್ ಭಾಷೆಯ ಪಂಡಿತರಾದ ಎಡ್ಮಂಡ್ ಗೋಸ್ ಎಂಬವರು ತಾವು ಬರೆದ ಪುಸ್ತಕದಲ್ಲಿ ಅವರು ಅತಿ ಮನೋಹರವಾದ ಕವಿ ಎಂತಲೂ ಅವರ ಹೆಸರಿಗೆ ಇಂಗ್ಲಿಷ್ ಭಾಷೆಯ ವಿಷಯ ಬರೆದ ಪುಸ್ತಕಗಳಲ್ಲಿ ಒಂದು ಸ್ಥಳ ನಿಶ್ಚಯವೆಂದೂ ಹೇಳಿರುವರು. ಅವರ ಮರಣಾನಂತರ ಯಾವನೊಬ್ಬ ಹಿಂದುಸ್ಥಾನದ ಪುರುಷನೂ ಅವರ ಏಳಿಗೆಯನ್ನು ಹೊಂದಲಿಲ್ಲ. ಆದರೆ ಪ್ರಕೃತದಲ್ಲಿ ಹಿಂದುಸ್ಥಾನದಲ್ಲಿ ಇಬ್ಬರು ಸಾಧಾರಣ ಇಂಗ್ಲಿಷ್ ಕವಿಗಳು ಇರುವರು. ಇವರಲ್ಲಿ ಸರೋಜಿನಿ ನಾಯ್ಡು ಎಂಬ ಹೆಂಗಸು ಒಬ್ಬರೂ ನಾಗೇಶ ವಿಶ್ವನಾಥ ಪೈ ಎಂಬವರು ಇನ್ನೊಬ್ಬರೂ ಆಗಿರುವರು.

ಸರೋಜಿನಿ ನಾಯ್ಡು ಎಂಬಾಕೆಯು ಹೈದರಾಬಾದಿನ ಒಬ್ಬ ಹೆಂಗಸು. ನಮ್ಮ ನೇಶನಲ್ ಕೊಂಗ್ರೆಸಿನ ಸ್ತ್ರೀ ಪರಿಷದಿನಲ್ಲಿ ನಡೆಯುವ ಕೆಲಸದ ಪ್ರಾಮುಖ್ಯ ಭಾಗವನ್ನು ಇವರು ವಹಿಸಿಕೊಂಡದ್ದಲ್ಲದೆ ಹೈದರಾಬಾದಿನ ಮೂಸಿನದಿಯ ನೆರೆ ಬಂದಾಗ ಜನರಿಗೆ ವಿಶೇಷ ಆಶ್ರಯ ಕೊಟ್ಟು ಪ್ರೀತಿಪಾತ್ರರಾಗಿರುವರು. ಹೈದರಾಬಾದಿನ ನೈಜಾಮರ ಸಹಾಯವನ್ನು ಪಡೆದು ಆಂಗ್ಲಾಂಡದಲ್ಲಿ ವಿದ್ಯಾಭ್ಯಾಸ ಮಾಡಿರುವರು. ಅವರು ಆಗಿಂದಾಗ್ಯ ಮಾಸಪತ್ರಿಕೆಗಳಿಗೆ ಬರೆದ ಇಂಗ್ಲಿಷ್ ಪದ್ಯಗಳು ಈಗ ಪುಸ್ತಕಮೂಲಕವಾಗಿ ("On the Golden Threshold" ಎಂಬ ಹೆಸರಿನಿಂದ) ಇಂಗ್ಲಾಂಡದಲ್ಲಿ ಛಾಪಿಸಲ್ಪಟ್ಟಿರುವವು. ಪುಸ್ತಕವು ಇಂಗ್ಲಿಷ್ ಜನರ ಹೆಚ್ಚಿನ ಪ್ರೀತಿಪಾತ್ರವಾಗಿರುವದು. ಈಗ ಆಕ್ಸ್‌ಫೋರ್ಡ್ ಮೊಕದಮೆಯಲ್ಲಿ ಹೆಸರುವಾಸಿಯಾದ ಕೊಟರನರವರು ಅದನ್ನು ಹೊಗಳಿ ಹೊಗಳಿ 'ಇಂಡಿಯನ್ ರಿವ್ಯೂ' ಎಂಬ ಮಾಸಪತ್ರಿಕೆಯಲ್ಲಿ ಬರೆದಿರುವರು.

ಎರಡನೇಯವರಾದ ನಾಗೇಶ ವಿಶ್ವನಾಥ ಪೈ ಎಂಬವರು ಮದ್ರಾಸಿನ ಬಿ. ಎ. ಯವರಾಗಿದ್ದು ಈಗ ವಕೀಲರಾಗಿರುವರೆಂದು ತೋರುತ್ತದೆ. ಈ ವರೆಗೆ ಇವರು ಹೆಸರುವಾಸಿಯಾಗಿಲ್ಲದಿದ್ದರೂ ಇವರ ಪದ್ಯಗಳನ್ನು, ಹಿಂದೆ ಬೊಂಬ್ಯಾಯ ಎಲ್ಫಿನ್‌ಸ್ಟನ್ (Elphinstone) ಕೊಲೇಜಿನ ಪ್ರೊಫೆಸರರಾದ (In wild Maharata Battle, ಮತ್ತು Princes of Balkh ಎಂಬ) ಹಿಂದುಸ್ಥಾನದ ಚರಿತ್ರೆಯ ವರ್ಣನೀಯವಾದ ಕಾದಂಬರಿಗಳನ್ನು ಬರೆದ ಮ್ಯಾಕಲ್ ಮೆಕ್ಮಿಲನ್ ಎಂಬವರು ಪ್ರಸಿದ್ಧ ವಿ. ಎಮ್. ಮಲಬಾರಿಯವರ 'ಈಸ್ಟ್ ಎಂಡ್ ವೆಸ್ಟ್' ಎಂಬ ಮಾಸಪತ್ರಿಕೆಯ ಜೂನ್ ಸಂಚಿಕೆಯಲ್ಲಿ ಇಂಗ್ಲಿಷ್ ಮಾತನಾಡುವ ಜನಸ್ತೋಮದ ಲಕ್ಷ್ಯಕ್ಕೆ ತಂದಿರುವರು. ಪೈಗಳವರ ಪದ್ಯಗಳು ಬೊಂಬ್ಯಾಯಲ್ಲಿ ಛಾಪಿಸಲ್ಪಟ್ಟು ಹಿಂದೂಸ್ಥಾನದ ಪತ್ರಿಕಾಕರ್ತರಿಂದ ಹೆಚ್ಚಾಗಿ ಹೊಗಳಲ್ಪಡದ್ದರಿಂದ ಜನರ ಮುಂದೆ ಪ್ರಸಿದ್ಧಿಗೆ ಬರಲಿಲ್ಲವೆಂದು ತೋರುತ್ತದೆ. 1903ರಲ್ಲಿ ಅವರು 'ಏಂಜಲ್ ಓಫ್ ಮಿಸ್‌ಫೋರ್ಚುನ್' ಎಂಬ ಪುಸ್ತಕವನ್ನು ಬರೆದಿರುವರು. ಕಥೆಯು ಸಂಪೂರ್ಣವಾಗಿದೆ. ಅದರಲ್ಲಿ ವಿಕ್ರಮಾದಿತ್ಯನು ವೀರನಾಗಿರುವನು. ಅವನು ತನ್ನ ದುರದೃಷ್ಟದಿಂದ ಒಂದು ಆಲದ ಮರದ ನೆಳಲಿನಲ್ಲಿ ವಿಶ್ರಮಿಸುವದನ್ನು ನಾವು ಮುಂಚೆ ನೋಡುವೆವು. ಅವನು ಅನುಭವಿಸುವ ದುಃಖಗಳೂ ನಂತರದ ಸಂತೋಷಗಳೂ ಆ ಪದ್ಯದ ಮುಖ್ಯ ಸಾರಾಂಶವಾಗಿರುವವು.

"ಅವರ ವರ್ಣನೆಗಳು ವಿಸ್ತಾರವಾದರೂ ಕವಿತೆಯು ಗಾಂಭೀರ್ಯದ ಶಿಖರವನ್ನು ಏರದಿದ್ದರೂ ಅವರ ಕವಿತೆಯು ಜೀವಕಳೆಯಿಲ್ಲದೆ ಇರುವದಿಲ್ಲ. ಅದು ಹಿಂದೂಸ್ಥಾನದವರ ವರ್ಣನೆಯಿಂದ ಶೋಭಿತವಾಗಿ ಇರುವದು. ಅವರ ಪುಸ್ತಕವನ್ನು ಆರ್ನೊಲ್ಡ್ ಕವಿಯು ಬರೆದ ("Light of Asia") ಎಂಬ ಬುದ್ಧನ ಚರಿತ್ರೆಗೆ ಹೋಲಿಸಬಹುದು. ಆದರೆ ಇದರ ಭಾಷಾಚಾತುರ್ಯವಿಲ್ಲ. ಅವರ ಕವಿತೆಯಲ್ಲಿ ಹಿಂದೂಸ್ಥಾನಕ್ಕೆ ಅನುಗುಣವಾದ ವರ್ಣಿಸಲಸಾಧ್ಯವಾದ ಒಂದು ಶೋಭೆಯ ಮನೋಹರತೆಯು ಇರುವದು. ಪೂರ್ವದೇಶದ ರೂಪವಿಸ್ತಾರವನ್ನು ವರ್ಣಿಸಲು ಪಾಶ್ಚಾತ್ಯರಾದ ಮೂರ್, ಸರ್ ಎಡ್ವಿನ್ ಅರ್ನೊಲ್ಡ, ರಡ್ಯಾರ್ಡ ಕಿಪ್ಲಿಂಗ್, ಸರ್ ಆಲ್ಫ್ರೆಡ್ ಲಯಾಲ್, ಪ್ರೊಫೆಸರ್ ಬೈನ್ ತಮ್ಮ ಗ್ರಂಥಗಳಲ್ಲಿ ಪ್ರಯತ್ನಿಸಿರುವರು. ಆದರೆ ಅವರ ಗ್ರಂಥಗಳಲ್ಲಿ ತೋರಿಬರುವದಕ್ಕಿಂತ ಉತ್ತಮವಾಗಿ ಪೌರ್ವಾತ್ಯ ವರ್ಣನೆಯು ಇವರ ಗ್ರಂಥಗಳಲ್ಲಿ ತೋರಿಬರುವದು". ಈ ವಾಕ್ಯಗಳಿಂದ ಮೆಕ್ಮಿಲನ್ ಸಾಹೇಬರು ಈ ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಹೊಸ ಹಿಂದೂ ಕವಿಯನ್ನು ಹೊಗಳಿರುವರು. ಈ ಸ್ತುತಿಯು ಇಂಗ್ಲಿಷ್ ಪಂಡಿತನಿಂದ ಹೊರಡುವದಕ್ಕೆ ಈ ಕವಿಯಲ್ಲಿ ಅಸಾಧಾರಣವಾದ ಪ್ರಾವೀಣ್ಯವಿರಬೇಕೆಂದು ನಾವು ಹೇಳಬೇಕೆಂತಿಲ್ಲ. ಈ ಕವಿಯು ಇನ್ನು ಯಾವ ಕಾವ್ಯಗಳನ್ನು ಬರೆಯುವನೋ ಅದನ್ನು ಇಂಗ್ಲಿಷ್‌ರೊತ್ತಿದ್ದ ಹಿಂದುಸ್ಥಾನದ ಜನರು ಹಾರೈಸುತ್ತಿರುವರು.

L. Kudva.

ವಿದೇಶ ವೃತ್ತಾಂತ

ಪರ್ಶ್ಯಾದೇಶದವರು ತಮ್ಮ ದೇಶದಲ್ಲಿ ರುಶ್ಯ ಸರಕಾರದವರು ಪಾಯಿದಳವನ್ನು ಇನ್ನೂ ನಿಲ್ಲಿಸಿರುವುದರಿಂದ ರುಶ್ಯದೇಶದ ಸಾಮಾಗ್ರಿಗಳೆಲ್ಲವುಗಳನ್ನು ಬಹಿಷ್ಕರಿಸಿರುವರು ದೇಶವತ್ಸಲರಾದ ಹಲವು ಪರ್ಶ್ಯಾದೇಶದ ವ್ಯಾಪಾರಿಗಳು ತಾವು ಈ ಮೊದಲು ಬಾಕು ಎಂಬಲ್ಲಿರುವ ರುಶ್ಯದ ಕಾರ್ಖಾನೆಗಳಿಗೆ ಸಾಮಾಗ್ರಿಗಳನ್ನು ತಯ್ಯಾರಿಸಿಕೊಡುವರೆ ಕೊಟ್ಟ ಒರ್ಡರುಗಳನ್ನು ವಜಾ ಮಾಡಿರುವರಂತೆ

ಇತ್ತಲಾಗೆ ಪ್ರಕಟಿಸಲ್ಪಟ್ಟ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ವೃತ್ತಾಂತದಲ್ಲಿ ಮದನಲಾಲ ಡಿಂಗ್ರನು ಸ್ವದೇಶಕ್ಕಾಗಿ ಪ್ರಾಣವನ್ನರ್ಪಿಸಿರುವೆನೆಂಬದಾಗಿ ಆತನ ಹೆಗ್ಗಳಿಕೆಯನ್ನು ಕೂಡಿರುವ ಕೆಲವು ಪ್ರಕಟಣಾಪತ್ರಗಳನ್ನು ಐರ್ಲಂಡಿನ ಕೆಲವು ಕಡೆಗಳಲ್ಲಿ ಅಂಟಿಸಿದ್ದರೆಂಬದಾಗಿಯೂ ಪೋಲಿಸಿನವರು ಇವುಗಳನ್ನು ಕೂಡಲೇ ತೆಗೆದು ಹಾಕಿಬಿಟ್ಟಿರುವರೆಂಬದಾಗಿಯೂ ತಿಳಿದುಬರುತ್ತದೆ ಮದನಲಾಲ ಡಿಂಗ್ರನಂಥಹ ಕೊಲೆಪಾತಕಿಯ ವಿಷಯವಾಗಿ ಈ ರೀತಿ ಬರೆದು ಪ್ರಕಟಿಸಿದ ಅಪರಾದಿಗಳು ಯಾರೆಂದು ಇನ್ನೂ ತಿಳಿದು ಬರಲಿಲ್ಲ.

ಮಿ। ರೆಮಸೆ ಮೆಕಡೊನಲ್ಡ್ ಎಂಬವರು ತನ್ನ ಪತ್ನಿಯರೊಂದಿಗೆ ಹಿಂದೂಸ್ಥಾನದ ಸಮಾಚಾರಸ್ಥಿತಿಯನ್ನರಿತು ಕೊಳ್ಳುವರೆ ವಿಲಾಯತಿಯಿಂದ ಹೊರಟಿರುವರು

ಚೇಂಬರ್ ಒಫ್ ಕೊಮರ್ಸ್ ಎಂಬ ವ್ಯಾಪಾರಿಗಳ ಆಯಾ ಸಂಘಗಳ ಪ್ರತಿನಿಧಿಗಳ ಕೊಂಗ್ರೆಸು ಸಭೆಯು ಮುಕ್ತಾಯವಾಯಿತೆಂಬದಾಗಿ ತಿಳಿದುಬರುತ್ತದೆ ಈ ಸಭೆಯಲ್ಲಿ ಮಂಜೂರಾದ ಹಲವು ನಿರ್ಣಯಗಳಲ್ಲಿ ಮುಖ್ಯವಾದವುಗಳು ಯಾವುವಂದರೆ —ಸುಯೆಜ್ ಕಾಲುವೆಯ ಸುಂಕದ ದರವನ್ನು ತಗ್ಗಿಸಬೇಕೆಂತಲೂ ಬ್ರಿಟಿಷ್ ಸಾಮ್ರಾಜ್ಯದ, ಭಾರತೀಯ, ಸಿಲೋನ್, ಕೊಲೊನಿಯಲ್ ಮೊದಲಾದವುಗಳ ಸರಕಾರದವರು ಕೊಕೊಸ್ [illegible] ದೀಪಸ್ಥಂಬವನ್ನು ಕಟ್ಟಿಸಬೇಕೆಂತಲೂ ಹಿಂದುಸ್ಥಾನದ [illegible] ರ್ ಚೇಂಬರ್ ಒಫ್ ಕೊಮರ್ಸ್ ಎಂಬ ಹಿಂದುಸ್ಥಾನದ ಯುರೋಪಿಯ ವ್ಯಾಪಾರಿಗಳ ಸಂಘದವರು ಸೂಚಿಸಿದ ತೆ [illegible] ಜೈಲುಗಳಲ್ಲಿ ಬಂದಿವಾನರಿಂದ ತಯ್ಯಾರಿಸಲ್ಪಟ್ಟ ಸಾಮಾಗ್ರಿಗಳ ಮೇಲಾಟವು ನ್ಯಾಯವಾದದ್ದಲ್ಲವೆಂತಲೂ ಜೈಲುಗಳಲ್ಲಿ ತಯ್ಯಾರಾದ ಸಾಮಾಗ್ರಿಗಳನ್ನು ಸರಕಾರದವರೇ ಉಪಯೋಗಿಸಿಕೊಳ್ಳಬೇಕೆಂತಲೂ, ಜೈಲುಗಳಲ್ಲಿ ಈ ಸಾಮಾಗ್ರಿಗಳನ್ನು ತಯ್ಯಾರಿಸುವರೆ ಯಂತ್ರಗಳನ್ನುಪಯೋಗಿಸಕೂಡದೆಂಬದಾಗಿಯೂ ನಿರ್ಣಯಿಸಿರುವರು ಹಿಂದೂಸ್ಥಾನದ ಇದೇ ಸಂಘವು ಹಿಂದುಸ್ಥಾನದಲ್ಲಿ ಯಂತ್ರಗಳ ಮುಖೇನ ನಡಿಯುವ ಮಗ್ಗಗಳಿಂದ ತಯ್ಯಾರಾಗುವ ಬಟ್ಟೆಗಳ ಮೇಲಿರುವ ಸುಂಕವನ್ನು ತೆಗೆದುಹಾಕಬೇಕೆಂದು ಸೂಚಿಸಿರುವ ನಿರ್ಣಯವನ್ನು ತೆಗೆದುಹಾಕಿರುವರು.

'ವಂದೇಮಾತರಂ' ಪತ್ರಿಕೆಯು ಜಿನಿವಾ ಎಂಬಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ ಭಾರತೀಯ ಕೊಂಗ್ರೆಸು ಸಭೆಯ ಮುಂದಾಳುಗಳಾದ ಬಾಬು ಸುರೇಂದ್ರನಾಥ ಬೆನರ್ಜಿಯವರೂ ಬಹುಮಾನಪಟ್ಟ ರಾ। ಗೋಖಲೆಯವರೇ ಮೊದಲಾದವರನ್ನು ಹೀಯಾಳಿಸುವ ಲೇಖನಗಳಿಂದ ಕೂಡಿರುವುದಂತೆ.

ಚೀನಾದೇಶದಲ್ಲಿ ಅಫೀಮಿನ ರಫ್ತು ವ್ಯಾಪಾರವು ಕಡಿಮೆಯಾಗುತ್ತ ಬರುತ್ತಿರುವುದರಿಂದ, ಈ ವ್ಯಾಪಾರದ ರಫ್ತು ತೆರಿಗೆಯ ನಷ್ಟವನ್ನು ಭರ್ತಿಮಾಡಿಕೊಳ್ಳುವರೆ ಚೀನಾದೇಶಿಯರು, ಅಲ್ಲಿ ರಫ್ತಾಗುವ ಮಾದಕ ಪದಾರ್ಥಗಳ ಮೇಲೆ ಸುಂಕ ವಿಧಿಸುವರಂತೆ.

ಬಂಗಾಳದಲ್ಲಿಯ ವಿದೇಶವಸ್ತುಗಳ ಬಹಿಷ್ಕಾರದ ದೆಸೆಯಿಂದ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಮೆಂಬರರಾದ ಮಿ। ರೀಸ್‌ರವರು ಯುರೋಪಿಯ ಮತ್ತು ಆಂಗ್ಲೇಯ ವ್ಯಾಪಾರಿಗಳು ಅನ್ಯಾಯ ಪಡೆಯುತ್ತಿರುವರೆಂಬದಾಗಿ ಯೂರೋಪಿಯ ಮತ್ತು ಆಂಗ್ಲೇಯ ಇಂಡಿಯನ್ ಡಿಫೆನ್ಸ್ ಸಂಘದವರಿಂದ ಬ್ರಿಟಿಷ್ ಸರಕಾರಕ್ಕೆ ಮನವಿ ಬಂದಿರುವುದೋ, ಈ ಬಹಿಷ್ಕಾರ ದೆಸೆಯಿಂದ ಕಲಕತ್ತೆಯಲ್ಲಿ ಬ್ರಿಟಿಷ್ ಸಾಮಗ್ರಿಗಳು ಗಿರಾಕಿಗಳಿಲ್ಲದೆ ಬಿದ್ದುಕೊಂಡಿರುವವೋ ಏನೆಂಬದಾಗಿ ಹಿಂದುಸ್ಥಾನದ ಅಂಡರ್ ಸೆಕ್ರಿಟರಿಗಳಾದ ಮಾಸ್ಟರ್ ಒಫ್ ಎಲಿಬೆಂಕರವರನ್ನು ಕೇಳಿಕೊಂಡರು

ರೋಮನ್ ಕಥೊಲಿಕರ ಜಗದ್ಗುರುಗಳಾದ ಪೋಪ್ ಸಾಹೇಬರು ಹೈದರಾಬಾದಿನ ಬಿಷೋಪರವರಿಗೆ [illegible] ಕೊಟ್ಟಿರುವರು

ಉತ್ತರ ಹಿಂದುಸ್ಥಾನ.

ಲಾಹೋರಿನ ಕೊಂಗ್ರೆಸು ಆಮಂತ್ರಣ ಸಭೆಯವರು ಸರ್ ಫಿರೋಜಷಹಾ ಮೇಥಾರವರನ್ನು ಈ ಸಲದ ಕೊಂಗ್ರೆಸು ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಿರುವರು

[illegible] ಆಸ್ತಿಗಳನ್ನು ಹಿಂದೂಸ್ಥಾನದ ಹೊರ [illegible] ಯಾರಾದರೂ ಕೊಂಡುಹೋಗದೆಂಬದಾಗಿ ಇಂಡಿಯಾ ಸರಕಾರದವರಿಗೆ ವಿಜ್ಞಾಪಿಸಿಕೊಳ್ಳುವರೆ ಬಂಗಾಳದ [illegible]

ಕಲ್ಕತ್ತೆಯಲ್ಲಿ [illegible] ತಿಳಿದುಬರುತ್ತದೆ

[illegible] ಕ್ರಮವನ್ನೇ ಅನುಸರಿಸಿ ರಾಜದ್ರೋಹ ತಪ್ಪಿತಸ್ಥರನ್ನು ವಿಚಾರಿಸಬೇಕೆಂಬದಾಗಿ ಬಂಗಾಳಿ ಎಂಬ ಪತ್ರಿಕೆಯು ಸೂಚಿಸಿರುವುದು

ಲಾಹೋರಿನ ಸಲದ ಸಭೆಯಲ್ಲಿ ಕೊಂಗ್ರೆಸ್ ಸಭೆ ಅಧ್ಯಕ್ಷರನ್ನು ಚುನಾಯಿಸುತ್ತಿರುವಾಗ್ಯೆ ಉತ್ಸಾಹವೇನೂ ಇರಲಿಲ್ಲವೆಂಬದಾಗಿಯೂ ಲಾಹೋರಿನಲ್ಲಿ ಕೂಡುವ ಮುಂದಿನ ಹಿಂದೂ ಕೊನ್ಫರೆನ್ಸಿಗೆ ಪ್ರತಿನಿಧಿಗಳನ್ನು ಬಹಳ ಆತುರದಿಂದ ಆರಿಸುತ್ತಿರುವರೆಂತಲೂ ತಿಳಿಯುತ್ತೇವೆ

ಕಾಶ್ಮೀರ ದೇಶದ ಮಹಾರಾಜರವರು ಲಾಹೋರ್ ವಸ್ತು ಪ್ರದರ್ಶನದ ಪೋಷಕ ಪದವಿಯನ್ನು ಸ್ವೀಕರಿಸಿರುವರು

ಜಲಂಧರಿನ ಡಿಪ್ಯೂಟಿ ಕಮಿಷನರಾಗಿರುವ ಮೆಜರ್ ಬರ್ಲಟನ್ ಎಂಬವರ ಅಧ್ಯಕ್ಷತೆಯಲ್ಲಿ ಬರುವ ಲಾಹೋರಿನ ವಸ್ತು ಪ್ರದರ್ಶನಕ್ಕೋಸ್ಕರ ರೂ ೪೦೦ ಚಂದಾ ಹಣವನ್ನು ಜಲಂಧರಿನ ನಿವಾಸಿಕರಿಂದ ಕೂಡಿಸಿರುವರು.

ಇಂಡಿಯಾ ಸರಕಾರದವರು ಸಂಸ್ಕೃತ ವಿದ್ಯಾ [illegible]

[illegible] ವುಳ್ಳ ಒಂದು ವಿದ್ಯಾರ್ಥಿ ವೇತನವನ್ನು ಭಾರತೀಯರ ಬಗ್ಗೆ ಸ್ಥಾಪಿಸಿದ್ದರು. ಈ ವಿದ್ಯಾರ್ಥಿ ವೇತನವು ಲಾಹೋರಿನ ಸರಕಾರಿ ಸಂಸ್ಕೃತ ಕೊಲೇಜಿನ ಪಂಡಿತ, ಪ್ರಭುದತ್ತ ಶಾಸ್ತ್ರಿಯವರಿಗೆ ದೊರೆಕಿರುವುದು. ಸ್ವಲ್ಪ ಸಮಯದಲ್ಲಿಯೇ ಇವರು ಓಕ್ಸ್‌ಫರ್ಡಿಗೆ ತೆರಳುವರು.

ಪೇಷಾವರದಿಂದ ಒಂದು ಸಲಾಮಿನ ವಿಶೇಷತ್ವದ ಪ್ರಸ್ತಾಪವು ಕೇಳುಸುತ್ತಿರುವುದು ಪೇಷಾವರದ ಡಿಪ್ಯುಟಿ ಕಮ್ಮಿಶನರವರು ಒಂದು ದಿನ ರಸ್ತೆಯಲ್ಲಿ ತಿರುಗಾಡುತ್ತಿರುವಾಗ ಕೆಲವು ಶಾಲೆಯ ಹುಡುಗರನ್ನು ಎದುರುಗೊಂಡರು ಆದರೆ ಇವರು ಡಿಪ್ಯುಟಿ ಕಮ್ಮಿಶನರೆಂಬದು ಈ ವಿದ್ಯಾರ್ಥಿಗಳಿಗೆ ತಿಳಿಯದೆ ಇದ್ದದರಿಂದ ವಿದ್ಯಾರ್ಥಿಗಳು ಸಾಹೇಬರವರಿಗೆ ಸಲಾಮು ಕೊಡಲಿಲ್ಲ ಮಾರಣೇ ದಿನ ಈ ವಿದ್ಯಾರ್ಥಿಗಳಿಗೂ ಅವರ ಉಪಾಧ್ಯಾಯರಿಗೂ ಬಂಗ್ಲೆಯಲ್ಲಿ ಹಾಜರಾಗಲಿಕ್ಕೆ ಅಪ್ಪಣೆಯಾಯಿತು. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಸಾಹೇಬರವರ ಕ್ಷಮಾಪಣೆಯನ್ನು ತಕ್ಕ ರೀತಿ ಕೇಳಿದ ಬಳಿಕ ಈ ವಿಷಯದಲ್ಲಿ ಮುಂದರಿಸದೆ ಅಪರಾಧಿಗಳಿಗೆ ಮುಂಜಾಗ್ರತೆ ಹೇಳಿ ಅವರನ್ನು ಬಿಟ್ಟುಬಿಟ್ಟರಂತೆ

ಅಗ್ರಪೋರ್ಟು ರೈಲ್ವೆ ಸ್ಟೇಶನಿನಲ್ಲಿ ಒಂದನೇ ತರಗತಿಯ ರೈಲ್ವೆ ಗಾಡಿಯಲ್ಲಿ ಒಂದು ಡಬ್ಬಿಯಲ್ಲಿ ತುಂಡು ತುಂಡು ಮಾಡಿ ತುಂಬಿಸಿದ ಒಂದು ಹಿಂದುವಿನ ಶವವು ಸಿಕ್ಕಿರುವುದು ಶವವನ್ನು ಸಿಗಿದ ವಿಧಾನವನ್ನು ನೋಡಿದರೆ ಇದು ಶರೀರ ರಚನೆಯ ಶಾಸ್ತ್ರ ಮಾಹಿತಿಯುಳ್ಳವರಿಂದಲೇ ಸಿಗಿಯಲ್ಪಟ್ಟಿತೆಂಬದಾಗಿ ತೋರುವುದು ಶವದ ಗುರ್ತವನ್ನು ಹಿಡಿಯುವುದು ಅಸಾಧ್ಯವಾಗಿರುವುದರಿಂದ ಈ ಗುರ್ತ ಹಿಡಿದವರಿಗೆ ರೂ ೫೦ ಮತ್ತು ಅಪರಾಧಿಯನ್ನು ಹಿಡಿದವರಿಗೆ ರೂ ೧೦೦ರ ಇನಾಮುಗಳನ್ನು ಕೊಡುವುದೆಂಬದಾಗಿ ಪ್ರಕಟಿಸಲ್ಪಟ್ಟಿರುವುದು

ಪಂಜಾಬಿನ ದೇಶಭಾಷಾ ಪತ್ರಿಕೆಯೊಂದರಲ್ಲಿ ಈ ಕೆಳಗಿನ ಒಂದು ಕ್ರೂರ ಕೊಲೆಯ ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು ಲಾಹೋರ್ ರೈಲ್ವೆ ಸ್ಟೇಶನಿನ ಬಳಿಯ ಒಂದು ಕೇರಿಯ ಧಾರದಲ್ಲಿ ಒಬ್ಬ ಹಿಂದೂವಿನ ಅಂಗಡಿಯೊಂದಿರುವುದು ಒಂದು ದಿವಸ ಒಬ್ಬ ಸಾಧುವು ಈ ಅಂಗಡಿಗೆ ಭಿಕ್ಷೆ ಬೇಡುವರೆ ಬಂದಿದ್ದನು. ಅಂಗಡಿಯ ಮಾಲಿಕನು ಆತನನ್ನು ಮನೆಗೆ ಕರಕೊಂಡು ಹೋಗಿ, ಅಲ್ಲಿ ಬಹಳ ಉಪಚಾರಗಳಿಂದ ಈ ಸಾಧುವಿಗೆ ಊಟವಿತ್ತನು ಒಂದೆರಡು ದಿವಸಗಳಲ್ಲಿ ಇದೇ ಸಾಧುವು ತಿರುಗಿ ಭಿಕ್ಷೆ ಬೇಡಲು ಈ ಅಂಗಡಿ ಬಳಿಗೆ ಬಂದನು ಅಂಗಡಿಗಾರನು ಹೆಚ್ಚಿನ ಕೆಲಸದಲ್ಲಿದ್ದ ಕಾರಣ ಮನೆಗೆ ಹೋಗಿ ಊಟಮಾಡಿಕೊಳ್ಳುವರೆ ಈ ಸಾಧುವಿಗೆ ಹೇಳಿದನು. ಸಾಧುವು ಮನೆಗೆ ಬಂದೊಡನೆಯೇ ಅಂಗಡಿಗಾರನ ಪತ್ನಿಯು ಆತನಿಗೆ ಊಟ ಬಡಿಸಿದಳು ಸಾಧುವು ಊಟವನ್ನು ಮಾಡುತ್ತಿರುವಾಗ ಉಪ್ಪಿನಕಾಯಿ ಬಳಸಬೇಕಾಗಿ ಕೇಳಿಕೊಂಡನು ಉಪ್ಪಿನಕಾಯಿ ತರಲಿಕ್ಕೆಂತ ಅಂಗಡಿಗಾರನ ಪತ್ನಿಯು ಮತ್ತೊಂದು ಕೋಣೆಯನ್ನು ಪ್ರವೇಶಿಸುತ್ತಿರುವಾಗ ಸಾಧುವು, ಅವಳಿಗೆ ಗೊತ್ತಾಗದಂತೆ ಹಿಂದಕಡೆಯಿಂದ ಹೋಗಿ ತನ್ನ ಹತ್ತಿರವೇ ಅಡಗಿಸಿಟ್ಟಿದ್ದ ಕಠಾರಿಯಿಂದ ಅವಳನ್ನು ತಿವಿದು ಕೊಂದುಬಿಟ್ಟು, ಅವಳ ಮೈಮೇಲಿರುವ ಆಭರಣಗಳನ್ನೆಲ್ಲಾ ತೆಗೆದುಕೊಂಡು ಓಡಿ ಹೋದನು. ಸ್ವಲ್ಪ ಸಮಯದ ನಂತರ ನೆರೆಯವನೊಬ್ಬನು ಅಲ್ಲಿಗೆ ಬಂದು ಈ ಕೊಲೆಯನ್ನು ನೋಡಿ ಅಂಗಡಿಗಾರನಿಗೆ ತಿಳಿಸಲು, ಪೋಲಿಸಿನವರಿಗೆ ಈ ಸಮಾಚಾರವು ಮುಟ್ಟಿ ಸಾಧುವನ್ನು ಆಭರಣಗಳ ಸಮೇತ ಹಿಡಿದಿರುವರು. ಪೋಲಿಸಿನವರು ಈ ಸಾಧುವನ್ನು ಹಿಡಿಯುವಾಗ ಇವನು ತನ್ನ ರಕ್ತಮಯವಾದ ಬಟ್ಟೆಗಳನ್ನು ಒಂದು [illegible]

ಮುಂಬಯಿಯ ಮೆ| ದಾಜಿ ಅಬಾಜಿ ಖರೆಯವರ ಪುತ್ರರ ಶಿಲ್ಲೊಬ್ಬರೂ, ಹಿಂದೂ ವಿದ್ಯಾ ಫಂಡಿನಿಂದ ವೇತನ ಹೊಂದಿದ ಯಶ್ವಂತ ಕೃಷ್ಣ ಕುಂತೆ ಎಂಬವರೂ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆ ಬಗ್ಯೆ ಕಲಿಯುವರೆ ಮುಂಬಯಿಯಿಂದ ವಿಲಾಯತಿಗೆ ತೆರಳಿರುವರು

——o——

ದಕ್ಷಿಣ ಹಿಂದುಸ್ಥಾನ.

ಬಹುಮಾನಪಟ್ಟ ಮೆ ಸಿ ಕೆ ವಿಯರರವರ ಗೈರುಹಾಜರಿಯಲ್ಲಿ ಬಹುಮಾನಪಟ್ಟ ಮೆ| ಎ ಇ ಕಸ್ಪೆಲ್ ಸ್ಟುವರ್ಟಸ್ಟುವರ್ಟರವರು ಮದ್ರಾಸು ರೆವಿನ್ಯೂ ಬೋರ್ಡಿನ ಪ್ರಥಮ ಮೆಂಬರರಾಗಿರುವರು. ಬಹುಮಾನಪಟ್ಟ ಮೆ. ಜಿ ಎಂ. ಡ್ರೂರವರು ದ್ವಿತೀಯ ಮೆಂಬರರಾಗಿಯೂ ಬಹುಮಾನಪಟ್ಟ ಮೆ. ಡಬ್ಲ್ಯು ಓ ಹೊರ್ನರವರು ಮೂರನೇ ಮೆಂಬರರಾಗಿಯೂ, ಬಹುಮಾನಪಟ್ಟ ಮೆ ಎಲ್ ಸಿ ಕ್ಲಾರ್ಕ ರವರು ನಾಲ್ಕನೇ ಮೆಂಬರರಾಗಿಯೂ ಕೆಲಸ ನೋಡುತ್ತಿರುವರು

ದಕ್ಷಿಣ ಮಲಬಾರು ಜಿಲ್ಲೆಯ ರಿಜಿಸ್ತ್ರಾರರಾದ ರಾ ಎಮ್ ಮುಕುಂದರಾಯರವರು ಬರುವ ಅಕ್ಟೋಬರ ತಿಂಗಳ ೭ನೇ ತಾರೀಕಿನಿಂದ ಯಾ ನಂತರ ಹಕ್ಕಿನ ರಜೆಕೂಡಿ ಮೂರು ತಿಂಗಳು ರಜಾ ಪಡಕೊಳ್ಳುವರು

ಮದ್ರಾಸು ಗವರ್ನರರ ಕೌನ್ಸಿಲಿನ ಮೆಂಬರರ ಕೆಲಸಕ್ಕೆ ಸರ್ ಜೋರ್ಜ ಸ್ಟುವರ್ಟ ಫೋರ್ಬ್ಸ, ಕೆ ಸಿ ಎಸ್ ಐ. ರವರು ರಾಜಿಕೊಟ್ಟಿರುವ್ರದರಿಂದ ಚಕ್ರವರ್ತಿಯವರು ಬಹುಮಾನಪಟ್ಟ ಮೆ ಜಿ ಎಸ್ ಎಟಿಕನ್ ಸನ್ ಸಿ ಎಸ್ ಐ ರವರನ್ನು ಕೌನ್ಸಿಲು ಮೆಂಬರರಾಗಿ ನೇಮಿಸಿರುವರು

ಈ ವರುಷ ಮೈಸೂರು ದಸರಾ ವಸ್ತುಪ್ರದರ್ಶನದೊಂದಿಗೆ ಜಾನುವಾರುಗಳ ಪ್ರದರ್ಶನವೂ ಇರುವುದೆಂತ ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿತಷ್ಟೇ ಈ ಜಾನುವಾರು ಪ್ರದರ್ಶನದ ವಿವರವು ಇತ್ತಲಾಗೆ ಪ್ರಕಟಿಸಲ್ಪಟ್ಟಿರುವುದು ಬರುವ ಅಕ್ಟೋಬರ ತಿಂಗಳ ೨೨ ಮತ್ತು ೨೩ನೇ ತಾರೀಕುಗಳಲ್ಲಿ ಮೈಸೂರ ರೇಸುಕೋರ್ಸ ಎಂಬ ಸ್ಥಳದಲ್ಲಿ ಈ ಪ್ರದರ್ಶನವು ಜರುಗುವದು ಪ್ರಥಮ ದಿನದಲ್ಲಿ ಬೆಳಿಗ್ಗೆ ಪೊಲಿಪೋನಿ ಸಾಧಾರಣ ಕುದುರೆ, ಬೆಕ್ಕು ಮತ್ತು ನಾಯಿಗಳ ಪ್ರದರ್ಶನವು ಸಾಯಂಕಾಲ ಜಟಕಾ ಗಾಡಿ ಕುದುರೆ, ಓಡುಗಾಡಿ ಕುದುರೆ ಎತ್ತಿನ ಬಂಡಿ ಕುದುರೆಗಳ ಓಟದ ಮೇಲಾಟ ಮೊದಲಾದವುಗಳ ಪ್ರದರ್ಶನ, ಎರಡನೇ ದಿವಸ ಊರುಗಳಲ್ಲಿ ಸಾಕಲ್ಪಟ್ಟ ಉತ್ಕೃಷ್ಟ ಪಕ್ಷಿಗಳು, ಚೆನ್ನಾಗಿ ಸಾಕಿದ ಉತ್ಕೃಷ್ಟ ಜವಾರಿ ಹಸುವಿನ ದನಗಳು, ಜಟ್ಕಾಗಾಡಿಗಳ ಕುದುರೆಗಳು, ಸವಾರಿ ಕುದುರೆಗಳು, ಕತ್ತೆಗಳು ಕೋಣಗಳು ಮತ್ತು ದನ ಎಮ್ಮೆಗಳ ಕರುಗಳು, ಇವುಗಳ ಪ್ರದರ್ಶನವು ಎತ್ತುಗಳಿಗೂ ಕುದುರೆಗಳಿಗೂ ಲಾಡಾ ಕಟ್ಟುವುದರಲ್ಲಿ ಮೇಲಾಟವಿರುವುದು. ಈ ಪ್ರದರ್ಶನದ ಮೇಲಾಟಗಳಲ್ಲಿ ಗೆದ್ದವರಿಗೆ ಇನಾಮು ಕೊಡಲ್ಪಡುವುದು

——o——

ದಕ್ಷಿಣ ಕನ್ನಡ.

ಮಂಗಳೂರು ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೧ ಪ್ಲೇಗ್ ಮರಣವಿತ್ತು

ಇಲ್ಲಿ ಹಂಪನಕಟ್ಟೆಯಲ್ಲಿರುವ ರೋಮನ್ ಕೆಥೊಲಿಕ್ ಕ್ರೈಸ್ತರ ಮಿಲಾಗ್ರಿಸ್ ಇಗರ್ಜಿಯನ್ನು ಪುನಹಾ ಹೊಸತಾಗಿ ಕಟ್ಟುವ ಬಗ್ಗೆ ಈಗಿನ ಕಟ್ಟೋಣವನ್ನು ಕೆಡವಿ ಹಾಕುವ ಕೆಲಸವನ್ನು ಪ್ರಾರಂಭಿಸಿದ್ದಾರೆ ಇದನ್ನು ಪುನಹಾ ಕಟ್ಟುವರೆ ರು. ೬೦,೦೦೦ ತಗಲಬಹುದೆಂದು ಅಂದಾಜು ಮಾಡಿದ್ದಾರೆ.

ಶಾಲಾ ಇನ್ಸ್‌ಪೆಕ್ಟರರಾದ ... ದೊರೆಗಳು ಇಲ್ಲಿಯ ... ಗವರ್ನಮೆಂಟ ...

... ಸಂದರ್ಶಿಸಿ ಹೊಸದುರ್ಗಕ್ಕೆ ... ತಾ. ೨೨ಕ್ಕೆ ಇಲ್ಲಿಗೆ ತಲಪುವರು.

ದಕ್ಷಿಣ ಕನ್ನಡ ಜಿಲ್ಲೆಯ ಬೆನಗಲ್ ನರಸಿಂಗರಾಯರವರು ಐ ಸಿ ಯಸ್. ಯಾ ಕಲೆಕ್ಟರ್ ಯಾ ಜಡ್ಜ ಹುದ್ದೆಗಳ ಪರೀಕ್ಷೆಯಲ್ಲಿ ಪಾಸಾಗಿರುವರೆಂಬ ವರ್ತಮಾನವನ್ನು ತಿಳಿಸಲು ಸಂತೋಷಪಡುತ್ತೇವೆ

ಕಳೆದ ತಾ ೧೮ರಲ್ಲು ಮಂಗಳೂರು ಮೈದಾನಿನಲ್ಲಿ ಮಲಬಾರ್ ಕ್ರಿಕೆಟ್ ಟೀಮ್ ಮತ್ತು ಮಂಗಳೂರು ಕ್ರಿಕೆಟ್ ಟೀಮಿನವರ ಚಂಡಾಟದಲ್ಲಿ ಮಂಗಳೂರು ಟೀಮಿನವರು ಗೆದ್ದರು

ಇಲ್ಲಿಯ ಪೋಲೀಸು ಸುಪರಿಂಟೆಂಡೆಂಟರಾಗಿ ಒದಲಿ ನೋಡಲಿಕ್ಕೆ ಮೆ| ಇ ಪಿ ಲವ್‌ಲಕ್ ದೊರೆಗಳವರು ನೇಮಕಪಟ್ಟಿರುವರು ಇಲ್ಲಿ ಆಕ್ಟಿಂಗ್ ಸುಪರಿಂಟೆಂಡೆಂಟ್ ರಾಗಿದ್ದ ಮೆ| ಕ್ಯುಲ್ಲಿ ಎಚ್ ಪಿಟ್ ದೊರೆಗಳವರು ಗೋದಾವರಿ ಜಿಲ್ಲೆಯ ಬದ್ರಾಚಲಮ್ ಸಬ್‌ಡಿವಿಜನಿಗೆ ಆಸಿಸ್ಟಾಂಟ್ ಸುಪರಿಂಟೆಂಡೆಂಟರಾಗಿ ನೇಮಕಪಟ್ಟಿರುವರು

ಈ ತಿಂಗಳ ತಾರೀಕು ೧೮ರಲ್ಲಿ ಮಂಗಳೂರು ಗಣಪತಿ ಶಾಲೆಯಲ್ಲಿ ಬ್ರಹ್ಮಶ್ರೀ ಬಿ ಶ್ರೀನಿವಾಸ ರಾಯರು ಜಕ್ಕಿಯನ್ನು ಕುರಿತು ಉಪನ್ಯಾಸ ಕೊಟ್ಟರು

ಚಿಕ್ಕಮಗಳೂರು ಈ ಊರಿನ ಮಾತಬ್ಬರ ಸಾವಕಾರರೂ ಕಾಪಿ ಪ್ಲಾಂಟರೂ ಆಗಿದ್ದ ರಾ| ಡಿ ಯಂ ಮಹಮ್ಮದ ಗೌಸ ಸಾಹೇಬರೆಂಬವರು ಕಳೆದ ಬುಧವಾರ ರಾತ್ರೆ ತಮ್ಮ ಸ್ವಗೃಹದಲ್ಲಿ ಪರವಶ್ಯರಾದರೆಂಬದನ್ನು ತಿಳಿಸಲು ಬಹಳ ವಿಷಾದಪಡುತ್ತೇವೆ ಇವರು ಸುಮಾರು ಎರಡು ವಾರದ ವರೆಗೆ ರೇಶ್ಮೆಜ್ವರದಿಂದ ಪೀಡಿತರಾಗಿದ್ದರು ಇವರ ತಂದೆಯವರು ಸಹಾ ಇದೇ ರೋಗದಿಂದ ಪೀಡಿತರಾಗಿದ್ದು ಸುಮಾರು ೭ ತಿಂಗಳ ಹಿಂದೆ ಮರಣವನ್ನು ಹೊಂದಿದ್ದರು ಪ್ರತಿ ವರುಷವಲ್ಲೂ ರಮ್ಜಾನಿನ ಮಹಮ್ಮದಿ ತಿಂಗಳಲ್ಲಿ ಎರಡು ಸಾವಿರ ರೂಪಾಯಿಗಳ ಅನ್ನ ವಸ್ತ್ರ ಸಹಿತ ದಾನಗಳನ್ನು ಮಾಡುವ ಪದ್ಧತಿ ಇವರ ಕುಟುಂಬದಲ್ಲಿ ಇತ್ತು ರಾ ಡಿ ಯ ನ ಹಮ್ಮದ ಗೌಸ ಸಾಹೇಬರು ದೊಡ್ಡವರೆಂಬ ವಿಶೇಷ ಕೀರ್ತಿಯುಳ್ಳವರಾಗಿ ಹಿಂದೂ ಮುಸಲ್ಮಾನರೆಂಬ ಭೇದವಿಲ್ಲದೆ ಪರೋಪಕಾರ ಮಾಡುತ್ತಿದ್ದು ಸರ್ಕಾರ ಪ್ರೀತಿಗೆ ಪಾತ್ರರಾಗಿದ್ದರು ... ರು ... ಪರೋಪಕಾರ ಸಂಘದ ವೈಸ ಪ್ರೆಸಿಡೆಂಟರಾಗಿಯೂ ರಾ ಡಿ ಯಂ ಮಹಮ್ಮದ ಗೌಸ ಸಾಹೇಬ ಪಿ ಯನ್ ಹನುಮಂತಪ್ಪ ... ಕೊ ... ಕಂಪೆನಿಯ ... ರಾಗಿಯೂ ಇದ್ದು ವ್ಯಾಪಾರದಲ್ಲಿ ಬಹಳ ಸಮರ್ಥರಾಗಿದ್ದರು ಇವರಿಗೆ ಸಾಯುವಾಗ ಸುಮಾರು ೭೭ ವರುಷ ಪ್ರಾಯವಾಗಿತ್ತು ಇವರಿಗೆ ಸುಮಾರು ೬ ವರುಷದ ... ಒಂದು ಮಗನು ಇರುತ್ತಾನೆ ಮೃತಪಟ್ಟ ರಾ| ಡಿ ಯಂ ಮಹಮ್ಮದ ಗೌಸ ಸಾಹೇಬರು ಇಷ್ಟು ಸಣ್ಣ ವಯಸ್ಸಿನಲ್ಲಿಯಾದರೂ ತಮ್ಮ ಮೃತಪಟ್ಟ ತಂದೆಯ ಹೆಸರಿನಲ್ಲಿ ಸುಮಾರು ೧೦ ಸಾವಿರ ರೂಪಾಯಿ ವರೆಗೆ ಖರ್ಚುಮಾಡಿ ಈ ಊರ ದೊಡ್ಡ ಮಸ್ಜಿದಿನಲ್ಲಿ ಒಂದು ಚಿತ್ರ ಕಟ್ಟಿಸಬೇಕೆಂದು ಆಲೋಚನೆ ಮಾಡಿದ್ದರಾಗಿ ತಿಳಿದುಬರುತ್ತದೆ ಇವರ ಮರಣದ ದೆಸೆಯಿಂದ ಇವರ ಹೆಂಡತಿ ಮಕ್ಕಳಿಗೂ, ಇತರ ಬಂಧುಗಳಿಗೂ, ಇವರ ಅತ್ಯಂತ ಸ್ನೇಹಿತರಾಗಿಯೂ ವ್ಯಾಪಾರದಲ್ಲಿ ಪಾಲುದಾರರಾಗಿಯೂ ಆಗಿದ್ದ ರಾ| ಬಿ ಯನ್ ಹನುಮಂತಪ್ಪನವರಿಗೂ ವ ಈ ಊರಿನ ಬೇರೆ ಜನರಿಗೂ ಬಹಳ ದುಃಖಕ್ಕೆ ಕಾರಣವಾಗಿದೆ ಇವರ ಸ್ನೇಹಿತರೆಲ್ಲರೂ ಕೂಡಿ ಇವರ ಸನ್ಮಾನಾರ್ಥವಾಗಿ ಏನಾದರೊಂದು ಸ್ಮಾರಕವನ್ನು ಏರ್ಪಡಿಸಬೇಕೆಂದಿರುತ್ತಾರೆ

ಇಲ್ಲಿ ಪ್ಲೇಗು ದಿನೇ ದಿನೇ ವೃದ್ಧಿಯಾಗುವದರಿಂದಲೂ, ಜನರು ಅಲ್ಲಲ್ಲಿ ಸಾಯುವದರಿಂದಲೂ, ಜನರು ಹೆಚ್ಚಾಗಿ ಊರ ಹೊರಗೆ ಷಡ್ಡುಗಳಿಗೂ, ಪರದೇಶದವರು ತಂತಮ್ಮ ಸ್ವದೇಶಕ್ಕೆ ತರಾತುರಿಯಾಗಿ ಹೊರಟುಹೋಗುತ್ತಾ ಇರುತ್ತಾರೆ.

ಈಗ ಇಲ್ಲಿ ರಾ| ... ಕಾಲವಾದ್ದರಿಂದ ... ಒಂದು ... ಕೊಡುವ ಕಾರ್ಯವಾಗಿದೆ ...

... ಎರಡು ವಾರದಿಂದ ... ತಿಮ್ಮಯ್ಯನಾಗಿದೆ.

ಈ ಊರಿನ ಸಬ್ ರಿಜಿಸ್ತ್ರಾರರಾಗಿದ್ದ ರಾ| ರಾಮದಾಸಪ್ಪರೆಂಬವರಿಗೆ ಬೇರೆ ಊರಿಗೆ ವರ್ಗವಾದ್ದರಿಂದ ಇವರ ಸನ್ಮಾನಾರ್ಥವಾಗಿ ತಾಲೂಕು ಕಚೇರಿ ನೌಕರರೂ ವ ಇತರ ಸ್ನೇಹಿತರೂ ಸೇರಿ ಉತ್ರಿ ಮರದ ಹತ್ತರ ಡೇರೆ ವಗೈರೆ ಹೊಡಿಸಿ, ಒಂದು ಟೀ ಪಾರ್ಟಿಯನ್ನು ಕೊಟ್ಟರು. ಆ ಕಾಲಕ್ಕೆ ರಾ| ಕೋಟಿ ಮುತ್ಸದ್ದಿ ರಂಗರಾಯರು ಗ್ರಾಮೊಫೋನ ಮೂಲಕ ಸಭಿಕರೆಲ್ಲರ ಮನಸ್ಸನ್ನು ಆಲ್ಹಾದ ಪಡಿಸಿದರು

ಉಡುಪಿ ಉತ್ತರಾ ಮಳೆಯೂ ಸುರಿಯುತ್ತಿರುವದರಿಂದ ಗದ್ದೆಯಲ್ಲಿದ್ದ ಪೈರು ಅಂಗಳಕ್ಕೆ ಹ್ಯಾಗೆ ಬಂದು ಬೀಳುವದೋ! ಅಂಗಳದಲ್ಲಿದ್ದದ್ದು ಮನೆಯೊಳಗೆ ಹ್ಯಾಗೆ ಹೋಗುವದೋ ಎಂಬದಾಗಿ ಜನರಿಗೆ ವಿಚಾರ ಹುಟ್ಟಿಯದೆ

ಪಡುಬಿದ್ರೆ ಬೀಮಾಚಾರ್ಯರ ದೇವತಾರ್ಚನೆಯ ಸಾಮಗ್ರಿಯನ್ನು ಕದ್ದ ಕೃಷ್ಣ ಉಪಾಧ್ಯಾಯನಿಗೆ ಎರಡು ತಿಂಗಳ ಸಜಾ ವಿಧಿಸಲ್ಪಟ್ಟಿತು

ಶ್ರೀಕೃಷ್ಣದೇವರ ಮಠದಲ್ಲಿ ಈ ವರುಷ ವಿನಾಯಕ ಚೌತಿಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಿದರು ಪರ್ಯಾಯ ಮಠದ ಕೆಲಸಕ್ಕೆ ಸಮ್ಮಂದಪಟ್ಟ ಬೇರೆಬೇರೆ ಕಿಂಡಿಯವರು ಬಹು ಸೊಗಸಾಗಿ ಪ್ರತ್ಯಪ್ರತ್ಯೇಕ ಇಪ್ಪತ್ತೊಂದು ಮಂಟಪಗಳನ್ನು ಕಟ್ಟಿಸಿ ಅವುಗಳಲ್ಲಿ ಇಪ್ಪತ್ತೊಂದು ಗಣಪತಿ ವಿಗ್ರಹಗಳನ್ನಿಟ್ಟು ವಿಧಿಪ್ರಕಾರ ಪೂಜಾದಿಗಳನ್ನು ನಡಿಸಿದರು ಈ ಸಮಯದಲ್ಲಿ ಶ್ರೀಕೃಷ್ಣಮಠದ ವರಾರಗಳಿಗೆ ಹೋಗುವವನಿಗೆ ಎಲ್ಲೆಲ್ಲಿಯೂ ಶೋಭಿಸುವ ಧ್ವಜಪತಾಕೆಗಳನ್ನೂ ತಳಿರ್ತೋರಣಗಳನ್ನೂ ವಾದ್ಯ ಘೋಷಗಳನ್ನೂ ಚಿನ್ನ ಬೆಳ್ಳಿ ಮೊದಲಾದ ಮಂಟಪಗಳನ್ನೂ ವಿಗ್ರಹಗಳನ್ನೂ ಕಂಡು ಎಂಥಾ ಮೂಢನಿಗಾದರೂ ಒಂದು ವಿಶೇಷತರದ ಶ್ರದ್ಧಾಭಕ್ತಿಯು ಹುಟದೆ ಇರಲಾರದು

ಕಾಸರಗೋಡು ವ್ಯವಸಾಯ ಇಲಾಖೆಯ ಮೇಲುದ್ಯೋಗಸ್ಥರಾದ ಮೆ. ಕೌಚ್ಮನ್ ಧೊರೆಗಳವರು ಈ ಊರಲ್ಲಿ ನೆಲ್ಲಿ ಮುಂತಾದ ಕೃಷಿ ಸ್ಥಳವನ್ನು ಸಂದರ್ಶಿಸಿಹೋಗುವರೆ ಬಂದಿರುತ್ತಾರೆ

ನಮ್ಮ ತಾಲೂಕು ಖಜಾನೆಯ ಲೆಖ್ಖ ಪರಿಶೋಧಿಸುವ ಬಗ್ಯೆ ಖಜಾನಾ ಡಿ| ಕಲೆಕ್ಟರವರ ಸವಾರಿಯು ಮಂಗಳೂರಿಂದ ಮೊನ್ನೆ ಸೋಮವಾರ ಇಲ್ಲಿಗೆ ಬಂದಿರುತ್ತದೆ

ನಮ್ಮ ಪಟ್ಟಣದಲ್ಲಿರುವ ಸೆಕೆಂಡ್ರಿ ಶಾಲೆಯನ್ನು ಎಲಿಮೆಂಟರಿಯನ್ನಾಗಿ ಮಾಡಿದರೂ, ಸದರಿ ಶಾಲಾಸಂಬಂಧ ಕೆಣೆ ಬಗ್ಯೆ ಇನ್ಸ್‌ಪೆಕ್ಟರ್ ಧೊರೆಗಳವರ ಸವಾರಿಯು ಮುಂಚಿನಂತೆ ಶಾಲ ಸಂದರ್ಶಿಸುವರೆ ಇಲ್ಲಿಗೆ ನಾಳೆ ಬರುತ್ತಾರಾಗಿ ಕೇಳಿ ತುಂಬಾ ಸಂತೋಷ ಪಡುತ್ತೇವೆ.

ಕಳೆದ ಸಂಚಿಕೆಯಲ್ಲಿ ನಾಲ್ವರು ಹುಡುಗರು ಮಾಡಿದ ಕಿಶೆಕಳವಿನ ಮೊಕದಮೆಯಲ್ಲಿ ಹಳೆ ಅಪರಾಧಿಯಾದ್ದ ಹಿರಿಮಣಿ ಹುಡುಗನು ಕಳವಿನಲ್ಲಿ ಸೇರಲಿಲ್ಲವಾಗಿ ತನ್ನಿಯಲ್ಲಿ ರುಜುವಾದ ಕಾರಣ ಆತನನ್ನು ಮೆಜಿಸ್ಟ್ರೇಟರವರು ಬಿಟ್ಟಿರುತ್ತಾರೆ

ಈ ವರುಷದ ಪ್ರಥಮ ಭಾಗದ ೩ ತಿಂಗಳವರೆಗೆ ಈ ಪೇಟೆಯಲ್ಲಿ ಆದ ನಾಟಕಗಳ ಮನೋಲ್ಲಾಸವನ್ನು ಜನರು ಮರೆತು ಹೋಗುವಷ್ಟರಲ್ಲಿಯೇ, ಪುನಹ ಭಟ್ಕಳದಿಂದ ಒಂದು ನಾಟಕಮಂಡಲಿಯು ಬರುವ ತಿಂಗಳಲ್ಲಿ ಇಲ್ಲಿಗೆ ಬರುವದಾಗಿ, ಆ ಮಂಡಲಿಯವರ ಪತ್ರ ತಲುಪಿರುವದರಿಂದ ... ಇಲ್ಲಿ ... ದಾರೆ. ... ಮುಂತಾದ ...

ವಿವಿಧ ವಿಷಯಗಳು.

ಮಿಸಿಸ್ ದಾನಾಬಾಯಿ ಮಲಬಾರಿ ಎಂಬವರು ತನ್ನ ಗಂಡನ ತ್ರಿಂಸಾವಿರ ರೂಪಾಯಿಗಳ ಜೀವ ವಿಮೆ ಹಣವನ್ನು ಅದರ ಮುನಾಫೆಯೊಂದಿಗೆ 'ಸೇವಾಸದನ್ ಸಂಘದವರಿಗೆ- ಉಚಿತಾರ್ಥವಾಗಿ ಬಿಟ್ಟಿರುವರು ಇದರಲ್ಲಿ ಅರ್ಧಾಂಶವನ್ನು ಮನೆಮಾರು ಇಲ್ಲದಂಥವರಿಗೆ ಒಂದು ಅನಾಥಾಶ್ರಮವನ್ನೂ, ಮಿಕ್ಕುಳಿದ ಐವಣನ್ನು ಸಿಮ್ಲದ ಹತ್ತರ ಧರಮ್‌ಪುರ ಎಂಬಲ್ಲಿ ಕ್ಷಯರೋಗದವರಿಗೆ ಒಂದು ಚಿಕಿತ್ಸಾಲಯವನ್ನೂ ಏರ್ಪಡಿಸುವ ಬಗ್ಗೆ ವಿನಿಯೋಗಿಸಬೇಕಾಗಿ ಅಪೇಕ್ಷಿಸಿರುವರು

~~~~~~

ಜಬಲಪುರದ ಖಿಂಗಿಟಜೀ ಸೂರಾಪ್ಜಿ [illegible] ಎಂಬವರು ಹಿಂದೂಸ್ಥಾನದಲ್ಲಿ [illegible] ಮಾಂಸದ ಬಗ್ಗೆ ವಧಿಸಲ್ಪಡುವ ಜಾನುವಾರು [illegible] ಸರಾಯು ಪ್ರಭುಗಳಿಗೆ ಒಂದು [illegible] ರುವರು. ಯುರೋಪಿಯ [illegible] ಪ್ರತಿ ವರುಷವೂ ೧೪೬,೦೦೦ ಜಾನುವಾರುಗಳು [illegible] ವವು. ಇವುಗಳಲ್ಲಿ [illegible] ದಲಾದ ಹೆಣ್ಣುಜಾತಿಯವುಗಳು [illegible] ವೃತ್ತಿಯೇ ಮುಖ್ಯ [illegible] ಈ ದೇಶದಲ್ಲಿ [illegible] ವಸಾಯವನ್ನು ನಡಿಸುವುದು. [illegible] ಗೆ ಅಸಾಧ್ಯವಾಗಿರುವುದಲ್ಲದೆ [illegible] ಭಿವೃದ್ಧಿಯ ಮೇಲೆ ವ್ಯವಸಾಯ [illegible] ರುವುದು ಮಾಂಸಕ್ಕೆ ಈ [illegible] ಅವರಲ್ಲಿಯೂ ಜಾನುವಾರು [illegible] ಸಲ್ಪಟ್ಟಲ್ಲಿ [illegible] ಈ ಕಾರಣಗಳಿಂದ ಯುರೋಪಿಯ [illegible] ದನವನ್ನಾಗಲಿ ಎಮ್ಮೆಯನ್ನಾಗಲಿ ಹಿಂದೂಸ್ಥಾನದ ಯಾವ ಕಡೆಯಲ್ಲಾದರೂ ಕೊಲ್ಲಕೂಡದೆಂದು [illegible] ನರಿಗೆ ಬಹಳ ಉಪಕಾರವಾಗುವುದು [illegible] ಸೊಲ್ಜರುಗಳಿಗೆ ಅನಾನುಕೂಲತೆಯು [illegible] ಲ್ಯದಿಂದ ಜಾನುವಾರುಗಳ ಮಾಂಸವನ್ನು [illegible] ಒಹುದು ಔಸ್ಟ್ರೇಲ್ಯದ ಮಾಂಸವು [illegible] ಉತ್ಕೃಷ್ಟವಾಗಿರುವುದು ಈ [illegible] ಸೂರಾಪ್ಜಿಯವರು ನ್ಯಾಯಪ್ರಭುಗಳಿಗೆ [illegible] ರಕೊಂಡಿರುವರು

~~~~~~

ಕಲ್ಕತ್ತೆಯಲ್ಲಿರುವ [illegible] ಹಿಂದೂಸ್ಥಾನದಲ್ಲಿ ದೊರಕುವ ನವರತ್ನಗಳ ವಿಷಯ ಈ ರೀತಿ ಬರೆದಿರುವರು —ವಜ್ರ ಕೆಂಪು ನೀಲ [illegible] ಎಂಬ ಒಂದು ತರದ ರತ್ನ, ಹರಳು ಕೆಂಪು, ಮೊದಲಾದ ರತ್ನಗಳು ಹಿಂದೂಸ್ಥಾನದಲ್ಲಿ ಸಿಕ್ಕುವವು ಇವುಗಳಲ್ಲಿ ಕೆಂಪು ಯಥೇಷ್ಟವಾಗಿ ಹಿಂದೂಸ್ಥಾನದಲ್ಲಿ ದೊರಕುವುದು. ಆದರೂ ಹಿಂದೂದೇಶಕ್ಕೆ ಇತರ ಅನ್ಯದೇಶಗಳಿಂದ ವರುಷ ಒಂದಕ್ಕೆ ೧,೦೦೦,೦೦೦ ಪವನುಗಳು ಮೌಲ್ಯದ ನವರತ್ನಗಳು ರಫ್ತಾಗುತ್ತಿರುವವು ವಜ್ರದ ಕೈಗಾರಿಕೆಯು ಹಿಂದೂಸ್ಥಾನದಲ್ಲಿ ಮುಖ್ಯವಾಗಿ, ದಕ್ಷಿಣ ಪಾರ್ಶ್ವದಲ್ಲಿಯೂ, ಮಧ್ಯ ಹಿಂದೂಸ್ಥಾನದಲ್ಲಿಯೂ ನಡಿಯುತ್ತಿರುವುದು. ಕೆಂಪಿನ ಕೈಗಾರಿಕೆಯು ಬರ್ಮಾ ದೇಶದಲ್ಲಿ ಬಹಳ ವಿಶೇಷವಾಗಿವೆ ಪ್ರತಿ ವರುಷವೂ ಬರ್ಮಾದೇಶದ ಕೆಂಪು, ಗನಿಗಳಿಂದ ೧,೦೦೦೦೦ ಪವನುಗಳ ಕೆಂಪುಗಳನ್ನು ತಯ್ಯಾರಿಸುತ್ತಿರುವರು. ಕೆಲವು ವರುಷಗಳ ಹಿಂದೆ ಈ ಬರ್ಮಾದೇಶದ ಗನಿಗಳಲ್ಲಿಯೇ ೭೭ 'ಕೆರೆಟ್' ತೂಕದ [illegible]೦೦೦ ಪವನು ಮೌಲ್ಯದ ಒಂದು ಕೆಂಪು ದೊರಕಿರುವುದು. ನೀಲ ರತ್ನವು ಮೊದಲು ಕಾಶ್ಮೀರ ಪ್ರಾಂತ್ಯಗಳಲ್ಲಿ ದೊರಕುತ್ತಲಿತ್ತು. ವೆಲ್ಲಂ ವಜ್ರ [illegible]

ಗೊಂಡ ವಜ್ರದಂತಿರುವ ಕಲ್ಲು, ತಂಜಾವೂರಿನಲ್ಲಿ ದೊರಕುವುದು.

—o—

ಹಿಂದೂಸ್ಥಾನದಲ್ಲಿ ಚಿನ್ನ ಬೆಳ್ಳಿಗಳ ಆಭರಣಗಳ ವ್ಯಾಪಾರದಲ್ಲಿ ಜನರನ್ನು ವಿಶೇಷವಾಗಿ ಮೋಸಗೊಳಿಸುತ್ತಿರುವ ವಿಷಯಕ್ಕೆ ಅಪ್ಪರ್ ಇಂಡಿಯಾ ಚೇಂಬರ ಒಫ್ ಕೊಮರ್ಸ ಎಂಬ ವ್ಯಾಪಾರ ಸಂಘದವರು ವಿಶೇಷವಾಗಿ ಗಮನಕೊಡುತ್ತಿರುವರು ತೂಕ ಪಡಿಗಳಲ್ಲಿಯೂ ಚಿನ್ನ, ಬೆಳ್ಳಿಯ ವರ್ಣಭೇದದಲ್ಲಿಯೂ ಹೀಗೆ ಮೋಸ ಕೊಡುವರೆ ಅವಕಾಶವಿರುವುದು ಚಿನ್ನ ಬೆಳ್ಳಿ ಆಭರಣ ಮುಂತಾದವುಗಳನ್ನು ತಯ್ಯಾರಿಸುವವರೂ, ಇವುಗಳಲ್ಲಿ ವ್ಯಾಪಾರ ನಡಿಸುವವರೂ ತಮ್ಮ ತೂಕಪಡಿಗಳಲ್ಲಿ [illegible] ಕಾರು ಮೊಹರು ಹಾಕಸಬೇಕೆಂದಾಗಿಯೂ ತಮ್ಮ ಈ ವ್ಯಾಪಾರ ಮುಂತಾದವುಗಳ [illegible] [illegible] ಪ್ರಕೃತ ಈ ವ್ಯಾಪಾರ [illegible] ಹಿಂದೂಸ್ಥಾನದಲ್ಲಿ [illegible] ಈ ಪರೀಕ್ಷೆಯ [illegible] ವ್ಯಾಪಾರ ಸಂಘದವರು [illegible] ತೂಕದ ಪಡಿಗ [illegible] ರವಾಗಿ [illegible] ವರು

~~~~~~

[illegible] ಕೆಲವು [illegible] ಗಿರವುಗಿರುವುದು. [illegible] ಕಡಿಮೆ [illegible] ಪ್ರತಿ [illegible] ಹಿಂದು [illegible] ಕಡಿಮೆ [illegible] ಬಳ್ಳಿಗೆ ಇಲ್ಲಿಂದ [illegible] ಕೈಗಾರಿಕೆಗಳ [illegible] ವ್ಯಾಪಾರಸ್ಥಿತಿ [illegible] ನಾಗ್ಯ [illegible] ಕೊಡುತ್ತಿರುವರು

~~~~~~

ಆಲುಗಡ್ಡೆ (Potato) ಜರ್ಮನಿ ದೇಶದಲ್ಲಿ ಆಲುಗಡ್ಡೆಯನ್ನು ಕೊಬ್ಬರಿ ತುರಿಯಂತೆ ತುರಿದು ಅಥವಾ ಹಿಟ್ಟು ಮಾಡಿ ಹಸುಗಳಿಗೆ ಮೇವಾಗಿ ಕೊಡುತ್ತಾರೆ ಆಲುಗಡ್ಡೆಯನ್ನು ಮೆಲಕು ಹಾಕುವ ಪಶುಗಳೆಲ್ಲ ತಿಂದು ಸುಲಭವಾಗಿ ಜೀರ್ಣಿಸಿಕೊಳ್ಳುತ್ತವೆಯಂತೆ ೨ ಪೌಂಡು ಆಲುಗಡ್ಡೆಯ ತುರಿಯನ್ನು ಸುಮಾರು ೧ಶೇರು ಹಾಲು ಮತು ಒಂದು ಪೌಂಡು ಅಗಸೆ ಹಿಂಡಿಯೊಂದಿಗೆ ಬೆರಿಸಿ ಕರುಗಳಿಗೆ ಕೊಟ್ಟರೆ ಸರ್ವೋತ್ಕೃಷ್ಟವಾದ ಆಹಾರವಾಗುತ್ತದೆ. ಹುಲ್ಲಿನೊಂದಿಗೆ ೫ ಪೌಂಡು ಆಲುಗಡ್ಡೆ ತುರಿ ಮತ್ತು ೪ ಪೌಂಡು ಓಟ್ ಧಾನ್ಯ ಕುದುರೆಗಳಿಗೂ, [illegible] ಹಸುಗಳಿಗೆ ಇತರ ಮೇವಿನೊಂದಿಗೆ [illegible] ಕಡಲೆ ಬೆರಸಿ [illegible]

ರಿಗೆ ಒಳ್ಳೆ ಆಹಾರ: ವಿಶೇಷವಾಗಿ [illegible] ಮತ್ತು ಅಗ್ಗವಾಗಿರುವ ಪ್ರದೇಶಗಳಲ್ಲಿ ಇದನ್ನು ಹಸುಗಳಿಗೆ ತಿನ್ನಲಿಕ್ಕೆ ಹಾಕಬಹುದು ಗಡ್ಡೆಯನ್ನು ಬಹಳ ದಿನಗಳು ಕೆಡದಂತೆ ಇಡಬೇಕಾದರೆ ಅದನ್ನು ತೊಳೆದು ಒಣಗಿಸಿ, ನಂತರ ತೆಳುವಾದ ಚೂರಿಯಾಗಿ ಕತ್ತರಿಸಿ, ಮುಟ್ಟಿದರೆ ಪುಡಿಪುಡಿಯಾಗುವ ಹಾಗೆ ಕೆಲವು ದಿನಗಳು ಚೆನ್ನಾಗಿ ಬಿಸಲಿನಲ್ಲಿ ಒಣಗಿಸಬೇಕು. ಒಣಗಲಿಕ್ಕಿಡುವಾಗ ಧೂಳು ಕೂಡದಂತೆಯೂ ತುಂಬಿಡುವಾಗ ತ್ಯಾವ ಸೇರದಂತೆಯೂ, ಜಾಗ್ರತೆಯಾಗಿರಬೇಕು ಹೀಗೆ ಒಣಗಿದ್ದ ಆಲುಗಡ್ಡೆಯ ಚೂರುಗಳನ್ನು ಗಡ್ಡೆಧಾರಣೆ ತಗ್ಗಾಗಿರುವಾಗಲೂ ಅದು ಸಿಕ್ಕದಿರುವಾಗಲೂ, ಮನುಷ್ಯರು ಸಹ ಆಹಾರವಾಗಿ ಉಪಯೋಗಿಸಬಹುದು

~~~~~~

ಗೌಡಸಾರಸ್ವತ ಬ್ರಾಹ್ಮಣರ ಸುಬ್ಬರಾವ್ ಮೆಮೊರಿಯಲ್ ಫಂಡ್.

ಕ [illegible] ಸಂಚಿಕೆಯಲ್ಲಿ ಪ್ರಕಟಿಸಿದ ಪ್ರಕಾರ ಫಂಡಿಗೆ ಕೊಡುವರೆ ವಾಗ್ದತ್ತ ಮಾಡಿದ ಚಂದಾ [illegible] ಮೊಬಲಗು	ರು ೭೮೯ ೪ ೦
ನಂತರ ಫಂಡಿಗೆ ಕೊಡುವರೆ ವಾಗ್ದತ್ತ ಮಾಡಿದವರ ಹೆಸರು ವ ಮೊಬಲಗು [illegible] ಮಂಜೇಶ್ವರ ಸಾವ್ಕಾರ ವೈಕುಂಠ ಬಿಕ್ತರವರು	ರು ೧೦೦೦-೦ ೦
	ರು ೮೮೯ ೪-೦-

ಜೀವಸುಗಳ ಧಾರಣೆ, ಮಂಗಳೂರು.

[illegible] ಮುಸ್ಕತಿ [illegible]	5—9—0
[illegible] ಮುಸ್ಕತಿ	5—0—0
ಬೈಲು ಸುಗ್ಗಿ	5—0—0
ಮುಮಂ ಗುಡ್ಡು ರಾಶಿ	4—11—0
ಮುಸ್ಕತಿ ಬೆಳ್ತಿಗೆ	5—3—0
ರಂಗೂನ್ ಬೆಳ್ತಿಗೆ ಗೋಣಿ	7—12—0
ಸುರುಳಿ ಗೋಣಿ ೧ ಮುಡಿ ೨೮	8—0—0
ಉಪ್ಪು ಗೋಣಿ ೧ರ	3—8—0
ಕೊಪ್ರಿ ಎಣ್ಣೆ ಮಣ	5—8—0
ಕಾಪಿ ಖಂಡಿ ೧ರ	205—0—0
ಕಾಳು ಮೆಣಸು ಖಂಡಿ	105—0—0
ಪಿಳಿ ಗೋಟು ಅಡಿಕೆ	70—0—0
ಊರ ಬೆಲ್ಲ ಮಣ	2—10—0

ಯುವತೀರೋಗಿಯರಗೋಸ್ಕರ ತಯಾರಿಸಿದ ಸೂಲಗಿತ್ತಿಯರಾದ ಕಮಲಾಬಾಯಿಯವರ

ಅಬಲಾ ಸಂಜೀವಿನೀ ಗುಳಿಗೆಗಳು.

ಇವು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷದವಾಗಿ ಕಂಡುಬಂದಿದೆ ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ ದೇಹದಲ್ಲಿ ಯಾವದೊಂದು ಅಕ್ರಮದ ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ ವಿಶೇಷ ಮಾಹಿತಿಯ ಕಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ [illegible]

ಅಂಚೆ ಹಾಸಲು ೪ ಆಣೆ.

ಸೂಲಗಿತ್ತಿಯರಾದ ಕಮಲಾಬಾಯಿ [illegible]
~~~~~~

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ, ಇದೆ ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು

ಬಾಟ್ಲು ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲು ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ದೆಬೀಳುವದು

ಬಾಟ್ಲು ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳಿಗೆ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ

ಬಾಟ್ಲು ಒಂದರ 6 ಆಣೆ

ರೋಯೆಲ್ ಟ್ರೇಡಿಂಗ್ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಜಖಮು, ಗಾಯ್ತ, ಉರಿ, ಶೀತ, ಶ್ಲೇಷ್ಮ, ಎದೆಶೀತ, ಸೊಂಟದ ನೋವು ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲಿ ಒಂದಕ್ಕೆ 8 ಆಣೆ ೬ ಬಾಟ್ಲಿಗಳಿಗೆ 2 ರೂ 10 ಆಣೆ ೧೨ ಬಾಟ್ಲಿಗಳಿಗೆ 5 ರೂ ಬಹಳ ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ. ರಾ. ಪಾಠಕ್ ಮತ್ತು ಕಂಪೆನಿ,
ಠಾಕುರ್‌ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೊಒಪರೇಟಿವ್ ಇನ್ಸ್ಯುರೆನ್ಸ್ ಸೊಸೈಟಿ ಲಿಮಿಟೆಡ್,
ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು —41 ಹೇರ್ ಸ್ಟ್ರೀಟ್ ಕಲ್ಕತ್ತಾ
ಬ್ರೆಂಚ್ ಆಫೀಸು —42 ಎಲ್ಫಿನ್ಸ್ಟನ್ ಸರ್ಕಲ್ ಮುಂಬಯಿ

1906ರಲ್ಲಿ ಸ್ಥಾಪಿಸಲ್ಪಟ್ಟಿತು

ಸಂಘದ ನಿಯಮಿತ ಬಂಡವಾಳ ಒಂದು ಕೋಟಿ ರೂಪಾಯಿ

ಕಂತ್ತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು

1908 ದಶಂಬರ ತಿಂಗಳ ವರೆಗೆ ರೂ 13,00 000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸ್ಸಂಗತಿಗಳು ಕಂಪೆನಿಯ ಪಾಲುಮ್ಹಾಲಿಕರಿಗೆ ಸೇಕಡಾ 7ರಂತೆ ಮುನಾಫೆಯು ಪ್ರಥಮ ವರುಷದಲ್ಲಿ ಕೊಟ್ಟಿರುವುದು ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಿಳಿಸಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಾಯಿಸಬಹುದು ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಭಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಬಿ. ಬಾಬುರಾವ್ ಎಂಡ್ ಸನ್,
ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಪತ್ರ ಬಾಟ್ಲಯೊಂದಿಗಿರುವುದು. **ಸಿದ್ಧಲಕ್ಷ್ಮೀ ವಿಲಾಸ:** ಕ್ರಯ ಬಾಟ್ಲಿ ೧ಕ್ಕೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಅಸನದಲ್ಲಿ) ಗುದದ್ವಾರದ ಹತ್ತರ ಬೀಳು ... ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಣಾದಿ ... ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ... ಔಷಧವಾಗಿರುವದು.

... ಮಂಗಳೂರು. ...

ಮನೋಹರಾ ಅತ್ತರ್

ಇದು ಅಮೂಲ್ಯವಾದ ಪುಷ್ಪಗಳಿಂದ ... ದ್ದಾಗಿರುವುದು ಹೆಂಗಸರಿಗೂ ಗಂಡಸರಿಗೂ ... ಗಿರುವ 'ಮನೋಹರಾ ಅತ್ತರ್', ಈ ವಿಷಯ ... ವುದೇ ಅಗತ್ಯವಿಲ್ಲ. ಒಂದು ಸಾರಿ ... ಬರುವುದು. ಬಾಟ್ಲಿ ಒಂದರ ಕ್ರಯ ...

ಸ್ವದೇಶಾಭಿಮಾನಿ ...

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ,

೨. ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ

೩. ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೩ ರೂ

೫ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೬ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಬಟ್ಟು ೩ ರೂ. ೮ ಆಣೆ

೭ ಜಗನ್ಮೋಹನ ದಂತಮಂಜನ ದಂತ ಸಂಬಂದವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ

೮ ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ

೯ ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲಗೆ ೨ ರೂ

೧೦ ವಾಸಾವ ಲೇಹ ಕೆಮ್ಮು, ಗುರ್ಬುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥ ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ ಕಾಂತಿ, ಬುದ್ಧಿ ಬಲಗಳನ್ನು ಕೊಡುವದು ರಾತಲಿಗೆ ೩ ರೂ.

೧೨ ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧಗಳನ್ನೂ ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ ಕರಡಿಗೆಗ ೪ ಆಣೆ ೩ ಕರಡಿಗೆಗೆ ೧೧ ಆಣೆ

೧೪ ಸಪ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗ ಪಟುತ್ವವನ್ನುಂಟುಮಾಡುವದು ತೊಲಗ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿಸುವದು ವಿದ್ಯಾರ್ಥಿಗಳಿಗ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಔಷಧಗಳ ಕ್ರಯವು ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲಗ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ — **ಬಿ. ಎಸ್ ನಾಥು ಮತ್ತು ಕಂಪೆನಿ,**

ಬಾಂದ್ರಾ (ಮುಂಬಯಿ ಹತ್ತಿರ)

Bandra (near Bombay)

ROYAL TRADING Co. GIRGAUM BOMBAY.

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು, ಗಂಟ್ಲು ನೋವು

ಎದೆಶೀತ, ಉಳುಕು ಆನೆಗಾಲು, ಘಾಯ, ಚೇಳುಕಡಿತ, ಉರಿ, ಈ ಎಲ್ಲಾ ತರದ ನೋವುಗಳ ಮೇಲೆ ಇದು ಅತೀ ಉತ್ತಮವಾದದ್ದು, ಇದು ಹಾನಿಕಾರಿಯಲ್ಲ

ಇದರಿಂದ ಗುಣ ಕಂಡುಬರದಿದ್ದಲ್ಲಿ ಹಣ ಪರತು
ಕ್ರಯ ಕಮ್ಮಿ, ಗುಣ ಹೆಚ್ಚು ಒಂದುಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು

ಬಾಟ್ಲಿ ಒಂದರ ಕಿಮ್ಮತು ೬ ಆಣೆ.

ಇನಾಮುಗಳು — ಒಂದೇ ಸಾರಿ ೬ ಬಾಟ್ಲಿಗಳನ್ನು ತರಿಸಿಕೊಂಡರೆ ಒಂದು ಎಲ್ಯುಮಿನಿಯಮ್ ಗ್ಲಾಸು ೧೨ ಬಾಟ್ಲಿಗಳನ್ನು ತರಿಸಿಕೊಂಡರೆ ರೇಶ್ಮೆಯಲವಸ್ತ್ರ ಸಾವಿರಾರು ಜನರಿಗೆ ಗುಣಕೊಟ್ಟಿರುವ ಈ ನಮ್ಮ ರೊಯಲ್ ಇಂಡಿಯನ್ ಬಾಂಮನ್ನು ಪ್ರತಿ ಒಬ್ಬರೂ ತರಿಸಿ ಉಪಯೋಗಿಸುವಿರಾಗಿ ನಂಬುತ್ತೇವೆ ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು

ನಮ್ಮಲ್ಲಿಯ ಈ ಔಷಧಿಯು ಅನೇಕ ಕಡೆಗಳಲ್ಲಿ ಪ್ರಸಿದ್ಧಿಯಾಗಿದ್ದು ತಮ್ಮಿತ್ತ ಕಡೆಯಲ್ಲಿಯು ಸಹ ಪ್ರಸಿದ್ಧಿಯಾಗುವದೆಂಬದಾಗಿ ದೃಢಚಿತ್ತದಿಂದ ನಂಬುತ್ತೇವೆ

ವಿಳಾಸ — **ರೊಯಲ್ ಟ್ರೇಡಿಂಗ್ ಕಂಪನಿ,**

ಗಿರಗಾಂವ್ ಮುಂಬಯಿ.

Sole Agent in Mangalore Town:—

Mangalore Trading Association,

Mangalore.



ಸುರಂಗಿ ಅತ್ತರು.



ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು ಇದರ ಪರಿಮಳವು ಹೆಚ್ಚು ದಿನಗಳ ವರೆಗೆ ಹೋಗುವದಿಲ್ಲ ಬಾಟ್ಲಿ ಒಂದರ ಕ್ರಯ No I ೧—೪—೦ No. 2 ೧—೦—೦ ಪಿಲ್‌ಯುಪ್ ೧—೦—೦ ದವಣಾ ೦—೧೪—೦ ಜುಯಿ ೦—೧೪—೦ ಚಂಬೋಲಿ ೦—೧೪—೦

ಕೇಶವರ್ಧಿನಿ ಎಣ್ಣೆ ಹೆಂಗಸರ ಪ್ರೀತಿಕರವಾದ ಎಣ್ಣೆ ಇದರಿಂದ ಕೂದಲುಗಳು ಕಪ್ಪಾಗುವವು, ಮತ್ತು ಬೆಳೆಯುವವು ಬಾಟ್ಲಿ ಒಂದರ ಕಿಮ್ಮತು ೦—೮—೦

ಗಜಕರ್ಣದ ಮುಲಾಮು ೦—೪—೦

ರೊಯಲ್ ಟ್ರೇಡಿಂಗ್ ಕಂಪೆನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಸತತವಾತ, ಚೇಳುಕಡಿತ, ತಲೆನೋವು, ಶೀತ, ಘಾಯ, ಗಂಟ್ಲು ನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ ಇನ್ನೂ ಸಾವಿರಾರು ಜನರು ಗುಣಹೊಂದುವರು ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ ಇದು ಎಳೇ ಮಗುವಿನ ದೇಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು

ಬಾಟ್ಲಿ ಒಂದರ ಕಿಮ್ಮತು ರೂ. ೦—೬—೦, ಆರು ಬಾಟ್ಲಿಗಳಿಗೆ ರೂ. ೨—೧೦—

ವಿಳಾಸ:— ರಾಮರಾವ್ ನಾನಾಭಾಯಿ ಕಾಳೆ,

ಗಿರಗಾಂ ಮುಂಬಯಿ.

...ಪ್ರಕಟನೆಗಳು.

———o———

1. ... ಯ—ಫುಟಗಳು ೫೪೬ ಹಿಂದೂ ಮುಹಮದೀ ಲಾಗಳು, ೨೯ ... ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ಸಮೂ ... ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವ ... ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ.

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ; ಪ್ರಿವಿಕೌನ್ಸಿಲ್, ಹೈಕೋರ್ಟ್ ... ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನು ... ಇದರಲ್ಲಿ ಗರ್ಭಿತವಾಗುತ್ತವೆ. ವರುಷದ ಚಂದಾ ೧ ರೂಪಾಯಿ ಮುಂಗಡ, ... ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ.

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ. ವಿ. ಪಿ. ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು "ಎಂ ಮಲ್ಲಾರಾಧ್ಯರ್ಕೈ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ," ಈ ವಿಳಾಸಕ್ಕೆ ಬರೆಯುವದು.

———o———

THE HINDU SOAP MANUFACTURING CO.,
ಹಿಂದೂ ಸೋಪ್‌ಮೆನ್ಯುಫೆಕ್ಚರಿಂಗ್ ಕಂಪೆನಿ.

———o———

ಕುಂದಾಪುರ ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ. ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ. ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್.

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳು.

ಪರಿಮಳಾಂಜನ ನಂಬ್ರ 1:—ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಗನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0-8-0.

2. ತಾಂಬೂಲ ಸುವಾಸಿನಿ:—ಸೀಸೆ ೧ರ ಕ್ರಯ 0-4-0.

3. ದಂತಮಂಜನ:—ಡಬ್ಬಿ ೧ರ ಕ್ರಯ 0-2-0.

4. ಗಜಕರ್ಣದ ಮುಲಾಮು:—ಡಬ್ಬಿ ೧ರ ಕ್ರಯ 0-6-0.

5. ನಯನಾಮೃತ ಸುರ್ಮ:—ಸೀಸೆ ೧ರ ಕ್ರಯ 0-8-0.

6. ಶ್ವಾಸಕುಠಾರ:—ಡಬ್ಬಿ ೧ರ ಕ್ರಯ 0-8-0.

7. ಪರಿಮಳಾಂಜನ ನಂಬ್ರ 2:—ಡಬ್ಬಿ೧ರ ಕ್ರಯ 0-0-0.

8. ಜ್ವರಾಂಕುಶ ಮಾತ್ರೆ:—ಡಜನ್ ೧ರ ಕ್ರಯ -8-0.

9. ಸುಗಂಧ ವಸ್ತ್ರದ ಪುಡಿ:—ಡಬ್ಬಿ ೧ರ ಕ್ರಯ 0-6-0.

10. ದಶಾಂಗಧೂಪ:—ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು ಶೇರು ೧ಕ್ಕೆ ರೂಪಾಯಿ 1-4-0.

11. ದ್ರಾಕ್ಷಾರಿಷ್ಟ:—ಬಾಟ್ಲ ೧ರ ಕ್ರಯ 2-8-0. ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಖಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು.

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರಿಯಿರಿ.

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಶೂರೆನ್ಸ್ ಕಂಪೆನಿ,

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:-- ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ:—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್,
ಜನರಲ್ ಏಜಂಟ್,
ಮಂಗಳೂರು, ದ. ಕನ್ನಡ.

ANGLO INDIAN DRUG & CHEMICAL Co's.

ಕೇಫಿಟೋಲ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ಜಖಮು ಘಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನುನೋವು, ಪಕ್ಷವಾತ ಅನೇಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ. ಎಲ್ಲಾ ಬಾಮಿಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ. ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ವರತು. ಬಾಟ್ಲ ಒಂದಕ್ಕೆ ೮ ಆಣೆ.

ದಿಲ್‌ಬಾರ್ ಮತ್ತು ಗುಲ್‌ಸನ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ. ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು. ಬಾಟ್ಲ ಒಂದರ ೧—೮—೦.

ವಿಳಾಸ:— **ದಿ. ಊಲ್ಫನ್ ಮಾರ್ಟ್.**
ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ.	೪ ಸಾರಿ.	೧೨ ಸಾರಿ.	೨೬ ಸಾರಿ.	೫೨ ಸಾರಿ.
ಇಡೀ ಪಾನು	ರೂ. ೧೦	ರೂ. ೩೨	ರೂ. ೭೨	ರೂ. ೧೧೦	ರೂ. ೧೫೦.
ಅರ್ಧ ಪಾನು	,, ೬	,, ೧೮	,, ೩೮	,, ೬೦	,, ೮೫.
ಕಾಲು ಪಾನು	,, ೪	,, ೧೨	,, ೨೦	,, ೩೨	,, ೫೫.
ಅರೆಕಾಲು ಪಾನು	,, ೨	,, ೭	,, ೧೨	,, ೧೮	,, ೩೫.

ಸೂಚನೆ:—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ಕೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ರೂ. ೧ ೮. ಟಪ್ಪಾಲು ಹಾಸಲು ... [illegible]

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗ ಚರ್ಮ)	(ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾಸೆಗಳಿದ್ದು ಗೆರೆಗಳುಳ್ಳವುಗಳು

3″ × 8¼″, 3″ × 5¼″, 8¼″ × 6½″, 6½″ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕ್ಯಾಪ್ ಕಾಗದದಿಂದ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ್ದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್ ಚರ್ಮ ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ಜವಾಬು ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹೂವಿನ ಒಳ್ಳೇ ವಿನಿಯೋಗವು ಯಾವುದು — ಬೆಲೆಗೆ ತಕ್ಕ ಒಡವೆಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ
ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷದಿ ವ್ಯಾಪಾರಸ್ಥರಾಗಿದ್ದು ಕಳೆದ 1902ನೇ ಇಸವಿಯಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೋರ್ನ್‌ಫ್ಲೋರ್, ಟೀ, ಕೋಕೋವಾ ಕಾಫಿ ಹುಡಿ ಬಿಸ್ಕತ್, ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಔಷದೋಪಚಾರದ ಸಮಸ್ತ ಔಷದಿಗಳು,

(ಕೊಡ್ಲಿವರ್ ಒಯಿಲ್ ಫಲ್ಲೊಸ್ಯಾರಪ್, ಕೆಮಿಕಲ್ ಫುಡ್ ಇಂಕರ್ಣಾಕ್ ಮುಲಾಮು ಮೊದಲಾದವುಗಳೂ ಸಹಾ)

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಇತರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು,

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ಷಾಮೆಗಳು ವ ರಿಖಾಸೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ —

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಮಂಗಳೂರು.

Mangalore Trading Association
Mangalore, S. Canara

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು 1ನೇ ಶುಕ್ರವಾರ ಅಕ್ಟೋಬರ 1909 ಸಂಚಿಕೆ 26

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

ಅಮೃತಾಂಜನ
Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸರ್ವ ಮಾಗಿಸಿ ಎಳೇ ದೇಹಸ್ಕಾರರೂ ಭಯವಿರಹಿತವಾಗಿ ಹಚ್ಚಬಹುದ ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜಾಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಪಟ್ಟಣಗಳಲ್ಲಿಯೂ ಷ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ೧ರ ಕಿಮ್ಮತು ೭ ಆಣೆ



ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತ 2 ಆಣೆ

ವಜ್ರಗುಟಿಕಾ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯಕೆ ಇಡುತ್ತದೆ ಇದರಲ್ಲಿ ಚೆವೆಯಿನ ಕೋಕೊ, ಲೆಸೆಥಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1.

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಉಪಯೋಗಿಸುವದರಿಂದ ಮೋರೆಯ ಮೇಲಿರುವ ಮುದ್ದಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು ೭ ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0

ಬೇಳು ಕಡಿತದಮೇಲಿ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳು ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನ ಶುದ್ಧಿ ಮಾಡುವದು ಬಾಟ್ಲಿ ೧ರ ಕಿಮ್ಮತು ೧೨ ಆಣೆ ಮೂರು ಬಾಟ್ಲಿಗಳಿಗೆ ರೂ. 2—4—0.

ಜುಲಾಬು ಮಾತ್ರೆಗಳು	ರೂ	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0—10—0.
ಖಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಅಂಗಡಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರೆದಲ್ಲಿ ರವಾನಿಸಲ್ಪಡುವದು.

ವಿಳಾಸ:- ವಿಲಿಯಂ ಮತ್ತು ಕಂಪನಿ, ಫೋರ್ಟ್ ಮುಂಬಯಿ. ಟೆಲಿಗ್ರಾಫ ವಿಳಾಸ:- "ಅಮೃತಾಂಜನ" ಮುಂಬಯಿ.

[illegible] (ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ [illegible] ಹೇಳಿರುತ್ತೆ. ಈ ಗ್ರಂಥಕ್ಕೆ ನಂಜರಾಜೇ ಅರಸಿನವರು [illegible] ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ) ೩-೦-೦.

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ.	೦-೬-೦
ಉತ್ತರ ರಾಮಚರಿತ್ರೆ ಕಥೆ	೦-೫-೦
ಟೀಕಾ ರಾಘವೇಂದ್ರ ಸ್ತೋತ್ರ	೦-೨-೦
ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ	೦-೨-೦
ವಿಷ್ಣು ಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦-೨-೦
ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦-೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦-೨-೦
ಸ್ವರಸಹಿತವಾದ ನಮಕ ಚ ಮಕ	೦-೨-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦-೨-೦
ಕೃಷ್ಣ ಕರ್ಣಾಮೃತ ಮೂಲ	೦-೨-೦
ದೇವರ ಸೇವೆ ಹೊಸ ಪುಸ್ತಕ	೦-೪-೦
ಮುಕುಂದ ಮಾಲಾ (ಗೀತಾ)	೦-೧-೦
ಶಿವ ನಾಮಾ	೦-೦-೬
ಹನುಮನ್ನಾಮಾ	೦-೦-೬
ಹರಿ ನಾಮಾ	೦-೦-೬
ಯಾಜುಷ ಪ್ರಯೋಗ	೦-೬-೦
ಬೃಹತ್ಕಥಾ ಮಂಜರಿ	೦-೬-೦
ಕೃಷ್ಣ ಬೋಧಾಮೃತ	೦-೨-೦

೦-೪-೦ ಕಮ್ಮಿ ವಿ. ಪಿ. ರವಾನೆ ಇಲ್ಲ.

ಕೆಟಲಾಗು ಬೇಕಾದಲ್ಲಿ ಒರೆದು ತರಿಸಿಕೊಳ್ಳಬಹುದು.

ವಿಳಾಸ — ಬಿ. ಆದಿನಾರಾಯಣ ಶಾಸ್ತ್ರಿ

ವಿದ್ಯಾರ್ಣವ [illegible] ಬೆಂಗಳೂರು

ಕುಂತಳ ಕೌಮುದಿ ತೈಲ.

[illegible] ಮಹಾರಾಜರ [illegible] — ನಾನು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲಾ [illegible] ಉತ್ಕೃಷ್ಟವಾದುದು.

ಮೈಮೆನ್‌ಸಿಂಗ್ ಮಹಾರಾಜರು — [illegible] ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹಧ್ವಾ ಮಹಾರಾಣಿಯವರು — ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು — ಇದು [illegible] ಕ ವೈದ್ಯಗುಣವುಳ್ಳ ತೈಲವೆಂದು ತಿಳಿದರು ಮಾತ್ರ ಒಲ್ಲನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು — ನಾನು ಉಪಯೋಗಿಸಿದ್ದೇನೆ. ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ — ಪ್ರತಿನಿತ್ಯವೂ ಸ್ನಾನ ಮಾಡುವವರಕ್ಕೂ ತಲೆಬಾಚಿಕೊಳ್ಳುವವರಕ್ಕೂ ಉತ್ತಮ ತೋಪಯುಕ್ತವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೬ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,

216 ಕಾರನ್ ವಾಲಿಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ. "ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:— ಎಲ್. ಎ. ಫೋರುವಾಲ್ ಎಂಡ್ ಕೋ., ಚಿಕ್ಕಪೇಟೆ, ಬೆಂಗಳೂರು.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು, ಹಗಲ್‌ಬತ್ತಿ ವಗೈರೆ ರಂಗುಗಳ ವಸ್ತ್ರ 1ಕ್ಕೆ. ರೂ. 0—12—0.

ಸೈಜು ಇಂಚು 22×22 ವಸ್ತ್ರ ೧ಕ್ಕೆ „ 1—1—0.

ಸೈಜು ಇಂಚು 15×15 ಬಿಳೀ ರೇಷ್ಮೆಮೇಲೆ ಕಲಾಬತ್ತು ಚೌಕಳಿ ಹೊಸ ನಮೂನೆ ವಸ್ತ್ರ 1ಕ್ಕೆ 8 ಆಣೆ.

ರೇಷ್ಮೆ ದೊಡ್ಡ ವಸ್ತ್ರಗಳು.

ಸೈಜು ಉದ್ದ 3 ಮೊಳ ಅಗಲ 2 ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರ 1ಕ್ಕೆ ರೂ 12, 13, 14, 15, 16, 17 ಡಿಟೋ ಸಪ್ಪೆ ರೇಷ್ಮೆ ಬಾಬತು 1ಕ್ಕೆ ರೂ 6, 7, 8, 9, 10

ರೇಷ್ಮೆ ನಡುಕಟ್ಟುಗಳು.

ಕೆಂಪು ಪೂಪಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5 6 ಮೊಳ, ಅ 2 3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1 4-0 1 8 0, 1 10 0 1 12-0 2 0-0 2-8 0

ಕುಪ್ಪಸದ ಕಣಗಳು.

ರೇಷ್ಮೆ ರುದ್ರಾಕ್ಷಿ [illegible], ಹಂಸ ಪಕ್ಷಿ, ಶೃಂಗಾರ ಪಪ್ಪಳ್ಳಿ, ಗನ್ನಾರಟಿ [illegible] ಹೇದ ಮುಂಗಿ ಹಸರು, ಅಂಜೂರ ಹಗಲ್‌ಬತ್ತಿ, ಸವರನ್, ಕಲರ್ ವಗೈರೆ 1ಕ್ಕೆ ರೂ 1 6 0, 1 12 0

[illegible] ಕಪ್ಪು ಚ [illegible] 1ಕ್ಕೆ ರೂ 1 0 0, 1 2-0, 1 3-0

ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2 4 0, 2 8 0, 2-10-0

ಡಿಟೋ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ 1-4-0, 1-6-0, 1 8 0

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಳಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2 10 0, 2 12-0 3 0 0

ಡಿಟೋ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಶೀರೆ ಕಣ 1ಕ್ಕೆ ರೂ 3 6 0, 3-8-0, 3 12-0

ಡಿಟೋ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳಿ ಶೀರೆ ಕಣಾ 1ಕ್ಕೆ ರೂ 4 12 0 [illegible]-0 0

ಹೆಚ್. ಸಂಕಪ್ಪಾ ಬಸಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ವಿ. ಪಿ. ಆರ್ಡರುಗಳಿಗೆ ಸುಲಭ ಕ್ರಯ.

[illegible] ಬತ್ತಿ ಸೀರೆ ೧ಕ್ಕೆ ೦ ೮-೦, ೧ ೦-೦, ೨ ೦ ೦, ೩-೦-೦, ೪-೦-೦, [illegible] ವದ ಪಿಲ್ಲಿ ತಲೆ ೧ಕ್ಕೆ ರೂ ೨ ೪, ೮, ೬ ೧೦, ೧೭ [illegible] (ಪಶೀ ಗಂಧ) ತೂ ೧ಕ್ಕೆ ೧ ೧ ೦ ೧ ೮-೦

ಬೆಳ್ಳಿ ಗಡಿಗೆಗಳು ೧ಕ್ಕೆ ೨ ೮-೦ ೩-೦-೦, ೩ ೮-೦, ೪-೦ ೦, ೫ ೦,

ಶುದ್ಧ ರೇಷ್ಮೆ ಅವಂತನ ದಾರಗಳು ಜೊತೆ ೧ಕ್ಕೆ ೨, ೪, ೬ ೮, ೧೦, ೧೨ ೧೪

[illegible] ಚವುಕಗಳು ಪೇಟಿ, ಹಸರು, ನೀಲಿ, ಗುಲಾಬಿ, ಎಣ್ಣೆ ರಂಗು [illegible]

ಉಲನ್ ಶಹಲುಗಳು ೧ಕ್ಕೆ [illegible] ೦, ೪ ೦-೦

ಕಾಶ್ಮೀರ ಶಹಲುಗಳು ಎಲ್ಲಾ ರಂಗುಗಳಲ್ಲಿಯೂ, ೧ಕ್ಕೆ ರೂ ೯ ೦ ೦, ೧೦ ೦ ೦ [illegible] ೦ ೦, ೧೫ ೦ ೦, ೧೮ ೦ ೦, ೧೭ ೦ ೦, ೨೦ ೦-೦

ಹಾಸನದ ಟೋಪಿ ಹಣೆಯುವ ಉಲನ್ ದಾರಗಳು ಕೆಂಪು, ಎಣ್ಣೆ ಗೆಂಪು, ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦ ೬ ೦, ೦-೧೦ ೦, ೦ ೧೨ ೦, ೦ ೧೪ ೦, ಡಿಟೋ ಸೂಜಿ ೧ಕ್ಕೆ ೦ ೦ ೬, ೦ ೨-೦

ಉಲನ್‌ನಿಂದ ಹಣೆದ ಟೋಪಿಗಳು ಡೆಜನ್ ೧ಕ್ಕೆ ೪-೮-೦, ೫ ೦ ೦, ೬ ೦ ೦, ೭ ೮ ೦ ೮ ೦ ೦, ೯ ೦ ೦, ೧೦ ೦ ೦, ೧೨-೦ ೦

ಹೆಚ್. ಎನ್. ರಾವ್ ಬ್ರದರ್ಸ್,
262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವ—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು ಶೀಬು, ಕಿತ್ತಳೆ ವಗೈರೆ ಹಣ್ಣುಗಳು ಇಂಗ್ಲೀಷ್ ಮತ್ತು ನೇಟೀವ್ ಕಾಯಿ ಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವಗಳು ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್ಸ್,
[illegible] ಅಂಡ್ ಸೀಡ್ಸ್‌ಮೆನ್,
[illegible] ಬೆಂಗಳೂರುಸಿಟಿ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 1ನೇ ಅಕ್ಟೋಬರ 1909

ಜೀವನಾರ್ಥ ಕಲಹ.

ಹಿಂದು ತತ್ವಜ್ಞಾನಿಗಳು "ಪೂರ್ವ ಕರ್ಮ" "ಜನ್ಮಾಂತರ" "ಮಾಯಾ" ಮುಂತಾದ ಶಬ್ದಗಳಲ್ಲಿ ಮಾನವ ಜೀವನದ ಕಲ್ಪನೆಗಳನ್ನು ಪ್ರದರ್ಶಿಸಿರುವರು. ಹಾಗೆಯೇ ಪಾಶ್ಚಾತ್ಯ ಶಾಸ್ತ್ರಜ್ಞರು ತಮ್ಮ ಶೋಧನೆಯ ಫಲಗಳನ್ನು ಗರ್ಭೀಕರಿಸಿ ತಕ್ಕ ಶಬ್ದಗಳನ್ನು ನಿರ್ಮಿಸಿರುವರು. ಜೀವನಾರ್ಥ ಕಲಹ ಅಥವಾ ಮೇಲಾಟವೆಂಬುದು ಇವುಗಳಲ್ಲೊಂದಾಗಿದೆ. ಹ್ಯಾಗೆ ಮೇಲ್ಕಂಡ "ಮಾಯಾ" "ಪ್ರಾರಬ್ಧ ಕರ್ಮ" ಮುಂತಾದ ಶಬ್ದಗಳನ್ನು ಸರಿಯಾಗಿ ಗ್ರಹಿಸದೆ ಅನರ್ಥಕ್ಕೆ ಕಾರಣವಾಗುತ್ತದೋ ಹಾಗೆಯೇ "ಮೇಲಾಟ"ದ ಅರ್ಥವು ಸರಿಯಾಗಿ ತಿಳಿಯುವ ಅವಶ್ಯವಿದೆ. ಇಲ್ಲವೆ ಶಕ್ತಿವಂತನು ಬಲಹೀನನನ್ನು ಪೀಡಿಸಿ ಅದನ್ನು ಮೇಲಾಟವೆನ್ನಬಹುದು. ಇಂತಹ ಜೀವನಾರ್ಥ ಕಲಹವನ್ನು ನಿರ್ಮಿಸಿ ವನಸ್ಪತಿ ಜಂಗಮ ವರ್ಗಗಳಲ್ಲಿ ಇಷ್ಟು ಕ್ರೂರ ದುಃಖಪರಂಪರೆಯನ್ನುಂಟುಮಾಡಿದವನೊಬ್ಬ ಕರ್ತೃವಿರಬಹುದೇ? ಇದ್ದರೂ ಅಂತಹ ನಿರ್ದಯನನ್ನು ದೇವರೆಂದು ಕರೆಯಬಹುದೇ ಎಂದು ನಾಸ್ತಿಕರು ವಾದಿಸಬಹುದು.

ಆದರೆ ಎಲ್ಲಾ ವಿಶ್ವನಿಯಮಗಳಂತೆ ಇದು ಗುಣರಹಿತವಾಗಿದೆ. ಬೆಂಕಿಯಲ್ಲಿರುವ ಶಕ್ತಿಯು ಒಳ್ಳೇದಕ್ಕೆ ವಿನಿಯೋಗಿಸಿದರೆ ಸುಫಲವನ್ನೂ ಅನ್ಯಥಾ ಉಪಯೋಗಿಸಿದರೆ ಅನರ್ಥವನ್ನೂ ಈಯುವದು. ಇವು ವಿಶ್ವೇಶ್ವರನ ಉದ್ದಿಶ್ಯಕ್ಕೆ ಸಹಕಾರಿಯಾದ ಶಕ್ತಿರೂಪಗಳಾಗಿವೆ. ಉದ್ಭಿಜ್ಜ ಕೋಟಿಯಲ್ಲಿ ಈ ಕಲಹವು ವಿಶೇಷವದೆ. ಹ್ಯಾಗೆಂದರೆ — ಸಸ್ಯಾದಿಗಳ ಸಂತಾನವು ಅಪರಿಮಿತವಾಗಿ ಹುಟ್ಟಿದ್ದರೂ, ಅವುಗಳ ಒಟ್ಟು ಸಂಖ್ಯೆಯು ಬಹುಶಃ ಎಂದಿನಷ್ಟೇ ಉಳಿಯುವುದರಿಂದ ಅನೇಕಾನೇಕ ವನಸ್ಪತಿಗಳು ಮೊಳೆಯಲ್ಲಿಯೇ ನಾಶವಾಗಬೇಕು. ಇವುಗಳಲ್ಲಿ ಇಂತಹವು ನಾಶವಾಗಬೇಕು, ಇಂತಹವು ಉಳಿಯಬೇಕೆಂದು ಹ್ಯಾಗೆ ನಿಶ್ಚಯಿಸಲ್ಪಡುವದು? ಸಸ್ಯಾದಿಗಳಲ್ಲಿ ತರುಣ ಪೀಳಿಗೆಯು ಹಿಂದಿನದಕ್ಕಿಂತ ತುಸಬೇಧಗಳನ್ನು ತೋರುವುದು. ಹೀಗೆ ಎಳೆಯವ ಭೇದಗಳ ದೆಸೆಯಿಂದಾಗಲೀ ಚೇತನ ಶಕ್ತಿಯ ದೆಸೆಯಿಂದಾಗಲೀ ತರುಣ ಪೀಳಿಗೆಯಲ್ಲಿ ಉತ್ಕೃಷ್ಟವಾದವು ತಮ್ಮ ಭ್ರಾತೃವರ್ಗವನ್ನು ಹಿಂದಟ್ಟಿ ತಾವು ಬಾಳುವವು. ಅಂದರೆ ಜೀವನಾರ್ಥ ಕಲಹ ನ್ಯಾಯದ ವರ್ಚಸ್ವದಿಂದ ಉದ್ಭಿಜ್ಜ ವರ್ಗದ ಉತ್ಕರ್ಷೆಯು ಸಾಗುವದು.

ತಿರ್ಯಗ್ಜಂತುಗಳಲ್ಲಿ ಸಂತಾನವೃದ್ಧಿಯು ಉದ್ಭಿಜ್ಜಗಳಷ್ಟು ಇಲ್ಲವಾದರೂ, ಜೀವರಕ್ಷಣಾರ್ಥವಾಗಿಯೂ ವಂಶಪಾಲನಾರ್ಥವಾಗಿಯೂ ಅವುಗಳೊಳಗೆ ಮೇಲಾಟವು ಕಠಿಣವಾಗಿಯೇ ಇದೆ. ಬಾಹ್ಯಾವರಣಗಳಿಗೆ ಯುಕ್ತವಾದ ಅವಯವ ಸಾಮರ್ಥ್ಯಗಳನ್ನು ಯಾವದು ತೋರಲಾವುದೋ ಆ ಜಾತಿಯು ಬಾಳುತ್ತಾ, ಪ್ರಾಣಿ ವರ್ಗಗಳಲ್ಲಿ ಜಾತಿ ಉಪಜಾತಿಗಳು ಹುಟ್ಟಿ ಜಂತು ಕೋಟಿಯ ಉತ್ಕರ್ಷೆಗೆ ಈ ಜೀವನಾರ್ಥ ಕಲಹವು ಸಹಾಯಕವಾಗುವದು.

ಈ ಮೇಲಾಟವು ಮಾನವ ವರ್ಗವನ್ನು ಸಾರಿದೊಡನೆ ಇದರ ರೂಪವು ಮಾರ್ಪಡುವುದು. ಇತರ ಪ್ರಾಣಿಗಳಲ್ಲಿ ಈ ಕಲಹವು ಬರೇ ಜೀವನ ಅಥವಾ ಉದರಪೋಷಣಾರ್ಥವಾಗಿ ಮತ್ತು ಸಂತಾನ ವೃದ್ಧಿಗಾಗಿ ಸಾಗುವದು. ಆ ಪ್ರಾಣಿಗಳಿಗೆ ಜ್ಞಾನ ಬುದ್ಧಿಗಳಿಲ್ಲದೆ ಕಲಹದ ಕಾಠಿಣ್ಯವೇ ತೋರುವುದು. ಮನುಷ್ಯನಿಗಾದರೋ ಉದರಪೋಷಣೆಯ ತುಟ್ಟಿ ಬಾರದು. ಹ್ಯಾಗೆಂದರೆ — ಅವನು ಇತರ ಪ್ರಾಣಿಗಳನ್ನು ತಿಂದಾಗಲೀ ತನ್ನ ಬುದ್ಧಿಬಲದಿಂದ ಆಹಾರ ಪದಾರ್ಥಗಳನ್ನು ಧಾರಾಳವಾಗಿ ಬೆಳಸಿಯಾಗಲೀ ಈ ಸಂಕಷ್ಟವನ್ನು ತಪ್ಪಿಸುವನು. ಭತ್ತವನ್ನು ತನ್ನಷ್ಟಕ್ಕೆ ಬೆಳೆಯ ಬಿಟ್ಟರೆ ಒಂದು ಗದ್ದೆಯ ಬೆಳೆಯು ಹತ್ತು ಗದ್ದೆಗಳಲ್ಲಿ ಸಿಕ್ಕೀತೇ? ಇದಲ್ಲದೆ ಸಹಕಾರ ಕಾರ್ಯವಿಭಾಗ ಮೊದಲಾದ ಉಪಾಯಗಳಿಂದ ಉತ್ಪತ್ತಿಯು ಬಹಳವಾಗಿ ಹೆಚ್ಚುವದು. ಹತ್ತು ಜನರು ಕೂಡಿ ಒಂದು ಕೆಲಸಗೈದರೆ ಒಬ್ಬನಿಗಿಂತ ಹತ್ತಲ್ಲ ಹದಿನೈದು ಇಪ್ಪತ್ತು ಪಾಲು ಉತ್ಪತ್ತಿಯಾಗುವದು. ಮನುಷ್ಯನಲ್ಲಿ ಬುದ್ಧಿ ಜ್ಞಾನಗಳು ಉದಯಿಸಿರುವದರಿಂದ ಕ್ರೌರ್ಯವು ನೀಗುವದಲ್ಲದೆ ವಿಷಯಾಸಕ್ತಿಯು ತಗ್ಗುತ್ತಾ ಸಂತಾನವು ಪ್ರಾಣಿವರ್ಗಗಳಷ್ಟು ತ್ವರೆಯಾಗಿ ಬೆಳೆಯದು. ಮನುಷ್ಯ ವರ್ಗದಲ್ಲಿ ಕಲಹವು ದೇಹಸಂಬಂಧವಲ್ಲ, ಬುದ್ಧಿ ಸಂಬಂಧವಾಗಿ ನಡೆಯುವದು. ಶಾಸ್ತ್ರಜ್ಞಾನ, ಕಲಾವಿದ್ಯೆ, ರಾಜನೀತಿ, ವ್ಯವಹಾರ ಜ್ಞಾನ ಮುಂತಾದವುಗಳಲ್ಲಿ ಮೇಲಾಟ ನಡೆಯುವದು. ಅಂದರೆ ಇವರಲ್ಲಿ ಕಲಹವು ರಜೋಗುಣಾತ್ಮಕವಾಗಿ [illegible]. ಇಂತಹ ಕಲಹದಲ್ಲಿ ಮುಖ್ಯವಾದ [illegible] [illegible] ಜನ ಗುಣಗಳು ಹಿಂದೆ ಬಿದ್ದು [illegible] ತಮೋಗುಣ [illegible] ರಜೋಗುಣದತ್ತ ಕಡೆ ಮಾನವ ಕುಟುಂಬದ ಉತ್ಕರ್ಷ ನಡೆಯುವದು. ಈ ಮೂಲಕ ಮನುಷ್ಯನ ಬುದ್ಧಿಶಕ್ತಿಯು ಬಲಗೊಳ್ಳುವದು.

ಕ್ರಮೇಣ ಪ್ರವೃತ್ತಿ ಮಾರ್ಗದಲ್ಲಿ ನಡೆಯುತ್ತಾ, ಮನುಷ್ಯನಲ್ಲಿ ಭಕ್ತಿಜ್ಞಾನಗಳು ಬೆಳಗಿ ಸ್ವಾರ್ಥವು ಕಳೆಗುಂದುವದು. ತ್ಯಾಗ ಪದಾರ್ಥಗಳೇ ವ್ಯವಹಾರದಲ್ಲಿ ಅವನನ್ನು ಆಳತೊಡಗುವವು. ಅಂದರೆ ಅಂತಹ ಪಕ್ವನಾದ ಪುರುಷನಲ್ಲಿ ಮೇಲಾಟಕ್ಕೆ ಮೂಲವಾದ ಸ್ವಾರ್ಥವೇ ನಾಶವಾಗಿ ಕಲಹವು ಶಾಂತಿಯನ್ನೈದುವದು.

ಜೀವನಾರ್ಥ ಕಲಹ ಅಥವಾ ಮೇಲಾಟದ ಉದ್ದಿಶ್ಯವು ಈಗ ವ್ಯಕ್ತವಾಯಿತಲ್ಲ. ಒಬ್ಬೊಬ್ಬ ಮನುಷ್ಯನು ಅಥವಾ ಒಂದೊಂದು ಪ್ರಾಣಿಯು ಯಾ ಉದ್ಭಿಜ್ಜವು ತನ್ನ ತನ್ನ ಸ್ವಾರ್ಥಕ್ಕಾಗಿ ಕಾದಾಡುತ್ತಾ ಹೋದರೂ, ಈ ನಿಯಮದ ಮೂಲಕ ಇಡೀ ಜಾತಿಯ ಉತ್ಕರ್ಷೆಯಾಗುವದು. ಉದ್ಭಿಜ್ಜದಿಂದ ಪ್ರಾಣಿ ವರ್ಗವನ್ನೂ, ಇದರಿಂದ ಮನುಷ್ಯನನ್ನೂ ಮೇಲ್ತಂದು ಈ ನಿಯಮವು ಮನುಷ್ಯನನ್ನು ಕಲಹದ ಮೂಲಕ ಅವನ ಅತ್ಯುತ್ಕೃಷ್ಟಪದವಾದ ಶಾಂತಿಗೆ ಏರಿಸುವದು.

ಆದರೆ ಪಾಶ್ಚಾತ್ಯ ದೇಶಗಳಲ್ಲಿ ಮೇಲಾಟದಿಂದ ಅನಿವರ್ತನೀಯ ದುಃಖಪರಂಪರೆಯೊದಗಿಯದಲ್ಲ? ಎಂದು ಕೇಳಬಹುದು. ಅನರ್ಥಗಳ ಕಾರಣವು ಮೇಲಾಟವಲ್ಲ ಮನುಷ್ಯನೇ. ದ್ರಾಕ್ಷೆ ಹಣ್ಣುಗಳನ್ನು ದೇವರು ಮನುಷ್ಯನ ಒಳ್ಳೇದಕ್ಕಲ್ಲವೇ ನಿರ್ಮಿಸಿದ್ದು? ಅದರಿಂದ ಸಾರಾಯಿ ಇಳಿಸಿ ಸರ್ವ ನಾಶವಾದರೆ ಅದಕ್ಕೆ ಉತ್ತರವಾದಿಯು ದೇವರೇ? ದ್ರಾಕ್ಷದ ಬಳ್ಳಿಯೇ? ಅಥವಾ ಮನುಷ್ಯನೇ? ಪ್ರಾಣಿ ವರ್ಗವು ಪ್ರಕೃತಿ ಪ್ರೇರಣೆಯಿಂದ ಸ್ವಾಭಾವಿಕ ದಾರಿಯನ್ನೇ ಅನುಸರಿಸುವದು. ಮನುಷ್ಯನಾದರೋ ಸದ ಸದ್ವಿವೇಕವುಳ್ಳವನಾಗಿದ್ದು ತನ್ನ ದಾರಿಯನ್ನು ತಾನೇ ಆರಿಸಬೇಕಾಗುವುದು. ಒಮ್ಮೊಮ್ಮೆ ಪ್ರಮಾದದಿಂದ ಅವನು ತನ್ನ ಸುಖಕ್ಕಾಗಿ ನಿರ್ಮಿತವಾದ ಅಗ್ನಿಯನ್ನು ಮನೆಗೆ ಹತ್ತಿಸಿಬಿಡುವನು. ನಮ್ಮ ಸುತ್ತಲಿನ ವಾಯುಮಂಡಲವು ನಮ್ಮ ದೇಹದ ಮೇಲೆ ಒಂದೊಂದು ಚದರ ಅಂಗುಲಕ್ಕೆ ೧೫ ರಾತ್ತಲುಗಳ ಭಾರದಿಂದ ಒತ್ತುವುದು. ಆದರೆ ಈ ಭಾರವು ದೇಹದ ಸರ್ವ ದಿಕ್ಕುಗಳಿಂದಲೂ, ಬೀಳುವದರಿಂದ ನಮ್ಮ ಅನುಭವಕ್ಕೆ ಬಾರದು. ದುರ್ದೈವದಿಂದ ಒಂದೇ ಕಡೆಯಿಂದ ಈ ಭಾರಬಿದ್ದರೆ ಆದರಡಿ ನಾವು ನಜ್ಜುಗುಜ್ಜಾಗುವದೇ ಸೈ. ಹಾಗೆಯೇ ಈ ಮೇಲಾಟವನ್ನು ಒಂದೇ ಕಡೆ ತಿರುಗಿಸಿ, ಒಡವರನ್ನು ಯುರೋಪ ಅಮೇರಿಕಗಳ ಜನರು ಅದರ ಭಾರದಿಂದ ಜಜ್ಜುವದುಂಟು. ಲೋಕದ ಉತ್ಪತ್ತಿಯು ಸರ್ವ ಮಾನವ ಕುಟುಂಬಕ್ಕೆ ಸಂದು ಮಿಗುವಷ್ಟಿದೆ. ಆದರೆ ಭಾಗ್ಯವಂತ ಬಂಡವಾಳಿಕನು ದುಂದ ಗಾರಿಕೆ ಭೋಗಲಾಲಸೆಗಳಿಂದ ಪ್ರೇರಿತನಾಗಿ, ಬಡವರ ಬಾಯತುತ್ತನ್ನು ಸೆಳೆದು ಅವರನ್ನು ಹಸಿವೆಯ ಸಂಕಷ್ಟಕ್ಕೆ ದೊಬ್ಬುವನು. ಅಂಥವನು ಪರಿಣಾಮದಲ್ಲಿ ತನಗೂ ತನ್ನ ಬಳಿ ಸೈಯುವವರಿಗೂ ಶತ್ರುವಾಗುವನು. ಯಾಕಂದರೆ, ಮನುಷ್ಯನ ಜೀವನವು ಬರೇ ಉದರಪೋಷಣವಲ್ಲ, ವಿಷಯಭೋಗವಂತೂ ಅಲ್ಲ.

ದಿವಂಗತ ಮಂಗಳೂರು ರಾಮಚಂದ್ರಯ್ಯನವರು.

ಈ ಮಹನೀಯರು ಕಳೆದ ತಿಂಗಳ ತಾ ೨೮ನೇ ಮಧ್ಯಾಹ್ನ 2½ ಘಂಟೆಗೆ ತಮ್ಮ ೮೫ನೇ ವರುಷದಲ್ಲಿ ವಯೋಬರಿತರಾಗಿ ಸ್ವರ್ಗಸ್ಥರಾದರೆಂಬದನ್ನು ತಿಳಿಸಲು ಅನುತಾಪಪಡುತ್ತೇವೆ. ಈ ಜಿಲ್ಲೆಯ ಗೌಡಸಾರಸ್ವತ ವೃಂದಕ್ಕೆ ಇಂಗ್ಲೀಷ್ ವಿದ್ಯಾಭ್ಯಾಸದ ಅಗ್ರಗಾಮಿಗಳಲ್ಲಿ ಇವರೇ ಮೊದಲನೇಯವರಾಗಿದ್ದರು. ಕೆಲವು ಹಪ್ತೆಗಳ ಮೊದಲು ಪರಲೋಕವನ್ನೈದಿದ ಅಮ್ಮೆಂಬಳ ಸುಬ್ರಾಯ ಪೈಗಳವರಿಂದ ಗುರುವರ್ಯರೆಂತ ಪೂಜಿಸಲ್ಪಟ್ಟಿದ್ದರೆಂದರೆ ಇವರ ಅಮೌಲ್ಯವಾದ ಗುಣಗಳ ಮಾನವು ವಾಚಕರಿಗೆ ವ್ಯಕ್ತವಾಗದಿರದು. ವಿದ್ಯಾಪ್ರಚಾರವು ಜನರಲ್ಲಿ ಈಗಿನಷ್ಟು ಇಲ್ಲದೆ, ಅದರಲ್ಲಿಯೂ ಇಂಗ್ಲೀಷ್ ವಿದ್ಯಾಭ್ಯಾಸವು ಮಾಹೀತಿಯು ಅಪರೂಪವಾಗಿದ್ದಾಗ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಹೊಂದಿದವರಲ್ಲಿ ಹಲವರಿಗೆ ವಕೀಲಿ ಮೊದಲಾದ ವೃತ್ತಿಗಳಿಂದ ಲಕ್ಷಗಟ್ಟಳೆಯ ಹಣವನ್ನು ಸಂಪಾದಿಸುವ ಅನೇಕ ಸಂದರ್ಭಗಳಿದ್ದಾಗ, ಸುಪ್ರಸಿದ್ಧ ವಕೀಲರಾಗಿದ್ದರೂ ಪರೋಪಕಾರಭಾವನೆಯಿಂದ ದ್ರವ್ಯಾರ್ಜನೆಯಲ್ಲಿಯೂ ಸಹಾ ಮಿತಿಯಿಟ್ಟು ವರ್ತಿಸಿದ ಈ ನೀತಿವಿಶಾರದರ ಸಂಕ್ಷೇಪವಾದ ಚರಿತ್ರೆಯು ಅನುಸರಣೀಯವಾಗಿರುವುದು.

ರಾಮಚಂದ್ರಯ್ಯನವರು ೧೮೨೫ನೇ ವರುಷದ ಜುಲಾಯಿ ತಿಂಗಳ ೧೧ನೇ ತಾರೀಕಿನಲ್ಲಿ ಹುಟ್ಟಿದರು. ಸ್ಥಳೀಕ ಬಾಸೆಲ್ ಜರ್ಮನ್ ಮಿಶನ್ ಶಾಲೆಯಲ್ಲಿ ಇವರು ವಿದ್ಯಾಭ್ಯಾಸವನ್ನು ಪಡೆದರು. ರಾಮಚಂದ್ರಯ್ಯನವರ ಸಹಪಾಠಿ ವಿದ್ಯಾರ್ಥಿವರ್ಗವು ಮಿಶನ್ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಹೊಂದುವರೆ ಸೇರಿದಹಿಂದೂ ಪ್ರಥಮ ವಿದ್ಯಾರ್ಥಿ ವರ್ಗವಾಗಿತ್ತು. ಇವರೊಂದಿಗೆ ಸಹಪಾಠಿಗಳಾಗಿದ್ದ ಭಗವಂತ ಪೈ, ಕೌಂಡ್ಯ ಆನಂದ ರಾವ್, ಕೌಸಿಕಯ್ಯ ಎಂಬ ಬ್ರಾಹ್ಮಣ ವಿದ್ಯಾರ್ಥಿಗಳು ನಂತರ ಕ್ರೈಸ್ತ ಮತವನ್ನವಲಂಬಿಸಿದರು. ಆ ಕಾಲದಲ್ಲಿ ಪುರಾತನ ಹಿಂದೂ ಸನಾತನ ಧರ್ಮದ ಪುನರುಜ್ಜೀವನವು ಈಗಿನಷ್ಟು ಪ್ರಶಸ್ತವಾಗದಿರುವಾಗ [illegible] ವಿದ್ಯಾರ್ಥಿಗಳನ್ನು ಕ್ರೈಸ್ತಮತವನ್ನವಲಂಬಿಸುವಂತೆ [illegible]

… ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ನಂ… ಸ್ವತಹ ಮಾಡಿಕೊಂಡು ರಾಮಚಂದ್ರಯ್ಯನವರು ವಿದ್ಯಾ… ಇಂಗ್ಲೀಷ್ ಭಾಷಾ ಪಾಂಡಿತ್ಯವನ್ನು ಇವರು ಪಡೆದಿದ್ದರಲ್ಲದೆ, … ಹಿಂದುಸ್ಥಾನಿ ಮೊದಲಾದ ಭಾಷೆಗಳ ಪರಿಜ್ಞಾನವು ಇವರಿ… ನೇ ಇಸವಿಯ ವರೆಗೆ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸರಕಾರಿ ಉದ್ಯೋಗದ… ತದನಂತರ ಇವರು ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟು ವಕೀಲರ ಸನ್ನ… ಪಡೆದು ಖ್ಯಾತಿಯಿಂದ ಈ ವೃತ್ತಿಯನ್ನು ೧೮೯೦ರ ವರೆಗೆ ಅನುಸರಿಸಿಕೊಂಡಿ… ರು. ಸರಕಾರಿ ಉದ್ಯೋಗದ ೧೮ ವರುಷಗಳಲ್ಲಿ ೧೦ ವರುಷ ಉತ್ತರ ಕನ್ನಡ… ಲ್ಲಿಯೂ ೭ ವರುಷ ದಕ್ಷಿಣಕನ್ನಡದಲ್ಲಿಯೂ ಇದ್ದರು. ಇವರು ಸರಕಾರಿ ಉ… ದ್ಯೋಗವನ್ನು ಸೇರುವಾಗ ಉತ್ತರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳು ಒಂದಾಗಿ ಕನ್ನಡ… ಜಿಲ್ಲೆಯಾಗಿದ್ದವು. ಉತ್ತರ ಕನ್ನಡ ಜಿಲ್ಲೆಯ ಸಿರಸಿ ಊರಿಗೆ ವರ್ಗವಾಗಿ ಹೋಗಿ… ಲ್ಲಿಯ ಹವೆಯು ಇವರಿಗೆ ಅನಾರೋಗ್ಯಕರವಾಗಿ ಕಂಡುಬಂದು ಅಲ್ಲಿರಲು ಉಪಾ… ಯವಿಲ್ಲದೆ ಕೆಲಸಕ್ಕೆ ರಾಜೀನಾಮೆ ಕೊಡಬೇಕಾಯಿತು. ೮೦ನೇ ವರುಷ ನ್ಯಾಯ… ಲ್ಲಿ ಡಿಸ್ಟ್ರಿಕ್ಟ್ ಕೋರ್ಟು ವಕೀಲರ ಸನ್ನದು ಇವರಿಗೆ ದೊರಕಿತು.

ಸರಕಾರಿ ಉದ್ಯೋಗದಲ್ಲಿಯೂ ವಕೀಲವೃತ್ತಿಯಲ್ಲಿಯೂ ಏಕಪ್ರಕಾರವಾಗಿ … ಪ್ರಿಯರಾದ್ದರಿಂದ ರಾಮಚಂದ್ರಯ್ಯನವರು ಲೋಕಪ್ರಿಯರಾಗಿದ್ದರು. ರಾಮ… ಚಂದ್ರಯ್ಯನವರ ವಕೀಲಿಯ ಸದ್ವರ್ತನೆಯು ಅವರನ್ನು ಕೇಳಿತಿಳಿದ ಎಲ್ಲಾ ಕಡೆಗಳಲ್ಲಿ… ಯೂ ಹೆಸರುವಾಸಿಯಾಗಿತ್ತು. ಕೀರ್ತಿಶೇಷರಾದ ಅಮ್ಮೆಂಬಳ ಸುಬ್ರಾಯ ಪೈಗಳವರ ಜೀವನಚರಿತ್ರವೆಂಬ ಸುಫಲಗಳನ್ನಿತ್ತ ಪುಣ್ಯಭೂಮಿಗೆ ರಾಮಚಂದ್ರಯ್ಯನವರ ಗುರು… ಉಪದೇಶವು ಬೀಜಪ್ರಾಯವಾಗಿತ್ತು. ಪೈಗಳವರು ಯಾವ ಸತ್ಕಾರ್ಯಗಳನ್ನು ಕೈಕೊಳ್ಳಬೇಕಾದರೂ ರಾಮಚಂದ್ರಯ್ಯನವರ ಆಶೀರ್ವಾದ ಬುದ್ಧಿವಾದಗಳನ್ನು ಕೇಳು… ತ್ತಿದ್ದರು. "ಗುರುವಿನಂತೆ ಶಿಷ್ಯ" ಎಂಬ ನಾಣ್ನುಡಿಯು ಈ ಇಬ್ಬರು ಮಹನೀಯ… ರುಗಳ ಚರಿತ್ರಗಳಲ್ಲಿ ಉದಹರಿಸಲ್ಪಟ್ಟಿರುವುದು. ಗೌಡಸಾರಸ್ವತರ ಪ್ರಥಮ ಪರಿ… ಷದವನ್ನು ತಮ್ಮ ಅಧ್ಯಕ್ಷತೆಯಿಂದ ಪವಿತ್ರವನ್ನಾಗಿ ಮಾಡಬೇಕೆಂಬ ಸುಬ್ರಾಯ ಪೈಗಳವರ ವಿನಂತಿ ಪ್ರಕಾರ ಈ ಮಹನೀಯರು ವಯೋಬಾಧಿತರಾಗಿದ್ದರೂ ತನ್ನ ಪ್ರಿಯತಮ ಶಿಷ್ಯನ ಮನೋಗತವನ್ನು ಸಿದ್ಧಪಡಿಸುವಗೋಸುಗವೂ ಜಾತಿವಾತ್ಸಲ್ಯಪರಿತರಾಗಿದ್ದುದ… ರಿಂದಲೂ ಸಭೆಯ ಪ್ರಥಮದಿವಸದಲ್ಲಿ ಸಭಾಸದನಕ್ಕೆ ದಯಮಾಡಿ ತುಸಕಾಲ ಅಲ್ಲಿ ಇದ್ದು ತನ್ನ ಇನ್ನೊಬ್ಬ ಶಿಷ್ಯವರ್ಯರಾದ ದಿವಾನ್ ಬಹದೂರ್ ಅಮ್ಮೆಂಬಳ ವೆಂಕಟರ… ಮಣ ಪೈಗಳವರನ್ನು ತನ್ನ ಪರೋಕ್ಷದಲ್ಲಿ ಅಧ್ಯಕ್ಷತೆಯ ಕೆಲಸಗಳನ್ನು ನಿರ್ವಹಿಸು… ವರೆ ಅಜ್ಞಾಪಿಸಿ ಸಭೆಯಿಂದ ತೆರಳಿದರು. ದಿವಾನ್ ಬಹದೂರ್ ಮ. ರಾ. ರಾ. ಅಮ್ಮೆಂಬಳ ವೆಂಕಟರಮಣ ಪೈಗಳವರೂ, ವಕೀಲ ಮ. ರಾ. ರಾ. … ಶ್ರೀನಿವಾಸರಾಯ… ರವರೂ, ಮಾಜಿ ಹಜೂರ ಶಿರಸ್ತೆದಾರರಾಗಿರುವ ರಾ. ಅ. ವಾಸುದೇವ ಪೈಗಳವರೇ ಮೊದಲಾದವರು ತಮ್ಮ ಪಾಠಶಾಲೆಗಳಲ್ಲಿ ಶಿಕ್ಷಣಗಳನ್ನು ಪಡೆದನಂತರ ರಾಮಚಂದ್ರ… ಯ್ಯನವರಿಂದ ತರಬೇತಿ ಹೊಂದಿದರು.

ಸರಕಾರದವರೂ ಇವರ ಪ್ರಜಾರಂಜಕತನವನ್ನು ಮನ್ನಿಸುವದೆ ನಮ್ಮ ಜಿಲ್ಲೆಯು ವೆಬ್‌ಸ್ಟರ್ ಕಲೆಕ್ಟರ್ ದೊರೆಗಳವರ ಆಡಳಿತೆಯಲ್ಲಿರುವಾಗ ಜನರ್ಲ್ ಸರ್ಟಿಫಿಕೇಟು ಎಂಬ ಬಹುಮಾನ ಪತ್ರವನ್ನು ೧೮೭೭ನೇ ದರಬಾರ ಸಂದರ್ಭದಲ್ಲಿ ಇವರಿಗೆ ಕೊಟ್ಟಿರು… ವರು. ಇವರು ಅಪೇಕ್ಷಿಸದೆನೇ ಡಿಸ್ಟ್ರಿಕ್ಟ್ ಬೋರ್ಡು ಮೆಂಬರ ಮೊದಲಾದ ಮಾನಾರ್ಹ ಹುದ್ದೆಗಳು ಇವರಿಗೆ ದೊರಕಿದ್ದವು. ಇವರು ಕೋರ್ಟಿನಲ್ಲಿ ವ್ಯವಹರಿಸುತ್ತಿರುವಾಗ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ಬೆಸ್ಟ್ ಮೊದಲಾದ ದೊರೆಗಳವರು ಇವರನ್ನು ಪ್ರಮಾಣಿಕರಾದ ಸಮರ್ಥ ವಕೀಲರೆಂದು ಕೊಂಡಾಡುತ್ತಿದ್ದರು. ಊರಲ್ಲಿ ಕೆಲವು ಜನ ತ್ಯಾಗಶಾಲಿಗಳೂ, ಸಾಹಸಿಕರೂ ಆದ ಆ ಕಾಲದ ಯುವಕರಿಂದ ಸ್ಥಾಪಿಸಲ್ಪಟ್ಟ ಸೋಕಾ… ಮೆರ ಶಾಲೆಯನ್ನು ಅಭಿವೃದ್ಧಿಸಲು ನಿರಂತರ ಪ್ರಯತ್ನಪಟ್ಟದ್ದಲ್ಲದೆ ೧೮೯೧ನೇ ಇಸವಿ… ಯಲ್ಲಿ ಸ್ಥಾಪಿತವಾದ ಕೆನರಾ ಹ್ಯಾಸ್ಕೂಲಿನ ಆಡಳಿತೆ ಬೋರ್ಡಿನ ಮೆಂಬರರಾಗಿ ತಮ್ಮ ಮರಣಾಂತ್ಯದವರೆಗೂ ಇದ್ದು ತಮ್ಮ ಸದ್ವಿಚಾರದಿಂದ ಈ ಸಂಸ್ಥೆಯ ಸಹಕಾರಿಗಳಾಗಿ… ದ್ದರು. ಸ್ವಜಾತಿಯವರು ಇವರ ಬಹುಮಾನಾರ್ಹವಾಗಿ ಇವರ ಜೀವ ಕಾಲದಲ್ಲಿಯೇ ಇವರ ಒಂದು ಚಿತ್ರಪಟವನ್ನು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಪ್ರತಿಷ್ಠಿಸಿರುವರು.

ಪುಣ್ಯ ಶ್ಲೋಕ ರಾಮಚಂದ್ರಯ್ಯನವರು ನ್ಯಾಯ ಭಕಿತರೂ ಮಾನ ಭೀತರೂ ಆಗಿ ಪರಂಧಾಮವನ್ನೈದಿದರು. ಆದರೂ ಪರಮಪ್ರಿಯ ಶಿಷ್ಯ ಕೀರ್ತಿಶೇಷ ಅ. ಸುಬ್ರಾಯ ಪೈಗಳವರ ವಿಯೋಗವಲ್ಲದಿದ್ದರೆ ಇವರು ಇನ್ನೂ ಕೆಲವು ಕಾಲ ನಮ್ಮ ಬಳಿ ಇರುತ್ತಿದ್ದರೆಂದು ಅನುಮಾನಿಸಬೇಕು. ಇವರ ಕುಟುಂಬದ ಪೈಕಿ ಎರಡನೇ ಮಗ ಹಜೂರು ಶಿರಸ್ತೆದಾರರಾಗಿರುವರು. ಕೀರ್ತಿ ಶೇಷರವರ ಕುಟುಂಬದೊಡನೆ ನಾವೇ ಅಲ್ಲ, ಸ್ವಜಾತಿ ಪರಜಾತಿಗಳಲ್ಲಿ ಅವರನ್ನರಿತವರೆಲ್ಲರೂ ಸಹಸಂತಾಪಿಸುವರು.

ಜೀವನಾ ವೃತ್ತಿಗಳು ದೊರಕುವುದು ಕಷ್ಟಸಾಧ್ಯವೇ?

—o—

ವಕೀಲಿ, ಡಾಕ್ಟರಿ, ಸರಕಾರಿ ನೌಕರಿ ಮೊದಲಾದ ವೃತ್ತಿಗಳು ತುಂಬಿಹೋಗಿ ಇತರ ವ್ಯಾಪ್ತಿಗಳಿಲ್ಲದೆ ದೇಶದ ಎಲ್ಲಾ ಕಡೆಗಳಲ್ಲಿಯೂ ಪ್ರೌಢ ವಿದ್ಯಾಭ್ಯಾಸವನ್ನು ಹೊಂದಿರುವ ವಿದ್ಯಾರ್ಥಿ ಯುವಕರು ನಿರಾಶೆಗೊಳ್ಳುತ್ತಿರುವರು. ಜೀವನವು ಕಷ್ಟವಾಗಿದೆ ಎಂಬ ಮಾತು ಎಲ್ಲೆಲ್ಲಿಯೂ ಕೇಳಿಸುತ್ತಿರುವುದು. ಇಂತಹ ಸಂದಿಗ್ಧ ಕಾಲಗಳಲ್ಲಿ ಲೋಕ ಸೇವೆಯನ್ನು ಕೈಕೊಂಡ ದೇಶವತ್ಸಲರ ಬುದ್ಧಿವಾದವು ಏನಾಗಿರುವುದೆಂಬದನ್ನು ಕೇಳಲು ಎಲ್ಲರೂ ಕುತೂಹಲವುಳ್ಳವರಾಗಿರುವರು. ತಾವು ಮಾತಾಡುತ್ತಿರುವ ಪ್ರತಿ ಸಂದರ್ಭದಲ್ಲಿಯೂ ಸಹಾ ಪ್ರಜಾ ವೃದ್ಧಿಯನ್ನೇ ಸಾಧಿಸುತ್ತಿರುವ ಮಹನೀಯರ ಮಾತುಗಳು ಯಾವಾಗಲೂ ಅರ್ಥಗರ್ಭಿತವಾಗಿರುವವು. ಬರೋಡಾ ಕಾಲೇಜಿನ ವರ್ಧಂತಿಯುತ್ಸವ ಸಮಯದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಗೈಕ್ವಾರ ಮಹಾರಾಜರವರು ಅಪ್ಪಣೆಕೊಡಿಸಿದ ಬುದ್ಧಿವಾದವು ಹೀಗೆ ಅರ್ಥಗರ್ಭಿತವಾಗಿದ್ದು ವಿದ್ಯಾರ್ಥಿ ವರ್ಗಕ್ಕೆಲ್ಲಕ್ಕೂ ಜೀವನಾವೃತ್ತಿಯು ಈ ಕಾಲದಲ್ಲಿ ಸಹಾ ಕಷ್ಟಸಾಧ್ಯವಲ್ಲವೆಂಬದನ್ನು ಸೂಚಿಸಿರುವುದು. ಬುದ್ಧಿ ಸ್ಥೈರ್ಯವೂ ಮನೋದಾರ್ಢ್ಯವೂ ಯಾವನಲ್ಲಿರುವುದೋ ಅಂಥವನಿಗೆ ಹಿಂದೂಸ್ಥಾನದಲ್ಲಿ ಪ್ರಯೋಜನಕಾರಿಯಾದ ವೃತ್ತಿಯು ದೊರೆಯಲಿಕ್ಕಿಲ್ಲವೆಂಬ ಭಯವನ್ನು ತೊಲಗಬೇಕೆಂಬದೇ ಇವರ ಅಭಯವಾಗಿರುವುದು. ಹೀಗೆ ವಿದ್ಯಾರ್ಥಿಗಳಿಗೆ ಸೂಚಿಸೋಣಾದ ಬುದ್ಧಿವಾದವು ಏನು?

ವ್ಯಾಪಾರ, ಕೈಗಾರಿಕೆಗಳಲ್ಲಿ ವಿದ್ಯಾಭ್ಯಾಸವನ್ನು ಹೊಂದಿದವರಿಗೆ ವೃತ್ತಿ ದೊರಕಲು ಅವಕಾಶವಿರುವುದೆಂದು ಗೈಕ್ವಾರರವರು ಅಪ್ಪಣೆಕೊಟ್ಟಿರುವರು. ವಿದ್ಯಾಭ್ಯಾಸವನ್ನು ಹೊಂದಿದವನು ಸರಕಾರಿ ಉದ್ಯೋಗ, ವಕೀಲ ಮೊದಲಾದ ವೃತ್ತಿಗಳನ್ನೇ ಅನುಸರಿಸಬೇಕಲ್ಲದೆ, ವ್ಯಾಪಾರ ಮಾಡುವುದಾಗಲೀ ಕೈಗಾರಿಕೆಗಳಲ್ಲಿ ಉದ್ಯುಕ್ತರಾಗುವುದಾಗಲೀ ಅಮಾನ್ಯವಾಗಿರುವುದೆಂಬ ಭಾವವು ಅನೇಕರಲ್ಲಿರುವುದು. ಈ ಭಾವನೆಯು ನೆಲೆಯಿಲ್ಲದ್ದೆಂಬದಾಗಿ ಅಮೇರಿಕದ ಸಂಯುಕ್ತ ಸಂಸ್ಥಾನದ ಮಾದರಿಯನ್ನು ತೋರಿಸಿ ಹೇಳಿರುವರು. ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರ್ವ ವಿದ್ಯಾಶಾಲೆಗಳಲ್ಲಿ ವಿದ್ಯಾಪದವಿಗಳನ್ನು ಹೊಂದಿದವರಲ್ಲಿ ಅನೇಕರು ವ್ಯಾಪಾರ ಕೈಗಾರಿಕೆ ವೃತ್ತಿಗಳನ್ನೇ ಅನುಸರಿಸಿರುವರು. 'ಸ್ವದೇಶಿ' ಪ್ರಾಬಲ್ಯದಿಂದ ಸ್ಥಿರ ಪ್ರಯತ್ನಗಳಾದ ಅನೇಕ ವಿದ್ಯಾವಂತರಿಗೆ ವೃತ್ತಿಯು ದೊರಕುವಂತಿದೆ.

ಗೈಕ್ವಾರರವರು ದಯಪಾಲಿಸಿದ ಮತ್ತೊಂದು ಸೂಚನೆಯು ಮುಂದಿನ ಪೀಳಿಗೆಯವರಾದ ವಿದ್ಯಾವಂತರಲ್ಲಿ ಹಲವರಿಂದ ಗಮನಕೊಡತಕ್ಕದ್ದಾಗಿರುವುದು. ಪ್ರಜಾ ವೃದ್ಧಿಯು ದೃಢಮೂಲವಾಗಿ ನೆಲೆಗೊಂಡು ಅದು ಮುಂದುವರಿಯುತ್ತಿರಬೇಕಾದರೆ ಹಿರಿಯ ಸಂಖ್ಯೆಯಲ್ಲಿರುವ ಹಳ್ಳಿಯ ನಿವಾಸಿಕ ಸರ್ವಸಾಧಾರಣರಾದ ರೈತ, ಕೂಲಿ ಕೆಲಸದವರೂ ಈಗಿನ ಸುಧಾರಣೆ ಪ್ರಯೋಜನವನ್ನು ಹೊಂದುತ್ತಿರುವಂತೆ ಸಾಧಿಸುತ್ತಿರಬೇಕು. ಈ ಬಗ್ಗೆ ವಿದ್ಯಾಭ್ಯಾಸವನ್ನು ಹೊಂದಿದವರಲ್ಲಿ ಕೆಲವರು ರೈತರಾಗಿ ಹಳ್ಳಿಗಳಲ್ಲಿ ನಿವಾಸಿಸ ಬೇಕಾಗಿರುವುದು. ಈಗಿನ ವ್ಯವಸಾಯ ಕೈಗಾರಿಕೆಯ ನವೀನ ವಿಧಾನಗಳನ್ನೂ, ಹಳ್ಳಿವರ್ಗದವರೆಲ್ಲರಲ್ಲಿಯೂ ಸಹಕಾರ ಮೊದಲಾದ ಪ್ರಜಾಹಿತಕಾರಿ ಗುಣಗಳು ನೆಲಗೊಳ್ಳುವಂತೆ ಕೋಪರೇಟಿವ್ ಕ್ರೆಡಿಟ್ ಸೊಸೈಟೀಸ್ ಎಂಬ ರೈತರಿಗೆ ವ್ಯವಸಾಯದ ಬಗ್ಗೆ ದ್ರವ್ಯ ಸಹಾಯದ ನಿಧಿಗಳನ್ನೂ ರೂಢಿಗೆ ತಂದು ಸಾಮಾನ್ಯರೆಲ್ಲರ ನಿರ್ಗತಿ ಕತನವನ್ನು ಹೋಗಗೊಳಿಸ ಬೇಕಾಗಿರುವುದು. ಆರೋಗ್ಯ ಸೂತ್ರಗಳನ್ನೂ ಶುಚಿತ್ವ ಮೊದಲಾದವುಗಳನ್ನೂ ಸಾಮಾನ್ಯರೆಲ್ಲರಿಗೆ ತಿಳಿಯ ಹೇಳಿ ಕೊಲೆರಾ ಪ್ಲೇಗ್ ಮುಂತಾದವುಗಳ ಹಾವಳಿಯು ಕಡಿಮೆಯಾಗುವಂತೆ ಸಾಹಸಪಡಬೇಕು. ಹಳ್ಳಿಯಲ್ಲಿ ಉತ್ಪತ್ತಿಯಾಗುವ ಜಗಳಾಟ ಮೊದಲಾದವುಗಳನ್ನು ತಕ್ಕಮಟ್ಟಿಗೆ ತೀರ್ಮಾನಿಸುವಂತೆಯೂ, ಹಳ್ಳಿಯ ಆಡಳಿತೆ ಮೊದಲಾದವುಗಳಲ್ಲಿ ಅಭಿರುಚಿಯುಂಟಾಗುವಂತೆಯೂ ನಿವಾಸಿಕರನ್ನು ಅನುಗೊಳಿಸಿ ಈ ರೀತಿ ದೇಶಾಭಿವೃದ್ಧಿಯು ಮುಂದುವರಿದು ನಿಶ್ಚಲವಾಗಿ ನೆಲಗೊಳ್ಳುವಂತೆ ಪ್ರಯತ್ನಿಸಬೇಕು. ಈ ಎಲ್ಲಾ ಕಾರ್ಯಸಾಧನೆಗಳ ಸಾರತತ್ವವಾಗಿ ಬೋಧಿಸಿದ ಗೈಕ್ವಾರರವರ ಮಾತ್ಯಾವುದು? ಸಮಾಜದ ಕಲ್ಯಾಣಕ್ಕಾಗಿ ಸ್ವಾರ್ಥವನ್ನು ಮರೆಯಬೇಕು. ಹಾಗೆ ಸ್ವಾರ್ಥಸಾಧನೆಯೂ ಅಂದರೆ ಪ್ರತಿಯೊಬ್ಬನ ಮೇಲ್ಮೆಯು ಸ್ಥಿರವಾಗಿ ಮುಂದೋರಬೇಕಾದರೆ ಸಹಾ ಸಮಾಜದ ಅಭಿವೃದ್ಧಿಯನ್ನು ಸಾಧಿಸದೆ ಇದು ಸಾಧ್ಯವಾಗದು. ಸಮಾಜ ಉನ್ನತಿಯು ವ್ಯಕ್ತಿಯು ನಷ್ಟ ಹೊಂದಿಯೇ ಆಗಬೇಕೆಂತಿಲ್ಲ. ಅದು ವ್ಯಕ್ತಿಯು ಹೊಂದುವ ಅಭಿವೃದ್ಧಿಯನ್ನಾದರಿಸಿರುವುದು. ಹೀಗೆ ಪತಿತರ ಉದ್ಧರಣೆಯಿಂದಲೇ ದೇಶೋದ್ಧರಣೆಯು ಪಾಶ್ಚಾತ್ಯ ದೇಶಗಳಿಗೆ ಪ್ರಾಪ್ತವಾಗಿರುವುದೆಂದು ಅವರ ಚರಿತ್ರಗಳಿಂದ ವ್ಯಕ್ತವಾಗುವುದು. ಗೈಕ್ವಾರರವರು ಕೊಡಿಸಿದ ಈ ಬುದ್ಧಿವಾದವನ್ನು ಮರೆಯದೆ ಅದರಂತೆಯೇ ವಿದ್ಯಾವಂತರು ವರ್ತಿಸಿದ್ದಲ್ಲಿ ಜೀವನವು ಕಷ್ಟವಾದ ಈ ಕಾಲಗಳಲ್ಲಿ ಸಹಾ ಜೀವನಾವೃತ್ತಿಗಳುದೊರಕುವುದು ಕಷ್ಟಸಾಧ್ಯವೇ?.

ವಿದ್ಯಾರ್ಥಿ ಭವನ ಯಾ ಹೊಸ್ಟೆಲುಗಳಿಂದ ವಿದ್ಯಾರ್ಥಿಗಳಿಗೆ ದೊರಕುವ ಪ್ರಯೋಜನವು. ಗೈಕ್ವಾರರವರು ಮೇಲೆ ನಮೂದಿಸಿರುವ ತಮ್ಮ ಭಾಷಣದಲ್ಲಿ ವಿದ್ಯಾರ್ಥಿ ಭವನಗಳಿಂದ ವಿದ್ಯಾರ್ಥಿಗಳು ಹೊಂದಬೇಕಾದ ಪ್ರಯೋಜನವನ್ನು ಸಹಾ ಅಪ್ಪಣೆಕೊಟ್ಟಿರುವರು. ತಮ್ಮ ದೇಶದ ಕೊಲೇಜಿನ ಭವನದ ವಿಷಯವಾಗಿ ಇವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಟ್ಟಿರುವರಾದರೂ ಇವರು ಈ ಸಂದರ್ಭದಲ್ಲಿ ಅಭಯವಿತ್ತ ಮಾತುಗಳು ಎಲ್ಲಾ ವಿದ್ಯಾರ್ಥಿ ಭವನಗಳ ವಿದ್ಯಾರ್ಥಿಗಳಿಂದಲೂ ಅನುಸರಿಸತಕ್ಕದ್ದಾಗಿವೆ. ತಾನುಹಲವು ಸರ್ತಿ ಈ ಭವನಗಳನ್ನು ಸಂದರ್ಶಿಸುತ್ತಿರುವಾಗ್ಯೆ ವಿದ್ಯಾರ್ಥಿಗಳು ಇವುಗಳ ಪೂರ್ಣ ಪ್ರಯೋಜನವನ್ನು ಪಡೆಯುತ್ತಿರುವರೋ ಎಂಬ ಸಂದೇಹವು ತನ್ನಲ್ಲಿ ಉಂಟಾಗುತ್ತಿರುವುದೆಂತ ಹೇಳಿರುವರು. ವಿದ್ಯಾರ್ಥಿಗಳಿಗೆ ಬಹಳ ಅಗ್ಗವಾದ …

ಭೋಜನಾದಿಗಳನ್ನು ಒದಗಿಸಿಕೊಡುವ ಬಗ್ಗೆಯೂ, ನಿದ್ರೆ ವಿಶ್ರಾಂತಿಬಗ್ಗೆಯೂ ಮಾತ್ರ ವಿದ್ಯಾರ್ಥಿ ಭವನಗಳು ಏರ್ಪಡಿಸಲ್ಪಟ್ಟವುಗಳಲ್ಲ. ವಿದ್ಯಾರ್ಥಿ ಭವನಗಳಲ್ಲಿ ನಾನಾ ಸ್ವಭಾವದವರು ಒಂದೇ ಸ್ಥಳದಲ್ಲಿ ವಾಸಿಸುತ್ತಿರುವುದರಿಂದ ವಿದ್ಯಾರ್ಥಿಗಳು ತಮ್ಮ ಪರಸ್ಪರ ಸ್ವಭಾವಗಳನ್ನರಿತುಕೊಂಡು ತಮ್ಮಲ್ಲಿರುವ ಭೇದಗಳನ್ನು ಕಳೆದು, ಐಕ್ಯಭಾವಕ್ಕೆ ಎಡೆಗೊಡಲುಬಹುದು. ಒಬ್ಬರನ್ನೊಬ್ಬರು ಚನ್ನಾಗಿ ತಿಳಕೊಂಡು ಎಲ್ಲಾ ಕಾರ್ಯ ಸಾಧನೆಗಳಿಗೂ ಬೇಕಾದ ಪರಸ್ಪರ ವಿಶ್ವಾಸವನ್ನೂ, ಸಹಕಾರವನ್ನೂ ಇಲ್ಲಿ ಅಭ್ಯಾಸಿಸಲು ತಕ್ಕ ಸಂದರ್ಭಗಳಿರುವವು. ಪರಸ್ಪರ ಪರಿಚಿತಿಯು ಇಲ್ಲದಿರುವಾಗ ಎಲ್ಲರಲ್ಲಿಯೂ ಒಂದೇ ಕ್ಷೇಮವಾದ ಆಶೆಕೋರಿಕೆಗಳೂ, ಒಂದೇ ಉದ್ದಿಶ್ಯವನ್ನು ಸಾಧಿಸುವ ಭೇದವಿಲ್ಲದ ಬುದ್ಧಿಯೂ ಇರುವುದೆಂಬ ಉದಾರ ವಿಚಾರವನ್ನರಿತುಕೊಳ್ಳುವರೆ ಯಾವ ಉಪಾಯವೂ ಇಲ್ಲದಿರುವುದರಿಂದ, ಪ್ರತಿಯೊಬ್ಬನಲ್ಲಿಯೂ ಮೇಲಕ್ಕೆನೇ ತೋರ್ಪಡುವ ವ್ಯತ್ಯಾಸಗಳು ಮಾತ್ರ ತಿಳಿದು ಬಂದು ಎಲ್ಲಾ ಕಾರ್ಯಗಳಿಗ ತೊಡಕಾಗಿ ಪರಿಣಮಿಸುವವು. ವಿದ್ಯಾರ್ಥಿಭವನಗಳ ಮುಖೇನ ಈ ದೋಷಗಳನ್ನು ಕಳದುಹಿಡಬಹುದು. ಒಂದೇರೀತಿ [illegible] ಕಾಲಾಂತರದ ಮೊದಲು ಒಬ್ಬರನ್ನೊಬ್ಬರು ತಿಳಕೊಳ್ಳಬೇಕೆಂಬ ಆತುರವು ನಮ್ಮಲ್ಲಿತ್ತು. ಆದರೆ ಇಂಥಾ ಸ್ವಭಾವವು ಈಗಿನ ವಿದ್ಯಾರ್ಥಿಗಳಲ್ಲಿ ಒಕೆಳವಾಗಿ ಲೋಪವಾಗಿರುವುದೆಂದು ಹೇಳಿ, ತನ್ನ ಈ ಅಭಿಪ್ರಾಯವು ಒಂದು ವೇಳ್ಯ ತಪ್ಪಾಗಿರಬಹುದೆಂದು ಅಜ್ಞಾಪಿಸಿರುವರು. ಯಾಕಂದರೆ, ಪರಸ್ಪರ ಪರಿಚಿತಿಯು ಇಲ್ಲದ್ದರಲ್ಲಿ ಐಕ್ಯದ ಎಲ್ಲಾ ಪ್ರಯತ್ನಗಳು ಭಗ್ನವಾಗುವವು. ಆದ್ದರಿಂದ ಒಬ್ಬರನ್ನೊಬ್ಬರು ಚನ್ನಾಗಿ ತಿಳಕೊಂಡು ಪರಸ್ಪರ ಮೈತ್ರಿಯನ್ನೂ ಸಹಾನುಭೂತಿಯನ್ನೂ ಅಬ್ಯಾಸಿಸಬೇಕೆಂತಲೂ, ಆಯಾ ಸ್ಥಳೀಕ ಯಾ ಜಾತಿ ಮತ ವೈಷಮ್ಯಗಳನ್ನೂ, ಇವುಗಳಿಗ ಕಾರಣವಾದ ಮೂಢಭಕ್ತಿಯನ್ನೂ ಹೋಗಗೊಳಿಸಿ, ಗುಜುರಾತಿಯವರು, ದಕ್ಷಿಣದವರು, ಪಾರ್ಸಿಗಳು, ಮುಸಲ್ಮಾನರು, ಕ್ರೈಸ್ತರು ನಾವೆಲ್ಲರೂ ಒಂದೇ ಭೂಮಾತೆಯ ಮಕ್ಕಳಾಗಿರುವೆವೆಂಬುದನ್ನು ತಿಳಕೊಂಡು ಐಕ್ಯಭಾವವನ್ನು ಸಾದಿಸಬೇಕೆಂತಲೂ ಗೈಕ್ವಾರರು ಅಪ್ಪಣೆಕೊಟ್ಟಿರುವರು.

ವಿದ್ಯಾರ್ಥಿಗಳು ಗೈಕ್ವಾರರಂತಹ ಮಹನೀಯರ ಬುದ್ಧಿವಾದಗಳನ್ನು ಕೇಳಿಕೊಂಡು ಈ ರೀತಿ ವರ್ತಿಸಬೇಕೆಂಬುದಾಗಿ ನಮ್ಮ ಎಚ್ಚಾಪನೆಯಾಗಿರುವುದು. ಪ್ರಕೃತ ನಮ್ಮ ಜಿಲ್ಲೆಯಲ್ಲಿ ಆಯಾ ಜಾತಿ ಮತಸ್ಥರು ತಂತಮ್ಮ ಜಾತಿಯ ವಿದ್ಯಾರ್ಥಿಗಳಿಗೆ ಪಿಂಗಡ ಪಿಂಗಡವಾದ ಭವನಗಳನ್ನು ಏರ್ಪಡಿಸಿದ್ದರೂ ಅವುಗಳಲ್ಲಿ ವಿದ್ಯಾರ್ಥಿಗಳ ಜಾತಿ ವೈಷಮ್ಯದ ಬೆಳವಣಿಗೆಗೆ ಆಸ್ಪದ ಕೊಡದೆ ಒಂದೇ ಜಾತಿಯಲ್ಲಿ ಪ್ರಥಮತಃ ಐಕ್ಯವನ್ನು ಸಾಧಿಸಿ ಕ್ರಮೇಣ ಈ ಜಾತಿ ವೈಷಮ್ಯವನ್ನು ಪೂರ್ಣವಾಗಿ ನಾಶಗೊಳಿಸಿ ಗೈಕ್ವಾರರ ಬುದ್ಧಿವಾದವನ್ನು ಸಮರ್ಥಿಸುವರೆಂಬುದಾಗಿ ನಮ್ಮ ಕೋರಿಕೆಯಾಗಿರುವುದು.

ಶ್ರೀಕೃಷ್ಣ ಚರಿತ್ರ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಎರಡನೆಯ ಪ್ರಕರಣವು

ಸೋಹಮ್ (ಅವನೇ ನಾನು)

ಒಂದಾನೊಂದು ಕಾಲದಲ್ಲಿ, ವೇದವ್ಯಾಸ ಮುನಿಯೂ ಅರ್ಜುನನೂ ಶ್ರೀಕೃಷ್ಣನ ಬೇಟಿಗೆ ದ್ವಾರಕಾನಗರಕ್ಕೆ ಹೋದರು. ಕೃಷ್ಣನು ವ್ಯಾಸ ಮುನಿಯನ್ನು ನಮ್ರತೆಯಿಂದ ವಂದಿಸಿದನು, ಅರ್ಜುನನನ್ನು ಪ್ರೇಮದಿಂದ ಅಪ್ಪಿದನು, ಮತ್ತು ಇಬ್ಬರಿಗೂ ಕುಳ್ಳಿರುವುದಕ್ಕೆ ಆಸನಗಳನ್ನಿತ್ತು, ಇಂತೆಂದನು—"ಮಹರ್ಷಿಯು ದಿವ್ಯವಾದ ಆಗಮನದಿಂದ ನನ್ನ ಮನೆಯು ಪವಿತ್ರವಾಯಿತು, ನಾನು ಕೃತಾರ್ಥನಾದೆನು. ಈಗ ತಾನೇ ನಾನು ತಮ್ಮನ್ನು ನೆನೆದಿದ್ದೆನು. ತಮ್ಮ ಆಶ್ರಮಕ್ಕೆ ತೆರಳಿ, ಈ ಭರತಖಂಡದಲ್ಲಿ ನಾಲ್ಕು ದಿಕ್ಕುಗಳಿಂದಲೂ ಯಾವಯಾವ ಸಂಕಷ್ಟಗಳು ಬಂದೊದಗಿರುವುವೋ ಅವನ್ನು ತಮಗೆ ನಿವೇದಿಸಿ, ಆ ಸಂಬಂದದಲ್ಲಿ ತಮ್ಮ ಅಭಿಪ್ರಾಯವನ್ನು ವಿಚಾರಿಸಬೇಕೆಂದು ನನ್ನ ಮನಸ್ಸಿನಲ್ಲಿ ವಿಶೇಷವಾದ ಆಕಾಂಕ್ಷೆಯಿದೆ."

ಅದನ್ನು ಕೇಳಿ ವ್ಯಾಸಮುನಿಯು ಮದುರವಾದ ಸ್ವರದಿಂದ ಇಂತೆಂದನು—"ಬುದ್ಧಿ ಸಾಗರನಾದ ಶ್ರೀಕೃಷ್ಣನ ಮನಸ್ಸಿಗೆ ಉಪಾಯಗಳೇನೂ ಹೊಳೆಯದೆ, ವ್ಯಾಸನ ಅಭಿಪ್ರಾಯವನ್ನು ಅರಿಯುವುದು ಅಗತ್ಯವೆಂದು ತೋರುವ ಅಂತಹ ಸಂಕಷ್ಟಗಳು ಯಾವವು? ಅವುಗಳ ನಿವಾರಣೆ ಎಂತಹುದೋ? ಅಪಾರವಾದ ಅಗಾಧವಾದ ಸಾಗರವು ಒಂದು ಚಿಕ್ಕ ಕೆಸರು ಕುಂಟೆಯಿಂದ ನೀರನ್ನಿಂಟಲು ಎಳಸುವುದೇನು? ಒಂದು ಕಾಡು ಕೋಣವನ್ನು ನೋಡಿ ಬಡ ಹುಲ್ಲೆಯು ಬೆದರಿತೆಂದರೆ, ಸಿಂಹವೇನು ಹಾಗೆ ಅಳುಕುವುದೇ?"

ಆಗ್ಗೆ ಕೃಷ್ಣನು—"ಈ ಭಾರತ ಭೂಮಿಯ ಅದೃಷ್ಟವೆಂಬ ಆಕಾಶದಲ್ಲಿ ಮೋಡಗಳು ಮೆಲ್ಲಮೆಲ್ಲನೆ ಸುಳಿಯಲಾರಂಭಿಸಿಯವೆ. ಆ ಮೋಡಗಳೆಲ್ಲವೂ ಯಾವೆಡೆಯಲ್ಲಿ ಒಟ್ಟುಗೂಡುವವು, ಅಥವಾ ಒಂದನ್ನೊಂದು ಭರದಿಂದ ತಾಗಿ, ಅಪ್ಪಳಿಸಿ ಯಾವಾಗ ಯಾವ ಮುಹೂರ್ತದ ಅನರ್ಥವು ಸಂಭವಿಸೀತೆಂಬುವದನ್ನು ಹೇಳಲಾಗುವುದಿಲ್ಲ; ಜರಾಸಂಧ, ಶಿಶುಪಾಲ, ಜಯದ್ರಥ ಮೊದಲಾದ ಅನೇಕ ಅರಸರು ಯುದ್ಧಕ್ಕೆ ಹವಣಿಸುತ್ತಲಿರುವರು. ಅವರು ಈ ದ್ವಾರಕಾ ನಗರವನ್ನು ಸಮುದ್ರದಲ್ಲಿ ಅದ್ದುಬಿಡುವರು, ಮತ್ತು ಸರ್ವತ್ರ ಭರತಖಂಡದಲ್ಲಿ ಎಲ್ಲೆಲ್ಲಿಯೂ ತಮ್ಮ ಸೈನ್ಯಗಳನ್ನು ಪಸರಿಸಿ, ದೊಡ್ಡ ಕಲಹಗಳನ್ನುಂಟುಮಾಡುವರು. ಇದರಿಂದ ಭಾರತ ಕೇಂದ್ರವು ಭ್ರಷ್ಟವಾಗುವುದು, ಮತ್ತು ತಮ್ಮತಮ್ಮ ಕಕ್ಷೆಗಳಿಂದ ಹೊರಬಿದ್ದ ಗ್ರಹಗಳಂತೆ, ಸರ್ವ ರಾಜ್ಯಗಳು ಒಂದನ್ನೊಂದು ತಗಲುವವು. ಈ ಸಮಯದಲ್ಲಿ ಯಾವ ಅನರ್ಥಗಳಲ್ಲವು ಉಂಟಾಗುವುವೆಂಬುದನ್ನು ಊಹಿಸಲಾಗುವುದಿಲ್ಲ. ಸಾಧುಗಳಿಗೆ ದುರ್ದಶೆಯು ಬರುವುದು, ದುಷ್ಟರು ಪ್ರಬಲರಾಗುವರು, ಮತ್ತು ದರ್ಮವು ನಾಶವಾಗುವುದು. ಈಯೆಲ್ಲ ಸಂಕಟಗಳನ್ನು, ಒಂದು ಕಲ್ಲಿನ ಮೂರ್ತಿಯಂತೆ ಸ್ವಸ್ಥವಾಗಿ ಕುಳಿತು ನಾನು ನೋಡುತ್ತಿರಲೇನು?"

ವ್ಯಾಸನು—"ಕೃಷ್ಣಾ, ನೀನು ಒಂದು ಕಡೆಯ ವಿಷಯವನ್ನೇನೋ ಬಣ್ಣಿಸಿದೆ. ಮತ್ತೊಂದು ಕಡೆಯ ಚಿತ್ರವಾದರೋ ಇದಕ್ಕಿಂತ ಭಯಾನಕವಾಗಿದೆ. ಚಕಿತಳಾದ ಹರಿಣಿಯೋಪಾದಿಯಲ್ಲಿ ಕೊರಳನ್ನು ಮೇಲಕ್ಕೆತ್ತಿ, ಕಿವಿಯನ್ನು ನಿಗುರುತ್ತ, ಗೃಹವಾಸಿಗಳಾದ ಬ್ರಾಹ್ಮಣರೂ ವನವಾಸಿಗಳಾದ ಋಷಿಗಳೂ ನಿನ್ನ ಪ್ರತಿಯೊಂದು ಕೃತ್ಯವನ್ನು ಸಮೀಕ್ಷಿಸುತ್ತಲಿರುವರು. ರಾಜ್ಯದಲ್ಲಿ, ಸಮಾಜದಲ್ಲಿ ಮತ್ತು ದರ್ಮದಲ್ಲಿ ನೀನೊಬ್ಬನೇ ಎಲ್ಲಾ ಗಲಭೆಯನ್ನುಂಟುಮಾಡುತ್ತಿರುವೆಯೆಂದು ಅವರಿಗೆ ಭೀತಿಯುಂಟಾಗಿಯದೆ. ಅವರು ಹೇಳುವ ಮೇರಗೆ, ಸರ್ವ ಅನರ್ಥಗಳಿಗೆ ನೀನೇ ಕಾರಣವಾಗಿರುತ್ತೀ!"

ಅದನ್ನು ಕೇಳಿ ಕೃಷ್ಣನು ನಕ್ಕು ಇಂತೆಂದನು—"ಸರ್ವ ಅನರ್ಥಗಳಿಗೆ ಕಾರಣವು ನಾನೇ? ವೈದಿಕ ದರ್ಮದಲ್ಲಿ ಸೃಷ್ಟಿಯ ಸರಳವಾದ ಮತ್ತು ಸುಂದರವಾದ ಆರಾಧನೆಯು ಪ್ರಶಂಸಿಸಿಯದೆ. ಬಾಲ್ಯದಲ್ಲಿಯ ಸರಳವಾದ ಹೃದಯದ ಸಾಹಜಿಕವಾದ ಪ್ರವಾಹವನ್ನು ಪಲ್ಲಟಮಾಡಿ, ಅದರ ಸ್ಥಾನದಲ್ಲಿ ಪೈಶಾಚಿಕವಾದ ಯಜ್ಞಗಳನ್ನು ಯಾರು ಸ್ಥಾಪಿಸಿದರೋ ಅವರೇ ಈ ಅನರ್ಥಗಳಿಗೆ ಕಾರಣಭೂತರಲ್ಲವೇ? ಉತ್ತರ ದ್ರುವ ಸಾಗರದ ನೆರೆಯಲ್ಲಿರುವ ಆರ್ಯರ ಮೂಲಸ್ಥಾನವಾದ ಪವಿತ್ರವಾದ ಉತ್ತರ ಕುರು ಪ್ರಾಂತದಿಂದ ವೇದಗಳ ಮಂತ್ರಗಳನ್ನು ಪಠಿಸುತ್ತ, ನಮ್ಮ ಪೂರ್ವಜರು ಯಾವ ಕಾಲದಲ್ಲಿ ದಕ್ಷಿಣದ ಪಥವನ್ನು ಹಿಡಿದು ಈ ದೇಶಕ್ಕೆ ಬಂದರೋ ಆ ಕಾಲದಲ್ಲಿ, ಈಗ ಪಾಟಿಕೆಯಲ್ಲಿರುವ ಈ ಜಾತಿ ವಿಭಾಗವು ನಾಲ್ಕು ಜಾತಿಗಳು ಮುಂತಾದವೆಲ್ಲವು ಇದ್ದವೇ? ಆ ಕಾಲದಲ್ಲಿ ಕೆಲವರು ಶಾಸ್ತ್ರಗಳನ್ನು ಓದುತ್ತ ಸ್ವಾಧ್ಯಾಯದಲ್ಲಿ ನಿರತರಾದರು, ಬೇರೆ ಕೆಲವರು ಶಸ್ತ್ರಗ್ರಹಣ ಮಾಡಿ ಧನುರ್ವಿದ್ಯೆಯೇ ಮೊದಲಾದ ವೀರ ಕಲೆಯನ್ನು ಕಲಿತು ನಿಪುಣರಾದರು. ಇನ್ನು ಕೆಲವರು ಗದ್ದೆಗಳನ್ನು ಕಟ್ಟಿಕೊಂಡು ಬೇಸಾಯವನ್ನು ಮಾಡಿದರು, ಮತ್ತು ಕಡಿಮೆಯುವರೆಲ್ಲರು, ಈ ಯಾವ ಕಾರ್ಯಗಳನ್ನು ಕೈಕೊಳ್ಳಲು ಮಾನಸಿಕ ಶಕ್ತಿಯು ಸಾಲದೆ, ಅನ್ಯರ ಸೇವಾ ವೃತ್ತಿಯಲ್ಲಿ ಪ್ರವೃತ್ತರಾಗಿ ಉದರ ನಿರ್ವಾಹವನ್ನು ಮಾಡಿದರು. ಇವರಲ್ಲಿ ಶಾಸ್ತ್ರಾಧ್ಯಾಯಿಗಳ ಕಾರ್ಯವು ಮಾನಸಿಕವಾದುದರಿಂದ, ಇವರು ಸಮಾಜದ ಮಾನಸಿಕ ವಿಚಾರಗಳ ಸ್ಥಾನವಾದ ಮಸ್ತಕವಾದರು, ಶಸ್ತ್ರಗ್ರಾಹಿಗಳು ಪರಾಕ್ರಮದ ಸಾಂಕೇತಿಕವಾಗಿ ರಾಷ್ಟ್ರದ ಬಾಹುಗಳಾದರು, ಕ್ಷೇತ್ರವನ್ನು ಉತ್ತು, ಬೀಜವನ್ನು ಬಿತ್ತಿ ಫಲೋತ್ಪತ್ತಿಯಲ್ಲಿ ಆಸಕ್ತರಾದವರು—ಆ ಫಲೋತ್ಪತ್ತಿ ಸ್ಥಾನದ ಸಂಕೇತದಿಂದ ಸಮಾಜದ ಊರುಗಳೆಂದು ಬಗೆಯಲ್ಪಟ್ಟರು, ಸೇವಾವೃತ್ತಿಯಲ್ಲಿ ತತ್ಪರರಾದವರು ಸೇವೆಯ ಚಿಹ್ನವಾಗಿ ರಾಷ್ಟ್ರದ ಕಾಲಡಿಗಳೆಂದು ಸಂಬೋಧಿಸಲ್ಪಟ್ಟರು. ಆ ಕಾಲದಲ್ಲಿ ಜಾತಿಭೇದಗಳಿದ್ದವೇನು? ಆದ್ದರಿಂದ, ಯಾರು ಒಂದೇಯಾಗಿರುವ ರಾಷ್ಟ್ರವನ್ನು ಖಂಡಶಃ ವಿಭಾಗಿಸಿ ನಾಲ್ಕು ತುಂಡುಗಳನ್ನು ಮಾಡಲು ಪ್ರಯತ್ನಿಸುವರೋ ಅವರಲ್ಲವೇ ಈ ಎಲ್ಲ ಅನರ್ಥಕ್ಕೆ ಕಾರಣಭೂತರು? ಯಾರು ವ್ಯಾಸನನ್ನು ಬ್ರಾಹ್ಮಣನೆನ್ನಲು ಒಪ್ಪಲಾರರೋ, ಯಾರು ಕರ್ಣನಂತಹ ವೀರನನ್ನು ಕ್ಷತ್ರಿಯನೆಂದು ಮನ್ನಿಸಲಾರರೋ, ಯಾರು ಕ್ಷತ್ರಿಯರಿಗೆ [illegible] ಸನೇ ಮೊದಲಾದ ವಿದ್ಯೆಗಳನ್ನು ಕಲಿಸಲಾರರೋ, ಯಾರು ವೈಶ್ಯರಿಗೆ [illegible] ವನ್ನು ಸಂಪಾದಿಸಲು ಬಿಡಲಾರರೋ, ಮತ್ತು ನಮ್ಮ [illegible]

ಕೀರ್ತಿ-ಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ ೬ ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು, ದ. ಕ

[illegible] ಮೂಲ ನಿವಾಸಿಗಳನ್ನು ಯಾರು ಕ್ಷುದ್ರ [illegible] ದಾಸ್ಯವನ್ನು ಮಾಡಿಸುವರೋ, ಅವರೇ ಈ ಎಲ್ಲ ಅನರ್ಥಗಳ ಕಾರಣವಲ್ಲವೇನು?

(ಮುಂದೆ ಸಾಗುವುದು)

ಎರಡು ದಾರಿಗಳು.

—o—

1. ನವ ಸಂವತ್ಸರದ ರಾತ್ರಿ. ಹಗಲೆಲ್ಲವು ಅವಿರತವಾದ ಪರಿಶ್ರಮವನ್ನು ಗೈದು ದಣಿದಿರುವ ಭೂಮಾತೆಯು ಈಗ ನಿದ್ದೆಹೋಗುತ್ತಲಿದ್ದಳು. ಅಲ್ಲಲ್ಲಿರುವ ಮರಗಳ ಪೊಟ್ರೆಯಿಂದ ರೀ ಎಂದು ಶಿಳ್ಳು ಹಾಕುತ್ತಲಿದ್ದ ಕೀಟಗಳು ಈಗ ಗಂಟಲೂಣಗಿ ಸ್ತಬ್ಧವಾಗಿದ್ದುವು. ನಕ್ತಂಚರಗಳಾಗಿರುವ ಗೂಬೆ ಮೊದಲಾದವುಗಳು ತಮ್ಮ ಹಿಂಸ್ರ ಕೃತ್ಯಗಳಿಂದ ಈಗ ತಾನೇ ನಿವೃತ್ತರಾಗಿ, ತಮ್ಮ ತಾಯಿಯ ವಿಶಾಲವಾದ ಉಡಿಯಲ್ಲಿ ಆರಾಮ ಹೊಂದುತ್ತಲಿದ್ದುವು. ಎಲ್ಲೆಲ್ಲಿಯೂ ಶಾಂತ ನೀರವ, ನಿಷ್ಪಂದ. ಅಂತಹ ರಾತ್ರಿಯಲ್ಲಿ ತನ್ನ ಮನೆಯ ಒಂದು ಕಿಟಕಿಯ ಬಳಿಯಲ್ಲಿ—ಆಕಾಶದ ನಿಲುಗನ್ನಡಿಯು ಎದುರಲ್ಲಿ ಕಟ್ಟಿದಂತೆ ತೋರುವ ಆ ಕಿಟಕಿಯ ಒಳಿಯಲ್ಲಿ—ವಯಸ್ಸು ಮೀರಿರುವ ಒಬ್ಬ ಮನುಷ್ಯನು ನಿಂತಿದ್ದನು. ಅವನ ಮೊರೆಯಲ್ಲಿ ಅನೇಕ ಮಡಿತೆಗಳಿಂದ ಮನೋವ್ಯಥೆಯನ್ನು ಬರೆದಂತಿತ್ತು. ಆತನು ದು[illegible] ಕೀ[illegible]ಲುವ ತನ್ನ ಕಣ್ಣುಗಳನ್ನು ಪ್ರಯತ್ನದಿಂದ ಮತ್ತು ಆಯಾಸದಿಂದ ಮೇಲಕ್ಕೆತ್ತಿ [illegible] ರವಾದ ನೀಲವಾದ ಆಕಾಶದ ಕಡೆಗೆ ನೋಡಿದನು. ಆ [illegible] ನೀಲವಾದ ಆಕಾಶದಲ್ಲಿ ಅಸಂಖ್ಯ ನಕ್ಷತ್ರಗಳು ಮಿನುಗುತ್ತ, ತಿ[illegible] ತುಂ[illegible] ಅಗಾಧವಾದ ನಿಷ್ಕಂಪವಾದ ಸರೋವರದ ನೀಲವಾದ ನೀರ[illegible] ನೂರಾರು ಬಿಳಿ ನೈದಿಲೆಗಳು ಮಂದ ಮಂದವಾಗಿ ಅಲುಗುತ್ತ ತೇಲುತ್ತಿರುವವೋ ಎಂಬಂತೆ ತೋರುತ್ತಲಿದ್ದವು. ಆಕಾಶವನ್ನು ದಿಟ್ಟಿಸುತ್ತ ಸೋತ ಕಣ್ಣುಗಳನ್ನು ಆತನು ಬೋ[illegible] ಕಡೆ[illegible] ತಿರುಗಿಸಿದನು. ಆತನಿಗಿಂತ ಹತಾಶರಾದ ಕೆಲವು ಮಂದಿ ಈ[illegible] ತಮ್ಮ [illegible] ವ[illegible] ಧಿಯ ಕಡೆಗೆ ನಡೆಯುತ್ತಿದ್ದರು. ಆ ಅವಧಿ ಯಾವುದು? ಕಾ[illegible] (ಸ್ಮಶಾನ)

2. ಆತನ ಜೀವನ ಯಾತ್ರೆಯಲ್ಲಿ [illegible] ದಿದ್ದುವು. ಮತ್ತು ಆತನು ನೆರವೇರಿಸಿರುವ [illegible] ದೋಷಗಳನ್ನು ಮತ್ತು ಅನುತಾಪವನ್ನು ಮಾತ್ರ ಸಂಪಾದಿಸಿದ್ದನು. ಆತನ [illegible] ಕುಂದಿಹೋಗಿತ್ತು, ಮನಸ್ಸು ಬರಿದಾಗಿ ಶೂನ್ಯವಾಗಿತ್ತು. ಹೃದಯವು [illegible] ತ್ತಿತ್ತು. ಮತ್ತು ಆತನ ವೃದ್ಧಾಪ್ಯಕ್ಕೆ [illegible]

3. ಆತನ ತಾರುಣ್ಯದ ದಿನಗಳಲ್ಲಿವು ಸ್ಪಷ್ಟ [illegible] ನಿಂದವು, ಮತ್ತು ಯಾವ ಸಮಯದಲ್ಲಿ [illegible] ಒಟ್ಟು ಕೂಡುವ ದ್ವಾರದ ಬಳಿಯಲ್ಲಿ ನಿಂದಿರಿಸಿ [illegible] ಟ್ಟನೋ, ಆ ಪವಿತ್ರವಾದ ಮುಹೂರ್ತ [illegible] ಗಳಲ್ಲಿ ಒಂದು ದಾರಿಯು, ಎಂದು [illegible] ವಾದ ದೇಶ[illegible] ದ್ದಿತು. ಆ ದೇಶದಲ್ಲಿ ಎಲ್ಲೆಲ್ಲಿಯೂ [illegible] ಳಿಂದ ದೇಶವೆಲ್ಲವೂ ಪಚ್ಚೆ [illegible] ಮಲವಾದ ಮತ್ತು ಮಧುರವಾದ ಕಲನಾದವು [illegible] ಧ್ವನಿಸುತ್ತಲಿದ್ದವು. [illegible] ದೇಶವು [illegible] ಸೌಂದರ್ಯಮಯ ಮತ್ತು [illegible] ಗ್ಯಮಯವಾಗಿದ್ದಿತು. ಮತ್ತೊಂದು ದಾರಿಯು ಕತ್ತಲು [illegible] ಒಂದು ಗವಿಯ ಬಾಗಿಲಿಗೆ ಹೋಗಿ ಮುಟ್ಟಿತ್ತಿತು. ಆ [illegible] ತುಂಬಿದ ಹೊಳೆಯು ಹರಿಯುತ್ತಿತ್ತು. ಮತ್ತು ಎಲ್ಲಲ್ಲಿ [illegible] ಟ್ಟುತ್ತ ಸುಳಿಯುತ್ತಿದ್ದುವು.

4. ಆತನು [illegible] ವನ್ನು [illegible] ನರಳುತ್ತ ಇಂತೆಂದನು: "ನನ್ನ ತಾರುಣ್ಯವೇ, ಎಂದು [illegible] ನನ್ನ [illegible] ಮರಳಿ ಬಾ. ನನ್ನ ತಂದೆಯೇ, ಇನ್ನೊಂದು ಬಾರಿ ನನ್ನನ್ನು ಜೀವನದ ದ್ವಾರದಲ್ಲಿ ನಿಂದಿರಿಸು—ನಾನು ಇದಕ್ಕಿಂತ ಶ್ರೇಷ್ಠವಾದ ದಾರಿಯನ್ನು ನನಗೋಸ್ಕರ ಆರಿಸುವೆನು. ಒಂದೇ ಒಂದು ಬಾರಿ ನನ್ನನ್ನು ಜೀವನದ್ವಾರದಲ್ಲಿರಿಸು." ಆದರೆ ಆತನ ತಾರುಣ್ಯದ ದಿನಗಳೂ ಆತನ ತಂದೆಯೂ ಅಳಿದು ವಿಸ್ಮೃತಿಯಲ್ಲಿ ಅಡಗಿಹೋಗಿದ್ದರು.

5. ಆಗ್ಗೆ ಆತನ ಮುಂದೆ ಹಲವು ಉಲ್ಕೆಗಳು (ಕೊಳ್ಳಿಗಳು) ಕೆಸರು ಭೂಮಿಯಲ್ಲಿ ಅಲೆದಲೆದು ಉರಿಯುತ್ತ ಗಾಳಿಯಲ್ಲಿ ಕೆಲಹೊತ್ತು ತೇಲುತ್ತಲಿದ್ದು ಬಳಿಕ ತೋರದೆಹೋದುವು. ಇವೇ ಆತನು ಹಾಳು ಮಾಡಿದ ಜೀವನಕಾಲದಲ್ಲಿಯ ದಿನಗಳು!! ಆಕಾಶದಿಂದ ಒಂದು ತಾರೆಯು ಕೆಳಗೆ ಬಿದ್ದು, ಆ ದಪ್ಪಗಿರುವ ಕತ್ತಲೆಯ ರಾತ್ರಿಯಲ್ಲಿ ಉರುಳಿ ಕೂಡಲೇ ಕಣ್ಮರೆಯಾದುದು ಆತನಿಗೆ ಕಂಡು ಬಂದಿತು. ಅದು ಆತನ ಆತ್ಮದ ಸಂಜ್ಞೆಯಾಗಿದ್ದಿತು! ಅದನ್ನು ನೋಡುತ್ತಲೇ ನಿರರ್ಥಕವಾದ ಅನುತಾಪದ ಅಂಬುಗಳು ಆತನ ಹೃದಯವನ್ನು ನಾಟಿ ನೋಯಿಸತೊಡಗಿದವು.

ಆಗ್ಗೆ ತನ್ನೊಡನೆಯೇ ಜೀವನ ಪಥದಲ್ಲಿ ಕಾಲಿಟ್ಟ ತನ್ನ ಪ್ರೌಢ ವಯಸ್ಸಿನ ಮಿತ್ರರನ್ನು ಆತನು ನೆನೆದನು. ಆತನು ಈ ತನಕ ಕಂಡರಿಯದ ಧರ್ಮದ ಮತ್ತು ಉದ್ಯಮದ ಹಾದಿಗಳಲ್ಲಿ ಅವರು ನಡೆದು, ಖ್ಯಾತಿಗೊಂಡು, ಇಂದು ಈ ನವ ಸಂವತ್ಸರದ ರಾತ್ರಿಯಲ್ಲಿ ರವಷ್ಟಾದರೂ ಕ್ಲೇಶವಿಲ್ಲದೆ ಸುಖಿಗಳಾಗಿದ್ದರು.

6. ನೆರೆಯಲ್ಲಿರುವ ದೇವಾಲಯದ ಶಿಖರದಲ್ಲಿ ನೇತಾಡುವ ಗಂಟೆಯು ಈಗ ಘೋಷಿಸಿತು. ಆ ಮಹಾಸ್ವನವು ದೋಲಾಯಿತವಾಗಿ ಆತನ ಕಿವಿಗಳಲ್ಲಿ ಬೀಳುತ್ತಲೇ ಆತನಿಗೆ ಬಹು ಕಾಲಕ್ಕೆ ಹಿಂದೆ ಜೀವಂತರಾಗಿದ್ದ ತನ್ನ ತಂದೆತಾಯಿಯರ ನೆನಪಾಯಿತು. ತಾನು ನೂರು ಬಾರಿ ಎಂತಹ ತಪ್ಪುಗಳನ್ನು ಮಾಡುತ್ತಲಿದ್ದರೂ, ಎಂತಹ ನಿಷ್ಕಳಂಕವಾದ ಪ್ರೇಮದಿಂದ ಅವರು ತನ್ನನ್ನು ಆಕ್ಕರೆ ಗೈಯುತ್ತಲಿದ್ದರೆಂಬುದು ಆತನ ನೆನಪಿಗೆ ಬಂದಿತು. ಅವರು ತನಗೆ ಕಲಿಸಿಕೊಟ್ಟ ಪಾಠಗಳು, ಮತ್ತು ಅವರು ತನಗೋಸ್ಕರವಾಗಿ ಪರಮಾತ್ಮನಿಗೆ ಅರ್ಪಿಸುತ್ತಲಿದ್ದ ಪ್ರಾರ್ಥನೆಗಳು ಮುಂತಾದವೆಲ್ಲವೂ ಆತನ ಸ್ಮೃತಿ ಪಥವನ್ನು [illegible] ತಡವಿ ದಾಂಟಿದವು. ನಾಚಿಕೆಯಿಂದ, ಅಪಮಾನದಿಂದ ಮತ್ತು [illegible] ಖಿನ್ನನಾಗಿ [illegible] ದಂತಾಗಿ ತನ್ನ ತಂದೆಯು ಯಾವೆಡೆಯಲ್ಲಿರುವನೋ ಆ ದಿವ್ಯವಾದ [illegible] ಲೋಕವನ್ನು ನೋಡಲು ಆತನಿಗೆ ಎದೆಗೂಡಲಿಲ್ಲ. [illegible] ಮಬ್ಬಾದ ಆತನ ಕಣ್ಣುಗಳಿಂದ ತಟತಟನೆ ಅಶ್ರುಧಾರೆ [illegible] ವತ್ತು [illegible] ಬಹು ಪ್ರಯತ್ನದಿಂದ ತನ್ನ [illegible] ಉಚ್ಚಸ್ವರದಿಂದ "ಮರಳಿ ಬನ್ನಿರಿ, ನನ್ನ ಎಳೆಗಾಲದ ದಿನಗಳಿರಾ [illegible] ಈ [illegible] ನನ್ನು ಬಂದು ಸೇರಿರಿ" ಎಂದು ಅರಚಿದನು.

7. [illegible] ತಾರುಣ್ಯವು ಆತನಿಗೆ ಮರಳಿ ಬಂದಿತು. ಈ ತನಕ ಆತ[illegible] ಪೆಲ್ಲವೂ [illegible] ನವಸಂವತ್ಸರದ ರಾತ್ರಿಯಲ್ಲಿ, ಆತನ ವ್ಯಾಕುಲವಾದ ಮನಸ್ಸಿನ [illegible] ಬೇರೆಯಲ್ಲವು. ಅವನು ಇನ್ನೂ ಬಾಲ್ಯವನ್ನು [illegible] ಆತನು ಗೈದ ತಪ್ಪುಗಳೇನೋ ಯಥಾರ್ಥವೇ [illegible] ಇನ್ನೂ ತನ್ನೊಡನೆ ಪುಣ್ಯ ಕರ್ಮದಲ್ಲಿ ನಿಯೋಗಿಸಲು [illegible] ಕಾಲವು ತನ್ನದಾಗಿಯೇ ಇದೆ, ಎಂಬುವುದನ್ನು ಕಂಡು, ಪರಮಾತ್ಮನ [illegible] ವನ್ನು [illegible] ಸಿದನು. ತಾನು ಇನ್ನೂ ಆ ಕತ್ತಲುಗುಣಿ [illegible] ಹೊಕ್ಕಿಲ್ಲವೆಂದು ಮತ್ತು ಎಲ್ಲಿ ಬಳಿವಿಸಿಲಿನಲ್ಲಿ [illegible] ವಾಗಿ ಬೆಳದಿರುವವೋ ಆ ಶಾಂತವಾದ ಪವಿತ್ರವಾದ [illegible] ಪರಮಾತ್ಮನು ತನಗೆ ಇನ್ನೂ ಅವಕಾಶವನ್ನು ಇಟ್ಟಿರುತ್ತಾನೆ [illegible] ಕೃತಜ್ಞತಾಸ್ತುತಿಯನ್ನುಗೈದು, ಆತನ ದಿವ್ಯ ಚರಣಗಳನ್ನು [illegible] ದಿವ್ಯ ಪಥದಲ್ಲಿ ಕಾಲಿಟ್ಟನು.

8. ತರುಣರಾ, [illegible] ಇದನ್ನು ಧಿಕ್ಕರಿಸದಿರು. [illegible] ಒಂದು ತಡವೆ, ಒಂದು ಭಾಗ್ಯಲಹರಿಯು [illegible] ತಾನು ಸಿದ್ಧನಾಗಿ ಅದನ್ನು ತನ್ನ ಉಪಯೋ[illegible] ಜತನದಿಂದ ತನ್ನ ನೌಕೆಯನ್ನು ನಡೆಯಿಸಿ, ಸಂಸಾರದ [illegible] ದಮವು. ಆದರೆ ಎಷ್ಟೋ [illegible] ತಮ್ಮ ಜೀವನ ಯಾತ್ರೆಯನ್ನೇ ಕೆಡಿಸಿಕೊಳ್ಳು[illegible] ಬಾಗಿಲಲ್ಲಿ ಒಂದು ಬಾರಿ ನಿಲ್ಲಿ[illegible] ಬೀಕರವಾದುದನ್ನು ತೊ[illegible] ಮುಂಚೆಯೇ ಬಹಳ ಜಾಗರೂಕರಾಗಿ [illegible] ನಮ್ಮಲ್ಲಿಲ್ಲದಿದ್ದರೆ, ಆಕ್ಷಣದಲ್ಲಿ [illegible] ಹೇಳಲಾಗದು. ನಮ್ಮ ಕರ್ತವ್ಯ[illegible] ವೃಷ್ಟಿಯಿಂದ ಕಂಡು ಹಿಡಿದೆವೆಂದರೆ, [illegible] ಸ್ವರ್ಗ ಮತ್ತು ಪೃಥ್ವಿ, ಇವು [illegible] ಸೋಪಾನಗಳಾಗಿವೆ. ಆದ್ದರಿಂದ [illegible] ನಮ್ಮ [illegible] ಕಳಂಕವಿಲ್ಲದೆ ನಿಷ್ಕಳಂಕ ಚರಿತ್ರೆಯಿಂದ ನಾವು ನಡೆದರೆ ಸ್ವರ್ಗಕ್ಕೆ ತೆರೆಯುವ ಕದವು ನಮ್ಮ ಇದಿರಲ್ಲಿ ಎಂದಿಗೂ ಮುಚ್ಚಿರದು. ಮುಖ್ಯತಃ [illegible] ಯಲ್ಲಿ, ಮಾನವ ಜಾತಿಯಲ್ಲಿ, ಮತ್ತು ಪರಮಾತ್ಮನಲ್ಲಿ ಚಿರಸ್ಥಾಯಿಯಾದ ವಿಶ್ವಾಸ ಮತ್ತು ಭಕ್ತಿ ಇವುಗಳಿಂದ ಯಾವಾತನ ಅಂತಃಕರಣವು ತುಂಬಿ ತುಳುಕುತ್ತಿರುವುದೋ ಆತನಿಗೆ ಆ ಜ್ಯೋತಿರ್ಮಯವಾದ ಪಥದಲ್ಲಿ ನಡೆಯಲು ಪೂರ್ಣವಾದ ಅಧಿಕಾರವಿರುವುದು. ಮತ್ತು ಆತನ ಹಾದಿಯಲ್ಲಿ ಪರಮಾತ್ಮನು ತಾನೇ ಬೆಳಕು ಚೆಲ್ಲುವನು.

9. ತನ್ನ ಪ್ರಾಯವು ಸಂದಿತು, ತಾನು ಇನ್ನೇನನ್ನು ಮಾಡಲಿ? ಎಂದು ಕರಗದಿರು, ಏಕೆಂದರೆ, ತಮ್ಮಾ, ಪ್ರಾಣವು ಕಂಠಗತವಾಗುವ ತನಕ ಮದ್ದುಗಳನ್ನು ಕೊಡುತ್ತಲೇ ಇರಬೇಕೆಂದು ವೈದ್ಯ ಶಾಸ್ತ್ರದಲ್ಲಿ ಹೇಗೆ ಹೇಳಿರುತ್ತದೆಯೋ, ಹಾಗೆಯೇ ಆ ತನಕ ಪುಣ್ಯವನ್ನು ಮಾಡುವ ಅಧಿಕಾರವೂ, ಅವಕಾಶವೂ ಮನುಷ್ಯನಿಗೆ ಇದೆ ಎಂದು ಧರ್ಮಶಾಸ್ತ್ರದಲ್ಲಿ ಹೇಳಿಯಿದೆ. [illegible] ಯಲ್ಲಿ ಹದಿನೈದು [illegible] ಯಾಗಿ ಎಡನಾಲ್ಕುಗಳಾಗಿ ಹೋದರೂ, [illegible]

...ಯನ್ನು [illegible] ಹಡೆದಿರುವರು. ಹಾಗೆಯೇ ತನ್ನ ಪ್ರಾಯದ ಅಥವಾ ಚೇತ[illegible] ಪಾಪ ಕರ್ಮದಲ್ಲಿ ತೇದುಹೋಯಿತೆಂದು ವೃಥಾ ದುಃಖಿಸದೆ, ಧೈ[illegible] ನಿನ್ನ ಕರ್ತವ್ಯದಲ್ಲಿ ತತ್ಪರನಾಗು. ಒಂದು ಕ್ಷಣಕಾಲದಲ್ಲಿ, ಮ[illegible] ಸ್ವಯತ್ನಿಸಿದರೆ ಎಷ್ಟೋ ಸತ್ಕರ್ಮವನ್ನು ಮಾಡಬಹುದು ನಿಜವಾಗಿ [illegible] ನಿಷ್ಕಳಂಕವಾದ ಮನಸ್ಸಿನಿಂದ ಅನುತಾಪಪಡುವವನ ಹಿಂದಣ ಪಾಪಕೃತ್ಯ[illegible] ದೀವಿಗೆಯನ್ನುರಿಸುತ್ತಲೇ ಕತ್ತಲೆಯು ತೊಲಗಿ ಹೋಗುವಂತೆಯೇ, ಅಳಿದು [illegible] ಮುಖ್ಯವಾಗಿ ಬೇಕಾದುದು—ಭಕ್ತಿ ಮತ್ತು ಸ್ಥಿರಸಂಕಲ್ಪವು ಆ[illegible] ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳಿರುವನು —

ಹತೋವಾ ಪ್ರಾಪ್ಸ್ಯಸಿ ಸ್ವರ್ಗಂ
ಜಿತ್ವಾವಾ ಭೋಕ್ಷ್ಯಸೇ ಮಹೀಮ್ ॥
ತಸ್ಮಾದುತ್ತಿಷ್ಠ ಕೌಂತೇಯ
ಯುದ್ಧಾಯಕೃತ ನಿಶ್ಚಯಃ ॥ (ಗೀತಾ ೨-೩೭)

(ಈ ಯುದ್ಧದಲ್ಲಿ ನೀನು ಕೊಲ್ಲಲ್ಪಟ್ಟರೆ, ನೀನು ವೀರ ಸ್ವರ್ಗವನ್ನು ಹೊಂದುವೆ; ಅಥವಾ ಗೆದ್ದರೆ, ಸಮಗ್ರವಾದ ಭೂಮಿಗ ಒಡೆಯನಾಗುವೆ ಆದ್ದರಿಂದ, ಅರ್ಜುನನೇ, ಯುದ್ಧವನ್ನು ಮಾಡುವರೆ ನಿನ್ನ ಮನಸ್ಸಿನಲ್ಲಿ ನಿರ್ಧರಿಸಿ, ಎದ್ದೇಳು) ನಾವು ಯಾವ ತನಕ ಈ ಮನುಷ್ಯ ಸೃಷ್ಟಿಯಲ್ಲಿರುವೆವೋ, ಆ ತನಕ ನಮಗೆ ಸಹಜ ಜಡನಾದ ಪಾಪ ಪುರುಷನೊಡನೆ ಯುದ್ಧ ಮಾಡುವದಕ್ಕಿರುವುದು. ಆ ಪಾಪ ಪುರುಷನೇ ನಮ್ಮನ್ನು ಭಯಾನಕವಾದ ದಾರಿಯ ಕಡೆಗೆ ಎಳೆಯುತ್ತಿರುವನು. ಆ ಮಾಯಾವಿಯ ದುಷ್ಕರವಾದ ಬಲೆಗಳಲ್ಲಿ ನಾವು ಸಿಕ್ಕಿ ಬೀಳದಂತೆ ನಮ್ಮನ್ನು ನಡೆಯಿಸತಕ್ಕವನು ಪರಮಾತ್ಮನೊಬ್ಬನೇ ಆದ್ದರಿಂದ, ತಮ್ಮಾ ನಮ್ಮ ಹಿರಿಯರಿಂದ ನಮಗೆ ಪರಂಪರಾಗತವಾಗಿ ಬಂದ, ಮತ್ತು ಇಡೀ ಭೂಲೋಕದಲ್ಲಿರುವ ಧರ್ಮಾಂಧಕಾರವನ್ನು ನಿವಾರಿಸಿ ಎಡೆಯೆಡೆಗಳಲ್ಲಿ ಕೂಡಾ ದಿವ್ಯ ಪ್ರಕಾಶವನ್ನು ಬೀರಲು ಸತ್ವವುಳ್ಳ ಯಾವ ನಮ್ಮ ಮಹಾ ಸನಾತನ ಧರ್ಮವಿದೆಯೋ, ಅದರಲ್ಲಿರುವ ನಮ್ಮ ಭಕ್ತಿಯನ್ನು ಇನ್ನೂ ವೃದ್ಧಿ ಮಾಡುವಾ ಮಾತೃ ಭೂಮಿಯನ್ನು ನಾವು ಯಾವ ಶುದ್ಧಾಂತಕರಣದಿಂದ ಆರಾಧಿಸುವೆವೋ, ಅದೇ ಅಂತಃಕರಣದಿಂದ, ಆ ಮಾತೆಯ ಆಧ್ಯಾತ್ಮಿಕ ಪ್ರತಿಕೃತಿಯಾದ ಈ ಧರ್ಮವನ್ನು ಆರಾಧಿಸುವಾ, ಮತ್ತು ಈ ಮಹಾ ಧರ್ಮದ ನಿಯಂತೃವಾದ, ಸೃಷ್ಟಿಸ್ಥಿತಿಲಯಾತ್ಮಕನಾದ ಯಾವ ಶ್ರೀಮನ್ನಾರಾಯಣನೋ, ಆತನನ್ನು ಸ್ವಾರ್ಥದ ನೇಲನ್ನು ಕೂಡ ನಮ್ಮ ಮನಸ್ಸಿನಿಂದ ಹೊರತಳ್ಳಿ, ಅನನ್ಯಭಾವದಿಂದ ಸದಾ ಆರಾಧಿಸುವಾ

———

ಸ್ವದೇಶಾಭಿಮಾನಿಯ ಪಕ್ಷಪತ್ರಿಕೆಯ ಸಂಚಿಕೆಯೊಂದರಲ್ಲಿ ಈ ವಿಷಯವೇ ಪ್ರಕಟಿಸಲ್ಪಟ್ಟದ್ದರಿಂದ ಲೇಖಕರ ಈ ವಿಷಯವನ್ನು ಲೇಖನದ ವಿವರವಾಗಿ ಟೀಕಿಸಿ ಬರೆದಿರುವದರಿಂದ ವಾಚಕರ ಅವಗಾಹನೆ ಬಗ್ಗೆ ಇದನ್ನು ಪ್ರಕಟಿಸಿರುವೆವು.

ವಿದೇಶ ವೃತ್ತಾಂತ

—o—

ಗಿಡ್ಡಾದ ಮನುಷ್ಯರ ಯಾ ಗುಜ್ಜಾರಿಗಳ ಕೋಂಗ್ರೆಸ್ ಸಭೆಯು ಲಂಡನ್ ನಗರದ ಒಲಂಪಿಯಾ ಎಂಬಲ್ಲಿ ತೆರೆಯಲ್ಪಡುವುದು. ೧೫೦ ಗುಜ್ಜಾರಿಗಳು ಈ ಸಭೆಯನ್ನು ಅಲಂಕರಿಸಿರುವರು. ಇವರಬಗ್ಗೆ ಸಣ್ಣದೊಂದು ಹಳ್ಳಿಯು, ಚಿಕ್ಕಚಿಕ್ಕ ದೇವಾಲಯಗಳಿಂದಲೂ, ಅಂಗಡಿಗಳಿಂದಲೂ ನಾಟಕಶಾಲೆಗಳಿಂದಲೂ ತಯ್ಯಾರಿಸಲ್ಪಡುವುದು

~~~~~

ಅನನ್ ಎಂಬ ದೇಶದ ರಾಜರು ತನ್ನ ದ್ರವ್ಯವನ್ನು ಕಳ್ಳರು ಮೊದಲಾದವರ ಬಾಧೆಯಿಂದ ಸುರಕ್ಷಿತಪಡಿಸುವ [illegible] ನವೀನ ವಿಧಾನದಲ್ಲಿ ಜೋಪಾಸನೆಯಲ್ಲಿಟ್ಟಿರುವರು [illegible] ಡುತ್ತಿರುವರು. ಸಾಗುವಾನಿ ಮರದ ಕೆಲವು ಕೊರಡುಗಳನ್ನು ತರಿಸಿ ಅವುಗಳಲ್ಲಿ ದೊಡ್ಡ ರಂದ್ರಗಳನ್ನು ತೋಡಿ, ಈ ರಂಧ್ರಗಳಲ್ಲಿ ತಮ್ಮ ದ್ರವ್ಯವನ್ನೆಲ್ಲಾ ಹಾಕಿ ರಂದ್ರಗಳನ್ನು ಹಾಗೆಯೇ ಮುಚ್ಚಿಬಿಟ್ಟು ಮರದ ಕೊರಡುಗಳನ್ನು ಈ ಕೊಳದಲ್ಲಿ ಹಾಕಿಟ್ಟಿರುವರು ಕೋಳಕ್ಕೆ ಕಳ್ಳರಾಗಲೀ ಬೇರೆ ಯಾವ ಜಂತುವಾಗಲೀ ಇಳಿಯದಂತೆ ಕೆಲವು ಮೊಸಳೆಗಳನ್ನು ಕೊಳದಲ್ಲಿ ಸಾಕಿಟ್ಟಿರುವರು ಮೊಸಳೆಗಳು ಯಾವಾಗಲೂ ಜಾಗ್ರದವಸ್ಥೆಯಲ್ಲಿರುವಂತೆ ಇವುಗಳಿಗೆ ಹೊಟ್ಟೆತುಂಬ ಆಹಾರ ಕೊಡದೆನೇ ಸಾಕುತ್ತಿರುವರು ಇಂತಹ ಜೋಪಾಸನೆಯ ವಿಧಾನವು ಬಹಳ ತೋದ್ಯವಾದದ್ದೇ ಸರಿ.

~~~~~

ಇತ್ತಲಾಗೆ ಅಂಗ್ಲಾಳದಲ್ಲಿ ಗತಿಸಿದ ಹಿಂದೂಸ್ಥಾನದ ಮಾಜಿ ವ್ಯಾಸರಾಯ ರಿಪನ್ ಪ್ರಭುಗಳ ವಿಲ್ಲಾಮೆಯಲ್ಲಿ ೧೨೫,೦೦೦ಪವನುಗಳಷ್ಟು ದ್ರವ್ಯಸಂಚಯವು ತೋರಿಸಲ್ಪಟ್ಟಿರುವುದು.

~~~~~

ರುಶ್ಯದೇಶದ ಉತ್ತರ ಕೊಕಸಿಯಾದಲ್ಲಿರುವ ರೈಲ್ವೆಗಳನ್ನು ನಡಿಸುವಳೆಯೂ ಉತ್ತರ ಕೊಕಸಿಯಾದಲ್ಲಿರುವ ಕಾಡುಖನಿಜಗಳ ಉತ್ಪತ್ತಿಯನ್ನು ಅನುಭವಿಸುವರೆ ಬಿಟ್ಟರೆ ೩ ಮಿಲಿಯ ಪವನುಗಳನ್ನು ಕೊಡುವೆವೆಂಬದಾಗಿ ಬ್ರಿಟಿಷ್ ಶ್ರೀಮಂತರಲ್ಲಿ ಕೆಲವರು ಒಪ್ಪಿರುವರಂತೆ

~~~~~

ಪೌವಾತ್ಯರ ದೇಶಭಾಷೆಗಳನ್ನು ಅಂಗ್ಲಾಳದಲ್ಲಿ ಕಲಿಸುವದು ಅಗತ್ಯವೆಂತ ಸೂಚಿಸಿದ ಈ ವಿಷಯವಾಗಿ ನೇಮಿಸಲ್ಪಟ್ಟ ಕಮ್ಮಿಟಿಯವರ ನಿರ್ಣಯಗಳನ್ನು ಜ್ಯಾರಿಗೆ ತರುವ [illegible] ಮಾಡಿರುವದೆಂದು ಬ್ರಿಟಿಷ್ ಪ್ರ[illegible] ಮೊದಲಾದ [illegible] ಡ್ನೆಲ್ ಪ್ರಭುಗಳು ವಿಚಾರಿಸಿದರು ಈ ಬಗ್ಗೆ ಬೇಕಾದ ೭,೦೦೦ ಪವನುಗಳ ದ್ರವ್ಯ ಸಹಾಯವನ್ನು ಸಂಗ್ರಹಿಸುವುದು ಕಷ್ಟಸಾಧ್ಯವಾದ್ದರಿಂದ ಈ ವರೆಗೆ ಕಮಿಟಿಯವರ ಸೂಚನೆಗಳ ಪೂರ್ಣ ಜಾರಿಯು ಆಗಲಿಲ್ಲವೆಂತ ತೋರುತ್ತದೆ ಸಾಮ್ರಾಜ್ಯದ ಬಂಡಾರದಿಂದ ಈ ಉದ್ದಿಷ್ಟಕ್ಕೆ ೬,೦೦೦ ಪವನುಗಳು ದೊರಕುವದಾದರೂ ಲಂಡನ್ ಯೂನಿವರ್ಸಿಟಿಯವರೂ ಇಂಡಿಯಾ ಗವರ್ನಮೆಂಟಿನವರೂ ಬಿಟ್ಟಿನಲ್ಲಿ ಇದಕ್ಕೆ ಬೇಕಾದ ಪವನನ್ನು ತಮ್ಮ ಖಜಾನೆಗಳಿಂದ [illegible] ಅಸಾಧ್ಯವೆಂತ ಆಕ್ಷೇಪಿಸುವಪಟ್ಟಿರುವರು

ಕರ್ಜನ್‌ಪ್ರಭುಗಳು ಈ [illegible] ಸಾಮ್ರಾಜ್ಯಕ್ಕೆ ಅತ್ಯಗತ್ಯವಾದ್ದರಿಂದ ಮೊರ್ಲೆಪ್ರಭುಗಳು ಸಾಮ್ರಾಜ್ಯ ಬಂ[illegible] ಪ್ರಯತ್ನಿಸಬೇಕೆಂದು ಅಪ್ಪಣೆ ಕೊಟ್ಟಿದ್ದಲ್ಲದೆ, ಹಿಂದೂಸ್ಥಾನದಲ್ಲಿರುವ ಅಂಗ್ಲೇಯ ಸೇನಾಧಿಕಾರಿಗಳು ಸ್ಥಾನಿಕ ದೇಶಭಾಷೆಯನ್ನು ಕಲಿಯುವ ಅವಶ್ಯಕತೆ ಇರುವುದೆಂದು ಸೂಚಿಸಿ ವ್ಯಾಸರಾಯರು ಸಹಾ [illegible] ಕರತಲ್ಲಿ ಅಲ್ಲ[illegible]ನಾಗುವುದೆಂದು ವ್ಯಕ್ತಪಡಿಸಿದರು

ಮೋರ್ಲೆಪ್ರಭುಗಳು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವಾಗಿ ಹಿಂದೂಸ್ಥಾನದಿಂದ ೭,೦೦೦ ಪವನುಗಳಿಗಿಂತ ಹೆಚ್ಚಿಗೆ ಕೊಡಿಸುವುದು ಯುಕ್ತವಲ್ಲವೆಂತಲೂ, ಅದರ ಕೂಡನೆ ಈ ದ್ರವ್ಯಸಹಾಯವು ಹಿಂದೂಸ್ಥಾನದ ವಕ್ಷಿಗೆ ಈ ಮಾರ್ಪಾಟಿನ ಉದ್ದಿಶ್ಯವನ್ನು ನೆರವೇರಿಸಲು ಸಾಕಾಗಿರುವುದೆಂತಲೂ ಅಜ್ಞಾಪಿಸಿದರು ಪೌವಾತ್ಯದೇಶಭಾಷಾ ಪ್ರಯೋಜನವು ಅಂಗ್ಲಾಳದ ವ್ಯಾಪಾರಿಗಳ ಮೊದಲಾದವರಿಗೆ ಅಗತ್ಯವಾದ್ದರಿಂದ ಮೆಂಚೆಸ್ಟರ್ ಮೊದಲಾದ ಇತರ ಕಡೆಗಳಲ್ಲಿರುವ ವ್ಯಾಪಾರಿಗಳು ದ್ರವ್ಯಸಹಾಯವನ್ನು ಕೊಡಬೇಕಾಗಿ ಸೂಚಿಸಿದರು ಹಿಂದೂಸ್ಥಾನದ ದೇಶಭಾಷೆಗಳನ್ನು ಆಂಗ್ಲೇಯರು ಕಲಿಯುವ ಅವಶ್ಯಕತೆಯನ್ನು ತೋರಿಸಿಕೊಟ್ಟು, ಹಿಂದೂಸ್ಥಾನದ, ಮತ, ಆಚಾರ, ಪದ್ಧತಿಗಳ ವಿಷಯ ಸಹಾ ಬೇಕಾದ ಮಾಹೀತಿಯನ್ನು ಪಡಿಯುವುದು ಯುಕ್ತಿಯುಕ್ತವಾಗಿರುವದೆಂತ ಈ ಸಂದರ್ಭದಲ್ಲಿ ಹೇಳಿರುವರು. ಈ ಮಾರ್ಪಾಟಗಳ ಜಾರಿ ಬಗ್ಗೆ ತಕ್ಕ ದ್ರವ್ಯ ಸಂಗ್ರಹವನ್ನು ಮಾಡಲಿಕ್ಕೂ ಇಂತಹ ಮಾರ್ಪಾಟವನ್ನು ಜ್ಯಾರಿಗೆ ತರುವ ರೀತಿಯನ್ನು ಪರ್ಯಾಲೋಚಿಸಲಿಕ್ಕೂ ಒಂದು ಕಮಿಟಿಯನ್ನು ಏರ್ಪಡಿಸಬೇಕಾಗಿ ಸೂಚಿಸಿದ್ದರು. ಇಲ್ಲಿಗೆ ಇದರ ಪ್ರಸ್ತಾಪವು ಮುಗಿಯಿತು.

~~~~~

ಅಂಗ್ಲಾಳದಲ್ಲಿ ಪಾರ್ಲಿಮೆಂಟ್ ಸಭೆಯ ಮೆಂಬರು [illegible]ನ ಮೊದಲಾದ [illegible]

[illegible] ಆಶಾಬಂಗರಾಗಿ ಅನೇಕ ಅನರ್ಥಗಳನ್ನುಂಟು ಮಾಡಿದ ಸ್ತ್ರೀಯರನ್ನು ಕಾರಾಗ್ರಹದಲ್ಲಿಟ್ಟಿರುವರು ಈ ಸ್ತ್ರೀ ಬಂದಿವಾನರು ಆಹಾರವನ್ನು ಬಂಧಿಸ್ವಾದರೂ ತಕ್ಕೊಳ್ಳುವರೆ ತಿರಸ್ಕರಿಸುವುದರಿಂದ ಅವರಿಗೆ ಬಾಯಿಂದಲ್ಲದೆ ಬೇರೆ ವಿಧಾನಗಳಿಂದ ಆಹಾರ ಕೊಡಲು ಪ್ರಯತ್ನಿಸುತ್ತಿರುವರು.

~~~~~

ಕಿಚ್ಚನರ್ ಪ್ರಭುಗಳು ಹೊಂಕೊಂಗಿಗೆ ಬಂದಿಳಿದು ಅಲ್ಲಿಯ ಗವರ್ನರರ ಅತಿಥಿಗಳಾಗಿರುವರು

~~~~~

ಮಿ| ಆರ್ಥರ್ ಲಿಂಚ ಎಂಬವರು 'ವೆಸ್ಟ್‌ಕ್ಲೇರ್' ಎಂಬದರ ಪ್ರತಿನಿದಿಗಳಾಗಿ ಪಾರ್ಲಿಮೆಂಟು ಸಭೆಗೆ ಚುನಾಯಿಸಲ್ಪಟ್ಟು ಕಳದ ತಿಂಗಳ ೭ನೇ ತಾರೀಕಿನಲ್ಲಿ ಪಾರ್ಲಿಮೆಂಟು ಸಭೆಯಲ್ಲಿ ಹಾಜರಾಗಿರುವರು ಮರಣ ದಂಡ[illegible] ಪಾರ್ಲಿಮೆಂಟು ಸಭೆಗೆ ಚುನಾಯಿಸಲ್ಪಟ್ಟಿರುವನೆಂಬದಾಗಿ ಅಂಗ್ಲಾಳದಲ್ಲಿ ಹಲವು ಪತ್ರಗಳು ಇವರ ಪಾರ್ಲಿಮೆಂಟು ಸಭೆಯ ಮೆಂಬರುತನದ ವಿಷಯವನ್ನು ಟೀಕಿಸುತ್ತಿರುವವು ಪ್ರಕೃತ ಹಿಂದೂಸ್ಥಾನದಲ್ಲಿ ಜಾರಿಗ ಬರತಕ್ಕಿರುವ ಮಾರ್ಪಾಟು ಹೊಂದಿದ ನ್ಯಾಯವಿಧಾಯಕ ಸಭೆಗಳಿಗ ೧೮೫೮ನೇ ಇಸವಿಯ ಅಕ್ಟು ಮೇರೆಗೆ ಗಡಿಪಾರು ಮಾಡಲ್ಪಟ್ಟವರನ್ನು ಪ್ರತಿನಿದಿಗಳಾಗಿ ಚುನಾಯಿಸಬಹುದೋ ಎಂಬ ಪ್ರಶ್ನೆಗೆ ಮಿ| ಆರ್ಥರ್ ಲಿಂಚರವರ ಸಮಾಚಾರವನ್ನು ಕೇಳಿದ್ದಲ್ಲಿ ತಕ್ಕ ಸಮಾಧಾನವು ದೊರಕುವುದು

ಮಿ| ಆರ್ಥರ್ ಲಿಂಚರವರು ಗ್ರಂಥರಚನೆ, ಪತ್ರರಚನೆ ಮೊದಲಾದವುಗಳಲ್ಲಿ ಪಾಂಡಿತ್ಯ ಹೊಂದಿದ ಯೋಧರಾಗಿರುವರು ಇವರು ದಕ್ಷಿಣ ಆಫ್ರಿಕದಲ್ಲಿ ಬೋಯರರಿಗೂ ಬ್ರಿಟಿಷರಿಗೂ ಆದ ಯುದ್ಧದಲ್ಲಿ ಬೂರರ ಕಡೆಯಿಂದ ಒಂದು ಪಾಯದಳದ ಚಿಕ್ಕಾಫೀಸರರಾಗಿ ಅಂಗ್ಲಾಳದ ವೈರಿಗಳಾಗಿ ಕಾದಾಡಿದರು ಯುದ್ಧವು ಮುಗಿದ ಬಳಿಕ ಇವರು ಅಂಗ್ಲಾಳಕ್ಕೆ ಹಿಂತಿರುಗಿದ ಕೂಡಲೇ ಇವರನ್ನು ರಾಜದ್ರೋಹದ ತಪ್ಪಿನ ಮೇಲೆ ಕೈದುಮಾಡಿ ಮರಣ ದಂಡನೆಯನ್ನು ಇವರಿಗೆ ವಿಧಿಸಿದರು ಆದರೆ ಈ ಮರಣ ದಂಡನೆಯು ನಂತರ ಮರಣಾಂತ್ಯದ ವರೆಗಿನ ಟಾಪು ಶಿಕ್ಷೆಗ ಬದಲಾಯಿಸಲ್ಪಟ್ಟಿತು. ೧೯೦೪ನೇ ಇಸವಿಯಲ್ಲಿ ಇವರನ್ನು ಕೆಲವು ನಿಬಂಧನೆಗಳಿಗನುಗುಣವಾಗಿ ನಡಿಯುವ ಶರ್ತದ ಮೇಲೆ ಈ ಶಿಕ್ಷೆಯಿಂದ ಸಹಾ ವಿಮೋಚನೆ ಪಡಿಸಿದರು. ೧೯೦೭ನೇ ಇಸವಿಯಲ್ಲಿ ಎಡ್ವರ್ಡ್ ಚಕ್ರವರ್ತಿಗಳು ಐರಾಳವನ್ನು ಸಂದರ್ಶಿಸಿದಾಗ ಮಿ| ಲಿಂಚರವರಿಗೆ ಚಕ್ರವರ್ತಿಗಳ ಕ್ಷಮಾಪಣೆಯು ದೊರಕಿ ನಿಬಂಧನೆಗಳ ಶರ್ತಗಳು ಸಹಾ ವಜಾ ಮಾಡಲ್ಪಟ್ಟವು. ಹೀಗೆ ಅಪರಾಧಿಯಾದ ಮನುಷ್ಯನು ಚಕ್ರವರ್ತಿಗಳ ಕ್ಷಮಾಪಣೆಯನ್ನು ಹೊಂದಿದ್ದರಿಂದ ಬ್ರಿಟಿಷ್ ನಿವಾಸಿಕನ [illegible] ತಂತ್ರ್ಯಗಳಿಗೆ [illegible]
~~~~~

ಉತ್ತರ ಹಿಂದುಸ್ಥಾನ.

ಪ್ರತಿ ವರುಷವೂ ಜರಗುವ ಬ್ರಹ್ಮಜ್ಞಾನ ಸಂಘದವರ ಥಿಯೊಸೊಫಿಕಲ್ ಕನ್‌ವೆನ್‌ಶನ್ ಪರಿಷದದೊಂದಿಗೆ ಒಂದು ವಿದ್ಯಾ ಪರಿಷದವೂ ಜರಗುವಂತೆ ಈ ವರುಷದಿಂದ ಏರ್ಪಾಡಿಸುವರು. ಈ ವರುಷದ ಬ್ರಹ್ಮಜ್ಞಾನ ಸಂಘದ ವಿದ್ಯಾ ಪರಿಷದವು ಬನಾರಿಸಿನಲ್ಲಿ ಮಿಸಿಸ್ ಎನಿಬಿಸೆಂಟರವರ ಅಧ್ಯಕ್ಷತೆಯಲ್ಲಿ ಜರಗುವುದು.

~~~~~~

ಆಲಿಪುರದ ಬೊಂಬ ಮೊಕದ್ದಮೆಯ ಅಪೀಲು ತನಕಿಯನ್ನು ನಡಿಸುತ್ತಲಿದ್ದ ಕಲ್‌ಕತ್ತೆಯ ಹೈ ಕೋರ್ಟ್ ಜಡ್ಜ್ ಸರ್ ಲೊರೆನ್ಸ್ ಜಂಕಿನ್ಸರವರಿಗೆ ಜ್ವರದ ಕಾಹಿಲೆ ಸಂಭವಿಸಿ ಇನ್ನು ಮೂರು ಯಾ ನಾಲ್ಕು ದಿವಸಗಳ ತನಕ ಕೋರ್ಟಿಗೆ ಬರುವರೆ ಅನಾನುಕೂಲವಾಗಿತ್ತೆಂಬದಾಗಿ ಕಳೆದ ವಾರದ ವರ್ತಮಾನಪತ್ರಗಳಿಂದ ತಿಳಿದುಬರುವುದು.

~~~~~~

ಜೈನರ ಸ್ವೇತಾಂಬರ ಪಕ್ಷದ ಗ್ರೇಜ್ಯುಯೇಟ್, ಯಾ ಬಿ.ಎ. ಮೊದಲಾದ ಪರೀಕ್ಷೆಗಳನ್ನು ಪಾಸಾದವರು ಜೈನರ ಹಬ್ಬಗಳ ಪ್ರತ್ಯೇಕ ರಜಾದಿನಗಳನ್ನು ವಿಧಿಸಬೇಕಾಗಿ ಸರಕಾರಕ್ಕೆ ಬರಕೊಂಡಿದ್ದರು. ಭಾರತೀಯ ವ್ಯಾಪಾರಿಗಳ ಸಂಘ ಮೊದಲಾದವರ ಅಭಿಪ್ರಾಯಗಳನ್ನು ಈ ವಿಷಯವಾಗಿ ಕೇಳಿದ್ದಲ್ಲಿ, ಜೈನರಲ್ಲಿ ವಿವಿಧ ಭೇದಗಳಿದ್ದು ಆಯಾ ತಂಡದವರಿಗೆ ಬೇರೆ ಬೇರೆ ಹಬ್ಬಗಳ ಆಚಾರವಿರುವುದರಿಂದ ಒಂದು ತಂಡದವರ ಹಬ್ಬಗಳಿಗೆ ರಜಾದಿಗಳನ್ನು ಕೊಟ್ಟಲ್ಲಿ ಬೇರೆ ತಂಡದವರಿಗೂ ಹೀಗೆಯೇ ರಜಾದಿಗಳನ್ನು ಕೊಡಬೇಕಾಗಿ ತಿಳಿದದ್ದರಿಂದ ಗವರ್ನಮೆಂಟಿನವರು ಒಂದು ತಂಡದವರ ಈ ಮನವಿಯನ್ನು ತೆಗೆದು ಹಾಕಿರುವರು

~~~~~~

ಬಿಹಾರಿನ ಬುದ್ಧಗಯಾ ... ... ಬುದ್ಧನ ಅಸ್ತಿಗಳನ್ನು ಅಲ್ಲಿಯೇ ಇಡಿಸಬೇಕಾಗಿ ಕೇಳಿಕೊಳ್ಳುತ್ತಿರುವರು. ಬಿಹಾರು ಪ್ರಾಂತ್ಯದ ನಿವಾಸಿಕರ ಈ ಸಲಹೆಗೆ ಅನೇಕ ಕಾರಣಗಳಿರುವವು. ಬುದ್ಧನು ಬಿಹಾರಿನಲ್ಲಿಯೇ ಜನಿಸಿ ತನ್ನ ಮತಸಿದ್ಧಾಂತಗಳನ್ನು ಅಲ್ಲಿಂದಲೇ ಪ್ರಸಂಗಿಸಲು ಪ್ರಾರಂಭಿಸಿದ್ದನೆಂಬದು ಈ ಕಾರಣಗಳಲ್ಲೊಂದಾಗಿರುವುದು. ಬುದ್ಧನಿಗೆ ದಿವ್ಯ ಜ್ಞಾನವು ಪ್ರಾಪ್ತವಾದ ಗಯಾಕ್ಷೇತ್ರವೂ, ಆತನು ಸ್ವರ್ಗಸ್ಥನಾದ ಕುಸಿಗ್ರಾಮ ಪಟ್ಟಣವೂ, ಖ್ಯಾತಿಹೊಂದಿದ ಬೌದ್ಧ ಚಕ್ರವರ್ತಿಯಾಳಿದ ಪಾಟಲಿಪುತ್ರವೂ ಬಿಹಾರು ಪ್ರಾಂತ್ಯದಲ್ಲಿರುವದೆಂಬದು ಇವರ ಇನ್ನೊಂದು ಕಾರಣವಾಗಿರುವುದು

~~~~~~

ಕಳೆದ ತಿಂಗಳ ತಾ ೧೮ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ... ಜನರಿಗೆ ಪ್ಲೇಗು ತಗಲಿ ... ಜನರು ಇದರಿಂದ ಮೃತಪಟ್ಟರು. ಪ್ಲೇಗು ಮರಣಗಳು ಆಯಾ ಸಂಸ್ಥಾನದಲ್ಲಿ ಈ ರೀತಿಯಾಗಿದ್ದವು. ಮುಂಬಯಿಯಲ್ಲಿ ... ಮದ್ರಾಸಿನಲ್ಲಿ ೧೮೫, ಬಂಗಾಳದಲ್ಲಿ ..., ಸಂಯುಕ್ತ ಸಂಸ್ಥಾನದಲ್ಲಿ ೯೩೦, ಪಂಜಾಬಿನಲ್ಲಿ ..., ಮಧ್ಯ ಸಂಸ್ಥಾನದಲ್ಲಿ ..., ಬರ್ಮದಲ್ಲಿ ...

~~~~~~

ಪೂರ್ವ ಬಂಗಾಳೆಯ ರೈಲ್ವೆಯ ಬೋಟುಮಾರ್ಗಗಳಲ್ಲಿ ಒಡೆದ ಬೊಂಬ ದುಷ್ಕೃತ್ಯಗಳ ಕುರಿತು 'ಕೆಪಿಟಲ್' ಎಂಬ ಇಂಗ್ಲಿಷ್ ಭಾಷೆಯ ಪತ್ರಿಕೆಯು ಈ ರೀತಿ ಟೀಕೆ ಮಾಡುತ್ತಿರುವುದು. 'ಸ್ವಾರ್ಥ ಉದ್ದಿಶ್ಯಗಳ ಬಗ್ಗೆ ಈ ಸಿಡಿಮದ್ದಿನ ತೋಟೆಗಳು ಕೆಲವು ವರ್ತಮಾನ ಪತ್ರಗಳ ಆಫೀಸುಗಳಲ್ಲಿಯೇ ಉದ್ಭವಿಸುತ್ತಿರುವವು'. ಈ ಬೊಂಬ ವರ್ತಮಾನವು ಎಂಪಾಯರ್ ಎಂಬ ಪತ್ರದಲ್ಲಿ ಪ್ರಕಟಿಸಲ್ಪಟ್ಟದ್ದರಿಂದ ಪತ್ರಿಕಾಕರ್ತರು ಈ ಬಗ್ಗೆ ತಮ್ಮ ಕ್ಷಮಾಪಣೆಯನ್ನು ಪ್ರಕಟಿಸಿರುವರಂತೆ.

ಲಾಹೋರು ವಸ್ತ್ರ ಪ್ರದರ್ಶನದ ಪೋಷಕ ಪದವಿಯನ್ನು ಜೀಂದ್ ಸಂಸ್ಥಾನದ ರಾಜರವರು ಸ್ವೀಕರಿಸಿ ೨೦೦೦ ರೂಪಾಯಿಗಳನ್ನು ದ್ರವ್ಯ ಸಹಾಯವಾಗಿ ಕೊಟ್ಟಿರುವರು.

~~~~~~

ಯುರೋಪಿಗೆ ಹೋಗಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡುವದಕ್ಕೋಸುಗ ಇಂಡಿಯಾ ಸರಕಾರದವರ ವಿದ್ಯಾರ್ಥಿ ವೇತನವು ಮುಂಬಾಯಿಯಲ್ಲಿ ಮಿ ಜಹಾಂಗೀರ್ ಸೊರಾಬ್ಜಿ ಎಂಬವರಿಗೆ ದೊರಕಿರುವುದು.

~~~~~~

ಪಿ ಮತ್ತು ಒ ಕಂಪೆನಿಯು ಎರಡು ಸ್ಟೀಮರುಗಳ ಕೂಡೆ ತಂತಿಗಳ ವಿರಹಿತವಾದ ಟೆಲಿಗ್ರಾಫು ನಡಿಸುವಂತೆ ಮುಂಬಯಿಯಲ್ಲಿ ಒಂದು ಠಾಣ್ಯವನ್ನು ಏರ್ಪಡಿಸಿರುವರು.

~~~~~~

ನವಾನಗರದ ಜಾಮ್ ಸಾಹೇಬರವರು ಸರ್ ಕರ್ಜನ್ ವಿಲಿಯಂ ವಿಕ್ಲಿಯವರ ಸ್ಮರಣಾರ್ಥವಾಗಿ ರೂ ೧೦೦೦ನ್ನು ಚಂದಾ ದ್ರವ್ಯವಾಗಿ ಕೊಟ್ಟಿರುವರು.

~~~~~~

ಟೆಲಿಗ್ರಾಫು ಮೂಲಕ ಕಳುಹಿಸಲ್ಪಡುವ ಮನಿಯಾರ್ಡರುಗಳ ... ಈ ದಿವಸದಿಂದ ಜಾರಿಗೆ ಬರುವುದು. ಅದು ಯಾವದೆಂದರೆ ಟಪ್ಪಾಲು ಮನಿಯಾರ್ಡರುಗಳಿಗೆ ಸಮಾನವಾದ ... ತಂತೀ ಮೂಲಕ ಕಳುಹಿಸುವ ಮನಿಯಾರ್ಡರುಗಳಿಗೆ ತೆರುವುದಲ್ಲದೆ ಟೆಲಿಗ್ರಾಫು ಚಾರ್ಜು ಇತರ ಟೆಲಿಗ್ರಾಫು ದರದಲ್ಲಿಯೇ ತೆರಬೇಕಾಗಿರುವುದು.

~~~~~~

ಹತ್ತು ದಿವಸಗಳ ಜ್ವರ ಕಾಹಿಲೆ ನಂತರ ಕಲಿಕತ್ತೆಯ ಹೈಕೋರ್ಟಿನ ... ಸರ್ ಲೊರೆನ್ಸ್ ಜೆಂಕಿನ್ಸರವರು ಆರೋಗ್ಯ ಹೊಂದಿ ಕೋರ್ಟಿಗೆ ಹಾಜರಾಗಿ ಬೊಂಬ ಮೊಕದ್ದಮೆಯ ತನಖಿಯನ್ನು ನಡಿಸುತ್ತಿ ... ನಾರ್ಟನರವರು ... ಜಡ್ಜಿಯವರು ಆರೋಗ್ಯ ಪಡೆದುದಕ್ಕಾಗಿ ತಮ್ಮ ಸಂತೋಷವನ್ನು ಪ್ರದರ್ಶಿಸಿದರು ... ಮೊಕದ್ದಮೆ ತನಿಖೆಯನ್ನು ಪುನಹ ಪ್ರಾರಂಭಿಸಿದರು.

ಮಿ ನಾರ್ಟನರವರು ಈ ಅಪೀಲು ನಡೆಯುವಲ್ಲಿ ಹಲವು ... ಸಂಗತಿಗಳನ್ನು ... ಮಾತಾಡುತ್ತಿರುವಾಗ ಮಿ ನಾರ್ಟನರವರು ಈ ರೀತಿ ಪಕ್ಷಪಾತಿ ... ಬಗ್ಗೆ ವ್ಯವಹರಿಸುವುದು ಯುಕ್ತವಲ್ಲವೆಂಬ ಹಿತೋಪದೇಶವನ್ನು ಚೀಫ್ ಜಡ್ಜಿಯವರು ನಾರ್ಟನರವರಿಗೆ ಕೊಟ್ಟಿರುವರು.

~~~~~~

ಕಲ್ಕತ್ತೆಯಲ್ಲಿ ರಾಜಾರಾಮ ಮೋಹನರಾಯರವರ ವರುಷಾವಧಿ ದಿವಸವು ... ಆಚರಿಸಲ್ಪಟ್ಟಿತು. ಶ್ರೀಯುತ ... ಟಾಗೋರರವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದರು. ಗಡಿಪಾರು ಮಾಡಲ್ಪಟ್ಟ ಬಾಲಕೃಷ್ಣಕುಮಾರ ಮಿತ್ರರವರ ಪುತ್ರಿ ಶ್ರೀಮತಿ ಕುಮುದಿನೀ ಮಿತ್ರ ಬಿ ಎ ಯವರು ಬಂಗಾಳದ ಸ್ತ್ರೀ ಸಮುದಾಯಕ್ಕೆ ರಾಜಾರಾಮ ಮೋಹನ ರೋಯಿಯವರಿಂದ ಆದ ಪ್ರಯೋಜನದ ಕುರಿತು ಉಪನ್ಯಾಸ ಮಾಡಿದರು.

~~~~~~

ಬಂಗಾಳದಲ್ಲಿ ಬರುವ ನವರಾತ್ರಿ ಪೂಜಾ ದಿನಗಳಲ್ಲಿ ಲಕ್ಷ ಕಟ್ಟಳೆಯ ವಸ್ತ್ರಗಳು ಖರೇದಿಯಾಗುವವು. ಕಲ್ಕತ್ತೆಯಲ್ಲಿಯೂ ಪೂರ್ವ ಬಂಗಾಳದ ಹಲವು ಕಡೆಗಳಲ್ಲಿಯೂ ಸ್ವದೇಶಿ ವಸ್ತ್ರಗಳನ್ನೇ ಕ್ರಯಕ್ಕೆ ಪಡಕೊಳ್ಳುವಂತೆ ಅಲ್ಲಲ್ಲಿ ಭಾಷಣಗಳನ್ನು ಕೊಡುತ್ತಿರುವರು. ಬಹಿಷ್ಕಾರದ ಗೋಜಿಗೆ ಹೋಗದೆ 'ಸ್ವದೇಶಿ' ಪ್ರೋತ್ಸಾಹವನ್ನೇ ಸಾರುವದು ಈ ಭಾಷಣಗಳ ವಿಶೇಷ ಲಕ್ಷಣವಾಗಿರುವದು.

ಮಂಗಳೂರಿನ ಅಮ್ಮೆಂಬಳ ಅನಂತಕೃಷ್ಣ ಪೈಗಳರಿಗೆ ಸರಕಾರದವರು ರಾವ ಸಾಹೇಬ ಬಿರುದನ್ನು ದಯಪಾಲಿಸಿದ್ದಕ್ಕಾಗಿ ಮುಂಬಯಿಯಲ್ಲಿ ಗೌಡಸಾರಸ್ವತ ಸಮಾಜದವರೂ, ಇವರ ಇತರ ಸ್ನೇಹಿತರೂ ಕೂಡಿ ಇವರಿಗೆ ಶ್ಲಾಘನೀಯವಾದ ಒಂದು 'ಎಡ್ರೆಸ್ಸ'ನ್ನು ಕೊಟ್ಟಿರುವರು

~~~~~~

ದಕ್ಷಿಣ ಹಿಂದುಸ್ಥಾನ.

---o---

ತಿನ್ನವೆಲ್ಲಿ ಜಿಲ್ಲೆಯ ಸೆಶ್ಯನ್ಸ್ ಕೋರ್ಟಿನಲ್ಲಿ ಒಂದು ದರೋಡೆ ಕಳವಿನ ತನಖಿಯು ಪೂರ್ಣವಾಗಿ, ಜಡ್ಜರವರು ಈ ಮೊಕದ್ದಮೆಯ ರಿಕಾರ್ಡನ್ನೂ ಮರುದಿವಸಕ್ಕೆ ತನಖಿ ಬಗ್ಗೆ ಇಟ್ಟಿರುವ ಮತ್ತೊಂದು ಮೊಕದ್ದಮೆ ರಿಕಾರ್ಡನ್ನೂ ಪೆಟ್ಟಿಗೆಯಲ್ಲಿಟ್ಟು ಬಂಗ್ಲೆಗೆ ಕಳುಹಿಸಿಕೊಟ್ಟಿದ್ದರು. ಮರುದಿವಸ ಬೆಳಿಗ್ಗೆ ಜಡ್ಜರ ಈ ಪೆಟ್ಟಿಗೆಯನ್ನು ಯಾರೋ ಕಳವು ಮಾಡಿದ್ದಾರೆಂಬದಾಗಿ ತಿಳಿದು ಬಂದು ಪೆಟ್ಟಿಗೆಯ ತಲಾಶಿಯು ನಡಿಯುತ್ತಿರುವುದು.

~~~~~~

ಮದುರಾ ಜಿಲ್ಲೆಯ ಕೆಲವು ಊರುಗಳಿಗೆ ಇನ್ಸೂರು ಭಾಂಗಿಗಳನ್ನು ಟಪಾಲು ಇಲಾಖೆಯವರು ತಲ್ಪಿಸುವರೆ ಸ್ವೀಕರಿಸುವುದಿಲ್ಲವೆಂಬದಾಗಿ ನೋಟೀಸ್ ಕೊಟ್ಟಿರುವರು. ಈ ಊರುಗಳ ಮಾರ್ಗವಾಗಿ ಟಪ್ಪಾಲನ್ನು ತಕ್ಕೊಂಡು ಹೋಗುವಾಗ ಹೆಚ್ಚುಕಡಿಮೆ ಒಂದು ಲಕ್ಷ ರೂಪಾಯಿ ಮೌಲ್ಯದ ಇನ್ಸೂರಾದ ಟಪ್ಪಾಲು ಭಾಂಗಿಗಳು, ಹಗಲು ಹೊತ್ತಿನಲ್ಲಿಯೇ ದರೋಡೆ ಕಳ್ಳರಿಂದ ಸುಲಿಗೆ ಮಾಡಲ್ಪಟ್ಟಿರುವದರಿಂದ ಈ ರೀತಿ ಟಪ್ಪಾಲು ಇಲಾಖೆಯವರು ನೋಟೀಸ್ ಕೊಟ್ಟಿರುವರು.

~~~~~~

ತಿರುವಾಂಕೋಡಿನ ಮಹಾರಾಜರವರ ೫೪ನೇ ವರುಷದ ಜನ್ಮದಿನವು ತಿರುವನಂತಪುರದಲ್ಲಿ ಬಹಳ ವಿಜೃಂಭಣೆಯಲ್ಲಿ ನಡೆಯಿತು. ಮಹಾರಾಜರವರು ೧೮೫೭ನೇ ವರುಷದ ಸಪ್ಟೆಂಬರ ತಿಂಗಳಲ್ಲಿ ಜನಿಸಿ, ತಮ್ಮ ಪ್ರಜಾರಂಜಕತೆಯ ಆಳಿಕೆಯ ೩೪ನೇ ವರುಷವನ್ನು ಮುಗಿಸಿರುವರು. ೩೫ನೇ ವರುಷದ ಆಳಿಕೆಯು ಪ್ರಾರಂಭವಾಗಿರುವುದು. ೧೮೮೫ನೇ ಇಸವಿ ಅಗೋಸ್ತು ೧೯ನೇ ತಾರೀಕಿನಲ್ಲಿ ಇವರಿಗೆ ಪಟ್ಟಾಭಿಷೇಕವಾಗಿರುವುದು

~~~~~~

ತಿರುವಾಂಕೋಡಿನ ಜಾನುವಾರುಗಳ ಪ್ರದರ್ಶನವು ಬರುವ ಡಿಸೆಂಬರ ತಿಂಗಳಲ್ಲಿ ಜರಗುವುದು.

~~~~~~

ಮೈಸೂರು ಸರಕಾರದ ವ್ಯವಸಾಯ ರಸಾಯನ ಶಾಸ್ತ್ರಜ್ಞರಾದ ಮಿ ಲಕ್ಷ್ಮೀನಾರಾಯಣ ಅಯ್ಯರ್ ಎಮ್. ಎ. ಯವರು ವಿದ್ಯಾರ್ಥಿ ವೇತನವನ್ನು ಪಡೆದು ವ್ಯವಸಾಯ ಶಾಸ್ತ್ರವನ್ನು ಕಲಿಯುವರೆ ಇಂಗ್ಲಾಂಡಕ್ಕೆ ಹೋಗುವರು.

~~~~~~

ತಿರ್ನಲ್ವೆಲ್ಲಿಯಲ್ಲಿಯ 'ಅಡ್ಡವಕೀಲರ ಪಟೀಕಿ'

ತಿನ್ನವೆಲ್ಲಿಯಲ್ಲಿ ಕೊಕ್ಕಾರ್‌ಕುಲಮ್ ಎಂಬಲ್ಲಿಯ ಕೋರ್ಟುಗಳಿಗೆ ಬರುತ್ತಿರುವ ಅಡ್ಡವಕೀಲರ ಹೆಸರುಗಳನ್ನು ತನಗೆ ಬರೆದು ಕಳುಹಿಸಬೇಕಾಗಿ ಡಿಸ್ಟ್ರಿಕ್ಟ್ ಜಡ್ಜರವರು ಬಾರ್ ಎಸೋಸಿಯೇಶನ್ ಯಾ ವಕೀಲರ ಸಂಘದ ಸೆಕ್ರೆಟರಿಯವರನ್ನು ಕೇಳಿಕೊಂಡಿರುವರು. ವಕೀಲರು ಈ ವಿಷಯ ಸಭೆಕೂಡಿ 'ಅಡ್ಡ ಯಾ ಬಳಿ' ವಕೀಲರ ಹೆಸರುಗಳನ್ನು ವಿಚಾರಿಸಿ ಬರಿಯುವರೆ ತಮ್ಮಲ್ಲಿಯೇ ಮೂರು ಮಂದಿಗಳನ್ನು ಚುನಾಯಿಸಿರುವರು. ಸನ್ನದು ಪಡೆದ ವಕೀಲರಿಗೂ ಕಕ್ಷಿಗಾರರಿಗೂ ಮಧ್ಯಸ್ಥರಾಗಿ ಬಡ ಕಕ್ಷಿಗಾರರನ್ನು ಪೀಡಿಸುವ ಈ ಉದ್ಯೋಗಹೀನರನ್ನು ಅಡಗಿಸಿ ಬಿಟ್ಟಲ್ಲಿ ಪ್ರಜಾಕ್ಷೇಮ ಉಂಟಾಗುವದೆಂತ ಅಲ್ಲಿಯ ನಿವಾಸಿಕರು ನಿರೀಕ್ಷಿಸುತ್ತಿರುವರು. ನಮ್ಮ ಜಿಲ್ಲೆಯಲ್ಲಿ ಅಡ್ಡವಕೀಲರಿರುವರೋ?

ದಕ್ಷಿಣ ಕನ್ನಡ.

ಸ್ವೀಕಾರ. ಮೈಸೂರಿನ ಮೆಸರ್ಸ್ ಎಚ್ ಜಿ ಸಿದ್ದಲಿಂಗಪ್ಪ ಬ್ರದರ್ಸ್ ಇವರಿಂದ ಕಳುಹಿಸೋಣಾದ ಮೈಸೂರು ಮಹಾರಾಜರವರ ಚಿತ್ರಪಟಗಳನ್ನು ವಂದನಾಪೂರ್ವಕ ಸ್ವೀಕರಿಸಿರುವೆವು ಅಭಿಪ್ರಾಯಗಳನ್ನು ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸುವೆವು

ಮಂಗಳೂರು. ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಬ್ರಹ್ಮಾವರ ಸಬ್ ರಿಜಿಸ್ಟ್ರೇಶನ್ ಆಪೀಸಿನ ಫೋರ್ಜರಿ ನಂಬ್ರವು ಉಡುಪಿಯಲ್ಲಿ ಕಳೆದ ತಿಂಗಳ ತಾರೀಖು ೧೮-೧೯ ೨೦ರಲ್ಲಿ ತನಿಖೆಗೆ ಒಂದು ಪ್ರೊಸಿಕ್ಯೂಶನ್ ಕಡೆಯಿಂದ ಸಾಕ್ಷಿ ವಿಚಾರಣೆ ಮಾಡಿ ಇದೇ ತಿಂಗಳ ತಾ ೧೫ಕ್ಕೆ ಡಿಫೆನ್ಸ್ ಸಾಕ್ಷಿ ವಿಚಾರಣೆಗೆ ಇಟ್ಟಿದ್ದಾರೆ ಈ ನಂಬ್ರದಲ್ಲಿ ಪ್ರೊಸಿಕ್ಯೂಶನ್ ನಡಿಸುವ [illegible] ಪಬ್ಲಿಕ್ ಪ್ರೊಸಿಕ್ಯೂಟರವರೂ ಉಡುಪಿಗೆ ಹೋಗಿದ್ದರು ಈ ನಂಬ್ರವನ್ನು ಮದ್ರಾಸು ಸಿ ಐ ಡಿ ಇಲಾಖೆಯವರು ಹಿಡಿದ್ದರಿಂದ ಮದ್ರಾಸಿನಿಂದ ಇನ್ಸ್‌ಪೆಕ್ಟರರಾದ ರಾ [illegible] ರಾಘವೇಂದ್ರ ರಾಯರು ಅನುಬವ ಕೊಡುವದಕ್ಕೆ ಬಂದಿದ್ದಾರೆ

ಉಳ್ಳಾಲ ಫೋರ್ಜರಿ ನಂಬ್ರದ ತನಿಖೆಯು ಕಳೆದ ತಿಂಗಳ ತಾ ೨೭ರಿಂದ ನಡಿಯುತ್ತಲಿದೆ

ಮೆ| ಪಿ ಪಿ ಬ್ರೈತ್‌ವೈಟ್ ದೊರೆಗಳು ಕಳೆದ ತಿಂಗಳ ತಾ ೨೭ರಲ್ಲಿ ಇಲ್ಲಿಯ ಗಣಪತಿ ಹೈಸ್ಕೂಲನ್ನೂ ತಾ. ೨೯ರಲ್ಲಿ ರುಜಾರಿಯೊ ಶಾಲೆಯನ್ನೂ ಮತ್ತು ತಾ ೩೦ರಲ್ಲಿ ಮಿಲಾಗ್ರಿ ಶಾಲೆಯನ್ನೂ ಸಂದರ್ಶಿಸಿದರು

ಇಲ್ಲಿಯ ಕೆನರಾ ಹೈಸ್ಕೂಲಿನ ವರುಷಾವಧಿ ಇನಾಮು ಹಂಚೋಣವನ್ನು ಇದೇ ತಿಂಗಳ ತಾ [illegible]ಕ್ಕೆ ಇಟ್ಟಿದ್ದು [illegible] ಸಂದರ್ಭದಲ್ಲಿ ಶಾಲಾ ಇನ್ಸ್‌ಪೆಕ್ಟರರಾದ ಪಿ ಪಿ ಬ್ರೈತ್‌ವೈಟ್ ದೊರೆಗಳು ಅಧ್ಯಕ್ಷರಾಗಿ [illegible] ಕುಳ್ಳುವರಾಗಿ ಕೇಳುತ್ತೇವೆ

ಇಲ್ಲಿಯ ಮೈದಾನಿನಲ್ಲಿ ತಾ ೨೯ ಮತ್ತು [illegible] ಸೈಂಟ್ ಅಲೋಸಿಯಸ್ ಕೊಲೇಜ್, ಗವರ್ನಮೆಂಟ್ ಕಾಲೇಜು ಮತ್ತು ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ವರ್ಷಂಪ್ರತಿ ಆಗುವ ಪ್ರಕಾರ ಪಂದ್ಯದಾಟಗಳು ಆದವು ಸೀನಿಯರ ವಿದ್ಯಾರ್ಥಿಗಳ ಆಟದಲ್ಲಿ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಯಾದ ಅಬ್ದುಲ್ ರಹೀಮನ್ ಎಂಬವರಿಗೆ ಬಹುಮಾನ ಪದಕವೂ ಸೈಂಟ್ ಅಲೋಸಿಯಸ್ ಕೊಲೇಜಿನ ವಿದ್ಯಾರ್ಥಿಗಳಿಗೆ ಬೆಳ್ಳಿಯ ಬಹುಮಾನ ಕಪ್ ಎಂಬ ಪಂಚಪಾತ್ರೆ ಯೂ ಸಿಕ್ಕಿರುತ್ತವೆ ಜೂನಿಯರರ ಕಪ್ ಕೆನರಾ ಹೈಸ್ಕೂಲಿಗೆ ದೊರಕಿರುವುದು

ಕಳೆದ ವಾರ ಮುನಿಸಿಪಾಲಿಟಿಯಲ್ಲಿ [illegible] ಪ್ಲೇಗ್ ಮರಣಾಗಳಿದ್ದವು

ದಕ್ಷಿಣಕನ್ನಡಾ ಜಿಲ್ಲಾ ಅಫೀಸರರುಗಳಿಂದ ಸಂದರ್ಶಿಸಲ್ಪಟ್ಟು ಈ ಜಿಲ್ಲೆಯ ಆಫೀಸರರುಗಳ ಮೇಲ್ವಿಚಾರಣೆಯಲ್ಲಿರುವ ಅಮೀನ ದೀವಿಗಳ ಸಂದರ್ಶನೆಯು ಈ ಸರ್ತಿ ಮಲಬಾರು ಜಿಲ್ಲೆಯಿಂದ ಲಕ್ಷದ್ವೀಪಗಳ ಮೇಲ್ವಿಚಾರದ ಬಗ್ಗೆ ಹೋಗುತ್ತಿರುವ ಮೆ| ಎಲಿಸರವರಿಂದಲೇ ಮಾಡಲ್ಪಡುವುದು ಈ ಕಾರಣ ಮೆ| ಡ್ಯೂಗರವರು ಈ ವರುಷ ಅಮೀನು ದೀವಿಗಳಿಗೆ ಹೋಗುವ ಸಂದರ್ಭವಿಲ್ಲವೆಂತ ಕೇಳುತ್ತೇವೆ.

'ಸ್ಪೆಶ್ಯಲ್ ಟೆಸ್ಟು' ಪರೀಕ್ಷೆಯು ಈ ವರುಷ ಇಲ್ಲಿಯ ಸೈಂಟ್ ಎಲೋಸಿಯಸ್ ಕೊಲೇಜಿನಲ್ಲಾಗುವುದು ಮೆ| [illegible] ದೊರೆಗಳವರು ಈ ಪರೀಕ್ಷೆಯನ್ನು ನಡಿಸುವರು.

[illegible] ಯಲ್ಲಿರುವ ಜೈಲು ಡಾಕ್ಟರರ ವಾಸೆ [illegible] ಮುನಿಸಿಪಾಲು ರಾ. [illegible] ನಾಗರಾಜ [illegible]

ಕಾಸರಗೋಡು. ಇದೇ ಕಳೆದ ಗುರುವಾರ ತಾರೀಕು ೨೫ರಲ್ಲು ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಬ್ರಹ್ಮಜ್ಞಾನ ಸಂಘದ ಇನ್ಸಪೆಕ್ಟರಾದ ಮ ರಾ. ಜಿ ಶ್ರೀನಿವಾಸಯ್ಯನವರು ಕನ್ನಡ ಭಾಷೆಯಲ್ಲಿ ಭಕ್ತಿಮಾರ್ಗವಿಷಯವಾಗಿ ಸರ್ವರಿಗೂ ಬಕ್ತಿ ವಿಶ್ವಾಸ ಹುಟ್ಟುವಂತೆ ಒಂದು ಘಂಟೆ ವರೇಗ ಮಾಡಿದ ಭಾಷಣದಿಂದ ಕೂಡಿದ ಸಭಿಕರಿಗೆ ಅತ್ಯಾನಂದವಾಯಿತು ಮರುದಿನ ಸಹ ಇಲ್ಲಿ ವಸ್ತು ಮಾಡಿ ಇನ್ನೊಂದು ವಿಷಯದಲ್ಲಿ ಹೇಳಬೇಕಾಗಿ ಕೂಡಿದ ಸಭಿಕರು ವಿಜ್ಞಾಪಿಸಿದ್ದಾಗ್ಯೂ ಸ್ವಗೃಹಕ್ಕೆ ತೆರಳಬೇಕಾಗಿದ್ದ ಅತ್ಯಗತ್ಯ ಕೆಲಸವಿರುವದರಿಂದ ಈ ಸಂದರ್ಭದಲ್ಲಿ ನಿಲ್ಲಲಿಕ್ಕನುಕೂಲವಿಲ್ಲವೆಂತ ಹೇಳಿ ಮರು ದಿನ ಬೆಳಗ್ಗೆ [illegible] ಮೈಲ್ [illegible] ಹೊರಟು ಹೋದರು

ತಾ [illegible]ನೇ [illegible]ವಾರ ಸದರಿ ಎಲಿಮೆಂಟರಿ ಶಾಲೆಯಲ್ಲಿ ಈ [illegible] ನಾಲ್ಕು ಕರೆಗಳಿಗೂ [illegible] ಬೋರ್ಡ್ ಮತ್ತು [illegible] ಶಾಲೆಗಳ [illegible] ಪಾಧ್ಯಾಯರುಗಳು [illegible] ಒಂದು ಕೂಡಿದರು ಕೆಲವು ವಿದ್ಯಾ ಸಮ್ಮಂದವಾದ ಬೋಧನೆಯು ಮೇಲುದ್ಯೋಗಸ್ಥರಾದ [illegible] ಸಿಸ್ಟಾಂಟ ಮತ್ತು ಸಬ್‌ಅಸಿಸ್ಟಾಂಟ್ ಇನ್ಸ್‌ಪೆಕ್ಟರವರಿಂದಲೂ ಕೊಡೋಣಾದ್ದಲ್ಲದೆ ಪಶ್ಚಿಮ [illegible] ಶಾಲಾ ಇನ್ಸಪೆಕ್ಟರ ದೊರೆಗಳು [illegible] ಕೆಲವು [illegible] ಪಾಧ್ಯಾಯರುಗಳ ಶಾಲಾ ಹವಾಲು ಮುಂತಾದ್ದು ಕೇಳಿ ತಕ್ಕ ರೀತಿಯಲ್ಲಿ [illegible] ಪರವಾಗಿ ಹುಕುಂ ಕೊಟ್ಟಿರುವದಾಗಿಯೂ ಕೇಳುತ್ತೇವೆ ಈ ಸಂದರ್ಭದಲ್ಲಿ ದಕ್ಷಿಣ ಬಾಗದ ಮಲೆಯಾಳಿ ಶಾಲೆಯ ವಿದ್ಯಾರ್ಥಿಗಳಿಂದ ಗಾಯನ ಸಮೇತವಾದ ಕೋಲಾಟ [illegible] ವಿನೋದಗಳಿಂದ ಧೊರೆಗಳಿಗೂ ಆಸಿಸ್ಟಾಂಟರಿಗೂ ಸಂತುಷ್ಟಿ ಪಡಿಸಿದಾಗಿ ಕೇಳಿ ಸಂತೋಷಪಡುತ್ತೇವೆ

ನಮ್ಮ ಸಿಟಿ ಅಕ್ಕತಬೈಲ ಗ್ರಾಮದ ನಿವಾಸಿಕನಾದ [illegible] ಮಾಪಿಳ್ಳ ಮೇಲೆ ಇರುವ ಕಳವಿನ ಮೊಕದಮೆಯು ತನಖಿಯಾಗ ಸ್ಥಳ ತನಿಖೆ ಮಾಡುವದಗತ್ಯವೆಂತ ಮೇಜಿಸ್ಟ್ರೇಟರು [illegible] ಇದೇ ತಾ [illegible]ನೇ ಆದಿತ್ಯ [illegible] ಇರುವ [illegible]ಕ್ಕೆ ಹೋಗಿ ಮೇಜಿಸ್ಟ್ರೇಟರು ಕೆಲವನ್ನು ತನಿಖೆ ಮಾಡಿ [illegible]ರಣೆ ಮಾಡಿ [illegible] ಇಲ್ಲಿಗೆ ಬರುವಷ್ಟರಲ್ಲಿ [illegible] ಮತ್ತು ಸಾಕ್ಷಿಗಾರರೂ [illegible] ಪತ್ತಿ ಬಾರಿ ಪೆಟ್ಟಾಗಿ [illegible] ಸೇಕ ಗಾಯಗಳು ಮಾಡಿಕೊಂಡು [illegible] ರಾತ್ರಿ [illegible] ಆಸ್ಪತ್ರಿಗೆ ಬಂದು [illegible] ಕೆಲವರನ್ನು ಕೂಡಲೇ ಕೈದು ಮಾಡಿ ಪೋಲೀಸಿನವರು [illegible] ಸಹ ಕೇಳುತ್ತೇವೆ ಈ ವರುಷದ ರಮುಜಾನ್ ತಿಂಗಳ ಪ್ರಥಮ ತೊಂಬಿ [illegible] ಇದೇ [illegible]

—)—

ನ್ಯಾಕನಕಟ್ಟೆ ಕುಂದಾಪುರ ತಾಲೂಕು ನ್ಯಾಕನಕಟ್ಟೆಯ [illegible] ಶಾಲೆಯಲ್ಲಿ ಕಳೆದ ತಿಂಗಳ ತಾರೀಕು [illegible] ದ್ವಿತೀಯ ವರುಷದ ವರ್ಧಂತಿಯುತ್ಸವವು ಬಹು ಸಂಭ್ರಮದೊಡನೆ ಜರಗಿತು ಶ್ರೀಯುತ ಬೀಡಿನ [illegible]ಗರಾಯರವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದರು ಸದೆಯಲ್ಲಿ ರಾ ಬೈಂದೂರ ವೆಂಕರಮಣಹೊಳ್ಳ ಮೊದಲಾದ್ದವರಿಂದ ಬಾಷಣಗಳು ಕೊಡಲ್ಪಟ್ಟವು ಶಾಲೆಯ ಹುಡುಗರ ಗಾಯನವಿತ್ತು ಈ ರೀತಿ ಚಿಕ್ಕ ಹಳ್ಳಿಯಲ್ಲಿ ಜನ್ಮವೆತ್ತಿದ ಈ ಹಿತವಾದಿನಿ ಸಭೆಯೆಂಬ ಶಿಶುವು ತನ್ನ ದ್ವಿತೀಯ ವರುಷ ವರ್ಧಂತಿಯ ಉತ್ಸವವನ್ನು ಬಹು ಆಟ್ಟಹಾಸದಿಂದ ಪೂರೈಸಿಕೊಂಡಿತು

ಬೈಂದೂರಲ್ಲಿ ಶ್ರೀಯುತ ನಾರಾಯಣಹೊಳ್ಳರವರ ಕಡೆಯಿಂದ ಹೊಸತಾಗಿ ಒಂದು ನೇಯಿಗೆ ಕಾರ್ಖಾನೆಯು ತೆರಿಯಲ್ಪಟ್ಟು ಇಲ್ಲಿ ಬಹು ನಾಜೂಕಾದ ಅಂಗಿವಸ್ತ್ರಗಳು, ಮತ್ತು ಶೀರೆ ಪಂಚೆಗಳು ಕೂಡಾ ಬಹಳ ಸೊಗಸಾದ ರೀತಿಯಲ್ಲಿ ತಯಾರಿಸಲ್ಪಡುತ್ತವೆ.

ಉದ್ಯಾವರ. ಇಲ್ಲಿಯ ಪಟೇಲ ಕುಮಾರರಾಯರು ಕಟ್ಟಿಸಿದ ಹೊಸ ನವೀನ ತೆರದ ಮಗ್ಗದ ಶಾಲೆಯಲ್ಲಿ ಈ ತನಕ ಸುಮ್ಮಗೆ ಇದ್ದ ಜಪಾನು ಮಗ್ಗವು, ತ್ವರಿಗಿ ಚಟುವಟಿಕೆಯಿಂದ ರಾತ್ರಿಹಗಲು ಕೆಲಸಮಾಡುವರೆ ಪ್ರಾರಂಭಿಸಿದ್ದು ಕೇಳಿ ಸಂತೋಷಪಡುತ್ತೇವೆ

ಕಳೆದ ಬಿರುಗಾಳಿಯಲ್ಲಿ ತೇಲಿಬಂದ ತೆಂಗಿನಕಾಯಿಗಳ ಪೈಕಿ ಸುಮಾರು ೪೦,೦೦೦ ತೆಂಗಿನಕಾಯಿಗಳನ್ನು ಸಾವಿರಕ್ಕೆ ೨೭ರ ದರದಲ್ಲಿ ಮ| ರಾ| ಉಡಿಪಿ ಅಬ್ದುಲ್ ಹಾಜ್ ಕಾಶಿಮ್ ಸಾಹೇಬ್ ಖಾನ್ ಬಹದೂರ್ ಇವರು, ವಹಿಸಿಕೊಂಡಿರುವರು ಉಳಿದವುಗಳನ್ನು ಅವುಗಳ ಮಾಲಿಕರೇ ಕೊಂಡುಹೋಗಿರುವರು ತೆಂಗಿನಕಾಯಿಗಳನ್ನು ಕೂಡಿಸಿಕೊಟ್ಟವರಿಗೆ ಸರಕಾರಿ ಕಡೆಯಿಂದ ಇನಾಮು ದೊರಕುವುದೆಂತ ಕೇಳುತ್ತೇವೆ

ಮುಲ್ಕಿ ಇಲ್ಲಿಯ ಪಂಚಮಾಲ್ ಆರ್ ಎಮ್. ಕಾಮತ್‌ರವರು ಒಂದೇ ಸಲ ಗೋಧಿ ಕಡಲೆ ಹಿಟ್ಟು ಮೊದಲಾದವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಒಂದೇ ಹೆಣ್ಣಾಳಿನ ಸಹಾಯದಿಂದ ತಯಾರಿಸಬಹುದಾಗುವಂಥಾ ಒಂದು ಹೊಸ ಯಂತ್ರವನ್ನು ಈಚೆಗೆ ನಿರ್ಮಿಸಿ ಕೆಲಸ ನಡಿಯುತ್ತಿರುವುದರಿಂದ ಗೋಧಿರವೆ [illegible] ಒಂದಕ್ಕೆ ಕ್ರಯ [illegible] ಇದ್ದದ್ದು [illegible] ಪೈಗೆ ತಗ್ಗಿರುವದು

ಇಲ್ಲಿಯ [illegible]ಬೆಟ್ಟು ಗಣಪತಿ ಕಮ್ತಿಯವರ ಮನೆಯಿಂದ [illegible] ಒಂದು ವರುಷದ ಹಿಂದೆ ಕಳವಾಗಿ ಹೋಗಿದ್ದ [illegible] ತಾಂಬ್ರದ [illegible]ವನ್ನು ಇಟ್ಟು ಬ್ಯಾರಿ [illegible] ತಾ [illegible]ನೇ ರಾತ್ರಿ ತನ್ನ ಮನೆಯಿಂದ ಕೋಡಿಗೆ [illegible] ತಿಳಿದ [illegible], ತಾರೀಕು ೨೪ರಲ್ಲು [illegible] ಸಮೇತ [illegible]ವನನ್ನು ಕೈದುಮಾಡಿ ಮಂಗಳೂರಿಗೆ ಕೈದಿರುವರು

ತಾರೀಕ [illegible]ರಲ್ಲಿ ಇಲ್ಲಿಯ ಬೋರ್ಡ್ ಎಲಿಮೆಂಟರಿ [illegible] ಉಪಾಧ್ಯಾಯರ ಸಂಘವು ಜರಗಿತು ಆದರಲ್ಲಿ ಉಪಾಧ್ಯಾಯರೊ[illegible]ರಿಂದ ಕ್ಷೇತ್ರಗಣಿತ ಸಮ್ಮಂಧವಾಗಿ ಕೊಡಲ್ಪಟ್ಟ ಪಾಠದರಿ[illegible]ಯಿಂದ ಬರಬಹುದಾದ ಪ್ರಯೋಜನವನ್ನು ತಿಳಿಕೊಂಡು ಕೂಡಿಬಂದ ಉಪಾಧ್ಯಾಯರೆಲ್ಲರೂ ಹರ್ಷಿತರಾದರು

ವಿವಿಧ ವಿಷಯಗಳು

ಸರ್ವ ಜನರ ಉಪಯೋಗಾರ್ಥವಾಗಿ ಮದ್ರಾಸು ಸಂಸ್ಥಾನದಲ್ಲಿ ಸರಕಾರಿ ಲೋಕಲ್ ಫಂಡು ಸಹಾಯವನ್ನು ಹೊಂದುತ್ತಿರುವ ಖಾಸಗಿ, ರೈಲ್ವೆ ಮೊದಲಾದ ಇಲಾಖೆಗಳ ೬೩೦ ಆಸ್ಪತ್ರೆಗಳಿರುವವೆಂತ ಕಳೆದ ವರುಷದ ಇವುಗಳ ವರದಿಯಿಂದ ತಿಳಿದುಬರುತ್ತದೆ ಹೆಚ್ಚು ಕಡಿಮೆ [illegible] ಮಿಲಿಯ ಜನರು ಈ ಎಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಹೊಂದಿದರೆಂಬದಾಗಿ ತಿಳಿದುಬರುವುದು ಚಿಕಿತ್ಸೆ ಹೊಂದಿದವರಲ್ಲಿ ಸೇಕಡಾ ೬೫ರಂತೆ ಗಂಡಸರೂ, ೩೫ರಂತೆ ಹೆಂಗಸರೂ ಇದ್ದರು ೧೯೦೭ನೇ ವರುಷಕ್ಕಿಂತ ಕಳೆದ ವರುಷ ಜನರಲ್ಲಿ ಸಂಕಟವು ಹೆಚ್ಚಾಗಿ ಪ್ರಾಪ್ತವಾಗಿರುವುದೆಂದೂ, ದವಸು ಧಾನ್ಯಗಳ ಕ್ರಯವು ಜಾಸ್ತಿಯಾಗಿ ಈ ನಿಮಿತ್ತ ಜನರಿಗೆ ಬಂದೊದಗಿದ ದಾರಿದ್ರ್ಯವು ಹೆಚ್ಚಿ ಈ ರೀತಿ ರೋಗಿಗಳ ಸಂಖ್ಯೆಯೂ ಹೆಚ್ಚಿರುವದೆಂದೂ, ವೈದ್ಯ ಇಲಾಖೆಯ ಮುಖ್ಯ ಆಫೀಸರರಾದ ಸರ್ಜನ್ ಜನರಲ್‌ರವರು ಅಭಿಪ್ರಾಯಪಡುತ್ತಾರೆ ಶಸ್ತ್ರ ಪ್ರಯೋಗದಿಂದ ಚಿಕಿತ್ಸೆ ಹೊಂದಿದವರ ಸಂಖ್ಯೆಯು [illegible] ಆಗಿದ್ದು ೧೯೦೭ನೇ ವರುಷಕ್ಕಿಂತ ಇದು ೧೧,೦೦೦ದಿಂದ ಜಾಸ್ತಿಯಾಗಿರುವುದು. ಇದೇ ಸಂಸ್ಥಾನದಲ್ಲಿ [illegible] ಹೊಂದಿದ ಸೂಲಗಿತ್ತಿಯರಿಂದ ೪೦,೦೦೦ ಪ್ರಸವಗಳು [illegible] ಇದರಲ್ಲಿ [illegible],೦೦೦ ಪ್ರಸವಗಳು [illegible]

[illegible]

ಮತ್ತು ಮೈಸೂರುಗಳು. ಮುನಿಸಿಪಲ್ ಮತ್ತು ಲೋಕಲ್ ಫಂಡುಗಳ ಸೂಲಗಿತ್ತಿಯರು ಇಡೀ ಸಂಸ್ಥಾನದಲ್ಲಿ ೩೩೩ ಜನರಿರುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೂಲಗಿತ್ತಿಯರಿಂದ ಹೆರಿಸೋಣಾದ ಪ್ರವಸಗಳು ಸರಾಸರಿ ಮೇಲೆ ಪ್ರತಿ ಸೂಲಗಿತ್ತಿಗೆ ೧೭೮ ಆಯಂತಿರುವವು. ಈ ಸಂಖ್ಯೆಯು ಸಂಸ್ಥಾನದ ಇತರ ಎಲ್ಲಾ ಜಿಲ್ಲೆಗಳಿಗಿಂತ ಹೆಚ್ಚಾಗಿರುವುದು.

ಇಡೀ ಸಂಸ್ಥಾನದ ಎಲ್ಲಾ ಸಿವಿಲ್ ಆಸ್ಪತ್ರಿಗಳ ಬಗ್ಗೆ ಸರಕಾರದವರಿಂದ ರೂ. ೬.೫೭ ಲಕ್ಷ, ಲೋಕಲ್ ಫಂಡುಗಳಿಂದ ರೂ. ೮.೬೯ ಲಕ್ಷ, ಮುನಿಸಿಪಾಲಿಟಿಗಳಿಂದ ರೂ. ೩.೩೭ ಲಕ್ಷ, ಯುರೋಪಿಯನರು ಮತ್ತು ಭಾರತೀಯರಿಂದ ರೂ. ೫೦,೦೦೦. ಈ ರೀತಿ ದ್ರವ್ಯ ಸಹಾಯವು ದೊರಕಿರುವುದು. ಈ ಎಲ್ಲಾ ಆಸ್ಪತ್ರೆಗಳ ಖರ್ಚು ರೂ. ೧೯.೭೮ ಲಕ್ಷ ಆಗಿರುವುದು.

—o—

ಕೋಲೆರಾ ಯಾ ವಾಂತಿಭೇದಿಯ ದಾಕು ಹಾಕುವಿಕೆಯು ರುಶ್ಯ ಮತ್ತು ಪರ್ಶಿಯಾ ದೇಶಗಳಲ್ಲಿ ಪ್ರಚಾರಕ್ಕೆ ಬರುತ್ತಿರುವುದಾಗಿ ಕೇಳುತ್ತೇವೆ. ಈ ದಾಕಿನಿಂದ ಪ್ರಯೋಜನ ಸಹಾ ದೊರಕುತ್ತಿರುವುದೆಂತ ತಿಳಿದುಬರುತ್ತದೆ. ಅಸ್ಟ್ರಾಖನ್ ಎಂಬಲ್ಲಿ ಈ ದಾಕು ಹಾಕಿದ ೪೬೮೭ ಜನರಲ್ಲಿ ಕೋಲೆರಾ ರೋಗದಿಂದ ಶೇಕಡಾ ಒಂದರಂತೆ ಮೃತಪಟ್ಟಿರುವಾಗ, ದಾಕು ಹಾಕದವರಲ್ಲಿ ಹೀಗೆ ಮೃತಪಟ್ಟವರ ಸಂಖ್ಯೆಯು ದುಬಾರಿಯಾಗಿರುವುದು. ರುಶ್ಯ ದೇಶದ ಸೈಂಟ್ ಪಿಟರ್ಸಬರ್ಗ್ ಪಟ್ಟಣದಲ್ಲಿ ೧೯೦೭ನೇ ಇಸವಿಯಲ್ಲಿ ೨೭ ಜನ ಡಾಕ್ಟ್ರರು ಮಾತ್ರ ಈ ರೀತಿ ದಾಕು ಹಾಕಿಸಿಕೊಂಡಿದ್ದರು. ೧೯೦೮ನೇ ವರುಷದಲ್ಲಿ ಹೀಗೆ ದಾಕು ಹಾಕಿಸಿಕೊಂಡವರ ಸಂಖ್ಯೆಯು ೬೦,೦೦೦ ಆಯಿತು. ರುಶ್ಯ ದೇಶದಲ್ಲಿ ದಾಕಿನ ಬಗ್ಗೆ ಉಪಯೋಗಿಸಲ್ಪಡುವ ದಾಕಿನ ದ್ರವವು [illegible] ತಯ್ಯಾರಿಸಲ್ಪಡುತ್ತದೆ. ಈ ದಾಕನ್ನು ಹಾಕಿಸಿಕೊಳ್ಳುವ ವಿಧಾನವು ಸಿಡಿಬಿನ ದಾಕಿನಂತಲ್ಲ. ಪ್ರಾರಂಭದಲ್ಲಿ ಸ್ವಲ್ಪ ಸ್ವಲ್ಪ ಪರಿಮಾಣದಲ್ಲಿ ಈ ದ್ರವದಿಂದ ದಾಕು ಹಾಕಬೇಕು. ತದನಂತರ ೫ ದಿವಸಗಳಲ್ಲಿ ಮತ್ತೊಮ್ಮೆ ೧೦ ದಿವಸಗಳಲ್ಲಿ ಇನ್ನೊಮ್ಮೆ ಈ ರೀತಿ ಮೂರು ಸರ್ತಿ ಈ ದ್ರವವನ್ನು ಹಾಕಿಸಿಕೊಂಡ ಮೇಲೆ ಇದರ ದಾಕು ಸಂಪೂರ್ಣವಾಗುವುದು. ಹೀಗೆ ಮೂರಾವರ್ತಿಯಿಂದ ದಾಕು ಹಾಕಿಸಿಕೊಂಡಲ್ಲಿ ದಾಕಿನ ಪ್ರಯೋಜನವು ಹೆಚ್ಚು ಸಿಕ್ಕಿ ರೋಗ ತಗಲುವ ಸಂಭವಗಳು ಅದನ್ನು ಕಡಿಮೆಯಾಗುವವು. ದಾಕು ಹಾಕಿಸಿದ ಐದು ದಿವಸಗಳ ನಂತರ ದಾಕಿನ ಪ್ರಯೋಜನವು ಸಿಕ್ಕುವುದು. ದಾಕು ಹಾಕಿಸಿಕೊಂಡವನು ಒಂದು ವರುಷದ ಪರ್ಯಂತರ ವಾಂತಿಭೇದಿಯ ರೋಗದಿಂದ ಪೂರ್ಣ ನಿರ್ಭಯನಾಗಿರುವನು.

—o—

"ಲಂಘನಂ ಪರಮೌಷಧಂ" ಎಂಬ ಹಿಂದೂ ವೈದ್ಯಶಾಸ್ತ್ರದ ಸಿದ್ಧಾಂತವು ಪಾಶ್ಚಾತ್ಯ ದೇಶಗಳಲ್ಲಿ ಬಹಳವಾಗಿ ಉದಹರಿಸಲ್ಪಡುತ್ತಿರುವುದು. ಅಂಗ್ಲಾಂಡದ ಯೋರ್ಕ್ಶಾಯರ್ ನಿವಾಸಿಕನೊಬ್ಬನು ಆಹಾರವಿಲ್ಲದೆ ಈಸ್ಟ್ ಡೀನ್ ಎಂಬ ಹಳ್ಳಿಯ ಹತ್ತರವಿರುವ ಸಮುದ್ರ ಕರಾವಳಿಯ ಒಂದು ಗುಡ್ಡೆಯ ಮೇಲೆ ವಾಸಿಸುತ್ತಿರುವನು. ಈತನಿರುವ ಗುಡ್ಡೆಯಿಂದ ಸಮುದ್ರ ತೀರಕ್ಕೆ ೧೬ ಮೈಲು ದೂರವಿರುವುದು. ಐದು ತಾಸುಗಳೊಳಗೆ ಈತನು ಸಮುದ್ರಕ್ಕೆ ಸ್ನಾನದ ಬಗ್ಯೆ ಹೋಗಿ ಹಿಂತಿರುಗಿ ಬರುವನು. ಈ ದಿವಸಗಳಲ್ಲಿ ಈತನು ಬರಿಯ ತಣ್ಣೀರನ್ನ ಕುಡಿಯುವುದರ ಹೊರತು ಬೇರೆ ಯಾವ ಆಹಾರವನ್ನೂ ತೆಗೆದುಕೊಳ್ಳುತ್ತಿಲ್ಲ. ಆರೋಗ್ಯಕ್ಕೆ ಆಗಾಗ್ಯೆ ಏನೂ ತಿನ್ನದೆ ಉಪವಾಸವಿರುವುದು ಅಗತ್ಯವಾಗಿರುವದೆಂದು ಈತನಿಗೆ ಅನುಭವಿಸಿದ್ದು. ಹೀಗೆ ಉಪವಾಸ [illegible] ಈತನು ಯಾವ ಬಗ್ಗೆ [illegible]

ರುವನೆಂಬದು ಆತನೇ ಕೊಟ್ಟ ಈ ಕೆಳಗಿನ ಕಾರಣಗಳಿಂದ ವ್ಯಕ್ತವಾಗುವುದು. "ಹದಿನೈದು ವರುಷ ಪ್ರಾಯದಿಂದ ಮೂತ್ರಕೋಶದ ರೋಗವು ನನಗೆ ಪ್ರಾಪ್ತವಾಗಿ ಜೀರ್ಣ ಮುಂತಾದ್ದು ಕೆಟ್ಟುಹೋಗಿ, ೨೭ ವರುಷ ಪ್ರಾಯದವರೆಗೆ ಬಹಳ ಜನ ಡಾಕ್ಟರರ ಔಷಧಿಗಳನ್ನು ತಕ್ಕೊಂಡರೂ ಏನೂ ಗುಣಕಾಣಲಿಲ್ಲ. ಕ್ರಮೇಣ ರೋಗಬಾಧೆಯು ಹೆಚ್ಚುತ್ತ ಬಂದದರಿಂದ ನಾನು ಹವೆ ಬದಲಾವಣೆ ಬಗ್ಯೆ ಇಟಾಲಿ ಪ್ರಾಂತ್ಯದತ್ತಕಡೆ ಹೋಗಿ ಅಲ್ಲಿ ಆಹಾರ ಮಾರ್ಪಾಟದಿಂದ ಗುಣ ದೊರಕುವುದೋ ಎಂಬದನ್ನು ಪರೀಕ್ಷಿಸುತ್ತಿದ್ದೆನು. ಕ್ರಮೇಣ ದಿನಕ್ಕೊಂದಾವರ್ತಿಯೇ ಊಟಮಾಡಿ ಹಲವು ವಾರಗಳನಂತರ ಈ ಒಂದೂಟವನ್ನು ಸಹಾ ಬಿಟ್ಟು ಪಕ್ವವಾದಂಥಾ ಫಲಗಳನ್ನು ಭುಂಜಿಸಿ ಜೀವಿಸಲು ಪ್ರಾರಂಭಿಸಿದೆನು. ನನ್ನ ತ್ರಾಣವೂ ಪುಷ್ಟಿಯೂ ಇದರಿಂದ ಏನೂ ಕಡಿಮೆಯಾಗಲಿಲ್ಲ. ಮಾಂಸ ಆಹಾರವನ್ನು ಪೂರ್ಣವಾಗಿ ತ್ಯಜಿಸಿ ಕಾಯಿಪಲ್ಲೆಗಳ ಮೇಲೆಯೇ ಬಹಳ ಕಾಲದವರೆಗೆ ಜೀವಿಸಿದೆನು. ಕ್ರಮೇಣ ಏನೂ ತಿನ್ನದೆ ಪೂರ್ಣ ಉಪವಾಸ ಮಾಡಲು ಅಭ್ಯಾಸಿಸಿದೆನು. ಹೀಗೆ ಉಪವಾಸದಿಂದಿದ್ದರೂ, ಪ್ರತಿನಿತ್ಯವೂ ಬೆಳಿಗೆಯಿಂದ ಸಾಯಂಕಾಲದವರೆಗೆ ದಿನಂಪ್ರತಿ ೪೦ ಮೈಲುಗಳ ಪ್ರಕಾರ ೬೦೦ ಮೈಲುಗಳ ತನಕ ಕಾಲುನಡೆಯಿಂದ ಪ್ರಯಾಣ ಮಾಡುವದೆ ಸಹಾ ಸಾಧಿಸಿರುವೆನು. ಈ ಅಭ್ಯಾಸಗಳಿಂದ ನನ್ನ ಶರೀರದಲ್ಲಿರುವ ರೋಗಗಳೆಲ್ಲಾ ಗುಣವಾಗಿ ಈಗ ಬಹಳ ಆರೋಗ್ಯದಿಂದಿರುವೆನು".

ಪಕ್ಷಕ್ಕೊಂದಾವರ್ತಿ ಏಕಾದಶಿ ದಿನ ಉಪವಾಸ ಮಾಡಬೇಕೆಂಬ ನಮ್ಮ ಆಚಾರವು ಯಾವ ನಿಮಿತ್ತ ಅಗತ್ಯವೆಂಬದು ಇದರಿಂದ ವ್ಯಕ್ತವಾಗುವುದು. ಪುರಾತನಕಾಲದಲ್ಲಿ ಯೋಗೀಶ್ವರರು ಎಲ್ಲಾ ಆಹಾರವನ್ನು ತ್ಯಜಿಸಿ ಬಹಳ ಕಾಲದವರೆಗೆ ಯೋಗಾಭ್ಯಾಸದಲ್ಲಿರುತ್ತಿದ್ದರು ಹ್ಯಾಗೆ ಸಾಧ್ಯವಾಗಿರುವುದೆಂಬದನ್ನು ಸಹ ಇದರಿಂದ ತಿಳಿಯಬಹುದು.

"ಬ್ರಿಟಿಶ್ ಬರ್ಡ್ಸ್" ಎಂಬ ಮಾಸಪತ್ರಿಕೆಯಲ್ಲಿ ತಜ್ಞ ಓಫ್ ಬೆಡ್‌ಫರ್ಡ್ ಎಂಬವರು ತಾನು ಸಾಕಿರುವ ಪಕ್ಷಿಗಳ ಬಾಳಿನ ವಿಷಯ ಈ ರೀತಿ ಬರೆದಿರುವರು. ಅವರ ಹತ್ತರವಿರುವ ಬಾರಿಲ [illegible] ತರಿಸಿದ ನಾರಿವಾಳ ಹಕ್ಕಿ ಅವರ ಕೈಕೆಳಗೆ ೧೪ ವರುಷ ಪ್ರಾಯ ತುಂಬಿದ್ದಲ್ಲದೆ ಈ ನಾರಿವಾಳವು [illegible] ಅವರಿಗೆ ದೊರಕುವಾಗ ನಾರಿವಾಳಕ್ಕೆ ೧೪ ವರುಷವಾಗಿತ್ತಂತೆ. ಹೀಗೆ ಈ ನಾರಿವಾಳಕ್ಕೆ ೩೦ ವರುಷ ಪ್ರಾಯವಾಗಿರುವುದು. ಜೀನಾದೇಶದಿಂದ ತರಿಸಿದ ಒಂದು ಬಾತುಕೋಳಿಯು ೫೭ ವರುಷಗಳಿಂದ ಆ ಡಚೆಸ್ ಓಫ್ ಬೆಡ್ಫರ್ಡರವರ ಸ್ವಾಧೀನದಲ್ಲಿರುವುದು. ಗೂಡಿನಲ್ಲಿ ಸಾಕಿದ ಬೇಳೆ ಜಾಲವುಳ್ಳ ರಾಜಹಂಸ [illegible] ೧೯೦೦ನೇ ವರುಷ ಸತ್ತುಹೋಯಿತು.

ಹಾಸ್ಟ ಸ್ಟೂಡೆಂಟ್ಸ್ ಸುಬ್ಬರಾವ್
ಮೆಮೋರಿಯಲ್ ಫಂಡ್.

ಕಳೆದ ೨ನೇ ಸಂಚಿಕೆಯಲ್ಲಿ ಪ್ರಕಟಿಸಿದ ಪ್ರಕಾರ ಫಂಡಿಗೆ ವಸೂಲಾದ ಜುಮುಲಾ ಮೊಬಲಗು.	ರೂ. ೭೫-೦-೦.

ನಂತರ ವಸೂಲಾದ ಮೊಬಲಗುಗಳ ವಿವರ:—

ಡಾಕ್ಟರ ಎಂ. ಅಣ್ಣಪ್ಪ ಕಾಮತ್‌ರವರು	ರೂ. ೫-೦-೦.
ರಾ. ಎ. ಭೋಜರಾಯರು	,, ೫-೦೦-.
,, ಎಂ. ರಂಗ ವೆಂಕಟೇಶ ಪೈ ಎಂಡ್ ಬ್ರದರ್ಸ್	,, ೧೫-೦-೦.
,, ಬಿ. ರಾಮಚಂದ್ರ ಪೈಗಳು; ೧ನೇ ಕಂತು	,, ೫-೦-೦.
,, ಉಳ್ಳಾಲ ವಿಟ್ಠಪ್ಪ ನ್ಯಾಕ ಎಂಡ್ ಬ್ರದರ್ಸ್	,, ೫-೦-೦.
ಜುಮುಲಾ ವಸೂಲಾದ	ರೂ. ೧೧೦-೦-೦.

ಜೀವಸುಗಳ ಧಾರಣೆ, ಮಂಗಳೂರು.

ಬಳ್ಳೇ ಮಸ್ಕತಿ ಅಕ್ಕಿ,,,,,,,,	5—9—0
ಗುದ್ದು ಮಸ್ಕತಿ,,,,,,,,,,	5—0—0
ಬೈಲು ಸುಗ್ಗಿ,,,,,,,,,,,,	5—0—0
ದುಯಂ ಗುದ್ದು ರಾಶಿ,,,,,,	4-11—0
ಮಸ್ಕತಿ ಬೆಳ್ತಿಗೆ,,,,,,,,,,,,	5—3—0
ರಂಗೂನ್ ಬೆಳ್ತಿಗೆ ಗೋಣಿ,,,,	7—12—0
ಹುರುಳಿ ಗೋಣಿ ೧ ಮುಡಿ 2ರ,,,	8-0—0
ಉಪ್ಪು ಗೋಣಿ ೧ರ,,,,,,,	3-8—0
ಕೊಪ್ರಿ ಎಣ್ಣೆ ಮಣ,,,,,,,,,,	5—8—0
ಕಾಫಿ ಖಂಡಿ ೧ರ,,,,,,,,	205—0—0
ಕಾಳು ಮೆಣಸು ಖಂಡಿ,,,,,	105—0—0
ಬಿಳಿ ಗೋಟು ಅಡಿಕೆ,,,,,,,	70—0—0
ಊರ ಬೆಲ್ಲ ಮಣ,,,,,,,,	2—10—0

ಯುವತೀರೋಗಿಯರಗೋಸ್ಕರ ತಯಾರಿಸಿದ
ಸೂಲಗಿತ್ತಿಯರಾದ ಕಮಲಾಬಾಯಿಯವರ
ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸ್ವಮಾ[illegible] ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸುಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಯೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ. ವಿ. ಪಿ. ಅಂಚೆ ಹಾಸಲು ೪ ಆಣೆ.

ಸೂಲಗಿತ್ತಿಯರಾದ ಕಮಲಾಬಾಯಿ, ಜಿ. ಎಮ್. ಸಿ
ಕಲ್ಬಾದೇವಿ ರೋಡ್, ಮುಂಬೈ.

THE MANGALORE WEAVING Co MANGALORE

ಮಂಗಳೂರು ವಿವಿಂಗ್
ಕಂಪೆನಿ, ಮಂಗಳೂರು.

ಶುಲಭಕ್ರಯ!　　　　ಹೆಚ್ಚಿನ ಡಿಸ್‌ಕೌಂಟು!!

ಮೆಡಲ್ ಯಾ ಬಹುಮಾನದ ಪದಕುಗಳನ್ನು ಪಡೆದಿರುವುದು.

ಈ ಮಗ್ಗದ ಕಾರ್ಖಾನೆಯಲ್ಲಿ ಪ್ರಖ್ಯಾತಿಪಟ್ಟ ಮಂಗಳೂರು ಮತ್ತು ಕಲ್ಲಿಕೋಟೆ ಅಂಗೀ ವಸ್ತ್ರಗಳು, ಟ್ವೀಡ್ ಮಾದರಿ ಅರುವೆ, ಷರ್ಟಿಂಗ್ ಯಾ ಒಳಂಗಿ ಅರುವೆ, ಹೊದ್ದುಕೊಳ್ಳುವ ವ ಹಾಸಿಗೆಗಳಿಗೆ ಹಾಸುವ ಬಟ್ಟೆಗಳು (Bed Sheets) ಟವಲುಗಳು ಮುಂತಾದವುಗಳು ತಯ್ಯಾರಿಸಲ್ಪಡುವವು. ವಸ್ತ್ರಗಳ ರಂಗು [illegible] ರುವುದು.

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ... ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು

ಬಾಟ್ಲ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯು ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ದೆ ಬೀಳುವದು

ಬಾಟ್ಲ ಒಂದರ 6 ಆಣೆ

ಮೋಹಿನಿ ಎಣ್ಣೆ

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ

ಬಾಟ್ಲ ಒಂದರ 6 ಆಣೆ

ರೋಯಲ್ ಟ್ರೇಡಿಂಗ್ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲ ಒಂದಕ್ಕೆ 8 ಆಣೆ, ೬ ಬಾಟ್ಲಗಳಿಗೆ 2 ರೂ 10 ಆಣೆ ೧೨ ಬಾಟ್ಲಗಳಿಗೆ 5 ರೂ ಬಹಳ ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ. ರಾ. ಪಾಠಕ್ ಮತ್ತು ಕಂಪೆನಿ,
ಠಾಕುರ್ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೋಒಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್,
ಎಂಬ

ಜೀವವಿಮೇ ಉತ್ತರಿಸುವ ಸಂಘ

ಹೆಡ್ ಆಫೀಸು:—14 ಹೇರ್ ಸ್ಟ್ರೀಟ್ ಕಲ್ಕತ್ತಾ
ಬ್ರೆಂಚ್ ಆಫೀಸುಗಳು —42 ಎಲ್ಫಿನ್ಸ್ಟನ್ ಸರ್ಕಲ್ ಮುಂಬಯಿ
8 ಬ್ರೊಡವೆ, ಮದ್ರಾಸು
1906ರಲ್ಲಿ ಸ್ಥಾಪಿಸಲ್ಪಟ್ಟಿತು
ಸಂಘದ ನಿಯಮಿತ ಬಂಡವಾಳ ಒಂದು ಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು

1909 ಎಪ್ರಿಲ್ ತಿಂಗಳ ವರೆಗೆ ರೂ 18,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು

ಕೆಲವು ವಿಶೇಷ ಸಂಗತಿಗಳು ಕಂಪೆನಿಯ ಪಾಲುದ್ದಾರಿಕರಿಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಲ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಬಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ

ಬಿ. ಬಾಬುರಾವ್ ಎಂಡ್ ಸನ್,
ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಪತ್ರ ಬಾಟ್ಲಯೊಂದಿಗಿರುವುದು { **ಸಿದ್ಧಲಕ್ಷ್ಮೀ ವಿಲಾಸ.** } ಕ್ರಯ ಬಾಟ್ಲಗಕ್ಕೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ ಸೇವನೆಗೂ ... ಯುಕ್ತವಾಗಿರುವುದು (ಆಸನದಲ್ಲಿ) ಗುದದ್ವಾರದ ಹತ್ತರ ಬೀಳು ... ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಷಾದಿ ... ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ... ಇದು ದಿವ್ಯ ಔಷಧವಾಗಿರುವದು.

... ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ... [illegible]

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟಿದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್'. ಈ ವಿಷಯ ಹೆಚ್ಚು ಬರಿಯುವುದೇ ಅಗತ್ಯವಿಲ್ಲ. ಒಂದು ಸಾರಿ ಪರೀಕ್ಷಿಸಿದೊಡನೆ ತಿಳಿದು ಬರುವುದು. ಬಾಟ್ಲ ಒಂದರ ಕ್ರಯ ರೂಪಾಯಿ ೧—೦—೦.

ಸ್ವದೇಶಾಭಿಮಾನಿಯ ... ಮಾತ್ರ, ಇದು ... [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗ ೨ ರೂ ೧೦ ಆಣೆ,

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ

೩. ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ ರೂ

೪ ಪಂಚಜೀರಕ ಪಾಕ ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೫. ಸೂರಣಾವ ಲೇಹ ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೬. ಪ್ಲೀಹೋದರಾರಿ ಚೂರ್ಣ ಒಂದು ತಿಂಗಳೊಳಗಾಗಿ ಆಯಾಸವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ

೭. ಜಗನ್ಮೋಹವ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ

೮. ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ

೯ ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೧೦ ವಾಸಾವ ಲೇಹ ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ.

೧೨ ವಾತವಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು, ಉರಿಯುವದಿಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ.

೧೪ ಸವ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗ ೨ ರೂ ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ — ಬಿ. ಎಮ್. ನಾಥು ಮತ್ತು ಕಂಪನಿ,
ಬಾಂದ್ರಾ (ಮುಂಬಯಿ ಹತ್ತಿರ)
Bandra (near Bombay)

ROYAL TRADING Co. GIRGAUM BOMBAY.

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು, ಗಂಟ್ಲು ನೋವು, ಎದೆಶೀತ, ಉಳುಕು, ಅನೆಗಾಲು, ಘಾಯ, ಚೇಳುಕಡಿತ ಉರಿ, ಈ ಎಲ್ಲಾ ತರದ ನೋವುಗಳ ಮೇಲೆ ಇದು ಅತೀ ಉತ್ತಮವಾದದ್ದು, ಇದು ಹಾನಿಕಾರಿಯಲ್ಲ

ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು
ಕ್ರಯ ಕಮ್ಮಿ, ಗುಣ ಹೆಚ್ಚು ಒಂದುಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು

ಬಾಟ್ಲಿ ಒಂದರ ಕಿಮ್ಮತು ೪ ಆಣೆ.

ಇನಾಮುಗಳು —ಒಂದೇ ಸಾರಿ ೬ ಬಾಟ್ಲಿಗಳನ್ನು ತರಿಸಿಕೊಂಡರೆ ಒಂದು ಎಲ್ಯುಮಿನಿಯಮ್ ಗ್ಲಾಸು ೧೨ ಬಾಟ್ಲಿಗಳನ್ನು ತರಿಸಿಕೊಂಡರೆ ರೇಶ್ಮೆಯ ಲವಸ್ತ್ರ ಸಾವಿರಾರು ಜನರಿಗೆ ಗುಣಕೊಟ್ಟಿರುವ ಈ ನಮ್ಮ ರೊಯಲ್ ಇಂಡಿಯನ್ ಬಾಂಮನ್ನು ಪ್ರತಿ ಒಬ್ಬರೂ ತರಿಸಿ ಉಪಯೋಗಿಸುವಿರಾಗಿ ನಂಬುತ್ತೇವೆ ವ್ಯಾಪಾರಸ್ಥರಿಗೆ ಚಲೋ ಕಮೀಶನ್ ದೊರಕುವದು

ನಮ್ಮಲ್ಲಿಯ ಈ ಔಷಧಿಯು ಅನೇಕ ಕಡೆಗಳಲ್ಲಿ ಪ್ರಸಿದ್ಧಿಯಾಗಿದ್ದು ತಮ್ಮಿತ್ತಕಡೆಯಲ್ಲಿಯು ಸಹ ಪ್ರಸಿದ್ಧಿಯಾಗುವದೆಂಬದಾಗಿ ದೃಢಚಿತ್ತದಿಂದ ನಂಬುತ್ತೇವೆ

ವಿಳಾಸ:— ರೊಯಲ್ ಟ್ರೇಡಿಂಗ್ ಕಂಪನಿ,
ಗಿರಗಾಂ ಮುಂಬಯಿ.

Sole Agent in Mangalore Town—
Mangalore Trading Association,
Mangalore.



ಸುರಂಗಿ ಅತ್ತರು.

ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು ಇದರ ಪರಿಮಳವು ಹೆಚ್ಚು ದಿನಗಳ ವರೇಗೆ ಹೋಗುವದಿಲ್ಲ ಬಾಟ್ಲಿ ಒಂದರ ಕ್ರಯ No I ೧—೪—೦ No 2 ೧—೦—೦ ದಿಲ್‌ಖುಷ್ ೧—೦—೦ ದಶಾಂಗ ೦—೧೪—೦ ಜುಯಿ ೦—೧೪—೦ ಚಂಬೋಲಿ ೦—೧೪—೦

ಕೇಶವರ್ಧಿನಿ ಎಣ್ಣೆ ಹೆಂಗಸರ ಪ್ರೀತಿಕರವಾದ ಎಣ್ಣೆ ಇದರಿಂದ ಕೂದಲುಗಳು ಕಪ್ಪಾಗುವವು, ಮತ್ತು ಬೆಳೆಯುವವು ಬಾಟ್ಲಿ ಒಂದರ ಕಿಮ್ಮತು ೦—೮—೦

ಗಜಕರ್ಣದ ಮುಲಾಮು ೦—೪—೦

ರೊಯಲ್ ಟ್ರೇಡಿಂಗ್ ಕಂಪನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಸತತವಾತ, ಚೇಳುಕಡಿತ, ತಲೆನೋವು, ಶೀತ, ಘಾಯ, ಗಂಟ್ಲು ನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ. ಇನ್ನೂ ಸಾವಿರಾರು ಜನರು ಗುಣಹೊಂದುವರು ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ. ಇದು ಎಳೇ ಮಗುವಿನ ಮೇಲಾದರೂ ಭಯವಿಲ್ಲದೆ ಹಚ್ಚಬಹುದು.

ಬಾಟ್ಲಿ ಒಂದರ ಕಿಮ್ಮತು ರೂ. ೦—೪—೦, ಆರು ಬಾಟ್ಲಿಗಳಿಗೆ ರೂ. ೧—೧೪—೦.

ವಿಳಾಸ:— ರಾಮರಾವ್ ನಾನಾಬಾಯಿ ...

"ಲಾ" ಪ್ರಕಟನೆಗಳು.

———o———

1 ವ್ಯವಹಾರ ನಿರ್ಣಯ—ಫುಟಗಳು ೫೪೬ ಹಿಂದೂ ಮಹಮದೀ ಲಾಗಳು, ೩೪ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2 ಕನ್ನಡ ಲಾ ರಿಪೋರ್ಟ್— ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ, ಒದೆಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯು ವಿ ಪಿ ಬಿಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟು ಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ. ಸೇರಿ 10 ಆಣೆ, ಇವುಗಳನ್ನು ಅಪೇಕ್ಷಿಸುವವರು ... ಮಲ್ಲಾರಾವ್ಬೈ ಗಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ ಬೆಂಗಳೂರ ಸಿಟಿ ಈ ವಿಳಾಸಕ್ಕೆ ಬರೆಯುವದು.

——— ———

THE HINDU SOAP MANUFACTURING CO.,

ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

———o———

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ದರದ ವಿರಚಿತವಾದದ್ದು ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರೆಕೊಳ್ಳಬಹುದು

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಿಗಳು.

ಪರಿಮಳಾಂಜನ ನಂಬ್ರ 1 —ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಗಿನ್ನೆ, ಅರ್ಧಾಂಗವಾಯು ವಾತ, ಸಂಧಿವಾತ, ಶೀತ, ಕೆಮ್ಮು, ಗಂಟ್ಲುನೋವು, ಜಪಿಮ್, ಉಳುಕು, ಗಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-8-0

2. ತಾಂಬೂಲ ಸುವಾಸಿನಿ —ಸೀಸೆ ೧ರ ಕ್ರಯ 0 4-0

3. ದಂತಮಂಜನ —ಡಬ್ಬಿ ೧ರ ಕ್ರಯ 0 2 0

4. ಗಜಕರ್ಣದ ಮುಲಾಮು —ಡಬ್ಬಿ ೧ರ ಕ್ರಯ 0-6 0

5. ನಯನಾಮೃತ ಸುರುಮ —ಸೀಸೆ ೧ರ ಕ್ರಯ 0 8-0.

6. ಶ್ವಾಸಕುಠಾರ —ಡಬ್ಬಿ ೧ರ ಕ್ರಯ 0 8 0

7 ಪರಿಮಳಾಂಜನ ನಂ ೨ – ಡಬ್ಬಿ ೧ರ ಕ್ರಯ 0-10-0

8 ಜ್ವರಾಂಕುಶ ಮಾತ್ರೆ ಡಜನ್ ೧ರ ಕ್ರಯ 0-8-0.

9. ಸುಗಂಧ ವಕ್ಷದ ಪುಡಿ — ಡಬ್ಬಿ ೧ರ ಕ್ರಯ 0-6-0

10. ದಶಾಂಗಧೂಪ—ಶೈವ ವೈಷ್ಣವರಿಗೆ ಅತ್ಯಂತ ಉಪಕಾರಿಯಾದದ್ದು, ಶೇರು ೧ಕ್ಕೆ ರೂಪಾಯಿ 1-4-0

11. ದ್ರಾಕ್ಷಾರಿಷ್ಟ —ಬಾಟ್ಲಿ ೧ರ ಕ್ರಯ 2 8-0 ಇದರ ಸೇವನೆಯಿಂದ ಪಿತ್ತ, ಉರಕ್ಷಯ, ಕ್ಷಯ, ಖಾಸಶ್ವಾಸಗಳ ರೋಗ ಗುಣವಾಗುವದಲ್ಲದೆ ಮಲಶೋಧನೆ ಚನ್ನಾಗಿ ಆಗಿ ಶರೀರ ಪುಷ್ಟಿಯಾಗುವದು

ಇನ್ನು ಅನೇಕ ಔಷಧಗಳು ಇರುವದರಿಂದ ಬೇಕಾದವರು ನಮ್ಮ ಕೆಟಲಾಗಿಗೆ ಬರಿಯಿರಿ.

ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ.

ಟಿ. ಬಾಬುರಾಯರ,
ಆಯುರ್ವೇದಿಕ್ ಔಷಧಾಲಯ,
ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಳೆ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ. ಮತ್ತು ಮದ್ರಾಸು

ಟ್ರಸ್ಟೀ —- ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ... ವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ... ದ್ದಾಗಿರುವುದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೆ ... ಕಮ್ಮಿ ... ವಿಮೋ ದರಗಳಲ್ಲಿ ಉತ್ತರಾಯಿಸ ಬಹುದು

ಇತರ ಯಾವ ಜೀವವಿಮೋ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಒರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಬದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೋ ಉತ್ತರಾಯಿಸ ಬಹುದು

... ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ... ಪ್ರದರ್ಶಕರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ ಕನ್ನಡ.

ANGLO INDIAN DRUG & CHEMICAL Co's.

ಕೇಪಿಟೋ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇಸಿಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ಒಡಿಮು ವಾಯು, ಉರಿ, ಶೀತ, ಕೆಮ್ಮು, ... ದಶೀತ, ಸೊಂಟದ ನೋವು, ಬೆನ್ನುನೋವು, ಪಕ್ಷವಾತ ಅನೇಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಮಿಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲಿ ಒಂದಕ್ಕೆ ೮ ಆಣೆ

ಧಿಲ್‌ಬಾರ್ ಮತ್ತು ಗುಲ್‌ಸನ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ. ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು ಬಾಟ್ಲಿ ಒಂದರ ೧—೮—೦.

ವಿಳಾಸ — **ಡಿ. ಊಲನ್ ಮಾರ್ಟ್.**
ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ,	೧೨ ಸಾರಿ.	೨೪ ಸಾರಿ.	೫೨ ಸಾರಿ.
ಇಡೀ ಪಾನು	ರೂ ೧೦	ರೂ ೩೨	ರೂ. ೭೨	ರೂ. ೧೧೦	ರೂ. ೧೫೦.
ಅರ್ಧ ಪಾನು	,, ೬	,, ೧೮	,, ೩೮	,, ೬೦	,, ೮೫.
ಕಾಲು ಪಾನು	,, ೪	,, ೧೨	,, ೨೦	,, ೩೨	,, ೫೫.
ಅರೆಕಾಲು ಪಾನು	,, ೨	,, ೭	,, ೧೨	,, ೧೮	,, ೩೫.

ಸೂಚನೆ:—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ಕೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ... ವರುಷಕ್ಕೆ ೨ ರೂ. ೧ ಆ. ಟಪ್ಪಾಲು ಹಾಸಲು ಇಲ್ಲದೆ ೧ ರೂ. ... [illegible] ... ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮೊರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಬಿಳಿ ಕಾಗದದ ಅನೇಕ ಗೆರೆಗಳುಳ್ಳವುಗಳು

3'×8½', 3'×5½', 8¼'×6½', 6½'×4' ಪರಿಮಾಣಗಳಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಖಾತ್ರಿಯಾಗಿದ್ದು.

ಎಲ್ಲ ನಮೂನೆಗಳು ಪರಿಶುದ್ಧವಾದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೆರೆ ಎಳೆದ ಬೇರೆ ಎಲ್ಲಾ ಸೈಜುಗಳಲ್ಲಿ ಬಿಳಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು.

ಹಾನಿಯ ಒಳ್ಳೇ ನಿಯೋಗವು ಯಾವುದು— ಬೆಲೆಗೆ ತಕ್ಕ ಒಡವೆಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರವನ್ನಾಗಿದ್ದು ಈಗ 1903ನೇ ಇಸವಿಯಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್ ಬಾರ್ಲಿ, ಕೊರ್ನ್‌ಫ್ಲೋರ್, ಟೀ, ಕೋಕೋ, ಕಾಫಿ ಹುಡಿ, ಬಿಸ್ಕೀಟ್ ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಉಪಯೋಗಕ್ಕಾದ ಸಮಸ್ತ ಔಷಧಿಗಳು,

(ಕೆಸ್ಟರ್ ಆಯಿಲ್, ವ ಗ್ಲಿಸರಿನ್ ಕೆ ಶುಲ್ ಫ್ಲುಯ್ ಕ ಮೊದಲಾದವುಗಳೂ ಸಹಾ).

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರದಲ್ಲಿಯೂ ಅನುಭವಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಅಂಚೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟಿನ ಫೋರ್ಮುಗಳು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸೈಜುಗಳಲ್ಲಿ ಅಚ್ಚು ಹಾಕುವುದು

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಜಿಸ್ಟರುಗಳಿಗೆ 'ರೂಲಿಂಗ್' ಯಾ ಗೆರೆ ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ಧರೆದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಮಂಗಳೂರು.

Mangalore Trading Association.
Mangalore, S. Canara.

Printed by V. S Kamath, at the Mangalore Trading Association's Sharada Press Mangalore.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವದು.

ಪುಸ್ತಕ 3. ಮಂಗಳೂರು, ತಾರೀಕು 8ನೇ ಶುಕ್ರವಾರ ಅಕ್ಟೋಬರ 1909 ಸಂಚಿಕೆ 27.

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು ಶಿರೋಭಾರ ಅರ್ಧಾಂಗ ವಾಯು, ಸೊಂಟದ ನೋವು, ಗಂಟ್ಲು ನೋವು ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

SAFE ★ EFFICACIOUS ★ SURE
WILLIAM & Co.
BOMBAY
PILLS ★ OINTMENTS ★ POWDERS

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿಗಳಿಗೆ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳ ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತ 2 ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿಸ ಕೊಕೊ, ಲೆಸಿತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ ೩೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1.

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ತಾಗಿಸುವದರಿಂದ ಮೋರೆಯ ಮೇಲ್ಗಿರುವ ಮುದ್ದೆಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ. 2—4—0

ಚೇಳು ಕಡತದ ಮೇಲಿನ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಶುದ್ಧವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಃ ಶುದ್ಧಿ ಮಾಡುವದು. ಬಾಟ್ಲಿ ೧ರ ಕಿಮ್ಮತು ೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಜುಲಾಬು ಮಾತ್ರೆಗಳು	ರೂ	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0-10—0.
ಖಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

[illegible] ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗ [illegible] ಬರದಲ್ಲಿ [illegible]

[illegible] ಮುಂಬಯಿ. [illegible] "ಅಮೃತಾಂಜನ" ಮುಂಬಾಯಿ.

ಶೃಂಗಾರ ಸಂಗ್ರಹ (ಉತ್ತಮವಾದ ಪುಸ್ತಕ, ... ಮೂಲಿಕಾ ವಿಷಯಗಳನ್ನೇ ... ಈ ಗ್ರಂಥಕ್ಕೆ ... ಅರಸಿನವರು ... ಟೀಕಾ ತಾತ್ಪರ್ಯ ಬರೆಸಿದ್ದಾರೆ).	೩-೦-೦
ಶ್ರೀಶಿವಾನಂದಲಹರೀ ಟೀಕಾ ತಾತ್ಪರ್ಯ.	೦-೬-೦
ಉತ್ತರ ರಾಮಚರಿತ್ರೆ ಕಥೆ.	೦-೫-೦
ಶ್ರೀ ರಾಘವೇಂದ್ರ ಸ್ತೋತ್ರ	೦-೨-೦
ತೈಲಕಲ್ಪರೇಖಾ ಸೂರ್ಯ ನಮಸ್ಕಾರ.	೦-೨-೦
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ । ಚಿಕ್ಕಸೈಜು	೦-೨-೦
~~ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ.~~	೦-೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦-೨-೦
ಸ್ವರಸಹಿತವಾದ ನಮಕ ಚ-ಮಕ	೦-೨-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦-೨-೦
ಕೃಷ್ಣ ಕರ್ಣಾಮೃತ ಮೂಲ	೦-೨-೦
ದೇವರ ಸೇವೆ ಹೊಸ ಪುಸ್ತಕ	೦-೪-೦
ಮುಕುಂದ ಮಾಲಾ (ಗೀತಾ)	೦-೪-೦
ಶಿವ ನಾಮಾ	೦-೦-೬
ಹನುಮನ್ನಾಮಾ	೦-೦-೬
ಹರಿ ನಾಮಾ	೦-೦-೬
ಯಾಜುಷ ಪ್ರಯೋಗ	೦-೮-೦
ಬೃಹತ್ಕಥಾ ಮಂಜರಿ	೦-೮-೦
ಕೃಷ್ಣ ಬೋಧಾಮೃತ	೦-೬-೦

೦-೪-೦ ಕಮ್ಮಿ ವಿ ಪಿ ರವಾನಿಸುವದಿಲ್ಲ

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್ ಬೆಂಗಳೂರು.

ಕುಂತಳ ಕೌಮುದಿ ತೈಲ.

ಕ ... ಮಹಾರಾಣಿಯವರು—ಇವರು ಉಪಯೋಗಿಸಿದ ... ಇದೇ ಅತ್ಯುತ್ತಮವಾದುದು

ಮೈಮೆನ್‌ಸಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡ ಬಲ್ಲೆನು

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ, ಸರ್ವರೂ ಇದನ್ನು ಉಪಯೋಗಿಸ ಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್ ಸಿ. ಸೆನ್, ಎಲ್ ಎಮ್. ಎಸ್.,
216 ಕಾರನ್ ವಾಲಿಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ರೇಷ್ಮೆ ವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು, ಹಗಲ್ ಬತ್ತಿ ವಗೈರೆ ರಂಗುಗಳ ವಸ್ತ್ರಾ 1ಕ್ಕೆ ... ರೂ. 0—12—0.

ಸೈಜು ಇಂಚು 22×22 ವಸ್ತ್ರ ೧ಕ್ಕೆ ... 1— 1—0.

ಸೈಜು ಇಂಚು 15×15 ಬಿಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರಾ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು.

ಸೈಜು ಉದ್ದ 5 ಮೊಳ, ಅಗಲ 2½ ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರಾ 1ಕ್ಕೆ ರೂ 12, 13, 14, 15, 16, 17 ಡಿಟೋ ~~ಸಪ್ಪೆ ರೇಷ್ಮೆ ಬಾಬತು 1ಕ್ಕೆ ರೂ 6, 7, 8, 9, 10~~

ರೇಷ್ಮೆ ನಡುಕಟ್ಟುಗಳು.

ಕೆಂಪು, ನೀಲಾ, ಬ್ಲೂ, ನಾರಂಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5-6 ಮೊಳ, ಅ 2-3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1-4-0. 1 8-0, 1 10 0, 1-12 0, 2 0-0, 2-8-0

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ ಕಾಡಿಗಣ್ಣು ಹಂಸ ಪಕ್ಷಳ, ಶೃಂಗಾರ ಪಕ್ಷಳ, ಜಗನ್ನಾಥ ಲಾಕಿಮುಂಗಿ ಹೂವ ಮುಂಗಿ ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ 1 6-0, 1 12-0

ಡಿಟೊ ಕಪ್ಪ ಚಂದ್ರಕಾಳಿ ಕಣಗಳು 1ಕ್ಕೆ ರೂ 1 0 0, 1-2-0, 1-3-0 ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2-4 0, 2 8 0, 2 10-0

ಡಿಟೊ ಒಂದು ಕಡ ಅಂಚಿನ ಪರಕಾರದ ಕಣ 1ಕ್ಕೆ ರೂ. 1-4 0, 1-6-0, 1-8 0

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2-10 0, 2 12-0, 3 0-0

ಡಿಟೊ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಸೀರೆಕಣ 1ಕ್ಕೆ ರೂ 3-6 0 3-8-0, 3-12 0

ಡಿಟೊ ರಂಗುಗಳ ಕಲಾಬತ್ತು ನಾಲಾರಿ ಮತ್ತು ಚೌಕಳ ಸೀರೆ ಕಣಾ 1ಕ್ಕೆ ರೂ 4 12-0, 5-0 0

ಹೆಚ್ ಸಂಕಪ್ಪಾ ಬವಪ್ಪವವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ವಿ. ಪಿ. ಆರ್ಡರುಗಳಿಗೆ ಸುಲಭ ಕ್ರಯ.

ಊದು ತ್ರಿ ಸೇರು ೧ಕ್ಕೆ ೦ ೮-೦, ೧-೦ ೦, ೨ ೦ ೦, ೩ ೦-೦, ೪ ೦-೦, ೫ ೦ ೦ ಗಂಧದ ಎಣ್ಣೆ ತೋಲ ೧ಕ್ಕೆ ರೂ ೨, ೪, ೮, ೬, ೧೨, ೧೬

ಅಂಬರ (ಪಚ್ಚ ಗಂಧ) ತೋಲ ೧ಕ್ಕೆ ೧ ೦-೦, ೧-೮-೦

ಬೆಳ್ಳಿ ಗಣೇಶಗಳು ೧ಕ್ಕೆ ೨ ೮-೦ ೩ ೦-೦ ೩-೮ ೦, ೪-೦-೦, ೫ ೦-೦

ಶುದ್ಧ ರೇಷ್ಮೆ ಅವಂತವ ದಾರಗಳು ಜೊತೆ ೧ಕ್ಕೆ ೨, ೪, ೬ ೮, ೧೦, ೧೨, ೧೪

ಉಲನ್ ಚವುಕಗಳು ಹಳದಿ, ಹಸುರು, ನೀಲಿ, ಗುಲಾಬಿ, ಎಣ್ಣೆ ರಂಗುಗಳಲ್ಲಿ ೧ಕ್ಕೆ ರೂ ೧ ೬ ೦ ೨ ೦ ೦ ೩ ೦ ೦

ಉಲನ್ ಶಹಲುಗಳು ೧ಕ್ಕೆ ೩ ೮ ೦, ೩ ೧೨ ೦, ೪ ೦-೦.

ಕಾಷ್ಮೀರ ಶಹಲುಗಳು ಎಲ್ಲಾ ರಂಗುಗಳಲ್ಲಿಯೂ, ೧ಕ್ಕೆ ರೂ ೯-೦-೦, ೧೦ ೦ ೦, ೧೨ ೦ ೦, ೧೫ ೦-೦, ೧೬ ೦ ೦, ೧೮ ೦-೦, ೨೦ ೦-೦

ಹಾಸವದ ಟೋಪಿ ಹಣಿಯುವ ಉಲನ್ ದಾರಗಳು ಕೆಂಪು, ಎಣ್ಣೆಗೆಂಪು, ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦-೬-೦, ೦-೧೦-೦, ೦-೧೨ ೦, ೦ ೧೪ ೦, ಡಿಟೋ ಸೂಜಿ ೧ಕ್ಕೆ ೦ ೧ ೬, ೦ ೨-೦

ಉಲನ್‌ನಿಂದ ಹಣಿದ ಟೋಪಿಗಳು ಡಜನ್ ೧ಕ್ಕೆ ೪-೮-೦, ೫-೦-೦, ೬ ೦ ೦, ೭-೮ ೦, ೮ ೦ ೦, ೯ ೦ ೦, ೧೦ ೦ ೦, ೧೨-೦-೦

ಹೆಚ್ ಎನ್. ರಾವ್ ಬ್ರದರ್ಸ್,
262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ಸೇಬು, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ... ಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರೆದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್,
...

ಮೈಸೂರು ದೇಶಕ್ಕೆ ಏಜೆಂಟರು:—ಎಚ್. ಎ. ಪೋರುವಾಲ್ ಎಂಡ್ ಕೋ.,
ಚಿಕ್ಕಪೇಟೆ, ಬೆಂಗಳೂರು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 8ನೇ ಅಕ್ಟೋಬರ 1909.

ಮಂಗಳೂರು ಮುನಿಸಿಪಾಲಿಟಿ.

———0———

ಮಂಗಳೂರು ಮುನಿಸಿಪಾಲಿಟಿಯು ಕಳೆದ ೧೯೦೮—೧೯೦೯ನೇ ವರುಷದ ವರದಿಯು ಪ್ರಕಟವಾಗಿದೆ. ಮುನಿಸಿಪಾಲಿಟಿಯ ಆದಾಯ ವೆಚ್ಚ ಆಡಳಿತೆಗಳ ಸಂಕ್ಷಿಪ್ತ ವೃತ್ತಾಂತವು ಜನರಿಗೆ ಮನೋರಂಜಕವಾಗದಿರದು. ನಮ್ಮ ಮುನಿಸಿಪಾಲ್ ಕೌನ್ಸಿಲಿನಲ್ಲಿ ಒಟ್ಟು ೨೦ ಸಭಿಕರು, ಅವರಲ್ಲಿ ೧೫ ಮಂದಿ ವಾರ್ಡು ಪ್ರತಿನಿಧಿಗಳಾಗಿರುವರು. ಕಳೆದ ವರುಷ ೭ ಇಸಮುಗಳು ಖಾಲಿ ಬಿದ್ದಿದ್ದವು. ಇವುಗಳ ಚುನಾವಣೆಯು ಪ್ರತಿಕಕ್ಷಿ ಇಲ್ಲದೆ ನಡಿಯಿತು. ಇದರಿಂದ ಜನರಲ್ಲಿ ಮುನಿಸಿಪಾಲ್ ವಿಷಯಗಳಲ್ಲಿ ಎಷ್ಟು ಕುತೂಹಲವುಂಟೆಂದು ಊಹಿಸಬಹುದು. ಮುನಿಸಿಪಾಲ್ ಕೌನ್ಸಿಲು ಕಳೆದ ವರುಷ ೧೬ಸಾರಿ ಕೂಡಿತು. ಎರಡು ಸಭೆಗೆ "ಕೋರಂ" ಯಾನೆ ಮೆಂಬರರ ಅವಶ್ಯಕ ಕನಿಷ್ಟ ಸಂಖ್ಯೆ ದೊರೆಯದೆ ಸಭೆ ಕೂಡಲಾಗಲಿಲ್ಲ.

ಕಳೆದ ವರುಷದ ಆರಂಭದಲ್ಲಿ ಕೌನ್ಸಿಲಿನ ಭಂಡಾರದಲ್ಲಿ ೧೦,೩೫೫-೯-೮ ಸಿಲುಕು ಇತ್ತು. ಸರಕಾರದವರು ೩೫,೦೦೦ ರೂಪಾಯಿ ಆರೋಗ್ಯಕರ ವಿಲೆವಾರಿಗಳ ಉದ್ದಿಶ್ಯವೂ, ೫,೦೦೦ ರೂಪಾಯಿ ಪ್ಲೇಗ್ ಖರ್ಚಿಗೂ ದಾನವಾಗಿ ಕೊಟ್ಟರು. ಇದು ಹೊರತು ಮುನಿಸಿಪಾಲಿಟಿಯು ಸರಕಾರದಿಂದ ರೂಪಾಯಿ ೧೨,೦೦೦ ಸಾಲ ತಕ್ಕೊಳ್ಳಬೇಕಾಯಿತು. ತೆರಿಗೆಯ ಮೂಲಕ ಕೌನ್ಸಿಲಿಗೆ, ರೂಪಾಯಿ ೭೨,೮೫೫-೦-೩ ಅಂದರೆ ಮುಂಚಿನ ವರುಷಕ್ಕಿಂತ ಸುಮಾರು ರೂ. ೨॥ ಸಾವಿರ ಹೆಚ್ಚಿಗೆ ಸಿಕ್ಕಿತು. ವೃತ್ತಿ ತೆರಿಗೆ, ಭೂಕಟ್ಟೋಣಗಳ ತೆರಿಗೆ, ವಾಹನಗಳ ತೆರಿಗೆ, ಟೋಲ್ ಗೇಟು, ಮಾರ್ಕೆಟುಗಳ ಗುತ್ತೆಗಳಿಂದ ಮೇಲ್ಕಂಡ ತೆರಿಗೆ ಮೊಬಲಗು ದೊರೆಯುವುದು. ವೃತ್ತಿ ತೆರಿಗೆಯಲ್ಲಿ ೬೫ ಜನ ತೆರಿಗೆ ಕೊಡುವವರು ಹೆಚ್ಚಿರುವರು. ೪೩ ಕಟ್ಟೋಣಗಳೂ ೨೩೭ ರೂಪಾಯಿ ಕಟ್ಟೋಣ ತೆರಿಗೆಯೂ ಹೆಚ್ಚಿದೆ. ಇದಲ್ಲದೆ ಮಾರ್ಕೆಟ್ ಗುತ್ತೆಯಿಂದ ೫೯೫ ರೂಪಾಯಿ ಹೆಚ್ಚು ದೊರಕಿದೆ. ಮುನಿಸಿಪಾಲ್ ತೆರಿಗೆಯು ನಿಶ್ಶೇಷವಾಗಿ ವರುಷದೊಳಗೆ ವಸೂಲಾದದ್ದಲ್ಲದೆ, ನಿರಾಧಾರಿಯೆಂದು ತೆಗದುಹಾಕಿದ ಐವಜು ಕಳೆದ ಕಾಲಕ್ಕಿಂತ ಕಡಿಮೆಯದೆ. ವಾರ್ಡಾಂತುಗಳು ಮುಂಚಿನ ವರುಷಕ್ಕಿಂತ ಕಡಿಮೆಯಾಗಿದ್ದವು. ಇದರಿಂದ ಮುನಿಸಿಪಾಲ್ ಮೇಲ್ವಿಚಾರಣೆಯು ಒಳ್ಳೇ ರೀತಿ ಸಾಗಿಯದೆಂದು ಸ್ಪಷ್ಟವಾಗುವುದು. ಇದರ ಬಹುಮಾನವೂ, ಆಫೀಸ್ ಒಳ್ಳೇ ವ್ಯವಸ್ಥೆಯಲ್ಲಿಟ್ಟ ಬಹುಮಾನವೂ, ವ್ಯಾಸ್ ಚೇಯರ್ಮೇನ ಮ. ರಾ. ರಾ. ಅ. ವಾಸುದೇವ ಪೈಗಳವರಿಗೆ ಸಲ್ಲತಕ್ಕದ್ದೆಂದು ಕಲ್ಲೆಕ್ಟರ್ ದೊರೆಗಳವರು ತಮ್ಮ ಇಂಡಾರ್ಸ್ಮೆಂಟಿನಲ್ಲಿ ಬರೆದಿರುವರು. ಇವರು ಬಹುಕಾಲ ಹಜೂರ ಶಿರಸ್ತೆಯಿಂದ ಹೊಂದಿದ ಅನುಭವವು ಮುನಿಸಿಪಾಲಿಟಿಗೆ ಉಪಯುಕ್ತವಾಗಿರಬೇಕು.

ಮುನಿಸಿಪಾಲಿಟಿಗೆ ಕಳೆದ ವರುಷ ರೂಪಾಯಿ ೯೫,೫೯೧-೧೦-೧೦ ಖರ್ಚಾಯಿತು. ಈ ಪೈಕಿ ರೂಪಾಯಿ ೮,೦೭೦-೨-೫ ಮಾರ್ಗ ಕಟ್ಟೋಣ ವಗೈರೆ ದುರುಸ್ತುಗಳಲ್ಲಿ, ಹೊಸ ಮಾರ್ಗ ಮಾಡುವದರಲ್ಲಿ ಖರ್ಚಾಯಿತು. ಮಾರ್ಗಗಳ ಸ್ಥಿತಿಯು ನಿಕೃಷ್ಟವೆಂದು ಡಿವಿಜನಲ್ ಆಫೀಸರು, ಕಲ್ಲೆಕ್ಟರವರು ಪಟ್ಟ ಅಭಿಪ್ರಾಯವನ್ನು ಸರಕಾರದವರು ಮುನಿಸಿಪಾಲಿಟಿಯವರ ಲಕ್ಷ್ಯಕ್ಕೆ ತಂದಿರುವರು. ಈ ಕರಾವಳಿಯ ಮಳೆಯ ದೆಸೆಯಿಂದ ಮಾರ್ಗಗಳ ಉದ್ದಿಶ್ಯ ವಿಪರೀತ ಖರ್ಚು ತಗಲುವದೆಂಬದು ಖರೆ. ಆದರೆ ವಹಿವಾಟಿದ ಮಾರ್ಗಗಳನ್ನು ನೆಟ್ಟಗೆ ಇರಿಸುವುದು ಮುನಿಸಿಪಾಲಿಟಿಯ ಕರ್ತವ್ಯ.

ವಿದ್ಯಾಭಿವೃದ್ಧಿಯ ಉದ್ದಿಶ್ಯ ಮುನಿಸಿಪಾಲಿಟಿಯವರು ಕಳೆದ ವರುಷ ರೂಪಾಯಿ ೪,೭೧೭-೧೧-೩ ವೆಚ್ಚ ಮಾಡಿದರು. ಈ ಪಟ್ಟಣದಲ್ಲಿ ೭ ಮುನಿಸಿಪಾಲ್ ಶಾಲೆಗಳೂ, ೧೪ ಮುನಿಸಿಪಾಲ್ ಸಹಾಯ ಹೊಂದುವ ಶಾಲೆಗಳೂ ಇವೆ. ಆದರೆ ಹುಡುಗರಲ್ಲಿ ಬಹುಪಕ್ಷವು ಮುನಿಸಿಪಾಲ್ ಸಹಾಯ ಹೊಂದದ ಶಾಲೆಗೆ ಹೋಗುವರೆಂದು ಸರಕಾರದವರು ಟೀಕೆಮಾಡಿದ್ದಾರೆ. ಬಾಲಿಕಾ ಶಿಕ್ಷಣವು ಮುಂಚಿನಕ್ಕಿಂತ ಅಭಿವೃದ್ಧಿ ಹೊಂದಿದೆ. ವೈದ್ಯ ವ ಆರೋಗ್ಯಕರ ಉಪಚಾರಗಳಿಗೆ ರೂ. ೬೪,೨೧೮-೨-೬ ಖರ್ಚಾಯಿತು. ಇದರಲ್ಲಿ ಮುನಿಸಿಪಾಲಿಟಿಯವರು ಕಳೆದ ಕಾಲ ಊರಲ್ಲಿ ತೋಡಿದ ಭಾವಿಗಳು, ಆರೋಗ್ಯ ರಕ್ಷಣಾರ್ಥ ಸಂಪಾದಿಸಿದ ಅನಾರೋಗ್ಯಕರ ನಿವಾಸಗಳು, ನಾಶಪಡಿಸಿದ ಹೊಲಸು ಗುಡಿಸಲುಗಳು ಇವೆಲ್ಲವುಗಳ ಬಗ್ಯೆ ತಾಗಿದ ಖರ್ಚು ಸೇರಿದೆ. ಈ ಎಲ್ಲಾ ಆರೋಗ್ಯದಾಯಕ ವ್ಯವಸ್ಥೆಯಲ್ಲಿ ರಾವ್ ಸಾಹೇಬ್ ಮ. ರಾ. ರಾ. ಎನ್. ಸುಬ್ಬರಾಯರವರು ವಿಶೇಷ ಪ್ರಯತ್ನಪಟ್ಟ ಸಂಗತಿಯನ್ನು ಕಲ್ಲೆಕ್ಟರ ದೊರೆಗಳವರು ಸರಕಾರಕ್ಕೆ [illegible]ರುವರು. ಪ್ಲೇಗ್ ರೋಗದ ನಿವಾರಣೆಯಲ್ಲಿ ಡಿ. ಮೆ. ಆಫೀಸರ ಡಾ. [illegible] ಮಾಡಿದ ಸಹಾಯವನ್ನು ಕಲ್ಲೆಕ್ಟರವರು ಒಪ್ಪಿಕೊಂಡಿದ್ದಾರೆ.

[illegible] ಈ ವಿಷಯದಲ್ಲಿ [illegible] ಸಂದರ್ಭದಲ್ಲಿ ಜನರ ಲಕ್ಷ್ಯ [illegible] ಗಿರಲಿಲ್ಲವೆಂದು ಡಿ. ಮೆ. ಆಫೀಸರ [illegible] ತೋರುವದು. ಆಸ್ಪತ್ರೆಯ ಒಳಹೊರ ರೋಗಿಗಳ ಸಂಖ್ಯೆಯು ಹೆಚ್ಚಿದೆ ಖರೆ. ಆದರೆ ಇದರ ಕಾರಣವು ರೋಗಿಗಳಿಗೆ ಅಲ್ಲಿ ಸಿಕ್ಕುವ ಉಪಶಮನವೇ ಎಂದು ಹೇಳಲಾರೆವು. ಜನಸಂಖ್ಯೆಯ ಕೂಡ ರೋಗಿಗಳ ಸಂಖ್ಯೆಯು ಹೆಚ್ಚಬಹುದು. ರೋಗ ಪ್ರಬಲವಾದ್ದರಿಂದ ರೋಗಿಗಳ ಸಂಖ್ಯೆ ಹೆಚ್ಚಬಹುದು.

ಮುನಿಸಿಪಾಲ್ ಬೆಳಕುಗಳ ಉದ್ದಿಶ್ಯ ಕಳೆದ ಕಾಲ ರೂಪಾಯಿ ೪,೫೬೫-೧೨-೧೧ ಖರ್ಚಾಯಿತು. ಇದರಲ್ಲಿ ಜನರಿಗೆ ಎಷ್ಟು ರೂಪಾಯಿಯ ಬೆಳಕು ಸಿಕ್ಕಿತೆಂದೂ, ಆ ಬೆಳಕು ದಾರಿಗರಿಗೆ ಎಷ್ಟು ಮಟ್ಟಿಗೆ ಉಪಯುಕ್ತವಾಯಿತೆಂದೂ ನಾವು ಹೇಳಲವಶ್ಯವಿಲ್ಲ. ಈ ಪಟ್ಟಣದ ಮಾರ್ಗಗಳಲ್ಲಿ ರಾತ್ರಿಕಾಲ ನಡೆಯುವ ವಾಚಕರೇ ನಿರ್ಧರಿಸಲಿ. ಮುನಿಸಿಪಾಲ್ ಬೆಳಕುಗಳ ಸ್ಥಿತಿಯನ್ನು ಮುನಿಸಿಪಾಲ್ ಅಧಿಕಾರಿಗಳು ಒಳ್ಳೇ ರೀತಿ ಪರಾಮರ್ಶಿಸಲವಕಾಶವಿದೆ.

ಆಫೀಸ ಶಿಬಂದಿ ವಗೈರೆಗೆ ರೂಪಾಯಿ ೫,೫೭೭-೯-೯ ಬೇಕಾಯಿತು. ಮತ್ತು ವಿಶೇಷ ಖರ್ಚಿಗೆ ರೂಪಾಯಿ ೮,೪೯೩-೪-೦ ಕಳದು ರೂಪಾಯಿ ೧೯,೫೪೦-೧೫-೧ ವರುಷಾಂತ್ಯದಲ್ಲಿ ಮುನಿಸಿಪಾಲಿಟಿಗೆ ಸಿಲುಕು ಉಳಿಯಿತು. ಆದರೆ ಕಳೆದ ವರುಷ ಮುನಿಸಿಪಾಲಿಟಿಯವರು ೧೨ ಸಾವಿರ ರೂಪಾಯಿ ಸರಕಾರದಿಂದ ಸಾಲ ಪಡೆದಿರುವರು. ಇದಕ್ಕೆ ಮುಂಚಿನ ಸಾಲ ಕೂಡಿಸಿದರೆ ೨೧,೬೦೦ ರೂಪಾಯಿ ಆಗುವದು. ಈ ಸಾಲವು ತೆರಿಗೆಯಿಂದ ಮುನಿಸಿಪಾಲಿಟಿಗೆ ಸಿಕ್ಕುವ ಆದಾಯದ ಸುಮಾರು ಅರೆವಾಶಿಯಾಗುವುದು. ತೆರಿಗೆಯಾದರೋ ತಲೆಗೆ ೧ ರೂಪಾಯಿಯಂತೆ ಬೀಳುವದು. ಹೀಗಿರುವಾಗ್ಯೆ ತೆರಿಗೆಯನ್ನು ಇನ್ನೂ ಹೆಚ್ಚಿಸುವುದು ಜನರಿಗೆ ಅತಿ ಸಂಕಷ್ಟಕರವಾಗುವುದು. ಮುನಿಸಿಪಾಲಿಟಿಯವರು ಇನ್ನು ಸಾಲ ತೆಕ್ಕೊಳ್ಳುವುದು ಅಪೇಕ್ಷಣೀಯವಲ್ಲ. ಈ ಸಂಗತಿಯನ್ನು ಸದ್ಯ ಜಾರಿಗೆ ಬರಲಿಕ್ಕಿರುವ ಮಹೋಳಿ ನೀರು ಸರಬರಾಯಿಯ ಕುರಿತು ಹೇಳಬೇಕಾಯಿತು. ಆ ಸರಬರಾಯಿಗೆ ಲಕ್ಷಕಟ್ಲೆ ಖರ್ಚು ಮುಟ್ಟುವದು. ಇಂಥಾ ದೊಡ್ಡ ವಿಷಯದಲ್ಲಿ ಸರಕಾರವೇ ದಯಾಭಾವದಿಂದ ಮುನಿಸಿಪಾಲಿಟಿಗೆ ನೆರವಾದರೆ, ಅದರಿಂದ ಉಂಟಾಗುವ ಫಲದಿಂದ ಪ್ಲೇಗು ಹಾವಳಿಯು ಕಡಿಮೆಯಾಗುವುದು; ಪ್ಲೇಗು ಸಂಬಂಧ ಸಾವಿರಕಟ್ಲೆಯ ಖರ್ಚೂ ಪ್ರಾಣಹಾನಿಯೂ ಉಳಿಯುವುದು. ಸರಕಾರದವರು ಆಗ್ಯಾಗ್ಯೆ ಮುನಿಸಿಪಾಲಿಟಿಗೆ ಕೊಡುವ ಫ್ರೀ ಗ್ರಾಂಟು (ಉಚಿತ ದಾನ)ಗಳಿಗೆ ಈಗಿನಷ್ಟು ಅವಕಾಶವಿರದು.

ಮುನಿಸಿಪಾಲ್ ಕೌನ್ಸಿಲಿನಲ್ಲಿ ವ್ಯಾಪಿಸಿದ್ದ ಐಕ್ಯಮತ್ಯವನ್ನು ಚೆಯರ್ಮೇನ್ ವ್ಯಾಸ್ ಚೆಯರ್ಮೇನರವರ ಆಸಕ್ತಿಯನ್ನು ಸರಕಾರದವರು ಕೊಂಡಾಡಿರುವರು.

~~~~~~~~

ಬ್ರಾಹ್ಮಣರೂ ಭಿಕ್ಷುಕ ವೃತ್ತಿಯೂ. ಬ್ರಾಹ್ಮಣರಲ್ಲಿ ಜನ್ಮವೆತ್ತಿದವರೆಲ್ಲರೂ ಭಿಕ್ಷುಕ ವೃತ್ತಿಯನ್ನವಲಂಬಿಸುವುದು ಕುಲಪರಂಪರವಾದ ಧರ್ಮಾಚಾರವಾಗಿರುವುದೆಂಬದು ವಾಡಿಕೆಯಾದ ಮಾತು. ಕದಿಯ ಬಾರದು, ಸುಳ್ಳಾಡ ಬಾರದು, ಹೊಟ್ಟೆಗಿಲ್ಲವಿದ್ದರೆ ಭಿಕ್ಷೆ ಬೇಡಬೇಕೆಂಬ ತತ್ತ್ವವಾದಿಗಳಿಗೆ ಬ್ರಾಹ್ಮಣರು ಅವಲಂಬಿಸಿರುವ ಭಿಕ್ಷಾವೃತ್ತಿಯಿಂದ ಗೌರವು ದೊರಕಿರುವುದು. ಕಳೆದ ಸರ್ತಿಯ ಖಾನೆಶುಮಾರಿ ಲೆಕ್ಕದಿಂದ ಹಿಂದುಸ್ಥಾನದಲ್ಲಿ ೫೦ ಲಕ್ಷ ನಿವಾಸಿಕರು ತಮ್ಮ ಜೀವನವನ್ನು ಪಾಮರ ವೃತ್ತಿಯಿಂದಲೇ ಪಡಿಯುತ್ತಿರುವರಾಗಿ ತಿಳಿದು ಬರುವುದು. ಇವರಲ್ಲಿ ಸಾಧುಗಳು, ಬ್ರಾಹ್ಮಣರು, ಫಕೀರರು, ಭಿಕಾರಿಗಳು ಮೊದಲಾದ ಹಲವು ವರ್ಗದವರಿರುವರು. ಭಿಕ್ಷುಕವೃತ್ತಿಯು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ಅತೀ ಹೀನವಾಗಿರುವುದಲ್ಲದೆ ಜನರಲ್ಲಿ ಇದು ಲೇಶಮಾತ್ರವಾದ ಅಭಿಮಾನವನ್ನು ಸಹ ಇರಗೊಡಿಸದು. ಯಾವ ವೃತ್ತಿಗಳನ್ನಾದರೂ ದೊರಕಿಸಲು ದುಸಾಧ್ಯವೆಂದು ಕಂಡಾತನು ಈ ವೃತ್ತಿಯನ್ನು ಪ್ರಯತ್ನವಿಲ್ಲದೆನೇ ಒದಗಿಸಿಕೊಳ್ಳುವನು. ಇಂತಹ ವರ್ಗಕ್ಕೆ ಸೇರಿರುವ ಬ್ರಾಹ್ಮಣರನ್ನು ಪೋಷಿಸುವುದರಿಂದ ಜನ್ಮ ಜನ್ಮಾಂತರಗಳಲ್ಲಿಯೂ ಮಾಡಿರುವ ಪಾಪಗಳಿಂದ ವಿಮೋಚನೆ ಹೊಂದುವೆವು ಎಂಬ ಭಾವನೆಯಿಂದ ಅನೇಕಾನೇಕ ದ್ರವ್ಯವ್ಯಯವು ಈ ಬಗ್ಯೆ ಆಗುತ್ತಿರುವುದು. ಹಿಂದುಸ್ಥಾನದಲ್ಲಿ ತಾರತಮ್ಯವಿಲ್ಲದೆ ದಾನಧರ್ಮಗಳು ಕೊಡಲ್ಪಡುವುದರಿಂದ ಯಾಚಕವೃತ್ತಿಯು ಇನ್ನಷ್ಟು ಬಲಗೊಳ್ಳುತ್ತಿರುವುದು. ಜಗತ್ತಿಗೆ ಉಪಕಾರವನ್ನೂ ಕೊಡುವವನಿಗೆ ಯಶಸ್ಸನ್ನೂ ತರುವ ದಾನಧರ್ಮಗಳು, ಸಮಾಜ ವ್ಯಣಗಳಾಗಿರುವವರನ್ನು ಪೋಷಿಸುವರೆಯೂ, ಡಂಭಕ್ಕಾಗಿಯೂ ವಿಧಿವಶಾತ್ ಉಪಯೋಗಿಸಲ್ಪಡುತ್ತಿರುವವು. ಇಂತಹ ದಾನಧರ್ಮಗಳಿಂದ ಸಮಾಜದಲ್ಲಿರುವ ಅರಿಷ್ಟಗಳು ಇನ್ನಷ್ಟು ವೃದ್ಧಿಯಾಗಿ ಜನಾಂಗವು ಪೌರುಷವನ್ನು ಕಳಕೊಂಡು ಕ್ಷಯಿಸುತ್ತಿರುವುದು. ಬ್ರಾಹ್ಮಣರಿಗೆ ದಾನಧರ್ಮಗಳನ್ನು ಕೊಟ್ಟು ಬಹಳ ಪುಣ್ಯರಾಶಿಯನ್ನು ಸಂಪಾದಿಸಬಹುದೆಂಬ ವಿಚಾರವಿಲ್ಲದ ಬೋಧೆಯು ಈ ಅರಿಷ್ಟಕ್ಕೆ ಕಾರಣವಾಗಿರುವದೆಂದು ಹಲವರು ಅಭಿಪ್ರಾಯಪಡುತ್ತಿರುವುದರಿಂದ ಬ್ರಾಹ್ಮಣರು ದಾನಧರ್ಮಗಳನ್ನು ತಕ್ಕೊಳ್ಳುವರೆ ಎಷ್ಟರಮಟ್ಟಿಗೆ ಪಾತ್ರರಾಗಿರುವರೆಂಬದನ್ನು ತಿಳಿಯುವದು ಅವಶ್ಯಕ.

ದಾನಧರ್ಮಗಳ ಮುಖ್ಯ ಉದ್ದಿಶ್ಯ [illegible] ದು. ಎಲ್ಲಾ [illegible] ವಿದ್ಯೆಯೇ ಮೂಲವಾದ್ದರಿಂದ ವಿದ್ಯಾ[illegible]
~~~~~~~~

ಪ್ರಾಪ್ತಿಪಡಿಸಿ ಮಾಡುವುದೇ ದಾನಧರ್ಮಗಳ ಮುಖ್ಯ ಉದ್ದೇಶ್ಯವಾಗಿರಬೇಕು. ಪ್ರಾಚೀನ ಕಾಲಗಳಲ್ಲಿ ಈ ವಿದ್ಯಾಬಲವನ್ನು ಇಟ್ಟುಕೊಂಡು ವಿದ್ಯಾಕಾಲಿಗಳೂ, ಪ್ರಜೆಗಳ ರಕ್ಷಣೆಯನ್ನು ತಮ್ಮ ವಿವೇಕದಿಂದ ನಡಿಸುತ್ತಿರುವವರೂ ಆದ ಋಷಿ ಶ್ರೇಷ್ಠರೇ ಮೊದಲಾದವರನ್ನು ದಾನಧರ್ಮಗಳಿಂದ ಪಾಲಿಸುವುದು ಸರ್ವರ ಕರ್ತವ್ಯವಾಗಿತ್ತು. ಇವರ ವಂಶಜರೇ ಆಗಿದ್ದರೂ ಪ್ರಕೃತ ಕಾಲದಲ್ಲಿ ಬ್ರಾಹ್ಮಣರ ಗೌರವವು ಯಾವ ಸ್ಥಿತಿಯಲ್ಲಿರುವುದು? ಭಗವತ್ಪುರಾಣದಲ್ಲಿ ಈ ಮೊದಲೇ ಸೂಚಿಸಿದಂತೆ ಈ ಕಾಲದಲ್ಲಿ ತಮ್ಮ ವಾಮಪಾರ್ಶ್ವದ ಭುಜದ ಮೇಲಿಂದ ಅಡ್ಡವಾಗಿ ಬಲಪಾರ್ಶ್ವದಲ್ಲಿ ತೂಗುತ್ತಲಿರುವ ಮೂರು ನೂಲುಗಳಿಂದ ಹೆಣೆದ ಜನಿವಾರಧಾರಿಯೇ ಬ್ರಾಹ್ಮಣನಾಗಿರುವನು. ಬ್ರಾಹ್ಮಣರಲ್ಲಿ ವಿದ್ವಾಂಸರು ಅಥವಾ ತಮ್ಮ ಪಿತಾಮಹರಾದ ಋಷಿಗಳ ವರ್ಗಕ್ಕೆ ಅರ್ಹರಾದವರೂ ಪ್ರಕೃತ ಇರುವುದಿಲ್ಲವೆಂಬುದು ನಮ್ಮ ಅಭಿಪ್ರಾಯವಲ್ಲ. ಅಥವಾ ಬ್ರಾಹ್ಮಣ ವರ್ಣವನ್ನು ತುಚ್ಛೀಕರಿಸುವುದೂ ನಮ್ಮ ಉದ್ದೇಶ್ಯವಲ್ಲ. ದಾರಿಕೆಟ್ಟಿರುವ ಬ್ರಾಹ್ಮಣಕುಲೋತ್ಪನ್ನರು ತಮ್ಮ ಜನ್ಮವನ್ನರಿತುಕೊಂಡು ಬ್ರಾಹ್ಮಣಪದವಿಗೆ ಅರ್ಹರಾಗುವಂತೆ ಸಾಧಿಸಬೇಕೆಂಬ ಉದ್ದೇಶ್ಯದಿಂದ ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿರುವೆವು. ಬ್ರಾಹ್ಮಣರಲ್ಲಿ ವಿದ್ಯಾವಂತರೂ ವಿವೇಕಿಗಳೂ ಆದಂಥವರು ನಮ್ಮೆಲ್ಲರ ಮನ್ನಣೆಗೆ ಎಂದೆಂದೂ ಪಾತ್ರರಾಗಿರುವರು. ಬರಿಯ ಜನಿವಾರಧಾರಿಯೇ ಮಾತ್ರವಾಗಿದ್ದು ಬ್ರಾಹ್ಮಣ ತಾಯಿತಂದೆಗಳಲ್ಲಿ ಹುಟ್ಟಿದ ಮಾತ್ರದಿಂದ ಗಾಯತ್ರಿಯು ಕೂಡ ಗೊತ್ತಿಲ್ಲದಿದ್ದರೂ, ಸಂಸ್ಕೃತದ ವಾಸನೆ ಇಲ್ಲದಿದ್ದರೂ ವಿಷಯಲಂಪಟನಾಗಿರುವವನಾದರೂ ಆತನು ಬ್ರಾಹ್ಮಣನೆನ್ನಿಸಿ ಕೊಳ್ಳುವನು. ಇಂಥವನನ್ನು ದಾನಧರ್ಮಗಳಿಂದ ಪೋಷಿಸಿದರೆ, ಪೋಷಿಸಿದವನಿಗೆ ಯಾವ ಸುಕೃತವು ದೊರೆಯುವುದು? ಸಮಾಜವೂ ಇಂಥವರ ಪೋಷಣೆಯಿಂದ ಪಾಪಭಾರಿಯು ಆಗುವುದಲ್ಲವೆ?

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣಭೇದಗಳು ಯಾವ ಕಾಲದಲ್ಲಿ ಯಾವ ಬಗ್ಗೆ ಏರ್ಪಟ್ಟವೆಂಬುದು ಸರ್ವರಿಗೂ ತಿಳಿದಿರುವುದು. ಒಂದು ವರ್ಣದವರು ಇನ್ನೊಂದು ವರ್ಣದವರನ್ನು ಸುಲಿಗೆ ಮಾಡುವಂತೆ ಈ ವರ್ಣಗಳು ಏರ್ಪಟ್ಟವುಗಳಲ್ಲ. ಜೀವನವು ಸಮಾಜದಲ್ಲಿ ಸರ್ವರಿಗೂ ಸುಲಭಸಾಧ್ಯವಾಗುವಂತೆ ವರ್ಣಭೇದಗಳುಂಟಾದವು. ಇವುಗಳಿಗನುಸಾರವಾಗಿ ಬ್ರಾಹ್ಮಣನು ಬರಿಯ ವೇದಶಾಸ್ತ್ರಗಳ ಅಧ್ಯಯನ ಮಾತ್ರವಲ್ಲ, ಇತರರೆಲ್ಲರಿಗೂ ಪ್ರಯೋಜನಕಾರಿಯಾದ ವಿದ್ಯೆಯನ್ನು ಪಡೆದು ಇದನ್ನು ಧರ್ಮಾರ್ಥವಾಗಿ ಬಯಸಿದವರೆಲ್ಲರಿಗೂ ದೊರಕಿಸಿ ಕೊಡಬೇಕಾಗಿತ್ತು. ಮನುಧರ್ಮಶಾಸ್ತ್ರದ ಎರಡನೇ ಅಧ್ಯಾಯದಲ್ಲಿ ೧೭೫–೨೦೦ ವರೆಗಿನ ಶ್ಲೋಕಗಳಿಂದ ಉಪನಯನ ಸಂಸ್ಕಾರದ ನಂತರ ಬ್ರಹ್ಮಚಾರಿಯು ಗುರುವಿನ ಆಶ್ರಮಕ್ಕೆ ಹೋಗಿ ಗುರುವಿನ ಶುಶ್ರೂಷೆಯನ್ನು ಮಾಡಿಕೊಂಡು ವಿದ್ಯಾಭ್ಯಾಸವನ್ನು ಪೂರೈಸಬೇಕೆಂಬುದು ವ್ಯಕ್ತವಾಗುವುದು. ವಿದ್ಯಾಭ್ಯಾಸವನ್ನು ಪೂರೈಸಿದ ನಂತರ ಗೃಹಸ್ಥಾಶ್ರಮವನ್ನು ತಾಳಿ ಈ ಆಶ್ರಮದಲ್ಲಿಯೂ ತನ್ನ ವಿದ್ಯಾಧ್ಯಯನಗಳನ್ನು ಬಿಡದೆ ಅಭ್ಯಾಸಿಸಿ ಇತರರಿಗೆ ಸಹಾ ಶಿಕ್ಷಕನಾಗಿ ದಾನಧರ್ಮಗಳನ್ನು ಕೊಟ್ಟು ಅವುಗಳನ್ನು ತಾನು ಸಹಾ ಪಡಕೊಂಡು ಇತರ ಧರ್ಮಾಚಾರಗಳನ್ನು ನಡಿಸುತ್ತ ಜೀವಿಸಬೇಕಾಗಿತ್ತು. ಭಿಕ್ಷುಕ ಸೋಪಾದಿಯಲ್ಲಿ ಮನೆಯಿಂದ ಮನೆಗೆ ಹೋಗಿ ಬೇಡುವದೆ ಯಾವ ಶಾಸ್ತ್ರಾಧಾರವೂ ಇಲ್ಲ. ಇತರರು ಮನಸ್ಸಂತೋಷದಿಂದ ಬ್ರಾಹ್ಮಣನಿಗೆ ಅವನು ಕೇಳದೆ ದ್ರವ್ಯ ಸಹಾಯವನ್ನು ಕೊಡಬೇಕಾಗಿತ್ತು. ಭಿಕ್ಷೆಯನ್ನೇ ಅವಲಂಬಿಸಿರುವಂಥಾ ಜೀವನವು ತುಚ್ಛವೆಂತ ಎಣಿಸಲ್ಪಟ್ಟಿತು. ಪುರೋಹಿತತನವನ್ನು ತನ್ನ ಜೀವನಾವೃತ್ತಿಯನ್ನಾಗಿ ಮಾಡಿಕೊಳ್ಳಬಾರದಾಗಿಯೂ ಇಂಥವನಿಗೆ ಈ ಬಗ್ಗೆ ಕೊಟ್ಟ ದಾನವು ನಿಷ್ಫಲವಾಗುವದಾಗಿಯೂ ಮನುಧರ್ಮಶಾಸ್ತ್ರದ ೩ನೇ ಮತ್ತು ನಾಲ್ಕನೇ ಅಧ್ಯಾಯಗಳಿಂದ ತಿಳಿದುಬರುವುದು.

ಬ್ರಾಹ್ಮಣರು ಪೂರ್ವ ಕಾಲಗಳಲ್ಲಿ ವಿದ್ಯಾವಂತರಾಗಿದ್ದು, ಪರಾರ್ಥವಾಗಿಯೇ ಈ ವಿದ್ಯಾ ಲಾಭವನ್ನು ದೊರಕಿಸಿ ಕೊಡುವುದರಿಂದ ಅವರಿಗೆ ಉಚಿತವಾಗಿ ದ್ರವ್ಯ ಸಹಾಯವನ್ನು ಮಾಡುವುದು ಜನಾಂಗದ ಏಳಿಗೆಗೆ ಅವಶ್ಯವಾಗಿತ್ತು. ಓದು ಬರಹ ಸಹಾ ಗೊತ್ತಿಲ್ಲದವರಾದ ಬ್ರಾಹ್ಮಣರಲ್ಲಿ ಅನೇಕರಿಗೆ ಪ್ರಕೃತ ಕೊಡೋಣವಾಗುವ ದಾನಧರ್ಮಗಳಿಂದ ಜನಾಂಗಕ್ಕೆ ಹಾನಿಯುಂಟಾಗದಿರದು. ಮಹರ್ಷಿಗಳ ವಂಶಜರಾದ ಬ್ರಾಹ್ಮಣರು ತಮ್ಮ ಪೂರ್ವೋನ್ನತಿಯನ್ನು ಹೊಂದುವಂತೆ ದಾನಧರ್ಮಗಳೆಲ್ಲವನ್ನೂ ತಾರತಮ್ಯಾನುಸಾರವಾಗಿ ಕೊಡಬೇಕಾಗಿ ನಮ್ಮ ವಿನಂತಿಯಾಗಿರುವುದು. ಬ್ರಾಹ್ಮಣರು ಎಂದೂ ಲಜ್ಜಾಸ್ಪದವಾದ ಭಿಕ್ಷಾವೃತ್ತಿಯನ್ನು ಕೈಕೊಳ್ಳಕೂಡದೆಂಬುದು ನಮ್ಮ ಅಪೇಕ್ಷೆ.

B. A

ಶಿಶುಗಳೂ ಅವುಗಳ ಅಕಾಲಮರಣವೂ ಮಾನವ ವರ್ಗದಲ್ಲಿ ಸಮಾರ್ಧಕ್ಕಿಂತ ಹೆಚ್ಚು ಸಂಖ್ಯೆಯವರು ಶೈಶವದಲ್ಲಿಯೇ ಮೃತಪಡುತ್ತಿರುವರೆಂಬದನ್ನು ನಿರ್ಣಯಿಸಿರುವರು. ಶೈಶವದಲ್ಲಿ ಮಕ್ಕಳು ಪ್ರಾಣಹಾನಿಕರವಾದ ಅಪಾಯಗಳಿಗೂ ರೋಗಗಳಿಗೂ ತುತ್ತಾಗುವ ಸಂಭವಗಳು ಹೆಚ್ಚಾಗಿರುವವು. ನವನಾಗರಿಕತೆಯ ಪೂರ್ಣ ಪ್ರಯೋಜನವನ್ನು ಪಡೆದಿರುವ ಯೂರೋಪ ದೇಶಗಳಲ್ಲಿ ಸಹಾ ಶಿಶುಗಳ ಲಾಲನೆ ಪಾಲನೆಗಳಿಗೆ ಹೆಚ್ಚಿನ ನಿಗಾ ಕೊಡುತ್ತಿರುವರಾದರೂ ಮಕ್ಕಳ ಮರ್ತ್ಯತೆಯು ಬಹಳ ಕಡಿಮೆಯಾಗಿರುವುದಿಲ್ಲ. ಯೂರೋಪ ದೇಶದ ಮತ್ತು ಇತರ ಕಡೆಗಳ ಶೀತ ಪ್ರದೇಶಗಳಲ್ಲಿ ಅನೇಕ ಶಿಶುಗಳು ಶ್ವಾಸಕೋಶ ರೋಗಗಳಿಗೂ ಅಜೀರ್ಣದ ರೋಗಗಳಿಗೂ ಬಲಿಯಾಗುತ್ತಿರುವವು. ಉಷ್ಣ ಪ್ರದೇಶಗಳಲ್ಲಿ ಉಷ್ಣತೆ, ಅಪಸ್ಮಾರ, ರಕ್ತಾತಿಸಾರ, ಅತಿಸಾರ, ವಾಂತಿಭೇದಿ ಮೊದಲಾದ ರೋಗಗಳಿಂದ ಸಾಯುತ್ತಿರುವವು. ರುಶ್ಯದೇಶದಲ್ಲಿ ಮಕ್ಕಳ ಅಕಾಲ ಮರಣವು ಭಯಂಕರವಾದ ರೀತಿಯಲ್ಲಾಗುತ್ತಿರುವದು. ರುಶ್ಯದಲ್ಲಿ ಹೀಗೆ ಸಂಭವಿಸುತ್ತಿರುವ ಮಕ್ಕಳ ಮರಣಗಳನ್ನು ನಿಲ್ಲಿಸಿದ್ದಲ್ಲಿ ಕೆಲವು ವರುಷಗಳಲ್ಲಿಯೇ ಅಲ್ಲಿಯ ಜನಸಂಖ್ಯೆಯು ಈಗಿರುವುದಕ್ಕಿಂತಲೂ ಇಮ್ಮಡಿಸಲು ಬಹುದೆಂಬದಾಗಿ ನಿರ್ಣಯಿಸಿರುವರು. ಇಂತಹ ಮರಣಗಳು ಹೆಚ್ಚಾಗಿ ಅತೀ ಬಡವರಾದ ರುಶ್ಯದ ರೈತರಲ್ಲಿ ಸಂಭವಿಸುತ್ತಿರುವವು.

ಹಿಂದುಸ್ಥಾನದಲ್ಲಿ ಬಹಳ ಸಣ್ಣ ಪ್ರಾಯದಲ್ಲಿಯೇ ಮದಿವೆಯಾಗುವ ಸಂಪ್ರದಾಯದಿಂದ ಶಿಶುಗಳ ಮರಣಗಳು ಇಲ್ಲಿ ಇನ್ನಷ್ಟು ಅಧಿಕವಾಗಿರುವವು. ಅವಯವಗಳ ಮತ್ತು ದೇಹಪ್ರಕೃತಿಯ ಬೆಳೆಯುವಿಕೆಯು ಹೆತ್ತವರಲ್ಲಿ ಪೂರ್ಣವಾಗುವ ಮೊದಲೇ ಮಕ್ಕಳು ಜನಿಸುತ್ತಿರುವುದರಿಂದ, ಈ ಮಕ್ಕಳಲ್ಲಿ ರೋಗಬಾಧೆ ಮೊದಲಾದವುಗಳನ್ನು ತಾಳುವ ಶಕ್ತಿಯು ಇಲ್ಲದೆ ಇವುಗಳು ಬಹು ಬೇಗನೇ ರೋಗಗಳಿಂದ ಮೃತಿ ಹೊಂದುವವು. ಹಿಂದೂಸ್ಥಾನದಲ್ಲಿ ಚಿಕ್ಕ ಪ್ರಾಯದಲ್ಲಿಯೇ ಬಸುರಾಗಿ ಅಶಾಸ್ತ್ರೋಕ್ತ ವಿಧಾನದಲ್ಲಿ ಇವರ ಪ್ರಸವವು ನಡೆಸಲ್ಪಡುವುದರಿಂದ ಪ್ರಸವ ನಂತರದಲ್ಲಿಯೇ ಉಂಟಾದ ದುರ್ಬಲತೆಯಿಂದ ಮರಣಪಡುವ ಮಾತೆಯರ ಸಂಖ್ಯೆಯನ್ನು ನಿರ್ಣಯಿಸಿದ್ದಲ್ಲಿ ಇದು ಬಹಳವಾಗಿರುವುದೆಂತ ಗೋಚರವಾಗುವದು. ಪ್ರಾಯ ತುಂಬಿದ ಮಾತೆಗಳಲ್ಲಿ ಸಹಾ ಪ್ರಸವವು ತರಬೇತು ಹೊಂದದ ಸೂಲಗಿತ್ತಿಗಳಿಂದ ನಡಿಸಲ್ಪಡುವುದರಿಂದ, ಇವರೂ ಸಹಾ ಬಾಳಂತಿಯಾದಷ್ಟು ಇವರ ಶಕ್ತಿಯು ಅನಾವಶ್ಯಕವಾಗಿ ಕುಂದುತ್ತಲಿರುವುದು. ಇಂತಹ ಪ್ರಸವಗಳಿಂದ ಉಳಿಯುವ ಶಕ್ತಿಯುಳ್ಳವರು ಮಾತ್ರ ಜೀವದಿಂದಿರುವರಲ್ಲದೆ ಶಕ್ತಿ ಹೀನರಲ್ಲಿ ಅನೇಕರು ಈ ಪ್ರಸವ ದೋಷಗಳಿಂದಲೇ ಮರಣಪಡುವರು. ಶಿಶುಗಳು ಜನ್ಮಕ್ಕೆ ಬರುವ ರೀತಿಯು ಇದಾದ ಮೇಲೆ ಅವರ ಬಾಳು ಎಂಥಾದ್ದಾಗಿರುವುದೆಂಬದನ್ನು ವರ್ಣಿಸಬೇಕೇ?

ಹಿಂದೂಸ್ಥಾನದಲ್ಲಿ ಶಿಶುಗಳ ಅಕಾಲ ಮರಣಗಳ ಕಾರಣಗಳಲ್ಲಿ ಮಾತೆಗಳ ಅಜ್ಞಾನವೇ ಮುಖ್ಯವಾಗಿರುವುದು. ಮಕ್ಕಳನ್ನು ಯಾವ ರೀತಿಯಲ್ಲಿ ಸಾಕಬೇಕು; ಯಾವ ರೀತಿಯಲ್ಲಿ ತೊಡಿಸಬೇಕೆಂಬುದು ತಾಯಂದ್ಯರಿಗೆ ತಿಳಿಯದ ವಿಷಯವಾಗಿರುವುದು. ಮಗುವು ತಾಯಿಯ ಮೊಲೆಹಾಲಿನಿಂದಲೇ ಸಾಕಲ್ಪಡುತ್ತಿರುವಾಗ ಮಗುವಿಗೆ ತಾಯಿಯ ಅಜ್ಞಾನದ ಫಲವು ಅಷ್ಟೊಂದು ತಗಲದು. ಆದರೆ ಈಗೀಗ ಮಕ್ಕಳನ್ನು ಮೊಲೆ ಹಾಲಿನಿಂದಲೇ ಸಾಕುವುದು ದುಸ್ಸಾಧ್ಯವಾಗಿರುವುದರಿಂದ ಮೊಲೆ ಹಾಲಿನ ಬದಲಿಗ ಇವುಗಳಿಗೆ ಇತರ ಆಹಾರಗಳನ್ನು ಕೊಡಬೇಕಾಗಿರುವುದು. ಮಕ್ಕಳಿಗೆ ಜೀರ್ಣಕರವಾದ ಆಹಾರವನ್ನೇ ಒದಗಿಸಿ ಕೊಡುವುದು ನಮ್ಮಲ್ಲಿ ಎಷ್ಟು ಜನರಿಗೆ ಸಾಧ್ಯವು? ಅಕ್ಕಿಯ ಗಂಜಿಯಿಂದ ಮಕ್ಕಳನ್ನು ಪೋಷಿಸುವುದು ಇಲ್ಲಿ ವಾಡಿಕೆಯಾಗಿರುವುದು. ಶಿಶುಗಳಿಗೆ ಈ ಗಂಜಿಯು ಅಜೀರ್ಣಕರವಾಗಿ ಪರಿಣಮಿಸಿ ಅತಿಸಾರ ಯಾ ಮಲಬದ್ಧತೆ ಮೊದಲಾದ ಜೀರ್ಣಕೋಶದ ರೋಗಗಳು ಪ್ರಾಪ್ತವಾಗುವವು. ಈ ರೋಗ ಬಾಧೆಗಳು ಮಕ್ಕಳಿಗೆ ಹಲ್ಲು ಬರೋಣದ ಸಮಯದಲ್ಲಿ ಹೆತ್ತಷ್ಟು ಅಧಿಕವಾಗಿ, ಹವಾ ಪ್ರಕೃತಿಯು ಆಗ್ಯಾಗ್ಯೆ ಬದಲಾಗುವ ಪ್ರಾಂತ್ಯಗಳಲ್ಲಿ ಮಕ್ಕಳ ಪೋಷಣೆಯೇ ಅಸಾಧ್ಯವಾಗಿರುವುದೆಂಬಂತೆ ಪರಿಣಮಿಸುವವು. ಹೆತ್ತವರಲ್ಲಿ ಮಕ್ಕಳ ಸಂರಕ್ಷಣೆಯ ವಿಷಯ ಅಜಾಗರೂಕತೆಗಳಲ್ಲಿಯೂ, ಜನಸಂಖ್ಯೆಯು ಹೆಚ್ಚಾಗಿದ್ದು ನೀರು ಸರಬರಾಯಿ ಕೆಡಕುಳ್ಳದ್ದಾಗಿರುವ ಸ್ಥಳಗಳಲ್ಲಿಯೂ ಶಿಶುಗಳ ಮರಣಗಳು ಬಹಳವಾಗಿವೆ. ಈ ಆಪತ್ತನ್ನು ಥಟ್ಟನೆ ನಿವಾರಿಸುವುದು ಅಸಾಧ್ಯ. ಜನರಲ್ಲಿ ಆರೋಗ್ಯ ನಿಯಮಗಳ ಪರಿಜ್ಞಾನವು ಉಂಟಾದಂತೆ ಈ ಸಂಕಷ್ಟಗಳ ನಿವಾರಣೆಯುಂಟಾಗುವುದು.

ಅಮೇರಿಕ ಮತ್ತು ಫ್ರಾನ್ಸ್ ದೇಶಗಳಲ್ಲಿ ಮಕ್ಕಳನ್ನು ಸಂರಕ್ಷಿಸುವ ಯೋಚನೆಯೂ ತೊಂದರೆಯೂ ಬಹಳ ವಿಪರೀತವಾಗಿರುವುದೆಂತ ಕಂಡುಬಂದು ಶಿಶುಗಳು ಜನಿಸದಂತೆಯೇ ಐಶ್ವರ್ಯವಂತರಲ್ಲಿ ಸಹಾ ಅನೇಕ ಕೃತ್ರಿಮ ಉಪಾಯಗಳಿಂದ ಸಾಧಿಸುತ್ತಿರುವರು. ಇದು ಈಗಿನ ನಾಗರಿಕತೆಯ ಮತ್ತೊಂದು ವೈಪರ್ಯವಾಗಿರುವುದು. ನಮ್ಮ ಪ್ರಾಂತ್ಯಗಳಲ್ಲಿ ಬಹಳ ಕಾಲದಿಂದ ಜನರು ಆರೋಗ್ಯ ಸಿದ್ಧಾಂತಗಳ ಪರಿಚಿತಿ ಇಲ್ಲದೆ ದೇಹದಾರ್ಢ್ಯವನ್ನು ಕಳಕೊಂಡಿರುವಾಗ ಈ ಸಿದ್ಧಾಂತಗಳ ಅನುಸರಣೆಯಿಂದ ಸುಫಲವು ತತ್ಕಾಲದಲ್ಲಿಯೇ ದೊರಿಯಲವೇಕ್ಷಿಸಿ ನಿರಾಶರಾಗಿ ಮೂಢ ಮತಿಯಿಂದ, ಇನ್ನೂ ಅಜ್ಞಾನದ ಮಾರ್ಗಗಳಲ್ಲಿಯೇ ಪ್ರವರ್ತಿಸುವುದು ಶೋಚನೀಯವಾಗಿರುವುದು. ಬಹಳ ಕಾಲದಿಂದ ಮಾಡಿದ ತಪ್ಪು ತಿದ್ದಲ್ಪಡಬೇಕಾದರೆ ಒಂದೆರಡು ತಲಾಂತರದವರಾದರೂ ಈ ಬಗ್ಗೆ ಸಾಹಸ ಪಡಬೇಕು. ಮಾತೆಯರು ಈ ವಿಷಯಕ್ಕೆ ತಕ್ಕ ಗಮನ ಕೊಟ್ಟು ನವನಾಗರಿಕತೆಯ ವೈಪರ್ಯದಿಂದಲೂ ಅಜ್ಞಾನದ ದುರ್ದಶೆಯಿಂದಲೂ ನಮ್ಮ ಮುಂದಿನ ಪೀಳಿಗೆಯವರನ್ನಾದರೂ ತಪ್ಪಿಸಿ ಕೃತಾರ್ಥರಾಗಬೇಕೆಂದು ನಮ್ಮ ಕಾಂಕ್ಷೆಯಾಗಿರುವುದು.

ಶ್ರೀಕೃಷ್ಣ ಚರಿತ್ರೆ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದುದು.)

ವ್ಯಾಸನು—"ಕೃಷ್ಣಾ, ನೀನು ಹೇಳಿದ್ದು ಸರಿ. ಆದರೆ ಕಾಲದ [illegible] ದಿಂದ ಎರಡು ಯುಗಗಳನ್ನೇ ನೀನು ಆಳಿ [illegible]

[illegible]ತ್ತರಕುರುಪ್ರಾಂತದ ಕಡೆಗೆ ಕೊಂಡುಹೋಗಬಹುದು [illegible] ಪ್ರವಾಹವನ್ನು, ಅದು [illegible] ಕಡೆಗೆ [illegible] ಮರಳಿ ಅದರ ಉಗಮಸ್ಥಾನಕ್ಕೆ ಕೊಂಡುಹೋಗುವೆಯಾ? ನಿನ್ನ ಮನಸ್ಸಿನಲ್ಲಿ ವೇದಗಳಲ್ಲಿ ಹೇಳಿರುವ ಆ ಪ್ರಾಚೀನ ಧರ್ಮವನ್ನು ಮತ್ತು ವೇದಗಳ ಕಾಲದಲ್ಲಿದ್ದ ಸಮಾಜದ ಸಂಸ್ಥೆಯನ್ನು ಪುನಃ ಪ್ರಚಾರ ಮಾಡುವ ಉತ್ಸುಕತೆ ಇದೆಯೋ?

ಕೃಷ್ಣನು—"ಈ ದಾಸನಲ್ಲಿ ಆ ಇಚ್ಛೆ ಇಲ್ಲ. ಪ್ರಗತಿಯ ಪ್ರವಾಹವನ್ನು ತಿರುಗಿಸಲು ಮನುಷ್ಯನಿಂದಾಗದು. ಸಾಕ್ಷಾತ್ ಬ್ರಹ್ಮದೇವನಿಂದ ಕೂಡಾ ಆಗತಕ್ಕದ್ದಲ್ಲ! ಸೃಷ್ಟಿಯ ರಾಜ್ಯವು ನೀತಿಯ ರಾಜ್ಯವಾಗಿದೆ. ಯಾವ ರೀತಿಯಲ್ಲಿ ಮುಂಚೆ ಮೊಗ್ಗೆಗಳಾಗಿ, ಅವು ಹೂತು ಪುಷ್ಪಗಳಾಗಿ, ಅನಂತರ ಅವು ಒಣಗಿ ಉದುರಿ ಬಿದ್ದುಹೋಗುವವೋ, ಹಾಗೆಯೇ ಮನುಷ್ಯನ ಜೀವನದಲ್ಲಿ ಜನ್ಮ, ಬಾಲ್ಯ, ಕೈಶೋರ, ಯೌವನ, ವಾರ್ಧಕ್ಯ ಮತ್ತು ಮರಣ ಇವೆಲ್ಲವೂ ಇವೆ. ರಾಷ್ಟ್ರದ ಜೀವನದಲ್ಲಿ ಸಹಾ ಈ ಎಲ್ಲಾ ಬೇರೆಬೇರೆ ಅವಸ್ಥೆಗಳು ಇವೆ. ಸೃಷ್ಟಿ ನಿಯಮಗಳು ಎಲ್ಲರಿಗೆ ಸರಿಯಾಗಿ ಅಲಂಘ್ಯ ಮತ್ತು ಅಪರಿಹಾರ್ಯವಾಗಿವೆ. ರಾಷ್ಟ್ರದ ಶೈಶವಾವಸ್ಥೆಯಲ್ಲಿ ಸಮಾಜವು, ಎಳೆ ಮಗುವಿನಂತೆ, ಚಂದ್ರನನ್ನು ನೋಡಿ ನಗುವುದು, ವಜ್ರಾಘಾತದಿಂದ (ಸಿಡಿಲನ್ನು ಕೇಳಿ) ಅಳತೊಡಗುವುದು, ಬಿರುಗಾಳಿಯಿಂದ ಭೀತವಾಗಿ ನಡುಗುವುದು. ಕೈಶೋರಾವಸ್ಥೆಯಲ್ಲಿ ಸಮಾಜವು ಯಜ್ಞಯಾಗಾದಿಗಳಲ್ಲಿ ಪ್ರವೃತ್ತವಾಗಿ ಹರ್ಷಿಸುವುದು. ರಾಷ್ಟ್ರಕ್ಕೆ ಯೌವನವು ಪ್ರಾಪ್ತವಾಗಲು ಬಾಲ್ಯದ ನಗುವೂ ಭಯವೂ ಮತ್ತು ಕೈಶೋರಾವಸ್ಥೆಯ ಆಟಗಳೂ ಅದರ ಹೃದಯಕ್ಕೆ ಇನ್ನು ರುಚಿಸವು. ಇಂದ್ರ, ಚಂದ್ರ, ಮೊದಲಾದವರೆಲ್ಲರೂ ಪರಮಾತ್ಮನ ಮಹಾ ನಿಯಮದ ದಾಸರಾಗಿರುವರು; ಮತ್ತು ಆ ನಿಯಮದ ಸುಂದರವಾದ ಸಂಕಲೆಗಳಿಂದ ಕಟ್ಟಲ್ಪಟ್ಟಿರುವರು—ಎಂಬುದು ಮನುಷ್ಯನ ಮನಸ್ಸಿನಲ್ಲಿ ಕಂಡು ಬರುತ್ತಲೇ, ಆತನ ಹೃದಯದಲ್ಲಿ ಜ್ಞಾನ ತೃಷ್ಣೆಯು (ಜ್ಞಾನವನ್ನು ಸಂಪಾದಿಸಬೇಕೆಂಬ ದಾಹವು) ಉಂಟಾಗುತ್ತದೆ. ಸುದರ್ಶನವೆಂಬ ನೀತಿ ಚಕ್ರ ಮತ್ತು ಅದರ ನಿಯಂತೃವಾದ ಪರಮಾತ್ಮ ಇವರನ್ನು ಕುರಿತು ಜ್ಞಾನ ಹೊಂದಬೇಕೆಂದು ಅದಕ್ಕೆ ಉತ್ಕಂಠೆಯಾಗುತ್ತದೆ. ಸತ್ಯ ಯುಗವೆಂದೆನ್ನಿಸುವ ಕೃತಯುಗವು ಆರ್ಯರ ರಾಷ್ಟ್ರದ ಶೈಶವ ಕಾಲವು; ತ್ರೇತಾಯುಗವು ಕೈಶೋರಾವಸ್ಥೆಯು ಈಗ ಈ ಎರಡು ಅವಸ್ಥೆಗಳು ಮುಗಿದು ಯೌವನಾವಸ್ಥೆಯ ಯುಗಾಂತರವು ಬೇಗನೇ ಪ್ರಾರಂಭಿಸುವುದು. ಈ ನವೀನ ಯುಗದ ಅಭಿನೇತೃಗಳು (ಪಾತ್ರಗಳು) ಯಾರೆಂದರೆ—ನೀವು, ಈ ಅರ್ಜುನನು ಮತ್ತು ನಾನು, ಸರ್ವ ಸಂಕಷ್ಟಗಳನ್ನು ಹೋಗಲಾಡಿಸಿ ಈ ಆರ್ಯ ರಾಷ್ಟ್ರದ ನೌಕೆಯನ್ನು ನಾವು ಶಾಂತಿಯ ವೈಕುಂಠದ ಕಡೆಗೆ ನಡೆಯಿಸುವ. ವೀರತೆಯ ಯೌವನವು ಅರ್ಜುನನಲ್ಲಿ ಅವತರಿಸಿ ಇದೆ; ಜ್ಞಾನದ ಯೌವನವು ತಮ್ಮಲ್ಲಿ ಅವತರಿಸಿ ಇದೆ. ನಮ್ಮ ಕರ್ತವ್ಯದ ಹಾದಿಯು ನಮ್ಮ ಮುಂದೆ ಹಾಸಿದಂತಿದೆ; ಅದನ್ನು ನಾವು ಈಗ ಆಕ್ರಮಿಸಬೇಕು.

ವ್ಯಾಸ—"ಕೃಷ್ಣಾ, ಅನಂತವಾದ ಸಾಗರದ ದಂಡೆಯಲ್ಲಿ ಒಂದು ಚಿಕ್ಕ ಮಗುವು ಕೆಲವು ಚಿಪ್ಪುಗಳನ್ನು ಹೆಕ್ಕಿ ಆಡುವ ರೀತಿಯಲ್ಲಿ, ಮನುಷ್ಯನ ಬಾಹುಬಲವೂ ಜ್ಞಾನ ಬಲವೂ ಏನೋ ಏನೋ ಆಡಿಯಿವೆ. ಮನುಷ್ಯನು ಒಂದು ಚಿಕ್ಕ ಪತಂಗವನ್ನಾದರೂ ನಿರ್ಮಿಸಲಾರನು, ಎಂದರೆ ಒಂದು ಮಹಾರಾಷ್ಟ್ರದ ಭವಿಷ್ಯವನ್ನು ತೀರಾ ಬದಲಾಯಿಸನವುದಕ್ಕೆ ಆತನಿಂದ ಹೇಗೆ ತಾನೇ ಆದೀತು? ಪ್ರಕೃತಿ ದೇವಿಯು ದಣಿವನ್ನರಿಯದ ತನ್ನ ಶ್ರಮದಿಂದ ಯಾವ ಪ್ರವಾಹವನ್ನು ಎರಡು ಯುಗಗಳಿಂದ ಇಂದು ಇಲ್ಲಿ ತನಕ ತಂದಿರುವಳೋ ಆ ಪ್ರವಾಹದ ಗತಿಯನ್ನು ತಡೆಯಲು ನಿನ್ನಿಂದಾಗುವುದೇ? ಮನುಷ್ಯನ ಜ್ಞಾನದಿಂದ ಸೃಷ್ಟಿಯ ನೀತಿ ಏನು ನಿಷ್ಫಲವಾಗುವುದೇ?

ಅದಕ್ಕೆ ಕೃಷ್ಣನಿಂತೆಂದನು—"ಆ ಪ್ರವಾಹವಕ್ಕೆ ಅಡ್ಡ ಕಟ್ಟಲು ಮನುಷ್ಯನಲ್ಲಿ ಸಾಮರ್ಥ್ಯವಿಲ್ಲವು. ಆದರೆ ರಾಷ್ಟ್ರದ ಪ್ರಗತಿಯ ಪ್ರವಾಹವನ್ನು ತಿರುಗಿಸಿ, ಕೇವಲ ಸ್ವಾರ್ಥ ಬುದ್ಧಿಯಿಂದ ಅದನ್ನು ವಿಶಾಲವಾದ ಮರುಭೂಮಿಯ ಕಡೆಗೆ ಒಯ್ಯಲು ಯಾರು ಎಳಸುವರೋ, ಅವರ ಪ್ರಯತ್ನಗಳನ್ನು ನಿಷ್ಫಲಗೈದು, ನಿಷ್ಕಾಮ ಬುದ್ಧಿಯಿಂದ ಆ ಪ್ರವಾಹದ ಗತಿಗೆ ಪುನಃ ಅನಂತವಾದ ಸಾಗರದ ಕಡೆಗೆ ಹಾದಿಯನ್ನು ತೋರಿಸಿ ಕೊಡುವ, ನಾರಾಯಣನು ಈ ಅನಂತವಾದ ಸಾಗರವು. ಸೃಷ್ಟಿನಿಯಮದ ಗತಿಯು ಸರಳವಾಗಿದೆ, ಸುಂದರವಾಗಿದೆ; ಅದರ ನೀತಿಯ ಹೊಯಿಲು ಅನಂತವಾದ ಉನ್ನತಿಯ ಕಡೆಗೆ ಇದೆ, ಅವನತಿಯ ಕಡೆಗೆ ಇಲ್ಲವು. ಮನುಷ್ಯನು ಅಪೂರ್ಣನಾಗಿರುವನು, ಮಾನವ ಜಾತಿಯೇ ಅಪೂರ್ಣವಾಗಿರುವುದು. ನಾರಾಯಣನೊಬ್ಬನೇ ಪೂರ್ಣನಾಗಿರುವನು. ಪೂರ್ಣನಾದ ಪರಮಾತ್ಮನನ್ನು ಕನ್ನಡಿಯಂತೆ ನಮ್ಮ ಮುಂದಿಟ್ಟು, ನಾವು ಸ್ವತಃ ಅಪೂರ್ಣರಾಗಿರುವೆವಾದರೂ, ಪೂರ್ಣತೆಯ ಕಡೆಗೆ ಹೋಗುವಾ. ಮತ್ತು ಇಡೀ ಮಾನವ ಜಾತಿಯನ್ನು ಆ ಉನ್ನತವಾದ ದಾರಿಗೆ ಕೊಂಡೊಯ್ಯುವಾ. ಯಾವುದೊಂದು ವಸ್ತುವಿನ ಅಭಾವವಿದ್ದರೂ, ಆ ವಸ್ತುವಿನ ಅಪೇಕ್ಷೆಯೊಂದು ಇದ್ದರೆ, ಆ ವಸ್ತುವು ನಿರ್ಮಾಣವಾಗುವುದಕ್ಕೆ ಹಾದಿಯನ್ನು ಕಡಿದಂತಾಯಿತು. ಅಭಾವ ಮತ್ತು ಅಪೇಕ್ಷೆ ಇವುಗಳಿಂದಲೇ ಉನ್ನತಿಯುಂಟಾಗುವುದು. ಈ ಮಹಾತತ್ವದ ನಿದರ್ಶನಗಳು [illegible] ತೋರಬರುತ್ತದೆ. ಮನುಷ್ಯರಿಗೆ ಈಗ ಎರಡೇ ಯುಗಗಳು ಆಗಿ ಹೋಗಿ[illegible] ಅದರ [illegible] ಲಕ್ಷವಿಲ್ಲದ, ಎಷ್ಟು ಯುಗಗಳಾಗಿ ಹೋದವೆಂಬುವುದನ್ನು

ಯಾರು ಹೇಳಬಲ್ಲರು? ಆಯಾ ಯುಗಕ್ಕೆ ಒಪ್ಪುವ ಶ್ರೇಷ್ಠವಾದ ಉನ್ನತಿಯು ಆ ಯುಗದೊಡನೆಯೇ ಜನ್ಮವೆತ್ತುತ್ತಿದೆ; ಅಗ್ಗೆ ನಾವು ಅಂತಹ ಉನ್ನತಿಯನ್ನು ಆ ಯುಗದ ಅವತಾರವೆಂದೆನ್ನುತ್ತೇವೆ. ಆದಿಯಲ್ಲಿ ಈ ಸೃಷ್ಟಿಯು ಜಲಮಯವಾಗಿತ್ತು; ಆಗ್ಗೆ ಅಗಾಧವಾದ ನೀರುಗಳಲ್ಲಿ ಮತ್ಸ್ಯಾವತಾರವಾಯಿತು. ಆ ಮೇಲೆ ನೀರುಗಳು ಆರುತ್ತಲೇ ಆ ಕೆಸರು ಭೂಮಿಯಲ್ಲಿ ಕೂರ್ಮಾವತಾರವಾಯಿತು. ಹಾಗೆಯೇ ಆ ಕೆಸರು ಗಟ್ಟಿಯಾಗುತ್ತ ಬಂದಿತು, ಮತ್ತು ಎತ್ತೆತ್ತಲೂ ಸಸ್ಯಾದಿಗಳು ಮೊಳತು ಬೆಳೆಯುತ್ತಲೇ ವರಾಹ ಸೃಷ್ಟಿಯಾಯಿತು. ಅನಂತರ ಸೃಷ್ಟಿಯ ಉನ್ನತಿ ಚಕ್ರವು ಮೆಲ್ಲ ಮೆಲ್ಲನೆ ಮೇಲೇರುತ್ತಲೇ ನೃಸಿಂಹಾವತಾರವಾಯಿತು. ಅರ್ಧಭಾಗ ಪಶುವು ಮತ್ತು ಅರ್ಧ ಮನುಷ್ಯನಾಗಿ ಈ ಮೂರ್ತಿಯು ವಿಸ್ಮಯಕಾರವಾಗಿತ್ತು. ಹಾಗೆಯೇ ಪಶುತ್ವವು ಮೆಲ್ಲನೆ ಲೋಪವಾಯಿತು. ಮತ್ತು ಅಪರಿಣತನಾದ (ಪೂರ್ಣ ಪಕ್ವವಾಗದ) ಗುಜ್ಜನಾದ ಮನುಷ್ಯನು ಜನಿಸಿದನು. ಅದೇ ವಾಮನಾವತಾರವು. ಆ ಕಾಲದಲ್ಲಿ ಈ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಕಾಡು ಬೆಳೆದಿದ್ದು, ಅವುಗಳಲ್ಲಿ ಹಿಂಸ್ರ ಪಶುಗಳು ಸಂಚರಿಸುತ್ತಿದ್ದವು—ಆದ್ದರಿಂದ ವಾಮನನಿಗೆ ಮೂರಡಿಗಳಷ್ಟು ಸ್ಥಳವು ಕೂಡಾ ಸಿಕ್ಕುವುದು ಬಹಳ ಕಷ್ಟಕ್ಕೆ ಬಂದಿತು! ಉನ್ನತಿ ಚಕ್ರವು ಪುನಃ ಸುತ್ತಲಾರಂಭಿಸಿತು, ಮತ್ತು ಕೈಯಲ್ಲಿ ಕೊಡಲಿಯನ್ನು ಹಿಡಿದಿರುವ ಪರಶುರಾಮನು ಅವತರಿಸಿದನು. ಅಗ್ಗೆ ಅರಣ್ಯ ಮತ್ತು ಹಿಂಸ್ರ ಜಂತುಗಳೊಡನೆ ಘೋರವಾದ ಯುದ್ಧವು ನಡೆಯಿತು. ಪರಶುರಾಮನ ಶರೀರದಲ್ಲಿ ಪಶುಭಾಗವಿದ್ದಿರಲಿಲ್ಲ; ಆದರೆ ಆತನ ಹೃದಯದಲ್ಲಿ ಪಶುವೃತ್ತಿಯು ಪ್ರಬಲವಾಗಿದ್ದಿತು. ಈ ಪಶುವೃತ್ತಿಯು ಗ್ಲಾನಿಯಾಗುತ್ತಲೇ ಜಗತ್ತಿನಲ್ಲಿ ಬೇರೆ ಯುಗವು ಮೂಡ ತೊಡಗಿತು. ಮನುಷ್ಯನ ವಾಸ್ತವಿಕವಾದ ಜನ್ಮವು ಈ ಯುಗದಲ್ಲಿ ಆಯಿತು. ಮೆಲ್ಲ ಮೆಲ್ಲನೆ ಉನ್ನತಿಯುಂಟಾಗುತ್ತ ಮಾನವ ಜಾತಿಯು ಕೈಶೋರಾವಸ್ಥೆಯಲ್ಲಿ ಪ್ರೀತಿಯ ಪೂರ್ಣ ಅವತಾರವಾದ ಶ್ರೀ ರಾಮಚಂದ್ರನು ಜನ್ಮವೆತ್ತಿದನು. ಇದು ತ್ರೇತಾ ಯುಗದಲ್ಲಿಯ ಅವತಾರವು. ಮುನಿವರ್ಯನೇ ಮನುಷ್ಯ ಜಾತಿಯ ಯೌವನಾವಸ್ಥೆಯು ಇನ್ನು ಬಾರದಿರುವುದೇನು? ಉನ್ನತಿಯ ಸುದರ್ಶನ ಚಕ್ರವು ಇಲ್ಲಿಯೇ ಸ್ತಬ್ಧವಾಗಿ ನಿಂದೀತೇನು? ಇಲ್ಲ, ಇಲ್ಲ—ಈ ಚಕ್ರಕ್ಕೆ ವಿಶ್ರಾಮವೆಂಬುವುದು ಎಂದಿಗೂ ಇಲ್ಲ. ಉನ್ನತಿಯ ಪ್ರೀತಿಮಯವಾದ, ಸುಖಮಯವಾದ, ಮತ್ತು ಪವಿತ್ರವಾದ ಮಾರ್ಗವು ನಮ್ಮ ಮುಂದೆ ಇದೆ. ರಾಷ್ಟ್ರದ ಜೀವನೌಕೆಯನ್ನು ಆ ಮಾರ್ಗದಲ್ಲಿ ನಡೆಯಿಸುವಾ."

ಮುಂದೆ ಸಾಗುವದು.

[illegible]

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6ಪೈ.

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು.

ಪ್ರತಿಗಳು ದೊರೆಯುವ ಸ್ಥಳ.

ಕವಿ ಎಂಡ್ ಸನ್ಸ್. ಮಂಗಳೂರು, ದ. ಕ

ಪತ್ರವ್ಯವಹಾರ.

(ಬಾಕ್ಕೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ).

ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಹಿಂದುಸ್ಥಾನದ ಕವಿಗಳು.

ಈ ಹೆಸರುಳ್ಳ ಒಂದು ಲೇಖವು ಇದೇ ಪತ್ರದ ಕಳೆದ ಸಂಚಿಕೆಯಲ್ಲಿದ್ದಿತು. [illegible]ದನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇವೆ. "ಕವಿ" ಎಂಬ ಶಬ್ದವು ಸಾಮಾನ್ಯವಲ್ಲವು. ಪದ್ಯರೂಪವಾಗಿಯೇ ಆಗಲಿ ಗದ್ಯರೂಪವಾಗಿಯೇ ಆಗಲಿ, ಅಥವಾ ಅನುವಾದ ರೂಪವಾಗಿಯೇ ಆಗಲಿ, ಯಾವುದಾದರೊಂದು ಬಗೆಯ ಶೈಲಿಯಿಂದ ನಿರ್ಮಾಣ ಮಾಡಲು ಶಕ್ತಿಯುಳ್ಳವನೇ ಕವಿಯು. ಈ ರೀತಿಯಿಂದ ವಿಚಾರಿಸಿದರೆ, ಕಳೆದ ಸಂಚಿಕೆಯಲ್ಲಿದ್ದ ಲೇಖವು ಅಪೂರ್ಣವಾಗಿ ಇದೆ. ಉತ್ತಮ ರೀತಿಯಿಂದ ಇಂಗ್ಲೀಷು ಭಾಷೆಯಲ್ಲಿ ಬರೆದ ಕೆಲವು ಕವಿಗಳನ್ನು [illegible] ಎತ್ತಿ ಕೊಟ್ಟ [illegible] ಗದ್ಯಪದ್ಯಾತ್ಮಕವಾದ [illegible] ಇಲ್ಲಿ [illegible] ನಾವು [illegible]

ಶ್ರೀ ಮಾಯ್‌ಕೆಲ್ ಮಧುಸೂದನ ದತ್ತ ಎಂಬ ಒಬ್ಬ ಬಂಗಾಳೀಯವರು ಸುಮಾರು ಐವತ್ತು ವರ್ಷಕ್ಕೆ ಹಿಂದೆ, ತನ್ನ ಲೇಖನಿಯನ್ನು ಮುಖ್ಯಶಃ ಮಾಗಿ ಮಸಿಯಲ್ಲಿ ಅದ್ದಿದ್ದು ಇಂಗ್ಲೀಷು ಕಾವ್ಯವನ್ನು ಬರೆಯುವುದಕ್ಕೆಯೇ! ಅವರು "The Captive Ladie" ಎಂಬ ಈ ಕಾವ್ಯವನ್ನು ಬಹುಶಃ ಶ್ಲಾಘಿಸಿದರು. ಆದರೆ ತನ್ನ ದೇಶಬಂಧುಗಳಿಗೆ ತಾನು ಸೇವೆಗೈಯ ಬೇಕಾದರೆ ಮಾತೃಭಾಷೆಯಿಂದಲ್ಲದೆ ಬೇರೆ ಯಾವುದರಿಂದಲೂ ಅಲ್ಲವೆಂದು, ಇಂಗ್ಲೀಷಿನಲ್ಲಿ ಕಾವ್ಯ ಬರೆಯುವುದನ್ನು ಬಿಟ್ಟುಬಿಟ್ಟರು "ಅಮಾರ ದೇಶ" ಎಂಬ ಪ್ರಸಿದ್ಧ ಬಂಗಾಳೀ ಗೀತವನ್ನು ಬರೆದು ಪ್ರಖ್ಯಾತರಾದ "ಶ್ರೀಯುತ ದ್ವಿಜೇಂದ್ರ ಲಾಲರಾಯ್ ಎಂಬವರು "Aryan Melodies" ಎಂಬ ಇಂಗ್ಲೀಷು ಕಾವ್ಯ ಗ್ರಂಥವನ್ನು ಬರೆದಿರುವರು ಕಲ್ಕತ್ತಾ ಹಾಯ್ ಕೋರ್ಟು ಜಡ್ಜಿಯ ಕೆಲಸದಿಂದ ನಿವೃತ್ತರಾದ ಶ್ರೀ ಬಿ ಎಲ್. ಗುಪ್ತ ಎಂಬವರ ಇಬ್ಬರು ದುಹಿತೆಯರೂ ಇಂಗ್ಲೀಷಿನಲ್ಲಿ ಸ್ವತಂತ್ರ ಕಾವ್ಯಗಳನ್ನು ಬರೆದಿರುವರು ಅವರ ಕಾವ್ಯಗಳು Indian Ladies Magazine" Hindusthan Review" ಮುಂತಾದ ಮಾಸಿಕ ಪುಸ್ತಕಗಳಲ್ಲಿ ಬರುತ್ತವೆ ಅವುಗಳನ್ನು ಪ್ರಸಿದ್ಧ ಶ್ರೀ ರಮೇಶಚಂದ್ರ ದತ್ತರೇ ಶ್ಲಾಘಿಸಿರುವರು ರಾಷ್ಟ್ರೀಯಪಕ್ಷದ ವೀರರಾದ ದೇಶಭಕ್ತ ಶ್ರೀ ಅರವಿಂದ ಘೋಷರವರು ಇಂಗ್ಲೀಷಿನಲ್ಲಿ ಪ್ರಸಿದ್ಧ ಲೇಖಕರಾಗಿರುವರು ಅವರ ಕಾವ್ಯಗಳು ಇಂಗ್ಲಾಂಡಿನಲ್ಲಿಯೇ ಬಹುಮಾನವನ್ನು ಪಡೆದಿವೆ ಅವರು ಬರೆದಿರುವ Urvasie" (ಊರ್ವಶೀ) ಮತ್ತು "Songs to myrtilla" ಎಂಬ ಈ ಎರಡು ಚಿಕ್ಕ ಪುಸ್ತಕಗಳನ್ನು ಓದಿದರೆ, ಅವು ಬಹುಶಃ ಇಂಗ್ಲೀಷು ವಾಙ್ಮಯದಿಂದಲೇ ಹೆಕ್ಕಿತೆಗೆದಂತಿವೆ ಇಷ್ಟಲ್ಲದೆ ಅವರು ಒಂದು ವರ್ಷಪರ್ಯಂತ ಕಾರಾವಾಸದಲ್ಲಿರುವಾಗ, ಅವರಿಗೆ ಬೇಕಾದ ಕಾಗದವನ್ನು ಸಹಾ ಕೊಡದೇ ಇದ್ದಾಗ, ತನ್ನ ಮನಸ್ಸಿನಲ್ಲಿಯೇ ಗುಣಿಸಿ ನೆನೆಸಿದ ಕಾವ್ಯಗಳಲ್ಲಿ ಅವರು ರಚಿಸಿದ ಅನೇಕ ಕವಿತೆಗಳಲ್ಲಿ ಒಂದೆರಡು ಈಗ ಪ್ರಸಿದ್ಧವಾಗಿವೆ —"To the Sea" "The Mother of Dreams" ಎಂಬವನ್ನು "Modern Review" ನಲ್ಲಿ ಇಂಗ್ಲೀಷು ಬಲ್ಲವರು ಓದಿನೋಡಿಯೇ ಅದನ್ನು ಅನುಭವಿಸಬೇಕು ಇವರ ಒಬ್ಬ ಸಹೋದರನು ಚಲೋ ಇಂಗ್ಲೀಷು ಕವಿಯಾಗಿರುತ್ತಾನೆಂದು ಮಿ ನೆವಿನ್ಸನ್ನರು (Mr H W Nevinson) ತನ್ನ ಪುಸ್ತಕದಲ್ಲಿ ಹೇಳುತ್ತಾರೆ ಸ್ವಾಮಿ ವಿವೇಕಾನಂದ ಸ್ವಾಮಿ ರಾಮತೀರ್ಥರೆಂಬವರು ಇಂಗ್ಲೀಷಿನಲ್ಲಿ ಅನೇಕ ಕವಿತೆಗಳನ್ನು ಬರೆದಿರುವರು ಅವು ಅಮೇರಿಕದ ಇಮರ್ಸನ್ ಎಂಬವನ ಕವಿತೆಗಳಂತೆ ಒಪ್ಪವಾಗಿರುವವು ಇದಲ್ಲದೆ ಮೌಲವಿ ಸಯಿದ್ ಹುಸೇನ್ ಬಿಲ್‌ಗ್ರಾಮಿ ಎಂಬವರು ಸಹಾ ಇಂಗ್ಲೀಷಿನಲ್ಲಿ ಕಾವ್ಯಗಳನ್ನು ಬರೆದು ಪ್ರಖ್ಯಾತಿಪಟ್ಟಿರುವರು

ಈಗ ಗದ್ಯ ಗಂಥಗಳನ್ನು ಮತ್ತು ಅನ್ಯಕಾವ್ಯಗಳಿಂದ ಇಂಗ್ಲೀಷಿನಲ್ಲಿ ಅನುವಾದ ಕಾವ್ಯ (Translations in Verse) ಗಳನ್ನು ಮಾಡಿರುವವರನ್ನು ಕುರಿತು ಹೇಳುವಾ ದಿವಂಗತರಾದ ಕಾಶೀನಾಥತ್ರ್ಯಂಬಕ ತೆಲಂಗರು ಶ್ರೀ ಭಗವದ್ಗೀತೆಯನ್ನು ಇಂಗ್ಲೀಷು ಕಾವ್ಯ ರೂಪವಾಗಿ ಪರಿವರ್ತಿಸಿರುವರು ಈ ಭಾಗ ಇಂಗ್ಲೀಷು ಭಾಷೆಯಲ್ಲಿ ಅಪ್ರತಿಮವಾದ ಗ್ರಂಥವೆನ್ನಿಸಿದೆ ಅವರು ಇನ್ನೂ ಕೆಲವು ಸ್ವತಂತ್ರ ಕಾವ್ಯಗಳನ್ನು ಇಂಗ್ಲೀಷಿನಲ್ಲಿ ಬರೆದಿರುವರೆಂದು ತಿಳಿದಿದ್ದರೂ ಅವುಗಳ ಸಮಗ್ರ ಮಾಹಿತಿಯು ಉಪಲಬ್ಧವಾಗಿಲ್ಲ ಶ್ರೀ ರಮೇಶಚಂದ್ರ ದತ್ತರು ಭಾರತ ಮತ್ತು ರಾಮಾಯಣಗಳನ್ನು ಸಂಕ್ಷಿಪ್ತವಾಗಿ ಇಂಗ್ಲೀಷಿನಲ್ಲಿ ಪದ್ಯರೂಪದಿಂದ ಬರೆದಿರುವರು ಸಂಸ್ಕೃತದಿಂದ ಹಲವು ರೀತಿಗಳನ್ನು ಇಂಗ್ಲೀಷು ಕಾವ್ಯದಲ್ಲಿ ಪರಿವರ್ತಿಸಿರುವರು "ಕಿರಾತಾರ್ಜುನೀಯ" ಮತ್ತು "ಕುಮಾರ ಸಂಭವ" ವೆಂಬ ಸಂಸ್ಕೃತ ಕಾವ್ಯಗಳನ್ನು ಪದ್ಯ ರೂಪದಿಂದ ಅನುವಾದ ಮಾಡಿರುವರು ಮತ್ತು "Lake of Palms" ಮತ್ತು "The Slave girl of Agra" ಎಂಬ ಎರಡು ಸುಂದರವಾದ ಸ್ವತಂತ್ರ ಉಪನ್ಯಾಸ (Novel) ಗಳನ್ನು ಸಹಾ ಇಂಗ್ಲೀಷಿನಲ್ಲಿ ಬರೆದಿರುವರು ದಿವಂಗತರಾದ ಶ್ರೀಮತೀ ಕೃಪಾ ಬಾಯಿ ಸತ್ಯನಾಥನ್ ಎಂಬವರು ಇಂಗ್ಲೀಷಿನಲ್ಲಿ ಬರೆದ ಕಮಲಾ ಮತ್ತು ಸಗುಣಾ ಎಂಬ ಎರಡು ಉಪನ್ಯಾಸಗಳೂ ಮತ್ತು ಕೆಲವು ಸ್ವತಂತ್ರ ಕವಿತೆಗಳೂ ದೇಶದೇಶಗಳಲ್ಲಿ ಹೆಸರುಗೊಂಡಿವೆ ಶ್ರೀ ರಾಮಕೃಷ್ಣ ಪಿಳ್ಳೆ ಎಂಬವರು ತನ್ನ ಪದ್ಮಿನಿ ಎಂಬ ಇಂಗ್ಲೀಷಿನಲ್ಲಿ ಬರೆದ ಉಪನ್ಯಾಸದಿಂದಲೂ ಬೇರೆ ಹಲವು ಪುಸ್ತಕಗಳಿಂದಲೂ ಖ್ಯಾತರಾಗಿರುತ್ತಾರೆ ಕೆಲವು ದಿನಗಳ ಹಿಂದೆ ಸ್ವರ್ಗಂಗತರಾದ ಶ್ರೀ ಲಾಲಮೋಹನ ಘೋಷರು ಇಂಗ್ಲೀಷು ಕಾವ್ಯ ರೂಪದಿಂದ ಶ್ರೀ ಮಾಯ್‌ಕೆಲ್ ಮಧುಸೂಧನ ದತ್ತರ ಮಹಾ ಕಾವ್ಯವಾದ "ಮೇಘನಾಥವಧ"ವನ್ನು ಪರಿವರ್ತಿಸಿದುದು, ಆದಿಮವಾದ (Original) ಒಂದು ಇಂಗ್ಲೀಷು ಕಾವ್ಯವೆಂಬಂತೆ ಜನರನ್ನು ಮೋಹಿಸುತ್ತದೆ ಅನೇಕ ಭಾಷೆಗಳಲ್ಲಿ ಪಂಡಿತರೆಂದು ನಾಮಾಂಕಿತರಾದ ಶ್ರೀ ಹರಿನಾಥ ದೇ ಎಂಬವರು ಶಾಕುಂತಲ ನಾಟಕವನ್ನು ಪದ್ಯ ರೂಪವಾಗಿ ಇಂಗ್ಲೀಷಿನಲ್ಲಿ ರಚಿಸಿರುವುದಲ್ಲದೆ, ಇನ್ನು ಹಲವು ಇಂಗ್ಲೀಷು, ಪಾಳೀ, ಗ್ರಂಥಗಳ ಮೂಲದಿಂದ ಕಾವ್ಯಗಳನ್ನು ಬರೆಯುತ್ತಿರುವರು. ಶ್ರೀಮತೀ ತರು ದತ್ತ, ಸರೋಜಿನೀ ನಾಯ್‌ಡು ಮತ್ತು ಶ್ರೀ ನಾಗೇಶ ವಿಶ್ವನಾಥ ಪೈಗಳನ್ನು ಮುಂಚಿನ ಸಂಚಿಕೆಯ ಲೇಖಕರು ಮಾತಾಡಿರುವದರಿಂದ ನಾವು ಇಲ್ಲಿ ಬೇರೆ ಹೇಳುವುದಿಲ್ಲ

ಈ ಪತ್ರದಲ್ಲಿ ಇಂಗ್ಲೀಷಿನಲ್ಲಿ ಪದ್ಯರೂಪವಾಗಿ ಬರೆದ ಭಾರತೀಯರನ್ನೂ, ಗದ್ಯ ರೂಪವಾಗಿ ಬರೆದವರನ್ನೂ, ಸ್ವತಂತ್ರ ಲೇಖಕರನ್ನೂ (Original writers) ಅನುವಾದಕರನ್ನೂ (Translators) ಮತ್ತು ದಿವಂಗತರಾದವರನ್ನೂ ಈಗ ಜೀವಂತರಾಗಿರುವವರನ್ನೂ ಕುರಿತು ನಾವು ಪ್ರಸ್ತಾಪಿಸಿರುವೆವು. ಮುಂಚಿನ ಸಂಚಿಕೆಯಲ್ಲಿ ಬರೆದ ಲೇಖಕರು ತಂಮ ಪತ್ರಕ್ಕೆ ಇಟ್ಟ ಅವಧಿಯು ಯಾವುದೆಂದು ತಿಳಿಯದಿದ್ದುದರಿಂದ ನಂಮ ಪತ್ರದ ಅವಧಿಯನ್ನು ಬಹುದೂರ ವರೆಗೆ ವಿಸ್ತರಿಸ ಬೇಕಾಯಿತು.

ಮುಲ್ಕಿ. ತಾ. ೯—10—09.

ಅಯ್ಯಾ ಪತ್ರಿಕಾಕರ್ತರೆ,

ಕೀರ್ತಿ ಶೇಷ ಅ! ಸುಬ್ಬರಾವ್ ಪೈಗಳವರ ಸ್ಮರಣಾರ್ಥವಾಗಿ ಜಿಲ್ಲೆಯ ಹಲವು ಕಡೆಗಳಲ್ಲಿಯೂ ಮಂಗಳೂರಲ್ಲಿಯೂ ನಡಿಯುತ್ತಿರುವ ಕಾರ್ಯ ಉದ್ಯುಕ್ತತೆಯನ್ನು ತಮ್ಮ ಪತ್ರ ಮುಖಾಂತರ ಕೇಳಿ ಆನಂದಭರಿತನಾಗಿರುವೆನು ಪೈಗಳವರು ಸ್ವರ್ಗಸ್ಥರಾದ ಹದಿಮೂರನೇ ದಿನ ನಮ್ಮಲ್ಲಿಯೂ ನಡದ ವೃತ್ತಾಂತಗಳನ್ನು ಮುಲ್ಕಿ ಬಾತ್ಮೀದಾರರು ಈ ಮೊದಲೇ ತಮ್ಮ ಪತ್ರದಲ್ಲಿ ಪ್ರಕಟಿಸಿರುವರು ಆದರೆ ಪೈಗಳವರಿಂದ ಅನೇಕ ಸಂದರ್ಭಗಳಲ್ಲಿ ಉಪಕೃತರಾದ ಮುಲ್ಕಿ ಪೇಟೆಯ ಹತ್ತುಸಮಸ್ತರು ಪೈಗಳವರ ಜನ್ಮಭೂಮಿಯಾದ ಮುಲ್ಕಿಯಲ್ಲಿ ಈ ವರೆಗೆ ಅವರ ಸ್ಮರಣಾರ್ಥವಾಗಿ ಯಾವ ಏರ್ಪಾಡನ್ನು ಮಾಡಿರುವರೋ ಏನೆಂಬದನ್ನು ನನ್ನಂಥವನಿಂದ ತಿಳಕೊಳ್ಳುವರೆ ಅಸಾಧ್ಯವಾಗಿರುವುದು ಯಾರೂ ಇಂತಹ ಏರ್ಪಾಡನ್ನು ತುಸವಾದರೂ ದ್ರವ್ಯಸಹಾಯವಿಲ್ಲದೆ ಮಾಡಬಹುದೆಂಬದನ್ನು ಈ ಕೆಳಗೆ ಸೂಚಿಸಿರುವೆನು

ಮುಲ್ಕಿಯಲ್ಲಿ ಪ್ರಾಚೀನಕಾಲದಿಂದ ಖ್ಯಾತಿಪಡೆದ ಶ್ರೀ ವೆಂಕಟರಮಣ ದೇವಸ್ಥಾನವು ಅನೇಕ ಕಾಲಗಳಿಂದ ಸುವ್ಯವಸ್ಥಿತ ಸ್ಥಿತಿಯಲ್ಲಿಲ್ಲದೆ ದೇವಸ್ಥಾನವು ಕೆಲವುಕಾಲದ ಹಿಂದೆ ಯಾವ ದುರ್ದಶೆಯನ್ನು ಹೊಂದಿತ್ತೆಂಬದನ್ನು ನಾನು ಇಲ್ಲಿ ಪ್ರಸ್ತಾಪಿಸುವುದು ಅನಾವಶ್ಯಕ ನಮ್ಮ ಆ ಕಾಲದ ದೇವಸ್ಥಾನದ ಕಮಿಟಿ ಮೆಂಬರರು, ದೇವಸ್ಥಾನದ ಅವ್ಯವಸ್ಥಿತ ಸ್ಥಿತಿಯನ್ನು ದೂರಗೊಳಿಸುವರೆ ನಡಿಸಿದ ಸಾಧನೆಗಳು ಕೆಲವು ಕಾಲದ ವರೆಗೆ ಅಲ್ಪಮಟ್ಟಿಗೆ ಸುಪರಿಣಾಮಗಳನ್ನು ಹೊಂದಿದ್ದವಾದರೂ ಇವುಗಳಿಂದ ನಮ್ಮ ದೇವಸ್ಥಾನದ ದುರ್ದಶೆಯು ಪೂರ್ಣವಾಗಿ ನೀಗುವರೆ ಆಗದೆ ಹೋಯಿತು ಮೆಂಬರರ ವ್ಯವಸ್ಥೆಯು ಕೆಲವು ವರುಷಗಳಲ್ಲಿಯೇ ದೇವಸ್ಥಾನವು ಬಹಳ ಅತಂತ್ರವಾಗಿ, ಪುನಹ ದೀನಸ್ಥಿತಿಯನ್ನು ಹೊಂದಿತು

ಕೀರ್ತಿಶೇಷರು ತಮ್ಮ ಶ್ರಮಸಾಹಸಗಳಿಂದ ನಮ್ಮ ದೇವಸ್ಥಾನದ ಸ್ಥಿತಿಯನ್ನು ಊರ್ಜಿತಕ್ಕೆ ತರ ವರೆ ಪ್ರಯತ್ನಿಸಿದ ವೃತ್ತಾಂತವೆಲ್ಲವೂ ನಮ್ಮೆಲ್ಲವರಿಗೆ ಪೂರ್ಣವಾಗಿ ತಿಳಿದಿರುವ ವಿಷಯವೇ ನಮ್ಮ ದೇವಸ್ಥಾನದ ಆಡಳಿತೆ ಬಗ್ಯೆ ಪೈಗಳವರು ರಚಿಸಿದ ಕ್ರಮಗಳು ಈಗಿನ ಪ್ರಜಾನಿಯುಕ್ತ ಕಾಲದ ಪೂರ್ಣ ಆದರ್ಶಗಳಾಗಿರುವವು ಭಜಕವರ್ಗದವರಾಗಲಿ ಮಾಜಿ ಮೊಕ್ತೇಸರರಾಗಲಿ ದೂರುವುದಕ್ಕೆ ಎಡೆಗೊಡದೆ, ಮಾಜಿ ಮೊಕ್ತೇಸರರ ಹಕ್ಕೆಂದು ವಾದಿಸುತ್ತಿರುವವರಿಗೆ ಮೊಕ್ತೇಸರರ ಹಕ್ಕನ್ನು ಇರಿಸಿ ಪೇಟೆಯ ಭಜಕರಿಂದ ಆರಿಸಲ್ಪಟ್ಟ ಮೂರು ಜನ ಆಡಳಿತೆದಾರರಿಗೆ, ಆಡಳಿತೆಯು ಬಹಳ ಮಟ್ಟಿನ ಹಕ್ಕ ಸ್ವಾತಂತ್ರ್ಯಗಳನ್ನು ಕೊಟ್ಟು, ಬಹು ಯೋಗ್ಯವಾದ ರೀತಿಯಲ್ಲಿ ದೇವಸ್ಥಾನದ ವ ಈ ದೇವಸ್ಥಾನದ ಜೋಡಿಗೆ ಕೂಡಿದ ಸಮಸ್ತರ ಮೇಲ್ಮೆಯ ಸಾಧಕವಾದ ಏರ್ಪಾಡನ್ನು ರಚಿಸಿ ಅದು ಆಚಂದ್ರಾರ್ಕ ಸ್ಥಿರಸ್ಥಾಯಿಯಾಗಿ ನಿಲ್ಲುವಂತೆ ಏರ್ಪಡಿಸಿರುವರು ಈ ಭಕ್ತಾತ್ಮರು ಈ ವಿಧದ ಏರ್ಪಾಡಿನ ಪ್ರಕಾರ ನಡಿಯಬೇಕಾಗಿ ಪದೇಪದೇ ಬೋಧಿಸುತ್ತಲಿದ್ದರಾದರೂ ದೇವಸ್ಥಾನದ ವ್ಯವಸ್ಥೆಯು ಇನ್ನು ಪೂರ್ಣ ಆದಂತೆ ಇಲ್ಲ ಕಮಿಟಿ ಮೆಂಬರರ ಏರ್ಪಾಡನ್ನು ರದ್ದುಪಡಿಸಿದ ಕಾಲದಲ್ಲಿ ದೇವಸ್ಥಾನವು ಯಾವ ದುರ್ದಶೆಯಲ್ಲಿತ್ತೋ, ಆ ಸ್ಥಿತಿಯನ್ನೇ ಇನ್ನು ಸ್ವಲ್ಪಕಾಲದಲ್ಲಿಯೇ ಹೊಂದುವುದೋ ಎಂಬದಾಗಿ ಅನುಮಾನಿಸ ಬೇಕಾಗಿದೆ ಭಜಕರು ಈ ವಿಷಯದಲ್ಲಿ ಬಹಳ ಅಭಾವವನ್ನು ತೋರಿಸುವುದೇ ಇದರ ಮುಖ್ಯ ಕಾರಣವಾಗಿರುವುದು

ನಮ್ಮಲ್ಲಿ ಯಾವ ವಾದಗಳುಂಟಾದರೂ ಯಾವ ವ್ಯಾಜ್ಯಗಳು ತಲದೋರಿದರೂ ತಾಯಿಯು ಮಕ್ಕಳನ್ನು ಸಂರಕ್ಷಿಸುವೋಪಾದಿಯಲ್ಲಿ ಪೈಗಳವರು ನಮ್ಮನ್ನು ನಷ್ಟಗಳು ಕಷ್ಟಗಳುಂಟಾಗದಂತೆ ಪಾಲಿಸುತ್ತಿದ್ದರು ದೇವಸ್ಥಾನದವರು ಕೋರ್ಟುಕಚೇರಿಗಳಿಗೆ ಹೋಗಿ ಪಡಬಹುದಾದ ಸಂಕಷ್ಟಗಳನ್ನು ತಮ್ಮ ಜಾಣತನದಿಂದಲೂ, ಇದಕ್ಕಿಂತಲೂ ಮೇಲಾದ ತಮ್ಮ ಔದಾರ್ಯದಿಂದಲೂ ನಿವಾರಿಸುತ್ತಿದ್ದರು ಇಂತಹ ಮಹನೀಯರು ನಮಗೆ ಯಾವಾಗಲೂ ಪ್ರಾಪ್ತವಾಗುವುದು ಅಸಾಧ್ಯವಾಗಿರುವುದು ಅವರು ಗತಿಸಿದ ಈ ಕಾಲದಲ್ಲಿ ದಿಕ್ಕುದಿಕ್ಕುಗಳಲ್ಲವುಗಳಿಂದಲೂ ಸಹಸಂತಾಪ ಸೂಚನೆಗಳೂ ಸತ್ಕಾರ್ಯಸಾಧನೆಗಳೂ ಕೇಳಿಸುತ್ತಿರುವಾಗ, ಈ ಸಂದರ್ಭದಲ್ಲಿಯಾದರೂ ನಾವೆಲ್ಲರೂ ಒಟ್ಟು ಕೂಡಿ ಐಕ್ಯಭಾವದಿಂದ ಅವರು ನಮ್ಮೆಲ್ಲವರ ಕ್ಷೇಮಕ್ಕೆ ರಚಿಸಿರುವ ನಮ್ಮ ದೇವಸ್ಥಾನದ ನಿಯಮಗಳಂತೆ ನಡದಲ್ಲಿ ಅವರ ಆತ್ಮಕ್ಕೆ ಸಂತೋಷ ಉಂಟಾಗುವದಲ್ಲದೆ ದೇವಸ್ಥಾನವು ಅಭಿವೃದ್ಧಿಗೊಂಡು ಈ ಅಭಿವೃದ್ಧಿಯು ಪೈಗಳವರ ಸ್ಮರಣಾರ್ಥವಾದ ಶಾಶ್ವತ ಚಿನ್ಹೆಯಾಗುವುದೆಂದು ನನ್ನಂಥಾ ಬಡಮತಿಯ ಸೂಚನೆಯಾಗಿರುವುದು. ಪೇಟೆಯ ಹತ್ತು ಸಮಸ್ತರೆಲ್ಲರೂ ತಕ್ಕ ಸಮಯದಲ್ಲಿಯೇ ಈ ಸೂಚನೆಗೆ ಗಮನಕೊಡುವರಾಗಿ ಕೋರುವ ತಮ್ಮ ವಿಧೇಯ ಸೇವಕ,

ಭಜಕರಲ್ಲೊಬ್ಬ.

ವಿದೇಶ ವೃತ್ತಾಂತ

ಇಂಗ್ಲಾಂಡಿನಲ್ಲಿ ಮೋರ್ಲೆ ಪ್ರಭುಗಳ 'ಇಂಡಿಯಾ ಕೌನ್ಸಿಲ್' ಎಂಬ ಆಲೋಚನಾ ಸಭೆಯ ಮೆಂಬರರಾದ ಮೆ| ಸಯ್ಯದ್ ಹುಸೇನ್ ಬಿಲ್ಗ್ರಾಮಿಯವರು ತಮ್ಮ ಹುದ್ದೆಗೆ ರಾಜಿನಾಮೆ ಕೊಡುವ ಆಲೋಚನೆಯಲ್ಲಿರುವರಾಗಿ ವರ್ತಮಾನವಿರುವುದು. ಅನಾರೋಗ್ಯವು ಇದರ ಕಾರಣವಾಗಿರುವುದು.

~~~~~~

ಕಿಚ್ನರ್ ಪ್ರಭುಗಳು ಷಂಗಹಾಯಿ ಎಂಬಲ್ಲಿಗೆ ಬಂದಿಳಿದಿರುವರು.

~~~~~~

ಹಡಗು ಜಹಜುಗಳ ರಚನೆಯಲ್ಲಿ ನ್ಯೂಯೋರ್ಕಿನ ಪ್ರೊಫೆಸರ್ ಮೆಲವಿಲೆ ಮತ್ತೆರಡು ಜನರು ಸ್ಟೀಮರುಗಳು ಈಗ ನಡಿಯುವುದಕ್ಕಿಂತಲೂ ಸೇಕಡಾ ೧೫ರಷ್ಟು ಹೆಚ್ಚು ವೇಗದಲ್ಲಿ ನಡಿಯುವಂತೆ ಒಂದು ನೂತನ ಯುಕ್ತಿಯನ್ನು ಕಲ್ಪಿಸಿರುವರು. ಇದರಿಂದ ಸ್ಟೀಮರುಗಳಲ್ಲಿ ಸ್ಥಳವು ಹೆಚ್ಚಾಗಿ ದೊರಕುವುದಲ್ಲದೆ ಕಲ್ಲಿದ್ದಲು ಮೊದಲಾದವುಗಳ ಖರ್ಚು ಸಹಾ ಕಡಿಮೆಯಾಗುವುದಂತೆ

~~~~~~

ರುಶ್ಯದೇಶದಲ್ಲಿ ಸೈನ್ಯಗಳ ಖರ್ಚಿನ ಅಂದಾಜುಗಳಲ್ಲಿ ವಾಯು ಮಂಡಲದಲ್ಲಿ ಸಂಚರಿಸುವ ಯುದ್ಧನಾವೆಗಳ ಬಗ್ಗೆ ಕಾಲು ಮಿಲಿಯ ಪವನುಗಳನ್ನು ಪ್ರತ್ಯೇಕಿಸಿಟ್ಟಿರುವರು. ಇಂಥಾ ಎರಡು ಯುದ್ಧನಾವೆಗಳು ಈ ಮೊದಲೇ ತಯ್ಯಾರಾಗಿರುವವು ಇನ್ನು ಐದು ಏರೋಪ್ಲೇನುಗಳನ್ನು ಕಟ್ಟಿಸುತ್ತಿರುವರು

~~~~~~

ಅಮೇರಿಕದ ನ್ಯೂಯೋರ್ಕ್ ಎಂಬಲ್ಲಿಯ ದಕ್ಷಿಣ ಪ್ರಾಂತ್ಯದ ಹತ್ತಿ ಕಾರ್ಖಾನೆಯವರು ಇತ್ತಲಾಗೆ ಸಭೆಕೂಡಿ, ಹತ್ತಿಯ ಕ್ರಯವು ಬಹಳ ವಿಪರೀತವಾಗಿರುವುದರಿಂದಲೂ ಬಟ್ಟೆಗಳ ಕ್ರಯವು ಬಹಳ ತಗ್ಗಿರುವುದರಿಂದಲೂ ವಸ್ತ್ರನೇಯುವುದು ತತ್ಕಾಲದಲ್ಲಿ ನಷ್ಟಕಾರಿಯಾಗಿರುವುದೆಂದು ನಿರ್ಣಯಿಸಿರುವರು ಇನ್ನು ಹದಿನೈದು ದಿನಗಳಲ್ಲಿಯೇ ಈ ಕಾರ್ಖಾನೆಯವರು ತಮ್ಮ ಕಾರ್ಖಾನೆಗಳನ್ನು ಪೂರ್ಣವಾಗಿ ಮುಚ್ಚಿ ಬಿಡುವರೆಂಬದಾಗಿ ನಿರೀಕ್ಷಿಸಲ್ಪಟ್ಟಿರುವುದು

~~~~~~

ಮೋರ್ಲೆ ಪ್ರಭುಗಳ ಇಂಡಿಯಾ ಕೌನ್ಸಿಲಿನ ಮೆಂಬರರಾದ ಕೆ ಜಿ ಗುಪ್ತರವರು ಬರುವ ನವಂಬರ ತಿಂಗಳ ಅಂತ್ಯದಲ್ಲಿ ಕಲ್ಕತ್ತೆಗೆ ಬರುವರು

~~~~~~

ಉತ್ತರ ಹಿಂದುಸ್ಥಾನ.

~~~~~~

ಮೆ| ಬಿ ಎಮ್ ಮಲಬಾರಿಯವರು ಕ್ಷಯರೋಗಗಳ ಬಗ್ಗೆ ಒಂದು ಚಿಕಿತ್ಸಾಲಯವನ್ನು ಸಿಮ್ಲಪರ್ವತದಲ್ಲಿ ಕಟ್ಟಿಸುವರೆ ಸಿಮ್ಲಕ್ಕೆ ಬಂದಿರುವರು ಚಿಕಿತ್ಸಾಲಯವು ಧರಮಪುರ ಎಂಬಲ್ಲಿ ಸಮುದ್ರ ತಳದಿಂದ ೫,೦೦೦ ಅಡಿ ಎತ್ತರವುಳ್ಳ ಸ್ಥಳದಲ್ಲಿ ಕಟ್ಟಿಸಲ್ಪಡುವುದು ಪಟಿಯಾಲದ ಮಹಾರಾಜರವರು ಈ ಸ್ಥಳವನ್ನು ಈ ಚಿಕಿತ್ಸಾಲಯದ ಬಗ್ಗೆ ಉಚಿತಾರ್ಥವಾಗಿ ಕೊಟ್ಟಿರುವರು ಕಳೆದ ಆಗೋಸ್ತು ತಿಂಗಳಿನಿಂದಲೇ ಇಲ್ಲಿ ಕೆಲವು ಡೇರೆಗಳು ಹಾಕಲ್ಪಟ್ಟು ಹಿಂದುಸ್ಥಾನದ ಕೆಲವು ಕಡೆಗಳಿಂದ ಬಂದ ಐದಾರು ರೋಗಿಗಳು ಚಿಕಿತ್ಸೆಯನ್ನು ಹೊಂದುತ್ತಿರುವರು

~~~~~~

ಪೆಂಜಾಬಿನಲ್ಲಿ ಕಾಡುಜ್ವರದ ಹಾವಳಿಯನ್ನು ಕಡಿಮೆ ಮಾಡುವರೆ ಸರಕಾರದವರು ವಿಶೇಷ ಪ್ರಯತ್ನಪಡುತ್ತಿರುವರು. [illegible] ಕಡಿಮೆ ಸಂಬಳದವರೆಲ್ಲರಿಗೂ ಕ್ವಿನೈನ್ ಎಂಬ [illegible] ಉಚಿತವಾಗಿ ಹಂಚಿರುವರು. [illegible] ಕ್ವಿನೈನನ್ನು ಉಪಯೋಗಿಸಬೇಕಾಗಿ ಕೇಳಿಕೊಂಡಿರುವರು. ಸರಕಾರಿ ಕೆಲಸದಲ್ಲಿರುವವರು ಕ್ವಿನೈನ್ ತಕ್ಕೊಳ್ಳದೆ ಈ ಮಲೇರ್ಜ್ವರ ಹಿಡಿದಲ್ಲಿ ಅವರಿಗೆ ರಜಾ ನಿಯಮಗಳ ಮೇರೆಗೆ ರಜೆ ದೊರಕುವುದು, ಆದರೆ ಕ್ವಿನೈನು ಉಪಯೋಗಿಸುವವರಿಗೆ ಈ ಜ್ವರದ ಬಗ್ಗೆ ಸಂಬಳ ಸಮೇತವಾದ 'ಕೆಸುಯಲ್ ರಜೆ' ದೊರಕುವುದೆಂದೂ ಪ್ರಕಟಿಸಲ್ಪಟ್ಟಿರುವುದು

~~~~~~

ಇಂಡಿಯಾ ಸರಕಾರದವರು ತಂತಿಗಳಿಲ್ಲದ ಟೆಲಿಗ್ರಾಫ ಠಾಣ್ಯಗಳನ್ನು ಸ್ಥಾಪಿಸಿ ಇವುಗಳ ಮೂಲಕ ಟೆಲಿಗ್ರಾಫುಗಳನ್ನು ನಡಿಸುವರೆ ಆಲೋಚಿಸಿರುವರಂತೆ ಈ ಬಗ್ಗೆ ಯೂರೋಪಿಯನ್ [illegible] ಮಾತ್ರ ನೇಮಕ ಪಡುವರಂತೆ

~~~~~~

ಈ ತಿಂಗಳ ೧೬ನೇ ತಾರೀಖಿನಲ್ಲಿ ಬಂಗಾಳ ವಿಭಾಗದ [illegible] ಬಾಬು [illegible] ಮಜುಮದಾರರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು ಈ ಬಗ್ಗೆ ಕಲ್ಕತ್ತೆಯಲ್ಲಿ ದೇಶಭಾಷೆ [illegible] ಪ್ರಕಟಣೆಯನ್ನು ಪ್ರಕಟಿಸಿರುವರು [illegible] ಹಾಕಲ್ಪಟ್ಟ ಈ ಪ್ರಕಟಣೆಯು [illegible] ಬರೆ — [illegible] ದೇಶವು ವಿಭಾಗಿಸಲ್ಪಟ್ಟ ದಿನವು ಸಮೀಪಿಸಿರುವುದು ಒಕ್ಟೋಬರ ೧೬ನೇ ದಿನ ಬಂಗಾಳ ಜನಾಂಗಕ್ಕೆ ನವಚೈತನ್ಯವು ಪ್ರಾಪ್ತವಾಗಿರುವುದು ಈ ದಿನದಲ್ಲಿ ಬಂಗಾಳಿಯವರ ಮರಣಯಾತನೆಯಲ್ಲಿ ಸಹಾ [illegible] ಕಂಡಿರುವರು ಈ ದಿನ ಬಂಗಾಳ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಬಂಗಾಳಿಗಳು ಮನೆಗಳಲ್ಲಿ ಒಲೆಗಳಲ್ಲಿ ಬೆಂಕಿ ಉರಿಸದೆ ಈ ದಿನ ಬಿಸಿಯಾದ ಹಾಲು [illegible] ಫಲಗಳನ್ನು [illegible] ಉಪವಾಸ ಮಾಡುವರು [illegible] ಪಕ್ಷದವರ ಇಡೀ ದಿನ ಏನೂ ತಿನ್ನದೆ ಉಪವಾಸವಿದ್ದು ರಾತ್ರಿಯಲ್ಲಿ [illegible] ಸರ್ವೇಶ್ವರನಿಗೆ [illegible] ದೇಶಾಭಿವೃದ್ಧಿಗೆ ಆತನ ಆಶೀರ್ವಾದಗಳ [illegible] ಮಾಡುವರು ಬಂಗಾಳ [illegible] ಹಿಂದೂ ಮುಸಲ್ಮಾನ ಕ್ರೈಸ್ತರ ಸಹಾ ಐಕ್ಯಭಾವ [illegible] ಈ ಮೂರ ಜನಗಳನ್ನು [illegible] ವಿದೇಶೀ ವಸ್ತುಗಳನ್ನು ಬಹಿಷ್ಕರಿಸುವೆವೆಂದೂ ಸ್ವದೇಶಿ ವಸ್ತುಗಳನ್ನು [illegible] ಕೊಳ್ಳುವೆವೆಂದೂ [illegible] ದೇಶವನ್ನೂ ದೇಶಿ ವಸ್ತುಗಳನ್ನು ತಯ್ಯಾರಿಸುವುದರಲ್ಲಿ [illegible] ಸುವೆವೆಂದೂ, ಆಣೆಹಾಕಿಕೊಳ್ಳುವರು [illegible] ದಿನ ಬಂಗಾಳದಲ್ಲಿ ವಾಸಿಸುವರೆಲ್ಲರೂ ಪ್ರಾತಃಕಾಲ ಸ್ನಾನ ಮಾಡಿಕೊಂಡು ಹಿಂದುಗಳಾಗಲಿ ಮುಸಲ್ಮಾನರಾಗಲಿ, ಕ್ರೈಸ್ತರಾಗಲಿ ಪೂರ್ವ ಬಂಗಾಳ ಅಥವಾ ಪಶ್ಚಿಮ ಬಂಗಾಳದಲ್ಲಿ ವಾಸಿಸಿದ್ದರೂ [illegible] ಮತ್ಯದಿಂದ ಮಹಿದೂಷಿಗಳಲ್ಲಿ ಒಂದಾಗಿ ಪಠಿಸಬೇಕಾಗಿ ವಾಗ್ದತ್ತ ಮಾಡಿಕೊಳ್ಳುವರು

~~~~~~

ಕೆಲವು ದಿವಸಗಳ ಹಿಂದೆ ಅಲ್ಲಿಪುರದ ಬೊಂಬ್ ಮೊಕದಮೆಗಳ ಆಪೀಲುಗಳನ್ನು ಸರಕಾರಿ ಕಡೆಯಿಂದ ನಡಿಸುತ್ತಿರುವ ಮಿ ನೋರ್ಟನ್ ನರನರು ವ್ಯವಹರಣೆ ಸಮ್ಮಂಧ ಅಸಂತುಷ್ಟರಾಗಿ [illegible] ತೇಳಿರುವರೆಂದು ವರ್ತಮಾನವಿತ್ತು ಆದರೆ ಈ ವರ್ತಮಾನದ ನಿಜ ಸ್ಥಿತಿಯು ಹ್ಯಾಗಿರುವದೋ ತಿಳಿಯದು ತದನಂತರದ ಪತ್ರಗಳಲ್ಲಿ ನೋರ್ಟನರವರು ವ್ಯವಹರಣೆಯನ್ನು ನಡಿಸುತ್ತಿರುವರಾಗಿ ಕೇಳುತ್ತೇವೆ

~~~~~~

ಪುಣೆಯಲ್ಲಿ ಪತಿತ ಜನ ಉದ್ಧರಣೆ ಬಗ್ಗೆ ಬರೋಡೆಯ ಮಹಾರಾಜರವರಾದ ಗೈಕ್ವಾರರವರು ೧,೦೦೦ ರೂಪಾಯಿಗಳನ್ನು ಕೊಟ್ಟಿರುವರು

~~~~~~

ಮಿದ್ನಾಪುರದ ಬೊಂಬ ಮೊಕದಮೆಗಳಲ್ಲಿ ಮುದ್ದೆಯಾಳಿಯಾಗಿದ್ದ ಬಾಬು ಅಬಿನಾಶ ಚಂದ್ರಮಿತ್ರ, ಉಪೇಂದ್ರನಾಥ ಮೈತಿ, ಅಮಿನಿನಾಥ ಮಲ್ಲಿಕ್, ಯೋಗೇಂದ್ರನಾಥ ಬೆನರ್ಜಿ, ಮತ್ತು ಗೋಪಾಲ ಚಂದ್ರ ಬೆನರ್ಜಿಯವರು ತಮ್ಮ ಮೇಲೆ ತಪ್ಪು ಆರೋಪಿಸಿದ ಮಿದ್ನಾಪುರದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟ್, ಮತ್ತು ಪೋಲೀಸು ಇನ್ಸಪೆಕ್ಟರುಗಳ ಮೇಲೆ ರೂಪಾಯಿ ೫೦,೦೦೦, ರೂ ೨೫,೦೦೦, ರೂ ೧೦,೦೦೦, ರೂ ೫೦೦೦ ಮತ್ತು ರೂ ೫೧೦ ಈ ರೀತಿ ನಷ್ಟ ಕೇಳಿ ದಾವೆ ದಾಖಲು ಮಾಡುವರಾಗಿ ವರ್ತಮಾನವಿರುವುದು

~~~~~~

ವಾಯು ಮಂಡಲದಲ್ಲಿ ಹಾರ್‍ಯಾಡುವ ಪ್ರದರ್ಶನವು ಫಿರೋಜಪುರದಲ್ಲಿ ವ್ಯಸರಾಯ ಪ್ರಭುಗಳ ಸಂದರ್ಶನೆಯ ಸಂದರ್ಭದಲ್ಲಿ ನಡಿಸುವ ಸಂಭವವಿರುವುದು ಒಬ್ಬ ಮಿಲಿಟರಿ ಆಫೀಸರರು ಹೀಗೆ ಹಾರುವ ಯಂತ್ರವನ್ನು ತಯ್ಯಾರಿಸಲು ಪ್ರಯತ್ನಿಸುತ್ತಿರುವರು

~~~~~~

ಮುಂಬಯಿಯಲ್ಲಿ ಬ್ಯಾರಿಸ್ಟರರಾಗಿದ್ದ ಮೆ| ಬೆಪ್ಟಿಸ್ಟಾ ರವರನ್ನು ಜಸ್ಟೀಸ್ ಒಪ್ ಪಿಸ್ ಎಂಬ ಬಹುಮಾನ ಪದವಿಯಿಂದ ಮುಂಬಯಿ ಗವರ್ನಮೆಂಟಿನರು ತಳ್ಳಿ ಹಾಕಿರುವರಷ್ಟೆ ಮುಂಬಯಿಯ ನೆಶನಲ್ ಯೂನಿಯನ್ ಎಂಬ ಸಮಿತಿಯು ಇತ್ತಲಾಗೆ ಸಭೆಕೂಡಿ ಗವರ್ನಮೆಂಟಿನವರ ಈ ಕೃತ್ಯವನ್ನು ಪ್ರತಿವಾದಿಸಿರುವರು

~~~~~~

ಮದ್ರಾಸ್ ಹೈಕೋರ್ಟು ಜಡ್ಜರಾಗಿದ್ದ ಕೈಲಾಸವಾಸಿ ತೆಲಂಗರವರ ಹಿರೇ ಸಹೋದರ ಕೃಷ್ಣರಾವ್ ಬಾಬು ತೆಲಂಗರವರು ಮುಂಬಾಯಿಯಲ್ಲಿ ಕಳೆದ ತಿಂಗಳ ತಾ ೩೦ರಲ್ಲಿ ಮೃತಪಟ್ಟಿರುವರು

~~~~~~

ಇಂಗ್ಲಾಂಡಕ್ಕೆ ಹೋಗಿ ಕ್ರಿಕೆಟೆಂಬ ಪಂಥದಾಟವನ್ನು ಇಂಗ್ಲಾಂಡದವರೊಂದಿಗೆ ಆಡಲಿಕ್ಕೆ ಹಿಂದೂಸ್ಥಾನದಿಂದ ಕೆಲವು ಯುವಕರನ್ನು ಕಳುಹಿಸಿಕೊಡುವರ ಮುಂಬಯಿಯಲ್ಲಿ ಏರ್ಪಾಡಾಗುತ್ತಿರುವುದು

~~~~~~

ಮುಂಬಾಯಿಯ ವ್ಯವಸಾಯ ಮಹಾಸಭೆ ಯಾ ಕೊನ್ಫರೆನ್ಸ್ ಪುಣೆಯಲ್ಲಿ ಮುಂಬಾಯಿ ಗವರ್ನರರವರ ಅಧ್ಯಕ್ಷತೆಯಲ್ಲಿ ಜರಗಿತು ಗೈಕ್ವಾರರವರೂ ಕೋಲಾಪುರದ ಮಹಾರಾಜರವರೇ ಮೊದಲಾದವರೂ ಈ ಸಭೆಗೆ ದಯಮಾಡಿಸಿದ್ದರು ಗವರ್ನರ್‌ದೊರೆಗಳವರ ಮತ್ತು ಗೈಕ್ವಾರರ ಭಾಷಣಗಳ ನಂತರ ಸಭಾಕಾರ್ಯಗಳು ಪ್ರಾರಂಭವಾದವು ವರುಷಂಪ್ರತಿಯೂ ಈ ಮಹಾಸಭೆಯು ಜರಗುವಂತೆ ಏರ್ಪಾಡು ಮಾಡುವರಂತೆ

~~~~~~

ಇತ್ತಲಾಗೆ ಗತಿಸಿದ ಲಾಲಾಮೋಹನ್ ಘೋಷರವರ ಸ್ಮರಣೆಯು ಶಾಶ್ವತವಾಗಿ ಉಳಿಯುವಂತೆ ಇವರ ಒಂದು ಚಿತ್ರಪಠ ಯಾ ಪ್ರತಿಮೆಯನ್ನು ಪ್ರತಿಷ್ಠಿಸುವ ಏರ್ಪಾಡು ನಡಿಯುತ್ತಿರುವುದು

~~~~~~

೧೯೧೦ ನೇ ದಶಂಬರಿನಲ್ಲಿ ಅಲ್ಲಾಹಾಬಾದಿನಲ್ಲಿ ಬಹಳ ದೊಡ್ಡದಾದ ಒಂದು ವಸ್ತು ಪ್ರದರ್ಶನವು ಏರ್ಪಡಿಸಲ್ಪಡುವುದು ಟೆಹರಿ ರಾಜರವರು ರೂ ೭,೦೦೦ವನ್ನು ಇದಕ್ಕೆ ಚಂದಾ ಹಣವಾಗಿ ಕೊಟ್ಟಿರುವರು ಈ ಬಗ್ಯೆ ಇಷ್ಟರ ವರೆಗೆ ಕೂಡಿದ ಚಂದಾಹಣವು ರೂ ೧೬೬,೦೦೦ ಆಗಿರುವುದು

~~~~~~

ಬಂಗಾಳದಿಂದ ಗಡಿಪಾರಾದವರಲ್ಲಿ ಕೆಲವರನ್ನಾದರೂ ಸದ್ಯದಲ್ಲಿಯೇ ಬಿಡುಗಡೆಮಾಡುವ ವರ್ತಮಾನವಿರುವುದು.

~~~~~~

ಮುಂಬಯಿಯ ಬಂಗಾಲ್ ಲ್ಯಾಬ್ರರಿಯವರು ಕೇಸರಿ 'ಕಾಲ' 'ಭಾಲ' [illegible] ಮೊದಲಾದ ಪತ್ರಿಕೆಗಳನ್ನು ತರಿಸುವದಾದರೆ ಲ್ಯಾಬ್ರರಿಗೆ [illegible] ಸರಕಾರ ಸಹಾಯ ದ್ರವ್ಯ [illegible]

ಈ ಲ್ಯಾಬ್ರರಿಗೆ ತಿಳಿಸಿದ್ದರು. ಸರ್ಕಾರಿ ಅಪ್ಪಣೆಗನುಗುಣವಾಗಿ ಈ ಲ್ಯಾಬ್ರೆರಿಯವರು ಈ ಪತ್ರಗಳನ್ನು ತರಿಸದಂತೆ ನಿಯಮಿಸಿರುವರು.

ಮುಂಬಾಯಿ ಗವರ್ನರರವರು ವಿಲಾಯಿತಿಗೆ ಹಿಂದುಸ್ಥಾನದಿಂದ ಹೋಗುವ ಕ್ರಿಕೆಟ್ ಟೀಮಿನ ಖರ್ಚಿನ ಬಗ್ಯೆ ಚಂದಾ ಹಣವನ್ನು ವಾಗ್ದತ್ತ ಮಾಡಿರುವರು

—o—

'ಕಾಳ' ಎಂಬ ಮರಾಟಿ ಪತ್ರದ ಸಂಪಾದಕರಾಗಿದ್ದ ಮಿ. ಎಸ್. ಎಮ್. ಪರಂಜಪೇಯವರ ಕಾರಾಗ್ರಹ ಬಂಧನವು ಈ ತಿಂಗಳ ೫ನೇ ತಾರೀಕಿಗೆ ಮುಗಿದಿರುವುದು

ಕಲ್ಕತ್ತೆಯಲ್ಲಿ ಕಳೆದ ೨೦ ವರುಷಗಳಿಂದ ದೇಶಭಾಷೆಯಲ್ಲಿ ಪ್ರಕಟವಾಗುತ್ತಲಿದ್ದ 'ಹಿತವಾದಿ'ಯನ್ನು ಛಾಪಿಸುವ ಮುದ್ರಾಲಯದ ಮಾಲಿಕರನ್ನು ಕೈದುಮಾಡಿರುವರು. ರಾಜದ್ರೋಹ ಪ್ರಕಟಣೆಯ ತಪ್ಪಿನ ಆರೋಪಣೆಯೇ ಇವರನ್ನು ಕೈದುಮಾಡಿದ ಕಾರಣವಾಗಿರುವುದು.

ಪುನೆಯಲ್ಲಿ ಡಾಕ್ಟರ್ ರಾಮಕೃಷ್ಣಗೋಪಾಲ ಬಂಡಾರಕಾರರವರ ಅಧ್ಯಕ್ಷತೆಯಲ್ಲಿ ಟ್ರಾನ್ಸವಾಲ ಭಾರತೀಯರ ದೀನಸ್ಥಿತಿಯಿಂದ ಉಂಟಾದ ಕ್ಲೇಶವನ್ನು ತೋರ್ಪಡಿಸುವರೆ ಒಂದು ಸಭೆಕೂಡಿತು

ದಕ್ಷಿಣ ಹಿಂದುಸ್ಥಾನ.

ಬಹುಮಾನಪಟ್ಟ ಹೈಕೋರ್ಟು ವಕೀಲ ವಿ ಕೃಷ್ಣಸ್ವಾಮಿ ಅಯ್ಯರವರನ್ನು ಮದ್ರಾಸು ಹೈಕೋರ್ಟು ಜಡ್ಜರನ್ನಾಗಿ ನೇಮಿಸಿರುವರು

ಪ್ಲೇಗ್ ನಿವಾರಣೆಯನ್ನು ಹ್ಯಾಗೆ ನಡಿಸುತ್ತಿರುವರೆಂಬದನ್ನು ನೋಡುವಬಗ್ಯೆ ಮದ್ರಾಸು [illegible] ರವರು [illegible] ಹ ಕೊಯಂಬುತ್ತೂರಿಗೆ ದಯಮಾಡಿದ್ದರು [illegible] ರವರ ಈ ಪ್ರಜಾನುರಾಗವು ಸ್ತುತ್ಯವಾಗಿರುವುದು

ಮೈಸೂರಿನಲ್ಲಿ ಪ್ಲೇಗುರೋಗವು [illegible] ವಾಗಿರುವುದು. ಈ ತಿಂಗಳ ತಾ. [illegible] ಕ್ಕೆ [illegible] ವಾರದಲ್ಲಿ ಮೈಸೂರಿನಲ್ಲಿ ೧೩೪ ಜನರಿಗೆ ಪ್ಲೇಗು [illegible] ನೂರು ಜನರು ಇದರಿಂದ ಮೃತಪಟ್ಟರು. [illegible] ಪ್ಲೇಗು ನಿವಾರಣೆ ಬಗ್ಯೆ ಬಹಳ ಸಾಹಸ ಪಡುತ್ತಿರುವರು. ಪ್ಲೇಗು ದಾಕುಹಾಕಲಿಕ್ಕೆ ಹಲವು ಜನ ವೈದ್ಯ ಆಫೀಸರರನ್ನು ನೇಮಕ ಮಾಡಿರುವರು. ಇಷ್ಟರ [illegible] ೧೧,೪೭೫ ಜನರಿಗೆ ದಾಕುಹಾಕಿರುವುದು. ಪ್ರತಿನಿತ್ಯವೂ ೧೦೦ಕ್ಕಿಂತ ಹೆಚ್ಚು ಜನರಿಗೆ ದಾಕು ಹಾಕಲ್ಪಡುತ್ತಿರುವುದು. ಮೈಸೂರು ದಿವಾನರವರು ದಾಕುಹಾಕುವ [illegible] ಕ್ಕೆ ಬಹಳ ಜನರು ಕೂಡಿ [illegible] ದಾಕ ಹಾಕಿಸಿಕೊಳ್ಳುವಂತೆ ಒಬ್ಬ ವೈದ್ಯ ಆಫೀಸರರಿಗೆ ಒಂದು ಪ್ರೇಮಪೂರ್ವಕ [illegible] ನನ್ನು ಕೊಟ್ಟು ಆದರ ನಿಮಿತ್ಯ ಜನರನ್ನು ಒಟ್ಟು ಕೂಡಿಸುವಂತೆ ಅಪ್ಪಣೆಕೊಟ್ಟಿರುವರು. ಪ್ಲೇಗು ದಾಕಿನ ಪ್ರಯೋಜನಗಳನ್ನು ಜನರಿಗೆ ಸಾರಿ ದಾಕು ಹಾಕಿಸುವವರ ಸಂಖ್ಯೆಯು ಹೆಚ್ಚುವಂತೆ ಅಲ್ಲಲ್ಲಿ ಸಭೆಕೂಡುತ್ತಿರುವವು. ಅನೇಕ ಜನ ಸಾವುಕಾರರೂ ಪ್ಲೇಗಿನ ದಾಕನ್ನು ಹಾಕಿಸಿಕೊಳ್ಳುವಂತೆ ಜನರನ್ನು ಪ್ರೇರೇಪಿಸುತ್ತಿರುವರು. ದಾ ಸಾಹುಕಾರ ನೀಲಗಿರಿ ಮಾದಣ್ಣ ಎಂಬ ವರ್ತಕರು ದಾಕು ಹಾಕಿಸಿಕೊಂಡವರಲ್ಲಿ ಬಡವರಿಗೆ ಒಂದು ಸೇರು ಅಕ್ಕಿ ಅರ್ಧ ಸೇರು ಮಿರಾಯಿಯನ್ನು ಉಚಿತವಾಗಿ ಕೊಡುತ್ತಿರುವರು. ಸರಕಾರದವರು ಸಹಾ ದಾಕುಹಾಕಿಸಿಕೊಂಡ ಬಡವರಿಗೆ ಜನ ಒಂದಕ್ಕೆ ನಾಲ್ಕಾಣೆಯಂತೆ ಕೊಡುತ್ತಿರುವರು. ಪ್ರಜೆಗಳೂ ಸರಕಾರದವರೂ ಈ ವಿಪತ್ತನ್ನು ಪರಿಹರಿಸುವರೆ ಈ ರೀತಿ ಶ್ರಮಪಡುವುದರಿಂದ ಪ್ಲೇಗು ಬಾಧೆಯು ಶೀಘ್ರದಲ್ಲಿಯೇ ಶಮನವಾಗುವುದು.

ದಕ್ಷಿಣ ಕನ್ನಡ.

—o—

ಮಂಗಳೂರು. ಕೆ ಡಿ ಇದ್ದಿನ ಬ್ಯಾರಿ ವಗೈರೆಯು ೧೯೦೭ನೇ ಇಸವಿ ಮೇ ತಾ ೨೭ರಲ್ಲು ಉಪ್ಪಿನಂಗಡಿ ತಾಲೂಕು ಕುಂತೂರು ಗ್ರಾಮದ ಯರ್ಮಳ ಕಂಡತಡ್ಕ [illegible] ಒಲ್ಲಿ ನಡಿಸಿದ ದರೋಡೆ ಕಳವಿನಲ್ಲಿ ಬೇರೆ ಮುದ್ದೈಯಾಲಿಗಳಿಗೆ ಮೊದಲೇ ಶಿಕ್ಷೆಯಾಗಿತ್ತು. ಕೆ ಡಿ ಇದ್ದಿನ ಬ್ಯಾರಿಯು ಮಾತ್ರ ಸಿಕ್ಕಿರಲಿಲ್ಲಾ. ಇವನನ್ನು ಕಳೆದ ಆಗೋಸ್ತು ತಿಂಗಳ ತಾ [illegible] ರಲ್ಲಿ ಪಾಣೆಮಂಗಳೂರು ಸಬ್ ಇನ್ಸ್ಪೆಕ್ಟರಾದ ರಾ. ಶೇಷಾದ್ರಿರವರು, ಇವನು ಇನ್ನೊಂದು ಕಳವು ಮಾಡಲಿಕ್ಕೆ ಹೋಗುವಾಗ ಅತೀ ಪ್ರಯಾಸದಿಂದ ಹಿಡಿದಿರುತ್ತಾರೆ. ಈ [illegible] ತನಕ ಗೆ ಒಂದು ಇವನು ತಪ್ಪ [illegible] ಅಫಿ [illegible] ಯಪಟ್ಟದ್ದರಿಂದ [illegible] ೧೦ ವರುಷ ಕಠಿಣ ಕಾಮಗಾರಿ ಸಜಾವನ್ನು ವಿಧಿಸಿದರು. ಇವನು ಮೊದಲು ಒಬ್ಬ [illegible] ಯನ್ನು ಕೊಡುತ್ತಿದ್ದನು

ಇದೇ ಮುದ್ದೈಯಾಲಿ [illegible] ಕಳೆದ [illegible] ಸೆಶನ್ ಕೋರ್ಟಿನ [illegible] ತನಕ [illegible] ಇವನಿಗೆ [illegible] ವಿಧಿಸಿರುತ್ತಾರೆ

ಕಾಸರಗೋಡು [illegible] ಮಾಡಿದ [illegible] ಮೊಕದಮೆಯ ತನಖಿಯು ನಡಿಯುತ್ತಲಿದೆ. ಈ ಮೊಕದ್ದಮೆಯಲ್ಲಿ ಕೆಲವು ಜನ ಪೋಲಿಯರೋಗೆ [illegible] ಒಂದು [illegible] ಹೊಲೆಯರು ಕೂಡಿ [illegible] ಯನ್ನು [illegible] ಕೊಂಡದ್ದಾಗಿರುತ್ತದೆ

ಹೊಸದುರ್ಗ [illegible] ಲೋಕಲ್ ಫಂಡ [illegible] ವರುಷ [illegible] ಕಂಟ್ರಾಕ್ಟ [illegible] ಕಂಟ್ರಾಕ್ಟರ [illegible] ಹಿಂದೆ [illegible] ಕಮ್ಮಿಟಿ ಮಾಡಿ [illegible]

ಈ [illegible] ಮುದ್ದಾಮ್ [illegible] ಕಲ್ಪಿಸುತ್ತಿರುವಾಗ [illegible] ನಮ್ಮ [illegible] ಸುಬ್ಬರಾಯ [illegible] ನನ್ನ [illegible] ದವರಾಗಿದ್ದರು [illegible] ಅಮೇರಿಕದ ಸಂಯುಕ್ತ ಸಂಸ್ಥಾನದ ಮೊಡವಿಲ್ಲೆ ಕೊಲೇಜು ಎಂಬ ವಿದ್ಯಾಸಂಸ್ಥೆಗೆ ವಿದ್ಯಾಭ್ಯಾಸದ ಬಗ್ಯೆ ಹೋಗಿದ್ದರು. ಈ ಕೊಲೇಜು ವಾಣಿಜ್ಯ ಪದವಿಯ ಬಗ್ಯೆ ಮೂರು ವರುಷ ಅಲ್ಲಿ ಕಲಿಯಬೇಕಾಗಿರುವುದು. ಆದರೆ ಒಂದು ವರುಷದ ಅಭ್ಯಾಸವಾಗುತ್ತಲೇ ಸುಬ್ಬರಾಯರವರಿಗೆ ಹಿಂದೂಸ್ಥಾನಕ್ಕೆ ಬರಲು ಅನುಮತಿ ಸಿಕ್ಕಿತು. ಬರುವಾಗಲೇ ಕ್ಷಯರೋಗದ ಕಾಹಿಲೆಯು ದುರ್ದೈವ ವಶಾತ್ ಇವರಿಗೆ ಪ್ರಾಪ್ತವಾಯಿತು. ತಮ್ಮ ರೋಗಚಿಕಿತ್ಸೆ ಬಗ್ಯೆ ಇವರು ಬಳ್ಳಾರಿಗೆ ಹೋಗಿದ್ದರು. ಬಳ್ಳಾರಿಯ ಟೌನ್‌ಹೋಲಿನಲ್ಲಿ ವಾಸಿಸುತ್ತಲಿದ್ದು ಅಲ್ಲಿಯೇ ಕಾಲವಾದರು. ಕಳೆದ ೧೨ ವರುಷಗಳಲ್ಲಿ ಇವರು ಕಲ್ಲಿಕೋಟೆಯಲ್ಲಿ ಪ್ರಕಟವಾಗುತ್ತಿರುವ "ವೆಸ್ಟ ಕೋಸ್ಟ್ ಸ್ಪೆಕ್ಟೇಟರ್" ಎಂಬ ಇಂಗ್ಲೀಷ್ ಪತ್ರದ ಕರ್ತರಾಗಿದ್ದರಲ್ಲದೆ "ಥಿಸ್ಟ್" ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಕಲ್ಲಿಕೋಟೆಯಲ್ಲಿ ಒಂದು ಬ್ರಹ್ಮಸಮಾಜದವರ ಮಂದಿರವನ್ನು ಸ್ಥಾಪಿಸಿ [illegible] ಸಾರ್ವಜನಿಕ ವಿಷಯಗಳಲ್ಲಿಯೂ ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದರು. ಇವರ ಅಕಾಲ ಮರಣದ ಕುರಿತು ನಾವು ಇವರ ಕುಟುಂಬದೊಡನೆ ಸಹಸಂತಾಪಿಸುವೆವು.

ಕ್ರಿಮಿನಲ್ ಮೊಕದಮೆಯೊಂದರಲ್ಲಿ ಟ್ರಾಪ್ಸು ಶಿಕ್ಷೆಗೆ ಒಳಪಟ್ಟ ತೀಯರ್ ಜಾತಿಯ ಒಬ್ಬ ಹೆಂಗಸು ಆ ಸಮಯ್ದದಲ್ಲಿ ಗರ್ಭಿಣಿಯಾಗಿದ್ದದರಿಂದ ಅವಳನ್ನು ಕಣ್ಣನೂರು ಜೈಲಿನಲ್ಲಿಯೇ ಇರಗೊಡಿಸಿದ್ದರು. ಸ್ವಲ್ಪ ಸಮಯದ ನಂತರ ಅವಳು ಪ್ರಸೂತಳಾಗಿ ಗಂಡು ಶಿಶುವನ್ನು ಹೆತ್ತಳು. ಆ ಶಿಶುವಿಗೆ ಈಗ ಸುಮಾರು ೨-೩ ವರುಷ ಪ್ರಾಯವಾಗಿರುವದೆ. ಸದರಿ ಶಿಶುವನ್ನು ರಾ| ಪಡಮುನ್ನೂರು ರಾಮಚಂದ್ರಯ್ಯನವರ ವಿಜ್ಞಾಪನೆ ಮೇರೆಗೆ ಡಿಸ್ಟ್ರಿಕ್ಟ ಕಲ್ಲೆಕ್ಟರ ಥೊರೆಪವರು ಸದರಿ ರಾಮಚಂದ್ರಯ್ಯನವರ ಅನಾಥಾಲಯಕ್ಕೆ ಕಳುಹಿಸುವರೆ ಇಲ್ಲಿಗೆ ತರಿಸಿರುತ್ತಾರೆ.

ಮಂಗಳೂರು ಕ್ರಿಕೆಟ್ ಟೀಮ್ ಮತ್ತು ಪೋಲಿಸ್ ಕ್ರಿಕೆಟ್ ಟೀಮಿನವರಿಗೆ ಆದ ಕ್ರಿಕೆಟ್ ಆಟದಲ್ಲಿ ಮಂಗ್ಳೂರು ಟೀಮಿನವರು ಗೆದ್ದರು. ತಾ. ೬ರ ಲಾಗ್ಯಾತು ಮಂಗಳೂರು ಟೀಮ್ ಮತ್ತು ಸೆಂಟ್ ಅಲ್ಯಾಸಿಯಸ್ ಕೊಲೆಜಿನವರ ಆಟವು ನಡಿಯುತ್ತಿದೆ

ಕಳೆದವಾರ ಮುನಿಸಿಪಾಲಿಟಿಯಲ್ಲಿ ಎರಡು ಪ್ಲೇಗು ಮರಣಗಳಿದ್ದವು. ಈ ವಾರದಲ್ಲಿ ಇಷ್ಟರ ತನಕ ೪ ಮರಣಗಳು ಇರುತ್ತವೆ. ಸಪ್ಟಂಬರ ತಿಂಗಳಲ್ಲಿ ಪ್ಲೇಗಿನಿಂದ ಮೃತಪಟ್ಟವರ ಒಟ್ಟು ಸಂಖ್ಯೆಯು ೬೮ಗಿರುವುದು

ಮಿ| ಪಿ. ಎಫ್. ಎಕ್ಸ್ ಸಾಲ್ಡಾನರವರು ಮಿ| ಜೆ. ಎಮ್ ಪ್ರಿಬೋರವರ ಮೇಲೆ ಮಾಡಿದ ಮಾನ ನಷ್ಟದ ಮೊಕದಮೆಯ ತನ್ಖಿಯು ಹೆಡ್ ಕ್ವಾರ್ಟರ್ ಡಿಪ್ಯೂಟಿ ಕಲೆಕ್ಟರರಲ್ಲಿ ನಡಿಯುತ್ತಿರುವುದು

ಇಲ್ಲಿಂದ ೧೧| ಗಂಟೆಗೆ ಹೊರಡುತ್ತಿದ್ದ ಲೋಕಲ್ ಟ್ರೈನ್ ಪ್ರಕೃತ ೧೦| ಗಂಟೆಯಿಂದ ಹೊರಡುತ್ತಲಿರವುದು

ಹೆಡ್ ಅಸಿಸ್ಟಾಂಟ್ ಕಲೆಕ್ಟರರಾದ ಮೇ ಡ್ಯೂಗರವರು ಮೊನ್ನೆ ದಿನ ಇಲ್ಲಿಗೆ ಬಂದಿದ್ದವರು ತಿರಿಗಿ ತಮ್ಮ ಪಡುಬಿದ್ರೆ ಮೊಕ್ಕಾಮಿಗೆ ಹೋಗಿರುವರು

ಜಿಲ್ಲಾ ಕಲೆಕ್ಟರ ದೊರೆಗಳವರ ಈ ತಿಂಗಳ ಸರ್ಕಿಟಿನ ಪ್ರೋಗ್ರಾಮು ಈ ರೀತಿಯಾಗಿರುವುದು — ತಾ ೪-೬ ತ್ರಿಕರಪುರ, ತಾ ೮-೯ ಬೇಕಲ್ ತಾ ೧೦ ಬೇಕಲಿನಿಂದ ಮಂಗಳೂರು, ತಾ ೧೬-೧೪ ಮಂಜೇಶ್ವರ, ತಾ ೧೯-೨೧ [illegible] ಂಟ್ವಾಳ್ಸ, ತಾ ೨೭ ೨೯ ಬೇವಿಂಜೆ. ಈ ತನ್ಮಧ್ಯ ಕಲೆಕ್ಟರರವರು ಸಿನೇಟು ಮೀಟಿಂಗ್ ಬಗ್ಯೆ ಮದ್ರಾಸಿಗೆ ಹೋಗಿ ಬರುವರು

ಕಾಸರಗೋಡು. ಕಳೆದ ತಿಂಗಳ ಸಂಚಿಕೆಗಳಲ್ಲೊಂದರಲ್ಲಿ ಪ್ರಸ್ತಾಪಿಸಿದ ಇಲ್ಲಿಯ ಕಿಶೆ ಕಳವಿನ ಮೊಕದಮೆಯಲ್ಲಿ ಉಳಿದ ೩ ಜನ ಮುದ್ದಯಾಲೆರನ್ನು ಸಬ್ ಮೇಜಿಸ್ಟ್ರೇಟರು ಕಳೆದ ವಾರದಲ್ಲಿ ೪-೫-೬ ತಿಂಗಳ ಸಜಾ ವಿಧಿಸಿ ಕಾರಾಗೃಹಕ್ಕೆ ಕಳುಹಿಸಿದರಂತೆ

ಈ ತಾಲೂಕು ನೆಟ್ಟಣಿಗೆ ಗ್ರಾಮದಲ್ಲಿರುವ ಹಳೆಪೈಕ ಜಾತಿಯ ಬಿಲ್ಲವರಿಬ್ಬರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದ ಮಾವನೂ ಅಳಿಯನೂ ಕೂಡ ಕಳೆದ ತಿಂಗಳ ತಾ. ೨೮ನೇ ರಾತ್ರೆ ಚಿಲ್ಲರೆ ಸಂಗತಿಯಲ್ಲಿ ತಮ್ಮೊಳಗೆ ಜಗಳ ಹತ್ತಿಸಿಕೊಂಡು ಮೂರ್ತೆ ಕತ್ತಿಯಿಂದ ಇಬ್ಬರೂ ಕಡಿದಾಡಿ ಕೊನೆಗೆ ಅಳಿಯನಿಂದ ಮಾವನಿಗೆ ಕಠಿಣ ಗಾಯವಾಗಿ ಮೃತಪಟ್ಟನಂತೆ. ಈ ಘೋರ ಕೃತ್ಯವನ್ನು ನೋಡಲಾರದೆ ವೃದ್ಧಳಾದ ಕೊಲೆಪಾತಕಿಯ ತಾಯಿಯು [illegible] ಎಲ್ಲಿಯೋ ದೂರದ ಗುಡ್ಡೆಗೆ ಓಡಿಹೋಗಿದ್ದು ಅಲ್ಲಿಯೇ ಮಡಿದಳೆ [illegible]

[illegible]ಯೂ, ಆತನ ಮಗಳೂ, ಅಪರಾಧಿಯೂ ಕೂಡ ಪೋಲೀಸಿನವರ ಹತ್ತರ ಕೊಟ್ಟ ವಾಜ್ಮೂಲವು ಸುಮಾರು ಒಂದೇ ರೀತಿಯಾಗಿದೆಂದು ಕೇಳುತ್ತೇನೆ ಕೊಲೆಪಾತಕಿ[illegible] ಅನೇಕ ಘಾಯಗಳಾಗಿವೆ ಶವ ಪರೀಕ್ಷೆ ಬಗ್ಗೆ ಪೋಲೀಸಿನವರು ಶವವನ್ನು ಇಲ್ಲಿಯ ಆಸ್ಪತ್ರಿಗೆ ತಾ[illegible]ಂನೇಗೆ ತಂದಿರುತ್ತಾರೆ

ಇಲ್ಲಿಯ ಲೋಕಲ್‌ಫಂಡ್ ಅಸಿಸ್ಟಾಂಟ್ ಇಂಜಿನಿಯರ್ ಮಿ। ಥೋಮಸರವರು ಒಂದೆರಡು ತಿಂಗಳಿಂದೀಚೆಗೆ ಅಸೌಖ್ಯದಲ್ಲಿದ್ದು ಇಲ್ಲಿಯ ಡಾಕ್ಟರರಿಂದ ಚಿಕಿತ್ಸೆ ಮಾಡಿಸಿ ಗುಣಹೊಂದದಿರುವದರಿಂದ ಒಂದು ತಿಂಗಳ ರಜೆಯ ಮೇಲೆ ಮದ್ರಾಸಿಗೆ ಹೋಗಿದ್ದಾರಾಗಿಯೂ ಇವರ ಆಫೀಸಿನ ಚಾರ್ಜು ಡಿಸ್ಟ್ರಿಕ್ಟ್ ಇಂಜಿನಿಯರು [illegible] ವಹಿಸಿಕೊಂಡಿದ್ದಾರಾಗಿಯೂ ವದಂತಿ ಇದೆ

ಇಲ್ಲಿಂದ ಬೆಳಿಗ್ಯೆ ೮। ಘಂಟೆಗೆ ಮಂಗಳೂರಿಗೆ ಈ ವರೇಗೆ ಚಲಿಸುತ್ತಿರುವ ಮೋಟರ್ ಗಾಡಿ[illegible] ಯಿಂದ ೭।। ಘಂಟೆಗೆ ಬಿಡುತ್ತಾರೆ ಈ ಸಮಯ[illegible]ನಗಿಂತ ಸರ್ವ ಪ್ರಯಾಣಿಕರಿಗೂ ಮಂಗಳೂರ ಕೋಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ [illegible]ರಿಗೂ ಹೆಚ್ಚು ಅಸೌಕರ್ಯ ಉಂಟಾಗುವದರಿಂದ ಇಲ್ಲಿ[illegible] ನಿವಾಸಿಕರು ರೈಲ್ವೆ ಮೇಲ್ ಅಧಿಕಾರಸ್ಥರಿಗೆ ಮನವಿ[illegible]ಹಿಸಿದ್ಧಾರೆ

~~~~~

ಪುತ್ತೂರು ಇದೇ ಅಕ್ಟೋಬರ ತಾ[illegible] ಮಳೆ ಬಂದು ಗದ್ದೆಯಲ್ಲಿ ಕಟಾವು ಮಾಡಿಟ್ಟ ಬೆಳೆಯು ಹಾಳಾಗಿ ಅನೇಕರಿಗೆ ನಷ್ಟ ಉಂಟುಮಾಡಿರುತ್ತದೆ

ಪುತ್ತೂರು ಕಸಬೆಯಲ್ಲಿ ಇರುವ ಚಮಗಾರ ಮಂಜಪ್ಪ ಎಂಬವನಿಂದ ಉಪ್ಪಿಂಗಡಿ [illegible] ಎಂಬವನಿಗೆ ಚಿಲ್ಲರೆ ಸಲ್ಲತಕ್ಕ ಐವಜು ವಸೂಲ[illegible]ವನು ದಾರಿಯಲ್ಲಿ ಆತನಿಂದ ಸಲ್ಲತಕ್ಕ ಐವಜು ವಸೂಲು ಕೊಡಬೇಕಾಗಿ ತಗಾದೆ ಮಾಡುತ್ತ[illegible] ಬಾಡಿ ಗ್ರಾಮದಲ್ಲಿ ಸುಬ್ರಾಯನು ಮಂಜಪ್ಪನ ಹೊಟ್ಟೆಯನ್ನು ಚೂರಿಯಿಂದ [illegible] ತಿವಿದುಬಿಟ್ಟನಂತೆ ಇವನನ್ನು ಪುತ್ತೂರು ಆಸ್ಪತ್ರೆಗೆ ತಂದು ಚಿಕಿತ್ಸೆ ಮಾಡುತ್ತಿರುವರು ಚಮಗಾರ ಸುಬ್ರಾಯನನ್ನು ರಿಮಾಂಡಿನಲ್ಲಿ ಇಟ್ಟಿರುವರು

~~~~~

ಬರಿಮಾರ ಇದೇ [illegible] ಸಪ್ಟಂಬರ ತಾ[illegible] ಮಂಗಳೂರು ತಾಲೂಕು ಬಾಳ್ತಿಲ ಗ್ರಾಮದ ಕೊರಿಯ ಎಂಬಲ್ಲಿ ಮಿಂಗಿಲಿ ಫೆರ್ನಾಂಡಿಸ್ರ ಮಗಳು ಸುಮಾರು [illegible] ವರುಷದ ಹುಡುಗಿಯು ಮದ್ದು ತರುವುದಕ್ಕಾಗಿ ಹೋದವಳು ವಾಪಸು ಬರುತ್ತ [illegible] ಸಮೀಪ [illegible]ಇರುತ್ತಿದ್ದ ಒಂದು ಹುಲಿಯು [illegible] ಮೈಮೇಲೆ ಬಿದ್ದು ಘಾಯಪಡಿಸಿತು ಅವಳು [illegible] ದಿನಗಳನಂತರ ಮರಣಪಟ್ಟಳಾಗಿ ಕೇಳುತ್ತೇನೆ ಕ್ರೂರ ಮೃಗಗಳ ಭಾಧೆಯು ಕೋವಿ ಲೈಸನ್ಸ್ ಕಡಿಮೆ ಮಾಡಿದರ ಫಲವಾಗಿರುತ್ತದೆ

~~~~~

ಕುಂಡಡ್ಕ ಇದೇ ಸಪ್ಟಂಬರ ತಾ[illegible] ನಮ್ಮ ಜಮೀನ್ದಾರ ಸುಡ್ಡಪ್ಪರೈಗಳವರು ಇಲ್ಲಿ ಹೊಸತಾಗಿ ರೂ[illegible]ವರೆಗೆ ಖರ್ಚುಮಾಡಿ ಕಟ್ಟಿಸಿದ ಶಾಲೆಯಲ್ಲಿ ನೂತನ ಪ್ರವೇಶವಾಯಿತು ಇದಕ್ಕೆ ವಿಟ್ಲ ರೇಂಜಿನ ಸುಪರ್ ವೈಸರ್ ಮೊದಲಾದವರು ನೆರೆದಿದ್ದರು.

~~~~~

ಮುಲ್ಕಿ. ಇಲ್ಲಿಯ ಬಿ. ಜಿ ಯಂ ಸೆಕಂಡರಿ ಶಾಲೆಯಲ್ಲಿ ಸುಮಾರು [illegible] ವರುಷಗಳಿಂದ ಹೆಡ್ ಮಾಸ್ತರರಾಗಿದ್ದ ಮಿ. ಪಿ. ಸೋನ್ಸರವರು ಕೆಲಸಕ್ಕೆ ರಾಜಿನಾಮೆ [illegible] ಎಂಬಲ್ಲಿಗೆ ತೆರಳಿದ್ದ [illegible]

ಶಾಲೆಗೆ [illegible] ಊರ ಮಾನ್ಯ ಗೃಹಸ್ಥರೂ ಅವರಿಗೆ ವಂದನೆಯನ್ನು [illegible]ದರು ಇಲ್ಲಿಯ ಸಬ್ ರಿಜಿಸ್ತ್ರಾರರನ್ನು ಅಧ್ಯಕ್ಷರಾಗಿ ನಿಯಮಿಸಿ ಶಾಲಾ ಮೆನೇಜರರಾದ ಮಿ ಬೈಡೆನ್ ಬಾಕ್ ದೊರೆಗಳವರೂ, ಶಾಲಾ ಮಾಸ್ತರರಾದ ಪಿ ಸೋನ್ಸರವರೂ, ರಾ ಮುಕುಂದ ಕಮ್ತಿಯವರೂ ಇವರಿಂದ ಶಾಲೆಗೂ ಕ್ಷೇತ್ರಕ್ಕೂ ಉಂಟಾದ ಪ್ರಯೋಜನವನ್ನೂ, ಇವರ ಸದ್ಗುಣಗಳನ್ನೂ ವಿವರಿಸಿ ತೀರಿಸಿದ ನಂತರ ಹೆಡ್ ಮಾಸ್ತರರವರು ತನಗೆ ಮಕ್ಕಳನ್ನೂ ಪಟ್ಟಣವನ್ನೂ ಬಿಟ್ಟು ಹೋಗುವದೆ [illegible] ದೇವರ ಚಿತ್ತವಿದ್ದಂತೆ ತಾನು ಈ [illegible] ಹೋಗಬೇಕಾದ್ದರಿಂದ [illegible] ತೋಷಪಡುತ್ತೇನೆಂದು [illegible] ಮಕ್ಕಳ [illegible] ಕಾಡಿ [illegible] ಕರಿಗೆ [illegible] ಉಂಟು ಮಾಡಿದರಲ್ಲದೆ ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಹೆಡ್ ಮಾಸ್ತರರವರಿಗೆ [illegible] ಕೊಡುತ್ತಿದ್ದರು

~~~~~

ಉಡುಪಿ [illegible] ಮಳೆಯು ಇಲ್ಲ ದುದರಿಂದ ಕೆಲವರಿಗೆ [illegible] ಅನುಕೂಲವಾಯಿತು [illegible] ಅಕಾಲದ [illegible] ತವು ಕವಿದಿದ್ದು [illegible] ಇದ್ದುದರಿಂದ ಸದ್ಯದಲ್ಲಿ [illegible] ಮಳೆ ಬರುವ [illegible]

ಈ ಮೊದಲು [illegible] ನ್ನು ಈ ತಾ [illegible] ತೆರೆದರು [illegible]ನಾಗಿ ಮಂಗಳೂರಿನ [illegible] ವನು ಬಂದಿರುತ್ತಾನೆ ಸುಮಾರು [illegible] ಹುಡುಗರು [illegible] ರುವರಂತೆ [illegible]ಗಿ ಕೂಡ ಪದಲ್ಲದೆ ಮಧ್ಯಾಹ್ನಕ್ಕೆ ಒಂದು [illegible] ವೂ ಕೊಡುವರು ಇದಕ್ಕಾಗಿ [illegible] ಪ್ರತಿ ತಿಂಗಳಲ್ಲಿ [illegible] ರೂಪಾಯಿ [illegible] ಗಿರುವವಂತೆ [illegible] ಸಾಹೇಬರು ಈ ಶಾಲೆ[illegible] ಲ್ಲಿರುವ ಒಂದು [illegible]ವನ್ನೂ [illegible] ಒಂದು [illegible] ಈ ಶಾಲೆಯು [illegible]ವಂತೆ ಮ ರಾ ಪಿ ರಾಮಚಂದ್ರರಾಯರು ಪಟ್ಟ ಅತಿಪ್ರಯತ್ನವು [illegible] ಸಂತೋಷವೇ

ಈ ಊರಲ್ಲಿ ಈಗ [illegible] ವವಷ್ಟೆ (ಪ್ರಭಾಕರ ಹಿಂದು) ಮೊದಲು [illegible] ಯೇ ಸ್ಥಾಪಿತವಾಗಿ ಈಗ ಮಂಗಳೂರು [illegible] ಛಾಪಖಾನೆಯಲ್ಲಿ ಛಾಪೆಯಾಗುತ್ತಿರುವ ಶ್ರೀ ಕೃಷ್ಣಸೂಕ್ತಿಯು ಬರುವ [illegible] ತಿಂಗಳಿನಿಂದ [illegible] ಯೇ ಛಾಪೆಯಾಗುವದಾಗಿ ವದಂತಿ ಇರುವದು ಇದಕ್ಕಾಗಿ ಮಂಗಳೂರಲ್ಲಿದ್ದ ಸದಾನಂದ ಪ್ರೆಸ್ಸಿನ ಸಾಮಾನುಗಳೆಲ್ಲ [illegible] ಈ ಛಾಪಖಾನೆಯನ್ನು ಸದ್ಯ ಮ ರಾ ವಕೀಲ ಮುಕುಂದ ರಾಯರ ಮನೆಯ ಚಾವಡಿಯಲ್ಲಿ ಸ್ಥಾಪಿಸುವರಾಗಿ ತಿಳಿದು ಬರುತ್ತದೆ

~~~~~

ವಿವಿಧ ವಿಷಯಗಳು

~~~~~

ಕ್ರೈಸ್ತರ ಪಂಗಡದ ಹಲವರಲ್ಲಿ ವಿವಾಹವಾದ ದಂಪತಿಗಳಲ್ಲಿ ಪರಸ್ಪರ ವೈಶಮ್ಯವು ಉಂಟಾದಲ್ಲಿ ಅಂಥಾ ದಂಪತಿಗಳು ಕೋರ್ಟು ಮುಖಾಂತರ 'ಡ್ಯಾವೋರ್ಸ್' ಯಾ ಪರಸ್ಪರ ವಿಯೋಗವನ್ನು ಕಾನೂನು ಪ್ರಕಾರ ಹೊಂದ ಬಹುದೆಂದು ಕ್ರೈಸ್ತ ಧರ್ಮಶಾಸ್ತ್ರವಿರುವುದು. ಇದೇ ಭೂಲೋಕದಲ್ಲಿ ಹೀಗೆ [illegible] ಪತಿಗಳ ವಿಯೋಗ [illegible]ದಲ್ಲಿ [illegible] ಮಿಸೆಸ್ ಜೆ. ಸ್ಕೆಲ್ ಎಂಬವರ ಮಗಳು ಪ್ರಥಮ ಸ್ಥಾನವನ್ನು ಪಡೆದಿರುವಳು. ಇವಳು ಆರು ಸರ್ತಿ ಆರು ಗಂಡಂದಿಯರನ್ನು ವಿವಾಹ ಮಾಡಿಕೊಂಡು ಆರು ಜನರಿಂದಲೂ ವಿಯೋಗ ಹೊಂದಿ ಈಗ ಏಳನೇ ಸಾರಿ ಮದಿವೆ ಮಾಡಿಕೊಳ್ಳಲು ಗಂಡನನ್ನು ಹುಡುಕುತ್ತಿರುವಳಂತೆ ತನ್ನ [illegible]ನೇ ವರುಷದಲ್ಲಿ ಪ್ರಥಮ ಸಾರಿ ವಿವಾಹಿತಳಾದ ಇವಳಿಗೆ ಪ್ರಕೃತ ೪೦ ವರುಷ ಪ್ರಾಯವಾಗಿರುವುದು

~~~~~

ಬ್ರಿಟಿಷರು ಅನ್ಯದೇಶಗಳಲ್ಲಿ ವ್ಯಾಪಾರ ಮೊದಲಾದವುಗಳಿಗೆ ವಿನಿಯೋಗಿಸಿದ ಬಂಡವಾಳವು ಹೀಗೆ ಅನ್ಯದೇಶಗಳಲ್ಲಿ ವಿನಿಯೋಗಿಸಲ್ಪಟ್ಟ ಎಲ್ಲಾ ದೇಶಸ್ಥರ ಬಂಡವಾಳದ ಹೆಚ್ಚು ಕಡಿಮೆ ಅರ್ಧಂಶವಾಗಿರುವುದು ಬ್ರಿಟಿಷರು ತಮ್ಮ ಬಂಡವಾಳಗಳನ್ನು ಅನ್ಯ ದೇಶಗಳಲ್ಲಿ ಈ ರೀತಿ ವಿನಿಯೋಗಿಸಿರುವರು —

	ಡೊಲ್ಲರುಗಳು
ಅಮೇರಿಕದ ಸಂಯುಕ್ತ ಸಂಸ್ಥಾನ ಮತ್ತು ಕೆನಡಾಗಳಲ್ಲಿ	[illegible] ೦೦೦೦೦೦
ಆಫ್ರಿಕದಲ್ಲಿ	[illegible],೦೦೦೦೦೦
ಆಸ್ಟ್ರೇಲಿಯದಲ್ಲಿ	[illegible],೦೦೦೦೦೦
ಹಿಂದುಸ್ಥಾನದಲ್ಲಿ	[illegible] ೦೦೦೦೦೦
ಯೂರೋಪದಲ್ಲಿ (ಬ್ರಿಟಿಷ್ ದೇಶದ ಹೊರತು)	[illegible] ೦೦೦೦೦೦
[illegible]	[illegible] ೦೦೦೦೦೦

~~~~~

[illegible] ಉಂಟಾಗುವ ಕಲ[illegible] ಕಡಿಮೆಯಾಗುತ್ತಿರುವುದೆ [illegible] ಪರಿಶೋಧಿಸುತ್ತಿ[illegible] ಅಮೇರಿಕದಲ್ಲಿ [illegible] ಮಂಡಲದ ಕಳೆಗಳು [illegible] ವರುಷದಲ್ಲಿಯೇ ಗೋಧಿ ಬೆಳೆಯು ಅಧಿಕವಾಗಿರುವುದೆಂದೂ ಈ [illegible]ಳು ಹೆಚ್ಚಿದಾಗ ಅಥವಾ [illegible] ಬೆಳೆಯು ಕಡಿಮೆಯಾಗಿರುವುದೆಂದೂ [illegible] ಜೀನಸು ಪೈದಾಸಿನಲ್ಲಿ ಹೆಚ್ಚು ಕಡಿಮೆ ಉಂಟಾ[illegible] ಕ್ರಯಗಳು ಹೆಚ್ಚಿ ಅಥವಾ ಕಡಿಮೆಯಾಗಿ [illegible] ಕೆಲಸದ ಕೂಲಿದರಗಳಲ್ಲಿ ಮಾರ್ಪಾಟು ಉಂಟಾಗುವುದರಿಂದ ಕೈಗಾರಿಕೆಗಳಲ್ಲಿ ತಯ್ಯಾರಿಸಲ್ಪಟ್ಟ ವಸ್ತುಗಳಿಗೆ ಸಹಾ ಈ ಮೂಲಕ ಕ್ರಯವು ಹೆಚ್ಚುಕಡಿಮೆಯಾಗಿ ಜಗತ್ತಿನ ವ್ಯಾಪಾರದಲ್ಲಿ ಮಾರ್ಪಾಟುಗಳು ಉಂಟಾಗುವವು

~~~~~

ಯೂರೋಪದ ಜನಾಂಗಗಳಲ್ಲಿ ಐಶ್ವರ್ಯದಲ್ಲಿ ಒಂದನೇ ಜನಾಂಗವು ಯಾವುದೆಂಬದನ್ನು ಒಬ್ಬ ಲೇಖಕರು ನಿರ್ಣಯಿಸುವದೆ ಪ್ರಯತ್ನಿಸಿರುವರು ೩೮ ವರುಷಗಳಿಂದೀಚೆಗೆ ಅಂದರೆ ಜರ್ಮನ್ ಸಾಮ್ರಾಜ್ಯವು ಕ್ರಮವಾಗಿ ಸ್ಥಾಪಿಸಲ್ಪಟ್ಟಂದಿನಿಂದ ಜರ್ಮನ್ ಸಾಮ್ರಾಜ್ಯದವರ ಜನಸಂಖ್ಯೆ ಕೈಗಾರಿಕೆ ಮತ್ತು ಸಂಪತ್ತಿನ ಅಭಿವೃದ್ಧಿಯು ಯೂರೋಪಿನಲ್ಲಿ ಅದ್ವಿತೀಯವಾಗಿರುವುದು ಈ ಮೊದಲು ಫ್ರಾನ್ಸ್ ಮತ್ತು ಬ್ರಿಟಾಳಗಳ ಸಂಪತ್ತಿನಕ್ಕಿಂತಲೂ ಜರ್ಮನಿಯ ಸಂಪತ್ತು ಕಡಿಮೆಯಾಗಿತ್ತು ಪ್ರಕೃತ ಅಂಗ್ಲಾಳದ ಸಂಪತ್ತು ೩೦೦,೦೦೦,೦೦೦,೦೦೦ ಮಾರ್ಕ್ಸ್‌ಗಳಾಗಿರುವಾಗ ಜರ್ಮನಿದು ೩೫೦,೦೦೦,೦೦೦,೦೦೦ ಮಾರ್ಕ್ಸ್‌ಗಳಾಗಿರುವುದು ಹೀಗೆ ಜರ್ಮನ್ ದೇಶವು ಸಂಪನ್ನವಾಗಿದ್ದರೂ ಅಂಗ್ಲಾಳದಲ್ಲಿ ಬ್ರಿಟಿಷರು ತೆರಬೇಕಾದ ತೆರಿಗೆಯಷ್ಟು ಜರ್ಮನಿಯಲ್ಲಿ ಜರ್ಮನರು ತೆರಬೇಕೆಂತಿಲ್ಲ. ಅಂಗ್ಲಾಳದಲ್ಲಿ ಜನ ಒಂದಕ್ಕೆ ಹೆಚ್ಚು ಕಡಿಮೆ [illegible] ಮಾರ್ಕ್ಸ್‌ಗಳಂತೆ ತೆರಿಗೆ ಇರುವಾಗ ಜರ್ಮನಿಯಲ್ಲಿ ಇದು [illegible] ಮಾರ್ಕ್ಸ್‌ಗಳಾಗಿರುವುದು.

ಇಂಗ್ಲೀಷು ಭಾಷೆಯು ಇದೀ ಜಗತ್ತಿನಲ್ಲಿ ೧೧೦ ಮಿಲಿಯ ಜನರಿಂದಲೂ ರುಶ್ಶಿಯವರ ಭಾಷೆಯು ೮೫ ಮಿಲಿಯ ಭೂಲೋಕದ ನಿವಾಸಿಗಳಿಂದಲೂ, ಜರ್ಮನ ಭಾಷೆಯು ೮೦ ಮಿಲಿಯ ಜನರಿಂದಲೂ, ಫ್ರೆಂಚು ಭಾಷೆಯು ೫೦ ಮಿಲಿಯ ಜನರಿಂದಲೂ ಆಡಲ್ಪಡುವುದು

—o—

ಥಿಯೊಸಫಿಕಲ್ ಸೊಸ್ಸಾಟಿ ಯಾ ಬ್ರಹ್ಮಜ್ಞಾನ ಸಂಘದವರಾದ ಮೆ। ಲೆಡ್ಡ್‌ಬೀಟರ್ ಎಂಬವರು ನಾಯಿಯ ಪ್ರೀತಿಯಿಂದ ಯಜಮಾನನಿಗೆ ಯಾವ ಪ್ರಯೋಜನವು ದೊರಕುವುದೆಂಬದನ್ನು ವಾದಿಸಿರುವರು ಮನಸ್ಸಿನ ಎಲ್ಲಾ ಭಾವನೆಗಳಲ್ಲಿಯೂ, ಕಲ್ಪನೆಗಳಲ್ಲಿಯೂ ಒಂದು ವಿದವಾದ ಶಕ್ತಿಯು ಇರುವುದರಿಂದ ಪ್ರೀತಿಯಿಂದ ನಾಯಿ ಯಾ ಇತರ ಮೃಗವನ್ನು ಸಾಕಿದವನು ನಾಯಿ ಯಾ ಇತರ ಮೃಗದ ಪ್ರೀತಿಯಿಂದ ಲಾಭಹೊಂದುವನು ಪ್ರೀತಿಗೆ ಹೆಚ್ಚಿನ ಆಸ್ಪದವು ಮನುಷ್ಯರ ಮನೋಭಾವನೆಯಲ್ಲಿರುವದಾದರೂ ಮೃಗಗಳ ಭಾವನೆಯು ಏಕಕ್ಕೆ … ನಿಶ್ಚಲ ಸ್ವಭಾವದ್ದಾಗಿರುವುದು ಯಾಕೆಂದರೆ ಮನುಷ್ಯನಿಗೆ ಸಾವಿರಾರು ವಿಷಯಗಳ … ಆಲೋಚಿಸುವುದಕ್ಕೆ ಇದ್ದು ಪ್ರೀತಿಯ ಭಾವನೆಯು ಏಕವಾಗಿ ನಿಶ್ಚಲವಾಗುವದಕ್ಕೆ ಉಪಾಯವಿಲ್ಲ ಆದರೆ ಜಂತುಗಳಿಗೆ ಹೀಗೆ ಯೋಚನೆ ಮಾಡುವಷ್ಟು ಜ್ಞಾನವು ಇಲ್ಲದ್ದರಿಂದಲೂ ಪ್ರೀತಿಯನ್ನು ಒಂದೇ ಮನಸ್ಸಿನಿಂದ ಅವು ಮಾಡುವುದರಿಂದಲೂ ಮೃಗಗಳ ಈ ಮನೋಭಾವವು … ನಿಶ್ಚಲವಾಗಿದ್ದು ಆ ಪ್ರೀತಿಯು ಅವುಗಳ ಪ್ರೀತಿಗೆ ಪಾತ್ರನಾಗಿದ್ದವನಿಗೆ … ಶ್ರೇಯಸ್ಕರವಾಗುವುದು

—o—

ಡಾಕ್ಟ್ಟರ್ ಜೇಮ್ಸ್ … ಹಿಸಲೋಪ … ಅಮೇರಿಕದ ಒಂದು ಮಾಸಪತ್ರಿಕೆ … ಈ ಕೆಳಗಿನ ಸಮಾಚಾರವನ್ನು ಪ್ರಕಟಿಸಿರುವರು ಥಾಂಪಸನ್ ಎಂಬ ಅಕ್ಕಸಾಲಿಗನು … ಚಿತ್ರಗಳನ್ನು ಬಿಡಿಸಿ ರಂಗಾಯಿಸುವ ಪಾಂಡಿತ್ಯವು ಇರಲಿಲ್ಲ ೧೯೦೫ನೇ ಇಸವಿಯ … ತ್ಯದಲ್ಲಿ ಚಿತ್ರಗಳ ಬಿಡಿಸಿ ರಂಗಾಯಿಸುವ ಪ್ರೇರಣೆ … ಹುಟ್ಟಿತು ಆ … ಪ್ರೇರಣೆಯಿಂದ ಆತನು "ಗಿಫರ್ಡ್ ನು … ಎಂಬದಾಗಿ ಹೇಳಿಕೊಳ್ಳುತ್ತಿದ್ದನು ಗಿಫರ್ಡ್ … ಒಬ್ಬ ಪ್ರಖ್ಯಾತಿ ಚಿತ್ರಗಾರನು ಈ … ಸುವುದನ್ನು ಥೋಮಸ್ … ಉತ್ತರಿಸುತ್ತಲಿದ್ದನು ಆದರೆ … ರಿಲ್ಲ ಒಂದು ಸರ್ತಿ ಮಾತ್ರ ಥೋಮಸ್ಸನು … ಸಿದ ಆಭರಣಗಳನ್ನು ಕ್ರಯಕ್ಕೆ ಬೇಕೋ ಎಂತ ಗಿಫರ್ಡ್‌ನನ್ನು ವಿಚಾರಿಸಿ ಮಾತ್ರ ಇದ್ದನು ಥೋಮಸನಿಗೆ ಈ ಚಿತ್ರ ಬಿಡಿಸುವ ಪ್ರೇರಣೆಯು ಉಂಟಾಗುವ ಆರು ತಿಂಗಳು ಮೊದಲು ಗಿಫರ್ಡ್‌ನು ಮೃತಪಟ್ಟನು ಥೋಮಸ್ಸನಿಗೆ ಗಿಫರ್ಡ್‌ನ ಮರಣದ ವಿಷಯ ಯಾವ ಸಮಾಚಾರವೂ ಇರಲಿಲ್ಲ ಒಂದು ದಿನ ಥೋಮಸನನು ಗಿಫರ್ಡ್‌ನು ಬಿಡಿಸುವ ನಕ್ಷೆಗಳನ್ನು ನೋಡಲಿಕ್ಕೆ ಹೋಗಿರಲು … ಅಶರೀರವಾಣಿಯು ಇವನಿಗೆ ಕೇಳಿಸಿತು —'ನಾನು ಮಾಡುವುದು ನಿನ್ನ ಕಣ್ಣ ಮುಂದಿರುವುದು ಈ ಕೆಲಸವನ್ನು ನೀನು ಕೈಕೊಂಡು ನಾನು ಅರ್ಧದಲ್ಲಿ ಬಿಟ್ಟಿರುವ ನಕ್ಷೆಗಳನ್ನು ಪೂರ್ಣ ತೀರಿಸಿಬಿಡು — ಥೋಮಸನನು ಭೂತಪಿಶಾಚಿಗಳನ್ನು ನಂಬುವವನಲ್ಲವಾದರೂ ಈ ಅಶರೀರವಾಣಿಯಲ್ಲಿ ಆತನಿಗೆ ನಂಬಿಕೆಯುಂಟಾಗಿ ತನಗೆ ಚಿತ್ರ ಬಿಡಿಸುವ ಯಾವ ತರದ ಮಾಹಿತಿಯು ಇಲ್ಲದಿದ್ದರೂ, ಗಿಫರ್ಡ್‌ನು ಅರ್ಧದಲ್ಲಿರುವ ಚಿತ್ರಪಠಗಳೆಲ್ಲವನ್ನೂ ಬಿಡಿಸಿ ಪೂರ್ಣ ಮಾಡಿದನು. ಥೋಮಸನನು ತನಗೇನೋ ಭ್ರಮೆ ಹಿಡಿದಿರುವುದೋ ಎಂದು ಭಾವಿಸಿಕೊಂಡು ಡಾಕ್ಟರರ ಕೂಡೆ ಚಿಕಿತ್ಸೆ ಹೊಂದಲಿಕ್ಕೆ ಹೋದಲ್ಲಿ ಡಾಕ್ಟರರು ಮೇಲೆ ಹೇಳಿರುವ ವೃತ್ತಾಂತವನ್ನುದರ ಸತ್ಯತ್ವವನ್ನು ತಿಳಕೊಂಡು ಅದನ್ನು ಪ್ರಕಟಿಸಿರುವರು.

~~~~~

ಈಗಿನ ಮಕ್ಕಳ ಹಲ್ಲುಗಳಿಗೆ ಹುಳ ಹಿಡಿಯುವುದು ಬಹಳ ವಿಪರೀತವಾಗಿರುವುದು ನಮ್ಮ ಪೂರ್ವಜರು ಹಲ್ಲು ತೊಳಿಯುವ ಬ್ರುಷ್ ಮುಂತಾದವುಗಳನ್ನೂ ನಾನಾ ತರದ ದಂತಮಂಜನಗಳನ್ನೂ ದೃಷ್ಟಿಸಿರಲಿಲ್ಲವಾದರೂ ಅವರ ಹಲ್ಲುಗಳಿಗೆ ಹೀಗೆ ಈ ಹುಳ ಭಾಧೆಯು ತಗಲುವುದು ಬಹಳ ಅಪರೂಪವಾಗಿತ್ತು ಈಗಿನವರು ಉಪಯೋಗಿಸುತ್ತಿರುವ ಆಹಾರವೂ, ತಿಂತಿಯನ್ನು ಸಮನಾಗಿ ಅಗಿದು ತಿನ್ನದಿರುವುದೂ ಇದರ ಕಾರಣವಾಗಿರುವುದೆಂದು ಸಿದ್ಧಮಾಡಿರುವರು

~~~~~

ಬಾಬ ಹೋಸ್ … ಕಪ್ಪಿನ ತೋಟಗಳು ಆಸೇ … ಈ ಕಾಫಿ ತೋಟಗಳು … ಉತ್ತಿರುವುದು ಈ … ತೋಟದ … ತನ್ನ ಕೋವಿ ಹಿಡಿದು … ಕಪ್ಪಿನ ಹಿತ್ತಲು … ಮರದಲ್ಲಿ … ಅತ್ತಿತ್ತ ಓಡಿದರೂ … ಕೊಂಬೆಯಲ್ಲಿ ನಿಂತು … ತೋಟವಾಳಿಕನು ಇದನ್ನು ನೋಡಿ … ತನ್ನ ಕೋವಿಯನ್ನು … ಗುರಿಮಾಡಿ … ಹೋ… ದೈನ್ಯಭಾವದಿಂದ … ತನ್ನ ಪಕ್ಕದಲ್ಲಿ … ತೋರಿ … ದೈನ್ಯಭಾವದಿಂದ ಆತ … ತೋಟವಾಳಿಕನ ಮುಂದಿನ … ಕೋವಿಯಿಂದ ಹೊಡಿಯದೆ ಹಿಂತಿರುಗಿದನು

~~~~~

ಕವಲಾ ಹ್ಯಾಸ್ಕೂಲ್ ಪಾಸ್ಟ್ ಸ್ಟೂಡೆಂಟ್ಸ್ ಸುಬ್ಬರಾವ್ ಮೆಮೋರಿಯಲ್ ಫಂಡ್

… ಒಟ್ಟು … [illegible]

ಒಟ್ಟು ರೂ … [illegible]

~~~~~

ಕವಲಾ ಗರ್ಲ್ಸ್‌ಸ್ಕೂಲ್ ಸುಬ್ಬರಾವ್ ಮೆಮೋರಿಯಲ್ ಫಂಡ್

… ೧೬ನೇ … ಚಂದೆಯು … [illegible]

ಶ್ರೀಮತಿ ಕಾ ಕಮಲಾ ಕಮ್ತಿಣಿಯವರು ವಸೂಲಿ ರೂ ೮ ಶ್ರೀ ಕು ಯಮುನಾ ಪೈಣಿಯವರು ರೂ … ಶ್ರೀ ಉ ಲಕ್ಷ್ಮಿಣಿ ಮಾಲ್ಲಿಣಿಯವರು ರೂ … ಶ್ರೀ ಮ ಸೀತಾ ಪೈಣಿಯವರು ರೂ ೧ ಶ್ರೀ ಜಾ ಲಕ್ಷ್ಮಿ ಕಮ್ತಿಣಿಯವರು ರೂ ೧ ಶ್ರೀ ಕು ರುಕ್ಮಿಣಿಯಮ್ಮನವರು ರೂ ೫ ಶ್ರೀ ಕಾ. ಕೃಷ್ಣ ಕಮ್ತಿಣಿಯವರು ರೂ ೧ ಶ್ರೀ ಆ ಸರಸ್ವತಿ ಬಾಯಿಯವರು ರೂ ೨ ಶ್ರೀ ಸು ರಾಧಾಬಾಯಿಯವರು (ಪ್ರಥಮ ಕಂತು) ರೂ ೫. ಶ್ರೀ ಬೊ ರುಕ್ಮಾಬಾಯಿಯವರು ರೂ. ೫. ಶ್ರೀ. ನ ಲಲಿತಾಬಾಯಿಯವರು ರೂ ೨೫. ಶ್ರೀ/ಕ. ಭವಾನಿಬಾಯಿಯವರು ರೂ. ೧೦. ಶ್ರೀ- ಕಾ. ಸುಂದರಿಬಾಯಿಯವರು ರೂ. ೩, ಶ್ರೀ. ಕೆ. ಅಂಬಾಶೆಣಾಯಿಣಿಯವರು ರೂ. ೩. ಶ್ರೀ. ಸು. ಸೀತ್ರಾವತಿ … ಯವರು ರೂ. ೧. ಶ್ರೀ. ಮ. ಸೀತ್ರಾವತಿ ಪೈಣಿಯವರು ರೂ. ೧೦. ಶ್ರೀ. ಮ. ತುಳಸಿ ಅಮ್ಮನವರು ೪. ೮. ಶ್ರೀ. ಬ. ಸೀತಾಭಂಡಾರಿಣಿಯವರು ೮ ೪. ಶ್ರೀ. ಕೆ. ವಿಮಲಾಪರ್ಭಿಣಿಯವರು ರೂ. ೫. ಶ್ರೀ. ಸಿ. ಕಮಲಾ ಕಮ್ತಿಣಿಯವರು ರೂ ೨ ಶ್ರೀ. ಮ. ಸಂಜೀವಿ ಶೆಣಾಯಿಣಿಯವರು ರೂ ೨ ಶ್ರೀ. ಗು. ಕೃಷ್ಣಾಬಾಯಿಯವರು ೮ ೮ ಶ್ರೀ ವ ದೇವಿ ಪೈಣಿಯವರು ರೂ. ೧ ಶ್ರೀ ಉ ರಾಧಾಬಾಯಿಯವರು ರೂ ೨ ಶ್ರೀ ಪ ಸಾವಿತ್ರಿಪರ್ಭಿಣಿಯವರು ರೂ ೧ ಶ್ರೀ ಬೊ. ಲಕ್ಷ್ಮಿ ಪರ್ಭಿಣಿಯವರು ರೂ ೫ ಶ್ರೀ ಪ ಸರಸ್ವತಿ ದಾಡಾರ್ಣಿಯವರು ರೂ ೨ ಶ್ರೀ ಮ ಸರಸ್ವತಿ ಕಮ್ತಿಣಿಯವರು ರೂ ೧ ಶ್ರೀ ಮಿ ಸಾಂತಪೈಣಿಯವರು ರೂ … ಶ್ರೀ ಮು ಪದ್ಮಾವತಿ ಕಮ್ತಿಣಿಯವರು ರೂ. ೧ ಶ್ರೀ ಗು ಕಮಲಾವತಿ ಪರ್ಭಿಣಿಯವರು ರೂ ೧- ಶ್ರೀ … ದೇವಮ್ಮ ಶೆಣಾಯಿಣಿಯವರು ರೂ ೫

ಮುಂದೆಸಾಗುವುದು

~~~~~

ಜಿನಸುಗಳ ಧಾರಣೆ, ಮಂಗಳೂರು

ಒಳ್ಳೆ ಮುಸ್ಕತಿ ಅಕ್ಕಿ,, , ,	5—9—0
ಮುಡ್ಡು ಮುಸ್ಕತಿ,, ,, ,	5—0—0
ಬೈಲು ಸುಗ್ಗಿ,, , , ,,	5—0—0.
ಮುಡು ಸುಮ್ಮ ರಾಶಿ , , , ,	4—11—0
ಮುಸ್ಕತಿ ಬೆಳ್ತಿಗೆ , , , , , , ,	5—3—0
ರಂಗೂನ್ ಬೆಳ್ತಿಗೆ ಗೋಣಿ ,,	7—4—0
ಕುರುಳಿ ಗೋಣಿ ೧ ಮುಡಿ …, ,	8—0—0
ಉಪ್ಪು ಗೋಣಿ ೧ರ …,.	3 7—0
ಕೊಪ್ರಿ ಎಣ್ಣೆ ಮಣ, , , , ,	5—1—0
ಕಾಫಿ ಖಂಡಿ ೧ರ ,	205—0—0
ಕಾಳು ಮೆಣಸು ಖಂಡಿ, , , ,	125—0—0
ಬಿಳಿ ಗೋಟು ಅಡಿಕೆ , , , , ,	75—0—0
ಊರ ಬೆಲ್ಲ ಮಣ, , ,,	2—10—0

~~~~~

ಯುವತೀರೆಲ್ಲರಿಗೋಸ್ಕರ ತಯಾರಿಸಿದ

ಸೂಲಗಿತ್ತಿಯರಾದ ಕಮಲಾಬಾಯಿಯವರ

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ ಗರ್ಭಕೋಶದ ರೋಗರುಜಿಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ ದೇಹದಲ್ಲಿ ಯಾವದೊಂದು ಅಕ್ರಮವು ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು ಉಪಯೋಗಿಸಿದವರು ಅವುಗಳ ಜಗ್ಯೆ ಶಿಪಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು ಔಷಧಿ ಕ್ರಯಕ್ಕೆ ಕೊ-ಪ್ರ ಪಿ. ಅಂಚೆ ಹಾಸಲು ೪ ಆಣೆ.

ಸೂಲಗಿತ್ತಿಯರಾದ ಕಮಲಾಬಾಯಿ, …

… ಮುಂಬಯಿ.

K. R. PAREK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಅತ್ತರು. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ. ಎಲ್ಲಾ ಅತ್ತರಕ್ಕಿಂತಲೂ ಇದು ಉತ್ತಮವಾದದ್ದು.

ಬಾಟ್ಲ ಒಂದರ 8 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ. ಇದರಿಂದ ಮೆದುಳು ತಂಪಾಗುವದು. ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ. ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲ ಒಂದರ 6 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ.

ಬಾಟ್ಲ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ

ಎಲ್ಲಾ ಎಣ್ಣೆಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ರೆ ಬೀಳುವದು.

ಬಾಟ್ಲ ಒಂದರ 6 ಆಣೆ

ರೋಯಲ್ ಟ್ರೇಡಿಂಗ್ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ಚಳುವು, ಗಾಯ, ಉರಿ, ಶೀತ, ಕೆಮ್ಮು, ಎದೆಶೀತ, ಹೊಟ್ಟೆಯ ನೋವು, ಬೆನ್ನುನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ. ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ. ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು. ಬಾಟ್ಲ ಒಂದಕ್ಕೆ 8 ಆಣೆ. 6 ಬಾಟ್ಲಗಳಿಗೆ 2 ರೂ 10 ಆಣೆ. 12 ಬಾಟ್ಲಿಗಳಿಗೆ 5 ರೂ. ಒಹೇ ಕಮ್ಮಿ ಕ್ರಯದಿಂದ ಮಾರುತ್ತೇವೆ.

ವಿಳಾಸ — ಕೆ. ರಾ. ಪಾರಕ್ ಮತ್ತು ಕಂಪೆನಿ,
ಟಂಕಶಾಲೆ ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೊಓಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್,
ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು —14 ಹೇರ್ ಸ್ಟ್ರೀಟ್ ಕಲ್ಕತ್ತಾ
ಬ್ರೆಂಚ್ ಆಫೀಸುಗಳು —42 ಎಲ್ಫಿನ್‌ಸ್ಟನ್ ಸರ್ಕಲ್ ಮುಂಬಯಿ
8 ಬ್ರೊಡವೆ, ಮದ್ರಾಸು
1906ರಲ್ಲಿ ಸ್ಥಾಪಿಸಲ್ಪಟ್ಟಿತು
ಸಂಘದ ನಿಯಮಿತ ಬಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ ರೂಪಾಯಿಯಂತೆ ಸಲ್ಲಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು. ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು.

ಪಾಲುಗಳ ಮೇಲಣ ಮುನಾಫಯನ್ನು ನಗದಾಗಿ ಕೊಡುವರು. ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಒಡನರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ಜಮಾ ಮಾಡಿ ತೆರಲೂ ಬಹುದು.

1909 ಎಪ್ರಿಲ್ ತಿಂಗಳ ವರೆಗೆ ರೂ 18 00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು.

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುಮ್ಹಾಲೀಕರಿಗೆ ಸೇಕಡಾ 9ರಂತ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು. ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು. ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ ಖಜಾನ್ದಾರಿಗಳಲ್ಲಿ ಹಾಕಿದ ಬಂಡವಾಳದ ಮೌಲ್ಯವು ಸೇಕಡಾ 2ರಂತೆ ಹೆಚ್ಚಿರುವುದು. ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಬಿ. ಬಾಬುರಾವ್ ಎಂಡ್ ಸನ್ಸ್,
ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ

ಅನುಮಾನಪತ್ರ ಬಾಟ್ಲಯೊಂದಿಗಿರುವುದು { ## ಸಿದ್ಧಲಕ್ಷ್ಮಿ ವಿಲಾಸ. } ಕ್ರಯ ಬಾಟ್ಲ ೧ಕ್ಕೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತೂತುಗಳೂ, ಮೇಹ ಸಂಬಂಧವಾದ ಎಲ್ಲಾ ಮೂತ್ರದೋಷಗಳೂ, ವೃಣಾದಿ ಹಾವುಗೆಳ್ಳೂ ಬಚ್ಚೆ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತ ಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ ... ಮತ್ತು ಕಂಪೆನಿ, ಮಂಗಳೂರು. ಕುಂದಾಪುರ ... ಮಂಗಳೂರು. ಇವರಲ್ಲಿ ದೊರಕುವುದು.

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್'. ಈ ವಿಷಯ ಹೆಚ್ಚು ಬರಿಯುವುದೇ ಅಗತ್ಯವಿಲ್ಲ. ಒಂದು ಸಾರಿ ಪರೀಕ್ಷಿಸಿದ್ದೊಡನೆ ತಿಳಿದುಬರುವುದು. ಬಾಟ್ಲ ಒಂದರ ಕ್ರಯ ರೂಪಾಯಿ ೧—೦—೦. ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಇದು ೧೪ ಆಣೆ ಕ್ರಯಕ್ಕೆ ದೊರಕುವದು.

ಮಂಗಳೂರು ... ಮಂಗಳೂರು ... ಎಸೋಸಿಯೇಶನ್ ಮಂಗಳೂರು ...

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ

ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಪಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ,

೩ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ

೨. ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟುವ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೫ ಸೂರಣಾವ ಲೇಹ ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೬ ಪ್ಲೀಹೋದರಾರಿ ಚೂರ್ಣ ಎಂಥ ತೀವ್ರವಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ

೭ ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತಿ ಪುಡಿ ಸರಸ್ವತೀ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿರುವದೆ ೧೦ ತೊಲೆಗೆ ೧೦ ಆಣೆ

೮ ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ

೯. ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೧೦ ವಾಸಾವ ಲೇಹ ಕೆಮ್ಮು, ಗುಲ್ಮುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ರೂ.

೧೨ ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ

೧೪ ಸವ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ — ಬಿ. ಎಮ್. ನಾಥು ಮತ್ತು ಕಂಪೆನಿ,

ಬಾಂದ್ರಾ (ಮುಂಬಯಿ ಹತ್ತಿರ)

Bandra (near Bombay)

ROYAL TRADING Co. GIRGAUM BOMBAY.

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು, ಗಂಟ್ಲು ನೋವು,

ಎದೆಶೀತ ಉಳುಕು, ಬೆನ್ನಲು ಘಾಯ, ತೇಳುಕಡಿತ ಉರಿ, ಈ ಎಲ್ಲಾ ತರದ ನೋವುಗಳ ಮೇಲೆ ಇದು ಅತೀ ಉತ್ತಮವಾದದ್ದು ಇದು ಹಾನಿಕಾರಿಯಲ್ಲ

ಇದರಿಂದ ಗುಣ ಕಂಡುಬರ ದಿದ್ದಲ್ಲಿ ಹಣ ವಾಪಸ. ಕ್ರಯ ಕಮ್ಮಿ, ಗುಣ ಹೆಚ್ಚು ಒಂದುಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು

ಬಾಟ್ಲಿ ಒಂದರ ಕಿಮ್ಮತು ೬ ಆಣೆ.

ಇನಾಮುಗಳು — ಒಂದೇ ಸಾರಿ ೬ ಬಾಟ್ಲಿಗಳನ್ನು ತರಿಸಿಕೊಂಡರೆ ಒಂದು ಎಲ್ಯುಮಿನಿಯಮ್ ಗ್ಲಾಸು ೧೨ ಬಾಟ್ಲಿಗಳನ್ನು ತರಿಸಿಕೊಂಡರೆ ರೇಶ್ಮೆಯ ಲವಸ್ತ್ರ ಸಾವಿರಾರು ಜನರಿಗೆ ಗುಣಕೊಟ್ಟಿರುವ ಈ ನಮ್ಮ ರೊಯಲ್ ಇಂಡಿಯನ್ ಬಾಂಮನ್ನು ಪ್ರತಿ ಒಬ್ಬರೂ ತರಿಸಿ ಉಪಯೋಗಿಸುವಿರಾಗಿ ನಂಬುತ್ತೇವೆ ವ್ಯಾಪಾರಸ್ಥರಿಗೆ ಚಲೋ ಕಮಿಶನ್ ದೊರಕುವದು

ನಮ್ಮಲ್ಲಿಯ ಈ ಔಷಧಿಯು ಅನೇಕ ಕಡೆಗಳಲ್ಲಿ ಪ್ರಸಿದ್ಧಿಯಾಗಿದ್ದು ತಮ್ಮತ್ತ ಕಡೆಯಲ್ಲಿಯು ಸಹ ಪ್ರಸಿದ್ಧಿಯಾಗುವದೆಂಬದಾಗಿ ದೃಢಚಿತ್ತದಿಂದ ನಂಬುತ್ತೇವೆ

ವಿಳಾಸ — 'ರೊಯಲ ಟ್ರೇಡಿಂಗ' ಕಂಪನಿ,

ಗಿರಗಾಂ ಮುಂಬಯಿ

Sole Agent in Mangalore Town:—

Mangalore Trading Association,

Mangalore.

ಸುರಂಗಿ ಅತ್ತರು.

ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು ಇದರ ಪರಿಮಳವು ಹೆಚ್ಚು ದಿನಗಳ ವರೆಗೆ ಹೋಗುವದಿಲ್ಲ ಬಾಟ್ಲಿ ಒಂದರ ಕ್ರಯ No. I. ೧—೬—೦ No 2 ೧—೦—೦ ದಿಲ್‌ಖುಷ್ ೧— ೦—೦ ದಣಾಣಾ ೦—೧೪—೦ ಜುಯಿ ೦ — ೧೪—೦ ಚಂಬೇಲಿ ೦—೧೪—೦

ಕೇಶವರ್ಧಿನಿ ಎಣ್ಣೆ ಹೆಂಗಸರ ಪ್ರೀತಿಕರವಾದ ಎಣ್ಣೆ ಇದರಿಂದ ಕೂದಲು ಉದ್ದ ಕಪ್ಪಾಗುವವು ಮತ್ತು ಬೆಳೆಯುವವು ಬಾಟ್ಲಿ ಒಂದರ ಕಿಮ್ಮತು ೦—೮—೦

ಗಜಕರ್ಣದ ಮುಲಾಮು ೦—೪—೦

ರೊಯಲ್ ಟ್ರೇಡಿಂಗ್ ಕಂಪೆನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಸತತವಾತ, ಚೇಳುಕಡಿತ, ತಲೆನೋವು, ಶೀತ, ಘಾಯ, ಗಂಟ್ಲು ನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ ಇನ್ನೂ ಸಾವಿರಾರು ಜನರು ಗುಣಹೊಂದುವರು ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ ಇದು ಎಳೇ ಮಗುವಿನದೇ ಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು

ಬಾಟ್ಲಿ ಒಂದರ ಕಿಮ್ಮತು ರೂ ೦—೮—೦, ಆರು ಬಾಟ್ಲಿಗಳಿಗೆ ರೂ. ೩—೦.

ವಿಳಾಸ. — ರಾಮರಾವ್ ನಾನಾಭಾಯಿ ಕಾಳೆ,

ಗಿರಗಾಂ ಮುಂಬಯಿ

"ಲಾ" ಪ್ರಕಟನೆಗಳು.

—o—

1. **ವ್ಯವಹಾರ ನಿರ್ಣಯ**—ಫಾರಮುಗಳು ೫೪೬ ಹಿಂದೂ ಮಹಮದೀಯ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಆಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2. **ಕನ್ನಡ ಲಾ ರಿಪೋರ್ಟ್**—ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಪ್ರಕಟವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ, ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ **10 ಆಣೆ.** ಇವುಗಳನ್ನು ಅಪೇಕ್ಷಿಸುವವರು ಎಂ ವೆಂಕಟಕೃಷ್ಣಯ್ಯ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರ ಸಿಟಿ ಈ ವಿಳಾಸಕ್ಕೆ ಬರೆಯುವದು

—o—

THE HINDU SOAP MANUFACTURING CO.,

ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

—o—

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಟಿ. ಬಾಬುರಾಯರ

೧೮೯೮ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು. ಲೋಕಪ್ರಸಿದ್ಧವಾದ ಆಯುರ್ವೇದಿಕ ಔಷಧಗಳು ಅನೇಕ ಜನರಿಂದ ಗ ಹಸ್ತರಿಂದ ಪಡೆದಿರುವ ರಸ ಪತ್ರಗಳ ಇವೆ

ಪರಿಮಳಾಂಜನ ನಂಬ್ರ 2—[illegible] ಶಿರೋಭಾರ, ಒಕ್ಕೆನ್ನೆ, [illegible] ಗಂಟ್ಲುನೋವು, ಜಜಿಮ್, [illegible] ಕಾಲುಗಳಲ್ಲಿ ಆಗುವ ಎಲ್ಲಾ ತರದ [illegible] ಡಬ್ಬಿ ೧ರ ಕ್ರಯ 0-10-0

(Rose) ದಂತಮಂಜನ—ಈ [illegible] ತಿಕ್ಕುತ್ತಾ ಬಂದರೆ ಹಲ್ಲಿನಿಂದ ರಕ್ತ ಸುರಿಯುವದು ನಿಲ್ಲುವದಲ್ಲದೆ ಬಾಯಿ ದುರ್ಗಂಧವು ನಾಶವಾಗಿ [illegible] ೧ರ ಕ್ರಯ ರೂ. 0—2—0

ತಾಂಬೂಲ ಸುವಾಸಿನಿ—ಸೀಸೆ ೧ರ ಕ್ರಯ ರೂ 0 1 0	ಪರಿಮಳಾಂಜನ ನಂ ೧—ಡಬ್ಬಿ ೧ರ ಕ್ರಯ ರೂ 0 5 0
ದಂತಮಂಜನ—ಡಬ್ಬಿ ೧ರ ಕ್ರಯ ರೂ 0 2 0	ಸುಗಂಧ ನಶ್ಯದ ಪುಡಿ—೧ರ ಕ್ರಯ ರೂ 0 6 0
ಗಜಕರ್ಣದ ಮುಲಾಮು—ಡಬ್ಬಿ ೧ರ ಕ್ರಯ ರೂ 0 6 0	ದಶಾಂಗ ದೂಪ—ಸೇರು ೧ಕ್ಕೆ ಕ್ರಯ ರೂ 1 4-0
ಶ್ವಾಸಕುಠಾರ:—ಡಬ್ಬಿ ೧ರ ಕ್ರಯ ರೂ 0-8-0	ದ್ರಾಕ್ಷಾರಿಷ್ಠ—ಬಾಟ್ಲಿ ೧ರ ಕ್ರಯ ರೂ 2 8 0

ನಯನಾಮೃತ ಸುರ್ಮ—ಈ ಸುರ್ಮವನ್ನು ಪ್ರತಿನಿತ್ಯವೂ ಕಣ್ಣಿಗೆ ಹಚ್ಚುತ್ತಾ ಬಂದಲ್ಲಿ ಕಣ್ಣಿನಿಂದ ಕೀವು ಅಥವಾ ನೀರು ಇಳಿಯುವದು ಕಣ್ಣು, ಕೆಂಗಣ್ಣು, ಕಣ್ಣಿನೊಳಗೆ ಬರುವ ಘರದೆ ಮೊದಲಾದ ಸರ್ವ ವಿಧವಾದ ನೇತ್ರ ರೋಗಗಳು ಸಂಶಯವಿಲ್ಲದೆ ಗುಣವಾಗುವವು.

ಇನ್ನೂ ಅನೇಕ ವಿಧವಾದ ಔಷಧಿಗಳು ಇರುವವು ಬೇಕಾದವರು ಕೆಟಲಾಗಿಗೆ ಬರಿಯಿರಿ.

ಮೇಲೆ ಕಾಣಿಸಿದ ದಂತಮಂಜನಗಳನ್ನು ರಾತ್ತು ಲೆಕ್ಕದಲ್ಲಿ ತರಿಸಿಕೊಂಡರೆ ರಾತ್ತು ೧ರ **ರೂ. 2-0-0**ರಂತೆ ಕ್ರಯ ಬೀಳುವದು.

ಸೂಚನೆ. ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ ಬೀಳುವದು.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಗಾಡಿಗಾರ ರಸ್ತೆ, ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮೮, ೧ ರೂ. ೪೮, ಅಲ್ಲದೆ ವಿಧವಿಧವಾದ **ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಚಾಯಾರಿಕೆಯಾದ** ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ **ತಾಂಬೂಲ ವಿಹಾರಿಣಿ ಸೀಸೆ** ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಫಾಳ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ.
ಮೈಸೂರು.

ಅಶ್ವಿನಿ ಗವರ್ನಮೆಂಟ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ—ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಸಂಪಾದನೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು

೧೦೦ ರೂಪಾಯಿ ಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದಂಥಾ ಚಂದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ವಿಮಾ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ

ಕಂಪೆನಿಯ ಹಣವೆಲ್ಲವೂ ಸರಕಾರದ ಪ್ರಾಮಿಸರಿ ಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ—ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಬಿಪ್ಪಿ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ ಕನ್ನಡ

ಪ್ರೋತ್ಸಾಹಮಾಡುತ್ತೀರೇ.

ಕ್ರಯ ಸುಲಭ! ಉತ್ತಮ ಸಾಮಾನುಗಳು!

[illegible] ಜೆಲ್ ಪಾರಕ್ಕೆ ರೂ 0—2—0 ೧೦ ಟೋಪಿ [illegible] ೧ಕ್ಕೆ ರೂ 1—7—0 ಕಸೂತಿ ಕೆಲಸದ ಜಿಲಸ್ ಬಿಂದ್ಲೆ ೧ಕ್ಕೆ ರೂ 3—4—0 ಕೊಕ್ಕೆ ಸಾಲ ೧ಕ್ಕೆ ರೂ 0—1—6 ಕಮ್ಮರ್ [illegible] ಕೋಪಿ ೧ಕ್ಕೆ ರೂ 0—4—0 ಹಾಸಿಗೆ [illegible] ೧ಕ್ಕೆ ರೂ 5—0—0 ಮತ್ತು ರೂ 15—0—0 ಬನಿಯನ್ [illegible] 0—5—0 0—10—0, 0—12—0 ಪರಿಮಳ [illegible] ೧ಕ್ಕೆ ರೂ. 1—2—0 ಪೋಸ್ಟು ಕಾರ್ಡು ೧೦೦ಕ್ಕೆ ರೂ 0—3—0. [illegible] ಚಿತ್ರಗಳ ೧೦೦ ಮಾತ್ರೆ ಇರ ಪಾಕೆಟ್ ೧ಕ್ಕೆ ರೂ 0-3—0. [illegible] ಸೆಂಟೋಲ್ ಡಬ್ಬಿ ೧ಕ್ಕೆ ರೂ 0—3—0 ಗಜ [illegible] ಡಬ್ಬಿ ೧ಕ್ಕೆ ರೂ 0—5—0 ಕಸ್ತೂರಿ ಮಾತ್ರೆ ೨೦೦ರ ಸೀಸೆ ೧ಕ್ಕೆ ರೂ 0—4—0 ಸ್ವದೇಶಿ ಪ್ಲೆಟ್ ಕೇಪ್ ೧ಕ್ಕೆ ರೂ 1—0—0 ಮತ್ತು 0—12—0 ಕೇಶ ಸೋ ಬಾಂ ಸೀಸೆ ೧ಕ್ಕೆ ರೂ 0—8—0. ವಿಲ್ ಬಾರ್ ಮತ್ತು ಕಾಮಿನಿಹಾ ಅತ್ತರ್ ಸೀಸೆ ೧ಕ್ಕೆ ರೂ 1—8—0 ಸರ್ವಜನೋಪಯೋಗವಾದ 1910ನೇ ಪೈರಿ ತಯಾರಿಯಲ್ಲಿದೆ, ದಯವಿಟ್ಟು ಕೆಟಲಾಗು ತರಿಸಿರಿ.

ನಮ್ಮ ವಿಳಾಸ—**ಡಿ. ಊಲನ್ ಮಾರ್ಟ್.**
ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೩ ಸಾರಿ	೨೬ ಸಾರಿ.	೫೨ ಸಾರಿ.
ಇಡೀ ಪಾನು	ರೂ ೧೦	ರೂ ೩೨	ರೂ ೭೨	ರೂ ೧೧೦	ರೂ. ೧೮೦
ಅರ್ಧ ಪಾನು	,, ೬	,, ೨೦	,, ೩೮	,, ೬೦	,, ೮೫
ಕಾಲು ಪಾನು	,, ೪	,, ೧೨	,, ೨೦	,, ೩೨	,, ೬೫.
ಅರೆಕಾಲು ಪಾನು	,, ೨	,, ೬	,, ೧೨	,, ೧೮	,, ೩೫.

ಸೂಚನೆ.—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಸಹಿತ ವರುಷಕ್ಕೆ ೨ ರೂ. ೧೮. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪೮. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಒಂದೆ ಪ್ರತಿ ಸೇರಿ ರೂ. ೧ ೮. ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧೮.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)	(ಪೂರ್ಣ ಚರ್ಮ)

ಈ ಮೂರು ವಿಧವಾಗಿ [illegible] ಗೆರೆಗಳುಳ್ಳವುಗಳು

3" × 8¼', 3 × 5¼, 8¼ × 6' 6 × 4 [illegible] ಸಾವುಕಾರ [illegible], [illegible] ವ ಆಫೀಸರರುಗಳಿಗೆ **ಬೇಕಾದ** ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ [illegible]

[illegible] ತಯ್ಯಾರಿಸಲ್ಪಟ್ಟಿರುತ್ತವೆ

[illegible] ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ [illegible] ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ [illegible]

ನಮ್ಮ ದರಗಳಿಗೆ [illegible] ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ
ಮಂಗಳೂರು.

ಹೂವಿನ ಒಳ್ಳೇ [illegible] ಬೆಲೆಗೆ ತಕ್ಕ [illegible] ಪಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ [illegible] ವರುಷಗಳಾದವು.

ಪ್ರಥಮದಲ್ಲಿ [illegible] ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಅರಾರೋಟ್, ಬಾರ್ಲಿ, ಕೋರ್ನ್‌ಫ್ಲೋರ್ [illegible] ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಉಪಯೋಗದ ಸಮಸ್ತ ಔಷಧಿಗಳು,

(ಕೊನ್ನಿಸರ್ [illegible] ಮೊದಲಾದವುಗಳೂ ಸಹಾ)

ಇವರ

ಔಷಧಾಲಯ

ದಲ್ಲಿ ದೊರಕುವನಲ್ಲದೆ ಇಂಗ್ಲಿಷ ವೈದ್ಯಶಾಸ್ತ್ರಜ್ಞರ [illegible] ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು.)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಟಾಜುಗಳಲ್ಲಿ ಅಚ್ಚು ಹಾಕುವುದು

ಪುಸ್ತಕ ಬೈಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಜಾನೆಗಳಿದ್ದ 'ರೂಲಿಂಗ್' ಯಾ ಗೀಟು ಹಾಕುವುದು [illegible]

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಮಂಗಳೂರು.

Mangalore Trading Association
Mangalore, S. Canara.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಖು 15ನೇ ಶುಕ್ರವಾರ ಅಕ್ಟೋಬರ 1909 ಸಂಚಿಕೆ 28.

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲಟ್ಟ ಜೇನಿನಂಥಾ ಮುಲಾಮು. ಇದರಿಂದ ವಾತ ಸಂಧಿವಾತ, ತಲೆನೋವು ಶಿರೋಭಾರ, ಅರ್ಧಾಂಗವಾಯು ಸೊಂಟದ ನೋವು, ಗಂಟ್ಲು ನೋವು, ಜಳವು, ಉಳುಕು ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು. ಇದನ್ನು ಉಪಯೋಗಿಸಿ ಎಲ್ಲೇ ದೇಶಸ್ಥರೂ ಪ್ರಯೋಜನ ಹೊಂದಿರುತ್ತಾರೆ. ನಾಗಪುರದ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿಗೆ ಕಿಮ್ಮತು 8 ಆಣೆ

ಕಿಮ್ಮತು ಆರು ಆಣೆ ೬ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ೬ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಹುಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿಗಿರ ಕಿಮ್ಮತು 6 ಆಣೆ 12 ಡಬ್ಬಿಗಳಿಗೆ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿಗಿರ ಕಿಮ್ಮತು 2 ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುಡ್ಡೆಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗೆದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ. ಇದು ಚರ್ಮವನ್ನು ಮೃದುವಾಗಿ ಚೆಲುವಿಕೆಯನ್ನು ಕೊಡುತ್ತದೆ. ಡಬ್ಬಿಗಿರ ಕಿಮ್ಮತು 8 ಆಣೆ 6 ಡಬ್ಬಿಗಳ ಕಿಮ್ಮತು ರೂ 2—4—0

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಃ ಶುದ್ಧಿ ಮಾಡುವದು. ಬಾಟ್ಲಿಗಿರ ಕಿಮ್ಮತು 1 ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಹಿಮೋಯಿಸ ಕೋಕೋ, ಲೆಸಿತಿನ್ ಎಂಬ ಧಾತುಪುಷ್ಟಿ ಔಷಧಗಳಿವೆ. ೩೦ ಗುಟಿಕೆಗಳ ಡಬ್ಬಿಗಿರ ಕಿಮ್ಮತು ರೂ. 1

ಚೇಳು ಕಡಿತದ ಮೇಲಿನ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡಿತದ ಮೇಲೆ ಸಹ ಇದನ್ನು ಹಾಗಿಸಬಹುದು. ಬಾಟ್ಲಿಗಿರ ಕಿಮ್ಮತು 8 ಆಣೆ

ಜುಲಾಬು ಮಾತ್ರೆಗಳು	ರೂ	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0
ಕಸ್ತೂರಿ ಮಾತ್ರೆ 50	,,	0-10—0
ಹುಜ್ಜಿ ಮುಲಾಮು	,,	0—3—0
ನೇತ್ರಾಂಜನ	,,	0—4—0

ಈ ಕಂಪೆನಿಯವರು ಹೆಚ್ಚು ನಮೂನೆಯ [illegible] ತಯಾರಿಸುವದರಿಂದ ಕೆಟಲಾಗಿಗೆ ಬರದಲ್ಲಿ ರವಾನಿಸಲ್ಪಡುವದು.

ವಿಳಾಸ:— ವಿಲಿಯಂ ಮತ್ತು ಕಂಪೆನಿ, [illegible] ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ" ಮುಂಬಯಿ

ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ. ಭಕ್ತಿ, ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ. ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಆನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ... ೬-೦-೦.

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ.	೦-೬-೦.
ಉತ್ತರ ರಾಮಚರಿತ್ರೆ ಕಥೆ.	೦-೫-೦.
ಟೀಕಾ ರಾಘವೇಂದ್ರ ಸ್ತೋತ್ರ.	೦-೨-೦.
ವೈದಿಕಲ್ಪರೀತ್ಯಾ ಸೂರ್ಯ ನಮಸ್ಕಾರ.	೦-೨-೦.
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು.	೦-೨-೦.
ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ.	೦-೨-೦.
ಬಾಲ ರಾಮಾಯಣ ಟೀಕಾ ತಾತ್ಪರ್ಯ.	೦-೨-೦.
ಸ್ವರಸಹಿತವಾದ ನಮಕ ಚ-ಮಕ.	೦-೨-೦.
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ.	೦-೪-೦.
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ.	೦-೨-೦.
ಕೃಷ್ಣ ಕರ್ಣಾಮೃತ ಮೂಲ.	೦-೨-೦.
ದೇವರ ಸೇವೆ ಹೊಸ ಪುಸ್ತಕ.	೦-೪-೦.
ಮುಕುಂದ ಮಾಲಾ (ಗೀತಾ)	೦-೪-೦.
ಶಿವ ನಾಮಾ	೦-೦-೬.
ಹನುಮನ್ನಾಮಾ.	೦-೦-೬.
ಹರಿ ನಾಮಾ	೦-೦-೬.
ಯಾಜುಷ ಪ್ರಯೋಗ	೦-೮-೦.
ಬೃಹತ್ಕಥಾ ಮಂಜರಿ.	೦-೮-೦.
ಕೃಷ್ಣ ಬೋಧಾಮೃತ	೦-೬-೦.

೦-೪-೦ ಕಮ್ಮಿ ವಿ. ಪಿ. ರವಾನಿಸುವದಿಲ್ಲ.

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು.

ವಿಳಾಸ:— ಬಿ. ಆದಿನಾರಾಯಣ ಶಾಸ್ತ್ರಿ.

ವಿದ್ಯಾನಂದ ಆಫೀಸ್, ಬೆಂಗಳೂರು.

ಕುಂತಳ ಕೌಮುದಿ ತೈಲ.

ಕುಸುಮಿಸಿದ ಮಹಾರಾಣಿಯವರು—ಅದರ ಉಪಯೋಗಿಸಿದ ಕೇಶವರ್ಧಕ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ವೈಸೆರಾಯ್ ರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಪಟ್ನಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ತಿಳಿದಿರುವರು ಮಾತ್ರವಲ್ಲದೆ.

ಶ್ರೀ ಸುರೇಂದ್ರನಾಥ ಬಾನರ್ಜಿಯವರು — ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸಬಹುದು.

ಕುಂತಳ ಕೌಮುದಿ ತೈಲ ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ತೋಷದಾಯಕವಾದದ್ದು. ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಉಲ್ಲಾಸವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,

216 ಕಾರನ್ ವಾಲಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್ ಎ. ಫೋರುವಾಲ್ ಎಂಡ್ ಕೋ,
ಚಿಕ್ಕಪೇಟೆ, ಬೆಂಗಳೂರು.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರಿ, ಹಸರು, ಬ್ಲೂ, ಸವರನ್, ಬಿಳುಪು, ಹಗಲ್‌ಬತ್ತಿ ವಗೈರೆ ರಂಗುಗಳ ವಸ್ತ್ರಾ 1ಕ್ಕೆ ... ... ರೂ. 0—12—0.

ಸೈಜು ಇಂಚು 22×22 ವಸ್ತ್ರಾ ೧ಕ್ಕೆ ... ... ,, 1— 1—0.

ಸೈಜು ಇಂಚು 15×15 ಬಿಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳಿ ಹೊಸ ನಮೂನೆ ವಸ್ತ್ರಾ 1ಕ್ಕೆ 8 ಆಣೆ.

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ 2½ ಮೊಳ, ಕೆಂಪು ರಂಗಿನ ಬಿಳ್ ದೂಡ್ಡ ಚೌಕಳೀ ಮುರಿ ರೇಷ್ಮೆ ವಸ್ತ್ರಾ 1ಕ್ಕೆ ರೂ. 12, 13, 14, 15, 16, 17. ಡಿಟೋ ಸಪ್ಪೆ ರೇಷ್ಮೆ ಚಾದರು 1ಕ್ಕೆ ರೂ. 6, 7, 8, 9, 10.

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೊದಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5–6 ಮೊಳ, ಅ. 2 3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ. 1–4–0. 1-8-0, 1-10-0, 1–12-0, 2–0-0, 2–8–0.

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ, ಕಾಚಿಗಳು, ಹಂಸ ಪಪ್ಪಳಿ, ಶೃಂಗಾರ ಪಪ್ಪಳಿ, ಜಗನ್ನಾಥ ರಟಿ ಬಾಕೆ ಮುಂಗಿ, ಹಳದ ಮುಂಗಿ, ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ. 1-6-0, 1-12-0.

ಡಿಟೊ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ. 1-0-0, 1–2–0, 1–3–0. ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ. 2-4-0, 2-8-0, 2–10–0.

ಡಿಟೊ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ. 1-4-0, 1–6–0, 1-8-0.

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ. 2-10-0, 2–12-0, 3-0-0.

ಡಿಟೊ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಶೀರೆ ಕಣ 1ಕ್ಕೆ ರೂ. 3-6-0, 3-8-0, 3-12-0.

ಡಿಟೊ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಶೀರೆ ಕಣಾ 1ಕ್ಕೆ ರೂ. 4-12–0, 5–0-0.

ಹೆಚ್ ಸಂಕಪ್ಪಾ ಬಸಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ವಿ. ಪಿ. ಆರ್ಡರುಗಳಿಗೆ ಸುಲಭ ಕ್ರಯ.

ಊದುಬತ್ತಿ ಸೇರು ೧ಕ್ಕೆ ೦-೮-೦, ೧-೦-೦, ೨-೦-೦, ೩-೦-೦, ೪-೦-೦, ೫-೦-೦. ಗಂಧದ ಪಿಲ್ಲೆ ತೊಲ ೧ಕ್ಕೆ ರೂ. ೨, ೪, ೮, ೬, ೧೨, ೧೬.

ಅರಗಜ (ಹಸೀ ಗಂಧ) ತೊಲ ೧ಕ್ಕೆ ೧-೦-೦, ೧-೮-೦.

ಬೆಳ್ಳಿ ಗಣೇಶಗಳು. ೧ಕ್ಕೆ ೨-೮-೦, ೩-೦-೦, ೩-೮-೦, ೪-೦-೦, ೫-೦-೦.

ವ್ಯವಸಾಯ ಕ್ರಮ ಬೋಧಿನಿ. ಸ್ಟಿಫ್ ಬೈಂಡ್ ಪ್ರತಿ ೧ಕ್ಕೆ ರೂ. ೦-೧೨-೦. ಕೆಲಿಕೊ ಬೈಂಡ್ ರೂ. ೧-೦-೦. ಟಪ್ಪಾಲ್ ಹಾಸಲ್ ಪ್ರತ್ಯೇಕ.

ಉಲನ್ ಚವುಕಗಳು. ಹಳದಿ, ಹಸುರು, ನೀಲಿ, ಗುಲಾಬಿ ಎಣ್ಣೆ ರಂಗುಗಳಲ್ಲಿ ೧ಕ್ಕೆ ರೂ. ೧-೬-೦, ೨-೦-೦, ೩-೦-೦.

ಉಲನ್ ಶಹಲುಗಳು. ೧ಕ್ಕೆ ೩-೮-೦, ೩-೧೨-೦, ೪-೦-೦.

ಕಾಶ್ಮೀರ ಶಹಲುಗಳು. ಎಲ್ಲಾ ರಂಗುಗಳಲ್ಲಿಯೂ ೧ಕ್ಕೆ ರೂ. ೯-೦-೦, ೧೦-೦-೦, ೧೨-೦-೦, ೧೫-೦-೦, ೧೬-೦-೦, ೧೮-೦-೦, ೨೦-೦-೦.

ಹಾಸನದ ಟೋಪಿ ಹಣಿಯುವ ಉಲನ್ ದಾರಗಳು. ಕೆಂಪು, ಎಣ್ಣೆಗೆಂಪು, ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦-೬-೦, ೦-೧೦-೦, ೦-೧೨-೦, ೦-೧೫-೦, ಡಿಟೋ ಸೂಜಿ ೧ಕ್ಕೆ ೦-೧-೬, ೦-೨-೦.

ಉಲನ್‌ನಿಂದ ಹಣಿದ ಟೋಪಿಗಳು. ಡಜನ್ ೧ಕ್ಕೆ ೪-೮-೦, ೫-೦-೦, ೬-೦-೦, ೭-೮-೦, ೮-೦-೦, ೯-೦-೦, ೧೦-೦-೦, ೧೨-೦-೦.

ಹೆಚ್. ಎನ್. ರಾವ್ ಬ್ರದರ್ಸ್,
262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು. ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು. ನಿಂಬೆ, ಕಿತ್ತಳೆ ವಗೈರೆ ಹಣ್ಣುಗಳು. ಇಂಗ್ಲೀಷ್ ಮತ್ತು ನೇಟೀವ್ ಕಾಯಿ ಪಲ್ಯಗಳೂ (ತರಕಾರಿ) ತುರಾಯಿ, ಹಾರಾ ವಗೈರೆ ಹುವ್ವುಗಳು. ಬೇಕಾದವರು ಬರೆದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

[illegible] ಎಸ್. ಗಿರಿಯಪ್ಪ ಅಂಡ್ ಸನ್ಸ್,
ಫ್ಲಾರಿಸ್ಟ್ ಅಂಡ್ ಸೀಡ್ಸ್‌ಮೆನ್,
[illegible] ಬೆಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 15ನೇ ಅಕ್ಟೋಬರ 1909.

ನವ ಶಕ್ತಿ.

ದಕ್ಷಿಣ ಆಫ್ರಿಕದಲ್ಲಿಯೂ ಇತರ ಬ್ರಿಟಿಷ ಸ್ವಾಸ್ಥ್ಯಗಳಲ್ಲಿಯೂ ಭಾರತೀಯರು ತಮ್ಮ ಆತ್ಮಗೌರವ ರಕ್ಷಣಾರ್ಥ ಅನುಭವಿಸುವ ದುಃಖ ಪರಂಪರೆಯು ವಾಚಕರು ಆಗಿಂದಾಗ್ಯೆ ತಿಳಿದಿರುವರು. ಬಂಗಾಳಿಗಳು "ಸಾಧು"ಗಳೆಂದೂ ಪೌರುಷವಿಹೀನರೆಂದೂ ಒಮ್ಮೆ ಪ್ರಖ್ಯಾತ ಇಂಗ್ಲೀಷ ಲೇಖಕ ಮೆಕಾಲೇಯಿಂದ ಹೀಯಾಳಿಸಲ್ಪಟ್ಟಿದ್ದರು. ಇತ್ತಲಾಗೆ ಅದೇ ಬಂಗಾಳಿಗಳು ಕಾರಾಗೃಹವನ್ನೂ, ಗಡಿಪಾರನ್ನೂ ಗಣಿಸದೆ ರಾಷ್ಟ್ರೀಯ ಘನತೆಗಾಗಿ ಅನೇಕ ಸಂಕಷ್ಟ[illegible] ವಹಿಸಿರುವರು. ಭರತಖಂಡವನ್ನೂ, ಭಾರತೀಯ ಜನಾಂಗವನ್ನೂ ಪುನಃ ಏಳ್ಗೆಗೆ ತರಬೇಕೆಂಬ ದೃಢ ಸಂಕಲ್ಪವೂ, ಆಸಕ್ತಿಯೂ, ದೇಶದ ಎಲ್ಲಾ ಕಡೆಗಳಲ್ಲಿಯೂ ಕಾಣಬರುವದು. ಹೆಪ್ಪು ಹಾಲನ್ನು ಮಾರ್ಪಡಿಸುವಂತೆ, ಇಂತಹ ಉತ್ತೇಜಕ ಶಕ್ತಿಯು ಇಡೀ ಜನಾಂಗವನ್ನು ವ್ಯಾಪಿಸಿದ್ದಲ್ಲಿ ಪ್ರಜಾಸಮುದಾಯದ ಗುಣಾಗಣಗಳು ಪರಿಷ್ಕೃತವಾಗಿ ಜನಾಂಗವು ರೂಪಾಂತರ ಹೊಂದುವದು.

ತಾವೂ ಒಂದು ಜನಾಂಗವಾಗಿದ್ದೇವೆ, ತಮ್ಮ ರಾಷ್ಟ್ರೀಯ ಗೌರವಕ್ಕೆ ಕುಂದು ತರಬಾರದು ಎಂಬ ತೃಷ್ಣೆಯು ಜನರಲ್ಲಿ ಹುಟ್ಟಿದರೆ, ಅವರ ಕಣ್ಣು ತೆರದಂತಾಗಿ ಆ ಉದ್ದಿಶ್ಯ ಸಾಧನೆಗಾಗಿ ಯಾವ ತ್ಯಾಗವನ್ನೂ ಹೆಚ್ಚೆಂದೆಣಿಸರು. ಪೂರ್ವದಲ್ಲಿ ರೋಮವೆಂಬ ನಗರವು ಬೆಳದು ದಿಗಂತ ವಿಶ್ರಾಂತ ಸಾಮ್ರಾಜ್ಯವಾಗಲಿಕ್ಕೆ ಇದೇ ಕಾರಣವಾಗಿತ್ತು. "ತಾನು ರೊಮಾಯನೆನಿಸಿ (ಇಂತಹ) ನೀಚಕೃತ್ಯವೆಸಗುವದಕ್ಕಿಂತಲೂ ಒಂದು ನಾಯಿಯಾಗಿ ಹುಟ್ಟಿ ಚಂದ್ರನ ಕಡೆ ಬೊಗಳುವದೇ ಲೇಸು" ಎಂದು ಷೇಕ್ಸ್‌ಪೀಯರ್ ಕವಿಯು ನಾಟಕದಲ್ಲಿ ಒಬ್ಬ ರೋಮಾಯನಿಂದ ನುಡಿಸುವನು. ಮೊಗಲ್ ಬಾದಶಹನ ಕಾಲದಲ್ಲಿ ದರ್ಬಾರಿಗೆ ಬಂದವರೆಲ್ಲರು ಉದ್ದಂಡ ಪ್ರಣಾಮವೆಸಗಬೇಕೆಂಬ ಶಾಸನವನ್ನು, ಒಬ್ಬ ಇಂಗ್ಲೀಷ ಗೃಹಸ್ಥನು ಮೀರಿದಾಗ ಅವನನ್ನು ವಿಚಾರಿಸಲು ತಾನು ಜನಾಂಗದ ಗೌರವವನ್ನು ತನ್ನ ಜೀವ ರಕ್ಷಣೆಗೋಸುಗ ಕಳಕೊಳ್ಳಲಾರೆ; ಮರಣ ದಂಡನೆಯನ್ನಾದರೂ ಅನುಭವಿಸುವೆನೆಂದು ಹೇಳಿದನು.

ನಮ್ಮ ಇಷ್ಟು ಕಾಲದ ಅಪದೆಸೆಯ ಒಂದು ಮುಖ್ಯ ಕಾರಣವು ಪರಾವಲಂಬನ ಪಾರತಂತ್ರ ಶೀಲಗಳೇ. ವ್ಯವಹಾರದಲ್ಲಿ ನಮ್ಮ ಸಾಮರ್ಥ್ಯದಲ್ಲಿ ನಮಗೆ ವಿಶ್ವಾಸವಿಲ್ಲದಿದ್ದರೆ ನಾವು ಸ್ವತಂತ್ರರೇ? ಸ್ವಶಕ್ತಿಯನ್ನು ನಂಬಿ ಸ್ವಾವಲಂಬಿಯಾಗುವದೇ ಸರ್ವಾರ್ಥ ಸಿದ್ಧಿಗೆ ಮೂಲ. ಅಂಥಾ ನಂಬಿಕೆ ಇಲ್ಲದವನು ಪಾಪಿಯೂ ನಾಸ್ತಿಕನೂ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರಂತೆ. ಹ್ಯಾಗಂದರೆ, ಅಂಥವನು ತನ್ನಲ್ಲಿರುವ ಸರ್ವಸಮರ್ಥ ದೈವಿಕ ಕಲೆಯನ್ನು ಅಲ್ಲಗಳೆದಂತಾಯಿತಲ್ಲ. ಯಾವ ಇಷ್ಟಾರ್ಥವು ಸಾಧನೆಯನ್ನು ಮೀರಿಲ್ಲವೆಂದು ನಂಬಿ ನಡೆವ ಜನಾಂಗವು ಕೀರ್ತಿ ಪಡೆವುದು.

ಅಮೇರಿಕ ಖಂಡದ ಯುನೈಟೆಡ್ ಕೆನಡಾ ದೇಶಗಳಲ್ಲಿಯೂ ಟ್ರಾನ್ಸವಾಲ್ ಮೊದಲಾದ ಆಫ್ರಿಕದ ಸ್ವಾಸ್ಥ್ಯಗಳಲ್ಲಿಯೂ ಔಸ್ಟ್ರೇಲ್ಯದಲ್ಲಿಯೂ ಭಾರತೀಯ ಪ್ರವಾಸಿಗಳು ಪಡುವ ಅಪಮಾನ ಸಂತಾಪಗಳ ಕಾರಣವನ್ನು ಅಮೇರಿಕದಲ್ಲಿ ಹಲವು ಕಾಲ ವಾಸವಾಗಿದ್ದ ಭಾರತೀಯ ಗೃಹಸ್ಥ ಸಂಟ್‌ನಿಹಾಲ ಸಿಂಗರು ಹೇಳುವರು. ಒಬ್ಬ ಹಿಂದೂವಿಗೆ ಎಷ್ಟು ಮಾನಗೆಡಿಸಿದರೂ ಅವನ ರಾಷ್ಟ್ರೀಯ ಗೌರವಕ್ಕೆ ಹಾನಿಬರುವದಿಲ್ಲ. ಅಥವಾ ಅವನಿಗೆ ಅಂಥಾ ಗೌರವವೇ ಇಲ್ಲವೆಂದು ಆ ಬಿಳೀ ಜನರು ನಂಬುವರಂತೆ. ಅವರಲ್ಲಿ ಅಂಥಾ ನಂಬಿಕೆಗೆ ನಾವು ಕಾರಣ ಕೊಟ್ಟ ಸಂಗತಿಯು ಲಜ್ಜಾಸ್ಪದವಲ್ಲವೇ? ಈಗ ಈಗ ಭಾರತೀಯರು ರಾಷ್ಟ್ರೀಯ ಅಭಿಮಾನ ಶೀಲರೆಂಬ ಚಿನ್ಹೆಗಳು ಅಲ್ಲಲ್ಲಿ ತೋರಬರುವವು.

ಆತ್ಮಗೌರವವಿರುವವನೇ ಪರರ ಸಂಭಾವನೆಗೆ ಪಾತ್ರನು. ಮತ್ತು ಆತ್ಮಗೌರವವಿರುವವನು ಪರರನ್ನು, ಮುಖ್ಯವಾಗಿ ಅನಾಥರನ್ನೂ ಅಬಲೆಯರನ್ನೂ ಮರ್ಯಾದೆಯಿಂದ ನಡಿಸುವನು. ಯಾಕಂದರೆ, ಅಂತಹರನ್ನು ಬಾಧಿಸುವದು ಪೌರುಷ ಹಾನಿಯಾಗಿದೆ. ಒಂದು ಜನಾಂಗವು ತಮ್ಮ ಸ್ತ್ರೀಯರನ್ನು ಯಾವ ರೀತಿ ನಡಿಸುವರೆಂದು ನೋಡಿ ಆ ಜನಾಂಗದ ಸ್ಥಿತಿಯನ್ನು ನಿರ್ಧರಿಸಬಹುದು. ರೋಮ ಸಾಮ್ರಾಜ್ಯದ ದಿನಗಳಲ್ಲಿಯೂ, ಅದರ ಮುಂಚೆ ಗ್ರೀಕರ ಉನ್ನತಿಯಲ್ಲಿಯೂ ಈಗ ಇಂಗ್ಲಿಷ್ ಅಮೇರಿಕ ಸಮಾಜಗಳಲ್ಲಿಯೂ, ಮನುಧರ್ಮ ಶಾಸ್ತ್ರದಿಂದ ತೋರುವ ಪ್ರಕಾರ ಆ ಕಾಲದ ಹಿಂದುಗಳಲ್ಲಿಯೂ ಹೆಂಗಸಿಗೆ ಯೋಗ್ಯ ಗೌರವ ದೊರಕಿಯದೆ. [illegible] ಏಳಿಗೆಯಿಂದ ಅದನ್ನೊಳಕೊಳ್ಳುವ ಜನಾಂಗವು [illegible] ಸ್ತ್ರೀಗೆ [illegible] ಶಿಕ್ಷಣ ಸುಧಾರಣೆಗಳಿಂದ ಅವಳಲ್ಲಿ ಆತ್ಮಗೌರವ ಹುಟ್ಟುವದು. ಬುದ್ಧಿ ಶಿಕ್ಷಣ ವಿಷಯ ಮನುಷ್ಯನಿಗೂ ಬಂಡಿ ಎತ್ತಿಗೂ ವಿಶೇಷ ಭೇದವಿಲ್ಲ. ಸ್ತ್ರೀಯರಲ್ಲಿ ಆತ್ಮಗೌರವ ಜನಿಸಿದರೆ ಅದರ ಸೋಂಕು ಸ್ವತಃ ಅವರ ಭರ್ತಾರರಿಗೂ ಸಹೋದರರಿಗೂ ಮಕ್ಕಳಿಗೂ ತಟ್ಟುವದು. ಹೀಗೆ ಇಡೀ ಜನಾಂಗವೇ ಗೌರವ ಹೊಂದುವದು. ಯಾಕಂದರೆ, ವಿಚಕ್ಷಣ ಸ್ತ್ರೀ ಸರೋಜಿನಿ ನಾಯುಡು ಹೇಳುವಂತೆ ತೊಟ್ಟಿಲು ತೂಗುವ (ಸ್ತ್ರೀಯ) ಕೈಯಲ್ಲಿ ರಾಜ್ಯವಾಳುವ ದಂಡವಿದೆ.

ಸ್ತ್ರೀಯರಂತೆಯೇ ಪತಿತ ಜನರ ಉತ್ಕರ್ಷೆಯು ರಾಷ್ಟ್ರೀಯ ಗೌರವಕ್ಕೆ ಆವಶ್ಯಕ. ಆ ಬಡ ಪಾಮರರಲ್ಲಿ ನಿಜವಾದ ಪೌರುಷದ ಬಿಂದುವೇ ಇಲ್ಲ. ಆಹಾರನಿದ್ರಾದಿ ಪಶುವ್ಯಾಪಾರ ಮಾತ್ರವನ್ನೇ ಅರಿತವರಾಗಿ ನರಜನ್ಮ ವಿಶೇಷಣವಾದ ಜ್ಞಾನಭಾಹಿರರಾಗಿ ಅವರು ಮೃಗಮಾನವರ ನಡುವೆ ನೇತಾಡುವರು. ಅಂತಹ ಲಕ್ಷಾಂತರ ಮಂದಿ ದೇಶದಲ್ಲಿರಲು ಕೆಲವು ಸಮುದಾಯಗಳು ಮಾತ್ರ ಉಚ್ಚ ಸುಧಾರಣೆಯಿಂದ ಮುಂದೊತ್ತ ನೋಡುವದು ಸೊಂಟಕ್ಕೆ ಕಲ್ಲು ಕಟ್ಟಿ ಈಜುವವನ ಕೃತ್ಯವನ್ನು ಹೋಲುವದು. ಜನಾಂಗವೆಂಬದು ಅರಮನೆ ಮಹಾಲುಗಳಲ್ಲಿ ಮಾತ್ರವಲ್ಲ ಶಹಾರು ನಾಗರಗಳಲ್ಲಿಯೇ ಅಲ್ಲ ಗುಡಿಸಲುಗಳಲ್ಲಿಯೂ ಹಳ್ಳಿಗಳಲ್ಲಿಯೂ ಇರುವುದು. ಆದ್ದರಿಂದ ಆತ್ಮಗೌರವವೂ ರಾಷ್ಟ್ರಗೌರವವೂ ಎಲ್ಲರನ್ನೂ ವ್ಯಾಪಿಸತಕ್ಕದ್ದು. ಅದಕ್ಕೆ ಮೂಲವಾದ ವಿದ್ಯೆಯು ಎಲ್ಲರ ಕೈಸೇರಬೇಕು. ಆಗ್ಯೆ ಇಡೀ ಜನಾಂಗವೂ ಸ್ತ್ರೀಪುರುಷರೂ ದ್ವಿಜಪಾಮರರು ಎಂದು ಭೇದವಿಲ್ಲದೆ ಸರ್ವರೂ ಒಂದೇ ವಿರಾಟ್ಪುರುಷನಂತೆ ಏಕೋಭಾವದಿಂದ ಪ್ರೇರಿತರಾಗಿ ವರ್ತಿಸುವಾಗ್ಯೆ ಭಾರತೀಯ ಜನಾಂಗವು ಉದ್ಭವಿಸುವದು. ಸಮರದ ಜಯಾಪಜಯಗಳು ತನ್ನೊಬ್ಬನ ಮೇಲೆ ಇರುವವೆಂದು ನೆನಸಿ ಹ್ಯಾಗೆ ಶೂರಯೋಧನು ಕಾದಾಡುವನೋ ಹಾಗೆಯೇ ಪ್ರತಿಯೊಬ್ಬನೂ ಪೂರ್ಣ ಮನಸ್ಸಿನಿಂದ ಈ ಪುನರುಜ್ಜೀವನದ ಬಗ್ಯೆ ನಿರಂತರ ಪ್ರಯತ್ನಪಡಬೇಕು.

ಖರ್ವೆಯವರ ಅನಾಥ ಬಾಲಿಕಾಶ್ರಮ, ಪುಣೆ.

ಇದೇ ತಿಂಗಳ ೫ ನೇ ತಾರೀಕು ಮಂಗಳವಾರ ಈ ಆಶ್ರಮದ ವರ್ಧಂತಿ ದಿನ ಸಮಾರಂಭ ನಡೆಯಿತು. ಯೋಗ್ಯ ವಿದ್ಯಾರ್ಥಿಗಳಿಗೆ ಇನಾಮು ಕೊಡಲಾಯಿತು. ಮುಂಬಯಿ ಗವರ್ನರ್ ಸರ್. ಜೊರ್ಜ್ ಕ್ಲಾರ್ಕರವರು ಅಧ್ಯಕ್ಷರಾಗಿದ್ದರು.

ಆರಂಭದಲ್ಲಿ ಡಾ| ರಾಮಕೃಷ್ಣ ಗೋಪಾಳ ಭಂಡಾರ್‌ಕಾರರವರು ಮಾಡಿದ ಭಾಷಣದಲ್ಲಿ ಸಾಮಾಜಿಕ ಸಂಸ್ಕರಣದ ಸಂಕ್ಷಿಪ್ತ ಚರಿತ್ರೆಯನ್ನು ವರ್ಣಿಸಿದರು. ಆದಿಯಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಹೊಂದಿದ ಯುವಕರು ಸ್ತ್ರೀಯರ ಪತಿತ ಗತಿಯನ್ನು ನಿವಾರಿಸಲೋಸುಗ ಶಾಲೆಗಳನ್ನು ಸ್ಥಾಪಿಸಿ ವಿದ್ಯೆಯನ್ನು ಅವರಲ್ಲಿ ಹರಡಿದರು. ಕ್ರಮೇಣ ಅವರ ಸಮಾಜದ ದುಃಸ್ಥಿತಿಯು ಇವರ ಲಕ್ಷ್ಯಕ್ಕೆ ಬಂದು ಬಾಲವಿಧವೆಯರ ದುಃಖ ಪರಂಪರೆಯನ್ನು ನಾಶಮಾಡುವ ಬಗ್ಯೆ ವಿಧವಾ ವಿವಾಹವನ್ನು ಪ್ರತಿಪಾದಿಸಿ ಅದು ಧರ್ಮಾನುಸಾರವದೆಯೆಂದು ದೃಢಪಡಿಸಲಿಕ್ಕೆ ವಿಧವಾವಿವಾಹದ ಒಂದು ಆಕ್ಟನ್ನು ಏರ್ಪಡಿಸುವ ವಿಲಿವಾರಿ ನಡಿಸಿದರು. ಆದರೂ ವಿವಾಹ ಮೂಲಕ ವಿಧವೆಯರನ್ನುದ್ಧರಿಸುವುದು ವಿದ್ಯಾವಂತರಲ್ಲಿ ಕೆಲವರಿಗೆ ಸಮ್ಮತವಲ್ಲದಿದ್ದರಿಂದಲೂ ಪೂರ್ವಾಚಾರ ವಾದಿಗಳು ಅದಕ್ಕೆ ಪ್ರತಿಕೂಲವಾಗಿರುವದರಿಂದಲೂ ಈ ಸಂಸ್ಕಾರವು ಇನ್ನೂ ಪಸರಿಸಿಲ್ಲ.

ಆದ್ದರಿಂದ ಈ ಅನಾಥರಿಗೆ ಇತರ ವಿಧವಾಗಿ ಕೈಕೊಡಬೇಕಾಗಿ ಬಂದು ಅವರನ್ನು ವಿದ್ಯಾವಂತರನ್ನಾಗಿ ಮಾಡಿದರೆ ಸ್ವತಂತ್ರ ಜೀವನವೂ ಮರ್ಯಾದೆಯೂ ಅವರ ಪಾಲಿಗೆ ಬರುವದೆಂದು ತಿಳಿದು ಪುಣೆಯಲ್ಲಿ ಈ ಮುಂಚೆ ಒಂದು ಅನಾಥಾಲಯವನ್ನು ಸ್ಥಾಪಿಸಿದರು. ಪಂಡಿತ ರಮಾಬಾಯಿಯವರು ಇದರ ಸ್ಥಾಪಕರಾಗಿದ್ದರು. ಕೆಲವು ಕಾಲದಲ್ಲಿ ಇದರ ಅಡಳಿತೆದಾರರೊಳಗೆ ವೈಮನಸ್ಯ ಹುಟ್ಟಲು ಹಿಂದುಗಳ ಆಡಳಿತೆಯಲ್ಲೇ ಇರುವ ಒಂದು ಅನಾಥ ಬಾಲಿಕಾಶ್ರಮ ಅವಶ್ಯವೆಂದು ಕಂಡುಬಂತು. ಆದರೆ ಇಂತಹ ಸಂಸ್ಥೆಯನ್ನು ನೆಟ್ಟಗೆ ನಡಿಸಬೇಕಾದರೆ ತನ್ನ ತನುಮನಗಳನ್ನು ಆ ಕಾರ್ಯಕ್ಕೆ ಸಮರ್ಪಿಸಿ ಆಸಕ್ತಿಯಿಂದ ಕೆಲಸ ಮಾಡುವ ಯುವಕನೊಬ್ಬನು ಅವಶ್ಯ. ಈ ಯುವಕನೇ ಶ್ರೀಯುತ ಧೊಂಡೂ ಕೇಶವ ಖರ್ವೆ.

ಈ ಸಂಕ್ಷಿಪ್ತ ಭಾಷಣ ನಂತರ ಅಧ್ಯಕ್ಷ್ಯರು ಮಾತಾಡಿದರು. ಸ್ವಭಾವ ಸಹಜವಾದ ದಯಾಭಾವದ ದೆಶೆಯಿಂದ ಸ್ತ್ರೀಯರು ಈ ಕಾರ್ಯಕ್ಕೆ ಯೋಗ್ಯರೆಂದೂ ಈ ಆಶ್ರಮಕ್ಕೆ ಬರುವಾಗ ತನ್ನ ಸಹಧರ್ಮಿಣಿ ಪುತ್ರಿಯರೊಡಗೂಡಿ ಬರುವದು ತನ್ನ ಕೋರಿಕೆಯಾಗಿತ್ತೆಂದೂ ಸಾವಂದರು ವ್ಯಾಕುಲ ಪ್ರದರ್ಶಿಸಿದರು. ಹತ್ತು ವರುಷದ ಮೊದಲು ಆಶ್ರಮದಲ್ಲಿ ೪ ವಿಧವೆಯರು ಇದ್ದರು. ಅಷ್ಟು ಅಲ್ಪಕಾಲದಲ್ಲಿ ಆ ಸಂಖ್ಯೆಯು ಹೆಚ್ಚುತ್ತಾ ಈಗ ೧೦೦ ಮಂದಿ ಬಾಲೆಯರಿರುವರೆಂಬದು ಉತ್ತೇಜಕ [illegible] ವಿಧವೆಯರ ಸಂಕಷ್ಟವೆಂಬ ಸಮಾಜದ [illegible] ಗುರುತೆಂದು [illegible] ವರು [illegible]. ಈ ಆಶ್ರಮವನ್ನು [illegible] ಅದರ [illegible]

ರಕ್ಷಣೆಗೂ ಹಿಂದುಗಳೇ ಕಾರಣ. ಇದರಿಂದ ಹಿಂದುಗಳು ತಮ್ಮ ಅನಾಥ ಬಡವಿಧವೆಯರನ್ನು ವಿದ್ಯಾಭ್ಯಾಸ ಮೂಲಕ ಸ್ತ್ರೀಸ್ವಭಾವಿಕವಾದ ವೃತ್ತಿಗಳಿಗೆ ಹವಣಿಸಿ ಅವರ ಜೀವನವನ್ನು ಉದ್ಧರಿಸುವ ಆಶೆಯನ್ನು ಕಾರ್ಯತಃ ತೋರಿರುವರು. ,ಮನುಸ್ಮೃತಿಯಲ್ಲಿ ಈ ಕೆಳಗಣ ಮಾತಿನಿಂದ ಆ ಕಾಲದಲ್ಲಿ ಹಿಂದುಗಳು ಉಚ್ಚಸುಧಾರಣೆಯನ್ನು ಹೊಂದಿದ್ದರೆಂದು ತಿಳಿಯಬೇಕು. "ಹೆಂಗಸರಿಗೆ ಎಲ್ಲಿ ಮರ್ಯಾದೆ ಇರುವದೋ ಅಲ್ಲಿ ದೇವತೆಗಳು ತುಷ್ಟರಾಗುವರು ಅವರಿಗೆ ಗೌರವವಿಲ್ಲದೆಡೆಯಲ್ಲಿ ಯಜ್ಞಗಳು ನಿಷ್ಫಲವಾಗುವವು". ಈಗ ಹಿಂದುಗಳು ನಡಿಸುವ ಪ್ರಯತ್ನಗಳು ಪೂರ್ವೋನ್ನತಿಗೆ ಸಾಧಕವಾಗಿವೆ. ಭಾರತೀಯ ಅಭಿವೃದ್ಧಿ ಸೂಚಕವಾಗಿವೆ.

ಆಶ್ರಮಕ್ಕೆ ಸಹಾಯಕರಾಗಿ ಕೆಲಸ ಮಾಡಲೇರ್ಪಟ್ಟ ಸ್ತ್ರೀ ಸಂಘವನ್ನು ಗವರ್ನರವರು ಶ್ಲಾಘಿಸಿ ಈ ಕಾರ್ಯಕ್ಕೆ ಬೇರೆ ಸ್ತ್ರೀಯರು ಮುಂದರಿಸಿ ಪರೋಪಕಾರ ಸುಖವನ್ನನುಭವಿಸಬೇಕೆಂದು ಸೂಚಿಸಿದರು. ವಿಧವಾಲಯಕ್ಕೆ ಅವಶ್ಯವಿರುವ ಒಂದು ರಸ್ತೆಯ ವಿಷಯದಲ್ಲಿಯೂ, ಒಂದು ಸ್ಥಳದ ಕುರಿತಾಗಿಯೂ ತನ್ನ ಕೈಲಾದ ಸಹಾಯವನ್ನು ವಾಗ್ದಾನ ಮಾಡಿದ್ದಲ್ಲದೆ ಬರುವ ಕಾಲ ತಾನು ಬಾಲೆಯರಿಗೊಂದು ಇನಾಮನ್ನು ಕೊಡುವೆನೆಂದು ಮಾತು ಕೊಟ್ಟರು.

ದೇಶ ಕಾಲ ಪಾತ್ರ ನೋಡಿ ವಿದ್ಯಾದಾನಮಾಡಬೇಕೆಂಬ ಗೀತಾ ವಾಕ್ಯವನ್ನು ಚಾವಂದರವರು ವರ್ಣಿಸಿ ಈ ಆಶ್ರಮಕ್ಕೆ ಮಾಡುವ ಸಹಾಯವು ಕೃಷ್ಣನ ಆ ವಾಕ್ಯಕ್ಕನುಸಾರವಾಗಿದೆ ಎಂದೂ ಅದನ್ನು ಹಿಂದುಗಳೆಲ್ಲರೂ ಮನಸ್ಸಿಗೆ ತರಬೇಕೆಂದೂ ಅಪ್ಪಣೆ ಕೊಡಿಸಿದರು.

ಉತ್ಸವಾಂತ್ಯದಲ್ಲಿ ಮಿಸ್ಸೆಸ್ ರಾನಡೆ (ಕೀರ್ತಿಶೇಷ ಹೈಕೋರ್ಟು ಜಡ್ಜಿ ರಾನಡೆಯವರ ಸಹಧರ್ಮಿಣಿ)ಯವರು ಅಧ್ಯಕ್ಷರವರಿಗೆ ಉಚಿತ ವಚನಗಳಲ್ಲಿ ವಂದನೆಗಳನ್ನರ್ಪಿಸಿದರು.

ಶ್ರೀಕೃಷ್ಣ ಚರಿತ್ರ.

(ಹಿಂದಿನ ಸಂಚಿಕೆಯಿಂದ ಮುಂದರಿಸಿದುದು.)

ವ್ಯಾಸನು—"ವತ್ಸನೇ, ನಿನ್ನಿಂದ ಒಬ್ಬನಿಂದಲೇ ಈ ಮಹತ್ಕಾರ್ಯವನ್ನು ಕಡೆಹೊಂದಿಸಲಾದೀತೇ? ಅಸದೆಂದು ನನಗೆ ತೋರುತ್ತದೆ. ಸಮಸ್ತ ಬ್ರಾಹ್ಮಣರು, ಋಷಿಗಳು, ನಾಲ್ಕು ವೇದಗಳು, ಶ್ರುತಿಗಳು, ಸ್ಮೃತಿಗಳು ಇವೆಲ್ಲವು ಮರಳುದಿಣ್ಣೆಗಳಂತೆ ಅಲೆಗಳ ಆಘಾತದಿಂದ ಕೊರದು ತೇಲಿಹೋಗವು; ನೀರಿನ ನೊರೆಯೊಂದಿಗೆ ಅವು ತೇಲಿ ಹೋಗವು. ಕೃಷ್ಣಾ, ನಿನ್ನ ಜ್ಞಾನಸಾಗರವೋ ಅನಂತವಾಗಿದೆ. ಶಕ್ತಿಯು ಅಪಾರವಾಗಿದೆ; ಆದರೂ ರಾಷ್ಟ್ರದ ಪ್ರಗತಿಯ ಪ್ರವಾಹದೊಡನೆ ಕ್ರೀಡಿಸಲು ನಿನಗೆ ಕೂಡೀತೇ? ಗ್ರಹಗಳು, ತಾರೆಗಳು, ದೇಶಕಾಲಾದಿಗಳು, ಮತ್ತು ಯಾವದರ ರೀತಿಯು ನಮ್ಮ ಜ್ಞಾನಕ್ಕೆ ಕಷ್ಟಸಾಧ್ಯವೋ ಅಂತಹ ಮಾನಸಬಗೆತ್ತು ಇವೆಲ್ಲವು ನಮಗೆ ತಿಳಿಯಗೊಡದೆ, ರಾಷ್ಟ್ರದ ಸ್ಥಿತಿಯ ರೂಪಾಂತರಗಳನ್ನುಂಟುಮಾಡುತ್ತವೆ. ಈ ಸೃಷ್ಟಿಯ ನೀತಿಯ ಪರಿಣಾಮವು ರಾಷ್ಟ್ರದ ಭವಿಷ್ಯ ಸಾಗರದ ಮೇಲೆ ಉಂಟಾದೀತು. ಅಲ್ಲಿ ಮನುಷ್ಯನು ನೀರಿನ ಒಂದು ಬಿಂದುವಿನೋಪಾದಿಯಲ್ಲಿರುವನು. ಅಂತಹ ಒಬ್ಬ ಮನುಷ್ಯನಿಂದ ಏನು ತಾನೇ ಆದೀತು?"

ಆಗ ಕೃಷ್ಣನು ಹೀಗೆ ಹೇಳಿದನು—"ಒಬ್ಬನೇಯೇ? ಮುನಿಯೇ ನಾನು ಒಬ್ಬನಲ್ಲ. ವಿಧಾತನಾದ, ವಿಶ್ವರೂಪನಾದ ನಾರಾಯಣನೇ ನನ್ನ ಸಹಾಯ ಕರ್ತನಾಗಿರುವನು. ನಾವೆಲ್ಲರೂ ಆ ನಾರಾಯಣನ ಅಂಶಗಳಾಗಿರುವೆವು. ಸೋಹಮ್!(ಅವನೇ ನಾನು!) ನಾನೇ ನಾರಾಯಣನು! ನಾನೇ ಸರ್ವಭೂತಮಯನಾಗಿರುವೆನು! ಎಲ್ಲಾ ಪ್ರಾಣಿಗಳಲ್ಲಿ ನಾನೇ ಇರುವೆನು! ನಾನೇ ವಿಶ್ವರೂಪನಾಗಿರುವೆನು! ವ್ಯಾಸನೇ, ನನ್ನ ವಿಶ್ವರೂಪವನ್ನು ನೋಡು! ಅರ್ಜುನನೇ, ನನ್ನ ವಿಶ್ವರೂಪವನ್ನು ನೋಡು! ಗ್ರಹ, ಉಪಗ್ರಹ ಮತ್ತು ಸೂರ್ಯಮಂಡಲಗಳೇ ಮೊದಲಾದವುಗಳಿಂದ ಉಂಟಾದ ಶತದಲಪದ್ಮವನ್ನು ನೀವಿಬ್ಬರೂ ನೋಡಿರಿ! ನಾನೇ ಈ ವಿಶ್ವಪದ್ಮದಲ್ಲಿ ಸರ್ವತ್ರ ವ್ಯಾಪಿಸಿರುವೆನು. ನಾನೇ ವಿಶ್ವದ ಜೀವವವು! ನನ್ನಿಂದಲೇ ಚರಾಚರಗಳ ಉತ್ಪತ್ತಿಯು! ನನ್ನಿಂದಲೇ ಜನ್ಮ ಮತ್ತು ಮರಣಗಳೆಂಬ ಈ ಸ್ಥಿತಿಗಳ ರೂಪಾಂತರಗಳು! ಈ ಎಲ್ಲವೂ ನನ್ನ ಲೀಲೆಯಾಗಿದೆ! 'ಏಕಮೇವಾದ್ವಿತೀಯಮ್'' ಆಗಿರುವ (ಎಂದಿಗೂ ಎರಡಲ್ಲದೇ ಒಂದೇಯಾಗಿರುವ) ಆ ಭಗವಂತನು ನಾನೇ! ನೋಡಿರಿ, ನನ್ನ ಒಂದು ಕೈಯಲ್ಲಿ ನೀತಿಯ ಚಕ್ರವಾದ ಸುದರ್ಶನವಿದೆ. ಇನ್ನೊಂದರಲ್ಲಿ ವಿಶ್ವದ ಕಂಠರೂಪವಾದ ಮಹಾ ಶಂಖವಿದೆ. ಈ ಮಹಾ ಶಂಖವು ನೀತಿ ಚಕ್ರವನ್ನು ಸದಾ ಕೈವಾರಿಸುತ್ತದೆ. ಮತ್ತು ತಾರಸ್ವರದಿಂದ, ಭ್ರಾಂತನಾದ ಮನುಷ್ಯನೇ,-ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ, (ಎಲ್ಲಾ ಧರ್ಮಗಳನ್ನು ಬಿಟ್ಟುಬಿಟ್ಟು ನನ್ನನ್ನು ಒಬ್ಬನನ್ನೇ ಮರೆಹೋಗು) ಎಂದು ಸರ್ವದಾ ಘೋಷಿಸುತ್ತಲಿರುವುದು. ಅನಂತವಾದ ವಿಶ್ವವೇ ನನ್ನ ಧರ್ಮ ಮಂದಿರವು. ಜಗತ್ತಿನ ಕಲ್ಯಾಣ, ಮತ್ತು ಸರ್ವಭೂತಗಳ ಹಿತವೆಂಬುವುಗಳೇ ಅದರ ಬುನಾದಿಯು; ಸುದರ್ಶನ ನೀತಿ ಚಕ್ರವು ಅದರ ಕಲಶವು. ನಿಷ್ಕಾಮಕರ್ಮವು ಸಾಧನೆಯು, ನಾರಾಯಣನಾದ ನಾನು ಲಕ್ಷ್ಯವು. ವ್ಯಾಸನೇ, ನೀನು ಜ್ಞಾನಬಲದಿಂದ, ಅರ್ಜುನನೇ, ನೀನು ಬಾಹುಬಲದಿಂದ ಹೀಗೆ ನೀವಿಬ್ಬರೂ, ನಾರಾಯಣನಿಗೆ ಸರ್ವ ಕರ್ಮಗಳ ಫಲವನ್ನು ಸಮರ್ಪಿಸಿ ಈ ಸನಾತನ ಧರ್ಮವನ್ನು ಮಹಾ ನೀತಿಯ ತವರುಮನೆಯಾಗಿರುವ ಈ ಭರತಖಂಡದಲ್ಲಿ, ಅಲ್ಲ ಸರ್ವತ್ರ ಜಗತ್ತಿನಲ್ಲಿ, ಪ್ರಸಾರ ಮಾಡಿರಿ. ಸ್ವಾರ್ಥ ಬುದ್ಧಿಯು ಪೂರ್ಣವಾಗಿ ನಿರಸ್ತರವಾಗಿ ನಿಷ್ಕಾಮಕರ್ಮದ ಸಾಮ್ರಾಜ್ಯವು ಪ್ರತಿಷ್ಠಿತವಾದರೆ ಪ್ರೇಮಮಯವಾದ ಮತ್ತು ಪವಿತ್ರವಾದ ಮಹಾಭಾರತದ ಸ್ಥಾಪನೆಯಾಗುವುದು. ಆದ್ದರಿಂದ ನೀವಿಬ್ಬರೂ ಈ ಮಹಾ ವ್ರತವನ್ನು ಸ್ವೀಕರಿಸಿರಿ"

ವ್ಯಾಸನೂ ಅರ್ಜುನನೂ ಕಣ್ಣೆತ್ತಿ ಕೃಷ್ಣನನ್ನು ನೋಡಿದರು. ಅವರ ದೃಷ್ಟಿಗೆ ಯಾವ ಐಶ್ವರ್ಯಯುಕ್ತವಾದ ಮೂರ್ತಿಯು ತೋರಿ ಬಂದಿತೋ, ಅದರ ತೇಜವು ಅಲೌಕಿಕವಾಗಿದ್ದಿತು. ಆತನ ನೀಲಶರೀರದ ದೆಶೆಯಿಂದ ಚಂದ್ರಿಕೆಯ ಮಳೆಯು ಹುಯ್ಯುತಿದ್ದಿತು. ಈಗ ಆತನು ಮುಂಚಿನ ವಾಸುದೇವನಾಗಿರಲಿಲ್ಲ. ನೋಡನೋಡುತ್ತ ಆ ತೇಜಸ್ವಿಯಾದ ಶರೀರವು ಬೆಳೆದುಬೆಳೆದು ಹೋಗಿ ಚರಾಚರ ಸೃಷ್ಟಿಮಯವಾದ ಇಡೀ ವಿಶ್ವವನ್ನು ಆವರಿಸಿಬಿಟ್ಟಿತು.

ಆವನ ಕಾಲಡಿಗಳ ಕೆಳಗೆ ಸೂರ್ಯಮಂಡಲವು ಶೋಭಿಸುತ್ತಿದ್ದಿತು. ಆತನ ಮುಖದ ಶೋಭೆಯು ಮತ್ತು ಕಣ್ಣುಗಳಲ್ಲಿಯ ತೇಜವು, ಇವು ಅಪೂರ್ವವಾಗಿ ಇದ್ದವು. ಕೈಗಳಲ್ಲಿ ಪಾಂಚಜನ್ಯ ಶಂಖವೂ, ಸುದರ್ಶನ ಚಕ್ರವೂ ಇದ್ದವು. ಆತನ ಸುತ್ತಲು ಒಂದು ಪ್ರಕಾರವಾದ ದಿವ್ಯವಾದ ಪ್ರಕಾಶವು ಹೊಳೆಯುತಿದ್ದಿತು; ಮತ್ತು ಸಂಗೀತ ಮತ್ತು ಸೌರಭ (ಪರಿಮಳ) ಇವುಗಳಿಂದಲಾದರೋ ಆ ಮೂರ್ತಿಯು ಸಮಾವಿಷ್ಟವಾಗಿದ್ದಿತು. ಪ್ರಕೃತಿಯಲ್ಲಿ ಪುರುಷನು ಅಧಿಷ್ಠಿತನಾಗಿ, ಅಲ್ಲಿಯೊಂದು ಮಹತ್ತಾದ ಸಮ್ಮೇಲನವು ಉಂಟಾಗಿದ್ದಿತು. ಚರಾಚರ ವಿಶ್ವವು ಒಂದೇ ಸ್ಥಾನದಲ್ಲಿ ಪರಿಣತವಾಗಿದ್ದಿತು. ವ್ಯಾಸ ಮುನಿಯ ಮೋರೆಯು ಆನಂದದಿಂದ ಉಜ್ವಲವಾಯಿತು; ಹೃದಯವು ನಿರ್ಮಲವಾಯಿತು, ಪ್ರೀತಿ ಪೂರ್ಣವಾಯಿತು. ಆತನು ಎದ್ದು ನಿಂತು ಗಂಭೀರವಾದ ವಾಣಿಯಿಂದ "ಈ ಮಹಾವ್ರತದ ಸ್ವೀಕಾರವನ್ನು ನಾನು ಮಾಡುತ್ತೇನೆ" ಎಂದನು.

ಅರ್ಜುನನು ಕೈಗಳನ್ನು ಜೋಡಿಸಿದನು, ಮತ್ತು ಸಗದ್ಗದ ಸ್ವರದಿಂದ ಇಂತೆಂದನು:—"ನಾನು ಕೂಡ ಈ ಮಹಾವ್ರತವನ್ನು ಸ್ವೀಕರಿಸುತ್ತೇನೆ"

ಆಗ್ಗೆ ಶ್ರೀಕೃಷ್ಣನು ಆನಂದದಿಂದ ಎದ್ದು ಕೆಳಗೆ ಕುಳಿತನು, ಮತ್ತು ಆ ಮೂವರೂ ಮೇಲೆ ನೋಡುತ್ತ ಹೀಗೆಂದರು:—

ಧ್ಯೇಯಃ ಸದಾಸವಿತೃಮಂಡಲಮಧ್ಯವರ್ತೀ ನಾರಾಯಣ । ಸರಸಿಜಾಸನಸನ್ನಿವಿಷ್ಟಃ । ಕೇಯೂರವಾನ್ ಕನಕಕುಂಡಲವಾನ್ । ಕಿರೀಟೀ! ಹಾರೀ ಹಿರಣ್ಮಯವಪುರ್ಧೃತ ಶಂಖಚಕ್ರಃ ।

ತೋಳುಗಳಲ್ಲಿರುವ ಸರಿಗೆಯಿಂದಲೂ, ಕಿವಿಗಳಲ್ಲಿ ಅಲುಗುವ ಚಿನ್ನದ ಕುಂಡಲಗಳಿಂದಲೂ, ಶಿರಸ್ಸಿನಲ್ಲಿ ತೊಟ್ಟ ಕಿರೀಟದಿಂದಲೂ, ಕೊರಳಲ್ಲಿ ಜೋಲುವ ಹಾರದಿಂದಲೂ, ಕೈಗಳಲ್ಲಿ ಹಿಡಿದಿರುವ ಶಂಖಚಕ್ರಗಳಿಂದಲೂ, ಕಾಸಿದ ಭಂಗಾರದಂತೊಪ್ಪುವ ಮೈಯ ಕಾಂತಿಯಿಂದಲೂ ವಿರಾಜಮಾನನಾಗಿರುವ, ಸೂರ್ಯಮಂಡಲದ ನಡುವಿನಲ್ಲಿ ಪದ್ಮಾಸನವನ್ನು ಕಟ್ಟಿ ಕುಳ್ಳಿರುವ ಶ್ರೀಮನ್ನಾರಾಯಣನು ಸರ್ವದಾ ಎಲ್ಲರಿಂದಲೂ ಧ್ಯಾನಿಸಲ್ಪಡಲಿ! ಎಲ್ಲರಿಂದಲೂ ಆರಾಧಿಸಲ್ಪಡಲಿ!)

(ಮುಂದೆ ಸಾಗುವದು).

ಬೆಂಚ್ ಮೆಜಿಸ್ಟ್ರೇಟರ ಸಭೆ.

(ನಮ್ಮ ಬಾತ್ಮೀದಾರರಿಂದ.)

ಪುಟ್ಟತಪ್ಪಿತಗಳನ್ನು ಗೈವ ಅಪರಾಧಿಗಳ ಶಾಸನದಗೋಸ್ಕರ ಬೆಂಚ್ ಮೆಜಿಸ್ಟ್ರೇಟರೆಂಬಭಿಧಾನದಿಂದ ನ್ಯಾಯಸ್ಥಾನಗಳು ಹಲವು ವರುಷಗಳಿಂದ ನಿರ್ಮಿತವಾಗಿಯವೆ. ಅವುಗಳನ್ನು ಅಲಂಕರಿಸತಕ್ಕ ನ್ಯಾಯಾಧಿಪತಿಗಳಿಗೆ ವೇತನವು ಶೂನ್ಯ. ಅವರ ಶಿರೋರತ್ನವಾಗಿ ಸ್ಥಳಿಕವೇತನಯುಕ್ತರಾದ ಮೇಜಿಸ್ಟ್ರೇಟರು ಅಧ್ಯಕ್ಷರೆನ್ನಿಸಿ ವಿರಾಜಿಸುತ್ತಾರೆ. ಅಧಿಕಪಕ್ಷದವರು ಸಮ್ಮತಿಸುವ ತೀರ್ಮಾನವು ಸ್ವೀಕಾರಾರ್ಹವೆಂಬ ನಿರ್ಣಯವದೆ. ಈ ಕ್ರಮದಿಂದ ನಾಳೆ ಬಾ ನಾಡದು ಬಾ ಎಂಬ ಉಪದ್ರವದಿಂದ ಕಕ್ಷಿಗಾರರು ವಿಮುಕ್ತರಾಗುತ್ತಾರೆ. ಒಟ್ಟಿನಮೇಲೆ ನೀತಿಯ ಉದ್ದೇಶಗಳು ಸರಿಯಾಗಿ ನೆರವೇರುತ್ತವೆ. ಈ ಜಿಲ್ಲೆಯಲ್ಲಿ ಮಂಗಳೂರಲ್ಲಿಯೂ ಉಡಿಪಿಯಲ್ಲಿಯೂ ಇಂತಹ ನ್ಯಾಯಾಧಿಪತಿಗಳು ತಮ್ಮ ಧರ್ಮವನ್ನು ನ್ಯಾಯವಾಗಿ ಅನುಷ್ಠಿಸುತ್ತಾರೆ. ಪರಂತು ಬೇರೆ ಕೆಲವು ಜಿಲ್ಲೆಗಳಲ್ಲಿ ಈ ನ್ಯಾಯಸ್ಥಾನಗಳ ಅಧ್ಯಕ್ಷರಾಗಿ ವೇತನಶೂನ್ಯರಾದ ಮಹನೀಯರನ್ನು ಗವರ್ನಮೆಂಟಿನವರು ನೇಮಿಸುವ ಪದ್ಧತಿಯು ನಡದುಬರುತ್ತದೆ. ಸುಮಾರು ಮೂವತ್ತೈದು ವರುಷಗಳಷ್ಟು ವಯಸು ಮಂಗಳೂರಿನ ಬೆಂಚ್ ನ್ಯಾಯಸ್ಥಾನಕ್ಕೆ ಆಗಿಯದೆ. ಉಡಿಪಿಯಲ್ಲಿ ಈ ಕ್ರಮವು ನಡಿಯತೊಡಗಿ ಇಪ್ಪತ್ತು ಸಂವತ್ಸರಗಳ ಮೇಲಾಯಿತು. ದಿನೇ ದಿನೇ ಇಂಥಾ ನ್ಯಾಯಾಧಿಪತಿಗಳ ನೈಪುಣ್ಯವೂ ಸೌಶೀಲ್ಯವೂ ಶ್ಲಾಘನೀಯವಾಗುತ್ತಾ ಬರುವದು ಸುಚಿನ್ಹೆಯಾಗಿರುವದರಿಂದ ಬೇರೆ ಹೆಸರು ಹೋದ ಜಿಲ್ಲೆಗಳ ಸಾಲಿಗೆ ನಮ್ಮ ಜಿಲ್ಲೆಯೂ ಬಂದಿದೆ ಎಂದು ನಿಷ್ಪಕ್ಷಪಾತಿಗಳೆಲ್ಲರೂ ಒಪ್ಪದಿರಲಾರರು. ಸರಕಾರ

ಉದ್ಯೋಗದಲ್ಲಿ ಬಹುಕಾಲ ಮೆಜಿಸ್ಟ್ರೇಟರಾಗಿ ಚೆನ್ನಾಗಿ ಅನುಭವವುಳ್ಳ ಪ್ಲೀಡರರೂ ನಮ್ಮ ಜಿಲ್ಲೆಯ ವಿಶಿಷ್ಟ ತಾಲೂಕುಗಳಲ್ಲಿ ಇರುತ್ತಾರೆ. ಮಂಗಳೂರಲ್ಲಿ ಅನೇಕ ಅಂಥ ಯೋಗ್ಯ ಪುರುಷರ ಸಂಖ್ಯೆಯು ತುಂಬಾ ಇದೆ ಇಲ್ಲಿಗಾದರೂ ಪ್ರಥಮತ ಬೆಂಚ್ ಮೆಜಿಸ್ಟ್ರೇಟರೊಳಗಿಂದಲೆ ಒಬ್ಬ ಯೋಗ್ಯವಾದ ಅಧ್ಯಕ್ಷನನ್ನಾಗಲೀ ಅಥವಾ ಹೊಸದಾಗಿ ಒಬ್ಬ ಪ್ಲೀಡರನನ್ನಾಗಲಿ ಆ ಸ್ಥಾನವನ್ನು ಅಲಂಕರಿಸಲು ಆರಿಸುವದಕ್ಕೆ ಸೌಕರ್ಯಗಳಿರುವ ಸಂಗತಿ ಗವರ್ನಮೆಂಟಿನವರ ಚಿತ್ತಕ್ಕೆ ವೇದ್ಯವರಿಸಲು ನಮ್ಮ ಜಿಲ್ಲೆಯ ಅನುಭವವನ್ನು ಯಥೇಚ್ಛವಾಗಿ ಫಳಿಸಿಕೊಂಡಿರುವ ನಮ್ಮ ಮಾನ್ಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ ಸಾಹೇಬರು ಯತ್ನಿಸಬೇಕಾಗಿ ಒಂದು ಸೂಚನೆಯನ್ನು ಕೊಡುವದು ಯೋಗ್ಯವೆಂದು ಯಾರು ತಾನೆ ಒಪ್ಪಲಾರರು ಅದೇ ಸಮಯದಲ್ಲಿ ಇನ್ನೊಂದು ಯೋಚನೆ ಗೈಯುವದು ಸಾಂಪ್ರತಕಾಲದಲ್ಲಿ ಪುರವಾಸಿಗಳು ಪಡದ ಪ್ರಜ್ಞೆಗೆ ಅನುರೂಪವಾದದ್ದೆ ಇದುವರೆಗೆ ಮಂಗಳೂರ ಬೆಂಚಿಗೆ ಮೂರನೇ ತರಗತಿಯ ಅಧಿಕಾರ ಮಾತ್ರವಿದೆ. ಎರಡನೆ ತರಗತಿಯ ತಪ್ಪಿತಗಳನ್ನು ಪರಿಶೀಲನ ಮಾಡುವಷ್ಟು ಯೋಗ್ಯತೆ ಅವರಲ್ಲಿದೆಯೆನ್ನಲಿಕ್ಕೆ ಅನುಮಾನವೇಕೆ ಈ ಸೂಚನೆಯನ್ನು ಕೂಡ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಸ್ವೀಕರಿಸ್ವರೆಂದು ಪ್ರತೀಕ್ಷಿಸೋಣ

ಬತ್ತದ ಸೊಸಿಯನ್ನು ಒಂದೊಂದಾಗಿ ನಾಟುವ ಕ್ರಮ

ಮದ್ರಾಸು ಸರಕಾರಿ ವ್ಯವಸಾಯ ಇಲಾಖೆಯವರು ಬತ್ತದ ನಾಟಿಪೈರು ಮಾಡುವದರಲ್ಲಿ ಸೊಸಿಗಳನ್ನು ಗುತ್ತಿಯಾಗಿ ನಾಟುವದಕ್ಕೆ ಬದಲಾಗ ಒಂದೊಂದಾಗಿ ನಾಟಿ ಅಜಮಾಯಿಸಿಮಾಡಿದ್ದರಲ್ಲಿ ಉತ್ಪತ್ತಿಯು ಗುತ್ತಿಯಾಗಿ ನಾಟುವ ಕ್ರಮದಿಂದ ಬರುವದಕ್ಕಿಂತಲೂ ಸುಮಾರು ಒಂದೂವರೆಯಷ್ಟು ಹೆಚ್ಚಿರುತ್ತೆಯಲ್ಲದೆ ಈ ತರಕೆ ಪೈರಿನಿಂದ ಆಗುವ ಬಿತ್ತವೂ ಕೂಡ ಶ್ರೇಷ್ಠವಾಗಿರುತ್ತದೆ ಇದಕ್ಕೆ ಕಾರಣವೇನಂದರೆ, ಗುತ್ತಿಯಾಗಿ ನಾಟುವ ಕ್ರಮದಲ್ಲಿ ೧೫-೨೦ ಸೊಸಿಗಳು ತೆಗೆದುಕೊಳ್ಳುವ ಜಾಗ ಮತ್ತು ಗೊಬ್ಬರವು ಮೇಲ್ಕಂಡ ಕ್ರಮದಲ್ಲಿ ಒಂದೇ ಸೊಸಿ ಒಡೆಯುವದರಿಂದ ನಾಟಿದ ಸೊಸಿಯು ಬಹಳ ಬಲವಾಗಿ ಬೆಳೆಯುವದಕ್ಕೆ ಅವಕಾಶವುಂಟಾಗಿ ತೆನೆಗಳಲ್ಲಿ ಕಾಳುಗಳು ಹೆಚ್ಚಾಗಿಯೂ ಮತ್ತು ದಡವತಿಯಾಗಿಯೂ ಕಟ್ಟುತ್ತವೆ ಪುನಃ ಈ ದಡವತಿಯಾದ ಬಿತ್ತದಿಂದ ಹುಟ್ಟುವ ಸೊಸಿಗಳು ತಾಯಿ ರಸಮಿನ ವೈಲಕ್ಷಣ್ಯಗಳನ್ನೆ ಹೊಂದಿ ಹೆಚ್ಚಾಗಿ ಕೌಲುಗಳೊಡೆದು ಧಾನ್ಯದ ಉತ್ಪತ್ತಿಯೂ ಜಾಸ್ತಿಯಾಗುವದು ಈ ಕ್ರಮವನ್ನು ಬಿಡದೆ ಅನುಸರಿಸುತ್ತಾ ಒಂದರೆ ಕಾಳಿನ ದಡವತಿಯೂ ಸೊಸಿಗಳಲ್ಲಿ ಕೌಲುಗಳು ಒಡೆಯುವ ಶಕ್ತಿಯೂ ಮತ್ತು ಧಾನ್ಯದ ಉತ್ಪತ್ತಿಯೂ ಕ್ರಮೇಣ ಹೆಚ್ಚುತ್ತಲೆ ಬರುವದು ಈ ಅಂಶವು ಪಾಲೂರು ಅಗ್ರಿಕಲ್ಚರಲ್ ಸ್ಟೇಷನ್‌ನಲ್ಲಿ ಒದಗಿದ ಅಜಮಾಯಿಷಿಗಳಿಂದ ನಿರ್ಧರಪಟ್ಟಿದೆ ಇದಕ್ಕಾಗಿಯೇ ೧೯೦೭ ೦೮ ನೇ ಸಾಲಿನಲ್ಲಿ ೧೭ ಬೇರೆ ಬೇರೆ ತಾಕುಗಳಲ್ಲಿ ಒಂದೊಂದೇ ಸೊಸಿ ನಾಟಿ ಬೆಳೆಮಾಡಿ ನೋಡಿದರು [illegible] ಗೆ ೧,೯೫೦ ಪೌಂಡಿನಂತೆ ಬತ್ತ ಹುಟ್ಟುವಳಿಯಾಯಿತು [illegible] ನಲ್ಲಿ ೧೯೦೮ ೦೯ರಲ್ಲಿ ೨,೩೩೪ ಪೌಂಡು ಹುಟ್ಟುವಳಿಯಾಯಿತು ಈ ಎರಡು ಸಾಲುಗಳಲ್ಲಿ ಅಜಮಾಯಿಷಿ ತಾಕುಗಳಿಗೆ ಒಂದೇ ತರದ ಗೊಬ್ಬರವನ್ನು ಒಂದೇ ಪ್ರಮಾಣದಲ್ಲಿ ಹಾಕಿತ್ತು ಮಿಕ್ಕ ಹವಾ, ನೀರು, ಮುಂತಾದ ಸ್ಥಿತಿಗಳಲ್ಲಿ ವ್ಯತ್ಯಾಸವೇನೂ ಇರಲಿಲ್ಲ ಆದ್ದರಿಂದ ಈ ಎರಡನೇ ಸಾಲಿನಲ್ಲಿ ಆದ ಹೆಚ್ಚು ಹುಟ್ಟುವಳಿಗೆ ಸೊಸಿಗಳನ್ನು ಒಂದೊಂದಾಗಿ ನಾಟಿದ್ದ ತಾಕುಗಳಿಂದ ಬಿತ್ತವನ್ನು ತೆಗೆದು ಪೈರುಮಾಡಿದ್ದದ್ದೇ ಕಾರಣವೆಂದು ಹೇಳಬೇಕಾಗುತ್ತೆ

ಈ ಕ್ರಮದಲ್ಲಿ ಒಂದು ವರುಷ ಕೆಲವು ಸೊಸಿಗಳಲ್ಲಿ ಒಂದು ಕೌಲು ಮತ್ತು ಕೆಲವಲ್ಲಿ ಎರಡು ಕೌಲುಗಳು ಇದ್ದವು ಎರಡನೆ ವರುಷ ಮೂರು ಕೌಲುಗಳು ಒಡೆದವು ಮೂರನೆ ವರುಷ ಎಲ್ಲಾ ಸೊಸಿಗಳಲ್ಲು ಮೂರು ಕೌಲುಗಳು ಧಾರಾಳವಾಗಿ ಬಂದು ಕೆಲವಲ್ಲಿ ಐದೂ ಒಡದಿದ್ದವು

ಒಂದೊಂದೇ ಬೇರು ನಾಟುವ ಕ್ರಮದಲ್ಲಿ ಅಗೆಯಲ್ಲಿ ಜಾಸ್ತಿ ಬಿತ್ತ ಬಿಟ್ಟು ಹಾಕಕೂಡದು ಒಂದು ಎಕರೆಯ ನಾಟುವಳಿಗೆ ಬೇಕಾಗುವ ಸೊಸಿಗಳನ್ನು ತಯಾರ ಮಾಡಿಕೊಳ್ಳುವದಕ್ಕೆ ೭ ಸೆನ್ಟು ಅಥವಾ ಸುಮಾರು ೩ ಗುಂಟೆಯಾಗುವಷ್ಟು ಅಗೆ ಸಿದ್ಧಪಡಿಸಿಕೊಂಡು ೭ ಮದ್ರಾಸು ಸೇರು ಬಿತ್ತ ಬಿಟ್ಟುಹಾಕಿದರೆ ಸಾಕಾಗುತ್ತೆ ಅಗೆಗೆ ಚೆನ್ನಾಗಿ ಮಾಗಿದ ದನದ ಗೊಬ್ಬರವನ್ನು ಸಮೃದ್ಧಿಯಾಗಿ ಹಾಕಿದರೆ ಚನ್ನಾಗಿ ಮೊಳಕೆ ಏಳುತ್ತೆ ಸೊಸಿಗಳನ್ನು ಅಗೆಯಲ್ಲಿ ಹಾನೆ ದಿನಗಳು ಬಿಡದೆ ಎಳತಾಗಿರುವಾಗಲೇ ಕಿತ್ತು ನಾಟಬೇಕು ಅಂದರೆ ೫ ತಿಂಗಳ ಫಸಲಿಗೆ ೩೫ ದಿನಗಳಿಗ ಮೀರದ ಸೊಸಿಗಳು ಅನುಕೂಲ. ಮೇಲೆ ಹೇಳಿದಮೇರೆ ಅಗೆಯನ್ನು ತಯಾರುಮಾಡಿಕೊಂಡಲ್ಲಿ ಸೊಸಿಗಳು ಬಲವಾಗುವದಲ್ಲದೆ ಅವನ್ನು ಒಂದೊಂದಾಗಿ ಪ್ರತ್ಯೇಕಿಸುವದೂ ಸುಲಭವಾಗುತ್ತೆ.

ನಾಟುವಾಗ ಸೊಸಿಗೆ ಸೊಸಿ ಎಷ್ಟು ದೂರ ಇರಬೇಕೆಂಬುವ ಭಾಗದಲ್ಲಿ ಎಕರೆಗೆ ೧,೫೦೦ ಮದ್ರಾಸು ಸೇರು ಹುಟ್ಟುವಳಿಯಾಗುವ ಜಮೀನಿನಲ್ಲಿ ಸೊಸಿಯಿಂದ ಸೊಸಿಗೆ ಒಂದು ಗೇಣು ಇದ್ದರೆ ಸಾಕು. ೧,೫೦೦ ಸೇರು ಆಗುವ ಜಮೀನಾದರೆ ⅔ ಗೇಣು ಇರಬಹುದು. ೫೦೦ ಸೇರು ಮತ್ತು ಕಮ್ಮಿ ಉತ್ಪತ್ತಿಯಾಗುವ ಭಾಗದಲ್ಲಿ ½ ಗೇಣು ಇರಬೇಕಾಗುತ್ತೆ ಅಪೂರ್ವವಾಗಿ ೧,೫೦೦ ಸೇರು ಆಗು ಉತ್ಕೃಷ್ಟ ಜಮೀನಾದರೆ ೨ ಗೇಣು ಬಿಟ್ಟರೂ ಬಾಧಕವಿಲ್ಲ ಆದರೆ ಈ ವಿಧಾನವು ನಿಕೃಷ್ಟ ಜಮೀನಿಗೆ ಅಷ್ಟು ಅನುಕೂಲಿಸುವಂತೆ ಇಲ್ಲ ಯಾಕಂದರ ಒಂದೊಂದೇ ಸೊಸಿ ನಾಟುವದಕ್ಕೆ ತಗಲುವ ಆಳಿನ ಖರ್ಚು ಜಾಸ್ತಿಯಾಗಿರುತ್ತೆ

(ವ್ಯವಸಾಯ ಗಜೇಟ್)

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಯಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ ೬ಣ್ಣೆ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು, ದ ಕ

ಕೆನರಾ ಸ್ಯೂಗರ್ ವರ್ಕ್ಸ್ (ಲಿಮಿಟೆಡ್) ಕುಂದಾಪುರ ಎಂಬ ಕುಂದಾಪುರದಲ್ಲಿ ಸ್ಥಾಪಿತವಾಗುವ ಸಕ್ಕರೆ ಕಾರ್ಖಾನೆಯ ಸೂಚನಾ ಪತ್ರವನ್ನು ನಮ್ಮ ಅವಗಾಹನೆಗೆ ಕಳುಹಿಸಿಕೊಟ್ಟಿರುವರು ಕಾರ್ಖಾನೆಯು ರಿಜಿಸ್ತ್ರಿಮಾಡಲ್ಪಟ್ಟು ಲಿಮಿಟೆಡ್(ಪರಿಮಿತ) ಕಂಪೆನಿಯವರಿಂದ ಸ್ಥಾಪಿಸಲ್ಪಡುವದು ಪ್ರಕೃತ ಇದರ ನಿಯಮಿತ ಬಂಡವಾಳವು ರೂ ೫೦೦೦೦ಗಳಾಗಿದ್ದು ಇದನ್ನು ರೂ ೧೦ರ ೫೦೦ ಪಾಲುಗಳಾಗಿ ವಿಭಾಗಿಸಿರುವರು ಕಾರ್ಖಾನೆಯು ಅಭಿವೃದ್ಧಿಸಿದಂತೆ ಬಂಡವಾಳವನ್ನು ಸಹಾ ಹೆಚ್ಚಿಸುವರು ತಾಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರೂ ಜಮೀನುದಾರರೂ ಆದ ಮ ರಾ ರಾ ಎಚ್ ನಾದಪ್ಪಕಾರಂತ, ರಾ ಬಿ ವೆಂಕಟರಮಣ ಹೊಳ್ಳ ಬಿ ಎ ರಾ ಎಸ್ಸೂರ ಸುಬ್ಬಯ್ಯಸೆಟ್ಟಿ ಪಟೇಲ್, ರಾ ಸಾವುಕಾರ ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತ್, ರಾ ಕುಂದಾಪುರ ಕೃಷ್ಣಬಂಡಾರಿ ವಕೀಲ ಇವರು ಈ ಕಂಪೆನಿಯ ಡಿರೆಕ್ಟರಾಗಿರುವರು

ಮೇಲೆ ಹೆಸರು ಕಾಣಿಸಿದ ಐದು ಜನ ಡಿರೆಕ್ಟರುಗಳಿಂದ ಪ್ರಕಟಿಸಲ್ಪಟ್ಟ ಸೂಚನಾ ಪತ್ರದಲ್ಲಿ ಸಕ್ಕರೆ ಕಾರ್ಖಾನೆಯು ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸಲ್ಪಡುವ ಅವಶ್ಯಕತೆಗೆ ಹಲವು ಕಾರಣಗಳನ್ನು ಕೊಟ್ಟಿರುವರು ದೇಶದ ಎಲ್ಲಾ ಕಡೆಗಳಲ್ಲಿಯೂ ಸ್ವದೇಶ ಕೈಗಾರಿಕೆ ಅಭಿವೃದ್ಧಿಗಳ ಬಗ್ಗೆ ವಿಶೇಷ ಪ್ರಯತ್ನಗಳು ನಡಿಯುತ್ತಿರುವಾಗ ನಮ್ಮ ಜಿಲ್ಲೆಯಲ್ಲಿ ಯಾವುದಾದರೂ ಒಂದು ನೂತನ ಕೈಗಾರಿಕೆಯನ್ನು ಕೈಕೊಳ್ಳದಿರುವುದು ಯುಕ್ತವಲ್ಲ ನಮ್ಮ ಜಿಲ್ಲೆಗೆ ದವಸುಧಾನ್ಯಗಳನ್ನು ಬೆಳೆಸುವ ಏರಿಯ ಖರ್ಚುಮಾತ್ರ ದೊರೆಯುತ್ತಿರುವಾಗ ಇತರ ಕಡೆಗಳಲ್ಲಿ ಇವುಗಳಿಂದ ಇನ್ನಷ್ಟುಬೇಕಾದ ಜೀನಸುಗಳನ್ನು ತಯಾರಿಸಿ ಹಣ ದುಡಿಯುತ್ತಿರುವರು ಸರಕಾರದವರು ಸ್ವದೇಶ ಉದ್ಧರಣೆಯ ಸಾಹಸಗಳಿಗೆ ಪ್ರೋತ್ಸಾಹ ಕೊಡುತ್ತಿರುವರು

ಎಳುಕೋಟಿ ರೂಪಾಯಿ ಮೌಲ್ಯದ ಸಕ್ಕರೆಯು ನಮ್ಮ ದೇಶದಲ್ಲಿ ಇತರ ದೇಶಗಳಿಂದ ಬರುತ್ತಿರುವುದು ದೇಶದಲ್ಲಿಯೇ ಈ ಎಲ್ಲಾ ಸಕ್ಕರೆಯು ತಯ್ಯಾರಾಗುವ ಕಾರ್ಖಾನೆಗಳು ಬಹಳ ಕಡಿಮೆಯಾಗಿರುವವು ಪ್ರಜಾವರ್ಗವು ಸ್ವದೇಶಿ ಸಕ್ಕರೆಯನ್ನೇ ಉಪಯೋಗಿಸಲು ಬಯಸುತ್ತಿರುವುದರಿಂದ ಅಸಹ್ಯವಾದ ಮತ್ತು ನಿರಾಕ್ಷೇಪಕರವಾದ ವಸ್ತುಗಳಿಂದಲೇ ಸಕ್ಕರೆಯನ್ನು ತಯ್ಯಾರಿಸುವರೆ ಪ್ರಕೃತ ಸಣ್ಣದೊಂದು ಕಾರ್ಖಾನೆಯನ್ನು ಕುಂದಾಪುರದಲ್ಲಿ ಸ್ಥಾಪಿಸುವುದೆಂತ ನಿರ್ಣಯಿಸಲ್ಪಟ್ಟಿದೆ ಎಂಬೀ ಕಾರಣಗಳಿಂದ ಡಿರೆಕ್ಟರವರು ಸಕ್ಕರೆ ಕಾರ್ಖಾನೆಯ ಅವಶ್ಯಕತೆಯನ್ನು ವ್ಯಕ್ತಗೊಳಿಸಿರುವರು ಕುಂದಾಪುರದ ನೆರೆಯಲ್ಲೆಲ್ಲಾ ವಿಶೇಷವಾಗಿ ಕಬ್ಬನ್ನು ಬೆಳಸುವ ಗ್ರಾಮಗಳಿರುವುದರಿಂದ ಇಲ್ಲಿ ಪೈದಾಸಾಗುವ ಕಬ್ಬು ಸಕ್ಕರೆಯನ್ನು ತಯ್ಯಾರಿಸುವ ಒಂದು ದೊಡ್ಡ ಕಾರ್ಖಾನೆಗೆ ಸಾಕಾಗಿರುವುದೆಂತ ಸಹಾ ಗೊತ್ತುಮಾಡಿರುವರು ಸ್ವಲ್ಪ ಸ್ವಲ್ಪವಾಗಿ ಸಕ್ಕರೆಯನ್ನು ತಯ್ಯಾರಿಸಲು ಪ್ರಾರಂಭಿಸುವೆವೆಂದೂ ಕಂಪೆನಿಯ ವಿಭಾಗಿಸೊಡನೆಯೇ ಈ ಕೈಗಾರಿಕೆಯಲ್ಲಿ ತರಬೇತು ಹೊಂದಿದವರಿಂದ ಬೇಕಾದ ಮಾಹೀತಿಯನ್ನು ಪಡಿಯವರಾಗಿಯೂ ಸೂಚಿಸಲ್ಪಟ್ಟಿರುವುದು ಕಾರ್ಖಾನೆಯು ಬೇಗನೇ ಸ್ಥಾಪಿಸಲ್ಪಟ್ಟು ಅಭಿವೃದ್ಧಿಸಲೆಂದು ನಮ್ಮ ಅಪೇಕ್ಷೆಯಾಗಿರುವುದು [illegible] ನೂತನ ಕೈಗಾರಿಕೆಗಳನ್ನು ಸ್ಥಾಪಿಸಿ ಇತರರಿಗೆ ಈ ವಿಷಯಗಳಲ್ಲಿ ಮುಂದಾಳುಗಳಾಗುವ ಪೂರ್ಣ ಜವಾಬ್ದಾರಿಯನ್ನರಿತು ವಿದ್ಯಾವಂತರೂ ಸುಶಿಕ್ಷಿತರೂ ಆದ ಈ ಸದ್ಗೃಹಸ್ಥರು ಕೈಕೊಂಡಿರುವ ಈ ಕಾರ್ಯಸಾಧನೆಯು ಸ್ತುತ್ಯವಾಗಿರುವುದು.

ಹೈದರ ಆಲಿಯ ಕುರಿತು.

ಪುಣೆಯ ಗೋಖಲೆಯವರಿಂದ ಸ್ಥಾಪಿಸಲ್ಪಟ್ಟ ಭಾರತ ಸೇವಾಸದನ ಸಂಘದ ಕಡೆಯವರಿಂದ ರಾ| [illegible]ಸಿ. ಆದಿಶೇಷ ನಾಯಡುರವರು, ಅಂಗ್ಲಾಳದಲ್ಲಿ ನಮ್ಮ ಕೊಂಗ್ರೆಸು ಸಭೆಯ ಅಭಿಪ್ರಾಯವನ್ನು ಪ್ರತಿಪಾದಿಸುವ ಬಗ್ಗೆ ರಚಿಸಲ್ಪಟ್ಟ 'ಇಂಡಿಯಾ' ಎಂಬ ಪತ್ರ ಪ್ರಕಟಣೆಯ ಸಹಾಯಾರ್ಥವಾಗಿ ದ್ರವ್ಯಸಂಗ್ರಹವನ್ನು ಮಾಡುವರೆ ಬಂದಿರುವರು. ದೇಶಾಭಿಮಾನಿಗಳೆಲ್ಲರೂ [illegible] ಸಹಾಯವನ್ನು [illegible] ವಿಜ್ಞಾಪನೆಯಾಗಿರುವುದು.
~~~

[illegible]. ಇದೇ ಕಳೆದ ಶನಿವಾರ ತಾರೀಕು [illegible] ದೇಸ್ಸೈ ಡಿಸ್ತ್ರಿಕ್ಟ್ ಜಡ್ಜ್ ದೊರೆಗಳವರು ಇಲ್ಲಿಯ ಮುನ್ಸಿಫ್ ಕೋರ್ಟು ಸಂದರ್ಶನೆ ಬಗ್ಗೆ ಬಂದಿದ್ದರು. ಕೋರ್ಟು ತನಿಕೆಯು ಮಧ್ಯಾನ್ಹದೊಳಗೆ ಮುಗಿಸಿ ಸಾಯೊಂಕಾಲ ೫ ಗಂಟೆಗೆ ಟೆನ್ನೀಸ್ ಚೆಂಡಾಟಕ್ಕೆ ಮದ್ರಾಸ್ ಅತ್ತಕಡೆಯಿಂದ ಬಂದಿರುವ ಪೋಲೀಸ್ ಡಿಪ್ಯುಟಿ ಇನ್ಸ್ಪೆಕ್ಟರ್ ಜನರಲ್ ದೊರೆಗಳವರು ಸಮೇತ ದಯಮಾಡಿದರು. ಇಲ್ಲಿ ಚೆಂಡಾಟದ ಪ್ರಮುಖರಾದ ಮ. ರಾ. ಕೆ. ಪಿ. ವಿಟ್ಟಲ್‌ರಾಯರೂ, ವಕೀಲ್ ಎಮ್. ಎನ್. ಪ್ರಭುಗಳೂ, ವಕೀಲ್ ಕೆ. ಪಿ. ಅಚ್ಚುತಯ್ಯನವರೂ ದೊರೆಗಳೀರ್ವರ ಕೂಡೆ ಸುಮಾರು ೨ ತಾಸುಗಳ ವರೆಗೆ ಚೆಂಡಾಟವಾಡಿ ದೊರೆಗಳೀರ್ವರನ್ನು ಚೆಂಡಾಟದಿಂದಲೂ, ಕಿಂಚಿತ್ ಫಲಹಾರ ಭಕ್ಷ್ಯಗಳಿಂದಲೂ, ಉಪಚಾರೋಕ್ತಿಗಳಿಂದಲೂ ಮನ್ನಿಸಿ ಕಳುಹಿಸಿದರು.

ಇದೇ ತಾರೀಕು ೧೬ನೇ ಶನಿವಾರ ಸಾಯಂಕಾಲ ೫ ಘಂಟೆ ಮೈಲ್ ಭಂಡಿಯಲ್ಲಿ ಕಲ್ಲಿಕೋಟೆಯಿಂದ ಜಿಲ್ಲಾ ರಿಜಿಸ್ತ್ರಾರ ಮ. ರಾ. ಯಂ. ಮುಕುಂದರಾಯರವರು ರಜೆಯ ಮೇಲೆ ಇಲ್ಲಿಗೆ ಬಂದಿರುವರು.

ಕಳೆದ ತಿಂಗಳ ತಾ. ೨೪ನೇ ಪತ್ರದಲ್ಲಿ ಪ್ರಸ್ತಾಪಿಸಿದ ನಾಟಕಶಾಲೆಯ ಕೆಲಸವು ಮುಗಿದು ಶಾಲೆಯು ತಯ್ಯಾರಾಗಿದೆ. ನಾಟಕವಾಡುವ ಜನ ಮುಂತಾದ ಸಂಗ್ರಹ ಇನ್ನೂ ಇಲ್ಲಿ ಒಂದು ತಲ್ಪಲಿಲ್ಲ. ಈ ಸಮ್ಮಂಧ [illegible] ಬೆಂಗಳೂರತ್ತಕಡೆ ಹೋಗಿರುತ್ತಾರಾಗಿ ವರ್ತಮಾನ ಕೇಳುತ್ತೇನೆ. ಇಲ್ಲಿ ನಾಟಕಶಾಲೆಯನ್ನು ಅತ್ಯಾದರದಿಂದ ಕಟ್ಟಿಸಿದ ಸದ್ಗೃಹಸ್ತರನ್ನೇ ನಾಟಕದ ವ್ಯವಸ್ಥೆ [illegible] ವಂತೆ ಕೇಳಿಕೊಂಡಿರುವರಂತೆ. ಇತರ [illegible] ದರೂ ಈ ಕೆಲಸವನ್ನು ನಿರ್ವಹಿಸುವುದು ಕಷ್ಟಸಾಧ್ಯ.

ಮುಲ್ಕಿ. ಶಾಲಾ ಅಸಿಸ್ಟಾಂಟ್ ಇನ್ಸ್ಪೆಕ್ಟರಾದ ಮ. ಯು. ರಾಘವೇಂದ್ರ ರಾಯರವರು ಇಲ್ಲಿಗೆ ವಿಜಯಂಗೈದು ತಾರೀಕು ೧೧-೧೨ರಲ್ಲು ಇಲ್ಲಿಯ ಪಿ. ಜಿ. ಯಂ. ಸಕಂಡರಿ ಶಾಲೆಯನ್ನು ಪರೀಕ್ಷಿಸಿ, ಉಪಾಧ್ಯಾಯರುಗಳಿಗೆ ಕಲಿಸುವ ಬಗ್ಗೆ ಕೆಲವು ಆಲೋಚನೆಗಳನ್ನಿತ್ತರಲ್ಲದೆ ಶಾಲಾ ಅಭಿವೃದ್ಧಿಯನ್ನು ನೋಡಿ ಬಹು ಸಂತೋಷಪಟ್ಟು ಮಂಗಳೂರಿಗೆ ಹಿಂತೆರಳಿದರು. ತಾ. ೧೬ರಲ್ಲು ಉಡುಪಿಯಿಂದ ಎಮ್. ಎನ್. ಕಾಮತ್ ಎಂಬವರು ಹೊಸ ಫೋನೋಗ್ರಾಫನ್ನು ಕಲಿಸುವ ಬಗ್ಗೆ ಬಂದು ಕೆಲಸ ಶುರುಮಾಡಿರುವರು.

ತಾರೀಕು ೧೯ರಲ್ಲು ಇಲ್ಲಿಯ ಬೋರ್ಡ್ ಶಾಲೆಯಲ್ಲಿ ತಂಜಾವೂರಿನಿಂದ ಬಂದಿದ್ದ ಒಬ್ಬ ತಮಾಶೆಗಾರನಿಂದ ನಾನಾ ತರದ ಪಕ್ಷಿಗಳ ಕೂಗು, ಮೃಗಗಳ ಝೇಂಕಾರ, ನಾನಾ ತಮಾಶೆಗಳು ಆಡಲ್ಪಟ್ಟು ಮಕ್ಕಳಿಗೆ ಉಚಿತವಾಗಿ ತೋರಿಸಲಾಯಿತು.

ಕೆಲವು ತಿಂಗಳ ಹಿಂದೆ ಇಲ್ಲಿ ಒಂದು ವ್ಯವಸಾಯ ಸಂಘವು ನಿರ್ಮಿತವಾಗಿ ಪ್ರತಿ ತಿಂಗಳ ಕಡೇ ಶನಿವಾರ ಮೀಟಿಂಗುಗಳನ್ನು ನಡಿಸಬೇಕೆಂಬದಾಗಿ ನಿರ್ಣಯಿಸಲಾಯಿತಷ್ಟೆ. ಆದರೆ ಸಂಘದ ಕಾರ್ಯದರ್ಶಿಗಳು ಇಷ್ಟರ ವರೆಗೆ ಯಾವದೊಂದು ಕೂಟವನ್ನಾಗಲೀ ನಡಿಸದೆ ಇರಲು ಕಾರಣವೇನೋ ಹೇಳಲು ಕಷ್ಟಸಾಧ್ಯವೇ ಸೈ. ಮುಂದಕ್ಕಾದರೂ ತಾವು ಕೈಕೊಂಡ ಕಾರ್ಯದಲ್ಲಿ ಬಡ ಬೇಸಾಯಗಾರರಿಗೆ ಕಿಂಚಿತ್ತಾದರೂ ಪ್ರಯೋಜನ ಸಿಕ್ಕುವಂತೆ ಮಾಡುವವರಾಗಲಿ.

ಕುಂದಾಪುರ. ಇದೇ ತಿಂಗಳ ತಾರೀಕು ೯ನೇ ಶನಿವಾರ ದಿನ ಕುಂದಾಪುರ ಮಿಶ್ಯನ್ ಶಾಲೆಯಲ್ಲಿ ನಮ್ಮ ಕುಂದಾಪುರ ತಾಲೂಕು ಸುಪರ್‌ವ್ಯಾಸರ್ ಮ|| ರಾ|| ರಾ|| ಮಂಜೇಶ್ವರ ರಘುನಾಥರಾಯರು ಮೂಲಪಾಠಶಾಲಾ ಉಪಾಧ್ಯಾಯರ ಕೂಟವನ್ನು ಸೇರಿಸಿದರು. ಈ ಮಾದರಿಯ ಕೂಟವು ನಮ್ಮ ತಾಲೂಕಿಗೆ ಇದೇ ಪ್ರಥಮ ಸರ್ತಿಯಾಗಿದೆ. ಬಣ್ಣಗಳನ್ನು, ಆಕೃತಿಗಳನ್ನು, ಭೂಗೋಳವನ್ನು, ಸೃಷ್ಟಿಜ್ಞಾನದ ಪಾಠಗಳನ್ನು, ಚಿಕ್ಕ ಮಕ್ಕಳಿಗೆ ಸುಲಭವಾಗಿಯೂ ವಿನೋದಕರವಾಗುವ ಹಾಗೆಯೂ ಕಲಿಸಲಿಕ್ಕೆ ಕುಂದಾಪುರ ಮಿಶ್ಯನ್ ಶಾಲೆಯ ಉಪಾಧ್ಯಾಯರುಗಳು ಸುಪರ್‌ವ್ಯಾಸರರ ಸೂಚನೆಗಳ ಮೇರೆಗೆ ತಯ್ಯಾರಿಸಿದ ಮತ್ತು ಸಂಗ್ರಹಿಸಿದ ಅನೇಕ ತರದ ಉಪಕರಣಗಳನ್ನು ಸೇರಿದ ಉಪಾಧ್ಯಾಯರುಗಳಿಗೆ ತೋರಿಸಿ ಪ್ರತಿ ಒಂದರ ಉಪಯೋಗವನ್ನು ಸುಪರ್‌ವ್ಯಾಸರರು ವಿವರಿಸಿದರು. ತೋರಿಸಲ್ಪಟ್ಟ ಉಪಕರಣಗಳ ಪೈಕಿ ತಾಲೂಕು [illegible] ಆವೆ ಮಣ್ಣಿನಿಂದ ತಯ್ಯಾರಿಸಿ ಬಣ್ಣಹಾಕಿದ (ಪಕಪ್) [illegible] ಪರ, ಕಾಗದ ಕತ್ತರಿಸುವ, ಕಾಗದ [illegible] ಕಾಗದ ಕತ್ತರಿಸುವ ವೃತ್ತಿಗಳ ಕೆಲವು [illegible] ಕರಿಂದ ತಯಾರಿಸಲ್ಪಟ್ಟ ಕೆಲವು ಆವೆ ಮಣ್ಣಿನ ವಸ್ತುಗಳು ಮತ್ತು ಚಿತ್ರಗಳು ಬಹಳ ಚಮತ್ಕಾರವಾಗಿದ್ದವು. ಕೂಟದ ಅಧ್ಯಕ್ಷರಾದ ಶಾಲಾ ಸಬ್ ಅಸಿಸ್ಟಾಂಟ್ ಇನ್ಸ್ಪೆಕ್ಟರರಾದ ಮ. ರಾ|| ರಾ|| ಕೆ. ಎನ್. ವಿಶ್ವೇಶ್ವರ ರಾಯರು ಉಪಾಧ್ಯಾಯರಿಗೆ ನವೀನವಾಗಿ ತೋರಿಸಿದ ಈ ರೀತಿಯ ಶಿಕ್ಷಣದ ಉದ್ದೇಶವನ್ನು ಎಲ್ಲಾ ಉಪಾಧ್ಯಾಯರುಗಳಿಗೆ ಸಂಕ್ಷೇಪವಾಗಿ ವಿವರಿಸಿದರು. ಕುಂದಾಪುರ ಮಿಶ್ಯನ್ ಶಾಲಾ [illegible] ಮತ್ತು [illegible] ರೆವರೆಂಡ್ ಗಿಟ್ಸ್, [illegible] ಈ ರೀತಿ [illegible] ದಲ್ಲಿ ಉಪಾಧ್ಯಾಯರುಗಳಿಗೆ [illegible] ಹುಟ್ಟಿಸಲಿಕ್ಕೆ ಪ್ರಯತ್ನಿಸುತ್ತಿರುವ ಸುಪರ್‌ವ್ಯಾಸರರ ಆತುರವನ್ನು ನೋಡಿ ಬಹಳ ಸಂತೋಷಪಟ್ಟರು. ಈ ರೀತಿಯ ಚಿಕ್ಕ ಪ್ರದರ್ಶನ [illegible] ಉಪಾಧ್ಯಾಯರುಗಳು ಪ್ರಯತ್ನಪಟ್ಟರೆ ಉಪಾಧ್ಯಾಯರ ಕಲಿಸುವ ಕೆಲಸವು ಸುಲಭವಾಗುವುದಲ್ಲದೆ [illegible] ತಯಾರು [illegible]

ಪುತ್ತೂರು. ನಮ್ಮ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರ ಈ ವರ್ಷ [illegible] ತಿಳಿದು ಬಂದಿದೆ.

ಈ ತಿಂಗಳ ತಾ. 1[illegible]ರಲ್ಲಿ [illegible] ಕೆರೆಗೆ ಹೋಗಿ ಮಲಗಿದ್ದಾಗ ತಿಳಿಯುತ್ತದೆ.

ಮನೆಯೊಂದು ಗ್ರಾಮದಲ್ಲಿ ತಾ. 16ರಲ್ಲಿ [illegible] ತನ್ನ ಹೊಟ್ಟೆಗೆ [illegible] ತಂದಿರುವರು.

ನಮ್ಮ ಇಲ್ಲಿಯ [illegible] ಕವನ್ ಇಸ್ಮಾಯಿಲ್ ಸಾಹೇಬರಲ್ಲಿ ರಮ್ಜಾನ್ ಹಬ್ಬದ ಉಪವಾಸ ನಿಮಿತ್ತ ಸುಮಾರು ೪00 ನರ ಪೈಕಿ ಪ್ರಥಮಕ್ಕೆ [illegible] ತುಂಡು ನಗದು [illegible] ಬಾಕಿಯವರಿಗೆ ಒಂದಾಣೆಯಂತೆ ಧರ್ಮವನ್ನಿತ್ತರು.

ವಿವಿಧ ವಿಷಯಗಳು

ಮಹಾಮಾರಿ ರೋಗಗಳಿಂದ ಬ್ರಿಟಿಷ್ ಹಿಂದುಸ್ಥಾನದಲ್ಲಿ ಉಂಟಾದ ಸಾವಳಿಯು ಈ ಕೆಳಗಿನ ಪಟ್ಟಿಯಿಂದ ವ್ಯಕ್ತವಾಗುವುದು:—

	ಕೊಲೆರಾ.	ಸಿಡುಬು	ಪ್ಲೇಗು
೧೯೦೩	೩೦೧,೯೬೭	೯೩,೦೩೯	೭೦೧,೮೯೩
೧೯೦೪	೧೯೨,೩೨೭	೫೫,೭೩೪	೯೮೩,೦೧೦.
೧೯೦೫	೪೩೯,೯೫೦	೭೦,೦೩೮	೯೪೦,೧೭೪.
೧೯೦೬	೬೯೦,೫೫೧	೧೦೯,೫೮೧	೩೦೦,೩೫೫.
೧೯೦೭	೪೦೮,೧೯೦೨	೧೦೩,೯೮೮	೧,೧೭೬,೨೨೨.

ಈ ರೀತಿ ೧೮೯೬ನೇ ವರುಷದ ವರೆಗೆ ಬ್ರಿಟಿಷ್ ಹಿಂದುಸ್ಥಾನದಲ್ಲಿ ಪ್ಲೇಗು ಸಿಡುಬು ಕೊಲೆರಾ ಮೊದಲಾದ ರೋಗಗಳಿಂದ ಜನರು ಮೃತಪಟ್ಟಿರುವರು. ನಂತರ [illegible] ಮೇಲೆ ವಾಂತಿಭೇದಿ ರೋಗದಿಂದ ವರುಷ ಒಂದಕ್ಕೆ ೪೦೫,೧೭೫, ಜನರೂ ಸಿಡುಬು ರೋಗದಿಂದ [illegible] ಜನರೂ ಮೃತಪಟ್ಟಿರುವರೆಂದು ತೋರಿಬರುವುದು. ಆದರೆ ಪ್ಲೇಗು ಮತ್ತು ಮಲೆಜ್ವರದಿಂದ ಹಿಂದುಸ್ಥಾನದಲ್ಲಿ ಮರಣಪಟ್ಟವರ ಸಂಖ್ಯೆಯು ಬಹಳ ಅಧಿಕವಾಗಿರುವುದು. ಪ್ಲೇಗು ತಲೆದೋರಲು ಪ್ರಾರಂಭವಾದಂದಿನಿಂದ ಎಂದರೆ ೧೮೯೬ ನೇ ವರುಷದಿಂದ ಪ್ಲೇಗಿನ ಸಾವಳಿಯು ೧೯೦೭ ನೇ ವರುಷದಲ್ಲಿ ವಿಪರೀತವಾಗಿದ್ದು ಒಂದು ಮಿಲಿಯಕ್ಕಿಂತ ಹೆಚ್ಚಾದ ಜನರು ಮೃತಪಟ್ಟಿರುವರು. ಪ್ಲೇಗು ಸುರುವಾಗಿ ೧೨ ವರುಷಗಳಾದವು. ಒಟ್ಟಿನ ಮೇಲೆ ಈ ಸಮಯದೊಳಗೆ ಮೃತಪಟ್ಟವರ ಸಂಖ್ಯೆಯು ೫ ಮಿಲಿಯಕ್ಕಿಂತ ಹೆಚ್ಚಾಗಿರುವುದು. ಎಲ್ಲಾ ಸಂಸ್ಥಾನಗಳಿಗಿಂತ ಮದ್ರಾಸು ಸಂಸ್ಥಾನದಲ್ಲಿಯೇ ಪ್ಲೇಗು ಮರಣಗಳ ಸಂಖ್ಯೆಯು ಕಡಿಮೆಯಾಗಿರುವುದು. ಪ್ಲೇಗು ರಹದಾರಿ ಕ್ರಮ, [illegible] ಸತ್ತುಬಿದ್ದ ನಿವಾಸಸ್ಥಳಗಳನ್ನು ಬಿಡುವುದು ಮೊದಲಾದ ವಿಧಾನಗಳು ಬಹಳವಾಗಿ ಮದ್ರಾಸು ಸಂಸ್ಥಾನದಲ್ಲಿ ಜ್ಯಾರಿಯಲ್ಲಿರುವುದರಿಂದ ಪ್ಲೇಗು ಮರಣಗಳು ಈ ರೀತಿ ಕಡಿಮೆಯಾದವೆಂಬದಾಗಿ ಅಭಿಪ್ರಾಯಪಟ್ಟಿರುವರು.

ಜೀವಸುಗಳ ಧಾರಣೆ, ಮಂಗಳೂರು

ಬಿಳಿ ಮಸ್ಕತಿ ಅಕ್ಕಿ	5—8—0
ಗುಮ್ಮ ಮಸ್ಕತಿ	4-14—0
ಬೈಲು ಸುಗ್ಗಿ	4-14—0
ಮಯಂ ಗುಮ್ಮ ರಾಶಿ	4—8—0
ಹೊಸ ಗುಮ್ಮ ರಾಶಿ	3-10—0
ಹೊಸ ಚಕ್ಕ	1-10—0
ಮಸ್ಕತಿ ಬೆಳ್ತಿಗೆ	5—0—0
ರಂಗೂನ್ ಬೆಳ್ತಿಗೆ ಗೋಣಿ	7—6—0
ಮೂರು ಗೋಣಿ ೧ ಮುಡಿ 20	7-10—0
ಉಪ್ಪು ಗೋಣಿ ೧ರ	3—6—0
ಕೊಪ್ರಿ ಎಣ್ಣೆ ಮಣ	6—4—0
ಕಾಪಿ ಖಂಡಿ ೧ರ	205—0—0
ಕಾಳು ಮೆಣಸು ಖಂಡಿ	120—0—0
ಬಿಳಿ ಗೋಟು ಅಡಿಕೆ	72—0—0

ಕಲ್ಕತ್ತಾ ರಂಗೂನ್ ವಗೈರೆ ಎಲ್ಲಾ ಪ್ರದೇಶಗಳಲ್ಲಿ ಅಕ್ಕಿ ಪೈರುಗಳು ಧಾರಾಳವಾಗಿರುವದರಿಂದ ನಮ್ಮ ಜಿಲ್ಲೆಯಲ್ಲಿ ಅಕ್ಕಿ ಭತ್ತಕ್ಕೆ ಇನ್ನೂ ಕ್ರಯ ತಗ್ಗುವ ಸಂಭವವಿದೆ.

ಯುವತೀರೋಗಿಯರಿಗೋಸ್ಕರ ತಯಾರಿಸಿದ
ಸೂಲಗಿತ್ತಿಯರಾದ ಕಮಲಾಬಾಯಿಯವರ
ಅಬಲಾ ಸಂಜೀವಿನೀ ಗುಳಿಗೆಗಳು.

ಇವು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಮಾಡುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡು ಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ನಿವಾರಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯು ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧ ಕ್ರಯ ೧ ರೂ. ವಿ. ಪಿ. ಅಂಚೆ ಕಾಸಲು [illegible]

ಸೂಲಗಿತ್ತಿಯರಾದ ಕಮಲಾಬಾಯಿ, [illegible]
[illegible] ಮುಂಬೈ.

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ.

ಬಾಟ್ಲಿ ಒಂದರ ೯ ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೆಗೆ ಹೋಗುವದಿಲ್ಲ.

ಬಾಟ್ಲಿ ಒಂದರ ೪ ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು. ಇದನ್ನು ಉಪಯೋಗಿಸಿದರೆ ತಲೆಯ ಮೆದುಳು ತಂಪಾಗುವದು, ಮತ್ತು ಸಂತೋಷಕರವಾಗಿ ನಿದ್ದೆ ಬರುವದು.

ಬಾಟ್ಲಿ ಒಂದರ ೬ ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ. ಇದರಿಂದ ಮೆದುಳು ತಂಪಾಗುವದು. ಇದು ಹೆಂಗಸರ ಪ್ರೀತಿಕರವಾದ ಕೂದಲುಗಳಿಗೆ ಸಹಾಯಕರ. ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲಿ ಒಂದರ ೬ ಆಣೆ

ವಿಶೇಷ ಉಪಯೋಗವುಳ್ಳ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ ಸಂಧಿವಾತ, ಜಖಮು, ಗಾಯ, ಉರಿ, ಶೀತ ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ. ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ. ಸಾವಿರಾರು ಜನರು ಗುಣಹೊಂದಿರುತ್ತಾರೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ವಾಪಸು. ಬಾಟ್ಲಿ ಒಂದಕ್ಕೆ ೯ ಆಣೆ. ೬ ಬಾಟ್ಲಿಗಳಿಗೆ 2 ರೂ 10 ಆಣೆ. ೧೨ ಬಾಟ್ಲಿಗಳಿಗೆ ... ಕಮ್ಮಿ ಕ್ರಯದಿಂದ ಮಾರುತ್ತೇವೆ.

ವಿಳಾಸ — ಕ. ರಾ. ಪಾಟಕ್ ಮತ್ತು ಕಂಪೆನಿ,
ಬೀಕಾನ್‌ವಾರ್ತ ರೋಡ್ ಮುಂಬಯಿ

ಹಿಂದುಸ್ಥಾನ ಕೋಓಪರೇಟಿವ್ ಇನ್ಸ್ಯುರೆನ್ಸ್ ಸೊಸೈಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು —14 ಹೇರ್ ಸ್ಟ್ರೀಟ್ ಕಲ್ಕತ್ತಾ.
ಬ್ರೆಂಚ್ ಆಫೀಸುಗಳು —42 ಎಲ್ಫಿನ್ಸ್ಟನ್ ಸರ್ಕಲ್ ಮುಂಬಯಿ
೫ ಜೆಟ್ಟಿ ಪೇಟೆ, ಮದ್ರಾಸು.
೧೯೦೬ರಲ್ಲಿ ಸ್ಥಾಪಿಸಲ್ಪಟ್ಟಿತು
ಸಂಘದ ಮೂಲಧನ ಒಂದರ್ಧ ಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು. ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು.

ಪಾಲುಗಳ ಮೇಲಣ ಮುನಾಫಯನ್ನು ನಗದಾಗಿ ಕೊಡುವರು. ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಪೋಲಿಸುಗಳಲ್ಲಿ ಸಹಾ ಜಮಾ ಮಾಡಿ ತೆರಲೂ ಬಹುದು.

1909 ಎಪ್ರಿಲ್ ತಿಂಗಳ ವರೆಗೆ ರೂ 18,00,000, ಪಾಲ ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು.

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುಸ್ವಾಮಿಕರಿಗೆ ನೇಕಡಾ 9ರಂತೆ ಮುನಾಫಯು ಎರಡನೇ ವರುಷದಲ್ಲಿ ಕೊಟ್ಟಿರುವುದು. ವಿಮೇ ನೋಟಲಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದಲ್ಲಿಯೇ ವಿಮೆದಾರನು ಮೃತಪಟ್ಟ ತಾರೀಕಿನಿಂದ ನೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು. ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಬಂಡವಾಳದ ಮೌಲ್ಯವು ನೇಕಡಾ 25ರಂತೆ ಹೆಚ್ಚಿರುವುದು. ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಬಿ. ಬಾಬುರಾವ್ ಎಂಡ್ ಸನ್,
ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಪತ್ರ ಬಾಟ್ಲಿಯೊಂದಿಗಿರುವುದು { **ಸಿದ್ಧಲಕ್ಷ್ಮೀ ವಿಲಾಸ.** } ಕ್ರಯ ಬಾಟ್ಲಿಗೆ ೧೨ ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತೂತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವ್ರಣಾದಿ ಬಾವುಗಳೂ, ಬಚ್ಚೆ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷಧವಾಗಿರುವದು.

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ ಸುಬ್ರಾಯ ... ಮತ್ತು ಕಂಪೆನಿ, ಮಂಗಳೂರು. ಕುಂದಾಪುರ ರಾಮ [illegible] ಮಂಗಳೂರು. [illegible] ದೊರಕುವುದು.

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್'. ಈ ವಿಷಯ ಹೆಚ್ಚು ಬರಿಯುವುದೇ ಅಗತ್ಯವಿಲ್ಲ. ಒಂದು ಸಾರಿ ಪರೀಕ್ಷಿಸಿದೊಡನೆ ತಿಳಿದು ಬರುವುದು. ಬಾಟ್ಲಿ ಒಂದರ ಕ್ರಯ ರೂಪಾಯಿ ೦—೧೨—೦.

ಸ್ವದೇಶಾಭಿಮಾನಿಯ ಚಂದಾದಾರರಿಗೆ ಮಾತ್ರ ಇದು ೧೦ ಆಣೆ ಕ್ರಯಕ್ಕೆ ದೊರಕುವುದು.

ಮಂಗಳೂರು ವ್ಯಾಪಾರ ಸಂಘ ವ ಮಂಗಳೂರು ಟ್ರೇಡಿಂಗ್ [illegible]

ಅನುಭವಸಿದ್ಧವಾದ ವನೌಷಧಗಳು.

ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಪತ್ರಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ ೧೦ ಆಣೆ.

೨ ಪ್ರಮೇಹರಿಪು ಬಿಂದು. ... ನ್ನೂ ಕೀವನ್ನೂ ಕೂಡಲೇ ... ವಿತವಾಗಿ ಗುಣಕೊಡುವದು. ಬಾಟ್ಲಿಗೆ ... ರೂ

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ... ರೂ

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ... ಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ... ರೂ

೫. ಸೂರಣಾವ ಲೇಹ. ರಕ್ತ ... ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ... ರೂ

೬. ಪ್ಲೀಹೋದರಾರಿ ಚೂರ್ಣ. ... ದಾರುಣವಾದ ಜ್ವರದ ಗಡ್ಡೆಯನ್ನೂ ತಕ್ಷಣವೇ ... ಪಡಿಸುವದು. ತಿಂಗಳ ಔಷಧಕ್ಕೆ ಬಟ್ಲಿ ... ರೂ ... ಆಣೆ

೭. ಜಗನ್ಮೋಹನ ದಂತಮಂಜನ. ... ಗಳನ್ನು ಪರಿಹರಿಸತಕ್ಕ ವಿಲಾಯತಿ ... ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ... ಆಣೆ

೮. ಸರಳಭೇದಿ ಮಾತ್ರೆ. ... ತೊಲೆಗೆ ೨ ರೂ.

೯ ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಉಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ... ರೂ

೧೧ ಶಾಲ್ಮಲೀ ಪಾಕ. ... ಮೂತ್ರದಲ್ಲಿ ಧಾತುಪತನ, ದು... ಮುಂತಾದವುಗಳನ್ನು ಹೋಗಗೊಳಿಸಿ ರಕ್ತ ... ಕೊಡುವದು. ರಾತಲಿಗೆ ೨ ರೂ.

೧೨ ವಾತಮುಂವಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ... ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ... ಆಣೆ ... ಬಾಟ್ಲಿಗೆ ... ಆಣೆ

೧೩ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮರೋಗಗಳನ್ನು ... ಗೆಲ್ಲುವದು. ಉರಿಯು ... ಕರಡಿಗೆ ... ಆಣೆ ... ಕರಡಿಗೆಗೆ ೧೧ ಆಣೆ

೧೪ ಸಪ್ತೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ... ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ... ಸ್ಮರಣಶಕ್ತಿಯನ್ನು ಬೆಳೆಯಿಸುವದು, ... ಕಂಠಸ್ವರವನ್ನು ಮಧುರವಾಗಿರಿಸುವದು. ... ಅತ್ಯುತ್ತಮವು. ೧೦ ತೊಲೆಗೆ ... ರೂ ... ಆಣೆ

... ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗ ... ಕಳುಹಿಸುವವರ ರೋಗ ... ಮಾಡುವೆವು. ನಮ್ಮೊಡನೆ ಕನ್ನಡದಿಂದ ... ನಡೆಯಿಸಬಹುದು.

ನಮ್ಮ ವಿಳಾಸ — ಬಿ. ಎಸ್. ನಾಥು ಮತ್ತು ಕಂಪನಿ,
ಬಾಂದ್ರಾ (ಮುಂಬಯಿ ಹತ್ತಿರ)
Bandra (near Bombay).

ವಾತ, ಸಂಧಿವಾತ, ತಲೆನೋವು, ... ಇವುಗಳ ನಿವಾರಕ

ರೋಯಲ್ ಇಂಡಿಯನ್ ಬಾಂ.

ವಾತ.—ರಕ್ತದ ಮೇಲೆ ತೇಲುವ ಹಾನಿಕರ ಪದಾರ್ಥಗಳು ಗಂಟುಗಳ ಸಂದಿಯಲ್ಲಿ ಕೂಡುವದರಿಂದ, ವಾತವೂ, ಸಂಧಿವಾತವೂ ಆಗುವದು. ಆ ಭಾಗದಮೇಲೆ ರೋಯಲ್ ಇಂಡಿಯನ್ ಬಾಂ ಚನ್ನಾಗಿ ತಿಕ್ಕಿ ಬಿಸಿನೀರಿನ ಶೇಕ ಕೊಡಬೇಕು.

ತಲೆನೋವು — ನೋವಿದ್ದ ಭಾಗದ ಮೇಲೆ ರೋಯಲ್ ಇಂಡಿಯನ್ ಬಾಂ ಚನ್ನಾಗಿ ಉಜ್ಜಬೇಕು

ಜಖಮು — ... ಕ

ಬೆನ್ನಿನ ವಾತ ... ರೋಯಲ್ ಇಂಡಿಯನ್ ಬಾಂ ... ವಾಗಿರುತ್ತದೆ

ಗಂಟಲಲ್ಲಿ ಶೀತ —ರೋಯಲ್ ಇಂಡಿಯನ್ ಬಾಂ ... ತಿಕ್ಕಬೇಕು

ಹಲ್ಲುನೋವು—ಸ್ವಲ್ಪ ಹತ್ತಿಯನ್ನು ರೋಯಲ್ ಇಂಡಿಯನ್ ಬಾಮಿನಲ್ಲಿ ಒದ್ದೆ ಮಾಡಿ ನೋವುಳ್ಳ ಹಲ್ಲಿನ ಮೇಲೆ ಇಡಬೇಕು.

ಇದರಿಂದ ಸಾವಿರಾರು ಜನರು ಗುಣ ಹೊಂದಿರುತ್ತಾರೆ. ಇನ್ನೂ ಸಾವಿರಾರು ಜನರು ಗುಣಹೊಂದುವರು

ಬಾಟ್ಲಿ ಒಂದರ ಕಿಮ್ಮತ್ತು ೪ ಆಣೆ.

ಎಲ್ಲಾ ಬಾಮ್‍ಗಿಂತಲೂ ಇದು ಉತ್ಕೃಷ್ಟವೆನ್ನಿಸಿಕೊಳ್ಳುತ್ತದೆ. ಇದರಿಂದ ಗುಣ ಕಂಡುಬಾರದಿದ್ದಲ್ಲಿ ವಾಪಸ ಹಣ ಮರತು ರವಾನಿಸಲ್ಪಡುವದು

ಏಜಂಟರು:—
ರೋಯಲ್ ಟ್ರೇಡಿಂಗ್ ಕಂಪೆನಿ, ಗಿರಗಾಂ, ಮುಂಬಯಿ.
ರಾಮರಾವ್ ನಾನಾಭಾಯಿ ಶಾಳೆ, ,,
ಕೆ. ಆರ್. ತಾರಕ ಮತ್ತು ಕಂಪೆನಿ, ಕಾಕುರ್ದ್ವಾರ ,,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು, ದ. ಕನ್ನಡ.
ಬೇಕಲ್ ವೆಂಕಟ ರಾವ್, ಉಡುಪಿ, ದ. ಕನ್ನಡ.



ಸುರಂಗಿ ಅತ್ತರು.

... ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು. ... ಇದರ ಪರಿಮಳ ... ಬಾಟ್ಲಿ ಒಂದರ ಕ್ರಯ No. I. ...—೪—೦ No. ... ೧—೦—೦ ... ೧— ೦—೦. ದಸಾಶಾ ೦—೧೪—೦ ... ೦—೧೪—೦ ... ೦—೧೪—೦

ಕೇಶವರ್ಧಿನಿ ಎಣ್ಣೆ. ... ಪ್ರೀತಿಕರವಾದ ಎಣ್ಣೆ. ಇದರಿಂದ ಕೂದಲು ... ಬೆಳೆಯುವವು. ಬಾಟ್ಲಿ ಒಂದರ ಕಿಮ್ಮತ್ತು ೦—೮—೦.

ಗಜಕರ್ಣದ ಮುಲಾಮು ೦—೪—೦

ಮನೋರಮಾ ಕಂಪೆನಿಯ

ರೋಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಸತತವಾತ, ಚಳುಕಹಿಡಿತ, ತಲೆನೋವು, ಶೀತ, ಘಾಯ, ಗಂಟಲುನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ. ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ. ಇನ್ನೂ ಸಾವಿರಾರು ಜನರು ಗುಣಹೊಂದುವರು. ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‍ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ. ಇದು ಎಳೇ ಮಗುವಿನ ದೇಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು.

ಬಾಟ್ಲಿ ಒಂದರ ಕಿಮ್ಮತ್ತು ರೂ. ೦—೮—೦, ಆರು ಬಾಟ್ಲಿಗಳಿಗೆ ರೂ. ೨—೧೦—೦.

ವಿಳಾಸ:— ರಾಮರಾವ್ ನಾನಾಭಾಯಿ ಶಾಳೆ,
ಗಿರಗಾಂ, ಮುಂಬಯಿ.

ಹೊಸ ಪ್ರಕಟನೆಗಳು.

1. ಸ್ವರಾಜ್ಯ ನಿರ್ಣಯ—ಪುಟಗಳು ೫೪೬ ಹಿಂದೂ ಮಹಮ್ಮದೀ ಯರುಗಳು, ೫೯ ಶಾಸನಗಳು ಇವುಗಳ ಸಂಗ್ರಹವು, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಆಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ

2. 'ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ; ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ. ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ.

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ. ವಿ ಪಿ ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು "ಎಂ ಮಲ್ಲಾರಾಧ್ಯರ್ಸ್ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ," ಈ ವಿಳಾಸಕ್ಕೆ ಬರೆಯುವದು.

———o———

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಆಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ ೨ ರೂ ೮ ಆ. ೧ ರೂ ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಪಾಳಿ) ಜ್ವರಕ್ಕೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಟಿ. ಎಲ್ ಉಪಾಧ್ಯಾಯ.
ಮೈಸೂರು

THE HINDU SOAP MANUFACTURING CO.,

ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ.

———o———

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಡಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು
ಟ್ರಸ್ಟೀ ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೆಗಿನ ಮೊಬಲಗುಗಳಿಗೆ ಜೀವ ವಿಮೆ ಅತಿ ಕಮ್ಮಿಯಾದದ್ದೂ ಯೋಗ್ಯವಾದ ವಿಮೆ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಕಂಪೆನಿಗಳ ವಿಮೆ ಕಾಗದಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪನಿಯ ಹಣವು ಗವರ್ನಮೆಂಟ್ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವದು

ಹೆಂಗಸರೂ ಜೀವವಿಮೆ ಉತ್ತರಾಯಿಸ ಬಹುದು

ಹೆಚ್ಚು ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ—ಪ್ರತಿನಿತ್ಯ ಸಂಜೆ ಕೃಷ್ಣಪ್ರಸಾದ ರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಬಿಟ್ಟು ಮೇಲಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು ದ ಕನ್ನಡ

೧೮೯೮ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು	ಟಿ. ಬಾಬುರಾಯರ ಲೋಕಪ್ರಸಿದ್ಧವಾದ ಆಯುರ್ವೇದಿಕ್ ಔಷಧಗಳು.	ಅನೇಕ ಮಾನ್ಯ ಗೃಹಸ್ಥರಿಂದ ಪಡೆದ ಶಿಫಾರಸು ಪತ್ರಗಳ ಇವೆ

ಪರಿಮಳಾಂಜನ ನಂಬ್ರ 2—ಇದರ ಬಾಹ್ಯಲೇಪನದಿಂದ ತಲೆನೋವು ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈ ಕಾಲುಗಳಲ್ಲಿ ಅಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-10-0

(Rose) ದಂತಮಂಜನ—ಈ ಚೂರ್ಣದಿಂದ ಪ್ರತಿನಿತ್ಯವೂ ಹಲ್ಲುಗಳನ್ನು ತಿಕ್ಕುತ್ತಾ ಬಂದರೆ ಹಲ್ಲಿನಿಂದ ರಕ್ತ ಸುರಿಯುವದು ನಿಲ್ಲುವದಲ್ಲದೆ, ಬಾಯಿಯ ದುರ್ಗಂಧವು ನಾಶವಾಗಿ ಹಂದಾಡುವ ಹಲ್ಲುಗಳು ಗಟ್ಟಿಯಾಗುತ್ತವೆ ಡಬ್ಬಿ ೧ರ ಕ್ರಯ ರೂ 0—2—0

ತಾಂಬೂಲ ಸುವಾಸಿನಿ—ಸೀಸೆ ೧ರ ಕ್ರಯ ರೂ 0 4-0	ಪರಿಮಳಾಂಜನ ನಂ ೧—ಡಬ್ಬಿ ೧ರ ಕ್ರಯ ರೂ 0 8 0
ದಂತಮಂಜನ—ಡಬ್ಬಿ ೧ರ ಕ್ರಯ ರೂ 0 2 0	ಸುಗಂಧ ವಸ್ತ್ರದ ಪುಡಿ—ಡಬ್ಬಿ ೧ರ ಕ್ರಯ ರೂ 0-6 0
ಗಜಕರ್ಣದ ಮುಲಾಮು—ಡಬ್ಬಿ ೧ರ ಕ್ರಯ ರೂ 0-6 0	ದಶಾಂಗ ಧೂಪ—ಸೇರು ೧ಕ್ಕೆ ಕ್ರಯ ರೂ 1-4-0
ಶ್ವಾಸಕುಠಾರ—ಡಬ್ಬಿ ೧ರ ಕ್ರಯ ರೂ 0 8 0	ದ್ರಾಕ್ಷಾರಿಷ್ಟ—ಬಾಟ್ಲಿ ೧ರ ಕ್ರಯ ರೂ 2 8 0

ನಯನಾಮೃತ ಸುರ್ಮ—ಈ ಸುರ್ಮವನ್ನು ಪ್ರತಿನಿತ್ಯವೂ ಕಣ್ಣಿಗೆ ಹಚ್ಚುತ್ತಾ ಬಂದಲ್ಲಿ ಕಣ್ಣಿನಿಂದ ಕೀವು ಅಥವಾ ನೀರು ಇಳಿಯುವದು ಕಣ್ಣುರಿ ಕಂಗೆಣ್ಣು, ಕಣ್ಣಿನೊಳಗೆ ಬರುವ ಫರದೆ ಮೊದಲಾದ ಸರ್ವ ವಿಧವಾದ ನೇತ್ರ ರೋಗಗಳು ಸಂಶಯವಿಲ್ಲದೆ ಗುಣವಾಗುವವು

ಇನ್ನೂ ಅನೇಕ ವಿಧವಾದ ಔಷಧಿಗಳು ಇರುವವು ಬೇಕಾದವರು ಕಟಾಲಗಿಗೆ ಬರಿಯಿರಿ.

ಮೇಲೆ ಕಾಣಿಸಿದ ದಂತಮಂಜನಗಳನ್ನು ರಾತ್ಲು ಲೆಕ್ಕದಲ್ಲಿ ತರಿಸಿಕೊಂಡರೆ ರಾತ್ಲು ೧ರ ರೂ. 2-0-0ರಂತೆ ಕ್ರಯ ಬೀಳುವದು.

ಸೂಚನೆ. ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ ಬೀಳುವದು.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಸ್ಟೇಟ್‌ಬ್ಯಾಂಕ ರಸ್ತೆ, ಮಂಗಳೂರು, ದ. ಕ.

ಪ್ರೋತ್ಸಾಹಮಾಡುತ್ತೀರೇ.

ಕ್ರಯ ಸುಲಭ! ಉತ್ತಮ ಸಾಮಾನುಗಳು!

೧ ಡಜನ್ ಸಿಲ್ಕಿನ ಕಾಲರ್ ಡಾಸ್ತು ರೂ 0—8—0 ೧೦ ಟೋಪಿಯಾದರೆ ೧ಕ್ಕೆ ರೂ . —[illegible]—0 ಸ್ವದೇಶಿ ಕಾಲರ್ ಉಲನ್ ಬಂಡ್ಲ ೧ಕ್ಕೆ ರೂ 3—4—0 ಕೊಕ್ಕೆ ಗೋಲಿ ೧ಕ್ಕೆ ರೂ 0—1—6 ಕಮ್ಮರ್ ಬಂದ್ ಮೇಲಿನ ನಾಲ್ಕು ಗುಬಿಯ ಕೊಳವೆ ೧ಕ್ಕೆ ರೂ 0—4—0 ಹಾಸನ್ ಟೋಪಿಗಳು ೧ಕ್ಕೆ ರೂ 8—0—0 ಮತ್ತು 15—0—0 ಒಸಿಯನ್ ಗಳು ೧ಕ್ಕೆ 0—6—0 0—8—0 0—10—0 0—12—0 ಪರಿಮಳ ದ್ರವ್ಯ ೧ಕ್ಕೆ ರೂ 0—2—0 ಪೋಸ್ಟ್ ಕಾರ್ಡು ೧೦೦ಕ್ಕೆ ರೂ 0—3—0 ಕಸ್ ಕಸ್ ಕಾಗದ ೧೦೦ ಮಾತ್ರೆ ಇರ ಪ್ಯಾಕೆಟ್ ೧ಕ್ಕೆ ರೂ 0—3—0 ತಲೆನೋವಿನ ಮುಲಾಮು ಡಬ್ಬಿ ೧ಕ್ಕೆ ರೂ 0—3—0 ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ರೂ 0—2—0 ಕಸ್ತೂರಿ ಮಾತ್ರೆ ೨೦೦ರ ಸೀಸೆ ೧ಕ್ಕೆ ರೂ 0—4—0 ಸ್ವದೇಶಿ ಸ್ಟೀಲ್ ಕೇಸ್ ೧ಕ್ಕೆ ರೂ 1—0—0 ಮತ್ತು 0—12—0 ಕೇಪಿಟೋಲ್ ಬಾಂ ಸೀಸೆ ೧ಕ್ಕೆ ರೂ 0—8—0 ದಿಲ್ ಬಾರ್ ಮತ್ತು ಕಾಮಿಯಾ ಅತ್ತರ್ ಸೀಸೆ ೧ಕ್ಕೆ ರೂ 1—8—0 ಸರ್ವಜನೋಪಯೋಗವಾದ 1910ನೇ ಡೈರಿ ತಯಾರಾಯಿತು, ದಯವಿಟ್ಟು ಕೆಟಲಾಗು ತರಿಸಿರಿ

ನಮ್ಮ ವಿಳಾಸ—**ದಿ. ಊಲನ್ ಮಾರ್ಟ್.**

ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ಧರ್ಮ.

	೧ ಸಾರಿ	೪ ಸಾರಿ	೧೩ ಸಾರಿ	೨೬ ಸಾರಿ	೫೨ ಸಾರಿ.
ಇಡೀ ಪಾನು	ರೂ ೧೦	ರೂ ೩೨	ರೂ ೬೨	ರೂ ೧೧೦	ರೂ. ೧೯೦.
ಅರ್ಧ ಪಾನು	,, ೬	,, ೧೮	,, ೩೮	,, ೬೦	,, ೮೫
ಕಾಲು ಪಾನು	,, ೪	,, ೧೨	,, ೨೦	,, ೩೨	,, ೬೫.
ಅರೆಕಾಲು ಪಾನು	,, ೨	,, ೬	,, ೧೨	,, ೧೮	,, ೩೫.

ಸೂಚನೆ—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ—ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ೨ ರೂ. ೧ ಆ. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪ ಆ. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ [illegible] ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ) | **ಹಾಫ್ ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಚರ್ಮ) | **ಫುಲ್‌ಬೈಂಡ್** (ಪೂರ್ಣ ಚರ್ಮ.)

[illegible]

[illegible] × 8¼", 3' × 5¼", 8¼" × 6', 6 × 4' [illegible] ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ [illegible]

[illegible] ತಯ್ಯಾರಿಸಲ್ಪಟ್ಟಿರುತ್ತವೆ

[illegible] ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳಲ್ಲದೆ [illegible] ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ [illegible]

ನಮ್ಮ ದರಗಳ ಪಟ್ಟಿ [illegible] ಬರಕೊಳ್ಳಿ

ಮೇನೇಜರ್,
ಶಾರದಾ ಮುದ್ರಾಲಯ.
ಮಂಗಳೂರು

ಹಣದ [illegible] ಬೆಲೆಗೆ ತಕ್ಕ [illegible] ಪಡೆಯುವುದೇ.

~~ಮಂಗಳೂರು ವ್ಯಾಪಾರ ಸಂಘ~~

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ [illegible] ವರುಷಗಳಾದವು.

~~[illegible] ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.~~

[illegible] ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

([illegible] ಮಕ್ಕಳ ಆಹಾರಗಳಾದ [illegible])

ಡಾಕ್ಟರರ [illegible] ಔಷಧಿಗಳು,

([illegible] ಮೊದಲಾದವುಗಳು)

ಔಷಧಾಲಯ

[illegible] ದೊರಕುವದಲ್ಲದೆ, [illegible] ರೋಗಗಳು ಚಿಕಿತ್ಸೆಯನ್ನು ಹೊಂದಬಹುದು. ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು [illegible] ತಕ್ಕವಾದ [illegible] (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ [illegible])

ಶಾರದಾ ಛಾಪಖಾನೆ

ಕೋರ್ಟಿನ ಫೋರ್ಮ್, [illegible] ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ [illegible]

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ [illegible] 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಮಂಗಳೂರು.

Mangalore Trading Association,
[illegible] S. Canara.

Printed by V. S. Kamath, at the Mangalore Trading [illegible]

Registered No. M. 489

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಖು 29ನೇ ಶುಕ್ರವಾರ ಅಕ್ಟೋಬರ 1909. ಸಂಚಿಕೆ 30

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered

ಹಿಂದ ಸ್ಥಾನದ ವನಸ್ಪತಿಗಳಿಂದ ತಯಾರು ಮಾಡಲ್ಪಟ್ಟ ಔಷಧಿ ಮುಲಾಮು ಇದರಿಂದ ವಾತ ಸಂಧಿವಾತ, ತಲೆನೋವು ಶಿರೋಬಾಧ ಉಷ್ಣಾಂಗ ನೋವು ಕೊಂಟನೋವು ಗಂಟ್ಲುನೋವು ಜಖಮು ಬಳುಕು, ಶ್ವಾಸ ಶೀತ ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ... ಸಣ್ಣ ಮಾಗ ಏನೆ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪೂರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಲ್ಲಾ ಊರಿನ ... ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ಒಂದರ ಕಿಮ್ಮತು ೪ ಆಣೆ

ಕಿಮ್ಮತು ಆರು ಆಣೆ ೬ ನಮೂನೆ ನಲ್ಲಿ — ಕಿಮ್ಮತು ಆರು ಆಣೆ ೬ ನಮೂನೆ ನಲ್ಲಿ

ಗಜಕರ್ಣದ ಮುಲಾಮು.

ಇದನ್ನು ಹಚ್ಚುವದರಿಂದ ಎಲ್ಲಾ ತರದ ತುರ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯ ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿಯಬರುವದು. ನೂರುಸಾರಿ ಹಚ್ಚಿಸುವದಕ್ಕೆ ಒಂದು ಡಬ್ಬಿ ಸಾಕಾಗುವದು. ಡಬ್ಬಿ ಒಂದರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿಯಬರುವದು. ಡಬ್ಬಿ ಒಂದರ ಕಿಮ್ಮತು ೨ ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತ ಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿನ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೩೦ ಗುಟಿಕೆಗಳ ಡಬ್ಬಿ ಒಂದರ ಕಿಮ್ಮತು ರೂ 1

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಚ್ಚಿಸುವದರಿಂದ ಮೋರೆಯ ಮೇಲಿರುವ ಮುದ್ದಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗೆದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ. ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ. ಡಬ್ಬಿ ಒಂದರ ಕಿಮ್ಮತು ೩ ಆಣೆ. ಆರು ಡಬ್ಬಿಗಳ ಕಿಮ್ಮತು ರೂ 2—4—0

ಚೇಳು ಕಡಿತದ ಮೇಲಿನ ಔಷಧ

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಚ್ಚಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು. ಬಾಟ್ಲಿ ಒಂದರ ಕಿಮ್ಮತು 8 ಆಣೆ

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಃ ಶುದ್ಧಿ ಮಾಡುವದು. ಬಾಟ್ಲಿ ಒಂದರ ಕಿಮ್ಮತು ೧ ರೂ, ಮೂರು ಬಾಟ್ಲಿಗೆ ರೂ 2—4—0.

ಜುಲಾಬು ಮಾತ್ರೆಗಳು	ರೂ	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0
ಕಸ್ತೂರಿ ಮಾತ್ರೆ 50	,,	0—10—0
ಬಜ್ಜಿ ಮುಲಾಮು	,,	0—3—0
ನೇತ್ರಾಂಜನ	,,	0—4—0

ಕ್ಯಾಟಲಾಗು ಹಚ್ಚು ನಮೂನೆಯ ಔಷಧಗಳನ್ನು ತರಿಸುವದರಿಂದ ಕೆಟಲಾಗಿಗೆ ಬರದಲ್ಲಿ ರವಾನಿಸಲ್ಪಡುವದು.

ವಿಳಾಸ:— ವಿಲಿಯಂ ಮತ್ತು ಕಂಪನಿ, ಫೋರ್ಟ ಮುಂಬಯಿ. ಟೆಲಿಗ್ರಾಫ್ ವಿಳಾಸ:—ಅಮೃತಾಂಜನ, ಮುಂಬಾಯಿ.

ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ, ಖಕ್ಕ ಮೂಲಿಕಾ ಔಷಧಗಳನ್ನೇ ಹೇಳುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ೩-೦-೦.

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ	೦-೬-೦
ಉತ್ತರ ರಾಮಚರಿತ್ರೆ ಕಥೆ	೧-೫-೦
ಟೀಕಾ ರಾಘವೇಂದ್ರ ಸ್ತೋತ್ರ	೦-೨-೦
ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ	೦-೨-೦
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦-೨-೦
ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦-೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦-೨-೦
ಸ್ವರಸಹಿತವಾದ ನಮಕ ಚಮಕ	೦-೨-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಪ್ರಕಾರಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ ನಾಮ	೦-೨-೦
ಕೃಷ್ಣ ಕರ್ಣಾಮೃತ ಮೂಲ	೦-೨-೦
ದೇವರ ಸೇವೆ ಹೊಸ ಪುಸ್ತಕ	೦-೪-೦
ಮುಕುಂದ ಮಾಲಾ (ಗೀತಾ)	೦-೧-೦
ಶಿವ ನಾಮಾ	೦-೦-೬
ಹನುಮನ್ನಾಮಾ	೦-೦-೬
ಹರಿ ನಾಮಾ	೦-೦-೬
ಯಾಜುಷ ಪ್ರಯೋಗ	೦-೮-೦
ಬ್ರಹ್ಮಹತ್ಯದಾ ಮಂಜರಿ	೦-೮-೦
ಕೃಷ್ಣ ಬೋಧಾಮೃತ	೦-೬-೦

೦-೪-೦ ಕಮ್ಮಿ ಇದ್ದರೆ ರವಾನಿ ಇಲ್ಲ.

ಕೆಟಲಾಗು ಬೇಕಾದವರು ಬರೆದು ತರಿಸಿಕೊಳ್ಳಬಹುದು.

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ, ವಿದ್ಯಾನಂದ ಆಫೀಸ್ ಬೆಂಗಳೂರು.

ಕುಂತಳ ಕೌಮುದಿ ತೈಲ.

[illegible] ಉಪಯೋಗಿಸಿದವರು [illegible] ...

ಕುಂತಳ ಕೌಮುದಿ ತೈಲ—ಪ್ರತಿ ಸ್ತ್ರೀ ಪುರುಷರು ಉಪಯೋಗಿಸತಕ್ಕದ್ದು [illegible] ಇದು ಮೆದುಳಿಗೆ ತಂಪನ್ನು [illegible] ಕೊಡುತ್ತದೆ. [illegible] ದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರೆಗೆ ಮಾರಾಟಕ್ಕೆ ಒಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೦ ಆಣೆಗಳು.

ಕವಿರಾಜ ಆರ್ ಸಿ ಸೆನ್, ಎಲ್ ಎಮ್ ಎಸ್,
216 ಕಾರನ್ ವಾಲಿಸ್ ಬೀದಿ, ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ — "ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು.—ಎಲ್ ಎ ಫೋರುವಾಲ್ ಎಂಡ್ ಕೊ, ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು:—ಮಾ ರಾ॥ ರಾ॥ ಸಿ ಆರ್. ಕಾಮತರು, ಉಲನ್ ಮಾರ್ಕೆಟ್, ಮಂಗಳೂರು.

ರೇಷ್ಮೆ ಕೈಚೌಕಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸುರು, ಬೂದು, ಸವರನ್ ಬಿಳುಪು ಹಗಲ್‌ಬತ್ತಿ ವಗ್ಗೈರೆ ರಂಗುಗಳ ವಸ್ತ್ರ 1ಕ್ಕೆ . . . ರೂ 0—12—0.

ಸೈಜು ಇಂಚು 22×22 ವಸ್ತ್ರ ೧ಕ್ಕೆ . . . 1—1—0.

ಸೈಜು ಇಂಚು 15×15 ಬಿಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರ 1ಕ್ಕೆ 8 ಆಣೆ.

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ 3 ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರ 1ಕ್ಕೆ ರೂ 12, 13, 14, 15, 16 17. ಡಿಟೋ ಸಪ್ಪೆ ರೇಷ್ಮೆ ಚಾದರು 1ಕ್ಕೆ ರೂ 6, 7, 8, 9, 10.

ರೇಷ್ಮೆ ನಡುಕಟ್ಟುಗಳು.

ಕೆಂಪು ಹೂವಾ [illegible] ಹಸುರು, ಮೊದಲಾದ ರಂಗುಗಳ ಸೈಜು ಉದ್ದ [illegible] ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1-4-0 1-8-0, 1-10-0, 1-12-0, 2-0-0, 2-8-0.

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ, ಕಾಡಿಗೆ, ಹಂಸ ಪಕ್ಷಿಗಳ, ಶೃಂಗಾರ ಪೆಟ್ಟಿಗೆ, ಜಗನ್ನಾಥ [illegible] ಹಸುರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗ್ಗೈರೆ 1ಕ್ಕೆ ರೂ 1-6-0, 1-12-0.

ಡಿಟೋ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ 1-0-0, 1-2-0, 1-3-0. ಮೋಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2-4-0, 2-8-0, 2-10-0.

ಡಿಟೋ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ 1-4-0, 1-6-0, 1-8-0.

ಕಲಾಬತ್ತು ರುದ್ರಾಕ್ಷಿ ಮತ್ತು ಸರವಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2-10-0, 2-12-0, 3-0-0.

ಡಿಟೋ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಜರಿ ಎಲ್ಲಾ ರಂಗುಗಳ [illegible] ಕಣ 1ಕ್ಕೆ ರೂ 3-6-0, 3-8-0, 3-12-0.

ಡಿಟೋ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಶೀರೆ ಕಣಾ 1ಕ್ಕೆ ರೂ 4-12-0, 5-1-0.

ಹೆಚ್ ಸಂಕಪ್ಪಾ ಬಸಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ವಿ ಪಿ. ಆರ್ಡರುಗಳಿಗೆ ಸುಲಭ ಕ್ರಯ

ಊದುಬತ್ತಿ ಸೇರು ೧ಕ್ಕೆ ೦-೮-೦, ೧-೦-೦, ೨-೦-೦, ೩-೦-೦, ೪-೦-೦, ೬-೦-೦. ಗಂಧದ ಎಣ್ಣೆ ತೊಲೆ ೧ಕ್ಕೆ ರೂ ೨, ೪, ೮, ೬, ೧೨, ೧೬.

ಅತ್ತರ್ (ಹೂವಿನ) ತೊಲ ೧ಕ್ಕೆ ೧-೦-೦, ೧-೮-೦.

ಬೆಳ್ಳಿ ಗಣೇಶಗಳು ೧ಕ್ಕೆ ೨-೮-೦, ೩-೦-೦, ೩-೮-೦, ೪-೦-೦, ೫-೦-೦.

ವ್ಯವಸಾಯ ಕ್ರಮ ಬೋಧಿನಿ ಸ್ಟಿಪ್ ಬೈಂಡ್ ಪ್ರತಿ೧ಕ್ಕೆ ರೂ ೦-೧೨-೦ [illegible] ರೂ ೧-೦-೦ ಟಪ್ಪಾಲ್ ಹಾಸಲ್ ಪ್ರತ್ಯೇಕ.

ಉಲನ್ ಚವುಕಗಳು ಹಳದಿ, ಹಸುರು, ನೀಲಿ, ಗುಲಾಬಿ, ಎಣ್ಣೆ ರಂಗು [illegible] ೧ಕ್ಕೆ ರೂ ೧-೮-೦ ೨-೦-೦ ೩-೦-೦.

ಉಲನ ಶಹಲುಗಳು ೧ಕ್ಕೆ ೬-೦ ೬-೧೨-೦ ೪-೦-೦.

ಕಾಶ್ಮೀರ ಶಹಲುಗಳು ಎಲ್ಲಾ ರಂಗುಗಳಲ್ಲಿಯೂ, ೧ಕ್ಕೆ ರೂ ೯-೦-೦, ೧೦-೦-೦, ೧೧-೦-೦, ೧೩-೦-೦, ೭-೦-೦, ೧೮-೦-೦, ೨೦-೦-೦.

ಹಾಸನದ ಟೋಪಿ ಹಣಿಯುವ ಉಲನ್ ದಾರಗಳು ಕೆಂಪು, ಎಣ್ಣೆ ಗಂಪು, ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦-೬-೦, ೦-೧೦-೦, ೦-೧೨-೦, ೦-೧೪-೦, ಡಿಟೋ ಸುಮಿ ೧ಕ್ಕೆ ೦-೧-೬, ೦-೨-೦.

ಊಲನ್ನಿಂದ ಹಣೆದ ಟೋಪಿಗಳು ಡಜನ್ ೧ಕ್ಕೆ ೪-೮-೦, ೫-೦-೦, ೬-೦-೦ ೭-೦-೦ ೮-೦-೦, ೯-೦-೦, ೧೦-೦-೦, ೭-೦-೦.

ಹೆಚ್ ಯನ್ ರಾವ್ ಬ್ರದರ್ಸ್.
262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು—ಬೀಜಗಳು—ಹಣ್ಣು—ಹುವ್ವು—ಮತ್ತು—ತರಕಾರಿ

ಮಾವಿನ ಗಿಡಗಳು ವಗ್ಗೈರೆ ಸಕಲ ವಿಧವಾದ ಹಣ್ಣಿನಗಿಡಗಳು ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗ್ಗೈರೆ ಸಮಸ್ತ ವಿಧವಾದ ಬೀಜಗಳು ಸೇಬು, ಕಿತ್ತಳೆ ವಗ್ಗೈರೆ ಹಣ್ಣುಗಳು ಇಂಗ್ಲೀಷು ಮತ್ತು ನೇಟೀವ್ ಕಾಯಿಪಲ್ಯಗಳೂ (ತರಕಾರಿ) ತುರಾಯಿ, ಹಾರಾ [illegible] ಹುವ್ವುಗಳು. ಬೇಕಾದವರು ಬರೆದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ [illegible] ಕಳುಹಿಸಲ್ಪಡುತ್ತೆ.

ಟಿ. ಎಚ್. ಗಿರಿಯಪ್ಪ ಅಂಡ್ ಸನ್ಸ್,
ಪ್ಲಾರಿಸ್ಟ್ ಅಂಡ್ ಸೀಡ್ಸ್‌ಮೆನ್.
[illegible] ಬೆಂಗಳೂರು ಸಿಟಿ.

DIARIES FOR 1910.

1910ನೇ ಇಸವಿಯ ಡೈರಿಗಳು.

ವಕೀಲರಿಗೂ, ವಕೀಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಆವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟು ಬೂಕು ಸ್ಯಾಜ್ ಕ್ರಯ ೬ ಆಣೆ

ಸಣ್ಣ ಸ್ಯಾಜ್ ,, ೪ ಆಣೆ

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗ ಒಳ್ಳೇ ಕಮಿಶನ್ ದೊರಕುವುದು

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು

ವಿಳಾಸ:—

ಮ್ಯಾನೇಜರ್,

ಶಾರದಾ ಪ್ರೆಸ್ ಮಂಗಳೂರು, ದ ಕ

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 29ನೇ ಅಕ್ಟೋಂಬರ 1909

ಪಂಜಾಬ ಹಿಂದೂ ಸಭಾ.

ನೇಷನಲ್ ಕೊಂಗ್ರೆಸು ಸಭೆಯು ಮೂಲಕ ಭಾರತೀಯರನ್ನು ಜಾತಿಮತ ಬೇದವಿಲ್ಲದೆ ಒಂದು ಜನಾಂಗವಾಗಿ ನಿರ್ಮಿಸುವ ಪ್ರಯತ್ನಗಳು ಕಳೆದ ೨೩ ವರುಷಗಳ ವರೆಗೆ ನಡೆದವು ಬರತಖಂಡದಲ್ಲಿ ಮುಖ್ಯ ಎರಡು ಸಮಾಜಗಳು, ಹಿಂದೂ ಮಹಮ್ಮದೀಯವೆಂಬೆರಡಷ್ಟೆ ಮುಸಲ್ಮಾನರಲ್ಲಿ ಬದರುದ್ದಿನ್ ತಯಾಬ್ಜಿ, ನವಾಬ್ ಸಯ್ಯದ್ ಮಹಮ್ಮದರಂತಹ ಪ್ರಮುಖರೊಬ್ಬರಿಬ್ಬರು ಕೊಂಗ್ರೆಸು ಪಕ್ಷ ಸೇರಿದ್ದರೂ ಆ ಸಮುದಾಯದ ಬಹುಪಕ್ಷವು ಕೊಂಗ್ರೆಸು ಗೋಜಿಗೆ ಹೋಗದೆ ತಮ್ಮದೊಂದು ಪ್ರತ್ಯೇಕ ಮೊಸ್ಲೆಮ್ ಲೀಗ್ ಸಭೆಯನ್ನು ಏರ್ಪಡಿಸಿ ಸರಕಾರದ ಪ್ರೀತಿಯನ್ನೇ ಸಂಪಾದಿಸುವಂತೆ ವರ್ತಿಸಿ ತಮ್ಮ ಪುರೋಭಿವೃದ್ಧಿಯನ್ನು ಸಾದಿಸುತ್ತಾರೆ ಹಿಂದುಗಳು ಇಷ್ಟು ತನಕ ನೇಷನಲ್ ಕೊಂಗ್ರೆಸ್ಸೆಂಬ ಗುಲ್ಲನ್ನು ಅವಲಂಬಿಸಿ ಸ್ವಾರ್ಥದ ಆರೋಪಣೆಯ ಹೆದರಿಕೆಯಿಂದ ಹಿಂದು ಎಂಬ ಮಾತ್ರಕ್ಕೆ ಅಂಜಿ ಎಲ್ಲಾ ವಿಷಯಗಳಲ್ಲಿಯೂ ಇಡೀ ಜನಾಂಗದ ಪರವಾಗಿ ನಿಂತು ಸರಕಾರದ ಅವಿಶ್ವಾಸಕ್ಕೂ ಅಂಗ್ಲೋ ಇಂಡಿಯನರ ವಿರೋದಕ್ಕೂ ಪಾತ್ರರಾದರು ಮುಸಲ್ಮಾನರಾದರೋ ತಮ್ಮ ಲೀಗ್ ಮುಖಾಂತರ ಬೇಗನೇ ಒಂದಾಗಿ ಇಷ್ಟಾರ್ಥವನ್ನು ಸಾಧಿಸಿದರು ಹಿಂದುಗಳು ಹಿಂದುಳಿದರು ಪಂಜಾಬದ ಹಿಂದುಗಳಿಗೆ ಇದು ಅತೀ ಸಂಕಷ್ಟಕರವಾಯಿತು ಅಲ್ಲಿ ಮುಸಲ್ಮಾನರ ಸಂಖ್ಯೆಯು ಹೆಚ್ಚಿದ್ದು ಹಿಂದುಗಳಿಗೆ ಹೊಸ ಏರ್ಪಾಡುಗಳ ಸಂಗತಿಯಲ್ಲಿಯೂ ಸರಕಾರಿ ನೌಕರಿ ವಿಷಯದಲ್ಲಿಯೂ ಅನ್ಯಾಯವಾಗಿದೆಂದು ತೋರುವದು ಇದಲ್ಲದೆ ಹಿಂದು ಸಮಾಜಕ್ಕೆ ಸಂಬಂಧಿಸಿದ ಸಾಮಾಜಿಕ, ಸಾಂಪತ್ತಿಕ ವಿಷಯಗಳನ್ನು ಚರ್ಚಿಸಲಿಕ್ಕೆ ಹಿಂದೂ ಸಭೆಯೊಂದು ಅವಶ್ಯಕವದೆ ಸಂಸ್ಕೃತ ವಿದ್ಯಾಪ್ರಚಾರ ಪುರಾಣೇತಿ ಹೊಸ ಜ್ಞಾನ ಪ್ರಸಾರ, ಆಯುರ್ವೇದ ಪುನರುಜ್ಜೀವನ, ಪತಿತ ಕುಲೋದ್ಧಾರ, ಮೊದಲಾದ ವಿಷಯಗಳು ಹಿಂದುಗಳ ಉತ್ಕರ್ಷಗೆ ಅವಶ್ಯಕವಾಗಿದ್ದರೂ ಅವನ್ನು ನೇಷನಲ್ ಕೊಂಗ್ರೆಸಿನಂಥ ಸಭೆಯಲ್ಲಿ ಚರ್ಚಿಸಲವಕಾಶವಿಲ್ಲದ್ದರಿಂದ ಆ ಬಗ್ಗೆ ಹಿಂದೂ ಪರಿಷದವೇ ತಕ್ಕ ಸ್ಥಾನವಾಗಿದೆ. ಹಿಂದೂ ಧರ್ಮವನ್ನೂ ಹಿಂದೂ ಸಮಾಜಿಕ ಪ್ರಕೃತಿಯನ್ನೂ ರಕ್ಷಿಸಲೋಸುಗವೂ ಹಿಂದುಗಳ ಮೇಲ್ಮೆಯನ್ನು ಸಾಧಿಸಲೋಸುಗವೂ ಈ ಸಭೆಯು ಸ್ಥಾಪಿಸಲ್ಪಟ್ಟಿದೆ. ಯಾವ ಸಮಾಜವೂ ತನ್ನನ್ನು ತಾನೇ ಅರಿಯುವದಿಲ್ಲವೋ ತನ್ನ ಭೂತ ಚರಿತ್ರೆಯಲ್ಲಿ ಹೆಚ್ಚಳಪಡುವದಿಲ್ಲವೋ, ಯಾವದು ತನ್ನ ಭವಿಷ್ಯದ್ಭಾಗ್ಯವನ್ನು ನಂಬಿ ಅಭಿವೃದ್ಧಿ ಪಥದಲ್ಲಿ ನಡೆಸುವದಿಲ್ಲವೋ, ಆ ಸಮಾಜವು [illegible]ವೆಂದರಿಯಬೇಕು.

ಆದರೆ ಹಿಂದೂಗಳು ಜಾಗ್ರತರಾಗಿ ತಮ್ಮ ದುಃಸ್ಥಿತಿಯನ್ನು ಉಚಿತ ಸಮಯದಲ್ಲಿ ಅರಿತು ತನ್ನ [illegible]

ದಲ್ಲಿ [illegible] ಪ್ರಥಮ ಹಿಂದೂ ಪರಿಷದವು ಲಾಹೋರಿನಲ್ಲಿ ಕಳೆದ ೨೦ನೇ ತಾರೀಕು ಬುಧವಾರ ನೆರೆಯಿತು. ಒಂದು ಸಾವಿರಕ್ಕೆ ಮೀರಿ ಪ್ರತಿನಿಧಿಗಳು ಬಂದಿದ್ದರು.

ಪಂಜಾಬ ಚೀಫ್ ಕೋರ್ಟು ಜಡ್ಜರಾಗಿದ್ದ ರಾವ್ ಬಹದ್ದೂರ್ ಲಾಲಚಂದರು ಆಮಂತ್ರಣ ಸಭೆಯ ಅಧ್ಯಕ್ಷರಾಗಿದ್ದರು. ಅವರು ತಮ್ಮ ಭಾಷಣದಲ್ಲಿ ಪ್ರಕೃತ ಕಾಲಚಿನ್ಹಗಳನ್ನು ಸರಿಯಾಗಿ ಬಣ್ಣಿಸಿದರು. ಈಗ ಹಿಂದೂ ದೇಶದಲ್ಲಿಯ ವಿವಿಧ ಸಮಾಜಗಳೊಳಗೆ ಕಠಿಣ ಮೇಲಾಟ ತೊಡಗಿದೆ ಈ ಹೋರಾಟದಲ್ಲಿ ಯೋಗ್ಯತೆ ಪ್ರಕಾರ ಜಯ ಸಿಕ್ಕುವದು ಆತ್ಮಜ್ಞಾನ, ಯೋಗ್ಯತೆ, ಐಕ್ಯ ಈ ಮೂರು ಗುಣಗಳು ಯಾವದೊಂದು ಸಮಾಜದ ಪುರೋಭಿವೃದ್ಧಿಗೆ ಆವಶ್ಯಕವದೆ ಅವನ್ನೇ ನಮ್ಮ ಆದರ್ಶವಾಗಿ ಕೈಕೊಳ್ಳಬೇಕೆಂದು ರಾವ್ ಬಹದ್ದೂರರವರು ಹೇಳಿಕೊಂಡರು ನಮ್ಮ ಪ್ರಕೃತ ಸ್ಥಿತಿಯ ಚತುರಸ್ರವನ್ನು ಪರಿಗಣಿಸಿ ಇತರಪರ ಸ್ವಾರ್ಥ ಸಿದ್ಧಿಗೆ ಉಪಾಯವನ್ನು ಯೋಜಿಸಿ ಇಷ್ಟಾರ್ಥವನ್ನು ಕೈಗೂಡಿಸುವದೇ ಸಾಂಘಿಕ ಆತ್ಮಜ್ಞಾನದ ಲಕ್ಷಣವಾಗಿದೆ

ಸರ್ ಪ್ರತುಲಚಂದ್ರ ಚಟ್ಟೋಪಾಧ್ಯಾಯರನ್ನು ಸಭೆಯ ಅಧ್ಯಕ್ಷರಾಗಿ ಆರಿಸಿದರು ಹಿಂದೂ ಸಮಾಜದ ಸಾಂಪತ್ತಿಕ ಸಾಂಘಿಕ ಸ್ಥಿತಿಯ ಪರಿಷ್ಕಾರಕ್ಕೆ ಇಂತಹದೊಂದು ಸಭೆಯು ಅವಶ್ಯವದೆಯೆಂದೂ ರಾಷ್ಟ್ರೀಯ ವಿಷಯಗಳು ಇಡೀ ಜನಾಂಗದ ಪ್ರತಿನಿಧಿಗಳ ಸಭೆಯಲ್ಲಿ ಚರ್ಚಿಸತಕ್ಕವಾದ್ದರಿಂದ ಹಿಂದೂ ಸಭೆಯು ಅವನ್ನು ತೊರೆದದ್ದು ಯುಕ್ತವೆಂದೂ ಪ್ರಕಟಕೊಡಿಸಿದರು ಹೊಸ ಏರ್ಪಾಡುಗಳ ಸಂಗತಿಯಲ್ಲಿಯೂ ಲೇಂಡ್ ಏಲಿಯನೇಷನ್ ಆಕ್ಟು ಮೊದಲಾದ ಕೆಲವು ಕಾನೂನುಗಳ ಸಂಬಂಧವೂ ಹಿಂದುಗಳು ಸಂಕಷ್ಟ ವ ಅನ್ಯಾಯ ಹೊಂದಿರುವರೆಂದು ತಿಳಿಯಪಡಿಸಿದರು

ಸಂಸ್ಕೃತ ಹಿಂದಿ ಪಂಜಾಬಿ ಭಾಷಾ ಜ್ಞಾನವನ್ನು ಪಸರಿಸಬೇಕೆಂದೂ ಹಿಂದುಗಳ ಪುರಾಣೇತಿಹಾಸ ಕಥೆಗಳನ್ನೂ ಸಿಕ್ಕರ ಪುರಾಣ ಪ್ರವಚನವನ್ನೂ ರಾಷ್ಟ್ರೀಯ ಉತ್ಸವಗಳನ್ನೂ ಪ್ರೋತ್ಸಾಹಿಸಬೇಕೆಂದೂ ಅಧ್ಯಕ್ಷರು ಅಭಿಪ್ರಾಯಪಟ್ಟರು ಆಯುರ್ವೇದ ವೈದ್ಯ ಪದ್ಧತಿಯನ್ನು ಯುರೋಪಿಯ ಪದ್ಧತಿಯೊಡನೆ ಒಂದಕ್ಕೊಂದು ಸಹಕಾರಿಯಾಗಿ ಸ್ಥಾಪಿಸಬೇಕೆಂದು ಈ ಬಗ್ಗೆ ಸರಕಾರದವರೂ ಮನಸ್ಸುಕೊಡಬೇಕೆಂದು ಅಪ್ಪಣೆಕೊಡಿಸಿದರು ನಮ್ಮೊಳಗಿನ ಬಾಲವಿವಾಹ ಬಾಲವೈಧವ್ಯ ಪರಧರ್ಮಾ[illegible]ಲಂಬನ ಮೊದಲಾದ ಕಾರಣಗಳಿಂದ ಹಿಂದೂ ಜನಾಂಗವು ಸಂಖ್ಯೆಯಲ್ಲಿಯೂ ದೇಹದಾರ್ಢ್ಯದಲ್ಲಿಯೂ ದಿನದಿನೇ ಕ್ಷೀಣಿಸುವದನ್ನು ಖಾನೇಷುಮಾರಿ ಲೆಖ್ಖದ ಆಧಾರದಿಂದ ರಚಿಸಿ ಪ್ರಕಟಿತವಾದ "ಕ್ಷಯಿಸುವ ಕುಲ" ವೆಂಬ ಒಂದು ಪುಸ್ತಕವನ್ನು ಕುರಿತು ಹಿಂದೂಗಳನ್ನು ಅದನ್ನು ಪರಿಶೀಲಿಸಬೇಕೆಂದು ಅಧ್ಯಕ್ಷರು ಬೋಧಿಸಿದರು ಕೀಳ ಜಾತಿಯವರನ್ನು (ಅವರ ಮೇಲೆ ವಿಧಿಸಿದ ನಿರ್ಬಂಧಗಳ ಮೂಲಕ) ಪರಮತಕ್ಕೆ ದೂಡುವದು ಬರೇ ಹುಚ್ಚುತನವೆಂದು ತುಚ್ಛೀಕರಿಸಿದರು

ಲಾಲಾ ಲಾಜಪತರಾಯಿಯವರು ತಮ್ಮ ಭಾಷಣದಲ್ಲಿ ಪ್ರಕೃತ ಸ್ಥಿತಿಯನ್ನು ಮುಚ್ಚುಮರೆಯಿಲ್ಲದೆ ಬಣ್ಣಿಸಿದರು ಹಿಂದೂಗಳು ಪ್ರತ್ಯೇಕ ಜನಾಂಗವೆಂದು ಎಣಿಸಬೇಕು ಯಾಕೆಂದರೆ ಅವರ ಸುಧಾರಣೆಯು ಪ್ರತ್ಯೇಕವಾಗಿದೆ ಹಿಂದುಗಳು ಒಂದಾಗಿ ಏಳದೆಹೋದ್ದೆ ಭಾರತೀಯ ಜನಾಂಗವು ಅಸಾಧ್ಯ ರಾಷ್ಟ್ರೀಯ ವಿಷಯಗಳಲ್ಲಿ ತ್ಯಾಗದಿಂದ ಶುಭ ಪರಿಣಾಮವಾಗುವದೆಂದು ತಾನು ನಂಬುವದಿಲ್ಲವೆಂದು ಹೇಳಿದರು ಹಿಂದೂ ಮಹಮ್ಮದೀಯ ಐಕ್ಯವು ಇಷ್ಟು ತನಕ ವಿಫಲವಾಗಿದೆ ಹಿಂದೂಗಳು ತತ್ಕಾಲದಲ್ಲಿ ಸರ್ವ ವಿಷಯಗಳಲ್ಲಿಯೂ ಹಿಂದುಳಿದಿರುವರು. ಮಹಮ್ಮದೀಯರಾದರೋ ಐಕ್ಯದಲ್ಲಿಯೂ ಒಕ್ಕಟ್ಟಿನಲ್ಲಿಯೂ ಬಲಗೊಂಡಿರುವರು "ಭಾರತೀಯ ಐಕ್ಯ" ವೆಂಬ ಗಳವಾರದಿಂದ ಜನಾಂಗವು ಒಂದಾಗದು, ಅದು ನಿರರ್ಥಕ ಹಿಂದೂಗಳು ಅದರ ಬದಲಿಗೆ ಪತಿತ ಕುಲಗಳ ಕಡೆಗೆ ಲಕ್ಷ್ಯಕೊಟ್ಟು ಅವರನ್ನುದ್ಧರಿಸಲಿ ಈಗ ಹಿಂದೂಸ್ಥಾನದ ವಿವಿಧ ಮತಗಳೊಳಗೆ ನಡಿಯುವ ಹೋರಾಟದಲ್ಲಿ ತಾನು ಮೊದಲು ಹಿಂದು ನಂತರ ಭಾರತೀಯನೆಂದು ವರ್ತಿಸುವೆನು ಆದರೆ ಪರದೇಶೀಯರೊಡನೆ ತಾನು ಮೊದಲು ಭಾರತೀಯ ನಂತರ ಹಿಂದುವೆಂದು ನಡಕೊಳ್ಳುವೆನು

ಮುಸ್ಲಿಮ್ ಲೀಗ್, ಜೈನ ಪರಿಷದ, ಬ್ರಹ್ಮೋ ಪರಿಷದ, ಹಿಂದೂ ಪರಿಷದ ಮೊದಲಾದ ಸಭೆಗಳು ದಿನೇದಿನೇ ವರ್ಧಿಸುತ್ತಿರುವವು ಕೊಂಗ್ರೆಸ್ ಸಭೆಯ ವರ್ಚಸ್ಸಿನ್ನು ಸದ್ಯ ಇಳಿಯಿತೆನ್ನಬೇಕು ಅಂದರೆ ಭಾರತೀಯರು ಇಡೀ ಒಂದು ಜನಾಂಗವಾಗುವ ಮೊದಲು ವಿವಿಧ ಮತಾವಲಂಬಿಗಳು ಒಂದಾಗಬೇಕೆಂದೂ ಭಾರತೀಯ ಜನಾಂಗವು ತದನಂತರದ ವಿಷಯವೆಂದೂ ಕಾಲಚಿನ್ಹಗಳಿಂದ ವ್ಯಕ್ತವಾಗುವದು. ಈ ದಿನಗಳು ಆಯಾ ಮತಗಳು ತಮ್ಮೊಳಗೆ ಐಕ್ಯ ಬೆಳಸುವ ದಿನವೆಂದು ತೋರುವದು. ಈ ವಿವಿಧ ಸಮಾಜಗಳು ಪರಸಮಾಜದೊಡನೆ ವೈಷಮ್ಯಕ್ಕೆ ಎಡೆಗೊಡದೆ ತಮ್ಮ ಉತ್ಕರ್ಷೆಯನ್ನೇ ಕೈಗೂಡಿಸಿದರೆ ಅದು ಭರತಖಂಡಕ್ಕೆ ಶ್ರೇಯಸ್ಕರವೂ ಭಾರತೀಯ ಜನಾಂಗ ನಿರ್ಮಾಣಕ್ಕೆ ಪೀಠಿಕೆಯೂ ಆಗುವದು

ಪೀಡಿತ ಜನೋದ್ಧಾರಕ ಸಂಘ ಮಂಗಳೂರು. ಈ ಸಂಘಕ್ಕೆ ಸೇರಿದ ಮಂಗಳೂರು ಕೋರ್ಟು ಗುಡ್ಡೆ ಬಳಿಯಲ್ಲಿರುವ ಪಂಚಮರ ಶಾಲೆಯ ಪ್ರಥಮ ವರ್ಷಾಂತ್ಯವು ನಮ್ಮ ಜಿಲ್ಲಾ ಕಲೆಕ್ಟರರವರ ಅಧ್ಯಕ್ಷತೆಯಲ್ಲಿ [illegible] ಜರಗಿತು. ತಮ್ಮ ಬಂಧುವರ್ಗದವರಾದ [illegible]

ಯೂ ಅನೇಕ ಮಾನ್ಯ ಗೃಹಸ್ಥರು ಬಂದಿದ್ದರಲ್ಲದೆ, ಜರ್ಮನ್-ಪ್ರೊಟೆಸ್ಟಾಂಟ್ ಮಿಶನರಿಗಳ ಕಡೆಯಿಂದಲೂ ರೋಮನ್ ಕೆಥೋಲಿಕ್ ಜೆಜೆಯುಟರ ಕಡೆಯಿಂದಲೂ ಅವರವರ ಪ್ರತಿನಿಧಿಗಳು ಬಂದಿದ್ದರು ಪಂಚಮ ವಿದ್ಯಾರ್ಥಿಗಳು ಅಧ್ಯಕ್ಷರನ್ನು ಈ ಬಗ್ಗೆಯೇ ಕವನಿಸಲ್ಪಟ್ಟ ಪದ್ಯಗಳಿಂದ ವಂದಿಸಿನ ನಂತರ, ಶಾಲೆಯ ಆಯಾ ದರ್ಜೆಗಳಲ್ಲಿ ಜಾಣತನವನ್ನು ತೋರಿಸಿದವರಿಗೆ ಅವರವರ ಯೋಗ್ಯತೆ ಪ್ರಕಾರ ಇನಾಮುಗಳು ಹಂಚಲ್ಪಟ್ಟವು.

ಈ ಸಂದರ್ಭದಲ್ಲಿ ಪೀಡಿತ ಜನೋದ್ಧಾರಕ ಸಂಘದ ಸೆಕ್ರೆಟರಿಗಳಾದ ರಾ ಕುದ್ಮೂಲ ರಂಗರಾಯರಿಂದ ಓದಲ್ಪಟ್ಟ ಪಂಚಮರ ಶಾಲೆಯ ವರಧಿಯು ರಾ ರಂಗರಾಯರವರು ತಮ್ಮ ಕಮ್ಮಿಟಿಯವರ ಸಹಕಾರದಿಂದ ಪಂಚಮರ ಅಭಿವೃದ್ಧಿಯನ್ನು ಹ್ಯಾಗೆ ಸಾಧಿಸುತ್ತಿರುವರೆಂಬದನ್ನು ವ್ಯಕ್ತಪಡಿಸುವುದು ಕಳೆದ ನವಂಬರ ತಿಂಗಳಲ್ಲಿ ಶಾಲಾ ಹುಡುಗ ಹುಡುಗಿಯರ ಸಂಖ್ಯೆಯು ೭೬ ಕ್ಕೆ [illegible] ಮಾರ್ಚಿ ತಿಂಗಳಲ್ಲಿ [illegible] ತ್ತೆಂಬದಾಗಿಯೂ ಪ್ರಕೃತ ವಿದ್ಯಾರ್ಥಿಗಳ ಸಂಖ್ಯೆಯು ೬೦ ಇರುವುದಾಗಿಯೂ ತಿಳಿದುಬರುತ್ತದೆ ನಮ್ಮಲ್ಲಿಯ ಪಂಚಮರ ವಿದ್ಯಾರ್ಥಿಗಳನ್ನು ಶಾಲೆ ಹತ್ತ [illegible] ಮಾಡುವುದೇ ಕಷ್ಟಸಾಧ್ಯವಾಗಿರುತ್ತಾ [illegible] ವರನ್ನು ಒಂದೇ ಪ್ರಕಾರವಾಗಿ ಶಾಲೆಯಲ್ಲಿ ಹಾಜರಿರುವಂತೆ ಮಾಡುವುದು ಇನ್ನಷ್ಟು ಪ್ರಯಾಸದ [illegible] ಶಾಲೆಯು ಪ್ರಕೃತ [illegible] ಗಳಿಂದ ಇತ್ತಲಾಗೆಯೇ ಸ್ಥಾಪಿಸಲ್ಪಟ್ಟದ್ದರಿಂದ ಶಾಲಾ ವಿದ್ಯಾರ್ಥಿ [illegible] ಯು ತೃಪ್ತಿಕರವಾಗಿರುವುದು ಶಾಲೆಗಳಲ್ಲಿಯೇ [illegible] ಹೊಂದಿ ಅಲ್ಲಿಯೇ ಒಳ್ಳೆ ಶಿಕ್ಷಣವನ್ನು ಪಡೆದು ಸದ್ವರ್ತನೆಯುಳ್ಳವರಾಗುವಂತೆ [illegible] ಒಬ್ಬ ಪಂಚಮ ಯುವಕರನ್ನು ತರಬೇತು ಮಾಡಿರುವರು ಇಂಥವರು ಶಾಲೆಯನ್ನು ಬಿಟ್ಟ ನಂತರ ಪಂಚಮ ಸಮಾಜದವರಲ್ಲಿ ತಮ್ಮ ಒಳ್ಳೆ ನಡತೆ [illegible] ಕೋರಿಕೆಯಿಂದ ಕಮಿಟಿಯವರು ಈ ಏರ್ಪಾಡು ಮಾಡಿರುವರಾಗಿಯೂ ಈ ಏರ್ಪಾಡಿನಿಂದ ಪ್ರಯೋಜನ ತೋರಿಬರುತ್ತದಾಗಿಯೂ ವರದಿಯಲ್ಲಿ ಸೂಚಿಸೋಣಾಗಿರುವುದೆ ಶಾಲೆಯಲ್ಲಿ ಕೊಡೋಣಾಗುವ ಶಿಕ್ಷಣದ ಪದ್ಧತಿಯು ಸುತ್ತ [illegible] ಓದುಬರೆಯುವದರ ಹೊರತು ಪಂಚಮರಿಗೆ ತಮ್ಮ [illegible] ಜೀವನಗಳಲ್ಲಿ [illegible] ಬೀಳುವ ಕೈಗಾರಿಕೆ ಮೊದಲಾದವುಗಳನ್ನು ಕಲಿಸುತ್ತಿರುವರು [illegible] ಪ್ರಕೃತ ಕೈಮಗ್ಗಗಳ ಒಂದು ಕಾರ್ಖಾನೆಯು ಸ್ಥಾಪಿಸಲ್ಪಟ್ಟಿದೆ ತೋಟ ಕೆಲಸ ಮೊದಲಾದ ವೃತ್ತಿಗಳನ್ನು ಇವರು ಸಮವಾಗಿ ಮಾಡುವಂತೆ [illegible] ತರಬೇತಿಯು ದೊರೆಯುತ್ತಲಿದೆ [illegible] ಆರೋಗ್ಯ [illegible] ಟಿಪ್ಪಾಲಾಪಿಂಸು ಕ್ರಮ [illegible] ಗುತ್ತವೆ ಆಗಿಯುವುದು [illegible] ಕೆಲಸಗಳಲ್ಲಿ ಪ್ರವೀಣರಾದವರಿಗೆ ಇನಾಮುಗಳು ಕೊಟ್ಟಲ್ಪಟ್ಟವೆ [illegible] ರಾ [illegible] ಪಂಚಮರ ವಿದ್ಯಾವೃದ್ಧಿಯನ್ನು ಸಾಧಿಸುವ [illegible] ವರದಿ [illegible] ಸಿದರು

ಶಾಲಾ ಖರ್ಚಿಗೆ ಮುಷ್ಟಿ ಫಂಡಿನವರಿಂದ [illegible] ನಗದಿಯಾಗಿ ರೂ ೪೬೮—೭—[illegible] ಬರಲಾಗಿರುವುದು, ಈ ಸೈಕ [illegible] ಯವರು ರೂ ೯೦—೦—೦ ನ್ನು ಸಹಾಯದ್ರವ್ಯವಾಗಿ ಕಟ್ಟಿರುವರು. ಕೆಲವು ಜನ ವಿದ್ಯಾವಂತ ಯುವಕರು ತಮ್ಮ [illegible] ದೊರೆಯುವ ಆದಿತ್ಯವಾರ ರಜಾ ದಿನದಲ್ಲಿ [illegible] ಆಯಾ ಮನೆಗಳಲ್ಲಿ ಕೂಡಿಸಿಟ್ಟ ಅಕ್ಕಿಯನ್ನು [illegible] ವ ಮುಷ್ಟಿ ಫಂಡಿನ ಏರ್ಪಾಡಿನಿಂದ [illegible] ತಿಳಿಯುತ್ತೇವೆ. ದೀನರ ಸಹಾಯಾರ್ಥವಾದ [illegible] ನಿವಾಸಿಕರು ಪ್ರೋತ್ಸಾಹಿಸುವರಾಗಿ ಕೋರುವೆವು ಈ [illegible] ಮನೆಗಳು ಪ್ರತಿನಿತ್ಯ ಒಂದು ಮುಷ್ಟಿ ಅಕ್ಕಿಯನ್ನು ಕೊಟ್ಟರೆ [illegible] ಯನ್ನು ಸಂಗ್ರಹಿಸಿಕೊಟ್ಟಂತಾಯಿತು [illegible] ಇನ್ನಷ್ಟು [illegible] ಈ ಅಲ್ಪ ರೀತಿಯಲ್ಲಿ ನೆರವಾದ್ದಲ್ಲಿ ಪಂಚಮರ ಅಭಿವೃದ್ಧಿಯ ಮಹಾ ಕಾರ್ಯವನ್ನು ಸಾಧಿಸುವುದು ಮತ್ತಷ್ಟು ಸುಲಭವಾಗುವುದು ಪಂಚಮರ ಶಾಲೆಯ ಮಗ್ಗದ ಕಾರ್ಖಾನೆಯಲ್ಲಿ ರೂ ೧೫೭—೧೩—೭ ಮೌಲ್ಯದ ವಸ್ತ್ರವು [illegible] ತಯಾರಿಸಲ್ಪಟ್ಟಿತು ಕಾರ್ಖಾನೆಗೆ ಖರ್ಚು ರೂ ೩೦೫—೧೪—೯ ಆಗಿತ್ತೆಂಬದಾಗಿ ತೋರಿಬರುತ್ತದೆ

ನಮ್ಮಲ್ಲಿಯ ಪಂಚಮರಷ್ಟು ದೀನಸ್ಥಿತಿಯನ್ನು ಹೊಂದಿದವರು ಮುಂಬಯಿ ಯಾ ಮದ್ರಾಸು ಸಂಸ್ಥಾನದ ಇತರ ಕಡೆಗಳಲ್ಲಿಯ ಪಂಚಮರಲ್ಲಿಲ್ಲವಾಗಿ ತಿಳಿಯುತ್ತೇವೆ ಈ ಎಲ್ಲಾ ಕಡೆಯಲ್ಲಿಯ ಪಂಚಮರಿಗೂ ಇತರ ಶ್ರೇಷ್ಠ ಜಾತಿಯವರಿಗೂ ದೇಶಭಾಷೆಯು ಒಂದೇಯಾಗಿದ್ದ ಕಾರಣ ಒಂದಾವರ್ತಿ ಈ ಭಾಷೆಯ ಮಾಹಿತಿಯನ್ನು ಪಡೆಯುತ್ತಲೇ ಈ ಭಾಷಾ ಮುಖಾಂತರ ವಿದ್ಯಾಪರಿಚಿತಿಯು ಇವರಲ್ಲಿ ಬಹಳ ವಿಶೇಷವಾಗಿ ಉಂಟಾಗುವುದು. ಆದರೆ ನಮ್ಮ ಜಿಲ್ಲೆಯಲ್ಲಿ ಈ ಅನುಕೂಲತೆಯು ಇರುವುದಿಲ್ಲವಾದ್ದರಿಂದ ಪಂಚಮರ ಅಭಿವೃದ್ಧಿಗೆ ಇನ್ನಷ್ಟು ಹೆಚ್ಚಾಗಿ ಸಾಹಸ ಪಡಬೇಕಾಗಿದೆ.

ಶಾಲಾ ವರಧಿಯಲ್ಲಿ ರಾ। ರಂಗರಾಯರವರು [illegible] ಲಕ್ಷ್ಯಕ್ಕೆ ಇನ್ನೊಂದು ವಿಷಯವನ್ನು ತಂದಿರುವರು. ಈ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಹೊಂದಿ ಜಿಲ್ಲಾ ಕಲೆಕ್ಟರವರಿಂದ ಹುಜೂರು ಖಾಪೆಖಾನೆಯಲ್ಲಿ ಕೆಲಸಕ್ಕೆ ನೇಮಿಸಲ್ಪಟ್ಟ ಪಂಚಮ ಯುವಕನೊಬ್ಬನು ಕ್ರೈಸ್ತಮತವನ್ನವಲಂಬಿಸಿರುವನು. ಇದರಿಂದ ಉಚ್ಚ ವರ್ಣದ ಹಿಂದೂಗಳಲ್ಲಿ ಅನೇಕರಲ್ಲಿ ಪಂಚಮರ ವಿದ್ಯಾಭ್ಯಾಸದ ಉಪಯೋಗತೆಯ ವಿಷಯವಾಗಿ ಬಹಳ ಅನಾವಶ್ಯಕ ಗದ್ದಲಕ್ಕೆ ಕಾರಣವಾಯಿತು. ಉಚ್ಚ ಜಾತಿಯವರಲ್ಲಿ ಅನೇಕರು ಕ್ರೈಸ್ತಮತವನ್ನವಲಂಬಿಸುವಾಗ ಯಾವ ಪ್ರಸ್ತಾಪವೂ ಇಲ್ಲದೆ, ಹೊಲೆಯರಲ್ಲಿ ಒಬ್ಬನು ಕ್ರೈಸ್ತನಾಗಿ ಈ ಗದ್ದಲವೆದ್ದರೆ ಯಾವ ಸಾರ್ಥಕ್ಯವೂ ಇದರಿಂದ ಉಂಟಾಗದಿಕ್ಕಿಲ್ಲ ಆದರೆ ಹೀಗೆ ಕ್ರೈಸ್ತಮತವನ್ನವರವಲಂಬಿಸದಂತೆ ನಾವೇ ಒಂದು ಉಪಾಯವನ್ನು ಮಾಡಬಹುದು ಹೊಲೆಯನಾದರೂ ಆತನು ಕ್ರೈಸ್ತಮತವನ್ನವಲಂಬಿಸಿದ ಕೂಡಲೇ ಇತರ ಜಾತಿಯವರು ಆತನನ್ನು ಮುಟ್ಟುವಷ್ಟು ಪವಿತ್ರತೆಯು ಆತನಿಗೆ ಬರುವುದು ಈ ಪವಿತ್ರತೆಯನ್ನು ನಾವೇ ಆತನಿಗೆ ಒದಗಿಸಿಕೊಟ್ಟಲ್ಲಿ ವಿದ್ಯೆಯನ್ನು ಹೊಂದಿದ ಪಂಚಮನಿಗೆ ತನ್ನ ಸಮಾಜದಲ್ಲಿಯೇ ಇರುವುದರಿಂದ ತೃಪ್ತಿಯುಂಟಾಗುವುದು. ಮಂಗಳೂರಿನ ಡಿಸ್ಟ್ರಿಕ್ಟ್ ಮುನಸೀಫರೂ ಶ್ರೇಷ್ಠವರ್ಣದ ಬ್ರಾಹ್ಮಣ ಕುಲದವರೂ ಆದ ಮ। ರಾ ರಾ ಕೃಷ್ಣರಾವ್‌ರವರು ಪುರಾಣ ಉಪನಿಷದಗಳಲ್ಲಿ ಪಂಚಮರನ್ನು ಮುಟ್ಟಕೂಡದೆಂಬದಾಗಿ ಇಲ್ಲವೆಂದು ತಾವು ಈ ಸಂದರ್ಭದಲ್ಲಿ ಅಪ್ಪಣೆಕೊಟ್ಟ ಭಾಷಣದಲ್ಲಿ ಸಭಿಕರೆಲ್ಲರಿಗೂ ತಿಳಿಯಹೇಳಿದ್ದಲ್ಲದೆ ಎರಡೆರಡಾವರ್ತಿ ಪಂಚಮರ ವಿದ್ಯಾರ್ಥಿಗಳನ್ನು ಸಭಿಕರ ಮುಂದೆ ಮುಟ್ಟಿ ತಾನು ಹೀಗೆ ಪಂಚಮರನ್ನು ಮುಟ್ಟಿದ್ದರಿಂದ ಭ್ರಷ್ಟನಾಗುವೆನೆಂದು ಎಂದೂ ಭಾವಿಸುವದಿಲ್ಲವಾಗಿಯೂ ಈ ಭ್ರಷ್ಟ ನಿವಾರಣೆಗಾಗಿ ಸ್ನಾನ ಮಾಡುವುದಿಲ್ಲವಾಗಿಯೂ ಪ್ರಮಾಣ ಪೂರ್ವಕ ಹೇಳಿದರು. ಪಂಚಮರ ಅಭಿವೃದ್ಧಿಯನ್ನು ಸಾಧಿಸಲಿಕ್ಕೂ ಅವರು ವಿದ್ಯೆ ಹೊಂದಿದಾಕ್ಷಣ ಅನ್ಯಮತಗಳನ್ನು ಅವಲಂಬಿಸದ ಹಾಗೆಯೂ ರಾ। ಕೃಷ್ಣರಾಯರವರಿಂದ ಉದಹರಿಸಲ್ಪಟ್ಟಂಥಾ ಈ ಸೂಚನೆಯು ದೀನೋದ್ಧರಣೆಯಿಂದ ದೇಶಾಭಿವೃದ್ಧಿಯನ್ನು ಸಾಧಿಸುವ ದೇಶಾಭಿಮಾನಿಗಳಿಂದ ಅನುಸರಣೀಯವಾಗಿರುವುದು

ಪೀಡಿತ ಜನೋದ್ಧಾರಕ ಸಂಘದ ಪಂಚಮ ಶಾಲಾ ಹುಡುಗರಿಗೆ ಸಹಾಯವನ್ನು ಮಾಡಿದ, ಸೈಂಟ್ ಮೇರಿಸ್ ಔಷಧಾಲಯದ ಡಾಕ್ಟಾರ ಫೆರ್ನಾಂದೀಸ್, ಮಿಸ್. ಹೇಮಪ್ರಭಾ ಬೋಸ್, ತಿರುವಾಂಕೋಡಿನ ಟಿ ಸದಾಶಿವಯ್ಯರ್, ರಾ। ಹೈ ಕೋರ್ಟ್ ವಕೀಲ ಅಮ್ಮೆಂಬಳ ಶ್ರೀನಿವಾಸ ಪೈ ಬಿ ಎ, ಬಿ ಎಲ್, ಮಂಗಳೂರು ಸಾವುಕಾರ ರಾ। ಶ್ರೀನಿವಾಸ ಶ್ಯಾನುಭಾಗ, ಮೆ। ಬಾಗ್ಯನ್, ಊಲನ್ ಮಾರ್ಟಿನ ರಾ। ಸಿ ಆರ್ ಕಾಮತ್, ರಾ। ಉದಿಯಾವರ ಕೃಷ್ಣಯ್ಯ ಬಿ. ಎ, ಮೊದಲಾದವರನ್ನು ವಂದಿಸಿ, ಶಾಲೆಯನ್ನು ಸಂದರ್ಶಿಸಿದ ಮಹನೀಯರ ಹೆಸರುಗಳನ್ನು ಓದಿ ಹೇಳಿ ವರಧಿಯನ್ನು ಮುಕ್ತಾಯ ಪಡಿಸಿರುವರು

ಸರಕಾರದವರಿಂದ ಉಚಿತವಾಗಿ ಕೊಡಲೋಣಾದ ಸ್ಥಳಗಳಲ್ಲಿ ಪಂಚಮರ ವಸ್ತಿಗಳನ್ನು ಸ್ಥಾಪಿಸಿ ಇವರ ಅಭಿವೃದ್ಧಿಯನ್ನು ಸಾಧಿಸಲು ಪ್ರಕೃತ ಕೈಕೊಂಡಿರುವರು. ಹೀಗೆ ವಸ್ತಿಗಳ ಸ್ಥಾಪನೆಯಿಂದ ಪಂಚಮರ ವಿದ್ಯಾಭಿವೃದ್ಧಿ ಮೊದಲಾದವು ಸುಲಭ ಸಾಧ್ಯವಾದ್ದರಿಂದ ರಾ। ರಂಗರಾಯರಿಗೆ ಈ ಬಗ್ಗೆ ಬೇಕಾದ ಸಹಾಯವನ್ನು ಮಾಡುವರಾಗಿ ಕೋರುತ್ತೇವೆ

ಶ್ರೀಕೃಷ್ಣ ಚರಿತ್ರೆ.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿಬಿದ್ದು)

ನಾಲ್ಕನೆಯ ಪ್ರಕರಣ

ಸುಖತತ್ತ್ವ.

ಶ್ರೀ ಕೃಷ್ಣನು ಹೀಗೆಂದನು—"ಗುರುದೇವ, ವೃಂದಾವನದಲ್ಲಿ ಆಕಳು ಮಂದೆಯನ್ನು ಮೇಯಿಸುತ್ತಿರಲು ನನಗೆ ಅಪೂರ್ವವಾದ ಒಂದು ಸಂಗೀತವು ಕೇಳಬರುತ್ತಿದ್ದಿತು ಅದನ್ನು ಕೇಳುತ್ತಲೇ ಮನಸ್ಸನ್ನು ಮತ್ತು ಪ್ರಾಣವನ್ನು ಮೋಹಿಸುವ ಗೀತಗಳನ್ನು ಆಕಾಶದಲ್ಲಿ ಅಪ್ಸರೆಯರು ಹಾಡುತ್ತಿರುವರೋ, ಎಂದು ನನಗೆ ಭ್ರಮೆಯಾಗುತ್ತಿದ್ದಿತು ಆ ಗೀತದ ತಾತ್ಪರ್ಯವಾದರೋ ಹೀಗಿದ್ದಿತು—

'ಈ ಕ್ಷುದ್ರವಾದ ಜಗತ್ತಿನಲ್ಲಿ ಉಂಟಾಗುವ ಹಾಹಾಕಾರವು ನಿನ್ನ ಕಿವಿಯಲ್ಲಿ ಬೀಳುವುದಿಲ್ಲವೇ? ಸಾಮ್ರಾಜ್ಯದಲ್ಲಿ, ಸಮಾಜದಲ್ಲಿ, ಧರ್ಮದಲ್ಲಿ—ಎಲ್ಲೆಲ್ಲಿಯೂ ಶಾಂತಿಯು ಲಾಭವಾಗುವುದಿಲ್ಲವೆಂದು ಈ ಜಗತ್ತು ಹಾಹಾಕಾರವನ್ನು ಮಾಡುತ್ತ ಮೊರೆ ಇಡುತ್ತಲಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಕಲಹ ಹುಟ್ಟಿ ಬೆಳೆಯುತ್ತಿದೆ, ಮತ್ತು ಸ್ವಾರ್ಥವು ದೊಡ್ಡ ಗೊಂದಳವನ್ನು ಉಂಟುಮಾಡಿರುತ್ತದೆ. ಕ್ಷತ್ರಿಯರು ಮತ್ತು ಬ್ರಾಹ್ಮಣರು ಪರಸ್ಪರ ವರ್ಚಸ್ಸನ್ನು ಗಳಿಸುವ ಆಶೆಯಿಂದ [illegible] ಎರಡು [illegible] ಧರ್ಮದಿಂದ [illegible] ರು. [illegible] ಧರ್ಮ

ಸಂಬಂಧದಿಂದುಂಟಾದ ವ್ಯಾಮೋಹದ ತಿಮಿರದಿಂದ ಕಂಗುರುಡರಾದ ಜನರು ಇಂದ್ರಿಯವಾಸನೆಯ ಮೃಗಜಲವನ್ನು ಅನುಸರಿಸಿ, ನಿರಂತರವಾದ ದುಃಖಗಳಲ್ಲಿ ಕೆಟ್ಟುಹೋಗುತ್ತಿರುವರು. ಅವರನ್ನು ನೋಡಿ ನಿನ್ನ ಹೃದಯದಲ್ಲಿ ಕರುಣೆಯು ಒಸರಲಾರದೇ? ವೇದಗಳಲ್ಲಿ ಹೇಳಿರುವ ಧರ್ಮವು ಪೂರ್ಣವಾದುದಲ್ಲ, ಮತ್ತು ಯಜ್ಞಯಾಗಾದಿಗಳನ್ನು ಮಾಡುವ ಕರ್ಮಗಳಾದರೂ ಪೂರ್ಣವಲ್ಲ. ಸರ್ವ ಭೂತಗಳಿಗೆ ಹಿತವನ್ನುಂಟುಮಾಡುವುದೇ ಪೂರ್ಣವಾದ ಧರ್ಮವು, ಮತ್ತು ನಾರಾಯಣನಿಗೆ ಭಕ್ತಿಭಾವದಿಂದ ಕರ್ಮದ ಫಲವನ್ನು ಅರ್ಪಿಸಿ, ಈ ಧರ್ಮವನ್ನು ಸಾಧಿಸುವುದೇ ಯಥಾರ್ಥವಾದ ಕರ್ಮವು. ನಿನ್ನ ಬಾಲ್ಯವಾದರೋ ಮುಗಿಯಿತು, ಈಗ ನೀನು ಕರ್ಮಕ್ಷೇತ್ರದಲ್ಲಿ ಅಗ್ರೇಸರನಾಗು. ಕಾತರವಾದ ಕರುಣಾಸ್ವರದಿಂದ ಜಗತ್ತು ನಿನ್ನನ್ನು ಕರೆಯುತ್ತಿದೆ. ಮುಂದು ಹೋಗು, ಮತ್ತು ಜಗತ್ತಿನ ದುಃಖವನ್ನು ಹೋಗಲಾಡಿಸು."

ಇಷ್ಟನ್ನು ಹೇಳಿ ಕೃಷ್ಣನು ಸುಮ್ಮಗಾದನು. ವೇದವ್ಯಾಸ ಮುನಿಯು ಚಿತ್ರದಂತೆ ತಟಸ್ಥನಾಗಿ ವಿಚಾರದಲ್ಲಿ ಮಗ್ನನಾದನು. ಬಳಿಕ ಕೃಷ್ಣನು ಮರಳಿ ಇಂತೆಂದನು:—"ನಾನು ಅಧ್ಯಯನ ಮಾಡುತ್ತಿರುವಾಗ ಈ ವಿವಿಧ ಕರುಣಾಸಂಗೀತವು ನನ್ನ ಕಿವಿಗಳಲ್ಲಿ ಬೀಳುತ್ತಿದ್ದಿತು. ಈ ಸಂಗೀತವನ್ನು ಯಾರು ಎಲ್ಲಿ ಹಾಡುತ್ತಿರುವರು ಎಂಬುವ ವಿಚಾರದಲ್ಲಿ ನಾನು ಯಾವಾಗಲೂ ತಲ್ಲೀನನಾಗಿರುತ್ತಿದ್ದೆನು. ಗೋಪ್ಲರ ಪೋರನೊಬ್ಬನು ಸಕಲ ಜಗತ್ತಿನ ದುಃಖವನ್ನು ಹೇಗೆ ತಾನು ಪರಿಹರಿಸಬಲ್ಲವನು? ಸಣ್ಣವಾದ ಒಂದು ಪತಂಗವು ವೇದರೂಪಿ ಹಿಮಾಲಯವನ್ನು ಹೇಗೆ ತಾನೇ ಎತ್ತಬಲ್ಲೀತು? ವೇದಗಳ ಸಹನಾತೀತವಾದ ಭಾರದಿಂದ ಒಡೆದುಹೋಗಿರುವ, ಯಜ್ಞಗಳ ದಟ್ಟವಾದ ಹೊಗೆಯ ಮುಗಿಲುಗಳಿಂದ ಮುಸುಕಿರುವ, ಜೀವಗಳ ಬಿಸಿನೆತ್ತರಿಂದ ತೊಯಿಸಿರುವ ಮತ್ತು ಇಂದ್ರಿಯ ವಾಸನೆಯ ಅಗ್ನಿಯಿಂದ ಬೆಂದುಹೋಗಿರುವ ಈ ಭರತಖಂಡದಲ್ಲಿ ನವೀನ ಧರ್ಮದ ಪ್ರಸಾರವು ನನ್ನಿಂದ ಆದೀತೇನು? ಯಾವ ದಿನದಲ್ಲಿ ಗರ್ಗ ಮುನಿಗಳು ಅದೃಷ್ಟಪಟದಲ್ಲಿ ನನ್ನ ನಿಯತಿಯ ರೇಖೆಯನ್ನು ತೋರಿಸಿಕೊಟ್ಟರೋ, ಆ ದಿನದಿಂದ ಈ ನಿಯತಿಯ ಸಂಗೀತವು ನನ್ನ ಕಿವಿಗಳಲ್ಲಿ ಒಂದೇ ಪ್ರಕಾರದಿಂದ ಝೇಂಕರಿಸುತ್ತಲೇ ಇದೆ. ಆಗಾಗ್ಗೆ ನನ್ನ ಹೃದಯದಲ್ಲಿ ಪ್ರಬಲವಾದ ವೈರಾಗ್ಯವು ಜಾಗ್ರತವಾಗುತ್ತಿದೆ. ಈ ಸಂಸಾರವನ್ನು ಬಿಟ್ಟುಬಿಟ್ಟು, ಸನ್ಯಾಸವನ್ನು ಗ್ರಹಣಮಾಡಿ, ನವೀನ ಧರ್ಮವನ್ನು ಪ್ರಸಾರ ಮಾಡಿ, ಜಗತ್ತಿನ ದುಃಖವನ್ನು ನಿವಾರಿಸಬೇಕೆಂದು ನನ್ನ ಮನಸ್ಸಿನಲ್ಲಿ ಆಗಾಗ್ಗೆ ತೋರಿಬರುತ್ತಿದೆ. ಆದರೆ ನಾನು ಕಣ್ಣುಗಳನ್ನೆತ್ತಿ ಮೇಲೆಯೂ ನನ್ನ ಸುತ್ತಲೂ ನೋಡಿದೆನು. ಆಗ್ಯೆ ನನಗೇನ ತೋರಿತು?—ಈ ಬ್ರಹ್ಮಾಂಡರೋ ಎಷ್ಟು ಅನಂತವಾಗಿ ವಿಸ್ತಾರವಾಗಿದೆ! ಇದು ಸುಖ ಮತ್ತು ಸೌಂದರ್ಯಗಳಿಂದ ಯುಕ್ತವಾಗಿ, ಕರ್ಮಸಂಗೀತದಿಂದ ತುಂಬಿರುತ್ತದೆ. ಆಕಾಶದಲ್ಲಿ ಗ್ರಹಗಳೂ, ತಾರೆಗಳೂ ಇವೆ. ಪೃಥ್ವಿಯಲ್ಲಿ ಬೆಟ್ಟಗಳು, ಸಸ್ಯಾದಿಗಳು, ಹುಲ್ಲುಗಾವಲುಗಳು, ನದಿಗಳು ಮತ್ತು ಸಮುದ್ರ ಮುಂತಾದವುಗಳಿವೆ. ಜನ್ಮದೊಡನೆ ಕರ್ಮವು ಅದರ ಬೆನ್ನುಹಿಂದೆಯೇ ಇದೆ. ಈ ಕರ್ಮವೆಂಬುದೇ ನಿಯತಿಯು. ಈ ನಿಯಮಕ್ಕೆ ಮನುಷ್ಯನು ಮಾತ್ರವೇ ತಾನೊಂದು ಅಪವಾದವಾಗಿರುವನೇ? ಆತನು ಕರ್ಮವನ್ನು ಅನುಷ್ಠಿಸುವ ಸ್ಥಾನವು ಆತನ ಜನ್ಮಕ್ಷೇತ್ರ ತಾನೇಯಲ್ಲವೇನು? ಸಂಸಾರ ಮನೆ ತಂದೆ, ತಾಯಿ ಪತ್ನಿ, ಪುತ್ರ—ಇವೆಲ್ಲವೂ ಭ್ರಮೆಯೇ ಏನು? ನಾರಾಯಣಾ, ನಾನು ನನ್ನ ಹೃದಯದ ಉಚ್ಚತಮವಾದ ಮತ್ತು ಪವಿತ್ರವಾದ ಪ್ರವೃತ್ತಿಯನ್ನು ಅಲ್ಲಲ್ಲಿಗೇ ಹಿಸುಕಿಬಿಟ್ಟು, ಜನ್ಮಭೂಮಿಯನ್ನು ಮತ್ತು ಜನ್ಮ ಗೃಹವನ್ನು ತ್ಯಜಿಸಿ ಅರಣ್ಯವನ್ನು ಹೊಗಬೇಕೆಂದು ನಿನ್ನ ಇಚ್ಛೆಯಿರುವುದೇನು? ತಂದೆ, ತಾಯಿ, ಪತ್ನಿ ಪುತ್ರ ಇವರೊಳಗೆ ಒಬ್ಬನಲ್ಲಿಯಾದರೂ ನನ್ನ ಪೂರ್ಣವಾದ ಪ್ರೇಮವನ್ನು ಇಡಬಾರದೆಂದಾದರೆ, ಸಮಗ್ರವಾದ ಮಾನವ ಜಾತಿಯಲ್ಲಿ, ಹಾಗೆಯೇ ಅನಂತವಾದ ಮತ್ತು ಅಚಿಂತ್ಯವಾದ ಪರಮಾತ್ಮನಲ್ಲಿ ಹೇಗೆ ತಾನೇ ಇಡಬಲ್ಲೆನು? ಜನ್ಮ ಭೂಮಿಯಲ್ಲಿ ನನ್ನ ಪ್ರೇಮವು ಇಲ್ಲದಿದ್ದರೆ ಕಲ್ಪನಾತೀತವಾದ ಯಾವ ವಿಶ್ವವೋ, ಅದರಲ್ಲಿ ಹೇಗೆ ತಾನೇ ನಿಂತೀತು? ಗಂಗೆಯು ಜನ್ಮಸ್ಥಾನದ ಬಳಿಯಲ್ಲಿ ಬಹಳ ಚಿಕ್ಕದಾಗಿರುವಳು, ಆದರೆ ಕಡೆಗೆ ಸಾಗರವನ್ನು ಹೋಗಿ ಕೂಡುವಳು. ಮರದ ಚಿಗುರು ಮುಂಚೆ ಸಣ್ಣದಿರುತ್ತದೆ, ಆದರೆ ಕ್ರಮದಿಂದ ಬಳೆದು ಹೋಗಿ, ಸಮಸ್ತವನವನ್ನೇ ತನ್ನ ಛಾಯೆಯಿಂದ ಆವರಿಸಿಬಿಡುತ್ತದೆ. ಮನೆಯನ್ನು ಬಿಟ್ಟು ಕಾಡನ್ನು ಹೊಕ್ಕರೆ, ಮನಸ್ಸಿನಲ್ಲಿಯ ವಾಸನೆಗಳೇನು ಅಳಿದು ಹೋಗುವವೇ? ಮುಳ್ಳು ಗಿಡವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಕೊಂಡುಹೋದರೆ, ಅದರ ಮುಳ್ಳುಗಳೇನು ಉದುರಿಹೋಗುವವೇ? ಸಂಸಾರದಲ್ಲಿಯ ಅನೇಕ ವಸ್ತುಗಳು ಇಂದ್ರಿಯಗಳನ್ನು ತಮ್ಮ ಕಡೆಗೆ ಎಳೆದುಕೊಳ್ಳುತ್ತವೆ, ಮತ್ತು ಅದರಿಂದಲೇ ವಾಸನೆಗಳು ಹುಟ್ಟುತ್ತವೆ. ಕಾಡಿಗೆ ಹೋಗಿ ಇಂದ್ರಿಯಗಳನ್ನು ಉಪವಾಸ ಹಾಕುವುದರಿಂದ ವಾಸನೆಯ ಉರಿಯು ನಂದಿಹೋಗುವುದೇ? ಕುರುಡನಿಗೆ ನೋಡುವುದಕ್ಕೆ ಮತ್ತು ಕಿವುಡನಿಗೆ ಕೇಳುವುದಕ್ಕೆ ಅತ್ಯುತ್ಕಟವಾದ ಇಚ್ಛೆಯಿರುವುದಿಲ್ಲವೇನು? ಮನುಷ್ಯ ಜಾತಿಗೆ ಕಣ್ಣಿಲ್ಲದಿದ್ದರೆ ಅಥವಾ ಕಿವಿ ಕೇಳಬರುವುದಿಲ್ಲವಾದರೆ, ಅದಕ್ಕೆ ಪರಮಾರ್ಥದ ಲಾಭವು ಘಟಿಸೀತೇ? ಇದಲ್ಲದೆ ನಿಜವಾದ ಧರ್ಮದ ದಾರಿಯು ಇದಲ್ಲವು. ಈ ಅಧರ್ಮದ ಹಾದಿಯನ್ನು ನೋಡಿ ನನ್ನ ಹೃದಯವು ವ್ಯಥಿತವಾಯಿತು. ಇಂದ್ರಿಯಗಳು ಮತ್ತು ವಾಸನೆಗಳು ಇವುಗಳನ್ನು ನಾಶಮಾಡಿದರೆ, ಮನುಷ್ಯನ ಮನುಷ್ಯತ್ವವು ಹೇಗೆ ಉಳಿದೀತು? ಮರದ ಹಣ್ಣು, ಹೂವು, ರೆಂಬೆ ಮತ್ತು ಎಲೆಗಳನ್ನು ನಾಶಮಾಡಿಬಿಟ್ಟರೆ ಅದರ ವೃಕ್ಷತ್ವವು ಹೇಗೆ ತಾನೇ ಉಳಿದೀತು? ಮನುಷ್ಯನ ಶರೀರ ಮತ್ತು ಇಂದ್ರಿಯಗಳು ಸುಖದ ಮತ್ತು ಶಿಕ್ಷಣದ ಸಾಧನಗಳಾಗಿವೆ. ವಾಸನೆಗಳು ಮತ್ತು ಇಂದ್ರಿಯಗಳು ಮನುಷ್ಯನನ್ನು ಸೌಖ್ಯದ ಹಾದಿಯ ಕಡೆಗೆ ಕೊಂಡೊಯ್ಯುತ್ತವೆ. ವಿಧಾತನು ನಿರಿಚ್ಛನಾಗಿರುವನೇನು? ಈ ಮಹಾ ಸೃಷ್ಟಿಯನ್ನು ನೋಡು. ಸರ್ವ ವಿಶ್ವವು ಸುಖಿಯಾಗಿರಬೇಕೆಂಬುವುದು ಆತನ ಪ್ರಬಲವಾದ ಇಚ್ಛೆಯು. ಈ ಮಹಾ ವಿಶ್ವವು ತನ್ನ ಕಂಠರವದಿಂದ ಆತನ ಈ ಅಶ್ರಾಂತವಾದ ಮತ್ತು ಅಪಾರವಾದ ಇಚ್ಛೆಯನ್ನು ಘೋಷಿಸುತ್ತಲಿದೆ. ವಿಧಾತನ ವಾಸನಾಸಾಗರಕ್ಕೆ ಮನುಷ್ಯನ ವಾಸನಾನದಿಯು ಯಾವಾಗ್ಯೆ ಶತಮುಖದಿಂದ ಹೋಗಿ ಕೂಡುವಳೋ ಆಗ್ಯೆ ಮನುಷ್ಯನ ಮತ್ತು ಇಡೀ ಜಗತ್ತಿನ ಸುಖವು ಒಂದಾಗುತ್ತದೆ. ತನ್ನ ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ, ಮನುಷ್ಯನು ಜಗತ್ತಿನ ಕಲ್ಯಾಣಕ್ಕೋಸ್ಕರವಾಗಿ ಹೋರಾಟಪಟ್ಟರೆ, ಆತನ ಸುಖವು ಉತ್ತರೋತ್ತರವಾಗಿ ಬೆಳೆಯುತ್ತದೆ. ಮನೆಯಲ್ಲೇನು, ಕಾಡಿನಲ್ಲೇನು? ಮನುಷ್ಯನ ಸನಾತನ ಧರ್ಮವು ಜಗತ್ತಿಗೆ ಸುಖವನ್ನುಂಟುಮಾಡಬೇಕೆಂಬುವುದೇ! ಆತನ ವಾಸನೆಯು ಇದೇ, ಮತ್ತು ಆತನ ಸಾಧ್ಯವೂ ಇದೇಯಾಗಿರತಕ್ಕದ್ದು. ಶ್ರೇಷ್ಠತರವಾದ ಧರ್ಮ ಕ್ಷೇತ್ರವು ವನವಲ್ಲ, ಮನೆಯು! ತಾಯಿತಂದೆ, ಪತ್ನಿ, ಪುತ್ರ, ಗೃಹ, ಇವು ಈ ಧರ್ಮಮಾರ್ಗವನ್ನು ಆಕ್ರಮಿಸಲಿಕ್ಕೆ ಆಶ್ರಯ ಭೂತವಾದ ಸುಂದರವಾದ ಯಷ್ಟಿಗಳಂತಿವೆ. ಅವುಗಳನ್ನು ಅವಲಂಬಿಸಿ ಮನುಷ್ಯನು ಈ ಹಾದಿಯಲ್ಲಿ ನಡೆಯ ತೊಡಗುವನು, ಮತ್ತು ಸುಖಸ್ವರ್ಗವು ಆತನ ಕಣ್ಣೆದುರಿನಲ್ಲಿ ಕಂಡುಬರುವುದು. ನಾರಾಯಣನು ಕೇವಲ ಸುಖದ ಸಾಗರವಾಗಿರುವನು. ಮನುಷ್ಯನ ಧರ್ಮಕ್ಷೇತ್ರವಾಗಿರುವ ಯಾವ ಮನೆಯೋ, ಅದರಲ್ಲಿ ವಾಸಮಾಡಿ, ಜಗತ್ತಿಗೆ ಕಲ್ಯಾಣವನ್ನುಂಟುಮಾಡುವುದರಲ್ಲಿ ಇಂದ್ರಿಯ ವಾಸನೆಗಳನ್ನು ಬೆಳೆಯಿಸುವುದೇ ಯಥಾರ್ಥವಾದ ಸನ್ಯಾಸವು. ಈ ವ್ರತವನ್ನು ಸ್ವೀಕರಿಸಬೇಕೆಂಬ ಉದ್ದೇಶದಿಂದಲೇ ನಾನು ಮನೆಯನ್ನು ಹೊಕ್ಕೆನು. ಮಹಾ ವಿಶ್ವವೆಂಬುದೇ ಮನೆಯು, ಮತ್ತು ಈ ವಿಶ್ವದಲ್ಲಿಯ ಅಸಂಖ್ಯ ಪ್ರಾಣಿಗಳೇ ಮಹಾ ಪರಿವಾರವು. ಈ ಅನಂತವಾದ ವಿಶ್ವದಲ್ಲಿದ್ದು ಅದನ್ನು ಚಲನೆಮಾಡುವ ಪ್ರಾಣವು ಒಂದೇಯಾಗಿದೆ. ಈ ವಿಶ್ವವು ಒಂದು ಬಲವಾದ ದಾಹದಿಂದ ಪೀಡಿತವಾಗಿ ವ್ಯಾಕುಲವಾಗಿದೆ. ಸುಖ ತೃಷ್ಣೆಯು ಅದನ್ನು ಹಿಡಿದು ಮುಚ್ಚಿಬಿಟ್ಟದೆ. ಮಧುಮತ್ತವಾದ ತುಂಬಿಯಂತೆ, ಮನುಷ್ಯನು ಇಂದ್ರಿಯ ವಾಸನೆಯ ಪುಷ್ಪದಲ್ಲಿ ಸುಖವನ್ನರಸುತ್ತಿರುವನು. ಒಂದು ತಟಕು ನೀರಿನ ಸುಖವು ಇಡೀ ಸಮುದ್ರದ ಸುಖದಿಂದ ಬೇರೆಯಾಗಿಲ್ಲವು. ಈ ಸುಖದ ತತ್ತ್ವವನ್ನರಿಯದಿರುವುದರಿಂದಲೇ ಜಗತ್ತು ದುಃಖದಿಂದ ಹಾಹಾಕಾರವನ್ನು ಮಾಡುತ್ತಲಿದೆ. ಯಾವ ಅನಂತವಾದ ನೀತಿ ಚಕ್ರದ ದೆಸೆಯಿಂದ ಮನುಷ್ಯನಿಗೆ ಮನುಷ್ಯತ್ವವು ದೊರೆಯುತ್ತದೆಯೋ ಮತ್ತು ಆ ಮನುಷ್ಯತ್ವದ ವೃದ್ಧಿಯಾಗುತ್ತಲಿದೆಯೋ ಆ ನೀತಿ ಚಕ್ರಕ್ಕೇನೇ ಮಾನವ ಧರ್ಮವೆಂದೆನ್ನಬೇಕು. ಇದರ ಜ್ಞಾನವು ನಮಗೆ ಯಾವುದರಿಂದ ಉಂಟಾಗುತ್ತದೋ ಅದೇ ಶಾಸ್ತ್ರವು. ಮತ್ತು ಈ ಧರ್ಮದ ಅಭ್ಯಾಸವನ್ನು ಮಾಡಿ ತದನುಸಾರವಾಗಿ ನಮ್ಮ ಆಚರಣೆಯನ್ನಿಡುವುದು ಅದೇ ಕರ್ಮವು. ಆ ಮನುಷ್ಯತ್ವದ ಗುಣವು

ಕೀರ್ತಿಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು, ದ. ಕ.

THE NEWZEALAND INSURANCE CO., Ltd.

ದಿ ನ್ಯೂಝೀಲಂಡ್ ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್.

ಮೇರಿನ್ ಡಿಪಾರ್ಟ್‌ಮೆಂಟ್

(Marine Department)

ಮಂಗಳೂರು ಏಜಂಟರು — ಬಿ. ದತ್ತಾತ್ರರಾವ ಎಂಡ್ ಕೊ.

ವಿಕ್ಟೋರಿಯಾ ಬಿಲ್ಡಿಂಗ್ಸ್ ಮಂಗಳೂರು

ಈ ಕಂಪೆನಿಯಲ್ಲಿ ಬಹಳ ಸುಲಭವಾದ ದರಗಳಿಂದ ಸಮುದ್ರಮಾರ್ಗವಾಗಿ ಹೋಗುವ ಮಾಲಿನ ಮೇಲೆ ವಿಮೆ ಉತ್ತರಾಯಿಸ ಹುದು

...ವಾದ ನಾರಾಯಣ ಸ್ವರೂಪವಾದ ಸಮುದ್ರದ ಕಡೆಗಿದೆ. ಮನುಷ್ಯತ್ವವು ...ವಾಗಿದೆ. ಮತ್ತು ಮನುಷ್ಯರ ಸುಖವೂ ಅನಂತವಾಗಿದೆ. ನಾರಾಯಣ ಸ್ವರೂಪವಾದ ಸಾಗರವನ್ನು ಹೋಗಿ ಸೇರುವುದೆಂಬುದೇ ಮೋಕ್ಷವು. ಈ ಮಹಾ ಸುಖವನ್ನು ಲೋಕದ ಕಣ್ಣೆದುರಿಗೆ ಆವಿಷ್ಕೃತ ಮಾಡಿ ನವೀನ ಧರ್ಮವನ್ನು ಪ್ರಸಾರ ಮಾಡಬೇಕೆಂದೂ, ಜನರಿಗೆ ನಿದರ್ಶನಗಳನ್ನು ಕೊಟ್ಟು ಜಗತ್ತನ್ನು ಈ ಭೀಕರವಾದ ದುಃಖಸಾಗರದಿಂದ ದಾಟಿಸಿ ದಂಡೆಗೆ ಕೊಂಡೊಯ್ಯಬೇಕೆಂದೂ, ವಿಚಾರ ಮಾಡಿ ನಾನು ಮನೆಯನ್ನು ಸೇರಿದೆನು; ಆದರೆ ಈ ವ್ರತವು ಎಷ್ಟು ಕಠಿಣವಾಗಿದ್ದೆ! ಈ ಕುರುಕ್ಷೇತ್ರವೇ ನನ್ನ ಕರ್ಮಕ್ಷೇತ್ರವಾದೀತು, ಮತ್ತು ಈ ಭಾರತ ಯುದ್ಧರೂಪಿಯಾದ ಘೋರವಾದ ಕಾಳ್ಗಿಚ್ಚು ಅತ್ತಿತ್ತಲೆಲ್ಲಿಯೂ ಪ್ರಸರಿಸಿ ಸುಡತೊಡಗೀತು ಎಂದು ನನಗೆ ಮುಂಚೆ ತಿಳಿಯಲೇ ಇಲ್ಲವು. ನಾರಾಯಣಾ, ನಿನ್ನ ಲೀಲೆಯಾದರೋ ಅಗಾಧವಾಗಿದೆ.

(ಮುಂದೆ ಸಾಗುವದು.)

ಪಾತರಗಿತ್ತಿಗೆ.

(ಚೌಪದಿ)

(ವರ್ಡ್ಸವರ್ತ)ಎಂಬ ಇಂಗ್ಲೀಷು ಕವಿವರ್ಯನ ಗೀತಿಯನ್ನು ಅವಲಂಬಿಸಿ ಬರೆದದ್ದು.

ನಿಂದಿರು [1]ಕುಲುಂಕಿಸದೆ ರಂಕೆ[2]ಯನು ನಿನ್ನ
ಮುಂದು ಕೆಲವಂದು ಕುಣಿಕಣ್ಣಿದಿರೊಳನ್ನ !
ನಿನ್ನೆ ನಿರುಕಿಸ[3]ಲೊ ಸರ್ವನುಡಿವೆ[4]ಕೇಳನುಡಿಯ
[5]ಎನ್ನಳಿಯ ಬಣ್ಣಿಸುವ [6]ಬಣ್ಣಗವಿಯೊಡೆಯ ॥ ೧ ॥
ಎನ್ನ ಕೆಲದಲಿ [7]ಗಾಡಿಯಿಂದೆ ತೇಲಾಡು !
ಇನ್ನುಳಿಯು[8]ತೆನ್ನ ಪಾರದಿರು ಸೊಗಗೂಡು
ಎನ್ನೊಳೊ[9]ಹಿಲಿನ ಗೊಂಬೆ ಬಿಂಬಿಪೆಯಳುಂಬಂ
[10]ಗನ್ನಪಿಡಿ ಬಿಂಬದಿಂ ದೆಮ್ಮಯ ಕುಟುಂಬಂ ॥ ೨ ॥
ಇನಿದು ಕಟ್ಟಿನಿದಮವು ಮುಗಿದುದಾಸಮಯಂ !
ಕನಸಿನೊಳಗೆಂಬೊಲೆಳೆಯಾಟ[11]ದಳಿಬೆಮೆಯಿಂ ।
ಕೂಡಿ ಮುದ್ದಿನ ತಂಗಿ ಕಮಲೆಯನ್ನೊಂದಂ
ಓಡಿ ಪಾತರಗಿತ್ತಿಯರ ಬೇಂಟೆಯಿಂದಂ ॥ ೩ ॥
ಕಡು ಬೇಡನಂ[12]ತಮುಕಿದೆನು [13]ಬಿಡದಿಗವನು
ನಡೆದು ಪಾರುತೆ ಪೊದರು ಪೊದರಿನೊಳಗವನು[14]
[15]ಮರುವಚ್ಚೆವಿಡಿದೆನಮವಾ ಕಮಲೆಯವಳು
ಗರಿಯ ದೂಳನು ಮೆಲ್ಲಿನೊರಸೆ ಬೆದರಿದಳೂ ॥ ೪ ॥

ಹೈದರ ಅಲಿಯ ಕುರಿತು.

(೨೮ನೇ ಸಂಚಿಕೆಯಿಂದ ಮುಗಿದಿರುವುದು).

ಶಿರಚ್ಛೇದ ಮಾಡಿರಿ; ಅಪ್ರಮಾಣಿಕನಾಗೆನು !

ಸನ್ ೧೭೮೦ ನೇ ಇಸವಿಯಲ್ಲಿ ಹೈದರಾಲಿಯು ಬೈರಬಳವ್ ಎಂಬಲ್ಲಿ ಇಂಗ್ಲಿಷ್ ಸೈನ್ಯವನ್ನು ಸೋಲಿಸಿ ಪುಷ್ಕಳ ಆಂಗ್ಲ ಶಿಪಾಯರನ್ನು ಸೆರೆಹಿಡಿದು ತಂದನು. ಈ ಸೆರೆಯವರೊಂದಿಗೆ ಕರ್ನಲ್ ಲ್ಯಾಂಗನ ಮಗ ಮಾಸ್ಟರ್ ಲ್ಯಾಂಗನೂ ಇದ್ದನು. ಇವನು ೨೦ ವರ್ಷ ಪ್ರಾಯದವನಾಗಿ ಸೈನ್ಯದಲ್ಲಿ ಒಲಂಟೀಯರ್ ಅಂದರೆ ಸ್ವಯಂ ಸೇವಕನಾಗಿದ್ದನು. ಹೈದರನು ಹುಡುಗನನ್ನು ಕರಿಸಿ ಸಮ್ಮುಖದಲ್ಲಿ ನಿಲ್ಲಿಸಿ ಒಂದು ಪತ್ರ ಬರೆಯಲು ಅಪ್ಪಣೆ ಕೊಟ್ಟನು. ಆಗ್ಗೆ ಹುಡುಗನ ತಂದೆ ಕರ್ನಲ್ ಲ್ಯಾಂಗನು ವೇಲೂರು ಕೋಟೆ ರಕ್ಷಿಸುತ್ತಿದ್ದನು. ಹೈದರನು 'ವೇಲೂರು ಹೈದರನ ಸ್ವಾಧೀನ ಮಾಡು; ಆತನು ನಿನಗೆ ವೇಲೂರು ಸುಭೇದಾರನಾಗಿ ಮಾಡುವನು; ಹಾಗೂ ನನ್ನನ್ನು ಸೆರೆಯಿಂದ ಬಿಡುಗಡೆ ಮಾಡುವನು' ಎಂತ ಕಾಗದ ಬರಿ, ಇಲ್ಲವಾದರೆ ನಿನ್ನನ್ನು ಇಲ್ಲಿಯೇ ತಲೆ ಕಡಿಯುವರು" ಎಂತ ಬೆದರಿಸಿದನು. ಹುಡುಗನು ಹೆದರಲಿಲ್ಲ! ಹೈದರನು ಶಿಪಾಯಿನಿಗೆ ತರವಾರ್ ತೆಗೆಯಲು ಅಪ್ಪಣೆ ಕೊಟ್ಟನು. ಆಗ್ಯೆ ಕಣ್ಣೀರು ತಂದು ಮಾಸ್ಟರ್ ಲ್ಯಾಂಗ್ ಅಂದದ್ದು—"ನಾನು ನನ್ನ ತಂದೆಗೆ ಪತ್ರ ಬರಿಯುವಷ್ಟು ನೀಚತನ ಕೈಕೊಂಡರೂ, ನನ್ನ ತಂದೆಯೂ ಹಾಗೆ ನೀಚಕೃತ್ಯ ಮಾಡ್ಯಾನೆಂದು ತಮಗೆ ಹ್ಯಾಗೆ ತಿಳಿಯಿತು? ಹಾಗೆ ನಿಮಗೆ ತೋರುವದಾದರೆ ನನ್ನನ್ನು ವೇಲೂರು ಪರಿಯಂತರ ಎಳದುಕೊಂಡ್ಹು ಹೋಗಿರಿ. ಅಲ್ಲಿ ನನ್ನ ತಂದೆಯ ಕಣ್ಣೆದುರು ನನ್ನ ದೇಹವನ್ನು ಚೂರು ಚೂರಾಗಿ ಕಡಿದು ಕೋಟೆಯ ಖಣೆಯಲ್ಲಿ ಬಿಸಾಡಿರಿ ಹ್ಯಾಗೂ ನಾನು ಪ್ರಾಮಾಣಿಕನಾಗಿಯೇ ಪ್ರಾಣ ಬಿಡುವೆನು". ಹೈದರನು ಆಶ್ಚರ್ಯಪಟ್ಟು ಆತನನ್ನು ಇತರ ಶಿಪಾಯಿಗಳಿಂದ ದೂರ ಏಕಾಂಗಿಯಾಗಿ ಜೈಲಿನಲ್ಲಿಟ್ಟನು. ಯಾಕಂದರೆ, ಸೆರೆ ಹಿಡಿದು ತಂದ ಇತರ ಶಿಪಾಯಿಗಳಲ್ಲಿ ಇಂಥಾ ಪ್ರಮಾಣಿಕತೆ ಎಂಬ ದುರ್ಗುಣವು ಸೋಂಕದ ಹಾಗೆ ಏಕಾಂಗಿಯಾಗಿ ಜೈಲಿನಲ್ಲಿಡಬೇಕಾಯಿತು.

ಸಾಮುದ್ರಿಕ ಮತ್ತು ಹೈದರ್.

ಒಂದಾನೊಂದು ದಿನ ಹೈದರನ ದರಬಾರ್ ಮಂದಿರದಲ್ಲಿ ಒಬ್ಬ ಸಾಮುದ್ರಿಕ ಶಾಸ್ತ್ರಿ ಬಂದನು. ಆಗ ಮಂದಿರದಲ್ಲಿದ್ದ ಪ್ರತಿ ಒಬ್ಬನೂ ಕೈಗಳನ್ನು ತೋರಿಸಲು ಪ್ರಾರಂಭಿಸಿದನು. ಮಂತ್ರಿ ಮೊದಲುಗೊಂಡು ದಫೆದಾರನ ಪರಿಯಂತರ ಎಲ್ಲರೂ ತಾನು ಮೊದಲು ತಾನು ಮೊದಲೆಂತ ಕೈ ಮುಂದೆ ಮಾಡಿದರು. ಹೈದರನು ಮಂದಿರದ ಒಳ ಅಂತಸ್ತಿನಲ್ಲಿದ್ದವನು ಚೋರಗಂಡಿಯಿಂದ ಇದನ್ನೆಲ್ಲಾ ನೋಡಿ ತನ್ನ ಕೈಯನ್ನು ಸಹ ಶಾಸ್ತ್ರಿಗೆ ತೋರಿಸಲು ಮನಸ್ಸುಮಾಡಿದನು. ತತ್ಕಾಲವೇ ತನ್ನ ಉಡುಪು ತೊಡುಪುಗಳನ್ನು ಕಳಚಿಬಿಟ್ಟು ಲಂಗೋಟಿಯನ್ನುಟ್ಟುಕೊಂಡು ಹೆಗಲಲ್ಲಿ ಕಂಬಳಿ ಕೈಯಲ್ಲಿ ದೊಣ್ಣೆ ಹಿಡಿದು ವೇಷ ಪಲ್ಲಟಿಸಿ ಬೇರೆ ಮಾರ್ಗದಿಂದ ಸಾಮುದ್ರಿಕನ ಬಳಿಗೆ ಬಂದು ಕೈ ಮುಂದು ಮಾಡಿ ನೋಡಿದನು. ರಾಜನೆಂದು ಅಲ್ಲಿದ್ದ ಯಾರಿಗೂ ತಿಳಿಯಲಿಲ್ಲ. ಬಹು ಶ್ರಮದಿಂದ ಧೊರೆಯು ತನ್ನ ಕೈ ಮುಂದುಕೊಟ್ಟನು. ಹಸ್ತವನ್ನು ನೋಡಿ ಸಾಮುದ್ರಿಕನು ಒದರಿ ಅಂದದ್ದು—"ಓಹೋ ಇದು ಹೆಣ ಹೊರುವವನ ಕೈ, ಹಿಂದೆ ಸಾರು." ಇದನ್ನು ಕೇಳಿ ಹೈದರನು ಖಿನ್ನ ಮನಸ್ಕನಾಗಿ ಅರಮನೆಗೆ ಹೋದನು.

ಮರುದಿನ ಮಂತ್ರಿಯು ಪಟ್ಟದಲ್ಲಿ ಒಬ್ಬ ಬಹಳ ಗಟ್ಟಿಗನಾದ ಸಾಮುದ್ರಿಕನು ಬಂದಿರುವದಾಗಿ ತಿಳಿಸುತ್ತಲೇ ರಾಜಾ ಹೈದರನು ಕರತರಲು ಅಪ್ಪಣೆಯನ್ನಿತ್ತನು. ಸಾಮುದ್ರಿಕನು ಬಂದನು; ಹೈದರನು ಕೈನೀಡಿದನು ಮತ್ತು ಏನು ಹೇಳುವನೋ ಎಂದು ನಿಟ್ಟಿಸಿ ನೋಡುತ್ತಿದ್ದನು. ಸಾಮುದ್ರಿಕನು ಆಶ್ಚರ್ಯಚಕಿತನಾಗಿ ಹೇಳಿದ್ದು— "ಈ ಹಸ್ತವನ್ನು ನಾನು ನಿನ್ನೆ ನೋಡಿದ್ದೇನೆ; ಇದು ಪ್ರೇತವಾಹಕನ ಕೈ." ಇದನ್ನು ಕೇಳಿ ಸಿಟ್ಟಿನಿಂದ ಹೈದರ್ ಅಂದದ್ದು—"ಮೂರ್ಖನೇ ನಿನ್ನನ್ನು ಆನೆಕಾಲಡಿಗಳಲ್ಲಿ ತುಳಿಸುತ್ತಿದ್ದೆ. ಜೈಲು ಮಾತ್ರ ನಿನಗೆ ತಪ್ಪಲಾರದು. ನಿನ್ನ ಮಾತು ಸತ್ಯ ಮಾಡಿ ಕೊಡು. ಖಬರ್ದಾರ್." ನೆರೆದ ಜನರೆಲ್ಲಾ ಆಶ್ಚರ್ಯದಿಂದ ಸ್ತಂಭೀಭೂತರಾದರು. ಸಾಮುದ್ರಿಕನಾದರೋ ಭಯದಿಂದ ಕಂಪಿಸುತಲಿದ್ದನು. ಒಂದು ಗಳಿಗೆಯನಂತರ ಧೈರ್ಯಗೊಂಡು ರಾಜನಿಗೆ ಹೊಗಳಿ ಅಂದದ್ದು—"ರಾಜಾಧಿರಾಜನೇ, ನನಗೆ ಒಂದು ಮಣ ಜೇನುಮೇಣ ತಂದು ಕೊಟ್ಟರೆ ನನ್ನ ಮಾತು ಸತ್ಯಮಾಡಿ ಕೊಡುವೆನು."

BERNA WATCH COMPANY.

ಬರ್ನಾ ವಾಚು ಕಂಪನಿ.

ಕೈ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪನಿಯ ಶಾಖೆಯು ಹಿಂದುಸ್ಥಾನದಲ್ಲಿರುವದು. ಗೂರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು.

ನಮ್ಮ 'ಮೆಕ್ಸಿಮ್' ವಾಚನ್ನು ಭರವಸೆಯಿಂದ ಕೊಂಡುಕೊಳ್ಳಿರಿ.
ನಿಕಲ್ ಕೇಸಿನಲ್ಲಿ ರೂ. ೧೦-೦-೦.
ಬೆಳ್ಳಿ ಕೇಸಿನಲ್ಲಿ ರೂ. ೧೪-೮-೦.
ನಮ್ಮ 'ನ್ಯೂ ಡಿ. ಪಿ.'
ನಿಕಲ್ ಕೇಸಿನಲ್ಲಿ ರೂ. ೧೪-೦-೦.
ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦.
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಮರ್'
ನಿಕಲ್ ಕೇಸಿನಲ್ಲಿ ರೂ. ೧೬-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.
ನಮ್ಮ 'ವರ್ಡಲಿ.'
ನಿಕಲ್ ಕೇಸಿನಲ್ಲಿ ರೂ. ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.
ನಮ್ಮ 'ಬೆಸ್ಟ'
ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦

ವರ್ಡಲಿ.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಜಿನಲ್ಲಿರುವವು. ವಾಚುಗಳನ್ನು ಗ್ರಾಹಕರ ಖರ್ಚಿನಲ್ಲಿ ವಿ. ಪಿ. ಮಾಡಿ ಕಳುಹಿಸುವೆವು. ನಮ್ಮ 50 ಎಸ್ಪ್ಲನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದುಸ್ಥಾನದಲ್ಲಿರುವ ಎಲ್ಲಾ ವಾಚು ವ್ಯಾಪಾರಿಗಳಲ್ಲಿಯೂ ಕ್ರಯಕ್ಕೆ ದೊರಕುವವು.

---

1 ಅಲ್ಲಾಡಿಸದಿರು. 2 ರೆಕ್ಕೆಗಳ. 3 (ನನ್ನ ಮನಸ್ಸಿನಿಂದ) ಹೊರಗೆ ಹರಿಯುವ. 4 ಪ್ರೀತಿಯ ಮಾತು, 5 ನನ್ನ ಬಾಲ್ಯವನ್ನು. 6 ಚಿತ್ರಕಲ್ಪ್ರಯುಳ್ಳ ಕವಿವರನೇ. 7 ವಿಲಾಸ. 8 ನನ್ನನ್ನು ತೊಲಗದಿರು. 9 ಶ್ರೇಷ್ಠ. 10 ಗಂಭೀರವಾದ ಪ್ರತಿಬಿಂಬ. 11 ಕ್ಷಣಿಕವಾದ ಸುಖದ ... 13 ಒಟ್ಟಿದೆನು. 14 ... 14 ಅವನು (ಆ ಪಾತರಗಿತ್ತಿಗಳನ್ನು). 15 ... ಹಾರಿಸಿದೆನು.

[illegible] ಶಾಸ್ತ್ರಿಯು ಮಹಾರಾಜನ [illegible]ವನ್ನು ತೆಗೆಯಲು ಅಪ್ಪಣೆ ಕೊಟ್ಟನು. ಹಾಗೆಯೇ ಮೋಜವನ್ನು ಅವನ ಮೈಗೆ ಒತ್ತಿ ಮೋಜದ ಮೇಲೆ ಒತ್ತಿ ಬಂದ ರೇಖೆಗಳನ್ನು ದೃಷ್ಟಿಸಿ ನೋಡಿದನು. ಮುಖದ ಮೇಲೆ ಶಂಖಚಕ್ರ ರೇಖೆಗಳು ಸ್ಪಷ್ಟವಾಗಿದ್ದವು. ಅದನ್ನು ದೊರೆಗೆ ತೋರಿಸಿ ಮಹಾರಾಜಾ, ಈ ಲಕ್ಷಣಗಳು ಇರುವದರಿಂದಲೇ ನೀನು ಮೈಸೂರು ರಾಜನಾದೆ! ನಿನ್ನ ಕೈಯ ಲಕ್ಷಣ ಪ್ರಕಾರ ನೀನು ಪ್ರೇತವಾಹಕನೇ ಹೌದು, ಅಂದನು.

ರಾಜನು ಸಂತುಷ್ಟನಾಗಿ ದೊಡ್ಡ ಇನಾಮುಕೊಟ್ಟು ಸಾಮುದ್ರಿಕ ಶಾಸ್ತ್ರಿಯನ್ನು ಆತನ ಊರಿಗೆ ರವಾನಿಸಿದನು. "ಅಂಗೈ ತೋರಿಸಿ, ಅವಲಕ್ಷಣ ಎನ್ನಿಸಿಕೊಂಡಂತಾಯಿತು."

ಹೈದರನ ಮೃತ್ಯು.

ಸನ್ ೧೭೮೨ ನೇ ಇಸವಿಯಲ್ಲಿ ಹೈದರನು ಕರ್ನಾಟಕದಲ್ಲಿ ಸ್ವಾರಿ ಮಾಡಿದಾಗ್ಗೆ ದಕ್ಷಿಣ ಅರ್ಕಾಟಿನ ಪ್ರಸಿದ್ಧವಾದ ಶ್ರೀಶಂಕರಾಚಾರ್ಯರ ಸ್ಥಾನವಾದ ತಿರು[illegible]ಮಾಲ ಎಂಬಲ್ಲಿ ಮೊಕ್ಕಾಂ ಮಾಡಿದನು. ಅಲ್ಲಿರುವ ಭವ್ಯವಾದ ಅರುಣಾಚಲೇಶ್ವರ ದೇವ ಮಂದಿರವನ್ನು ನೋಡಿ ಲೋಭದಿಂದ ಕೆಡವಿದನು; ಈ ಅತ್ಯಾಚಾರದ ಫಲವೇ ಮರಣ ಸಮಯ ಹೈದರನು ಅನಭವಿಸಬೇಕಾಯಿತಂತೆ.

ಹೈದರನ ಹಿಂದು ಸರದಾರನು ಅಗದಾಗದು ಎಂದು ಕೂಗಿ ಹೇಳುತ್ತಿದ್ದರೂ, ಕೇಳದೆ ಮಂದಿರವನ್ನು ಕೆಡಹಲು ಶಿಬಂದಿಗೆ ಅಜ್ಞಾಪಿಸಿದನು. ಶಿಪಾಯಿಗಳು ಗುದ್ದಲಿಯಿಂದ ಅಗಿಯುತ್ತಿದ್ದರು; ಹೈದರನು ಪ್ರೋತ್ಸಾಹಿಸುತ್ತಿದ್ದನು. ಇಷ್ಟರಲ್ಲಿ ಹೈದರನಿಗೆ ಹಿಂದಿನಿಂದ ಬೆನ್ನಿನ ಮೇಲೆ ಪೆಟ್ಟು ಹೊಡದ ಹಾಗೆ ಆಯಿತು. ಹಾಗೆಯೇ ಹಿಂದೆ ನೋಡುವಾಗ್ಯೆ ಕಷಾಯ ವಸ್ತ್ರಧಾರಿಯಾದ ಒಬ್ಬನು ವಾಯು ವೇಗದಿಂದ ಮಂದಿರದೊಳಗೆ ಹೊಕ್ಕಂತೆ ಕಂಡಿತು. ನೆರದ ಜನ ಸಮೂಹಕ್ಕೆ ಪ್ರತ್ಯಕ್ಷ ಅರುಣಾಚಲನಂದೇ ತೋರಿತು. ಹಾಗೆಯೇ ಹೈದರನು ಅಸ್ವಸ್ಥನಾಗಿ ಜಖಂ ಆದಲ್ಲಿ ಒಂದು ಬಾವು ಆಯಿತು. ಇದು ಅರಸ ಬಾವು ಎಂದು ವೈದ್ಯರು ಹೆಸರಿಟ್ಟರು. ಪ್ರಖ್ಯಾತ ವೈದ್ಯರಿಂದಲೂ ಅನುಭವಸ್ಥ ಹಕೀಮರಿಂದಲೂ ಔಷಧೋಪಚಾರ ನಡಿಯಿತು. ಆದರೆ ವೇದನೆಯು ಹೆಚ್ಚುತ್ತಾ ಬಂತು. ಕೆಲವು ವೈದ್ಯರು ಮತ್ತು ಹಕೀಮರು ಗರ್ಭವತಿಯರಾದ ಸ್ತ್ರೀಯರ ಅಪರಿಪಕ್ವವಾದ ಗರ್ಭಗಳನ್ನು ತೆಗೆದು ಬಾವಿಗೆ ಕಟ್ಟಬೇಕಾಗಿ ಹೇಳಿದರು. ಧಿಕ್ಕಾರವಿರಲಿ ಆ ವೈದ್ಯ ಶಾಸ್ತ್ರಕ್ಕೆ! ಧಿಕ್ಕಾರವಿರಲಿ! ಆ ಹಕೀಮಿ ವಿದ್ಯೆಗೆ ಈ ರಾಕ್ಷಸೀ ಉಪಾಯದಿಂದ ಸ್ವಲ್ಪ ಗುಣ ತೋರಿತು. ಹಾಗೆಯೇ ಕೆಲವು ಕಾಲದಲ್ಲಿ ಬಾವು ಒಣಗಿದರೂ ಅದು ಆಗಿಂದಾಗ್ಯೆ ಹುಟ್ಟುತ್ತಾ ಯಾವದಾದರೂ ಪೈಶಾಚಿಕ ಉಪಾಯದಿಂದ ಗುಣವಾಗುತ್ತಾ ಇತ್ತು. ಪುನಹ ಮರಣ ಸಮಯದಲ್ಲಿ ಆ ಬಾವು ಆಯಿತು; ಅಗ್ಯೆ ಅಸಹ್ಯವಾದ ಯಾವ ಉಪಾಯವನ್ನು ಮಾಡಿದರೂ ಅದು ಗುಣವಾಗದೆ ತಳಮಳಪಟ್ಟು ೧೭೮೨ ನೇ ಇಸವಿ ದಶಂಬರ ತಾ. ೭ ಲ್ಲು ಹೈದರನು ಮೃತಪಟ್ಟನು. B. M.

ನ್ಯಾಯಾಧಿಪತಿಯೂ ಅಪರಾಧಿಯೂ

(ನಮ್ಮ ಬಾತ್ಮೀದಾರರಿಂದ.)

ಚಿಕ್ಕತಂದೆಯನ್ನು ಕೊಂದನೆಂಬ ತಪ್ಪಿತ ಮಾಡಿದವನಾಗಿ ಒಂದು ಶೆಶ್ಶನ್ ಕೋರ್ಟಿಗೆ ಕಳುಹಿಸಲ್ಪಟ್ಟ ಒಬ್ಬ ಅಪರಾಧಿಯನ್ನು ನ್ಯಾಯಾಧಿಪತಿಗಳೆದುರು ನಿಲ್ಲಿಸಿದಾಗ ವಾದಿಕೆಗನುಗುಣವಾಗಿ ಅವನಗೋಸ್ಕರ ಒಬ್ಬ ವಕೀಲನನ್ನು ಸರಕಾರ ಕಡೆಯಿಂದ ನೇಮಿಸುವ ಕ್ರಮವನ್ನು ಕೈಕೊಳ್ಳದೆ, ಅಪಾದನ ಪತ್ರವನ್ನು ಮೊದಲೇ ಅವನಿಗೆ ಓದಿ ತಿಳಿಸಿ ಅಪರಾಧವನ್ನು ಒಪ್ಪಿಕೊಳ್ಳುತ್ತಿಯಾ ಎಂಬ ಪ್ರಶ್ನೆಗೆ ಉತ್ತರ ಕೊಡೆಂದು ನ್ಯಾಯಾಧಿಪತಿಗಳು ಕೇಳಲು, ನಿಷೇಧವಾಚಕ ಪ್ರತ್ಯುತ್ತರವನ್ನು ಅಪರಾಧಿಯು ಕೊಟ್ಟ ಕೂಡಲೆ ಉಭಯತರೊಳಗೆ ನಡದ್ದೆಂಬ ಸಂವಾದವು ಇದರ ಕೆಳಗೆ ವರ್ಣಿಸಿಯದೆ.

ನ್ಯಾಯಾಧಿಪತಿ:—ರಿಕಾರ್ಡು ನೋಡಿದ್ದಲ್ಲಿ ನಿನ್ನ ತಾಯಿಗೆ ಮೃತನು ಏಟು ಕೊಟ್ಟದ್ದಾಗಿಯೂ ಅವಳು ನಿನ್ನ ಕೂಡೆ ಆ ಕುರಿತು ದೂರು ಹೇಳಿದಾಗ ಸಹಜವಾಗಿ ನೀನು ಬಹಳ ಸಿಟ್ಟು ತಾಳಿ, ತಾನು ಏನು ಮಾಡುತ್ತೇನೆಂಬದು ತಿಳಿಯದೆ ನಿನ್ನ ಚಿಕ್ಕತಂದೆಯನ್ನು ಸಾಯ ಬಡಿದಿ ಎಂದು ತೋರುತ್ತದೆ. ನೀನು ಸತ್ಯವನ್ನು ನಮಗೆ ಯಾಕೆ ಹೇಳುವದಿಲ್ಲ?

ಅಪರಾಧಿ:—ನಾನೇನೂ ಅರಿಯೆ.

ನ್ಯಾಯಾಧಿಪತಿ:—ಪ್ರತಿ ವಿದ್ಯಮಾನವೂ ನಿನಗೆ ಗೊತ್ತದೆ. ನೀನು ಸಬ್ ಮೇಜಿಸ್ಟ್ರೇಟರಿಗೆ ಸತ್ಯವನ್ನು ಹೇಳಿರುವೆ. ಹಾಗೆಯೇ ಇಲ್ಲಿ ಯಾಕೆ ನಡಕೊಳ್ಳಲೊಲ್ಲೆ?

* **ಟಿಪ್ಪಣಿ—**ತಕ್ಷೀರು ನಡದ ಸ್ಥಳವು ಯಾವ ಸಬ್ ಮೇಜಿಸ್ಟ್ರೇಟರ ಸ್ಥಳೀಕ ಅಧಿಕಾರಕ್ಕೆ ಒಪ್ಪಿದ್ದೋ ಅವರನ್ನು ಬಿಟ್ಟು ಇನ್ನೊಬ್ಬ ಮೇಜಿಸ್ಟ್ರೇಟರ ಮುಂದೆ ಪೋಲಿಸಿನವರು ಅಪರಾಧಿಯನ್ನು ನಿಲ್ಲಿಸಿ ಒಪ್ಪಿಗೆ ಹೇಳಿಕೆಯನ್ನು ಬರಿಸಿಕೊಂಡರು. ಕಮಿಟ್ ಮಾಡಿದ ಮೇಜಿಸ್ಟ್ರೇಟರ ಮುಂದೆ ಅಪರಾಧಿಯು ಅಂಥ ಸಮ್ಮತೆಯನ್ನು ನಿರಾಕರಿಸಿದನು.

ಅಪರಾಧಿ:—ನನಗೇನು ತಿಳಿಯದು. ಅಗ್ಯೆ ನಾನು ಅಸ್ವಸ್ಥವಾಗಿದ್ದೆನು.

ನ್ಯಾಯಾಧಿಪತಿ:—ನೀನು ಸಕಲವೂ ತಿಳಿದವನಾಗಿರುವಿ ಎಂತ ನಾನು ಬಲ್ಲೆ. ನೀನು ಕಾರಾಗೃಹಕ್ಕೆ ಹೋದ ಬಳಿಕ ಎಲ್ಲಾ ನಿರಾಕರಿಸಿಬಿಡುವಮ[illegible]ದು ಬಲ್ಲ[illegible] ನಿನಗೆ ಹೇಳಿ[illegible]. [illegible] ಸುವದು ಒಳ್ಳೆದೆಂದು ನಿನ್ನ ಒಳ್ಳೆಕ[illegible] ನಾನು ಹೇಳುತ್ತೇನೆ.

[illegible] ಅಪರಾಧಿಯು ಮೌನ[illegible].

ನ್ಯಾಯಾಧಿಪತಿ:—[illegible] ಹೇಳ[illegible] ನೀನು [illegible] ವದೇನು!

ಅಪರಾಧಿ:—ನಾನೇನು ಹೇಳಲಿ!

ನ್ಯಾಯಾಧಿಪತಿ:—ಮಹಾ ಸಿಟ್ಟು ಏರಿದ ದೆಸೆಯಿಂದ ನಿನ್ನ ಚಿಕ್ಕತಂದೆಯನ್ನು ಕೊಂದೆ ಎಂದು ಹೇಳು. ವಕೀಲನ್ಯಾರಿದ್ದರೂ ನಿನಗೆ ಪ್ರಯೋಜನ ದೊರಕದು.

ಅಪರಾಧಿ:—ನಾನು ಹಾಗೆ ಮಾಡದೆ ಇದ್ದಾಗ ಮಾಡಿದೆ ಎಂದು ಹ್ಯಾಗೆ ಹೇಳಲಿ?

ನ್ಯಾಯಾಧಿಪತಿ:—ನೀನು ಹಾಗೆ ಮಾಡಿದಿ ಎಂದು ನಾನು ಬಲ್ಲೆ. ಒಪ್ಪಿಕೊಳ್ಳಲಿಕ್ಕೆ ನಿರಾಕರಿಸುವದರಿಂದ ನೀನು ಸುಮ್ಮಗೆ ನನ್ನ ಸಮಯವನ್ನು ಕೆಡಿಸುತ್ತಿ; ನೀನು ಒಪ್ಪಿದರೆ ನಿನಗಾಗುವ ಶಿಕ್ಷೆಯ ದ್ವಿಗುಣ ಶಿಕ್ಷೆಯನ್ನು ಅನ್ಯಥಾ ಹೊಂದುವಿ.

ಅಪರಾಧಿ:—ನಾನು ಹ್ಯಾಗೆ ಮಾಡಲಿ.

ನ್ಯಾಯಾಧಿಪತಿ:—ಒಳ್ಳೆದು; ಎಸ್ಸೆಸರರು ತಮ್ಮ ಆಸನಾರೂಢರಾಗಲಿ.

ಈ ಸಂವಾದ ನಡಿಯುವ ಕಾಲದಲ್ಲಿ ಹಾಜರು ಇದ್ದು ಅದನ್ನು ಕೇಳಿದ ಇಬ್ಬರು ಎಸ್ಸೆಸರರು ತಮ್ಮ ಸ್ಥಾನಗಳಲ್ಲಿ ಕುಂತರು. ತರುವಾಯ ವಿಚಾರಣೆಯು ತೊಡಗಿತು.

22—10—09. (ಹಿಂದು.)

ಕೃತಸ್ಯಪ್ರತಿಕಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಪತ್ರಿಕಾಪ್ರಸಂಗ.

ಸ್ವಾಮಿ! ಪತ್ರಾಧಿಪರೇ!

ಪ್ರತಿಯೊಂದು ವೃತ್ತಪತ್ರಿಕೆಗೂ ಬೇರೆ ಕಡೆಗಳಲ್ಲಿ ಒಬ್ಬರಿಬ್ಬರು ಬಾತಮೀದಾರರು ಇದ್ದೇ ಇರಬೇಕು. ಇದು ಪತ್ರಿಕಾಪ್ರಸಂಗಕ್ಕೆ ಪ್ರಯೋಜನಕಾರಿಯಾಗಿರವುದು. ಅಂತಹ ಬಾತಮೀದಾರರು ಕೊಡುತ್ತಿರುವ ಬಾತಮಿಗಳೆಲ್ಲವೂ ಸಂಪೂರ್ಣವಾಗಿಯೂ ಸಹಜವಾಗಿದ್ದರಲ್ಲದೆ, ಸುಳ್ಳುಸುಳ್ಳಾಗಿದ್ದವೆ, ಪತ್ರಿಕಾಕರ್ತರಿಂದ ಪ್ರಕಾಶಪಡಿಸಲ್ಪಡಲಾರದೆಂಬ ಅಂಶವನ್ನು ಪ್ರತಿಯೊಬ್ಬ ಬಾತಮೀದಾರರೂ ತಿಳಿದೇ ಇರುವರು. ಇವರಲ್ಲಿ ಹೆಚ್ಚಿನವರು ತಮಗೆ ದೊರೆತ ಬಾತಮಿಗಳ ನಿಜಸ್ಥಿತಿಯನ್ನು ಚೆನ್ನಾಗಿ ಪರೀಕ್ಷಿಸಿ, ಸಹಜವಾದುದನ್ನೇ ವರ್ತಮಾನವಾಗಿ ಕಳುಹಿಸುವರು. ಮಿಕ್ಕುಳಿದ ಕೆಲವರು "ಪತ್ರಿಕೆಗೆ ಭರ್ತಿಯಾದರೆ ಸರಿ"ಯೆಂಬ ಅಭಿಪ್ರಾಯವುಳ್ಳವರಾಗಿ, ಸತ್ಯಮಿಥ್ಯಗಳನ್ನು ಶೋಧಿಸದೆಯೇ ಬರೆದುಬಿಡುವರು. ಬಾತಮೀದಾರರಿಂದ ಕಳುಹಲ್ಪಡುವ ಎಲ್ಲಾ ಬಾತಮಿಗಳ ನಿಜಸ್ಥಿತಿಯನ್ನು ಶೋಧಿಸಿ ನೋಡುವುದು ಪತ್ರಿಕಾಕರ್ತರಿಗೆ ಹೇಗೆ ತಾನೇ ಸಾಧ್ಯವಾದೀತು? ಈ ಕಾರಣದಿಂದಲೇ, ಪತ್ರಪ್ರಕಾಶಕರು—"ಬಾತಮೀದಾರರ ಅಭಿಪ್ರಾಯಗಳಿಗೆ ನಾವು ಸ್ವತಃ ಜವಾಬ್ದಾರರಲ್ಲ," "ಸುಳ್ಳುಸುಳ್ಳು ಬಾತಮಿಗಳಿಗೆ ನಮ್ಮ ಪತ್ರಿಕೆಯಲ್ಲಿ ಎಡೆಯಿಲ್ಲ." "ಸರ್ವರೂ ಸತ್ಯವನ್ನೇ ಸಮಾಶ್ರಯಿಸಬೇಕು"—ಎಂದು ಮುಂತಾಗಿ, ತಮ್ಮ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುವುದು. ಪತ್ರಿಕೆಯಲ್ಲಿ ಪ್ರಕಟವಾದುದರಲ್ಲಿ "ಇಂಥಿತಹವುಗಳೇ ಸುಳ್ಳು ಬಾತಮಿಗಳು" ಎಂಬ ನಿರ್ಣಯವನ್ನು ಪತ್ರಿಕಾಪೋಷಕರಾದ ಚಂದಾದಾರರಾಗಲಿ, ಪತ್ರಿಕಾಭಿಮಾನಿಗಳಾದ ಪರಕೀಯರಾಗಲಿ, ಪತ್ರಿಕಾಧಿಪರಿಗೆ ತಿಳಿಸಿ, ಅಂತಹವುಗಳನ್ನು ಸರಿಪಡಿಸಿಕೊಳ್ಳುವುದು ಅವರವರ ಕರ್ತವ್ಯವೂ ಆಗಿರುವುದು.

ಪ್ರಕೃತ, ಇದೇ ತಿಂಗಳ ೮ನೆಯ ತಾರೀಕಿನ ತಮ್ಮ "ಸ್ವದೇಶಾಭಿಮಾನಿ"ಯ ಸಂಚಿಕೆಯ ೯ನೆಯ ಪುಟದಲ್ಲಿ ಪ್ರಕಟಿಸಲ್ಪಟ್ಟ ಉಡಿಪಿಯ ವೃತ್ತಾಂತವಿದೆಯಷ್ಟೆ! ಈ ವಿಷಯದ ಕೊನೆಯಲ್ಲಿ "ಛಾಪಖಾನೆ"ಗಳ ಮತ್ತು "ಶ್ರೀಕೃಷ್ಣಸೂಕ್ತಿ" ಪತ್ರಿಕೆಯ ವಿಷಯವಾದ ಕೆಲವು ಸಂಗತಿಗಳು ಸಹಜವಾದ ಬಾತಮಿಗಳೆಂದು ಬರೆಯಲ್ಪಟ್ಟವೆ. "ಛಾಪಖಾನೆ"ಗಳ ವಿಷಯ ಹಾಗಿರಲಿ! ಆಪ್ತಾಲೋಚನೆಯಲ್ಲಿ ಒಬ್ಬನಾದ "ವಿಚಿತ್ರಮೂರ್ತಿ"ಯ ತಿಳುವಳಿಕೆಗೂ ಬಾರದಿರುವ "ಶ್ರೀಕೃಷ್ಣಸೂಕ್ತಿ"ಪತ್ರಿಕೆಯ ಭವಿಷ್ಯದ್ವಿಧಾನವು ನಾಲ್ಕು ಬೀದಿಯ ಒಂದು ಮೂಲೆಯಲ್ಲಿರುವ ಉಡುಪೀಪಟ್ಟಣವಾಸಿಗಳಾದ ಬಾತಮೀದಾರರಿಗೆ ಹೇಗೆ ತಿಳಿಯಬಂದಿತ್ತೋ ಕಾಣೆನು. ಪ್ರಾಚೀನ ಕಾಲದಲ್ಲಿ ವೃತ್ತಾಂತಗಳನ್ನು "ಕಾಗೆಯ ಕಾಲಿನೋಲೆ"ಯಿಂದ ಕಳುಹುತ್ತಿದ್ದ ಕ್ರಮವು ಪಾಶ್ಚಾತ್ಯರಲ್ಲಿ ಪಾರಿವಾಳಗಳಿಂದ ನಡಿಸಲ್ಪಡುತ್ತಿದೆಯಂತೆ. ಮಧ್ಯಸ್ಥಿಕೆಯೂ ಮನೋವೇಗವೂ ತಮ್ಮ ಬಾತಮೀದಾರರಲ್ಲಿ ನಿಬಿಡವಾಗಿರುವುದೇನೊ? ಆಶ್ಚರ್ಯ! ಅತ್ಯಾಶ್ಚರ್ಯ!! ತ್ರಿಕಾಲಜ್ಞಾನದಲ್ಲಿ ಈ ಮಹನೀಯರು ನಮ್ಮ ಗುರುಗಳೇ ಸರಿ. ಇವರಿಗೊಂದು ದೊಡ್ಡ ನಮಸ್ಕಾರ!!!

"ಹಸ್ತವನ್ನು ತೋರಿಸಿದಲ್ಲಿ, ಕೈಯನ್ನೇ ನುಂಗಿದಂತೆ" ಆರಂಭದಲ್ಲಿ ಚಿಕ್ಕ ವಿಜ್ಞಾಪನೆಯೆಂದು ಹೇಳಿ, ಹನುಮಂತರಾಯನ ಬಾಲದಂತೆ ವಿಸ್ತರಿಸಿದುದಕ್ಕಾಗಿ ಕ್ಷಮಿಸಬೇಕು. ಯಾರೇ ಆಗಲಿ; ಭೂತ ಭವಿಷ್ಯತ್ ವರ್ತಮಾನಗಳನ್ನು ಬರೆಯುವಲ್ಲಿ ಸತ್ಯ ಮಿಥ್ಯಗಳನ್ನು ಶೋಧಿಸಿ, ಸರಿಮಾಡಬೇಕಲ್ಲದೆ, ವೃಥಾ ಅವಿಶ್ವಾಸಕ್ಕೆ ಗುರಿಯಾಗಬಾರದೆಂದು ಸೂಚಿಸುತ್ತೇನೆ.

ತಮ್ಮ [illegible]

"ವಿಚಿತ್ರ[illegible]"

ವಿದೇಶ ವೃತ್ತಾಂತ

ಲಾಲಾ ಲಾಜಪತರೈಯವರು ಮಾನನಷ್ಟಕ್ಕಾಗಿ ಅಂಗ್ಲಾಂಡದಲ್ಲಿ ಪ್ರಕಟವಾಗುತ್ತಿರುವ 'ಡೈಲಿ ಎಕ್ಸ್ ಪ್ರೆಸ್' ಎಂಬ ಪತ್ರದ ಮೇಲೆ ಮಾಡಿದ ಮಾನನಷ್ಟ ತೆರಬೇಕೆಂಬ ದಾವೆಯಲ್ಲಿ ಇಂಗ್ಲೀಷ ಹೈಕೋರ್ಟಿನವರು ೫೦ ಪವನನ್ನು ಲಾಲಾ ಲಾಜಪತರೈಯವರಿಗೆ ಕೊಡಿಸಿರುವರು. ಲಾಲಾ ಲಾಜಪತರೈಯವರು ಅಫಘಾನ್ ಅಮೀರರವರಿಗೆ ಹಿಂದುಸ್ಥಾನಕ್ಕೆ ದಂಡೆತ್ತಿ ಬಂದಲ್ಲಿ ಇಡೀ ಹಿಂದುಸ್ಥಾನದ ಪ್ರಜನ್ನು ಅಮೀರರವರ ಕೈವಶಮಾಡುವೆನೆಂಬದಾಗಿ ಬರೆದಿರುವುದರಿಂದಲೂ ಅಮೀರರವರು ಲಾಜಪತರೈಗಳವರ ಈ ಕಾಗದವನ್ನು ವ್ಯಾಸರಾಯ ಪ್ರಭುಗಳಿಗೆ ಕಳುಹಿಸಿಕೊಟ್ಟಿದ್ದರಿಂದಲೂ ಲಾಜಪತರೈಗಳವರನ್ನು ಗಡಿಪಾರು ಮಾಡಿದರೆಂಬ ಸುಳ್ಳು ಆರೋಪಣೆಯನ್ನು ೧೯೦೭ನೇ ಜುಲಾಯಿ ತಿಂಗಳಲ್ಲಿ ಪ್ರಕಟಿಸಿದ್ದರಿಂದ ಈ ದಾವೆಗೆ ಕಾರಣವಾಯಿತು

ಚೀನಾ ಸಮುದ್ರದಲ್ಲಿರುವ ಇಂಗ್ಲೀಷರ ದ್ವೀಪವಾದ ಹೊಂಗ್ ಕೊಂಗಿನ ಸಮೀಪ "ಟೈಫೂನ್" ಎಂಬ ಪ್ರಚಂಡವಾದ ಬಿರುಘಾಳಿಯಿಂದ ಸಮುದ್ರದಲ್ಲಿ ಅಪೋರ ತುಫಾನು ಎದ್ದು ಅನೇಕ ನಾವೆಗಳು ದಡಕ್ಕೆ ಬಡಿದು ಚೂರು ಚೂರುಗಳಾಗಿ ಹೋದವಂತೆ. ಪೋರ್ಚುಗೀಸರ ಪಿತ್ರೋವೆ ಎಂಬ ತೋಪುಳ್ಳ ಹಡಗೂ ಫ್ರೆಂಚರ ಅರ್ಗಸ್ ಎಂಬ ನಾವೆಯೂ ಸಾಮಿನದಿಯ ದಡದ ಮೇಲಿರುವ ಪತ್ರದ ಗದ್ದೆಯಲ್ಲಿವೆ ಎಂಬ ವರ್ತಮಾನವಿದೆ

ಥಿಯೋಸಫಿಕಲ್ ಸಂಘದ ಅಧ್ಯಕ್ಷರಾದ ಮಿಸೆಸ್ ಎನ್ನಿಬಿಸೆಂಟರವರು ವಿಲಾಯತಿಯಿಂದ ಹಿಂದುಸ್ಥಾನಕ್ಕೆ ತೆರಳಿರುವರು. ಹಿಂದುಸ್ಥಾನದಲ್ಲಿ ಒಂದು ಪ್ರತ್ಯೇಕ ಯುನಿವರ್ಸಿಟಿ ಯಾ ಸರ್ವವಿದ್ಯಾನಿಲಯವನ್ನು ಸ್ಥಾಪಿಸುವರೆ ಬಿಸೆಂಟರವರು ಪ್ರಯತ್ನಿಸುತ್ತಿರುವರೆಂದು ಹಿಂದೆ ಒಂದು ಸಂಚಿಕೆಯಲ್ಲಿ ಪ್ರಸ್ತಾಪಿಸಿರುವೆವು ಈ ಸರ್ವವಿದ್ಯಾನಿಲಯಕ್ಕೆ ಎಡ್ವರ್ಡ್ ಮಹಾಚಕ್ರವರ್ತಿಗಳು ಚಾರ್ಟರೆಂಬ ಶಾಸನವನ್ನು ದಯಪಾಲಿಸುವಂತೆ ಮಿಂಟೋ ಪ್ರಭುಗಳ ಮುಖಾಂತರ ಒಂದು ಮನವಿ ಮಾಡಿಕೊಳ್ಳುವೆನಾಗಿಯೂ ಚಕ್ರವರ್ತಿಯವರು ಈ ವಿದ್ಯಾನಿಲಯದ ರಕ್ಷನಾಗಬೇಕಾಗಿ ಕೇಳಿಕೊಳ್ಳುವೆನೆಂದೂ ಒಬ್ಬ ವರ್ತಮಾನ ಪತ್ರದ ಪ್ರತಿನಿಧಿಗಳಿಗೆ ಬಿಸೆಂಟರವರು ತಿಳಿಸಿರುವರು

ವಸ್ತ್ರದ ತಯ್ಯಾರಿಯು ಕಡಿಮೆಯಾಗುವಂತೆ ಅಮೇರಿಕದ ಉತ್ತರ ಮತ್ತು ದಕ್ಷಿಣ ಕೆರೋಲಿನಾ ದೇಶದ ಎಲ್ಲಾ ವಸ್ತ್ರ ಕಾರಖಾನೆಗಳನ್ನು ೧೫ ಯಾ ೬೦ ದಿವಸಗಳ ತನಕ ಮುಚ್ಚಿ ಬಿಡುವಂತೆ ಅಪ್ಪಣೆ ಕೊಟ್ಟಿರುವರು

ಉತ್ತರ ಹಿಂದುಸ್ಥಾನ.

ದವಸು ಧಾನ್ಯಗಳ ಧಾರಣೆಯು ಹೆಚ್ಚಿರುವುದರಿಂದ ಹಿಂದುಸ್ಥಾನದಲ್ಲಿ ವಾಸಿಸಿರುವ ಅಫಘಾನ ಶರಣಾರ್ಥಿ ಸರದಾರ ಮಹಮ್ಮದ ಆಯುಬ್‌ಖಾನರು ಇಂಡಿಯಾ ಸರಕಾರದವರಿಗೆ ತನ್ನ ಭತ್ತೆ ಹೆಚ್ಚಿಸುವ ಬಗ್ಯೆ ಬಿನ್ನವತ್ತಳೆ ಬರಕೊಂಡಿದ್ದರು. ಸರಕಾರದವರು ಅವರ ಸಂರಕ್ಷಣಾರ್ಥವಾಗಿ ಬರುವ ಎಪ್ರಿಲ್ ತಿಂಗಳಲ್ಲಾಗಾಯಿತು ೧೦೦೦ ರೂಪಾಯಿ ಜಾಸ್ತಿ ಭತ್ತೆಯನ್ನು ಕೊಡುವರೆ ಸೆಂಕ್ಷನ್ ಮಾಡಿರುತ್ತಾರೆ.

ಮುಂಬಯಿ ಸರಕಾರದವರಿಂದ ಕೊಡೋಣಾದ ತಾಕೀದು ಮೇರೆಗೆ ಸತಾರದ ಕಲೆಕ್ಟರ್ ಮಿಸ್ಟರ್ ಎ. ಆರ್. ಬೋಸರವರ ಸಮಕ್ಷಮದಲ್ಲಿ ಒಂದು "ದರಬಾರು" ಸಭೆಯು ಸತಾರದಲ್ಲಿ ನೆರೆಯಿತು. ಮುಖ್ಯ ಮುಖ್ಯಸ್ಥರು ಸಭೆಯಲ್ಲಿ ನೆರೆದಿದ್ದರು. ಪೋಲೀಸಿನವರಿಂದ ಸಾಕ್ಷಿಗಾಗಿ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಒಯ್ಯಲ್ಪಟ್ಟ ಮುದ್ದೈ ಕಡೆ ಸಾಕ್ಷಿಗಾರರಿಗೆ ಭತ್ತೆಯನ್ನು ನಿರಾಕರಿಸುವುದು; ಹೊಲ ಗದ್ದೆಗಳು ಕಾಡು ಹಂದಿ ಮೊದಲಾದ ಕಾಡುಮೃಗಗಳ ದೆಸೆಯಿಂದ ನಾಶವಾಗುವದರಿಂದ ರೈತರಿಗೆ ಕೋವಿಗಳಿಗೆ ಲೈಸೆನ್ಸನ್ನು ಹೆಚ್ಚಾಗಿ ಕೊಡುವುದು, ಒಕ್ಕಲಿಗರ ರಕ್ಷಣಾರ್ಥವಾಗಿ ಪೇಟೆಯ ಜನರಿಗೆ ಆಯ ತೆರಿಗೆಯನ್ನು ಹೊರಿಸುವುದು, ಇದೇ ಮೊದಲಾದ ಊರ ಜನರ ತಾಪತ್ರಯಗಳು ಈ ಸಭೆಯಲ್ಲಿ ಚರ್ಚಿಸಲ್ಪಟ್ಟವು ತನ್ನಿಂದ ಕೈಲಾಗುವಷ್ಟು ಪ್ರಜೆಗೆ ಬಂದಿ ಸಮೂದಿಸಿದ ಸಂಕಷ್ಟಗಳ ನ್ನೆಲ್ಲಾ ಪರಿಹರಿಸುವರೆ ಸಹಾಯ ಮಾಡುವದಾಗಿ ಕಲೆಕ್ಟರ ಧೊರೆಗಳವರು ವ್ಯಾಖ್ಯಾನ ಮಾಡಿರುವರಂತೆ

ಇಂಗ್ಲೀಷರ ಸೈನ್ಯವಿರುವ ಫೋರ್ಟ್ ವಿಲಿಯಂ ಕೋಟೆಯಲ್ಲಿ ಸಾಹಸವುಳ್ಳ ಒಂದು ಕಳ್ಳತನವು ನಡೆಯಿತು ಸೈನ್ಯಾಧಿಪತಿ ಕೋಣೆಯನ್ನು ಬಲತ್ಕಾರದಿಂದ ನುಗ್ಗಿ ನಗದಿ ರೂಪಾಯಿ ೬೦೦ನ್ನೂ ಕೋಣೆಯೊಳಗಿದ್ದ ಸೊತ್ತನ್ನೂ ಕಳವು ಮಾಡಿದ್ದಲ್ಲದೆ, ಮುಖ್ಯ ರಿಕಾರ್ಡುಗಳನ್ನು ಸಹ ಕೊಂಡೊಯ್ದು ಸಮೀಪವೇ ಸುಟ್ಟಿರುತ್ತಾರಂತೆ ಕಳ್ಳರು ಪತ್ತೆಯಾಗಲಿಲ್ಲ ಕೋಟೆಯೊಳಗಣ ಸಿಪಾಯಿಗಳೆಲ್ಲರು ಪಠಾಣಿಯಾಗಿರುವುದರಿಂದ ಇವರ ಮೇಲೆ ಸಂಶಯವು ಇರುತ್ತದಂತೆ ಕಳ್ಳರನ್ನು ಪತ್ತೆ ಮಾಡುವ ಸಿಪಾಯಿಗಳಿರುವಲ್ಲಿಯೇ ಕಳ್ಳತನವು ತಲೆದೋರುವುದಾದರೆ, ಇತರ ಕಡೆಯಲ್ಲಿ ಕಳ್ಳತನ ನಡೆಯುವುದು ವಿಚಿತ್ರವೇನು ?

ವ್ಯಾಸರಾಯ ಪ್ರಭುಗಳು ಭೋಪಾಲ ಸಂಸ್ಥಾನವನ್ನು ಸಂದರ್ಶಿಸುವದರಿಂದ ಅಲ್ಲಿ ಭಾರಿ ತಯ್ಯಾರಿಯು ನಡೆಯುತ್ತಿರುವುದು ಈ ಸಂದರ್ಭದಲ್ಲಿ ಭೋಪಾಲಿನ ಬೀಗಮ್‌ರವರು ತನ್ನ ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಉಚಿತವಾಗಿ ಕೊಡುವ ಏರ್ಪಾಡನ್ನು ಜಾರಿಗೆ ತರುವರೆಂ ವರ್ತಮಾನವಿರುವುದು ಶಾಲಾ ವಿದ್ಯಾರ್ಥಿಗಳು ಸಂಸ್ಥಾನದ ಸರಕಾರದವರಿಂದ ಈ ಸಂದರ್ಭದಲ್ಲಿ ಹಾಕಲ್ಪಡುವ ಗ್ಯಸ ಕೆಂಪುಬಣ್ಣದ ಪಕಪ್ರಕಾರವಾದ ಉಡುಗೆತೊಡಿಗೆಗಳನ್ನು ಹಾಕಿಕೊಂಡು ಬರುವಂತೆಯೇ ಏರ್ಪಡಿಸಿರುವುದಾಗಿ ಕೇಳುತ್ತೇವೆ

ಮುಂಬಯಿಯಲ್ಲಿ ವೈದ್ಯ ಇಲಾಖೆಯ ಒಂದು ಪ್ರದರ್ಶನವು ಫೆಬ್ರವರಿ ತಿಂಗಳಲ್ಲಿ ಏರ್ಪಡಿಸಲ್ಪಡುವುದಾಗಿ ತಿಳಿಯುತ್ತೇವೆ ಕರ್ನಲ್ ಜೆನಿಂಗ್ಸ್‌ರವರನ್ನು ಪ್ರದರ್ಶನದ ಸೆಕ್ರೆಟರಿಗಳಾಗಿ ನೇಮಿಸುವರಂತೆ

ಮುಂಬಯಿಯ ಪೈದಾನಿನಲ್ಲಿ ಇಬ್ಬರು ಹುಡುಗರು ಗಾಳಿಪಟವನ್ನು ಬಿಡುತ್ತಿರುವಾಗ ಇಬ್ಬರಿಗೂ ಜಗಳ ಹತ್ತಿ ಹೋರಾಡುತ್ತಾ ಇಬ್ಬರಲ್ಲಿ ಒಬ್ಬನು ಪ್ರಾಣಬಿಟ್ಟನು

ಬಿಹಾರದಿಂದ ಗೋವಾಲಂಡೋದಲ್ಲಿ ೧೦೦ ಲಕ್ಷ ರೂಪಾಯಿ ಸೆಣಬಿನ ನಷ್ಟವು ಆಗಬಹುದಾಗಿ ಮೆಸರ್ಸ್ ಮೆಕ್‌ನೀಲ್ ಮತ್ತು ಕಂಪೆನಿಯವರು ಅಂದಾಜು ಮಾಡಿರುವರು

ಒಡ್ಡ್ಯಾನಿನಲ್ಲಿ ಮಹಮ್ಮದೀಯರ ವಿದ್ಯಾಪರಿಷತ್ತು ಈ ತಿಂಗಳ ೨೫ನೇ ತಾರೀಕಿನಲ್ಲಿ ಕೂಡಿತು.

ವ್ಯಾಸರಾಯ ಪ್ರಭುಗಳ ನ್ಯಾಯನಿರ್ಮಾಣಕ ಸಭೆಯ ಕಡೇ ಮೀಟಿಂಗ್ ಈ ತಿಂಗಳ ೨೭ನೇ ತಾರೀಕಿನಲ್ಲಿ ಸಿಮ್ಲದಲ್ಲಿ ಕೂಡಿತು. ಇನ್ನು ಕೂಡುವ ಸಭೆಗಳು ೧೯೦೯ನೇಯ ಕೌನ್ಸಿಲು ಮಾರ್ಪಾಟಗಳ ಕಾನೂನಿಗನುಗುಣವಾಗಿ ಕೂಡುವವು. ನ್ಯಾಯವಿಧಾಯಕ ಸಭೆಯು ಪ್ರಥಮ ಮೀಟಿಂಗ್ ೧೯೧೦ನೇ ಇಸವಿ ಜನವರಿ ತಿಂಗಳಲ್ಲಿ ಕೆಸಿಂಗ್ ಪ್ರಭುಗಳ ಅಧ್ಯಕ್ಷತೆಯಲ್ಲಿ [illegible] ನ್ಯಾಯನಿರ್ಮಾಣ ಸಭೆಗಳು [illegible] ಗಳಾದವು. ೧೯೦೯ನೇ ವರುಷದಲ್ಲಿ [illegible] ಯಕ ಸಭೆಗಳಲ್ಲಿ ಹಲವು ಮಾರ್ಪಾಟುಗಳುಂಟಾದವು. ಈ ವರುಷದಲ್ಲಿ ಇನ್ನಷ್ಟು ಮಾರ್ಪಾಟುಗಳುಂಟಾಗಿ ಈ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವುದರಲ್ಲಿ ಪ್ರಜೆಗಳಿಗೆ ಮುಂಚಿನಕ್ಕಿಂತ ಹೆಚ್ಚಿನ ಸ್ವತಂತ್ರವು ದೊರಕಿರುವುದು.

ವ್ಯಾಸರಾಯ ಪ್ರಭುಗಳು ತಮ್ಮ ಪರಿವಾರದೊಡನೆ ದೇಶ ಸಂಚಾರಕ್ಕಾಗಿ ಈ ತಿಂಗಳ ೨೫ನೇ ತಾರೀಕಿನಲ್ಲಿ ಸಿಮ್ಲದಿಂದ ಹೊರಟಿರುವರು

ದಕ್ಷಿಣ ಹಿಂದುಸ್ಥಾನ

ಮದುರಾ ಮತ್ತು ತಿರುಚಿನಾಪಳ್ಳಿಯಲ್ಲಿ ಟ್ರಾನ್ಸವಾಲಿನಿಂದ ಭಾರತೀಯರ ಪರವಾಗಿ ಬಂದಿರುವ ಮಿ। ಪೊಲಕರವರ ಸಮಕ್ಷಮದಲ್ಲಿ ಟ್ರಾನ್ಸವಾಲ ಭಾರತೀಯರ ದೀನಸ್ಥಿತಿಯ ಕುರಿತು ಸಭೆಗಳು ಜರಗಿದವು.

ಮಿಸ್ಟರ್ ಪಿ ಪಾಂಡುರಂಗ ನ್ಯಾಕ ಬಿ. ಎ. ಬಿ. ಎಲ್. ಇವರು ಹೈಕೋರ್ಟು ವಕೀಲ ಸನ್ನದನ್ನು ಪಡದಿರುವರು.

ಮದ್ರಾಸು ಸರಕಾರದವರು ತಮ್ಮ ನೌಕರಿಯಲ್ಲಿರುವ ತಿಂಗಳು ಒಂದಕ್ಕೆ ಸಂಬಳವು ೬೦ ರೂಪಾಯಿಗಳಿಗೆ ಮೀರದವರಿಗೆ ಮುಂಗಾಯಿ ಭತ್ತೆಯನ್ನು ಬರುವ ನವಂಬರ ತಿಂಗಳ ಅಖೈರ ಪರಿಯಂತರ ಸೆಂಕ್ಷನ್ ಮಾಡಿರುವರು. ಕರ್ನೂಲ್, ವಿಶಾಖಪಟ್ಣ, ಗೋದಾವರಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಾತ್ರ ಈ ಮುಂಗಾಯಿ ಬತ್ತೆಯು ಇರುವುದಿಲ್ಲ ಮದ್ರಾಸು, ಮಲೆಬಾರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ೧೬ಕ್ಕೆ ಮೀರಿ ೬೦ಕ್ಕಿಂತ ಕಡಿಮೆ ಸಂಬಳವಿರುವವರೆಲ್ಲರಿಗೆ ೩ ರೂಪಾಯಿ ಪ್ರಕಾರವೂ ೧೬ ಯಾ ೧೬ಕ್ಕಿಂತ ಕಡಿಮೆ ಸಂಬಳವಿರುವವರಿಗೆ ೧॥ ರೂಪಾಯಿ ಪ್ರಕಾರವೂ, ಇತರ ಜಿಲ್ಲೆಗಳಲ್ಲಿ ರೂಪಾಯಿ ೨ ಮತ್ತು ೧ರ ಪ್ರಕಾರವೂ ಈ ಭತ್ತೆಯ ದೊರಕುವುದು. ದಶಂಬರ ತಿಂಗಳಲ್ಲಿ ಸಹಾ ಈ ಭತ್ತೆಯು ಅವಶ್ಯವಾಗಿರುವುದೋ ಏನೆಂಬದರ ವಿಷಯ ರಿಪೋರ್ಟು ಮಾಡಬೇಕೆಂಬದಾಗಿ ರೆವಿನ್ಯೂ ಬೋರ್ಡಿನವರನ್ನು ಕೇಳಿಕೊಂಡಿರುವರು.

ಮದ್ರಾಸು ಸಂಸ್ಥಾನದ ಪೋಲೀಸ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲರವರು ತಂಜಾವೂರು ಡಿಸ್ಟ್ರಿಕ್ಟ್ ಜೈಲನ್ನು, ಸಂಸ್ಥಾನದಲ್ಲಿ ಪೂರ್ಣ ಪ್ರಾಯ ಭರಿತರಾಗದ ಕೈದಿಗಳನ್ನು ಪ್ರತ್ಯೇಕವಾಗಿಡುವರೆ ಉಪಯೋಗಿಸಬೇಕಾಗಿ ಸರಕಾರದವರಿಗೆ ಸೂಚಿಸಿದ್ದರು. ಸರಕಾರದವರು ಇವರ ಈ ಸೂಚನೆಯನ್ನು ಅಂಗೀಕರಿಸಿರುವರು. ಪ್ರಾಯತುಂಬದ ಕೈದಿಗಳನ್ನು ಈ ಜೈಲಿನಲ್ಲಿ ಒಟ್ಟು ಕೂಡಿಸುವರೆ ಸಹಾ ಆಜ್ಞಾಪಿಸಿರುವರು. ಈ ತರುಣಪ್ರಾಯದ ಬಂದಿವಾನರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅರೆಗಳಲ್ಲಿಡುವರು. ತಂಜಾವೂರ ಡಿಸ್ಟ್ರಿಕ್ಟ್ ಜೈಲಿನ ಬಂದಿವಾನರನ್ನು ತಿರುಚಿನಾಪಳ್ಳಿ ಜೈಲಿಗೆ ಒಯ್ಯುವರು-

ಮದ್ರಾಸು ಗವರ್ನರರಾದ ಸರ್. ಆರ್ಥರ್ ಲೋಲೆಯವರು ಕಳದ ೨೫ ನೇ ತಾರೀಕಿನ ಸಾಯಂಕಾಲ ಮೈಸೂರಿಗೆ ಬಂದು ತಲಪಿರುವರು. ಗವರ್ನರರವರು ಎರಡು ಯಾ ಮೂರು ದಿವಸಗಳ ತನಕ ಇಲ್ಲಿಯೇ ಇದ್ದು ಬರುವ ತಿಂಗಳ ೧ ನೇ ತಾರೀಕಿನಲ್ಲಿ ಮದ್ರಾಸಿಗೆ ತೆರಳುವರು.

ಈ ತಿಂಗಳ ೨೬ ನೇ ತಾರೀಕಿನಲ್ಲಿ ದನಕರು ಮತ್ತು ಕೃಷ್ಯಗಳ ಪ್ರದರ್ಶನವು ಮೈಸೂರಿನಲ್ಲಿ ಮಹಾರಾಜರವರಿಂದ [illegible] ಪ್ರದರ್ಶನದ [illegible] ದನಕರು

ಹಿಂದುಸ್ಥಾನದಿಂದ ಬಿಡುಗಡೆಯಾಗಿ ಬರುತ್ತದೆ, ಬರ್ಮಾ ಮತ್ತು ದಕ್ಷಿಣ ಹಿಂದುಸ್ಥಾನದಿಂದ ಬಹುದ್ದವಾಗಿ ತಿರುಬರುತ್ತದೆ,

ಪಾಲ್ಘಾಟಿನಲ್ಲಿ ಪ್ಲೇಗು ರೋಗವು ತಲೆದೋರಿರುವದು. ತಾ ೨೮ರವರೆಗೆ ೧೮ ಜನರಿಗೆ ಪ್ಲೇಗು ತಗಲಿ ೧೫ ಮಂದಿ ಮೃತಪಟ್ಟಿರುವರು ಇಲ್ಲಿಯ ಜಿಲ್ಲಾ ಕಲೆಕ್ಟರರಾದ ಮ. ಆರ್. ಬಿ. ವುಡ್ ದೊರೆಗಳವರು ಇಲ್ಲಿಗೆ ಬಂದು ಮುನ್ಸಿಪಲ್ ಕೌನ್ಸಿಲರುಗಳೊಂದಿಗೆ ಆಲೋಚಿಸಿ "ದೊಡ್ಡಪೇಟೆ" ಎಂಬ ಬಜಾರಿನಿಂದ ಮುನಿಸಿಪಾಲಿಟಿಯ ಇತರ ಕಡೆಗಳಿಗೆ ಸಾಮಗ್ರಿಗಳನ್ನು ಅವುಗಳು ಪೂರ್ಣವಾಗಿ ಪ್ಲೇಗು ಸೋಂಕಿನಿಂದ ಶುದ್ಧಮಾಡಲ್ಪಟ್ಟ ವಿನಹ ಒಯ್ಯಕೂಡದಾಗಿ ಅಪ್ಪಣೆ ಕೊಟ್ಟಿರುವರು ಅಪ್ಪಣೆಯನ್ನುಲ್ಲಂಘಿಸಿದವರಿಗೆ ೬ ತಿಂಗಳ ಕಠಿಣ ಸಜೆಯೂ, ರೂ. ೧೦೦೦ ಜುರುಮಾನೆಯೂ, ವಿಧಿಸಲ್ಪಡುವುದೆಂದಾಗಿ ನೋಟೀಸು ಕೊಟ್ಟಿರುವರು ಪ್ಲೇಗಿನ ದ ಕ್ಕ ಹಾಕಿಸಿಕೊಂಡ ಕೂಲಿಯವರಿಗೆ ಮಾತ್ರ ಈ ಬಜಾರಿನಿಂದ ಸಾಮಾನು ಒಯ್ಯುವರೆ ಬಿಡುತ್ತಿರುವರಲ್ಲದೆ ಇತರ ಯಾರಿಗೂ ಬಿಡುವದಿಲ್ಲವಾದ್ದರಿಂದ ವ್ಯಾಪಾರವೆಲ್ಲವೂ ನಿಂತು ಹೋಗಿದೆ. ಈ ಪೇಟೆಯಲ್ಲಿ ಒಟ್ಟಿಗೆ ೫೦೦ ಅಂಗಡಿಗಳಿರುವವು. ಪಾಲ್ಘಾಟಿನ ವ್ಯಾಪಾರಸ್ಥರೆಲ್ಲರು ಒಟ್ಟು ಕೂಡಿ ಕಲೆಕ್ಟರರವರ ಈ ಆಜ್ಞೆಯನ್ನು ತೆಗದು ಹಾಕುವಂತೆ ಗವರ್ನರ ದೊರೆಗಳವರಿಗೆ ತಂತೀ ಬಿಟ್ಟಿರುವರು

ದಕ್ಷಿಣ ಕನ್ನಡ.

ಮಂಗಳೂರು ಇಲ್ಲಿಯ ಗವರ್ನಮೆಂಟ್ ಕೊಲೇಜಿನ ಪ್ರಿನ್ಸಿಪಾಲ ಮಿಸ್ಟರ್ ಎಚ್ ಮಾಲಿಮರವರು ಕಣ್ಣು ನೋವಿನ ಸಂಬಂಧ ೩ ತಿಂಗಳ ರಜಾ ಪಡಕೊಂಡು ಮದ್ರಾಸಿಗೆ ತೆರಳಿರುವರು ಇವರ ಬದಲಿಗೆ ಅದೇ ಶಾಲೆಯ ೧ ನೇ ಅಸಿಸ್ಟಾಂಟರಾದ ಮ। ರಾ। ರಾ। ಎಮ್. ಶೇಷಗಿರಿ ಪ್ರಭುಗಳವರನ್ನು ಆಕ್ಟಿಂಗ್ ಪ್ರಿನ್ಸಿಪಾಲರನ್ನಾಗಿ ಮೊಕರ್ರೂರು ಮಾಡಿದ್ದಾರೆ.

ಕಾಸರಗೋಡು ರೇಂಜ್ ಸಬ್ ಅಸಿಸ್ಟಾಂಟ್ ಇನ್ಸ್ಪೆಕ್ಟರರವರಾದ ಮ। ರಾ। ರಾ। ಪಿ ಮಂಗೇಶರಾಯರವರು ಗವರ್ನಮೆಂಟ್ ಕೊಲೇಜಿನಲ್ಲಿ ಈ ೩ ತಿಂಗಳುಗಳಿಗ ಆಕ್ಟಿಂಗ್ ಸಹಾಯಕ ಉಪಾಧ್ಯಾಯರಾಗಿ ನೇಮಿಸಲ್ಪಟ್ಟು ಕಳೆದ ಶುಕ್ರವಾರ ಚಾರ್ಜು ವಹಿಸಿಕೊಂಡಿರುವರು

ಮಂಗಳೂರು ಸಬ್ ರೇಂಜ್ ಸುಪರ್‌ವೈಸರರವರಾದ ಮ। ರಾ। ರಾ। ಮಂಗೇಶರಾಯರವರು ಕಾಸರಗೋಡು ರೇಂಜಿನ ಆಕ್ಟಿಂಗ್ ಸಬ್ ಅಸಿಸ್ಟಾಂಟರಾಗಿ ನೇಮಕವಾಗಿರುತ್ತಾರೆ. ಇವರ ಬದಲಿಗೆ ಇಲ್ಲಿಯ ಟ್ರೈನಿಂಗ್ ಶಾಲೆಯಿಂದ ಉಪಾಧ್ಯಾಯರಲ್ಲೊಬ್ಬರು ಸಬ್ ರೇಂಜ್ ಸುಪರ್‌ವೈಜರರಾಗಿ ನೇಮಕ ಪಡುವರಾಗಿ ವದಂತಿ ಇದೆ

ಈ ತಿಂಗಳ ತಾ ೨೭ರಲ್ಲಿ ಮುನಿಸಿಪಾಲ್ ಕೌನ್ಸಿಲರ ಸಭೆಯು ನೆರೆದಿತ್ತು ಪುರೋಳಿಯಿಂದ ನೀರು ಸರಬರಾಯಿ ಬಗ್ಗೆ ಗವರ್ನಮೆಂಟಿನವರಿಂದ ಬಂದ ಅಂದಾಜು ಮೊದಲಾದ ಕೆಲವು ವಿಷಯಗಳು ಸಭೆಯ ಮುಂದೆ ಇಡಲ್ಪಟ್ಟದ್ದವು. ಪುರೋಳಿಯಿಂದ ಪೀಪಾಯಿಗಳ ಮುಖೇನ ನೀರು ತರುವರೆ ೫॥ ಲಕ್ಷ ರೂಪಾಯಿ ಬೇಕಾಗುವುದಾಗಿ ಅಂದಾಜು ಮಾಡಲ್ಪಟ್ಟಿರುವುದಂತೆ ಇದರಲ್ಲಿ ನೀರು ಸರಬರಾಯಿಗೆ ಬೇಕಾದ ಸ್ಥಳಗಳನ್ನು ಕೊಂಡುಕೊಳ್ಳುವ ಖರ್ಚು ಕೂಡಿರುವುದಿಲ್ಲವಾಗಿ ಕೇಳುತ್ತೇವೆ. ಪಟ್ಟಣ ನಿವಾಸಿಕರ ಮೇಲೆ ಇನ್ನಷ್ಟು ಮುನಿಸಿಪಲ್ ತೆರಿಗೆಯನ್ನು ಹೊರಿಸಿ ಈ ನೀರು ಸರಬರಾಯಿಯನ್ನು ಜಾರಿಗೆ ತರಲಿಕ್ಕಾದೀತೋ ಏನೆಂಬದಾಗಿ ನಿರ್ಣಯಿಸಬೇಕೆಂತ ಸೂಚಿಸಲ್ಪಟ್ಟಿರುವುದು. ಸಭೆಯಲ್ಲಿ ನಡದ ವೃತ್ತಾಂತವು ಪೂರ್ಣವಾಗಿ ತಿಳಿದುಬರಲಿಲ್ಲ.

ಜಿಲ್ಲಾ ಕಲೆಕ್ಟರರು ಕಳೆದ ಮಂಗಳವಾರ ಗವರ್ನಮೆಂಟ್ ...

... ಸಾಹುಕಾರ ಖಾನ್ ಸಾಹೇಬ್ ... ಹಾಜೀ ... ಸೀಮ್ ಸಾಹೇಬರವರಿಗೆ ಖಾನ್ ಸಾಹೇಬ್ ಬಿರುದಿನ ಸನ್ನದನ್ನು ಕೊಡುವವರಾದರು.

ನಾಳೆದಿನ ಸಾಯಂಕಾಲ ೪ ಘಂಟೆಗೆ ಬಾಸೆಲ್ ಮಿಶನಿನವರ 75ನೇ ವರುಷದ ಜುಬಿಲಿ ಮೀಟಿಂಗ್ ಬಾಸೆಲ್ ಮಿಶನ್ ಹ್ಯಾಸ್ಕೂಲಿನ ಸಭಾಸ್ಥಾನದಲ್ಲಿ ಜರಗುವುದು ಆಕ್ಟಿಂಗ್ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರಾದ ಮಿ। ಎ ವರ್ಗೀಸರವರು ಈ ಸಂದರ್ಭದಲ್ಲಿ ಸಭಾಧ್ಯಕ್ಷರಾಗಿರುವರು ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫರಾದ ಮ। ರಾ। ರಾ। ಬಿ ರಾಮರಾವ್ ಬಿ ಎ ಬಿ ಎಲ್ ರವರೂ, ಹಿಂದೂಸ್ಥಾನದಲ್ಲಿ ಬಾಸೆಲ್ ಮಿಶನಿನ ಚೆಯರ್‌ಮೇನರಾದ ಘನ ಹೊಂದಿದ ಎಚ್ ಓಸ್ಟ್ ದೊರೆಗಳವರೂ, ಮಾಜಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ದಿವಾನ್ ಬಹದೂರ್ ಮ। ರಾ। ರಾ। ಅ ವೆಂಕಟರಮಣ ಪೈಗಳವರೂ, ಮ ರಾ ರಾ। ಅಕ್ಬರ್‌ಖಾನ್ ಸಾಹೇಬ್ ಬಹದೂರರವರೂ ಮ ರಾ। ರಾ। ಉಳ್ಳಾಲ ರಘುನಾಥಯ್ಯನವರೂ ಈ ಸಭೆಯಲ್ಲಿ ಭಾಷಣಗಳನ್ನು ಮಾಡುವರು

ಸರಕಾರಿ ಟ್ರೇನಿಂಗ್ ಕೊಲೇಜು ಸಭಾಸ್ಥಾನದಲ್ಲಿ ಈ ಜುಬಿಲಿ ಉತ್ಸವದ ಸ್ಪೆಶಲ್ ಕನ್ಸರ್ಟ್ ಅಥವಾ ಗಾಯನ ವಿನೋದವು ಈ ದಿನ ಜರಗುವದು ಈ ಬಗ್ಗೆ ಟಿಕೇಟುಗಳನ್ನು ಕೊಂಡುಕೊಂಡವರಿಗೆ ಸಭಾಸದನಕ್ಕೆ ಪ್ರವೇಶ ದೊರಕುವುದು

ಇದೇ ಕಳೆದ ತಾ ೨೫ನೇ ಸೋಮವಾರ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಸಭೆಯು ನೆರೆದಿತ್ತು

ಇಲ್ಲಿಯ ಮುನಿಸಿಪಾಲಿಟಿಯೊಳಗಿನ ಪೋರ್ಟ್ ವಾರ್ಡಿನ ಮುನಿಸಿಪಲ್ ಕೌನ್ಸಿಲರಾಗಿದ್ದ ರಾ ಎಫ್ ಜಿ ಮಸ್ಕರೇನ್ಹಸ್ ತಮ್ಮ ಮೆಂಬರಿಕೆಯನ್ನು ಬಿಟ್ಟದ್ದರಿಂದ ಸದರಿ ವಾರ್ಡಿನ ಪರವಾಗಿ ರಾ। ಪಿ ವಿ ಅಲ್ವರಿಸರಿಗೆ ಚುನಾಯಿಸಲಾಗಿದೆ

ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೫ ಪ್ಲೇಗ್ ಮರಣಗಳಿದ್ದವು

ಕಾಸರಗೋಡು ಈ ತಾಲೂಕಿನ ಹಲವು ಕಡೆಗಳಲ್ಲಿ ಸುಮಾರು ಒಂದೂವರೆ ತಿಂಗಳಿನಿಂದ ನಮ್ಮ ಕಸಬಾ ಗ್ರಾಮದ ಸಮೀಪದಲ್ಲಿ ಒಬ್ಬನಿಗೆ ಅಮ್ಮನವರ ಆವೇಶವು ಬಹು ವಿಪರೀತವಾಗಿ ಬರುತ್ತಿರುವುದಂತೆ ಆ ಸಂಬಂಧ ಜನರು ಪ್ರತಿ ಸೋಮವಾರ ಅಮ್ಮನವರ ದರುಶನಕ್ಕಾಗಿ ಹೋಗುತ್ತಿರುವರು ಕಾಣಿಕೆ ಮೊದಲಾದವುಗಳನ್ನು ಹಾಕಿ ಅಮ್ಮನವರ ಆವೇಶಬಂದವನೊಡನೆ ಹೇಳಿಕೆಗಳನ್ನು ಕೇಳಿಕೊಂಡು ಪ್ರಸಾದಗಳನ್ನು ಹೊಂದುತ್ತಿರುವರು ಇದೇ ಕಳೆದ ನವರಾತ್ರಿ ಸಮಯದಲ್ಲಿ ಬಂದ ಜನಸ್ತೋಮಕ್ಕೆ ಜವಾಬು ಕೊಡುವರೆ ಒಬ್ಬ ಪಾತ್ರಿಯು ಸಾಲದೆಂದು ಅಮ್ಮನವರು ಇನ್ನು ಮೂರು ಪಾತ್ರಿಗಳ ಮೇಲೆ ಕಾಣಿಸಿಕೊಂಡು ವಿಶೇಷ ಗದ್ದಲವಾಯಿತು ಹಣವೂ ಬಹಳ ಹೆಚ್ಚು ಸಂಗ್ರಹವಾಯಿತು ಯಾವ ಅಸಾಧ್ಯವಾದ ಸಂಗತಿಯನ್ನು ಕೇಳಿಕೊಂಡರೂ ಕಾಣಿಕೆಯ ವಿಶೇಷತ್ವದಿಂದ ಸಾಧ್ಯವಾಗಿ ಕೊಡುತ್ತೇನೆಂತ ಅಭಯವಾಗುತ್ತಲಿತ್ತು ಇದರಿ ಕಲಿ ಕಾಲವಲ್ಲವೋ? ಯಾವ ದೇವರ ಆವೇಶಕ್ಕೂ ಭೂಮಿಯಲ್ಲಿ ಅವತರಿಸಿ ಬಹಳ ಕಾಲ ನಿಲ್ಲುವುದು ಅಸಾಧ್ಯವಾಗಿರುವುದು ನವರಾತ್ರಿ ಕಡೇ ದಿನ ನಾಲ್ಕೈದು ಜನ ಹೊಂತಗಾರರು ಹೋಗಿ ಪಾವಾಣೆ ಅರ್ಧಾಣೆ ಕಾಣಿಕೆ ಹಾಕಿ ತಾವು ಮನಸ್ಸಿನಲ್ಲಿ ಯೋಚಿಸಿದ್ದು ಹೇಳಬೇಕೆಂತ ಒಂದೇ ರೀತಿ ಕೇಳಿಕೊಂಡದ್ದರಿಂದ ಆ ನಾಲ್ಕು ಪಾತ್ರಿಗಳಿಗೂ ಕೆಂಡದಂಥಾ ಕೋಪವೆದ್ದು ಉದ್ರೇಕರಾಗಿ ಅಮ್ಮನವರ ಆವೇಶವನ್ನು ತಕ್ಷಣದಲ್ಲಿಯೇ ತೊರೆದು ಈಶ್ವರ ಪಿಶಾಚಗಣದಲ್ಲಿ ಅರೆನೀಚವಾದ ಪಿಶಾಚಿಗಳ ಆವೇಶವನ್ನು ತಾಳಿ ಯದ್ವಾತದ್ವ ಒದರಿಕೊಂಡು ಸದರಿ ಪ್ರಶ್ನೆ ಕೇಳಿದ ಹೊಂತಗಾರರಿಗೆ ಪ್ರಾಣಭಯ ಉಂಟಾಗುವಂತೆ ಗದರಿಸಿದ್ದಿರುವರಂತೆ. ಆ ನಂತರ ಕಳೆದ ಮಂಗಳವಾರ ಪಾತ್ರಿಗಳಿಗೆ ... ಆವೇಶಗೊಂಡು ... ಕಥೆ ವಚನವನ್ನು ಕೇಳುವರಾಗ ... ಪಾತ್ರಿಗಳು ಹೇಳಿದ ಕಥೆ ವಚನವನ್ನು ಕೇಳಿ ಬಹಳ ಜನರಲ್ಲಿ ದಿಗಿಲು ಉಂಟಾಗಿರುವುದು. ತನ್ನನ್ನು ಪರೀಕ್ಷಿಸಲು ಬಂದವರನ್ನು ನಿರ್ಮೂಲ ಮಾಡದೆ ಪುನಹ ಈ ಪಾತ್ರಿಗಳ ಮೇಲೆ ಕಾಣಿಸಿಕೊಳ್ಳಲಿಕ್ಕಿಲ್ಲವೆಂಬ ಮರಣಾಜ್ಞೆಯು ಯಾರಲ್ಲಿ ತಾನೇ ಹೆದರಿಕೆಯನ್ನುಂಟುಮಾಡದಿರದು?

ಅಯ್ಯಾ ಪತ್ರಿಕಾಕರ್ತರೇ, ಈ ಸಮಾಚಾರವನ್ನು ಕೇಳುತ್ತಿರುವಾಗ ಕಳೆದ ವರುಷದಲ್ಲಿ ನಮ್ಮ ತಾಲೂಕಿನ ಪೆರಂಬಳ ಗ್ರಾಮದ ನಿವಾಸಿಕಳಾದ ಬಡ ಮಲೆಯಾಳಿ ಅಗಸಗಿತ್ತಿಗೆ ಸುಬ್ರಮಣ್ಯ ದೇವರು ಪ್ರತ್ಯಕ್ಷವಾದ ಸಂಗತಿಯು ನೆನಪಿಗೆ ಬರುತ್ತಿರುವುದು ಬಡ ಅಗಸಗಿತ್ತಿಗೆ ದೇವರು ಪ್ರತ್ಯಕ್ಷವಾಗಿ ಅಕ್ಕಿ ಕೊಂಡುಹೋಗಿ ಕೊಟ್ಟರೆ ನೀರು ಮತ್ತು ಬೆಂಕಿ ಇಲ್ಲದೆ ಅನ್ನವಾಗುತ್ತಿತ್ತು ಅವಳು ಹೀಗೆ ಕೊಟ್ಟ ಅನ್ನವನ್ನು ದೇವರ ಪ್ರಸಾದವೆಂತ ಎಲ್ಲರೂ ಭುಂಜಿಸುವವರಾದರು ಕೊನೆಗೆ ಒಬ್ಬ ಗೃಹಸ್ಥನು ಅಗಸಗಿತ್ತಿಯ ಹಣ ಸಂಪಾದನೆಯ ಕೃತ್ರಿಮ ರೀತಿಯನ್ನು ತಿಳಕೊಂಡು ಇದನ್ನು ಬೈಲಿಗೆ ತರಬೇಕೆಂತ ನೆನಸಿ ಅವಳಲ್ಲಿ ಹಾಜರಿಲ್ಲದ ನಮೂನೆಯ ಗಂಧಸಾಲೆ ಅಕ್ಕಿ ಕೊಟ್ಟು ಕಾಣಿಕೆ ಸಮೇತ ಅಲ್ಲಿಯೇ ಕೂತುಕೊಂಡು ಎಷ್ಟು ಹೊತ್ತು ಕಾದರೂ ಬಡ ಅಗಸಗಿತ್ತಿಗೆ ಗಂಧಸಾಲೆ ಅನ್ನವನ್ನು ಕೊಡುವರೆ ಸಾಧ್ಯವಾಗದೆ ಹೋಯಿತು ಹೀಗೆ ಅಗಸಗಿತ್ತಿಗ ದೇವರು ಪ್ರತ್ಯಕ್ಷವಾಗಿ ಜನರನ್ನೆಲ್ಲಾ ವಂಚಿಸಿ ಮಾಯಕವಾದ ರೀತಿಯು ತಮ್ಮ ವಾಚಕರೆಲ್ಲರಿಗೂ ಗೊತ್ತಿರಲಿಕ್ಕೆ ಸಾಕು ... ವಸ್ತುದಾನ್ಯಗಳಿಗೆ ಧಾರಣೆಯು ಚಡಾವಾದ ಈ ಸಮಯಗಳಲ್ಲಿ ದೇವರು ಒಬ್ಬೊಬ್ಬರಿಗೆ ಮೆಚ್ಚಿ ಪ್ರತ್ಯಕ್ಷವಾಗುವುದು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ ಪ್ರಕರಣಗಳ ಮೇರೆಗೆ ಅನುಚಿತವಲ್ಲವೇ? ಪ್ರಕೃತ ಇನ್ನೊಬ್ಬ ದೇವರಿಂದ ನಿರ್ಮೂಲಮಾಡುವ ಅನುಜ್ಞೆಯು ಮೂಢಮತಿಗಳಾದ ಅನೇಕರಲ್ಲಿ ಬಹಳ ಭೀತಿಯನ್ನುಂಟುಮಾಡಿರುವುದು ಈ ಕುರಿತು ಜನರೆಲ್ಲರೂ ಕೂಡಿ ಎಡ್ವರ್ಡ್ ಚಕ್ರವರ್ತಿಯವರು ಸಾಮ್ರಾಜ್ಯದ ರಕ್ಷಣೆಗಾಗಿ ಪ್ರತಿ ಗ್ರಾಮಗಳಲ್ಲಿಯೂ ಸಹಾ ಪ್ರತಿಷ್ಠಿಸಿದ ಪೋಲೀಸು ದೇವತೆಗಳಿಗೆ ಮೊರೆ ಇಟ್ಟರೆ ಎಲ್ಲಾ ಬಾಧೆಯು ಇವರ ಮೂಲಕ ನಿವಾರಣವಾಗಿ ದೇವರ ಪ್ರತ್ಯಕ್ಷತೆಯ ನಿಜತ್ವವನ್ನು ತಿಳಿದಂತಾಗುವುದು

ಮುಲ್ಕಿ ತಾರೀಕು ೨೫ರಲ್ಲು ಇಲ್ಲಿಯ ಪ್ರೊಟೆಸ್ಟಾಂಟ್ ಕ್ರೈಸ್ತರು ಕದಿರು ಹಬ್ಬವನ್ನು ಬಹು ಸಡಗರದಿಂದ ಆಚರಿಸಿದರು ಅಂದು ಒಬ್ಬ ಉಪದೇಶಿಯರು ಕಾಲೋಚಿತ ಭಾಷಣವನ್ನು ಆಡಿದ ನಂತರ, ಕೂಡಿ ಬಂದಂಥಾ ಫಲಗಳನ್ನೆಲ್ಲಾ ಏಲಂ ಹಾಕಿದಾಗ ಸುಮಾರು ೫೭ ರೂಪಾಯಿ ಜಮೆಯಾಯಿತಲ್ಲದೆ, ಸಭಾ ಯೌವನಸ್ಥರು ನಾನಾ ತರದ ಆಟ ತಮಾಶೆಗಳನ್ನು ಮಾಡಿ ಕೂಡಿ ಬಂದವರಿಗೆ ಸಂತೋಷಗೊಳಿಸಿದರು ಆಟದಲ್ಲಿ ಗೆದ್ದವರಿಗೆ ಬೈಡೆನ್ ಬಾಕ್ ದೊರೆಗಳವರ ದೊರೆಸಾನಿಯವರು ಇನಾಮುಗಳನ್ನು ಹಂಚಿ ಉತ್ತೇಜನ ಗೊಳಿಸಿದರು

ಬೋರ್ಡು ಶಾಲೆಗಳಲ್ಲಿ ತರಬೇತು ಆಗದ ಉಪಾಧ್ಯಾಯರುಗಳಿಗೆಲ್ಲ ತಲಬು ದರ ರೂಪಾಯಿ ಎರಡರಂತೆ ತಗ್ಗಿಸಬೇಕೆಂದು ಹುಕುಂ ಜಾರಿಗೆ ಬಂದದೆಂಬದಾಗಿ ಕೇಳುತ್ತೇವೆ

ಹಲವು ಹುಡುಗಿಯರ ಶಾಲೆಗಳಲ್ಲಿ ಹೆಮ್ಮಕ್ಕಳಿಗೆ ಕೋಲಾಟಗಳನ್ನು ಆಡಿಸುತ್ತಿರುವರು. ಇದರ ಕೂಡೆ ಹೆಮ್ಮಕ್ಕಳಿಗೆ ಶಾಲೆಗಳಲ್ಲಿ ಹೆಚ್ಚು ಕಸೂತಿ ಕೆಲಸಗಳನ್ನು ಅವರ ಜೀವನೋಪಾಯದ ಬೇರೆ ಕೆಲವು ಶಾಸ್ತ್ರಗಳನ್ನೂ ಕಲಿಸಲಾಗದೇ?

ವಿವಿಧ ವಿಷಯಗಳು

ಅಮೇರಿಕದ ಸಂಯುಕ್ತ ಸಂಸ್ಥಾನದ ಡಾಕ್ಟರ್ ಜೇ. ಎಚ್ ... ಪ್ರಯೋಜನವನ್ನು ...

ಜಿಕವಾಗಿ ಕೊಂಡಾಡಿರುವರು. ಅನನಾಸನ್ನು ತಿನ್ನುವದರಿಂದ ಮುದಿಪ್ರಾಯದಲ್ಲಿ ಸಹಾ ಆರೋಗ್ಯವನ್ನು ಕಾಪಾಡಬಹುದೆಂಬದಾಗಿ ಇವರ ಅಭಿಪ್ರಾಯವಾಗಿರುವುದು. "ಡಿಸ್‌ಪೆಪ್‌ಸಿಯಾ" ಎಂಬ ಅಜೀರ್ಣಬಾಧೆಯಿಂದ ಧಾತುಪುಷ್ಟಿಯು ಇಲ್ಲದೆ ನರಗಳೆಲ್ಲವೂ ಕ್ಷೀಣವಾಗಿ ಹೋದವರು ಅನನಾಸಿನ ರಸವನ್ನು ಕುಡಿದು ಆರೋಗ್ಯವನ್ನು ಹೊಂದಿ ಬಹಳಕಾಲ ಬಾಳಬಹುದೆಂದು ಈ ಡಾಕ್ಟರರವರು ಹೇಳಿರುವರು. ಹುಳಿವೊಸರು ಹಾಲನ್ನು ತಮ್ಮ ಆಹಾರದೊಂದಿಗೆ ಉಪಯೋಗಿಸಿಕೊಂಡು ದೀರ್ಘಾಯುಷ್ಯವನ್ನು ಅನುಭವಿಸುತ್ತಿರುವ ಬಲ್ಗೇರಿಯದ ರೈತರಿಗಿಂತಲೂ ಅನನಾಸಿನ ರಸವನ್ನು ಕುಡಿದವರು ಹೆಚ್ಚುಕಾಲ ಬಾಳುವರೆಂದು ಡಾಕ್ಟರ್ ಡೇವಿಡ್ ಟಿ. ಡೆಯುವರು ಅಭಿಪ್ರಾಯಪಡುತ್ತಾರೆ.

—— o ——

ಸರ್ಪಗಳ ವಿಷವು. ಸರ್ಪಗಳ ಕಡಿತದಿಂದ ವಿಷವೇರಿ ಸಾಯದಂತೆ ಉಪಾಯಗಳನ್ನು ಇತ್ತಲಾಗೆ ಅನೇಕ ಡಾಕ್ಟರರವರು ಶೋಧಿಸುತ್ತಿರುವರು. ತಂತಮ್ಮ ಶೋಧನೆಯ ಫಲಿತಾಂಶಗಳನ್ನು ಪುಸ್ತಕರೂಪವಾಗಿ ಇವರು ಪ್ರಕಟಿಸಿರುವರು. ಡಾಕ್ಟರ್ ಕಾಲ್ಮೆಟಿ ಎಂಬವರ ಶೋಧನೆಯ ಮುಖ್ಯಸಾರಾಂಶವೇನಂದರೆ:—ಒಂದೇ ಜಾತಿಯ ಸರ್ಪಗಳು ಒಂದನ್ನು ಇನ್ನೊಂದು ಕಚ್ಚಿದ್ದರಿಂದ ಈ ಕಡಿತದಿಂದ ಏನೂ ಅಪಾಯ ಉಂಟಾಗದು. ಯಾಕಂದರೆ, ಒಂದೇ ವಿಧದ ವಿಷದ ಪೊಟ್ಟೆಗಳು ಅವುಗಳಿಗೆ ಇದ್ದು ಈ ವಿಷವು ಇವುಗಳ ರಕ್ತದಲ್ಲಿಯೂ ಸಹಾ ಸ್ವಲ್ಪಮಟ್ಟಿಗೆ ಮಿಶ್ರಿತವಾಗಿರುವುದು. ಮುಂಗಿಸಿಗಳಿಗೆ ರಕ್ತದಲ್ಲಿ ಎಂಥಾ ವಿಷವನ್ನಾದರೂ ತಾಳಿಕೊಳ್ಳುವಷ್ಟು ವಿಶೇಷವಾದ ಪದಾರ್ಥವು ಇರುವದರಿಂದ ಯಾವ ಜಾತಿಯ ಹಾವಾದರೂ ಇವುಗಳನ್ನು ಕಚ್ಚಿದ್ದಲ್ಲಿ ಮುಂಗಸಿಗಳು ಸಾಯವು. ಮನುಷ್ಯ ಯಾ ಸರ್ಪವಿಷದಿಂದ ಸಾಯುವ ಪ್ರಾಣಿಗಳಿಗೆಲ್ಲವುಗಳಿಗೂ ಈ ವಿಷವನ್ನು ಸ್ವಲ್ಪಸ್ವಲ್ಪವಾಗಿಯೇ ರಕ್ತಕ್ಕೆ ಕೂಡಿಸಿದ್ದಲ್ಲಿ ಇವುಗಳಿಗೆ ಸಹಾ ಹಾವುಕಡಿತದಿಂದ ಅಪಾಯ ಉಂಟಾಗಲಾರದು ಎಂದು ಪ್ರೊಫೆಸರ್ ಫ್ರೆಜರೆಂಬವರು ಶೋಧಿಸಿರುವರು. ವಿಷದಿಂದ ಹಾಕುಹಾಕುವ ವಿಧಾನವು ಇರುವುದು. ಈ ಬಗ್ಗೆ ಒಂದು ಕುದುರೆಗೆ ಕ್ರಮವಾಗಿ ಸ್ವಲ್ಪಸ್ವಲ್ಪ ವಿಷವನ್ನು ಅದರ ರಕ್ತದಲ್ಲಿ ಕೂಡಿಸಿ ಕ್ರಮೇಣ ಮರಣವನ್ನುಂಟುಮಾಡುವ ವಿಷದ ೨೦ ಪಾಲಷ್ಟು ವಿಷವನ್ನು ಈ ಕುದುರೆಯ ರಕ್ತದಲ್ಲಿ ಮಿಶ್ರಮಾಡಿ ಆ ರಕ್ತ ಸೀರಮ್‌ನಿಂದ ಡಾಕುಹಾಕಿದ್ದಲ್ಲಿ ಸರ್ಪ ಮೊದಲಾದ ವಿಷಜಂತುಗಳ ಕಡಿತದಿಂದ ಅಪಾಯ ಬಾರದು.

ದಕ್ಷಿಣ ಆಫ್ರಿಕದ ಕಾಡು ನಿವಾಸಿಕರು ಸರ್ಪದ ವಿಷವನ್ನು ಸೇವಿಸುತ್ತಿರುವರಾಗಿಯೂ ವಿಷವು ಇವರ ರಕ್ತದಲ್ಲಿಯೇ ಕೂಡಿರುವುದರಿಂದ ಇವರಿಗೆ ವಿಷ ಸೇವನೆಯಿಂದ ಮರಣವು ಪ್ರಾಪ್ತವಾಗುವುದಿಲ್ಲವಾಗಿಯೂ ತಿಳಿದುಬರುತ್ತದೆ. ಅಮಲಿಗೋಸ್ಕರ ಭಂಗಿಯನ್ನು ಸೇವಿಸುವ ರೀತಿಯಲ್ಲಿ ಸರ್ಪವಿಷ ಸೇವನೆಯಿಂದ ಅಮಲುಂಟಾಗುವುದರಿಂದ ಕಾಡು ನಿವಾಸಿಕರು ಇದನ್ನು ಆಗಿಂದಾಗ್ಯೆ ಸೇವಿಸುತ್ತಿರುವರು. ಡಾಕ್ಟರ ಫ್ರೆಜರವರು ಕಾಡು ನಿವಾಸಿಕರಿಗೆ ಹೀಗೆ ಹಾವಿನ ವಿಷದಿಂದ ಅಪಾಯಬಾರದಿರುವುದನ್ನು ಈ ರೀತಿ ವಿವರಿಸಿರುವರು. ಸರ್ಪವು ಕಚ್ಚುವುದರಿಂದ ವಿಷವು ಕೂಡಲೇ ರಕ್ತಕ್ಕೆ ಕೂಡಿ ಅಪಾಯಕರವಾಗುವುದು. ಆದರೆ ವಿಷವನ್ನು ಸೇವಿಸಿದ್ದರಿಂದ ಇದು ಕೂಡಲೇ ರಕ್ತದೊಡನೆ ಮಿಶ್ರವಾಗುವುದಿಲ್ಲ. ಹೊಟ್ಟೆಯೊಳಗೆ ಹೋದಾಕ್ಷಣವೇ ಪಿತ್ತಕೋಶದಿಂದ ಬರುವ ಪಿತ್ತವು ಇದರೊಂದಿಗೆ ಸೇರಿ ಮರಣವನ್ನುಂಟು ಮಾಡುವ ವಿಷದ ಅವಗುಣವು ಹೋಗುತ್ತದೆ. ಈ ರೀತಿ ಕೂಡಲೇ ರಕ್ತಕ್ಕೆ ಕೂಡಿ ೧೦೦೦ ಪ್ರಾಣಿಗಳನ್ನು ಕೊಲ್ಲಲಿಕ್ಕೆ ಸಾಕಾಗುವ ವಿಷವನ್ನು ಹೊಟ್ಟೆಯ ಮುಖಾಂತರ ರಕ್ತಕ್ಕೆ ಮಿಳಾಯಿಸಿದ್ದಲ್ಲಿ ಏನೂ ಅಪಾಯ ಉಂಟಾಗಲಾರದೆಂದು ಈ ಡಾಕ್ಟರರ ಅಭಿಪ್ರಾಯ.

ಸರ್ಪದ ವಿಷವನ್ನು ಸರ್ಪದ ಪಿತ್ತದೊಂದಿಗೆ ಕೂಡಿಸಿದ್ದಲ್ಲಿ ವಿಷದ ಪೂರ್ಣ ಮರಣವನ್ನುಂಟುಮಾಡುವ ಅವಗುಣಗಳು ಹೋಗುವುವೆಂದು ಡಾಕ್ಟರ ಫ್ರೆಜರರವರು ಶೋಧಿಸಿರುವರಲ್ಲದೆ ಇತರ ಪ್ರಾಣಿಗಳ ಪಿತ್ತಕೋಶದಿಂದ ಬರುವ ಅಮ್ಲ ಪದಾರ್ಥಗಳಲ್ಲಿ ಸಹಾ ಈ ವಿಷವನ್ನು ಹೀಗೆ ಮಾರ್ಪಡಿಸುವ ಗುಣವಿರುವುದೆಂದು ಕಂಡುಕೊಂಡಿರುವರು. ಸರ್ಪ ಕಡಿತದಿಂದ ಮರಣ ಉಂಟಾಗದಂತೆ ಪಿತ್ತಕೋಶದ ಅಮ್ಲ ಪದಾರ್ಥದಿಂದ ಒಂದು ಹಾಕಿನ ದ್ರವವನ್ನು ಕಂಡುಕೊಂಡಿರುವರು.

ಕಳೆದ ೧೦ ವರುಷಗಳಿಂದ ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಛಾಪಖಾನೆಗಳ ಅಭಿವೃದ್ಧಿಯು ಇತ್ತಲಾಗೆ ಪ್ರಕಟಿಸಲ್ಪಟ್ಟಿರುವುದು. ಹತ್ತು ವರುಷಗಳ ಮೊದಲು ೨೦೬೧ ಛಾಪಖಾನೆಗಳಿದ್ದವು. ಇವುಗಳು ೧೯೦೭-೦೮ ನೇ ವರುಷದಂತ್ಯದಲ್ಲಿ ೨೫೭೧ ಆಗಿರುವುದು. ವರ್ತಮಾನ ಪತ್ರಗಳ ಸಂಖ್ಯೆಯು ಸಹಾ ೬೭೭ ರಿಂದ ೭೫೬ಕ್ಕೆ ಹೆಚ್ಚಿರುವುದು. ವರ್ತಮಾನ ಪತ್ರಗಳಲ್ಲದೆ, ಇತರ ಮಾಸಿಕ ಪತ್ರಗಳು ಮುಂತಾದವುಗಳು ಸೇಕಡಾ ೧೬೬ರಷ್ಟು ಹೆಚ್ಚಿರುವವು. ಇವುಗಳ ಸಂಖ್ಯೆಯು ೪೬೩ ಇದ್ದದ್ದು ೧೦೬೩ ಆಗಿರುವುದು. ಇಂಗ್ಲೀಷು ಯಾ ಇತರ ಯೂರೋಪಿಯ ಭಾಷೆಗಳಲ್ಲಿ ಅಚ್ಚು ಹಾಕಲ್ಪಟ್ಟ ಪುಸ್ತಕಗಳು ೧೯೩೪ ರಿಂದ ೧೯೬೮ಕ್ಕೆ ಅಂದರೆ ಸೇಕಡಾ ೭೫ರಷ್ಟು ಅಧಿಕವಾಗಿರುವಾಗ ದೇಶಭಾಷೆಗಳಲ್ಲಿ ಮುದ್ರಿಸಲ್ಪಟ್ಟ ಪುಸ್ತಕಗಳ ಸಂಖ್ಯೆಯು ಸೇಕಡಾ ೧೭ರಷ್ಟು ಏರಿರುವುದು. ಆಯಾ ಸಂಸ್ಥಾನಗಳಲ್ಲಿ ಅಚ್ಚು ಹಾಕಲ್ಪಟ್ಟ ವರ್ತಮಾನ ಪತ್ರಗಳು ಇಂಗ್ಲೀಷು ಯಾ ಇತರ ಅನ್ಯ ದೇಶಭಾಷಾ ಪುಸ್ತಕಗಳು, ಮಾಸಿಕ ಪತ್ರ ಮುಂತಾದವುಗಳ ಸಂಖ್ಯೆಯು ಈ ರೀತಿಯಾಗಿರುವುದು. ಬಂಗಾಳದಲ್ಲಿ ೧೦೯ ವರ್ತಮಾನ ಪತ್ರಗಳೂ, ೧೩೮ ಪಕ್ಷಮಾಸಿಕ ಮೊದಲಾದ ಪುಸ್ತಕಗಳೂ ೭೩೯ ಇಂಗ್ಲೀಷ್ ಪುಸ್ತಕಗಳೂ ೩೪೫೭ ದೇಶಭಾಷಾ ಪುಸ್ತಕಗಳೂ ಪ್ರಕಟಿಸಲ್ಪಡುತ್ತಿರುವವು. ಮುಂಬಯಿಯಲ್ಲಿ ಮೇಲಿನ ಸಂಖ್ಯೆಗಳನ್ನು ಸರಿಹೋಲುವ ಸಂಖ್ಯೆಗಳು, ೧೯೦, ೬೧೦, ೭೭ ಮತ್ತು ೭೪೭; ಮದ್ರಾಸು ಸಂಸ್ಥಾನದಲ್ಲಿ ವರ್ತಮಾನ ಪತ್ರಗಳ ಸಂಖ್ಯೆಯು ೧೪೧; ಬೇರೆ ಆಯಾ ಕಾಲಗಳಲ್ಲಿ ಪ್ರಕಟವಾಗುವ ಪತ್ರಗಳು ೩೭೪; ಇಂಗ್ಲೀಷು ಪುಸ್ತಕಗಳು ೪೮೦; ದೇಶಭಾಷಾ ಪುಸ್ತಕಗಳು ೧೯೯೭; ಈ ವಿಧವಾಗಿರುವುದು. ವರ್ತಮಾನ ಪತ್ರಗಳಲ್ಲಿ ಮುಂಬಯಿ ಸಂಸ್ಥಾನವು ಪ್ರಥಮದ್ದಾಗಿದ್ದು; ಮದ್ರಾಸು ಎರಡನೇದಾಗಿ ಪಂಜಾಬು ಮೂರನೇದಾಗಿರುವುದು.

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ.

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಫಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ. ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು. ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು. ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಿ. ಎಲ್. ಬೈಯಣ್ಣ ಬ್ರದರ್ಸ್,
67 ಲಾಲ್‌ಬಾಗ್ ರೋಡು,
[illegible].

ಜೀವನಸುಗಳ ಧಾರಣೆ, ಮಂಗಳೂರು.

ಬಿಳಿ ಮಸ್ಸತಿ ಅಕ್ಕಿ	6—8—0
ಗುಡ್ಡು ಮಸ್ಸತಿ	4-14—0
ಬೈಲು ಸುಗ್ಗಿ	4-15—0
ದುಯಂ ಗುತ್ತು ರಾಶಿ	4—8—0
ಹೊಸ ಗುಡ್ಡು ರಾಶಿ	3-11—0
ಹೊಸ ಭತ್ತ	1-11—0
ಮಸ್ಸತಿ ಬೆಳ್ತಿಗೆ	5—0—0
ರಂಗೂನ್ ಬೆಳ್ತಿಗೆ ಗೋಣಿ	7—6—0
ಹುರುಳಿ ಗೋಣಿ ೧ ಮುಡಿ 2ರ	7—6—0
ಉಪ್ಪು ಗೋಣಿ ೧ರ	3—6—0
ಕೊಪ್ರಿ ಎಣ್ಣೆ ಮಣ	6—10-0
ಕಾಫಿ ಖಂಡಿ ೧ರ	205—0—0
ಕಾಳು ಮೆಣಸು ಖಂಡಿ	120—0—0
ಬಿಳಿ ಗೋಟು ಅಡಿಕೆ	72—0—0

THE MANGALORE WEAVING Co. MANGALORE.

ಮಂಗಳೂರು ವಿವಿಂಗ್ ಕಂಪೆನಿ, ಮಂಗಳೂರು.

ಶುಭಕ್ರಯ! ಹೆಚ್ಚಿನ ಡಿಸ್‌ಕೌಂಟು!!

ಮೆಡಲ್ ಯಾ ಬಹುಮಾನದ ಪದಕುಗಳನ್ನು ಪಡೆದಿರುವುದು.

ಈ ಮಗ್ಗದ ಕಾರ್ಖಾನೆಯಲ್ಲಿ ಪ್ರಖ್ಯಾತಿಪಟ್ಟ ಮಂಗಳೂರು ಮತ್ತು ಕಲ್ಲಿಕೋಟೆ ಅಂಗೀ ವಸ್ತ್ರಗಳು, ಟ್ವೀಡ್ ಮಾದರಿ ಅರುವೆ, ಷರ್ಟಿಂಗ್ ಯಾ ಬಿಳಿಂಗಿ ಅರುವೆ, ಹೊದ್ದುಕೊಳ್ಳುವ ವ ಹಾಸಿಗೆಗಳಿಗೆ ಹಾಸುವ ಬಟ್ಟೆಗಳು, (Bed Sheets) ಟವೆಲುಗಳು ಮುಂತಾದವುಗಳು ತಯ್ಯಾರಿಸಲ್ಪಡುವವು. ವಸ್ತ್ರಗಳ ರಂಗು ಖಾತ್ರಿಯಾಗಿರುವುದು.

—— o ——

ಯುವತೀರೋಗಿಯರಗೋಸ್ಕರ ತಯಾರಿಸಿದ
ಸೂಲಗಿತ್ತಿಯರಾದ ಕಮಲಾಬಾಯಿಯವರ

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ. ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯು ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧ ಕ್ರಯ ೧ ರೂ. ವಿ. ಪಿ. ಅಂಚೆ ಹಾಸಲು ೪ ಆಣೆ.

ಸೂಲಗಿತ್ತಿಯರಾದ ಕಮಲಾಬಾಯಿ, [illegible]
[illegible] ರೋಡ್, ಮುಂಬೈ.

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ದೆಬೀಳುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲಿ ಒಂದರ 6 ಆಣೆ

ಮನೋರಂ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂದಿವಾತ, ಜಖಮು, ಘಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲಿ ಒಂದಕ್ಕೆ 8 ಆಣೆ, ೬ ಬಾಟ್ಲಿಗಳಿಗೆ 2 ರೂ 10 ಆಣೆ ೧೨ ಬಾಟ್ಲಿಗಳಿಗೆ 5 ರೂ ಬಹಳ ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ. ರಾ. ಪಾಠಕ್ ಮತ್ತು ಕಂಪೆನಿ,

ಟಾಕುರ್‌ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೊಒಪರೇಟಿವ್ ಇನ್ಸುರೆನ್ಸ್ ಸೊಸ್ಯಾಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು —14 ಹೇರ್ ಸ್ಟ್ರೀಟ್ ಕಲ್ಕತ್ತಾ

ಬ್ರೆಂಚ್ ಆಫೀಸುಗಳು —42 ಎಲ್ಫಿನ್‌ಸ್ಟನ್ ಸರ್ಕಲ್ ಮುಂಬಯಿ.

6 ಬ್ರೊಡವೆ, ಮದ್ರಾಸು

1906ರಲ್ಲಿ ಸ್ಥಾಪಿಸಲ್ಪಟ್ಟಿತು.

ಸಂಘದ ನಿಯಮಿತ ಬಂಡವಾಳ ಒಂದುಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು.

1909 ಎಪ್ರಿಲ್ ತಿಂಗಳ ವರೆಗೆ ರೂ 18,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು.

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುಮ್ಹಾಲಿಕರಿಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು. ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಲ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಬಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲ್ಪಡುವುದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ

ಬಿ. ಬಾಬುರಾವ್ ಎಂಡ್ ಸನ್,

ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ

ಅನುಭವಪತ್ರ ಬಾಟ್ಲಿಯೊಂದಿಗಿರುತ್ತವೆ. { **ಸಿದ್ಧಲಕ್ಷ್ಮೀ ವಿಲಾಸ.** } ಕ್ರಯ ಬಾಟ್ಲಿ ೧ಕ್ಕೆ 12 ಆಣೆ

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಅಸನದಲ್ಲಿ) ಗುದದ್ವಾರದ ಹತ್ತರ ಬೀಳು [illegible] ತೊತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಷಾದಿ [illegible]ಗಳೂ, ಬಿಚ್ಚಿ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. [illegible] ಇದು ದಿವ್ಯ ಔಷಧವಾಗಿರುವದು.

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. [illegible]

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯ್ಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್'. ಈ ವಿಷಯ ಹೆಚ್ಚು ಬರಿಯುವುದೇ ಅಗತ್ಯವಿಲ್ಲ. ಒಂದು ಸಾರಿ ಪರೀಕ್ಷಿಸಿದೊಡನೆ ತಿಳಿದು ಬರುವುದು. ಬಾಟ್ಲಿ ಒಂದರ ಕ್ರಯ ರೂಪಾಯಿ ೦—೧೨—೦.

ಸ್ವದೇಶಾಭಿಮಾನಿಯು ಚಂದಾದಾರರಿಗೆ ಮಾತ್ರ ಇದು ೧೦ ಆಣೆ ಕ್ರಯಕ್ಕೆ ದೊರಕುವುದು.

ಮಂಗಳೂರು [illegible] ಮಂಗಳೂರು [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವರ್ಧಕ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ರೂ ೧೦ ಆಣೆ

೨ ಪ್ರಮೇಹಹರಿವು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ

೩. ಕಾಮೇಶ್ವರ ಮಾತ್ರೆ ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ ಅರ್ಧ ತೊಲೆಗೆ ೨ ರೂ

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿನ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೫. ಸೂರಣಾವಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೬. ಪ್ಲೀಹೋದರಾರಿ ಚೂರ್ಣ ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ

೭. ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗ ೧೦ ಆಣೆ

೮. ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

೯ ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೧೦. ವಾಸಾವಲೇಹ ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ

೧೨ ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬಾವು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಎರಡು ದಿವಸದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ

೧೪ ಸನ್ನೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ; ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಕಳೆಯಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು, ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ — **ಬಿ. ಎಸ್. ನಾಥು ಮತ್ತು ಕಂಪೆನಿ,**
ಬಾಂದ್ರಾ (ಮುಂಬಯಿ ಹತ್ತಿರ)
Bandra (near Bombay)

ವಾತ, ಸಂಧಿವಾತ, ತಲೆನೋವು, ಜಖಮು, ಇವುಗಳ ನಿವಾರಣೆ

ರೊಯಲ್ ಇಂಡಿಯನ್ ಬಾಂ.

ವಾತ:—ರಕ್ತದ ಮೇಲೆ ತೇಲುವ, ಹಾನಿಕರ ಪದಾರ್ಥಗಳು ಗಂಟುಗಳ ಸಂಧಿಯಲ್ಲಿ ಕೂಡುವದರಿಂದ, ವಾತವೂ, ಸಂಧಿವಾತವೂ ಆಗುವದು ಆ ಭಾಗದ ಮೇಲೆ ರೊಯಲ್ ಇಂಡಿಯನ್ ಬಾಂ ಚನ್ನಾಗಿ ತಿಕ್ಕಿ ಬಿಸಿನೀರಿನ ಸೇಕ ಕೊಡಬೇಕು

ತಲೆನೋವು —ನೋವಿದ್ದ ಭಾಗದ ಮೇಲೆ ರೋಯಲ್ ಇಂಡಿಯನ್ ಬಾಂ ಚನ್ನಾಗಿ ಉಜ್ಜಬೇಕು

ಜಖಮು —ಆ ಬಾವಿನ ಮೇಲೆ ರೊಯಲ್ ಇಂಡಿಯನ್ ಬಾಂ ಚನ್ನಾಗಿ ಹಚ್ಚಿ ರೋಮದ ವಸ್ತ್ರದ ತುಂಡಿನಿಂದ **ಕಟ್ಟಬೇಕು**

ಬೆನ್ನಿನ ವಾತ ಬೆನ್ನಿನಲ್ಲಿ ನೋವು ಸುರುವಾಗಿ ಬಗ್ಗುವಾಗ ಅತಿ ನೋವು ಆಗುವದು ಇದರ ಮೇಲೆ ರೊಯಲ್ ಇಂಡಿಯನ್ ಬಾಂ ಒಂದು ದಿವ್ಯ ಔಷಧವಾಗಿರುತ್ತದೆ

ಗಂಟಲಲ್ಲಿ ಶೀತ —ರೊಯಲ್ ಇಂಡಿಯನ್ ಬಾಂ ಬಹಳದಿಂದ ತಿಕ್ಕಬೇಕು

ಹಲ್ಲು ನೋವು —ಸ್ವಲ್ಪ ಹತ್ತಿಯನ್ನು ರೊಯಲ್ ಇಂಡಿಯನ್ ಬಾಮಿನಲ್ಲಿ ಒದ್ದೆ ಮಾಡಿ ನೋವುಳ್ಳ ಹಲ್ಲಿನ ಮೇಲೆ ಇಡಬೇಕು.

ಇದರಿಂದ ಸಾವಿರಾರು ಜನರು ಗುಣ ಹೊಂದಿರುತ್ತಾರೆ ಇನ್ನೂ ಸಾವಿರಾರು ಜನರು ಗುಣಹೊಂದುವರು

ಬಾಟ್ಲಿ ಒಂದರ ಕಿಮ್ಮತ್ತು ೬ ಆಣೆ.

ಎಲ್ಲಾ ಬಾಮ್‌ಗಿಂತಲೂ ಇದು ಉತ್ಕೃಷ್ಟವೆನ್ನಿಸಿಕೊಳ್ಳುತ್ತದೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ರವಾನಿಸಲ್ಪಡುವದು

ಏಜಂಟರು —

ರೋಯಲ್ ಟ್ರೇಡಿಂಗ್ ಕಂಪೆನಿ, ಗಿರಗಾಂ, ಮುಂಬಯಿ
ರಾಮರಾವ್ ನಾನಾಭಾಯಿ ಕಾಳೆ, „ „
ಕೆ. ಆರ್. ಪಾಠಕ ಮತ್ತು ಕಂಪೆನಿ, ಹುಬ್ಬಳ್ಳಿ, „
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು, ದ. ಕನ್ನಡ.
ಬೇಕಲ್ ವೆಂಕಟ ರಾವ್, ಉಡುಪಿ, ದ. ಕನ್ನಡ.

ಸುರಂಗಿ ಅತ್ತರು.

ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು ಇಂಗ್ಲಿಷ ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು ಇದರ ಪರಿಮಳವು ಹೆಚ್ಚು ದಿನಗಳ ವರೆಗೆ ಹೋಗುವದಿಲ್ಲ ಬಾಟ್ಲಿ ಒಂದರ ಕ್ರಯ No I. ೧—೪—೦ No ೨ ೧—೦—೦ ಪಿಲ್‌ಬಾಕ್ಸ್ ೧—೦—೦ ದಣಾಣಾ ೦—೧೪—೦ ಬಾಯಿ ೦—೧೪—೦ ಚಂಬೋಲಿ ೦—೧೪—೦

ಕೇಶವರ್ಧಿನಿ ಎಣ್ಣೆ ಹೆಂಗಸರ ಪ್ರೀತಿಕರವಾದ ಎಣ್ಣೆ ಇದರಿಂದ ಕೂದಲುಗಳು ಕಪ್ಪಾಗುವವು, ಮತ್ತು ಬೆಳೆಯುವವು ಬಾಟ್ಲಿ ಒಂದರ ಕಿಮ್ಮತ್ತು ೦—೮—೦.

ಗಜಕರ್ಣದ ಮುಲಾಮು ೦—೪—೦

ಮನೋರಮಾ ಕಂಪೆನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಸತತವಾತ, ಚೇಳುಕಡಿತ, ತಲೆನೋವು, ಶೀತ, ಸಾಯು, **ಗಂಟಲು** ನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ **ಮೇಲೆ ಇದು** ರಾಮಬಾಣ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ ಇನ್ನೂ **ಸಾವಿರಾರು** ಜನರು ಗುಣಹೊಂದುವರು ಒಂದು ಸಾರಿ ಪರೀಕ್ಷಿಸಿದಲ್ಲಿ **ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ. ಇದು ಎಳೇ ಮಗುವಿನದೇ ಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು.**

ಬಾಟ್ಲಿ ಒಂದರ ಕಿಮ್ಮತ್ತು ರೂ. ೦—೬—೦, ಆರು ಬಾಟ್ಲಿಗಳಿಗೆ ರೂ. ೨—೦—೦.

ವಿಳಾಸ:— ರಾಮರಾವ್ ನಾನಾಭಾಯಿ ಕಾಳೆ,
ಗಿರಗಾಂ ಮುಂಬಯಿ.

ಲಾ ಪ್ರಕಟನೆಗಳು.

1 ವ್ಯವಹಾರ ನಿರ್ಣಯ—ಫುಟಗಳು ೫೪೬ ಹಿಂದೂ ಮುಹಮ್ಮದೀ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಅಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂಪಾಯಿ ೧೨ ಆಣೆ

2 ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ, ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್ ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ ಪಿ ಬಿಡಿಪತ್ರಿಕೆ ೧ಕ್ಕೆ ೨ ಆಣೆ

3 ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ ಸೇರಿ 10 ಆಣೆ ಇವುಗಳನ್ನು ಅಪೇಕ್ಷಿಸುವವರು ಎಂ ಮಲ್ಲಾರಾಧ್ಯ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯವುದು

—————o—————

THE HINDU SOAP MANUFACTURING CO.,
ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ

————o————

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು ಮಾದರಿಗಳೂ, ವಿಶೇಷವಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು

ದಿ ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಏಜಂಟ್ಸ್

೧೮೯೮ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು	**ಟಿ. ಬಾಬುರಾಯರ** ಲೋಕಪ್ರಸಿದ್ಧವಾದ ಆಯುರ್ವೇದಿಕ ಔಷಧಗಳು.	ಅನೇಕ ಮಾನ್ಯಗೃಹಸ್ಥರಿಂದ ಪಡೆದ ಸರ್ಟಿಫಿಕೇಟು ಪತ್ರಗಳು ಇವೆ

ಪರಿಮಳಾಂಜನ ನಂಬ್ರ 2 — ಇದರ ಬಾಹ್ಯೋಪಯೋಗದಿಂದ ತಲೆನೋವು, ಶಿರಶ್ಶೂಲ, ಒರ್ಕನ್ನೆ, ಅರ್ಧಾಂಗವಾಯು ವಾತ, ಗಂಡ ವಾತ, ಶೀತ ಕೆಮ್ಮು ಗಂಟ್ಲುನೋವು, ಜಹೆಮ, ಉಳುಕು, ಪಾದ ಗಳ ಪಕ್ಷವಾತ, ಬೆನ್ನುನೋವು ಕೈ ಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-10-0

(Rose) ದಂತಮಂಜನ — ಈ ಚೂರ್ಣದಿಂದ ಪ್ರತಿನಿತ್ಯವೂ ಹಲ್ಲುಗಳನ್ನು ತಿಕ್ಕುತ್ತಾ ಬಂದರೆ ಹಲ್ಲಿನಿಂದ ರಕ್ತ ಸುರಿಯುವದು ನಿಲ್ಲುವದಲ್ಲದೆ, ಬಾಯಿಯ ದುರ್ಗಂಧವು ನಾಶವಾಗಿ ಹೊಳೆಯುವ ಹಲ್ಲುಗಳು ಸಿಕ್ಕಿಬರುತ್ತವೆ ಡಬ್ಬಿ ೧ರ ಕ್ರಯ ರೂ 0—2—0.

ತಾಂಬೂಲ ಸುವಾಸಿನಿ —ಸೀಸೆ ೧ರ ಕ್ರಯ ರೂ 0-4 0	ಪರಿಮಳಾಂಜನ ನಂ ೧ — ಸೀಸೆ ೧ರ ಕ್ರಯ ರೂ 0 8 0
ದಂತಮಂಜನ —ಡಬ್ಬಿ ೧ರ ಕ್ರಯ ರೂ 0-2-0	ಸುಗಂಧ ವಸ್ತ್ರದ ಪುಡಿ —ಡಬ್ಬಿ ೧ರ ಕ್ರಯ ರೂ 0-6-0
ಗಜಕರ್ಣದ ಮುಲಾಮು —ಡಬ್ಬಿ ೧ರ ಕ್ರಯ ರೂ 0-6 0	ದಶಾಂಗ ದೂಪ —ಸೇರು ೧ಕ್ಕೆ ಕ್ರಯ ರೂ 1-4-0
ಶ್ವಾಸಕುಠಾರ —ಡಬ್ಬಿ ೧ರ ಕ್ರಯ ರೂ 0 8 0	ದ್ರಾಕ್ಷಾರಿಷ್ಟ —ಬಾಟ್ಲಿ ೧ರ ಕ್ರಯ ರೂ 2-8 0

ನಯನಾಮೃತ ಸುರ್ಮ — ಈ ಸುರ್ಮವನ್ನು ಪ್ರತಿನಿತ್ಯವೂ ಕಣ್ಣಿಗೆ ಹಚ್ಚುತ್ತಾ ಬಂದಲ್ಲಿ ಕಣ್ಣಿನಿಂದ ಕೀವು ಅಥವಾ ನೀರು ಇಳಿಯುವದು ಕಣ್ಣುರಿ ಕೆಂಗಣ್ಣು, ಕಣ್ಣಿನೊಳಗೆ ಬರುವ ಫರದೆ ಮೊದಲಾದ ಸರ್ವ ವಿಧವಾದ ನೇತ್ರ ರೋಗಗಳು ಸಂಶಯವಿಲ್ಲದೆ ಗುಣವಾಗುವವು

ಇನ್ನೂ ಅನೇಕ ವಿಧವಾದ ಔಷಧಿಗಳು ಇರುವವು ಬೇಕಾದವರು ಕೆಟಲಾಗಿಗೆ ಬರೆಯಿರಿ.

ಮೇಲೆ ಕಾಣಿಸಿದ ದಂತಮಂಜನಗಳನ್ನು ರಾತ್ಲು ಲೆಕ್ಕದಲ್ಲಿ ತರಿಸಿಕೊಂಡರೆ ರಾತ್ಲು ೧ರ ರೂ. 2-0-0ರಂತೆ ಕ್ರಯ ಬೀಳುವದು.

ಸೂಚನೆ.—ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ ಬೀಳುವದು.

ಟಿ. ಬಾಬುರಾಯರ
ಆಯುರ್ವೇದಿಕ್ ಔಷಧಾಲಯ,
ಗೋಡೌನ್ ರಸ್ತೆ, ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಚಟ್ಟಾರಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಚಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ ಮಕ್ಕಳಿಗೆ ಬರುವ ಬಾಲಗ್ರಹ (ಛಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ದೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ ಎಲ್ ಉಪಾಧ್ಯಾಯ.
ಮೈಸೂರು

ಆಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವದು

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಪದ್ರವಾದ ವಿಮೇ ದರಗಳಲ್ಲಿ ಉತ್ತರದಾಯಿಸ ಬಹುದು

ಇತರ ಜೀವವಿಮೇ ಕಂಪೆನಿಗಳಲ್ಲಿ ಉತ್ತರದಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ,

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಪತ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವದು

ಹೆಂಗಸರೂ ಜೀವವಿಮೇ ಉತ್ತರದಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಶೇಷ ಸೂಚನೆ — ಪ್ರಖ್ಯಾತಿಗೊಂಡ ಶ್ರೀಕೃಷ್ಣ ಪ್ರದರ್ಶನದವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೋಲಗಿನಿಂದ ದೃಷ್ಟಿಯನ್ನು ಪರೀಕ್ಷಿಸಿ ತರಿಸಿಕೊಬಲಾದೀತು

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ ಕನ್ನಡ

ಪ್ರೋತ್ಸಾಹಮಾಡುತ್ತೀರೇ.

ಕ್ರಯ ಸುಲಭ! ಉತ್ತಮ ಸಾಮಾನುಗಳು!

೧ ಎಂಪಿಂಗಾದ ಉಲ್ ದಾರಕ್ಕೆ ರೂ 0—8—0 ೧೦ ಚೋಪಿ ಯಾದ ಉಲ್ಲ ೧ಕ್ಕೆ ರೂ 3—7—0 ಸಂಗತಿ ಕೆಲಸದ ಉಲನ್ ಬಂಡ್ಲು ೧ಕ್ಕೆ ರೂ 2—4—0 ಕೊಕ್ಕೆ ಸೂಜಿ ೧ಕ್ಕೆ ರೂ 0—1—6 ಕಮ್ಫರ್ಟ್ ಎಂಡ್ ಮಫ್ಲರ್ ಸಾಲ್ಸು ಜೊಬಿಯ ಕೋವೆ ೧ಕ್ಕೆ ರೂ 0—4—0. ಹಾಸನ್ ಟೋಪಿ ಡಜನ್ ೧ಕ್ಕೆ ರೂ 9—0—0 ಮತ್ತು ರೂ 15—0—0 ಬನಿಯನ್ ಗಳು ೧ಕ್ಕೆ 0—6—0, 0—8—0, 0—10—0, 0—12—0 ಪರಿಮಳ ನಶ್ಯ ಡಬ್ಬಿ ೧ಕ್ಕೆ ರೂ. 0—2—0 ಪೋಸ್ಟು ಕಾರ್ಡು ೧೦೦ಕ್ಕೆ ರೂ 0—3—0 ಸನ್ ಸನ್ ತಾಂಬೂಲ ಮಿಶ್ರನು ೩೦೦ ಮಾತ್ರೆ ಇರುವ ಪಾಕೆಟ್ ೧ಕ್ಕೆ ರೂ 0—3—0. ತಲೆನೋವಿಗೆ ಅನುಕೂಲವಾದ ಮೆಂತೋಲ್ ಡಬ್ಬಿ ೧ಕ್ಕೆ ರೂ 0—3—0 ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ರೂ 0—2—0 ಕಸ್ತೂರಿ ಮಾತ್ರೆ ೨೦೦ರ ಸೀಸ ೧ಕ್ಕೆ ರೂ 0—4—0 ಸ್ವದೇಶಿ ಪ್ಲೇಟ್ ಕೇಸ್ ೧ಕ್ಕೆ ರೂ 1—0—0 ಮತ್ತು 0—12—0 ಕೇಶಿಪೋ ಜಾಂ ಸೀಸೆ ೧ಕ್ಕೆ ರೂ 0—8—0. ದಿಲ್ ಬಹಾರ್ ಮತ್ತು ಕಾಮಿನಿಯಾ ಅತ್ತರ್ ಸೀಸೆ ೧ಕ್ಕೆ ರೂ 1—8—0 ಸರ್ವಜನೋಪಯೋಗವಾದ 1910ನೇ ಡೈರಿ ತಯಾರಿಯಲ್ಲಿದೆ, ದಯವಿಟ್ಟು ಕೆಟಲಾಗು ತರಿಸಿರಿ

ನಮ್ಮ ವಿಳಾಸ — **ದಿ. ಯೂನಿಯನ್ ಮಾರ್ಟ್.**
ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ	೪ ಸಾರಿ	೧೨ ಸಾರಿ	೨೪ ಸಾರಿ	೫೨ ಸಾರಿ.
ಇಡೀ ಪಾನು	ರೂ ೧೦	ರೂ ೩೨	ರೂ ೭೨	ರೂ ೧೧೦	ರೂ. ೧೫೦.
ಅರ್ಧ ಪಾನು	,, ೬	,, ೧೮	,, ೩೮	,, ೬೦	,, ೮೫.
ಕಾಲು ಪಾನು	,, ೪	,, ೧೨	,, ೨೦	,, ೩೬	,, ೬೫.
ಅರೆಕಾಲು ಪಾನು	,, ೨	,, ೬	,, ೧೨	,, ೧೮	,, ೩೫.

ಸೂಚನೆ —ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹೀತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದ ನಿರ್ಣಯ:—ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ೨ ರೂ. ೧೮. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ರೂ. ೧ ... ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧ ೮.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ), **ಹಾಫ್‌ಬೈಂಡ್** (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ) **ಫುಲ್‌ಬೈಂಡ್** (ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು.

3" × 8¼", 3' × 5¼, 8¼" × 6½", 6½" × 4" ಪರಿಮಾಣದಲ್ಲಿದ್ದು ಸಾವುಕಾರ ಅಂಗಡಿಗಾರ, ವರ್ಗದಾರ ವ ಆಫೀಸರರಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಹಿತ್ತಿಯಾಗಿದ್ದು.

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ

ಮೆನೇಜರ್,
ಶಾರದಾ ಮುದ್ರಾಲಯ,
ಮಂಗಳೂರು

ಹಣವಿನ ಒಳ್ಳೇ ವಿನಿಯೋಗವು ಯಾವುದು— ಬೆಲೆಗೆ ತಕ್ಕ ಒಡವೆಗಳನ್ನು ಹಿಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರುಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷದಿ ವ್ಯಾಪಾರಸ್ಥವಾಗಿದ್ದು ಕಳೆದ 1902ನೇ ಇಸವಿಯಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೊರ್ನ್‌ಫ್ಲೋರ್, ಚಾ, ಕೋಕೋ ವಾ ಕಾಫಿ ಹುಡಿ ಬಿಸ್ಕೂಟು, ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಔಷಧೋಪಚಾರದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್, ಫೆಲ್ಲೊಸ್ಯಾರಪ್, ಕೆಮಿಕಲ್ ಫುಡ್, ಗಜಕರ್ಣದ ಮುಲಾಮು, ಮೊದಲಾದವುಗಳು ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವದಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರರೂ ಅನುಭವ ಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಮಂಗಳೂರು.

Mangalore Trading Association,
Mangalore, S. Canara

Registered No. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು ೫ನೇ ಶುಕ್ರವಾರ ನವೆಂಬರ 1909 ಸಂಚಿಕೆ 31

William & Co. Fort Bombay.

ಅಮೃತಾಂಜನ.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು ಗಂಟ್ಲು ನೋವು ಜಖಮು ಉಳುಕು, ಶ್ವಾಸ, ಶೀತ ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಲ್ಲಾ ಕಡೆ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ೧ರ ಕಿಮ್ಮತು 8 ಆಣೆ

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು ೨ ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ತಾಗಿಸುವದರಿಂದ ಮೋರೆಯ ಮೇಲಿರುವ ಮುದ್ದಣಗಳನ್ನೂ ಛಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗೆದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ ಆರು ಡಬ್ಬಿಗಳ ಕಿಮ್ಮತು ರೂ. 2—4—0

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಕೂದಲನ್ನು ತಂಪುಮಾಡಿ ಪುನಃ ಶುದ್ಧಿ ಮಾಡುವದು ಬಾಟ್ಲಿ ೧ರ ಕಿಮ್ಮತು ೧೨ ಆಣೆ ಮೂರು ಬಾಟ್ಲಿಗಳಿಗೆ ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

SAFE EFFICACIOUS SURE
WILLIAM & Co.
BOMBAY
PILLS OINTMENTS POWDERS

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಿಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

ಚೇಳು ಕಡಿತದ ಮೇಲೆ ಔಷಧ

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆಗಳು	ರೂ	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0—10—0
ಖಜ್ಜಿ ಮುಲಾಮು	,,	0—3—0
ನೇತ್ರಾಂಜನ	,,	0—4—0

ಈ ಕಂಪನಿಯವರು [illegible] ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗ್ ಬೇಡಲ್ಲಿ ರವಾನಿಸುವದು.

ಏಜಂಟ್:— [illegible] ಟೆಲಿಗ್ರಾಫ್ ವಿಳಾಸ:—ಅಮೃತಾಂಜನ ಮುಂಬಯಿ.

...ಸಂಗ್ರಹ (ಉತ್ತಮವಾದ ... ಮೋರಿಗಾ) ...ಗಳಿಗೆ ಹೇಳಿಯತ್ತಿ, ಈ ಗ್ರಂಥಕ್ಕೆ ನಂಬರಾದೇ ಅರಿಸಿನವರು ...ಸಂಸ್ಕೃತ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ).	೩-೦-೦.
ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ	೦-೬-೦.
ಉತ್ತರ ರಾಮಚರಿತ್ರೆ ಕಥೆ.	೧-೫-೦
ಟೀಕಾ ರಾಘವೇಂದ್ರ ಸ್ತೋತ್ರ	೦-೨-೦
...ಕಲ್ಪರೀತ್ಯಾ ಸೂರ್ಯ ನಮಸ್ಕಾರ.	೦ ೨-೦
ವಿಷ್ಣು ಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦-೨ ೦
ಚಾಣಿಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦ ೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦ ೨ ೦
ಸ್ವರಸಹಿತವಾದ ನಮಕ ಚ ಮಕ	೦-೨-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦-೨ ೦
ಕೃಷ್ಣ ಕರ್ಣಾಮೃತ ಮೂಲ	೦ ೨ ೦
ದೇವರ ಸೇವೆ ಹೊಸ ಪುಸ್ತಕ	೦ ೪ ೦
ಮುಕುಂದ ಮಾಲಾ (ಗೀತಾ)	೦ ೬ ೦
ಶಿವ ನಾಮಾ	೦ ೦ ೬
ಹನುಮನ್ನಾಮಾ	೦-೦ ೬
ಹರಿ ನಾಮಾ	೦-೦ ೬
ಯಾಜುಹ ಪ್ರಯೋಗ	೦-೮-೦
ಬೃಹತ್ಕಥಾ ಮಂಜರಿ	೦-೬ ೦
ಕೃಷ್ಣ ಬೋದಾಮೃತ	೦ ೬ ೦

೦ ೪ ೦ ಕಮ್ಮಿ ವಿ ಪಿ ರವಾನಿಸುವದಿಲ್ಲ

ಕೆಟಲಾಗು ಬೇಕಾದಲ್ಲಿ ಬರದು ತರಿಸಿಕೊಳ್ಳಬಹುದು

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ,

ವಿದ್ಯಾನಂದ ಆಫೀಸ್ ಬೆಂಗಳೂರು

ಕುಂತಳ ಕೌಮುದಿ ತೈಲ.

...ಮಹಾರಾಣಿಯವರು—ಇವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೆ ಅತ್ಯುತ್ತಮವಾದದ್ದು

ನೈಪಾಳ ... ಮಹಾರಾಣಿ ... —ಇವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಹದ್ವಾ ಮಹಾರಾಣಿಯವರು—ಇವರೂ ಇವರ ಮಕ್ಕಳೂ ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಿದ್ದಾರೆ

ಶ್ರೀ ಸುರೇಂದ್ರನಾಥ ಬಾನರ್ಜಿಯವರು —ನಾನು ಉಪಯೋಗಿಸಿದ್ದೇನೆ ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣವಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಅಣೆಗಳು

ಕವಿರಾಜ ಆರ್ ಸಿ ಸೆನ್, ಎಲ್ ಎಮ್ ಎಸ್,

216 ಕಾರನ್ ವಾಲಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು —ಎಲ್ ಎ ಫೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು —ಮೆ॥ ರಾ॥ ರಾ॥ ... ಆರ್. ಕಾಮತರು,

...ಮಾರ್ಕೆಟ್, ಮಂಗಳೂರು.

ರೇಷ್ಮೆ ...ವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬಿಳಿ, ಸವರನ್, ಬಿಳಿ ... ಹಗಲ್ ಬತ್ತಿ ವಗೈರೆ ರಂಗುಗಳ ವಸ್ತ್ರಾ 1ಕ್ಕೆ ... ರೂ 0—12—0.

ಸೈಜು ಇಂಚು 22×22 ವಸ್ತ್ರಾ 1ಕ್ಕೆ ... 1—12—0.

ಸೈಜು ಇಂಚು 15×15 ಬೀಳೀ ರೇಷ್ಮೆ ಮೇಲೆ ಕಲಾಬತ್ತು ... ಹೊಸ ನಮೂನೆ ವಸ್ತ್ರಾ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ ೨ ಮೊಳ, ಅಗಲ 2½ ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರಾ 1ಕ್ಕೆ ರೂ 12, 13, 14, 15, 16, 17. ಡಿಟೋ ಸಪ್ಪೆ ರೇಷ್ಮೆ ಬಾಬತು 1ಕ್ಕೆ ರೂ 6 7, 8, 9, 10

ರೇಷ್ಮೆ ನಡುಕಟ್ಟುಗಳು.

ಕೆಂಪು, ವೂದಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5 6 ಮೊಳ, ಅ 2-3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ. 1-4-0 1-8 0, 1-10-0, 1 12-0 2 0 0, 2-8-0

ಕುಪ್ಪಸದ ಕಣಗಳು.

ರೇಷ್ಮೆ ರುದ್ರಾಕ್ಷಿ, ಕಾಡಿಗಣ್ಣು ಹಂಸ ಪಪ್ಪಳ, ಶೃಂಗಾರ ಪಪ್ಪಳ, ಜಗನ್ಮೋಹಿನಿ ಲಾಕಿಮುಂಗಿ ಹಾದ ಮುಂಗಿ ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ 1 6 0, 1 12 0

ಡಿಟೋ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ 1 0 -0, 1-2-0, 1-3-0. ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2-4 0, 2 8 0, 2-10-0

ಡಿಟೊ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ 1-4 0, 1-6-0, 1 8 0

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2 10 0, 2-12 0, 3 0-0

ಡಿಟೊ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಸೀರೆ ಕಣ 1ಕ್ಕೆ ರೂ 3-6-0 3 8 0 3 12-0

ಡಿಟೊ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಸೀರೆ ಕಣಾ 1ಕ್ಕೆ ರೂ 4 12 0 5-0 0

ಹೆಚ್ ಸಂಕಪ್ಪಾ ಬಸಪ್ಪನವರು,

ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,

ಬೆಂಗಳೂರು ಸಿಟಿ.

ವಿ ಪಿ. ಆರ್ಡರುಗಳಿಗೆ ಸುಲಭ ಕ್ರಯ.

ಊದುಬತ್ತಿ ಸೇರು ೧ಕ್ಕೆ ೦ ೮ ೦, ೧-೦-೦, ೨-೦-೦, ೩-೦ ೦, ೪ ೦-೦, ೫ ೦-೦ ಗಂಧದ ಪಿಲ್ಲಿ ತೊಲೆ ೧ಕ್ಕೆ ರೂ ೨, ೪, ೮, ೬, ೧೨, ೧೬

ಅತ್ತರ್ (ಹಸಿ ಗಂಧ) ತೊಲೆ ೧ಕ್ಕೆ ೧-೦-೦, ೧ ೮-೦

ಬೆಳ್ಳಿ ಗಣೇಶಗಳು ೧ಕ್ಕೆ ೨ ೮-೦, ೩ ೦-೦, ೩-೮ ೦, ೪-೦-೦, ೫ ೦ ೦

ವ್ಯವಸಾಯ ಕ್ರಮ ಬೋಧಿನಿ ಸ್ಟಿಫ್ ಬೈಂಡ್ ಪ್ರತಿ ೧ಕ್ಕೆ ರೂ ೦-೧೨-೦. ಕೆಲಿಕೊ ಬೈಂಡ್ ರೂ ೧ ೦ ೦ ಟ್ಪಾಲ್ ಹಾಸಲ್ ಪ್ರತ್ಯೇಕ

ಉಲನ್ ಚವುಕಗಳು ಹಳದಿ, ಹಸುರು, ನೀಲಿ, ಗುಲಾಬಿ, ಎಣ್ಣೆ ರಂಗು ಗಳುಳ್ಳ ೧ಕ್ಕೆ ರೂ ೧ ೬ ೦, ೨ ೦ ೦, ೩ ೦ ೦

ಉಲನ್ ಶಹಲುಗಳು ೧ಕ್ಕೆ ೩ ೮ ೦, ೩ ೧೨ ೦, ೪ ೦-೦

ಕಾಶ್ಮೀರ ಶಹಲುಗಳು ಎಲ್ಲಾ ರಂಗುಗಳಲ್ಲಿಯೂ, ೧ಕ್ಕೆ ರೂ ೯-೦ ೦, ೧೦ ೦ ೦, ೧೨ ೦ ೦, ೧೫ ೦ ೦, ೧೬ ೦ ೦, ೧೮ ೦ ೦, ೨೦ ೦-೦

ಹಾಸವದ ಟೋಪಿ ಹಣಿಯುವ ಉಲನ್ ದಾರಗಳು ಕೆಂಪು, ಎಣ್ಣೆಗಂಪು ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦ ೬-೦, ೦-೧೦ ೦, ೦-೧೨ ೦, ೦ ೧೪ ೦, ಡಿಟೋ ಸೂಜಿ ೧ಕ್ಕೆ ೦ ೧ ೬, ೦ ೨-೦

ಊಲನ್‌ನಿಂದ ಹಣೆದ ಟೋಪಿಗಳು ಡಜನ್ ೧ಕ್ಕೆ ೪ ೮ ೦, ೫ ೦ ೦, ೬ ೦ ೦ ೭ ೮ ೦, ೮ ೦ ೦, ೯ ೦ ೦, ೧೦ ೦ ೦, ೧೨ ೦ ೦

ಹೆಚ್. ಯನ್. ರಾವ್ ಬ್ರದರ್ಸ್.

262 ಚಿಕ್ಕಪೇಟೆ, ಬೆಂಗಳೂರು

ಗಿಡಗಳು, ಬೀಜಗಳು, ಹಣ್ಣು, ಹುವ್ವು, ಮತ್ತು ತರಕಾರಿ.

ಮಾವಿನ ಗಿಡಗಳು ವಗ್ಯೆರೆ ಸಕಲ ವಿದವಾದ ಹಣ್ಣಿನಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗ್ಯೆರೆ ಸಮಸ್ತ ವಿಧವಾದ ಬೀಜಗಳು, ಸೇಬು, ಕಿತ್ತಳೆ ವಗ್ಯೆರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿಪಲ್ಯಗಳೂ, ತುರಾಯಿ, ಹಾರಾ ವಗ್ಯೆರೆ ಹುವ್ವಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

...ಎಸ್, ಗಿರಿಯಪ್ಪ ಅಂಡ್ ಸನ್,

...ಗಾರ್ಡನ್...

...ಬೆಂಗಳೂರು...

DIARIES FOR 1910.

1910ನೇ ಇಸವಿಯ ಡೈರಿಗಳು.

ವಕೀಲರಿಗೂ, ವಕೀಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟು ಬೂಕು ಸ್ಯಾಬ್ ಕ್ರಯ ೮ ಆಣೆ

ಸಣ್ಣ ಸ್ಯಾಬ್ ,, ೪ ಆಣೆ

ಹೆಚ್ಚು ಪ್ರತಿಗಳನ್ನು ತಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗ ಒಳ್ಳೇ ಕಮಿಶನ್ ದೊರಕುವುದು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು

ವಿಳಾಸ.—

ಮ್ಯಾನೇಜರ್,
ಶಾರದಾ ಪ್ರೆಸ್ ಮಂಗಳೂರು ದ ಕ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು ೦ನೇ ನವಂಬರ 1909

ಔದ್ಯೋಗಿಕ ಅಭಿವೃದ್ಧಿ.

ಈ ಕುರಿತು ಒಂದು ಉಚ್ಚ ಇಂಗ್ಲೀಷ್ ಮಾಸಿಕ ಪತ್ರದಲ್ಲಿ ವಿಚಾರಭರಿತ ಲೇಖನವದೆ ಇದರಲ್ಲಿಯ ಹಲವು ಅಂಶಗಳು ನಮ್ಮ ದೇಶಕ್ಕೆ ಉಪಯುಕ್ತವಾಗಿವೆ ಭೂಲೋಕದ ಆಯಾ ದೇಶಗಳಲ್ಲಿ ಕೈಗಾರಿಕೆಗಳ ಪ್ರಗತಿಯು ಹ್ಯಾಗ ನಡಿಯುವದೆಂಬದನ್ನು ಅಲ್ಲಿ ಚರ್ಚಿಸಿಯದೆ ಇದೇ ಲೇಖನದಲ್ಲಿ ಇಂಗ್ಲೀಷರ ಕೆಲವು ಸಿದ್ಧಾಂತಗಳು ಖಂಡಿಸಲ್ಪಟ್ಟವೆ

ಇವುಗಳಲ್ಲಿ ಮೊದಲನೇದು ಕಾರ್ಯವಿಭಾಗ ಒಂದು ಸಾಮಾಗ್ರಿಯ ಹಲವು ಭಾಗಗಳಲ್ಲಿ ಒಂದೊಂದು ಭಾಗಕ್ಕೆ ಪ್ರತ್ಯೇಕ ಯಂತ್ರವನ್ನು ಅಥವಾ ಮನುಷ್ಯನನ್ನು ವಿಂಗಡಿಸುವದರಿಂದ ಎಲ್ಲಾ ಭಾಗಗಳನ್ನು ಒಬ್ಬನೇ ಮಾಡುವದಕ್ಕಿಂತ ಬೇಗವಾಗಿಯೂ ಅಧಿಕವಾಗಿಯೂ ಸಾಮಾಗ್ರಿಗಳು ತಯ್ಯಾರಾಗುವವು ಎಂಬದು ಕಾರ್ಯವಿಭಾಗ ಸಿದ್ಧಾಂತ ಉದಾಹರಣೆಗೆ ಒಂದು ಗುಂಡುಸೂಜಿ ತಯ್ಯಾರಾಗಬೇಕಾದರೆ ೮ ವಿಧಾನಗಳವೆ ಅವುಗಳಲ್ಲಿ ಎಂಟನ್ನು ಒಬ್ಬನೇ ಮಾಡುವ ೭ದಲಾಗಿ ಒಂದೊಂದನ್ನು ಒಬ್ಬೊಬ್ಬನಿಗೆ ಕೊಟ್ಟರೆ ಗುಂಡುಸೂಜಿಗಳು ೮ ಪಾಲಷ್ಟು ಮಾತ್ರವಲ್ಲ ೧೬ ಪಾಲಷ್ಟು ಆಗಬಹುದು

ಇದರ ಪರಿಣಾಮವೇನಾಯಿತೆಂದರೆ ಇಂಗ್ಲಾಂಡು ಕೈಗಾರಿಕೆಗಳಿಂದಲೇ ತುಂಬಿ ಕೃಷಿಯನ್ನು ಮೂಲೆಗೊತ್ತಿತು ಹಿಂದುಸ್ಥಾನವು ಕೈವಶವಾದ ನಿಮಿತ್ತ ದೊರಕಿದ ಹೇರಳ ದ್ರವ್ಯವು ಇಂಗ್ಲಾಂಡಿಗ ತನ್ನ ಕೈಗಾರಿಕೆಗಳನ್ನು ಬಲಗೊಳಿಸಲಿಕ್ಕೆ ಸೌಕರ್ಯಗಳನ್ನು ಒದಗಿಸಿತು ಯುರೋಪದ ಇತರ ದೇಶಗಳು ಹಿಂದೆ ವಿದ್ದು ಇಂಗ್ಲಾಂಡಿನಲ್ಲಿ ಆದ ಸಾಮಾಗ್ರಿಗಳಿಗೆ ತಾವು ಗಿರಾಕಿಗಳಾದವು ಹೀಗಾಗಿ ಕೈಗಾರಿಕೆಯಲ್ಲಿ ಕಾರ್ಯವಿಭಾಗಕ್ಕೆ ಆಸ್ಪದವಾಯಿತು ಈ ಕಾರ್ಯವಿಭಾಗದಿಂದ ಮನುಷ್ಯನು ಮಾನವ ಗೌರವವನ್ನು ಕಳಕೊಂಡು ಬರೇ ಯಂತ್ರ ಅಥವಾ ಪಶುವಾಗಬೇಕಾಯಿತು ಒಂದು ಗುಂಡುಸೂಜಿಯನ್ನು ಅವನಿಂದ ಮಾಡತೀರದು ಯಾಕಂದರೆ ಅವನು ಯಾವಜ್ಜೀವವೂ ಅದರ ತಲೆ ನುಣುಪು ಮಾಡುವದಾಗಲಿ ಮೊನೆ ಸರಿಮಾಡುವದಾಗಲಿ ಯಾವದಾದರೊಂದು ಅಂಶವನ್ನೇ ಮಾಡಬಲ್ಲನು ಆದರೆ ಇತ್ತಲಾಗೆ ಫ್ರಾನ್ಸ್, ಜರ್ಮನಿ, ಅಮೇರಿಕಾ, ಆಸ್ಟ್ರಿಯ, ಜಪಾನ ಮೊದಲಾದ ಎಲ್ಲಾ ದೇಶಗಳು ತಮ್ಮ ಕೈಗಾರಿಕೆಗಳನ್ನು ಊರ್ಜಿತಕ್ಕೆ ತಂದು ತಮಗೆ ಬೇಕಾದ ಸಾಮಾಗ್ರಿಗಳನ್ನು ತಾವೇ ಒದಗಿಸಿಕೊಳ್ಳುವದಲ್ಲದೆ ಪರದೇಶಗಳಿಗೂ ಕಳುಹಿಸಿಕೊಟ್ಟು ಇಂಗ್ಲಾಂಡಿನೊಡನೆ ಮೇಲಾಡುವವು ಹಿಂದುಸ್ಥಾನದಲ್ಲಿ ಸಹಾ ಸ್ವದೇಶಿಯ ವರ್ಚಸ್ಸಿನಿಂದ ಕೈಗಾರಿಕೆಗಳು ತಲೆ ಎತ್ತ ತೊಡಗಿವೆ. ಇಟಲಿಯಲ್ಲಿ ಇದೇ ಸ್ವದೇಶಿಯು ಹದಿನೈದು ವರುಷಕ್ಕೆ ಮುಂಚೆ ಪ್ರಬಲವಾಗಿತ್ತೆಂದೂ ಅಗ್ಗ ಅಲ್ಲಿಯ ಜನರಲ್ಲಿ "ಇಟಲಿಯು ಸರ್ವ ಇಟಲಿಯುಂದಲೇ" ಎಂಬ ಮಾತು ಪ್ರಸಿದ್ಧವಿರುತ್ತಿತ್ತೆಂದೂ ಹೇಳುವದು. ಹೀಗೆ ಹೊರ ದೇಶಗಳು ತಮ್ಮ ವಸ್ತುಗಳನ್ನು ತಾವೇ ತಯ್ಯಾರಿಸಲು ಆರಂಭಿಸಿದ್ದರಿಂದ ಇಂಗ್ಲಾಂಡಿನಲ್ಲಿ ನಿರ್ಮಿಸಲಾಗುವ ಆಯಾಯಾ ಸಾಮಾಗ್ರಿಗಳಿಗೆ ಕೇಳುವವರಿಲ್ಲದೆ ಕಾರ್ಯವಿಭಾಗವನ್ನು ತನ್ನಷ್ಟಕ್ಕೆ ಮುದುರಿಸಿ ಕಾರ್ಯಸಂಯೋಗವನ್ನು ಕೈಕೊಳ್ಳಬೇಕಾಗುವದು. ಇನ್ನು ಮುಂದೆ ಎಲ್ಲಾ ದೇಶಗಳಲ್ಲಿ ಕೈಗಾರಿಕೆಗಳು ಹುಟ್ಟುವದರಿಂದ ತಮಗೆ ಬೇಕಾದ ಧಾನ್ಯದವಸುಗಳನ್ನೂ ಲೋಹ ಸಾಮಾಗ್ರಿ ಬಟ್ಟೆಬರೆಗಳನ್ನೂ ಆಯಾ ದೇಶವು ತನ್ನಷ್ಟಕ್ಕೆ ಒದಗಿಸಿಕೊಳ್ಳುತ್ತಾ ಕೃಷಿ, ಕೈಗಾರಿಕೆಗಳು ಒಂದೇ ದೇಶದಲ್ಲಿ ಏಕಪ್ರಕಾರ ಬೆಳಿಯುವವು ಇದರಿಂದ ಪಾಶ್ಚಾತ್ಯರ ಇನ್ನೊಂದು ಸಿದ್ಧಾಂತವು ಖಂಡಿಸಲ್ಪಡುವದು. ಕೆಲವು ದೇಶಗಳು ಸ್ವಾಭಾವಿಕವಾಗಿ ಕೃಷಿ ಕೆಲಸಕ್ಕೆ ತಕ್ಕವುಗಳೆಂದೂ ಬೇರೆಯವು ಕೈಗಾರಿಕೆಗೆ ಹೇಳಿದವುಗಳೆಂದೂ ಇವರ ಸಿದ್ಧಾಂತವಿತ್ತು ಪ್ರಕೃತದ ಔದ್ಯೋಗಿಕ ಸ್ಥಿತಿಯನ್ನು ನೋಡಿದರೆ ಇದರಲ್ಲಿ ಎಷ್ಟು ಅಂಶ ನಿಜವೆಂದು ತಿಳಿಯುವದು

ಕೆಲವು ವರುಷಗಳ ಮುಂಚೆ ಯುರೋಪದ ಇಂಗ್ಲಾಂಡ್ ದೇಶದಲ್ಲಿ ಮಾತ್ರವೇ ಹತ್ತಿಯ ಬಟ್ಟೆಗಳು ತಯ್ಯಾರಾಗುತ್ತಿದ್ದವು ಸುಮಾರು ೧೮೮೦ರಲ್ಲಿ ಅರೆವಾಸಿ ವ್ಯಾಪಾರವು ಇತರ ದೇಶಗಳಿಗೆ ಹೋಯಿತು ೧೮೯೩ರಲ್ಲಿ ಇಂಗ್ಲಾಂಡಿನ ಕಾರಖಾನೆಗಳು ಯಾವತ್ತೂ ದೇಶಗಳ ಹತ್ತಿ ಕಾರಖಾನೆಗಳ ಶೇಕಡ ೫೫ರಿಂದ ೪೧ಕ್ಕೆ ಇಳಿದವು ಹತ್ತಿ, ಉಣ್ಣೆ ಮೊದಲಾದ ನೇಯಿಗೆ ಕೈಗಾರಿಕೆಗಳು ಒಂದು ದೇಶದಲ್ಲಿ ಬೇರುಗೊಂಡರೆ ಅದನ್ನು ಅನುಸರಿಸಿ ಇತರ ಕೈಗಾರಿಕೆಗಳ ಸಾಲು ಬರುವದು ಔದ್ಯೋಗಿಕ ಓಟದಲ್ಲಿ ಪಾಶ್ಚಾತ್ಯ ದೇಶಗಳು ಮುಂದೆ ಹೋಗಿರುವದರಿಂದ ಅವರ ಕೂಡೆ ಮೇಲಾಟವು ಪ್ರಾರಂಭದಲ್ಲಿ ಕಠಿಣವಾಗುವದು ಒಮ್ಮೆ ಕಾಲೂರಿದ ನಂತರ ಒಂದು ಕೈಗಾರಿಕೆಗೆ ತಾಗಿ ಅನೇಕ ವ್ಯಾಪಾರಗಳಿಗೆ ಆಸ್ಪದವಾಗುವದು ಹಿಂದುಸ್ಥಾನವನ್ನು ಕುರಿತು ಆ ಲೇಖಕರು ಹೇಳುವದೇನಂದರೆ — ಹಿಂದುಸ್ಥಾನದ ಕೆಲಸಗಾರನನ್ನು ನೋಡಿದವನು ಅವನ ಕೆಲಸವು ನಾಜೂಕೆಂಬದರ ಕುರಿತು ಸಂದೇಹಪಡಲಾರನು ಇಂಡ್ಯಾದ ಗಿರಣಿಗಳು ಉತ್ಕೃಷ್ಟವಾಗಿವೆ ಬೊಂಬಾಯಿಯ ಉತ್ತಮ ಕಾರಖಾನೆಗಳು ಜರ್ಮನು ಅರಳಿ ಕಾರಖಾನೆಗಳ ಪಾಟಿಯಾಗುವವೆಂದು ಜರ್ಮನರೇ ಹೇಳುವರು ಲೆಂಕಶಾಯರ್ ಹೊರತು ಬೇರೆ ಯಾವ ದೇಶಗಳಲ್ಲಿಯಾದರೂ ಜನರಿಗೆ ಹಿಂದುಸ್ಥಾನದ ಜನರಿಗಿರುವಷ್ಟು ನೇಯಿಗೆ ಕೆಲಸದಲ್ಲಿ ಅಭಿರುಚಿಯಿಲ್ಲವೆಂದು ಜೇಮ್ಸ ಪ್ಲಾಟ್ ಮತ್ತು ಹೆನ್ರಿ ಲೀ ಎಂಬ ಇಬ್ಬರು ವಿದ್ವಾಂಸ ಗೃಹಸ್ಥರು ಹೇಳಿರುವರು

ಕೃಷಿಯ ಕುರಿತು ಮಾಲ್ತುಸ್ ಎಂಬ ಒಬ್ಬ ಗೃಹಸ್ಥನು ಕೆಲವು ಕಾಲಕ್ಕೆ ಮುಂಚೆ ಒಂದು ಸಿದ್ಧಾಂತ ಮಾಡಿದ್ದನು ಕೃಷಿಯ ಉತ್ಪತ್ತಿಗಿಂತ ಜನಸಂಖ್ಯೆಯು ಹೆಚ್ಚುತ್ತಾ ಬರುವದೆಂದೂ ಕ್ರಮೇಣ ಜನರಿಗ ಸಾಕಷ್ಟು ಉಣ್ಣ ದೊರಕದೆಂದೂ ಈ ಸಿದ್ಧಾಂತದ ತಾತ್ಪರ್ಯವಾಗಿತ್ತು ಈ ಕಾರಣದಿಂದ ಕುಟುಂಬ ವೃದ್ಧಿಮಾಡುವದು ವಿವೇಕವಲ್ಲವೆಂದು ವಗೈರೆ ಪಾಶ್ಚಾತ್ಯರು ನಂಬಿ ಅಂಥಾ(ದೊಡ್ಡ ಕುಟುಂಬವೆಂಬ)ಅರಿಷ್ಟ ನಿವಾರಣೆಗೆ ಉಪಾಯವನ್ನು ಸೂಚಿಸಿದರು ಮೇಲ ಹೇಳಿದ ಲೇಖನದಲ್ಲಿ ಈ ಸಿದ್ಧಾಂತವೇ ನಿರಾಧಾರವೆಂದು ತೋರಿಸಿಯದೆ ಸದ್ಯ ಆಹಾರ ಸಾಮಾಗ್ರಿಗಳನ್ನು ಆಮದು ಮಾಡುವ ಮುಖ್ಯ ದೇಶವು ಇಂಗ್ಲಾಂಡು ದೇಶವಾಗಿದೆ ಇದರಲ್ಲಿ ಈಗ ಆಗುವ ಉತ್ಪತ್ತಿಯು ಅಲ್ಲಿಯ ಜನಸಂಖ್ಯೆಯ ಮೂರನೆ ಒಂದಂಶಕ್ಕೆ ಸಾಕಾಗುವದು ಆದರೆ ಆ ದೇಶದಲ್ಲಿ ಬೇಸಾಯಕ್ಕೆ ಅನುಕೂಲವಾದ ಭೂಮಿಯನ್ನು ಕೃಷಿಕಾರ್ಯದಲ್ಲಿ ಉಪಯೋಗಿಸಿ ಈಗಿನ ರೀತಿಯಲ್ಲಿ ಕೃಷಿ ನಡಿಸಿದರೆ ಇಂಗ್ಲಾಂಡಿನಲ್ಲಿ ಆಗುವ ಧಾನ್ಯದವಸಗಳಿಂದ ಅಲ್ಲಿಯ ಜನಸಂಖ್ಯೆಗಿಂತ ಹೆಚ್ಚು ಮಂದಿಯನ್ನು ಸಾಕಬಹುದೆಂದು ಆ ಲೇಖಕರು ರುಜು ಪಡಿಸುವರು ಕೃಷಿಶಾಸ್ತ್ರಸುಧಾರಣೆಯ ಮೂಲಕ ಉತ್ಪತ್ತಿಯನ್ನು ಹೆಚ್ಚಿಸಲಾಗುವದು, ಅಂದರೆ ಮೊದಲು ಒಂದು ಎಕ್ರೆಯಲ್ಲಿ ಆಗುವ ಬೆಳೆಯನ್ನು ಈಗ ಅರ್ಧ ಎಕ್ರೆಯಲ್ಲಿ ಬೆಳೆಸಬಹುದು ಹೊಸತರದ ಗೊಬ್ಬರಗಳು ಹೊಸ ಬೆಳೆಗಳನ್ನು ಕಂಡುಹಿಡಿಯುವವು- ಜರ್ಸಿ ದ್ವೀಪದಲ್ಲಿ ಒಂದು ಏಕ್ರೆಗೆ ೭೫೦ ರೂಪಾಯಷ್ಟು ಬೆಳೆಯಾಗುವದಂತೆ

ಅಮೇರಿಕದಲ್ಲಿ ಕೃಷಿಯ ಅಭಿವೃದ್ಧಿಗೆ ಸರಕಾರದವರು ಮಾಡುವ ಏರ್ಪಾಡುಗಳನ್ನು ಈ ಲೇಖನದಲ್ಲಿ ವರ್ಣಿಸಿರುವದು ಪ್ರತಿ ಜಿಲ್ಲೆಯಲ್ಲಿ ಪರೀಕ್ಷಾರ್ಥ ಕೃಷಿಯ ಹೊಲವಿರುವದು ಈ ಹೊಲದಲ್ಲಿ ಧಾನ್ಯ, ಫಲ, ಪಶುಗಳ ಮೇವಿನ ಹುಲ್ಲುಗಳನ್ನು ಕುರಿತು ಶಾಸ್ತ್ರಜ್ಞರು ಪರಿಶೋಧನೆ ಮಾಡುವರು ತಾವು ಕಂಡುಕೊಂಡ ಸಂಗತಿಗಳನ್ನು ಸಕಲ ವಿಧದಲ್ಲಿ ರೈತನ ಲಕ್ಷ್ಯಕ್ಕೆ ತರುವರು ಸಣ್ಣಸಣ್ಣ ಪುಸ್ತಕಗಳನ್ನು ಛಾಪಿಸಿ ಅವನ್ನು ನೂರಾರು ಸಾವಿರ ಕಟ್ಟೆಯಲ್ಲಿ ಹಂಚುವರು ಸಾವಿರಸಾವಿರ ರೈತರು ಬಂದು ಪರೀಕ್ಷಾರ್ಥ ಕೃಷಿಯನ್ನು ವರುಷಂಪ್ರತಿ ನೋಡುವ ರೀತಿ ಏರ್ಪಾಡು ಮಾಡುವದಲ್ಲದೆ ನೋಡಬಂದ ರೈತರಿಗೆ ಶಾಸ್ತ್ರಜ್ಞರು ತಾವು ಬೆಳಿಸಿದ ಹೊಸಬೆಳೆಗಳನ್ನಾಗಲಿ ಅಥವಾ ಸಾಮಾನ್ಯ ಪೈರನ್ನು ಉತ್ತಮ ರೀತಿಯಲ್ಲಿ ಬೆಳಸುವ ವಿಧವನ್ನಾಗಲಿ ಸ್ವತಃ ವಿವರಿಸುವರು ರೈತರ ಕೂಡೆ ಪತ್ರ ವ್ಯವಹಾರದಿಂದ ಕೃಷಿ ವಿದ್ಯೆಯನ್ನು ಪಸರಿಸುವರು ಒಟ್ಟಾವಾ ಜಿಲ್ಲೆಯ ಕೃಷಿ ಉದ್ಯೋಗಸ್ಥರು ವರುಷಕ್ಕೆ ಒಂದು ಲಕ್ಷ ಕಾಗದ ಮತ್ತು ಪ್ಯಾಕೆಟುಗಳನ್ನು ಕೃಷಿಕರಿಗೆ ಕಳುಹಿಸುವರಂತೆ. ಟಪ್ಪಾಲು ಖರ್ಚು ಸಹಾ ಇಲ್ಲದೆ ಪ್ರತಿ ರೈತನಿಗೆ ಯಾವದಾದರೂ ಧಾನ್ಯದ ಉತ್ತಮ ಬೀಜವು ಉಚಿತವಾಗಿ ಸಿಕ್ಕುವದು. ಇದಲ್ಲದೆ ಕೃಷಿ ಸಂಘದವರು ಕಳುಹಿಸುವ ಯೋಗ್ಯ ಉಪನ್ಯಾಸಕರು ಪ್ರತಿ ಹಳ್ಳಿ ಊರುಗಳಿಗೆ ಹೋಗಿ ಅಲ್ಲಿ ಜನರನ್ನು ಕೂಡಿಸಿ ತಾವು ಆದ ವರುಷ ನಡಿಸಿದ ಶೋಧನೆಗಳ ಫಲವನ್ನು ರೈತರಿಗೆ ಮನಸ್ಸಿಗೆ ಹೋಗುವಂತೆ ವಿವರವಾಗಿ ಹೇಳುವರು.

ಶ್ರೀಕೃಷ್ಣ ಚರಿತ್ರ.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿರುವುದು.)

ನಾಲ್ಕನೆಯ ಪ್ರಕರಣ—

ಸುಖತತ್ತ್ವ.

ಇಷ್ಟನ್ನು ಹೇಳಿ ಶ್ರೀ ಕೃಷ್ಣನು ನೀರವನಾದನು ಆಗ್ಗೆ ವ್ಯಾಸ ಮುನಿಯು ಇಂತೆಂದನು—"ಕೃಷ್ಣಾ, ಉಗ್ರವಾದ ವಜ್ರಾಘಾತ, ಭೀಕರವಾದ ಚಂಡಮಾರುತ, ಭೀಷಣವಾದ ದಾವಾನಲ, ಅಥವಾ ಘೋರವಾದ ಜಲಪ್ರಳಯ, ಇವುಗಳಿಂದ, ಮುಂಚಿತವಾಗಿ ಮನುಷ್ಯನ ಧ್ಯಾನಕ್ಕೆ ತೋರದಿದ್ದರೂ, ಯಾವುದು ಆತನಿಗೆ ಬಗೆಯಲು ಅತೀತ ಮತ್ತು ಅಸಾಧ್ಯವೋ, ಅಂತಹ ಅಚಿಂತ್ಯವಾದ ಕಲ್ಯಾಣವು ಜಗತ್ತಿಗೆ ಉಂಟಾಗುವುದು ಈ ಯುದ್ಧರೂಪಿಯಾದ ವಜ್ರಾಘಾತ, ಅಥವಾ ಚಂಡಮಾರುತದಿಂದಲಾದರೋ, ವಾತಾವರಣವು ಶುಭ್ರವಾಗಿ, ಭಾರತ ಭೂಮಿಯ ಆಕಾಶವು ಪವಿತ್ರವಾಗುವುದು ನಿರ್ಮಲವಾಗುವುದು ಈ ಕಾಳ್ಗಿಚ್ಚಿನಿಂದ ಮುಳ್ಳುಗಿಡುಮರಗಳೆಲ್ಲವೂ ಬೇರತ್ತಣಿಂದಲೇ ಉದುರಿ ಹೋಗುವವು. ಈ ಮಹಾ ಪ್ರಳಯದಿಂದ ಭೂಮಿಯೆಲ್ಲವೂ ಸುಭಿಕ್ಷವಾಗುವುದು ಮತ್ತು ಒಂದೇ ತಡವೆ ನವೀನ ಶಕ್ತಿಯೂ ಧರ್ಮಬಲವೂ ಸಂಚರಿಸತೊಡಗುವವು."

ಕೃಷ್ಣನು—"ಮನುಷ್ಯನ ದೃಷ್ಟವು ಬಹಳ ಕಡಿಮೆಯಿದೆ, ಅದೃಷ್ಟವಾದರೋ ಅನಂತವಿದೆ ಎಂದು ತಾವು ಅಪ್ಪಣೆ ಕೊಟ್ಟದ್ದು ದಿಟವೇ ಸರಿ ಅನಂತ ತಿಮಿರದಲ್ಲಿ ಮನುಷ್ಯನು ಒಂದು ಮಿಂಚು ಹುಳದಂತೆ ಅದೃಷ್ಟದ ಅಂಗೈಯಲ್ಲಿ ಆಡಿಸಲ್ಪಡುತ್ತಿರುವನು ಎಲ್ಲೆಲ್ಲಿಯೂ ಶಾಂತಿಯುಂಟಾಗಬೇಕೆಂದು ನಾನು ಬಹಳ ಹೋರಾಡಿದೆನು, ಆದರೆ ಈ ಘೋರವಾದ ಸಂಗ್ರಾಮವು ನಡುವಿನಲ್ಲಿಯೇ ಉಪಸ್ಥಿತವಾಯಿತು! ನಾನು ಧರ್ಮದ ಸಾಮ್ರಾಜ್ಯವನ್ನು ಸ್ಥಾಪಿಸಲು ಯತ್ನಗೈದೆನು ಆದರೆ ಇಲ್ಲಿ ಈ ಅಧರ್ಮದ ಮಹಾ ನೆರೆಯು ಹಠಾತ್ತಾಗಿ ಒಂದು ಬಿಟ್ಟಿತು! ಯಾವ ಘೋರ ಕಾಲಲ್ಲಿ ಮುಳ್ಳು ಚುಚ್ಚಲು, ನನ್ನ ಹೃದಯದಲ್ಲಿ ವಿಷಮವಾದ ವೇದನೆಯುಂಟಾಗುತ್ತಿದ್ದಿತು ಆದರೆ ಇಂದಿಗೆ ಹನ್ನೊಂದು ದಿವಸಗಳಿಂದ ಕಾದುತ್ತಿರುವ ಈ ದಾರುಣವಾದ ಯುದ್ಧವನ್ನು ಮತ್ತು ವಿಕಟವಾದ ಹಾಹಾಕಾರವನ್ನು ನಾನು ನನ್ನೆದೆಯನ್ನು ಕಠೋರಮಾಡಿ ನೋಡುತ್ತಿರುವೆನು ಅಂತರ್ಯದಲ್ಲಿ ಅವಿಶ್ರಾಂತವಾಗಿ ಬೇಯುತ್ತ ಹೊರಗೆ ಶಾಂತವಾಗಿ ತೋರುವ ಜ್ವಾಲಾಮುಖಿಯಂತೆ ನಾನು ಹೊರಗಿಂದ ಸೌಮ್ಯವಾಗಿ ಕಾಣುಬಂದರೂ ಹೃದಯದಲ್ಲಿ ಸಹನಾತೀತವಾದ ಮತ್ತು ಉಗ್ರವಾದ ವೇದನಾಗ್ನಿಯನ್ನು ಧರಿಸಿಕೊಂಡಿರುವೆನು."

ವ್ಯಾಸನು—"ತಮ್ಮಾ ಮಂಗಲಮಯನಾದ ಕರುಣಾಲಯನಾದ. ಮತ್ತು ಜ್ಞಾನಸಾಗರನಾದ ಯಾವ ನಾರಾಯಣನೋ, ಆತನ ಮಹಾ ಸೃಷ್ಟಿಯಲ್ಲಿ ಎಷ್ಟು ಹತ್ಯೆಗಳು ಮತ್ತು ಎಷ್ಟು ಹಾಹಾಕಾರವು ಸದಾ ಉಂಟಾಗುತ್ತಲಿವೆ! ಆದರೂ, ಆತನ ಮುಖವಾದರೋ ಪ್ರೀತಿಮಯವಾಗಿದೆ ಪ್ರೇಮದ ಕನ್ನಡಿಯಂತಿದೆ, ಭವಿಷ್ಯ ಕಾಲದ ಆ ದೇಶವು ನಿನಗೇನನ್ನರುಹುತ್ತದೆಂಬುವದನ್ನು ನೀನು ಕೇಳುತ್ತಲೇ ಇರುವಿ."

ಕೃಷ್ಣನು—"ಮುನಿವರ್ಯ, ತಮ್ಮ ಕೃಪೆಯಿಂದ ಭವಿಷ್ಯಕಾಲದ ಮೋರೆಯು ನನಗೆ ಕಾಣಬರುತ್ತದೆ, ಮತ್ತು ಕುರುಕ್ಷೇತ್ರದಲ್ಲಿ ಅರ್ಜುನನ ತೇರಿನಲ್ಲಿ ಕೂಡಿರುವಾಗ ಭವಿಷ್ಯಕಾಲದ ವಾಣಿಯಲ್ಲದೆ ಬೇರೆ ಏನಾದರೂ ನನಗೆ ಕೇಳಬರುವುದಿಲ್ಲವು ಆ ಕರುಣಾವಾಣಿಯಾದರೋ ನನ್ನೊಡನೆ ಹೀಗೆನ್ನುವುದು—"ಹೇ ದಯಾನಿಧೇ, ಈ ದುಃಖಮಯವಾದ ಭೂಮಿಯನ್ನು ನೋಡು ಈ ಭೂಮಿಯ ದುಃಖವನ್ನು ಹೋಗಲಾಡಿಸಿ, ನಮ್ಮನ್ನು ಉದ್ಧರಿಸು" ಈ ಜಗತ್ತಿನಲ್ಲಿ ಇಂತಹ ಹಾಹಾಕಾರವು ಹಬ್ಬಿರುವುದು ನನ್ನಿಂದ ಈ ಜಗತ್ತಿನ ದುಃಖದ ಹರಣವಾಗಿಲ್ಲವು, ಮತ್ತು ಮುಂದೆ ಹಾಗಾದೀತೆಂದು ನನಗೆ ತೋಚುವುದೂ ಇಲ್ಲವು."

ವ್ಯಾಸನು—"ದುಃಖದ ಹರಣವಾಗುತ್ತಲಿದೆ ಮತ್ತು ಆದೀತು ಎಂಬುವುದರಲ್ಲಿ ಸಂಶಯವೇನೂ ಇಲ್ಲವು ಈಗ ಯಾವ ಚಿಹ್ನಗಳು ಕಾಣಬರುತ್ತವೋ ಅವುಗಳಿಂದಲೇ ಇದು ಪರಿಸ್ಫುಟವಾಗಿ ತೋರುತ್ತಲಿದೆ ಕೃಷ್ಣಾ ನೀನು ಜನ್ಮವೆತ್ತಿರುವೆ, ದ್ವಾಪರ ಯುಗವು ಮುಗಿದು ಬರುತ್ತಲಿದೆ, ಮೆಲ್ಲ ಮೆಲ್ಲನೆ ನವೀನ ಯುಗದ ಮತ್ತು ನವೀನ ಧರ್ಮದ ಸಂಚಾರವಾಗುತ್ತಲಿದೆ ಈ ಕುರುಕ್ಷೇತ್ರದಲ್ಲಿ ಸಾಧುಗಳ ರಕ್ಷಣ, ದುಷ್ಟರ ದಮನ, ಅಧರ್ಮದ ವಿನಾಶ, ಮತ್ತು ಧರ್ಮದ ಜಯೋತ್ಕರ್ಷವಿವೇ ಮೊದಲಾದ ವ್ಯವಸ್ಥೆಗಳು ಆಗುತ್ತಲಿವೆ ಈ ನರಮೇಧವನ್ನು ಕೈಗೊಂಡು ಧರ್ಮರೂಪವಾದ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡು, ಮತ್ತು ಅರ್ಜುನನ ಸಾರಥ್ಯವನ್ನು ಬಿಟ್ಟು ಜಗತ್ತಿನ ಸಾರಥ್ಯವನ್ನು ನಡೆಯಿಸ ತೊಡಗು."

ಕೃಷ್ಣನು—"ಭೀಷ್ಮದ್ರೋಣರು ಈ ಘೋರವಾದ ಅಧರ್ಮದಲ್ಲಿ ಮುಂದಾಳುಗಳಾಗಿ, ನರ ರಕ್ತದಿಂದ ಈ ಪೃಥ್ವಿಗೆ ಸ್ನಾನವನ್ನಿಕ್ಕಲು ಸನ್ನದ್ಧರಾಗುವರೆಂದು, ಯಾರು ತಾನೇ ಯೋಚಿಸಿದ್ದರು! ಭೀಷ್ಮನು ಹತ್ತು ದಿನಗಳ ತನಕ ಮಾಡಿದ ಮಹಾ ಸಂಗ್ರಾಮವು ಮತ್ತು ಅದರ ಪರಿಣಾಮದಲ್ಲಿಯ ಭಯಂಕರವಾದ ರಣಕ್ರೀಡೆ, ಇವುಗಳು ನೆನವರಿಕೆಗೆ ಮೊಳೆಯುವುದೇ, ಎದೆಯು ಸೀಳಿಹೋಗುತ್ತಲಿದೆ. ಈಗ ಪುನಃ ದ್ರೋಣಾಚಾರ್ಯರೂ ಎತ್ತರ ಭಯಂಕರವಾದ ಸಮರಕ್ರೀಡೆಯನ್ನು ಆಡುತ್ತಲಿರುವರು! ಅರ್ಜುನನಂತಹ ವೀರನ ಸಾರಥ್ಯವನ್ನು ನಾನು ನಡೆಯುವದರಲ್ಲಿ, ಈ ಯುದ್ಧವು ಎರಡು ದಿನಗಳಲ್ಲಿಯೇ ನಂದಿಹೋದೀತು; ಮತ್ತು ಶತ್ರು ಪಕ್ಷದ ದೊಡ್ಡ ದೊಡ್ಡ ಮರಗಳು ಬೆಂದು ಬೂದಿಯಾದವೆಂದರೆ, ಚಿಕ್ಕ ಚಿಕ್ಕ ಪೊದೆಗಳೂ ಸಣ್ಣ ಗಾವಲುಗಳೂ ತಮಗೆ ತಾವೇ ಸುಟ್ಟುಹೋಗಿ ನೆಲಸಮವಾದಾವು, ಎಂದು ನಾನು ಈ ಯುದ್ಧಕ್ಕೆ ಮುಂಚೆ ಯೋಚಿಸಿದ್ದೆನು. ಆದರೆ ಅರ್ಜುನನ ಹೃದಯದಲ್ಲಿ ಕರುಣೆಯು ಎಷ್ಟುಮಟ್ಟಿಗೆ ಜಾಗ್ರತವಾಗಿದೆಯೆಂಬುದನ್ನು ನಾನು ಕಂಡು ಹಿಡಿಯಲಾರದೆ ಹೋದೆನು. ಅದರೊಂದಿಗೆ ಕ್ಷತ್ರಿಯ ಧರ್ಮವು ವಡಬಾನಲದಂತೆ ಪ್ರದೀಪ್ತವಾಗಿದ್ದರೂ ಕರುಣೆಯಿಂದ ಆತನ ಕೈಯು ಸಡಿಲಾಗುತ್ತಿದೆ ರೂಪದಿಂದಲೂ ವೀರ್ಯದಿಂದಲೂ ಪಾರ್ಥನಾದರೋ ನವೀನವಾದ ಮೋಡದಂತಿರುವನು ಗಾಂಡೀವದ ಠೇಂಕಾರವೆಂಬುದೇ ಸಿಡಿಲು, ಮತ್ತು ಅಂಬುಗಳ ರಾಶಿಯೇ ಮಿಂಚು ಆತನ ಬಾಣ ಬಿಲ್ಲುಗಳು ಕರುಣೆಯ ನೀರಲ್ಲಿ ನೆನೆದಿರುವವು. ಆತನ ಕಣ್ಣುಗಳಲ್ಲಿ ಪ್ರಖರವಾದ ಅಗ್ನಿ, ಹೃದಯದಲ್ಲಿ ಶೀತಲವಾದ ಜಲ, ಮತ್ತು ತೋಳುಗಳಲ್ಲಿ ಅದಮ್ಯವಾದ ಬಲ ಕರುಣೆಯ ಯೋಗದಿಂದ ಆತನ ಅಂತಃಕರಣವು ದುರ್ಬಲವಾಗಿರುತ್ತದೆ ಯಾವುದೊಂದು ಅನಪೇಕ್ಷಿತವಾದ ಕೃತ್ಯದ ದಾರುಣವಾದ ಆಘಾತದಿಂದ ಆತನ ಹೃದಯವು ವಜ್ರದಂತೆ ಕಠಿಣವಾಗದಿದ್ದರೆ, ದ್ರೋಣಾಚಾರ್ಯನು ಪಾಂಡವರ ಸೈನ್ಯವನ್ನು ಇನ್ನೆಷ್ಟು ದಿನಗಳಿಗೆ ಸಂಹಾರಮಾಡುವನೆಂಬುದು ಹೇಳಲಾಗದು. ಅರ್ಜುನನು ಗುರುಭಕ್ತನಾಗಿರುವುದರಿಂದ, ಆತನು ಬಹುಶಃ ದ್ರೋಣನೊಡನೆ ಕಾದಾಡುವ ಸೋಗನ್ನು ಮಾತ್ರ ಮೆರೆಯಿಸುತ್ತಿರುವನು!"

ವ್ಯಾಸನು—"ಕೃಷ್ಣಾ, ಪ್ರಚಂಡವಾದ ಪ್ರಭಂಜನವು ಮತ್ತು ದಾವಾನಲವು ಶೀಘ್ರದಲ್ಲಿಯೇ ಶಾಂತವಾಗುತ್ತದೆಂಬುವುದು ಸೃಷ್ಟಿಯ ನಿಯಮವಾಗಿದೆ. ಈ ಯುದ್ಧಾನಲವು ಅಧರ್ಮದ ಪ್ರಭಾವವನ್ನು ಭಸ್ಮೀಕರಿಸಿ ಬೇಗನೆ ನಂದಿಹೋಗುವುದು, ಮತ್ತು ನವೀನ ಧರ್ಮರೂಪಿಯಾದ ಚಂದ್ರನು ಮೂಡಿಬಂದು ಚರಾಚರ ಜಗತ್ತಿಗೆಲ್ಲ ಶಾಂತಿಯ ಬೆಳ್ದಿಂಗಳನ್ನು ಕರೆಯುವನು."

"ಸುತ್ತಲು ಬೇರೊಂದು ಮೋಡದ ಛಾಯೆಯು ತೋರುವುದಿಲ್ಲವೇ?"

"ಅಹುದು, ತೋರುತ್ತಿದೆ ದುರ್ವಾಸಾದಿಗಳ ಮೇಘಮಾಲೆಯಿದೆ ಈ ಮೇಘಮಾಲೆಯು ಮೆಲ್ಲ ಮೆಲ್ಲನೆ ಮೇಲಕ್ಕೇರಿ ಒಂದು ಬೆಳೆದು ಅತ್ತಿತ್ತ ಹಬ್ಬುತ್ತಿದೆ ಹುಲ್ಲುಕಡ್ಡಿಯನ್ನು ಮೇಲಕ್ಕೆಸೆದು, ಗಾಳಿಯು ಯಾವ ಕಡೆಗೆ ಬೀಸುತ್ತಿದೆಂಬುದನ್ನು ನಾನು ನೋಡಿಯೇ ಇರುವೆನು ಈ ಶರತ್ಕಾಲದಲ್ಲಿಯ ಅಭ್ರವು ಹೆಚ್ಚು ದಿನಗಳಿಗೆ ಬಾಳಲಾರದೆಂಬುವುದನ್ನು ನಾನರಿತಿರುವೆನು ಜಗತ್ತಿನ ಶೀರ್ಷಸ್ಥಾನದಲ್ಲಿ ಗಗನಚುಂಬಿಯಾದ ಹಿಮಾಚಲವು ವಿರಾಜಮಾನವಾಗಿರುತ್ತಿದೆ ಅದರ ಪವಿತ್ರವಾದ ನಿಃಶ್ವಾಸದಿಂದ ಮನುಷ್ಯನ ತಪ್ತವಾದ ಪ್ರಾಣಗಳು ಶೀತಲವಾದಾವು ಮತ್ತು ಈ ಅಭ್ರವು ಎಲ್ಲಿಂದೆಲ್ಲಿಗೆ ಹಾರಿಹೋದೀತು"

"ನಾರಾಯಣಾ, ಅರ್ಜುನನು ನಿನ್ನ ಚಕ್ರವು, ಮತ್ತು ವ್ಯಾಸನು ನಿನ್ನ ಶಂಖವು. ಅರ್ಜುನನು ತನ್ನ ಬಾಹುಬಲದಿಂದ ಕುರುಕ್ಷೇತ್ರದಲ್ಲಿ ನಿನ್ನ ಧರ್ಮಮಂದಿರಕ್ಕೆ ಬುನಾದಿಯನ್ನು ತೋಡುತ್ತಿರುವನು ವಿಶ್ವಕರ್ಮನಾದ ದ್ವೈಪಾಯನನು ಈ ನೆಲೆಗಟ್ಟಿನಲ್ಲಿ ನಿನ್ನ ಮಂದಿರವನ್ನು ನಿರ್ಮಿಸುವನು, ಮತ್ತು ಅನಂತಕಾಲದವರೆಗೆ ಘೋಷಿಸುವ ತನ್ನ ಕಂಬುಕಂಠದಿಂದ ಮಾನವ ಯಾತ್ರಿಕರನ್ನು ಕೂಗಿ ಕರೆದು ಶಾಂತಿಮಂದಿರದ ದರ್ಶನವನ್ನು ಮಾಡಿಸುವನು ಅರ್ಜುನನ ಕುರುಕ್ಷೇತ್ರವು ಅಂತರ್ಹಿತವಾಗ ತೊಡಗಿಯದೆ. ವ್ಯಾಸಮುನಿಯ ಕರ್ಮಕ್ಷೇತ್ರದ ವಿಸ್ತಾರವು ಅಧಿಕಾಧಿಕವಾಗಿ ಪಸರಿಸುತ್ತಲಿದೆ. ದುಷ್ಟರನ್ನು ಶಿಕ್ಷಿಸುವುದು ಅರ್ಜುನನ ವ್ರತವು, ಸಾಧುಗಳನ್ನು ಉದ್ಧರಿಸುವುದು ವ್ಯಾಸಮುನಿಯ ವ್ರತವು ಗಾಂಡೀವವೆಂಬ ಬಿಲ್ಲು, ನಾನಾ ವಿಧದ ಶಸ್ತ್ರಾಸ್ತ್ರಗಳು ಮತ್ತು ಅಕ್ಷಯವಾದ ಕವಚವು—ಇವು ಅರ್ಜುನನೊಡನೆ ಇವೆ ಜ್ಞಾನತತ್ತ್ವರಾಶಿಯು ಮತ್ತು ಅವಿನಾಶಿಯಾದ ಗೀತೆಯು (ಭಗವದ್ಗೀತೆಯು) ಇವು ವ್ಯಾಸರ್ಷಿಯೊಡನೆ ಇವೆ. ಅರ್ಜುನನು ಈ ಚಕ್ರದಿಂದ ಅಧರ್ಮವನ್ನು ಸಂಹರಿಸಿರುವನು ಈಗ ವ್ಯಾಸಮುನಿಯು ತನ್ನ ಸಾಮಗ್ರಿಯನ್ನು ತೆಗೆದುಕೊಂಡು ರಣದಲ್ಲಿ ಅಗ್ರೇಸರನಾಗಿ, ಶಂಖನಾದದಿಂದ ಧರ್ಮವನ್ನು ಪ್ರಸಾರಮಾಡತಕ್ಕದ್ದು."

ಆಗ ವ್ಯಾಸನಿಂತೆಂದನು—"ಕೃಷ್ಣಾ, ಶಂಖ, ಚಕ್ರ, ಮತ್ತು ಕವಚವಿವೆಲ್ಲವು ನಿನ್ನ ಆಯುಧಗಳಾಗಿವೆ ನೀನೂದಿದಂತೆಯೇ ಶಂಖವು ಊದುವುದು. ಪಾರ್ಥನು ಮತ್ತು ವ್ಯಾಸನು ಇವರು ನಿನ್ನ ಕೈಗಳಲ್ಲಿರುವ ಎರಡು ಅಸ್ತ್ರಗಳು. ವೃಂದಾವನದಲ್ಲಿ ಒಬ್ಬ ದಿವ್ಯ ಕುಮಾರನು ಇಂದ್ರನಿಗೋಸ್ಕರ ಮಾಡಿದ ಯಜ್ಞಯಾಗಾದಿಗಳನ್ನು ನಿಷೇಧಿಸಿಕರಿಸುತ್ತಾನೆಂದು ನಾನು ಯಾವ ಕಾಲದಲ್ಲಿ ಕೇಳಿದೆನೋ, ಗೋಪ ಗೋಪಿಯರು ಆತನಲ್ಲಿರುವ ಭಕ್ತಿಯ ಆಪ್ಲಾವದಿಂದ ದೇಹಾಭಿಮಾನವನ್ನು ತೊರೆದುಬಿಟ್ಟಿರುವರೆಂದೂ, ಸತಿಯರು ಪತಿಗಳನ್ನು ತೊರೆದು. ತಾಯಿಯರು ಮಕ್ಕಳನ್ನು ಬಿಟ್ಟು ಭಕ್ತಿಯಿಂದ ಆತನನ್ನು ಆರಾಧಿಸುತ್ತಲಿರುವರೆಂದೂ ನಾನು ಯಾವ ಕಾಲದಲ್ಲಿ ಕೇಳಿದೆನೋ, ಆಗಲೇ, ದ್ವಾಪರ ಯುಗವು ಮುಗಿಯುತ್ತ ಬಂದು, ನವೀನ ಯುಗದ ಸಂಚಾರವಾಗುತ್ತಲಿದೆ, ಮತ್ತು ನವೀನ ಯುಗದಲ್ಲಿಯ ಅವತಾರವು ವೃಂದಾವನದಲ್ಲಿ ಆಗುತ್ತದೆಂಬುವದನ್ನು ನಾನು ತಿಳಿದುಕೊಂಡೆನು. ನರರೂಪಿಯಾದ [illegible]! ಆ ಸಮಯದಿಂದ [illegible]

ಅಸ್ತ್ರವನ್ನು ಸಮರ್ಪಿಸಿರುವೆನು. ನಿನ್ನ ಲೀಲೆಯನ್ನು ಅವಲೋಕಿಸಬೇಕೆಂತಲೇ ಪ್ರಭಾಸ ತೀರದಲ್ಲಿ ನಾನು ಬೇರೊಂದು ಆಶ್ರಮವನ್ನು ಕಟ್ಟಿಕೊಂಡೆನು. ಕುರುಕ್ಷೇತ್ರದಲ್ಲಿಯ ನಿನ್ನ ಲೀಲೆಯನ್ನು ಕಣ್ಣಾರೆ ಕಾಣಬೇಕೆಂದು ಇಲ್ಲಿ ಪಕ್ಕದಲ್ಲಿಯೇ ಒಂದು ಎಲೆಮನೆಯನ್ನು ಕಟ್ಟಿದಿರುವೆನು. ಈಗ ನನಗೆ ಬೇರೇನೂ ಸೂಚಿಸುವುದಿಲ್ಲವು ಭಕ್ತಿಯಿಂದ ನಿನ್ನ ಭಾಗವತವನ್ನು ಮತ್ತು ಮಹಿಮಾ ಪೂರ್ಣವಾಗಿರುವ ಮಹಾಭಾರತವನ್ನು ಹಾಡಬೇಕೆಂಬ ಕರ್ತವ್ಯ ಒಂದೇ ಅವಶಿಷ್ಟವಿದೆ."

(ಮುಂದೆ ಸಾಗುವದು)

ಪರಕಾಯಾ ಪ್ರವೇಶ.

ಅಮೃತಸರ್ ಎಂಬಲ್ಲಿ 'ಉಪದೇಶಕ' ಎಂಬ ಮಾಸಿಕ ಪುಸ್ತಕವು ಪ್ರಕಟವಾಗುತ್ತಿದೆ. ಅದರೊಳು ಪಂಡಿತ ಅಮರನಾಥ ಶರ್ಮಾ ಎಂಬವರು ತಾನು ಕಣ್ಣಾರೆ ಕಂಡ ಒಬ್ಬ ಯೋಗಿಯ ವೃತ್ತಾಂತವನ್ನು ಪ್ರಕಟಿಸಿರುವರು ಅದೆಂತೆಂದರೆ,

ಸುಮಾರು ೬ ವರುಷಗಳ ಮುಂಚೆ ೭೦ ವರುಷ ಪ್ರಾಯದ ಧಷ್ಟಪುಷ್ಟ ದೇಹಧಾರಿಯಾದ ಚಂಪಾನಾಥ ಸ್ವಾಮಿ ಎಂಬ ಯೋಗಿಯು ಜಮ್ಮು ಪಟ್ಟಣದಿಂದ ೨ ಮೈಲು ಅಂತರದಲ್ಲಿ ತಪೀನದೀತೀರದಲ್ಲಿರುತ್ತಿದ್ದನು ನನ್ನ ಮೇಲೆ ಅವರಿಗೆ ತುಂಬಾ ಪ್ರೀತಿ ಇತ್ತು ಸ್ವಾಮಿಯವರು ಸ್ವಾತಂತ್ರ್ಯ ಪ್ರಿಯರಾಗಿಯೂ ನಿಸ್ವಾರ್ಥಶೂನ್ಯರಾಗಿಯೂ ಇರುತ್ತಿದ್ದು ಅನೇಕಾವರ್ತಿ ಅದ್ಭುತ ಚಮತ್ಕಾರಗಳನ್ನು ಮಾಡಿ ತೋರಿಸಿದ್ದರು ನಾನು ಒಂದು ದಿನ ಅವರನ್ನು ಏಕಾಂತದಲ್ಲಿ ಕಂಡಾಗ್ಯೆ ಅವರು ಅಂದದ್ದು —"ತಾನು ಹೇಳುವದನ್ನು ಮನಸ್ಸಿನಲ್ಲಿಟ್ಟುಕೊಳ್ಳುವದಾದರೆ ನಿಮಗೆ ಹೇಳುತ್ತೇನೆ" ನಾನು ಒಪ್ಪಿದೆನು, ಸಾಯಂಕಾಲದಲ್ಲಿ ಒಂದು ಬಾಟ್ಲಿ ತುಂಬಾ ಮದ್ಯವನ್ನು ಎಂಟು ಮಾಂಸವನ್ನು ಸಾಕಷ್ಟು ಗಂಜೆಯನ್ನು ಸಹ ತರಲು ನನಗ ಅಪ್ಪಣೆಯಾಯಿತು ಅಪ್ಪಣೆಯಹಾದಂತೆ ಸಾಮಗ್ರಿಗಳನ್ನು ಸಿದ್ಧ ಪಡಿಸಿ ಸಮಯಕ್ಕೆ ಸರಿಯಾಗಿ ನಾನು ಯೋಗಿಗಳ ಬಳಿ ಸೇರಿದೆನು ನನ್ನನ್ನು ನೋಡುತ್ತಲೇ ಸ್ವಾಮಿಯವರು ಎದ್ದು ತನ್ನೊಡನೆ ಮುಸಲ್ಮಾನರ ಸ್ಮಶಾನದ ಬಳಿಗೆ ತೆರಳಿ ಹೋದರು ಆ ದಿನ ಶಹರದಲ್ಲಿ ಒಬ್ಬ ರಂಗಾರಿಯ ಜಲಾಲುದ್ದೀನ ಎಂಬ ಸುಂದರ ವ ಪ್ರಾಯದ ಹುಡುಗನು ಸತ್ತಿದ್ದನು ಆತನನ್ನು ಹುಗಿದಿದ್ದಲ್ಲಿಗೆ ಹೋಗಿ ನಿಂತ ತರುವಾಯ ನನ್ನನ್ನು ೬ ಮಾರು ದೂರ ನಿಲ್ಲಿಸಿ ನನ್ನ ಸುತ್ತಲೂ ನಾಲ್ಕು ಗೆರೆಗಳನ್ನು ಎಳದು ಅದರ ಹೊರಗೆ ಬಾರದಂತೆ ನನಗೆ ಅಪ್ಪಣೆ ಕೊಟ್ಟರು ಮಧ್ಯ ರಾತ್ರಿ ಸಮಯವಾಗಿತ್ತು ನಾನು ಕೇಳಿದಾಗ್ಯೆ ನಾನು ತಂದಿದ್ದ ಒಂದೊಂದೇ ಪದಾರ್ಥವನ್ನು ಕೊಡಬೇಕಾಗಿ ಕೇಳಿಕೊಂಡರು ಇಷ್ಟಾದ ತರುವಾಯ ಹುಡುಗನ ಪ್ರೇತವನ್ನು ಕಿತ್ತು ಸ್ವಲ್ಪ ಸ್ಥಳ ಚೊಕ್ಕಟಮಾಡಿ ಅಲ್ಲಿ ಇಟ್ಟರು ಅದಕ್ಕಿಂತ ಉತ್ತರ ೫ ಮಾರು ದೂರ ಕೆಲವು ಸ್ಥಳ ಶುದ್ಧಮಾಡಿ ಅಲ್ಲಿ ಸ್ವಾಮಿಯವರು ಮಲಗಿದರು ಅರ್ಧಗಂಟೆಯಲ್ಲಿ ಅವರು ಕೈಕಾಲು ಬಡಿದುಕೊಂಡು ಆಯಾಸ ಪಟ್ಟರು ಅತಿಶಯ ಆಯಾಸ ಪಡುವಂತೆ ನನಗೂ ತೋರಿತು ಹಾಗೆಯೇ ೩ ಗಂಟೆಯಲ್ಲಿ ಗಟ್ಟಿಯಾಗಿ ಕೂಗಿ ನಿಶ್ಚೇಷ್ಟರಾಗಿ ಬಿದ್ದರು ಇತ್ತಲಾಗಿ ಹುಡುಗನ ಶವವು ಅಲ್ಲಾಡಿ ಅಲ್ಲಾಡಿ ಕಣ್ಣು ತೆರೆಯಿತು ಕಣ್ಣಿನಿಂದ ಕಿಡಿಗಳು ಸುರಿಯುವ ಹಾಗೆ ಕಂಡನು ನಾನು ತುಂಬಾ ಭೀತಿಯಿಂದ ಕಂಗಾಲಾದೆನು ಇಷ್ಟರಲ್ಲಿ ಹುಡುಗನು ಮೆಟ್ಟಿ ನನ್ನ ಕಡೆಗೆ ಕೈ ನೀಡಿದನು ನೀಡಿದ ಕೈ ನಾನಿರುವಲ್ಲಿವರೆಗೂ ಉದ್ದವಾಯಿತು ನಾನು ಒಂದೊಂದೇ ಪದಾರ್ಥವನ್ನು ಆತನ ಕೈಗಿತ್ತೆನು ಅವುಗಳನ್ನು ಸೇವಿಸಿದ ತರುವಾಯ ಹುಡುಗನು ಎದ್ದು ನಿಂತು ನನ್ನನ್ನು ಕರೆದನು ಯೋಗಿಯ ಆಜ್ಞೆಯಂತೆ ನಾನು ತಪ್ಪದೆ ಮೌನವು ಬೇಡಿದೆನು ನಂತರ ಹುಡುಗನು ನನ್ನ ಸಮೀಪ ನಡದು ಬಂದು ನನ್ನ ಕೈ ಹಿಡಿದನು ನನ್ನ ಸಹಾಯದಿಂದ ಹುಡುಗನ ಶರೀರದಲ್ಲಿ ಪ್ರವೇಶಿಸಿದ ಯೋಗಿಯು ತನ್ನ ಕಳೇವರವನ್ನು ಆ ಹುಡುಗನನ್ನು ಹುಗಿದ ಹೊಂಡದಲ್ಲಿ ಹುಗಿದನು ನಂತರ ಯೋಗಿಯು ನನಗೆ ಅಂದದ್ದು —"ನಾನು ೧೧ ವರುಷಗಳಲ್ಲಿ ನಿನಗೆ ಪುನರ್ದರ್ಶನ ಕೊಟ್ಟು ನಿನ್ನ ಶ್ರಮದ ಪ್ರತಿಫಲ ಕೊಡುವೆನು" ನಾನು ನನ್ನನ್ನು ಶಹರ ವರೆಗೆ ಮುಟ್ಟಿಸಬೇಕಾಗಿ ನಾನು ಬೇಡಿಕೊಂಡೆ, ಅವರು ನನಗೆ ನನ್ನ ಮನೆಗೆ ಮುಟ್ಟಿಸಿದರು ಮರುದಿನ ಈ ಸುದ್ದಿಯು ತಿಳಿದು ಬರುತ್ತಲೇ ಕೆಲವರು ಹೋಗಿ ಅಗಿದು ನೋಡುವಾಗ್ಯ ೭೦ ವರುಷ ಪ್ರಾಯದ ಮುದುಕ ಯೋಗಿಯ ಶವವಿತ್ತು, ಹುಡುಗನ ಶವವಿರಲಿಲ್ಲ

B M

ಕೋಗಿಲೆಗೆ.

(ಕೊಗ್‌ಫೆಲೊ ಎಂಬ ಅಮೇರಿಕದ ಕವಿಯ ಇಂಗ್ಲೀಷು ಗೀತೆಯನ್ನು ಅವಲಂಬಿಸಿ ಬರೆದದ್ದು)

ಮತ್ತೇಭ॥ ನೆಲೆಯಂ ದೂರದೆಬಿಟ್ಟುಬಂದ ಸಖಿಯೇ [1]ನಿಚ್ಚಂ ಸೊಗಂ ನಿನ್ನಸೇ ।
ಕಲಿಯ್ ತಂದು [2]ಬಸಂತದಾಣತಿಯ ನೀನೆಮ್ಮಂತರಂಗಂಗಳಂ ॥
ನಲವಿಂ ತೊಯ್ದು ಪ್ರಫುಲ್ಲಗೈವೆಯಳಿಯ್ [3]ಮೊಳ್ಳಾನದಿಂದೆಮ್ಮಯಾ ।
ನೆಲೆಯಂನಾಂ ತಳೆಲ್ವಂಕೆ[4] ಮಾವ್ವುಮಿರದೊಳ್ [5]ದೋನ್ನಿರಲ್ಕೇ
ಯುಧ ॥ ೧ ॥

ಶಾರ್ದೂಲ॥ ನಿನ್ನಂ ಸಾರುವ [illegible]
[illegible] ॥

ಕೀರ್ತಿಶೇಷ ಅಚ್ಯುಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6 ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ.

ಕವಿ ಎಂಡ್ ಸನ್ಸ್ ಮಂಗಳೂರು, ದ. ಕ.

THE NEWZEALAND INSURANCE CO., Ltd.

ದಿ. ನ್ಯೂಝೀಲೆಂಡ್ ಇನ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮೇರಿನ್ ಡಿಪಾರ್ಟ್‌ಮೆಂಟ್

(Marine Department).

ಮಂಗಳೂರ ಏಜಂಟರು — ದಿ ದತ್ತಾರಾಮ ಎಂಡ್ ಕೊ.

ಪ್ರಿಪೂ ಬಿಲ್ಡಿಂಗ್ಸ್ ಮಂಗಳೂರು.

ಈ ಕಂಪೆನಿಯಲ್ಲಿ ಬಹಳ ಸುಲಭವಾದ ದರಗಳಿಂದ ಸಮುದ್ರಮಾರ್ಗವಾಗಿ ಹೋಗುವ ಮ್ಯಾಲಿನ ಮೇಲೆ ವಿಮೆ ಉತ್ತರಾಯಿಸಬಹುದು

---

[6]ನಿನ್ನಂ ಪೀಸಿದುವಾಗ [7]ಮಂಜಿನೆಲೆಗಳ್ ಕೀಳ್ದತ್ತು [8]ಕೂರ್ಗ್ಯ್ರ ಗಳಂ ।
ರನ್ನಂಬೋಲ್ ನೆರೆಬಿಣ್ಣ ಬಣ್ಣದೊಡಿ [9]ಲಿಂ ಬಿಂಪಾಂತ ಪೂದೋಂಟಮಂ ॥ ೨ ॥

ಮಂದಾಕ್ರಾಂತ [1]ವ್ಯಾನಂದಂ ಕತ್ತಲಯಲೆಗಳಿಂದಂ ಮುಗಿಲ್ವಳ್ಳಿಯಿಂದಂ ।
ಬಾನೆಲ್ಲಂ ತುಂಬಿರಲು ಮುಸಿಸಂ ದಾಳ್ವವೋಲ್ಪೈ [11]ಶಿಲಾಗಳ್ ॥
ಬಾನುಂಗೊಂಡುಂ ತುಹಿನಗಿರಿಯಿಂ ಕಲ್ಗಳೊಳ್ ಬಿದ್ದುರುಳ್ದುಂ ।
ತಾನೆಲ್ಲಂ ಮುಚ್ಚಲು ಚಳಿಯ [1]ಬೀಳಾಯ್ತೆಲ್ ಪಚ್ಚೆದೋಂಟಂ । ೩ ॥

ವಂಶಸ್ಥ। [1][2]ಅಲಂಪುಗೆಟ್ಟ ವ್ಯವಿಲಾಸ ಪೂಬನಂ
[6]ಬೆಳಂಕು ಜೋಲ್ದಿರ್ದದಾಂಗಿ ತ್ರೈಕಿಲೊಳ್ ।
ಗುಲಾಬಿಗಳ್ನೊಂದುರೆ ಗಂದಿ ಬಿದ್ದಿರಲ್
[2][1]ಕಲಾಪಿರನ್ನೇ [2]ಕುಳಿಸೋಕನೆ ಬೇನೆಯಿಂ । ೪ ।

ಬತ್ತ ಮತ್ತು ಅಕ್ಕಿಗೆ ಬೀಳುವ ನುಸಿ ಹುಳ ಬತ್ತ ಮತ್ತು ಅಕ್ಕಿಗೆ ನುಸಿ ಹಿಡಿಯುವುದು ಸಾಧಾರಣವಾಗಿ ಎಲ್ಲರಿಗೂ ಗೊತ್ತಿರುವ ಸಂಗತಿಯಷ್ಟೆ ಇದನ್ನು ತಪ್ಪಿಸುವದಕ್ಕೆ ಈ ಕೆಳಗ ಕಂಡ ಕೆಲವು ಉಪಾಯಗಳನ್ನು ಮಾಡಬೇಕು

ಧಾನ್ಯವನ್ನು ಉಗ್ರಾಣದಲ್ಲಿ ತುಂಬಿಡುವದಕ್ಕೆ ಮೊದಲು ಕಳವು ಕಾಳುಗಳಿಲ್ಲದಂತೆ ಚೊಕ್ಕಟ ಮಾಡಬೇಕು ಕಳವು ಧಾನ್ಯದಲ್ಲಿ ಹುಳುಗಳು ವೃದ್ಧಿಯಾಗಿ ಕಣ್ಣಿಗೆ ಕಾಣದಂತ ಸೇರಿಕೊಂಡಿರುತ್ತವೆ

ಹುಳು ಬಿದ್ದಿರುವ ಧಾನ್ಯವನ್ನು ಉಗ್ರಾಣದಲ್ಲಿಡಬಾರದು ಒಂದು ನುಸಿ ಇದ್ದರೂ ಅದು ಅತಿ ಜಾಗ್ರತೆ ಅಭಿವೃದ್ಧಿ ಹೊಂದಿ ಧಾನ್ಯವನ್ನೆಲ್ಲಾ ಕೆಡಿಸಬಲ್ಲದು.

ಧಾನ್ಯವನ್ನು ಬಿಡಕಿಲ್ಲದ ಘಟ್ಟಿಯಾದ ಓಡೆ ಗುಡಾಣ ಮುಂತಾದ ಪಾತ್ರೆಗಳಲಿ ತುಂಬಿಡಬೇಕು ಮುಚ್ಚಳವಿಲ್ಲದ ಪಾತ್ರೆಗಳಲ್ಲಿ ನುಸಿಯಾಡುವದಕ್ಕೆ ಅವಕಾಶವಿರುವದರಿಂದ, ಅವುಗಳಲ್ಲಿ ಕಾಳನ್ನು ತುಂಬಿಟ್ಟರೆ ಪ್ರಯೋಜನವಿಲ್ಲ ಏಕೆಂದರೆ, ಕಾಳು ತುಂಬಿದ ಕೂಡ್ಲೆ ಅಥವಾ ಕ್ಷಿಪ್ರದಲ್ಲೆ ಧಾನ್ಯಕ್ಕೆ ಹುಳು ಬಿದ್ದು ಅದರ ಮೇಲೆ ಮೊಟ್ಟೆ ಇಡುತ್ತದೆ ಉಗ್ರಾಣವೇ ಹುಳುಗಳ ಪ್ರವೇಶಕ್ಕೆ ಆಸ್ಪದ ವಿಲ್ಲದಂತಿರಬೇಕು ಅಥವಾ ಧಾನ್ಯವನ್ನಾದರೂ ಗಟ್ಟಿಯಾದ ಪಾತ್ರೆಗಳಲ್ಲಿ ತುಂಬಿಡಬೇಕು. ಬಿದಿರು ಗೂಡೆಗಳು, ಮಣ್ಣು ಮತ್ತು ಸಗಣಿಯನ್ನು ಬೆರಸಿ ಚೆನ್ನಾಗಿ ಮೆತ್ತಿದ ವಿನಹಾ, ಹುಳುಗಳಿಗೆ ತಡೆಯಲ್ಲ ಒಂದು ನುಸಿ ನುಗ್ಗುವಷ್ಟು ಬಿರಕು ಇದ್ದರೂ ಸಾಕು, ಧಾನ್ಯವೆಲ್ಲ ಕೆಟ್ಟು ಹೋಗುವದು

---

[1] ಯಾವಾಗಲೂ [2] ವಸಂತಕಾಲದ ಅನುಜ್ಞೆಯನ್ನು, [3] [illegible] [illegible] [6] [illegible] [7] [illegible] [illegible]

ಉಗ್ರಾಣದಲ್ಲಿ ತುಂಬಿಟ್ಟ ಧಾನ್ಯಕ್ಕೆ ನುಸಿ ತಗಲಿದ್ದರೆ ಅದನ್ನು ಕೂಡ್ಲೆ ತೆಗೆದು ಚೊಕ್ಕಟಮಾಡಬೇಕು. ನುಸಿಗಳನ್ನು ಗಾಳಿಯಾಡದ ಸೀಸೆ ಅಥವಾ ಜಾಡಿಯಲ್ಲಿಟ್ಟ ರೂ ಸೀಸೆ ಯಾ ಜಾಡಿಯನ್ನು ಧಾನ್ಯದಲ್ಲಿ ಇಟ್ಟರೆ ಹುಳುಗಳು ಬದುಕಿದ್ದು ವೃದ್ಧಿ ಹೊಂದುತ್ತವೆ. ಧಾನ್ಯಕ್ಕೆ ಹುಳು ಬಿದ್ದ ಕೂಡ್ಲೆ ಅದನ್ನು ಈಚೆಗೆ ತೆಗೆದು ಒಳ್ಳೆ ಧಾನ್ಯವನ್ನೂ ಕೆಟ್ಟ ಧಾನ್ಯವನ್ನೂ ಪ್ರತ್ಯೇಕಿಸಬೇಕು. ಹುಳು ಸೋಂಕಿದ ಧಾನ್ಯವನ್ನು ಪುನಃ ಉಗ್ರಾಣದಲ್ಲಿ ತುಂಬಿಡುವದಕ್ಕೆ ಮೊದಲು, ಅದಕ್ಕೆ ಗಾಳಿಯಾಡದ ಒಂದು ಪಾತ್ರೆ ಅಥವಾ ಕಟ್ಟಡದಲ್ಲಿ ಕಾರ್ಬನ್ ಬೈಸಲ್ಫೈಡ್(Carbou Bisulphide) ಹೊಗೆಯಾಡಿಸಬೇಕು. ೧೫ ಸಲಿ ಅಡಿ ಪ್ರದೇಶಕ್ಕೆ ಒಂದು ಔನ್ಸ್ ಈ ಔಷಧಿ ಹತ್ತಿಸಿ ಧಾನ್ಯವನ್ನು ೨೪ ಘಂಟೆ ಕಾಲ ಹೊಗೆಯಲ್ಲಿಟ್ಟರೆ ಹುಳುಗಳು ಪರಿಹಾರವಾಗುವದಲ್ಲದೆ, ಮೊಟ್ಟೆಗಳು ಕೂಡ ಸತ್ತುಹೋಗುತ್ತವೆ. ಧಾನ್ಯಕ್ಕೆ ಏನೂ ಬಾಧಕವಿಲ್ಲ. ಅದನ್ನು ತಿನ್ನಬಹುದು ಅಥವಾ ಬೀಜಕ್ಕೂ ಉಪಯೋಗಿಸಬಹುದು. ೨೪ ಘಂಟೆಯಾದ ನಂತರ ಪಾತ್ರೆ ಅಥವಾ ಕಟ್ಟಡವನ್ನು ತೆರೆದು ಹೊಗೆಯೆಲ್ಲ ಹೋದ ಮೇಲೆ ಧಾನ್ಯವನ್ನು ಹುಳು ಬರುವದಕ್ಕೆ ಅವಕಾಶವಿಲ್ಲದ ಪಾತ್ರೆಯಲ್ಲಿ ಕೂಡಿಡಬೇಕು ... ತುಂಬಿಡಬೇಕು. ಕಾರ್ಬನ್ ಬೈಸಲ್ಫೈಡ್ ಔಷಧಿ ಅತಿಜಾಗ್ರತೆ ಬೆಂಕಿ ಹತ್ತಿಕೊಳ್ಳುವದರಿಂದ ಇದನ್ನು ಬಹಳ ಹುಷಾರಿಯಿಂದ ಬಳಿಸಬೇಕು. ಇದರ ಹೊಗೆಗೆ ಸ್ವಲ್ಪ ಬೆಂಕಿ ತಗಲಿದ ಮಾತ್ರಕ್ಕೆ ಫಕ್ಕನೆ ಹತ್ತಿಕೊಂಡು ಅಪಾಯ ಸಂಭವಿಸುವದರಿಂದ ಈ ಹೊಗೆ ಯಾಡುವ ಕಡೆ ದೀಪ, ಬೆಂಕಿ, ಹಚ್ಚಿದ ಹೊಗೆಸುತ್ತು ಮೊದಲಾದವುಗಳನ್ನು ತೆಗೆದುಕೊಂಡು ಹೋಗಬಾರದು.

ಧಾನ್ಯವಿರುವ ಪಾತ್ರೆಗಳಲ್ಲಿ ನಾಫ್ತಲೀನ್ ... ಇಡುವದು ಧಾನ್ಯಗಳಿಗೆ ನುಸಿ ಹುಳುಗಳು ಬಾರದಂತೆ ಪತ್ತೊಂದು ಸುಲಭೋಪಾಯ. ... ಗಜೇಟ್

ಪತ್ರವ್ಯವಹಾರ

ಬ ತ್ಯ ದ ... ಬರೆಯುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

—o—

ಬಾಸೆಲ್ ಮಿಶನಿನವರ 75ನೇ ವರುಷದ ಜುಬಿಲಿ ಮಹೋತ್ಸವವು

ಪತ್ರಾಧಿಪರೇ,

ನನ್ನ ಈ ಕ... ... ತಮ್ಮ ಪತ್ರ... ...ದಕ್ಕೋಸ್ಕರ ... ಬೇಡಿ ಕೊಳ್ಳುವೆನು.

ಸ್ವದೇಶಾಭಿಮಾನಿಯು ವಾಚಕನ ... ಕ್ರೈ... ಮಿಶನ... ಷಯವನ್ನು ಸ್ವದೇಶಾಭಿಮಾನಿ ... ಈ ವಿಷಯವನ್ನು ಓದದೆ ಬಿಡಬಾರದು ... ಈ ... ಮ್ಮಂಥ ಮಂಗಳೂರಿನ ಮಿಶನ್ ... ಎಲ್ಲಾ ಜಾತಿಯವರನ್ನೂ ... ನಾ... ಈ ಸಭೆ ... ಮಾಡುವದಕ್ಕೆ ಸಭಾಸದರನ್ನು ಪ್ರಾರ್ಥಿಸುತ್ತೇನೆ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫರ ... ಕಳೆದ ೭೫ ವರುಷಗಳ ಮಿಶನಿನವರ ... ಸಭಾಸದರ ಒಂದು ಮೂಲದಲ್ಲಿ ... ಯಾಗಿತ್ತೆಂದು ... ಕೇಳುವದೆ ಅಸಾಧ್ಯವಾಗಿತ್ತು. ... ಈ ... ವಿಷಯವಾಗಿ ಸರಿಯಾದ ವೃತ್ತಾಂತವನ್ನು ... ಪತ್ರಿಕೆಕರೆ, ತಮಗೆ ಈ ವಿಷಯ ಏನಾದರೂ ತಿಳಿದಿದ್ದರೆ ... ಸಂಗತಿಗಳನ್ನು ತಾವು ಕೊಡಿಸಿದ್ದಲ್ಲಿ ತಮ್ಮನ್ನು ವಂದಿಸುವೆನು.

ಬಾಸೆಲ್ ಮಿಶನಿನವರು ಪ್ರಥಮತಃ ನಮ್ಮ ಜಿಲ್ಲೆಗೆ ... ಬಂದರೆಂತ ಕಾಣುತ್ತದೆ. ಪ್ರಕೃತ ನಮ್ಮ ಜಿಲ್ಲೆಯಲ್ಲಿ ಹತ್ತು ಕಡಿಮೆ ... ಸಾವಿರ ಮಂದಿಯವರು ಕ್ರೈಸ್ತಮತದವರಿರುವರಾಗಿ ತೋರುತ್ತದೆ. ಕ್ರೈಸ್ತ ದೇವಾಲಯಗಳಲ್ಲಿ ಜನನ ಮರಣ ರಿಜಿಸ್ಟ್ರಿ ಮೊದಲಾದ ಕ್ರಮಗಳನ್ನಿಟ್ಟು ದೇವಾಲಯದ ಜನರ ಅಭಿವೃದ್ಧಿ ಸ್ಥಿತಿಗೆ ಆಗಾಗ್ಯೆ ಗಮನಕೊಡುತ್ತಿರುವರು. ಕ್ರೈಸ್ತಮತವನ್ನವಲಂಬಿಸಿದವರಲ್ಲಿ ವೃತ್ತಿಹೀನತೆಯು ಇಲ್ಲದಂತೆ ನಾನಾ ತರದ ಕೈಗಾರಿಕೆ ಕಾರ್ಖಾನೆಗಳನ್ನು ಏರ್ಪಡಿಸಿರುವರು. ಅಲ್ಲಲ್ಲಿ ರೋಗಿಗಳಿಗೆ ಚಿಕಿತ್ಸೆಯು ದೊರಕುವಂತೆ ಆಸ್ಪತ್ರೆಗಳನ್ನು ಸ್ಥಾಪಿಸಿರುವರು. ಅವರ ಬೈಬಲ ಜ್ಞಾನವನ್ನು ಜನರಲ್ಲಿ ಪ್ರಸರಿಸುವಂತೆ ಮಿತಿಯಿಲ್ಲದ ಚಿಕ್ಕ ಪುಸ್ತಕಗಳನ್ನೂ ವೃತ್ತಾಂತ ಪತ್ರಿಕೆಗಳನ್ನೂ ಪ್ರಕಟಿಸುತ್ತಿರುವರು. ಪಾಶ್ಚಾತ್ಯ ವಿದ್ಯಾ ಪ್ರಚಾರಕ್ಕಂತೂ ಇವರ ಶಾಲೆಗಳೇ ನಮ್ಮ ಜಿಲ್ಲೆಗೆ ಮೊದಲನೇದವುಗಳಾಗಿರುವವು. ಪ್ರತಿ ಹಳ್ಳಿಯಲ್ಲಿ ಪಟ್ಟಣದಲ್ಲಿಯೂ ಸಾಧ್ಯವಿರುವ ಕಡೆಗಳಲ್ಲೆಲ್ಲಾ ಇವರು ತಮ್ಮ ಪಾಠಶಾಲೆಗಳನ್ನು ಸ್ಥಾಪಿಸಿ ತಮ್ಮ ಮತದವರಿಗೂ ತಮ್ಮ ಮತದವನ್ನವಲಂಬಿಸದ ಇತರರಿಗೂ, ಒಂದೇ ಪ್ರಕಾರವಾಗಿ ಚಿಕ್ಕಬಲ ಪಾಠವನ್ನು ಅದರೊಂದಿಗೆ ಇತರ ಪಾಠಗಳನ್ನೂ ಕಲಿಸುತ್ತಿರುವರು. ಮತಾಂತರವಾದವರು ತಮ್ಮ ಮತದವರಿಗೆ ಅಲ್ಲದೆ ಇತರ ಜಂಸ್ತಗಳಿಂದ ಅನ್ಯ ಜಾತಿಯವರಿಗೆ ಸಹಾ ಪ್ರಯೋಜನವು ದೊರಕುತ್ತಿರುವದು. ಅವರ ಎಲ್ಲಾ ಕೆಲಸಗಳನ್ನು ಒಳ್ಳೇ ವ್ಯವಸ್ಥಿತ ರೀತಿಯಲ್ಲಿಯೇ ಮಾಡುತ್ತಿರುವುದರಿಂದ ಮಿಶನಿನವರು ತಮ್ಮ ಪ್ರತಿ ವರುಷದ ವರದಿಯಲ್ಲಿಯೂ ಸ್ವಲ್ಪವಾದರೂ ಅಭಿವೃದ್ಧಿಯನ್ನು ತೋರಿಸುತ್ತಿರುವರು. ಸರ್ವ ಅಭಿವೃದ್ಧಿಗೆ ಮೂಲವಾದ ಮತ ಪ್ರತಿಪಾದನೆಯನ್ನು ಇವರು ತನುಮನ ದನಾರ್ಪಣೆಗಳಿಂದ ಸಾಧಿಸುತ್ತಿರುವುದರಿಂದ ಲೌಕಿಕ ಅಭಿವೃದ್ಧಿಯು ತಾನಾಗಿಯೇ ಇವರ ಕೈವಶವಾಗುತ್ತಿರುವುದು.

ಮಿಶನರಿಗಳ ಈ ಎಲ್ಲಾ ಸಂಭ್ರಮವನ್ನು ನೋಡುತ್ತಲೂ ಕೇಳುತ್ತಲೂ ಆ ದಿನ ಸಭೆಯಲ್ಲಿದ್ದಾಗ ನನ್ನಲ್ಲಿ ಹಲವು ಮನೋ ಕಲ್ಪನೆಗಳುಂಟಾದವು. ಹಿಂದೂ ಮತ ಪ್ರತಿಪಾದನೆಗೆ ಪ್ರಕೃತ ಯಾವ ಸಾಧನಗಳಿರುವವು? ಪಾದರಿಗಳಂತಹ ರೆವೆರೆಂಡರುಗಳ ಬದಲಿಗೆ ನಮ್ಮಲ್ಲಿ ಹಲವು ಮಠಾಧಿಪತಿಗಳಿರುವರು. ಉಪದೇಶಿ ಮತ್ತು ಪೇಸ್ಟರುಗಳ ಬದಲಿಗೆ ವೈದಿಕ ಮತ್ತು ಆಚಾರ್ಯಗಣವಿರುವದು. ದೊಡ್ಡ ದೊಡ್ಡ ದೇವಾಲಯಗಳೂ ಇರುವವು. ದೇವಸ್ಥಾನಗಳಿಗೂ ಮಠಗಳಿಗೂ ಸಾಕಷ್ಟು ಹುಟ್ಟುವಳಿ ಇರುವುದು. ಆರ್ಯರ ಪ್ರಾಚೀನ ನಾಗರಿಕತೆಯ ಸಂಸ್ಥೆಗಳು ಸಾವಿರಾರು ವರುಷಗಳಿಂದಿರುವವಾದರೂ ಒಳ್ಳೇ ವ್ಯವಸ್ಥೆಯಲ್ಲಿಲ್ಲದೆ, ಈ ಸಂಸ್ಥೆಗಳೆಲ್ಲವೂ ನಿರ್ಜೀವವಾಗಿದ್ದು ಸಮಾಜ ಉಪಕಾರಗಳಾಗಿರುವ ಎಡೆಗೆ ಸಮಾಜ ವ್ಯಂಗಗಳಂತಾಗಿರುವವು. ಮಠಾಧಿಪತಿಗಳಲ್ಲಿ ಹಲವರು ತಮ್ಮ ಶಿಷ್ಯ ವರ್ಗದ ಲೌಕಿಕ ಸ್ಥಿತಿಗಾಗಲಿ ಪಾರಮಾರ್ಥಿಕ ಅಭಿವೃದ್ಧಿಗಾಗಲಿ ಮನಸ್ಸು ಕೊಡದೆ ಸಮಾಜವು ತಲೆ ಇಲ್ಲದ ಕರಂಬನಂತೆ ಬಹಳ ಕನಿಷ್ಠ ಸ್ಥಿತಿಗೆ ಬಂದಿರುವುದು. ಕ್ರೈಸ್ತ ದೇವಾಲಯಗಳಲ್ಲಿ ಆಗ್ಯಾಗ್ಯೆ ಜನರ ಖಾನೆಸುಮಾರಿ ಮೊದಲಾದವುಗಳನ್ನು ಗೊತ್ತು ಮಾಡುವ ಏರ್ಪಾಡುಗಳಿರುವವಾದರೆ ಹಿಂದೂ ದೇವಾಲಯಗಳಲ್ಲಿ ಜನರ ಸ್ಥಿತಿಯನ್ನು ಗೊತ್ತು ಮಾಡುವ ಯಾವ ಏರ್ಪಾಡುಗಳೂ ಇಲ್ಲ. ವಿದ್ಯಾ ಪ್ರಚಾರದ ಕೆಲಸವನ್ನು ದೇವಸ್ಥಾನಗಳು ಮತ್ತು ಮಠಾಧಿಪತಿಗಳು ಕೈಕೊಳ್ಳುವುದು ಮಹಾ ದೊಡ್ಡ ಪಾಪ! ಆಸ್ಪತ್ರೆಗಳನ್ನಿಟ್ಟು ಜನರ ಆರೋಗ್ಯ ರಕ್ಷಣೆಯನ್ನು ಮಾಡುವುದು ಪೂರ್ಣವಾಗಿ ಸರಕಾರದವರ ಕೆಲಸವಾಗಿರುವುದು! ಹಿಂದೂ ಧರ್ಮಗ್ರಂಥಗಳನ್ನು ಛಾಪಿಸಿ ಸನಾತನ ಧರ್ಮವು ನೆಲೆಗೊಳ್ಳುವಂತೆ ಹಣ ಖರ್ಚುಮಾಡಿದ್ದಲ್ಲಿ ವರುಷಾವಧಿ ನ್ಯೂನವಿಲ್ಲದ ರೀತಿ ನಡಿಯಬೇಕಾದ ಸಮಾರಾಧನೆಗಳಿಗೇನುಗತಿ! ಜೀನಸು ಧಾರಣೆಯಂತೂ ಹೆಚ್ಚೆಚ್ಚಾಗುತ್ತಾ ಇದೆ. ಇವರಲ್ಲಿಯೂ ತೋಗರಿಬೇಳೆಗೆ ಖರೇದಿಯು ಹೆಚ್ಚು ಅಪೇಕ್ಷಿತವಾಗಿರುವುದು! ಮಠದಿಂದಕ್ಕೆ ಕನಿಷ್ಠಪಕ್ಷಕ್ಕೆ ೧೫ ರೂಪಾಯಿಗೆ ಕಡಿಮೆಯಾಗ ತೋಗರಿ ಬೇಳೆಯನ್ನು ಉಪಯೋಗಿಸಿದರೆ ಬ್ರಾಹ್ಮಣ! ವೃಂದವು ಮೂಕರು.

BERNA WATCH COMPANY.

ಬರ್ನಾ ವಾಚು ಕಂಪೆನಿ.

ಈ ಗಡಿಯಾರಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿಕೊಡುವವು.

ನಮ್ಮ 'ಮೆಕ್ಸಿಮ' ವಾಚನ್ನು ಚರವಸೆಯಿಂದ ಕೊಂಡು ಕೊಳ್ಳಿರಿ
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪-೦-೦
ನಮ್ಮ 'ನ್ಯೂ ಡಿ ಪಿ' ನಿಕಲ್ ಕೇಸಿನಲ್ಲಿ ರೂ ೧೪-೦-೦
ಬೆಳ್ಳಿ ಕೇಸಿನಲ್ಲಿ ರೂ. ೧೮-೦-೦
ಕಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಟರ್' ನಿಕಲ್ ಕೇಸಿನಲ್ಲಿ ರೂ ೧೮-೦-೦
ಬೆಳ್ಳಿ ಕೇಸಿನಲ್ಲಿ ರೂ ೨೧-೦-೦.
ನಮ್ಮ 'ವರ್ಡಲಿ' ನಿಕಲ್ ಕೇಸಿನಲ್ಲಿ ರೂ ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.
ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. ೨೦-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೫-೦-೦.

ಎಲ್ಲಾ ಗಡಿಯಾರುಗಳು ಜಂಪ್ಸ್ ಸ್ಯಾಚೆನಲ್ಲಿರುವವು. ... ವಿ. ಪಿ. ಮಾರಿ ಕಳುಹಿಸುವೆವು. ನಮ್ಮ 59 ... ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದುಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟದವರಲ್ಲಿಯೂ ಕೊಳ್ಳಬಹುದು.

ಭೋಜನ ಪ್ರಿಯನಾದ ಬ್ರಾಹ್ಮಣನಿಗೆ ಹೀಗೆ ಅಸಂತುಷ್ಟಿ ಉಂಟು ಮಾಡಿ ಸಂತತಿ ಕ್ಷಯಿಸುವಂತೆ ಮಾಡಿಕೊಳ್ಳುವುದು ಯಾರಿಗೆ ಕಾಣದೇ ಬೇಕಾಗಿರುವುದು. ಮೊದಲೇ ದೇವಸ್ಥಾನಗಳ ಮೊಕ್ತೇಸರಿ ಮೊದಲಾದವುಗಳನ್ನು ಕೈಕೊಂಡವರಿಗೆ ಮಕ್ಕಳ ಸಂತಾನವು ಪ್ರಾಪ್ತವಾಗುವುದು ಅಪರೂಪವಂತೆ. ಈ ಅನಾಚಾರಗಳನ್ನು ಕೈಕೊಳ್ಳುವುದು ಮಠಾಧಿಪತಿಗಳಿಗಾಗಲಿ ದೇವಸ್ಥಾನದ ಮೊಕ್ತೇಸರುಗಳಿಗಾಗಲಿ ಕೇವಲ ಅಸಾಧ್ಯವಾಗಿರುವುದು! ಅಯ್ಯೋ! ಅಲಸ್ಯ ಮಹಾಶಾಸ್ತ್ರ ಪಂಡಿತ ಶಿಖಾಮಣಿಗಳಿಂದ ಪ್ರಾಪ್ತವಾದ ಅಜ್ಞಾನದ ದೆಸೆಯೇ! ಮಠಾಧಿಪತಿಗಳೂ ಮೊಕ್ತೇಸರರೂ ನಮ್ಮವರೇ ಆಗಿರುವರು. ನಮ್ಮಿಂದಲೇ ಆ ಪದವಿಗೆ ಅವರಿಗೆ ಯೋಗ್ಯತೆಯು ದೊರಕಿತು. ಆ ನಮ್ಮವನಾದ ನಾನು ಈ ರೀತಿ ಸ್ವದೇಶಾಭಿಮಾನಿಯಲ್ಲಿ ಬರಿಯಬೇಕಾಯಿತಲ್ಲ.

ಬಾಂಧವರೇ ಇನ್ನಾದರೂ ಎದ್ದೇಳುವಾ. ಹಿಂದೂಸ್ಥಾನವು ನಮ್ಮ ಅಜ್ಜಿಯ ಕಾಲದ ಹಿಂದೂಸ್ಥಾನವು ಅಲ್ಲ. ಅಜ್ಜಿಕಾಲದಲ್ಲಿ ನಾಲ್ಕುಕಡೆಗಳಲ್ಲಿಯೂ ಹಳ್ಳಗಳಿದ್ದು ಅಜ್ಜಿಯು ವಾಸಿಸಿರುವ ಚಿಕ್ಕದೊಂದು ಹಳ್ಳಿಯು ಅವಳು ಭಾವಿಸಬಹುದಾದ ದೊಡ್ಡ ಹಿಂದೂಸ್ಥಾನವಾಗಿತ್ತು. ಈಗಲಾದರೋ ಭೂಲೋಕದ ಯಾವ ಕಡೆಯಲ್ಲಿ ಯಾದರೂ ಸಂಭವಿಸಿದ ಅಭಿವೃದ್ಧಿಯ ಪಾರ್ವಾಟಗಳ ಫಲಾಫಲವು ಹಿಂದೂಸ್ಥಾನದಲ್ಲಿಯೂ ಸಹಾ ತಲೆದೋರುವುದು. ಪಾಶ್ಚಾತ್ಯ ನವನಾಗರಿಕತೆಯ ತೆರೆಗಳ ಅಲ್ಲೋಲಕಲ್ಲೋಲವು ಹಿಂದೂಸ್ಥಾನವನ್ನು ಆವರಿಸಿಕೊಂಡಿರುವವು. ಈ ನಾಗರಿಕತೆಯಿಂದ ನಮಗೆ ಬೇಕಾದಂಶಗಳನ್ನೊಳಗೊಂಡು ನಮ್ಮ ಪ್ರಸಿದ್ಧ ಪುರಾತನ ನಾಗರಿಕತೆ ಜ್ಯೋತಿಯ ಪ್ರಕಾಶದಿಂದ ನಮ್ಮನ್ನು ನಾವು ಕವಣಿಸಿಕೊಳ್ಳಬೇಕಾಗಿರುವುದು.

ಪಾಶ್ಚಾತ್ಯ ದೇಶಗಳ ಕ್ರೈಸ್ತಮಿಶನರಿಗಳು ಎಷ್ಟು ಸಾಹಸಕೊಂಡರೂ ಉಚ್ಚ ಜಾತಿಯವರು ಕ್ರೈಸ್ತಮತಾವಲಂಬಿಗಳಾಗಿ ದೊರಿಯುವುದು ಬಹಳ ಅಪರೂಪ. ಇವರ ಮಿಶನಿನ ಅಭಿವೃದ್ಧಿಯು ಹಿಂದೂಸ್ಥಾನದ ಕೀಳು ಜಾತಿಯವರನ್ನು ಕ್ರೈಸ್ತ ಮತಕ್ಕೆ ಕೂಡಿಸುವುದರಲ್ಲಿ ಮಾತ್ರವಿರುವುದು. ಈ ಕೀಳು ಜಾತಿಯ ಅಭಿವೃದ್ಧಿಯನ್ನು ಕೈಕೊಂಡು ಮಿಶನರಿಗಳು ತಮ್ಮ ಮತ ಪ್ರತಿಪಾದನೆ ಬಗ್ಗೆ ತಮ್ಮ ತನುಮನಧನಗಳನ್ನರ್ಪಿಸುವಂತೆ ನಾವೂ ತ್ಯಾಗಶೀಲತೆಯನ್ನು ಕೈಕೊಳ್ಳಬೇಕಾಗಿರುವುದು. ಪ್ರತಿ ವರುಷವೂ ಬಲಹೀನಗೊಳ್ಳುವ ನಮ್ಮ ಈ ಹಿಂದೂ ಸಮಾಜದ ದೀನ ಸ್ಥಿತಿಗೆ ನಾವು ಇನ್ನು ಗಮನ ಕೊಡದಿದ್ದರೆ ಈ ನಮ್ಮ ಅಭಾವದಿಂದ ನಮ್ಮ ಸಮಾಜಕ್ಕೆ ಹೆಚ್ಚಿನ ಅಪತ್ತು ಉಂಟಾಗುವದರಲ್ಲಿ ಸಂದೇಹವಿಲ್ಲ.

ಒಬ್ಬ ಸಮಾಜಕ್ಷೇಮಾಭಿಲಾಷಿ.

~~~~~~

೨.

ಪಾಣೆಮಂಗಳೂರು

ತಾ. 1—11—09.

ಸ್ವಾಮಿ,

ನನ್ನ ಚಿಕ್ಕದೊಂದು ಬಿನ್ನಪವನ್ನು ಪ್ರೀತಿ ಇಟ್ಟು ತಮ್ಮ ಪತ್ರದಲ್ಲಿ ಮುದ್ರಿಸಬೇಕಾಗಿ ಅಪೇಕ್ಷಿಸುತ್ತೇನೆ.

ತಮ್ಮ ಪತ್ರಿಕೆಯ ಒಂದೆರಡು ತಿಂಗಳಿನ ಹಿಂದಿನ ಸಂಚಿಕೆಗಳಲ್ಲಿ ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈಗಳವರ ಗೌಡಸಾರಸ್ವತ ಬ್ರಾಹ್ಮಣ ಮೆಮೋರಿಯಲ್ ಫಂಡಿನ ಬಗ್ಗೆ ಮಂಗಳೂರಿನಲ್ಲಿ ದ್ರವ್ಯ ಸಹಾಯವನ್ನು ಕೊಡುವರೆ ವಾಗ್ದತ್ತ ಮಾಡಿರುವವರ ಹೆಸರುಗಳನ್ನು ಮೊಬಲಗಿನ ಸಮೇತ ಪ್ರಕಟಿಸಿದ್ದಿರಿ. ಮಂಜೇಶ್ವರದ ಒಬ್ಬಿಬ್ಬರ ಹೆಸರುಗಳನ್ನು ಈ ಪಟ್ಟಿಯಲ್ಲಿ ನೋಡಿದ್ದಲ್ಲದೆ ಈ ತನಕ ಯಾವ ಊರಿನವರ ಪ್ರಸ್ತಾಪವೂ ಇಲ್ಲ. ಈ ಫಂಡಿನ ಕಮಿಟಿ ಗ್ರಹಸ್ಥರಲ್ಲಿ ಕೆಲವರು ದಕ್ಷಿಣ ಕನ್ನಡದ ಎಲ್ಲಾ ಊರುಗಳಿಗೆ ಚಂದಾ ಹಣವನ್ನು ಕೂಡಿಸುವರೆ ಬರುವರಾಗಿ ಸಹಾ ತಮ್ಮ ಪತ್ರಿಕೆಯ ಒಂದಾನೊಂದು ಸಂಚಿಕೆಯಿಂದ ತಿಳಿಯಬಂದಿತ್ತು. ಯಾವ ಯಾವ ಊರುಗಳಿಗೆ ಹೋಗಿ ಎಷ್ಟರ ಮಟ್ಟಿಗೆ ಫಂಡಿಗೆ ವಂತಿಕೆಯನ್ನು ಕೂಡಿಸಿರುವರೆಂಬದನ್ನು ಕೇಳಲು ಕುತೂಹಲವುಳ್ಳವರಾಗಿರುವೆವಲ್ಲದೆ ನಮ್ಮತ್ತಕಡೆ ಯಾವಾಗ ಪ್ರಯಾಣ ಬೆಳಿಸುವರಾಗಿ ತಿಳಿಯಲಪೇಕ್ಷಿಸುತೇನೆ.

ನಮ್ಮ ಪೇಟೆಯು ಚಿಕ್ಕದಾಗಿದ್ದರೂ ತಮ್ಮ ತಮ್ಮ ಶಕ್ತ್ಯಾನುಸಾರ ಈ ಫಂಡಿಗೆ ವಂತಿಗೆ ಕೊಡಲು ಪೇಟೆಯವರು ಸಿದ್ಧವಿರುವರಾಗಿ ತೋರುತ್ತದೆ. ನಮ್ಮ ಪೇಟೆಯ ಮಾಲಿಕರಾದ ಕೊಳ್ಕೇರೆ ಪ್ರಭುಗಳವರ ಮನೆಯವರು ತಮ್ಮ ಆಡಳಿತೆದಾರ ಮ। ರಾ। ರಾ। ರಾಮನಾಯ್ಕರವರ ಮುಖಾಂತರ ಪೈಗಳವರು ಮರಣಪಟ್ಟ ೧೩ನೇ ದಿನದಲ್ಲಿ ರಾತ್ರಿ ಪೂಜೆಯನ್ನೂ ತಮ್ಮ ಛತ್ರದಲ್ಲಿ ಬಡ ಬಗ್ಗರಿಗೆ ಹೇರಳವಾಗಿ ಅಕ್ಕಿ ಮೊದಲಾದವುಗಳನ್ನೂ ಕೊಟ್ಟು ವಿಶೇಷ ರೀತಿಯಲ್ಲಿ ಖರ್ಚುಮಾಡಿದ್ದಲ್ಲದೆ ಮೆಮೋರಿಯಲ್ ಫಂಡಿಗೆ ಸಹಾ ರೂ. ೫೦೦ ಕ್ಕೆ ಕಡಿಮೆಯಾಗದ ಮೊಬಲಗನ್ನು ಕೊಡುವರೆ ಸಿದ್ಧವಿರುವರೆಬಂದಾಗಿ ಕೇಳುತ್ತೇನೆ. ದಾನಧರ್ಮಗಳನ್ನು ಸಂದರ್ಭಾನುಸಾರ ಮಾಡುವ ಕೊಳ್ಕೆರೆ ಮನೆಯವರ ಈ ಔದಾರ್ಯವು ಶ್ಲಾಘನೀಯವಾಗಿರುವುದು.

ಇತ್ತಲಾಗೆ ಮೃತಪಟ್ಟಿರುವ ಮಂಗಳೂರು ರಾಮಚಂದ್ರಯ್ಯರವರ [illegible] ರ್ಥವಾಗಿ ಪಾಣೆಮಂಗಳೂರು ಪೇಟೆಯಲ್ಲಿ ಅಕ್ಕಿ ಮೊದಲಾದವುಗಳನ್ನು ಬಡ ಬಗ್ಗರಿಗೆ ಹುಟ್ಟಿದ್ದ ಶ್ರೀ ದೇವಸ್ಥಾನದಲ್ಲಿ ಸಂತರ್ಪಣೆ ಪೂಜೆ ಮೊದಲಾದವುಗಳನ್ನು ಸಹಾ ಮಾಡಿರುವರು. ಹೀಗೆ ಪೇಟೆಯು ಚಿಕ್ಕದ್ದಾದರೂ ತಮ್ಮ ಯಥಾನುಶಕ್ತಿ ಯಾವ ಒಳ್ಳೇ ವಿಷಯಗಳಲ್ಲಾಗಲೀ ಸೇವೆಮಾಡಲಿಕ್ಕೆ ಪೇಟೆಯವರು ಸಿದ್ಧವಿರುವರು. ಮುಖ್ಯವಾಗಿ ಸುಬ್ರಾವ್ ಮೆಮೋರಿಯಲ್ ಫಂಡಿನ ಮುಂದಿನ ವಿವರಗಳನ್ನು ತಮ್ಮ ಪತ್ರ ಮುಖಾಂತರ ತಿಳಿಸಬೇಕಾಗಿ ನನ್ನ ಪ್ರಾರ್ಥನೆ.

ಇಂತಿ ನಮಸ್ಕಾರ.

ಪಾಣೆಮಂಗಳೂರು ನಿವಾಸಿ.

———o———

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಸಂ. 1909ನೇ ಇಸವಿ ಸ್ಮಾಲ ನಂಬ್ರ 1286 S. I. A. 233/09.

1 ಗುಲಾಂ ಮೊಯಿದಿನ ಬ್ಯಾರಿ
2 ಅಬ್ಬು ಬ್ಯಾರಿ
3 ಹಾಜಿ ಬ್ಯಾರಿ
4 ಮಾಂಬ್ಯಾರಿ
} ವಾದಿರು. ಅರ್ಜಿದಾರರು.

ಮತ್ತು

1 ಅಲಿ ಬ್ಯಾರಿ
2 ಹಾಜಿ ಬ್ಯಾರಿ
3 ಪಕೀರ ಬ್ಯಾರಿ
} ಪ್ರತಿವಾದಿರು. ರೆಸ್ಪಾಂಡೆಂಟರು.

ಸ್ಮಾಲ ನಂಬ್ರ 1289/09 S. I. A. 234/09

ಸದರಿ ಗುಲಾಂಮೊಯಿದಿನ ಬ್ಯಾರಿ ಕೂಡಾ 4 ಜನರು ವಾದಿರು ಅರ್ಜಿದಾರರು, ಮತ್ತು 1 ಜಕ್ರಿಬ್ಯಾರಿ 2 ಅಬ್ಬುಬ್ಯಾರಿ 3 ಅವ್ವಬ್ಯಾರಿ ಪ್ರತಿವಾದಿರು, ರೆಸ್ಪಾಂಡೆಂಟರು,

ಸ್ಮಾಲ ನಂಬ್ರ 1290/09 S. I. A. 230/09

ಸದರಿ ಗುಲಾಂ ಮೊಯಿದಿನೆ ಬ್ಯಾರಿ ಕೂಡಾ 4 ಜನರು ವಾದಿರು; ಅರ್ಜಿದಾರರು,

ಮತ್ತು

1 ಕುಂಞಾಲಿ ಬ್ಯಾರಿ
2 ಅವಲಬ್ಯಾರಿ
3 ಹಾಜಿ ಬ್ಯಾರಿ
} ಪ್ರತಿವಾದಿರು, ರೆಸ್ಪಾಂಡೆಂಟರು.

ಸ್ಮಾಲ ನಂಬ್ರ 1291/09 S. I. A. 231/09

ಸದರಿ ಗುಲಾಂ ಮೊಯಿದಿನೆ ಬ್ಯಾರಿ ಕೂಡಾ 4 ಜನರು ವಾದಿರು; ಅರ್ಜಿದಾರರು,

ಮತ್ತು

1 ಅವಂದಾರ ಬ್ಯಾರಿ
2 ಹಾಜಿ ಯೂನೆ ಅಬ್ದುಲಖಾದ್ರಿ ಬ್ಯಾರಿ
3 ಹುಸನೆ ಬ್ಯಾರಿ
} ಪ್ರತಿವಾದಿರು ರೆಸ್ಪಾಂಡೆಂಟರು.

ಸ್ಮಾಲ ನಂಬ್ರ 1292/09 S. I. A. 232/09

ಸದರಿ ಗುಲಾಂ ಮೊಯಿದಿನೆ ಬ್ಯಾರಿ ಕೂಡಾ 4 ಜನರು ವಾದಿರು; ಅರ್ಜಿದಾರರು,

ಮತ್ತು

1 ಇದ್ದಿನೆ
2 ಆಸನೆಬ್ಯಾರಿ
3 ಕುಂಞಾಂಬ್ಯಾರಿ
4 ಕಾಟು ಬ್ಯಾರಿ
} ಪ್ರತಿವಾದಿರು, ರೆಸ್ಪಾಂಡೆಂಟರು.

ಸದರಿ ಪ್ರತಿವಾದಿಯರಿಂದ ನೋಟುಗಳ ಬಾಬ್ತು ಪಣಂಬೂರು ಕಸಬಾ ಗ್ರಾಮದ ಜುಂಮಾಮಸಜೀದಿ ಭಂಡಾರಕ್ಕೆ ಬರತಕ್ಕ ಹಣಗಳ ಬಗ್ಗೆ ಸದರಿ ಪಳ್ಳಿಯ ಹತ್ತು ಸಮಸ್ತರ ಕಡೆಯಿಂದ ಸದರಿ ಪ್ರತಿವಾದಿಯರ ಮೇಲೆ ದಾವೆಗಳನ್ನು ಮಾಡುವರೆ ಆ ಪಳ್ಳಿಯ ಆಡಳಿತೆದಾರರಾದ ತಮಗೆ ಪರ್ಮಿಶನ್ ಕೊಡಬೇಕೆಂತ ಸದರಿ ವಾದಿಯರು ಅರ್ಜಿಗಳನ್ನು ಈ ಕೋರ್ಟಿನಲ್ಲಿ ಕೊಟ್ಟಿರುತ್ತಾರೆ. ಸದರಿ ಅರ್ಜಿಗಳ ಕುರಿತು ಆಕ್ಷೇಪಣೆ ಉಳ್ಳವರು 1909 ನೇ ಇಸವಿ ನವಂಬರ ತಾ. 22 ನೇ ಹಗಲು ಘಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳುವದು.

1909 ನೇ ಇಸವಿ ಅಕ್ಟೋಬರ ತಿಂಗಳು ತಾ. 29ರಲ್ಲು ಕೋರ್ಟು ಮೊಹರನಿ ನನ್ನ ದಸ್ಕತೊಡನೆ ಕೊಡಲ್ಪಟ್ಟಿದೆ.

B. Krishna Rau,

District Munsif.

Date 3—11—09.
~~~~~~

ವಿದೇಶ ವೃತ್ತಾಂತ

ರುಶ್ಯದ ಫಿನೆನ್ಸ್ ಮಂತ್ರಿಯಾದ ಎಮ್. ಕೊಕೊವ ಟ್ಸ್ಟೋರವರನ್ನು ಭೇಟಿ ಮಾಡುವ ವೇಳೆ ಕೊರಿಯಾದಲ್ಲಿ ಜಪಾನ ದೇಶದ ಮಂತ್ರಿಯಾಗಿದ್ದ ಪ್ರಿನ್ಸ ಐಟೋರವರನ್ನು ಒಬ್ಬ ಕೊಲೆಪಾತಕಿಯು ಕೊಂದಿರುವನೆಂಬ ವರ್ತಮಾನವು ಟೋಕಿಯಾಯಿಂದ ತಿಳಿಸಲ್ಪಟ್ಟಿರುವುದು. ಇವರ ಹತ್ತಿರವಿದ್ದ ಕೆಲವು ಜಪಾನ ಆಫೀಸರರು ಸಹಾ ಘಾಯ ಪಡೆದಿರುವರು. ರುಶ್ಯದ ಫಿನೆನ್ಸ್ ಮಂತ್ರಿ ಕೊಕೊವ ಟ್ಸ್ಟೋರವರು ದೈವಯೋಗದಿಂದಲೇ ಕೊಲೆಪಾತಕಿಯ ಕೈಯಿಂದ ಉಳಿಸಲ್ಪಟ್ಟರು. ಕೊರಿಯದ ಜನರ ಹಿಂಸಕನೂ ತನ್ನ ಬಂಧು ಜನಗಳನ್ನೆಲ್ಲ ಗಲ್ಲಕ್ಕೆ ಹಾಕಿಸಿದ ಅಂತಕನೂ ಆದ್ದರಿಂದ ಪ್ರಿನ್ಸ್ ಐಟೋರವರ ಮೇಲೆ ಈ ರೀತಿ ಪ್ರತಿ ಕ್ರಿಯೆ ನಡಿಸಿರುವೆನೆಂಬದಾಗಿ ಕೈದಿಯು ವಾಜ್ಞ್ಮೂಲ ಕೊಟ್ಟಿರುವನಂತೆ.

ಐಟೋ ಪ್ರಭುಗಳು ಜಪಾನಿನ ಮಂತ್ರಿ ಕೆಲಸವನ್ನು ಐದಾರು ಸಾರಿ ನಿರ್ವಹಿಸಿಕೊಂಡಿದ್ದರು. ಜಪಾನಿನ ಪ್ರಖ್ಯಾತ ರಾಜತಂತ್ರ ವಿಶಾರದರಲ್ಲಿ ಸರ್ವೋ[illegible]ರಾಗಿದ್ದರು. ಇವರ ಸೂಚನೆಯ [illegible] ಪ್ರಥಮದಲ್ಲಿ ಯುರೋಪ [illegible] ಏರ್ಪಡಿಸಲ್ಪಟ್ಟಿತ್ತು. ಯುರೋಪಿಗೆ ಹೋಗಿ ಮುಖ್ಯವಾದ ದೇಶಗಳ ರಾಜ್ಯಭಾರ ರಚನೆಯ ಪರಿಸ್ಥಿತಿಯನ್ನು ತಿಳಿಕೊಂಡು ಬಂದು ಜಪಾನಿನ [illegible] ಉದಾರ ಪಕ್ಷದವರ ನಾಯಕರಾಗಿದ್ದರು. [illegible] ಗೆ ಒಲಿದೀಳುವಾಗ ಇವರಿಗೆ [illegible] ವರುಷ ಪ್ರಾಯ ವಾಗಿತ್ತು.

~~~

ಹಿಂದೂಸ್ಥಾನದಲ್ಲಿ ಇತ್ತಲಾಗೆ [illegible] ಜೀವ ವಿಮೆ ಕಂಪೆನಿಗಳ ಸಂಖ್ಯೆ [illegible] ರುವ [illegible] ಕ್ಕೆ ಬ್ರಿಟಿಷ್ ಪಾರ್ಲಿಮೆಂಟಿನ [illegible] ಹುತ್ತಿರುವರು. ಜೀವ ವಿಮೆ ಸಂಘಗಳ ಮೇಲೆ ಸರಕಾರದವರಿಗೆ ಹಿಂದುಸ್ಥಾನದಲ್ಲಿ [illegible] ರುವುದು, ಇಂತಹ ಕಂಪೆನಿಯವರು ತನ್ನ ಮೂಲ ದ[illegible] ವನ್ನು ಸರಕಾರದ ಭದ್ರತಾ ಪತ್ರಗಳಲ್ಲಿ [illegible] ಗಿರುವುದು ಆವಶ್ಯವಲ್ಲವೋ [illegible] ಕುರಿತು ಹಿಂದೂಸ್ಥಾನದ ಅಂಡರ್ ಸೆಕ್ರೆಟರಿಯನ್ನು ಕೇಳಿಕೊಳ್ಳಲಾಯಿತು. ಜೀವ ವಿಮೆ ಸಂಘಗಳ [illegible] ವಿಷಯವನ್ನು ಸೆಕ್ರೆಟರಿ ಆಫ್ ಸ್ಟೇಟ್ [illegible] ಕೊಂಡಿರುವರೆಂತಲೂ, ಪ್ರಕೃತ ವಿಮೆ ಸಂಸ್ಥೆ [illegible] ಕಂಪೆನಿ ಆಕ್ಟಿನನುಗುಣವಾಗಿರುವದೆಂದೂ ವಿಮೆ ಸಂಘಗಳ ಭದ್ರತೆ ಬಗ್ಗೆ ಪ್ರಕೃತ ಇಂಗ್ಲಾಂಡಿನಲ್ಲಿ [illegible] ರುವ ನಿಯಮಗಳಂಥಾ ಕಾನೂನುಗಳನ್ನು ಹಿಂದುಸ್ಥಾನದಲ್ಲಿ ಏರ್ಪಡಿಸಲು ಇಂಡಿಯಾ ಸರಕಾರದವರು [illegible] ಚಿಸುತ್ತಿರುವರೆಂಬದಾಗಿಯೂ ಅಂಡರ್ ಸೆಕ್ರೆಟರಿಯವರು ಉತ್ತರ ಕೊಡುವವರಾದರು.

~~~

ಬ್ರ್ಯಾಂಡಿ ಯಾ ಶರಾಬಿಗೆ ಇತರ ಮಾದಕ ವಸ್ತುಗಳನ್ನು ಸೇರಿಸಿ ವಿಪರೀತ ಹಣವನ್ನು ಗಳಿಸಿಕೊಳ್ಳ ಬೇಕೆಂಬ ಒಬ್ಬ ಶರಾಬು ತಯ್ಯಾರಿಸುವವನ ಆತ್ಯಾಶೆಯಿಂದ ಅನೇಕ ಪ್ರಾಣಹಾನಿಯು ಉಂಟಾಗಿರುವದೆಂಬದಾಗಿ ವಿಯನ್ನಾ ಎಂಬಲ್ಲಿಂದ ತಿಳಿದು ಬರುತ್ತದೆ. ಈ ಶರಾಬನ್ನು ಕುಡಿದ ೫೪ ಜನರು ಮೃತಪಟ್ಟಿರುವರು. ಇನ್ನು [illegible] ಜನರು ಈ ಶರಾಬನ್ನು ಕುಡಿದ್ದರಿಂದ ಸದ್ಯದಲ್ಲಿ ಸಾಯುವಂತಿರುವರು. ಇವರನ್ನುಳಿಸುವ ಎಲ್ಲಾ ಪ್ರಯತ್ನಗಳು ನಿರರ್ಥಕವಾಗಿರುವುವಂತೆ. ಶರಾಬನ್ನು ತಯ್ಯಾರಿಸಿದವರನ್ನು ಕೈದು ಮಾಡುವರೆ ವಾರಾಂಟು ಕೊಟ್ಟಿರುವುದಾದರೂ, ಈತನು ಎಲ್ಲಿಯೋ ಫರಾರಿಯಾಗಿರುವನು.

~~~

'ಪಾಯನೀಯರ್' ಎಂಬ ಆಂಗ್ಲೇಯ ಪತ್ರಕ್ಕೆ ಲಂಡನ್ ಪಟ್ಟಣದ ಒಬ್ಬ ಬಾತ್ಮೀದಾರರು ಈ ಕೆಳಗಿನ ಸಮಾಚಾರವನ್ನು ತಂತೀ ಮೂಲಕ ತಿಳಿಸಿರುವರು. 'ಡೈಲಿ ಎಕ್ಸ್‌ಪ್ರೆಸ್' ಎಂಬ ಲಂಡನ್ ಪತ್ರದ ಮೇಲೆ ಲಾಲಾಲಾಜಪತರೈಯವರು ತಂದ ಮಾನ ನಷ್ಟದ ದಾವೆಯು [illegible] ನದಲ್ಲಿ ಲಂಡನ್ ಜಡ್ಜರವರು, ಲಾಲಾಲಾಜಪತರೈಯವರನ್ನು ಗಡಿಪಾರು ಮಾಡಿದ್ದರಿಂದ 'ಡೈಲಿ ಎಕ್ಸ್‌ಪ್ರೆಸ್' ಪತ್ರವು ಲಾಲಾಲಾಜಪತರೈಗಳವರಿಗೆ ತೆರಬೇಕಾದ ನಷ್ಟವು ಕಡಿಮೆಯಾಗಲು ಕಾರಣವಾಯಿತೆಂತ ಬರದಿರುವುದರಿಂದಲೂ, ಸರಕಾರದವರು ಗಡಿಪಾರಿನ ಕಾರಣಗಳನ್ನಾಗಲೀ ಅಥವಾ ತಾನು ಅಪರಾಧಿ ಅಲ್ಲ ಎಂಬುವುದನ್ನು ರುಜುಪಡಿಸಲು ಸಂದರ್ಭವನ್ನು ಲಾಲಾಲಾಜಪತರೈಯವರಿಗೆ ಕೊಡದ್ದರಿಂದಲೂ, ಲಾಲಾಲಾಜಪತರೈಯವರಿಗೆ ಆದ ಅನ್ಯಾಯವನ್ನು ಯಾವದೊಂದು ವಿಧದಲ್ಲಿಯಾದರೂ, [illegible] ಸಲು ನೋಡುವರೋ ಎಂತ ಮೇ [illegible] ರವರು ಮಾಸ್ಟರ್ ಓಫ್ ಎಲಿಬೆಂಕರವರನ್ನು ಕೇಳಿಕೊಂಡರು. ಮಾಸ್ಟರ್ ಓಫ್ ಎಲಿಬೆಂಕರವರು ಇಂಥಾ ಪರಿಹಾರಕ್ಕೆ ತನಗೆ ಗೊತ್ತಿರುವ ಯಾವ ಕಾರಣಗಳೂ ಇಲ್ಲವೆಂಬದಾಗಿ ಉತ್ತರ ಕೊಟ್ಟರು.

~~~

ಮುಂಚಿನ [illegible] ಕಾರಣಗಳಿಂದ ತಮ್ಮ ಕಾರಖಾನೆಗಳಲ್ಲಿ ಕೆಲಸದ [illegible] ತಿಂಗಳಲ್ಲಿ ಅಂತ್ಯವಾಗುವ ನಾಲ್ಕು ವಾರ [illegible] ಕಡಿಮೆ ಮಾಡಿ ಕೆಲಸ ನಡಸಬೇಕಾಗಿ [illegible] ಪ್ರಾಯಪಟ್ಟಿರುವರು.

~~~

[illegible] ಪ್ರತಿ [illegible] ಕ್ರೈಸ್ತ [illegible] ಸಮಯ [illegible] ಕೆಂಟರ್‌ಬರಿಯ ಆರ್ಚ್‌ಬಿಶೋಪರವರೂ, ಮಿ. ರೋಸವೆಲ್ಟರವರೂ, ಜನರಲ್ ಪ್ರಭುಗಳು ಮೊದಲಾದ ಅನೇಕ ಕ್ರೈಸ್ತ ದೇವಾಲಯದ ಶ್ರೀಮಂತ ಮತ್ತು ವಿದ್ವಾನ್ ಪ್ರತಿನಿಧಿಗಳು ಈ ಸ[illegible] ಈ ಸಮಯ [illegible] ಕೆಲಸವು [illegible] ನ್ನು ಸ್ವೀಕರಿಸುವುದಲ್ಲದೆ 'ನೇಟಿವ್' [illegible] ವಿಷಯಕ್ಕೆ ಸಹಾ ತಕ್ಕ [illegible] ಸರು.

~~~

ಉತ್ತರ ಹಿಂದುಸ್ಥಾನ

[illegible] ಕೆಲವು ದೇಶಗಳಲ್ಲಿ ವೈದ್ಯ [illegible] ರೊಡನೆ [illegible] ಸರಕಾರದವರ ಮೊರತು ಇತರರು ಅ[illegible] ಮೆಡಿಕಲ್ [illegible] ಬ್ಯಾರಿಯಲ್ಲಿ [illegible] ಮೆಡಿಕಲ್ ಕೊಲೇಜು [illegible] ವೈದ್ಯಶಾಸ್ತ್ರ [illegible] ಹಿಂದುಸ್ಥಾನದಲ್ಲಿ [illegible] ವಾಗಿರುವದೆಂತ [illegible] ವಿದ್ಯಾ ಕೊಲೇಜುಗಳಿಂದ [illegible] ಯೋಗ್ಯ ವೈದ್ಯಸಂಘದವ [illegible] ಸರ್ಟಿಫಿಕೇಟುಗಳ ಬಗ್ಗೆ [illegible] ಬ್ಯಾರಿಗೆ ತರುವುದು ಹಿಂದೂಸ್ಥಾನ [illegible] ಆಭಿಪ್ರಾಯಪಡುತ್ತಾರೆ. ಕಾನೂನು [illegible] ಸರ್ಟಿಫಿಕೇಟು [illegible] ಈ ಬಗ್ಗೆ ಏರ್ಪಡಿಸಲ್ಪಡುವ ಒಂದು ಕಮಿಟಿಯವರಿಂದ ರಜಿಸ್ಟ್ರಿ ಮಾಡಲ್ಪಡುವುದು. ಕಮಿಟಿಗೆ [illegible] ನ ಮೆಂಬರರನ್ನು ಚುನಾಯಿಸ ಬೇಕು. ಇದರಲ್ಲಿ [illegible] ಜನರು ಸರಕಾರ ಕಡೆಯಿಂದ ಹಿಂದೂಸ್ಥಾನದ ಪ್ರತಿಯೊಂದು ಸಂಸ್ಥಾನದ ಯುನಿವರ್ಸಿಟಿಯ ಸರ್ವ ವಿದ್ಯಾಲಯದ ಕಡೆಯಿಂದ ಒಬ್ಬೊಬ್ಬ ಮೆಂಬರರು, ಹೆಸರುಗಳು ರಿಜಿಸ್ಟ್ರಿ ಮಾಡಲ್ಪಟ್ಟ ಮದ್ರಾಸು, ಕಲ್ಕತ್ತಾ, ಮುಂಬಯಿಯ ಹಿಂದೂಸ್ಥಾನದ ಎಲ್ಲಾ ಡಾಕ್ಟರರುಗಳ ಕಡೆಯಿಂದ ಇಬ್ಬರು ಈ ಮೇರೆಗೆ ಹಿಂದೂಸ್ಥಾನದ ಇತರ ಸಂಸ್ಥಾನಗಳಿಂದ ಮೆಂಬರರನ್ನು ಚುನಾಯಿಸಬೇಕು. ಹೀಗೆ ಚುನಾಯಿಸಲ್ಪಟ್ಟು ಏರ್ಪಡುವ ಕಮಿಟಿಗೆ ಬೇಕಾದ ಅಧಿಕಾರವನ್ನು ಕೊಡುವುದು.

ಇಂಥಾ ಏರ್ಪಾಡು ವೈದ್ಯಗಾರಿಕೆಯಲ್ಲಿ ಮಾಡಿದ್ದಲ್ಲಿ ಪ್ರಜೆಗಳಿಗೆ ಹೆಚ್ಚಿನ ಪ್ರಯೋಜನಗಳುಂಟಾಗುವದೆಂಬದು ನಿಶ್ಚಯ. ಆದರೆ ಯುನಾನಿ ಮತ್ತು ಆಯುರ್ವೇದೀಯ [illegible] ಔಷಧಿಗಳಲ್ಲಿ ಜನರಿಗೆ ಹೆಚ್ಚಿನ ವಿಶ್ವಾಸವಿರುವುದರಿಂದ, ಈ ಏರ್ಪಾಡನ್ನು ಜ್ಯಾರಿಗೆ ತರುವ ಮೊದಲು ಈಗಿನ ಸರಕಾರದ ವೈದ್ಯ ವಿದ್ಯಾ ಕೊಲೇಜುಗಳಲ್ಲಿ ಆಯುರ್ವೇದ ಮತ್ತು ಯುನಾನಿ ಔಷಧಿಗಳ ಶಿಕ್ಷಣವು ದೊರೆಯುವಂತೆ ತಕ್ಕ ತಿದ್ದುಪಾಟು ಮಾಡಬೇಕಾಗಿ ನಾವು ಸರಕಾರದವರನ್ನು ಕೇಳಿಕೊಳ್ಳಬೇಕಾಗುವುದು.

~~~

ಮುಂಬಯಿ ಸಂಸ್ಥಾನದ ಗವರ್ನರರವರು ಪ್ರೈಮರಿ ವಿದ್ಯಾಶಾಲೆಗಳ ಉಪಾಧ್ಯಾಯರುಗಳ ತಿಂಗಳುಗಟ್ಟಲೆ ವೇತನವನ್ನು ಹೆಚ್ಚಿಸುವ ಏರ್ಪಾಡನ್ನು ಸ್ವೀಕರಿಸಿರುವರು. ೫ ಯಾ ಹೆಚ್ಚು ವರುಷದಿಂದ ಕೆಲಸ ನೋಡುತ್ತಿರುವ ಟ್ರೈನ್ ಆದ ಉಪಾಧ್ಯಾಯರುಗಳಿಗೆ ತಿಂಗಳಿಗೆ ೧೦ ರಂತೆಯೂ ಎಲ್ಲಾ ಟ್ರೈನಾದ ಹೆಡ್‌ಮಾಸ್ತರುಗಳ ಸಂಬಳವು ೧೫ ರೂಪಾಯಿಗಳಿಗಿಂತ ಕಡಿಮೆಯಾಗಬಾರದೆಂತಲೂ, ಎಲ್ಲಾ ಸಹಾಯಕ ಉಪಾಧ್ಯಾಯರುಗಳ ಸಂಬಳವು ರೂ ೧೧ಕ್ಕೆ ಕಡಿಮೆಯಾಗದಂತೆಯೂ ಟ್ರೈನ್ ಆಗದ ಹೆಡ್‌ಮಾಸ್ತರುಗಳಿಗೆ ರೂ ೧೦ರಕ್ಕಿಂತ ಕಡಿಮೆಯಾಗದಂತೆ ಸಂಬಳವನ್ನು ಹೆಚ್ಚಿಸಿಕೊಡಬೇಕಾಗಿಯೂ, ಸಿಂದಿನಲ್ಲಿ ಟ್ರೈನ್ ಆಗದೆ ಇತರ ಯೋಗ್ಯತೆಯುಳ್ಳ ಉಪಾಧ್ಯಾಯರುಗಳಿಗೆ ೧೦ ರಕ್ಕಿಂತ ಕಡಿಮೆ ಯಾ ೧೫ಕ್ಕೆ ಮೀರದ ಸಂಬಳವನ್ನು ಕೊಡಬೇಕಾಗಿಯೂ ಏರ್ಪಡಿಸಿರುವರು. ಈ ಏರ್ಪಾಡಿಗೆ $1\frac{1}{2}$ ಲಕ್ಷ ರೂಪಾಯಿಗೆ ಬೇಕಾಗಿರುವುದು. ಮೂರು ವರುಷಗಳ ತನಕ ಈ ಎಲ್ಲಾ ಖರ್ಚನ್ನು ಗವರ್ನಮೆಂಟಿನವರೇ ವಹಿಸಿಕೊಳ್ಳುವರು. ಮೂರು ವರುಷದನಂತರ ಆಯಾ ಲೋಕಲ್‌ಫಂಡಿನವರೂ ಮುನಿಸಿಪಾಲಿಟಿಗಳೂ ಸಮ ಅರ್ಧಪಾಲು ಖರ್ಚನ್ನು ವಹಿಸಿ ಕೊಳ್ಳಬೇಕಾಗಿರುವುದು.

~~~

ಕಳೆದ ತಿಂಗಳ ತಾ [illegible] ಕ್ಕೆ ಅಂತ್ಯವಾಗುವ ವಾರದಲ್ಲಿ [illegible] ಪ್ಲೇಗು ಮರಣಗಳಿದ್ದವು. ಇವುಗಳಲ್ಲಿ ಮದ್ರಾಸು ಸಂಸ್ಥಾನಗಳಲ್ಲಿ ೧೫೩, ಮುಂಬಯಿ ೧೦೬೭ ಮಧ್ಯ ಹಿಂದೂಸ್ಥಾನ ೬೭೪, ಪಂಜಾಬು ೬೫೫, ರಾಜಪುತಾನ ೬೫೫, ಸಂಯುಕ್ತ ಸಂಸ್ಥಾನ ೬೩೮, ಮೈಸೂರು ೧೧೬, ಮದ್ರಾಸು ೧೫೧, ಬಂಗಾಳ ೫೦, ಬರ್ಮಾ ೧೬, ಮತ್ತು ಕಾಶ್ಮೀರ ೭.

~~~

ಕಲಕತ್ತೆಯಲ್ಲಿ ದರೋಡೆ ಕಳವುಗಳು ಬಹಳ ವಿಶೇಷವಾಗಿ ನಡೆಯುತ್ತಲಿವೆ. ಹಾಲುದ್ವಾರಿ ಪೇಟೆಯಲ್ಲಿ ದರೋಡೆ ಕಳ್ಳರು ಕೋವಿ ಮೊದಲಾದ ಆಯುಧಗಳನ್ನು ಧರಿಸಿಕೊಂಡು ಮನೆಯಿಂದ ಮನೆಗೆ ಹೋಗಿ ಬಲೋದ್ಬಂಧಿಯಿಂದ ಅನೇಕ ಸಾವಿರ ರೂಪಾಯಿಗಳ ಮೌಲ್ಯದ ಚಿಂದಿ[illegible] ಮೊದಲಾದವುಗಳನ್ನು ಕಳವು ಮಾಡಿರುವರಂತೆ. [illegible] ಮಾನ್ಯ ಕುಟುಂಬದ ಬಂಗಾಳಿಯುವಕರನ್ನು ಕೈದ[illegible] ಮಾಡಿರುವರು.

ಪರಿಪಪುರ ಜಿಲ್ಲೆಯ ದ್ವಾರಿಯಪುರ ಎಂಬಲ್ಲಿಯ ಪೋಲೀಸು ಇನ್ಸ್‌ಪೆಕ್ಟರ ಮನೆಯಲ್ಲಿ ದರೋಡೆ ಕಳ್ಳರು ಕಿಂಡಿ ಪಲ್ಲಟಿಸಿ ಪ್ರವೇಶಿಸಿ ರೂ ೨೫೦೦ ಕ್ರಯ ಬಾಳುವ ಆಭರಣ ಮೊದಲಾದವುಗಳನ್ನು ಕಳವು ಮಾಡಿರುವರು. ಪೋಲೀಸಿನವರು ಕಳವಿನ ತಲಾಸಿ ಬಗ್ಗೆ ಅನೇಕ ಜನ ವಕೀಲರ ಮನೆಗಳನ್ನು ಜಪ್ತಿ ಮಾಡುತ್ತಿರುವರಂತೆ.

~~~

ಮುಂಬಯಿ ಬೇಸಿನಿನಲ್ಲಿಯ ರೋಮನ್ ಕೆಥೊಲಿಕ್ ವಾಪಡಿ ದೇವಾಲಯದ "ವಿಕಾರ್" ಯಾ ಶ್ರೇಷ್ಠ ಪಾದರಿಯನ್ನು ಕೊಂದು ತುಂಡುತುಂಡು ಮಾಡಿ ಹಾಕಿರುವರೆಂಬ ಸಮಾಚಾರವನ್ನು ಹಿಂದಿನ ಒಂದು ಸಂಚಿಕೆಯಲ್ಲಿ ತಿಳಿಸಿದ್ದೆವು. ಆ ದೇವಾಲಯದ ಸಹಾಯಕ ಪಾದ್ರಿಯಾಗಿದ್ದ ಜೆ. ಬಿ. ಫೆರ್ನಾಂಡಿಸರೆಂಬವರನ್ನೂ ಒಬ್ಬ ಪೇದೆಯನ್ನೂ ಅಪರಾಧಿಗಳಾಗಿ ಕೈದುಮಾಡಿ ಮೊಕದ್ದಮೆಯು ತನಖಿ ಮಾಡಲ್ಪಟ್ಟು ಇತ್ತಲಾಗೆ ತೀರ್ಮಾನಿಸಲ್ಪಟ್ಟಿರುತ್ತದೆ. ತನಖಿ ನಡಿಸಿದ ಕೋರ್ಟಿನ ಥಾನಾ ಎಂಬಲ್ಲಿಯ ಸೆಶನ್ಸ್ ಜಡ್ಜರುಗಳು ಈ ಅಪರಾಧಿಗಳಿಗೆ ಮರಣದಂಡನೆಯನ್ನು ವಿಧಿಸಿರುವರು. ಈ ಮೊಕದ್ದಮೆಯಲ್ಲಿ [illegible]

ಮುಸಲ್ಮಾನ ಹಿಂದುಗಳೇ ಆಗಿದ್ದು ಮೂವರು ಸಹಾ ಅಪರಾಧಿಗಳು ಕೊಲೆಪಾತಕದ ತಪ್ಪಿತಸ್ಥರಾಗಿರುವರೆಂದು ಅಭಿಪ್ರಾಯವನ್ನು ಕೊಟ್ಟಿರುವರು.

ಬಂಗಾಳದಲ್ಲಿ ಇತ್ತಲಾಗೆ ಸಂಭವಿಸಿದ ಬಿರುಘಾಳಿಯ ದೆಸೆಯಿಂದ ಉಂಟಾದ ಈ ಕೆಳಗಿನ ಸಮಾಚಾರವು ಎಲ್ಲರಲ್ಲಿಯೂ ಕನಿಕರವನ್ನುಂಟುಮಾಡದಿರದು. ಬಾಬು ವೀರೇಶ್ವರ ಸೇನ್ ಎಂಬ ಫರಿಡ್‌ಪುರದ ವಕೀಲರು ಕಳದ ತಿಂಗಳ ೧೭ನೇ ತಾರೀಖಿನ ದಿನ ಮಾದಾರಿಪುರ ಎಂಬ ತನ್ನ ಜನ್ಮಭೂಮಿಯಾದ ಹಳ್ಳಿಗೆ ರಾತ್ರಿಯಲ್ಲಿ ತನ್ನ ಹೆಂಡತಿ ವ ಎರಡು ಜನ ಚಿಕ್ಕ ಗಂಡುಮಕ್ಕಳೊಂದಿಗೆ ಒಂದು ದೋಣಿಯಲ್ಲಿ ಕುಳಿತು ನದೀಮಾರ್ಗವಾಗಿ ಹೋಗುತ್ತಲಿದ್ದರು. ಒಂದೆರಡು ತಾಸಿನ ತನಕ ಪ್ರಯಾಣ ಬೆಳಸಿದನಂತರ ಬಿರುಘಾಳಿಗೆ ಪ್ರಾರಂಭವಾಯಿತು. ಬಿರುಘಾಳಿಯು ಬಹಳ ಪ್ರಚಂಡವಾಗಿ ಬೀಸತೊಡಗಿದ್ದರಿಂದ ದೋಣಿಯು ನದಿಯಲ್ಲಿ ಮುಂದರಿಸುವುದು ಅಸಾಧ್ಯವಾಗಿ ಹತ್ತರವಿರುವ ಒಂದು ಸಣ್ಣ ನಿರ್ಜನವಾದ ಕುದುರು ಸ್ಥಳದಲ್ಲಿ ಇಳಿಯಬೇಕಾಯಿತು. ಪತಿಪತ್ನಿಯರೂ ಮಕ್ಕಳೂ ದೋಣಿಯಿಂದ ಕೆಳಗೆ ಇಳಿದಾಕ್ಷಣವೇ ದೋಣಿಗಾರನು ದೋಣಿಯಲ್ಲಿದ್ದ ವಕೀಲರ ಚಿನ್ನಾಭರಣಗಳನ್ನು ಹಿಡಕೊಂಡು ದೋಣಿಯನ್ನು ಓಡ್ಯಾಡಿಸಿ ಮಾಯಕವಾದನು. ಬಿರುಘಾಳಿಯಿಂದ ಆಶ್ರಯಹೊಂದಲಿಕ್ಕೆ ಯಾವ ಉಪಾಯವೂ ಇರಲಿಲ್ಲ. ಹ್ಯಾಗೂ ಬೆಳಗ್ಗಿನ ಝಾಮದವರೆಗೆ ಅಲ್ಲಿಯೇ ಇದ್ದುಕೊಂಡು ದೂರದಿಂದ ಹೋಗುತ್ತಿರುವ ಸ್ಟೀಮರನ್ನು ನೋಡಿ ಎಷ್ಟು ಬೊಬ್ಬಿಟ್ಟರೂ ಅದಕ್ಕೆ ಕೇಳಿಸದೆಹೋಯಿತು. ಈ ಕುದುರಿನಿಂದ ಹೋಗುವುದಕ್ಕೆ ಬೇರೇನೂ ಉಪಾಯವು ಎರಡು ದಿವಸಗಳ ತನಕ ದೊರಿಯದೆ ಹತ್ತಿರವಿದ್ದ ಚಿಕ್ಕ ಮಕ್ಕಳೆರಡು ಉಪವಾಸವಿದ್ದು ಸಾಯಬೇಕಾಯಿತು. ಮಕ್ಕಳನ್ನು ಕಳಕೊಂಡ ಗಂಡಹೆಂಡರೂ ಸಹಾ ಆಹಾರವಿಲ್ಲದೆ ಅರೆಜೀವದಿಂದಿರುವಾಗ ಒಬ್ಬ ಜಮೀನದಾರನ ದೋಣಿಯು ಇವರಿದ್ದಲ್ಲಿಗೆ ಬಂದು ಇವರನ್ನು ಜಮೀನ್ದಾರರ ಒಳಗೆ ತಕ್ಕೊಂಡು ಹೋಗಿ ಅಲ್ಲಿ ಬೇಕಾದ ಶೈತ್ಯೋಪಚಾರಗಳನ್ನು ಮಾಡಿದರು.

ವೈದ್ಯನಾಥ ಎಂಬ ಊರ ಹತ್ತರವಿರುವ ದಿಯೋಘರ್ ಎಂಬಲ್ಲಿ ಒಬ್ಬ ಸಾಧುವನ್ನು ಆತನ ಅಪೇಕ್ಷೆಮೇರಗೆ ಜೀವದಿಂದಿರುವಾಗಲೇ ಒಂದು ಘೋರಿಯಲ್ಲಿ ಹೂಣಿಟ್ಟಿದ್ದವರಂತೆ. ಘೋರಿಯ ಬಾಗಿಲನ್ನು ಮರದ ಹಲಿಗೆಗಳಿಂದ ಮುಚ್ಚಿ ಹಲಿಗೆಗಳ ಮೇಲೆ ಅರ್ಧ ಫೂಟ್ ಮಣ್ಣನ್ನು ಎತ್ತಿರುವರು. ಈ ತಿಂಗಳ ತಾ ೧೬ಕ್ಕೆ ಆ ಘೋರಿಯಿಂದ ಹೊರಗೆ ಬರುವೆನಾಗಿ ಈ ಸನ್ಯಾಸಿಯು ಹೇಳಿರುವನಂತೆ.

ವ್ಯಾಸರಾಯ ಪ್ರಭುಗಳು ಅಲ್ವಾರ ಪಟ್ಟಣವನ್ನು ಸಂದರ್ಶಿಸಿ ಜೈಪುರಕ್ಕೆ ಹೋಗಿ ಅಲ್ಲಿಂದ ಟೊಂಕ ಸಂಸ್ಥಾನಕ್ಕೆ ದಯಮಾಡಿ ಅಲ್ಲಿಯ ನವಾಬ ಸಾಹೇಬರಿಗೆ ಭೇಟಿ ಇತ್ತು ಪುನಹ ಜೈಪುರಕ್ಕೆ ಬಂದು ಅಲ್ಲಿಂದ ಚಿತ್ತೂರಿನಾಗಿ ಉದಯಪುರಕ್ಕೆ ಹೋಗುವರು.

ಅಲಿಪುರದ ಬೊಂಬ ಮೊಕದಮೆಯ ಅಪೀಲು ತೀರ್ಮಾನವನ್ನು ಈ ಹಪ್ತೆಯೊಳಗೆಯೇ ಕೊಡುವರಾಗಿ ತಿಳಿದು ಬರುತ್ತದೆ.

ಟೆಂಗ್ಯಾಲಿನ ಪೋಲೀಸು ಸಬ್ ಇನ್ಸ್‌ಪೆಕ್ಟರವರ ರಿಪೋರ್ಟಿನ ಮೇಲೆ ಅಲ್ಲಿಯ ನಾಲ್ವತ್ತು ಜನ ಕೊಲೇಜು ಮತ್ತು ಶಾಲಾವಿದ್ಯಾರ್ಥಿಗಳನ್ನು ಒಮ್ಮೆಕ್ಕಿಂತ ಹೆಚ್ಚಾಗಿಯೇ ದರೋಡೆ ಕಳವನ್ನು ಮಾಡಿದ್ದಾರೆಂಬ ತಪ್ಪಿನ ಆರೋಪಣೆಯ ಮೇಲೆ ಹಿಡಿದಿರುವರಂತೆ.

ಬರ್ಮಾ ದೇಶದಿಂದ ಬಂದಿಳಿದಿರುವ ಇಂಡೋ ಬರ್ಮಾ ಟ್ರೇಡಿಂಗ್ ಕಂಪೆನಿಯವರ ೫೦೦೦ ಸೇರು ಎಣ್ಣೆಯ ಡಬ್ಬಗಳಿಗೆ ಬೆಂಕಿ ಬಿದ್ದು ರೂ ೧೧,೦೦೦ ನಷ್ಟವಾಗಿರಬಹುದಾಗಿ ಅಂದಾಜು ಮಾಡಿರುವರು.

ಒಬ್ಬ ಅತಿ ನೀಚ ದುರಾಚಾರಿಯಾದ ಮಹಮ್ಮದೀಯ ಯಾಕೂಬಮುಲ್ಲಾ ಎಂಬವನು ಒಬ್ಬ ಹಿಂದೂ ವಿಧವೆಯನ್ನು ಅಪಹರಿಸಿದ ಮೊಕದಮೆಯು ಕೃಷ್ಣನಗರ ಎಂಬಲ್ಲಿಯ ಸೆಶನ್ಸ್ ಜಡ್ಜರಲ್ಲಿ ವಿಚಾರಣೆಯಾಗುತ್ತಿತ್ತು. ಹಿಂದೂ ವಕೀಲರಲ್ಲಿ ಯಾರಾದರೂ ಈ ಯಾಕೂಬನ ಕಡೆಯಿಂದ ವ್ಯವಹರಿಸಲು ಬಂದರೆ ಆತನನ್ನು ಬೊಂಬ ಹೊಡದು ಕೃಷ್ಣನಗರದ ಬೀದಿಗಳಲ್ಲಿಯೇ ಕೊಲ್ಲುವೆವೆಂಬದಾಗಿ ಹಿಂದೂ ವಕೀಲರೆಲ್ಲರಿಗೂ ದಸ್ಕತಿಲ್ಲದ ಕಾಗದಗಳು ಬಂದಿದ್ದ ಕಾರಣ ಹಿಂದೂ ವಕೀಲರಲ್ಲಿ ಯಾರೂ ಇವನ ಕಡೆ ವಕೀಲರಾಗುವದೆ ಸಮ್ಮತಿಸಲಿಲ್ಲ. ಕಡೆಗೆ ಒಬ್ಬ ಮಹಮ್ಮದೀಯ ವಕೀಲನು ವ್ಯವಹರಿಸಲು ಇವನ ಕಡೆ ಬಂದನು. ಬರಲೆ ಪ್ರಥಮ ದಿವಸದ ಈ ವಕೀಲನ ಹೆಂಡತಿ ಹಾಕ್ಷೀಕೆಯು ನಡಿಯುತ್ತಲೇ ಈತನಿಗೆ ಸಹಾ ಪೋಸ್ಟು ಮುಖಾಂತರ ಕಾಗದ ಬಂದು ವಕೀಲನು ಮಾರನೇ ದಿನದಿಂದ ಕೋರ್ಟಿಗೆ ಹಾಜರಾಗದೆ ಎಲ್ಲಿಗೆ ಹೋಗಿರುವನೆಂತಲೂ ತಿಳಿದು ಬರುವುದಿಲ್ಲ. ಸೆಶನ್ಸ್ ಜಡ್ಜರವರು ಯಾಕೂಬಿಗೆ ೭ ವರುಷದ ಕಠಿಣ ಶಿಕ್ಷೆಯನ್ನು ವಿಧಿಸಿರುವರು. ಈ ಕೈದಿಯು ಕೃಷ್ಣನಗರದ ಜೈಲಿನಲ್ಲಿದ್ದ ಮಾರನೇ ದಿನವೇ ಆತನು ಮತ್ತೆರಡು ಜನ ಕೈದಿಗಳ ಸಂಗಡ ಮೋಟಾರಿ ಜೈಲಿನ ಗೋಡೆಯ ಮೇಲೆ ಹತ್ತಿ ತನ್ನ ಬೈಲು ತೊಡಿಗೆಗಳನ್ನು ಬಿಟ್ಟು ಪಲಾಯನ ಸೂಕ್ತವನ್ನು ಹಿಡಿದಿರುವನು. ಆತನನ್ನು ಹಿಡಿದು ತಂದವರಿಗೆ ಇನಾಮು ದೊರಕುವುದಾಗಿ ಜಾಹೀರಾತ ಕೊಟ್ಟಿರುವರು.

ದಕ್ಷಿಣ ಹಿಂದುಸ್ಥಾನ

ಮೈಸೂರು ಆರೋಗ್ಯ ಪ್ರದರ್ಶನದ ಸಂದರ್ಭದಲ್ಲಿ ಜನರಿಗೆ ಆರೋಗ್ಯ ವಿಚಾರಗಳ ಸೂತ್ರಗಳು ಚೆನ್ನಾಗಿ ಮನವರಿಕೆಯಾಗುವಂತೆ ಈ ಸೂತ್ರಗಳನ್ನೂ ವಿಚಾರಗಳನ್ನೂ ಒಳಗೊಳ್ಳುವ ಒಂದು ನಾಟಕವನ್ನಾಡಿ ಜನರಿಗೆ ತೋರಿಸಿದರು. ನಾಟಕಕ್ಕೆ ಬಹಳ ಮಂದಿ ಜನರು ಬಂದಿದ್ದರು. ಶ್ರೀಮಾನ್ ಶ್ರೀಕಂಠಶಾಸ್ತ್ರಿ ಮೊದಲಾದವರಲ್ಲಿಯೇ ಈ ನಾಟಕವು ತಯ್ಯಾರಿಸಲ್ಪಟ್ಟಿತು.

ಕಳದ ಸೋಮವಾರ ಮೈಸೂರು ನ್ಯಾಯವಿಧಾಯಕ ಸಭೆಯ ಇಬ್ಬರು ಮೆಂಬರುಗಳ ಚುನಾವಣೆಯು ನಡಿಯಿತು. ಮೆ ವೆಂಕಟರಮಣಯ್ಯರವರನ್ನೂ ಮೆ ರಾಮಣ್ಣರವರನ್ನೂ ಮೆಂಬರರಾಗಿ ಚುನಾಯಿಸಿರುವರು. ಮೈಸೂರು ಮಹಾರಾಜರವರು ಈ ಚುನಾವಣೆಗೆ ತಮ್ಮ ಅನುಮತಿಯನ್ನು ಕೊಟ್ಟಿರುವರು.

ಮದ್ರಾಸು ಗವರ್ನಮೆಂಟಿನವರು ವಿಕ್ಟೋರಿಯಾ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಎಂಬ ವಿಕ್ಟೋರಿಯಾ ಮಾತೆಯವರ ಸ್ಮಾರಕ ಸಂಸ್ಥೆಯ ಉದ್ದಿಶ್ಯಗಳು ನೆರವೇರುವಂತೆಯೂ ದಕ್ಷಿಣ ಹಿಂದೂಸ್ಥಾನದಲ್ಲಿ ಈ ಸಂಸ್ಥೆಯಿಂದ ಕೈಗಾರಿಕೆ ಅಭಿವೃದ್ಧಿಯಾಗುವಂತೆಯೂ ರೂ ೫೦,೦೦೦ವನ್ನು ಕೊಟ್ಟಿರುವರು.

ಬರ್ಮಾ ದೇಶದ ಗವರ್ನಮೆಂಟ್ ಮತ್ತು ಮುನಿಸಿಪಲ್ ಶಾಲೆಗಳಲ್ಲಿ ಮತ ಶಿಕ್ಷಣವನ್ನು ಕೊಡುವ ವಿಚಾರವನ್ನು ಸರಕಾರದವರು ಅಂಗೀಕರಿಸಿದ್ದರಿಂದ ಬರ್ಮಾ ದೇಶದ ಅನೇಕ ಬೌದ್ಧ ಸಂಘಗಳು ಲೆಪ್ಟಿನೆಂಟ್ ಗವರ್ನರರನ್ನು ಕೊಂಡಾಡುತ್ತಿರುವವು.

ಮೈಸೂರಿನಿಂದ ಮೆ. ಕೆ. ವಿ. ರಾಜರಾವ್ ಎಂಬವರು ವಸ್ತು ಪ್ರದರ್ಶನಾಲಯದಲ್ಲಿ ಪ್ರದರ್ಶನದ ಅಧ್ಯಕ್ಷರವರು ಪ್ರದರ್ಶಿಸಿದ ರಾಜಭಕ್ತಿ ಲೀಲೆಯ ವಿಷಯವಾದ ಸಣ್ಣದೊಂದು ಟಾಕ್ಷ್ರೀಯನ್ನು ಹಿಂದೂ ಪೆಂಟ ಮದ್ರಾಸಿನ ಇಂಗ್ಲಿಷ ಪತ್ರಿಕೆಗೆ ಬರೆದಿರುವರು. ಮದ್ರಾಸಿನ ವೈದ್ಯ ಮತ್ತು ಕಂಪೆನಿಯವರು ಈ ಪ್ರದರ್ಶನ ಮಂಟಪದ ಒಂದೆಡೆಯಲ್ಲಿ ತಮ್ಮ ವಸ್ತುಗಳನ್ನು ದೇಖಾವೆ ಬಗ್ಗೆ ಇಟ್ಟಿರುವರು. ಈ ಒಡವೆಗಳಲ್ಲಿ ಮದ್ರಾಸಿನ ಜಿ. ಎ. ನಾಟೇಶನ್ ಮತ್ತು ಗಣೇಶ ಕಂಪೆನಿಯವರಿಂದ ಪ್ರಕಟಿಸಲ್ಪಟ್ಟ ಅವರವರ ಭಾಷಣಗಳೊಂದಿಗಿರುವ ದೇಶ ಭಕ್ತರ ಜೀವನ ಚರಿತ್ರೆಗಳ ಪುಸ್ತಕಗಳನ್ನು ಇಟ್ಟಿದ್ದರಂತೆ. ಪುಸ್ತಕಗಳು ಧಾರಾಳವಾಗಿ ಪ್ರದರ್ಶನಾಲಯಕ್ಕೆ ಬಂದವರು ಕ್ರಯಕ್ಕೆವಡಕೊಂಡರು. ಪ್ರದರ್ಶನದ ಅಧ್ಯಕ್ಷರವರು ಈ ಪುಸ್ತಕಗಳು ಇದ್ದಲ್ಲಿಗೆ ಬಂದು ಅವುಗಳನ್ನು ತೆರದು ನೋಡಿ ಅವುಗಳಲ್ಲಿ ರಾಜದ್ರೋಹದ ವಾಸನೆಯುಂಟೆಂಬದಾಗಿ ತಿಳಿದರೆಂತಲೂ ಇದು ಕೊಂಗ್ರೆಸು ಮಂಟಪವಲ್ಲವಾದ್ದರಿಂದ ಈ ಪುಸ್ತಕಗಳನ್ನು ಇಲ್ಲಿ ಮಾರುವುದು ಬೇಡವೆಂತಲೂ ಆಜ್ಞಾಪಿಸಿದರಂತೆ. ಮದ್ರಾಸಿನಲ್ಲಿ ರಾಜದ್ರೋಹಕ್ಕೆ ಆಸ್ಪದವೇ ಇಲ್ಲ. ಅದರಲ್ಲಿಯೂ ರಾಜಕೀಯ ವಿಷಯಗಳಲ್ಲಿ ಅತ್ಯಂತ ಶಾಂತ ಪಂಥದವರಾದ ಈ ಕಂಪೆನಿಗಳಿಂದ ಪ್ರಕಟಿಸಲ್ಪಟ್ಟ ಪುಸ್ತಕಗಳಲ್ಲಿ ರಾಜದ್ರೋಹವಿರುವುದು ಅಸಾಧ್ಯ. ಬ್ರಿಟಿಷ ಸರಕಾರದವರೂ ರಾಜದ್ರೋಹ ವಾಸನೆಯನ್ನು ಈ ಪುಸ್ತಕಗಳಲ್ಲಿ ಕಂಡಿಲ್ಲವಾದರೂ ರಾಜಭಕ್ತಿ ಸಂಪೂರ್ಣರಾದ ಅಧ್ಯಕ್ಷರವರು ಮೈಸೂರು ಸಂಸ್ಥಾನದಲ್ಲಿ ಪ್ಲೇಗು ಮಹಾಮಾರಿ ಇರುತ್ತಾ ರಾಜದ್ರೋಹದ ಅಂಟುರೋಗವು ಅಲ್ಲಿ ಪ್ರಬಲವಾಗದೆ ಅನರ್ಥಗಳುಂಟಾಗುವ ಭಯದಿಂದ ಈ ರೀತಿ ವರ್ತಿಸಿರಬೇಕೆಂದಾಗಿ ಆ ಪತ್ರಿಕೆಯವರು ಟೀಕಿಸುತ್ತಿರುವರು. ಮಹಾರಾಜರವರ ಅರಮನೆಯ ಉಪಯೋಗದ ಬಗ್ಗೆ ಈ ಪುಸ್ತಕಗಳಲ್ಲಿ ಕೆಲವನ್ನು ಕಳುಹಿಸಬೇಕಾಗಿ ವೈದ್ಯ ಮತ್ತು ಕಂಪೆನಿಯ ಮೆನೇಜರರಿಗೆ ಆರ್ಡರು ಬಂದಿರುವುದರಿಂದ ರಾಜದ್ರೋಹವು ಈ ಪುಸ್ತಕಗಳಲ್ಲಿ ಇರುವುದೋ ಎಂದು ವ್ಯಕ್ತವಾಗುವದು.

ದಕ್ಷಿಣ ಕನ್ನಡ.

ಸ್ವದೇಶಾಭಿಮಾನಿಯ ಚಂದಾದಾರರು ಎರಡಾಣೆ ಸ್ಟಾಂಪುಗಳನ್ನು ತಮ್ಮ ಚಂದಾದಾರಿಕೆ ರಿಜಿಸ್ತ್ರಿ ನಂಬ್ರದೊಡನೆ ಮಂಗಳೂರು ಓಲಿನ್ ಮಾರ್ಕೆಟಿನ ಪ್ರೊಪ್ರ್ಯಾಟರ್ ರಾ| ಸಿ ರಘುನಾಥ ಕಾಮತ್‌ರವರಿಗೆ ಕಳುಹಿಸಿಕೊಟ್ಟಲ್ಲಿ ೧೯೧೦ ನೇ ಇಸವಿಯ ನೇತ್ರಾನಂದಕರವಾದ ಒಂದು ಪೊಕೆಟ್ ಡೈರಿಯನ್ನು ಉಚಿತವಾಗಿ ಕಳುಹಿಸಿಕೊಡುವರು.

ಸ್ವದೇಶಾಭಿಮಾನಿಯ ಚಂದಾಹಣವನ್ನು ವಸೂಲು ಮಾಡುವದೆ ಯೂ ಹೊಸ ಚಂದಾದಾರರನ್ನು ಸಂಗ್ರಹಿಸುವ ಬಗ್ಗೆಯೂ ರಾ| ಎಮ್ ನಾರಾಯಣ ಪ್ರಭುಗಳು ಪುತ್ತೂರು, ಉಪ್ಪಿನಂಗಡಿ, ವಿಟ್ಲ, ಪಾಣೆಮಂಗಳೂರು, ಬಂಟ್ವಾಳ, ಈ ಕಡೆ ಹೋಗಿರುವರು. ಚಂದಾದಾರರು ಬಾಕಿ ಇರುವ ಹಣವನ್ನು ವಸೂಲು ಕೊಟ್ಟು ಹೊಸ ಚಂದಾದಾರರನ್ನು ಸಂಗ್ರಹಿಸುವುದರಲ್ಲಿ ಸಹಕಾರವನ್ನೀಯಬೇಕಾಗಿ ವಿನಂತಿಯಾಗಿರುವುದು.

ಮಂಗಳೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಡಿಸ್ಟ್ರಿಕ್ಟ್ ಕಲೆಕ್ಟರವರು ಡಿಸ್ಟ್ರಿಕ್ಟ್ ಬೋರ್ಡು ಸಭೆಗಳು ಕೂಡಿ ಆಗಿಂದಾಗ್ಯೆ ನಡಿಸುವ ಸಭಾ ವೃತ್ತಾಂತದ ಒಂದು ಪ್ರತಿಯನ್ನು ಪ್ರತಿಸರ್ತಿಯೂ ನಮ್ಮ ಬಳಿ ಅವಗಾಹನೆ ಬಗ್ಯೆ ಕಳುಹಿಸೋಣಾಗಬೇಕೆಂಬ ನಮ್ಮ ವಿನಂತಿಯನ್ನು ಮನ್ನಿಸಿದಕ್ಕೆ ನಾವು ಕಲೆಕ್ಟರ ದೊರೆಗಳವರ ಉಪಕಾರ ಸ್ಮರಣೆಯನ್ನು ಮಾಡಿರುವೆವು.

ಕಳದ ಸಾರಿ ಕೂಡಿದ ಡಿಸ್ಟ್ರಿಕ್ಟ್ ಬೋರ್ಡು ಸಭೆಯ ವೃತ್ತಾಂತವು ನಮ್ಮ ಹಸ್ತಗತವಾಗಿರುವುದು. ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರು ಸಭೆಯ ಮುಂದಿಟ್ಟ ಲೋಕಲ್ ಫಂಡ್ ಮಾರ್ಗ ದುರುಸ್ತಿ, ಕಟ್ಟೋಣ ದುರುಸ್ತಿ ಮೊದಲಾದವುಗಳಿಗೆ ಬೇಕಾದ ಹಣವನ್ನು ಸಂಕ್ಷೇಪ ಮಾಡಿದ್ದಲ್ಲದೆ ಬೇರೆ ವಿಶೇಷವಾದ ಸಂಗತಿಗಳು ಯಾವವೂ ಇರಲಿಲ್ಲ.

[illegible] ಚಳ್ಳಿಯವರು ಹಳವೂತ್ತರ [illegible] ಸ್ಟೇಶ[illegible] ಬಳ್ಳಿಯ ಸಂಪಾದ್ಧಿಗೆ ಬಂದು ಹೊಸ ಮಾಗವನ್ನು ಮಾಡಬೇಕೆನ್ನುವ ಮನವಿ ಮೇರೆಗೆ ಸದ್ಯಕ್ಕೆ ಈ ಕೆಲಸವನ್ನು ಕೈಕೊಳ್ಳಲಾಗುವುದಿಲ್ಲವೆಂತ ಬೋರ್ಡಿನವರು ನಿರ್ಣಯಿಸಿರುವರು. ಮ. ರಾ. ರಾ. ಮೊರವಾಂಜೆ ಕರ್ನಲ್ ಟೆಂಪ್ಲ್ [illegible] ಮತ್ತು ವಿನಸೆಂಟ್ ಪೆರರಾಅವರು ಬೆಳ್ಳಿಯೊಳಗಣ ಮಾರ್ಗದ ಕಿನಾರೆಗಳಲ್ಲಿರುವ ಧೂಪದ ಮರಗಳಿಂದ ಅವುಗಳ ಕಾಯಿಗಳನ್ನು ವ ಮರಗಳಿಗೆ ತೂತು ತೆಗೆದು ಅವರ ದ್ರಾವಕನ್ನೂ ತೆಗಿಯುವ ಬಗ್ಗೆ ಮರಗಳನ್ನು ವರುಷ ಒಂದಕ್ಕೆ ೧೦೦ ರೂಪಾಯಿ ಗೇಣಿಯ ಮೇಲೆ ೫ ವರುಷಗಳ ತನಕ ಗೇಣಿಗೆ ಕೊಡಬೇಕೆಂಬ ವಿಶಯವನ್ನು ಸಭೆಯವರು ತಾಲೂಕು ಬೋರ್ಡಿನವರ ಅಭಿಪ್ರಾಯಗಳಿಗನುಗುಣವಾಗಿ ಕೊಡಬಹುದೆಂಬದಾಗಿ ನಿರ್ಣಯಿಸಿರುವರು ಈ ಕಂಟ್ರಾಕ್ಟು ಇತ್ಯರ್ಥವು ತೀರಿದ ಮೇಲೆ ಮರಗಳಿಗೆಯಾ ಡಿಸ್ಟ್ರಿಕ್ಟ್ ಬೋರ್ಡಿಗೆ ನಷ್ಟವಾಗದ ತೆರದಲ್ಲಿ ಇವರಿಂದ ಕರಾರು ಬರದು ತಕೊಳ್ಳುವರು [illegible] ಕೈಗಾರಿಕೆಗೆ ದೂಪದ ಎಣ್ಣೆಯು ಅತ್ಯುತ್ತಮವಾದ್ದರಿಂದ ಈ ಬಗ್ಗೆ ಧೂಪದ ಮರಗಳನ್ನು ಗೇಣಿಯ ಮೇಲೆ ಕಟ್ಟಿಪಿಯುವರು ಪಡಕೊಂಡಿರುವರಾಗಿ ವರ್ತಮಾನ ವಿರುವುದು

ಒಂಟವಾಳ ಮೇಜಿಸ್ಟ್ರೇಟ [illegible] ವೆಂಕಟರಮಯ್ಯನವರು ರಜೆ ಪಡಕೊಂಡಿರುವ್ಪದರಿಂದ [illegible] ನಿಶಂಕರರಾಯರು ಇವರ ಅಕ್ಟಿಂಗ್ ಕೆಲಸವನ್ನು ಮಾಡುತ್ತಿರುವರು

ರೆವಿನ್ಯು ಬೋರ್ಡಿನವರು ಇಲ್ಲಿ [illegible] ನ ಛಾಪಖಾನೆಯನ್ನು ತೆಗೆಯ [illegible] ಕಲೆಕ್ಟರವರ ಅಭಿಪ್ರಾಯವನ್ನು ಕೇ[illegible]

ಕಳೆದ ವಾರ ಒಂದು ಪ್ಲೇಗ [illegible] ರೋಗದಿಂದ ಮರಣವೂ ಮಂಗಳೂರು [illegible] ಯಲ್ಲಿದ್ದವು

ಡಾಕ್ಟರ ವಿ ವಗಿ [illegible] ನೆವಿಗೇಶನ್ ಕಂಪೆನಿಯ ಇಲ್ಲಿಯ [illegible] ಬೇಕಸನ್‌ರವರನ್ನು ಮುನ್ಸಿಪಲ್ ಕೌನ್ಸಿಲರನ್ನಾಗಿ [illegible] ಸಿರುವರು

ನಿನ್ನೆ ದಿನ ತೇರು [illegible] ಕಲ್ ಫಂಡು ಆಸ್ಪತ್ರೆಯ [illegible] ಅಚ್ಯುತ ಬಂಡಾರಕರರವರ [illegible] ರೆಂಬದನ್ನು ತಿಳಿಸಲು [illegible]

ಕಾಸರಗೋಡು [illegible] ಇಲ್ಲಿಯ ಡಿ! ಮುನ್ಸಿಪ್ ಕೋರ್ಟಿನಲ್ಲಿ [illegible] ದೇಶಭಾಷೆಯಾಗಿ ಸರಕಾರ [illegible] ತು ಆ ಹುಕುಮಿನ ಮೇಲೆ ಇಲ್ಲಿಯ ವಕೀಲರು ಮುಂತಾದ ಕ್ರಹಸ್ಥರು ಸರಕಾರಕ್ಕೆ [illegible] ರಿಯಲ್ ಅರ್ಜಿಗೆ ಕನ್ನಡ ಭಾಷೆ ಸಹ [illegible] ಬಾಷೆಯಾಗಿ ಉಪಯೋಗಿಸಬಹುದೆಂದು [illegible] ರುವದು ಕೇಳಿ ತುಂಬಾ ಸಂತೋಷಪಡುತ್ತೇವೆ

ಇಲ್ಲಿಯ ಡಿಸ್ತ್ರಿಕ್ಟ್ ಮುನ್ಸಿಪರೂ, ಬೆಂಚ್ ಕ್ಲರ್ಕರೂ ಮತ್ತು ಇಬ್ಬರು ವಕೀಲರೂ ಕೂಡ ಕಳೆದ ಶನಿವಾರ [illegible] ಸ ಮಂಗಳೂರಿಗೆ ಡಿಸ್ಟ್ರಿಕ್ಟ್ ಜಡ್ಜ್ ಧೊರೆಗಳ [illegible] ಹೋಗಿದ್ದರು ಬೇಟಿಮಾಡಿ ಮರುದಿವಸವೇ ವಾಪಸ ಬಂದಿರುತ್ತಾರೆ

ಪುತ್ತೂರ ಡಿವಿಜನ್ ಡಿಪ್ಯುಟಿ ಕಲ್ಲೆಕ್ಟರರವರು [illegible] ನ ಮೇಲೆ ಇಲ್ಲಿಗೆ ಕಳೆದ ಶುಕ್ರವಾರ ಸಾಯಂಕಾಲಕ್ಕೆ ಒಂದು ತಲ್ಪಿರುತ್ತಾರೆ ಶನಿವಾರ ಬೆಳಿಗ್ಯೆ ವ್ಯವಸಾಯ ಸಂಘದ ಸಭೆಯು ನೆರದಿತ್ತು ಮೊನ್ನೆ ಸೋಮವಾರ ಆರಂಗಾಯಿತು ಅಡಕತ್ತ ಬೈಲಲ್ಲಿ ಆದ ರಮಜಾನ್ ತಿಂಗಳ ಮಾಪಿಳೆಯವರ ದೊಡ್ಡ ದೊಂಬಿ ನಂಬ್ರವೇ ಮೊದಲಾದ ಕ್ರಿಮಿನಲ್ ಮೊಖದ್ದಮೆಗಳು ತನಖಿಯಾಗುತ್ತವೆ.

ಪೋಲಿಸ್ ಸುಪರಿನ್‌ಟೆಂಡೆಂಟ್ ಲವ್‌ಲೋಕ್ ಧೊರೆಗಳು ಇಲ್ಲಿಯ ಪೋಲಿಸ್ ಸ್ಟೇಶನ್ ಪರಿಶೋಧನೆ ಬಗ್ಯೆ [illegible] ದಿವಸಗಳಾಯಿತು. ಧೊರೆಗಳು ಡಿಸ್ಮಿಸ್ ಆಟಕ್ಕೆ ಮೊಸಳೆ ಶಿಖಾರಿಗೂ ಬರೀ ಕುಶಿಪಡುತ್ತಾರೆ. ಇನ್ನೂ ಒಂದೆರಡು ದಿವಸಗಳ ವರೇಗೆ ಇಲ್ಲಿರುವರಾಗಿ ಕೇಳುತ್ತೇನೆ.

ವಿಟ್ಲ ಈ ಊರಲ್ಲಿ ಇದು ವರೇಗೆ ವಾರಸಂತೆಯು ಇಲ್ಲದೆ ಜನರಿಗೆ ಬಹಳ ಅಡಚಣಿಯಾಗುತ್ತಿತ್ತು ಇದೇ ಅಕ್ಟಂಬರ ತಾ ೩ಂಕ್ಕೆ ಇಲ್ಲಿ ಶನಿವಾರ ಸಂತೆಯು ತೆರಿಯಲ್ಪಟ್ಟಿತು ಇದರಿಂದ ಬಡಬಗ್ಗರಿಗೆ ಜೀವನೋಪಾಯವೂ ಊರಿನ ವ್ಯಾಪಾರಕ್ಕೆ ಅಭಿವೃದ್ಧಿಯೂ ಆಗುವುದು ಸಂತೆಯು ಇನ್ನಷ್ಟು ಅಬಿವೃದ್ಧಿಹೊಂದುವಂತೆ ನೆರೆಗ್ರಾಮದ ನಿವಾಸಿಕರು ತಮ್ಮಿಂದ ಕೂಡುವಷ್ಟು ಪ್ರಯತ್ನಿಸುವರಾಗಿ ನಂಬುತ್ತೇವೆ ಈ ಸಂತೆ ಇಲ್ಲಿ ಆಗುವದಕ್ಕೆ ಕಾರಣಭೂತರಾದ ಇಲ್ಲಿಯ ಶಾಲಾ ಸುಪ್ಪರ್‌ವ್ಯಾಸರ್ ಮ ರಾ ವ [illegible] ಶೇಶರಾಯರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ

ಪುತ್ತೂರು ಈ ಕಸಬೆಯಲ್ಲಿ ಟೌನ್ ನಿವಾಸಿಕರ ಉಪಯೋಗ [illegible] ತೆಗಿಯುವ ಬಾವಿಯನ್ನು ತೋಡುವದ [illegible] ನಮ್ಮ ಇಲ್ಲಿಯ [illegible] ಮ ರಾ ರಾ ಪ್ರಕ್ಟ [illegible] ಶೆಟ್ಟಿ [illegible] ಸ್ಥಳವನ್ನು ಅವರು ಲೋಕ [illegible] ವಾಗಿ ಪ್ರತಿಫಲ ಪಡಿಯದೆನೆ ಸರಕಾರಕ್ಕೆ ಬಿಟ್ಟುಕೊಡುವರೆ ಸಮ್ಮತಿ ಕೊಟ್ಟಿರುವರು ಈ ಸ್ಥಳದಲ್ಲಿ ಸಾಕಷ್ಟು ನೀರು ಬೇಸಿಗೆ ಕಾಲದಲ್ಲಿ ಸಿಕ್ಕಿದ್ದಾದರೆ ನಿವಾಸಿಕರ ಸಂಕಷ್ಟಗಳು [illegible] ಈ ಭಾವಿಯನ್ನು ತೋಡುವ ಬಗ್ಯೆ ರೂ ೩೦೦ [illegible] ನವಂಬರ ತಾರೀಕು ೭ಕ್ಕೆ [illegible] ತಿಳಿಪಬೇಕಾಗಿ ಡಿಸ್ಟ್ರಿಕ್ಟ್ [illegible] ಬಂದಿಗಳು ಅಪೇಕ್ಷಿಸೋಣವಾಗುವ

ಇಲ್ಲಿಯ [illegible] ಕೆಲವು ಕಾಲದಿಂದ [illegible] ರಾ ರಾ ವಿ ಸುಬ್ಬಯ್ಯಶೆಟ್ಟಿ ಬಂದೇ ಬಟ್ಟವು [illegible] ನಮ್ಮ ಇಲ್ಲಿಯ ಸಾವುಕಾರ್ ವ ಸ್ವಾಂಪ್ರವೆಂ [illegible] ರಾ ರಾ ಕುದ್ಕುಂಜೆ ತಿಮ್ಮಣ್ಣ ಪೈಗಳವರು [illegible] ತಾರೀಕು [illegible] ಪುತ್ತೂರಿಂದ [illegible] ಕಾಲದಲ್ಲಿ [illegible] ಜಟ್ಕಾ ಬಡಿವ [illegible] ಇಷ್ಟು [illegible] ನಮ್ಮ [illegible] ಟ್ಕಾ ಘಂಟಿಯನ್ನು [illegible] ಮಂಗಳೂ [illegible] ವಿಪರೀತವಾಯಿತು [illegible] ೧—೬—೦ ಇತ್ತು ಪೈಗಳವರು [illegible] ೧ಕ್ಕೆ [illegible] ಕಾಲಿಕ [illegible] ಇಟ್ಟಿರು [illegible] ಟ್ಕಾ [illegible] ಉಪಕಾರವೇ [illegible]

ಎವರ್ಾಳ ಸ್ವದೇಶಾಭಿಮಾನಿಯ [illegible] ಸಂಚಿಕೆಯಲ್ಲಿ ಕಳೆದ ಬಿರುಗಾಳಿಯ ಸಮಯ ಇಲ್ಲಿ ತೇರಿನಿಂದ ತೆಂಗಿನಕಾಯಿಗಳು ವಿಪಯ ಪ್ರಸ್ತಾಪಿಸಿದ್ದೇವಷ್ಟು [illegible] ೧[illegible] ತೆಂಗಿನಕಾಯಿಗಳೂ, ೧[illegible] ಎಣ್ಣೆ [illegible] ಮಂಗಳೂರು ಪುರುಷೋತ್ತಮ ನಾಯಕರವರು ವಹಿಸಿಕೊಂಡಿರುವರು ಎಂಬದಾಗಿಯೂ ಕೂಡಿಸುವರೆ [illegible] ನಷ್ಟ ಮಾಡಿದ ಜನರುಗಳಿಗೆ ಬಿಟ್ಟಾಡ ಮಾಡುವದೆ ರೂಪಾಯಿ ೬೩—೬—೫ ಪೈ ಇನಾಮಾಗಿ ಸರಕಾರದವರು ಕೊಟ್ಟಿರುವರು ಎಂಬದಾಗಿಯೂ ವರ್ತಮಾನವಿದೆ

ಇಲ್ಲಿಯ ಬ್ರೇಂಚ್ ಪೋಸ್ಟಾಪೀಸಿನ ವರ್ಷಾವಧಿ ತನಖಿಗೋಸ್ಕರ ಪೋಸ್ಟಲ್ ಇನ್ಸ್‌ಪೆಕ್ಟರರಾದ ಮ ರಾ ಕೆ. ಶೇಷಯ್ಯನವರು ಕಳೆದವಾರ ಚಿತ್ತೈಸಿದ್ದರು, ಇವರು ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಅರ್ಭಕರಿಂದ ರಾಜಸ್ತುತಿ, ದೇವರ ಪ್ರಾರ್ಥನೆ ಮುಂತಾದ್ದನ್ನೆಲ್ಲಾ ಹಾಡಿಸಿ ಶಾಲೆಯ ತಗಿನ ಎಲ್ಲಾ [illegible] ಸಂಗ[illegible] ಸಮಾಚಾರನನ್ನಲ್ಲಾ [illegible] ರಿಗೆ ತಮ್ಮ ಹುಜೂರಿನಲ್ಲಿ [illegible] ವಂತೆ ಉಪಾಧ್ಯಾಯರ ಕೈಯ್ಯ ದ್ರವ್ಯ ಸಹಾಯವನ್ನ [illegible] ತೆರಳಿರುವರು.

ಅತಿ ಉತ್ತಮವಾದ ಬೀಜಗಳು—ಗಿಡಗಳು—ಹೂವು ವಗೈರೆ.

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಫಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ. ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲೆಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಬಿ ಎಲ್ ಬೈಯಣ್ಣ ಬ್ರದರ್ಸ್,
67 ಲಾಲ್‌ಬಾಗ್ ರೋಡು,
ಬೆಂಗಳೂರು ಸಿಟಿ

ಜೀವಸುಗಳ ಧಾರಣೆ. ಮಂಗಳೂರು

ಒಳ್ಳೆ ಮಸ್ಕತಿ ಅಕ್ಕಿ,,,,,, ,	5-10—0
ಗುಡ್ಡು ಮಸ್ಕತಿ ,,, ,,,,	5—0—0
ಸೈಲು ಸುಗ್ಗಿ ,,,,,,, ,,	5—2—0
ಮಧ್ಯಂ ಗುಡ್ಡು ರಾಶಿ ,,,,,,	4—8—0
ಹೊಸ ಗುಡ್ಡು ರಾಶಿ ,, ,,,	3 12—0
ಹೊಸ ಬತ್ತ, ,,,,, ,,	1-11—0
ಮಸ್ಕತಿ ಬೆಳ್ತಿಗೆ ,,,,, , ,,	5—0—0
ರಂಗೂನ್ ಬೆಳ್ತಿಗೆ ಗೋಣಿ ,,,,	7—6—0
ಹುರುಳಿ ಗೋಣಿ ೧ ಮುಡಿ 2ರ ,,	7—6—0
ಉಪ್ಪು ಗೋಣಿ ೧ರ ,,,,,,,,	3—6—0
ಕೊಪ್ರಿ ಎಣ್ಣೆ ಮಣ ,,,,,,,,,	6—12 0
ಕಾಪಿ ಖಂಡಿ ೧ರ ,,,,,,,	205—0—0
ಕಾಳು ಮೆಣಸು ಖಂಡಿ,,,,,	120—0—0
[illegible] ಅಡಿಕೆ ,, ,,,	72—0—0

ಯುವತೀರೆ ರೋಗಿಯರಗೋಸ್ಕರ ತಯಾರಿಸಿದ ಸೂಲಗಿತ್ತಿಯರಾದ ಕಮಲಾಬಾಯಿಯವರ

ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಪರಿಹೋಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟಿದೆ ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು ಉಪಯೋಗಿಸಿದವರು ಅವುಗಳ ಬಗ್ಯೆ ಶಿಪಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ. ವಿ. ಪಿ. ಅಂಚೆ ಹಾಸಲು ೪ ಅಣೆ.

ಸೂಲಗಿತ್ತಿಯರಾದ ಕಮಲಾಬಾಯಿ, [illegible]
ಕಲ್ಬಾದೇವಿ ರೋಡ್, ಮುಂಬೈ.

K. R. PATAK & CO.

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ.

ಬಾಟ್ಲ ಒಂದರ 8 ಆಣೆ.

ಕುಂತಲಪಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ.

ಬಾಟ್ಲ ಒಂದರ 8 ಆಣೆ.

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು. ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ದೆ ಬೀಳುವದು.

ಬಾಟ್ಲ ಒಂದರ 6 ಆಣೆ.

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ. ಇದರಿಂದ ಮೆದುಳು ತಂಪಾಗುವದು. ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ.

ಬಾಟ್ಲ ಒಂದರ 6 ಆಣೆ.

ಮನೋರಾ ಕಂಪನಿಯವರ

ರೋಯಲ್ ಇಂಡಿಯನ್ ಬಾಂ.

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ಜಖಮು, ಘಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ. ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ. ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ವಾಪಸು. ಬಾಟ್ಲ ಒಂದಕ್ಕೆ 8 ಆಣೆ, ೬ ಬಾಟ್ಲಗಳಿಗೆ 2 ರೂ. 10 ಆಣೆ. ೧೨ ಬಾಟ್ಲಗಳಿಗೆ 5 ರೂ. ಬಹಳ ಕಮ್ಮಿ ಕ್ರಯದಿಂದ ಮಾರುತ್ತೇವೆ.

ವಿಳಾಸ:— ಕೆ. ರಾ. ಪಾಠಕ್ ಮತ್ತು ಕಂಪೆನಿ,
ಠಾಕುರ್‌ದ್ವಾರ ರೋಡ್ ಮುಂಬಯಿ.

ಹಿಂದುಸ್ಥಾನ ಕೊಒಪರೇಟಿವ್ ಇನ್ಸ್ಯುರೆನ್ಸ್ ಸೊಸ್ಯಾಟಿ ಲಿಮಿಟೆಡ್,
ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು:—14 ಹೇರ್ ಸ್ಟ್ರೀಟ್ ಕಲ್ಕತ್ತಾ.
ಬ್ರೆಂಚ್ ಆಫೀಸುಗಳು:—42 ಎಲ್ಫಿನ್‌ಸ್ಟನ್ ಸರ್ಕಲ್ ಮುಂಬಯಿ.
8 ಬ್ರೋಡವೆ, ಮದ್ರಾಸು.
1906ರಲ್ಲಿ ಸ್ಥಾಪಿಸಲ್ಪಟ್ಟಿತು.
ಸಂಘದ ನಿಯಮಿತ ಭಂಡವಾಳ ಒಂದು ಕೋಟಿ ರೂಪಾಯಿ.

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು. ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು.

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು. ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು.

1909 ಎಪ್ರಿಲ್ ತಿಂಗಳ ವರೆಗೆ ರೂ. 18,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು.

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುದ್ದಾರಿಕರಿಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು. ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು. ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಭಂಡವಾಳದ ಮೌಲ್ಯವು ಸೇಕಡಾ 25ರಂತೆ ಹೆಚ್ಚಿರುವುದು. ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು. ವಿಶೇಷ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಬಿ. ಬಾಬುರಾವ್ ಎಂಡ್ ಸನ್,
ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಪತ್ರ ಬಾಟ್ಲಯೊಂದಿಗಿರುವುದು. { ಸಿದ್ಧಲಕ್ಷ್ಮೀ ವಿಲಾಸ. } ಕ್ರಯ ಬಾಟ್ಲಿಗೆ 12 ಆಣೆ.

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ಬೀಳುವಂಥಾ ತುರಿಕೆಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವೃಣಾದಿ ಬಾವುಗಳೂ, ಬಿಡ್ಡ ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ರಕ್ತಶುದ್ಧಿಗೆ ಇದು ದಿವ್ಯ ಔಷದವಾಗಿರುವದು.

ಈ ಔಷಧಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. ಮುಲ್ಕಿ ಸುಬ್ರಾಯ ಮುಕುಂದ ಪ್ರಭು ಮತ್ತು ಕಂಪೆನಿ, ಮಂಗಳೂರು. ಕುಂದಾಪುರ ರಾಮಚಂದ್ರ ಶ್ಯಾನುಭೋಗ, ಮಂಗಳೂರು. ಇವರಲ್ಲಿ ದೊರಕುವದು.

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್'. ಈ ವಿಷಯ ಹೆಚ್ಚು ಬರೆಯುವುದೇ ಅಗತ್ಯವಿಲ್ಲ. ಒಂದುಸಾರಿ ಪರೀಕ್ಷಿಸಿದರೆ ತಿಳಿದು ಬರುವುದು. ಬಾಟ್ಲ ಒಂದರ ಕ್ರಯ ರೂಪಾಯಿ ೦—೧೪—೦.

ಸ್ವದೇಶಾಭಿಮಾನಿಯ [illegible] ಮಾತ್ರ ಇದು [illegible] ಕ್ರಯಕ್ಕೆ ದೊರಕುವದು.

ಮಂಗಳೂರು [illegible]
ಎಸೋಸಿಯೇಶನ್ [illegible]

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾನಂದ ತೈಲವು** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨ ಪ್ರಮೇಹರಿಪು ಬಿಂದು [illegible] ನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣಕೊಡುವದು. ಬಾಟ್ಲಿಗೆ ೨ ರೂ

೩. **ಕಾಮೇಶ್ವರ ಮಾತ್ರೆ** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ

೪. **ಪಂಚಜೀರಕ ಪಾಕ** [illegible] ಗಳನ್ನೂ ಬಂಜೆತನವನ್ನೂ ತಪ್ಪದೆ [illegible] ವದು ರಾತಲಿಗೆ ೨ ರೂ

೫ **ಸೂರಣಾವ ಲೇಹ** [illegible] ಮೇಲೆ ಅತ್ಯುತ್ತಮವು [illegible] ರಾತಲಿಗೆ ೨ ರೂ

೬ **ಪ್ಲೀಹೋದರಾರಿ ಚೂರ್ಣ** [illegible] ದಾರುಣವಾದ ಜ್ವರದ [illegible] ಪಡಿಸುವದು ತಿಂಗಳ ಔಷಧಕ್ಕೆ [illegible] ರೂ ೮ ಆಣೆ

೭ **ಜಗನ್ಮೋಹನ** ದಂತಮಂಜನ [illegible] ಗಳನ್ನು ಪರಿಹರಿಸತಕ್ಕ [illegible] ವನೌಷಧಗಳಿಂದ ತಯಾರಿಸಿದುದೆ ೧೦ ತೊಲೆಗೆ ೧೦ ಆಣೆ

೮ ಸರಳಭೇದಿ ಮಾತ್ರೆ [illegible] ತೊಲೆಗೆ ೨ ರೂ

೯ ಮಹಾಜ್ವರಾಂಕುಶ ಮಾತ್ರೆ ಚಳಿಜ್ವರ, ಪರಿಸೆಯ ಜ್ವರ ಮುಂತಾಗ್ಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ

೧೦ ವಾಸಾವ ಲೇಹ ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೧ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, [illegible] ಗಳನ್ನು ಕೊಡುವದು ರಾತಲಿಗೆ ೨ ರೂ.

೧೨ ವಾತಮುರಾರಿ ಬಾಮ್ ತಲೆನೋವು, ಎದೆನೋವು, ಸೊಂಟನೋವು, [illegible] ವಾತಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೭ ಆಣೆ

೧೩ ಗಜಕರ್ಣ ಕೇಸರಿ ಮುಲಾಮು ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ ಕರಡಿಗೆಗೆ ೪ ಆಣೆ ೩ ಕರಡಿಗೆಗೆ ೧೧ ಆಣೆ.

೧೪ ಸಪ್ತಾಮೃತಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು ತೊಲೆಗೆ ೧ ರೂ

೧೫ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ

☞ ಪೋಸ್ಟಿನ ವೆಚ್ಚಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸುವದು

ನಮ್ಮ ವಿಳಾಸ— ಬಿ. ಎಸ್. ನಾಥು ಮತ್ತು ಕಂಪೆನಿ,

ಬಾಂದ್ರಾ (ಮುಂಬಯಿ ಹತ್ತಿರ)

Bandra (near Bombay)

ವಾತ, ಸಂಧಿವಾತ, ತಲೆನೋವು, [illegible]

ರೊಯಲ್ ಇಂಡಿಯನ್ ಬಾಂ.

ವಾತ —ರಕ್ತದ ಮೇಲೆ ತೇಲುವ ಹಾನಿಕರ ಪದಾರ್ಥಗಳು ಗಂಟುಗಳ ಸಂಧಿಯಲ್ಲಿ ಕೂಡುವದರಿಂದ, ವಾತವೂ, [illegible] ವಾತವೂ ಆಗುವದು ಆ ಭಾಗದ ಮೇಲೆ ರೊಯಲ್ ಇಂಡಿಯನ್ ಬಾಂ ಚನ್ನಾಗಿ [illegible] ಕೊಡಬೇಕು

ತಲೆನೋವು ನೋವಿದ್ದ ಭಾಗದ ಮೇಲೆ ರೊಯಲ್ ಇಂಡಿಯನ್ ಬಾಂ ಚನ್ನಾಗಿ ಉಜ್ಜಬೇಕು

ಜಖಮು [illegible]

ಬೆನ್ನಿನ ವಾತ [illegible] ಬಾಂ ಒಂದು ದಿವ್ಯ ಔಷಧವಾಗಿರುತ್ತದೆ

ಗಂಟ್ಲಿನಲ್ಲಿ ಶೀತ —ರೊಯಲ್ ಇಂಡಿಯನ್ ಬಾಂ [illegible]

ಹಲ್ಲುನೋವು —ಸ್ವಲ್ಪ ಹತ್ತಿಯನ್ನು ರೊಯಲ್ ಇಂಡಿಯನ್ ಬಾಂನಲ್ಲಿ ಒದ್ದೆ ಮಾಡಿ ನೋವುಳ್ಳ ಹಲ್ಲಿನ ಮೇಲೆ ಇಡಬೇಕು

ಇದರಿಂದ ಸಾವಿರಾರು ಜನರು ಗುಣ ಹೊಂದಿರುತ್ತಾರೆ ಇನ್ನೂ ಸಾವಿರಾರು ಜನರು ಗುಣಹೊಂದುವರು

ಬಾಟ್ಲಿ ಒಂದರ ಕಿಮ್ಮತ್ತು ೧೦ ಆಣೆ.

ಎಲ್ಲಾ ಬಾಮ್‌ಗಿಂತಲೂ ಇದು ಉತ್ಕೃಷ್ಟವೆನ್ನಿಸಿಕೊಳ್ಳುತ್ತದೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಮರತು ರವಾನಿಸಲ್ಪಡುವದು

ಏಜಂಟರು —

ಮನೊರಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು, ದ ಕನ್ನಡ.

ಪಲ್ಕ ಎಂಡ್ ಸನ್ಸ್, ಮಂಗಳೂರು.

ಬಿ. [illegible] ಶೆಣೈ, ಆಯುರ್ವೇದಿಕ್ ಏಜಂಟ್, ಮಂಗಳೂರು.

ಬೇಕಲ್ ವೆಂಕಟ ರಾವ್, ಉಡುಪಿ, ದ. ಕನ್ನಡ.



ಸುರಂಗಿ ಅತ್ತರು.

ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು. ಇಂಗ್ಲಿಷ ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು ಇದರ ಪರಿಮಳವು ಹೆಚ್ಚು [illegible] ವರೆಗೆ ಹೋಗುವದಿಲ್ಲ ಬಾಟ್ಲಿ ಒಂದರ ಕ್ರಯ No. I [illegible] No. 2 ೧—೦—೦ ದಿಲ್‌ಖುಷ್ ೧— ೦—೦. ದಣಾಕಾ ೦—[illegible]—೦ ಜಾಯಿ ೦—೧೪—೦ ಚಂಬೋಲಿ ೦—೧೪—೦.

ಕೇಶವರ್ಧಿನಿ ಎಣ್ಣೆ ಹೊಸರ ಪ್ರೀತಿಕರವಾದ ಎಣ್ಣೆ. ಇದರಿಂದ ಕೂದಲು [illegible] ವು, ಮತ್ತು ಬೆಳೆಯುವವು ಬಾಟ್ಲಿ ಒಂದರ ಕಿಮ್ಮತು ೦—೮—೦.

ಗಜಕರ್ಣದ ಮುಲಾಮು. ೦—೪—೦

ಮನೋರಾ ಕಂಪೆನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಭೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಸತತವಾತ, ಚೇಳುಕಡಿತ, ತಲೆನೋವು, ಶೀತ, ಘಾಯ, ಗಂಟ್ಲುನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ. ಇನ್ನೂ ಸಾವಿರಾರು ಜನರು ಗುಣಹೊಂದುವರು ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ. ಇದು ಎಳೇ ಮಗುವಿನ ಭೇ ಹಕ್ಕಾದರೂ ಭಯವಿಲದೆ ಹಚ್ಚಬಹುದು.

ಬಾಟ್ಲಿ ಒಂದರ ಕಿಮ್ಮತು ರೂ. ೦—೮—೦, ಆರು ಬಾಟ್ಲಿಗಳಿಗೆ ರೂ. ೨—೧೦—೦.

ವಿಳಾಸ:— **ರಾಮರಾವ ನಾನಾಭಾಯಿ ಕಾಳೆ,**

ಗಿರಗಾಂ ಮುಂಬಯಿ.

ಪ್ರಕಟನೆಗಳು.

1. ವ್ಯವಹಾರ ನಿರ್ಣಯ—ಫಾರಂಗಳು ೫೪೬ ಹಿಂದೂ ಮಹಮದೀಯ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಆಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ.

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ; ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್‌ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ. ವರುಷದ ಚಂದಾ ೧ ರೂಪಾಯಿ ಮುಂಗಡ, ಯಾ ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ.

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ. ವಿ. ಪಿ. ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು ಎಂ. ಮಲ್ಲಾಪಾಧ್ಯಾಯ ಫಸ್ಟ್ ಗ್ರೇಡ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ ಈ ವಿಳಾಸಕ್ಕೆ ಬರೆಯತಕ್ಕದ್ದು.

THE HINDU SOAP MANUFACTURING CO.,

ಹಿಂದೂ ಸೋಪ್‌ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ. ಸಾಬೂನು ಅತ್ಯುತ್ತಮವಾದದ್ದು. ಕ್ರಯ ಸುಲಭ ಚಿಲರೆ ವಿಕ್ರಯಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ವ್ಯಾಪಾರಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರೆಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್.

೧೮೯೮ನೇ ಇಸವಿಯಲ್ಲಿ ಸ್ಥಾಪಿಸ ಲ್ಪಟ್ಟದ್ದು.

ಟಿ. ಬಾಬುರಾಯರ

ಅನೇಕ ಮಾನ್ಯಗೃಹಸ್ಥರಿಂದ ಪಡೆದ ಪ್ರಶಂಸಾ ಪತ್ರಗಳು ಇವೆ.

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಗಳು.

ಪರಿಮಳಾಂಜನ ನಂಬ್ರ 2:—ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಗಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0-10-0.

(Rose) ದಂತಮಂಜನ:—ಈ ಚೂರ್ಣದಿಂದ ಪ್ರತಿನಿತ್ಯವೂ ಹಲ್ಲುಗಳನ್ನು ತಿಕ್ಕುತ್ತಾ ಬಂದರೆ ಹಲ್ಲಿನಿಂದ ರಕ್ತ ಸುರಿಯುವದು ನಿಲ್ಲುವದಲ್ಲದೆ, ಬಾಯಿಯ ದುರ್ಗಂಧವು ನಾಶವಾಗಿ ಹಂದಾಡುವ ಹಲ್ಲುಗಳು ಗಟ್ಟಿಯಾಗುತ್ತವೆ. ಡಬ್ಬಿ ೧ರ ಕ್ರಯ ರೂ. 0—2—0.

ತಾಂಬೂಲ ಸುವಾಸಿನಿ:—ಸೀಸೆ ೧ರ ಕ್ರಯ ರೂ. 0-4-0.	ಪರಿಮಳಾಂಜನ ನಂ. ೧:—ಡಬ್ಬಿ ೧ರ ಕ್ರಯ ರೂ. 0-8-0.
ದಂತಮಂಜನ:—ಡಬ್ಬಿ ೧ರ ಕ್ರಯ ರೂ. 0-2-0.	ಸುಗಂಧ ವಶ್ಯದ ಪುಡಿ:—ಡಬ್ಬಿ ೧ರ ಕ್ರಯ ರೂ. 0-6-0.
ಗಜಕರ್ಣದ ಮುಲಾಮು:—ಡಬ್ಬಿ ೧ರ ಕ್ರಯ ರೂ. 0-6-0.	ದಶಾಂಗ ಧೂಪ:—ಸೇರು ೧ಕ್ಕೆ ಕ್ರಯ ರೂ. 1-4-0.
ಶ್ವಾಸಕುಠಾರ:—ಡಬ್ಬಿ ೧ರ ಕ್ರಯ ರೂ. 0-8-0.	ದ್ರಾಕ್ಷಾರಿಷ್ಟ:—ಬಾಟ್ಲಿ ೧ರ ಕ್ರಯ ರೂ. 2-8-0.

ನಯನಾಮೃತ ಸುರ್ಮ:—ಈ ಸುರ್ಮವನ್ನು ಪ್ರತಿನಿತ್ಯವೂ ಕಣ್ಣಿಗೆ ಹಚ್ಚುತ್ತಾ ಬಂದಲ್ಲಿ ಕಣ್ಣಿನಿಂದ ಕೀವು ಅಥವಾ ನೀರು ಇಳಿಯುವದು ಕಣ್ಣುರಿ, ಕೆಂಗಣ್ಣು, ಕಣ್ಣಿನೊಳಗೆ ಬರುವ ಪರದೆ ಮೊದಲಾದ ಸರ್ವ ವಿಧವಾದ ನೇತ್ರ ರೋಗಗಳು ಸಂಶಯವಿಲ್ಲದೆ ಗುಣವಾಗುವವು.

ಇನ್ನೂ ಅನೇಕ ವಿಧವಾದ ಔಷಧಿಗಳು ಇರುವವು. ಬೇಕಾದವರು ಕೆಟಲಾಗಿಗೆ ಬರಿಯಿರಿ.

ಮೇಲೆ ಕಾಣಿಸಿದ ದಂತಮಂಜನಗಳನ್ನು ರಾತ್ಲು ಲೆಕ್ಕದಲ್ಲಿ ತರಿಸಿಕೊಂಡರೆ ರಾತ್ಲು ೧ರ ರೂ. 2-0-0ರಂತೆ ಕ್ರಯ ಬೀಳುವದು.

ಸೂಚನೆ. ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ ಬೀಳುವದು.

ಟಿ. ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,
ಗಾರಿಮುಳ ರಸ್ತೆ, ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಒಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯವ್ಯತ್ಯಾಸದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೬ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ.
ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:—ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯುಳ್ಳವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಪಾಲಿಸಿಗಳಿಗೆ ಜೀವ ವಿಮೆ ಅತಿ ಕಮ್ಮಿಯಾದರೂ ಭದ್ರವಾದ ವಿಮೆ ದರಗಳಲ್ಲಿ ಉತ್ತರವಾಯಿಸ ಬಹುದು.

ಇತರ ಯಾವ ಜೀವವಿಮೆ ಕಂಪೆನಿಗಳಲ್ಲಿ ಉತ್ತರವಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೆ ಉತ್ತರವಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ:—ಪ್ರಖ್ಯಾತಿಗೊಂಡ ಸ್ಪೆಕ್ಟೆಕಲ್ ವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಳ್ಳಬಹುದು.

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ. ಕನ್ನಡ.

ಪ್ರೋತ್ಸಾಹಮಾಡುತ್ತೀರೇ.

ಕ್ರಯ ಸುಲಭ! ಉತ್ತಮ ಸಾಮಾನುಗಳು!

೧ ಡಜನ್‌ವುಳ್ಳ ಉಲ್ ಪಾರ್ಕೆಟ್ ರೂ. 0—8—0. ೧೦ ಜೋಡಿಯುಳ್ಳ ಬಂಡ್ಲ್ ೧ಕ್ಕೆ ರೂ. 3—7—0. ಕಸೂತಿ ಕೆಲಸದ ಉಲನ್ ಬಂಡ್ಲ್ ೧ಕ್ಕೆ ರೂ. 3—4—0. ಕೊಕ್ಕೆ ಸೂಜಿ ೧ಕ್ಕೆ ರೂ. 0—1—6. ಕಮ್ಮರ್ ಬಂದ್ ಹೊಲಿಯುವ ನಾಲ್ಕು ಸೂಜಿಯ ಕೋಪೆ ೧ಕ್ಕೆ ರೂ. 0—4—0. ಹಾಸನ್ ಟೋಪಿ ಡಜನ್ ೧ಕ್ಕೆ ರೂ. 8—0—0 ಮತ್ತು ರೂ. 15—0—0. ಬನಿಯನ್‌ಗಳು ೧ಕ್ಕೆ 0—6—0, 0—8—0, 0—10—0, 0—12—0. ಪರಿಮಳ ನಸ್ಯ ಡಬ್ಬಿ ೧ಕ್ಕೆ ರೂ. 0—2—0. ಪೋಸ್ಟು ಕಾರ್ಡು ೧೦೦ಕ್ಕೆ ರೂ. 0—3—0. ಸನ್ ಸನ್ ತಾಂಬೂಲ ಮಿಶ್ರನ ೩೦೦ ಮಾತ್ರೆ ಇರುವ ಪಾಕೆಟ್ ೧ಕ್ಕೆ ರೂ. 0-3-0. ತಲೆನೋವಿಗೆ ಅನುಕೂಲವಾದ ಮೆಂತೋಲ್ ಡಬ್ಬಿ ೧ಕ್ಕೆ ರೂ. 0—3—0. ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ರೂ. 0—5—0. ಕಸ್ತೂರಿ ಮಾತ್ರೆ ೨೦೦ರ ಸೀಸೆ ೧ಕ್ಕೆ ರೂ. 0—4—0. ಸ್ವದೇಶಿ ಪ್ಲೆಟ್ ಕೇಸ್ ೧ಕ್ಕೆ ರೂ. 1—0—0 ಮತ್ತು 0—12—0. ಕೇಪಿಟೋಲ್ ಬಾಂ ಸೀಸೆ ೧ಕ್ಕೆ ರೂ. 0—8—0. ದ... ಬಾರ್ ಮತ್ತು ಕಾಮಿಯಾ ಅತ್ತರ್ ಸೀಸೆ ೧ಕ್ಕೆ ರೂ. 1—8—0. ಸರ್ವಜನೋಪಯೋಗವಾದ 1910ನೇ ಡೈರಿ ತಯಾರಿಯಲ್ಲಿದೆ, ದಯವಿಟ್ಟು ಕೆಟಲಾಗು ತರಿಸಿರಿ.

ನಮ್ಮ ವಿಳಾಸ:— **ದಿ. ಯೂನಿಯನ್ ಮಾರ್ಟ್.**
ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ.	೪ ಸಾರಿ.	೧೨ ಸಾರಿ.	೨೪ ಸಾರಿ.	೫೨ ಸಾರಿ.
ಇಡೀ ಪಾನು	ರೂ. ೧೦	ರೂ. ೩೨	ರೂ. ೭೨	ರೂ. ೧೧೦	ರೂ. ೧೫೦
ಅರ್ಧಪಾನು	,, ೬	,, ೧೮	,, ೩೮	,, ೬೦	,, ೮೫
ಕಾಲು ಪಾನು	,, ೪	,, ೧೨	,, ೨೦	,, ೩೨	,, ೬೫
ಅರೆಕಾಲು ಪಾನು	,, ೨	,, ೭	,, ೧೨	,, ೧೮	,, ೩೫

ಸೂಚನೆ:—ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದ ನಿರ್ಣಯ:—ಟಪ್ಪಾಲು ಹಾಸಲು ಶೇರಿ ೧ ವರುಷಕ್ಕೆ ೨ ರೂ. ೧೪ ಆ. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ರೂ. ೧ ಆ. ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)

ಹಾಫ್‌ಬೈಂಡ್ (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)

ಫುಲ್‌ಬೈಂಡ್ (ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ಖಾನೆಗಳಿದ್ದು ಗೆರೆಗಳುಳ್ಳವುಗಳು.

3″ × 8¼″, 3″ × 5¼″; 8¼″ × 6½″, 6½″ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು.

ಬಹಳ ಸಮಯದ ವರೆಗೆ ಬಾಳಿಕೆಗೆ ಫುಲ್‌ಸ್ಕೇಪ್ ಕಾಗದದಿಂದಲೂ ತಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಯಿಜುಗಳಲ್ಲಿ ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ

ಮೆನೇಜರ್,
ಶಾರದಾ ಮುದ್ರಾಲಯ,
ಮಂಗಳೂರು.

ಹಣವಿನ ಒಳ್ಳೇ ವಿನಿಯೋಗವು ಯಾವುದು— ಬೆಲೆಗೆ ತಕ್ಕ ಒದವೆಗಳನ್ನು ಪಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೨ ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಕಳೆದ 1902ನೇ ಇಸವಿಯಿಂದ ಸ್ವಕೀಯ ಶಾರದಾ ಛಾಪಖಾನೆಯಲ್ಲಿ ಮುದ್ರಣಾ ಕೆಲಸಗಳನ್ನು ನಡಿಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೊರ್ನ್‌ಫ್ಲೋರ್, ಚಾ, ಕೋಕೋವಾ ಕಾಫಿ ಹುಡಿ, ಬಿಸ್ಕೂಟು, ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟ್ರರ ಔಷಧೋಪಚಾರದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್, ಫೆಲ್ಲೋಸ್ಸಿರಪ್, ಕೆಮಿಕಲ್ ಫುಡ್, ಗಜಕರ್ಣದ ಮುಲಾಮು, ಮೊದಲಾದವುಗಳು ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವದಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರೂ ಅನುಭವ ಶಾಲಿಗಳೂ ಆದ ಡಾಕ್ಟ್ರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡಿಯಲು ಬಹುದು. (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು).

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಯಿಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್.

Mangalore Trading Association,
Mangalore S. Canara

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗ್ಳೂರು, ತಾರೀಕು 12ನೇ ಶುಕ್ರವಾರ ನವಂಬರ 1909. ಸಂಚಿಕೆ 32

William & Co. Fort Bombay.

ಅಮೃತಾಂಜನ.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು ಗಂಟ್ಲು ನೋವು ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು ಇದು ಸಣ್ಣ ಮಗ ವಿನ ಎಳೇ ದೇಹಕ್ಕಾದರೂ ಭಯವಿಲ್ಲದ ವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ಒಂದರ ಕಿಮ್ಮತು 8 ಆಣೆ

ದಂತಮಂಜನ

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ನೀಗಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ಒಂದರ ಕಿಮ್ಮತು 3 ಆಣೆ

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದೆಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚೆಲುವಿಕೆಯನ್ನು ಕೊಡುತ್ತದೆ ಡಬ್ಬಿ ಒಂದರ ಕಿಮ್ಮತು 8 ಆಣೆ ಆರು ಡಬ್ಬಿಗಳ ಕಿಮ್ಮತು ರೂ. 2—4—0

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ಮೆದುವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಃಶುದ್ಧಿ ಮಾಡುವದು. ಬಾಟ್ಲಿ ಒಂದರ ಕಿಮ್ಮತು ೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ೬ ನಮೂನೆ ಡಬ್ಬಿ	SAFE ★ EFFICACIOUS ★ SURE — WILLIAM & Co. BOMBAY — PILLS ★ OINTMENTS ★ POWDERS	ಕಿಮ್ಮತು ಆರು ಆಣೆ ೬ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ತುರಿಸುವ ಕಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ಒಂದರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಷ್ಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಪೆಪ್ಸಿನ ಕೊಕೊ, ಲೆಸಿತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ ೩೦ ಗುಟಿಕೆಗಳ ಡಬ್ಬಿ ಒಂದರ ಕಿಮ್ಮತು ರೂ 1

ಚೇಳು ಕಡಿತದ ಮೇಲಿನ ಔಷಧ

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೆ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ಒಂದರ ಕಿಮ್ಮತು 8 ಆಣೆ

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0—10—0.
ಖಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗ್ ಬರೆದಲ್ಲಿ ರವಾನಿಸಲ್ಪಡುವದು.

ವಿಳಾಸ — ವಿಲಿಯಮ್ ಮತ್ತು ಕಂಪನಿ, ಫೋರ್ಟ್ ಮುಂಬಯಿ. ಟೆಲಿಗ್ರಾಫ್ ವಿಳಾಸ—ಅಮೃತಾಂಜನ, ಮುಂಬಯಿ.

ಕೃಷ್ಣಲೀಲಾ ಸಂಗ್ರಹ (ಉತ್ತಮವಾದ ಪುಸ್ತಕ ಫೆಕ್ತ ಮೂಲಿಕಾ ವಿದ್ಯಾಸ್ಥೀ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಆಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ೩-೦-೦.

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ.	೦-೬-೦
ಉತ್ತರ ರಾಮಚರಿತ್ರೆ ಕಥೆ. ...	೧ ೫-೦
ಟೀಕಾ ರಾಘವೇಂದ್ರ ಸ್ತೋತ್ರ . .	೦-೨-೦
ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ	೦-೨ ೦
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦ ೨-೦
ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦-೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦ ೨ ೦
ಸ್ವರಸಹಿತವಾದ ನಮಕ ಚ ಮಕ	೦ ೨-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦-೪ ೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦ ೨ ೦
ಕೃಷ್ಣ ಕರ್ಣಾಮೃತ ಮೂಲ	೦ ೨ ೦
ದೇವರ ಸೇವೆ ಹೊಸ ಪುಸ್ತಕ	೦-೪ ೦
ಮುಕುಂದ ಮಾಲಾ (ಗೀತಾ)	೦ ೪-೦
ಶಿವ ನಾಮಾ	೦ ೦ ೬
ಹನುಮನ್ನಾಮಾ	೦ ೦ ೬
ಹರಿ ನಾಮಾ	೦ ೦ ೬
ಯಾಜುಹ ಪ್ರಯೋಗ	೦-೮ ೦
ಬೃಹತ್ಕಥಾ ಮಂಜರಿ	೦-೮-೦
ಕೃಷ್ಣ ಬೋಧಾಮೃತ	೦ ೬ ೦

೦-೪-೦ ಕಮ್ಮಿ ವಿ ಪಿ ರವಾನಿಸುವದಿಲ್ಲ

ಕೆಟಲಾಗು ಬೇಕಾದಲ್ಲಿ ಬರೆದು ತರಿಸಿಕೊಳ್ಳಬಹುದು

ವಿಳಾಸ — ಬಿ ಆದಿನಾರಾಯಣ ಶಾಸ್ತ್ರಿ,

ವಿದ್ಯಾನಂದ ಆಫೀಸ್, ಬೆಂಗಳೂರು

ಕುಂತಳ ಕೌಮುದಿ ತೈಲ.

ಕೂಚ್‌ಬಿಹಾರದ ಮಹಾರಾಣಿಯವರು ಅವರು ಉಪಯೋಗಿಸಿದ ಕೇಶವರ್ಧಕ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಸಿಂಗ್ ಮಹಾರಾಣಿಯವರು —ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯರುಗಳ್ಳ ತೈಲವೆಂದು ಶಿವರಾಮ ಸರ್ಕಾರವರು

ಶ್ರೀ ಸುರೇಂದ್ರನಾಥ ಬಾನರ್ಜಿಯವರು —ನಾನು ಉಪಯೋಗಿಸಿದ್ದೇನೆ ಸರ್ವರೂ ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನಮಾಡುವದಕ್ಕೂ ತಲೆ ಬಾಚಿಕೊಳ್ಳುವದಕ್ಕೂ ಅತ್ಯಂತ ಯೋಗ್ಯವಾದದ್ದು ಇದರಲ್ಲಿ ಅತ್ಯುತ್ತಮ ಕರವಾಗಿ ಕೂದಲನ್ನು ಬೆಳೆಸುವ ಗುಣವಿರುವದಲ್ಲದೆ ಇದು ಮಿದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸವಲವ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು

ಕವಿರಾಜ ಆರ್ ಸಿ ಸೇನ್, ಎಲ್ ಎಮ್ ಎಸ್,

216 ಕಾರನ್ ವಾಲಿಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ "ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು—ಎಲ್ ಎ ಫೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು—ಮ|| ರಾ|| ರಾ|| ಸಿ ಆರ್. ಕಾಮತರು,

ಉಲನ್ ವರ್ಕ್ಸ್, ಮಂಗಳೂರು.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು ಹಗಲ್‌ಬತ್ತಿ ವಗೈರೆ ರಂಗುಗಳ ವಸ್ತ್ರ 1ಕ್ಕೆ. ರೂ. 0—12—0.

ಸೈಜು ಇಂಚು 22×22 ವಸ್ತ್ರ ೧ಕ್ಕೆ .. .. „ 1—1—0.

ಸೈಜು ಇಂಚು 15×15 ಎರಡು ರೇಷ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ 2 ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರ 1ಕ್ಕೆ ರೂ 12, 13, 14, 15, 16, 17 ಡಿಟೋ ಸಪ್ಪೆ ರೇಷ್ಮೆ ಬಾಪ್ತು 1ಕ್ಕೆ ರೂ 6, 7, 8, 9, 10

ರೇಷ್ಮೆ ನಡುಕಟ್ಟುಗಳು

ಕೆಂಪು, ಪೂದಾ ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5 ½ ಮೊಳ, ಅ 2 ¾ ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1-4-0 1-8 0 1 10 0, 1 12 0 2 0 0, 2 8-0

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ ಕಾಟನ್ ಹಂಸ ಪಪ್ಪಳ, ಶೃಂಗಾರ ಪಪ್ಪಳ, ಜಗನ್ನಾಥ ಲಾಕಿಮುಂಗಿ, ಹಸರು ಮುಂಗಿ ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ 1 6 0 1-12 0

ಟಸ್ಸರ್ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ 1-0 0, 1 2 0, 1-3-0. ಮೇಲ್ಕಂಡ ಎಲ್ಲಾ ರಂಗುಗಳ ಪದಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2 4 0, 2 8 0, 2-10-0

ಟಸ್ಸರ್ ಬುಟ್ಟಾ ಕತೆ ಆಂಚಿನ ಪದಕಾರದ ಕಣ 1ಕ್ಕೆ ರೂ 1 4-0, 1-6-0, 1-8 0

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2 10 0, 2-12-0, 3 0-0

ಡಿಟೋ ಪದಕಾರಕ್ಕು ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಸೀರೆ ಕಣ 1ಕ್ಕೆ ರೂ 3 6 0, 3-8 0, 3-12 0

ಟಸ್ಸರ್ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಸೀರೆ ಕಣ 1ಕ್ಕೆ ರೂ 1 12 0, 2-0 0

ಹೆಚ್ ಸಂಕಪ್ಪಾ ಬವಪ್ಪವವರು,

ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,

ಬೆಂಗಳೂರು ಸಿಟಿ.

ವಿ. ಪಿ. ಆರ್ಡರುಗಳಿಗೆ ಸುಲಭ ಕ್ರಯ

ಗಡಿಯಾರ ಶಿ ಸೇರು ೧ಕ್ಕೆ ೦ ೮ ೦ ೧ ೦-೦, ೨ ೦ ೦, ೩-೦-೦, ೪-೦-೦, ೫ ೦-೦ ಗಂಧದ ಎಣ್ಣೆ ತೊಲ ೧ಕ್ಕೆ ರೂ ೨, ೪, ೮, ೬, ೧೨, ೧೬

ಅತ್ತರು (ಮಲ್ಲಿಗೆ ಗಂಧ) ತೊಲ ೧ಕ್ಕೆ ೧-೦-೦ ೧ ೮-೦

ಬೆಳ್ಳಿ ಗಣೇಶಗಳು ೧ಕ್ಕೆ ೨ ೮ ೦, ೩ ೦-೦, ೩-೮ ೦, ೪ ೦ ೦, ೫ ೦ ೦

ವ್ಯವಸಾಯ ಕ್ರಮ ಬೋಧಿನಿ ಸ್ಟಿಫ್ ಬೈಂಡ್ ಪ್ರತಿ ೧ಕ್ಕೆ ರೂ ೦-೧೨ ೦ ಕೆ ಡಿ ಸ್ಪೀಕರ ಬಾಕ್ಸ್ ಕಾಸಲ್ ಪ್ರತ್ಯೇಕ

ಉಲನ ಚವುಕಗಳು ಕೆಂಪು ಹಸುರು, ನೀಲಿ, ಗುಲಾಬಿ, ಎಣ್ಣೆ ರಂಗು ಗಳ್ಳ ೧ಕ್ಕೆ ರೂ ೧ ೬ ೦, ೨ ೦ ೦, ೩ ೦ ೦

ಉಲನ ಶಹಲುಗಳು ೧ಕ್ಕೆ ೬ ೦ ೬ ೧೨ ೦, ೪ ೦-೦

ಕ್ಯಾಷ್ಮೀರ ಶಹಲುಗಳು ಎಲ್ಲಾ ರಂಗುಗಳಲ್ಲಿಯೂ, ೧ಕ್ಕೆ ರೂ ೯ ೦-೦, ೧೦ ೦ ೦, ೧೨ ೦ ೦, ೧೫ ೦ ೦, ೧೭ ೦ ೦ ೧೮ ೦ ೦, ೨೦ ೦-೦

ಹಾಸನದ ಟೋಪಿ ಹಣೆಯುವ ಉಲನಾ ದಾರಗಳು ಕೆಂಪು, ಎಣ್ಣೆ ಗಂಪು ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦-೬-೦, ೦ ೧೦ ೦, ೦ ೧೨ ೦ ೦ ೧೪ ೦, ಡಿಟೋ ಸೂಜಿ ೧ಕ್ಕೆ ೦ ೧ ೬, ೦ ೨ ೦

ಊಲನ್‌ನಿಂದ ಹಣೆದ ಟೋಪಿಗಳು ಡಜನ್ ೧ಕ್ಕೆ ೪ ೮ ೦, ೫ ೦ ೦, ೬ ೦ ೦, ೭ ೮ ೦ ೮ ೦ ೦ ೧೦ ೦ ೦, ೧೧ ೦ ೦ ೦ ೧೨ ೦-೦

ಹೆಚ್ ಯನ್ ರಾವ್ ಬ್ರದರ್ಸ್.

262 ಚಿಕ್ಕಪೇಟೆ, ಬೆಂಗಳೂರು

ಗಿಡಗಳು, ಬೀಜಗಳು, ಹಣ್ಣು, ಹುವ್ವು, ಮತ್ತು ತರಕಾರಿ

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು, ಸೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ಬರೆದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್,

ಫ್ಲೋರಿಸ್ಟ್ ಅಂಡ್ ಸೀಡ್ಸ್‌ಮೆನ್,

ಲಾಲ್‌ಬಾಗ್ ರೋಡ್ ಕ್ರಾಸ್ ರಸ್ತೆ, ಬೆಂಗಳೂರು ಸಿಟಿ

DIARIES FOR 1910.

1910ನೇ ಇಸವಿಯ ಡೈರಿಗಳು.

ವಕೀಲರಿಗೂ, ವಕೀಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟು ಬೂಕು ಸ್ಸಾಚ್ ಕ್ರಯ ೮ ಅಣೆ

ಸಣ್ಣ ಸ್ಸಾಚ್ „ ೪ ಅಣೆ

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಶನ್ ದೊರಕುವುದು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು

ವಿಳಾಸ:—

ಮ್ಯಾನೇಜರ್,

ಶಾರದಾ ಪ್ರೆಸ್ ಮಂಗಳೂರು, ದ. ಕ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 12ನೇ ನವೆಂಬರ 1909

ಹಿಂದೂ ಸಮಾಜ

ಕಳೆದ ಒಂದು ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಪಂಜಾಬು ಹಿಂದೂ ಸಭೆಯು ಮುಂದೆ ಹಿಂದೂ ಸಮಾಜದ ಸಂಯೋಗದ ಕುರಿತು ಒಂದು ಠರಾವು ತರಲಾಯಿತು. ಇದನ್ನು ಅನುಮೋದಿಸುವಾಗ ಲಾಲಾ ಲಾಜಪತರಾಯರು ಮಾಡಿದ ಭಾಷಣದಲ್ಲಿ ಧಾರ್ಮಿಕ ಸಾಮಾಜಿಕ ವ (ಅನ್ಯ) ಸಮುದಾಯ ದೃಷ್ಟಿಯಿಂದ ಹಿಂದೂ ಸಮಾಜದ ದಿಗ್ದರ್ಶನವನ್ನು ಕೊಟ್ಟರು. ಹಲವು ವರುಷಗಳಿಂದ ಹಿಂದೂ ಸಮಾಜದ ಸ್ಥಿತಿಯನ್ನು ಸೂಕ್ಷ್ಮ ಬುದ್ಧಿಯಿಂದ ವಿಚಾರಿಸಿ ತಾನು ನಿರ್ಧರಿಸಿದ ಸಿದ್ಧಾಂತಗಳನ್ನು ಸಭಿಕರಿಗೆ ವ್ಯಕ್ತಪಡಿಸಿದರು. ಹಿಂದೂ ಸಮಾಜದ ಮಾತ್ರವಲ್ಲ ಹಿಂದುಸ್ಥಾನದ ಕಲ್ಯಾಣವನ್ನಪೇಕ್ಷಿಸುವವರಿಗೆ ಇವು ಪರಿಶೀಲನೀಯವಾಗಿವೆ.

ಒಂದು ಜನ ಸಮುದಾಯಕ್ಕೆ ಸಮಾಜವೆಂಬ ಹೆಸರು ಸಲ್ಲುವಂತೆ ಅದರ ಜನರೆಲ್ಲರಿಗೆ ಕೆಲವು ಲಕ್ಷಣಗಳು ಸಾಮಾನ್ಯವಾಗಿರತಕ್ಕದ್ದು. ಇವು ಹಿಂದೂಗಳಿಗಿವೆಯೋ ಎಂಬ ಪ್ರಶ್ನೆಯನ್ನು ಲಾಲಾರವರು ಮೊದಲು ಚರ್ಚಿಸಿದರು. ಒಂದೇ ಭಾವನೆ, ಒಂದೇ ಚೇತನಗಳಿಂದ ವ್ಯಾಪ್ತವಾದ ಒಂದೇ ಪರಂಪರೆಯಾಗಿ ಒಂದೇ ಸುಧಾರಣೆಯಿಂದ ಬಂಧಿಸಲ್ಪಟ್ಟ ಜನ ಸಮುದಾಯವನ್ನು 'ಸಮಾಜ'ವೆಂದು ಕರೆಯುವುದು. ಹಿಂದೂಗಳು ಅನೇಕ ಜಾತಿಭೇದಗಳಿಗೊಳಗಾಗಿರುವರು, ಅನೇಕ ಭಾಷೆಗಳನ್ನಾಡುವರು, ಅನೇಕ ಪಂಥಗಳನ್ನನುಸರಿಸುವರು. ಇವರನ್ನು ಒಂದು ಸಮಾಜವೆಂದು ಕರೆಯಕೂಡದೇ ಎಂದು ಪರ ಪಕ್ಷದವರು ವಾದಿಸುವರು. ಹಿಂದೂ ವಾಙ್ಮಯ, ಹಿಂದೂ ಧರ್ಮಶಾಸ್ತ್ರ ಹಿಂದೂ ಚರಿತ್ರ, ಇತ್ಯಾದಿಗಳಿಗೆ ಹಿಂದೂ ಎಂಬ ಲಕ್ಷಣ ಸೂಚಕ ಶಬ್ದವಿರುವ ಪದಗಳಿಂದಲೇ ಹಿಂದೂ ಎಂಬ ಒಂದು ಸಾಮಾನ್ಯ ವಚನವಿದೆಯೆಂದೂ ಅದು ಇತರ ಪದಗಳಿಂದ ಭಿನ್ನವೆಂದೂ ವ್ಯಕ್ತವಾಗುವದಲ್ಲ? ಇದು ಹೊರತು ಜಾತಿಭೇದಗಳು ಒಳಭೇದಗಳಿದ್ದಾಗ್ಯೂ ಎಲ್ಲರೂ ಆರ್ಯ ಕುಲಜರಾಗಿದ್ದು ಒಂದೇ ವಂಶಕ್ಕೆ ಸಂಬಂಧಿಸುವರು. ಅಲ್ಲದೆ ಫ್ರೆಂಚ್, ಇತ್ಯಾಲ್ಯ, ಜರ್ಮನ್ ಸಮಾಜಗಳಲ್ಲಿ ಪ್ರತಿಯೊಂದು ಭಿನ್ನ ಕುಲಗಳ ಸಂಯೋಗದಿಂದ ಹುಟ್ಟಿತು. ಆದ್ದರಿಂದ ಒಂದು ಸಮಾಜವು ಒಂದೇ ವಂಶಜರ ಕೂಟವಾಗಿರಬೇಕೆಂದಿಲ್ಲ. ಹಿಂದಿ, ಬಂಗಾಳಿ, ಮರಾಟಿ, ಗುಜರಾತಿ, ಪಂಜಾಬಿ ಎಂಬ ಅನೇಕ ಭಾಷೆಗಳಿದ್ದಾಗ್ಯೂ ಅವೆಲ್ಲವೂ ಸಂಸ್ಕೃತವೆಂಬ ಒಂದೇ ತಾಯಿಯ ಮಕ್ಕಳಾಗಿದ್ದುದರಿಂದ ಒಂದೇ ಭಾವ ಗರ್ಭಿತವಾಗಿವೆ. ಮತ್ತು ಯಾವ ಅನ್ಯಭಾಷೆಗಳನ್ನು ಕಲಿತರೂ ಯಾವ ಮಾತನ್ನಾಡಿದ್ದರೂ ಹಿಂದುಗಳೆಲ್ಲರಿಗೂ ಗೀರ್ವಾಣ ಭಾಷೆಯೊಂದೇ ಪೂಜ್ಯವಾಗಿರುತ್ತದೆ. ಎಷ್ಟು ಭಿನ್ನಪಂಥಗಳನ್ನನುಸರಿಸಿದರೂ ಹಿಂದುಗಳೆಲ್ಲರೂ ವೇದಗಳನ್ನು ಪ್ರಮಾಣವೆಂದು ನಂಬುವದರಿಂದ ಸನಾತನಧರ್ಮವು ಅವರಿಗೆ ಸರ್ವಸಾಮಾನ್ಯವೆಂದು ಹೇಳಬಹುದು. ಇದು ಹೊರತು ವೇದಗಳ ಪ್ರಮಾಣವನ್ನು ಒಪ್ಪದ ಬ್ರಹ್ಮ ಸಮಾಜ ಸಿಕ್ಖ ಸಮಾಜಗಳನ್ನು ಸಹ ಹಿಂದುಗಳೊಡನೆ ಬಂಧಿಸುವ ಸಬಲ ಸಾಧನವೊಂದದೆ. ಅದೇ ಹಿಂದೂ ಸುಧಾರಣೆ. ಈ ಸುಧಾರಣೆಯ ಚೇತನವು ಪರಶಕ್ತಿ.

ಈ ಸಂದರ್ಭದಲ್ಲಿ ಲಾಲಾರವರು ಆವಿಷ್ಟರಾಗಿ ಪಾರಂಪರ್ಯವಾಗಿ ಬಂದ ಈ ಪಾರಮಾರ್ಥಿಕ ಧನವೆಂಬ ಪಿತ್ರಾರ್ಜಿತ ಆಸ್ತಿಯನ್ನು ಸಂರಕ್ಷಿಸಬೇಕೆಂದು ಸಭಿಕರನ್ನು ಕೇಳಿಕೊಂಡರು. "ನಾನೊಬ್ಬನು ಆ ಧನವನ್ನು ಇಡೀ ಲೋಕದ ಪ್ರಭುತ್ವ ಸಿಕ್ಕಿದರೂ ಬಿಟ್ಟುಕೊಡಲೊಲ್ಲೆನು. ನೀವು ಯಾಕೆಂದು ನನ್ನೊಡನೆ ಕೇಳಬಹುದು. ಉತ್ತರವೇನಂದರೆ ಅಗ್ಗೆ ನಾವು ಹಿಂದುಗಳೆನ್ನಿಸಲಾರೆವು". ಇದು ನಮ್ಮ ಧನ ಮಾತ್ರವಲ್ಲ ಇಡೀ ಲೋಕದ ಧನವಾಗಿದೆ. ಇದು ನಷ್ಟವಾದರೆ ಲೋಕದ ಜನಾಂಗಗಳು ಬಡವರಾಗುವರು.

ಲಾಲಾರವರು ಸಭೆಗೆ ಹೇಳಿದ ಇನ್ನೊಂದು ಜಾಗ್ರತೆಯೇನಂದರೆ—ನಾವು ಸರ್ವಸ್ಥಿರೆಂದಾಗಲೀ ನಮಗೆ ಇತರ ಜನಾಂಗಗಳಿಂದ ಏನು ಕಲಿಯತಕ್ಕದ್ದಿಲ್ಲವೆಂದಾಗಲೀ ನಾನು ಹೇಳುವದಿಲ್ಲ. ಅವರ ಪರಿಂದ ತಿಳಿಯತಕ್ಕ ಸಂಗತಿಗಳನ್ನು ಅಂಗೀಕರಿಸುವಾಗ ನಮ್ಮ ವ್ಯಕ್ತಿತ್ವವನ್ನು, ಹಿಂದೂಗಳೆಂಬ ಮುದ್ರಾಂಕಿತವನ್ನು ಕಳಕೊಳ್ಳಬಾರದು. "ಹಿಂದೂ" ಎಂಬ ಹೆಸರು ನಮ್ಮ ಶಾಸ್ತ್ರಗಳಲ್ಲಿ ಇಲ್ಲವೆಂದೂ, ಅದು ಮುಸಲ್ಮಾನರು ತುಚ್ಛೀಕಾರದಿಂದ ನಮಗೆ ಕೊಟ್ಟ ಹೆಸರಾದ್ದರಿಂದ ಅದನ್ನು ಪರಿಗ್ರಹಿಸಕೂಡದೆಂದೂ ಕೆಲವರು ವಾದಿಸುವರು. ಹೆಸರಿನಲ್ಲಿ ತುಚ್ಛೀಕಾರದ ಸೂಚನೆಯೇನೂ ಇಲ್ಲ. ಆದರೂ ಆ ಹೆಸರಿಗೆ ಗೌರವ ತರುವದು ನಮ್ಮ ಕೈಯಲ್ಲಿದೆ. ನಾವು ನಮ್ಮ ಪೂರ್ವಜರಂತೆ ಆಚಾರ ಪರರಲ್ಲಿ ಅಂದರೆ ಸತ್ಯವಾದಿಗಳಾಗಿ, ಪೌರುಷವಂತರಾಗಿ, ಧರ್ಮಾಚರಣೆಯಲ್ಲಿ ನಿರ್ಮತರಾಗಿ, ಧೈರ್ಯಶಾಲಿಗಳಾಗಿ ಉದಾರಶೀಲರಾಗಿ, ಪಾರಮಾರ್ಥಿಕ ತೇಜೋವಂತರಾಗಿ ನಡೆದರೆ ಹಿಂದೂ ಎಂಬ ಹೆಸರು ಅಂಥಾ ಗುಣಗಳಿಗೆ ಪ್ರತಿಪದವಾಗಿ ನಿಲ್ಲುವದು.

ಪೂರ್ವಜರು ಸಾಮಾಜಿಕ ಬಾಳುವ ಸಂರಕ್ಷಣೆಗಾಗಿ ವಿಧಿಸಿದ ಆಚಾರ ಪದ್ಧತಿಗಳು ನಾರವಾಗಿ ವ್ಯಕ್ತಿಬಾಳುವ ನಮ್ಮಲ್ಲಿ ಬೆಳೆಯುವದನ್ನು ಕುರಿತು ಲಾಲಾರವರು ಕರಕರೆಪಟ್ಟರು. ಈ ಸಂಗತಿಯು ಹಿಂದೂಗಳ ಸಂಯೋಗವನ್ನೂ ರಾಷ್ಟ್ರೀಯ ಐಕ್ಯವನ್ನೂ ಅಪೇಕ್ಷಿಸುವವರು ವಿಚಾರಿಸತಕ್ಕ ವಿಷಯವಾಗಿದೆ. ನಾಲ್ಕು ಕಡೆಯಿಂದಲೂ ಸ್ವಿಂದನ್ನು ಬಿಟ್ಟು ಕೂಡಿಸಿ ಬಳಗೆ ಅಪವಿತ್ರತ್ವವನ್ನು ಪರಿಗಣಿಸುತ್ತಿದ್ದ ಯಜ್ಞಯಾಗಗಳು ಈಗ ಇಲ್ಲವೆ? ದೇವಾರಾಧನೆಯ ಕಾಲದಲ್ಲಿ ಸಮುದಾಯ ಕೂಡುವದಿಲ್ಲ. ಜಾತ್ಯಂತರದಲ್ಲಿ ಕೂಡಿ ಊಟ್ಮಾಡ ಸನಾತನವೆ ಕಲಿಯುವಾಗುತ್ತಿವೆ. ಇದ್ದಲ್ಲಿ ಮುಂದಿನಂತೆ ನ್ಯಾಯಪಂಚಾಯಿತಿ ಈಗ ಇರುವದು ಅಪರೂಪ. ವಿವಾದ ತೀರ್ಮಾನದ ಸ್ಥಳ ಪಂಚಾಯಿತದ ಬದಲಿಗೆ ಜನರು ಕೋರ್ಟು ಕಚೇರಿಗಳನ್ನೇ ಸಾರುವರು. ಇವೆಲ್ಲ ಕಾರಣಗಳಿಂದ ಜನರ ಸಾಮಾಜಿಕ ಐಕ್ಯ ಬಂಧವು ಸಡಲಿಸುತ್ತಿರುವದು ಆಶ್ಚರ್ಯಕರವೇ? ಪುರಾತನ ಸ್ಥಾಪನೆಗಳ ಪುನರುಜ್ಜೀವನವೇನೋ ಈಗ ಅಸಾಧ್ಯವಾಗಿರಬಹುದು. ಆದರೆ ವರ್ತಮಾನಕಾಲಕ್ಕೆ ಅನುಕೂಲವಾದ ಇತರ ಸಾಧನೆಗಳನ್ನು ನಿರ್ಮಿಸಿ ಅವುಗಳ ಮೂಲಕ ಈ ಐಕ್ಯಭಾವವನ್ನು ರಕ್ಷಿಸುವದು ಅವಶ್ಯಕ.

ಪಂಜಾಬು ಹಿಂದೂ ಸಭೆಯು ರಾಷ್ಟ್ರೀಯ ಐಕ್ಯಕ್ಕೆ ಪ್ರತಿಕೂಲವೆಂದೂ ಇದರಿಂದ ಹಿಂದೂಗಳಿಗೂ ಮಹಮ್ಮದೀಯ ಮೊದಲಾದ ಇತರ ಸಮುದಾಯಗಳಿಗೂ ವೈಷಮ್ಯ ಹುಟ್ಟುವದೆಂದೂ ಕೆಲವರು ಟೀಕಿಸಿದ್ದರು. ಇದನ್ನು ಲಾಲಾರವರು ಪೂರ್ಣ ಖಂಡಿಸಿದರು. ಅವರ ತರ್ಕವಾದವೇನಂದರೆ—ಭಾರತೀಯ ಜನಾಂಗವೆಂಬ ಜೀವನವು ಇತರ ಸರ್ವ ಜನಾಂಗಗಳಂತೆ ಬುಡಮೇಲಕ್ಕೆ ಕಟ್ಟಿಕೊಂಡು ಬರತಕ್ಕದಾಗಿದೆ. ಆದಕಾರಣ ಹಿಂದೂಗಳು ಮಹಮ್ಮದೀಯ ಮೊದಲಾದ ವಿವಿಧ ಸಮುದಾಯಗಳು ಮುಂಚೆ ತಮ್ಮ ತಮ್ಮ ಒಳಭೇದಗಳನ್ನು ಕಳೆದು ಒಂದಾದನಂತರವೇ ಹಿಂದೂಗಳು ಮಹಮ್ಮದೀಯರೊಡನೆ ಕೂಡುವ ವಿಷಯವನ್ನೆತ್ತಬಹುದು. ಅದರ ಮೊದಲು ಅಂದರೆ ಹಿಂದುಗಳೊಳಗೆ ಸಾವಿರಾರು ಭೇದಗಳು ಇರುವಷ್ಟರವರೆಗೆ ಹಿಂದೂ ಮಹಮ್ಮದೀಯ ಐಕ್ಯದ ಕುರಿತು ಕೊಂಗ್ರೆಸು ಸಭೆಯಲ್ಲಿ ಮಾಡುವ ಭಾಷಣಗಳು ಬರೇ ಗಳಿಪಾರದಂತೆ ವ್ಯರ್ಥವಾಗಿವೆ. ಮಹಮ್ಮದೀಯರು ಈ ಮಾರ್ಗವನ್ನನುಸರಿಸಿ ತಮ್ಮ ಉಪಭಾಗಗಳನ್ನು ಜೋಡಿಸಿ ಈ ದಿನ ದೃಢವಾಗ ಅಸ್ತಿವಾರದ ಮೇಲೆ ಬಲವಾಗಿ ನಿಂತು ಮುಂದೊತ್ತುವರು. ಸಮುದಾಯ ದೃಷ್ಟಿಯಿಂದ ನೋಡುವವಾದರೆ ವಿವಿಧ ಸಮುದಾಯಗಳೊಳಗೆ ಈಗ ನಡಿಯುವ ಪೈಪೋಟಿನಲ್ಲಿ ಹಿಂದು ಸಮುದಾಯವು ಸೋತು ಸಂಕಷ್ಟಕ್ಕೊಳಗಾಗಿದೆ. ಇದಕ್ಕೆ ಕಾರಣವು ಅವರೊಳಗಣ ಅಸಂಖ್ಯಾತ ಭೇದಗಳೂ ಸಂಯೋಗದ ಅಭಾವವೂ. ಇಂತಹ ಕಲಹಪ್ರಿಯ ದುರ್ಬಲ ಸಮುದಾಯವನ್ನು ಮುಸಲ್ಮಾನ ಅಥವಾ ಇತರ ಸಮುದಾಯವು ಒಳಕೊಳ್ಳುವದೇ? ಆದರೆ ಹಿಂದುಗಳು ವ್ಯವಸ್ಥಿತರಾಗಿ ಒಬ್ಬನೇ ನಾಯಕನ ಕೈಕೆಳಗಣ ದಳದಂತೆ ಒಂದಾಗಿ ನಿಂತರೆ ಅಂತಹ ಆಸಮಾನ ಬಲಶಾಲಿಗಳೊಡನೆ ಯಾರೂ ಕೂಡ ಸಮ್ಮತಿಸದಿರರು.

ಮೊನ್ನೆ ಸ್ಥಾಪಿತವಾದ ಪಂಜಾಬು ಹಿಂದೂ ಸಭೆಯಂತಹದೊಂದು ಸಭೆಯು ಅವಶ್ಯಕವೆಂದೂ ಅದಿಲ್ಲದಿದ್ದರೆ ಹಿಂದೂಗಳು ಒಟ್ಟಾಗಿ ತಮ್ಮ ಮೊರೆಯನ್ನು ಸಾಧಿಸಲು ಸಾಧ್ಯವಿಲ್ಲದೆ ಹಿಂದುಳಿಯುವರೆಂದೂ ಗರ ವರುಷಕ್ಕ ಕೂಡಿದ ಲಾಲಾರವರು ...

ತಮ್ಮ ಅಭಿಪ್ರಾಯವನ್ನು ಆಗ್ಯೆ ಪ್ರಕಟಿಸಿದ್ದರು. ಅವರ ಮಾತು ಇಂದು ಫಲಿಸಿತು. ಲಜಪತರು ಇನ್ನು ಹೇಳುವದೇನೆಂದರೆ, ಹಿಂದೂಗಳು ಬಹುಪಕ್ಷವಾಗಿದ್ದಾರೆ, ಹಿಂದೂ ಸಮಾಜವೇ ದೇಶದಿಂದ ಅಳಿದು ಹೋಗದು, ಅವರು ತೀರಾ ಪರದೇಶಕ್ಕೆ ಹೋಗಲೂ, ಸಾಧ್ಯವಲ್ಲ ಅವರಿಗೆ (ಮಹಮ್ಮದೀಯರಂತೆ) ಇತರ ದೇಶದಿಂದ ಸ್ವಧರ್ಮಾವಲಂಬಿಗಳು ಕೂಡಿ ಬಲಕೊಡುವದೂ ಅಸಾಧ್ಯ ಆದ್ದರಿಂದ ಹಿಂದುಗಳು ತಮ್ಮನ್ನು ತಾವೇ ಬಲಪಡಿಸಿ ಸ್ವಾವಲಂಬನದಿಂದಲೇ ಏಳತಕ್ಕದ್ದು ಇಷ್ಟು ದೊಡ್ಡ ಸಮುದಾಯವು ದುರ್ಬಲವಾಗಿ ಉಳಿದರೆ ಹಿಂದುಸ್ಥಾನವೇ ದುರ್ಬಲವಾಗುವದು ಆದ್ದರಿಂದ ಹಿಂದೂ ಸಮಾಜದ ಅಭಿವೃದ್ಧಿಯನ್ನು ಬಯಸಿ ಆ ಬಗ್ಯೆ ಹೋರಾಡುವದು ಯಥಾರ್ಥ ದೇಶ ವಾತ್ಸಲ್ಯ

ಲಾಲಾರವರ ಭಾಷಣದ ಕಡೇ ಮಾತುಗಳನ್ನು ಕೇಳುವಾ ಈಗ ಹಿಂದೂ ಮುಸಲ್ಮಾನ ಮೊದಲಾದ ಸಮುದಾಯಗಳೊಳಗೆ ನಡಿಯುವ ಹೋರಾಟದಲ್ಲಿ ತಾನು ಮೊದಲು ಹಿಂದು ನಂತರ ಭಾರತೀಯನೆಂದು ಬಗೆದು ವರ್ತಿಸುವೆನು ಆದರೆ ಪರದೇಶಿಯರೊಡನೆ ತಾನು ಮೊದಲು ಭಾರತೀಯನು ನಂತರ ಹಿಂದೂವೆಂದು ನಡೆಯುವೆನು. ಕೌರವನ ವೈರಿಗಳು ಧರ್ಮರಾಜನನ್ನು ಸೇರಿ ತಾವು ನಿನ್ನನ್ನು ಕೂಡಿ ಕೌರವರೊಡನೆ ಕಾದಾಡುವೆವೆಂದು ಹೇಳಿದಾಗ ಯುಧಿಷ್ಠಿರನು ಹೀಗೆ ಹೇಳಿದನು "ನಾವೈವರು, ಅವರು ನೂರು ಮಂದಿ ಆದರೆ ಪರರೊಡನೆ ಬಂದ ಸಮಯದಲ್ಲಿ ನಾವು ನೂರೈವರು" ಈ ಪ್ರಕಾರವೇ ತಾನು ಇತರ ಸಮುದಾಯದ ಜೊತೆಗೆ ನಡೆಯುವೆನೆಂದು ಹೇಳಿ ಭಾಷಣವನ್ನು ಮುಗಿಸಿದರು

~~~~~~

ದಕ್ಷಿಣ ಹಿಂದೂಸ್ಥಾನದ ಭಾರತೀಯ ವ್ಯಾಪಾರಿಗಳ ಸಂಘ ಯಾ ಚೆಂಬರ್ ಒಫ್ ಕೊಮರ್ಸ್ ಇತ್ತಲಾಗ ಹೊಸತಾಗಿ ಸ್ಥಾಪಿಸಿದ ಭಾರತೀಯ ಶ್ರೇಷ್ಠ ವ್ಯಾಪಾರಿಗಳ ಮತ್ತು ಕೈಗಾರಿಕೆಯ ದೊಡ್ಡದೊಡ್ಡ ಕಾರ್ಖಾನೆಗಳ ಮಾಲಿಕರ ಸಂಘವು ಮದ್ರಾಸಿನಲ್ಲಿ ಇತ್ತಲಾಗೆ ಏರ್ಪಟ್ಟಿರುವುದು ಪ್ರತ್ಯೊಂದು ದೇಶಗಳ ಔದ್ಯೋಗಿಕ ವ್ಯಾಪಾರವು ಅಭಿವೃದ್ಧಿಯಾಗುವುದು ಆ ದೇಶದ ಸಂಪತ್ತಿಗೆ ಮೂಲ ಕಾರಣವಾಗಿರುವುದು ವ್ಯಾಪಾರ ಅಭಿವೃದ್ಧಿಯೊಂದಿಗೆ ವ್ಯಾಪಾರ ವಿದ್ಯೆಯ ಪ್ರಗತಿ ಸ್ವಂತಸ್ವದೇಶಗಳ ಅಭಿವೃದ್ಧಿಯನ್ನು [illegible] ಇಷ್ಟೇ ಅಲ್ಲ, ತಮ್ಮ ದೇಶಗಳಲ್ಲಿ ತಯ್ಯಾರಾದ ಸಾಮಗ್ರಿಗಳ [illegible] ಅಥವಾ ಅನ್ಯದೇಶಗಳಿಗೆ ಬಂದು ಕೈಗಾರಿಕೆ ವ್ಯಾಪಾರ [illegible] ತಮ್ಮ ಬಲದಿಂದ ಏರ್ಪಡಿಸಿ ಅವುಗಳ ಅಭಿವೃದ್ಧಿ [illegible] ಕೂಡಿ ಅಲ್ಲಲ್ಲಿ ಚೆಂಬರ್ ಒಫ್ ಕಾಮರ್ಸ್ [illegible] ಸಂಘಗಳನ್ನು [illegible] ಸಿರುವರು ಹಿಂದೂಸ್ಥಾನ [illegible] ಪಾಶ್ಚಾತ್ಯರ [illegible] ಸಂಘಗಳು ಮುಂಬಯಿ [illegible] ರಂಗೂನ್, ಕೊಚ್ಚಿ, ಕೊಕನಾಡ, ಪೊನಪುರ, ಕಚ್ಚನಾರ್ ಈ ಮೊದಲಾದ [illegible] ಹಲವು ಸಮಯದಿಂದ ಇದ್ದು ಪಾಶ್ಚಾತ್ಯ [illegible] ಸಹಕಾರಿಗಳಾಗಿರುವವು [illegible] ಕಮಿಶನ್, ದಲಾಲಿ, ಮೊದಲಾದವುಗಳ [illegible] ನಿರ್ಣಯವನ್ನೂ ಈ ಸಂಘದವರು [illegible] ದಾದ ವಿವಾದಗಳನ್ನು ತೀರ್ಮಾನಿಸಿದುವರ [illegible] ಆಯಾ ವ್ಯಾಪಾರಿಗಳ ಹಿತವನ್ನು ಸದಾ [illegible] ಈ ಸಂಘಗಳ ಕರ್ತವ್ಯವಾಗಿರುವುದು ಸರಕಾರವೂ ಸಹಾ ಎಲ್ಲಾ ವ್ಯಾಪಾರ ವಿಷಯಗಳಲ್ಲಿ ಇವರ ಅಭಿಪ್ರಾಯವನ್ನು ಪಡೆಯುವದಲ್ಲದೆ [illegible] ಈ ವ್ಯಾಪಾರಿ ಸಂಘಗಳಿಂದ ಪ್ರತಿನಿಧಿಗಳನ್ನು ಚುನಾಯಿಸುವರು

ಭಾರತೀಯರು ವ್ಯಾಪಾರ ವಿಷಯಗಳಿಗೆ [illegible] ರಿಂದ ಭಾರತೀಯರಿಂದಲೇ ಏರ್ಪಡಿಸಿದಂಥಾ ಈ ವ್ಯಾಪಾರಿ ಸಂಘಗಳು ಅತಿ [illegible] ಪ್ರಕೃತ 'ಸ್ವದೇಶಿ' ಚಳವಳವು ಇಲ್ಲಿ [illegible] ದೇಶೀಯ ವ್ಯಾಪಾರ ಕೈಗಾರಿಕೆಗಳು [illegible] ವಾಗಿ ಅಭಿವೃದ್ಧಿಸಿ, ಇಂತಹ ಸಂಘಗಳನ್ನು ರಚಿಸುವ ಕುತೂಹಲವು ದೇಶೀಯರಲ್ಲಿ ಅಲ್ಲಲ್ಲಿ ತಲೆದೋರುತ್ತಲಿರುವುದು ಮದ್ರಾಸಿನಲ್ಲಿ ಸದರ್ನ್ ಇಂಡಿಯಾ ಚೇಂಬರ್ ಒಫ್ ಕೊಮರ್ಸ್ ಎಂಬ ಭಾರತೀಯ ವ್ಯಾಪಾರಿಗಳ ಸಂಘವು ಇತ್ತಲಾಗೆ ಸ್ಥಾಪಿಸಲ್ಪಟ್ಟಿರುತ್ತದೆ ಮದ್ರಾಸಿನಲ್ಲಿಯೇ 100ರಕ್ಕಿಂತ ಹೆಚ್ಚು ಜನ ವರ್ತಕರು ಇದರ ಮೆಂಬರರಾಗಿರುವರು. ಹಿಂದೂಸ್ಥಾನದ ಮುಖ್ಯವಾಗಿ ದಕ್ಷಿಣಹಿಂದುಸ್ಥಾನದ ಕೈಗಾರಿಕೆ ವ್ಯಾಪಾರ ಮೊದಲಾದವುಗಳ ರಕ್ಷಣೆ ಮತ್ತು ಅಭಿವೃದ್ಧಿಯು ಈ ಸಂಘದವರ ಮುಖ್ಯ ಉದ್ದಿಶ್ಯವಾಗಿರುವುದು ಭಾರತೀಯ ವ್ಯಾಪಾರಿಗಳಲ್ಲಿ ಸಹಕಾರ ಅನ್ಯೋನ್ಯಭಾವ ಮೊದಲಾದವುಗಳನ್ನುಂಟುಮಾಡಿ ಅವರಿಗೆ ವ್ಯಾಪಾರ ವಿಷಯಗಳಲ್ಲಿ ಬೇಕಾದ ಅನುಭವವನ್ನು ಕೊಡುವುದೂ ಕೈಗಾರಿಕೆ ವ್ಯಾಪಾರ ಒಡವೆಗಳಲ್ಲಿ ವಿಶೇಷವಾದವುಗಳನ್ನು ಇರಿಸಲಿಕ್ಕೆ ಒಂದು ಮ್ಯುಜೀಯಮಖಾನೆಯನ್ನು ಸ್ಥಾಪಿಸುವುದೂ, ವಸ್ತುಪ್ರದರ್ಶನ ಮೊದಲಾದವುಗಳನ್ನು ಏರ್ಪಡಿಸಿ ಕೈಕಾರಿಕೆಗಳನ್ನು ಪ್ರೋತ್ಸಾಹಗೊಳಿಸುವುದೂ ಸಹಾ ಈ ಸಂಘದವರು ಕೈಕೊಂಡಿರುವ ಕರ್ತವ್ಯಗಳಾಗಿರುವವು. ಸಂಘದ ಅಧ್ಯಕ್ಷರು ಬಹುಮಾನಪಟ್ಟ ರಾ|| ಪಿ. ತ್ಯಾಗರಾಯ ಚೆಟ್ಟಿಯವರಾಗಿರುವರು. ಗವರ್ನಮೆಂಟಿನವರ ಮನ್ನಣೆಯನ್ನು ಹೊಂದುವಂತೆ ಈ ಸಂಘದವರು ಪ್ರಯತ್ನಿಸುತ್ತಿರುವರು. ಈ ಬಗ್ಗೆ ಸಂಘದ ಪ್ರತಿನಿಧಿಗಳಲ್ಲಿ ಕೆಲವರು ಸದ್ಯದಲ್ಲಿಯೇ ನಮ್ಮ ಗವರ್ನರ್ ದೊರೆಗಳವರ ಭೇಟಿಯನ್ನು ಮಾಡುವರು ಈ ಸಂಘದಿಂದ ಸಹಾ ಒಬ್ಬೊಬ್ಬ ಪ್ರತಿನಿಧಿಗಳನ್ನು ಸದ್ಯದಲ್ಲಿಯೇ ಜ್ಯಾರಿಗೆ ಬರುವ ಕೌನ್ಸಿಲು ಸುಧಾರಣೆಗಳಿಗನುಗುಣವಾಗಿ ಏರ್ಪಡುವ ಸಂಸ್ಥಾನಿಕ ನ್ಯಾಯವಿಧಾಯಕ ಸಭೆಗೆ ಚುನಾಯಿಸಬಹುದಾಗಿ ನಿರೀಕ್ಷಿಸಲ್ಪಟ್ಟದೆ.

ದಕ್ಷಿಣ ಹಿಂದುಸ್ಥಾನದ ಇತರ ಕಡೆಗಳಲ್ಲಿರುವ ವ್ಯಾಪಾರಿಗಳು ಈ ಸಂಘದ ಶಾಖೆಗಳನ್ನು ಅಲ್ಲಲ್ಲಿ ಏರ್ಪಡಿಸಿ ಅವ್ಯವಸ್ಥಿತ ಸ್ಥಿತಿಯಲ್ಲಿರುವ ತಮ್ಮ ವ್ಯಾಪಾರ ಕೈಗಾರಿಕೆಗಳನ್ನು ವ್ಯವಸ್ಥೆಪಡಿಸುವರಾಗಿ ಕೋರುತ್ತೇವೆ

ಶ್ರೀಕೃಷ್ಣ ಚರಿತ್ರ.

(ಕಳದ ಸಂಚಿಕೆಯಿಂದ ಮುಂದೆ ಸಾಗಿಸಿದ್ದು)

ಎಂಟನೆಯ ಪ್ರಕರಣ

ಸಮ್ಮೇಲನ

~~~~~~

ಕುರುಕ್ಷೇತ್ರದ ವಿಶಾಲವಾದ ಸಮರ ಭೂಮಿಯಲ್ಲಿ, ಒಂದು ದೊಡ್ಡದಾದ ಬಕುಳ ವೃಕ್ಷದ ಬಳಿಯಲ್ಲಿ, ಕೋಮಲವಾದ ಚಂದ್ರಕಿರಣಗಳು ಹಾಲಿನ ನೂಲಿಂದ ನೇತ ಮೆದುಗಂಬಳಿಯಂತೆ ದಟ್ಟವಾಗಿ ಪಸರಿಸಿದ್ದುವು ನೀಲವಾದ ಗಗನವು ಶರತ್ಕಾಲದ ಕಾಂತಿಯಿಂದ ಅನಂತ ತಾರೆಗಳಿಂದ ಸಾಂದ್ರವಾಗಿ ಮಿರುಗುವ್ರೋವಾದಿಯಲ್ಲಿ, ಆ ಮರವು ಸಿಹಿಗಾಗಿ ಏರಿದಿರುವ ಸಹಸ್ರಾರು ಹೂವುಗಳಿಂದ ತುಂಬಿ ಮೊರೆಯುತ್ತಲಿದ್ದಿತು ಆ ಕುಸುಮರಾಶಿಯ ಸೌಗಂಧವೂ ನೋಡಿಯೂ ದಿಗಂತವ್ಯಾಪಿಯಾಗಿದ್ದಿತು ಆ ಮರದಡಿಯಲ್ಲಿ, ಆ ನಿಶೀಥ ಕಾಲದಲ್ಲಿ, ಶೈಲಜೆಯೂ ಸುಭದ್ರೆಯೂ ಒಬ್ಬಳನ್ನೊಬ್ಬಳು ತಕ್ಕೈಸಿಕೊಂಡು ಕುಳಿತಿದ್ದರು ಜಗತ್ತಿನ ಸಂಹಾರ ರೂಪಿಯಾದ ಕುಡುಗೋಲಿನ ರೀತಿಯಿಂದ ತೋರುವ ಬಿದಿಗೆಯಂದುವು ಆಕಾಶ ಗಂಗೆಯ ದಂಡೆಯಲ್ಲಿ ನಿಶ್ಚಲವಾಗಿದ್ದನು ಸುತ್ತುಮುತ್ತಲೂ ಪ್ರಕೃತಿಯ ಲಲಾಟದಲ್ಲಿ ಭೀಷಣತೆಯ ಮುದ್ರಿತೆಗಳು ಪ್ರತ್ಯಕ್ಷವಾಗುತ್ತಲಿದ್ದುವು ಆದರೆ ಆ ವಿಕಟತೆಯಿಂದ ಆ ಇಬ್ಬರು ವ್ಯಕ್ತಿಗಳು ಬಯಾರ್ತರಾದಂತೆ ತೋರುತ್ತಿದ್ದಿಲ್ಲ ಶೋಕದಿಂದ ಉದ್ವಿಗ್ನವಾದ ಅಂತಃಕರಣಕ್ಕೆ ಪ್ರಕೃತಿಯ ಸ್ವರೂಪದ ವಿಷಯಗಳ ನೆಲೆಲು ಕೂಡಾ ಸೋಂಕದು

ಆಗ್ಗೆ ಸುಭದ್ರೆಯು ಶೈಲಜೆಯನ್ನು ಮುತ್ತಿಟ್ಟು ಹೀಗೆಂದಳು—"ತಾಯಿಯೆ, ಇನ್ನು ಮುಂದೆ ನೀನು ಯಾವಾಗಲೂ ನನ್ನೊಡನೆಯೇ ಉಳಿದುಕೊಳ್ಳಬೇಕು ನನ್ನನ್ನು ಬಿಟ್ಟು ನೀನು ಎಲ್ಲಿಗೂ ಹೋಗಬೇಡ ನಾನು ನಿನ್ನನ್ನು ಎಲ್ಲಿಗೂ ಹೋಗಬಿಡೆನು ಇದುವರೆಗೆ ಹದಿನಾಲ್ಕು ವರುಷಗಳಿಂದ ಪಾರ್ಥನೂ ನಾನೂ ನಿನ್ನನ್ನೇ ಕುರಿತು ಚಿಂತಿಸುತ್ತಿದ್ದೆವು ವಾಸುಕಿಯು ನಿನ್ನನ್ನು ಕೊಂದಿರಬೇಕೆಂದು ಬಗೆದು, ವ್ಯಾಕುಲವಾದ ಪ್ರಾಣಗಳಿಂದ ನಾವು ನಿನಗಾಗಿ ಎಷ್ಟೋ ಬಾರಿ ಶೋಕಿಸಿದೆವು ಪುನಃ ನಮಗೆ ಹೀಗೆ ತೋರುತ್ತಿತ್ತು—ನಿನ್ನಂತಹ ಸುಂದರವಾದ ವನಪುಷ್ಪವು, ಎಲ್ಲಿಯಾದರೂ ನಮಗೆ ಕಂಡರಿಯಕೂಡದೊಂದು ಕಡೆಯಲ್ಲಿ ಅರಳಿದ್ದು, ತನ್ನ ಸೌರಭ (ಸುಗಂಧ)ವನ್ನು ಎಂಟು ದೆಸೆಗಳಿಗೂ ಬೀರುತ್ತ, ಮನುಷ್ಯ ಜಾತಿಯ ಬೆಂದಿರುವ ಪ್ರಾಣಗಳನ್ನು ತಂಪುಗೈಯುತ್ತಲಿರಬೇಕು ಎಂದಿಗಾದರೂ ನಿನ್ನ ಭೇಟಿಯು, ನಮಗೆ ಮರಳಿಯಾಗದೇ ಇರದು ಎಂಬ ಆಶೆಯು ನಮ್ಮಲ್ಲಿ ಸದಾ ಜಾಗ್ರತವಾಗಿದ್ದಿತು. ನೀನು ಒಂದು ಹೆಣ್ಣು ಹುಲ್ಲೆಯಂತೆ ಕಾಡಿನಲ್ಲಿ ಅತ್ತಿತ್ತ ಅಲೆದು ವಿಪರೀತ ದುಃಖವನ್ನು ಸಹಿಸಿದೆ ಇನ್ನು ನೀನು ನಮ್ಮನ್ನು ಅಗಲದಿರು.

ಶೈಲಜೆಯು ತುಸ ಹೊತ್ತು ಸುಮ್ಮನಿದ್ದಳು ಆ ಮೇಲೆ ಆಕೆಯು—"ಅವ್ವಾ, ಮುಂದೆ ನೀನು ನನ್ನ ಈಯೊಂದು ಮಾತಿಗೆ ಉತ್ತರವನ್ನೀಯು ಮತ್ತು ವನದಲ್ಲಿ ಮಾತ್ರವೇ ದುಃಖವಿರುವುದೇ? ಯಾವ ಮನೆ ಮನೆಯ ಅಂಗಳದಲ್ಲಿ ಈ ಕುರುಕ್ಷೇತ್ರದಲ್ಲಿಯ ಯುದ್ಧಕ್ಕೆ ಸರಿಯಾದ ಕದನಗಳು ದಿನೇ ದಿನೇ ಕಾದೆಲ್ಪಡುವವೋ, ಅಂತಹ ಮನೆಯಲ್ಲಿ ಮಾತ್ರ ಸುಖವಿರುವುದೇನು?" ಎಂದಳು

ಇದನ್ನು ಕೇಳಿ ಸುಭದ್ರೆಯ ಮುಖವು ಗಂಭೀರವಾಯಿತು. ಹಾಗೆಯೇ ಕೊಂಚ ಹೊತ್ತಿನಲ್ಲಿ ಆಕೆಯ ವಿಸ್ತೃತವಾದ ನೇತ್ರಗಳು ಅಲೌಕಿಕವಾದ ಪ್ರತಿಭೆಯಿಂದ ಉಜ್ವಲವಾದುವು. ಆಕೆಯು ಇಂತೆಂದಳು—"ಶೈಲಜೆ, ಈ ಜಗತ್ತು ಸುಖಾಪೇಕ್ಷೆಯಲ್ಲಿ ಕಾತುರವಾಗಿ ಇದೆ ಸುಖವನ್ನು ಶೋಧಿಸುವುದೆಂಬುದೇ ಈ ಜಗತ್ತಿನ ಸ್ಥಿತಿಗತಿಗಳಾಗಿವೆ. ಈ ಜಗತ್ತನ್ನು ನಿರ್ಮಾಣ ಮಾಡಿದಾತನು ಹೇಗೆ ಸುಖಮಯನಾಗಿರುವನೋ, ಹಾಗೆಯೇ ಆತನ ಸೃಷ್ಟಿಯೂ ಸುಖಮಯವಾಗಿ ಇದೆ. ಮನುಷ್ಯನಿಗೆ ಮಾತ್ರ ಸುಖವು ದೊರೆಯುವುದಿಲ್ಲವು; ಮತ್ತು ಅದಕ್ಕಾಗಿಯೇ ಆತನು ರೋದಿಸುತ್ತಲಿರುವನು. ಮನುಷ್ಯನ ಸುಖವೆಂಬುದು ಮನೆಯಲ್ಲಿಲ್ಲ, ವನದಲ್ಲಿಲ್ಲ, ಧನದಲ್ಲಿಲ್ಲ, ರಾಜ್ಯದಲ್ಲಿಲ್ಲ, ಅಥವಾ ತಪಸ್ಸಿನಲ್ಲಿ ಸಹಾ ಇಲ್ಲವೆಂಬುದು ಆತನಿಗೆ ತಿಳಿಯುವುದಿಲ್ಲವು".

ಶೈಲಜೆ—"ಹಾಗಾದರೆ, ಆ ಸುಖವು ಇರುವುದು ಯಾವುದರಲ್ಲಿ ತಾನೇ?"

ಸುಭದ್ರೆ—"ನಿನ್ನ ಈ ಪ್ರಶ್ನೆಗೆ ಈ ಜಗತ್ತು ತನ್ನ ಅನಂತ ಕರಗಳಿಂದ ಉತ್ತರವನ್ನೀಯುತ್ತಿದೆ. ಅವ್ವಾ, ಇತ್ತ ನೋಡು. ವಿಹಂಗಗಳ (ಹಕ್ಕಿಗಳ) ಸುಖವು ವಿಹಂಗತ್ವದಲ್ಲಿದೆ, ಪಶುಗಳ ಸುಖವು ಪಶುತ್ವದಲ್ಲಿದೆ, ಪುಷ್ಪಗಳ ಸುಖವು ಪುಷ್ಪತ್ವದಲ್ಲಿದೆ, ಹಾಗೆಯೇ ಮನುಷ್ಯರ ಸುಖವು ಮನುಷ್ಯತ್ವದಲ್ಲಿದೆ."

ಶೈಲಜೆ—"ಮನುಷ್ಯತ್ವವೆಂದರೇನು?"

ಸುಭದ್ರೆ—"ಆತ್ಮಾ, ಮನಸ್ಸು, ಮತ್ತು ಶರೀರ—ಈ ಮೂರರ ಕೂಡಿಕೆಯಿಂದ ಮನುಷ್ಯನುಂಟಾಗುವನು. ಈ ಮೂರರ ಚರಿತಾರ್ಥತೆಯಲ್ಲಿಯೇ ಮನುಷ್ಯತ್ವವಿದೆ. ಯಾವ ನೀತಿಯ ದೆಸೆಯಿಂದ ಶಾರೀರಿಕ, ಮಾನಸಿಕ, ಮತ್ತು ಆಧ್ಯಾತ್ಮಿಕ ವೃತ್ತಿಗಳ ಪೋಷಣವಾಗುತ್ತಿದೆಯೋ, ಅದೇ ಮಾನವ ಧರ್ಮವು. ಸ್ವಧರ್ಮವನ್ನು ಪಾಲಿಸುವುದರಲ್ಲಿ—ತಾನು ಅನಾಸಕ್ತನಿದ್ದು ವೃತ್ತಿಗಳನ್ನು ಚರಿತಾರ್ಥಗೊಳಿಸುವುದರಲ್ಲಿ—ಮನುಷ್ಯನು ಯಾವ ಮಾನದಿಂದ ಪ್ರವೃತ್ತನಾಗುವನೋ ಅದೇ ಮಾನದಿಂದ ಆತನಿಗೆ ಮನುಷ್ಯತ್ವವೂ ನಿರ್ಮಲವಾದ ಸುಖವೂ ಲಭಿಸುತ್ತವೆ."

ಶೈಲಜೆ—"ದೇವಿ, ಈ ಮನುಷ್ಯತ್ವವು [illegible] ವನದಲ್ಲಿ ಉಂಟಾಗಲಾರದೇ?"

ಸುಭದ್ರೆ—"ತಾಯಿ, ಈ ಧರ್ಮದ [illegible] ಕ್ಷೇತ್ರವು [illegible] ಈ ಧರ್ಮವು ಲೋಕಕ್ಕೆ ಹಿತವನ್ನುಂಟುಮಾಡ[illegible] —[illegible] ಹಿತವನ್ನುಂಟುಮಾಡಬೇಕೆಂಬ—[illegible]"

ಶೈಲಜೆ—"ಅವ್ವಾ, ಹಾಗಾದರೆ ನೀನು [illegible] ಈ ಸರ್ವ [illegible]ನಲ್ಲಿ ಲೋಕ ಹಿತವನ್ನು ಸಾಧಿಸುವುದಕ್ಕೆ [illegible] ಪ್ರಶಸ್ತವಾದ ಕ್ಷೇತ್ರವಿಲ್ಲವು. ಈ ಭಾರತವರ್ಷವು ಯಾವ ಜನಾಂಗದವರ ಮಾತೃಭೂಮಿಯಾಗಿರುವುದೋ, ಆ ಆರ್ಯ ಜನರು ಇಂದು ಎಲ್ಲಿರುವರು, ಮತ್ತು ಅವರ [illegible] ದಶೆಯು ಒಂದು ತಗಲಿಯದೆ [illegible] ಇಂದು ಅವರು ರಾಜ್ಯಹೀನರಾಗಿರುವರು—ಗೃಹಹೀನರಾಗಿರುವರು. ಅವರಿಗೆ ಬಾಯಿ ತುಂಬಾ ತಿನ್ನಲಿಕ್ಕೆ ತುತ್ತು ದೊರೆಯದು. ಕಾಡಿಂದ ಕಾಡಿಗೆ ಅವರು [illegible] ಅಲೆಯುತ್ತಿರುವರು. ಆರ್ಯರಾದರೋ, ಇಂದು ದೇವತೆಗಳಂತೆ ಸಾಮ್ರಾಜ್ಯವನ್ನು ನಡೆಯಿಸುತ್ತಿರುವರು, ಸುಖವನ್ನು ಉಪಭೋಗಿಸುತ್ತಲಿರುವರು. ಇಂದು ಅವರ ಶಾಸ್ತ್ರಗಳೆಷ್ಟಿವೆ! ಎಷ್ಟು ಮಾರ್ಗಗಳೆಷ್ಟಿವೆ! ಅವರ ಅಧ್ಯಾತ್ಮಾಕಾಶದಲ್ಲಿ ಸೂರ್ಯನು [illegible] ಆತನ ಪ್ರಭೆಯು ದಿಕ್ಕುದಿಕ್ಕುಗಳಲ್ಲಿಯೂ ತುಂಬಿರುವುದು. ಅನಾರ್ಯ ಜನರಾದರೋ ಈ ಘೋರವಾದ ಅಮಾವಾಸ್ಯೆಯ ಕಾರಿರುಳು! ತಾಯಿ, ಇದು ಹೀಗೆಯೇ ನಡೆದೀತೇ? ಪತಿತಪಾವನನಾದ ನಾರಾಯಣನೇ! ಈ ಪತಿತರಾದ ಅನಾರ್ಯರಲ್ಲಿ ನಿನಗೆಂದಿಗೂ ಕರುಣೆಹುಟ್ಟಲಾರದೇ? ನನ್ನ ಚಿಕ್ಕತನದಲ್ಲಿ ನನ್ನ ತಂದೆಯು ನನಗೆ ಹೀಗೆ ಹೇಳುತ್ತಿದ್ದನು—"ಮಗಳೇ, ಸುಖವೆಂಬುದು ಧರ್ಮದಲ್ಲಿದೆ, ಮತ್ತು [illegible] ಧರ್ಮದ ಸೋಪಾನ ಮಾರ್ಗವು ರಾಜ್ಯದ [illegible]! ನನ್ನ ಶೈಲಜೆಯು ಧರ್ಮದ ರಾಣಿಯಾಗುವಳು. ಅವಳು ಅನಾರ್ಯ ಜನರ ಪ್ರವೃತ್ತಿಯನ್ನು ಧರ್ಮದ ಕಡೆಗೆ ಕೊಂಡೊಯ್ದು ಹರಿನಾಮಾಮೃತದ ಮಳೆಯನ್ನು ವರ್ಷಿಸುವಳು, ಮತ್ತು ಅನಾರ್ಯ ಜನರ ರಕ್ಷಣೆಯ ದೀಕ್ಷೆಯನ್ನು ಕೈಗೊಳ್ಳುವಳು." ಧರ್ಮದಿಂದಲ್ಲದೆ ಅನಾರ್ಯರ ಉದ್ಧಾರವಾಗಲಾರದು. ಆದರೆ ನಾನು ಅಬಲೆ; ನನ್ನ ಕೈಯಿಂದ ಏನು ತಾನೇ ಆದೀತು? ಮುಂದೆ ಒಂದು ಕಾಲದಲ್ಲಿ ಅರ್ಜುನನಲ್ಲಿ ನನ್ನ ಮನಸ್ಸು ಸಿಕ್ಕಿಕೊಂಡು, ಆತನ ಪ್ರೇಮಕ್ಕಾಗಿ ನಾನು ಭ್ರಾಂತಳಾದೆನು. ಆದರೆ ಆ ಪ್ರೇಮವು ಬೇಗನೆ ಶುದ್ಧಸ್ವರೂಪವನ್ನು ಪಡೆಯಿತು. ನಾನು ಅರಣ್ಯದಲ್ಲಿ ಅರ್ಜುನನ ಮೂರ್ತಿಯನ್ನು ಸ್ಥಾಪಿಸಿ ಅದರ ಉಪಾಸನೆಯನ್ನು ಮಾಡಿದೆನು."

ಸುಭದ್ರೆ—"ಶುದ್ಧಪ್ರೇಮವೆಂಬುವುದು ಸ್ವರ್ಗದ್ವಾರದ ನಿಚ್ಚಣಿಗೆಯಂತಿದೆ. ಯಾವಾತನ ಪ್ರೇಮದಲ್ಲಿ ಆಸಕ್ತಿಯಾಗಲೀ ವಾಸನೆಯಾಗಲೀ ಇರುವುದಿಲ್ಲವೋ ಆತನು ನನಗೆ ಪರಮಾತ್ಮನಂತೆ ಪೂಜ್ಯನು."

ಶೈಲಜೆ—"ಹಾಗೆಯೇ ಕೆಲದಿನಗಳಲ್ಲಿ ವ್ಯಾಸ ಮುನಿಗಳು ಈ ದಾಸಿಯ ಗುಡಸಲಿಗೆ ಬಂದರು. ಆಗ್ಗೆ ನನ್ನ ತಪಸ್ಸು ಸಫಲವಾಯಿತು. ಅವರು ಅಂತರ್ಜ್ಞಾನಿಯಾಗಿರುವುದರಿಂದ ನನ್ನ ಮನಸ್ಸಿನ ಭಾವವನ್ನು ಕಂಡುಹಿಡಿದು ನನಗೆ ಹೀಗೆಂದರು —

"'ಶೈಲಜೆ, ನಿನ್ನ ಪಾರ್ಥ ಪೂಜೆಯು ಇಂದಿಗೆ ಸಿದ್ಧಿಯಾಯಿತು. ಪ್ರೇಮದ ಸಾಗರನಾಗಿರುವ ಯಾವ ಶ್ರೀಮನ್ನಾರಾಯಣನೋ ಇಂದಿನಿಂದ ಆತನನ್ನು ಆರಾಧಿಸು. ನಿನ್ನ ಮನಸ್ಸಿನಲ್ಲಿ ವಾಸನೆಯು ಲವಲೇಶವಿದ್ದರೂ, ಅದು ಕೂಡಾ ಇಲ್ಲವಾಗಿ, ನೀನು ಪರಮ ಶಾಂತಿಧಾಮವನ್ನೈದುವೆ?

"ನಾನು—'ನಾರಾಯಣನಾದರೋ ವಿಚಾರ ಶಕ್ತಿಗಾದರೂ ಅಗಮ್ಯನಾಗಿರುವನು. ನಾನು ಆವನನ್ನು ಹೇಗೆ ತಿಳಿದುಕೊಳ್ಳಲಿ? ಹೇಗೆ ಆರಾಧಿಸಲಿ?'

"ಅವರು—'ಹಾಗಾದರೆ ಶ್ರೀಮನ್ನಾರಾಯಣನ ಈ ಯುಗದಲ್ಲಿಯ ಅವತಾರವಾಗಿರುವ ಶ್ರೀಕೃಷ್ಣನನ್ನು ಪೂಜಿಸು. ಪಾರ್ಥನನ್ನು ಕೃಷ್ಣನಲ್ಲಿ ವಿಲೀನಮಾಡು; ಕೃಷ್ಣನನ್ನು ನಾರಾಯಣನಲ್ಲಿ ಒಂದಾಗಿಸು. ಆದರೆ ಮಗಳೇ ನೀನು ಈ ಯೋಗಿನಿಯ [illegible] ಧರಿಸುವೆ?'

ಕೀರ್ತಿ ಶೇಷ ಅಮ್ಮೆಂಬಳ

ಸುಬ್ರಾಯ ಪೈಗಳವರ

ಭಾವ ಚಿತ್ರಗಳು.

ವಿಕ್ರಯಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ ೬ ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು, ದ. ಕ.

THE NEWZEALAND INSURANCE CO, Ld.

ದಿ. ನ್ಯೂಝೀಲಂಡ್ ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್.

ಮೆರಿನ್ ಡಿಪಾರ್ಟ್‌ಮೆಂಟ್

(*Marine Department*)

ಮಂಗಳೂರು [illegible] — ದಿ ದತ್ತಾತ್ರರಾಮ ಎಂಡ್ ಕೊ

ಪ್ರಿಮೊ ಬಿಲ್ಡಿಂಗ್ಸ್ ಮಂಗಳೂರು

ಈ ಕಂಪೆನಿಯಲ್ಲಿ [illegible] ದರಗಳಿಂದ ಸಮುದ್ರಮಾರ್ಗವಾಗಿ ಹೋಗುವ ಮಾಲಿನ [illegible]

"ಆಗ್ಗೆ ನಾನು ಅವರಿಗೆ ಸಾಷ್ಟಾಂಗವೆರಗಿದೆನು, ಮತ್ತು ಕೈಗಳನ್ನು ಜೋಡಿಸಿ ಇಂತೆಂದನು— [illegible] ಜೀವನ ವ್ರತವು [illegible] ತುಳುಕುವ ತಮ್ಮ ಜ್ಞಾನಸಾಗರದಿಂದ ಒಂದು ಹನಿಯಾದರೂ ನನಗೆ ಸಿಕ್ಕಲಾರದೇ? ಈ ದಾಸಿಗೆ ಅದರಿಂದ ಒಂದೇ ಒಂದು ಹನಿಯನ್ನು ಸಿಕ್ಕ [illegible] ತಾವು [illegible]ಗಳನ್ನು ಸುತ್ತಿ ನಾನು ನನ್ನ ಜೀವನ ವ್ರತವನ್ನು ಪಾಲಿಸುವೆನು."

ಒಬ್ಬ ಗೋಪಿಯ ವಿಲಾಪ.

ರಾಗ ವಿರಹರಸ್ಪ್ರಿಯ—ರೂಪಕತಾಳ

[illegible] ಕೃತಿಯ [illegible]

ಕಾಂತ ನೀ ನೆಲ್ಲಿರುವೆಯೊ
ಕಾಂತಾ ಜನಮೋಹನ | ಪಲ್ಲ ||
ಕಾಂತಾರದೊಳಿರುಹಿದಂತೆ—[2]ಪ
ಕಾಂತಳಿರುವೆ ರಮಿಸ[3] | ಅನು ||
ಕಡಲಲೆಳೆದ ನರುಗಾಂ[4]
ಅದ್ಧರ್ದನಿಂದು [5]ಸಕರುಣಂ |
[6]ಕತವರ ಮುಗಿಲ್ವಂತಿ ರಾಗ[8]
ಗೆಡುತ [9]ಬೆಳುತುದೀಗ || ೧ ||
[10]ಮೊಸೆಮಣಲಿನ ಮೆಳೆಯಂ
ನನೆಯುವ [11]ರಿಸೆಳೆಯಂ ||
[12]ದನಿಯಣಂಗಿ [13]ಯಮುನೆದೀರ
ಮನಸಿಗತಿ ಬಯಂಕರ || ೨ ||
ಕರೆವುದಿರುಳ ಬರಿಸಂ[14]
[15]ತೊರೆವುದೊಡಲು ಹರಿಸಂ ||
ಕರಗುವುದೆದೆ ಬೆದರಿನಿಂದ
ಲಿರುತಲೊಂಟಿಯಿಂದ || ೩ ||
ನೀರ ತರುವ ನೆವದಿಂ
ಸೇರಿಹೆನಿದ ಜವದಿಂ ||
ಸಾರದಿರೆ ಸಂಜೆಯಮುನ್ನ
ದೂರಿ ಕೊಲ್ಲುವರೆನ್ನ
ಕೊರಳಗಂಟೆಯುಲಿಯಿಂ[16]—ಮುಂ
ಬರಿವ[17] ದಾ[illegible]ಯಿಂ[18] ||

ದಿವಸಿತ್ತ ಬರು...
ತರುಮಿಂಡಂಬಾ ಎಂದು || ೫ ||
ಉರಿವುದೆನ್ನ ಪ್ರಣಯಂ[19]
[20]ತರಿವನ ಸಮಗಣಿಯುಂ[21] ||
ಅರಲರಲನು ಕುಡಿಯು ತೆನ್ನ
ಮರೆತೆಯಾ[22] ಮಧುಭಂಜನ || ೬ ||
ಅವಿತಿಹೆಯಾ ಇರುಳಲಿ
ಕವಿವುದು [23]ಬೆದೆ ಗರುಳಲಿ ||
ಕವಲಣಿಸದೆ ನಲಿದುಬಾರ
[26]ಸವಿಜೇಂದುಟದಾರ || ೭ ||
ಪರಿಹರಿಸೆನ್ನಳಲಂ—[26]ಸ್ನಿಂ
ಚರಿಸು ತೋಂಟಗೊಳಲಂ[27] |
[28]ಮರುಕವಲೆನೇಯುವ ಕುವಿಂದ[29]
[30]ಖರಹರಪ್ರಿಯ ದೇವಕಿ ಕಂದ | ೮ |

—— 0 ——

ಸುಖತತ್ವ.

—— 0 ——

ಮುಲ್ಕಿ, ತಾ. ೧. ೧೧. ೦೧.

ಸ್ವದೇಶಾಭಿಮಾನಿ ಪತ್ರಕರ್ತರ ಸನ್ನಿಧಾನಕ್ಕೆ.

ಸ್ವಾಮಿ,

ತಮ್ಮ ಕಳದ ಸಂಚಿಕೆಯಲ್ಲಿ ಕೃಷ್ಣ ಚಿತ್ರೆಯ "ಸುಖತತ್ವ"ವೆಂಬ ಪರಿಚ್ಛೇದವನ್ನು ಓದಿದಾಗ್ಗೆ ನನ್ನ ಮನಸ್ಸಿನಲ್ಲಿ ಹುಟ್ಟಿದ ವಿಚಾರ ತರಂಗವನ್ನು ಇಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಚಿಕ್ಕ ಲೇಖನಕ್ಕೆ ತಮ್ಮ ಪತ್ರದಲ್ಲಿ ಎಡೆ ಕೊಡುವಂತೆ ವಿಜ್ಞಾಪಿಸುತ್ತೇನೆ.

ಪರಾತ್ಪರನು ಆನಂದಮಯನು. ಅವನೇ ಸರ್ವ ವ್ಯಾಪಕನು. ಆ ಸುಖಸಾಗರದ ಬಿಂದುಗಳಾದ ನರಜೀವಿಗಳು ಸ್ವಭಾವದಿಂದ ಸುಖಿಗಳೇ ಆಗತಕ್ಕದ್ದು. ಮತ್ತು ಆ ಸುಖವು ಸ್ವರ್ಗದಲ್ಲಿ ಹೋಗಿ ಅನುಭವಿಸತಕ್ಕದ್ದಲ್ಲ. ಮರ್ತ್ಯಲೋಕದಲ್ಲಿಯೇ ಇಹ ಜೀವನದಲ್ಲಿಯೇ ಉಣ್ಣ ತಕ್ಕದ್ದು.

ಸುಖಕ್ಕೆ ಮೂಲವು ಮನಸ್ಸು. "ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂತ ಸಂಸ್ಕೃತ ಕವಿಯು, "The mind is its own place and in itself can make a heaven of hell and a hell of heaven" (ಮನಸ್ಸಿನ ನೆಲವು ಮನವೇ ಅದು ತನ್ನೊಳೇ ಸ್ವರ್ಗದಲ್ಲಿ ನರಕವನ್ನು ನರಕದಲ್ಲಿ ಸ್ವರ್ಗವನ್ನು ನಿರ್ಮಿಸ ಬಲ್ಲುದು) ಎಂತ ಇಂಗ್ಲಿಷ ಕವಿಯು ಹೇಳಿರುವನು. ಮೆಚ್ಚಿದವನಿಗೆ ಮದ್ದು ಸುಖವೆಂದು ಗಾದೆ ಇದೆಯಲ್ಲವೇ? ಎಷ್ಟು ಕಾಲ ಮನಸ್ಸಿಗೆ ಶಾಂತಿ ಇದೆಯೋ ಅಷ್ಟು ಕಾಲ ಮನುಷ್ಯನು ಸುಖಿ.

ಯಾರ ಮನಸ್ಸಿನ ಶಾಂತಿಯು ಬಾಹ್ಯ ಪದಾರ್ಥವನ್ನು ಹೊಂದಿರುವದೋ ಆ ಮನುಷ್ಯನು ಚಿಂತೆಗೆ ಪಾತ್ರನಾಗುವನು. ಮಕ್ಕಳು ಈ ಹೇಳಿಕೆಯ ಒಳ್ಳೇ ದೃಷ್ಟಾಂತಗಳಾಗಿವೆ. ಅವಕ್ಕೆ ಎಷ್ಟು ಮಾತ್ರಕ್ಕೂ ಸ್ವತಂತ್ರ್ಯವಿಲ್ಲದೆ ಬಾಹ್ಯ ವಸ್ತುಗಳನ್ನೇ ಆಧರಿಸುವದರಿಂದ ಸ್ವಲ್ಪದರಲ್ಲಿ ಅವುಗಳ ಮನಸ್ಸು ಕದಡಿ ಅಳತೊಡಗುವವು. ತಾಯಿ ಕಣ್ಣೆದುರಿಲ್ಲವಿದ್ದರೂ, ಚೆಂಡು ಕೈತಪ್ಪಿ ಕೆಳಬಿದ್ದರೂ ಇತರ ಅಲ್ಪಕಾರಣಕ್ಕೂ ರೋದಿಸುವವು. ಈ ಸಂಕಷ್ಟಕ್ಕೆ ಎರಡು ಪ್ರತಿಕ್ರಿಯೆಗಳಿವೆ. ಒಂದು ಬಾಹ್ಯ ಲೋಕವನ್ನು ನಮ್ಮ ಮನಸ್ಸಿಗೆ ಅನುಸಾರವಾಗಿ ಮಾರ್ಪಡಿಸುವದು. ಇನ್ನೊಂದು ಬಹಿರಾವರಣವು ನಮ್ಮನ್ನು ಕದಡಿಸದಂತೆ ಆತ್ಮ ಸಂಯಮವನ್ನು ಸಾಧಿಸುವದು. ಮೊದಲನೇ ಉಪಾಯವು ಅಸಾಧ್ಯ. ಹ್ಯಾಗಂದರೆ, ನಮ್ಮ ಹೆಂಡತಿ ಮಕ್ಕಳು ನಮ್ಮ ಮನಸ್ಸು ನೋಯಿಸದಂತೆ ನಡಿಯಬೇಕೆಂದು ವಿಧಿಸುವದಾಗಲೀ ಲೋಕದಲ್ಲಿ ಸಂಪತ್ತು ಸದಾ ನಮ್ಮನ್ನೇ ಅನುಸರಿಸಬೇಕೆಂದು ಶಾಸನವಿಕ್ಕುವದಾಗಲೀ ನಮ್ಮ ಕೈಯಲ್ಲಿದೆಯೇ? ನಮ್ಮನ್ನು ಇತರರು ನಿಂದಿಸದಂತೆ ನಮ್ಮ ಕೃತ್ಯಗಳಿಗೆ ಅವರು ವಿಪರೀತಾರ್ಥವನ್ನು ಕಲ್ಪಿಸದಂತೆ ಅವರ ಮನಸ್ಸು ಬಾಯಿಗಳನ್ನು ಕಟ್ಟಬಹುದೇ? ಆದ್ದರಿಂದ ವಿಧಿಯು ನಮ್ಮನ್ನು ಇರಿಸಿ ಸ್ಥಿತಿಯಲ್ಲಿ ಶಾಂತಿಯನ್ನು ತಾಳುವದೇ ನಾವು ಕಲಿಯಬೇಕಾದ ಪಾಠ. ಸಿಂಹಾಸನದಲ್ಲಿ ಕುಳಿತು ರಾಜ್ಯವಾಳುವಾಗಲೂ ಸ್ಮಶಾನದಲ್ಲಿ ಹೊಲೆಯನ ಸೇವೆ ಗೈಯುವಾಗಲೂ ಹರಿಶ್ಚಂದ್ರನು ಏಕಪ್ರಕಾರ ಸುಖಿಯಾಗಿದ್ದನು. ಯಾಕೆಂದರೆ, ಆತನ ಶಾಂತಿದಾಂತಿಗಳು ಎಲ್ಲೆಲ್ಲಿಯೂ ಆತನನ್ನು ಅಗಲಲಿಲ್ಲ. "ಪೃಥಿದ ವಿಮೋಹದಿಂ ಪರಿತೋಂದನಾ ನರಿಯ ಸಲೆಶೋಕಹೇತುವಂ".

ಸುಖದ ಆಧಾರವಾದ ಈ ಚಿತ್ತ ಶಾಂತಿಯು ನಮ್ಮನ್ನು ಅಗಲದಂತೆ ಅದನ್ನು ಯಾವ ಅಸ್ತಿವಾರದ ಮೇಲೆ ನೆಲೆಗೊಳ್ಳಿಸ ಬೇಕು? ಷೇಕ್ಸಪೀಯರ ಮಹಾಕವಿಕೃತ ನಾಟಕದ ನಾಯಕ ಒಥೆಲ್ಲೋನು ತನ್ನ ಪತ್ನಿಯು ಜಾರಿಣಿಯೆಂದು ಅನುಮಾನವಾದೊಡನೆ "ಒಥೆಲ್ಲೋನೇ" ನಿನ್ನ ವೃತ್ತಿ ಸಮಾಪ್ತಿಯಾಯಿತು. ಎಂದು ತನಗೆ ತಾನೇ ಹೇಳಿಕೊಳ್ಳುವನು. ಅಂದಿನಿಂದ ಯೋದ್ಧನಿಗೆ ಕೆಲಸಕ್ಕೆ ಕೈಬಾರದು; ಕಣ್ಣಿಗೆ ನಿದ್ದೆ ಬಾರದು, ಮನಸ್ಸಿಗೆ ಶಾಂತಿ ಸಿಕ್ಕದು; ಈ ಸ್ಥಿತಿಯಲ್ಲಿ ಅವಸಾನ ಕಂಡನು. ಭಾರ್ಯೆಯು ತನ್ನ ಸರ್ವಸ್ವವೆಂದಾಗಿ ತನ್ನ ಪ್ರವೃತ್ತಿಯ ಪ್ರೇರೇಪಕಳೆಂದೂ ನಡೆದ್ದರಿಂದ ಆ ಹೇತುವಿಗೆ ನ್ಯೂನತೆ ಬರಲು ಶಾಂತಿಕಳಕೊಂಡನು. ಆಂಗ್ಲೇಯ ಚರಿತ್ರದಲ್ಲಿ ಪ್ರಖ್ಯಾತನಾದ ಉಲ್ಸೆಯೆಂಬ ಮಂತ್ರಿಯು ತನ್ನ ಪ್ರಭುವಿನ ಸೇವೆಯನ್ನೇ ಸರ್ವಸ್ವವಾಗಿಟ್ಟುಕೊಂಡು ಅದಕ್ಕಾಗಿ ಪ್ರಜಾಹಿತವನ್ನೂ, ದೇವರನ್ನೂ ಸಹಾ ಮರೆತನು. ಕಡೆಗೆ ಆ ಪ್ರಭುವು ವಿಮುಖನಾದಾಗ ಕಣ್ಣು ತೆರದಂತಾಗಿ "ನಾನು ನನ್ನ ಪ್ರಭು ಸೇವೆಯಲ್ಲಿ ತೋರಿದ ಶ್ರದ್ಧೆಯ ಅರ್ಧಾಂಶವನ್ನು ಪರಾತ್ಪರನ ಸೇವೆಯಲ್ಲಿ ತೋರಿದ್ದರೆ ಇಂದು ನನ್ನನ್ನು ಕೈಬಿಡುತ್ತಿದ್ದಿಲ್ಲವೆಂದು ಮರುಗೊಂಡನು. ಐಶ್ವರ್ಯವನ್ನೇ ಜೀವನದ ಹೇತುವಾಗಿಟ್ಟ ಘಜ್ನಿ ಮಹಮ್ಮದನು ಪ್ರಾಣೋತ್ಕ್ರಮಣ ಕಾಲದಲ್ಲಿ "ಸರ್ವ ಸಂಪತ್ತನ್ನು ಅಗಲಬೇಕಲ್ಲ" ಎಂದು ಕಣ್ಣೀರು ಬಿಟ್ಟನು. ಆದ್ದರಿಂದ ವಿಶ್ವದ ವಿಷಯಗಳಿಂದ ಪ್ರೇರಿತರಾಗಿ ನಾವು ಲೋಕದಲ್ಲಿ ವರ್ತಿಸಿದರೆ ಅವು ಕೈತಪ್ಪಿದೊಡನೆ ನಮ್ಮ ಬಾಳು ಹಾವಸೆಯಲ್ಲಿ ನಡೆಯುವವನ ಕಾಲುಜಾರಿದಂತಾಗುವದು.

ಆದ್ದರಿಂದ ಶ್ರೀ ಕೃಷ್ಣನು ಗೀತೆಯಲ್ಲಿ ಸಾರಿದ ತಾನೇ ಲೋಕದಲ್ಲಿ ಆಚರಿಸಿದ ನಿಷ್ಕಾಮ ಕರ್ಮವೇ ನಮ್ಮ ಸರ್ವ ಸುಖದ ಆಧಾರವು, ಶಾಂತಿಯ ನೆಲೆಮನೆಯು. ಗಿಡಗಳು ಬಿಟ್ಟ ಹೂವುಗಳಲ್ಲಿ, ಕೆಲವು ಶ್ರೀಮಂತರ ಕೊರಳನ್ನು ಅಲಂಕರಿಸುವವು; ಕೆಲವು ಗಿಡದಲ್ಲೇ ಬಾಡುವವು, ಇನ್ನೂ ಕೆಲವು ಕ್ಷುದ್ರರ ತಲೆಯನ್ನೇರುವವು. ಗಿಡವು ಎದೆಗುಂದುವದೂ ಇಲ್ಲ; ಉಬ್ಬುವದೂ ಇಲ್ಲ. ಸ್ವಭಾವಕ್ಕೆ ತಕ್ಕಂತೆ ಹೂ ಬಿಡುತ್ತಿರುವದು. ಹಾಗೆಯೇ ವಿಶ್ವದ ನಿಯಮಕ್ಕೆ ಅನುಸಾರವಾಗಿ ನಮ್ಮ ಧರ್ಮವನ್ನು ನಿರಪೇಕ್ಷ ಬುದ್ಧಿಯಿಂದ ಆಚರಿಸುವದೇ ಸುಖತತ್ವವೆಂದು ನಂಬುವ.

ವಿಶ್ವಾಸ ಪೂರ್ವಕ ತಮ್ಮ "ಸೇವಕ"

—— 0 ——

[1] ಕಾಂತಾರ=ವನ. [2] ಒಬ್ಬಂಟಿಗಳಾಗಿರುವೆನು. [3] ರಮಿಸೆ=ಆಡಲಿಕ್ಕೆ. [4] ಅರುಣ=ಸೂರ್ಯ. [5] ಕರುಣಾಯುಕ್ತನಾದ. [6] ಕಡವರ=ಭಂಗಾರ. [7] ಮೋಡಗಳವಾಲೆ. [8] ಬಣ್ಣಗೆಟ್ಟು. [9] ಬಳುಕೆಂತು. [10] ಸೂಕ್ಷ್ಮವಾದ ಚಿಕ್ಕ ಮಳೆಯ ರಾಶಿ. [11] ಕಪ್ಪಾದ ನೀರುಗಳು (ಯಮುನೆಯ ಪ್ರವಾಹವು ಬಣ್ಣದಲ್ಲಿ ಕಪ್ಪು.) [12] ನಿಃಶಬ್ದವಾಗಿ. [13] ಯಮುನಾನದಿಯ ತೀರ. [14] ಇರುಳುರಿತ್ತಿ=ರಾತ್ರಿಯ ಅಂಧಕಾರವನು ಮಳೆ. [15] ದೇಹದಿಂದ ಹರ್ಷವು ಬಟ್ಟುಹೋಗುತ್ತದೆ. [16] ಉಲಿ=ಧ್ವನಿ. [17] ಮುಂಜರಿವ=ಮುಂದಕ್ಕೆ ಸರಿದುಬರುವ. [18] ದೂರನ ವಿಸ್ತಾರವಾದ ಬಲೆ. [19] ಅನುರಾಗ, ಪ್ರೇಮ. [20] ತರವನು=ಪೀಡಿಸುವನು. [21] ಮನ್ಮಥನು. [22] ಈ ಶಬ್ದದಲ್ಲಿ ಶ್ಲೇಷೆ ಇದೆ—(1) ಜೇನನ್ನು ಹೀರುವ ಭ್ರಮರವು (2) ಮಧುವೆಂಬ ದೈತ್ಯನನ್ನುವಧಿಸಿದ ಶ್ರೀಕೃಷ್ಣನು. [23] ವ್ಯಥೆ. [24] ಕವಲು=ಮೋಸ. [25] ಜೇನಿನಂತೆ ಮಧುರವಾದ ತುಟಿ. [26] ಉಂಚರಿಸುತ=ಇಂಪಾಗಿ ಉಲಿಯುತ್ತ. [27] ತೋಂಟಗೊಳಲು=ಬಿದಿರಿನ ಕೊಳಲು. ... [29] ಕುವಿಂದ=ನೇಕಾರನು (a weaver). ಇದರಲ್ಲಿ ಶ್ಲೇಷೆ ಇದೆ—(1) ... (2) ದುಷ್ಟರನ್ನು ದಮನಮಾಡುವುದರಲ್ಲಿ ಆಸಕ್ತಿಯುಳ್ಳವನು.

BERNA WATCH COMPANY.

ಬರ್ನಾ ವಾಚು ಕಂಪನಿ.

ಕಿರಿ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು.



ನಮ್ಮ 'ಮೆಕ್ಸಿಮ್' ವಾಚನ್ನು ಭರವಸೆಯಿಂದ ಕೊಂಡು ಕೊಳ್ಳಿರಿ.
ನಿಕಲ್ ಕೇಸಿನಲ್ಲಿ ರೂ. ೧೦-೦-೦.
ಬೆಳ್ಳಿ ಕೇಸಿನಲ್ಲಿ ರೂ. ೧೪-೮-೦.
ನಮ್ಮ 'ನ್ಯೂ ಡಿ. ಪಿ.' ನಿಕಲ್ ಕೇಸಿನಲ್ಲಿ ರೂ. ೧೪-೦-೦.
ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦.
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.

ನಮ್ಮ 'ಚಾರ್ಟರ್.' ನಿಕಲ್ ಕೇಸಿನಲ್ಲಿ ರೂ. ೧೬-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.
ನಮ್ಮ 'ವರ್ಡಲಿ.' ನಿಕಲ್ ಕೇಸಿನಲ್ಲಿ ರೂ. ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.
ನಮ್ಮ 'ಬೆಸ್ಟ್' ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೮-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಟಾಫಿನಲ್ಲಿರುವವು. ವಾಚುಗಳನ್ನು ... ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮಾಡಿ ಕಳುಹಿಸುವೆವು. ... ರೋಡ್ ಮುಂಬಯಿ ಆಫೀಸಿನಲ್ಲಿಯೂ ... ವಾಚು ಮಾರಾಟದಲ್ಲಿಯೂ ...

ವಿದೇಶ ವೃತ್ತಾಂತ

ಅಫಘಾನ ದೇಶದ ಅಮೀರರವರು ತಮ್ಮ ದೇಶದಲ್ಲಿ ದೂರ ದೂರವಿರುವ ಊರುಗಳಿಂದ ನಡೆದ ವರ್ತಮಾನಗಳನ್ನು ತತ್ಕಾಲಗಳಲ್ಲಿಯೇ ತಿಳಿಯುವ ಬಗ್ಗೆ ತಂತೀ ಮುಖಾಂತರ ಮಾತಾಡಬಹುದಾದ ಟೆಲಿಫೋನನ್ನು ರಚಿಸುವರು. ಈ ಬಗ್ಗೆ ಪ್ರತ್ಯೇಕ ಒಬ್ಬ ಆಪೀಸರನನ್ನು ಒಂದು ಅಜಮಾಯಿಷಿ ತಯ್ಯಾರಿಸುವ ಬಗ್ಗೆ ನೇಮಿಸಿರುವರು

ಬ್ರಿಟಿಷ್ ಪೂರ್ವ ಆಫ್ರಿಕದ ನ್ಯಾಯವಿಧಾಯಕ ಸಭೆಯ ಮೆಂಬರರನ್ನಾಗಿ ಮೆ| ಎಮ್ ಜೀವಂಜಿ ಎಂಬ ಭಾರತೀಯರನ್ನು ನೇಮಿಸಿರುವರು ಭಾರತೀಯರಲ್ಲಿ ಇಷ್ಟರವರೆಗೆ ಪ್ರಥಮದಲ್ಲಿ ಈ ಹುದ್ದೆಯು ಇವರಿಗನೇ ಕೊಟ್ಟಿರುವುದು. ಚಕ್ರವರ್ತಿಯವರ ವಿಶೇಷ ಆಜ್ಞೆ ನಂತರ ಈ ಹುದ್ದೆಯನ್ನು ಮೆ| ಜೀವಂಜಿಯವರಿಗೆ ಕೊಟ್ಟಿರುವರಂತೆ

ಟ್ರಾನ್ಸ್‌ವಾಲಿನ ಭಾರತೀಯರ ಮುಂದಾಳಾಗಿರುವ ಮೆ| ಹರಿಲಾಲಗಂಧಿಯವರ ಮಗನನ್ನು ಟ್ರಾನ್ಸ್‌ವಾಲ ಸರಹದ್ದಿನಲ್ಲಿ ಕೈದುಮಾಡಿ ೧೦೦ ಪವನು ಜುರುಮಾನೆ ಯಾ ೬ ತಿಂಗಳ ಕಠಿಣ ಸಜೆಯನ್ನು ವಿಧಿಸಿರುವರು ಮೆ| ಗಂಧಿಯವರ ಪುತ್ರರು ಸಜಾ ಶಿಕ್ಷೆಯನ್ನೇ ಸ್ವೀಕರಿಸಿರುವರು ಟ್ರಾನ್ಸ್‌ವಾಲ ದೇಶವನ್ನು ಪ್ರವೇಶಿಸಲಿಕ್ಕೆ ಕೂಡದ ಅನ್ಯದೇಶಿಯರಾಗಿದ್ದು ಟ್ರಾನ್ಸ್‌ವಾಲನ್ನು ಪ್ರವೇಶಿಸಿದ್ದರಿಂದ ಈ ಶಿಕ್ಷೆಯು ಇವರಿಗೆ ಪ್ರಾಪ್ತವಾಯಿತು

ರುಸ್ಯ ಮತ್ತು ಆಂಗ್ಲೇಯರಿಗೆ ಆದ ಒಪ್ಪಂದದ ಕುರಿತು ಅಫಘಾನ ಅಮೀರರವರು ತಮ್ಮ ಈ ವಿಷಯವಾದ ಯಾವದಾದರೂ ಅಭಿಪ್ರಾಯವನ್ನು ಇಷ್ಟರವರೆಗೆ ಕೊಡಲಿಲ್ಲವೆಂಬದಾಗಿ ತಿಳಿದುಬರುತ್ತದೆ

ಹಿಂದುಸ್ಥಾನದ ವ್ಯಾಸರಾಯರವರ ಪದವಿಗೆ ಮಿಂಟೋ ಪ್ರಭುಗಳ ನಂತರ ಕ್ರ್ಯೂ ಪ್ರಭುಗಳು ಬರುವರಾಗಿ ಊಹಿಸಲ್ಪಟ್ಟಿರುವುದು

ಅರಳೆ ವ್ಯಾಪಾರವು ಬಹಳ ಕಡಿಮೆಯಾದ ದೆಸೆಯಿಂದ ಮೆಂಚೆಸ್ಟರಿನ ಚಿಕ್ಕ ಎರಡು ಕಾರ್ಖಾನೆಯವರು ತಮ್ಮ ದೇಣೆದಾರರನ್ನು ಕರಿಸಿರುವರು

——o——

ಸ್ಟೇಟ್ ಸೆಕ್ರೆಟರಿಗಳಾದ ಮೋರ್ಲೆ ಪ್ರಭುಗಳ ಆಲೋಚನಾ ಸಭೆಯ ಭಾರತೀಯ ಮೆಂಬರರಾದ ಮೆ| ಗುಪ್ತರವರು ಈ ತಿಂಗಳ ೮ನೇ ತಾರೀಕಿನಲ್ಲಿ ಹಿಂದುಸ್ಥಾನಕ್ಕೆ ತೆರಳಿರುವರು ಇವರು ಹಿಂದುಸ್ಥಾನದಲ್ಲಿ ಪ್ರಮುಖ ಆಫೀಸರರನ್ನೂ ಇತರರನ್ನೂ ಆಯಾ ಸಂಸ್ಥಾನಗಳಿಗೆ ಹೋಗಿ ಸಂದರ್ಶಿಸಿ ತಮ್ಮ ಭಾರತೀಯ ಪ್ರಜಾ ಅನುಭವವನ್ನು ಇನ್ನಷ್ಟು ವೃದ್ಧಿಮಾಡಿಕೊಳ್ಳುವರಂತೆ

ಅಮೇರಿಕದ ಸ್ಟೋಕ್ಸೇವ್ ಬೇಂಕರ್ ಮೆ| ಕೆನಡಿ ಎಂಬವರು ೭ ಮಿಲಿಯ ಪವನುಗಳ ಆಸ್ತಿಯನ್ನು ತನ್ನ ಕುಟುಂಬದವರಿಗೂ ೫ ಮಿಲಿಯವನ್ನು ವಿದ್ಯಾಲಯಗಳಿಗೂ ಧರ್ಮಾರ್ಥ ಕ್ರೈಸ್ತ ಮಿಶನರಿಗಳಿಗೂ ಬಿಟ್ಟಿರುವರು

ಉತ್ತರ ಹಿಂದುಸ್ಥಾನ.

ಕೊಲ್ಹಾಪುರ ದರಬಾರಿನ ಸರ್ಜನರಾದ ಡಾಕ್ಟರ್ ಬೋಡಕಾರ ಎಂಬವರು ರಾಷ್ಟ್ರಮತ ಎಂಬ ಮುಂಬಯಿಯಲ್ಲಿ ಪ್ರಕಟವಾಗುವ ಮರಾಠೆ ಪತ್ರದ ಮೇಲೆ ೨೦,೦೦೦ ರೂಪಾಯಿಯ ಮಾನನಷ್ಟದ ದಾವೆಯನ್ನು ತಂದಿರುವರು; ದಾವೆಯು ಕೊಲ್ಹಾಪುರದ ಪೊಲಿಟಿಕಲ್ ಏಜಂಟರಲ್ಲಿ ನಡೆಯುತ್ತಿರುವುದು. [illegible] ಅಕ್ಟೋಬರ ತಿಂಗಳ [illegible] ಗನೇ [illegible]

[illegible] ಮಾನಹಾನಿಕರವಾದ [illegible] ಯ ಕಾರಣವಾಗಿರುವುದು

ಬರುವ ವರುಷದಿಂದ ಬಂಗಾಳ ಸರಕಾರದವರು ದೇಶಭಾಷಾ ವರ್ತಮಾನ ಪತ್ರಿಕೆಗಳ ಸಂಪಾದಕರು ಸಹಾ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರವರ ಮುಂದೆ ತಾನು ಇಂತಿಂಥಾ ವರ್ತಮಾನ ಪತ್ರದ ಸಂಪಾದಕನಾಗಿರುವೆನೆಂದು ಜಾಹೀರು ಮಾಡಿಕೊಳ್ಳುವ ಕ್ರಮವನ್ನು ಜಾರಿಗೆ ತರುವ ಸಂಭವವಿರುವುದಂತೆ ಈ ವರೇಗೆ ಎಲ್ಲಾ ಕಡೆಗಳಲ್ಲಿಯೂ ಇರುವಂತೆಯೇ ಪತ್ರವನ್ನು ಛಾಪಿಸುವವರು ಮಾತ್ರ ಈ ರೀತಿ ಜಾಹೀರು ಮಾಡಿಕೊಂಡರೆ ಸಾಕಿತ್ತು

ಕಲ್ಕತ್ತೆಯಲ್ಲಿ ಮುಖ್ಯವಾಗಿ ಹಿಂದೂ ಜನಾಂಗದ ಸನಾತನಧರ್ಮ ಪ್ರತಿಪಾದನೆ ಒಗ್ಗೆ ಇತರ ರಾಷ್ಟ್ರೀಯ, ಸಾಮಾಜಿಕ ಔದ್ಯೋಗಿಕ ವಿಷಯಗಳನ್ನು ಸಹಾ ಒಳಗೊಂಡು ಹಿಂದುಸ್ಥಾನದ ಎಲ್ಲಾ ಹಿಂದೂ ಭಾರತೀಯರ ಪರವಾಗಿ ಒಂದು ದೈನಿಕ ವರ್ತಮಾನ ಪತ್ರವನ್ನು ಇಂಗ್ಲಿಷಿನಲ್ಲಿ ಪ್ರಕಟಿಸುವರೆ ಒಂದು ಕಂಪೆನಿಯನ್ನು ಏರ್ಪಡಿಸಿರುವರು ಕಂಪೆನಿಯ ನಿಯಮಿತ ಬಂಡವಾಳವು ಒಂದು ಲಕ್ಷ ರೂಪಾಯಿಗಳಾಗಿದ್ದು ೫೦ ರೂಪಾಯಿಗಳ ಹಿಸ್ಸೆಗಳಲ್ಲಿ ಹಂಚಿ ಹಾಕಲ್ಪಟ್ಟಿರುವುದು ವರುಷ ಒಂದಕ್ಕೆ ಅಂಚೆ ಹಾಸಲು ಸೇರಿ ೧೫ ರೂಪಾಯಿ ಚಂದಾವಾಗಿರುವುದು ಭಾರತ ರತ್ನ ರಾಜಾ ಪಿಯಾರಿ ಮೋಹನ್ ಮುಖೋಪಾಧ್ಯಾಯ ಬಹದೂರ್ ಸಿ ಎಸ್ ಐ ರವರೂ ಶ್ರೀ ಸ್ವಾಮಿ ಪ್ರೇಮಾನಂದ ಭಾರತಿಯವರೂ, ಶ್ರೀಯುತ ಶಾರದ ಚರಣಮಿತ್ರ ಮಾಜಿ ಕಲ್ಕತ್ತೆಯ ಹೈಕೋರ್ಟ ಜಡ್ಜಿಯವರೂ ಮೊದಲಾದ ಮಹನೀಯರುಗಳು ಈ ಕಂಪೆನಿಯ ಡಿರೆಕ್ಟರುಗಳಾಗಿರುವರು

ದಾಮಾಜಿರಾವ್ ಗೈಕ್ವಾಡರವರ ಜ್ಞಾಪಕಾರ್ಥವಾಗಿ ವಿದ್ಯಾರ್ಥಿ ವೇತನ ಅಥವಾ ಇನಾಮುಗಳನ್ನು ವರುಷಂಪ್ರತಿಯೂ ಹಿಂದಿತ ಜನರ ವಿದ್ಯಾರ್ಥಿಗಳಿಗೆ ಕೊಡುವಂತೆ ಏರ್ಪಡಿಸುವರೆ ಬರೋಡೆಯ ಮಹಾರಾಜರಾದ ಗೈಕ್ವಾಡರವರು ೫೦೦೦ ರೂಪಾಯಿಗಳನ್ನು ಮುಂಬಯಿಯ ಹಿಂದಿತೋದ್ಧಾರಕ ಸಂಘಕ್ಕೆ ಕೊಟ್ಟಿರುವರು

ಲಾಹೋರಿನಲ್ಲಿ ಇತ್ತಲಾಗೆ ತಲೆದೋರಿದ ಮುಸಲ್ಮಾನರ ಹಂಟರ್ ಎಂಬ ವಾರಪತ್ರಿಕೆಯಲ್ಲಿ ಶ್ರೀ ಕೃಷ್ಣದೇವರ ಸಹೋದರಿಯೂ ಅರ್ಜುನನ ಅರ್ಧಾಂಗಿಯೂ ಆದ ಸುಭದ್ರಾ ದೇವಿಯ ವಿಷಯ ನಿಂದೆಯ ಕವಿತ್ವವನ್ನು ಪ್ರಕಟಿಸಿದ್ದರಿಂದ ಲಾಹೋರಿನಲ್ಲಿ ಹಿಂದೂ ನಿವಾಸಿಕರ ಒಂದು ಸಭೆಯು ಕೂಡಿ ಮೇಲೆ ಹೇಳಿದ ವಿಷಯ ಬರದದ್ದಕ್ಕಾಗಿಯೂ ಇನ್ನು ಮುಂದೆ ಹಿಂದುಗಳ ಮನನೋಯಿಸುವ ಆಕ್ಷೇಪಕರವಾದ ಪ್ರಕಟನೆಗಳನ್ನು ಪ್ರಕಟಿಸದ ಹಾಗೂ ಮಹಮ್ಮದಿಯರುಗಳ ಇಶಾರತು ಕೊಡುವರೆ ಸರಕಾರಕ್ಕೆ ಮನವಿ ಬರೆಕೊಳ್ಳಬೇಕಾಗಿ ಸಭೆಯಲ್ಲಿ ನಿರ್ಣಯವಾಯಿತು

ಕಲ್ಕತ್ತೆಯಲ್ಲಿಯ ಮಹೇರ ಪೇಟೆಯಲ್ಲಿ ವಾಸಮಾಡುವ ಮಾರವಾರ ಕುಲದ ಗಂಗಾರಾಮ ಅಗಾರವಾಲಾರು ತಮ್ಮ ಇಬ್ಬರು ಸಿಪಾಯಿಗಳೊಡನೆ ಒಂದು ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು ಇವರ ಹತ್ತಿರ ೧೫,೦೦೦ ರೂಪಾಯಿ ನಗದಿರುವ ಒಂದು ಟಿನ್ ಪೆಟ್ಟಿಗೆ ಇತ್ತು ಮೈದಾನಿನ ಸಮೀಪ ತಲ್ಪುತ್ತಲೇ ವೇಶ ಪಲ್ಲಟ ಮಾಡಿದ ಯುವಕರ ಪಂಗಡವು ಇವರಿದ್ದಲ್ಲಿಗೆ ಬಂದು ಹಣದ ಪೆಟ್ಟಿಗೆಯನ್ನು ಕೊಡಬೇಕಾಗಿ ಕೇಳಿದರು ಮಾರವಾರಿಯು ಒಪ್ಪಲಿಲ್ಲವಾದದರಿಂದ ಕಳ್ಳರು ಇವರ ಮ್ಯೋಲೆ ಬಿದ್ದು ಸೊತ್ತನ್ನು ಅಪಹರಿಸಿ ಓಡಿ ಹೋದರು

ಲಾಹೋರಿನಲ್ಲಿ ಉರ್ದು ಭಾಷೆಯಲ್ಲಿ ಪ್ರಕಟವಾಗುತ್ತಿರುವ 'ಹಿಂದುಸ್ಥಾನ್' ಎಂಬ ಪ್ರಮುಖ ವರ್ತಮಾನ ಪತ್ರದ [illegible] ನಡಿಸಿದರು. ಈ [illegible] ವರ್ತಮಾನ ಪತ್ರದ ವಿಷಯವಾಗಿ ಅಲ್ಲ, ಆದರೆ ರಾ. ಅಜೀತ್ ಸಿಂಗರವರು ರಚಿಸಿದ ಕೆಲವು ಪುಸ್ತಕಗಳು ಈ ವರ್ತಮಾನ ಪತ್ರಿಕೆಯ ಆಫೀಸಿನ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿರುವವೆಂಬ ಊಹನೆಯಲ್ಲಿ ಜಪ್ತಿಯು ನಡಿಸಲ್ಪಟ್ಟಿತಂತೆ.

ಹಿಂದೂಸ್ಥಾನದಲ್ಲಿ ನೀರಿಲ್ಲದ ಪ್ರದೇಶಗಳಿಗೆ ನದಿ ಮೊದಲಾದವುಗಳಿಂದ ಕಾಲಿವೆಗಳ ಮುಖಾಂತರ ನೀರು ಒಯ್ದು ಸಾಗುವಳಿಯಾಗುವ ಪ್ರದೇಶವು ಹೆಚ್ಚು ಕಡಿಮೆ ೨೨ ಮಿಲಿಯ ಎಕ್ರೆಗಳಾಗಿರುವುದು ಈ ಪ್ರದೇಶದಲ್ಲಿ ಆದ ಬೆಳೆಯ ಮೌಲ್ಯವು ೬೦| ಕೋಟಿ ರೂಪಾಯಿಗಳಾಗಿರುವುದು

ಭರತಖಂಡದಲ್ಲಿಯ ಎಲ್ಲಾ ಪೋಸ್ಟು ಆಫೀಸುಗಳ ೧೯೦೬ ೦೭ನೇ ವರುಷದ ವರದಿಯು ಪ್ರಕಟಿಸಲ್ಪಟ್ಟಿರುವುದು ಪೋಸ್ಟಾಫೀಸುಗಳ ಸ್ಟಾಂಪುಗಳ ಮುಖಾಂತರ, ಟೆಲಿಗ್ರಾಫು ಇಲಾಖೆಗೆ ರೂ [illegible] ಸಿವಿಲ್ ಇಲಾಖೆಗೆ ರೂ [illegible],೦೦೦ ವಜಾ ಆದ ನಂತರ ರೂಪಾಯಿ [illegible] ಜಮೆಯಾಗಿರುವುದಾಗಿ ತೋರಿರುತ್ತದೆ

ಕಲ್ಕತ್ತೆಗೆ ಬಂದು ತಲ್ಪಿದ ವಿದೇಶಿ ಸೀರೆಗಳ ಅಕ್ಷಂಡು ಪೆಟ್ಟಿಗೆಗಳಲ್ಲಿ ಸೀರೆಗಳ ಬದಲಿಗೆ ಕಾಗದದ ರಟ್ಟುಗಳು ತುಂಬಿದ್ದುದಾಗಿ ಕಂಡು ಬಂದು ಇಂತಹ ಕೃತ್ರಿಮ ಕೃತ್ಯವನ್ನು ಮಾಡಿದ್ದವರು ಯಾರೆಂತಲೂ ತಿಳಿಯಲಿಕ್ಕೆ ಸಾಧ್ಯವಾಗಲಿಲ್ಲ ಆದರ ಇತ್ತಲಾಗೆ ಈ ಅವಿಶ್ವಾಸದ ಕೃತ್ಯವು ಹೇಗಾಯಿತೆಂಬದನ್ನು ಊಹಿಸಿರುವರಂತೆ ಬಹಳ ಅಗ್ಗವಾದ ದರದಲ್ಲಿ ಈ ಸೀರೆಗಳನ್ನು ತಯ್ಯಾರಿಸಿ ಕೊಡುವದೆಂದು ವಿಲಾಯಿತಿಯ ಒಂದು ಸೀರೆ ಕಾರ್ಖಾನೆಯವರು ಕಲ್ಕತ್ತೆಯ ಸಾವುಕಾರರೊಂದಿಗೆ ಕರಾರು ಮಾಡಿಕೊಂಡು ಈ ಬಗ್ಗೆ ಮುಂಗಡ ಹಣಗಳನ್ನು ಸಹಾ ಪಡಕೊಂಡಿದ್ದರು ಈ ಕಾರ್ಖಾನೆಯು ತನ್ಮಧ್ಯೆ ದಿವಾಳಿಯಾದ್ದರಿಂದ ಸೀರೆಗಳನ್ನು ತಯ್ಯಾರಿಸಲಾಗಲಿಲ್ಲ. ತಯ್ಯಾರಿಸಿದ ಸೀರೆಗಳು ಬಹಳ ಸ್ವಲ್ಪವೇ ಆಗಿದ್ದು ಬೇರೆ ಉಪಾಯವಿಲ್ಲದೆ, ಸೀರೆಗಳನ್ನು ತುಂಬಿಸುವ ಪೆಟ್ಟಿಗೆಗಳಲ್ಲಿ ಕಾಗದ ಚೂರು ಮುಂತಾದವುಗಳನ್ನು ತುಂಬಿಸಿ ಈ ಪೆಟ್ಟಿಗೆಗಳ ತೂಕದಲ್ಲಿ ಸೀರೆಗಳ ಪೆಟ್ಟಿಗೆಗಳಷ್ಟೇ ಆಗುವಂತೆ ಉಪಾಯ ಮಾಡಿದರು ಕಲ್ಕತ್ತೆಯ ಸಾವುಕಾರರು ಯುರೋಪಿಯ ತಮ್ಮ ಏಜಂಟರುಗಳ ಮುಖಾಂತರ ಮುಂಗಡವನ್ನು ಕೊಟ್ಟಿರುವರಾದರೂ ಪೆಟ್ಟಿಗೆಗಳನ್ನು ಹಿಂದೂಸ್ಥಾನಕ್ಕೆ ರವಾನಿಸುವ ಮೊದಲು ಈ ಏಜಂಟರು ಪ್ರತಿಯೊಂದನ್ನು ಬಿಚ್ಚಿ ನೋಡುವ ವಾಡಿಕೆ ಇಲ್ಲವಂತೆ

ಸ್ವದೇಶಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವ ಒಗ್ಗೆ ಕಲ್ಕತ್ತೆಯಲ್ಲಿ ಸ್ವದೇಶಿ ಚೇಂಬರ್ ಒಫ್ ಕೊಮರ್ಸ್ ಯಾ ವ್ಯಾಪಾರಿಗಳ ಒಂದು ಸಂಘವನ್ನು ಏರ್ಪಡಿಸುವರಂತೆ

ಈ ತಿಂಗಳ ತಾ [illegible]ಕ್ಕೆ ಅಂತ್ಯವಾಗುವ ವಾರದಲ್ಲಿ [illegible] ಜನರಿಗೆ ಪ್ಲೇಗು ತಗಲಿ [illegible] ಜನರು ಪ್ಲೇಗಿನಿಂದ ಮೃತಪಟ್ಟರು. ಮುಂಬಾಯಿ ಸಂಸ್ಥಾನದಲ್ಲಿ [illegible], ಮದ್ರಾಸು [illegible], ಬಂಗಾಳ [illegible], ಸಂಯುಕ್ತ ಸಂಸ್ಥಾನಗಳು [illegible], ಪಂಜಾಬು [illegible], ಬರ್ಮಾ [illegible], ಮಧ್ಯ ಸಂಸ್ಥಾನ [illegible], ಮೈಸೂರು ಸಂಸ್ಥಾನ [illegible], ಹೈದರಾಬಾದು [illegible], ಮಧ್ಯ ಹಿಂದೂಸ್ಥಾನ [illegible] ಈ ರೀತಿ ಮರಣಗಳುಂಟಾಗಿರುವವು.

ಬ್ರಿಟಿಷ್ ಪಾರ್ಲಿಮೆಂಟಿನ ಮೆಂಬರರಾದ ಮೆ| ರಿಮ್ಸೆ ಮೆಕಡೊನಾಲ್ಡ ಎಂಬವರು ತಮ್ಮ [illegible]

ಮುಂತಾದವುಗಳನ್ನು ನೋಡಿಕೊಂಡು ಸ್ಕಾಟಿಷ್ ಸ್ಟೀವನ್ಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಒಂದು ಭಾಷಣವನ್ನು ಕೊಟ್ಟರು.

~~~~~~

ಈ ತಿಂಗಳ ತಾ. ೬ರಲ್ಲಿ ವ್ಯಾಸರಾಯ ಪ್ರಭುಗಳು ಗ್ವಾಲಿಯರ್ ಸಂಸ್ಥಾನವನ್ನು ಸಂದರ್ಶಿಸಿದರು. ಮಿ॥ ರೆವರ್ಸೆ ಮೆಕಡೊನಲ್ಡರವರು ಈ ಸಂದರ್ಭದಲ್ಲಿ ಗ್ವಾಲಿಯರಿನಲ್ಲಿಯೇ ಇದ್ದರು.

~~~~~~

ಸ್ವದೇಶಿ ಚಳವಳದಲ್ಲಿ ಕೈಹಾಕಿರುವುದರಿಂದ ಕಲಿಕತ್ತೆಯ 'ಸಿಟಿ' ಕಾಲೇಜಿನ ಪಂಡಿತರಾದ ಲಲಿತಮೋಹನದಾಸರವರು ತಮ್ಮ ಹುದ್ದೆಗೆ ರಾಜೀಕೊಟ್ಟಿರುವರಂತೆ. ರಿಪನ್ ಕಾಲೇಜಿನ ಉಪಾಧ್ಯಾಯರಾಗಿರುವ ಜಿತೇಂದ್ರಲಾಲ ಬೆನರ್ಜಿಯವರನ್ನು ಈ ಕಾರಣಕ್ಕೋಸ್ಕರ ತಮ್ಮ ಹುದ್ದೆಗೆ ರಾಜೀನಾಮೆಯನ್ನು ಯಾಕೆ ಕೊಡಕೂಡದೆಂಬದಾಗಿ ಕೇಳಿರುವರಂತೆ.

~~~~~~

ಕಲಿಕತ್ತೆಯ ಪೊಲೀಸ್ ಕೋರ್ಟಿನಲ್ಲಿ ಸರಕಾರಿ ಕಡೆಯ ವಕೀಲ ಮಿ॥ ಹ್ಯೂಮರವರ ಬಂಗಾಳಿ ಗುಮಾಸ್ತನೊಬ್ಬನು ಒಬ್ಬ ವಕೀಲರ ದವಡೆಗೆ ಹೊಡೆದುಬಿಟ್ಟನು. ಈ ಗುಮಾಸ್ತನು ವಕೀಲರ ಕ್ಷಮಾಪಣೆಯನ್ನು ಕೇಳಿದ್ದರಿಂದ ಗುಮಾಸ್ತನಿಗೆ ಮಾಫಿ ಬಿಟ್ಟಿರುವರಂತೆ.

~~~~~~

ಢಾಕಿಯಾ ಎಂಬಲ್ಲಿ ಪೂರ್ವ ಬಂಗಾಲ ಮತ್ತು ಅಸ್ಸಾಮಿನ ಸರಕಾರದವರು ಒಂದು ವ್ಯವಸಾಯಿಕ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನವನ್ನು ಏರ್ಪಡಿಸುವರು. ಪ್ರದರ್ಶನದ ಬಗ್ಗೆ ಅಡವೆಗಳು ಬರುವ ಜನವರಿ ತಿಂಗಳ ೧೫ನೇ ತಾರೀಕಿನ ವರೆವಿಗೂ ಸ್ವೀಕರಿಸುವರು.

~~~~~~

ದಕ್ಷಿಣ ಹಿಂದುಸ್ಥಾನ

~~~~~~

ಮೈಸೂರು ದಸರಾವಸ್ತುಪ್ರದರ್ಶನವು ಮುಗಿದುಹೋಯಿತು. ೧೧ ಚಿನ್ನದ ೧೦ ಬೆಳ್ಳಿಯ ಮತ್ತು ಹಲವು ಕಂಚಿನ ಬಹುಮಾನ ಪದಕಗಳು ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿಕೊಟ್ಟವರಿಗೆ ಇನಾಮಾಗಿ ಕೊಡಲ್ಪಟ್ಟವು. ಭಾವನಗರದ ರಾಜಕುಮಾರಿ ಲಕ್ಷ್ಮೀಬಾಯಿ ಸಾಹೇಬ್, ಡಾಕ್ಟರ ನಂಜುಂಡರಾವ್‌ರವರ ಮನೆಯ ಹೆಂಗಸರು ಮೊದಲಾದವರಿಗೆ ಚಿನ್ನದ ಪದಕಗಳು ದೊರಕಿರುವವು.

~~~~~~

ಮದ್ರಾಸು ಗವರ್ನರರ ನ್ಯಾಯವಿಧಾಯಕ ಸಭೆಗೆ ಮದ್ರಾಸು ಯುನಿವರ್ಸಿಟಿಯ ಕಡೆಯಿಂದ ಬಹುಮಾನ ಪಟ್ಟ ಹ್ಯಾಕೋರ್ಟು ಜಡ್ಜರಾಗಿರುವ ಕೃಷ್ಣಸ್ವಾಮಿ ಅಯ್ಯರರವರು ಮೆಂಬರರಾಗಿದ್ದರು. ಇವರು ಹ್ಯಾಕೋರ್ಟು ಜಡ್ಜರಾಗಿ ಈ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿರುವುದರಿಂದ ಈ ಮೆಂಬರುತನಕ್ಕೆ ಬಹುಮಾನ ಪಟ್ಟ ಹ್ಯಾಕೋರ್ಟು ವಕೀಲ ಸುಂದರಯ್ಯರರವರೂ ಪಿ॥ ಎ. ಶೇಷಗಿರಿ ಅಯ್ಯರರವರೂ ಕ್ರಿಶ್ಚಿಯನ್ ಕಾಲೇಜಿನ ಪಂಡಿತರಾದ ಮಿ॥ ಮೆಕಫೇಲರರವರೂ ಉಮೇದ್ವಾರರಾಗಿದ್ದರು. ಈ ತಿಂಗಳ ೧ ನೇ ತಾರೀಕಿನಲ್ಲಿ ಸೆನೇಟು ಸಭೆ ಕೂಡಿತು. ೨೭ ಜನ ಯುರೋಪಿಯ ಫೆಲೋಗಳೂ ೩೮ ಜನ ಭಾರತೀಯ ಫೆಲೋಗಳೂ ಸಭೆಯಲ್ಲಿ ಹಾಜರಿದ್ದರು. ನಡೆಯುವ ಓಟುಗಳ ಮುಖಾಂತರ ಮಿ॥ ಮೆಕಫೇಲರನ್ನು ಚುನಾಯಿಸಿರುವರು.

~~~~~~

ರಾವ್ ಬಹದೂರ ವಿರೇಶಲಿಂಗಮ್ ಪಂತುಲುರವರು ತಮ್ಮ ಹಿತಕಾರಿಣಿ ವಿತಂತಾಶ್ರಮದ ಬಗ್ಗೆ ದ್ರವ್ಯ ಸಂಗ್ರಹವನ್ನು ಮಾಡುವರೆ ಮುಂಬಯಿ ಅತ್ತಕಡೆ ಹೋಗಿದ್ದರು. ಮುಂಬಯಿಯಲ್ಲಿ ಬಹುಮಾನಪಟ್ಟ ಹ್ಯಾಕೋರ್ಟ್ ಜಡ್ಜ್ ಚಂದಾವರಕಾರರವರ ಸಹಾಯದಿಂದ ಐದು ಸಾವಿರ ರೂಪಾಯಿ ಕೂಡಿಸುವರೆ ಸಾಧ್ಯವಾಯಿತು. ಮದ್ರಾಸು ನ್ಯಾಯವಿಧಾಯಕ ಸಭೆಯ [illegible] ಬಹುಮಾನಪಟ್ಟ ಕೆ. [illegible] ಪಂತುಲುರವರಿಗೆ ಈ ಮೊದಲು ೩೦೦ ರೂಪಾಯಿಗಳನ್ನು ಈ ವಿಧವಾಲಯದ ಬಗ್ಗೆ ಕೊಟ್ಟಿದ್ದಲ್ಲದೆ ಈ ಸಾರಿ ವಿಧವಾಲಯಕ್ಕೆ ಬೇಕಾದ ಹಣವನ್ನು ತಾನು ಕೊಡುವರೆ ಸಿದ್ಧನಾಗಿರುವೆನೆಂದು ಬಳ್ಳಾರಿಯಲ್ಲಿ ಈ ಸಂದರ್ಭದಲ್ಲಿ ಸೇರಿದ ಸಭೆಯಲ್ಲಿ ಹೇಳಿರುವರು.

~~~~~~

ಮದ್ರಾಸ್ ಹ್ಯಾಕೋರ್ಟ್ ಚೀಫ್ ಜಸ್ಟೀಸರಾದ ಬಹುಮಾನಪಟ್ಟ ಸರ್ ಆರ್ನೊಲ್ಡ್ ವ್ಹೈಟರವರು ವಿಲಾಯತಿಯಿಂದ ತಮ್ಮ ಪತ್ನಿಯರೊಂದಿಗೆ ಈ ತಿಂಗಳ ತಾ. ೬ರಲ್ಲಿ ಮದ್ರಾಸಿಗೆ ಬಂದು ತಲ್ಪಿರುವರು.

~~~~~~

ಮುಸಲಿಪಟ್ಟದ ದಕ್ಷಿಣ ವೆಲ್ಲೂರಿನ ಜಮೀನ್‌ದಾರರ ಮನೆಯಲ್ಲಿ ಒಂದು ದೊಡ್ಡ ಕಳವು ಆಗಿರುವುದು. ಜಮೀನುದಾರರ ಪತ್ನಿಯು ತಾನು ಮದ್ರಾಸಿನಿಂದ ಬಂದೊಡನೆಯೇ ತನ್ನ ಕಪ್ಪಿನ ಖಜಾನೆ ಪೆಟ್ಟಿಗೆಯ ಬಾಗಿಲನ್ನು ತೆಗದು ನೋಡಲಾಗಿ ಅದರಲ್ಲಿ ೬೦,೦೦೦ ರೂಪಾಯಿಗಳು ಕ್ರಯ ಬಾಳುವ ರತ್ನ ಖಚಿತವಾದ ಆಭರಣಗಳು ಕಳವಾಗಿವೆ ಎಂತ ತೋರಿಬಂತು. ಕಳ್ಳರು ಯಾರೆಂಬದು ಈ ವರೆಗೆ ಪತ್ತೆಯಾಗಲಿಲ್ಲ.

~~~~~~

ಹಿಂದುಸ್ಥಾನದ 'ಸೆಂಡೊ' ಎನ್ನಿಸಿಕೊಂಡ ಪ್ರೊಫೆಸ್ಸರ್ ರಾಮಮೂರ್ತಿಯವರು ಬಾಮಾದಿಂದ ರಂಗೂನಿಗೆ ಬಂದು ತಲಪಿರುವರು. ಅಲ್ಲಾಹಾಬಾದ್ ಎಂಬಲ್ಲಿ ಪರಾಕ್ರಮರಾವ್ ಸರ್ಕಸ್ ಎಂಬ ಕಂಪೆನಿಯವರೊಂದಿಗೆ ಸರ್ಕಸ್ ಆಟಗಳನ್ನು ನಡಿಸುವಾಗ ಇವರಿಗೆ ಯಾರೋ ವಿಷಹಾಕಿದರು. ವಿಷಪ್ರಯೋಗದಿಂದ ದೈವವಶಾತ್ ಉಳಿದಿರುವರಾದರೂ ಸಕಲ ಬಲಹೀನರಾಗಿರುವುದರಿಂದ ಇನ್ನು ಕೆಲವು ಸಮಯದವರೆಗೆ ತಮ್ಮ ಆಟಗಳನ್ನು ನಡಿಸಲಶಕ್ತರಾಗಿರುವರಂತೆ.

~~~~~~

ಮದ್ರಾಸು ಗವರ್ನರ್ ಸರ್ ಆರ್ಥರ್ ಲೋಲಿಯವರು ಮೈಸೂರು ಸಂಸ್ಥಾನಕ್ಕೆ ದಯಮಾಡಿಸಿದ್ದರಷ್ಟೆ. ಇವರು ಮೋಟಾರ್ ರಥದಲ್ಲಿ ಕುಳಿತು ವೇಲೂರು ಮಾರ್ಗವಾಗಿ ಮದ್ರಾಸಿಗೆ ದಯಮಾಡಿಸಿದರು. ವೇಲೂರಿಗೆ ಹೋಗಿದ್ದ ವೇಳೆಯಲ್ಲಿ ಅಲ್ಲಿಯ ಬಂದೀಖಾನೆಯ ಸ್ಥಿತಿಯನ್ನು ಮತ್ತು ಬಂದಿಗಳಿದ್ದ ಸ್ಥಿತಿಯನ್ನು ನೋಡಿ ತಿಳಿಯುವ ಇಚ್ಛೆ ಹುಟ್ಟಿ ಬಂದೀಖಾನೆಗೆ ಹೋಗಲಾಗಿ ಮೂರು ವರುಷ ಕಠಿಣ ಕೈದಿಗೆ ಗುರಿಮಾಡಲ್ಪಟ್ಟು, ಆ ವೈಕಿ ೧೫ ತಿಂಗಳನ್ನು ಕಳೆದಿದ್ದ ರಾಜದ್ರೋಹಿಯಾದ ಹರಿ ಸರ್ವೋತ್ತಮರಾವ್ ಎಂ. ಎ., ಎಂಬಾತನು ಗವರ್ನರ್ ಸಾಹೇಬರಿಗೆ ಮನವಿ ಮಾಡಿಕೊಂಡು ಬಿಡುಗಡೆ ಮಾಡಿಸಬೇಕೆಂದು ಪ್ರಾರ್ಥಿಸಿದನು.

ಗವರ್ನರ್ ಸಾಹೇಬರು—ನಿನಗೆ ಕೊಟ್ಟಿರುವ ಶಿಕ್ಷೆಯು ಸಾಕಾದಷ್ಟಿಲ್ಲ. ಅದರ ಗೋಜಿಗೆ ಹೋಗದಿಕ್ಕೆ ಕಾರಣವೇನನ್ನೂ ಕಾಣೆ. ನಿನ್ನ ಮೊಕದ್ದಮೆಯು ಹೈಕೋರ್ಟಿನಲ್ಲಿ ಸಂಪೂರ್ಣವಾಗಿ ವಿಮರ್ಶಿಸಲ್ಪಟ್ಟಿತು. ನಿನ್ನಂತಹ ವಿದ್ಯಾವಂತರು ನೀನು ಕೈಹಾಕಿದ್ದ ಕೆಲಸದಲ್ಲಿ ಪ್ರವರ್ತಿಸಿದರೆ ಅದರ ಪರ್ಯವಸಾನವೇನೆಂಬದನ್ನು ಯೋಚಿಸಬೇಕು. ಜನಸಮುದಾಯದ ವಿಷಯದಲ್ಲಿ ನಮ್ಮ ಮೇಲಿನ ಕರ್ತವ್ಯಗಳು ಕೆಲವುಂಟು. ನೀನು ಯಾವ ಅಪರಾಧವನ್ನು ಮಾಡಿದಿಯೆಂದು ರುಜುವಾತು ಬಂತೋ ಅಂತಹ ಅಪರಾಧವನ್ನು ನಾವು ನಿರ್ಮೂಲ ಮಾಡಬೇಕು.

ಕೈದಿಯು ತನ್ನ ವಿಷಯದಲ್ಲಿ ನ್ಯಾಯವು ವಕ್ರಮಾರ್ಗವನ್ನು ಹಿಡಿದಂತೆ ಗವರ್ನರ್ ಸಾಹೇಬರಿಗೆ ತಿಳಿಸಿದನು.

ಗವರ್ನರ್ ಸಾಹೇಬರು.—ನ್ಯಾಯವು ವಕ್ರಮಾರ್ಗವನ್ನು ಹಿಡಿಯುವದು ಅಸಂಭವ. [illegible]

[illegible] ದಿರುವದು.

ಗವರ್ನರ್ ಸಾಹೇಬರು.—ಹೈಕೋರ್ಟಿನವರು ಬಲಿ ಸಂಶಯದಿಂದ ನಿನ್ನನ್ನು ಅಪರಾಧಿಯೆಂದು ತೀರ್ಮಾನ ಮಾಡಿರುವ ಹಾಗೆ ನಿಜವಾಗಿ ಹೇಳುವೆಯಾ? ರುಜುವಾತು ಸ್ಪಷ್ಟವಾಗಿರುವುದಲ್ಲಾ!

ಕೈದಿ —ಖಾವಂದರು ನನ್ನ ಮೊಕದ್ದಮೆಯನ್ನು ಪರಾಮರಿಸಬೇಕು.

ಗವರ್ನರ್ ಸಾಹೇಬರು—ನಿನ್ನ ಮೊಕದ್ದಮೆಯು ಹೈಕೋರ್ಟು ಡಿವಿಜನಲ್ ಬೆಂಚಿನಿಂದ ವಿಮರ್ಶಿಸಲ್ಪಟ್ಟಿತು. ನಿನಗೆ ಆಗಿರುವ ಶಿಕ್ಷೆಯು ಹೆಚ್ಚಿನದಲ್ಲವೆಂದು ನನಗೆ ತೋರುವುದು. ಅನುಮಾನದಿಂದ ನಿನ್ನ ಮೇಲೆ ಅಪರಾಧವು ಹೊರಿಸಲ್ಪಟ್ಟಂತೆ ನನಗೆ ಹೇಳುವದು ಕೇವಲ ಅಸಂಬದ್ಧ. ನಿನಗಿರುವ ಹಕ್ಕೇನಂದರೆ—ಕ್ಷಮಾಪಣೆಯನ್ನು ಬೇಡುವದು. ನಿನ್ನ ಹೆಂಡತಿಯು ಬರೆದುಕೊಂಡಿರುವ ಅರ್ಜಿಯು ನಮ್ಮ ಆಲೋಚನೆಯಲ್ಲಿರುವುದು. ಆದರೆ ಹೈಕೋರ್ಟಿನ ತೀರ್ಮಾನಕ್ಕೆ ಅಡ್ಡವಾಗಿ ಗವರ್ನಮೆಂಟಿನವರು ಹೋಗುವರೆಂದು ನಿನಗೆ ಆಸೆಯನ್ನು ಕೊಡಲಾರೆ.

ಕೈದಿ.—ಖಾವಂದರು ಕ್ಷಮಿಸಬಹುದಷ್ಟೆ.

ಗವರ್ನರ್ ಸಾಹೇಬರು.—ನಾನು ಆಸೆಯನ್ನಾಗಲಿ ಮಾತನ್ನಾಗಲಿ ಕೊಡಲಾರೆ. ನಿನ್ನ ಪೂರ್ವಚರಿತ್ರೆಯು ಒಳ್ಳೇದಲ್ಲ. ಹೈಕೋರ್ಟಿನವರು ನಿನಗಾಗಿದ್ದ ಆರು ತಿಂಗಳ ಶಿಕ್ಷೆಯನ್ನು ಮೂರು ವರ್ಷಕ್ಕೆ ಹೆಚ್ಚಿಸಿರುವರು. ಬ್ರಿಟಿಷರ ಆಳ್ವಿಕೆಗೆ ಪ್ರತಿಕೂಲವಾಗಿ ಅಸಮಾಧಾನವನ್ನುಂಟುಮಾಡುವದು ಎಲ್ಲಾ ಅಪರಾಧಗಳಿಗಿಂತಲೂ ದೊಡ್ಡದು. ದೇಶದಲ್ಲಿ ನಾವು ನ್ಯಾಯವನ್ನು ಕಾಪಾಡಬೇಕು; ನಿನ್ನಂತವರ ಪೀಡನದಿಂದ ಜನಸಮುದಾಯವನ್ನು ರಕ್ಷಿಸಬೇಕು.

ಕೈದಿ —ಅಂತಹ ದುರಭಿಪ್ರಾಯಗಳಾವವೂ ನನಗಿರಲಿಲ್ಲವೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಗವರ್ನರ್ ಸಾಹೇಬರು—ನಿನ್ನ ವಿದ್ಯವೂ ನಿನ್ನ ಜ್ಞಾನವೂ ಇರುವ ಮನುಷ್ಯನು ಆ ಕೆಲಸಕ್ಕೆ ಕೈ ಹಾಕಿದರೆ ಆ ಅಭಿಪ್ರಾಯವಿಲ್ಲದೆ ಆಗುವದೇ ಇಲ್ಲ. ನಿನ್ನ ಕಾರ್ಯದ ಪರ್ಯವಸಾನವೇನೆಂಬದು ನಿನಗೆ ತಿಳಿದಿರಬೇಕು. ನಿನ್ನ ಅರ್ಜಿಯು ಉತ್ತರೋತ್ತರ ವಿಮರ್ಶೆ ಮಾಡಲ್ಪಡುವದು. ಆದರೆ ನಾನು ಆಶೆಯನ್ನು ಕೊಡಲಾರೆ. ಈ ವಿಷಯದಲ್ಲಿ ನನ್ನ ಕರುಣೆಗೆ ಅವಕಾಶವಿಲ್ಲ. ಜನಸಮುದಾಯಕ್ಕೆ ನಮ್ಮ ಕರ್ತವ್ಯವೇನೆಂಬುದನ್ನು ಯೋಚಿಸಬೇಕಾಗಿರುವದು. ಹ್ಯಾಕೋರ್ಟಿನ ತೀರ್ಮಾನವನ್ನು ಬದಲಾಯಿಸುವದಕ್ಕೆ ಕಾರಣವಿಲ್ಲವೆಂಬದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಸರಕಾರಕ್ಕೆ ವಿರೋಧವಾದ ದೊಡ್ಡ ಅಪರಾಧವನ್ನು ಮಾಡಿರುವೆ. ನಿನ್ನ ನಡತೆಯನ್ನು ನಾವು ಹೇಗೆ ಎಣಿಸುತ್ತಿದ್ದೇವೆಂಬದನ್ನು ನೀನು ತಿಳಿದುಕೊಳ್ಳುವದು ಒಳ್ಳೆಯದು. — ವೀರಕೇಸರಿ.

~~~~~~

ಮೊಲಗೇಣಿ ಭೂಮಿಯ ಮೇಲೆ ಸೆಟ್ಲ್‌ಮೆಂಟಿನಲ್ಲಿ ಏರಿದ ತೀರ್ವೆ ವಿಷಯದಲ್ಲಿ ನಾವು ಈ ಮೊದಲು ಮೂರು ಸಾರಿ ನಮ್ಮ ಪತ್ರದಲ್ಲಿ ಪ್ರಕಟಿಸಿದ್ದೆವು. ಮದ್ರಾಸು ಹ್ಯಾಕೋರ್ಟಿನಲ್ಲಿ ೨ ಜಡ್ಜರು ಕೂತುಕೊಂಡು ತೀರ್ಮಾನ ಮಾಡಿದ ೨ ನಂಬ್ರಗಳಲ್ಲಿ ವ್ಯತಿರಿಕ್ತ ತೀರ್ಪು ಕೊಡಲ್ಪಟ್ಟದ್ದಾಗಿತ್ತಷ್ಟೆ. ಒಂದರಲ್ಲಿ ಮೂಲಗೇಣಿ ಧನಿ ಕೊಡಬೇಕೆಂತಲೂ ಇನ್ನೊಂದರಲ್ಲಿ ಮೂಲಗೇಣಿ ಒಕ್ಕಲು ಕೊಡಬೇಕೆಂತಲೂ ತೀರ್ಮಾನವಾಗಿತ್ತು. ಈ ಪ್ರಕಾರ ಒಂದಕ್ಕೊಂದು ವಿರೋಧವಾದ ತೀರ್ಪುಗಳು ಹ್ಯಾಕೋರ್ಟಿನಲ್ಲಿಯೇ ಆಗಿರುವಾಗ್ಯೆ [illegible] ನೋಡು [illegible] ಹೈಕೋರ್ಟಿನಲ್ಲಿ [illegible]
~~~~~~

ಬಂದ ... ವ್ಯಾಜ್ಯವನ್ನು ಪ್ರಿವೀ ಕೌನ್ಸಿಲ್ [illegible] ತೀರ್ಮಾನಿಸಬೇಕಾಗಿ ಅದರ ಮುಂದೆ ಇಡೋಣ ಆಗಿಯದೆಂತ ನಿಜವಾದ ವರ್ತಮಾನ ನಮಗೆ ಶಿಕ್ಕಿಯದೆ. ಫುಲ್‌ಬೆಂಚಿನಲ್ಲಿ ಹ್ಯಾಗೆ ತೀರ್ಮಾನಗಿಯದೆಂಬದನ್ನು ತೀರ್ಮಾನವಾದ ಕೂಡಲೆ ನಮ್ಮ ಪತ್ರದಲ್ಲಿ ಪ್ರಕಟಿಸುವೆವು. ಈ ಅಂಶವನ್ನು ಫುಲ್‌ಬೆಂಚಿಗೆ ಇಟ್ಟದ್ದು ಎಲ್ಲವರಿಗೆ ಪ್ರಯೋಜನಕರವಾದ್ದೆಂತ ನಾವು ಅಭಿಪ್ರಾಯಪಡುತ್ತೇವೆ ಈ ಫುಲ್ ಬೆಂಚ್ ತೀರ್ಮಾನದ ಮೇಲೆ ಸದರಿ ಏರಿದ ತೀರ್ವೆಗಳ ಕುರಿತು ಈಗ ಇರುವ ವ್ಯಾಜ್ಯಗಳು ವ ಮುಂದೆ ಆಗಲಿಕ್ಕೆ ಇರಬಹುದಾದ ವ್ಯಾಜ್ಯಗಳು ಹೊಂದಿರುವವು

~~~~~~

ದಕ್ಷಿಣ ಕನ್ನಡ.

~~~~~~

ಮಂಗಳೂರು ಕಳದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ಎರಡು ಪ್ಲೇಗು ಮರಣಗಳಿದ್ದವು ಹೋದ ಅಕ್ಟೋಬರ ತಿಂಗಳಲ್ಲಿ ಪ್ಲೇಗಿನಿಂದ ಸತ್ತವರ ಸಂಖ್ಯೆಯು ೨೮, ಗತ ವರುಷ ಇದೇ ತಿಂಗಳಲ್ಲಿ ೫೬ ೭೯ ಆಗಿತ್ತು.

ಕಳದ ಅಕ್ಟೋಬರ ತಿಂಗಳಲ್ಲಿ ೧೭೭(೬೩ ಗಂಡು ೭೪ ಹೆಣ್ಣು) ಜನನಗಳೂ, ೧೧೧(೬೨ ಗಂಡು, ೪೯ ಹೆಣ್ಣು) ಮರಣಗಳಾದವು ಕಳದ ವರುಷ ಇದೇ ತಿಂಗಳಲ್ಲಿ ಈ ಸಂಖ್ಯೆಗಳು ೧೩೪(೭೪ ಗಂಡು, ೫೦ ಹೆಣ್ಣು) ೧೧೮ (೬೧ ಗಂಡು, ೫೭ ಹೆಣ್ಣು) ಆಗಿದ್ದವು

ಮದ್ರಾಸು ಎಕೌಂಟಂಟ್ ಜನರಲ್‌ರ ಹೆಡ್ ಆಫೀಸಿನಿಂದ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾಗಿರುವ ರಾ। ಗೋಪಾಲಯ್ಯರವರು, ಮುನಿಸಿಪಲ್, ಲೋಕಲ್‌ಫಂಡ್ ಮುಂತಾದವುಗಳ ಲೆಕ್ಕಾಚಾರವನ್ನು ತನ್ನಿಮಾಡುವ ಬಗ್ಯೆ ಇದೇ ತಿಂಗಳ ತಾ ೩ಲಕ್ಕೆ ಬರುವರಾಗಿ ವದಂತಿ ಇದೆ

~~~~~~

ಕಾಸರಗೋಡು ನಮ್ಮ ತಾಲೂಕು ತಹಶೀಲ್ದಾರ ಮ। ಯನ್ ಪಿ ಫೆರ್ನಾಂದೀಸರವರಿಗೆ ಉಡುಪಿ ತಾಲೂಕಿಗೆ ವರ್ಗವಾಗುವದಾಗಿಯೂ ಇವರ ಬದಲಿಗೆ ಇಲ್ಲಿ ಮ। ರಾ ಎಕ್ಕಾರ ರಾಮಕೃಷ್ಣಯ್ಯರವರು ಬರುತ್ತಾರಾಗಿಯೂ ವರ್ತಮಾನ ಇರುವುದು

ಇಲ್ಲಿಯ ರೈಲ್ವೆಸ್ಟೇಶನ್ ಪ್ಲಾಟ್ ಫೋರ್ಮಿನಲ್ಲಿ ಹೋಗುವ ಪ್ರಯಾಣಿಕರಲ್ಲದವರಿಗೆ ೧ ಆಣೆ ಟೀಕೇಟು ದರ ಇದೇ ತಿಂಗಳ ತಾ ೧೫ನೇಯಿಂದ ಜಾರಿಯಾಗುತ್ತದಂತೆ

ನಮ್ಮ ತಾಲೂಕಿನ ದಕ್ಷಿಣಾಂತ್ಯದಲ್ಲಿರುವ ತಾಯಕ್ಕಾಟೆ ತಿಮ್ಮಂಬುಗಳೆಂಬ ಪ್ರಖ್ಯಾತಿ ವ ಶ್ರೀಮಂತ ಗೃಹಸ್ಥರ ಮೇಲೆ ಕಣ್ಣಾನೂರು ಸಾಹುಕಾರ ತಮಿಳು ಬ್ರಾಹ್ಮಣರೊಬ್ಬರು ರೂಪಾಯಿ ೧೬೦೦ಕ್ಕೆ ಡಿಕ್ರಿ ಪಡದು ೨ ಆನೆಗಳನ್ನು ಜಪ್ತಿಮಾಡಿ ಮೊನ್ನೆ ಈ ಕೋರ್ಟು ಮುಂದೆ ಹಾಜರು ಮಾಡಿದ್ದರು ಈ ಆನೆಗಳನ್ನು ನೋಡಲಿಕ್ಕೆ ಸಾವಿರಾರು ಆ ಬಾಲವೃದ್ಧರೂ ಬಂದಿದ್ದರು ಆನೆಗಳನ್ನು ಏಲಂ ಮಾಡದೆ ಡಿಕ್ರಿ ಸಮಾಧಾನದ ಬಗ್ಯೆ ತಿಮ್ಮಂಬುಗಳ ಕಡೆಯವರು ಜಾಮೀನು ಕೊಟ್ಟು ಆನೆಗಳನ್ನು ಬಿಡಿಸಿ ಕೊಂಡುಹೋದರು

~~~~~~

ಪುತ್ತೂರು. ಇದೇ ತಿಂಗಳ ತಾ ೩ಲ್ಲು ಗವರ್ನ್‌ಮೆಂಟ್ ಹುಡುಗಿಯರ ಶಾಲೆಯ ಪರೀಕ್ಷೆ ಬಗ್ಯೆ ಇನ್ಸ್‌ಪೆಕ್ಟರ್ ಮಿಸ್ಸ್ ಪೆಟ್‌ಸನ್‌ರವರು ಇಲ್ಲಿಗೆ ತಲ್ಪಿ ಶಾಲೆಯ ಪರೀಕ್ಷೆ ತೀರಿಸಿ ಹೋಗಿರುವರು

ಆರಯಪ್ಪು ಗ್ರಾಮದ ಡೆಂಟ ಬಾಗಲ ಎಂಬಲ್ಲಿ ಒಬ್ಬ ಗೌಡನ ಮನೆಯಿಂದ ಹಿಂದು ನಾಯಿಯನ್ನು ಎತ್ತಿಕೊಂಡು [illegible] ಹುಲಿಯ ತಲಾಶ ಬಗ್ಯೆ ಕಾಡಿಗೆ ಹೋದಲ್ಲಿ ಹುಲಿಯು [illegible] ಕಂಡು ಓಡಿಹೋಗುವಾಗ ಒಬ್ಬ [illegible] ಮರಿಗಳು ಸಿಕ್ಕಿರುವವು. ಅವನ್ನು ನಮ್ಮ ಇಲ್ಲಿ

ಯ ಮುನ್ಸೀಫ್ [illegible] ಸಾಹೇಬ್ ... ನವರಲ್ಲಿ ತಾ. ೬ಲ್ಲು [illegible] ಸಾಕುತ್ತಿರುವರು.

~~~~~~

ಮುಲ್ಕಿ ನಮ್ಮ ಬಾಲ್ಯದಾರಭ್ಯ ಎಲ್ಲಾ ಮಿಶ್ಶನ್ ಬಂಗ್ಲೆಗಳಲ್ಲಿ ದಿನವಹಿ ಅಹೋರಾತ್ರಿ ಎಂಬಂತೆ ಪುಸ್ತಕ ಮಾರಾಟ ಮಾಡುತ್ತಿದ್ದರಲ್ಲದೆ ಈಗಲೂ ಎಲ್ಲಾ ಕಡೆಗಳಲ್ಲಿ ಆದಿತ್ಯವಾರ ವಿನಹಾ ಇತರ ದಿವಸಗಳಲ್ಲಿ ಪುಸ್ತಕ ಮಾರಾಟ ಮಾಡುತ್ತಿರುವರು ಆದರೆ ನಮ್ಮ ಮುಲ್ಕಿ ಬಂಗ್ಲೆಯಲ್ಲಿ ಮಂಗಳವಾರ ಮತ್ತು ಶನಿವಾರ ಎರಡು ದಿವಸ ಮಾತ್ರ ಬೆಳಿಗ್ಯೆ ಪುಸ್ತಕಗಳನ್ನು ಮಾರುತ್ತಿರುವರಲ್ಲದೆ, ಬೇರೆ ದಿವಸಗಳಲ್ಲಿ ಎಷ್ಟು ದೂರದಿಂದಬಂದರೂ ಹಿಂದೆರಳಬೇಕೇ ಹೊರತು ಪುಸ್ತಕಗಳು ಸಿಕ್ಕಲಾರವಂತೆ ಇದು ನಿಜವಾದ್ದಲ್ಲಿ ಗಿರಾಕಿಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಿರುವದರಿಂದ ಮೇಲಾಧಿಕಾರರು ಇದನ್ನು ಚಿತ್ತಕ್ಕೆ ತಂದುಕೊಂಡರೆ ತಮಗೆ ಲಾಭವೂ ಇತರರಿಗೆ ಅನುಕೂಲತೆಯೂ ಸಿಕ್ಕುವದೆಂಬದಕ್ಕೆ ಸಂಶಯವಿಲ್ಲ

ಇಲ್ಲಿಯ ಪಂಚಮರು ಒಟ್ಟು ಕೂಡಿ ತಮ್ಮ ಅಭಿವೃದ್ಧಿಗೋಸ್ಕರ ಒಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಬೇಕೆಂದಾಗಿ ಜಿಲ್ಲಾ ಕಲೆಕ್ಟರರವರಿಗೆ ಅರ್ಜಿ ಮಾಡಿರುತ್ತಾರಂತೆ ದೊರೆಗಳಿಗೆ ಅರ್ಜಿ ಮಾತ್ರ ಮಾಡಿಸಿದರೆ ಸಾಲದು ಪೇಟೆಯ ಮುಂದಾಳುಗಳು ರಾ ಕುದ್ಮುಲ ರಂಗರಾಯರು ಈ ವಿಷಯದಲ್ಲಿ ಸಾಹಸಪಡುವಂತೆ ಪ್ರಯತ್ನ ಪಡಬೇಕು. ಆಗ ಗವರ್ನಮೆಂಟಿನವರು ನಮ್ಮ ಬೆಂಬಲಕ್ಕೆ ಬರುವರು

ತೆಂಗಿನಕಾಯಿಯ ಬೀಜ ಹಾಕುವಾಗ ಗುಣಿ ತೆಗೆದು ತೆಂಗಿನಕಾಯಿಯನ್ನು ನೆಟ್ಟಗೆ ಇಡುವದರ ಬದಲಿಗೆ ಅಡ್ಡವಾಗಿ ಇಟ್ಟರೆ ಸೊಂಪಾದ ಮೊಳಕೆಯು ಹೊರಡುವದೆಂದು ಒಬ್ಬ ಗೃಹಸ್ಥರು ಅನುಭವದಿಂದ ಹೇಳುವರು

ತಾರೀಕು ೪ರಲ್ಲು ಜಿಲ್ಲಾ ರಿಜಿಸ್ಟ್ರಾರರು ಇಲ್ಲಿಗೆ ಚಿತ್ತೈಸಿ ೪ ೬ನೇ ತಾರೀಕುಗಳಲ್ಲಿ ಇಲ್ಲಿಯ ಸಬ್ ರಿಜಿಸ್ಟ್ರಿ ಆಫೀಸನ್ನು ಸಂದರ್ಶನೆ ಮಾಡಿ ಸಂತೋಷ ಪಟ್ಟಿರುವರಂತೆ

ಮಂಗಳೂರಿಗೆ ಹಿಂದೆ ಕರೆಯಲ್ಪಟ್ಟ ನಮ್ಮ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾ ಬಿ ರಾಮರಾಯರವರು ಇಲ್ಲಿಗೆ ಪುನಃ ಬಂದು ತಾರೀಕು ೫ರಲ್ಲು ಚಾರ್ಜು ವಹಿಸಿಕೊಂಡಿರುವದು ಸಂತೋಷಕರವೇ ಸರಿ

~~~~~~

ಉಡುಪಿ ಕೆಲವು ತಿಂಗಳು ರಜೆಯ ಮೇಲೆ ಇಲ್ಲವೆ ಬೇರೆ ಕಡೆಯಲ್ಲಿ ಬದಲಿ ಕೆಲಸದ ಮೇಲೆ ಹೋಗಿದ್ದ ನಮ್ಮ ಪೋಸ್ಟು ಮಾಸ್ಟರವರು ತಿರಿಗಿ ಇಲ್ಲಿಗೆ ಒಂದು ಈ ತಾ ೫ಲ್ಲು ಚಾರ್ಜು ತೆಗೆದುಕೊಂಡಿರುವರು ಇವರು ಒಳ್ಳೇ ಚಟುವಟಿಕೆಯಿಂದ ಕೆಲಸವನ್ನು ಮಾಡುವವರೂ ಸುಗುಣಿಗಳೂ ಆಗಿರುವದರಿಂದ ಇವರ ಆಗಮನವನ್ನು ಬಹು ಜನರು ಹಾರೈಸುತ್ತಿದ್ದರು

ಕಾರ್ಕಳ ಮೇಜಿಸ್ಟ್ರೇಟರು ಒಂದು ಹಪ್ತೆ ರಜೆಪಡಕೊಂಡದುದರಿಂದ ಅವರ ಚಾರ್ಜನ್ನು ಇಲ್ಲಿಯ ಮೇಜಿಸ್ಟ್ರೇಟರು ತೆಗದುಕೊಂಡಿರುವರು

ಹೆಡ್ ಅಸಿಸ್ಟಾಂಟ್ ಕಲೆಕ್ಟರ್ ದೊರೆಗಳವರು ಕಳೆದ ವಾರದಲ್ಲಿ ಸರ್ಕೀಟಿನ ಮೇಲೆ ಇಲ್ಲಿಗೆ ದಯಮಾಡಿರುವರು.

ಇಲ್ಲಿ ಶಾಲೆಗಳಿಗೆ ಹೋಗುವ ಹಿಂದು ಬಾಲಕರಿಗೆ ತಮ್ಮ ಮತದ ವಿಷಯದಲ್ಲಿಯೂ ಧರ್ಮಗಳ ವಿಷಯದಲ್ಲಿಯೂ ಬೋಧನೆಗಳನ್ನು ಕೊಡಬೇಕೆಂಬ ನಮ್ಮ ಮಾನ್ಯ ಡಿ। ಮುನ್ಸೀಫರಾದ ಮ। ರಾ। ದೇವರಾಯರವರ ಸೂಚನೆಯ ಪ್ರಕಾರ ಪ್ರತಿ ಭಾನುವಾರ ಸಂಜೆಗೆ ಕ್ಲಬ್ಬಿನಲ್ಲಿ ಉಪನ್ಯಾಸಗಳು ನಡಿಯುವ ವ್ಯವಸ್ಥೆಯಾಗಿರುವದು. ಅದರಂತೆ ಕಳೆದ ಭಾನುವಾರ ದಿವಸ [illegible]

ಯಾಗ [illegible] ಮಹೋಪಾಧ್ಯಾಯ [illegible] ರವರು ಸತ್ಕರ್ಮ ಮತ್ತು ಪರೋಪಕಾರದ ವಿಷಯವಾಗಿ ಒಳ್ಳೇ ಒಂದು ಉಪನ್ಯಾಸವನ್ನು ಮಾಡಿದರು. ನೂರಾರು ಮಂದಿ ವಿದ್ಯಾರ್ಥಿಗಳೂ ಬಹುಮಂದಿ ಇತರ ಗೃಹಸ್ಥರೂ ನೆರದಿದ್ದರು ಇವರ ವಾಕ್ಸರಣಿಯು ಸರ್ವೋತ್ಕೃಷ್ಟವಾಗಿರುವದಾಗಿ ಅನೇಕರು ಅಭಿಪ್ರಾಯಪಟ್ಟರು

ಇಲ್ಲಿಯ ಜಾತ್ರೆಗಳ ಸಮಯದಲ್ಲಿ ಪರಸ್ಥಳಗಳಿಂದ ಸಾವಿರಾರು ಜನರು ಬರುತ್ತಿರುವರಷ್ಟೆ. ಪ್ಲೇಗು ರಹದಾರಿಗಳ ಸಮ್ಮಂಧ ಇವರನ್ನು ಸಂದರ್ಶಿಸುವಾಗ್ಯೆ ಗಲಾಟೆಗಳಾಗಿ ಪೋಲೀಸಿನವರ ಸಹಾಯವನ್ನು ಕೂಡ ಅಪೇಕ್ಷಿಸುವದುಂಟು ಇಲ್ಲಿಯ ಜಾತ್ರೆಗಳ ಕಾಲದಲ್ಲಿ ಪ್ರತ್ಯೇಕ ಒಬ್ಬ ಆಫೀಸರನನ್ನು ನಿಯಮಿಸಿ ಪ್ಲೇಗು ರಹದಾರಿಗಳನ್ನು ಮರಪೀದಿಯಲ್ಲಿಯೇ ಒಂದು ಕಡೆ ತನಖಿ ಮಾಡುವಂತೆ ಏರ್ಪಡಿಸಿದರೆ ಯಾತ್ರಿಕರಿಗೆ ಹೆಚ್ಚಿನ ಅನುಕೂಲವಾಗುವದು ಆ ಕಾಲದಲ್ಲಿ ರೋಗಾದಿಗಳು ಹೆಚ್ಚಾಗಿರುವದರಿಂದ ಡಾಕ್ಟರರವರಿಗೂ ತೊಂದರೆ ಕಡಿಮೆಯಾಗುತ್ತಿತ್ತು ಈಗ ಸಮೀಪಿಸಿರುವ ಪರ್ಯಾಯ ಜಾತ್ರೆ ಕಾಲದಲ್ಲಿ ಈ ಏರ್ಪಾಡನ್ನು ಮಾಡಿಸುವಂತೆ ಕಲೆಕ್ಟರ್ ದೊರೆಗಳವರು ವ್ಯವಸ್ಥೆ ಮಾಡಿಸಿದರೆ ಸರ್ವರಿಗೂ ತುಂಬಾ ಅನುಕೂಲವಾಗುತ್ತಿತ್ತು

ಬ್ರಹ್ಮಾವರ ರಿಜಿಸ್ಟ್ರಿ ಆಫೀಸಿನಲ್ಲಿ ನಡೆಯುವ ಫೋರ್ಜರಿ ನಂಬರದಲ್ಲಿ ಮುದ್ದೈಯಾಲೇರನ್ನು ಇಲ್ಲಿಯ ಮೇಜಿಸ್ಟ್ರೇಟರು ಸೆಶ್ಶನ್ಸಿಗೆ ಕಮ್ಮಿಟ್ ಮಾಡಿರುವರು

ತಮ್ಮ ಶಿಷ್ಯರ ಪೈಕಿ ಬಂಡಾರಿಕೇರಿ ಮಠದ ಶ್ರೀ ರಾಮಚಂದ್ರ ದೇವರಿಗೆ ಪೂಜಾದಿಗಳನ್ನು ಯಾರು ನಡಿಸಿಕೊಂಡು ಬರುವದೆಂಬದರ ವಿಷಯದಲ್ಲಿ ತಮ್ಮ ಗುರುಗಳಾದ ಶ್ರೀ ಮದ್ವಾಚಾರ್ಯರ ಶಾಸನದ ಇತ್ಯರ್ಥದ ಕುರಿತು ಉಡುಪಿ ಪರ್ಯಾಯ ಮಠದವರೂ ಭೀಮನ ಕಟ್ಟೆ ಮಠದವರೂ ಮ। ಅನಂತನ್ ನಾಯರ್ (ಮಂಗಳೂರು ಸಬ್ ಜಡ್ಜರು) ನಿರ್ಮಾಣದ ಲಿಕ್ಷೆಯನ್ನು ಕಾಂಕ್ಷಿಸುತ್ತಿರುವರು. ಈ ತಾ ೧೭ಕ್ಕೆ ಈ ವ್ಯಾಜ್ಯವನ್ನು ಹಿಯರಿಂಗಿಗೆ ನಿಶ್ಚೈಸಿರುವರಂತೆ ಇವರಲ್ಲಿ ಬ್ಯಾರ ಮ। ಶಂಕರನ್ ನಾಯರ್ (ಹ್ಯಾಕೋರ್ಟು ಜಡ್ಜರು) ಅವರ್ಗಳವರ ಲಿಕ್ಷೆ ಶಿಕ್ಷೆ ಬೇಕೆಂತ ಅವರನ್ನು ಕೂಡ ಕೇಳಿಕೊಳ್ಳಬೇಕಾದಿ ನಿಶ್ಚೈಸಿರುವರಂತೆ

~~~~~~

ಪಾಣೆಮಂಗಳೂರು ಇಲ್ಲಿಯ ಸುಪ್ರಸಿದ್ಧ ವರ್ಗದಾರರೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರೂ ಆಗಿದ್ದ ಮ. ರಾ ರಾ ಕೊಳಕೆರೆ ರಾಮನ್ನಾಯಕರವರು ಇದೇ ಕಳದ ತಾ ೫ನೇ ಶುಕ್ರವಾರ ದಿನ ಕಾಲವಾದರೆಂಬದನ್ನು ತಿಳಿಸುವರೆ ವಿಷಾದಿಸುತ್ತೇವೆ ಇವರು ೧೮೫೫ನೇ ಇಸವಿಯಲ್ಲಿ ಬಂಟವಾಳದಲ್ಲಿಯ ಮರ್ಯಾದಸ್ಥ ಕುಟುಂಬದಲ್ಲಿ ಹುಟ್ಟಿ, ಬಡತನದ ದೆಶೆಯಿಂದ ಓದುಬರಹಕ್ಕೆ ಮೇಲ್ಪಾದ ವಿದ್ಯಾಭ್ಯಾಸಕ್ಕೆ ಎಡೆಇಲ್ಲದೆ ಉದರ ನಿರ್ವಾಹಕ್ಕಾಗಿ ಚಿಲ್ಲರೆವ್ಯಾಪಾರ ನಡಿಸಿಕೊಂಡಿರುವಲ್ಲಿ ಇವರ ಮೈದುನ ಕೊಳಕೆರೆ ನರಸಯ್ಯ ಪ್ರಭು ಎಂಬವರು, ತನಗಿರುತ್ತಿದ್ದ ಪಿತ್ರಾರ್ಜಿತ ಆಸ್ತಿಗಳಿಗೆ ತೀರ್ಥಯಾತ್ರೆ ದಾನಧರ್ಮ ಮುಂತಾದ ಪರೋಪಕಾರ ಕೃತ್ಯಗಳಿಗೋಸ್ಕರ ಹೇರಳ ಸಾಲಮಾಡಿಟ್ಟು ಮರಣಹೊಂದಿದ ತರುವಾಯ ಅವರ ಸ್ಥಿರಚರಸೊತ್ತುಗಳ ಆಡಳಿತೆಯು ನಾಯಕರವರ ಹಸ್ತಗತವಾದೊಡನೆ, ಇವರು ಚಾತುರ್ಯದಿಂದಲೂ, ಕಾರ್ಯದಕ್ಷತೆಯಿಂದಲೂ, ಶೀಘ್ರವಾಗಿ ಸಾಲಗಳನ್ನೆಲ್ಲಾ ಪರಿಹರಿಸಿ ಮನೆವಾರ್ತೆಯನ್ನು ಈಗಿರುವ ಊರ್ಜಿತ ಸುಭಿಕ್ಷಸ್ಥಿತಿಗೆ ತಂದಿರುವರು ಹಿಂದೂಧರ್ಮಾನುಸಾರವಾಗಿ ಇವರು ಈ ಕಡೆ ಜೀರ್ಣವಾಗಿ ಹೋಗಿರುತ್ತಿದ್ದ ದೇವಾಲಯ, ದೈವಸ್ಥಾನಗಳನ್ನು ಉದ್ಧಾರಮಾಡಿಸಿ, ಬಡಪ್ರಯಾಣಸ್ಥರಿಗೆ ಇಳಕೊಳ್ಳಲಿಕ್ಕೆ ಆಸ್ಪದವಿಲ್ಲದ ಈ ಪಾಣೆಮಂಗಳೂರಲ್ಲಿ ಒಂದು ಛತ್ರವನ್ನು ಸಹಾ ಕಟ್ಟಿಸಿರುವರು.

ಸ್ವಜಾತಿ ಬಾಂಧವರು ಕೈಕೊಂಡ [illegible] ಶ್ರೀ ಭುವನೇಂದ್ರ ಸಂಸ್ಕೃತ ವಿದ್ಯಾ [illegible] ಮುಂತಾದ ಸಂಸ್ಥೆಗಳಿಗೆ ಇವರು [illegible]
~~~~~~

ಮುಂತಾದವುಗಳನ್ನು ನೋಡಿಕೊಂಡು [illegible] ಕೊಲೇಜಿನ ವಿದ್ಯಾರ್ಥಿಗಳಿಗೆ ಒಂದು ಭಾಷಣವನ್ನು ಕೊಟ್ಟರು.

ಈ ತಿಂಗಳ ತಾ. ೭ರಲ್ಲಿ ವ್ಯಾಸರಾಯ ಪ್ರಭುಗಳು ಗ್ವಾಲಿಯರ್ ಸಂಸ್ಥಾನವನ್ನು ಸಂದರ್ಶಿಸಿದರು. ಮಿ| ರಿಮ್ಸೆ ಮೆಕಡೊನಲ್ಡರವರು ಈ ಸಂದರ್ಭದಲ್ಲಿ ಗ್ವಾಲಿಯರಿನಲ್ಲಿಯೇ ಇದ್ದರು

ಸ್ವದೇಶಿ ಚಳವಳದಲ್ಲಿ ಕೈಹಾಕಿರುವುದರಿಂದ ಕಲಿಕತ್ತೆಯ 'ಸಿಟಿ ಕೊಲೇಜಿ'ನ ಪಂಡಿತರಾದ ಲಲಿತಮೋಹನದಾಸರವರು ತಮ್ಮ ಹುದ್ದೆಗೆ ರಾಜೀಕೊಟ್ಟಿರುವರಂತೆ. ರಿಪನ್ ಕೊಲೇಜಿನ ಉಪಾಧ್ಯಾಯರಾಗಿರುವ ಜಿತೇಂದ್ರಲಾಲ ಬೆನರ್ಜಿಯವರನ್ನು ಈ ಕಾರಣಕ್ಕೋಸ್ಕರ ತಮ್ಮ ಹುದ್ದೆಗೆ ರಾಜೀನಾಮೆಯನ್ನು ಯಾಕೆ ಕೊಡಕೂಡದೆಂಬದಾಗಿ ಕೇಳಿರುವರಂತೆ

ಕಲಿಕತ್ತೆಯ ಪೊಲೀಸು ಕೋರ್ಟಿನಲ್ಲಿ ಸರಕಾರಿ ಕಡೆಯ ವಕೀಲ ಮಿ| ಹ್ಯೂಮರವರ ಬಂಗಾಳಿ ಗುಮಾಸ್ತನೊಬ್ಬನು ಒಬ್ಬ ವಕೀಲರ ಮಂಡೆಗೆ ಹೊಡೆದುಬಿಟ್ಟನು. ಈ ಗುಮಾಸ್ತನು ವಕೀಲರ ಕ್ಷಮಾಪಣೆಯನ್ನು ಕೇಳಿದ್ದರಿಂದ ಗುಮಾಸ್ತನಿಗೆ ಮಾಪಿ ಬಿಟ್ಟಿರುವರಂತೆ

ಢಾಕಿಯಾ ಎಂಬಲ್ಲಿ ಪೂರ್ವ ಬಂಗಾಳ ಮತ್ತು ಅಸ್ಸಾಮಿನ ಸರಕಾರದವರು ಒಂದು ವ್ಯವಸಾಯಿಕ ಮತ್ತು ಕೈಗಾರಿಕೆಯ ವಸ್ತುಪ್ರದರ್ಶನವನ್ನು ಏರ್ಪಡಿಸುವರು. ಪ್ರದರ್ಶನದ ಬಗ್ಗೆ ಒಪ್ಪಿಗೆಗಳು ಬರುವ ಜನವರಿ ತಿಂಗಳ ೧೫ನೇ ತಾರೀಕಿನ ವರೆವಿಗೂ ಸ್ವೀಕರಿಸುವರು.

ದಕ್ಷಿಣ ಹಿಂದುಸ್ಥಾನ

ಮೈಸೂರು ದಸರಾವಸ್ತುಪ್ರದರ್ಶನವು ಮುಕ್ತಾಯ ಆಯಿತು. ೧೧ ಚಿನ್ನದ ೧೦ ಬೆಳ್ಳಿಯ ಮತ್ತು ಹಲವು ಕಂಚಿನ ಬಹುಮಾನ ಪದಕಗಳು ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿಕೊಟ್ಟವರಿಗೆ ಬಹುಮಾನವಾಗಿ ಕೊಡಲ್ಪಟ್ಟವು. ಭಾವನಗರದ ರಾಜಕುಮಾರಿ ಅಲ್ಲೀ ಬಹಗೀಂ ಸಾಹೇಬ, ಡಾಕ್ಟರ ನಂಜುಂಡರಾವ್‌ರವರ ಮನೆಯ ಮೈಥಿಲಮ್ಮ ಮೊದಲಾದವರಿಗೆ ಚಿನ್ನದ ಪದಕಗಳು ದೊರಕಿರುವವು

ಮದ್ರಾಸು ಗವರ್ನರರ ನ್ಯಾಯವಿಧಾಯಕ ಸಭೆಗೆ ಮದ್ರಾಸು ಯುನಿವರ್ಸಿಟಿಯ ಕಡೆಯಿಂದ ಬಹುಮಾನಪಟ್ಟ ಹ್ಯಾಕೋರ್ಟು ಜಡ್ಜರಾಗಿರುವ ಕೃಷ್ಣಸ್ವಾಮಿ ಅಯ್ಯರರವರು ಮೆಂಬರರಾಗಿದ್ದರು. ಇವರು ಹ್ಯಾಕೋರ್ಟು ಜಡ್ಜರಾಗಿ ಈ ಮೆಂಬರುತನಕ್ಕೆ ರಾಜೀನಾಮೆ ಕೊಟ್ಟಿರುವುದರಿಂದ ಈ ಮೆಂಬರು ತನಕ್ಕೆ ಬಹುಮಾನಪಟ್ಟ ಹ್ಯಾಕೋರ್ಟು ವಕೀಲ ಸುಂದರಯ್ಯರರವರೂ ಟಿ| ವಿ| ಶೇಷಗಿರಿ ಅಯ್ಯರರವರೂ ಕ್ರಿಶ್ಚಿಯನ್ ಕೊಲೇಜಿನ ಪಂಡಿತರಾದ ಮಿ| ಮೆಕಫೇಲರರವರೂ ಉಮೇದ್ವಾರರಾಗಿದ್ದರು. ಈ ತಿಂಗಳ ೧ನೇ ತಾರೀಕಿನಲ್ಲಿ ಸೆನೇಟು ಸಭೆ ಕೂಡಿತು. ೨೭ ಜನ ಯುರೋಪಿಯ ಫೆಲೋಗಳೂ ೩೮ ಜನ ಭಾರತೀಯ ಫೆಲೋಗಳೂ ಸಭೆಯಲ್ಲಿ ಹಾಜರಿದ್ದರು. ಸದೆಯುವರು ವೋಟ್ಸುಗಳ ಮುಖಾಂತರ ಮಿ| ಮೆಕಫೇಲರನ್ನು ಚುನಾಯಿಸಿರುವರು.

ರಾವ್ ಬಹದೂರ ವಿರೇಶಲಿಂಗಮ್ ಪಂತುಲುರವರು ತಮ್ಮ ಹಿತಕಾರಿಣಿ ವಿತಂತಾಶ್ರಮದ ಬಗ್ಗೆ ದ್ರವ್ಯಸಂಗ್ರಹವನ್ನು ಮಾಡುವರೆ ಮುಂಬಯಿ ಅತ್ತಕಡೆ ಹೋಗಿದ್ದರು. ಮುಂಬಯಿಯಲ್ಲಿ ಬಹುಮಾನಪಟ್ಟ ಹ್ಯಾಕೋರ್ಟ್ ಜಡ್ಜ್ ಚಂದಾವರಕಾರರವರ ಸಹಾಯದಿಂದ [illegible] ರೂಪಾಯಿ ೯೦೦ [illegible] ಸಾಧ್ಯವಾಯಿತು. ಮದ್ರಾ[illegible]ಸ ನ್ಯಾಯವಿಧಾಯಕ ಸಭೆಯ [illegible] ಮಾನಪಟ್ಟ ಕೆ. ವೆಂಕಟರಾಯರು [illegible] ತುಲುರವರಿಗೆ ಈ ಮೊದಲು ರೂ. ೩೦೦೦ವನ್ನು ಆ ವಿಧವಾಲಯದ ಬಗ್ಗೆ ಕೊಟ್ಟದ್ದಲ್ಲದೆ ಈ ಸಾರಿ ವಿಧವಾಲಯಕ್ಕೆ ಬೇಕಾದ ಹಣವನ್ನು ತಾನು ಕೊಡುವರೆ ಸಿದ್ಧನಾಗಿರುವೆನೆಂದು ಬಳ್ಳಾರಿಯಲ್ಲಿ ಈ ಸಂದರ್ಭದಲ್ಲಿ ಸೇರಿದ ಸಭೆಯಲ್ಲಿ ಹೇಳಿರುವರು

ಮದ್ರಾಸ್ ಹ್ಯಾಕೋರ್ಟ್ ಚೀಫ್ ಜಸ್ಟೀಸರಾದ ಬಹುಮಾನಪಟ್ಟ ಸರ್ ಅರ್ನೊಳ್ಡ್ ವ್ಹಾಯಿಟರವರು ವಿಲಾಯತಿಯಿಂದ ತಮ್ಮ ಪತ್ನಿಯರೊಂದಿಗೆ ಈ ತಿಂಗಳ ತಾ ೭ರಲ್ಲಿ ಮದ್ರಾಸಿಗೆ ಬಂದು ತಲ್ಪಿರುವರು.

ಮಸೂಲಿಪಟ್ಟದ ದಕ್ಷಿಣ ವೆಲ್ಲೂರಿನ ಜಮೀನ್‌ದಾರರ ಮನೆಯಲ್ಲಿ ಒಂದು ದೊಡ್ಡ ಕಳವು ಆಗಿರುವುದು. ಜಮೀನುದಾರರ ಪತ್ನಿಯರು ತಾನು ಮದ್ರಾಸಿನಿಂದ ಬಂದೊಡನೆಯೇ ತನ್ನ ಕಪ್ಪಿನದ ಖಜಾನೆ ಪೆಟ್ಟಿಗೆಯ ಬಾಗಿಲನ್ನು ತೆಗೆದು ನೋಡಲಾಗಿ ಅದರಲ್ಲಿ ೬೦,೦೦೦ ರೂಪಾಯಿಗಳು ಕ್ರಯ ಬಾಳುವ ರತ್ನ ಖಚಿತವಾದ ಆಭರಣಗಳು ಕಳವಾಗಿವೆ ಎಂತ ತೋರಿಬಂತು. ಕಳ್ಳರು ಯಾರೆಂಬುದು ಈ ವರಿಗೆ ಪತ್ತೆಯಾಗಲಿಲ್ಲ

ಹಿಂದುಸ್ಥಾನದ 'ಸೆಂಡೊ' ಎನ್ನಿಸಿಕೊಂಡ ಪ್ರೊಫೆಸ್ಸರ್ ರಾಮಮೂರ್ತಿಯವರು ಜಾವಾದಿಂದ ರಂಗೂನಿಗೆ ಬಂದು ತಲಪಿರುವರು. ಅಲ್ಲಿ ಕಾ ಎಂಬಲ್ಲಿ ಪರಾಕ್ರಮರಾವ್ ಸರ್ಕಸ್ ಎಂಬ ಕಂಪೆನಿಯವರೊಂದಿಗೆ ಸರ್ಕಸ್ ಆಟಗಳನ್ನು ನಡಿಸುವಾಗ ಇವರಿಗೆ ಯಾರೋ ವಿಷಹಾಕಿದರು. ವಿಷಪ್ರಯೋಗದಿಂದ ದೈವವಶಾತ್ ಉಳಿದಿರುವರಾದರೂ ಬಹಳ ಬಲಹೀನರಾಗಿರುವುದರಿಂದ ಇನ್ನು ಕೆಲವು ಸಮಯದವರೆಗೆ ತಮ್ಮ ಆಟಗಳನ್ನು ಏರ್ಪಡಿಸಲಶಕ್ತರಾಗಿರುವರಂತೆ

ಮದ್ರಾಸು ಗವರ್ನರ್ ಸರ್ ಆರ್ಥರ್ ಲೋಲಿಯವರು ಮೈಸೂರು ಸಂಸ್ಥಾನಕ್ಕೆ ದಯಮಾಡಿಸಿದ್ದರಷ್ಟೆ. ಇವರು ಮೋಟರ್ ರಥದಲ್ಲಿ ಕುಳಿತು ವೇಲೂರು ಮಾರ್ಗವಾಗಿ ಬುಧವಾರ ಮದರಾಸಿಗೆ ದಯಮಾಡಿಸಿದರು. ವೇಲೂರಿಗೆ ಹೋಗಿದ್ದ ವೇಳೆಯಲ್ಲಿ ಅಲ್ಲಿಯ ಬಂದಿಖಾನೆಯ ಸ್ಥಿತಿಯನ್ನು ಮತ್ತು ಬಂದಿಗಳಿದ್ದ ಸ್ಥಿತಿಯನ್ನು ಸಹಾ ತಿಳಿಯುವ ಬಗ್ಗೆ ಮಂಗಳವಾರ ಬೆಳಿಗ್ಗೆ ಬಂದೀಖಾನೆಗೆ ಹೋಗಲಾಗಿ ಮೂರು ವರುಷ ಕಠಿಣ ಕೈದಿಗೆ ಗುರಿಮಾಡಲ್ಪಟ್ಟು, ಆ ಪೈಕಿ ೧೫ ತಿಂಗಳನ್ನು ಕಳೆದಿದ್ದ ರಾಜದ್ರೋಹಿಯಾದ ಹರಿ ಸರ್ವೋತ್ತಮರಾವ್ ಎಂ. ಎ., ಎಂಬಾತನು ಗವರ್ನರ್ ಸಾಹೇಬರಿಗೆ ಸಲಾಮು ಮಾಡಿಕೊಂಡು ಬಿಡುಗಡೆ ಮಾಡಿಸಬೇಕೆಂದು ಪ್ರಾರ್ಥಿಸಿದನು

ಗವರ್ನರ್ ಸಾಹೇಬರು — ನಿನಗೆ ಕೊಟ್ಟಿರುವ ಶಿಕ್ಷೆಯು ಸಾಕಾದಷ್ಟಿಲ್ಲ. ಅದರ ಗೋಜಿಗೆ ಹೋಗಲಿಕ್ಕೆ ಕಾರಣವೇನನ್ನೂ ಕಾಣೆ. ನಿನ್ನ ಮೊಕದ್ದಮೆಯು ಹೈಕೋರ್ಟಿನಲ್ಲಿ ಸಂಪೂರ್ಣವಾಗಿ ವಿಮರ್ಶಿಸಲ್ಪಟ್ಟಿತು. ನಿನ್ನಂತಹ ವಿದ್ಯಾವಂತರು ನೀನು ಕೈಹಾಕಿದ್ದ ಕೆಲಸದಲ್ಲಿ ಪ್ರವರ್ತಿಸಿದರೆ ಅದರ ಪರ್ಯವಸಾನವೇನೆಂಬದನ್ನು ಯೋಚಿಸಬೇಕು. ಜನಸಮುದಾಯದ ವಿಷಯದಲ್ಲಿ ನಮ್ಮ ಮೇಲಿನ ಕರ್ತವ್ಯಗಳು ಕೆಲವುಂಟು. ನೀನು ಯಾವ ಅಪರಾಧವನ್ನು ಮಾಡಿದಿಯೆಂದು ರುಜುವಾತು ಬಂತೋ ಅಂತಹ ಅಪರಾಧವನ್ನು ನಾವು ನಿರ್ಮೂಲ ಮಾಡಬೇಕು.

ಕೈದಿಯು, ತನ್ನ ವಿಷಯದಲ್ಲಿ ನ್ಯಾಯವು ವಕ್ರಮಾರ್ಗವನ್ನು ಹಿಡಿದಂತೆ ಗವರ್ನರ್ ಸಾಹೇಬರಿಗೆ ತಿಳಿಸಿದನು.

ಗವರ್ನರ್ ಸಾಹೇಬರು.—ನ್ಯಾಯವು ವಕ್ರಮಾರ್ಗವನ್ನು ಹಿಡಿದಿರುವದು [illegible]

ಕೈದಿ.—[illegible] ನ್ಯಾಯ ಮಾಡಿರುವರು.

ಗವರ್ನರ್ ಸಾಹೇಬರು.—ಹೈಕೋರ್ಟಿನವರು ಬರಿ ಸಂಶಯದಿಂದ ನಿನ್ನನ್ನು ಅಪರಾಧಿಯೆಂದು ತೀರ್ಪು ಕೊಟ್ಟಿ ಮಾಡಿರುವ ಹಾಗೆ ನಿಜವಾಗಿ ಹೇಳುವೆಯಾ? ರುಜುವಾತು ಸ್ಪಷ್ಟವಾಗಿರುವುದಲ್ಲಾ!

ಕೈದಿ.—ಖಾವಂದರು ನನ್ನ ಮೊಕದ್ದಮೆಯನ್ನು ಪರಾಮರಿಸಬೇಕು

ಗವರ್ನರ್ ಸಾಹೇಬರು—ನಿನ್ನ ಮೊಕದ್ದಮೆಯು ಹೈಕೋರ್ಟು ಡಿವಿಜನಲ್ ಬೆಂಚಿನಿಂದ ವಿಮರ್ಶಿಸಲ್ಪಟ್ಟಿತು. ನಿನಗೆ ಆಗಿರುವ ಶಿಕ್ಷೆಯು ಹೆಚ್ಚಿನದಲ್ಲವೆಂದು ನನಗೆ ತೋರುವುದು. ಅನುಮಾನದಿಂದ ನಿನ್ನ ಮೇಲೆ ಅಪರಾಧವು ಹೊರಿಸಲ್ಪಟ್ಟಿತೆಂತೆ ನನಗೆ ಹೇಳುವದು ಕೇವಲ ಅಸಂಬದ್ಧ. ನಿನಗಿರುವ ಹಕ್ಕೇನೆಂದರೆ—ಕ್ಷಮಾಪಣೆಯನ್ನು ಬೇಡುವದು. ನಿನ್ನ ಹೆಂಡತಿಯು ಬರೆದುಕೊಂಡಿರುವ ಅರ್ಜಿಯು ನಮ್ಮ ಆಲೋಚನೆಯಲ್ಲಿರುವುದು. ಆದರೆ ಹೈಕೋರ್ಟಿನ ತೀರ್ಮಾನಕ್ಕೆ ಅಡ್ಡವಾಗಿ ಗವರ್ನಮೆಂಟಿನವರು ಹೋಗುವರೆಂದು ನಿನಗೆ ಆಸೆಯನ್ನು ಕೊಡಲಾರೆ

ಕೈದಿ —ಖಾವಂದರು ಕ್ಷಮಿಸಬಹುದಷ್ಟೆ.

ಗವರ್ನರ್ ಸಾಹೇಬರು —ನಾನು ಆಸೆಯನ್ನಾಗಲಿ ಮಾತನ್ನಾಗಲಿ ಕೊಡಲಾರೆ. ನಿನ್ನ ಪೂರ್ವಚರಿತ್ರೆಯು ಒಳ್ಳೇದಲ್ಲ. ಹೈಕೋರ್ಟಿನವರು ನಿನಗಾಗಿದ್ದ ಆರು ತಿಂಗಳ ಶಿಕ್ಷೆಯನ್ನು ಮೂರು ವರ್ಷಕ್ಕೆ ಹೆಚ್ಚಿಸಿರುವರು. ಬ್ರಿಟಿಷರ ಆಳ್ವಿಕೆಗೆ ಪ್ರತಿಕೂಲವಾಗಿ ಅಸಮಾಧಾನವನ್ನುಂಟು ಮಾಡುವದು ಎಲ್ಲಾ ಅಪರಾಧಗಳಿಗಿಂತಲೂ ದೊಡ್ಡದು. ದೇಶದಲ್ಲಿ ನಾವು ನ್ಯಾಯವನ್ನು ಕಾಪಾಡಬೇಕು, ನಿನ್ನಂತವರ ಪಿತೂರಿಯಿಂದ ಜನಸಮುದಾಯವನ್ನು ರಕ್ಷಿಸಬೇಕು.

ಕೈದಿ —ಅಂತಹ ದುರಭಿಪ್ರಾಯಗಳಾವವೂ ನನಗಿರಲಿಲ್ಲವೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಗವರ್ನರ್ ಸಾಹೇಬರು—ನಿನ್ನ ವಿದ್ಯವೂ ನಿನ್ನ ಜ್ಞಾನವೂ ಇರುವ ಮನುಷ್ಯನು ಆ ಕೆಲಸಕ್ಕೆ ಕೈ ಹಾಕಿದರೆ ಆ ಅಭಿಪ್ರಾಯವಿಲ್ಲದೆ ಆಗುವದೇ ಇಲ್ಲ. ನಿನ್ನ ಕಾರ್ಯದ ಪರ್ಯವಸಾನವೇನೆಂಬದು ನಿನಗೆ ತಿಳಿದಿರಬೇಕು. ನಿನ್ನ ಅರ್ಜಿಯು ಉತ್ತರೋತ್ತರ ವಿಮರ್ಶೆ ಮಾಡಲ್ಪಡುವದು. ಆದರೆ ನಾನು ಆಶೆಯನ್ನು ಕೊಡಲಾರೆ. ಈ ವಿಷಯದಲ್ಲಿ ನನ್ನ ಕರುಣೆಗೆ ಅವಕಾಶವಿಲ್ಲ. ಜನಸಮುದಾಯಕ್ಕೆ ನಮ್ಮ ಕರ್ತವ್ಯವೇನೆಂಬುದನ್ನು ಯೋಚಿಸಬೇಕಾಗಿರುವದು. ಹ್ಯಾಕೋರ್ಟಿನ ತೀರ್ಮಾನವನ್ನು ಒದಲಾಯಿಸುವದಕ್ಕೆ ಕಾರಣವಿಲ್ಲವೆಂಬದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಸರಕಾರಕ್ಕೆ ವಿರೋಧವಾದ ದೊಡ್ಡ ಅಪರಾಧವನ್ನು ಮಾಡಿರುವೆ. ನಿನ್ನ ನಡತೆಯನ್ನು ನಾವು ಹೇಗೆ ಎಣಿಸುತ್ತಿದ್ದೇವೆಂಬದನ್ನು ನೀನು ತಿಳಿದುಕೊಳ್ಳುವದು ಒಳ್ಳೆಯದು. — ವೀರಕೇಸರಿ.

ಮೊಲಗೇಣಿ ಭೂಮಿಯ ಮೇಲೆ ಸೆಟ್ಲಮೆಂಟಿನಲ್ಲಿ ಏರಿದ ತೀರ್ವೆ ವಿಷಯದಲ್ಲಿ ನಾವು ಈ ಮೊದಲು ಮೂರು ಸಾರಿ ನಮ್ಮ ಪತ್ರದಲ್ಲಿ ಪ್ರಕಟಿಸಿದ್ದೆವು. ಮದ್ರಾಸು ಹ್ಯಾಕೋರ್ಟಿನಲ್ಲಿ ೨ ಜಡ್ಜರು ಕೂತುಕೊಂಡು ತೀರ್ಮಾನ ಮಾಡಿದ ೨ ನಂಬ್ರಗಳಲ್ಲಿ ವ್ಯತಿರಿಕ್ತ ತೀರ್ಪು ಕೊಡಲ್ಪಟ್ಟದ್ದಾಗಿತ್ತಷ್ಟೆ. ಒಂದರಲ್ಲಿ ಮೂಲಗೇಣಿ ಧನಿ ಕೊಡಬೇಕೆಂತಲೂ ಇನ್ನೊಂದರಲ್ಲಿ ಮೂಲಗೇಣಿ ಒಕ್ಕಲು ಕೊಡಬೇಕೆಂತಲೂ ತೀರ್ಮಾನವಾಗಿತ್ತು. ಈ ಪ್ರಕಾರ ಬಂದ ಕಕ್ಷಿಂದು ವಿರೋಧವಾದ ತೀರ್ಪುಗಳು ಹ್ಯಾಕೋರ್ಟಿನಲ್ಲಿಯೇ ಆಗಿರುವಾಗ್ಯೆ [illegible] ನೊಂದು [illegible]

[illegible] ವ್ಯಾಜ್ಯದಲ್ಲಿ [illegible] ತೀರ್ಮಾನಿಸಲಿಕ್ಕಾಗಿ ಅವರ ಮುಂದೆ [illegible] [illegible] ವರ್ತಮಾನ ನಮಗೆ ಸಿಕ್ಕಿಯದೆ. ಫುಲ್‌ಬೆಂಚಿನಲ್ಲಿ ಹ್ಯಾಗೆ ತೀರ್ಮಾನಗಿಯದೆಂಬದನ್ನು ತೀರ್ಮಾನವಾದ ಕೂಡಲೆ ನಮ್ಮ ಪತ್ರದಲ್ಲಿ ಪ್ರಕಟಿಸುವೆವು. ಈ [illegible]ವನ್ನು ಫುಲ್‌ಬೆಂಚಿಗೆ ಇಟ್ಟದ್ದು ಎಲ್ಲ ವರಿಗೆ ಪ್ರಯೋಜನಕರವಾದ್ದು ಎಂತ ನಾವು ಅಭಿಪ್ರಾಯಪಡುತ್ತೇವೆ. ಈ ಫುಲ್ ಬೆಂಚ್ ತೀರ್ಮಾನದ ಮೇಲೆ ಸದರಿ ಏರಿದ ತೀರ್ವೆಗಳ ಕುರಿತು ಈಗ ಇರುವ ವ್ಯಾಜ್ಯಗಳು ವ ಮುಂದೆ ಆಗಲಿಕ್ಕೆ ಇರಬಹುದಾದ ವ್ಯಾಜ್ಯಗಳು ಹೊಂದಿರುವವು

~~~~~~

ದಕ್ಷಿಣ ಕನ್ನಡ.

~~~~~~

ಮಂಗಳೂರು. ಕಳದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ಎರಡು ಪ್ಲೇಗು ಮರಣಗಳಿದ್ದವು ಹೋದ ಅಕ್ಟೋಬರ ತಿಂಗಳಲ್ಲಿ ಪ್ಲೇಗಿನಿಂದ ಸತ್ತವರ ಸಂಖ್ಯೆಯು ೨೦, ಗತ ವರುಷ ಇದೇ ತಿಂಗಳಲ್ಲಿ [illegible] ಆಗಿತ್ತು.

ಕಳದ ಅಕ್ಟೋಬರ ತಿಂಗಳಲ್ಲಿ ೧೭೨(೯೩ ಗಂಡು, ೭೯ ಹೆಣ್ಣು) ಜನನಗಳೂ, ೧೧೧(೬೨ ಗಂಡು ೪೯ ಹೆಣ್ಣು) ಮರಣಗಳಾದವು ಕಳದ ವರುಷ ಇದೇ ತಿಂಗಳಲ್ಲಿ ಈ ಸಂಖ್ಯೆಗಳು ೧೫೪(೭೪ ಗಂಡು, ೮೦ ಹೆಣ್ಣು) ೧೧೮ (೬೧ ಗಂಡು, ೫೭ ಹೆಣ್ಣು) ಆಗಿದ್ದವು.

ಮದ್ರಾಸು ಎಕೌಂಟಾಂಟ್ ಜನರಲ್‌ರ ಹೆಡ್ ಆಫೀಸಿನಿಂದ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾಗಿರುವ ರಾ। ಗೋಪಾಲಯ್ಯರವರು, ಮುನಿಸಿಪಲ್, ಲೋಕಲ್‌ಫಂಡ್ ಮುಂತಾದವುಗಳ ಲೆಕ್ಕಾಚಾರವನ್ನು ತನಿಖೆಮಾಡುವ ಬಗ್ಗೆ ಇದೇ ತಿಂಗಳ ತಾ ೨೦ಕ್ಕೆ ಬರುವದಾಗಿ ವದಂತಿ ಇದೆ

~~~~~~

ಕಾಸರಗೋಡು ನಮ್ಮ ತಾಲೂಕು ತಹಶೀಲ್ದಾರ ಮೆ. ಯನ್ ಪಿ ಫೆರ್ನಾಂದೀಸರವರಿಗೆ ಉಡುಪಿ ತಾಲೂಕಿಗೆ ವರ್ಗವಾಗುವದಾಗಿಯೂ ಇವರ ಬದಲಿಗೆ ಇಲ್ಲಿ ಮ ರಾ ಎಕ್ಕಾರ ರಾಮಕೃಷ್ಣಯ್ಯರವರು ಬರುತ್ತಾರಾಗಿಯೂ ವರ್ತಮಾನ ಇರುವುದು

ಇಲ್ಲಿಯ ರೈಲ್ವೆಸ್ಟೇಶನ್ ಪ್ಲಾಟ್‌ಫೋರ್ಮಿನಲ್ಲಿ ಹೋಗುವ ಪ್ರಯಾಣಿಕರಲ್ಲದವರಿಗೆ ೧ ಆಣೆ ಟಿಕೇಟು ಪದ್ಧತಿ ಇದೇ ತಿಂಗಳ ತಾ ೧೫ನೇಯಿಂದ ಜಾರಿಯಾಗುತ್ತದಂತೆ

ನಮ್ಮ ತಾಲೂಕಿನ ದಕ್ಷಿಣಾಂತ್ಯದಲ್ಲಿರುವ ತಾಯಕ್ಕಾಟ ತಿಮ್ಮಂಬುಗಳೆಂಬ ಪ್ರಖ್ಯಾತಿ ವ ಶ್ರೀಮಂತ ಗೃಹಸ್ಥರ ಮೇಲೆ ಕಣ್ಣಾನೂರು ಸಾಹುಕಾರ ತಮಿಳು ಬ್ರಾಹ್ಮಣರೊಬ್ಬರು ರೂಪಾಯಿ ೧೮೦ಂಕ್ಕೆ ಡಿಕ್ರಿ ಪಡದು ೨ ಆನೆಗಳನ್ನು ಜಪ್ತಿಮಾಡಿ ಮೊನ್ನೆ ಈ ಕೋರ್ಟು ಮುಂದೆ ಹಾಜರು ಮಾಡಿದ್ದರು. ಈ ಆನೆಗಳನ್ನು ನೋಡಲಿಕ್ಕೆ ಸಾವಿರಾರು ಆ ಬಾಲವೃದ್ಧರೂ ಬಂದಿದ್ದರು ಆನೆಗಳನ್ನು ಏಲಂ ಮಾಡದೆ ಡಿಕ್ರಿ ಸಮಾಧಾನದ ಬಗ್ಗೆ ತಿಮ್ಮಂಬುಗಳ ಕಡೆಯವರು ಜಾಮೀನು ಕೊಟ್ಟು ಆನೆಗಳನ್ನು ಬಿಡಿಸಿ ಕೊಂಡುಹೋದರು

~~~~~~

ಪುತ್ತೂರು. ಇದೇ ತಿಂಗಳ ತಾ ೩ಲ್ಲು ಗವರ್ನ್‌ಮೆಂಟ್ ಹುಡುಗಿಯರ ಶಾಲೆಯ ಪರೀಕ್ಷೆ ಬಗ್ಯೆ ಇನ್ಸ್‌ಪೆಕ್ಟ್ರೆಸ್ ಮಿಸ್ಸ್ ಪೆಟ್‌ಸನ್‌ರವರು ಇಲ್ಲಿಗೆ ತಲ್ಪಿ ಶಾಲೆಯ ಪರೀಕ್ಷೆ ತೀರಿಸಿ ಹೋಗಿರುವರು.

ಆರ್ಯಾಪ್ಪು ಗ್ರಾಮದ ಪೇಟೆ ಬಾಗಲ ಎಂಬಲ್ಲಿ ಒಬ್ಬ [illegible] ಮನೆಯಿಂದ ಒಂದು ನಾಯಿಯನ್ನು ಎತ್ತಿಕೊಂಡು [illegible] ಬಗ್ಗೆ [illegible] ಹೋದಲ್ಲಿ ಹುಲಿಯು [illegible] ಹೋಗುವಾಗ [illegible] [illegible] ಸಿಕ್ಕಿರುವವು. ಅವನ್ನು ನಮ್ಮ ಇಲ್ಲಿ [illegible] ಯ ಮುನ್ಸಿಫ್ [illegible] ನಾರಾಯಣಯ್ಯನವರಲ್ಲಿ [illegible] ಇಲ್ಲು ಹಾದು ಸಾಕುತ್ತಿರುವರು.

~~~~~~

ಮುಲ್ಕಿ ನಮ್ಮ ಬಾಲ್ಯದಾರಭ್ಯ ಎಲ್ಲಾ ಮಿಶ್ಯನ್ ಬಂಗ್ಲೆಗಳಲ್ಲಿ ದಿನವಹಿ ಅಹೋರಾತ್ರಿ ಎಂಬಂತೆ ಪುಸ್ತಕ ಮಾರಾಟ ಮಾಡುತ್ತಿದ್ದರಲ್ಲದೆ ಈಗಲೂ ಎಲ್ಲಾ ಕಡೆಗಳಲ್ಲಿ ಆದಿತ್ಯವಾರ ವಿನಹಾ ಇತರ ದಿವಸಗಳಲ್ಲಿ ಪುಸ್ತಕ ಮಾರಾಟ ಮಾಡುತ್ತಿರುವರು. ಆದರೆ ನಮ್ಮ ಮುಲ್ಕಿ ಬಂಗ್ಲೆಯಲ್ಲಿ ಮಂಗಳವಾರ ಮತ್ತು ಶನಿವಾರ ಎರಡು ದಿವಸ ಮಾತ್ರ ಬೆಳಿಗ್ಯೆ ಪುಸ್ತಕಗಳನ್ನು ಮಾರುತ್ತಿರುವರಲ್ಲದೆ, ಬೇರೆ ದಿವಸಗಳಲ್ಲಿ ಎಷ್ಟು ದೂರದಿಂದಬಂದರೂ ಹಿಂದೆರಳಬೇಕೇ ಹೊರತು ಪುಸ್ತಕಗಳು ಸಿಕ್ಕಲಾರವಂತೆ ಇದು ನಿಜವಾದ್ದಲ್ಲಿ ಗಿರಾಕಿಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಿರುವದರಿಂದ ಮೇಲಾಫೀಸರರು ಇದನ್ನು ಚಿತ್ತಕ್ಕೆ ತಂದುಕೊಂಡರೆ ತಮಗೆ ಲಾಭವೂ ಇತರರಿಗೆ ಅನುಕೂಲತೆಯೂ ಸಿಕ್ಕುವದೆಂಬದಕ್ಕೆ ಸಂಶಯವಿಲ್ಲ

ಇಲ್ಲಿಯ ಪಂಚಮರು ಒಟ್ಟು ಕೂಡಿ ತಮ್ಮ ಅಭಿವೃದ್ಧಿಗೋಸ್ಕರ ಒಂದು ಪ್ರಾರ್ಥಮಿಕ ಶಾಲೆಯನ್ನು ಸ್ಥಾಪಿಸಬೇಕೆಂಬದಾಗಿ ಜಿಲ್ಲಾ ಕಲೆಕ್ಟರರವರಿಗೆ ಅರ್ಜಿ ಮಾಡಿರುತ್ತಾರಂತೆ ಧೊರೆಗಳಿಗೆ ಅರ್ಜಿ ಮಾತ್ರ ಮಾಡಿಸಿದರೆ ಸಾಲದು ಪೇಟೆಯ ಮುಂದಾಳುಗಳು, ರಾ ಕುದ್ಮೂಲ ರಂಗರಾಯರು ಈ ವಿಷಯದಲ್ಲಿ ಸಾಹಸಪಡುವಂತೆ ಪ್ರಯತ್ನ ಪಡಬೇಕು. ಆಗ ಗವರ್ನಮೆಂಟಿನವರು ನಮ್ಮ ಬೆಂಬಲಕ್ಕೆ ಬರುವರು

ತೆಂಗಿನಕಾಯಿಯ ಬೀಜ ಹಾಕುವಾಗ ಗುಣಿ ತೆಗೆದು ತೆಂಗಿನಕಾಯಿಯನ್ನು ನೆಟ್ಟಗೆ ಇಡುವದರ ಬದಲಿಗೆ ಅಡ್ಡವಾಗಿ ಇಟ್ಟರೆ ಸೊಂಪಾದ ಮೊಳಕೆಯು ಹೊರಡುವದೆಂದು ಒಬ್ಬ ಗೃಹಸ್ಥರು ಅನುಭವದಿಂದ ಹೇಳುವರು

ತಾರೀಕು ೪ರಲ್ಲು ಜಿಲ್ಲಾ ರಿಜಿಸ್ಟ್ರಾರರು ಇಲ್ಲಿಗೆ ಚಿತ್ತೈಸಿ ೪ ೬ನೇ ತಾರೀಕುಗಳಲ್ಲಿ ಇಲ್ಲಿಯ ಸಬ್ ರಿಜಿಸ್ಟ್ರಿ ಆಫೀಸನ್ನು ಸಂದರ್ಶನೆ ಮಾಡಿ ಸಂತೋಷ ಪಟ್ಟಿರುವರಂತೆ

ಮಂಗಳೂರಿಗೆ ಹಿಂದೆ ಕರೆಯಲ್ಪಟ್ಟ ನಮ್ಮ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾ ಬಿ ರಾಮರಾಯರವರು ಇಲ್ಲಿಗೆ ಪುನಃ ಒಂದು ತಾರೀಕು ೫ರಲ್ಲು ಚಾರ್ಜು ವಹಿಸಿಕೊಂಡಿರುವದು ಸಂತೋಷಕರವೇ ಸೈ

~~~~~~

ಉಡುಪಿ ಕೆಲವು ತಿಂಗಳು ರಜೆಯ ಮೇಲೆ ಇಲ್ಲವೆ ಬೇರೆ ಕಡೆಯಲ್ಲಿ ಬದಲಿ ಕೆಲಸದ ಮೇಲೆ ಹೋಗಿದ್ದ ನಮ್ಮ ಪೋಸ್ಟು ಮಾಸ್ಟರವರು ತಿರಿಗಿ ಇಲ್ಲಿಗೆ ಒಂದು ಈ ತಾ ೫ಲ್ಲು ಚಾರ್ಜು ತೆಗದುಕೊಂಡಿರುವರು ಇವರು ಒಳ್ಳೇ ಚಟುವಟಿಕೆಯಿಂದ ಕೆಲಸವನ್ನು ಮಾಡುವವರೂ ಸುಗುಣಿಗಳೂ ಆಗಿರುವದರಿಂದ ಇವರ ಆಗಮನವನ್ನು ಬಹು ಜನರು ಹಾರೈಸುತ್ತಿದ್ದರು

ಕಾರ್ಕಳ ಮೇಜಿಸ್ಟ್ರೇಟರು ಒಂದು ಹಪ್ತೆ ರಜೆಪಡಕೊಂಡದುದರಿಂದ ಅವರ ಚಾರ್ಜನ್ನು ಇಲ್ಲಿಯ ಮೇಜಿಸ್ಟ್ರೇಟರು ತೆಗದುಕೊಂಡಿರುವರು

ಹೆಡ್ ಅಸಿಸ್ಟಾಂಟ್ ಕಲೆಕ್ಟರ್ ದೊರೆಗಳವರು ಕಳೆದ ವಾರದಲ್ಲಿ ಸರ್ಕೀಟಿನ ಮೇಲೆ ಇಲ್ಲಿಗೆ ದಯಮಾಡಿರುವರು.

ಇಲ್ಲಿ ಶಾಲೆಗಳಿಗೆ ಹೋಗುವ ಹಿಂದು ಬಾಲಕರಿಗೆ ತಮ್ಮ ಮತದ ವಿಷಯದಲ್ಲಿಯೂ ಧರ್ಮಗಳ ವಿಷಯದಲ್ಲಿಯೂ ಬೋಧನೆಗಳನ್ನು ಕೊಡಬೇಕೆಂಬ ನಮ್ಮ ಮಾನ್ಯರಿ। ಮುನ್ಸೀಫರಾದ ಮ। ರಾ। ದೇವರಾಯರವರ ಸೂಚನೆಯ ಪ್ರಕಾರ ಪ್ರತಿ ಭಾನುವಾರ ಸಂಜೆಗೆ ಕ್ಲಬ್ಬಿನಲ್ಲಿ ಉಪನ್ಯಾಸಗಳು ನಡೆಯುವ ವ್ಯವಸ್ಥೆಯಾಗಿರುವದು. ಅದರಂತೆ ಕಳೆದ ಭಾನುವಾರ ದಿವಸ [illegible] [illegible] ಯನ್ನು [illegible] [illegible]ರವರು ಸಕ್ಕದ ಮತ್ತು ಪರೋಪಕಾರದ ವಿಷಯವಾಗಿ ಒಳ್ಳೇ ಒಂದು ಉಪನ್ಯಾಸವನ್ನು ಮಾಡಿದರು. ನೂರಾರು ಮಂದಿ ವಿದ್ಯಾರ್ಥಿಗಳೂ ಬಹುಮಂದಿ ಇತರ ಗೃಹಸ್ಥರೂ ನೆರದಿದ್ದರು. ಇವರ ವ್ಯಾಖ್ಯರಣೆಯು ಸರ್ವೋತ್ಕೃಷ್ಟವಾಗಿರುವದಾಗಿ ಅನೇಕರು ಅಭಿಪ್ರಾಯಪಟ್ಟರು.

ಇಲ್ಲಿಯ ಜಾತ್ರೆಗಳ ಸಮಯದಲ್ಲಿ ಪರಸ್ಥಳಗಳಿಂದ ಸಾವಿರಾರು ಜನರು ಬರುತ್ತಿರುವರಷ್ಟೆ. ಪ್ಲೇಗು ರಹದಾರಿಗಳ ಸಮ್ಮಂಧ ಇವರನ್ನು ಸಂದರ್ಶಿಸುವಾಗ್ಯೆ ಗಲಾಟೆಗಳಾಗಿ ಪೋಲೀಸಿನವರ ಸಹಾಯವನ್ನು ಕೂಡ ಅಪೇಕ್ಷಿಸುವದುಂಟು ಇಲ್ಲಿಯ ಜಾತ್ರೆಗಳ ಕಾಲದಲ್ಲಿ ಪ್ರತ್ಯೇಕ ಒಬ್ಬ ಅಪೀಸರನನ್ನು ನಿಯಮಿಸಿ ಪ್ಲೇಗು ರಹದಾರಿಗಳನ್ನು ಮರವೀದಿಯಲ್ಲಿಯೇ ಒಂದು ಕಡೆ ತನಖಿ ಮಾಡುವಂತೆ ಏರ್ಪಡಿಸಿದರೆ ಯಾತ್ರಿಕರಿಗೆ ಹೆಚ್ಚಿನ ಅನುಕೂಲವಾಗುವದು ಆ ಕಾಲದಲ್ಲಿ ರೋಗಾದಿಗಳು ಹೆಚ್ಚಾಗಿರುವದರಿಂದ ಡಾಕ್ಟರರವರಿಗೂ ತೊಂದರೆ ಕಡಿಮೆಯಾಗುತ್ತಿತ್ತು. ಈಗ ಸಮೀಪಿಸಿರುವ ಪರ್ಯಾಯ ಜಾತ್ರೆ ಕಾಲದಲ್ಲಿ ಈ ಏರ್ಪಾಡನ್ನು ಮಾಡಿಸುವಂತೆ ಕಲೆಕ್ಟರ್ ದೊರೆಗಳವರು ವ್ಯವಸ್ಥೆ ಮಾಡಿಸಿದರೆ ಸರ್ವರಿಗೂ ತುಂಬಾ ಅನುಕೂಲವಾಗುತ್ತಿತ್ತು

ಬ್ರಹ್ಮಾವರ ರಿಜಿಸ್ಟ್ರಿ ಆಪೀಸಿನಲ್ಲಿ ನಡೆಯುವ ಫೋರ್ಜರಿ ಸಂಬಂಧದಲ್ಲಿ ಮದ್ದೈಯಾಲೇರನ್ನು ಇಲ್ಲಿಯ ಮೇಜಿಸ್ಟ್ರೇಟರು ಸಶ್ಯನಿಗೆ ಕಮ್ಮಿಟ್ ಮಾಡಿರುವರು

ತಮ್ಮ ಶಿಷ್ಯರ ಪೈಕಿ ಬಂಡಾರಿಕೇರಿ ಮಠದ ಶ್ರೀ ರಾಮಚಂದ್ರ ದೇವರಿಗೆ ಪೂಜಾದಿಗಳನ್ನು ಯಾರು ನಡಿಸಿಕೊಂಡು ಬರುವದೆಂಬದರ ವಿಷಯದಲ್ಲಿ ತಮ್ಮ ಗುರುಗಳಾದ ಶ್ರೀ ಮಧ್ವಾಚಾರ್ಯರ ಶಾಸನದ ಇತ್ಯರ್ಥದ ಕುರಿತು ಉಡುಪಿ ಪರ್ಯಾಯ ಮಠದವರೂ ಭೀಮನ ಕಟ್ಟೆ ಮಠದವರೂ ಮೆ। ಅನಂತನ್ ನಾಯರ್ (ಮಂಗಳೂರು ಸಬ್ ಜಡ್ಜರು) ಆವರ್ಗಳವರ ಅಭಿಪ್ರಾಯವನ್ನು ಕಾಂಕ್ಷಿಸುತ್ತಿರುವರು. ಈ ತಾ ೧೬ಕ್ಕೆ ಈ ವ್ಯಾಜ್ಯವನ್ನು ಹಿಯರಿಂಗಿಗೆ ನಿಶ್ಚೈಸಿರುವರಂತೆ ಇವರಲ್ಲದೆ ಬೇರೆ ಮೆ। ಶಂಕರನ್ ನಾಯರ್ (ಹ್ಯಾಕೋರ್ಟು ಜಡ್ಜರು) ಆವರ್ಗಳವರ ಅಭಿಪ್ರಾಯ ಸಿಕ್ಕಬೇಕೆಂತ ಅವರನ್ನು ಕೂಡ ಕೇಳಿಕೊಳ್ಳಬೇಕಾದಿ ನಿಶ್ಚೈಸಿರುವರಂತೆ

~~~~~~

ಪಾಣೆಮಂಗಳೂರು. ಇಲ್ಲಿಯ ಸುಪ್ರಸಿದ್ಧ ವರ್ಗದಾರರೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರೂ ಆಗಿದ್ದ ಮ. ರಾ ರಾ ಕೊಳಕೆರೆ ರಾಮನ್ನಾಕರವರು ಇದೇ ಕಳದ ತಾ ೫ನೇ ಶುಕ್ರವಾರ ದಿನ ಕಾಲವಾದರೆಂಬದನ್ನು ತಿಳಿಸುವರೆ ವಿಷಾದಿಸುತ್ತೇನೆ ಇವರು ೧೮೫೫ನೇ ಇಸವಿಯಲ್ಲಿ ಬಂಟವಾಳದಲ್ಲಿಯ ಮರ್ಯಾದಸ್ತ ಕುಟುಂಬದಲ್ಲಿ ಹುಟ್ಟಿ, ಬಡತನದ ದೆಸೆಯಿಂದ ಓದುಬರಹಕ್ಕೆ ಮೇಲಾದ ವಿದ್ಯಾಭ್ಯಾಸಕ್ಕೆ ಎಡೆಇಲದೆ ಉದರ ನಿರ್ವಾಹಕ್ಕಾಗಿ ಬೆಲ್ಲರೆವ್ಯಾಪಾರ ನಡಿಸಿಕೊಂಡಿರುವಲ್ಲಿ ಇವರ ಮೈದುನ ಕೊಳಕೆರೆ ನರಸಯ್ಯ ಪ್ರಭು ಎಂಬವರು, ತನಗಿರುತ್ತಿದ್ದ ಪಿತ್ರಾರ್ಜಿತ ಆಸ್ತಿಗಳಿಗೆ ತೀರ್ಥಯಾತ್ರೆ ದಾನಧರ್ಮ ಮುಂತಾದ ಪರೋಪಕಾರ ಕೃತ್ಯಗಳಿಗೋಸ್ಕರ ಹೇರಳ ಸಾಲಮಾಡಿಟ್ಟು ಮರಣಪಟ್ಟ ತರುವಾಯ ಅವರ ಸ್ಥಿರಚರಸೊತ್ತುಗಳ ಆಡಳಿತೆಯು ನಾಯಕರವರ ಹಸ್ತಗತವಾದೊಡನೆ, ಇವರು ಚಾತುರ್ಯದಿಂದಲೂ, ಕಾರ್ಯದಕ್ಷತೆಯಿಂದಲೂ, ಶೀಘ್ರವಾಗಿ ಸಾಲಗಳನ್ನೆಲ್ಲಾ ಪರಿಹರಿಸಿ ಮನೆವಾರ್ತೆಯನ್ನು ಈಗಿರುವ ಊರ್ಜಿತ ಸುಭಿಕ್ಷಸ್ಥಿತಿಗೆ ತಂದಿರುವರು. ಹಿಂದೂಧರ್ಮಾನುಸಾರವಾಗಿ ಇವರು ಈ ಕಡೆ ಜೀರ್ಣವಾಗಿ ಹೋಗಿರುತ್ತಿದ್ದ ದೇವಾಲಯ, ದೈವಸ್ಥಾನಗಳನ್ನು ಉದ್ಧಾರಮಾಡಿಸಿ, ಬಡಪ್ರಯಾಣಸ್ಥರಿಗೆ ಇಳಿಕೊಳ್ಳಲಿಕ್ಕೆ ಆಸ್ಪದವಿಲ್ಲದ ಈ ಪಾಣೆಮಂಗಳೂರಲ್ಲಿ ಒಂದು ಛತ್ರವನ್ನು ಸಹಾ ಕಟ್ಟಿಸಿರುವರು.

ಸ್ವಜಾತಿ ಬಾಂಧವರು [illegible] (ಭುವನೇಂದ್ರ [illegible]) ಮುಂತಾದ [illegible] [illegible]
~~~~~~

ಮಂಗಳೂರಿನಲ್ಲಿ ನಡೆದ ಗೌಡಸಾರಸ್ವತ ಬ್ರಾಹ್ಮಣ ಪರಿಷದಗೋಗೆ ತನುಮನಧನಗಳಿಂದಲೂ ಸಹಾಯ ಮಾಡಿರುತ್ತಾರೆ. ಸಮ್ಮಲ್ಲಿಯ ಚಿಕ್ಕದೊಡ್ಡ ಧರ್ಮಕೃತ್ಯಗಳಲ್ಲೆಲ್ಲಾ ಇವರು ಮುಂದಾಳಾಗಿರುತ್ತಿದ್ದರು.

ಇತ್ತಲಾಗೆ ಬಂಟವಾಳದಲ್ಲಿ ಇವರು ಜೀರ್ಣೋದ್ಧಾರ ಮಾಡಿಸಿದ ಮುಕಾಂಬಿಕಾ ದೇವಾಲಯದಲ್ಲಿ ಕಳದ ಮಹಾನವಮಿ ಪೂಜೆಗೆ ಹೋದಾಗ ಕಾಲಿನ ಬೆರಳು ಎಡವಿ ಉಂಟಾದ ಘಾಯವು ಪ್ರಥಮತಃ ಸಣ್ಣದಾಗಿ ತೋರಿದಾಗ್ಯೂ ಬಹುಮೂತ್ರವ್ಯಾಧಿತರಾದ್ದರಿಂದ ಕ್ರಮೇಣ ಅದರಿಂದ ಇಡೀ ಕಾಲಿಗೆ ನೋವಾಗಿ ಅದರಿಂದಲೇ ಮರಣವು ಕೂಡಾ ಸಂಭವಿಸಿತು. ದೇಹಾವಸಾನಕ್ಕೆ ಮುಂಚಿತಾಗಿಯೇ ಬೇಸಾಯದ ಒಕ್ಕಲುಗಳನ್ನೆಲ್ಲಾ ಮನೆಗೆ ಕರತರಿಸಿ ಅವರಿಂದ ಬರತಕ್ಕ ಗುದಸ್ತು ಬಾಕಿ ಗೇಣಿಯನ್ನೆಲ್ಲಾ ಮಾಫು ಬಿಟ್ಟು, ಪಾಣೆಮಂಗ್ಳೂರು ಛತ್ರದಲ್ಲಿ ಬಡಬಗ್ಗರಿಗೆ ಇಡೀ ದಿವಸ ಜನ ೧೮ ೧ ಸೇರು ಪ್ರಕಾರ ಅಕ್ಕಿ ಹಂಚಿದರು.

~~~~~

ಕುಂದಾಪುರ. ಕುಂದಾಪುರ ತಾಲೂಕು ನಂಬ್ರ ೩೦ನೇ ತ್ರಾಸಿ ಗ್ರಾಮದ ಹೊಸಾಡು ಬೋರ್ಡು ಎಲಿಮೆಂಟರಿ ಶಾಲೆಯ ವರುಷಾವಧಿ ಪರೀಕ್ಷೆಯು ಇದೇ ಕಳದ ಅಕ್ಟೋಬರ ತಿಂಗಳ ತಾರೀಕು ೨೬ರಲ್ಲು ಮ. ರಾ. ರಾ. ಉಡುಪಿ ರೇಂಜ್ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸ್ಪೆಕ್ಟರವರಿಂದ ನಡಿಸಲ್ಪಟ್ಟಿತು. ಸದರಿ ಮಹಶಯರು ಮಜ್ಕೂರು ಶಾಲೆಯ ಈಗಿನ ಸ್ಥಿತಿಗಳನ್ನು ನೋಡಿ ಮನ ಮೆಚ್ಚಿಕೊಂಡರಲ್ಲದೆ ಬಣ್ಣಗಳ ಮತ್ತು ಕೋಲುಗಳ ಪ್ರವೃತ್ತಿಯ ಕಲಿಸುವಿಕೆಯ ಕ್ರಮವನ್ನು ಉಪಾಧ್ಯಾಯನಿಗೆ ಬೋಧಿಸಿ, ಸಂದರ್ಶನ ಪುಸ್ತಕದಲ್ಲಿ ಒಬ್ಬನೇ ಉಪಾಧ್ಯಾಯನಾಗಿ ನಾಲ್ಕು ತರಗತಿಗಳಿದ್ದು ೪೯ ಮಕ್ಕಳಿಗೆ ಕಲಿಸುವುದು ಸಾಧ್ಯವಲ್ಲವೆಂತಲೂ ಶಾಲೆಯಲ್ಲಿ ಸ್ಥಳ ಸಾಕಾಗದೆ ಇರುವದರಿಂದ ಕಟ್ಟೋಣವನ್ನು ದೊಡ್ಡದಾಗಿ ಕಟ್ಟಿಸಬೇಕಾಗಿಯೂ ಈ ಮೊದಲಾದ ಷರಾಗಳನ್ನು ಬರೆದಿರುವರು. ಸ್ಥಳೀಕ ಬೋರ್ಡಿನವರು ಈ ವಿಷಯಕ್ಕೆ ತಕ್ಕ ಗಮನ ಕೊಟ್ಟು ಮಕ್ಕಳ ವಿದ್ಯಾಭಿವೃದ್ಧಿಯನ್ನು ಸಾಧಿಸುವರೆಂದಾಗಿ ಕೋರುತ್ತೇವೆ.

~~~~~

ವಿವಿಧ ವಿಷಯಗಳು.

~~~~~

ಮಿಸೆಸ್ ಹೆಟ್ರಿ ಮೇನ್ ಎಂಬ ಅಮೇರಿಕದ ಸ್ತ್ರೀಯು ಭೂಲೋಕದ ಸ್ತ್ರೀಯರಲ್ಲಿ ಅತ್ಯಂತ ಧನಾಢ್ಯಳು. ಇವಳ ಗಂಡ ಮಿ। ಹೆಟ್ರಿ ಮೇನ್ ಎಂಬವನು ರೈಲ್ವೆ ರಾಜನಾಗಿದ್ದನು. ಅಂದರೆ ರಾಜ್ಯದ ರೈಲ್ವೆ ಮಾರ್ಗಗಳೆಲ್ಲ ಅವನವಾಗಿದ್ದವು. ಹೀಗೆ ಅಮೇರಿಕದಲ್ಲಿ ಮೇನ್ಸ್ ಎಂಬವನು ತಾಮ್ರದ ರಾಜನೆಂದೂ, ರೊಕ್‌ಫೆಲರನು ಕೆರೊಸಿನ್ ಎಣ್ಣೆಯ ರಾಜನೆಂದೂ ಹೆಸರುಗೊಂಡಿರುವರು. ಮೇಲೆ ಹೇಳಿದ ಸ್ತ್ರೀಯ ಮನೆಯೊಂದೇ ಸುಮಾರು ೧ಮಿಲ್ಯ ಪವನು ಕ್ರಯಬಾಳುವದಂತೆ.

~~~~~

ಕಳದ ತಿಂಗಳ ೨೬ನೇ ತಾರೀಕಿನಲ್ಲಿ ಕತ್ತ್ಯಾವಾಡದಲ್ಲಿ ಗೊಂಡಾಲ ರಾಜ್ಯದ ಠಾಕೂರ ಸಾಹೇಬರು ತಮ್ಮ ಆಳಿಕೆಯ ೨೫ನೇ ವರ್ಧಂತಿಯುತ್ಸವವನ್ನು ಸಮಾರಂಭದಿಂದ ಆಚರಿಸಿದರು. ಸಾಹೇಬರು ತಮ್ಮ ಪ್ರಜೆಗಳು ತೆತ್ತು ಬರುತ್ತಿದ್ದ ಒಳ ಸುಂಕವನ್ನು (Octroi duties) ತೆಗದು ಹಾಕಿದ್ದೇನೆಂತ ಆ ದಿನ ಹುಕುಂ ಕೊಟ್ಟರು. ಈ ತೆರಿಗೆಗಳ ಮೊಬಲಗು ವರುಷಂಪ್ರತಿ ೧। ಲಕ್ಷ ರೂಪಾಯಿ ಆಗುತ್ತಿತ್ತು. ಗೊಂಡಲ ಸರಕಾರ ನೌಕರರ ಸಂಬಳವನ್ನು ದಶಾಂಶದಿಂದ ಏರಿಸಿದರು. ಬರುವ ಜನವರಿ ತಿಂಗಳಲ್ಲಿ ವಸೂಲಾಗತಕ್ಕ ಭೂಕಂದಾಯವನ್ನು ಮಾಫಿ ಬಿಟ್ಟು ರೈತರ ಕೃತಜ್ಞತೆಯನ್ನು ಸಂಪಾದಿಸಿದರು. ಈ ಮೂಲಕ ೪ ಲಕ್ಷ ರೂಪಾಯಿ ಸರಕಾರಕ್ಕೆ ನಷ್ಟವಾಯಿತು. ಶಾಲೆಗೆ ಹೋಗುವ ಹುಡುಗರ ಬಗ್ಗೆ ೧೦೦೦ ರೂಪಾಯಿಯ ವೇತನವನ್ನು ಹುಡುಗಿಯರ ಬಗ್ಗೆ ೫೦೦ ರೂಪಾಯಿಯ ವೇತನವನ್ನೂ ಸಂಕಲ್ಪನ್ ಮಾಡಿದರು. ರಾಜಪುತ ವಂಶಜರಾದ ಠಾಕೂರ ಸಾಹೇಬರ ಸಹಧರ್ಮಿಣಿ ರಾಣೀ ಸಾಹೇಬರು ಬಾಲಿಕಾ ಶಿಕ್ಷಣದ ಅತ್ಯಾದರವುಳ್ಳವರೆಂದೂ, ತಮ್ಮ ಕುಮಾರಿಯರಿಗೆ ಇಂಗ್ಲಾಂಡಿಗೆ ಕಳುಹಿಸಿ ಅಲ್ಲಿ ಉಚ್ಚ ಶಿಕ್ಷಣವನ್ನು ಕೊಡಿಸಿರುವರಲ್ಲದೆ ಘೋಷಾ ಪದ್ಧತಿಯನ್ನು ತೆಗದು ಹಾಕಲಿಕ್ಕೆ ತಾನು ದೃಷ್ಟಾಂತ ಮೂಲಕ ಮೇಲ್ಪಙ್ತಿ ಹಾಕಿರುವರೆಂದು ತಿಳಿದು ಬರುತ್ತದೆ.

~~~~~

ಬೊಂಬಾಯಿ ಮುನಿಸಿಪಾಲಿಟಿಯ ಹೆಲ್ತ ಇಲಾಖೆಯ ಶಿಬಂದಿಯವರು ತಮ್ಮ ಚೀಫ್ ಕ್ಲಾರ್ಕ ಮ. ರಾ. ರಾ. ರಾವ್ ಸಾಹೇಬ್ ಅಮ್ಮೆಂಬಳ ಅನಂತಕೃಷ್ಣ ಪೈ ಬಿ. ಎ. ಇವರಿಗೆ ಸರಕಾರದಿಂದ ಈ ಮೊದಲು ರಾವ್ ಸಾಹೇಬ್ ಬಿರುದು ದೊರಕ್ಕಿದ್ದಕ್ಕಾಗಿ ಕಳದ ತಿಂಗಳ ೩೦ನೇ ತಾರೀಕು ಶನಿವಾರ ಅವರಿಗೆ ಒಂದು ಬೆಳ್ಳಿಯ "ಟೀಸೆಟ್" (ಪಂಚಪಾತ್ರೆ ಇತ್ಯಾದಿ ಚಾ ಸಾಹಿತ್ಯಗಳು) ಉಚಿತ ಕೊಟ್ಟರು. ಈ ಬಗ್ಗೆ ನೆರದ ಸಭೆಯ ಅಧ್ಯಕ್ಷರಾದ ಜೆ. ಹೆಲ್ತ ಆಫೀಸರ್ ಡಾ. ಗೋಲ್ಡ್ ಸ್ಮಿತರವರು ಪೈಗಳ ಗುಣಗಣಾಗಳನ್ನು ಉಚಿತ ವಚನಗಳಲ್ಲಿ ಶ್ಲಾಘಿಸಿದರು.

~~~~~

ವೃದ್ಧರಿಗೆ ಪೆನ್ಶನ್ ಕೊಡುವ ಬಗ್ಗೆಯೂ "ಡ್ರೆಡ್ ನಾಟ್" ಎಂಬ ಯುದ್ಧ ನೌಕೆಗಳನ್ನು ಹೆಚ್ಚಿಸಬೇಕಾದ್ದರಿಂದಲೂ ಇಂಗ್ಲಾಂಡಿನ ಮಂತ್ರಿಗೆ ಕಂದಾಯವನ್ನು ತಗ್ಗಿಸುವದು ಅಸಾಧ್ಯ. ಆದರೂ ಬ್ರಿಟಿಷ ಕೋಶಾಧೀಶ ಮಂತ್ರಿಯಾದ ಮಿ. ಲೋಯಿಡ್ ಜಾರ್ಜರು ಮದ್ಯಪಾನಗಳ ಮೇಲೆ ವಿಪರೀತ ಸುಂಕ ಹಾಕಿ ಅದರ ಖರ್ಚ ತಗ್ಗಿಸಿದರು. ಅಂದರೆ ಬ್ರಿಟಿಷ ರಾಜ್ಯಾದಾಯವು ಕಡಿಮೆಯಾಗುವದಾದರೂ ಜನರು ಮದ್ಯವನ್ನು ತ್ಯಜಿಸಿದರೆ ರಾಜ್ಯಕ್ಕೆ ಕ್ಷೇಮಕರವೆಂದು ಮಂತ್ರಿವರ್ಯರ ಅಭಿಮತವೆಂದಾಯಿತು. ನಿಜವಾಗಿಯೂ ಈಗ ಇಂಗ್ಲಾಂಡಿನಲ್ಲಿ ಮದ್ಯಪಾನವು ಶೇಕಡ ೨೦ರಷ್ಟು ಕಡಿಮೆಯಾಗಿದೆ. ಈ ಪಥವನ್ನು ಇಂಡ್ಯಾ ಸರಕಾರವು ಅನುಸರಿಸುವಂತೆ ಇಂದು ಪ್ರಕಾಶಪತ್ರಾಧಿಪರು ಪ್ರಾರ್ಥಿಸುವರು.

~~~~~

ಅತಿ ಉತ್ತಮವಾದ ಬೀಜಗಳು—ಗಿಡಗಳು— ಹೂವು ವಗೈರೆ.

ದೇಶಬಾಂಧವರೇ!

ನಮ್ಮಲ್ಲಿ ಉತ್ತಮ ತರದ ಇಂಗ್ಲಿಷ್ ಮತ್ತು ನೇಟಿವ್ ತರಕಾರಿ ಬೀಜಗಳೂ, ಹೂವಿನ ಬೀಜಗಳೂ, ಬೇಲಿಗಳಿಗೂ ಮತ್ತು ಕಾಫಿ ಗಿಡಗಳ ನೆರಳಿಗೆ ಅನುಕೂಲವಾಗುವಂಥ ಮರದ ಬೀಜಗಳೂ ವಗೈರೆ ಸಿಕ್ಕುತ್ತವೆ. ಇವೂ ಅಲ್ಲದೆ ಉತ್ತಮವಾದ ಕಟ್ಟಿದ ಮಾವಿನ ಗಿಡಗಳೂ, ಹಣ್ಣು ಹಂಪಲು ಗಿಡಗಳೂ, ಗುಲಾಬೀ ಗಿಡಗಳೂ, ಎಲೆ ಜಾತಿಯ ಗಿಡಗಳೂ, ವಗೈರೆ ಬಹಳ ಕಮ್ಮಿ ದರಗಳಿಗೆ ಬೇಕಾದಲ್ಲಿ ರವಾನಿಸಲ್ಪಡುವುದಲ್ಲದೆ ಕೆಟಲಾಗ್ (ಕ್ರಯದ ಪಟ್ಟಿ) ಸಹಾ ಕಳುಹಿಸುವೆವು. ತರಕಾರೀ ಮತ್ತು ಹಣ್ಣುಗಳು ಸಹಾ ಕಳುಹಿಸಲ್ಪಡುವವು. ಬೇಕಾದವರು ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಿ. ಎಲ್. ಬೈಯಣ್ಣ ಬ್ರದರ್ಸ್,
67 ಲಾಲ್‌ಬಾಗ್ ರೋಡು,
ಬೆಂಗಳೂರು ಸಿಟಿ.

~~~~~

ಜೀವಸುಗಳ ಧಾರಣೆ, ಮಂಗಳೂರು

ಬೆಳ್ಳೆ ಮಸ್ಕತಿ ಅಕ್ಕಿ	5—12—0
ಗುಡ್ಡು ಮಸ್ಕತಿ	5—4—0
ಕೈಲು ಮಗ್ಗ	6—4—0
ದುಯಂ ಗುಡ್ಡು ರಾಶಿ	4—8—0
ಹೊಸ ಗುಡ್ಡು ರಾಶಿ	3-12—0
ಹೊಸ ಭತ್ತ	1-11—0
ಮಸ್ಕತಿ ಬೆಳ್ತಿಗೆ	5—0—0
ರಂಗೂನ್ ಬೆಳ್ತಿಗೆ ಗೋಣಿ	7—6—0
ಹುರುಳಿ ಗೋಣಿ ೧ ಮುಡಿ 2ರ	7—0—0
ಉಪ್ಪು ಗೋಣಿ ೧ರ	3—6—0
ಕೊಪ್ರಿ ಎಣ್ಣೆ ಮಣ	6—10—0
ಕಾಫಿ ಖಂಡಿ ೧ರ	205—0—0
ಕಾಳು ಮೆಣಸು ಖಂಡಿ	115—0—0
ಬಿಳಿ ಗೋಟು ಅಡಿಕೆ	74—0—0

~~~~~

ಯುವತೀರೋಗಿಯರಗೋಸ್ಕರ ತಯಾರಿಸಿದ
ಸೂಲಗಿತ್ತಿಯರಾದ ಕಮಲಾಬಾಯಿಯವರ
ಅಬಲಾ ಸಂಜೀವಿನೀ ಗುಳಿಗೆಗಳು.

ಇದು ಸ್ತ್ರೀಯರ ಮಾಸಕಟ್ಟಳೆಯ ಅಕ್ರಮಗಳನ್ನು ಸರಿಗೊಳಿಸುವದಕ್ಕೆ ಅತ್ಯುತ್ತಮ ಪರಿಹಾರಕ ಸ್ವದೇಶೀ ಔಷಧವಾಗಿ ಕಂಡುಬಂದಿದೆ. ಮಾಸಕಟ್ಟಳೆಯ ರಕ್ತಸ್ರಾವವು ನಿಂತುಹೋಗಿದ್ದರೂ, ಕೊಂಚವಾಗಿದ್ದರೂ, ನೋವುಳ್ಳದ್ದೂ ಅಥವಾ ಅಕ್ರಮವಾಗಿದ್ದರೂ ಅವನ್ನೆಲ್ಲಾ ಕ್ರಮಪಡಿಸುತ್ತದೆ. ಗರ್ಭಕೋಶದ ರೋಗರುಜೆಗಳಲ್ಲಿ ಈ ಔಷಧವನ್ನು ಉಪಯೋಗಿಸಿದ್ದಲ್ಲಿ ಸಮಾಧಾನಕರವಾದ ಫಲಗಳನ್ನು ಕೊಟ್ಟದೆ. ದೇಹದಲ್ಲಿ ಯಾವದೊಂದು ಅಕ್ರಮ ಗುರ್ತು ಕಂಡುಬಂದ್ಯಾಗ್ಯೆ ತಕ್ಕ ಸಮಯದಲ್ಲಿ ಅದನ್ನು ಸರಿಪಡಿಸುವದಕ್ಕೆ ಕಮಲಾಬಾಯಿಯವರ ಗುಳಿಗೆಗಳ ಒಂದು ಪೊಟ್ಟಣವನ್ನು ಪ್ರತಿ ಸ್ತ್ರೀಯು ತನ್ನ ಮನೆಯಲ್ಲಿ ಇರಗೊಡಿಸಬೇಕು. ಉಪಯೋಗಿಸಿದವರು ಅವುಗಳ ಬಗ್ಗೆ ಶಿಫಾರಸು ಮಾಡಿರುವದರಿಂದ ಅವುಗಳ ವಿಕ್ರಯವು ಅಪರಿಮಿತವಾಗಿದೆ. ವಿಶೇಷ ಮಾಹಿತಿಯ ಕೆಟಲಾಗನ್ನು ಉಚಿತವಾಗಿ ಕಳುಹಿಸುವೆವು. ಔಷಧಿ ಕ್ರಯ ೧ ರೂ. ವಿ. ಪಿ. ಅಂಚೆ ಹಾಸಲು ೪ ಆಣೆ.

ಸೂಲಗಿತ್ತಿಯರಾದ ಕಮಲಾಬಾಯಿ, ಜೆ. ಎಮ್. ಸಿ
ಕಲ್ಬಾದೇವಿ ರೋಡ್, ಮುಂಬೈ.

~~~~~

THE MANGALORE WEAVING Co. MANGALORE.

ಮಂಗಳೂರು ವಿವಿಂಗ್
ಕಂಪೆನಿ, ಮಂಗಳೂರು.

ಸುಲಭಕ್ರಯ! ಹೆಚ್ಚಿನ ಡಿಸ್‌ಕೌಂಟು!!

ಮೆಡಲ್ ಯಾ ಬಹುಮಾನದ ಪದಕುಗಳನ್ನು ಪಡೆದಿರುವುದು.

ಈ ಮಗ್ಗದ ಕಾರ್ಖಾನೆಯಲ್ಲಿ ಪ್ರಖ್ಯಾತಿಪಟ್ಟ ಮಂಗಳೂರು ಮತ್ತು ಕಲ್ಲಿಕೋಟೆ ಅಂಗೀ ವಸ್ತ್ರಗಳು, ಟ್ವೀಡ್ಸ್ ಮಾದರಿ ಅರುವೆ, ಷರ್ಟಿಂಗ್ ಯಾ ಒಳಂಗಿ ಅರುವೆ, ಹೊದ್ದುಕೊಳ್ಳುವ ವ ಹಾಸಿಗೆಗಳಿಗೆ ಹಾಸುವ ಬಟ್ಟೆಗಳು (Bed Sheets) ಟವೆಲುಗಳು ಮುಂತಾದವುಗಳು ತಯ್ಯಾರಿಸಲ್ಪಡುವವು. ವಸ್ತ್ರಗಳ ರಂಗು ಖಾತ್ರಿಯಾಗಿರುವದು.

K. R. PATAK & C

ಭಂಗಾರದ ಬಹುಮಾನ ಪದಕಗಳು ಸಿಕ್ಕಿರುತ್ತವೆ.

ದಿಲ್ ಖುಷ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟ ಅತೀ ಸುವಾಸಿಕವಾದ ಎಣ್ಣೆ. ಇದರ ವಾಸನೆಯು, ಶಾಂತಕರವಾಗಿಯೂ ಮನೋಹರವಾಗಿಯೂ ಇದೆ

ಬಾಟ್ಲಿ ಒಂದರ 8 ಆಣೆ

ಕುಂತಲವಿಹಾರಿ ಎಣ್ಣೆ.

ಇದು ಗಿಡಮೂಲಿಕೆಗಳಿಂದ ನೂತನವಾಗಿ ಕಂಡುಹಿಡಿಯಲ್ಪಟ್ಟ ಎಣ್ಣೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಬೆಳೆಯುವವು. ಇದರ ಪರಿಮಳವು ಹೆಚ್ಚು ದಿವಸದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 8 ಆಣೆ

ಕಾಂತಿವರ್ಧಕ ಎಣ್ಣೆ.

ಎಲ್ಲಾ ಎಣ್ಣೆಗಳಿಗಿಂತಲೂ, ಇದರ ಪರಿಮಳವು ಹೆಚ್ಚು ಇದನ್ನು ಹಚ್ಚಿಕೊಂಡರೆ ತಲೆಯ ಮೆದುಳು ತಂಪಾಗುವದು, ಮತ್ತು ಸುಖಕರವಾಗಿ ನಿದ್ದೆ ಬೀಳುವದು

ಬಾಟ್ಲಿ ಒಂದರ 6 ಆಣೆ

ಮೋಹಿನಿ ಎಣ್ಣೆ.

ಇದು ಅಪೂರ್ವವಾದ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಅತೀ ಪರಿಮಳವುಳ್ಳ ಎಣ್ಣೆ ಇದರಿಂದ ಮೆದುಳು ತಂಪಾಗುವದು ಇದು ಹೆಂಗಸರ ಪ್ರೀತಿಕರವಾದ ಕೂದಲುಗಳ ಸಹಾಯಕರ, ಇದರ ಪರಿಮಳವು ಹೆಚ್ಚು ದಿನದ ವರೇಗೆ ಹೋಗುವದಿಲ್ಲ

ಬಾಟ್ಲಿ ಒಂದರ 6 ಆಣೆ

ಮನೋರಮಾ ಕಂಪೆನಿಯವರ

ರೋಯಲ್ ಇಂಡಿಯನ್ ಬಾಂ

ಇದು ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ಜುಮು, ಗಾಯ, ಉರಿ, ಶೀತ, ಕೆಮ್ಮು, ಎದೆಶೀತ, ಸೊಂಟದ ನೋವು, ಬೆನ್ನು ನೋವು, ಪಕ್ಷವಾತ, ಆನೆಗಾಲು, ಈ ಎಲ್ಲಾ ನೋವುಗಳಿಗೆ ಉತ್ತಮ ಎಲ್ಲಾ ಬಾಂಗಿಂತಲೂ ಇದು ಉತ್ತಮ ಎಂಬದಕ್ಕೆ ಸಂಶಯವಿಲ್ಲ ಸಾವಿರಾರು ಜನರಿಗೆ ಗುಣಕೊಟ್ಟಿರುತ್ತೆ ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಪರತು ಬಾಟ್ಲಿ ಒಂದಕ್ಕೆ 8 ಆಣೆ, ೬ ಬಾಟ್ಲಿಗಳಿಗೆ 2 ರೂ 10 ಆಣೆ ೧೨ ಬಾಟ್ಲಿಗಳಿಗೆ ೫ ರೂ ಇಷ್ಟು ಕಮ್ಮಿ ಕ್ರಯದಿಂದ ಮಾರುತ್ತೇವೆ

ವಿಳಾಸ — ಕೆ. ರಾ. ಪಾಠಕ್ ಮತ್ತು ಕಂಪೆನಿ,

ಠಾಕುರ್‌ದ್ವಾರ ರೋಡ್ ಮುಂಬಯಿ

ಹಿಂದುಸ್ಥಾನ ಕೋಒಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್,

ಎಂಬ

ಜೀವವಿಮೇ ಉತ್ತರಿಸುವ ಸಂಘ.

ಹೆಡ್ ಆಫೀಸು:—14 ಹೇರ್ ಸ್ಟ್ರೀಟ್ ಕಲ್ಕತ್ತಾ

ಬ್ರೆಂಚ್ ಆಫೀಸುಗಳು —42 ಎಲ್ಫಿನ್‌ಸ್ಟನ್ ಸರ್ಕಲ್ ಮುಂಬಯಿ.

8 ಬ್ರೊಡವೆ, ಮದ್ರಾಸು

1906ರಲ್ಲಿ ಸ್ಥಾಪಿಸಲ್ಪಟ್ಟಿತು

ಸಂಘದ ನಿಯಮಿತ ಬಂಡವಾಳ ಒಂದು ಕೋಟಿ ರೂಪಾಯಿ

ಕಂತು ಒಂದಕ್ಕೆ ವರುಷಂಪ್ರತಿ 5 ರೂಪಾಯಿಗಳಂತೆ ಸಲಾಯಿಸಬೇಕಾಗಿರುವ 100 ರೂಪಾಯಿಗಳ ಮೌಲ್ಯದ ಪಾಲುಗಳು. ವಾರ್ಷಿಕ ಕಂತುಗಳನ್ನು ಸಲಾಯಿಸಬೇಕೆಂತ ಸೂಚಿಸಲ್ಪಟ್ಟಾಗ ಮಾತ್ರ ತೆರತಕ್ಕದ್ದಾಗಿರುವದು

ಪಾಲುಗಳ ಮೇಲಣ ಮುನಾಫೆಯನ್ನು ನಗದಾಗಿ ಕೊಡುವರು ಅಥವಾ ಜೀವವಿಮೇ ಸಹಕಾರ ಪ್ರಯೋಜನವು ಅತೀ ಬಡವರಿಗೆ ಸಹಾ ದೊರಕುವಂತೆ ಅವನ್ನು ಪಾಲು ಮೌಲ್ಯಕ್ಕನುಗುಣವಾದ ವಿಮೇ ಮೊಬಲಗುಗಳಲ್ಲಿ ಸಹಾ ವಜಾ ಮಾಡಿ ತೆರಲೂ ಬಹುದು

1909 ಎಪ್ರಿಲ್ ತಿಂಗಳ ವರೆಗೆ ರೂ. 18,00,000, ಪಾಲು ಮೌಲ್ಯವಾಗಿ ಸಂಗ್ರಹಿಸಲ್ಪಟ್ಟಿರುವುದು.

ಕೆಲವು ವಿಶೇಷ ಸಂಗತಿಗಳು. ಕಂಪೆನಿಯ ಪಾಲುಮ್ಹಾಲಿಕರಿಗೆ ಸೇಕಡಾ 9ರಂತೆ ಮುನಾಫೆಯು ಎರಡನೇ ವರುಷದಲ್ಲಿ ಕೊಟ್ಟಿರುವುದು. ವಿಮೇ ಮೊಬಲಗು ವಿಮೇ ಹಕ್ಕಿನ ಪತ್ರಗಳು ತಪ್ಪಿದ ಒಂದು ವಾರದಲ್ಲಿಯೇ ವಿಮೇದಾರನು ಮೃತಪಟ್ಟ ತಾರೀಕಿನಿಂದ ಸೇಕಡಾ 4ರ ಬಡ್ಡಿ ಕೂಡಿಸಿ ಕೊಡಲ್ಪಡುವುದು. **ಸ್ತ್ರೀಯರು ಸಹಾ ಹೆಚ್ಚಿನ ವಿಮೇ ದರಗಳಿಲ್ಲದೆ ಸಾಮಾನ್ಯ ದರಗಳಲ್ಲಿಯೇ ಜೀವ ವಿಮೇ ಉತ್ತರಿಸಬಹುದು** ಈ ಅನುಕೂಲತೆಯು ಇತರ ಯಾವ ಜೀವ ವಿಮೇ ಸಂಘದಲ್ಲಿ ಇರುವದಿಲ್ಲ. ಕಂಪೆನಿಯವರು ಸ್ಥಿರಾಸ್ತಿ ಜವಾಬ್ದಾರಿಗಳಲ್ಲಿ ಹಾಕಿದ ಭಂಡವಾಳದ ಮೌಲ್ಯವು ಸೇಕಡಾ 2೦ರಂತೆ ಹೆಚ್ಚಿರುವುದು ಏಜಂಟರಾಗುವವರಿಗೆ ಧಾರಾಳ ಕಮಿಶನ್ ಕೊಡಲಾದೀತು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಬಿ. ಬಾಬುರಾವ್ ಎಂಡ್ ಸನ್ಸ್,

ಮದ್ರಾಸು ಸಂಸ್ಥಾನದ ಸ್ಪೆಶ್ಯಲ್ ಏಜಂಟರು, ಮಂಗಳೂರು ದಕ್ಷಿಣ ಕನ್ನಡ.

ಅನುಪಾನಸಹಿತ ಬಾಟ್ಲಿಯೊಂದಿಗಿರುವುದು. { ಸಿದ್ಧಲಕ್ಷ್ಮೀ ವಿಲಾಸ. } ಕ್ರಯ ಬಾಟ್ಲಿಗಕ್ಕೆ 12 ಆಣೆ.

ಉನ್ಮಾದ, ಅಪಸ್ಮಾರ, ಬಾಲಗ್ರಹಗಳಿಗೆ ಅನುಭವಸಿದ್ಧ ಔಷಧಿ. ಸೇವನೆಗೂ ಬಾಹ್ಯಲೇಪನಕ್ಕೂ ಯುಕ್ತವಾಗಿರುವುದು. (ಆಸನದಲ್ಲಿ) ಗುದದ್ವಾರದ ಹತ್ತರ ಬೀಳು ವಂಥಾ ತೂತುಗಳೂ, ಮೇಹ ಸಮ್ಮಂಧವಾದ ಎಲ್ಲಾ ಮೂತ್ರದೋಷಗಳೂ, ವ್ರಣಾದಿ ಚಾವುಗಳೂ, ಬಿಚ್ಚು ಮೊದಲಾದ ಚರ್ಮ ರೋಗಗಳೂ ಇದರಿಂದ ಗುಣಹೊಂದುವವು. ಸ್ತ್ರೀಯರುಗಳಿಗೆ ಇದು ದಿವ್ಯ ಔಷಧವಾಗಿರುವದು.

[illegible] ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು. [illegible] ಮತ್ತು [illegible], ಮಂಗಳೂರು. [illegible]

ಮನೋಹರಾ ಅತ್ತರ್.

ಇದು ಅಮೂಲ್ಯವಾದ ಪುಷ್ಪಗಳಿಂದ ತಯಾರಿಸಲ್ಪಟ್ಟದ್ದಾಗಿರುವುದು. ಹೆಂಗಸರಿಗೂ ಗಂಡಸರಿಗೂ ಮನೋಹರವಾಗಿರುವ 'ಮನೋಹರಾ ಅತ್ತರ್'. ಈ ವಿಷಯ ಹೆಚ್ಚು ಬರೆಯುವುದೇ ಅಗತ್ಯವಿಲ್ಲ. ಒಂದು ಸಾರಿ ಪರೀಕ್ಷಿಸಿದೊಡನೆ ತಿಳಿದು ಬರುವುದು. ಬಾಟ್ಲಿ ಒಂದರ ಕ್ರಯ [illegible]

ಸ್ವದೇಶಾಭಿಮಾನಿಯ [illegible] ಮಾತ್ರ [illegible] ೧೦ ಆಣೆ [illegible]

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಧಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ಇಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ. ೩ ಕರಡಿಗೆಗೆ ೧೧ ಆಣೆ.

೧೪ ಸುವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:— ಬಿ. ಎಮ್. ನಾಥು ಮತ್ತು ಕಂಪೆನಿ,

ಬಾಂದ್ರಾ (ಮುಂಬಯಿ ಹತ್ತಿರ).

Bandra (near Bombay).

ವಾತ, ಸಂಧಿವಾತ, ತಲೆನೋವು, ಜಖಮು, ಇವುಗಳ ನಿವಾರಣೆ.

ರೊಯಲ್ ಇಂಡಿಯನ್ ಬಾಂ.

ವಾತ:—ರಕ್ತದ ಮೇಲೆ ತೇಲುವ ಹಾನಿಕರ ಪದಾರ್ಥಗಳು ಗೆಂಟುಗಳ ಸಂಧಿಯಲ್ಲಿ ಕೂಡುವದರಿಂದ, ವಾತವೂ, ಸಂಧಿವಾತವೂ ಆಗುವದು. ಆ ಭಾಗದ ಮೇಲೆ ರೊಯಲ್ ಇಂಡಿಯನ್ ಬಾಂ ಚನ್ನಾಗಿ ತಿಕ್ಕಿ ಬಿಸಿನೀರಿನ ಸೇಕ ಕೊಡಬೇಕು:

ತಲೆನೋವು:—ನೋವಿದ್ದ ಭಾಗದ ಮೇಲೆ ರೋಯಲ್ ಇಂಡಿಯನ್ ಬಾಂ ಚನ್ನಾಗಿ ಉಜ್ಜಬೇಕು.

ಜಖಮು:—ಆ ಭಾಗದ ಮೇಲೆ ರೊಯಲ್ ಇಂಡಿಯನ್ ಬಾಂ ಚನ್ನಾಗಿ ಹಚ್ಚಿ ರೋಮದ ವಸ್ತ್ರದ ತುಂಡಿನಿಂದ ಕಟ್ಟಬೇಕು.

ಬೆನ್ನಿನ ವಾತ. ಬೆನ್ನಿನಲ್ಲಿ ನೋವು ಸುರುವಾಗಿ ಬಗ್ಗುವಾಗ ಅತಿ ನೋವು ಆಗುವದು. ಇದರ ಮೇಲೆ ರೊಯಲ್ ಇಂಡಿಯನ್ ಬಾಂ ಒಂದು ದಿವ್ಯ ಔಷಧವಾಗಿರುತ್ತದೆ.

ಗಂಟ್ಲವಲ್ಲಿ ಶೀತ:—ರೊಯಲ್ ಇಂಡಿಯನ್ ಬಾಂ ರಭಸದಿಂದ ತಿಕ್ಕಬೇಕು.

ಹಲ್ಲುನೋವು:—ಸ್ವಲ್ಪ ಹತ್ತಿಯನ್ನು ರೊಯಲ್ ಇಂಡಿಯನ್ ಬಾಮಿನಲ್ಲಿ ಒದ್ದೆಮಾಡಿ ನೋವುಳ್ಳ ಹಲ್ಲಿನ ಮೇಲೆ ಇಡಬೇಕು.

ಇದರಿಂದ ಸಾವಿರಾರು ಜನರು ಗುಣ ಹೊಂದಿರುತ್ತಾರೆ. ಇನ್ನೂ ಸಾವಿರಾರು ಜನರು ಗುಣಹೊಂದುವರು.

ಬಾಟ್ಲಿ ಒಂದರ ಕಿಮ್ಮತು ೬ ಆಣೆ.

ಎಲ್ಲಾ ಬಾಮ್‌ಗಿಂತಲೂ ಇದು ಉತ್ಕೃಷ್ಟವೆನ್ನಿಸಿಕೊಳ್ಳುತ್ತದೆ. ಇದರಿಂದ ಗುಣ ಕಂಡುಬರುವದಿಲ್ಲವಾದರೆ ಹಣ ಫಿರತು ರವಾನಿಸಲ್ಪಡುವದು.

ಏಜಂಟರು:—

ಮನೊರಾ ಮತ್ತು ಕಂಪೆನಿ, ಗಿರಗಾಂ, ಮುಂಬಯಿ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು, ದ. ಕನ್ನಡ.

ಪರ್ಲ ಎಂಡ್ ಸನ್ಸ್, ಮಂಗಳೂರು.

ಟಿ. ಸಿ. ಆರೇಖಾ, ಆಯುರ್ವೇದಿಕ್ ಏಜಂಟ್, ಮಂಗಳೂರು.

ಬೇಕಲ್ ವೆಂಕಟ ರಾವ್, ಉಡುಪಿ, ದ. ಕನ್ನಡ.



ಸುರಂಗಿ ಅತ್ತರು.

ಇದು ಎಲ್ಲಾ ಅತ್ತರುಗಳಿಗಿಂತ ಸುವಾಸಿಕವಾದ ಮತ್ತು ಚಲೋ ಪರಿಮಳವುಳ್ಳ ಅತ್ತರು. ಇಂಗ್ಲಿಷು ಅತ್ತರುಗಳಿಗಿಂತಲೂ ಇದರ ಪರಿಮಳವು ಹೆಚ್ಚು. ಇದರ ಪರಿಮಳವು ಹೆಚ್ಚು ದಿನಗಳ ವರೆಗೆ ಹೋಗುವದಿಲ್ಲ. ಬಾಟ್ಲಿ ಒಂದರ ಕ್ರಯ No. I. ೧—೪—೦. No. 2. ೧—೦—೦. ದಿಲ್‌ಖುಷ್ ೧—೦—೦. ದಸಾನಾ ೦—೧೪—೦. ಜುಯಿ ೦—೧೪—೦. ಚಂಬೋಲಿ ೦—೧೪—೦.

ಕೇಶವರ್ಧಿನಿ ಎಣ್ಣೆ: ಹೆಂಗಸರ ಪ್ರೀತಿಕರವಾದ ಎಣ್ಣೆ. ಇದರಿಂದ ಕೂದಲುಗಳು ಕಪ್ಪಾಗುವವು, ಮತ್ತು ಬೆಳೆಯುವವು. ಬಾಟ್ಲಿ ಒಂದರ ಕಿಮ್ಮತು ೦—೮—೦.

ಗಜಕರ್ಣದ ಮುಲಾಮು: ೦—೪—೦.

ಮನೋರಾ ಕಂಪೆನಿಯ

ರೊಯಲ್ ಇಂಡಿಯನ್ ಬಾಂ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಿದ ಬೇನೆಹಾರಿ ಮುಲಾಮು ಇದ್ದರಿಂದ ವಾತ, ಸಂಧಿವಾತ, ಸತತವಾತ, ಚೇಳುಕಡಿತ, ತಲೆನೋವು, ಶೀತ, ಘಾಯ, ಗಂಟ್ಲುನೋವು, ಎದೆಶೀತ, ಜಖಮು ಮುಂತಾದ ಎಲ್ಲಾ ತರದ ನೋವುಗಳ ಮೇಲೆ ಇದು ರಾಮಬಾಣ. ಸಾವಿರಾರು ಜನರಿಗೆ ಗುಣ ಕೊಟ್ಟಿರುತ್ತದೆ. ಇನ್ನೂ ಸಾವಿರಾರು ಜನರು ಗುಣಹೊಂದುವರು. ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಎಲ್ಲಾ ಬಾಮ್‌ಗಿಂತಲೂ ಇದು ಶ್ರೇಷ್ಠವಾದದ್ದಾಗಿರುತ್ತದೆ. ಇದು ಎಳೇ ಮಗುವಿನ ದೇಹಕ್ಕಾದರೂ ಭಯವಿಲ್ಲದೆ ಹಚ್ಚಬಹುದು.

ಬಾಟ್ಲಿ ಒಂದರ ಕಿಮ್ಮತು ರೂ. ೦—೮—೦, ಆರು ಬಾಟ್ಲಿಗಳಿಗೆ ರೂ. [illegible]

ವಿಳಾಸ:— **[illegible]**

ಹೊಸ ಪ್ರಕಟನೆಗಳು.

ಕರಾರ ನಿರ್ಣಯ—ಭುಟಗಳು ೫೪೬ ಹಿಂದೂ ಮಹಮದೀ ಲಾಗಳು, ೨೯ ಕಾನೂನುಗಳು ಅವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಬೊಂಬಾಯಿ ಮದ್ರಾಸ್ ಮೈಸೂರು ಆಧಿಪತ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕನ್ನಡ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂಪಾಯಿ ೧೨ ಆಣೆ

2. ಕನ್ನಡ ಲಾ ರಿಪೋರ್ಟ್—ಮಾಸಪತ್ರಿಕೆ; ಪ್ರಿವಿಕೌನ್ಸಿಲ್, ಹೈಕೋರ್ಟ್ ಚೀಫ್ ಕೋರ್ಟ್ ತೀರ್ಪುಗಳೂ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳ ಕಾನೂನುಗಳ ಬದಲಾವಣೆಗಳೂ ಇದರಲ್ಲಿ ಗರ್ಭಿತವಾಗುತ್ತವೆ. ವರುಷದ ಚಂದಾ ೧ ರೂಪಾಯಿ ಮುಂಗಡ, ವೀ ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೨ ಆಣೆ

3. ಕನ್ನಡ ಲಾ ರಿಪೋರ್ಟುಗಳ 1 ನೇ ಸಂಪುಟದ ಪುಸ್ತಕ ಕ್ರ ವಿ ಪಿ. ಸೇರಿ 10 ಆಣೆ. ಇವುಗಳನ್ನು ಅಪೇಕ್ಷಿಸುವವರು "ಎಂ ಮಲ್ಲಾರಾಧ್ಯರ್ಕೆ ಕಸ್ಟೆ ಸ್ಟ್ರೀಟ್ ಪ್ಲೀಡರ್, ಚಾಮರಾಜೇಂದ್ರ ಪೇಟೆ, ಬೆಂಗಳೂರು ಸಿಟಿ" ಈ ವಿಳಾಸಕ್ಕೆ ಬರೆಯುವದು.

THE HINDU SOAP MANUFACTURING CO.,

ಹಿಂದೂ ಸೋಪ್ ಮೆನ್ಯುಫೆಕ್ಚರಿಂಗ್ ಕಂಪೆನಿ.

ಕುಂದಾಪುರ ದಕ್ಷಿಣ ಕನ್ನಡ.

ಈ ಕಂಪೆನಿಯಲ್ಲಿ ನಾನಾ ವಿಧದ ಸಾಬೂನುಗಳು ತಯಾರಾಗುತ್ತವೆ ಸಾಬೂನು ಅತ್ಯುತ್ತಮವಾದದ್ದು ಕ್ರಯ ಸುಲಭ ಚರಬಿ ವಿರಹಿತವಾದದ್ದು. ಮಾದರಿಗಳೂ, ವಿಶೇಷಮಾಹಿತಿಯೂ ಮೆನೇಜಿಂಗ್ ಏಜಂಟರಿಂದ ದೊರಕುವವು. ಮಾರಾಟಕ್ಕೆ ಏಜಂಟರಾಗ ಅಪೇಕ್ಷಿಸುವವರು ಬರಕೊಳ್ಳಬಹುದು.

ಬಿ. ದತ್ತ್ ಎಂಡ್ ಬ್ರದರ್ಸ್, ಮೆನೇಜಿಂಗ್ ಎಜಂಟ್ಸ್

೧೮೯೮ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಟಿ. ಬಾಬುರಾಯರ

ಲೋಕಪ್ರಸಿದ್ಧವಾದ

ಆಯುರ್ವೇದಿಕ್ ಔಷಧಗಳು.

ಅನೇಕ ಮಾನ್ಯ ಗೃಹಸ್ಥರಿಂದ ಪಡೆದ ಶಿಫಾರಸು ಪತ್ರಗಳು ಇವೆ

ಪರಿಮಳಾಂಜನ ನಂಬ್ರ 2.—ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು. ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು ಡಬ್ಬಿ ೧ರ ಕ್ರಯ 0-10-0

(Rose) ದಂತಮಂಜನ—ಈ ಚೂರ್ಣದಿಂದ ಪ್ರತಿನಿತ್ಯವೂ ಹಲ್ಲುಗಳನ್ನು ತಿಕ್ಕುತ್ತಾ ಬಂದರೆ ಹಲ್ಲಿನಿಂದ ರಕ್ತ ಸುರಿಯುವದು ನಿಲ್ಲುವದಲ್ಲದೆ, ಬಾಯಿಯ ದುರ್ಗಂಧವು ನಾಶವಾಗಿ ಹಂದಾಡುವ ಹಲ್ಲುಗಳು ಗಟ್ಟಿಯಾಗುತ್ತವೆ ಡಬ್ಬಿ ೧ರ ಕ್ರಯ ರೂ. 0—2—0.

ತಾಂಬೂಲ ಸುವಾಸಿನಿ—ಸೀಸೆ ೧ರ ಕ್ರಯ ರೂ. 0-4-0	ಪರಿಮಳಾಂಜನ ನಂ ೧—ಡಬ್ಬಿ ೧ರ ಕ್ರಯ ರೂ 0 ೬-0.
ದಂತಮಂಜನ:—ಡಬ್ಬಿ ೧ರ ಕ್ರಯ ರೂ. 0-2-0	ಸುಗಂಧ ವಶ್ಯದ ಪುಡಿ—ಡಬ್ಬಿ ೧ರ ಕ್ರಯ ರೂ 0-6 0
ಗಜಕರ್ಣದ ಮುಲಾಮು—ಡಬ್ಬಿ ೧ರ ಕ್ರಯ ರೂ 0-6 0	ದಶಾಂಗ ದೂಪ—ಸೇರು ೧ಕ್ಕೆ ಕ್ರಯ ರೂ 1 4-0
ಶ್ವಾಸಕುಠಾರ:—ಡಬ್ಬಿ ೧ರ ಕ್ರಯ ರೂ. 0-8-0.	ದ್ರಾಕ್ಷಾರಿಷ್ಠ—ಬಾಟ್ಲಿ ೧ರ ಕ್ರಯ ರೂ 2-8-0.

ನಯನಾಮೃತ ಸುರ್ಮ:—ಈ ಸುರ್ಮವನ್ನು ಪ್ರತಿನಿತ್ಯವೂ ಕಣ್ಣಿಗೆ ಹಚ್ಚುತ್ತಾ ಬಂದಲ್ಲಿ ಕಣ್ಣಿನಿಂದ ಕೀವು ಅಥವಾ ನೀರು ಇಳಿಯುವದು ಕಣ್ಣುರಿ, ಕೆಂಗಣ್ಣು, ಕಣ್ಣಿನೊಳಗೆ ಬರುವ ಫರದೆ ಮೊದಲಾದ ಸರ್ವ ವಿಧವಾದ ನೇತ್ರ ರೋಗಗಳು ಸಂಶಯವಿಲ್ಲದೆ ಗುಣವಾಗುವವು.

ಇನ್ನೂ ಅನೇಕ ವಿಧವಾದ ಔಷಧಿಗಳು ಇರುವವು ಬೇಕಾದವರು ಕೆಟಾಲಾಗಿಗೆ ಬರಿಯಿರಿ.

ಮೇಲೆ ಕಾಣಿಸಿದ ದಂತಮಂಜನಗಳನ್ನು ದಾಸು ಲೆಕ್ಕದಲ್ಲಿ ತರಿಸಿಕೊಂಡರೆ ದಾಸು ೧ರ ರೂ. 2-0-0ರಂತೆ ಕ್ರಯ ಬೀಳುವದು.

ಸೂಚನೆ. ಟಪ್ಪಾಲ್ ದ್ವಾರಾ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಪ್ರತ್ಯೇಕ ಬೀಳುವದು.

ಟಿ. ಬಾಬುರಾಯರ

ಆಯುರ್ವೇದಿಕ್ ಔಷಧಾಲಯ,

ಗೋಂದುಕ ರಸ್ತೆ, ಮಂಗಳೂರು, ದ. ಕ.

ಪ್ರಸಿದ್ಧವಾದ ಮೈಸೂರು ಊದುಬತ್ತಿಗಳು.

ಅಟ್ಟಾಗಿಯೂ, ಚಿಲ್ಲರೆಯಾಗಿಯೂ, ಕ್ರಯನ್ಯೂನ್ಯದಿಂದ ಮಾರುವ ಅಗರ್ (ಊದು)ಬತ್ತಿಗಳು ಸೇರು ೧ಕ್ಕೆ ೧೨ ರೂ. ೫ ರೂ. ೩ ರೂ. ೨ ರೂ. ೮ ಆ. ೧ ರೂ. ೪ ಆ. ಅಲ್ಲದೆ ವಿಧವಿಧವಾದ ಅರಗಜ, ಗಂಧದ ಬಿಲ್ಲೆಗಳೂ, ಮತ್ತು ಬಾಯಾರಿಕೆಯಾದ ಕಾಲದಲ್ಲಿ ಹಾಕಿಕೊಳ್ಳುವದಕ್ಕೋಸ್ಕರ ತಯಾರಿಸಿದ ತಾಂಬೂಲ ವಿಹಾರಿಣಿ ಸೀಸಾ ೧ಕ್ಕೆ ೪ ಆಣೆ. ಮಕ್ಕಳಿಗೆ ಬರುವ ಬಾಲಗ್ರಹ (ಘಾಳಿ) ಚೇಷ್ಟೆಗೆ ಸಂಜೀವನವಾದ ಪೇಟೆಂಟ್ ಬಾಲಗ್ರಹ ಧೂಪ ಡಬ್ಬಿ ೧ಕ್ಕೆ ೮ ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ.

ಮೈಸೂರು.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಆಫೀಸು ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ — ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ —ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್,
ಜನರಲ್ ಏಜೆಂಟ್,
ಮಂಗಳೂರು, ದ ಕನ್ನಡ.

ಪ್ರೋತ್ಸಾಹಮಾಡುತ್ತೀರೇ.

ಕ್ರಯ ಸುಲಭ! ಉತ್ತಮ ಸಾಮಾನುಗಳು!

೧ ಟೋಪಿಯಾಗುವ ಉಲ್ ದಾರಕ್ಕೆ ರೂ 0—8—0 ೧೦ ಟೋಪಿಯಾಗುವ ಬಂಡ್ಲ್ ೧ಕ್ಕೆ ರೂ 3—7—0 ಕಸೂತಿ ಕೆಲಸದ ಉಲನ್ ಬಂಡ್ಲ್ ೧ಕ್ಕೆ ರೂ 3—4—0 ಕೊಕ್ಕೆ ಸೂಜಿ ೧ಕ್ಕೆ ರೂ 0—1—6 ಕಮ್ಮರ್ ಬಂದ್ ಹೊಲಿಯುವ ನಾಲ್ಕು ಸೂಜಿಯ ಕೋಳವೆ ೧ಕ್ಕೆ ರೂ 0—4—0. ಹಾಸನ್ ಟೋಪಿ ಡಜನ್ ೧ಕ್ಕೆ ರೂ 8—0—0 ಮತ್ತು ರೂ. 15—0—0 ಬನಿಯನ್‌ಗಳು ೧ಕ್ಕೆ 0—6—0, 0—8—0, 0—10—0, 0—12—0 ಪರಿಮಳ ನಶ್ಯ ಡಬ್ಬಿ ೧ಕ್ಕೆ ರೂ. 0—2—0 ಪೋಸ್ಟು ಕಾರ್ಡು ೧೦೦ಕ್ಕೆ ರೂ 0—3—0. ಸೆನ್ ಸೆನ್ ತಾಂಬೂಲ ಮಿತ್ರನು ೬೦೦ ಮಾತ್ರೆ ಇರುವ ಪಾಕೆಟ್ ೧ಕ್ಕೆ ರೂ. 0-3-0. ತಲೆನೋವಿಗೆ ಅನುಕೂಲವಾದ ಮೆಂತೋಲ್ ಡಬ್ಬಿ ೧ಕ್ಕೆ ರೂ. 0—3—0. ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ರೂ 0—5—0. ಕಸ್ತೂರಿ ಮಾತ್ರೆ ೨೦೦ರ ಸೀಸೆ ೧ಕ್ಕೆ ರೂ 0—4—0. ಸ್ವದೇಶಿ ಪ್ಲೇಟ್ ಕೇಪ್ ೧ಕ್ಕೆ ರೂ 1—0—0 ಮತ್ತು 0—12—0 ಕೇಪಿಟೋಲ್ ಬಾಂ ಸೀಸೆ ೧ಕ್ಕೆ ರೂ. 0—8—0. ದಿಲ್ ಬಾರ್ ಮತ್ತು ಕಾಮಿಯಾ ಅತ್ತರ್ ಸೀಸೆ ೧ಕ್ಕೆ ರೂ. 1—8—0. ಸರ್ವಜನೋಪಯೋಗವಾದ 1910ನೇ ಡೈರಿ ತಯಾರಿಯಲ್ಲಿದೆ, ದಯವಿಟ್ಟು ಕೆಟಲಾಗು ತರಿಸಿರಿ.

ನಮ್ಮ ವಿಳಾಸ —

ಡಿ. ಊಲನ್ ಮಾರ್ಟ್.

ಮಂಗಳೂರು.

ಸ್ವದೇಶಾಭಿಮಾನಿಯಲ್ಲಿ ಪ್ರಕಟಣೆಗಳನ್ನು ಪ್ರಕಟಿಸುವದರ ದರ.

	೧ ಸಾರಿ.	೪ ಸಾರಿ.	೧೨ ಸಾರಿ.	೨೪ ಸಾರಿ.	೫೨ ಸಾರಿ.
ಇಡೀ ಪಾನು	ರೂ. ೧೦	ರೂ. ೩೨	ರೂ ೬೨	ರೂ. ೧೧೦	ರೂ. ೧೯೦
ಅರ್ಧ ಪಾನು	,, ೬	,, ೧೮	,, ೩೮	,, ೬೦	,, ೧೦೦
ಕಾಲು ಪಾನು	,, ೪	,, ೧೨	,, ೨೦	,, ೩೨	,, ೬೫
ಅರೆಕಾಲು ಪಾನು	,, ೨	,, ೭	,, ೧೨	,, ೧೮	,, ೩೫

ಸೂಚನೆ —ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ 'ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ' ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು.

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಸೇರಿ ೧ ವರುಷಕ್ಕೆ ೨ ರೂ. ೧೪. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ರೂ. ೧ ೪. ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್—
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)

ಹಾಫ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ)

ಫುಲ್‌ಬೈಂಡ್
(ಪೂರ್ಣ ಚರ್ಮ)

ಈ ಮೂರು ವಿಧವಾಗಿ ಜಮಾ ಖರ್ಚಿನ ಖಾತೆಗಳಿದ್ದು ಗೆರೆಗಳುಳ್ಳವುಗಳು

3″ × 8¼″, 3″ × 5¼″, 8¼″ × 6½″, 6½″ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ ವರ್ತಕದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಪಾತ್ರವಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸೈಜಿನ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ವಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್ ಚರ್ಮ ಕಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು

ನಮ್ಮ ದರಗಳ ದಯಮಾಡಿ ಬರೆಕೊಳ್ಳಿ

ಮೆನೇಜರ್
ಶಾರದಾ ಮುದ್ರಾಲಯ
ಮಂಗಳೂರು

ಹಣವಿನ ಒಳ್ಳೇ ವಿನಿಯೋಗವು ಯಾವುದು — ಬೆಲೆಗೆ ತಕ್ಕ ಒಡವೆಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೭ ವರುಷಗಳಾದವು

ಪ್ರಥಮದಲ್ಲಿ ಔಷಧಿ ವ್ಯಾಪಾರಸ್ಥರಾಗಿದ್ದು ಕಳೆದ 1902ನೇ ಇಸವಿಯಿಂದ ಪ್ರತ್ಯೇಕ ಶಾರದಾ ಛಾಪಖಾನೆ ಸ್ಥಾಪಿಸಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೊರ್ನ್‌ಫ್ಲೋರ್, ಚಾ, ಕೊಕೊವಾ ಕಾಫಿ ಹಸಿ ಬಿಸ್ಕಿಟ ವ ಇನ್ನು ಬೇರೆ ಬೇರೆ ತರದ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಔಷಧೋಪಚಾರದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್, ಪೆಲ್ಲೊಸ್ಯಾರಪ್, ಕೆಮಿಕಲ್ ಫುಡ್, ಚುಕ್ಕಾಣಿ ಮುಲಾಮು ಮೊದಲಾದವುಗಳು ಸಹಾ)

ಇವರ

ಔಷಧಾಲಯ

ದಲ್ಲಿ ದೊರಕುವದಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರಜ್ಞರಾದ ಅನುಭವಶಾಲಿಗಳಾದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರೆಕೊಂಡು ತಕ್ಕದಾದ ಔಷಧಿಗಳನ್ನು ಪಡೆಯಲು ಬಹುದು. (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟ ಫೋರ್ಮ, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮಗಳು
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಯುಗಳಲ್ಲಿ ಅಚ್ಚು ಹಾಕುವುದು
ಪುಸ್ತಕ ಬ್ಯಾಂಕು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ —

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್
ಮಂಗಳೂರು.

Mangalore Trading Association,
Mangalore, S. Canara.

Printed by V. S. Kamath, at the Mangalore Trading Association's Sharada Press Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು 19ನೇ ಶುಕ್ರವಾರ ನವಂಬರ 1909. ಸಂಚಿಕೆ 33.

William & Co. Fort Bombay.

ಅಮೃತಾಂಜನ.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು ಗಂಟ್ಲು ನೋವು. ಜಖುಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು ಬಾಟ್ಲು ೧ರ ಕಿಮ್ಮತು 8 ಆಣೆ

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು ಡಬ್ಬಿ ೧ರ ಕಿಮ್ಮತು ೨ ಆಣೆ.

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ತಾಗಿಸುವದರಿಂದ ಮೋರೆಯ ಮೇಲಿರುವ ಗುಳ್ಳೆಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಕಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ. ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ ಆರು ಡಬ್ಬಿಗಳ ಕಿಮ್ಮತು ರೂ. 2—4—0.

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು ತಂಪುಮಾಡಿ ಮನಃಶುದ್ಧಿ ಮಾಡುವದು. ಬಾಟ್ಲಿ ೧ರ ಕಿಮ್ಮತು ೧೨ ಆ. ಮೂರು ಬಾಟ್ಲಿಗಳಿಗೆ ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಕಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿ ರೂ 4

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ನೆಮಿಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ ೩೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

ಚೇಳು ಕಡಿತದ ಮೇಲೆ ಔಷಧ

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲು ೧ರ ಕಿಮ್ಮತು 8 ಆಣೆ

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0-10—0.
ಕಜ್ಜಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರೆದಲ್ಲಿ ರವಾನಿಸಲ್ಪಡುವದು.

ವಿಳಾಸ— ವಿಲಿಯಂ ಮತ್ತು ಕಂಪನಿ, ಫೋರ್ಟ್ ಮುಂಬಯಿ. ಟೆಲಿಗ್ರಾಫ್ ವಿಳಾಸ—ಅಮೃತಾಂಜನ. ಮುಂಬಯಿ.

ವೈದ್ಯಸಾರ ಸಂಗ್ರಹ (ಉತ್ತಮವಾದ ಶಿಕ್ಷಕ ರತ್ನ ಮೂಲಿಕಾ) ಔಷಧಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ... ೩-೦-೦.
ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ ... ೦-೬-೦.
ಉತ್ತರ ರಾಮಚರಿತ್ರೆ ಕಥೆ. ... ೧-೫-೦
ಟೀಕಾ ರಾಘವೇಂದ್ರ ಸ್ತೋತ್ರ ... ೦-೨-೦
ತೃಚಕಲ್ಪರೀತ್ಯಾ ಸೂರ್ಯ ನಮಸ್ಕಾರ ... ೦-೨-೦
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು ೦-೨-೦
ಚಾಣಿಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ ೦-೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ ೦-೩-೦
ಸ್ವರಸಹಿತವಾದ ನಮಕ ಚಮಕ ೦-೨-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಪ್ರಕಾರಕ್ಕೆ ಸರಿಯಾಗಿ ಪ್ರಿಂಟುಮಾಡಿದೆ ೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ ೦-[illegible]-೦
ಕೃಷ್ಣ ಕರ್ಣಾಮೃತ ಮೂಲ ೦-[illegible]-೦
ದೇವರ ಸೇವೆ ಹೊಸ ಪುಸ್ತಕ ೦-೪-೦
ಮುಕುಂದ ಮಾಲಾ (ಗೀತೆ) ೦-[illegible]-೦
ಶಿವ ನಾಮಾ ೦-೦-೬
ಹನುಮನ್ನಾಮಾ ೦-೦-೬
ಹರಿ ನಾಮಾ ೦-೦-೬
ಯಾಜುಷ ಪ್ರಯೋಗ ೦-೮-೦
ಬೃಹತ್ಸದಾ ಮಂಜು ೦-೮-೦
ಕೃಷ್ಣ ಬೋಧಾಮೃತ ೦-೬-೦

೦-೪-೦ ಕಮ್ಮಿ ವಿ. ಪಿ. ರವಾನಿಸುವದಿಲ್ಲ.
ಕೆಟಲಾಗು ಬೇಕಾದವರು ಬರೆದು ತರಿಸಿಕೊಳ್ಳಬಹುದು.

ವಿಳಾಸ — ... ನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್, ಬೆಂಗಳೂರು.

ಕುಂತಳ ಕೌಮುದಿ ತೈಲ.

[illegible] ಮಹಾರಾಜಾದಿಯವರು — ಅವರು [illegible] ತೈಲವನ್ನು ಇದೇ [illegible]

[illegible] — ಅವರು [illegible] ಉಪಯೋಗಿಸುತ್ತಾರೆ

[illegible] ಮಹಾರಾಜಿಯವರು — ಇದನ್ನು ಅವರ [illegible]

[illegible] — ಇದು ಅನೇಕ [illegible] ತೈಲವೆಂದ [illegible] ಒಪ್ಪಿದ್ದು

[illegible] — ನಾನು ಉಪಯೋಗಿಸಿದ್ದೇನೆ, [illegible] ಉಪಯೋಗಿಸ [illegible]

ಕುಂತಳ ಕೌಮುದಿ ತೈಲ — ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆ ಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಆತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣವಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಅಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,
216 ಕಾರನ್ ವಾಲಿಸ್ ಬೀದಿ, ಕಲ್ಕತ್ತಾ.
ಟೆಲಿಗ್ರಾಫ್ ವಿಳಾಸ — "ಕೌಮುದಿ"
ಮೈಸೂರು ದೇಶಕ್ಕೆ ಏಜಂಟರು:— ಎಲ್. ಎ. ಫೋರುವಾಲ್ ಎಂಡ್ ಕೊ., ಚಿಕ್ಕಪೇಟೆ, ಬೆಂಗಳೂರು.
ಮಂಗಳೂರಿಗೆ ಏಜಂಟರು:— ಮ॥ ರಾ॥ ರಾ॥ ಸಿ. ಆರ್. ಕಾಮತರು, [illegible] ಮಂಗಳೂರು.

ರೇಷ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸುರು, ಬಿಳಿ, ಸವರನ್, [illegible]ಪು ಹಗಲ್‌ಬತ್ತಿ ವಗೈರೆ ರಂಗುಗಳ ವಸ್ತ್ರ 1ಕ್ಕೆ ... ರೂ. 0—12—0.
ಸೈಜು ಇಂಚು 22×22 ವಸ್ತ್ರ ೧ಕ್ಕೆ ... 1— 1—0.
ಸೈಜು ಇಂಚು 15×15 ಬೀಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರ 1ಕ್ಕೆ 8 ಆಣೆ.

ರೇಷ್ಮೆ ದೊಡ್ಡ ವಸ್ತ್ರಗಳು.

ಸೈಜು ಉದ್ದ 5 ಮೊಳ, ಅಗಲ 2' ಮೊಳ, ಕೆಂಪು ರಂಗಿನ ಬಿಳ್ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರ 1ಕ್ಕೆ ರೂ 12, 13, 14, 15, 16, 17. ಡಿಟೋ ಸಪ್ಪೆ ರೇಷ್ಮೆ ಬಾಪತು 1ಕ್ಕೆ ರೂ 6, 7, 8, 9, 10.

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೂವಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5 6 ಮೊಳ, ಅ 2 3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ. 1-4-0 1 8 0, 1 10-0, 1 12 0, 2 0 0, 2-8-0.

ಕುಪ್ಪಸದ ಕಣಗಳು.

ರೇಷ್ಮೆ ರುದ್ರಾಕ್ಷಿ, ಕಾಗಿಗಣ್ಣು, ಹಂಸ ಪಪ್ಪಳ, ಶೃಂಗಾರ ಪಪ್ಪಳ, ಜಗನ್ನಾಥ ರಟಿ ಲಂಕಿಮುಂಗಿ, ಹಸಿ ಮುಂಗಿ ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ 1 6 0, 1 12 0
ಡಿಟೋ ಸಪ್ಪೆ ಚಂದ್ರಕಾಳಿ ಕಣಗಳು 1ಕ್ಕೆ ರೂ 1 0 0, 1 2-0, 1-3-0.
ಮೊಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2 4 0 2 8 0, 2-10 0
ಡಿಟೋ [illegible] ಪರಕಾರದ ಕಣ 1ಕ್ಕೆ ರೂ 1 4 0, 1-6-0, 1 8 0
ಕಲಾಬತ್ತು ರುದ್ರಾಕ್ಷಿ ಮತ್ತು ಜರಪಣಿ ಅಂಚಿನ ಮೊಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2 10 0, 2 12 0, 3 0 0.
ಡಿಟೋ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಜರಿ ಎಲ್ಲಾ ರಂಗುಗಳ ತೀರೆ ಕಣ 1ಕ್ಕೆ ರೂ 3 6 0, 3 8 0, 3 12 0.
ಡಿಟೋ ರಂಗುಗಳ ಕಲಾಬತ್ತು ನಾಲಾರಿ ಮತ್ತು ಚೌಕಳ ತೀರೆ ಕಣಾ 1ಕ್ಕೆ ರೂ 4 12-0 5-0 0

ಹೆಚ್ ಸಂಕಪ್ಪಾ ಬವಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ವಿ. ಪಿ. ಆರ್ಡರುಗಳಿಗೆ ಸುಲಭ ಕ್ರಯ.

ಊದುಬತ್ತಿ ಸೇರು ೧ಕ್ಕೆ ೦ ೮-೦, ೧ ೦-೦, ೨ ೦-೦, ೩-೦-೦, ೪-೦ ೦, ೫ ೦-೦ ಗಂಧದ ಎಣ್ಣೆ ತೊಲೆ ೧ಕ್ಕೆ ರೂ ೨, ೪, ೮, ೬, ೧೨, ೧೬
ಅರಗು (ಪಸೀ ಗಂಧ) ತೊಲೆ ೧ಕ್ಕೆ ೧-೦-೦, ೧ ೮-೦
ಬೆಳ್ಳಿ ಗಣೇಶಗಳು ೧ಕ್ಕೆ ೨ ೮-೦, ೩-೦-೦, ೩-೮-೦, ೪-೦-೦, ೫ ೦ ೦
ವ್ಯವಸಾಯ ಕ್ರಮ ಬೋಧಿನಿ ಸ್ಟಿಫ್ ಬೈಂಡ್ ಪ್ರತಿ ೧ಕ್ಕೆ ರೂ ೦ ೧೨-೦. ಕೆಲಿಕೊ ಬೈಂಡ್ ರೂ ೧ ೦ ೦ ಟಪ್ಪಾಲ್ ಹಾಸಲ್ ಪ್ರತ್ಯೇಕ
ಉಲನ್ ಚವುಕಗಳು ಹಳದಿ, ಹಸುರು, ನೀಲಿ, ಗುಲಾಬಿ, ಎಣ್ಣೆ ರಂಗು ಗಳಲ್ಲಿ ೧ಕ್ಕೆ ರೂ ೧ ೬ ೦, ೨ ೦ ೦, ೬ ೦ ೦
ಉಲನ್ ಶಹಲುಗಳು ೧ಕ್ಕೆ ೩ ೮-೦, ೩ ೧೨-೦, ೪-೦-೦
ಕಾಶ್ಮೀರ ಶಹಲುಗಳು ಎಲ್ಲಾ ರಂಗುಗಳಲ್ಲಿಯೂ, ೧ಕ್ಕೆ ರೂ. ೯-೦-೦, ೧೦ ೦ ೦, ೧೨ ೦ ೦, ೧೪ ೦-೦, ೧೬-೦ ೦, ೧೮-೦-೦, ೨೦ ೦-೦.
ಹಾಸನದ ಟೋಪಿ ಹಣಿಯುವ ಉಲನ್ ದಾರಗಳು. ಕೆಂಪು, ಎಣ್ಣೆಗೆಂಪು, ಕಪ್ಪು, ರಂಗುಗಳಲ್ಲಿ ೧ ಟೋಪಿ ಆಗುವ ದಾರಕ್ಕೆ ೦-೬-೦, ೦-೧೦-೦, ೦ ೧೨-೦, ೦ ೧೪-೦, ಡಿಟೋ ಸೂಜಿ ೧ಕ್ಕೆ ೦-೧-೬, ೦-೨-೦.
ಊಲನ್‌ನಿಂದ ಹಣೆದ ಟೋಪಿಗಳು ಡಜನ್ ೧ಕ್ಕೆ ೪ ೮-೦, ೫-೦-೦, ೬ ೦ ೦, ೭ ೮ ೦, ೮ ೦ ೦, ೯ ೦ ೦, ೧೦ ೦ ೦, ೧೨ ೦-೦

ಹೆಚ್. ಯನ್. ರಾವ್ ಬ್ರದರ್ಸ್,
262 ಚಿಕ್ಕಪೇಟೆ, ಬೆಂಗಳೂರು.

ಗಿಡಗಳು, ಬೀಜಗಳು, ಹಣ್ಣು, ಹುವ್ವು, ಮತ್ತು ತರಕಾರಿ.

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ ವಿಧವಾದ ಬೀಜಗಳು, ಸೇಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷ್ ಮತ್ತು ನೇಟೀವ್ ಕಾಯಿಪಲ್ಯಗಳೂ, ತುರಾಯಿ, ಹಾರಾ ವಗೈರೆ ಹುವ್ವುಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ.

ಟಿ. ಎಸ್. ಗಿರಿಯಪ್ಪ ಅಂಡ್ ಸನ್,
[illegible]
[illegible]

DIARIES FOR 1910.

1910ನೇ ಇಸವಿಯ ಡೈರಿಗಳು.

ವಕೀಲರಿಗೂ, ವಕೀಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟ್ಸು ಬೂಕು ಸ್ಸೈಜ್ ಕ್ರಯ ೮ ಆಣೆ

ಸಣ್ಣ ಸ್ಸೈಜ್ ,, ೪ ಆಣೆ

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ [illegible] ಒಳ್ಳೇ ಕಮಿಶನ್ ದೊರಕುವದು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ [illegible]

ವಿಳಾಸ.—

ಮ್ಯಾನೇಜರ್,

ಶಾರದಾ ಪ್ರೆಸ್ [illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಖು 19ನೇ ನವಂಬರ 1909

ಪ್ರಜಾಸೇವೆ

ಯಾರೊಬ್ಬ ಮನುಷ್ಯನು ತಾನು ಹುಟ್ಟಿಬೆಳೆದ ದೇಶದ ಸಮಾಜಕ್ಕೆ ಹಲವು ವಿಷಯಗಳಲ್ಲಿ ಋಣಿಯಾಗಿದ್ದಾನೆ. ಆ ಸಮಾಜವು ಶತಮಾನಗಳಿಂದ ಕೂಡಿಟ್ಟ ವಿದ್ಯಾ, ಬುದ್ಧಿ, ಅನುಭವಗಳಿಗೆ ಆತನು ಹಕ್ಕುದಾರನಾಗುತ್ತಾನೆ. ಒಂದು ಶಿಶುವು ಇಪ್ಪತ್ತನೇಯ ಶತಮಾನದ ನಾಗರೀಕತೆಯ ಚರಮಸೀಮೆಯನ್ನು ಮುಟ್ಟಿದ ಇಂಗ್ಲಾಂಡು ದೇಶದಲ್ಲಿ ಹುಟ್ಟಿದರೆ ಅದರ ಭವಿಷ್ಯವು ಹ್ಯಾಗೆ ಸಾಗುವದು? ಅದೇ ಶಿಶುವು ಆಫ್ರಿಕದ ಕಾಡುಮನುಷ್ಯರೊಳಗೆ ಜನಿಸಿದರೆ ಅದರ ಮುಂದಿನ ಗತಿಯು ಏನಾಗುವದು? ಮೊದಲನೇ ಸಂಗತಿಯಲ್ಲಿ ಆತನು ಬೆಳೆದು ಒಬ್ಬ ಗ್ಲೇಡ್‌ಸ್ಟನ್ನನಾಗಿ ಸೂರ್ಯನು ಅಸ್ತಮಿಸದ ಸಾಮ್ರಾಜ್ಯದ ಮಂತ್ರಿವರ್ಯನಾಗಬಹುದು. ಎರಡನೇ ಸಂಗತಿಯಲ್ಲಿ ಒಬ್ಬ ನಿರಕ್ಷರ ಕುಕ್ಷಿಯಾಗಿ ಗರಿಗಳಿಂದ ಅಲಂಕೃತನಾಗಿ ಪಶುವಿನಂತೆ ಬೆಳೆದು ಸಾಯುವನು. ಇದ ಕಾರಣ ತನಗೆ ಅಷ್ಟು ಉಪಕಾರ ಮಾಡಿದ ಸಮಾಜಕ್ಕೆ ಆತನು ಪ್ರತ್ಯುಪಕಾರ ಮಾಡುವದು ಧರ್ಮವಾಗಿದೆ. ತನಗೆ ಪಿತ್ರಾರ್ಜಿತವಾಗಿ ಬಂದ ಸುಧಾರಣೆ ಎಂಬ ಆಸ್ತಿಯನ್ನು ವೃದ್ಧಿಗೊಳಿಸಿ ಮುಂದಿನ ತಲಾಂತರಕ್ಕೆ ಕೊಡುವದೇ ಆ ಪ್ರತ್ಯುಪಕಾರವಾಗಿದೆ.

ಲೋಕದಲ್ಲಿ ಖ್ಯಾತಿಪಡೆದ ದೇಶಗಳ ಇತಿಹಾಸವನ್ನು ನೋಡಿದರೆ ಒಂದು ಸಂಗತಿಯು ಸ್ಪಷ್ಟವಾಗುವದು. ಆ ದೇಶಗಳಲ್ಲಿ ವಿದ್ಯಾಬುದ್ಧಿಗಳುಳ್ಳ [illegible] ಶಿರೋಮಣಿಗಳು ತನುಮನಧನಗಳನ್ನು ಸಂಕೋಚವಿಲ್ಲದೆ ಪ್ರಜಾಸೇವೆಯಲ್ಲಿ ವಿನಿಯೋಗಿಸಿ ದೇಶಕ್ಕೆ ಉನ್ನತಿಯನ್ನೂ ತಮಗೆ ಅಚಲ ಕೀರ್ತಿಯನ್ನೂ ಸಂಪಾದಿಸಿದರು. ಹಿಂದುಸ್ಥಾನದ ಚರಿತ್ರದಲ್ಲಿ ಬುದ್ಧನ ದೃಷ್ಟಾಂತವು ವಾಚಕರ ಮನಸ್ಸಿಗೆ ಹೊಳೆಯದಿರದು. ಸರ್ವ ಸಾಮ್ರಾಜ್ಯವನ್ನು ತೊರೆದು ಆತನು ಲೋಕೋಪಕಾರಕ್ಕೆ ಜೀವನವನ್ನು ಸಮರ್ಪಿಸಲಿಲ್ಲವೇ? ಪಾಶ್ಚಾತ್ಯರಲ್ಲಿ ಧರ್ಮ ಸಂಸ್ಥಾಪಕರಲ್ಲಿಯೂ ರಾಷ್ಟ್ರೋನ್ನತಿ [illegible] ದೃಷ್ಟಾಂತಗಳು ಅನೇಕವಿವೆ. ಮಾಜಿ ವ್ಹೈಸರಾಯ ಕರ್ಜನ್ ಪ್ರಭುಗಳೋ ಪರ್ಶಿಯಾ ಅಫಘಾನಿಸ್ತಾನ ದೇಶಗಳ ರಾಜಕೀಯ ಸ್ಥಿತಿಯನ್ನು ಸ್ವತಃ ಪ್ರತ್ಯಕ್ಷವಾಗಿ ಹೋಗಿ ಪರೀಕ್ಷಿಸಿ ತಮ್ಮ ಜನರ ಉಪಯೋಗಾರ್ಥ ಅದನ್ನು ಪ್ರಕಟಗೊಳಿಸಿದರು. ರುಸ್ಯದ ಚಕ್ರವರ್ತಿ ಪೀಟರ್ ಮಹಾ ಪ್ರಭುವು ಹಡಗು ಕಟ್ಟುವ ವಿದ್ಯೆಯನ್ನು ತನ್ನ ದೇಶದಲ್ಲಿ ನೆಲೆಗೊಳಿಸುವ ಉದ್ದಿಶ್ಯ ತಾನೇ ಛದ್ಮವೇಶದಿಂದ ಪರದೇಶದಲ್ಲಿ ಕೂಲಿಯವನಂತೆ ಗೈದನು.

ಪೂರ್ವಕ್ಕೆ ಕಣ್ಣು ತಿರುಗಿಸಿದರೆ ಜಪಾನದೇಶದ ಉನ್ನತಿಗೆ ಕಾರಣವು ಅಲ್ಲಿಯ ಶ್ರೀಮಂತ ಕುಟುಂಬದ ಯುವಕರು ಪರದೇಶಕ್ಕೆ ಹೋಗಿ ನವನಾಗರೀಕತೆಯ ಕಲೆಗಳನ್ನು ಕಲಿತು ತಮ್ಮವರೊಳಗೆ ಅದನ್ನು ಪಸರಿಸಿದ್ದೆಂದು ತೋರಿಬರುವದು. ಹಾಗೆಯೇ ತುರ್ಕಸ್ಥಾನ, ಪರ್ಶಿಯಾದಲ್ಲಿಯೂ ದೃಷ್ಟಾಂತಗಳಿರುವವು. ಅಫಘಾನಿಸ್ತಾನದ ಅಮೀರರು [illegible]

[illegible] ಕ್ರಮ, [illegible] ವಿಧಾನಗಳನ್ನು ಮಾಡಿರುವರು. ಪಾಶ್ಚಾತ್ಯ ಜನಾಂಗದಲ್ಲಿ ಎದ್ದ ಅಭಿವೃದ್ಧಿಯ ಅಲೆಯು ಹಿಂದುಸ್ಥಾನವನ್ನು ಬಡಿಯುತ್ತಿರುವದು. ಈ ವಿದ್ಯಮಾನದ ಪ್ರಯೋಜನವನ್ನು ಹೊಂದುವಂತೆ ಈಗ ಯಥಾರ್ಥ ಪ್ರಜಾಸೇವಕರು ಬೇಕು. ಹಗಲೆಲ್ಲಾ ವಕೀಲಿಯೋ, ದಾಕ್ತಾರಿಯೋ ನೋಡಿ ಸಂಜೆಯಲ್ಲಿ ವರ್ತಮಾನಪತ್ರಗಳನ್ನೋದಿ ಕೊಂಗ್ರೆಸ್ ಸಭೆಯಲ್ಲಿ ಒಳ್ಳೇ ಉಪನ್ಯಾಸಗಳನ್ನೋದುವವರನ್ನು ಪ್ರಜಾಸೇವಕರೆಂದು ಕರೆಯಬಹುದೇ? ಇವರು ದಿನಕ್ಕೆ ಒಂದು ತಾಸು ತಮ್ಮ ವೃತ್ತಿಗೆ ವಿನಿಯೋಗಿಸಿದರೆ ತಮ್ಮ ವೃತ್ತಿಯಲ್ಲಿ ಜಯಹೊಂದುವರೇ? ಇಲ್ಲವೆಂದಾದರೆ ಪ್ರಜೋದ್ಧಾರಣಾ ಕಾರ್ಯ ಅಷ್ಟು ಸುಲಭದಲ್ಲಿ ಸಾಧ್ಯವಾಗುವದೇ? ಈ ವಿಷಯವನ್ನು ಜೀವನೋದ್ದೇಶವಾಗಿಟ್ಟುಕೊಂಡು ವರ್ತಿಸುವದರಿಂದಲೇ ಕೆಲಸವು ಕಡೆಗಂಡೀತು.

ನಮ್ಮ ದೇಶದಲ್ಲಿ ಸಮರ್ಥರಾದ ಜ್ಞಾನಸಮ್ಪನ್ನ ಸಚ್ಚರಿತರಾದ ಸೇವಾನಿರತರಾದ ಗೃಹಸ್ಥರ ಪ್ರಜಾಸೇವಕರಾಗುವದು ವಿರಳ. ಗೋಖಲೆ, ಲಾಜಪತರಾಯ, ಬೆನರ್ಜಿ ಪ್ರಭೃತಿಗಳು ಕೈಬೆರಳೆಣಿಕೆಯಷ್ಟಿರಬಹುದು. ಈ ಕಾರ್ಯಕ್ಕೆ ಬೇಕಾದ ಯೋಗ್ಯತೆ ಇದ್ದವರು ಹೆಚ್ಚಾಗಿ ಸರಕಾರಿ ನೌಕರಿಯನ್ನೇ ಸೇರುವರು. ಜನರಿಗೆ ಪ್ರಜಾಸೇವೆಯಲ್ಲಿ ಹೀಗೆ ಉಪೇಕ್ಷೆ ಬರಲಿಕ್ಕೆ ಹಲವು ಕಾರಣಗಳಿವೆ.

ಸರಕಾರಿ ನೌಕರಿಯಲ್ಲಿ ಸಿಕ್ಕುವ ಮರ್ಯಾದೆ, ಅಧಿಕಾರ ಲಾಭಗಳು ಪ್ರಜಾಸೇವೆಯಿಂದ ದೊರೆಯುವದಿಲ್ಲ. ಯಥಾರ್ಥವಾಗಿ ದೇಶಹಿತಕ್ಕಾಗಿ ಜೀವನವನ್ನು ಕಳೆಯುವವರಿಗೆ ಸಂಪತ್ತಿನಲ್ಲಿ ಖ್ಯಾತಿಯಲ್ಲಿ ಜನರ ಪ್ರೀತಿಯನ್ನಾದರೂ ಫಲಿಸೇನೆಂದು [illegible] ನಂಬಿಕೆಯಿದು. [illegible] ಜನರ ಗೌರವಕ್ಕೆ ಪಾತ್ರನಾಗಬೇಕೆಂಬ ತೃಷ್ಣೆಯೂ ಅವರ ದ್ವೇಷವನ್ನು ಗಳಿಸಬಾರದೆಂಬ ಅಂಜಿಕೆಯೂ ಇದೆ. ಇದ ಕಾರಣ [illegible] ಉಚಿತ [illegible] ಕೊಡಲಿಕ್ಕೆ ಅದೊಂದು [illegible] ಉತ್ತೇಜನಕಾರಕವಾಗುವದು.

ಇದಲ್ಲದೆ ಇಲ್ಲಿ ಒಬ್ಬ ಪ್ರಜಾಗ್ರೇಸರನು ಎಷ್ಟು ವಿಚಕ್ಷಣನಾದರೂ ಅವನಿಗೆ ತನ್ನ ಮನಸ್ಸಿನಲ್ಲಿದ್ದ ಲೋಕೋಪಕಾರದ ಯೋಜನೆಗಳನ್ನು ಜಾರಿಗೆ ತರಲಿಕ್ಕೆ ಇಂಗ್ಲಾಂಡಿನಲ್ಲಿದ್ದಂತೆ ಅನುಕೂಲವಿಲ್ಲ. ಬಹುಮಾನಪಟ್ಟ ಗೋಖಲೆಯವರ ದೃಷ್ಟಾಂತ ತೆಕ್ಕೊಳ್ಳುವ. ಆ ಗೃಹಸ್ಥರಿಗೆ ಮೂಲ ಶಿಕ್ಷಣವನ್ನು ಜನರಿಗೆ ಉಚಿತವಾಗಿ ಕೊಡಿಸಬೇಕೆಂಬ ಅಭಿಲಾಷೆಯಿದೆ. ಇಂಗ್ಲಾಂಡಿನಲ್ಲಿಯಾದರೆ ಅಂಥವನೊಬ್ಬನು ಜನರಿಗೆ ತನ್ನ ಅಭಿಮತವನ್ನು ತಿಳಿಸಿ ಹೇಳಿ ಅವರ ಪ್ರತಿನಿಧಿಯಾಗಿ ಪಾರ್ಲಿಮೆಂಟ್ ಸಭೆಯನ್ನು ಸೇರಿ ಅಲ್ಲಿ ತನ್ನ ವಾದವನ್ನು ಪ್ರತಿಪಾದಿಸಿ ತಕ್ಕ ಶಾಸನಗಳನ್ನು ಮಾಡಿಸಬಹುದು. ಇಲ್ಲಿ [illegible] ಈ ವಿಷಯವನ್ನು ಎಷ್ಟು ಸಾರಿ ಚರ್ಚಿಸಿದರೂ ಅದು ಇದ್ದಲ್ಲೇ ಇದೆ. ಮತ್ತು ಇಂಗ್ಲಾಂಡಿನಲ್ಲಿ ಪ್ರಜಾಸೇವಕನು ಪ್ರಧಾನ ಮಂತ್ರಿಯ ಪದವನ್ನಾದರೂ ಕ್ರಮೇಣ ಅಲಂಕರಿಸಬಹುದು. ಅವರಿಗಾದರೆ ಇಂತಹ ಸೇವೆಯು ಗೌರವಾಸ್ಪದವಾಗಿದೆ. ಇಲ್ಲಿ ಅಂತಹ ಉತ್ಸಾಹವೇನೂ ಇಲ್ಲ.

ಅಷ್ಟೇ ಅಲ್ಲ. ಕೆಲವು ಸಾರಿ [illegible] ಪೇಚಾಡುತ್ತಾನೋ ಅವರಿಂದಲೇ ಇಲ್ಲದ ಆರೋಪಣೆಗಳನ್ನು ಕೇಳಬೇಕಾಗುವದು. ಸ್ವಾರ್ಥಪರನು, ಸರಕಾರದ [illegible] ಹಣವು ಸಂಪಾದಿಸ ನೋಡುವವನು, ಮೊದಲಾದ ನಿಂದೆಗಳಿಗೆ ಗುರಿಯಾಗುವನು. ದೇಶದಲ್ಲಿ ರಾಷ್ಟ್ರೀಯ ತಂಡಗಳಾದಂದಿನಿಂದ ಈ ಆರೋಪಣೆಗಳು ಹೆಚ್ಚಿವೆ. ಅದೇ ಸಮಯದಲ್ಲಿ ಸರಕಾರದ ಸಂಶಯಕ್ಕೂ ಇತ್ತಲಾಗಿ ಹೆಚ್ಚೆಚ್ಚಾಗಿ ಪ್ರಜಾಸೇವಕರು ಗುರಿಯಾಗಿದ್ದಾರೆ. ಇಂತಹ ಉಭಯಸಂಕಟವನ್ನು ವಹಿಸಿ ಖಡ್ಗಧಾರೆಯಲ್ಲಿ ನಡಿಯಲಿಕ್ಕೆ ಎಷ್ಟು ಜನರು ಸಿದ್ಧವಿರುವರು?

ಇನ್ನೊಂದು ಕಾರಣವೇನೆಂದರೆ ವಿದ್ಯಾವಂತರಾಗಿ ರಾಷ್ಟ್ರೀಯ ವಿಷಯಗಳನ್ನು ಕಲಿತು ಪ್ರಜೆಗಳಿಗೆ ಸಹಕಾರಿಗಳಾಗ ಸಮರ್ಥರಾದ ಗೃಹಸ್ಥರು ಬಹುಶಃ ಶ್ರೀಮಂತರಲ್ಲದೆ ಜೀವನೋಪಾಯಕ್ಕಾಗಿ ವೃತ್ತಿಯನ್ನವಲಂಬಿಸಬೇಕಾಗುವದು. ಇಂಗ್ಲಾಂಡು ದೇಶದಲ್ಲಿರುವಂತೆ ವಿದ್ಯಾವಂತರೂ, ಧನವಂತರೂ ಆದ ಜನರ ಒಂದು ಮಧ್ಯಮ ವರ್ಗವು (ಅಂದರೆ ಶ್ರೀಮಂತ ಪ್ರಭುವರ್ಗಕ್ಕೂ ಸಾಮಾನ್ಯರಿಗೂ ನಡುವಿನ ವರ್ಗ) ಹಿಂದೂಸ್ಥಾನದಲ್ಲಿ ಇಲ್ಲ. ಶ್ರೀಮಂತ ಕುಟುಂಬದವರು ಸಾಮಾನ್ಯ ಜನರಲ್ಲಿ ಸಂಪರ್ಕವನ್ನು ಬೆಳಸಿ ಅವರ ಕುಂದುಕೊರತೆಗಳನ್ನು ಕಂಡುಕೊಳ್ಳ ನೋಡುವ ಪದ್ಧತಿಯು ಅಪರೂಪ. ಹೀಗಾಗುತ್ತಾ ನಮ್ಮ ಪ್ರಜಾಗ್ರೇಸರರಲ್ಲಿ ಅನೇಕರು ಜೀವನಕ್ಕಾಗಿ ಒಂದು ವೃತ್ತಿಯನ್ನು ಅನುಸರಿಸುತ್ತಿರುವರು. ಈಗಲೀಗ ಜೀವನಾರ್ಥ ಕಲಹವು ಹೆಚ್ಚುವದರಿಂದ ಪ್ರತಿಯೊಬ್ಬನು ಧನಾರ್ಜನೆಗೆ ಉಚ್ಚಸ್ಥಾನವನ್ನೀಯುವನು.

ನಮ್ಮ ದೇಶದಲ್ಲಿ ರಾಷ್ಟ್ರೀಯ ಕಲ್ಪನೆಯು ಇನ್ನೂ ಮೊಳಕೆಯಲ್ಲಿದೆ. [illegible] ಮಾನ್ಯ ಜನರಲ್ಲಿ ಇದು ಪಾಶ್ಚಾತ್ಯರಂತೆ ರೂಢಮೂಲವಾಗದ ಕಾರಣ ರಾಷ್ಟ್ರೀಯ ಉದ್ದಿಶ್ಯಗಳಿಗೆ ಐಕ್ಯ ಸಹಕಾರಗಳನ್ನು ಸಂಪಾದಿಸುವದು [illegible]. [illegible] ರಿಂದ ರಾಷ್ಟ್ರೀಯ [illegible]

ಈ ದಿನಗಳಲ್ಲಿ ಯಥಾರ್ಥ ಪ್ರಜಾ ಸೇವಕರ ಅವಶ್ಯಕತೆಯು ಬಲುನಾದಿ. ಲೋಕಾನುಭವವಿಲ್ಲದ ತರುಣರು ರಾಷ್ಟ್ರೀಯ ವಿಷಯಗಳಲ್ಲಿ ಕೈಹಾಕಿ ಅನೇಕ ಅನರ್ಥಗಳನ್ನುಂಟುಮಾಡಿದರು. ಹಲವು ಕಠಿಣತರ ಕಾನೂನುಗಳು ಜ್ಯಾರಿಗೆ ಬರಲಿಕ್ಕೆ ಕಾರಣರಾದರು. ಇಂತಹವರಿಗೆ ಜನರಲ್ಲಿ ವಿಶ್ವಾಸ ಸಿಕ್ಕದಂತೆ ಯೋಗ್ಯರು ಮುಂದು ಬರಬೇಕು. ಅಂತಹವರು ಮುಂದು ಬರುವಂತೆ ಅವರಿಗೆ ದ್ರವ್ಯಾನುಕೂಲವುಂಟಾದ್ದನ್ನು ಒದಗಿಸಿ ಪ್ರೋತ್ಸಾಹಿಸಲಿಕ್ಕೆ ಅಲ್ಲಲ್ಲಿ ಸಂಘಗಳು ಏರ್ಪಡಬೇಕಾಗಿವೆ. ಈಗ ಸರಕಾರದವರು ಪ್ರಜೆಗಳಿಗೆ ಹೆಚ್ಚಿನ ಸ್ವಾತಂತ್ರ್ಯಗಳನ್ನೂ ಜವಾಬ್ದಾರಿಯನ್ನೂ ಕೊಡಲುಪಕ್ರಮಿಸಿರುವರು. ಅಂತಹ ಸ್ವಾತಂತ್ರ್ಯಗಳಿಗೆ ಯೋಗ್ಯರೆಂದೂ ಅಂತಹ ಜವಾಬ್ದಾರಿಗಳನ್ನು ನಿರ್ವಹಿಸ ಶಕ್ತರೆಂದೂ ಜನರು ತಮ್ಮ ಪ್ರತಿನಿಧಿಗಳ ಮೂಲಕ ಸಿದ್ಧಪಡಿಸಬೇಕು. ಅಂತಹ ಯೋಗ್ಯ ಗೃಹಸ್ಥರನ್ನು ಒದಗಿಸಲಿಕ್ಕೂ ಜನರು ಸಹಕಾರ ಐಕ್ಯಮತ್ಯ ರಾಷ್ಟ್ರೀಯಭಾವಗಳನ್ನು ಕಲಿಯುವಂತೆಯೂ ಮೇಲೆ ಸೂಚಿಸಿದಂಥಹ ಸಂಘಗಳು ಒಳ್ಳೇ ಸಾಧನಗಳಾಗುವವು

~~~~~~~~

ಮೋರ್ಲೆ ಪ್ರಭುಗಳ ಹೊಸ ಕೌನ್ಸಿಲು ಮಾರ್ಪಾಟಗಳು ಹೊಸ ಕೌನ್ಸಿಲುಗಳ ಮಾರ್ಪಾಟಗಳನ್ನು ಜ್ಯಾರಿಗೆ ತರಲಿಕ್ಕೆ ಅಗತ್ಯವಿರುವ ನಿಯಮಗಳು ಪ್ರಕಟಿಸಲ್ಪಟ್ಟು ಈ ಮಾರ್ಪಾಟಗಳು ಈ ತಿಂಗಳ ಕಳೆದ ಗಣೇಶ ತಾರೀಕಿನಿಂದ ಜಾರಿಗೆ ಬಂದಿರುವವು. ಕೌನ್ಸಿಲು ಮಾರ್ಪಾಟಗಳ ಕುರಿತು ನಮ್ಮ ಹಿಂದಿನ ಸಂಚಿಕೆಗಳಲ್ಲಿ ಸಂದರ್ಭಾನುಸಾರ ಒಂದೆರಡು ಸಲ ಪ್ರಸ್ತಾಪಿಸಿರುವೆವು ಹೆಚ್ಚುಕಡಿಮೆ ಮೂರು ವರುಷಗಳಿಂದ ಮಿಂಟೋ ಪ್ರಭುಗಳ ಆಲೋಚನಾ ಸಮಯಕ್ಕೆ ಪರ್ಯಾಲೋಚಿಸಲ್ಪಟ್ಟ ಗಣನೀಯವಾದ ಈಸವಿಯ ಕೌನ್ಸಿಲು ಚಿಕ್ಕ ಮಿಂಟೋ ಪ್ರಭುಗಳ ಅಧಿಕಾರಾವಧಿಯಲ್ಲಿಯೇ ಜಾರಿಗೆ ಬಂದಂತಾಯಿತು ರಾಷ್ಟ್ರದ ರಾಜ್ಯಭಾರದಲ್ಲಿ ಪ್ರಜೆಗಳಿಗೆ ಈ ಕೌನ್ಸಿಲ್ ಮಾರ್ಪಾಟಗಳಿಂದ ಮೊದಲಿನಕ್ಕಿಂತ ಹೆಚ್ಚಿನ ಹಕ್ಕುಸ್ವಾತಂತ್ರ್ಯಗಳು ಕಾಯಿತಃ ಪ್ರಾಪ್ತವಾದವು

ಎಲ್ಲಾ ನ್ಯಾಯವಿಧಾಯಕ ಸಭೆಗಳ ಮೆಂಬರುಗಳ ಸಂಖ್ಯೆಯೂ ಅವರ ಸ್ವಾತಂತ್ರ್ಯಗಳೂ ಅಧಿಕವಾಗಿರುವವು ಮೆಂಬರುಗಳು ಮೆಂಬರುತನಕ್ಕೆ ಶಿಫಾರಸು ಹೊಂದಿದನಂತರ ಇವರ ನೇಮಕವು ಸರಕಾರದವರಿಂದಾಗಬೇಕಿತ್ತು ಈಗ ಮೆಂಬರುಗಳನ್ನು ಪ್ರಜೆಗಳು ನ್ಯಾಯವಿಧಾಯಕ ಸಭೆಗಳಿಗೆ ಆರಿಸಿಕೊಳ್ಳುವ ಸ್ವಾತಂತ್ರ್ಯವು ದೊರಕಿರುವುದು ಬಜೇಟ್ ಎಂಬ ಆದಾಯವ್ಯಯದ ಆಲೋಚನೆಯಲ್ಲಿಯೂ ಇತ್ಯರ್ಥ ಅಥವಾ ಪ್ರಜಾಭಿವೃದ್ಧಿಯ ಇತರ ಏರ್ಪಾಡುಗಳ ವಿಷಯಗಳನ್ನು ಚರ್ಚಿಸುವ ಸ್ವಾತಂತ್ರ್ಯ ಮೊದಲಾದವುಗಳಲ್ಲಿ ಸಹಾ ಮೆಂಬರುಗಳಿಗೆ ಮೊದಲಿನಕ್ಕಿಂತ ಈಗ ಅಧಿಕ ಸೌಕರ್ಯ ಲಭಿಸಿರುವುದು ಮಹಮ್ಮದೀಯರಿಗೆ ಕೌನ್ಸಿಲುಗಳಿಗೆ ಮೆಂಬರುಗಳನ್ನು ಆರಿಸುವುದರಲ್ಲಿ ಇತರ ಪ್ರಜಾವರ್ಗಗಳಿಗಿಂತ ಹೆಚ್ಚು ಅಧಿಕಾರವು ಕೊಡಲ್ಪಟ್ಟಿರುವುದು ಕೌನ್ಸಿಲುಗಳಿಗೆ ಆರಿಸಲ್ಪಡುವ ಪ್ರಜಾಪ್ರತಿನಿಧಿಗಳು ಕೌನ್ಸಿಲಿನ ಮೆಂಬರುತನಕ್ಕೆ ಯೋಗ್ಯರು ಅಥವಾ ಅಯೋಗ್ಯರಲ್ಲವೆಂಬುದು ಹಾಗೂ ಸರ್ಕಾರಿಗೆ ವ್ಯಾವಹಾರಿಕ ಸಭೆಗಳಿಂದಲೇ ನಿರ್ಣಯಿಸಲ್ಪಡುವುದು ರಾಜ್ಯಭಾರದಿಂದ ತಳ್ಳಿ ಹಾಕಲ್ಪಟ್ಟವರೂ, ಆರು ತಿಂಗಳಿಗಿಂತ ಹೆಚ್ಚಿನ ಶಿಕ್ಷೆಗೊಳಗಾದ ಅಪರಾಧಗಳನ್ನು ಮಾಡಿ ಕ್ರಿಮಿನಲ್ ಕೋರ್ಟುಗಳಲ್ಲಿ ಶಿಕ್ಷೆ ಹೊಂದಿದವರೂ, ಅಥವಾ ಒಳ್ಳೇ ನಡತೆಗೋಸ್ಕರ ಜಾಮೀನು ಕೊಡಬೇಕೆಂಬ ಶಿಕ್ಷಾಪಾತ್ರಗಳೂ ಕೌನ್ಸಿಲ್ ಮೆಂಬರುತನಕ್ಕೆ ಅರ್ಹರಲ್ಲ ವಿವಾದವಾದ ಆರಿಸೋಣಗಳ ಇತ್ಯರ್ಥವು ಕಲೆಕ್ಟರ್ ಮೊದಲಾದ ಸರಕಾರಿ ಅಧಿಕಾರಿಗಳಿಂದಲೇ ಮಾಡಲ್ಪಡುವುದು

ಈ ನಿಯಮಗಳ ಸಂಕ್ಷೇಪ ವಿವರವನ್ನು ಅವುಗಳ ಪರಿಣಾಮದ ಕುರಿತು ನಮ್ಮ ಇನ್ನೊಂದು ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು

~~~~~~~~

ಅರೆಕಾಲು ಪಾನು	, ೨	,, ೭	,, ೧೨	,, ೧೮	,, ೩೫.

ಸೂಚನೆ — ಸಣ್ಣ ಪ್ರಕಟಣೆಗಳಿಗೂ ಒಂದು ವರುಷದ ಮೇಲಿನ ಪ್ರಕಟಣೆಗಳ ಕಂಟ್ರಾಕ್ಟು ದರಗಳಿಗೂ ಬೇರೆ ಎಲ್ಲಾ ಮಾಹಿತಿಗೂ ‘ಮೆನೇಜರ್, ಸ್ವದೇಶಾಭಿಮಾನಿ, ಮಂಗಳೂರು ದಕ್ಷಿಣ ಕನ್ನಡ’ ಎಂಬ ವಿಳಾಸಕ್ಕೆ ಬರಿಯುವುದು. ಎಲ್ಲಾ ಪ್ರಕಟಣೆಗಳ ಫೀಸನ್ನು ಮುಂದಾಗಿ ತೆರತಕ್ಕದ್ದು

ಸ್ವದೇಶಾಭಿಮಾನಿಯ ಚಂದಾ ನಿರ್ಣಯ:—ಟಪ್ಪಾಲು ಹಾಸಲು ಶೇರಿ ೧ ವರುಷಕ್ಕೆ ೨ ರೂ ೧೪. ಟಪ್ಪಾಲು ಹಾಸಲು ಇಲ್ಲದೆ ೧ ರೂ. ೪. ಮೂರು ಯಾ ಹೆಚ್ಚು ಪ್ರತಿಗಳನ್ನು ಒಂದೇ ವಿಳಾಸಕ್ಕೆ ತರಿಸುವವರಿಗೆ ಅಂಚೆ ವೆಚ್ಚ ಸೇರಿ ರೂ. ೧ ಆ. [illegible] ಟಪ್ಪಾಲು ಹಾಸಲು ಸಹಿತ ಅರ್ಧ ವರುಷಕ್ಕೆ ೧ ರೂ. ೧ ಆ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ

ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು

ಸ್ಟಿಫ್‌ಕವರ್ (ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)

ಹಾಫ್‌ಬೈಂಡ್, (ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)

ಫುಲ್‌ಬೈಂಡ್ (ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ವಿಭಾಗಗಳನ್ನು ಗುರುತಿಸಲ್ಪಟ್ಟವುಗಳು.

3" × 8¼", 3" × 5¼", 8¼" × 6½", 6½" × 4" ಪರಿಮಾಣದಲ್ಲಿಯು ಸಾವುಕಾರ, ಅಂಗಡಿಗಾರ, ವರ್ತಕ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಕಾಲದ ವರೆಗೆ ಬಾಳುವ ಫುಲ್‌ಸ್ಕೇಪ್ ಕಾಗದದಿಂದಲೇ ತಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಹಾಕಿದ ಹಾಳೆಗಳ ಎಲ್ಲಾ ಸೈಜುಗಳಲ್ಲಿ ಖಾಲಿ ಪುಸ್ತಕಗಳು ಸಹ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ಯಾದಿ ಕಳಿಸಿ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಿಮ್ಮ ದರಗಳ ದಯಮಾಡಿ ಬರಕೊಳ್ಳಿ.

ಮೆನೇಜರ್,
ಶಾರದಾ ಮುದ್ರಾಲಯ,
ಮಂಗಳೂರು.

*

ಹಣದ ಒಳ್ಳೇ ವಿನಿಯೋಗವು ಮಾಡುವುದು ಬೆಲೆಗೆ ತಕ್ಕ ಪದಾರ್ಥಗಳನ್ನು ಪಡೆಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾನೆ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ಸ್ಥಾಪಿತವಾಗಿ ೧೭ ವರುಷಗಳಾದವು.

ಪ್ರಥಮದಲ್ಲಿ ಔಷಧಿ ವ್ಯಾಪಾರಕ್ಕೋಸ್ಕರ ಸ್ಥಾಪಿಸಲ್ಪಟ್ಟು ಈಗ 1908ನೇ ಇಸವಿಯಿಂದ ಸ್ವಂತ ಶಾರದಾ ಛಾಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡೆಸುತ್ತಿರುವರು.

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

(ಆರಾರೋಟ್, ಬಾರ್ಲಿ, ಕೊರ್ನ್‌ಫ್ಲೋರ್, ಟೀ, ಕೋಕೋ, ಕಾಫಿ, ಬಿಸ್ಕಿಟ್ ಮತ್ತು ಅನೇಕ ನಮೂನೆಯ ಮಕ್ಕಳ ಆಹಾರಗಳಾದ ಮೇಲಿನ್ಸ್ ಫೂಡ್ ಮೊದಲಾದವುಗಳು)

ಡಾಕ್ಟರರ ಉಪಯೋಗಕ್ಕಾದ ಸಮಸ್ತ ಔಷಧಿಗಳು,

(ಕೊಡ್ಲಿವರ್ ಒಯಿಲ್, ಫೆಲ್ಲೋಸ್ ಸಿರಪ್, ಕೆಮಿಕಲ್ ಫುಡ್, ಇತ್ಯಾದಿ ಟಾನಿಕ್‌ಗಳು ಮೊದಲಾದವುಗಳು ಸಹಾ),

ಇವರ

ಔಷಧಾಲಯ

ದಲ್ಲಿ ದೊರಕುವವಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರದಲ್ಲಿ ಅನುಭವ ಶಾಲಿಗಳೂ ಆದ ಡಾಕ್ಟರರುಗಳಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು. ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರಕೊಂಡು ತಕ್ಕದಾದ ಔಷಧಿಗಳನ್ನು ಪಡೆಯಬಹುದು. (ರೋಗ ಪ್ರಕೃತಿಗಳನ್ನು ಬರಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ ಬಗ್ಗೆ ಒಂದಾಣೆ ಸ್ಟಾಂಪನ್ನು ಕಳುಹಿಸಬೇಕಾಗಿರುವುದು).

ಶಾರದಾ ಛಾಪಖಾನೆ

ಕೋರ್ಟಿನ ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸೈಜುಗಳಲ್ಲಿ ಅಚ್ಚು ಹಾಕುವುದು.
ಪುಸ್ತಕ ಬೈಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಬಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಮಂಗಳೂರು.

Mangalore Trading Association,
Mangalore, S. Canara

Printed by V. S. Kamath, at the Mangalore Trading Association's Sharada Press Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪು. 3. ಮಂಗಳೂರು, ತಾರೀಕು 10ನೇ ಶುಕ್ರವಾರ ಡಿಸೆಂಬರು 1909. ಸಂಚಿಕೆ 36.

William & Co. Fort Bombay.

ಅಮೃತಾಂಜನ.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಜೇನೆಯಾದ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಹೊಟ್ಟೆ ನೋವು, ಜಖಮು, ಉಳುಕು, ಘಾಯಿ. ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹಾ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಸಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿರುವ ಮುದ್ದಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪಾದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ. ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡುತ್ತದೆ. ಡಬ್ಬಿ ೧ರ ಕಿಮ್ಮತು 8 ಆಣೆ. ಆರು ಡಬ್ಬಿಗಳ ಕಿಮ್ಮತು ರೂ. 2—4—0.

ಕೇಶವರ್ಧಿನೀ ಎಣ್ಣೆ.

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು. ಮತ್ತು ಮೆದುಳನ್ನು ತಂಪುಮಾಡಿ ಮನಃಶುದ್ಧಿ ಕೊಡುವದು. ಬಾಟ್ಲಿ ೧ರ ಕಿಮ್ಮತು ೧೦ ಆ. ಮೂರು ಬಾಟ್ಲಿಗಳಿಗೆ ರೂ. 2—4—0.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

SAFE ★ EFFICACIOUS ★ SURE
WILLIAM & Co.
BOMBAY
PILLS ★ OINTMENTS ★ POWDERS

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಗಜಕರ್ಣವು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿ ರೂ. 4.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ರುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ, ಲೆಸಿತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಚೇಳು ಕಡಿತದ ಮೇಲೆ ಔಷಧ.

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ. ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆಗಳು	ರೂ.	0—8—0.
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0–10—0.
ಬಿಚ್ಚಿ ಮುಲಾಮು	,,	0—3—0.
ನೇತ್ರಾಂಜನ	,,	0—4—0.

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರೆದರೆ ರವಾನಿಸಲ್ಪಡುವದು.

ವಿಳಾಸ:— ವಿಲಿಯಮ್ ಮತ್ತು ಕಂಪನಿ, ಫೋರ್ಟ್ ಮುಂಬಯಿ. ಟೆಲಿಗ್ರಾಫ ವಿಳಾಸ:—"ಅಮೃತಾಂಜನ" ಮುಂಬಯಿ.

ವೈದ್ಯಸಾರ-ಸಂಗ್ರಹ (ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ೩-೦-೦.

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ.	೦-೬-೦.
ಉತ್ತರ ರಾಮಚರಿತ್ರೆ ಕಥೆ.	೧-೫-೦
ಟೀಕಾ ರಾಘವೇಂದ್ರ ಸ್ತೋತ್ರ	೦-೨-೦
ತ್ರೈಚಕಲ್ಪರೀತ್ಯಾ ಸೂರ್ಯ ನಮಸ್ಕಾರ.	೦-೨-೦.
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦-೨-೦
ಚಾಣಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦-[illegible]-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦-೨-೦
ಸ್ವರಸಹಿತವಾದ ನಮಕ ಚಮಕ	೦-೩-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ [illegible] ಸರಿಯಾಗಿ ಪ್ರಿಂಟುಮಾಡಿದೆ	೦-೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦-೩-೦
ಕೃಷ್ಣ ಕರ್ಣಾಮೃತ ಮೂಲ	೦-[illegible]-೦
ದೇವರ ಸೇವೆ ಹೊಸ ಪುಸ್ತಕ	೦-೩-೦
ಮುಕುಂದ ಮಾಲಾ (ಗೀತಾ)	೦-೩-೦
ಶಿವ ನಾಮಾ	೦-೦-೬
ಹನುಮನ್ನಾಮಾ	೦-೦-೬
ಹರಿ ನಾಮಾ	೦-೦-೬
ಯಾಚಕ ಪ್ರಯೋಗ	೦-೮-೦
ಬೃಹತ್ಕಥಾ ಮಂಜರಿ	೦-೮-೦
ಕೃಷ್ಣ ಬೋಧಾಮೃತ	೦-೬-೦

೦ ೪ ೦ ಕಮ್ಮಿ ವಿ ಪಿ ರವಾನೆ ಇಲ್ಲ.

ಕೆಟಲಾಗು ಬೇಕಾದರೆ [illegible] ಕಳಿಸಿಕೊಡಲ್ಪಡುವುದು.

ಟ್ರಾನ್ಸ — ಬಿ ಆದಿನಾರಾಯಣ ಶಾಸ್ತ್ರಿ,

[illegible] ಆಫೀಸ್, ಬೆಂಗಳೂರು

ಕುಂತಳ ಕೌಮುದಿ ತೈಲ.

[illegible] ಆಪರು [illegible] ತೈಲಗಳೆಲ್ಲಕ್ಕ ಇದೇ [illegible]

[illegible] ಆವರು [illegible] ಕೃಪೆ [illegible]

ಹರಿನ್ನ [illegible]—[illegible] ಆದರ ಮಕ್ಕಳು [illegible]

[illegible] — ಇದು ಅನೇಕ ವೈದ್ಯರು [illegible] ತೈಲದ [illegible] ಮಾಡಿದ್ದಾರೆ.

[illegible] ನಾನು ಉಪಯೋಗಿಸಿದ್ದೇನೆ [illegible] ಉಪಯೋಗಿಸಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆ ಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್ ಸಿ ಸೆನ್, ಎಲ್ ಎಮ್ ಎಸ್,

216 ಹ್ಯಾರಿಸನ್ ವಾಲಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ —"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು —ಎಲ್ ಎ. ಫೋರುವಾಲ್ ಎಂಡ್ ಕೊ, ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು;—ಮ॥ ರಾ॥ ರಾ॥ ಶ್ರೀ ಅಣ್ಣ ಕಾಮತರು, [illegible], ಮಂಗಳೂರು.

ರೇಶ್ಮೆ ಕೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು ಹಗಲ್ ಬತ್ತಿ ವಗೈರೆ ರಂಗುಗಳ ವಸ್ತ್ರಾ 1ಕ್ಕೆ ... ರೂ. 0—12—0.

ಸೈಜು ಇಂಚು 22×22 ವಸ್ತ್ರಾ 1ಕ್ಕೆ ... ... „ 1—1—0.

ಸೈಜು ಇಂಚು 15×15 ಬೀಳೀ ರೇಷ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರಾ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ $2\frac{1}{2}$ ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುಂ ರೇಷ್ಮೆ ವಸ್ತ್ರಾ 1ಕ್ಕೆ ರೂ. 12, 13, 14, 15, 16, 17. ಡಿಟೋ ಸಪ್ಪೆ ರೇಷ್ಮೆ ಬಾಬತು 1ಕ್ಕೆ ರೂ 6, 7, 8, 9, 10

ರೇಷ್ಮೆ ನಡುಕಟ್ಟುಗಳು.

ಕೆಂಪು, ಪೂವಾ, ಬ್ಲೂ, ರೋಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5-6 ಮೊಳ, ಅಗಲ 2 [illegible] ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ. 1-4-0 1-8-0, 1-10-0, 1-12-0, 2-0-0, 2-8-0.

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ, ಕಾಡಿಗ್ಯೆ, ಹಂಸ ಪಪ್ಪಳ, ಶೃಂಗಾರ ಪಪ್ಪಳ, ಜಗನ್ನಾರಟಿ ರಾಕಿಮುಂಗಿ, ಹಳದಿ ಮುಂಗಿ, ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ 1-6-0 1-12-0

ಡಿಟೋ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ 1-0-0, 1-2-0, 1-3-0. ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2-4-0, 2-8-0, 2-10-0

ಡಿಟೋ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ 1-4-0, 1-6-0, 1-8-0

ಕಲಾಬತ್ತು ರುದ್ರಾಕ್ಷಿ ಮತ್ತು ಗರಗಸ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2-10-0, 2-12-0, 3-0-0

ಡಿಟೋ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಪದರಿ ಎಲ್ಲಾ ರಂಗುಗಳ ಶೀರೆ ಕಣ 1ಕ್ಕೆ ರೂ 3-6-0, 3-8-0, 3-12-0

ಡಿಟೋ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಶೀರೆ ಕಣಾ 1ಕ್ಕೆ ರೂ 4-12-0, 5-0-0

ಹೆಚ್ ಸಂಕಪ್ಪಾ ಬವಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ವ್ಯವಸಾಯ ಕ್ರಮಬೋಧಿನಿ.

ಈ ಪುಸ್ತಕವು ವಿದ್ಯಾವಂತನಾದ ಪ್ರತಿ ರೈತನಲ್ಲಿಯೂ ಇರಬೇಕಾದ್ದು. ಜಮೀನ ದಾರರೆಲ್ಲರೂ ಇದನ್ನು ಅವಶ್ಯಕವಾಗಿ ಇಟ್ಟುಕೊಂಡಿರಬೇಕು. ಅತ್ಯಂತ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಮುದ್ರಣವೂ, ಕಾಗದವೂ, ಬೈಂಡೂ, ಅತ್ಯುತ್ತಮವಾದವುಗಳು. ಕ್ರಯ ಸ್ಟಿಫ್ ಬೈಂಡು ಪ್ರತಿ ಒಂದಕ್ಕೆ ೦-೧೨-೦; ಕ್ಯಾಲಿಕೋ ಬೈಂಡು, ೧-೦-೦; ಟಪ್ಪಾಲ್ ಹಾಸಲ ಪ್ರತ್ಯೇಕ.

ಪುಸ್ತಕಗಳು ಸಿಕ್ಕುವ ಸ್ಥಳ:—

ಹೆಚ್. ಯನ್. ರಾವ್ ಬ್ರದರ್ಸ್.
262 ಚಿಕ್ಕಪೇಟೆ, ಬೆಂಗಳೂರು

ಗಿಡಗಳು, ಬೀಜಗಳು, ಹಣ್ಣು-ಹುವ್ವ, ಮತ್ತು [illegible]

ಮಾವಿನ ಗಿಡಗಳು ವಗೈರೆ ಸಕಲ ವಿಧವಾದ ಹಣ್ಣಿನ [illegible] ಇಂಗ್ಲೀಷ್ ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗೈರೆ ಸಮಸ್ತ [illegible]ವಾದ ಬೀಜಗಳು, ಶೀಬು, ಕಿತ್ತಳೆ ವಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, [illegible] ಬೇಕಾದವರು ಬರದು ತರಿಸಿಕೊಳ್ಳಬಹುದು. ಅಪೇಕ್ಷಿಸಿದರೆ [illegible].

[illegible] ಅಂಡ್ ಸನ್,
[illegible] ಮೆನ್,
ಲಾಲ್‌ಬಾಗ್ [illegible] ರಸ್ತೆ, ಬೆಂಗಳೂರು [illegible].

DIARIES FOR 1910.

1910ನೇ ಇಸವಿಯ ಡೈರಿಗಳು.

ವಕೀಲರಿಗೂ, ಪಿರ್‍ಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟು ಒಂಕು ಸ್ಟ್ಯಾಪ್ ಕ್ರಯ ೬ ಆಣೆ

ಸಣ್ಣ ಸ್ಟ್ಯಾಪ್ ,, ೪ ಆಣೆ

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಶನ್ ದೊರಕುವದು

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯುವದು

ವಿಳಾಸ:—

ಮ್ಯಾನೇಜರ್,

ಶಾರದಾ ಪ್ರೆಸ್ ಮಂಗಳೂರು, ದ. ಕ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 10ನೇ ದಶಂಬರ 1909

ಕೀರ್ತಿಶೇಷ ರಮೇಶ ಚಂದ್ರದತ್ತರವರು.

ಭರತಮಾತೆಯ ಸುಪುತ್ರ ಶ್ರೀಯುತ ರಮೇಶ ಚಂದ್ರದತ್ತ [illegible] ಅವರು ಕಳೆದ ನವಂಬ್ರ ೩೦ನೇಗೆ ಪರವನ್ನೈದಿದರೆಂದು ತಿಳಿಸಲು [illegible] ತಮ್ಮ ಸರ್ವತೋಮುಖ ಸಾಮರ್ಥ್ಯದಿಂದ ಇವರು ಜನರ ಹಿತಕ್ಕಾಗಿ [illegible] ಪ್ರವರ್ತಿಸಿದರು. ತಮ್ಮ ಅಸಾಧಾರಣ ಯೋಗ್ಯತೆಗೆ [illegible] ದತ್ತರು [illegible] ಸರಕಾರದ ವಿಶ್ವಾಸಕ್ಕೂ ಪ್ರಜೆಗಳ ಪ್ರೀತಿಗೂ ಪಾತ್ರರಾ[illegible] ಸರಕಾರದವರು ಇವರನ್ನು ಡಿಸೆಂಟ್ರಲ್ಯಾಜೇಶನ್ ಕಮಿಶನಿನ ಮೆಂಬರನ್ನಾಗಿ [illegible] ತಮ್ಮ ವಿಶ್ವಾಸವನ್ನು ತೋರಿದರು, ಜನರು ಇವರನ್ನು ಕೊಂಗ್ರೆಸ್ ಪ್ರೆಸಿಡೆಂಟರನ್ನಾಗಿ [illegible] ತಮ್ಮ ಪ್ರೀತಿಯನ್ನು ಪ್ರದರ್ಶಿಸಿದರು

ರಮೇಶ ಚಂದ್ರದತ್ತರು ೧೮೪೮ನೇ ಇಸವಿ [illegible] ಕಲ್ಕತ್ತೆಯಲ್ಲಿ ಖ್ಯಾತ ಕುಟುಂಬದಲ್ಲಿ ಜನ್ಮವೆತ್ತಿದರು ಇವರ ತಂದೆಯವರು ಆ ಕಾಲದ ಕುಂಪಣಿ ಸರಕಾರದಲ್ಲಿ ಡಿಪ್ಯುಟಿ ಕಲೆಕ್ಟರರಾಗಿದ್ದರು ಅಜ್ಜಂದಿರು ಸಂಸ್ಕೃತ ಪಂಡಿತರೂ ಸ್ಮಾಲ್‌ಕಾಜ್ ಕೋರ್ಟಿನ ಜಡ್ಜಿಯರೂ ಆಗಿ ಹೆಸರುಗೊಂಡಿದ್ದರು ದತ್ತರು ಕೊಲೇಜಿನಲ್ಲಿ ಜಾಣರೆಂದು ಅನ್ನಿಸಿಕೊಂಡರೂ ಡಿಗ್ರಿಪಡೆಯುವ ಮುಂಚೆಯೇ ವಿಲಾಯತಿಗೆ ತೆರಳಿ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತನ್ನ ಇಪ್ಪತ್ತನೇ ವರುಷದಲ್ಲಿ [illegible] ವಿಂದ ತೇರ್ಗಡೆಪಟ್ಟು ಇಂಡ್ಯಾಕ್ಕೆ ಅಸಿಸ್ಟಾಂಟ್ ಕಲೆಕ್ಟರರಾಗಿ [illegible] ಮನೆಯವರು ತಿಳಿದರೆ ಅಡ್ಡಿಮಾಡುವರೆಂಬ ಭೀತಿಯಿಂದ ಇವರೂ ಇವರ ಸಹಪಾಠಿಗಳಾದ ಬಿಹಾರಿ ಲಾಲಗುಪ್ತರವರೂ ಸುದ್ದಿಮಾಡದೆ ಇನ್ನೊಬ್ಬ ಖ್ಯಾತ ವಿದ್ಯಾರ್ಥಿ ಸುರೇಂದ್ರನಾಥ ಬೆನ್ನರ್ಜಿಯೊಡನೆ ವಿಲಾಯತಿಗೆ ಹೋದರು ಈ ಮೂವರಲ್ಲಿ ಕಡೆ ವರೆಗೆ ಆಪ್ತಸ್ನೇಹವು ಉಳಿಯಿತು ಗುಪ್ತರವರು ಹ್ಯಾಕೋರ್ಟಿನ ಜಡ್ಜಿಯಾದರು. ಬೆನ್ನರ್ಜಿಯವರ ಖ್ಯಾತಿಯು ವಾಚಕರಿಗೆ ತಿಳಿದ ಸಂಗತಿಯೇ

೧೮೭೧ರಲ್ಲಿ ಸರಕಾರ ಕೆಲಸವನ್ನು ಸೇರಿ ಬಂಗಾಳದ ಅನೇಕ ಜಿಲ್ಲೆಗಳಲ್ಲಿ ಅಸಿಸ್ಟಂಟ್ ಕಲೆಕ್ಟರ, ಕಲೆಕ್ಟರ, ಕಮಿಶನರ ವರ್ಗ[illegible] ಪದವಿಗಳಲ್ಲಿ ಕೆಲಸನೋಡಿದರು ಕ್ಷಾಮ, ಕೊಟಿರಾ[illegible] ದೊಂ[illegible]ಗಳ [illegible] ತಲ್ಲಣಿಸುವ ಜಿಲ್ಲೆಗಳಿಗೆ ಇವರನ್ನು ಕಳುಹಿಸಿದ್ದಲ್ಲಿ ಅಂತಹ ಸಂಕಟಗಳನ್ನು ನಿವಾರಿಸಿ ತಮ್ಮ ಸಾಮರ್ಥ್ಯವನ್ನು ಸ್ಥಾಪಿಸಿದರು. ಕಲೆಕ್ಟರ [illegible] ಮೊದಲು ಪಡೆದ ದೇಶೀಯರು ಇವರೇ. ಇವರ ಯೋಗ್ಯತೆಯನ್ನು ನೋಡಿ ಇವರಷ್ಟು ಯೋಗ್ಯರಲ್ಲದ [illegible] ಯೂರೋಪಿಯು ಖದೀಮ ಉದ್ಯೋಗಸ್ಥನನ್ನು ಹಿಂದಿಟ್ಟು ಸರಕಾರದವರು ಇವರನ್ನೇ ಬರ್ದವಾನ್ ಡಿವಿಜನಿನ ಕಮಿಶನರನ್ನಾಗಿ ನೇಮಿಸಿದರು. ದತ್ತರ ಸಾಮರ್ಥ್ಯಕ್ಕೆ ಆನಂದಿಸಿ ಆ ಕಾಲದ ವೈಸರಾಯ ರಿಪನ್ ಪ್ರಭುಗಳು ಇವರನ್ನು ಕರೆಸಿ, ಹೀಗೆ ಹೇಳಿದ್ದೇನೆಂದರೆ, "ನಾನು ಇಂಡ್ಯಾವನ್ನು ಬಿಟ್ಟು ತೆರಳುವ ಮೊದಲು ನಿಮ್ಮನ್ನು ಕಂಡು ನಿಮ್ಮ ಪರಿಚಯವನ್ನು ಘಳಿಸಬೇಕೆಂಬ ಉದ್ದಿಶ್ಯದಿಂದ ಕರೆಕಳುಹಿಸಿದೆನು. ನೀವು ಮಾಡಿದ [illegible] ಕೆಲಸವು ಇಂಗ್ಲಾಂಡಿನ ಜನರ ತಿಳುವಳಿಕೆಗೆ ಬರಬೇಕು; ಯಾಕೆಂದರೆ, ಭಾರತೀಯರು ಉಚ್ಚ ಪದವಿಗೆ ಯೋಗ್ಯರೆಂಬದು ನಿಸ್ಸಂಶಯವಾಗಿ ಸ್ಥಾಪಿತವಾಗುವದು. ಬಂಗಾಳ ಮೊದಲಾದ ಸೀಮೆಗಳಲ್ಲಿರುವ "ಕಮಿಶನರ್" ಎಂಬ ಉದ್ಯೋಗಸ್ಥರು ಹಲವು ಕಲೆಕ್ಟರರ ಮೇಲು ಉದ್ಯೋಗಸ್ಥರಾಗಿರುವರು. ಇಂಥಾ ಪದವಿಯು ದೇಶೀಯರಲ್ಲಿ ದತ್ತರಿಗೇನೆ ಮೊದಲು ಪ್ರಾಪ್ತವಾಯಿತು ಮೊದಲಿಂದ ದತ್ತರು ರೈತರ ಹಿತಕಾರಿಗಳಾಗಿದ್ದರು ಇವರ ಪ್ರಯತ್ನಗಳ ದೆಸೆಯಿಂದಲೇ ಬಂಗಾಳ ಟೆನನ್ಸಿ ಆಕ್ಟ [illegible] ಕಾಯಿದೆ ಉಂಟಾಗಿ ಬಂಗಾಳದ ರೈತರಿಗೆ ತಾವು ಜಮೀನುದಾರರಿಗೆ ಕೊಡಬೇಕಾ[illegible] ತಮ್ಮ ಹಕ್ಕಿನ ಕುರಿತು ರಿಯಾಯತಿ ದೊರಕಿತು ದತ್ತರು [illegible] ನೇಮಿಸಲ್ಪಟ್ಟರು

ಇಷ್ಟು [illegible] ದತ್ತರ [illegible] ಸುಮ್ಮನಿರಲಿಲ್ಲ [illegible] ಬಂಗಾಳ [illegible] ಪ್ರೇರಣೆ [illegible] ವಿಶೇಷ [illegible] ಇವರ ಯೋಗ್ಯತೆಯ [illegible]

[illegible] ಇಷ್ಟು ಸರಕಾರ ನೌಕರಿಯಲ್ಲಿದ್ದರೆ ಪಟ್ಟಿನ ದಿನ ಕೀರ್ತಿ ಪದವಿಗಳನ್ನು ಹೊಂದಬಹುದಾಗಿದ್ದರೂ ವಿದ್ಯಾವ್ಯಾಸಂಗಕ್ಕೂ ಪ್ರಜಾಸೇವೆಗೂ ತಮ್ಮ ಆಯುಸ್ಸನ್ನು ಅರ್ಪಿಸುವ ಉದಾತ್ತ ಉದ್ದಿಶ್ಯದಿಂದ ಪ್ರೇರಿತರಾಗಿ ೧೮೯೭ರಲ್ಲಿ [illegible] ವರುಷ ಕೆಲಸ ನೋಡಿದ ನಂತರ ಪೆನ್ಶನ್ ಹೊಂದಿದರು

[illegible] ವರುಷ ದತ್ತರು ಇಂಗ್ಲಾಂಡಿನಲ್ಲಿ ಇದ್ದು ಆಗ್ಯಾಗ್ಯೆ ಹಿಂದುಸ್ತಾನಕ್ಕೆ ಬರುತ್ತಿದ್ದರು ಇಂಡ್ಯಾದ ವೃದ್ಧಪಿತಾಮಹ ದಾದಾಭಾಯಿ ನವರೋಜಿ ಮತ್ತು ಶ್ರೀಯುತ ಉಮೇಶ [illegible] ಬೆನ್ನರ್ಜಿಯವರೊಡನೆ ಇವರು ಇಂಗ್ಲಾಂಡಿನಲ್ಲಿ ಹಿಂದುಸ್ತಾನ [illegible] ದತ್ತರು ಲಂಡನ್ ಕೊಲೇಜಿನಲ್ಲಿ ಅಧ್ಯಾಪಕರಾ[illegible] ಇದೇ ಕಾಲದಲ್ಲಿ ಇವರು ರಾಮಾಯಣ ಮಹಾಭಾರತಗಳನ್ನು [illegible] ಇಂಗ್ಲಿಷು ಪದ್ಯರೂಪದಲ್ಲಿ [illegible] ಪರಿವರ್ತಿಸಿದರು ೧೮[illegible] ಲಖನೌ [illegible]ದಲ್ಲಿ ಜರಗಿದ ಕೊಂಗ್ರೆಸು ಸಭೆಗೆ ದತ್ತರು ಅಧ್ಯಕ್ಷರಾದರು. ಅಲ್ಲಿ ಮಾಡಿದ ಭಾಷಣದಲ್ಲಿ [illegible] ಭೂಕಂದಾಯದ [illegible] ತಮ್ಮ ರಾಜನೀತಿಯನ್ನು ಮಾರ್ಪಡಿಸುವದು ಅವಶ್ಯವೆಂದು ಸ್ಪಷ್ಟಗೊಳಿಸಿದರು ಈ ವಿಷಯ [illegible] ಆ ಕಾಲದ ವೈಸರಾಯ ಕರ್ಜನ್ ಪ್ರಭುಗಳಿಗೂ [illegible] ದತ್ತರು (Open letters to lord Curzon) ಕರ್ಜನ್ ಪ್ರಭುಗಳಿಗೆ ಪ್ರಕಟಿತ ಪತ್ರಗಳು ಎಂಬ ಪುಸ್ತಕವನ್ನು ಕರ್ಜನ್ ಪ್ರಭುಗಳು (Land Revenue policy of the poor of India) ಇಂಡ್ಯಾ ಸರಕಾರದ ಭೂಕಂದಾಯದ ರಾಜನೀತಿ ಎಂಬ ಪುಸ್ತಕವನ್ನೂ ಪ್ರಕಟಗೊಳಿಸಿದರು ತದನಂತರ ದತ್ತರು ರಚಿಸಿದ ಹಿಂದುಸ್ಥಾನದ ಸಾಂಪತ್ತಿಕ ಚರಿತ್ರೆಯಲ್ಲಿ ಈ ವಿಷಯವೂ ಹಿಂದುಸ್ಥಾನದ ಕೈಗಾರಿಕೆಗಳ ವಿಷಯವೂ ಚನ್ನಾಗಿ ಚರ್ಚಿಸಿಯದೆ ರೈತರ ತೆರಿಗೆಯ ಭಾರವನ್ನು ತಗ್ಗಿಸಬೇಕು, ದೇಶೀಯರನ್ನು ಉನ್ನತಸ್ಥಾನಗಳಿಗೆ ನೇಮಿಸಬೇಕು ಮತ್ತು ಜುಡಿಶಿಯಲ್ ಎಕ್ಸ್‌ಕ್ಯೂಟಿವ್ ಇಲಾಖೆಗಳನ್ನು ಪ್ರತ್ಯೇಕಿಸಬೇಕು [illegible] ಮೂರು ವಿಷಯಗಳನ್ನು ದತ್ತರು ಛಲದಿಂದ ವಾದಿಸಿದರು

೧೯೦೪ರಲ್ಲಿ ದತ್ತರನ್ನು ಬರೋಡೆ ಮಹಾರಾಜರು ತಮ್ಮ ರೆವಿನ್ಯೂ ಮಂತ್ರಿಯನ್ನಾಗಿ ನೇಮಿಸಿದರು ಈ ಮೂರು ವರುಷಗಳೊಳಗೆ ರಾಜ್ಯಭಾರದಲ್ಲಿ ಅನೇಕ ಸುಧಾರಣೆಗಳಾದವು ವಿಲೇಜ್ ಬೋರ್ಡು, ತಾಲೂಕು ಬೋರ್ಡು, ಡಿಸ್ಟ್ರಿಕ್ಟ್ ಬೋರ್ಡುಗಳು ಸ್ಥಾಪಿತವಾದವು ಜುಡಿಶಿಯಲ್ ಎಕ್ಸ್‌ಕ್ಯೂಟಿವ್ ಇಲಾಖೆಗಳು ಪ್ರತ್ಯೇಕಿಸಲ್ಪಟ್ಟವು ಇನ್ನೂ ಅನೇಕ ವಿಧಗಳಲ್ಲಿ ಪ್ರಜೆಗಳ ಹಿತಕಾರಿಯಾದ ಏರ್ಪಾಡುಗಳಿಂದ ದತ್ತರು ದೀನ ಬಂಧುವೆಂದು ("ದರಿದ್ರಕಾದೋಸ್ತ") ಹೆಸರು ಹೊಂದಿದ್ದರು. ೧೯೦೭ರಲ್ಲಿ ಬ್ರಿಟಿಷ್ ಚಕ್ರವರ್ತಿಯವರು ಇವರನ್ನು ಡಿಸೆಂಟ್ರಾಲ್ಯಾಜೇಶನ್ ಕಮಿಶನಿನ ಮೆಂಬರರನ್ನಾಗಿ ನೇಮಿಸಿದರು ಸುಮಾರು ಎರಡು ವರುಷ ಈ ಕೆಲಸದಲ್ಲಿದ್ದು ಕಳೆದ ಮಾರ್ಚ [illegible]ಯಲ್ಲಿ ಇಂಡಿಯಾಕ್ಕೆ ತಿರುಗಿದೊಡನೆ ದತ್ತರನ್ನು ಬರೋಡೆ ಮಹಾರಾಜರು ತಮ್ಮ ಪ್ರಧಾನ ಮಂತ್ರಿಯಾಗಿ ನೇಮಿಸಿದರು. ಆದರೆ ಈ ಕೆಲಸವನ್ನು ವಹಿಸಿದ ಸ್ವಲ್ಪ ಕಾಲದಲ್ಲೇ ದುರ್ದೈವವಶಾತ್ ಕಾಲವನ್ನೈದಿದರು.

ತಮ್ಮ ಜೀವನಕಾಲದಲ್ಲಿ ಶ್ರೀಯುತ ರಮೇಶ ಚಂದ್ರದತ್ತರು ವಿವಿಧ ಇಲಾಖೆಗಳಲ್ಲಿ ಮಾಡಿದ ಕೆಲಸವನ್ನು ನೋಡಿ ಎಂಥವರೂ ವಿಸ್ಮಯಪಡಬೇಕು. ಅವರು ಬರೆದ ಗ್ರಂಥಗಳಿಂದಲೂ ತಮ್ಮ ಸ್ವತಃ ಚರತೆಯಿಂದಲೂ ಲೋಕದ ಕೃತಜ್ಞತೆಗೆ ಪಾತ್ರರಾಗಿ ಸದಾ ಜನರ ಸ್ಮರಣೆಯಲ್ಲಿರುವರು. ಜೀವಕಾಲದಲ್ಲಿ ಇಂತಹ ರೀತಿಯಲ್ಲಿ ಇಷ್ಟು ಕೆಲಸ ಮಾಡಿದವನ ಜೀವನವು ಧನ್ಯವೇ ಸರಿ, ಪವಿತ್ರವೇ ಸರಿ.

ಟ್ರಾನ್ಸ್‌ವಾಲ ಭಾರತೀಯರು ಹಿಂದೂಸ್ಥಾನದ ಹಲವು ಕಡೆಗಳಲ್ಲಿ ಪ್ರಜಾವರ್ಗಗಳು ಸಭೆ ಸೇರಿ ತಮ್ಮ ಬಂಧು ಜನರಾದ ಟ್ರಾನ್ಸ್‌ವಾಲ ಭಾರತೀಯರು ಟ್ರಾನ್ಸ್‌ವಾಲಿನಲ್ಲಿ ವರ್ಣಭೇದ ಮತ್ತು ವ್ಯಾಪಾರಮಾತ್ಸರ್ಯ ವಿಪರ್ಯದಿಂದ ಪಡೆಯುವ ಕಷ್ಟಪರಂಪರೆಗಳನ್ನು ಪರಿಹರಿಸಬೇಕೆಂದು ಇಂಡಿಯಾ ಸರಕಾರದವರ ಮುಖಾಂತರವೂ ಇನ್ನು ಹಲವು ವಿಧಾನಗಳಲ್ಲಿಯೂ ಕೇಳಿಕೊಂಡರೂ ಇವರ ಎಲ್ಲಾ ಪ್ರಯತ್ನಗಳು ಇಷ್ಟರ ತನಕ ನಿರರ್ಥಕವಾಗಿರುವವು. ಈ ದೀನರ ಸಂಖ್ಯೆಯು ತಾವು ಪಡೆಯುತ್ತಿರುವ ಅಸಂಖ್ಯಾತ ಕಷ್ಟಗಳಿಂದ ೧೫೦೦೦ದಿಂದ ೬೦೦೦ಕ್ಕೆ ಇಳಿದಿರುವದು. ಆದರೂ ಬ್ರಿಟಿಷ್ ಸಾಮ್ರಾಜ್ಯ ಗವರ್ನಮೆಂಟಿನವರು ಟ್ರಾನ್ಸ್‌ವಾಲ ಭಾರತೀಯರ ದೀನಸ್ಥಿತಿಯು ಕ್ರಮೇಣ ಮಾಜುವದೆಂದು ಕೋರುತ್ತಿರುವರು ವಿನಹ ಇವರನ್ನು ಈ ಕಷ್ಟಗಳಿಂದ ಪಾರಗಾಣಿಸುವ ಯಾವ ಪ್ರಯತ್ನವೂ ನಡೆದಿದ್ದಿಲ್ಲವೆಂತ ತೋರುತ್ತದೆ. ಟ್ರಾನ್ಸ್‌ವಾಲಿನಿಂದ ಲಂಡನಿಗೆ ಒಂದು ತಮ್ಮ ಸಂಕಷ್ಟಗಳನ್ನು ಬ್ರಿಟಿಷ್ ಜನರ ಮುಂದೆ ಇಡಬೇಕೆಂಬ ಮೇ ಗಂಧಿಯವರ ಪ್ರಯತ್ನಗಳು ಇಂಗ್ಲೆಂಡಿನಲ್ಲಿ ವಿಶೇಷ ಫಲಕಾರಿಯಾದವೆಂಬಂತೆ ಕಂಡುಬರುವದಿಲ್ಲ. ಇಂಗ್ಲೆಂಡಿನಿಂದ ಮಿ ಗಂಧಿಯವರು ತಿರುಗಿ ಟ್ರಾನ್ಸ್‌ವಾಲಿಗೆ ಹೋಗಿರುವರು. ಇನ್ನು ಎಷ್ಟು ದಿವಸಗಳಲ್ಲಿ ಇವರಿಗೆ ನೆಲೆಯ ವಾಸವು ಪ್ರಾಪ್ತಿಸುವದೋ?

ಪೌರ್ವಾತ್ಯರನ್ನು ಟ್ರಾನ್ಸ್‌ವಾಲಿನಿಂದ ಸಮೂಲವಾಗಿ ಹೊರಡಿಸಲು ಟ್ರಾನ್ಸ್‌ವಾಲ ಸರಕಾರದವರು ನಿರ್ಮಿಸಿದ ಕಾನೂನುಗಳನ್ನು ಅನೇಕ ಸಾರೆ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿರುವೆವು. ೧೯೦೭ನೇ ಇಸವಿ ಟ್ರಾನ್ಸ್‌ವಾಲ ಸರಕಾರದವರು ಮಂಜೂರು ಮಾಡಿದ ರಿಜಿಸ್ಟ್ರೇಶನ್ ಆಕ್ಟು ಪೌರ್ವಾತ್ಯರಾದ ಭಾರತೀಯರನ್ನು ಪಶುವರ್ಗಕ್ಕೆ ಕೂಡಿಸಿರುವದು. ಈ ಆಕ್ಟನ್ನು ಹಿಂದೆಗೆಯಿಸಬೇಕೆಂದು ಟ್ರಾನ್ಸ್‌ವಾಲಿನ ಜನರಲ್ ಸ್ಮಟ್ಸರವರು ಜನರಲ್ [illegible] ಸ್ಮಟ್ಸರವರು [illegible] ತಾವು ಕೊಟ್ಟ ಮಾತು ತಪ್ಪಿದ [illegible] ಸ್ಮಟ್ಸರವರ ಈ ಭರವಸೆಯ ಮೇಲೆ ಭಾರತೀಯರು [illegible] ಮಾಡಿಕೊಂಡದ್ದನ್ನು ನೋಡಿ [illegible] ಇಸವಿಯ ಇನ್ನೊಂದು ಕಾನೂನು [illegible] ಪೌರ್ವಾತ್ಯರನ್ನು ಹಿಂಸೆಪಡಿಸುವ ಆಕ್ಟನ್ನು [illegible] ಇನ್ನೊಂದು ಆಕ್ಟು ರಚಿಸಲ್ಪಟ್ಟಿತು. ಇದು ಭಾರತೀಯರ ಪ್ರಥಮ ಸಂಕಷ್ಟ.

ಟ್ರಾನ್ಸ್‌ವಾಲ ಭಾರತೀಯರ ಸಮಾಜ ಸ್ಥಿತಿಯನ್ನು [illegible] ಸ್ಥಿತಿಯಲ್ಲಿರಗೊಡಿಸುವದೆ ಹಿಂದೂಸ್ಥಾನದಿಂದ ಪರಂಪರೆ ಉಚ್ಚ ವೃತ್ತಿಯ ಕೆಲವು ಜನ ವಿದ್ವಾಂಸರನ್ನು ಬರಮಾಡಬೇಕೆಂದು ಭಾರತೀಯರು ಕೇಳಿಕೊಂಡಿದ್ದರು. ಬ್ರಿಟಿಷ್ ಪಾರ್ಲಿಮೆಂಟಿನ ಪ್ರಭು ಸದನದಲ್ಲಿ ಬ್ರಿಟಿಷ್ ವಸಾಹತುಗಳ ಮಂತ್ರಿಯವರಾದ ಕ್ರ್ಯೂ ಪ್ರಭುಗಳು ಭಾರತೀಯರ ಈ ಸಲಹೆಯನ್ನು ಟ್ರಾನ್ಸ್‌ವಾಲ್ ಸರಕಾರವು ಸಮ್ಮತಿಸಲಿಕ್ಕೆ ಸಾಕೆಂದಾಗಿ ಕೋರಿರುವರು. ಇದು ಭಾರತೀಯರು ನಿವೃತ್ತಿ ಕೇಳುವ ಎರಡನೇ ವಿಷಯವಾಗಿರುವದು.

ಟ್ರಾನ್ಸ್‌ವಾಲ್ ಭಾರತೀಯರಿಗೆ ಟ್ರಾನ್ಸ್‌ವಾಲಿನಲ್ಲಿ ರಾಜಕೀಯ ಹಕ್ಕು ಸ್ವಾತಂತ್ರ್ಯಗಳು ಬಿಟ್ಟು ಸಾಮಾಜಿಕ ಹಕ್ಕು ಸ್ವಾತಂತ್ರಗಳು ಸಹ ಇರುವದಿಲ್ಲ. ಇದು ಭಾರತೀಯರು ನಿವೃತ್ತಿ ಕೇಳುತ್ತಿರುವ ಮೂರನೇ ವಿಷಯವಾಗಿರುತ್ತದೆ. ಟ್ರಾನ್ಸ್‌ವಾಲಿನಲ್ಲಿ ಭಾರತೀಯರು ಯಾವ ತರಗತಿಯವರಾದರೂ ದೇಶವನ್ನು ಪ್ರವೇಶಿಸಲು ಕೂಡದ ಬಹಿಷ್ಕೃತರಾಗಿರುವರಲ್ಲದೆ ಇತರ ಎಲ್ಲಾ ವಿಷಯಗಳಲ್ಲಿ ಅತಿ ನೀಚರಾದ ಸಮಾಜದ ಅರಿಷ್ಟಗಳೋಪಾದಿಯಲ್ಲಿರುವವರೊಂದಿಗೆ ಇವರನ್ನು ಸೇರಿಸಿರುವರು. ಈ ವಿಷಯದಲ್ಲಿ ಭಾರತೀಯರಿಗೆ ನಿವೃತ್ತಿಯು ದೊರಕದೆಂದು ಟ್ರಾನ್ಸ್‌ವಾಲ ಸರಕಾರದವರು ಹೇಳಿರುವರು.

ಈ ಎಲ್ಲಾ ಸಂಕಷ್ಟಗಳಿಂದ ತಮಗೆ ನಿವಾರಣೆ ದೊರಕಬೇಕೆಂತ ಮಾತ್ರ ಟ್ರಾನ್ಸ್‌ವಾಲ ಭಾರತೀಯರು ಸಾಧಿಸುವದಲ್ಲ. ಭಾರತೀಯರು ಭೂಲೋಕದ ಇತರ ಜನಾಂಗಗಳಿಗೆ ಸಮಾನರು ಎಂಬೀ ಅಭಿಮಾನವನ್ನು ಕಾಪಾಡಿಕೊಳ್ಳಲಿಕ್ಕೆ ಟ್ರಾನ್ಸ್‌ವಾಲ ಸರಕಾರದವರ ಇಂತಹ ಭಾರತೀಯ ಅಭಿಮಾನವನ್ನು ಕಿತ್ತು ಬಿಸಾಡುವ ಕಾನೂನುಗಳನ್ನು ಉಲ್ಲಂಘಿಸಿ, ಆದರಿಂದ ಪ್ರಾಪ್ತವಾಗುವ ಸಂಕಷ್ಟಗಳನ್ನು ಶೂರತನದಿಂದ ಅನುಭವಿಸುತ್ತಿರುವರು. ಅಂದರೆ ನಮ್ಮೆಲ್ಲವರ ಅಭಿಮಾನಗೋಸುಗ ಟ್ರಾನ್ಸ್‌ವಾಲಿನಲ್ಲಿಯ ಪಾರ್ಸಿ, ಮಹಮ್ಮದ, ಹಿಂದೂ ಮೊದಲಾದ ಜಾತಿಗಳು ಏಕೀಭವಿಸಿ ಕುಟುಂಬಗಳೊಡನೆ ಸಜಾ ಶಿಕ್ಷೆಯನ್ನೂ ಇನ್ನು ವಿವರಿಸಲಶಕ್ಯವಾದ ಬೂರರ ಕಾಟಗಳನ್ನೂ ಎದುರಾಡಿಸುವರು. ಪ್ರಕೃತ ಕಳೆದ ೩೦೦೦ ಮಂದಿಗಳಲ್ಲಿ ಈ ರೀತಿ ಮಾತೃದೇಶಾಭಿಮಾನವನ್ನು ಕಾಪಾಡುವದಕ್ಕೋಸ್ಕರ ಕರೆಯುವನು ಸಾಯುವ ತನಕ ಟ್ರಾನ್ಸ್‌ವಾಲ ಸರಕಾರದವರು [illegible] ಶಿಕ್ಷೆಯನ್ನು ಅನುಭವಿಸುವೆವೆಂಬ ಮನೋಧೈರ್ಯವನ್ನು ಟ್ರಾನ್ಸ್‌ವಾಲ ಭಾರತೀಯ ನಾಯಕರಾದ ಮಿ! ಗಂಧಿಯವರು ಇತ್ತಲಾಗೆ ವರ್ತಮಾನಪತ್ರಗಳಲ್ಲಿ ವ್ಯಕ್ತಪಡಿಸುವರು. ಆಗೀಂದಾಗ್ಯೆ ಟ್ರಾನ್ಸ್‌ವಾಲಿನಿಂದ ಭಾರತೀಯರು ತಂಡತಂಡಗಳಾಗಿ ಸೆರೆಮನೆಯನ್ನು ಪ್ರವೇಶಿಸಿ ಅಲ್ಲಿ ಇವರು ಅನುಭವಿಸುವ ಕಷ್ಟಗಳನ್ನೂ, ಗಡಿಪಾರು ಮಾಡಲ್ಪಡುವುದರಿಂದ ಸತಿಸುತರ ವಿಯೋಗ ಪ್ರಲಾಪವನ್ನೂ ಗತಿವಿಹೀನತೆಯನ್ನೂ, ವೃತ್ತಿಗಳನ್ನನುಸರಿಸಲು ಉಪಾಯವಿಲ್ಲದೆ ಹೊಟ್ಟೆಗಿಲ್ಲದೆ ಉಪವಾಸ ಬೀಳುವುದನ್ನೂ ಈ ಎಲ್ಲಾ ವಿವರವುಳ್ಳ ನಮ್ಮ ಬಂಧುಗಳು ಪ್ರತಿನಿತ್ಯವೂ ಅನುಭವಿಸುವ ಭಾಗ್ಯವನ್ನು ಕೇಳಿ ಹಿಂದೂಸ್ಥಾನದಲ್ಲಿ ಇವರ ಬೆಂಬಲಕ್ಕಾಗಿ ಯಾವ ಸಾಧನಗಳು ನಡೆಯುವವು?

ಟ್ರಾನ್ಸ್‌ವಾಲ ಭಾರತೀಯರ ಪರವಾಗಿ ಅಲ್ಲಲ್ಲಿ ಸಭೆಕೂಡಿರುವವು. ಹೀಗೆ ಸಭೆಕೂಡಿ ನಿರ್ಣಯಗಳನ್ನು ಮಂಜೂರುಮಾಡುವುದು ಸಾಲದೆಂದು ತಿಳಿದು ತಮ್ಮ ಸಹಾನುಭೂತಿ ಕಾರ್ಯರೂಪಗೊಳಿಸಬೇಕೆಂತ ಮುಂಬಯಿಯ ರತನ್ ಟಾಟಾರವರು ತಿಳಿಗೊಂಡು ಈ ಬಗ್ಗೆ ಬೇಕಾದ ದ್ರವ್ಯನಿಧಿಯನ್ನು ಕಲ್ಪಿಸಬೇಕೆಂತ ರೂ ೨೫,೦೦೦ ವನ್ನು ಚಂದಾರೂಪವಾಗಿ ಕೊಟ್ಟಿರುವರು. ಜಹಾಂಗೀರ್ ಬೊಮಾಂಜಿ ಪೆಟಿಟರವರು ಈ ನಿಧಿಗೆ ರೂ ೧೦೦೦೦ವನ್ನು ಕೊಟ್ಟಿರುವರು. ಮದ್ರಾಸಿನಲ್ಲಿ ಹಲವು ಪ್ರಮುಖ ಗೃಹಸ್ಥರು ಈ ಬಗ್ಗೆ ಒಂದು ಸಂಘವನ್ನು ನಿರ್ಮಿಸಿ ದಕ್ಷಿಣ ಹಿಂದುಸ್ಥಾನದ ಗೃಹಸ್ಥರೆಲ್ಲರಿಗೂ ದ್ರವ್ಯಸಹಾಯದ ಬಗ್ಗೆ ವಿಜ್ಞಾಪನಾ ಪತ್ರಗಳನ್ನು ಬರಕೊಂಡಿರುವರು. ಹಲವರು ಈ ಸಂಘದವರಿಗೆ ದ್ರವ್ಯಸಹಾಯವನ್ನು ಕೊಟ್ಟಿರುವರು. ದೇಶಭಾಂದವರೆಲ್ಲರೂ ಉದಾರ ಚಿತ್ತದಿಂದ ಈ ಸಂದರ್ಭದಲ್ಲಿ ದ್ರವ್ಯಸಹಾಯವನ್ನು ಕೊಟ್ಟು ಟ್ರಾನ್ಸ್‌ವಾಲ ಬಂಧುಗಳ ಕಷ್ಟವಿಮೋಚನೆಯನ್ನು ಸಾಧಿಸಬೇಕಾಗಿರುವುದು. ಇಂಡಿಯಾ ಸರಕಾರದವರೂ ತಮ್ಮ ಪ್ರಜೆಗಳ ಈ ಪ್ರಯತ್ನಗಳಲ್ಲಿ ನೆರವಾಗಬೇಕು. ಭಾರತೀಯ ಪ್ರಕೃತ ಸಮಾಜ ಸ್ಥಿತಿಯು ನಮ್ಮ ಸರಕಾರದವರಿಗೆ ವಿದಿತವಾಗಿರುವುದು. ಸಮಾಜವು ಇನ್ನೂ ಅವ್ಯವಸ್ಥಿತ ಸ್ಥಿತಿಯಲ್ಲಿರುವುದು. ಇಲ್ಲದಿದ್ದರೆ ಈಚೆಗೆ ೧೫೦೦೦ ವಿರುವ ಟ್ರಾನ್ಸ್‌ವಾಲ ಭಾರತೀಯರ ಸಂಖ್ಯೆಯನ್ನು ೬೦೦೦ ದಷ್ಟು ಕಡಿಮೆಯಾಗುವರೆ ಹಿಂದುಸ್ಥಾನದಲ್ಲಿರುವ ಭಾರತೀಯರು ಬಿಡುತ್ತಿದ್ದರೇ? ಸಮಾಜದಲ್ಲಿ ರಾಷ್ಟ್ರೀಯ ಐಕ್ಯವು ಇತ್ತಲಾಗೆ ತಲೆದೋರಿರುವದಾದರೂ ಅನೇಕ ಶತಮಾನಗಳಿಂದ ಅಂಗವಿಚ್ಛಿನ್ನವಾಗಿರುವ ಈ ನಮ್ಮ ಸಮಾಜದ ಒಂದು ಅಂಗಕ್ಕೆ ಬೇನೆ ಹತ್ತಿದರೆ ಅದು ಮತ್ತೊಂದು ಅಂಗದಲ್ಲಿ ಮಂದಪ್ರಾಣವಾಗ ಬೇನೆಯುಳ್ಳ ಅಂಗವು ಪೂರ್ಣವಾಗಿ ನಾಶವಾಗುವ ಸಂದರ್ಭವು ಬರಬೇಕಾದಿತೋ ಎಂಬ ಭೀತಿಪಡಬೇಕಾಗುತ್ತದೆ. ಪ್ರಜಾಕ್ಷೇಮಚಿಂತಕರಾದ ಸರಕಾರದವರೂ ಪ್ರಜಾಮುಂದಾಳುಗಳೂ ಒಂದಾಗಿ ಟ್ರಾನ್ಸ್‌ವಾಲ ಭಾರತೀಯರ ಸಂಕಷ್ಟಗಳನ್ನು ಕೊನೆಗಾಣಿಸುವಂತೆ ಪ್ರಯತ್ನಿಸಬೇಕು. ಪ್ರಜಾಮುಂದಾಳುಗಳು ಹಿಂದೂಸ್ಥಾನದ ಪ್ರತಿ ಪಟ್ಟಣದಲ್ಲಿಯೂ ಟ್ರಾನ್ಸ್‌ವಾಲ ಭಾರತೀಯರ ದೀನಸ್ಥಿತಿಯು ಪ್ರಜೆಗಳಿಗೆ ತಿಳಿಯುವಂತೆ ಹೇಳಿ ಪ್ರತಿ ಪಟ್ಟಣ ನಿವಾಸಿಕರೂ ಟ್ರಾನ್ಸ್‌ವಾಲಿನವರಿಗೆ ನೆರವಾಗುವಂತೆ ಪ್ರಯತ್ನಿಸಬೇಕಾಗಿ ವಿಜ್ಞಾಪಿಸುತ್ತೇವೆ.

ಶ್ರೀಕೃಷ್ಣ ಚರಿತ್ರ

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು)

ಆರನೆಯ ಪ್ರಕರಣ,

ಮಹಾಭಾರತ

ಅನಂತರ ಕೆಲಹೊತ್ತು ಸುಮ್ಮನಿದ್ದು ಉತ್ತರೆಯು ಮರಳಿ ಹೀಗೆಂದಳು —

"ಈ ಕುರುಕ್ಷೇತ್ರದಲ್ಲಿ ನನ್ನಂತೆಯೇ ಇನ್ನೆಷ್ಟು ಮಂದಿ ಉತ್ತರೆಯರ ಎದೆಗಳು ಒಡೆದು ಹೋಗುವವೋ ಹೇಳಲಾಗದು"

ಶೈಲಜೆ—"ಯುದ್ಧವು ಮುಗಿಯಿತು".

"ಮುಗಿಯಿತೇ?" ಎಂದು ಉತ್ತರೆಯು ಆಶ್ಚರ್ಯದಿಂದ ಕೇಳಿದಳು.

ಶೈಲಜೆ— "ಮುಗಿಯಿತು. ಜಗತ್ತಿನ ಮಹಾಜ್ವಾಲೆಯು ನಂದಿಹೋಯಿತು. ಕ್ಷತ್ರಿಯವನವನ್ನು ದಗ್ಧಮಾಡಿ ಅಧರ್ಮರೂಪಿಯಾದ ಅಗ್ನಿಯು ತಣ್ಣಗಾಯಿತು. ಅರ್ಜುನನ ವೀರ್ಯಾನಲವು ಕರುಣಾಜಲದಿಂದ ಸಿಂಚಿತವಾದುದರಿಂದ ಅದು ಭುಗ್ಗನೇ ಉರಿಯುತ್ತಿದ್ದಿಲ್ಲ, ಆದರೆ ಕೌರವರು ಅಭಿಮನ್ಯುವನ್ನು ಕೊಂದಮೇಲೆ ಆತನು ಜ್ವಾಲಾಮುಖೀಪರ್ವತದಂತೆ ಉಗ್ರರೂಪವನ್ನು ಧರಿಸಿ ಆಕಾಶಮಂಡಲವನ್ನು ಮುತ್ತಿದನು, ಮತ್ತು ದ್ರೋಣಾಚಾರ್ಯರನ್ನು ವಧಿಸಿದನು. ಇನ್ನೆರಡು ದಿನಗಳಲ್ಲಿ ಕರ್ಣನನ್ನು ಕೊಂದನು. ಕರ್ಣನು ಯುದ್ಧಗೈಯಲಿಲ್ಲವು, ಆದರೆ ತಾನೆಸಗಿದ ಶಿಶುಹತ್ಯೆಯ ಪಾತಕದ ದೆಸೆಯಿಂದ ಪ್ರಾಣವನ್ನು ತೊರೆದನು. ಒಂದು ದಿವಸದ ಯುದ್ಧದಲ್ಲಿ ಶಲ್ಯನು

ಮತ್ತು ದುರ್ಯೋಧನನು ಮಡಿದರೂ ಭಾರತವನ್ನು [illegible] ದಲ್ಲಿ ಅಧರ್ಮದ್ವೇಷವು ಕಳೆಗುಂದಿತು. [illegible] ವರ್ಮಾ ಮತ್ತು ಅಶ್ವತ್ಥಾಮ್ನ ಈ ಮೂರು ಮಂದಿ [illegible] ಉಳಿದುಕೊಂಡಿರುವರು."

"ಪಾಂಡವರು ಮತ್ತು ಶ್ರೀನಾರಾಯಣನೋ?"

"ಎಲ್ಲರೂ ಸುಕ್ಷೇಮಿಗಳೇ. ಕಡೆಯಲ್ಲಿ ಧರ್ಮವೇ ಜಯಿಸಿತು"

"ಸುಭದ್ರಾಮಾತೆಯೋ?"

"ಆಕೆಯು ಒಂದು ದೇವಿ [illegible] ಆಕೆಗೆ ಹೇಗೆ ತಾನೇ ಅಮಂಗಲವಾದೀತು?"

"ಸುಲೋಚನೆಯೋ?"

ಶೈಲಜೆಯು ಸ್ತಬ್ಧಳಾದಳು, ಉತ್ತರೆಯು ಶೋಕದಿಂದ ವ್ಯಾಕುಲಳಾಗಿ ಹೀಗೆಂದಳು—"ಅವ್ವಾ, ನೀನಾದರೂ ಈ ಉತ್ತರೆಯನ್ನು ಬಿಟ್ಟುಹೋದೆಯಾ? ನನ್ನ ಪಂಚಪ್ರಾಣಗಳು ನನ್ನ ಪ್ರಾಣನಾಥನಲ್ಲಿಯೇ ಇದ್ದುವು. ನನ್ನ ತಂದೆ ಮತ್ತು ಸಹೋದರರಾದರೂ ಕುಶಲರಾಗಿರುವರೇ?"

ಪುನಃ ಶೈಲಜೆಯು ನೀರವಳಾದಳು. ಉತ್ತರೆಯ ಕಣ್ಣುಗಳಲ್ಲಿ ಕಂಬನಿಗಳು ಕಂಡುಬರಲಿಲ್ಲ, ಮತ್ತು ಆಕೆಯ ಚರ್ಯೆಯಲ್ಲಿ ಸಹಾ ಭೇದವೇನೂ ತೋರಲಿಲ್ಲ. ಕಾಳಸರ್ಪವು ಒಂದುಬಾರಿ ರೋಷದಿಂದ ಕಚ್ಚಿದಮೇಲೆ ಮರಣವು ನಿಶ್ಚಯವು. ಇನ್ನೂ ಕಚ್ಚಿದರೆ ಅದರಿಂದ ಸಂಕಷ್ಟವು ಹೆಚ್ಚಾದರೆ ಏನಾಗುವುದುಂಟೇ?

ಉತ್ತರೆ—"ಹಾಗಾದರೆ ಉತ್ತರೆ ತವರು ಮನೆ [illegible] ಹೋಯಿತು. ಅಪ್ಪಾ, ಅಣ್ಣಾ, ನಿಮಗೆ ಉತ್ತರೆಯಲ್ಲಿ ಇಷ್ಟು ಪ್ರೇಮವಿದ್ದು ನೀವು ಏಕಾಏಕಿಯಾಗಿ ನಿಷ್ಠುರರಾಗಿ ನನ್ನನ್ನು ಒಬ್ಬಳನ್ನೇ ಇಲ್ಲಿ ತೊರೆದು ನೀವು ಮಾತ್ರ ಹೋಗಿಬಿಟ್ಟಿರಾ? ಎಲ್ಲರೂ ಹೋಗಿಬಿಟ್ಟರು, ನಾನೊಬ್ಬಳೇ ಉಳಿದಿರುವೆನು—ಆದರೂ ನನ್ನ ಈ ಪಾಳು ಹೃದಯವು ಸೀಳಿಹೋಗದೇ? ಆರುದಿನಗಳಿಗ ನಾನು ಮೈಮರೆದುಬಿದ್ದೆನು—ಆದರೂ ಸಾಯಲಾರೆನೇ?"

ಶೈಲಜೆ—"ಮಗಳೇ ಯಾರು ತಾನೇ ನಿನ್ನ ಜೀವ ಒಕೆಯನ್ನು ಹಿಡಿದಿದ್ದರು? ಆದರೆ ಶ್ರೀಕೃಷ್ಣನು ಯೋಗಸ್ಥನಿದ್ದು ನಿನಗೆ ಪುನರ್ಜನ್ಮವನ್ನಿತ್ತನು"

ಉತ್ತರೆ—"ದಯಾಮಯನಾದ ಶ್ರೀಕೃಷ್ಣನು ಈ ಅನಾಥಳಾದ ಕನ್ಯೆಯನ್ನು ಬದುಕಿಸಿ ಬಾಡಿಹೋದ ಲತೆಯನ್ನು ಅಗ್ನಿಯಲ್ಲಿ ಏತಕ್ಕೆ ಬಿಸುಟನು?"

"ಮಗಳೇ, ನೀನು ಕುರುಕುಲದಲಕ್ಷ್ಮಿಯು. ಕುರುಕುಲಕ್ಕೆ ಆಧಾರಭೂತವಾಗತಕ್ಕ ಒಂದೇಒಂದು ಅಂಕುರವನ್ನು ನೀನು ನಿನ್ನ ಗರ್ಭದಲ್ಲಿ ಧರಿಸಿರುವೆ. ನಿನ್ನ ಮಗುವಾದರೋ ಸಮಗ್ರಭಾರತವರ್ಷದ [illegible] ಸಾಮ್ರಾಜ್ಯವಾಗುವನು, ಧರ್ಮರಾಜ್ಯದ ಆಧಾರಸ್ತಂಭವಾಗುವನು, ಮತ್ತು [illegible] ನು ಧರ್ಮರಾಜ್ಯದ ಭಾಗ್ಯಲಕ್ಷ್ಮಿಯಾಗುವೆ."

"ಏನು? ನನ್ನ ಮೈದುನರೈವರೂ ಕುಶಲರಾಗಿರುವರಲ್ಲವೇ?"

ಶೈಲಜೆ—"ಪಾಂಡವರೈವರು, ಸಾತ್ಯಕಿಯು, ಮತ್ತು ಶ್ರೀಕೃಷ್ಣನು ಇವರಲ್ಲದೆ ಬೇರೆ ಯಾವಾತನೂ ಉಳಿದಿರುವುದಿಲ್ಲವು. ದ್ರೋಣಪುತ್ರನಾದ ಅಶ್ವತ್ಥಾಮನು ನಿನ್ನೆಯ ನಿಶೀಥಕಾಲದಲ್ಲಿ ಯಾರೂ ಅರಿಯದಂತೆ ಕಳ್ಳನೋಪಾದಿಯಲ್ಲಿ ಶಿಬಿರದಲ್ಲಿ ಒಳನುಗ್ಗಿ ನಿದ್ರೆಹೋಗುತ್ತಿರುವ ಮಕ್ಕಳೈವರನ್ನು ಕಡಿದುಬಿಟ್ಟನು. ಅಧರ್ಮದ ಕಡೇಯ ಅಂಕವು ಈರೀತಿಯಿಂದ ನಿನ್ನೆರಾತ್ರಿ ಮುಗಿಯಿತು[B]— ಅಧರ್ಮನಾಟಕವು ನಿರವಶೇಷವಾಗಿ ಅಡಿಹೋಗಿ ಸಮಾಪ್ತವಾಗಿ, ಈಗ ತೆರೆಯುಬಿದ್ದಿರುವುದು. ಈ ಅಧರ್ಮ ರಾಕ್ಷಸಿಣಿಯದೆಸೆಯಿಂದ ಜಗತ್ತನ್ನು ಸಂರಕ್ಷಿಸುವುದಕ್ಕಾಗಿ ನಾರಾಯಣನು ನಿನಗೆ ದಿವ್ಯ ಪುತ್ರನನ್ನು ಕೊಟ್ಟಿರುವನು. ನಿನ್ನ ಶೋಕವು ಅತಿದಾರುಣವೆಂಬುದು ಬಿಟಿವೇ, ಆದರೆ ಈಗ ನಾವು ಶೋಕಿಸಿದರೂ ಉತ್ತರೇ, ಮುಂದೆ ನಿನ್ನ ಶೋಕದಿಂದಲೇ ಜಗತ್ತಿಗೆ ಸುಖೋದಯವುಂಟಾದೀತು. ನೀನು ಮೆಲ್ಲಮೆಲ್ಲನೆ ಪತ್ನೀಪ್ರೇಮವನ್ನು ಮರೆತುಬಿಡುತ್ತ, ನಿನ್ನ ಹೃದಯವನ್ನು ಪುತ್ರಪ್ರೇಮದಿಂದ ತುಂಬಿಸು."

ಉತ್ತರೆಯು ವಿಸ್ಮಿತಳಾಗಿ ಹೆಚ್ಚುಹೊತ್ತು ಸುಮ್ಮನಿದ್ದಳು. ತರುವಾಯ ಆಕೆಯು ಮೆಲ್ಲಮೆಲ್ಲನೆ ಏಳುತ್ತ—"ನಡೆ, ನಾವು ಹೋಗೋಣ" ಎಂದಳು.

"ಎಲ್ಲಿಗೆ?"

"ಉತ್ತರೆಗೆ ಈಗ ಬೇರೆಸ್ಥಾನವಿಲ್ಲವು. ಈಗ ಆಕೆಗೆ ಇರುವ ಸ್ಥಾನವೊಂದೇ—ಅದು ಅವಳ ಪ್ರಾಣನಾಥನ ಚಿತೆಯು."

ಶೈಲಜೆಯ ಎದೆನಡುಗಿತು. ಕಂಬನಿಯುಂಬಿದಮೊಗವನ್ನೆತ್ತಿ ಆಕೆ ಹೀಗೆಂದಳು—"ಪತಿಯಚಿತೆಯಲ್ಲಿ ಪ್ರಾಣವನ್ನು [illegible] ಕ್ಕಿಂತ ಸ್ತ್ರೀಯರಿಗೆ ಶ್ರೇಷ್ಠವಾದ ಧರ್ಮವು ಬೇರೆಯಿರುವುದಿಲ್ಲವೇ?"

"ಇದೆ" ಎಂದು ಸ್ಥಿರವಾದಕಂಠದಿಂದ ಉತ್ತರೆಯು ಉತ್ತರವನ್ನು ಕೊಡುತ್ತ ಎದ್ದುನಿಂದಳು; "ಇದೆ, ಪತಿಪ್ರಾದದ ಧ್ವಜವನ್ನು ಕಿರಿಸ್ಸುನಲ್ಲಿಟ್ಟು ಕೊಂಡು ನಾವು ನಾರೀಧರ್ಮದ ವ್ರತವನ್ನು ಪಾಲನಮಾಡೋಣ."

ಆಗ ಅವರಿಬ್ಬರೂ ಏನೂ ಮಾತನಾಡದೆ ಆ ಶಿಬಿರದಿಂದ ಹೊರಗೆ ಬಂದರು. ಅಲ್ಲಿ ಅವರ ಕಣ್ಣೆದುರಿನಲ್ಲಿ ತೋರಿಬಂದ ಪ್ರಕೃತಿಯ ಆಲೋಕವು (Sight) ಅತ್ಯಂತ

ಕೀರ್ತಿಶೇಷ ಅಮ್ಮೆಂಬಳ
ಸುಬ್ರಾಯ ಪೈಗಳವರ
ಭಾವ ಚಿತ್ರಗಳು
ವಿಕ್ರಯಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6 ಕ್ಕೆ.

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು, ದ. ಕ.

THE NEWZEALAND INSURANCE CO, Ltd,

ದಿ. ನ್ಯೂಝೀಲೆಂಡ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮೆರೀನ್ ಡಿಪಾರ್ಟ್‌ಮೆಂಟ್

(Marine Department)

ಮಂಗಳೂರು ಏಜಂಟರು — ದಿ ದತ್ತಾರಾಮ ಎಂಡ್ ಕೊ

ಪ್ರಿಟೊ ಬಿಲ್ಡಿಂಗ್ಸ್ ಮಂಗಳೂರು

ಈ ಕಂಪೆನಿಯಲ್ಲಿ ಬಹಳ ಸುಲಭವಾದ ದರಗಳಿಂದ ಸಮುದ್ರಮಾರ್ಗವಾಗಿ ಹೋಗುವ ವ್ಯಾಪಾರದ ಮೇಲೆ ವಿಮೆ ಉತ್ತರದಾಯಿತ್ವ ವಹಿಸುವರು.

ಭಯಾನಕವಾಗಿದ್ದಿತು. ಕುರುಕ್ಷೇತ್ರದಲ್ಲಿ ಸರ್ವತಃ ಲೆಕ್ಕವಿಲ್ಲದ ಚಿತೆಗಳು ಉರಿಯುತ್ತಿದ್ದವು. ದಂಡೆಯಲ್ಲಿ ಉರಿಯುವ ಚಿತೆಗಳ ಪ್ರತಿಬಿಂಬವು ನದಿಯಲ್ಲಿ ಬೀಳುತ್ತಿರುವುದರಿಂದ ನದಿಯಲ್ಲಿಯೂ ಅಗಣಿತವಾದ ಚಿತೆಗಳು ಉರಿಯುತ್ತಿರುವವೆಂಬಂತೆ ತೋರುತ್ತಿದ್ದಿತು. ಒಂದು ಭಯಂಕರವಾದ ಮಹಾ ಚಿತೆಯಲ್ಲಿ ಅನಾಥರಾದ ಸೈನಿಕರೆಲ್ಲರ ಶವಗಳು ದಹಿಸುತ್ತಲಿದ್ದವು. ಮಹಾನರಮೇಧ ಯಜ್ಞವು ಸಮಾಪ್ತವಾಯಿತು. ಹೇಗೆ ಹೇಗೆ ರಾತ್ರಿಯು ಮುಗಿಯುತ್ತ ಬರುತ್ತಿದ್ದಿತೋ, ಹಾಗೆಯೇ ಅಗ್ನಿಯು ನಂದಿ ನಂದಿ ಬರುತ್ತಿದ್ದಿತು. ಈ ಘೋರ ಸ್ಮಶಾನದ ಹೊಗೆಯು ಆಕಾಶವನ್ನು ಮುಸುಕಿ ತುಂಬಿದ್ದಿತು, ಅಲ್ಲಿ ನಕ್ಷತ್ರ ಒಂದಾದರೂ ಕಣ್ಣಿಗೆ ಬೀಳದು—ಹೆಚ್ಚೇನು, ನಕ್ಷತ್ರಗಳೆಲ್ಲವೂ ಭೂಮಿಯಲ್ಲಿ ಉರುಳಿಬಿದ್ದು ಚಿತಾರೂಪದಿಂದ ಹೊಳೆಯುತ್ತಿದ್ದವು. ಕೇಶಪಾಶಗಳು ಬಿಚ್ಚಿ ಅಸ್ತ್ಯವ್ಯಸ್ತವಾಗಿ ಚದರಿಹೋಗಿರುವ ಮತ್ತು ಅಸಹ್ಯವಾದ ಶೋಕದಿಂದ ವ್ಯಾಕುಲರಾಗಿ ವಿಕೃತರಾಗಿರುವ ಅನೇಕ ವೀರ ನಾರಿಯರು ಗತಾಸುಗಳಾದ ತಮ್ಮ ಪತಿ, ಪುತ್ರ, ಪಿತಾ ಮತ್ತು ಬಂಧುಗಳನ್ನು ಎಲ್ಲೆಲ್ಲಿಯೂ ಹುಡುಕುತ್ತಿದ್ದರು. ಶಕುನಿ (ಒಂದು ಹಕ್ಕಿ) ಮತ್ತು ಶೃಗಾಲ (ನರಿ) ಮೊದಲಾದವುಗಳು ತಮ್ಮ ವಿಕಟವಾದ ಕೂಗುಗಳಿಂದ— ಪ್ರಶಾಂತವಾದೆಡೆಯಲ್ಲಿ ಅತ್ಯಧಿಕವಾಗಿ ವಿಕಟ—ರಾತ್ರಿಯ ಸ್ತಬ್ಧತೆಯನ್ನು ಭಗ್ನಮಾಡುತ್ತ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡ್ಯಾಡುತ್ತಲಿದ್ದವು.

ಉತ್ತರೆಯ ಹೃದಯವು ನಡನಡುಗಿತು. ಶೋಕವಿಹ್ವಲಳಾಗಿ ಆಕೆಯು ಶೈಲಜೆಯ ಕೊರಳಿಗೆ ಗಂಟು ಬಿದ್ದಳು, ಮತ್ತು ಆಕೆಯ ವಕ್ಷಸ್ಥಳದಲ್ಲಿ ತನ್ನ ಮೋರೆಯನ್ನು ಅವಿತಿಟ್ಟು—"ಈ ಚಿತೆಗಳಾದರೋ ಮೆಲ್ಲಮೆಲ್ಲನೆ ನಂದಿಬರುತ್ತಿವೆ. ನನ್ನ ಹೃದಯದಲ್ಲಿ ಉರಿಯುತ್ತಿರುವ ಚಿತೆಯು ಇದೇ ರೀತಿಯಲ್ಲಿ ನಂದೀತೇನು? ನನ್ನ ಶೋಕದ ಕತ್ತಲೆಯು ಹೀಗೆಯೇ ಮುಗಿದೀತೇನು?"—ಎಂದಳು.

ಶೈಲಜೆ—"ನೋಡು, ಭಾರತ ಮಾತೆಯ ವಕ್ಷಸ್ಥಳದಲ್ಲಿ ಲೆಕ್ಕವಿಲ್ಲದ ಚಿತೆಗಳು ಉರಿಯುತ್ತಿರುವುದನ್ನು ನೋಡು. ಈ ಚಿತೆಗಳ ಜ್ವಾಲೆಯಲ್ಲಿ ಅಧರ್ಮವು ಬೆಂದು ಬೂದಿಯಾಗಿ ನವೀನ ಧರ್ಮದ ಉಷಃಕಾಲವು ಆನಂದದಿಂದ ಮೂಡುತ್ತಿರುವುದನ್ನು ನೋಡು. ನಿನ್ನ ನನ್ನ ಪ್ರಾಣಗಳನ್ನು, ಜಗತ್ತಿನ ಪ್ರಾಣಗಳನ್ನು ಆನಂದಿತ ಮಾಡುವುದಕ್ಕಾಗಿ ಶ್ರೀಕೃಷ್ಣ ನಾಮದ ಧ್ವನಿಯು ಏಳುತ್ತಲಿರುವುದನ್ನು ನೋಡು."

(A ಮತ್ತು B ಸೂಚಿಸುವ ಟಿಪ್ಪಣಿಯು ಕೆಳಗೆ ಸೂಚಿಸಲ್ಪಟ್ಟಿದೆ.)

ಮುಂದೆಸಾಗುವುದು.

ಸೌದೆಯು ಬೆಂಕಿಯು ಬದಲಾಗಿ [illegible] ಹಿಂದೂ ದೇಶದ ಎಲ್ಲಾ ಕಡೆಗಳಲ್ಲಿಯೂ [illegible] ಜೀವನವು ಅತಿ [illegible] ಸೌದೆಯು ಸಹಾ [illegible] ಬಂದು ಅದರ ಕ್ರಯವು [illegible] ಅನುಭವಸಿದ್ಧವಾಗಿರುವುದು. [illegible]

ಮೊದಲಾದವುಗಳನ್ನು ತಯ್ಯಾರಿಸಿ ಸೌದೆಯಾಗಿ ಉಪಯೋಗಿಸಲ್ಪಡುವುದರಿಂದ ಗದ್ದೆಗಳಿಗೆ ಅತ್ಯಾವಶ್ಯಕವಾದ ಶೆಗಣಿಯು ದೊರಕುವುದು ದುರ್ಲಭವಾಗಿಬಂದಿದೆ. ಲಾಹೋರಿನಲ್ಲಿ ಈ ತಿಂಗಳಲ್ಲಿ ತೆರೆಯಲ್ಪಡುವ ವಸ್ತುಪ್ರದರ್ಶನದ ಕಮಿಟಿಯವರು ಜನರ ಈ ಸಂಕಷ್ಟವನ್ನು ನೀಗುವರೆ ಸೌದೆಯ ಖರ್ಚು ಅನೇಕ್ಸು ಕಡಿಮೆ ತಗ್ಗಲುವ ಒಂದು ಒಲೆಯನ್ನು ರಚಿಸಿದವರಿಗೆ ಇನಾಮನ್ನು ಕೊಡುವದಾಗಿ ಪ್ರಕಟಿಸಿರುವರು. ಇಂಥಾ ಒಲೆಯನ್ನು ರಚಿಸಿದರೆ ಮನೆಕೆಲಸಗಳಿಗೆ ಮಾತ್ರ ಬೇಕಾದ ಸೌದೆಯ ಖರ್ಚು ಕಡಿಮೆಯಾಗುವುದು. ಆದರೆ ಇತ್ತಲಾಗೆ ಅಲ್ಮೋರದ ಪಂಡಿತ ಶ್ರೀಕೃಷ್ಣಜೋಷಿಯವರು "ಭಾನುತಾಪ" ಎಂಬ ಸೌದೆಯ ಬೆಂಕಿಯು ಉಪಯೋಗಿಸಲ್ಪಡುವಲ್ಲಿ ಸೂರ್ಯಕಿರಣಗಳನ್ನು ಉಪಯೋಗಿಸುವ ಒಂದು ಯಂತ್ರವನ್ನು ರಚಿಸಿರುವರು. ಯಂತ್ರದ ರಚನೆಯಾದರೋ ಬಹಳ ಸರಳವಾಗಿರುವದು. ಸೂರ್ಯಕಿರಣಗಳು ಪ್ರತಿಬಿಂಬಿಸಲ್ಪಟ್ಟು ಒಟ್ಟುಕೂಡಿ ಒಂದೇ ಕೇಂದ್ರಸ್ಥಾನದಲ್ಲಿ ಬಂದತರುವಂತೆ ಕೆಲವು ಕನ್ನಡಿಗಳನ್ನು ಒಟ್ಟು ಜೋಡಿಸಿರುವ ಒಂದು ಪರವಿರುವುದು. ಈ ಪರವು ಸೂರ್ಯಚಲನೆಯನ್ನನುಸರಿಸಿ ನಡೆದು ಕಿರಣಗಳೆಲ್ಲವೂ ದಿವಸದ ಎಲ್ಲಾ ಸಮಯಗಳಲ್ಲಿಯೂ ಒಂದೇಸ್ಥಾನದಲ್ಲಿ ಪ್ರತಿಬಿಂಬಿಸಲ್ಪಡುವಂತೆ ಗಡಿಯಾರಿನ ಯಂತ್ರದೋಪಾದಿಯ ಯಂತ್ರರಚನೆಯು ಇರುತ್ತಿರುವುದು. ಕಿರಣಗಳು ಬಂದತರುವ ಕೇಂದ್ರಸ್ಥಾನದಲ್ಲಿ ಬಿಸಿ ... ಸೌದೆಯ ಬೆಂಕಿಗಿಂತಲೂ ... ಕಿರಣಗಳನ್ನು ಉಪಯೋಗಿಸಿ ಕೊಳ್ಳಬಹುದು. ಕಿರಣಗಳ ಬಿಸಿಯು ... ಕನ್ನಡಿಗಳು ... ರುವ ಪರಗಳನ್ನು ಉಪಯೋಗಿಸಬೇಕಾಗಿರುವುದು.

ಈ ಯಂತ್ರವು ಒಂದು ... ಕೃತ್ತಿ ... ಸ್ಥಾನದಲ್ಲಿ ದೇಶ ... ಈ ಯಂತ್ರರಚನೆಯ ... ಮಾನಾರ್ಥವಾಗಿ ... ಈ ಯಂತ್ರದಲ್ಲಿ ನೂತನವಾದ ಇನ್ನಷ್ಟು ರಚನೆಗಳನ್ನು ಮಾಡಿ ... ಉಪಯೋಗಕರ ಯಾಗುವಂತ ಸಿದ್ಧಪಡಿಸಿರುತ್ತಾರೆ.

"ಭಾನುತಾಪ"ದಿಂದ ತಯ್ಯಾರಿಸಿದ ಅಡಿಗೆಗೆ ಹೊಗೆಯ ವಾಸನೆಯಾಗಲಿ ಇತರ ಸೌದೆಯ ಉಪಯೋಗದಿಂದ ಬರುವಂಥಾ ದೋಷಗಳಾಗಲಿ ಏನೂ ಇರುವದಿಲ್ಲ. ಸೌದೆಯ ಖರ್ಚು ಬಹಳ ಕಡಿಮೆ ಇದ್ದವರೂ, ಬಡವರೂ ಆದಂಥವರಿಗೆ ಇದನ್ನು ಉಪಯೋಗಿಸಿಕೊಳ್ಳುವ ಅನುಕೂಲತೆಗಳಿಲ್ಲವಾದರೂ ತಕ್ಕಮಟ್ಟಿನ ಅನುಕೂಲಸ್ಥರು ಇದನ್ನು ಉಪಯೋಗಿಸಿಕೊಳ್ಳಬಹುದು ... "ಹೋಟೆಲ್", "... " ಹೇರಳವಾಗಿ ... ಮೊದಲಾದವುಗಳನ್ನು ತಯ್ಯಾರಿಸುವವರು ಪ್ರತಿನಿತ್ಯವೂ ನೂರಾರು ಜನರಿಗೆ ಅನ್ನ ಬಡಿಸುವ ದೇವಸ್ಥಾನಗಳಿಗೂ ಇದು ಬಹಳ ಪ್ರಯೋಜನಕ್ಕೆ ಬೀಳುವುದು. "ಭಾನುತಾಪ"ದ ಪ್ರಯೋಜನವು ಇಷ್ಟೇ ಅಲ್ಲ. ... ಯಂತ್ರಗಳನ್ನು ನಡೆಸಲಿಕ್ಕೆ ಬೇಕಾದ ನೀರಿನ ಉಗಿಯನ್ನು ಸಿದ್ಧಪಡಿಸಲಿಕ್ಕೂ ತವರ, ಸೀಸ, ಸತುವು ಮೊದಲಾದವುಗಳನ್ನು ಕರಗಿಸಲಿಕ್ಕೆ ಸಹಾ ಉಪಯೋಗಿಸಿಕೊಳ್ಳಬಹುದಾದ್ದರಿಂದ ಲೋಹ ಕಾರಖಾನೆಗಳುಳ್ಳ ಬಂಡವಾಳಿಗರು ಇದರಿಂದ ಪ್ರಯೋಜನ ಪಡೆಯಬಹುದು. ಈ ಕಾರಖಾನೆಗಳ ಮಾಲಿಕರಿಗೆ "ಭಾನುತಾಪ"ವು ಬೇಕಾದಲ್ಲಿ ಕಾರಖಾನೆಯಲ್ಲಿ "ಭಾನುತಾಪ"ವನ್ನು ಉಪಯೋಗಿಸುವ ರೀತಿಯನ್ನು ಇದನ್ನು ರಚನಾಕರ್ತರು ಸಿದ್ಧಪಡಿಸಿಕೊಡುವರು.

ರಾತ್ರಿಸಮಯಗಳಲ್ಲಿಯೂ ಸೂರ್ಯಕಿರಣಗಳಿಲ್ಲದ ದಿವಸಗಳಲ್ಲಿಯೂ ಸಹಾ ಸೌದೆಯನ್ನು ಉಪಯೋಗಿಸದಂತೆ "ಭಾನುತಾಪ"ದ ಕರ್ತರು ಒಂದು ಸೂಚನೆಯನ್ನು ಕೊಟ್ಟಿರುವರು. ಸೂರ್ಯನ ಕಿರಣಗಳ ಬಿಸಿಯನ್ನು ಯಂತ್ರಮುಖಾಂತರ ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಿ ಈ ವಿದ್ಯುಚ್ಛಕ್ತಿಯನ್ನು ಬೇಕಾದ ಸಮಯದಲ್ಲಿ ಉಪಯೋಗಿಸಿ ಆಹಾರವನ್ನು ಸಿದ್ಧಪಡಿಸಲಿಕ್ಕೂ ವ ಇತರ ಉದ್ದೇಶ್ಯಗಳಿಗೂ ಸೌದೆಯ ಬೆಂಕಿಯ ಬದಲಾಗಿ ಉಪಯೋಗಿಸಿಕೊಳ್ಳಬಹುದೆಂತ ಈ ಯಂತ್ರಕರ್ತರು ಅಭಿಪ್ರಾಯಪಡುತ್ತಾರೆ. ಹಿಂದೂಸ್ಥಾನದಲ್ಲಿ ಹೆಚ್ಚಾಗಿ ಬಿಸಿಲಿನ ದಿವಸಗಳೇ ಇರುವುದರಿಂದ ಸೂರ್ಯಕಿರಣಗಳನ್ನು ಮೇಲೆ ಸೂಚಿಸಿದ ರೀತಿಗಳಲ್ಲಿ ಉಪಯೋಗಿಸಿ ದೇಶಕ್ಕೆ ಅಧಿಕ ಲಾಭವುಂಟಾಗುವಂತೆ ಮಾಡಬಹುದೆಂಬದಾಗಿ "ಭಾನುತಾಪ"ದ ಕೃತ್ರ್‍ರಾದ ಪಂಡಿತ ಶ್ರೀಕೃಷ್ಣ ಜೋಷಿಯವರು ಕೋರಿರುವರು.

~~~~~~~~

ದನಗಳನ್ನು ಸಾಕುವವರಿಗೆ ಉಪಯುಕ್ತವಾದ ವಿಷಯಗಳು. ನಮ್ಮ ದೇಶದ ರೈತರು ತಮ್ಮ ಬೇಸಾಯಿತು ಎತ್ತುಗಳು ಬಹಳ ಬಡವಾಗಿಯೂ ಮತ್ತು ಬಲಹೀನವಾಗಿಯೂ ಇರುತ್ತವೆಂದು ಅನೇಕವೇಳೆ ಹೇಳುತ್ತಾರೆ. ಆದರೆ ಮೇವು ಕೊಡುವದರಲ್ಲಿಯೂ, ಕೊಟ್ಟಿಗೆ ಕಟ್ಟುವದರಲ್ಲಿಯೂ, ಮತ್ತು ಸಾಮಾನ್ಯವಾಗಿ ಪೋಷಣೆ ಮಾಡುವದರಲ್ಲಿಯೂ ಈಗಿನಗಿಂತಲೂ ಹೆಚ್ಚು ಮುತವರ್ಜಿ ಮಾಡಿದ್ದೇ ಆದರೆ, ದನಗಳನ್ನು ಅತಿ ಸುಲಭವಾಗಿ ಒಳ್ಳೇ ಸ್ಥಿತಿಗೆ ತಂದುಕೊಳ್ಳಬಹುದು. ಕೊಟ್ಟಿಗೆಗಳನ್ನು ಅನುಕೂಲವಾಗಿ ಕಟ್ಟಬೇಕಾದರೆ ದುಬಾರಿಯಾಗಿ ಖರ್ಚು ಇಡಬೇಕಾದ್ದೇನೂ ಅವಶ್ಯಕವಿಲ್ಲ. ಈ ಕಟ್ಟಡಕ್ಕೆ ಸಾಗವಾನಮರ, ಇಟ್ಟಿಗೆ ಗೋಡೆ ಮತ್ತು ಹಂಚಿನ ಛಾವಣಿಗಳೇನೂ ಬೇಕಿಲ್ಲ. ಸಾಧಾರಣವಾದ ಕಾಡುಮರ, ಮಣ್ಣಿನ ಗೋಡೆ ಮತ್ತು ಹುಲ್ಲು ಹೊದ್ದಿಕೆ ಇದ್ದರೆ ಸಾಕು. ಕೊಟ್ಟಿಗೆಯನ್ನು ಸ್ವಲ್ಪ ಎತ್ತರವಾಗಿದ್ದರೆ ಕೆಸರು ಆಗುವದಿಲ್ಲ. ಒಳಗೆ ಗಾಳಿಯಾಡುವಂತೆ ಛಾವಣಿಯು ಎತ್ತರವಾಗಿ ಇರಬೇಕು ಮತ್ತು ಮಳೆ ಬಿದ್ದರೆ ಸೋರಕೂಡದು. ಮಳೆ ಇರಚಲು ಬಡಿಯುವ ಕಡೆಗಳಲ್ಲಿ ಮಾತ್ರ ಗೋಡೆ ಹಾಕಿ ಮರೆಮಾಡಬೇಕು. ಗೋಡೆಗಳೂ ಮತ್ತು ನೆಲವೂ ಸುಲಭವಾಗಿ ಚೊಕ್ಕಟಮಾಡುವದಕ್ಕೆ ಸಾಧ್ಯವಾಗುವಂತಿರಬೇಕು. ಮಣ್ಣಿನ ಗೋಡೆಯಾದರೆ ಸುಲಭವಾಗಿ ಸುಣ್ಣ ಬಳಿಯುವದರಿಂದ ಚೊಕ್ಕಟವಾಗುತ್ತೆ. ನೆಲವನ್ನು ಶುದ್ಧವಾಗಿಟ್ಟುಕೊಳ್ಳಬೇಕಾದರೆ ಚೆನ್ನಾಗಿ ತುಳಿದ ಮಣ್ಣನ್ನು ಹಾಕಿ ಗಡುಸುಮಾಡಿದರೆ ಸಾರೆ ನೆಲದಂತೆ ಆಗುತ್ತೆ. ಇದರ ಮೇಲೆ ೩ ಅಂಗುಲ ಪುತಿ ಮಣ್ಣನ್ನು ಹರಡಿ, ಈ ಮಣ್ಣನ್ನು ಒಂದುವಾರ ಅಥವಾ ೧೦ ದಿನಗಳಿಗೊಂದಾವರ್ತಿ ಗೊಬ್ಬರದ ಗುಂಡಿಗೆ ಸಾಗಿಸಿ ಪುನಃ ಹೊಸ ಮಣ್ಣನ್ನು ಹರಡಬೇಕು. ಹೀಗೆ ಆಗಾಗ್ಗೆ ಕೊಟ್ಟಿಗೆಯಿಂದ ತೆಗೆದ ಮಣ್ಣನ್ನು ಯಾವ ಪೈರಿಗಾದರೂ ಒಳ್ಳೆ ಗೊಬ್ಬರವಾಗಿ ಉಪಯೋಗಿಸಬಹುದು.

~~~~~~~~

ವ್ಯವಸಾಯಕ್ರಮಬೋಧಿನಿ. ಈ ಪುಸ್ತಕದ ಜಾಹೀರಾತನ್ನು ನಮ್ಮ ಪತ್ರದ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುವೆವು. ಮರಾಟಿ, ಗುಜರಾತಿ, ಬಂಗಾಳಿ ಮೊದಲಾದ ದೇಶಭಾಷೆಗಳು ಹೆಚ್ಚು ಅಭಿವೃದ್ಧಿಗೊಂಡು ಇಂಗ್ಲೀಷ ಭಾಷೆಯಲ್ಲಿರುವ ಅನೇಕ ರಸಾಯನ ಶಾಸ್ತ್ರ ಮೊದಲಾದ ಪುಸ್ತಕಗಳನ್ನು ಈ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟು ಈ ಭಾಷೆಗಳನ್ನಾಡುವ ಪ್ರಜೆಗಳು ಇವುಗಳಿಂದ ಅಧಿಕ ಪ್ರಯೋಜನವನ್ನು ಪಡೆಯುವರು. ಕನ್ನಡದಲ್ಲಿ ಇಂಥಾ ಪುಸ್ತಕಗಳು ಅತಿ ವಿರಳವಾದ್ದರಿಂದ ... ನೂತನ ... ರಚಿಸಲ್ಪಟ್ಟ ಈ ಪುಸ್ತಕಕ್ಕೆ ಕನ್ನಡಿಗರೆಲ್ಲರೂ ಪ್ರೋತ್ಸಾಹ ಕೊಡುವುದು ಕರ್ತವ್ಯವಾಗಿರುವುದು. ಪುಸ್ತಕವಾದರೋ ದಕ್ಷಿಣ ಹಿಂದೂಸ್ಥಾನದ ರೈತರಿಗೆ ಉಪಯೋಗಿಸಲ್ಪಡುವಂತೆ, ಕಬ್ಬು ಭತ್ತ, ಗೋಧಿ, ನೀರಿ ಜೋಳ, ಸಜ್ಜೆ, ಅರಸಿನ, ರಾಗಿ ಜೋಳ, ಅವರೆ, ಎಳ್ಳೆ ಪಯಿರುಗಳು, ನೆಲಗಡಲೆ ಕಾಯಿ, ತೆಂಗು, ಅಡಿಕೆ, ಅನಾನಸು, ಬಾಳೆ, ವೀಳ್ಯದೆಲೆ, ಮೆಣಸು, ಕಾಫಿ, ಮೊದಲಾದ ದವಸುಗಳನ್ನು ಬೆಳಸಲಿಕ್ಕೆ ಬೇಕಾದ ಜಮೀನು, ಗೊಬ್ಬರ, ವ್ಯವಸಾಯ, ನೀರಾವರಿ, ಮೊದಲಾದವುಗಳ ಮಾಹಿತಿಯನ್ನು ಒಳಕೊಂಡಿರುವುದಲ್ಲದೆ ಬೆಳೆಸಿದ ಪೈರಿನಿಂದಾದ ಉತ್ಪತ್ತಿಗಳಿಂದ ಹ್ಯಾಗೆ ಪ್ರಯೋಜನ ಪಡೆಯಬಹುದೆಂಬದನ್ನು ಸಹಾ ಬರಹ ಗೊತ್ತಿರುವ ರೈತರಿಂದ ತಿಳಿಯಬಹುದಾದ ಸುಲಭ ಕನ್ನಡದಲ್ಲಿ ಸೂಚಿಸಿರುವುದು. ಈ ಚಿಕ್ಕ ಪುಸ್ತಕದಲ್ಲಿ ವ್ಯವಸಾಯಕರಿಗೆ ಬೇಕಾದ ಎಲ್ಲಾ ಮಾಹಿತಿಯನ್ನು ಕೊಡುವುದು ಅಸಾಧ್ಯವಾದ್ದರಿಂದ ಗ್ರಂಥಕರ್ತರಿಗೆ ಈ ತನ್ನ ಪ್ರಥಮ ಪ್ರಯತ್ನದಲ್ಲಿ ಪ್ರೋತ್ಸಾಹ ದೊರಕಿದರೆ ಬೀಗುಣ, ಗೊಬ್ಬರ, ಯಂತ್ರ ಸಾಮಗ್ರಿಗಳು ಪಶು ಸಂರಕ್ಷಣೆ—

BERNA WATCH COMPANY.

ಬರ್ನಾ ವಾಚು ಕಂಪೆನಿ

ಕಿಶೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಲ್ಪವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿಕೊಡುವವು.

ನಮ್ಮ 'ಮೆಕ್ಸಿಮ' ವಾಚನ್ನು ಭರವಸೆಯಿಂದ ಕೊಂಡುಕೊಳ್ಳಿರಿ.
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪-೮-೦.
ನಮ್ಮ 'ಮ್ಯೂ ಡಿ. ಪಿ' ನಿಕಲ್ ಕೇಸಿನಲ್ಲಿ ರೂ. ೧೪-೦-೦
ಬೆಳ್ಳಿ ಕೇಸಿನಲ್ಲಿ ರೂ. ೧೮ ೮-೦.
ಕಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಮರ್.'
ನಿಕಲ್ ಕೇಸಿನಲ್ಲಿ ರೂ. ೧೩-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.
ನಮ್ಮ 'ವರ್ಡಲಿ.'
ನಿಕಲ್ ಕೇಸಿನಲ್ಲಿ ರೂ. ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.
ನಮ್ಮ 'ಟೆಸ್ಟ್'
ನಿಕಲ್ ಕೇಸಿನಲ್ಲಿ ರೂ. ೨೧-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦.

ಎಲ್ಲಾ ಗಡಿಯಾರುಗಳು ಜಂಟ್ಸ್ ಸ್ಯಾಟಿನಲ್ಲಿರುವವು. ವಾಚುಗಳನ್ನು ಅಂಚೆ ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮಾಡಿ ಕಳುಹಿಸುವೆವು. ನಮ್ಮ 59 ಎಸ್ಪ್ಲನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದೂಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟದವರಲ್ಲಿಯೂ ಕ್ರಯಕ್ಕೆ ದೊರಕುವವು.

ಇವುಗಳಲ್ಲಿ ಒಂದೊಂದು ಬೆಳೆಯುವನ್ನು ಕುರಿತು ಈ ಪುಸ್ತಕದಂತೆ ಪ್ರತ್ಯೇಕ ಪುಸ್ತಕಗಳನ್ನು ರಚಿಸುವ ಉದ್ದೇಶವಿದೆ. ವಿದ್ಯಾವಂತರಾದ ರಾ. ಛ. ಹನುಮಂತ ಗೌಡರಂಥವರನ್ನು ಇಂತಹ ಪುಸ್ತಕ ರಚನೆಗಳಲ್ಲಿ ಪ್ರೋತ್ಸಾಹಿಸಿದ್ದಲ್ಲಿ ಅವರಂಥಾ ಅನೇಕ ಜನ ವಿದ್ಯಾವಂತರು ಕೃಷಿ ವಿಷಯಕ್ಕೆ ಮನಸ್ಸುಕೊಟ್ಟು ಕೃಷಿ ಅಭಿವೃದ್ಧಿಯು ಮುಂದುವರಿಯುವುದಲ್ಲದೆ ಪ್ರಕೃತವಿರುವ ರೈತರ ಗೋಳು ಬಹಳಮಟ್ಟಿಗೆ ನೀಗಿದಂತಾಗುವುದು. ವ್ಯವಸಾಯ ಕ್ರಮಬೋಧಿನಿಯನ್ನು ಪರಿಸಿ ನೋಡಿದವರಿಗೆ ಕೃಷಿಯಲ್ಲಿ ಅಭಿರುಚಿಯುಂಟಾಗದಿರದು. ಪುಸ್ತಕಕ್ಕೆ ಪ್ರತಿ ಒಂದಕ್ಕೆ ಸ್ಟಿಫ್ ಕವರ್ ಆಣೆ ೧೨ ಕ್ಯಾಲಿಕೊ ಬ್ಯಾಂಡ್ ರೂ ೧ ಬೆಂಗಳೂರಿನ ಎಚ್ ಎನ್ ರಾವ್ ಬ್ರದರ್ಸ್ ಚಿಕ್ಕಪೇಟೆ, ಇವರಲ್ಲಿ ಕ್ರಯಕ್ಕೆ ದೊರಕುವುದು

ಪುಸ್ತಕದ ಪ್ರಯೋಜನವು ನಮ್ಮಲ್ಲಿಯ ರೈತರಿಗೆ ಮಂದಟ್ಟಾಗುವಂತೆ ಅದರಲ್ಲಿರುವ ಅನಾನಸು ಹಣ್ಣಿನ ವ್ಯವಸಾಯದ ವಿಷಯವನ್ನು ಈ ಕೆಳಗೆ ಪ್ರಕಟಿಸಿರುತ್ತೇವೆ.

ಅನಾನಸು.

ಅನಾನಸು ಹಣ್ಣಿನ ವ್ಯವಸಾಯವು ನಮ್ಮ ದೇಶದಲ್ಲಿ ರೂಢಿಯಾಗಿರುವದಿಲ್ಲ ಇಂಡಿಯಾ ದೇಶದಲ್ಲಿ ಅಲ್ಲಲ್ಲಿ ಬೆಳೆಯುವ ಅಲ್ಪಸ್ವಲ್ಪ ಫಸಲು ಸಾಲದೆ ಪರದೇಶಗಳಿಂದ ಅಂದರೆ, ಮುಖ್ಯವಾಗಿ ಸ್ಟ್ರೇಟ್ಸ್ ಸೆಟ್ಲ್‌ಮೆಂಟ್ಸ್, ಸಿಲೋನ್, ಮಾರಿಷಸ್ ದ್ವೀಪಗಳಿಂದ ವರುಷಂಪ್ರತಿ ೩ ಲಕ್ಷ ರೂಪಾಯಿಗಳು ಬೆಲೆ ಬಾಳುವ ಹಣ್ಣುಗಳು ನಮ್ಮ ದೇಶಕ್ಕೆ ಸಾಗಿಬರುತ್ತಿವೆ ಆದ್ದರಿಂದ, ಈ ಹಣ್ಣಿಗೆ ಗಿರಾಕಿ ಇದ್ಯದಲ್ಲಿರುವುದಲ್ಲದೆ, ಮುಂದೆ ಹಣ್ಣಿಗೂ, ನಾರಿಗೂ ತುಂಬಾ ಗಿರಾಕಿಯು ಬರುವ ಸಂಭವವಿದೆ

ಮೈಸೂರು ದೇಶದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಅನನಾಸು ಗಿಡವು ಸ್ವೇಚ್ಛೆಯಾಗಿ ಬೆಳೆಯುತ್ತಿದೆ ಇದರ ಬೆಳೆಯನ್ನು ಕಸುಬಾಗಿಟ್ಟುಕೊಂಡು, ವ್ಯವಸಾಯ ಮಾಡುತ್ತಾ ಬಂದರೆ, ಒಳ್ಳೇ ಲಾಭವಿರುವುದು ಇದು ಅಷ್ಟೇನೂ ಶ್ರಮಸಾಧ್ಯವಾದ ವ್ಯವಸಾಯವಲ್ಲವು

ಜಮೀನು — ಮೇಲ್ಮಣ್ಣು ಪುಡಿಯಾಗಿಯೂ, ಕೆಳಮಣ್ಣು ನೀರು ಬಸಿದು ಹೋಗುವಂತೆ, ಮರಳು ಮಿಶ್ರವಾಗಿಯೂ, ಇರಬೇಕು ಸಾವಯವ ವಸ್ತುವಿನಿಂದ ಕೂಡಿದ ಫಲವತ್ತಾದ ಜಮೀನು, ಪ್ರವಾಹಕ್ಕೆ ಸಿಕ್ಕದಷ್ಟು ಎತ್ತರವಾಗಿದ್ದರೆ, ಇದರ ವ್ಯವಸಾಯಕ್ಕೆ ಯೋಗ್ಯವಾದದ್ದು ಎತ್ತರವಾದ ಜಮೀನುಗಳು ನೀರಾವರಿಗೆ ಅನುಕೂಲವಾಗಿಯೂ, ನೆರಳಿನಿಂದ ಕೂಡಿಯೂ ಇದ್ದರೆ, ಅಲ್ಲಿಯೂ ಅನಾನಸ್ಸನ್ನು ಬೆಳೆಯಬಹುದು

ಬೀಜ ಮತ್ತು ನಾಟುವುದು — ಹಣ್ಣುಗಳ ಮೇಲೆಯೂ, ಗಿಡದ ಬೇರುಗಳು ಹೋದಕಡೆಯೂ, ಸಣ್ಣ ಗಿಡಗಳು ಹುಟ್ಟುವವು ಇವುಗಳನ್ನೇ ಬೀಜಕ್ಕಾಗಿ ಉಪಯೋಗಿಸಬೇಕು ಭೂಮಿಯನ್ನು ಆಳವಾಗಿ ಉತ್ತು, ಇಲ್ಲವೆ ಸಾಧ್ಯವಾದರೆ ಅಗತೆ ಮಾಡಿ, ಸಾಲಿನಲ್ಲಿ ಒಂದು ಅಡಿ ಅಂತರದಿಂದ ಗಿಡಗಳನ್ನು ನಾಟಿ, ಸಾಲುಗಳ ಮಧ್ಯೆ ೩ ಅಡಿ ಸ್ಥಳ ಬಿಟ್ಟಿರಬೇಕು. ಈ ರೀತಿಯಾಗಿ ಎಕ್ರೆ ೧ಕ್ಕೆ ೧೫ ಸಾವಿರದಿಂದ ೨೦ ಸಾವಿರ ಗಿಡಗಳವರೆಗೂ ಹಾಕಬಹುದು. ಇಷ್ಟು ಒತ್ತಾಗಿ ಹಾಕುವುದರಿಂದ, ಗಿಡ ೧ಕ್ಕೆ ಒಂದೇ ಹಣ್ಣು ಬಿಡುವುದು. ರೈತನಿಗೆ ಅನುಕೂಲವಿದ್ದಂತೆ, ಗಿಡಗಳನ್ನು ದೂರ ದೂರವಾಗಿ ಹಾಕಬಹುದು. ಭೂಮಿಯಲ್ಲಿ ತೇವವು ಆರದಂತೆ ನೋಡಿಕೊಂಡು ನೀರು ಹಾಯಿಸುತ್ತಿರಬೇಕು.

ಉತ್ಪತ್ತಿ — ಗಿಡವನ್ನು ನಾಟಹಾಕಿದ ೧೨ರಿಂದ ೧೫ ತಿಂಗಳುಗಳಲ್ಲಿ ಹಣ್ಣು ಫಲಿಸುವದು ಕೆಲವು ಪ್ರಾಂತ್ಯಗಳಲ್ಲಿ ೧೮ರಿಂದ ೨೪ ತಿಂಗಳುಗಳೂ ಆಗುತ್ತದೆ. ಗಿಡ ೧ಕ್ಕೆ ಒಂದೇ ಹಣ್ಣು ಬಿಡುವುದರಿಂದ, ಹಣ್ಣು ಗಾತ್ರವಾಗಿ ಆಗುವುದು ಇಂಗ್ಲಂಡ್ ಮೊದಲಾದ ಯುರೋಪಿನ ರಾಜ್ಯಗಳಲ್ಲಿ ಇದಕ್ಕೆ ಗಿರಾಕಿಯು ಇರುವುದರಿಂದ, ಅಲ್ಲಿ ಹಣ್ಣೊಂದಕ್ಕೆ ೪ ಆಣೆಯಿಂದ ೮ ಆಣೆಯವರಿಗೂ ಧಾರಣೆ ಇರುವುದು ಬೆಳೆಯುವ ಸ್ಥಳದಲ್ಲಿ ಒಂದು ಆಣೆಗಿಂತಲೂ ಕಮ್ಮಿಯಾಗಿ, ಬೆಲೆ ಬಾಳುವುದಿಲ್ಲ. ಆದ್ದರಿಂದ, ಅನಾನಸಿನ ವ್ಯವಸಾಯವು ತುಂಬಾ ಲಾಭಕರವಾಗಿದೆ

ಅನಾನಸು ನಾರಿಗೂ ಒಳ್ಳೇ ಬೆಲೆ ಇದೆ ಲಂಡನ್‌ಪಟ್ಟಣದಲ್ಲೂ ಅಮೇರಿಕದ ನ್ಯೂಯಾರ್ಕ್ ನಗರದಲ್ಲೂ, ಒಂದು ಟನ್ ನಾರಿಗೆ ೩೦ ಸವರಿನ್‌ಗಳು ಬೆಲೆಯಾಗುವುದು ೨೨ ಸಾವಿರ ಎಲೆಗಳು ಒಂದು ಟನ್ ತೂಗುವವು ಇವುಗಳಿಂದ ಸುಮಾರು ೬೦ ಪೌಂಡು ತೂಕ ಶುಭ್ರವಾದ ಒಣಗಿದ ನಾರು ಬರುತ್ತದೆ ಎಲೆಗಳಿಂದ ನಾರನ್ನು ತೆಗೆಯುವಾಗ್ಯೆ ಕತ್ತಾಳನಾರು ತೆಗೆಯುವ ಯಂತ್ರವನ್ನೇ ಉಪಯೋಗಿಸಬಹುದು

ಇತರ ವಿಷಯಗಳು — ಹಣ್ಣು ಬಹುಕಾಲ ಕೆಡದೆ ಇರಬಲ್ಲದು ಅದರ ರಸವನ್ನಾಗಲೀ, ಮತ್ಯಾವ ಹಣ್ಣಿನ ರಸವನ್ನಾಗಲೀ ಮುಂದೆ ಹೇಳುವ ರೀತಿ ಮಾಡುವುದರಿಂದ ಅದನ್ನು ದೀರ್ಘಕಾಲ ಕೆಡದಂತೆ ಇಟ್ಟಿರಬಹುದು ಹಣ್ಣಿನ ರಸವನ್ನು ತೆಗೆದುಕೊಂಡು, ಕಲಾಯಿನ ಪಾತ್ರೆಗಳಲ್ಲಿ ಅರ್ಧ ಘಂಟೆಯವರಿಗೆ ಮರಳದಂತೆ ಕಾಯಿಸಬೇಕು ಅನಂತರ ಅದನ್ನು ಫ್ಲಾನಲ್ ಚೀಲಗಳಲ್ಲಿ ಶೋಧಿಸಿ ಆರಿದಮೇಲೆ, ಶೀಷೆಗಳಲ್ಲಿ ತುಂಬಬೇಕು ಅಗಲವಾದ ಬಾಯುಳ್ಳ ಆಳವಿಲ್ಲದ ಪಾತ್ರೆಯಲ್ಲಿ ಶೀಷೆಗಳನ್ನಿಟ್ಟು, ಶೀಷೆಗಳ ಕುತ್ತಿಗೆಯುಮಟ್ಟಕ್ಕೆ ನೀರುತುಂಬಿ ಕಾಯಿಸಬೇಕು ಶೀಷೆಗಳ ಬಾಯಿಗೆ ಹಾಕುವ ಬೆಂಡನ್ನೂ ನೀರಿನಲ್ಲಿ ಹಾಕತಕ್ಕದ್ದು ಶೀಷೆಯಲ್ಲಿನ ರಸವು ಪುನಃ ಸುಮಾರಾಗಿ ಕಾಬಿವಾದ ಮೇಲೆ ಅದರಲ್ಲಿರುವ ವಾಯುಕಣಗಳೆಲ್ಲವೂ ಹೋಗಿರುವವು ಆಗ "ಟಿಷ್ಯೂ" ಕಾಗದ (Tissue Paper) ವನ್ನು ಬಾಯಿಯ ಮೇಲೆ ಹಾಕಿ ಅದರ ಮೇಲೆ ಬೆಂಡನ್ನು ಬಲವಾಗಿ ಸಿಕ್ಕಿಸಬೇಕು ಈ ರೀತಿ ಮಾಡಿದರೆ ರಸದ ವಾಸನೆಯೂ ಸವಿಯೂ ಬಹುಕಾಲ ಇರುವವು

ನೀರಿನಲ್ಲಿ ಸಕ್ಕರೆಯನ್ನು ಹಾಕಿ ಕಾಯಿಸಿ, ನಂತರ ಹಣ್ಣುಗಳನ್ನು ಅದರಲ್ಲಿ ಹಾಕಿ ಪುನಃ ಕಾಯಿಸುವುದರಿಂದ ಹಣ್ಣು ದೀರ್ಘಕಾಲ ಕೆಡದಿರುವುದು ಹೊನಲೂಲೂ ಎಂಬಲ್ಲಿ ಅನಾನಸ್ ಹಣ್ಣಿನ ರಸದಿಂದ ಬ್ರಾಂದಿ ಮತ್ತು ಪರಬತ್ತುಗಳನ್ನೂ, ಸಕ್ಕರೆಯನ್ನೂ. ತಯಾರಿಸುತ್ತಾರೆ

ವಿದೇಶ ವೃತ್ತಾಂತ

ಅಂಗ್ಲಾಳದ ಬಜೆಟ್ ಯಾ ಆದಾಯವ್ಯಯದ ಅಂದಾಜು ಪಟ್ಟಿಯನ್ನು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಪ್ರಭುಸದನದವರು ತೆಗೆದುಹಾಕಿದ್ದರಿಂದ, ಪ್ರಕೃತವಿರುವ ಪಾರ್ಲಿಮೆಂಟ್ ಸಭೆಯನ್ನು ಮುಕ್ತಾಯ ಪಡಿಸಿ ಜನವರಿ ತಿಂಗಳ ೧೩ಕ್ಕೆ ಹೊಸ ಮೆಂಬರುಗಳ ಚುನಾವಣೆಯಾಗುವುದು ಈ ಚುನಾವಣೆಯಲ್ಲಿ ಈಗ ಇರುವ ಲಿಬರಲ್ ಪಕ್ಷದವರು ಅಧಿಕಾರಕ್ಕೆ ಬರುವರೋ ಏನೆಂಬದು ನೋಡಲಿಕ್ಕಿರುವುದು

ಅಮೇರಿಕದ ವೊಶಿಂಗ್‌ಟನ್ ಪಟ್ಟಣದಲ್ಲಿ ಇತ್ತಲಾಗೆ ಪ್ರೆಸ್‌ಬಿಟೆರಿಯನ್ ಮಿಶನ್ ಎಂಬ ಕ್ರೈಸ್ತ ಸಂಘದವರ ಒಂದು ಮಹಾ ಸಭೆಯು ಜರಗಿತ್ತು ಅಮೇರಿಕದ ಪ್ರೆಸಿಡೆಂಟರಾದ ಮೆ। ಟೆಫ್ಟರವರು ಈ ಮಹಾ ಸಭೆಗೆ ದಯಮಾಡಿ ಸಭೆಯಲ್ಲಿ ಕೂಡಿದ ವೈದಿಕರಲ್ಲದ ಲೌಕಿಕರಿಗೆ ಒಂದು ಉಪನ್ಯಾಸವನ್ನು ಕೊಟ್ಟರು ಈ ಉಪನ್ಯಾಸದ ನಂತರ ಈ ಮಹಾ ಸಭೆಯ ಸೆಕ್ರೆಟರಿಯವರು ಕ್ರೈಸ್ತ ಮಿಶನರಿಗಳ ಚಟುವಟಿಕೆಯ ವಿಷಯ ಮಾತಾಡುತ್ತಿರುವಾಗ್ಗೆ, ಪ್ರಕೃತವಿರುವ ಹಿಂದುಸ್ಥಾನದ ಸ್ಥಿತಿಯ ವಿಷಯ ಮಾತಾಡಿ ಹಿಂದುಸ್ಥಾನದ ಜನರೆಲ್ಲರೂ ಆಂಗ್ಲೇಯರನ್ನು ಬಹಳವಾಗಿ ದ್ವೇಷಿಸುತ್ತಿರುವರಾಗಿ ಹೇಳಿದ್ದನ್ನು ಆ ಸಂದರ್ಭದಲ್ಲಿ ಬಂದಿರುವ ಬ್ರಿಟಿಷ್ ರಾಯಭಾರಿ ಮೆ। ಬ್ರಾಯ್ಸರವರು ಕೇಳಿ, ಅವರೂ ಎರಡು ಜನ ಆಂಗ್ಲೇಯ ದೊರೆಸಾನಿಯವರೂ ಸಭೆಯನ್ನು ಕೂಡಲೇ ಬಿಟ್ಟು ತೆರಳಿ ಹೋದರು ಇದರಿಂದ ಸಭೆಯಲ್ಲಿ ಬಹಳ ಗದ್ದಲ ಉಂಟಾಗಿದೆಂದು ಕೇಳುತ್ತೇವೆ

ಅಂಗ್ಲಾಳದ ಲಂಕಸ್‌ಪಾಯರ್ ಕೌಂಟ್ ಕೋರ್ಟಿನಲ್ಲಿ ಇತ್ತಲಾಗೆ ಒಂದು ಅಸಾಧಾರಣವಾದ ಸಾಲದ ಡಿಕ್ರಿಯು ವಿದಿಸೋಣಾಗಿರುವುದು ಒಬ್ಬ ಹಾಲು ವ್ಯಾಪಾರದವನು ಸಾಲಕೊಡುವವನೊಬ್ಬನಿಂದ ಎರಡಾವರ್ತಿ ಇಪ್ಪತ್ತಿಪ್ಪತ್ತು ಪವನುಗಳ ಮೇರೆಗೆ ಸಾಲಪಡಕೊಂಡು ಪ್ರತಿಸರ್ತಿಯೂ ಇಪ್ಪತ್ತು ಪವನುಗಳ ಬಗ್ಗೆ ೩೧ ಪವನುಗಳಿಗೆ ಡಿಮಾಂಡ್ ನೋಟ್ ಬರಕೊಟ್ಟನು. ಪ್ರಥಮ ಸರ್ತಿಯಲ್ಲಿ ಬರಕೊಟ್ಟ ನೋಟಿನ ೩೧ ಪವನುಗಳನ್ನು ಈತನು ತೆತ್ತು ಎರಡನೇ ಸರ್ತಿಯದರಲ್ಲಿ ಸಹಾ ೧೩ ಪವನುಗಳನ್ನು ಕೊಟ್ಟಿರುವನು ಬಾಕಿಇರುವ ೧೮ ಪವನುಗಳ ಬಗ್ಗೆ ಈ ವ್ಯಾಜ್ಯವು ದಾಖಲಾಯಿತು. ಕೋರ್ಟಿನ ಜಡ್ಜರವರು ತಿಂಗಳಿಗೆ ಒಂದು ಪೆನ್ನಿ ಅಂದರೆ ಒಂ[illegible] ಪ್ರಕಾರ ಕೊಡಬೇಕೆಂತ ತೀರ್ಮಾನಿಸಿರುವರು, ಅಂದರೆ ಈ ಸಾಲವನ್ನು ೩೬೦ ವರುಷಗಳಲ್ಲಿ ಸಂದಾಯ ಮಾಡಬೇಕಾಗಿ ತೀರ್ಮಾನವಾಗಿರುವುದು

ಚಿಕಾಗೋ ಮುನಿಸಿಪಾಲಿಟಿಯವರು ಹುಡುಗರ ಒಂದು ಪೊಲೀಸು ದಂಡನ್ನು ಏರ್ಪಡಿಸಿರುವರು ಈ ಹುಡುಗರು ತಮ್ಮ ಸರಿಪ್ರಾಯದವರ ಬಂದೋಬಸ್ತು ಮೊದಲಾದವುಗಳನ್ನು ನೋಡಿಕೊಳ್ಳುವರಲ್ಲದೆ ತಂಟೆಕೋರರನ್ನು ಕೈದು ಸಹಾ ಮಾಡುವರು

ಉತ್ತರ ಹಿಂದುಸ್ಥಾನ.

ಅಹಮದಾ ಬಾದಿನಲ್ಲಿ ವ್ಯಾಸರಾಯಿ ಪ್ರಭುಗಳಿಗೆಂತ ಎಸೆದ ಸಿಡಿಮದ್ದಿನ ತೋಟೆಯನ್ನು ಹೆಕ್ಕಿ ಆದರಿಂದ ಘಾಯ ಪಡೆದ ಮುನಿಸಿಪಲ್ ಜಾಡಮಲ್ಲಿಯ ಕೈಯು ಶಸ್ತ್ರಪ್ರಯೋಗದಿಂದ ಕಡಿಯಲ್ಪಡಬೇಕಾದ್ದರಿಂದ ಅದು ಕಡಿಯಲ್ಪಟ್ಟು, ಆತನು ಈಗ ಗುಣಹೊಂದುತ್ತಿರುವನೆಂತಲೂ, ಮಿಂಟೊ ಪ್ರಭುಗಳು ಆತನ ಆರೋಗ್ಯವನ್ನೂ ಸ್ಥಿತಿಗತಿಯನ್ನೂ ವಿಚಾರಿಸಿಕೊಂಡು ಆತನು ಬನಿಯರಿಗೆ ಕೊಡಬೇಕಾಗಿದ್ದ ಸಾಲವನ್ನು ತಾವೇ ಕೊಟ್ಟು ಪರಿಹರಿಸಿದ್ದಲ್ಲದೆ, ಅವನ ಮುಂದಿನ ಜೀವನದ ಬಗ್ಗೆ ತಕ್ಕದಾದ ವ್ಯವಸ್ಥೆಯನ್ನು ಮಾಡಿರುವರಾಗಿ ಕೇಳುತ್ತೇವೆ.

ಮುಂಬಯಿಯ ಸೆಂಟ್ರಲ್ ಡಿವಿಜನ್ ಲೋಕಲ್ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಕಡೆಯಿಂದ ಮುಂಬಯಿಯ ನ್ಯಾಯ ವಿಧಾಯಕ ಸಭೆಯ ಮೆಂಬರುತನಕ್ಕೆ ಉಮೇದ್ವಾರರಾದ ರಾ। ನರಸಿಂಗ ಚಿಂತಾಮಣಿ ಕೇಲ್ಕಾರರವರು ಚುನಾಯಿಸಲ್ಪಡತಕ್ಕ ಉಮೇದ್ವಾರರಲ್ಲವೆಂತ ಮುಂಬಯಿ ಸರಕಾರದವರು ಪ್ರಕಟಿಸಿರುವರು ಇವರನ್ನು ಚುನಾಯಿಸಿದ್ದಲ್ಲಿ ಈ ಚುನಾವಣೆಯು ಮಂಜೂರಾಗಲಿಕ್ಕಿಲ್ಲವೆಂಬದಾಗಿಯೂ ತಿಳಿಸಿರುವರು

ಅಂಗಡಿ ಭಂಡಸಾಲೆಗಳಿಗೆ ವ್ಯಾಪಾರ ನಿಮಿತ್ಯ ಬ್ಯಾಸಿಕಲ್ಲುಗಳ ಮೇಲೆ ಬರುವವರು ಬ್ಯಾಸಿಕಲುಗಳನ್ನು ಅಂಗಡಿ ಬಂಡಸಾಲೆಗಳ ಬಾಗಿಲುಗಳ ಹತ್ತಿರವಿಟ್ಟು ಒಳಕಡೆ ಕೆಲಸದಲ್ಲಿರುವಾಗ ಈ ಬ್ಯಾಸಿಕಲುಗಳನ್ನು ಹತ್ತಿಕೊಂಡು ಅವುಗಳನ್ನು ಕಳವುಮಾಡಿಕೊಂಡು ಹೋಗುವ ಕಳ್ಳರ ಒಂದು ತಂಡವನ್ನು ಪೋಲಿಸಿನವರು ಹಿಡಿದು ಕಲಿಕತ್ತೆಯಲ್ಲಿ ಇವರ ವಿಚಾರಣೆಯಾಗಿ ಎಲ್ಲರಿಗೂ ಶಿಕ್ಷೆ ವಿಧಿಸಲ್ಪಟ್ಟಿತು.

ಮಣಿಪುರದ ರಾಜರವರು ಹಿಂದೂಸ್ಥಾನದಲ್ಲಿರುವ ಪುಣ್ಯ ಕ್ಷೇತ್ರಗಳ ತೀರ್ಥಯಾತ್ರೆಗೆ ಹೋಗುವ ಸಲುವಾಗಿ ಒಂದು ಸ್ಪೆಶ್ಯಲ್ ಟ್ರೈನು ತಯಾರಾಗುತ್ತಿರವುದು ಈ ಟ್ರೈನಿಗೆ ೩ ಒಂದನೇ ತರಗತಿಯ ಗಾಡಿಗಳೂ ೧[illegible]ನೇ ತರಗತಿಯ ಗಾಡಿಗಳೂ, ೧೮ ಇಂಟರ್ ವಿ[illegible] ಗಳೂ, ೫೧ ಮೂರನೇ ತರಗತಿಯ [illegible] ಇರವವು ಗ್ವಾಲಂಡೊ ಸ್ಟೇಶನಿನಿಂದ, ಪುರಿ ಬೇಜ್ವಾಡ, ರಾಮೇಶ್ವರ ಮದ್ರಾಸು, ಮುಂಬಯಿ, ಪೋರ[illegible], ಆ[illegible] ಆಗ್ರಾ ಮತ್ತು ಮಥುರಾ ಈ ಎಲ್ಲಾ ಪಟ್ಟ[illegible] ಶಿಸುವರು

ನೇಪಾಳದ ಮಹ ರಾಜರವರು [illegible] ತಾರೀಕು ೨೦ರಲ್ಲಿ ತನ್ನ ತೂಕಕ್ಕೆ [illegible] ಭಾರವನ್ನು ಒಡವರಿಗೆ ದಾನ ಮಾ[illegible] ಯದಲ್ಲಿ ಬಡಬಗ್ಗರನೇಕರಿಗ [illegible] ಟ್ಟರು ಹಿಂದೆ ಶಿವಾಜಿ ಮಹಾರಾ[illegible] ಸಮತೂಕ ಚಿನ್ನವನ್ನು ಹಂಚಿದ್ದನ

ಹೊಸ ಕೌನ್ಸಿಲು ಮಾ[illegible] ರ್ಪಡುವ ಬಂಗಾಳ ನ್ಯಾಯವಿ[illegible] ನಾಗಿ ಚುನಾಯಿಸಲ್ಪಡಬೇಕಂತ [illegible] ವಾಗಿ ಕೆಲವು ಪ್ರಕಟಣಪತ್ರ[illegible] ಪ್ರಕಟಿ[illegible] ಇಂಗ್ಲೀಷ ಬಾಷೆಯ ಈ ಒಂದು ಪ್ರತಿಯನ್ನು ಕಲ್ಕತ್ತೆ[illegible] ಪ್ರಕಟವಾಗುತ್ತಿರುವ ದೇಶವಾ[illegible] ಪತ್ರಿಕೆ[illegible] ಹಿತವಾದಿಗೆ ಕಳುಹಿಸಿಕೊಟ್ಟು ಇದನ್ನು ಬಂಗಾಳಿ ಬಾಷೆಗೆ ವರ್ತಿಸಿ ಹಿತವಾದಿಯಲ್ಲಿ ಪ್ರಕಟಿಸಿ ನೂರು ಪ್ರತಿಗಳನ್ನು ತನ್ನ ಹೆಸರಿಗೆ ವಿ ಪಿ ಮೂಲಕ ಕಳುಹಿಸಬೇಕೆಂತ ಬರೆದಿದ್ದರು ಪತ್ರಿಕಾಕರ್ತರು ಮೆಂಬರುತನಕ್ಕೆ ಉಮೇದ್ವಾರರ ಪ್ರಕಟಣೆಯನ್ನು ಪ್ರಕಟಿಸಿದ ಪ್ರತಿ ಒಂದಕ್ಕೆ ೧೦ ರೂಪಾಯಿಗಳ ಪ್ರಕಾರ ೧೦೦ ಪ್ರತಿಗಳನ್ನು ಕೊಂಡುಕೊಳ್ಳಬೇಕೆಂತಲೂ ಮತ್ತು ಈ ಉಮೇದ್ವಾರರ ನಕ್ಷೆಯನ್ನು ಇದರೊಂದಿಗೆ ಪ್ರಕಟಿಸಿದರೆ ಇನ್ನು ೧೦೦೦ ರೂ, ಹೆಚ್ಚು ಕೊಡಬೇಕೆಂತಲೂ ಕೇಳಿರುವರಲ್ಲದೆ, ಇದಕ್ಕೆ ೮ ಗೃಹಸ್ಥರು ಸಮ್ಮತಿಸದಿದ್ದರೆ ಅವರ ಹೆಸರು ವ ನಿಜವಾದ ಎಲ್ಲಾ ವೃತ್ತಾಂತವನ್ನು ಪ್ರಕಟಿಸುವೆವಾಗಿ ತಿಳಿಸಿರುವರು

ಮಾಜಿ ಸರ್ವಸೇನಾಧಿಪತಿಯರಾಗಿದ್ದ ಕಿಚ್ಚನರ್ ಪ್ರಭುಗಳ ಜ್ಞಾಪಕಾರ್ಥವಾಗಿ ತಕ್ಕ ಏರ್ಪಾಡು ಮಾಡಲಿಕ್ಕೆ ೫೭,೦೦೦ ರೂ, ಚಂದಾಹಣವು ಇಷ್ಟರವರೆಗೆ ಕೂಡಿರುವುದು

ಕಳೆದ ತಿಂಗಳ ತಾ. ೨೭ಕ್ಕೆ ಅಂತ್ಯವಾಗುವ ವಾರದಲ್ಲಿ ಪ್ಲೇಗು ತಗಲಿದವರ ಸಂಖ್ಯೆಯು ಇಡೀ ಹಿಂದೂಸ್ಥಾನದಲ್ಲಿ ೪೬೬೪ ಆಗಿತ್ತು. ಇದರಲ್ಲಿ ೩೭೩೪ ಜನರು ಮೃತಪಟ್ಟಿರುವರು ಅಂದರೆ ಈ ವಾರಕ್ಕೆ ಮೊದಲಿನ ವಾರದಲ್ಲಿ ಮೃತಪಟ್ಟವರ ಸಂಖ್ಯೆಗಿಂತ ಇದು ಕಡಿಮೆಯಾಗಿರುವುದು

ಅಹಮುದಾಬಾದಿನಲಿ ವ್ಯಾಸರಾಯ ಪ್ರಭುಗಳಿಗೆ ಸಿಡಿಮದ್ದಿನ ತೊಂಬೆಯನ್ನು ಎಸೆಯಲು ಪ್ರಯತ್ನಿಸಿದವರೆಂತ ಎರಡು ಜನ ಬಂಗಾಳಿಗಳನ್ನು ಅನುಮಾನದ ಮೇಲೆ ಇವರ ಗುರುತು ಹಿಡಿಯಲಿಕ್ಕೆ ಅಹಮುದಾಬಾದಿನ ಪೋಲೀಸು ಕಮಿಶನರು ಇಸ್ಸೆಡೆಗೆ ಕೊಂಡುಹೋಗಿದ್ದರು ಆದರೆ ಅಪರಾಧಿಗಳು ಇವರೇ ಎಂತ ಗುರುತು ಹಿಡಿಯಲಿಕ್ಕಾಗದೆ ಇದ್ದದ್ದರಿಂದ ಇವರನ್ನು ಖುಲಾಸು ಪಡಿಸಿರುವರು ಅಪರಾಧಿಗಳನ್ನು ಗೊತ್ತುಮಾಡಿಕೊಡುವವರಿಗೆ ಅಲ್ಲಿಯ ಕಲೆಕ್ಟರರವರು ೫೦೦೦ ರೂಪಾಯಿ ಇನಾಮು ದೊರಕುವುದೆಂತ ಪ್ರಕಟಿಸಿರುವರು

ಈ ವರ ಷವೂ ೮ ಹೆ[illegible]ನಲ್ಲಿ ಕೂಡುವ ಕಾಂಗ್ರೆಸು ಸಭೆಯೊಂದಿಗ ಬ ರತೀಯ ಸ್ತ್ರೀಯ ರ ಸಮ್ಮೇಳನವೂ ಜರುಗುವುದ ಸ್ತ್ರೀ[illegible]ಮ್ಮೇಳನದ ಆಮಂತ್ರಣ ಸಭೆಗೆ ರಾ। ಹರಿಕೃಷ್ಣ ಲಾಲರವರ ಪತ್ನಿಯರಾದ ಶ್ರೀಮತಿ ಯಮುನಾಬಾಯಿ ವಿ ಎ ಯವರ ಅಧ್ಯಕ್ಷರೂ ಮತ್ತು ಶ್ರೀಮತಿ ಸರಳಾದೇವಿ [illegible]ದುರಿಯವರು ಉಪಾಧ್ಯಕ್ಷರಾಗಿಯೂ ಇರುವರು

ಭಾರತೀಯ ಔದ್ಯೋಗಿಕ ಪರಿಷತ್ತು ಈ ವರುಷ ಲಾಹೋರಿನಲ್ಲಿ ಈ ತಿಂಗಳ ತಾ ೩೦ರಲ್ಲಿ ಕೂಡುವುದು ದರ್ಭಂಗದ ಮಹ ರಾಜರವರು ಈ ಪರಿಷದಿನ ಅಧ್ಯಕ್ಷರಾಗಿರುವರು

ಬಿ ನ್‌ನಲ್ಲಿ ರೋಮನ್ ಕೆಥೊಲಿಕ್ ಪಾದ್ರಿಯನ್ನು ಕೊ[illegible] ವಿ[illegible] ಈ [illegible]ದ್ರಿಯ ಸಹ [illegible] ದ್ರಿ ಪಾದರ್ ಫೆನ ರ್ನಂಡೀಸ್ ವ ಎರಡು ಜನ ಸೇವಕರಿಗೆ ಸೇನ್ಸ್ ಕೋರ್ಟಿ [illegible] ಮರಣದಂಡನೆಯ ಶಿಕ್ಷೆಯ [illegible] ವಿಧಿಸಲ್ಪಟ್ಟಿತಲ್ಲ [illegible] ಹೈಕೋರ್ಟಿನಲಿ ಇವರ [illegible] ನಡದ ಪಾದರ್ ಫರ್ನಾಂಡೀಸರನ್ನು ಬಿಟ್ಟಿರುವರು ಬಾಕಿ ಎರಡ ಜನರ ಮೇಲೆ ವಿಧಿಸೋಣಾದ ಮರಣದಂಡನೆಯನ್ನು ಕಾಯಂ ಮಾಡಿರುವರು

ಸಕ್ಕರೆ ವ್ಯಾಪಾರಿ [illegible] ಕೆಲಸ ಇದ್ದ[illegible] [illegible] ಅಂಗ್ಲಾ[illegible] ಕಲಿತು [illegible] ಸರಕಾರದವರ ೧೫೦ ಪವನು[illegible] ವೇತನವೃತ್ತ ಎರ[illegible] ವಿದ್ಯಾರ್ಥಿ ವೇತನ[illegible] ಕೊಡಲ್ಪಡುವುವೆಂದಾಗಿ ಪ್ರಕಟಿಸಿರುವರು

ಲಾಹೋರು ವಸ್ತುಪ್ರದರ್ಶನವು ಈ ತಿಂಗಳ ೧೧ನೇ ತಾರೀಕಿನಲ್ಲಿ ತೆರೆಯಲ್ಪಡುವುದು

ಲಕ್ನೋ ಪಟ್ಟಣದ ಮುನಿಸಿಪಲ್ ಬೋರ್ಡಿನವರು ತಮ್ಮ ಆಡಳಿತೆಯೊಳಗಿರುವ ಎಲ್ಲಾ ಶಾಲೆಗಳಲ್ಲಿ ಶಿಕ್ಷಣವು ಉಚಿತವಾಗಿ ದೊರೆಯುವ ಏರ್ಪಾಡನ್ನು ಮಾಡಿರುವರು

ಲಾಹೋರಿನ ದಯಾನಂದ ಕೋಲೇಜಿನ ವರ್ಧಂತಿ ಸಮಯ ಕೋಲೇಜಿನ ಬಗ್ಗೆ ರೂ ೪೨೦೦೦ ವಸೂಲಾಗಿರುವುದು

ಮುಂಬಯಿಪಾರಿಬಂದರಿನಲ್ಲಿರುವ ಸಕ್ಕರೆ ಕೋಠಡಿಗಳಿಗೆ ಬೆಂಕಿ ಬಿದ್ದು ಕಾಲು ಲಕ್ಷ ಸಕ್ಕರೆ ಗೋಣಿಗಳು ನಾಶವಾಗಿ ಹೋಗಿರುವವು. ಸಕ್ಕರೆಗೆ ಹೀಗೆ ಮೂರಾವರ್ತಿ ಬೆಂಕಿ ಬಿತ್ತು. ಸಕ್ಕರೆ ಧಾರಣೆಯು ಚಡಾವಾಗುತ್ತಲಿದೆ.

ದಕ್ಷಿಣ ಹಿಂದುಸ್ಥಾನ.

ವ್ಯಾಸರಾಯ ಪ್ರಭುಗಳಿಗೆ ತಮ್ಮ ದೇಶದ ಸಂಚರಣೆಯ ನಿಮಿತ್ಯ ಸ್ವಲ್ಪ ದೇಹಾಲಸ್ಯವು ಉಂಟಾದ್ದರಿಂದ, ತಿರುಚಿನಾಪಳ್ಳಿ, ಮದುರಾ, ತಂಜಾವೂರುಗಳನ್ನು ಸಂದರ್ಶಿಸದೆ ಎರಡು ದಿನ ಬೆಂಗಳೂರಲ್ಲಿಯೇ ಇದ್ದುಕೊಂಡು ಅಲ್ಲಿಂದ ನಿನ್ನೆ ದಿನ ಮದರಾಸಿಗೆ ಬಂದು ತಲ್ಪುವರಾಗಿ ತಿಳಿಯುತ್ತೇವೆ

ಯುರೋಪ್ ದೇಶದಲ್ಲಿ ಕೆಂಪುಗಳ ಬೆಲೆಯು ಕಡಿಮೆಯಾಗಿ ಹೋಗಿರುವುದು ಈ ನಿಮಿತ್ಯ ತಮಗೆ ಹೆಚ್ಚು ನಷ್ಟವಾಗಿರುವದರಿಂದ ಬರ್ಮಾದ ಕೆಂಪಿನ ಗಣಿಯ ಗುತ್ತಿಗೆದಾರರು ತಾವು ಕೊಡುವ ಗುತ್ತಿಗೆ ಹಣವನ್ನು ಕಡಿಮೆ ಮಾಡಬೇಕಂದು ಸ್ಟೇಟ್ ಸೆಕ್ರಿಟರಿಯವರನ್ನು ಕೇಳಿಕೊಂಡಿದ್ದರು ಸ್ಟೇಟ್ ಸೆಕ್ರಿಟರಿಯವರು ಇವರ ಈ ಪ್ರಾರ್ಥನೆಯನ್ನು ಮನ್ನಿಸಲಿಲ್ಲ ಆದರೆ ಗುತ್ತಿಗೆಯ ಹಣವನ್ನು ಸಾವಕಾಶವಾಗಿ ಕಂತುಗಳಲ್ಲಿ ಕೊಡಬಹುದೆಂದು ಆಜ್ಞಾಪಿಸಿರುವರು

ಮೈಸೂರು ಹೈಕೋರ್ಟು ಜಡ್ಜರಾದ ಮಿ। ಎಸ್। ಎಸ್। ಸೆಟ್ಲೂರರವರ ಬದಲಿಗೆ ಮಿ। ಕೆ। ಎಸ್। ಚಂದ್ರಶೆಟ್ಟಿ ರಯ್ಯರ್ ಎಂಬವರನ್ನು ಸಧ್ಯಕ್ಕೆ ನೇಮಿಸಿರುವರು

ಮದ್ರಾಸು ಪ್ರೊವಿನ್ಸಿಯಲ್ ಕೋಂಗ್ರೆಸ್ ಕಮಿಟಿಯವರ ಅಧ್ಯಕ್ಷರಾದ ನವಾಬ್ ಸಯ್ಯದ್ ಮಹಮ್ಮದರವರು ಹೊಸ ಕೌನ್ಸಿಲು ಮಾರ್ಪಾಟುಗಳ ಕ್ರಮವನ್ನು ಬಂಗಾಳದಂತೆಯೇ ಇಲ್ಲಿ ಸಹಾ ತಿದ್ದಬೇಕೆಂದು ಸ್ಟೇಟ್ ಸೆಕ್ರೆಟರಿಯವರನ್ನು ಟೆಲಿಗ್ರಾಮು ಮೂಲಕ ಪ್ರಾರ್ಥಿಸಿರುವರು

ದಕ್ಷಿಣ ಕನ್ನಡ.

ಮಲ್ಲಬಾರ ವ ದಕ್ಷಿಣ ಕನ್ನಡಾ ಜಿಲ್ಲೆಗಳನ್ನು ಕೂಡಿಸಿ ಉಂಟಾದ ಇಲೆಕ್ಟೋರೇಟಿನ ಮುನಿಸಿಪಲ್ ಕೌನ್ಸಿಲು ತಲೂಕು ವ ಡಿಸ್ಟ್ರಿಕ್, ಬೋರ್ಡುಗಳು ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಒಬ್ಬ ಎಡ್ಡಿಶನಲ್ ಮೆಂಬರರನ್ನು ಆರಿಸಬೇಕಾದ್ದರಿಂದ ಮ। ರಾ। ರಾ। ರಾವ್ ಸಾಹೇಬ್ ಸಾಯಿಂಪಳ್ಳಿ, ಸುಬ್ಬರಾವ್ ಅವರ್ಗಳ್ ಮಂಗಳೂರು, ವ ರಾ ರಾ। ಮನ್ನಾತ್ ಕೃಷ್ಣನ್ ನಾಯರ್ ಅವರ್ಗಳ್ ಕಲ್ಲಿಕೋಟೆ, ಮ। ರಾ। ರಾ। ಪಾಲಘಾಟ ಅಯ್ಯನಾರ್ ಕುಟ್ಟಿ ಪಿಳ್ಳೆ ಚಿನ್ನಸ್ವಾಮಿ ಪಿಳ್ಳೆ ಅವರ್ಗಳ್ ಪಾಲಘಾಟ್, ಇವರು ಉಮೇದ್ವಾರರಾಗಿ ಶಿಫಾರಸು ಮಾಡಲ್ಪಟ್ಟಿದ್ದಾರೆ

ಮದ್ರಾಸು ನ್ಯಾಯವಿಧಾಯಕ ಸಭೆಗೆ ಜಮೀನುದಾರರಲ್ಲದ ಇತರ ಭೂಮಾಲಿಕರಲ್ಲಿ ಮೆಂಬರುತನಕ್ಕೆ ದಕ್ಷಿಣಕನ್ನಡ ಮತ್ತು ಮಲೆಬಾರ ಜಿಲ್ಲೆಗಳಲ್ಲಿ ಬಹುಮಾನ ಪಟ್ಟ ಕೊಲ್ಲಿಂಗೋಡ ರಾಜರವರು ಶಿಫಾರಸುಹೊಂದಿರುವರು

ರಾಷ್ಟ್ರೀಯ ಪ್ರಾಂತಿಕ ಸಭೆ ಮೆಂಬರುಗಳ ಚುನಾವಣೆ ಒಗ್ಗೆ ಓಟು ಕೊಡುವ ದಿನಗಳು —ರಾಷ್ಟ್ರೀಯ ನ್ಯಾಯ ವಿಧಾಯಕ ಸಭೆಗೆ ಭೂಮಾಲಿಕರು ಈ ತಿಂಗಳ ೨೭ನೇ ತಾರೀಕು ಮಹಮ್ಮದೀಯರು ಈ ತಿಂಗಳ ೩೩ನೇ ತಾರೀಕು

ಪ್ರಾಂತಿಕ ನ್ಯಾಯವಿಧಾಯಕ ಸಭೆಗೆ ಮುನಿಸಿಪಾಲ್ ಕೌನ್ಸಿಲು ವ ಡಿಸ್ಟ್ರಿಕ್ಟ್ ವ ತಾಲೂಕು ಬೋರ್ಡುಗಳು ಇದೆ ತಿಂಗಳ ೧೫ನೇ ತಾರೀಕು ಜಮೀನುದಾರರು ೧೩ನೇ ತಾರೀಕು, ಇತರ ಭೂಮಾಲಿಕರು ದಶಂಬರ ೧೭; ಮಹಮ್ಮದೀಯರು ದಶಂಬರ ೧೮ನೇ ತಾರೀಕು

ಓಟು ಕೊಡುವವರು ಆಯಾ ಕಡೆಯ ರಿವಿನ್ಯು ಡಿವಿಜನಲ್ ಆಫೀಸರರ ಅಥವಾ ಓಟರರು ಇರುವಂಥಾ ಆಯಾ ತಾಲ್ಲೂಕು ತಹಸೀಲ್ದಾರರ ಕಚೇರಿಗಳಲ್ಲಿ ಓಟುಗಳನ್ನು ಕೊಡಬೇಕಾಗಿರುವುದು.

ಮಂಗಳೂರು. ಕಳೆದ ತಾ. ೨೮ನ್ನು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಸಭೆಯು ಜರಗಿ ಆಯಾಯ ತಾಲೂಕುಗಳ ಆದಾಯ ವೆಚ್ಚಗಳ ಅಂದಾಜುಪಟ್ಟಿಗಳನ್ನು ಮಂಜೂರುಮಾಡಲಾಯಿತು.

ಡಿಸ್ಟ್ರಿಕ್ಟ್ ವ ಮುನ್ಸಿಫ್ ಕೋರ್ಟುಗಳು ಕ್ರಿಸ್ತಮಸ್ ರಜೆಯ ಸಮ್ಮಂಧ ತಾ. ೨೪ಕ್ಕೆ ಮೊಕೂಫ್ ಆಗಿ ಪುನಹಾ ಜನವರಿ ತಾ. ೩ಕ್ಕೆ ತೆರಿಯೋಣಾಗುವವು.

ಮಂಗಳೂರು ತಾಲೂಕಿನ ಜಮಾಬಂದಿಯು ಜನವರಿ ತಾ. ೨೪ರಿಂದ ೩೧ರ ವರೆಗೆ ಮುಲ್ಕಿಯಲ್ಲಿಯೂ ಫೆಬ್ರವರಿ ತಾ. ೪ರಿಂದ ೧೨ರ ವರೆಗೆ ಮೂಡಬಿದ್ರೆಯಲ್ಲಿಯೂ ತಾ. ೧೬ರಿಂದ ೨೪ರ ವರೆಗೆ ಬಂಟ್ವಾಳದಲ್ಲಿಯೂ ತಾ. ೨೮ರಿಂದ ಮಾರ್ಚ ತಾ. ೭ರ ವರೆಗೆ ಮಂಗಳೂರಲ್ಲಿಯೂ ನಡಿಯುವದಂತೆ.

ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೫ ಪ್ಲೇಗ್ ಮರಣಗಳೂ ೪ ಸಿಡುಬುರೋಗದ ಮರಣಗಳೂ ಇದ್ದವು.

ಮಂಗಳೂರು ತಾಲೂಕಿನ ಜಮಾಬಂದಿಯು ಡಿಸ್ಟ್ರಿಕ್ಟ್ ಕಲ್ಲೆಕ್ಟರ್ ಧೊರೆಗಳವರಿಂದಲೂ, ಕಾಸರಗೋಡು ತಾಲೂಕಿನ ಜಮಾಬಂದಿಯು ಹೆಡ್‌ಕ್ವಾರ್ಟರ್ಸ್ ಡಿ। ಕಲ್ಲೆಕ್ಟರರಿಂದಲೂ, ಪುತ್ತೂರು ತಾಲೂಕಿನ ಜಮಾಬಂದಿಯು ಜನರಲ್ ಡ್ಯೂಟಿ ಡಿಪ್ಯುಟಿ ಕಲ್ಲೆಕ್ಟರರಿಂದಲೂ, ಉಡುಪಿ ವ ಕುಂದಾಪುರ ತಾಲೂಕುಗಳ ಜಮಾಬಂದಿಯು ಹೆಡ್ ಅಸಿಸ್ಟಾಂಟ್ ಕಲ್ಲೆಕ್ಟರರವರಿಂದಲೂ ನಡಿಸಲ್ಪಡುವದು.

ಕಾಸರಗೋಡು. ಇಲ್ಲಿ ಪ್ರತಿ ತಿಂಗಳಂತ್ಯದ ಶನಿವಾರಕ್ಕೆ ನೆರೆದುಬರುವ ಶಾಲಾ ಉಪಾಧ್ಯಾಯರುಗಳ ಸಂಘವು ಇನ್ನುಮುಂದೆ ೪ ತಿಂಗಳಿಗೊಮ್ಮೆ ಮಾತ್ರ ಕೂಡುವದೆಂತ ಕಳೆದ ತಿಂಗಳಂತ್ಯದ ಶನಿವಾರ ದಿವಸ ಕೂಡಿದ ಸಭೆಯಲ್ಲಿ ನಿರ್ಣಯಿಸಿರುವರಂತೆ. ಇಲ್ಲಿಯ ಶಾಲೆಯು ಪುನಹ ಮೊದಲಿನಂತೆ ಸೆಕೆಂಡರಿಯಾಗಿ ಮಾಡುವ ಆಲೋಚನೆಯು ವಿದ್ಯಾ ಇಲಾಖೆಯ ಮೇಲಾಧಿಕಾರಿಗಳಲ್ಲಿ ಇಲ್ಲವೆಂತ ವದಂತಿ ಕೇಳಿ ತುಂಬಾ ವ್ಯಸನಪಡುತ್ತೇನೆ.

ಕಳೆದ ವಾರದ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಉತ್ತರ ಹಿಂದುಸ್ತಾನದಿಂದ ಬಂದ ಬಳೆ ಆಟದವರು ಇದೇ ಕಳೆದ ಶನಿವಾರ ದಿವಸ ತಮ್ಮ ಆಟವನ್ನು ಮುಕ್ತಾಯಮಾಡಿ ಇಲ್ಲಿಂದ ಉತ್ತರದೇಶಕ್ಕೆ ತೆರಳಿರುವರು.

ಪುತ್ತೂರು. ನಮ್ಮ ಇಲ್ಲಿಯ ಕಾಯಂ ಮುನ್ಸಿಫರಾದ ಮೆ। ಎ. ಪಿ. ಪಿ. ಸಾಲ್ಡಾಂಙಾರವರಿಗೆ ತಂಜಾವೂರು ಜಿಲ್ಲಾ ಪಟ್ಟುಕ್ಕೋಟೆಗೆ ವರ್ಗವಾದದರಿಂದ ಇಲ್ಲಿಗೆ ಮು। ರಾ। ರಾ। ಕೆ. ಅಪ್ಪಾಜಿರಾಯರಿಗೆ ವರ್ಗವಾದ್ದಾಗಿ ವರ್ತಮಾನವಿರುವದು.

ಗತಿಸಿದ ಇಲ್ಲಿಯ ವಕೀಲ್ ಮು। ರಾ। ರಾ। ಸವುರು ರಘುನಾಥಯ್ಯನವರ ೧೩ನೇ ದಿವಸ ಇಲ್ಲಿಯ ಶ್ರೀ ವೇಣುಗೋಪಾಲ ದೇವರ ಮಂದಿರದಲ್ಲಿ ಸ್ವಜಾತಿಯ ಸ್ತ್ರೀಪುರುಷರಿಗೆ ಭೋಜನವು ಕೊಟ್ಟದ್ದಲ್ಲದೆ, ಕ್ಲಬ್ ಹೊಲ ಅಂಗಳದಲ್ಲಿ ಹೊಲೆಯರಿಗೆ ಅನ್ನವೂ ಇತರಿಗೆ ೧ ಪಾವು ಲಾಗ್ಯಾತು ಅರ್ಧ ಸೇರು ವರೆಗೆ ಸುಮಾರು ೧೦೦೦ ಜನ ಬಡವರಿಗೆ ಧರ್ಮವೂ ಕೊಡಲ್ಪಟ್ಟಿತು.

ಮುಲ್ಕಿ. ಇದೇ ತಿಂಗಳ ತಾರೀಕು ೧ರಿಂದ ಇಲ್ಲಿಯ ಬಂಗ್ಲೆಯಲ್ಲಿದ್ದ ಬೂಕ್ಸು ಡಿಪೋ ಕಬಾಟು ಪುಸ್ತಕ ಭಂಡಾರ ಸಮೇತ ಇಲ್ಲಿಯ ಚರಂತಿಪೇಟೆ ಮೆ। ಜೆರಮಿಯ ಸುಂದರರಲ್ಲಿಗೆ ಸಾಗಿಸಲ್ಪಟ್ಟಿರುವದಲ್ಲದೆ ಇನ್ನು ಗಿರಾಕಿಗಳಿಗೆ ಆದಿತ್ಯವಾರ ವಿನಹಾ ಎಲ್ಲಾ ದಿನಗಳಲ್ಲಿ ಅವರಲ್ಲಿಯೇ ಪುಸ್ತಕಗಳು ವಿಕ್ರಯವಾಗುವಂತೆ ಮೇಲಾಧಿಕಾರರು ಮಾಡಿದ್ದು ಲೇಸಾಗಿರುವದು.

ಇಲ್ಲಿಯ ಸರ್ಕಾರಿ ಹುಡುಗಿಯರ ಶಾಲಾ ಮಿಸ್ಟ್ರೆಸ್‌ಗಳಿಗೆ ತಾರೀಕು ೨೦ರಲ್ಲು ಆಕ್ಟೋಬರ ತಿಂಗಳ ವರೆಗಿನ ಒಟ್ಟು ಮೂರು ತಿಂಗಳ ಸಂಬಳ ಬಂದಿರುವದಂತೆ. ಇನ್ನು ನವೆಂಬರ ದಶಂಬರ ತಿಂಗಳ ಸಂಬಳಕ್ಕೆ ಎಷ್ಟು ಕಾಲ ಹೋಗುವದೋ ಏನೋ ಎಂಬದಾಗಿ ಚಿಂತಾಕ್ರಾಂತರಾಗಿರುವರಂತೆ.

ಕುಂಡಡ್ಕ. ಇಲ್ಲಿಯ ಶಾಲೆಗೆ ಜಮೀನುದಾರ ಗುಡ್ತಪ್ಪ ರೈಗಳು ಇಷ್ಟರವರೆಗೆ ರೂ. ೫೦೦ನ್ನು ಖರ್ಚುಮಾಡಿರುವರು.

ಉಡುಪಿ. ಸಂಸ್ಕೃತಶಾಲೆಗಳ ಇನಿಸ್ಪೆಕ್ಟರರಾದ ಮೆ. ಕೃಷ್ಣಮಾಚಾರ್ಯ ಎಮ್. ಎ., ಇವರು ಅಭಿನವ ಭಾಣಭಟ್ಟ ಎಂಬ ಬಿರುದನ್ನು ಪಡದಿರುವ ಪಂಡಿತರಾದ ಆರ್. ವಿ. ಕೃಷ್ಣಮಾಚಾರ್ಯ ಇವರೊಂದಿಗೆ ಸರ್ಕೀಟಿನ ಮೇಲೆ ತಾ. ೪ ಲ್ಲು ಇಲ್ಲಿಗೆ ಬಂದು ಇಲ್ಲಿಯ ಸಂಸ್ಕೃತ ಶಾಲೆಯ ಸಂದರ್ಶನ ವ ಪರೀಕ್ಷೆಯನ್ನು ಮಾಡಿ, ಹೊಸ ಕಾರ್ಯ ನಿರ್ವಾಹಕ ಸಭೆಯನ್ನು ಏರ್ಪಡಿಸಿ, ತಾ. ೭ ಲ್ಲು ವಾಪಸು ತೆರಳುವವರಾದರು. ಈ ಕಾರ್ಯ ನಿರ್ವಾಹಕ ಸಭೆಗೆ ಇಲ್ಲಿಯ ಡಿ. ಮುನಸೀಫರಾದ ಮ। ರಾ। ದೇವರಾಯರವರು ಅಧ್ಯಕ್ಷರಾಗಿರುವದಕ್ಕೆ ಒಪ್ಪಿರುವರು. ಇದು ಸಂತೋಷಕರವೇ.

ಜಿಲ್ಲಾ ಜಡ್ಜರು ಕೋರ್ಟು ಸಂದರ್ಶನೆಯ ಬಗ್ಗೆ ಈ ತಾ. ೬ ಲ್ಲು ಇಲ್ಲಿಗೆ ಬಂದು ಸಂದರ್ಶನೆಯ ಕೆಲಸಗಳನ್ನು ತೀರಿಸಿ ಮಂಗಳೂರಿಗೆ ತೆರಳಿದರು. ಇವರು ಇಲ್ಲಿ ಹೊಸತಾಗಿ ಸ್ಥಾಪಿತವಾದ ಪಂಚಮರ ಶಾಲೆಯನ್ನು ಕಂಡು ಸಂತೋಷಪಟ್ಟರು.

ಈ ಬರುವ ಪರ್ಯಾಯ ಜಾತ್ರೆಗೆ ಇಷ್ಟು ವರ್ಷಕ್ಕಿಂತಲೂ ಹೆಚ್ಚು ಮಂದಿ ಯಾತ್ರಿಕರು ನಿರೀಕ್ಷಿಸಲ್ಪಟ್ಟಿದ್ದಾರೆ. ಇಷ್ಟು ದೊಡ್ಡ ಕ್ಷೇತ್ರದಲ್ಲಿ ನಿರಾತಂಕವಾಗಿ ಬ್ರಾಹ್ಮಣವಾಸಕ್ಕೆ ಯೋಗ್ಯವಾದ ಚಿಕ್ಕದಾದರೂ ಒಂದು ಛತ್ರ ಇಲ್ಲವೆ ಧರ್ಮಶಾಲೆ ಇಲ್ಲದಿರುವುದು ಒಂದು ದೊಡ್ಡ ಕೊರತೆ ಎಂಬ ವಿಷಯವು ಇಲ್ಲಿಯ ಪ್ರಮುಖರ ಮನಸ್ಸಿಗೆ ಬಾರದಿರುವದು ಆಶ್ಚರ್ಯವೇ ಸರಿ.

ಈ ಪರ್ಯಾಯದ ಎರಡು ವರುಷಗಳಲ್ಲಿ ಇಲ್ಲಿಯ ಭೋಜನ ಶಾಲೆಯ ಊಟದಿಂದಲೆ ಕಾಲಕ್ಷೇಪ ಮಾಡುವದಕ್ಕಾಗಿ ೬೦ ಬ್ರಾಹ್ಮಣ ಕುಟುಂಬವು ಪರವೂರುಗಳಿಂದ ಇಲ್ಲಿಗೆ ಬಂದು ಅಲ್ಲಲ್ಲಿ ಮನೆಬಿಡಾರಗಳನ್ನು ಮಾಡಿಕೊಂಡು ವಾಸವಾಗಿರುವವೆಂಬದಾಗಿ ಈ ಸಾಲಿನ ಭೋಜನ ಶಾಲೆಯ ಖಾನೇಷುಮಾರಿಯಿಂದ ತಿಳಿದು ಬಂದಿದೆಯಂತೆ.

ಸಾಧಾರಣ ಜನರಿಗೆ ಪ್ರವೇಶವಿಲ್ಲದ ಇಲ್ಲವೆ ಮುಟ್ಟಕೂಡದ ಈ ಕ್ಷೇತ್ರದ ಅತ್ಯಂತ ಪವಿತ್ರವಾದ ಸ್ಥಳದಿಂದ ಇತ್ತಲಾಗೆ ಒಂದು ಪವಿತ್ರವಾದ ವಸ್ತುವು ಕಾಣೆಯಾಯಿತು. ಪ್ರಸಿದ್ಧವಾದ ಅನೇಕ ಮಾಂತ್ರಿಕರೂ, ಪ್ರಾಶ್ನಿಕರೂ ಶ್ರಮಪಟ್ಟರೂ ಬೇರೆ ರೀತಿಗಳಿಂದ ತಲಾಶಿ ಮಾಡಿದರೂ ಪತ್ತೆಯಾಗಲಿಲ್ಲ. ಕೊನೆಗೆ ಸ್ವದೇಶಾಭಿಮಾನಿಯ ಹಿಂದಿನ ಒಂದು ಸಂಚಿಕೆಯಲ್ಲಿ "ಇದೇನು ಆಶ್ಚರ್ಯ?" ಎಂಬ ಶಿರೋಲೇಖನದ ಪತ್ರದಲ್ಲಿ ಪ್ರಸ್ತಾಪಿಸಿದ್ದ "ಕಲ್ಲುಕುಟಿಗ" ಎಂಬ ಭೂತದ ಮುಖಾಂತರ ವಿಚಿತ್ರ ರೀತಿಯಲ್ಲಿ ಪತ್ತೆಯಾಯಿತು. ಆ ದೈವವನ್ನು ಪ್ರಾರ್ಥನೆ ಮಾಡಿಕೊಂಡ ನಂತರ ಕನ್ನಡಲಿಪಿ ವ ಭಾಷೆಯಲ್ಲಿ ಬರದ ಒಂದು ಚೀಟು ಇತ್ತು. ಅದರಲ್ಲಿ ೫೦ ರೂಪಾಯಿಯನ್ನು ಕೊಟ್ಟರೆ ಆ ವಸ್ತುವನ್ನು ತಂದುಕೊಡುವೆನೆಂತ ಬರೆದಿತ್ತು. ೫೦ ರೂಪಾಯಿಯ ಥೈಲಿಯನ್ನು ಅದರ ಮುಂದ [illegible] ಥೈಲಿಯು ಮಾಯವಾಗಿ ಆ ವಸ್ತುವು ಅಲ್ಲಿ ಉಂಟು ತೆಗೆದುಕೊಳ್ಳಬಹುದೆಂತ ಬೇರೊಂದು ಚೀಟು ಬರದುದ್ದಿತ್ತು. ಆ ಪ್ರಕಾರ ಆ ವಸ್ತುವನ್ನು ಪಡಕೊಂಡರು. ಅದಕ್ಕೆ ಸಮ್ಮಂಧವಾದ ಬೆಲೆಯುಳ್ಳ ವಸ್ತುಗಳು ಇಲ್ಲದಿರಲು ತಿರಿಗಿ ಕೇಳಿಕೊಂಡರು. ಅದು ಬೇರೆಯವರ ಕೈಸೇರಿದ್ದರಿಂದ ಸಾಧ್ಯವಿಲ್ಲವೆಂತ ಬರದು ಹಾಕಿತಂತೆ. ಅಬ್ಬಬ್ಬ! ದೋಳು ತಲೆ ಕಲ್ಲು ಕುಟಿಗನೆ ಎಂತ ಅಂದುಕೊಂಡು ಯಜಮಾನರು ತಲೆಗೆ ಕೈ ಇಟ್ಟುಕೊಂಡು ಹಿಂದಕ್ಕೆ ಬಂದರಂತೆ.

ಈ ವಸ್ತುವನ್ನು ಕಳವು ಮಾಡಿದ್ದಾಗಿ ಯಾರ ಮೇಲೆ ಸಂಶಯವಿತ್ತೋ ಅವರು ಇಲ್ಲವೆ ಅವರ ಕಡೆಯವರು ಕಲ್ಲು ಕುಟಿಗನ ವಿಷಯವನ್ನು ತಾವಾಗಿ ಪ್ರಥಮದಲ್ಲಿ ಸೂಚಿಸಿದ್ದರಿಂದಲೂ ಈ ಭೂತವು ಈ ತರದ ಕಳವಿನ ಪತ್ತೆಯನ್ನು ತತ್ಪೂರ್ವದಲ್ಲಿಯಾಗಲೀ ತದನಂತರದಲ್ಲಿಯಾಗಲೀ ಮಾಡದಿರುವದರಿಂದಲೂ ಕಲ್ಲುಕುಟಿಗನ ಮುಖಾಂತರ ಪತ್ತೆಯಾದದೆಂಬದರ ವಿಷಯದಲ್ಲಿ ಜನರೆಲ್ಲರು ಸಂಶಯಗ್ರಸ್ತರಾಗಿರುತ್ತಾರೆ.

ಈ ಕ್ಷೇತ್ರದ ಪ್ರಮುಖರು ಪಡ್ವಿಧ ಪ್ರಯತ್ನದಿಂದಲೂ ಇದನ್ನು ಕಂಡು ಹಿಡಿದು ಇದರ ನಿಜಸ್ಥಿತಿಯನ್ನು ಬಹಿರಂಗಪಡಿಸಿ ಅಪರಾಧಿಯ ವಿಷಯದಲ್ಲಿ ತಕ್ಕ ಆಲೋಚನೆ ಮಾಡದಿದ್ದರೆ ಸಾಮಾನ್ಯ ಜನರಿಗೆಲ್ಲ ಈ ಸ್ಥಳದಲ್ಲಿ ತುಂಬಾ ಅವಿಶ್ವಾಸಕ್ಕೆ ಕಾರಣವಾದೀತೆಂಬದರಲ್ಲಿ ಸಂಶಯವಿಲ್ಲ.

ವಿವಿಧ ವಿಷಯಗಳು.

ದನವಿನ ಗೊಬ್ಬರವು ಸಾರವತ್ತಾಗಿರ ಬೇಕಾದರೆ, ಸಗಣಿ ಮತ್ತು ಕಸವನ್ನು ಗುಂಡಿಗಳಲ್ಲಿ ತುಂಬಿಡಬೇಕು. ಕೊಳೆಯದೇ ಇನ್ನೂ ಹೊಸದಾಗಿರುವ ಸಗಣಿಯನ್ನು ಜಮೀನಿನ ಮೇಲ್ಗಡೆಯೇ ಹಾಕಿದಲ್ಲಿ, ಬಿಸಲು ಮಳೆ ತಗಲಿ ಅದರಲ್ಲಿನ ಗೊಬ್ಬರದ ಗುಣವು ಆರಿಹೋಗುವದು. ಸಗಣಿಯನ್ನು ಬೆರಣಿಮಾಡಿ ಸುಟ್ಟು, ಬೂದಿಯನ್ನು ಜಮೀನಿಗೆ ಹಾಕಿದರೆ ಶೇಕಡ ೯೭ರಷ್ಟು ಗೊಬ್ಬರದ ಸಾರ ಕಮ್ಮಿಯಾಗುತ್ತೆ.—ಸೆಂಟ್ರಲ್ ಪ್ರಾವಿನ್‌ಸೆಸ್ ಅಗ್ರಿಕಲ್ಚರಲ್ ಗಜೆಟ್, ಆಕ್ಟೋಬರ ೧೯೦೭.

ತೆಂಗು, ಅಡಿಕೆ, ಇತ್ಯಾದಿ ಜಾತಿಯ ಮರಗಳಿಗೆ ವಿಶೇಷ ಗಾಳಿ ಬೆಳಕು ಇಲ್ಲದಿದ್ದರೆ ಅವು ಎಂಥಾ ಶ್ರೇಷ್ಠವಾದ ಭೂಮಿಯಲ್ಲೂ ಕೂಡ ಚೆನ್ನಾಗಿ ಫಲಿಸುವದಿಲ್ಲ. ಮರಗಳು ದೂರ ದೂರವಾಗಿದ್ದಷ್ಟೂ ಫಲಬಿಡುವುದು ಹೆಚ್ಚು. ಆದರೆ ಒಂದು ತೋಟದಲ್ಲಿ ಹೀಗೆ ತಾನೆ ದೂರ ದೂರವಾಗಿ ಇಡುವ ಪಕ್ಷದಲ್ಲಿ ಮರಗಳು ಸಂಖ್ಯೆ ಕಮ್ಮಿಯಾಗಿ ಫಸಲು ಕಡಿಮೆಯಾಗುವದು. ಸಾಧಾರಣವಾಗಿ ಮರದಿಂದ ಮರಕ್ಕೆ ೩೦ ಅಡಿ ಬಿಟ್ಟಿದ್ದರೆ ಸಾಕೆಂದು ತೋರುತ್ತದೆ.—ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ಆಕ್ಟೋಬರ ೧೯೦೭.

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಒಂದು ವಿಧವಾದ ಕಾಡು ಜಾಜಿಕಾಯಿ ಬೀಜದಿಂದ ಮೇಣದಬತ್ತಿ ಮಾಡುತ್ತಾರೆ. ಈ ಬೀಜವೂ ಮತ್ತು ಇದರಿಂದಾದ ಮೇಣದ ಬತ್ತಿಯೂ ೧೯೦೬ನೇ ಇಸವಿ ಡಿಶಂಬರ್ ಮಾಹೆಯಲ್ಲಿ ನಡೆದ ಬಂಗಾಳ ಏಷ್ಯಾಟಿಕ್ ಸೊಸೈಟಿಯ (Asiatic Society of Bengal) ಮೀಟಿಂಗಿನಲ್ಲಿ ಪ್ರದರ್ಶಿಸಲ್ಪಟ್ಟವು. ಈ ಬೀಜವು ಹೇರಳವಾಗಿ ಸಿಕ್ಕುವದಾದರೆ ಇದರಿಂದ ಎಣ್ಣೆಯನ್ನು ತೆಗೆದು ದೀಪ ಉರಿಸುವದಕ್ಕೂ ಮತ್ತು ಗೃಹಕೃತ್ಯದಲ್ಲಿ ಇನ್ನೂ ಇತರ ಕೆಲಸಗಳಿಗೂ ಉಪಯೋಗಿಸಬಹುದು.—ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ಆಕ್ಟೋಬರ ೧೯೦೭.

ಚೀನಾ ದೇಶದಲ್ಲಿ ಬಾಲಕರು ಪಾಠಶಾಲೆಯಲ್ಲಿ ಉಪಾಧ್ಯಾಯನ ಮುಂದೆ ಪಾಠವನ್ನೊಪ್ಪಿಸುವಾಗ ಈ ದೇಶದ ಬಾಲಕರಂತೆ ಉಪಾಧ್ಯಾಯನಿಗೆ ಅಭಿಮುಖವಾಗಿನಿತ್ತು ಪಠಿಸುವದರ ಬದಲಾಗಿ ಉಪಾಧ್ಯಾಯನ ಕಡೆಗೆ ಪರಾಙ್ಮುಖವಾಗಿ ಪಾಠವನ್ನು ಪಠಿಸುವರು

ಆಯುಷ್ಯಕಾಲ — ಆನೆಗಳು ೨೦೦ ವರುಷ, ಒಂಟೆ ೪೦ ವರುಷ, ಕುದುರೆಯು ೩೦, ಎತ್ತು ೨೦, ನಾಯಿ ೧೨ ವರುಷ, ಬೆಕ್ಕು ೧೦ ವರುಷ ಜೀವಿಸುವವು ಗಿಳಿಗಳು ೧೦೦ ವರುಷ ಮತ್ತು ಕೆಲವು ಮತ್ಸ್ಯಗಳು ೧೫೦ರಿಂದ ೩೫೦ ವರುಷಗಳ ವರಿಗೂ, ತಿಮಿಂಗಿಲವು ೮೦೦ ಸಂವತ್ಸರಗಳವರಿಗೂ ಜೀವಿಸುವುದು

ಫುಲ್‌ಬೈಂಡ್ (ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ಖಾತೆಗಳಿದ್ದು ಗಾತ್ರಗಳು [illegible]

[illegible] × 8¼ 3 × 5¼ 8¼ × 6' 6. × 4 ಪರಿಮಾಣದಲ್ಲಿದ್ದು ಸಾವುಕಾರ ಅಂಗಡಿಗಾರ, ವರ್ತಕಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು

ಉಪಯೋಗಕ್ಕೆ ಹಾತ್ರಿಯಾಗಿದ್ದು

[illegible] ಕಾಗದದಲ್ಲಿ ತಯ್ಯಾರಿಸಲ್ಪಟ್ಟಿರುತ್ತವೆ

ಇದೇ ಕಾಗದದ [illegible] ಸ್ಕೂಲ ಗಳಿಗೆ [illegible] ಪುಸ್ತಕಗಳು ಸಹಾ ತಯ್ಯಾರಿರುವವು

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ [illegible] ಪುಸ್ತಕಗಳೆಲ್ಲವುಗಳನ್ನು ನಾವು ಇತ್ತ[illegible] ಉತ್ಕೃಷ್ಟವಾದ ಮಾರ್ಬಲ್ ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ [illegible] ತಯ್ಯಾರಿಸಿ ಕೊಡುವೆವು

ನಮ್ಮ ದರಗಳ ದಯವಾಡಿ ಬರೆಕೊಳ್ಳಿ

ಮೆನೇಜರ್,
ಶಾರದಾ ಮುದ್ರಾಲಯ
ಮಂಗಳೂರು

ಹಣದ [illegible] ವಿನಿಯೋಗವು ಯಾವುದು – ಬೆಲೆಗ ತಕ್ಕ ಒಡವೆಗಳನ್ನು ಪಡಿಯುವುದೇ.

ಮಂಗಳೂರು ವ್ಯಾಪಾರ ಸಂಘ

ಯಾ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್

ಸ್ಥಾಪಿತವಾಗಿ ೧೭ ವರುಷಗಳಾದವು.

ಪ್ರಥಮ[illegible] ಇದರಿಂದ ಸ್ವಕೀಯ[illegible] ಛಪಖಾನೆಯಲ್ಲಿ ಮುದ್ರಣ ಕೆಲಸಗಳನ್ನು ನಡಿಸುತ್ತಿರುವರು

ದೇಶ ವಿದೇಶೀಯ 'ಪ್ರೊವಿಜನ್ಸ್' ಯಾ ಆಹಾರ ಸಂಗ್ರಹ,

([illegible] ಬಿಸ್ಕೆಟ್ಸು ವ ಇನ್ನು ಅನೇಕ ನಮೂನೆಯ ಮಕ್ಕಳ ಆಹಾರಗಳಾದ [illegible])

ಡಾಕ್ಟ್ರರ ಔಷಧೋಪಚಾರದ ಸಮಸ್ತ ಔಷಧಿಗಳು,

([illegible] ಮೊದಲಾದವುಗಳು ಸಹಾ).

ಇವರ

ಔಷಧಾಲಯ

ದಲ್ಲಿ ದೊರಕುವದಲ್ಲದೆ, ಇಂಗ್ಲಿಷ ವೈದ್ಯಶಾಸ್ತ್ರದಲ್ಲಿ ಅನುಭವ[illegible] ಆದ ಡಾಕ್ಟರರಿಂದ ರೋಗಿಗಳು ಚಿಕಿತ್ಸೆಯನ್ನು ಹೊಂದಬಹುದು ಪರ ಸ್ಥಳಗಳಲ್ಲಿರುವವರು ತಮ್ಮ ರೋಗ ಪ್ರಕೃತಿಗಳನ್ನು ಬರೆಕೊಂಡು ತಕ್ಕ[illegible] ಔಷಧಿಗಳನ್ನು ಪಡಿಯಲು ಬಹುದು (ರೋಗ ಪ್ರಕೃತಿಗಳನ್ನು ಬರೆಕೊಳ್ಳುವವರು ತಮ್ಮ ಕಾಗದದೊಂದಿಗೆ ಉತ್ತರದ [illegible] ಸ್ಟಾಂಪನ್ನು ಕಳುಹಿಸಬೇಕಾಗಿರುವುದು)

ಶಾರದಾ ಛಾಪಖಾನೆ

ಕೋರ್ಟಿನ ಫೋರ್ಮುಗ, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು
ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು
ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು
ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು

ಪತ್ರಗಳನ್ನು ಬರಿಯುವ ವಿಳಾಸ —

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್.
ಮಂಗಳೂರು.

Mangalore Trading Association,
Mangalore. S. Canara.

Printed by V S Kamath, at the Mangalore Trading Association's Sharada Press, Mangalore.

Registered No. M. 400

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಪುಸ್ತಕ 3. ಮಂಗಳೂರು, ತಾರೀಕು 24ನೇ ಶುಕ್ರವಾರ ಡಿಸಂಬರ 1909. ಸಂಚಿಕೆ 38

William & Co. Fort Bombay.

ಅಮೃತಾಂಜನ. ಗಜಕರ್ಣದ ಮುಲಾಮು.

Trade Mark Registered

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು ಗಂಟ್ಲು ನೋವು ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವವು ... ದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಬಂಗಾರ ಬಹುಮಾನ ಪದಕವು ಸಿಕ್ಕಿರುತ್ತದೆ ಅಮೃತಾಂಜನವು ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು ಬಾಟ್ಲಿ ೧ರ ಕಿಮ್ಮತು ೪ ಆಣೆ

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

SAFE ★ EFFICACIOUS ★ SURE ★ WILLIAM & Co. BOMBAY ★ PILLS ★ OINTMENTS ★ POWDERS

ಕಿಮ್ಮತು ಆರು ಆಣೆ ಈ ನಮೂನೆ ಡಬ್ಬಿ

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು ಇದರಿಂದ ಉರಿಯು ಬರವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ 4

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ ಹಲ್ಲುಗಳು ಬೆಳ್ಳಗಾಗುತ್ತವೆ ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ದೂರಗಲಾಡಿಸುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ

ವಜ್ರಗುಟಿಕೆ.

ರಕ್ತಶುದ್ಧಿ ಧಾತ ಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪ್ರಾಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ ಇದರಲ್ಲಿ ಡೆಮಯಿಸ ಕೊಕೊ, ಲೆಸಿತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೩೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ 1

ಸುಂದರೀ ಮುಲಾಮು.

ಈ ಮುಲಾಮನ್ನು ನಿರಂತರವಾಗಿ ಮೋರೆಗೆ ಹಾಗಿಸುವದರಿಂದ ಮೋರೆಯ ಮೇಲಿನ ಮುದ್ದಣಗಳನ್ನೂ ಘಾಯದ ಕಲೆಗಳನ್ನೂ ಮತ್ತು ಕಪ್ಪದ ಕಲಂಕಗಳನ್ನೂ ತೆಗದು ಶಾಂತವಾದ ಮತ್ತು ಮನೋಹರವಾದ ರೂಪವನ್ನು ಕೊಡುತ್ತದೆ ಇದು ಚರ್ಮವನ್ನು ಮೃದು ಮಾಡಿ ಚಲುವಿಕೆಯನ್ನು ಕೊಡತ್ತದೆ ಡಬ್ಬಿ ೧ರ ಕಿಮ್ಮತು 8 ಆಣೆ. ಆರು ಡಬ್ಬಿಗಳ ಕಿಮ್ಮತು ರೂ 2—4—0

ಚೇಳು ಕಡಿತದ ಮೇಲಿನ ಔಷಧ

ಈ ಮಿಶ್ರಣದ ಕೆಲವು ತಟಕುಗಳನ್ನು ಚೇಳು ಕಚ್ಚಿದ ಭಾಗಕ್ಕೆ ಹಾಕಿದರೆ ನೋವು ಒಮ್ಮಿಗಲೇ ಕಮ್ಮಿಯಾಗುತ್ತದೆ ಕಣಜದ ಹುಳ ಮತ್ತು ಬೇರೆ ವಿಷವುಳ್ಳ ಜಂತು ಕಡತದ ಮೇಲೆ ಸಹ ಇದನ್ನು ಉಪಯೋಗಿಸಬಹುದು ಬಾಟ್ಲಿ ೧ರ ಕಿಮ್ಮತು 8 ಆಣೆ

ಕೇಶವರ್ಧಿನೀ ಎಣ್ಣೆ

ಇದನ್ನು ತಲೆಗೆ ಹಚ್ಚಿಕೊಂಡರೆ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ, ಸೌಂದರ್ಯವಾಗಿಯೂ ಬೆಳೆಯುವದು ಮತ್ತು ಮೆದುಳನ್ನು ತಂಪುಮಾಡಿ ಮನಃಶುದ್ಧಿ ಮಾಡುವದು ಬಾಟ್ಲಿ ೧ರ ಕಿಮ್ಮತು ೧ ರೂ. ಮೂರು ಬಾಟ್ಲಿಗಳಿಗೆ ರೂ. 2—4—0.

ಜುಲಾಬು ಮಾತ್ರೆಗಳು	ರೂ.	0—8—0
ತಾಂಬೂಲ ಗುಟಿಕೆ 50ಕ್ಕೆ	,,	0—8—0.
ಕಸ್ತೂರಿ ಮಾತ್ರೆ 50	,,	0-10—0
ಖಜ್ಜಿ ಮುಲಾಮು	,,	0—3—0.
ನೇತ್ರಾಂಜನ	,	0—4—0.

ಈ ಕಂಪೆನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕೆಟಲಾಗಿಗೆ ಬರದಲ್ಲಿ ರವಾನಿಸಲ್ಪಡುವದು.

ವಿಳಾಸ:— ವಿಲಿಯಂ ಮತ್ತು ಕಂಪೆನಿ, ಫೋರ್ಟ್ ಮುಂಬಯಿ. ಟೆಲಿಗ್ರಾಫ್ ಎಡ್ರೆಸ್—"ಅಮೃತಾಂಜನ" ಮುಂಬಯಿ.

ವೈದ್ಯಸಾರ ಸಂಗ್ರಹ (ಉತ್ತಮವಾದ ಪುಸ್ತಕ ಫಕ್ತ ಮೂಲಿಕಾ ಔಷಧಗಳನ್ನೇ ಹೇಳಿರುತ್ತೆ, ಈ ಗ್ರಂಥಕ್ಕೆ ನಂಜರಾಜೇ ಅರಸಿನವರು ಅನೇಕ ಸಂಸ್ಥಾನ ಪಂಡಿತರಿಂದ ಟೀಕಾ ತಾತ್ಪರ್ಯ ಬರಿಸಿದ್ದಾರೆ). ೩-೦ ೦

ಶ್ರೀಶಿವಾನಂದಲಹರಿ ಟೀಕಾ ತಾತ್ಪರ್ಯ	೦-೬-೦.
ಉತ್ತರ ರಾಮಚರಿತ್ರೆ ಕಥೆ	೧-೫-೦
ಟೀಕಾ ರಾಘವೇಂದ್ರ ಸ್ತೋತ್ರ	೦-೨-೦
ತೈಚಕಲ್ಪರೀತ್ಯಾ ಸೂರ್ಯ ನಮಸ್ಕಾರ	೦-೨ ೦
ವಿಷ್ಣುಸಹಸ್ರನಾಮ ಮೂಲ ಶ್ಲೋಕರೂಪ ನಾಮರೂಪ ಕೂಡ ಚಿಕ್ಕಸೈಜು	೦ ೨-೦
ಚಾಣಿಕ್ಯ ನೀತಿ ಪ್ರತಿಪದ ಟೀಕಾ ತಾತ್ಪರ್ಯ	೦-೨-೦
ಬಾಲ ರಾಮಾಯಣ ಟೀಕಾ ತಾತ್ಪರ್ಯ	೦ ೨ ೦
ಸ್ವರಸಹಿತವಾದ ನಮಕ ಚಮಕ	೦ ೨-೦
ಯಕ್ಷಗಾನ ನಳಚರಿತ್ರೆ ತಪ್ಪಿಲ್ಲದೆ ಕವಿಯಿಂದ ರಚಿಸಿದ ಗ್ರಂಥಕ್ಕೆ ಸರಿಯಾಗಿ ಪ್ರಿಂಟುಮಾಡಿದೆ	೦ ೪-೦
ಸೂರ್ಯ ಸಹಸ್ರನಾಮ, ಶ್ಲೋಕ, ನಾಮ	೦ ೨ ೦
ಕೃಷ್ಣ ಕರ್ಣಾಮೃತ ಮೂಲ	೦ ೨ ೦
ದೇವರ ಸೇವೆ ಹೊಸ ಪುಸ್ತಕ	೦ ೪ ೦
ಮುಕುಂದ ಮಾಲಾ (ಗೀತಾ)	೦ ೪-೦
ಶಿವ ನಾಮಾ	೦ ೦ ೬
ಹನುಮನ್ನಾಮಾ	೦ ೦ ೬
ಹರಿ ನಾಮಾ	೦-೦ ೬
ಯಾಜುಕ ಪ್ರಯೋಗ	೦ ೮ ೦
ಬೃಹತ್ಕಥಾ ಮಂಜರಿ	೦-೮-೦
ಕೃಷ್ಣ ಬೋಧಾಮೃತ	೦ ೬ ೦

೦ ೪ ೦ ಕಿಮ್ಮತ್ತಿಗೆ ಕಡಿಮೆ ರವಾನಿಸುವದಿಲ್ಲ

ಕೆಟಲಾಗು ಬೇಕಾದವರು ಬರೆದು ತರಿಸಿಕೊಳ್ಳಬಹುದು

ದೊರೆಯುವ ಸ್ಥಳ— ಬಿ ಆದಿನಾರಾಯಣ ಶಾಸ್ತ್ರಿ,

... ಆಫೀಸ್, ಮೈಸೂರು

ಕುಂತಳ ಕೌಮುದಿ ತೈಲ.

... ಮಹಾರಾಜರವರು—ಅವರು ಉಪಯೋಗಿಸಿದ ತೈಲಗಳಲ್ಲಿ ಇದೇ ...

... —ಇದನ್ನು ... ಉಪಯೋಗಿಸುತ್ತಾರೆ

... —ಇದನ್ನು ಅವರ ... ಉಪಯೋಗಿಸುತ್ತಾರೆ

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಕ ... ತೈಲವೆಂದು ಅಭಿಪ್ರಾಯ ... ಪಟ್ಟಿರು

... —ನಾನು ಉಪಯೋಗಿಸಿದ್ದೇನೆ ... ಇದನ್ನು ಉಪಯೋಗಿಸಬಹುದು

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ ಇದು ಮನೋಹರವಾದ ಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು

ಕವಿರಾಜ ಆರ್ ಸಿ ಸೆನ್, ಎಲ್ ಎಮ್ ಎಸ್,

216 ಕಾರನ್ ವಾಲಸ್ ಬೀದಿ, ಕಲ್ಕತ್ತಾ

ಟೆಲಿಗ್ರಾಫ್ ವಿಳಾಸ—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು—ಎಲ್ ಎ ಪ್ರೋರುವಾಲ್ ಎಂಡ್ ಕೊ,
ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು,—ಮ॥ ರಾ॥ ರಾ॥ ಸಿ ಆರ್. ಕಾಮತರು,
ಉಲನ್ ಮಾರ್ಕೆಟ್ ಮಂಗಳೂರು.

ರೇಶ್ಮೆ ಶೈವಸ್ತ್ರಗಳು.

ಸೈಜು ಇಂಚು 16×16 ಕೆಂಪು, ಅಂಜೂರ, ಹಸರು, ಬ್ಲೂ, ಸವರನ್, ಬಿಳುಪು ಹಗಲ್ ಬತ್ತಿ ವಗ್ಗೈರೆ ರಂಗುಗಳ ವಸ್ತ್ರ 1ಕ್ಕೆ . . . ರೂ. 0—12—0.

ಸೈಜು ಇಂಚು 22×22 ವಸ್ತ್ರ ೧ಕ್ಕೆ .. „ 1— 1—0.

ಸೈಜು ಇಂಚು 15×15 ಬಿಳೀ ರೇಶ್ಮೆ ಮೇಲೆ ಕಲಾಬತ್ತು ಚೌಕಳ ಹೊಸ ನಮೂನೆ ವಸ್ತ್ರ 1ಕ್ಕೆ 8 ಆಣೆ

ರೇಷ್ಮೆ ದೊಡ್ಡ ವಸ್ತ್ರಗಳು

ಸೈಜು ಉದ್ದ 5 ಮೊಳ, ಅಗಲ 2 ಮೊಳ, ಕೆಂಪು ರಂಗಿನ ಬಿಳಿ ದೊಡ್ಡ ಚೌಕಳೀ ಹುರಿ ರೇಷ್ಮೆ ವಸ್ತ್ರ 1ಕ್ಕೆ ರೂ 12 13, 14, 15, 16, 17 ಡಿಟ್ಟೋ ಸಪ್ಪೆ ರೇಷ್ಮೆ ಬಾಡು 1ಕ್ಕೆ ರೂ 6, 7, 8, 9, 10

ರೇಷ್ಮೆ ನಡುಕಟ್ಟುಗಳು

ಕೆಂಪು, ಪೂದಾ, ಬ್ಲೂ, ರೂಂಜಾ, ಹಸರು, ಮೊದಲಾದ ರಂಗುಗಳ ಸೈಜು ಉದ್ದ 5 6 ಮೊಳ. ಅ 2 3 ಇಂಚು ಅಗಲವುಳ್ಳ ನಡುಕಟ್ಟು 1ಕ್ಕೆ ರೂ 1 4-0 1 8 0, 1 10 0, 1 12 0, 2 0 0, 2 8 0

ಕುಪ್ಪಸದ ಕಣಗಳು.

ರೇಷ್ಮೆ, ರುದ್ರಾಕ್ಷಿ, ಕಾಚಿಗ್ಗು, ಹಂಸ ಪಪ್ಪಳ, ಶೃಂಗಾರ ಪಪ್ಪಳ, ಜಗನ್ನಾಥ ಲಾಕಿಮುಂಗಿ ಹೇರು ಮುಂಗಿ ಹಸರು, ಅಂಜೂರ ಹಗಲ್‌ಬತ್ತಿ, ಸವರನ್ ಕಲರ್ ವಗೈರೆ 1ಕ್ಕೆ ರೂ 1 6 0 1 12 0

ಡಿಟೊ ಕಪ್ಪು ಚಂದ್ರಕಾಳಿ ಕಣಗಳು 1ಕ್ಕೆ ರೂ 1 0 0, 1 2-0, 1 3-0 ಮೇಲ್ಕಂಡ ಎಲ್ಲಾ ರಂಗುಗಳ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಕಣ 1ಕ್ಕೆ ರೂ 2-4 0, 2 8 0, 2-10 0

ಡಿಟೊ ಒಂದು ಕಡೆ ಅಂಚಿನ ಪರಕಾರದ ಕಣ 1ಕ್ಕೆ ರೂ 1-4 0, 1 6-0, 1 8 0

ಕಲಾಬತ್ತು ರುದ್ರಾಕ್ಷಿ ಮತ್ತು ಸರಪಣಿ ಅಂಚಿನ ಮೇಲ್ಕಂಡ ಎಲ್ಲಾ ರಂಗುಗಳ ಕುಪ್ಪಸದ ಕಣ 1ಕ್ಕೆ ರೂ 2 10 0, 2 12 0, 3 0 0

ಡಿಟೊ ಪರಕಾರಕ್ಕೆ ಮತ್ತು ಕುಪ್ಪಸಗಳಿಗೂ ಆಗುವ ಸದರಿ ಎಲ್ಲಾ ರಂಗುಗಳ ಶೀರೆ ಕಣ 1ಕ್ಕೆ ರೂ 3 6 0, 3 8 0, 3-12 0

ಡಿಟೊ ರಂಗುಗಳ ಕಲಾಬತ್ತು ಸಾಲಾರಿ ಮತ್ತು ಚೌಕಳ ಶೀರೆ ಕಣ 1ಕ್ಕೆ ರೂ 4 12-0 5-0 0

ಹೆಚ್ ಸಂಕಪ್ಪಾ ಬಸಪ್ಪನವರು,
ಜವಳಿ ವ್ಯಾಪಾರಸ್ಥರು, ಚಿಕ್ಕಪೇಟೆ,
ಬೆಂಗಳೂರು ಸಿಟಿ

ವ್ಯವಸಾಯ ಕ್ರಮಬೋಧಿನಿ.

ಈ ಪುಸ್ತಕವು ವಿದ್ಯಾವಂತನಾದ ಪ್ರತಿ ರೈತನಲ್ಲಿಯೂ ಇರಬೇಕಾದ್ದು. ಜಮೀನ ದಾರರೆಲ್ಲರೂ ಇದನ್ನು ಅವಶ್ಯಕವಾಗಿ ಉಂಟುಮಾಡಬೇಕು. ಅತ್ಯಂತ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಮುದ್ರಣವೂ, ಕಾಗದವೂ, ಬೈಂಡೂ, ಅತ್ಯುತ್ತಮವಾದವುಗಳು ಕ್ರಯ ಸ್ಟಿಫ್ ಬೈಂಡು ಪ್ರತಿ ಒಂದಕ್ಕೆ ೦-೧೨-೦; ಕ್ಯಾಲಿಕೋ ಬೈಂಡು ೧-೦-೦; ಟಪ್ಪಾಲ್ ಹಾಸಲ್ ಪ್ರತ್ಯೇಕ.

ಪುಸ್ತಕಗಳು ಸಿಕ್ಕುವ ಸ್ಥಳ:—

ಹೆಚ್ ಯನ್ ರಾವ್ ಬ್ರದರ್ಸ್
262 ಚಿಕ್ಕಪೇಟೆ, ಬೆಂಗಳೂರು

ಗಿಡಗಳು, ಬೀಜಗಳು, ಹಣ್ಣು, ಹುವ್ವು, ಮತ್ತು ತರಕಾರಿ

ಮಾವಿನ ಗಿಡಗಳು ವಗ್ಗೈರೆ ಸಕಲ ವಿಧವಾದ ಹಣ್ಣಿನಗಿಡಗಳು, ಇಂಗ್ಲೀಷು ಮತ್ತು ನೇಟೀವ್ ತರಕಾರಿ ಮತ್ತು ಹುವ್ವಿನ ಬೀಜಗಳು ವಗ್ಗೈರೆ ಸಮಸ್ತ ವಿಧವಾದ ಬೀಜಗಳು, ಶೇಬು, ಕಿತ್ತಳೆ ವಗ್ಗೈರೆ ಹಣ್ಣುಗಳು, ಇಂಗ್ಲೀಷು ಮತ್ತು ನೇಟೀವ್ ಕಾಯಿ ಪಲ್ಯಗಳೂ, ತುರಾಯಿ, ಹಾರಾ ವಗ್ಗೈರೆ ಹುವ್ವುಗಳು, ಬೇಕಾದವರು ಬರದು ತರಿಸಿಕೊಳ್ಳಬಹುದು ಅಪೇಕ್ಷಿಸಿದಲ್ಲಿ ಕೆಟಲಾಗ್ ಕಳುಹಿಸಲ್ಪಡುತ್ತೆ

ಟಿ. ಎಸ್. ಗಿಡ್ಡಿಯಪ್ಪ ಅಂಡ್ ಸನ್,
ಫ್ಲರಿಸ್ಟ್ ಅಂಡ್ ಸೀಡ್ಸಮೆನ್.
ಲಾಲ್‌ಬಾಗ್ ಕೋಟೆ ರಸ್ತೆ, ಬೆಂಗಳೂರು ಸಿಟಿ.

DIARIES FOR 1910.

1910ನೇ ಇಸವಿಯ ಡೈರಿಗಳು.

ವಕೀಲರಿಗೂ, ವಕೀಲ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಆವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು

ನೋಟು ಒಳಕು ಸ್ಕ್ಯಾಪ್ ಕ್ರಯ ೮ ಆಣೆ

ಸಣ್ಣ ಸ್ಕ್ಯಾಪ್ ,, ೪ ಆಣೆ.

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಶನ್ ದೊರಕುವದು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯುವದು

ವಿಳಾಸ.—

ಮ್ಯಾನೇಜರ್,

ಶಾರದಾ ಪ್ರೆಸ್ ಮಂಗಳೂರು, ದ ಕ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 24ನೇ ದಶಂಬರ 1909

ಹೊಸ ಏರ್ಪಾಡುಗಳೂ ಬರುವ ಕೊಂಗ್ರೆಸು ಸಭೆಯೂ.

ಕೌನ್ಸಿಲು ಆಕ್ಟು ಪ್ರಕಾರ ವಿಧಿಸಿದ ನಿಬಂಧನೆಗಳು ಜ್ಯಾರಿಗೆ ಬಂದು ಬರುವ ವರುಷ ಹೊಸ ಕೌನ್ಸಿಲುಗಳು ಕೂಡುವವು ಇಷ್ಟು ಗೌಜಿ ಗೊಂದಲಗಳ ಫಲವನ್ನು ಸೂಕ್ಷ್ಮ ವಿಚಾರದಿಂದ ನೋಡಿದರೆ ಆಶಾಭಂಗ ವೇದನೆಯುಂಟಾಗುವದು

ಬ್ರಿಟಿಷ ಸಾರ್ವಭೌಮರ ಯುವರಾಜ ಪ್ರಿನ್ಸ್ ಆಪ್ ವೇಲ್ಸರವರು ಈ ದೇಶಕ್ಕೆ ಬಿಜಯಂಗೈದು ಇಲ್ಲಿಯ ರಾಜ್ಯಭಾರವನ್ನು ಪರೀಕ್ಷಿಸಿ ವಿಲಾಯತಿಗೆ ತೆರಳಿದಾಗ ತಾವು ಮಾಡಿದ ಭಾಷಣದಲ್ಲಿ ಭಾರತೀಯರನ್ನು ಸಹಾನುಭೂತಿಯಿಂದ ಆಳುವ ಅವಶ್ಯವಿದೆ ಎಂದು ಅಪ್ಪಣೆ ಕೊಡಿಸಿದರು ನಮ್ಮ ವೈಸರಾಯ ಪ್ರಭುಗಳವರು ಹಿಂದುಸ್ಥಾನದ ಪ್ರಜೆಗಳಲ್ಲಿ ಅಂಕುರಿಸಿದ ನ್ಯಾಯವಾದ ಕೋರಿಕೆಗಳನ್ನು ಸಲ್ಲಿಸಬೇಕೆಂದು ಅಭಿಪ್ರಾಯ ಪಟ್ಟರು ಮೋರ್ಲೆ ಪ್ರಭುಗಳು ತಾವು ಸೌಮ್ಯ ಪಕ್ಷದವರನ್ನು ತಮ್ಮ ಬಳಿ ಎಳಕೊಳ್ಳ ತಕ್ಕುದೆಂದು ಹೇಳಿದರು. ಈ ಎಲ್ಲಾ ಉದ್ದಿಶ್ಯಗಳನ್ನು ನೆರವೇರಿಸಲು ಸ್ಟೇಟ ಸೆಕ್ರೆಟರಿಗಳು ಹೊಸ ಏರ್ಪಾಡುಗಳನ್ನು ಮಾಡಿರುವರೆಂದು ಜನಸಾಮಾನ್ಯರು ಹಿಗ್ಗಿ ಹಿಗ್ಗಳ ಪಟ್ಟರು

ಈ ಏರ್ಪಾಡುಗಳ ಸಂಗಡಲೇ ವಂಗ ವಿಭಾಗವು ವಜಾ ಮಾಡೋಣಾಗುವದೆಂದು ಜನರು ಕೋರಿದ್ದರು. ಆ ಕೋರಿಕೆಯು ಫಲಿಸದಿದ್ದರೂ ಜನರು ಹೊಸ ಆಕ್ಟಿನ ಕುರಿತು ಹೊಸ ಕೋರಿಕೆಗಳನ್ನು ಎಣಿಸಿದ್ದರು. ಕಳೆದ ಮದ್ರಾಸು ಕೊಂಗ್ರೆಸ್ ಪ್ರೆಸಿಡೆಂಟ್ ಡಾ। ರಾಸಬಿಹಾರಿ ಘೋಷರವರು ಈ ಏರ್ಪಾಡುಗಳನ್ನು ಹೊಗಳಿದರು. ಅವುಗಳು ನಮ್ಮ ಅಭ್ಯುದಯದ ಪೂರ್ವ ಚಿನ್ಹಗಳೆಂದು ಸೂಚಿಸಿದರು. ನಾವು ಸರಕಾರಕ್ಕೆ ತುಂಬಾ ಕೃತಜ್ಞರಾಗಿದ್ದು ಆ ಏರ್ಪಾಡುಗಳ ಜಾರಿಯಲ್ಲಿ ಸಹಕಾರಿಗಳಾಗಬೇಕೆಂದು ನಿರೂಪಿಸಿದರು. ಆದರೆ ಮುಸಲ್ಮಾನರಿಗೂ ಇತರರಿಗೂ ಬೇರೆ ಇಲೆಕ್ಟರೇಟುಗಳನ್ನು ಮಾಡಿದ್ದಲ್ಲದೆ ಯೋಗ್ಯತೆಯಲ್ಲಿ ಸಹ ಭೇದಗಳನ್ನು ನಿರ್ಮಿಸಿದರು. ಆಸ್ತಿಯ ಯೋಗ್ಯತೆಗೆ ವಿಪರೀತ ವಿಶೇಷತ್ವ ಕೊಟ್ಟರು. ವಿದ್ಯಾವಂತ ಜನರಿಗೆ ತಕ್ಕ ಸ್ಥಾನ ದೊರೆಯಲಿಲ್ಲ. ಹಿಂದು ಮುಸಲ್ಮಾನರೆಂಬ ಭೇದವನ್ನು ರಾಜಕೀಯ ವಿಷಯಗಳಲ್ಲಿ ತೋರುವದು ಅನುಚಿತವೆಂದು ಈ ಮೊದಲೇ ಹೇಳಿರುವೆವು. ಹೊಸ ಏರ್ಪಾಡುಗಳನ್ನು ತೀಕ್ಷ್ಣ ಪಕ್ಷದವರು ಮೊದಲಿನಿಂದಲೂ ಹೀಯಾಳಿಸಿದ್ದರು. ಸೌಮ್ಯಪಕ್ಷಾಗ್ರಣಿಯಾದ ಡಾ। ರಾಸ್‌ಬಿಹಾರಿ ಘೋಷರೇ ಅವುಗಳ ದೋಷಗಳನ್ನು ವ್ಯಕ್ತಗೊಳಿಸಿ ಒಂದು ಜಾಹೀರಾತನ್ನು ಪ್ರಕಟಿಸಿದ್ದಾರೆ. ಇದಕ್ಕೆ ಸುರೇಂದ್ರನಾಥ ಬೆನರ್ಜಿ ಮುಂತಾದ ಇತರ ನಾಯಕರ ಸಹಾಯವಿದೆ.

ಸರಕಾರದವರು ದೇಶ ಕ್ಷೇಮಕ್ಕಾಗಿ ಕೆಲಸಕ್ಕೆ ಒಟ್ಟನ್ನು ಮೊಕ್ಕಾಂರು ಮಾಡುವ ಮೊದಲು ಅವರನ್ನು ಪರೀಕ್ಷೆ ಮಾಡಿಕೊಳ್ಳುವರೋ ಎಂದು ನೋಡುವರು. ರಾಗಾದರೆ ವಿದ್ಯೆಯು ಸಾಮರ್ಥ್ಯಗಳೇ ಮುಖ್ಯ ಯೋಗ್ಯತೆ ಎಂದಾದರೆ ಕಡೇ ದೇಶವನ್ನಾಳುವದಕ್ಕೆ ಸಹಕಾರಿಗಳಾಗತಕ್ಕ ಕೌನ್ಸಿಲು ಮೆಂಬರುಗಳಿಗೆ ಆಸ್ತಿಯ ಯೋಗ್ಯತೆ ಮಾತ್ರ ಇದ್ದರೆ ಸಾಲುವದೇ? ಪ್ರಜೆಗಳ ಯಥಾರ್ಥ ಪ್ರತಿನಿಧಿಗಳಾದ ವಿದ್ಯಾವಂತರಿಗೆ ತಕ್ಕ ವಿಶೇಷತ್ವ ಕೊಡದ್ದರಿಂದ ಅಂಥಾ ಕೌನ್ಸಿಲುಗಳನ್ನು ಪ್ರತಿನಿಧಿಸಭೆ ಎಂದು ಕರೆಯಲಾಗುವದೇ? ರಾಜಕಾರ್ಯಕ್ಕೆ ತಕ್ಕ ಸಹಾಯ ಮಾಡಲು ಯೋಗ್ಯರು ಭೂಮಾಲಿಕರೇ, ಅಥವಾ ಲೋಕಾನುಭವವುಳ್ಳ ವಿದ್ಯಾವಂತರೇ? ಪ್ರಭುಸದನದ (ಮಾಜಿ ವೈಸರಾಯ) ಲೇನ್ಸಡೌನ್ ಪ್ರಭುಗಳಂತಹ ಪ್ರಭುಗಳು ಬ್ರಿಟಿಷ ಬಜೆಟನ್ನು ಕುರಿತು ಚರ್ಚೆ ನಡಿಸುವರೆಂದು ಅವರನ್ನು ಬ್ರಿಟಿಷ ಪ್ರಜೆಗಳು ದೂರಿ ಅವರು ಪ್ರಜೆಗಳ ಪ್ರತಿನಿಧಿಗಳಲ್ಲ, ಅವರಿಗೆ ಆ ವಿಷಯಗಳಲ್ಲಿ ಪ್ರವೇಶ ಅಧಿಕಾರವಿಲ್ಲವೆನ್ನುವರು. ಇಂಡ್ಯದಲ್ಲಿ ಮಾತ್ರ ಆಸ್ತಿಪಾಸ್ತಿಗೆ ಇಷ್ಟು ವಿಶೇಷತ್ವವ್ಯಾಕೆ? ಮುನಿಸಿಪಾಲಿಟಿಗಳ ಮೆಂಬರಿಗೂ ಆಸ್ತಿಯ ಯೋಗ್ಯತೆಯನ್ನು ಹೆಚ್ಚಿಸುವ ನಿಬಂಧನೆಗಳ ಮಸೂದೆಯನ್ನು ಕುರಿತು ಇನ್ನೊಂದು ಕಡೆ ಪ್ರಸ್ತಾಪಿಸಿದ್ದೇವೆ

ಲೋಕಲ್ ಬೋರ್ಡು ಮುನಿಸಿಪಾಲಿಟಿಗಳಂತಹ ಸಂಸ್ಥೆಗಳು ಒಂದು ವೇಳೆ ಸಮರ್ಥ ಪ್ರಜಾಹಿತಕಾಂಕ್ಷಿಯನ್ನು ಚುನಾಯಿಸಿದರೂ ಅಂಥವನನ್ನು ತಿರಸ್ಕರಿಸುವ ಸ್ವಾತಂತ್ರ್ಯವನ್ನು ಸರಕಾರದವರೇ ಇಟ್ಟುಕೊಂಡಿರುವರು. ಇದು ಕಾರಣ ಸರಕಾರದವರು ಪ್ರಜೆಗಳಿಗೆ ಒಂದು ಕೈಯಿಂದ ಕೊಟ್ಟ ವರವನ್ನು ಬಲು ಮಟ್ಟಿಗೆ ಇನ್ನೊಂದು ಕೈಯಿಂದ ಸೆಳಕೊಂಡಂತಾಗುವದು ಬರುವ ಬೊಂಬಾಯಿ ಕೌನ್ಸಿಲು ಚುನಾವಣೆಗೆ ಪುಣೆಯ ಪ್ರಸಿದ್ಧ ಪತ್ರಕರ್ತ ರಾ। ನರಸಿಂಹ ಚಿಂತಾಮಣಿ ಕೇಲಕರರನ್ನು ಮೇಲ್ಕಂಡ ಸಂಸ್ಥೆಗಳು ಶಿಫಾರಸು ಮಾಡಿದ್ದಲ್ಲಿ ಬೊಂಬಾಯಿ ಗವರ್ನಮೆಂಟಿನವರು ಅದಕ್ಕೆ ಆಕ್ಷೇಪ ತೆಗದು ಅವರನ್ನು ಅಯೋಗ್ಯರೆಂದು ನಿರ್ಣಯಿಸಿರುವರು ಈ ಹುಕುಮಿನಿಂದ ತಾವು ಪಟ್ಟ ಸಂತಾಪವನ್ನು ಸೂಚಿಸಲಿಕ್ಕೆ ಜನರು ಮಾಡಿದ ಸಭೆಗೆ ಅಧ್ಯಕ್ಷ ಸ್ಥಾನವನ್ನು ವಹಿಸಿದ ಮಿ। ಗೋಖಲೆಯವರು ಈ ಗೃಹಸ್ಥನು ಯಥಾರ್ಥ ಪ್ರಜಾಹಿತಕಾರಿ ಎಂದೂ, ಸಚ್ಚರಿತನೆಂದೂ, ತನ್ನ ಗೌರವ ಪಾತ್ರನೆಂದೂ ಹೊಗಳಿದರು ಗೋಖಲೆಯವರು ಹೇಳಿದಂತೆ ಇಂತವರನ್ನು ತಿರಸ್ಕರಿಸಲು ಸರಕಾರಕ್ಕೆ ಸ್ವಾತಂತ್ರ್ಯ ಕೊಡುವ ನಿಬಂಧನೆಯೇ ವಜಾ ಮಾಡತಕ್ಕದ್ದಾಗಿದೆ

ಶ್ರೀ। ಸುರೇಂದ್ರನಾಥ ಬೆನರ್ಜಿ, ಡಾ। ರಾ। ಬಿ। ಘೋಷ, ರಾ। ಗೋಖಲೆಯಂತಹ ಗೃಹಸ್ಥರು ನಿಬಂಧನೆಗಳನ್ನು ಮಾರ್ಪಡಿಸುವದು ಅತ್ಯವಶ್ಯಕವೆಂದು ಅಭಿಪ್ರಾಯಪಡುವಾಗ ಅತ್ತಕಡೆ ವೈಸರಾಯ ಪ್ರಭುಗಳು ಲಕ್ಷ್ಯಕೊಡದಿರರೆಂದು ನಂಬಬೇಕು ಆದರೆ ಇಡೀ ಜನಾಂಗದ ಪ್ರತಿನಿಧಿಗಳು ಕೂಡಿ ಕಂಠೋಕ್ತವಾಗಿ ಈ ನಿರ್ಣಯವನ್ನು ಅರಿಕೆ ಮಾಡಿದರೆ ಸರಕಾರಕ್ಕೆ ಗತ್ಯಾಂತರವಿರದು ಅಂತಹ ಸಭೆಯೇ ಕೊಂಗ್ರೆಸು ಸಭೆಯಾಗಿತ್ತು 'ಭೂತಕಾಲ'ವನ್ನು ತಿಳಿದೇ ಉಪಯೋಗಿಸಿರುವೆವು ಯಾಕಂದರೆ ಈಗ ಕೊಂಗ್ರೆಸ ಸಭೆಯು ಒಂದು ಪಕ್ಷವೇ ಹೋಗಿದೆ ತೀಕ್ಷ್ಣ ಪಕ್ಷವನ್ನು ಹೊರಗೆ ಹಾಕಿದ್ದಾರೆ ಬಂಗಾಳಿಗಳು ಇತ್ತಂಡಗಳನ್ನೊಳಕೊಂಡೇ ಕೊಂಗ್ರೆಸು ನೆರೆಯಬೇಕೆಂದು ಅಭಿಪ್ರಾಯಪಡುವದರಿಂದ ಕನ್ವೆಷನ್ ಕೊಂಗ್ರೆಸ್ಸಿನಲ್ಲಿ ಶ್ರದ್ಧೆಯುಳ್ಳವರಲ್ಲ. ಪಂಜಾಬಿಗಳು ಕೊಂಗ್ರೆಸ ತಮ್ಮ ಅನರ್ಥಗಳಿಗೆ ಕಾರಣವೆಂದು ನಂಬಿ ಹಿಂದೂ ಸಭೆಯನ್ನು ನಿರ್ಮಿಸಿದ್ದಾರೆ. ಇಷ್ಟೆಲ್ಲ ಸಾಲದೆಂಬಂತೆ ಸರ್। ಪಿ। ಮೇಥಾರವರು ಅಧ್ಯಕ್ಷ ಪದವಿಯನ್ನು ತಿರಸ್ಕರಿಸಿರುವರು.

ಈ ಸಂಕಟದಲ್ಲಿ ಗತಿಯೊಂದೇ ತೋರುವದು ಲಾಹೋರಿನಲ್ಲಿ ಕೂಡುವ ಕೊಂಗ್ರೆಸ ಸಭೆಯಲ್ಲಿ ಕನ್ವೆಷನ್ ನಿಬಂಧನೆಗಳನ್ನು ತಿದ್ದಿ ಯಾವನೊಬ್ಬನು, ತೀಕ್ಷ್ಣನಾಗಲಿ, ಸೌಮ್ಯನಾಗಲಿ, ರಾಜದ್ರೋಹಿಯಲ್ಲದವನು ಕೊಂಗ್ರೆಸನ್ನು ಸೇರುವಂತೆ ಮಾರ್ಪಡಿಸಬೇಕು ಕನ್ವೆಷನ್ ನಿಬಂಧನೆಗಳು ಸಭಿಕರ ಮನಸ್ಸು ಸುರಾತ್ ಅನಾಹುತದಿಂದ ಸಂತಪ್ತವಾದಾಗ ನಿರ್ಮಿತವಾದವು ಅವನ್ನು ಈಗಿನ ಅನುಭವದಿಂದ ಶಾಂತಚಿತ್ತದಿಂದ ಪರೀಕ್ಷಿಸಿ ತಿದ್ದಬೇಕಾಗಿದೆ ಸರ್ವಪಕ್ಷಗಳು ಕೂಡಿ ಯಥಾರ್ಥವಾದ ಪ್ರಜಾಸಂಸ್ಥೆಯೆನ್ನಿಸಿದರೇನೇ ಕೊಂಗ್ರೆಸು ಸಭೆಯ ಅಭಿಮತಗಳಿಗೆ ಸರಕಾರದಿಂದಲೂ ಪ್ರಜೆಗಳಿಂದಲೂ ಮನ್ನಣೆ ದೊರಕುವದು

ಮುನಿಸಿಪಲ್ ಕೌನ್ಸಿಲುಗಳ ಚುನಾವಣೆ. ಈ ಚುನಾವಣೆಗಳ ಬಗ್ಗೆ ಮುನಿಸಿಪಲ್ ಕೌನ್ಸಿಲುಗಳ ಮೆಂಬರುತನದ ಉಮೇದ್ವಾರರಿಗೂ ವೋಟರರಿಗೂ ಬೇಕಾದ ಯೋಗ್ಯತೆಗಳನ್ನು ಈಗಿನಕ್ಕಿಂತಲೂ ಹೆಚ್ಚಿಸಬೇಕೆಂಬ ಉದ್ದಿಶ್ಯವಿರುವ ಕೆಲವು ನಿಯಮಗಳನ್ನು ಸರಕಾರದವರು ಪ್ರಜಾಭಿಪ್ರಾಯಗಳ ಬಗ್ಗೆ ಪ್ರಕಟಿಸಿರುವರು. ವರುಷಾವಧಿಗೆ ಒಟ್ಟು ರೂ ೧೦೦ಕ್ಕೆ ಕಡಿಮೆಯಾಗದ ಉತ್ಪತ್ತಿಯುಳ್ಳ ಕಟ್ಟೋಣಗಳ ಯಾ ಜಮೀನುಗಳ ಮಾಲೀಕರೆಂತಾಗಲಿ ಒಕ್ಕಲುಗಳೆಂತಾಗಲಿ ರಿಜಿಸ್ತ್ರಗಳಲ್ಲಿ ಹೆಸರು ದಾಖಲಾದವರು, ರೂ. ೧೫೦ಕ್ಕೆ ಕಡಿಮೆಯಾಗದ ಮೊಬಲಗಿನ ಮೇಲೆ ಮುನಿಸಿಪಾಲಿಟಿಗಳಿಗೆ ವೃತ್ತಿ ತೆರಿಗೆ ಕೊಡುವವರು, ರೂ. ೧೫೦೦ ಕಡಿಮೆಯಾಗದ ಆದಾಯದ ಮೇಲೆ ಸರಕಾರಕ್ಕೆ ಆದಾಯ ತೆರಿಗೆ ಕೊಡುವವರು, ಸರಕಾರದವರಿಂದ ಮಂಜೂರು ಮಾಡಲ್ಪಟ್ಟ ಯುನಿವರ್ಸಿಟಿ ಯಾ ಸರ್ವವಿದ್ಯಾಶಾಲೆಗಳಲ್ಲಿ ಬಿ. ಎ. ಮೊದಲಾದ ಪರೀಕ್ಷೆಗಳನ್ನು ಪಾಸಾದವರು, ಇವರೆಲ್ಲರೂ ಈ ಹೊಸ ನಿಯಮಗಳಿಗನುಗುಣವಾದ ಮುನಿಸಿ

ಸಾಲ್ ವೋಟರರು, ಅಂದರೆ ಪ್ರಸ್ತುತ ಜ್ಯಾರಿಯಲ್ಲಿರುವ ಕ್ರಮಗಳ ಪ್ರಕಾರ ವೋಟರರಿಗೆ ಬೇಕಾದ ಯೋಗ್ಯತೆಗಳಿಗಿಂತ ಮೇಲೆ ನಮೂದಿಸೋಣಾದವುಗಳ ತರಗತಿಯು ವಿಪರೀತ ಹೆಚ್ಚಿಸಲ್ಪಟ್ಟಿರುವದಲ್ಲದೆ ಈಗ ವೋಟರರಾಗಲು ಅರ್ಹತೆಯುಳ್ಳ, ರೂ. ೩೦ ಯಾ ಹೆಚ್ಚು ಸಂಬಳವುಳ್ಳ ತಾಬೇದಾರರಿಗೂ ರೂ. ೧೫ ಯಾ ಹೆಚ್ಚು ಪೆನಶನು ಪಡಿಯುವ ಸರಕಾರಿ ಪೆನಶನುದಾರರಿಗೂ ಈ ಹೊಸ ನಿಯಮಗಳ ಪ್ರಕಾರ ವೋಟರರಾಗಲು ಯೋಗ್ಯತೆಯು ಇಲ್ಲವಾಗಿ ತಿಳಿಯಬೇಕಾಗುತ್ತದೆ

ಮುನ್ಸಿಪಲ್ ಕೌನ್ಸಿಲುಗಳ ಮೆಂಬರುತನಕ್ಕೆ ಉಮೇದ್ವಾರರಾಗುವವರಿಗೆ ಸಹಾ ಬೇಕಾದ ಯೋಗ್ಯತೆಗಳ ತರಗತಿಯನ್ನು ಇದೇ ರೀತಿ ಹೆಚ್ಚಿಸಿರುವರು. ವರುಷಾವಧಿಗೆ ಒಟ್ಟು ರೂ. ೩೦೦ಕ್ಕೆ ಕಡಿಮೆಯಾಗದ ಉತ್ಪತ್ತಿಯುಳ್ಳ ಕಪ್ಪೋಣಗಳ ಯಾ ಜಮೀನುಗಳ ಮಾಲಿಕರೆಂತಾಗಲಿ ಒಕ್ಕಲುಗಳೆಂತಾಗಲಿ ರಿಜಿಸ್ತ್ರಿಗಳಲ್ಲಿ ಹೆಸರು ದಾಖಲಾದವರು, ರೂ. ೩೬೦೦ಕ್ಕೆ ಕಡಿಮೆಯಾಗದ ಮೊಬಲಗಿನ ಮೇಲೆ ವೃತ್ತಿ ತೆರಿಗೆ ಕೊಡುವವರು, ರೂ ೩೬೦೦ಕ್ಕೆ ಕಡಿಮೆಯಾಗದ ಆದಾಯದ ಮೇಲೆ ಆದಾಯ ತೆರಿಗೆ ಕೊಡುವವರು, ಈ ಯೋಗ್ಯತೆಗಳಲ್ಲಿ ಯಾವದಾದರೊಂದು ಬಗೆಯ ಯೋಗ್ಯತೆಯುಳ್ಳವರು ಮುನ್ಸಿಪಲ್ ಕೌನ್ಸಿಲರಾಗಲಿಕ್ಕೆ ಅರ್ಹರಾಗಿರುವರು ವೋಟರರ ವಿಷಯ ಮೇಲೆ ಪ್ರಸ್ತಾಪಿಸಿದಂತೆಯೇ ಈಗ ಜ್ಯಾರಿಯಲ್ಲಿರುವ ಕ್ರಮಗಳಿಗಿಂತ ಈ ಹೊಸ ನಿಯಮಗಳಿಗನುಸಾರವಾಗಿ ಕೌನ್ಸಿಲರುಗಳ ಯೋಗ್ಯತೆಗಳು ಹೆಚ್ಚಿಸಲ್ಪಟ್ಟಿರುವವು ರೂಪಾಯಿ ೫೦ ಯಾ ಹೆಚ್ಚು ಪೆನಶನು ಪಡಿಯುವಂಥವರು ರೂ ೧೦೦ ಯಾ ಹೆಚ್ಚು ಸಂಬಳವುಳ್ಳ ತಾಬೇದಾರರ ಹೆಸರುಗಳನ್ನು ಕೌನ್ಸಿಲು ಮೆಂಬರು ತನಕ್ಕೆ ಈಗ ಉಮೇದ್ವಾರರಾಗಿರುವ ವರಹೆಸರು ಪಟ್ಟಿಯಿಂದ ತಳ್ಳಿಹಾಕಬೇಕಾಗುವುದು

ಸರಕಾರದವರಿಂದ ಹೊಸತಾಗಿ ಪ್ರಕಟಿಸಲ್ಪಟ್ಟಂಥಾ ಮುನಿಸಿಫಲ್ ಕೌನ್ಸಿಲುಗಳ ಚುನಾವಣೆಯ ನಿಯಮಗಳಲ್ಲಿ ಮೇಲೆ ತೋರ್ಪಡಿಸಿದ ಮಾರ್ಪಾಟುಗಳ ಹೊರತು ಬೇರೆ ವಿಶೇಷವಾದ ಮಾರ್ಪಾಟುಗಳು ಇರುವುದಿಲ್ಲ ಯಾವ ಕಾರಣಗಳಿಂದ ಈ ನಿಯಮಗಳಲ್ಲಿ ಈ ಮಾರ್ಪಾಟುಗಳನು ಮಾಡುವರೆಂಬದು ಸರಕಾರದವರು ಪ್ರಕಟಿಸಿದಂಥಾ ಮಸೂದೆಯಿಂದ ವ್ಯಕ್ತವಾಗದು ಮಾರ್ಪಾಟುಗಳಲ್ಲಿ ಐಶ್ವರ್ಯವಂತರೇ ಸರಕಾರದವರ ಲಕ್ಷ್ಯಕ್ಕೆ ಬಂದಿರುವರಲ್ಲದೆ ಹೇರಳ ಐಶ್ವರ್ಯವಿಲ್ಲದ ಅಥವಾ ಕೆಲವು ಸಂದರ್ಭಗಳಲ್ಲಿ ದ್ರವ್ಯವನ್ನು ರಾಶಿಮಾಡಿ ಕೂಡಿಸುವ ದಾರಿಯನ್ನು ಬಿಟ್ಟು ಪ್ರಜಾಸೇವೆಯನ್ನು ಗೈಯುತ್ತಿರುವ ವಿದ್ಯಾವಂತರು ಅಷ್ಟು ಲಕ್ಷ್ಯಕ್ಕೆ ಬಂದಿಲ್ಲವೆಂತ ತೋರುವುದು ಧನವೂ ವಿದ್ಯೆಯೂ ಏಕಕಾಲದಲ್ಲಿಯೇ ಪ್ರಾಪ್ತವಾದವರ ಸಂಖ್ಯೆಯು ಬಹಳ ಕಡಿಮೆಯಾಗಿರುವುದರಿಂದ ಸರಕಾರದವರು ಯೋಚಿಸಿದ ಈ ಮಾರ್ಪಾಟುಗಳು ಜ್ಯಾರಿಗೆ ಬಂದಲ್ಲಿ ಪ್ರಸ್ತುತವಿರುವ ಮುನಿಸಿಪಲ್ ಪಟ್ಟಣಗಳ ನಿವಾಸಿಕರ ಸ್ವಾತಂತ್ರ್ಯ ಹಕ್ಕುಗಳು ಇನ್ನಷ್ಟು ಕಡಿಮೆ ಮಾಡುವಂತೆ ಆಗುವುದು ಪ್ರಕಟವಾದಂಥಾ ಹೊಸ ಮಸೂದೆಯಲ್ಲಿ ಸರಕಾರಿ ಪೆನ್ಶನು ಪಡಕೊಂಡವರ ಹೆಸರು ಕಾಣದಿರುವುದು ಸರಕಾರಿ ಕೆಲಸಗಳಲ್ಲಿ ಬಹಳ ಕಾಲವಿದ್ದು ಕಾರ್ಯನಿರ್ವಾಹಗಳ ಮತ್ತು ಸರಕಾರದ ವ್ಯವಸ್ಥಾರಚನೆಗಳ ಅನುಭವವಿರುವವರು ಪೆನ್ಶನು ಪಡಕೊಂಡ ನಂತರ ತಮ್ಮ ಈ ಅನುಭವವನ್ನು ಲೋಕ ಪ್ರಯೋಜನಾರ್ಥವಾಗಿ ಉಪಯೋಗಿಸುವರೆ ಈ ಮಾರ್ಪಾಟು ಜ್ಯಾರಿಗಳಿಂದ ತೊಡಕಾಗ್ತುವುದು ಆಫೀಸುಗಳನ್ನು ನಡಿಸುವ ಮಾಹೀತಿ ಇಲ್ಲದವರಿಗೆ ಪೆನಶನುಪಡದಂಥಾ ಆಫೀಸರುಗಳು ಕೌನ್ಸಿಲಿನಲ್ಲಿದ್ದರೆ ಇಂಥವರ ಸಹಾಯದಿಂದ ಆಫೀಸನ್ನು ಒಳ್ಳೆ ಸ್ಥಿತಿಯಲ್ಲಿಡುವರೆ ಅನುಕೂಲವಾಗುವುದು ಮುನಿಸಿಪಲ್ ತೆರಿಗೆಗಳನ್ನು ಹೆಚ್ಚಾಗಿ ಕೊಡುವ ದ್ರವ್ಯಸಂಪನ್ನರಾದ ನಿವಾಸಿಕರ ಪರವಾಗಿ ಕೌನ್ಸಿಲಿನಲ್ಲಿ ತಕ್ಕ ರೀತಿಯಲ್ಲಿ ಪ್ರತಿನಿಧಿಗಳಿರಬೇಕೆಂಬದು ನಿರ್ವಿವಾದ ಆದರೆ ಈ ವರ್ಗದವರಿಂದಲೇ ಪ್ರತಿನಿಧಿಗಳು ಆರಿಸಲ್ಪಟ್ಟು ಪ್ರಜಾವರ್ಗಗಳ ಇವರಿಗಿಂತ ಹೆಚ್ಚಾಗಿ ಒಡನಾಡುತ್ತಿರುವ ಸಾಧಾರಣ ವರ್ಗದವರಾದ ಮಾನ್ಯ [illegible] ಸಹ ಕೌನ್ಸಿಲಿನಲ್ಲಿ ಮೆಂಬರರಾಗಿರಬೇಕು ಹಾಗಿದ್ದರೆನೇ ಕೌನ್ಸಿಲು [illegible] ಶಕ್ತಿ ಇರುವುದು, ಜೀವಕಳೆಯು ಇರುವುದು

ಪ್ರಸ್ತುತ ಸ್ಥಿತಿಯಲ್ಲಿ ಮುನಿಸಿಪಾಲಿಟಿಗಳ ಮುಖ್ಯ ಅಧಿಕಾರವೆಲ್ಲವೂ ಜಿಲ್ಲಾ ಕಲೆಕ್ಟರವರ ಮುಖಾಂತರ ಸರಕಾರದವರಲ್ಲಿಯೇ ಹೆಚ್ಚಾಗಿರುವುದು ನ್ಯಾಯವಿಧಾಯಕ ಸಭೆಗಳ ಮಾರ್ಪಾಟುಗಳನ್ನು ಮಾಡಿ ಮುನ್ಸಿಪಲ್ ಕೌನ್ಸಿಲುಗಳಿಗೆ ಹೆಚ್ಚಿನ ಸ್ವಾತಂತ್ರ ಸಿಕ್ಕುವುದೆಂಬದು ಎಲ್ಲರ ಕೋರಿಕೆಯಾಗಿತ್ತು ಇಂಥಾ ಸಮಯದಲ್ಲಿ ಪ್ರಜಾಸ್ವಾತಂತ್ರ್ಯವನ್ನು ಹೆಚ್ಚಿಸುವ ಮಾರ್ಪಾಟುಗಳನ್ನು ಎದುರು ನೋಡುವೆವಲ್ಲದೆ ಸರಕಾರದವರು ಯೋಚಿಸಿರುವಂಥಾ ಈ ಮಾರ್ಪಾಟುಗಳಲ್ಲಿ ಸಂತುಷ್ಟಿ ಇರದು

ಶ್ರೀಕೃಷ್ಣ ಚರಿತ್ರ

(ಕಳೆದ ಸಂಚಿಕೆಯಿಂದ ಮುಂದೆ ಸಾಗಿಸಿದ್ದು)

ಆರನೆಯ ಪ್ರಕರಣ,

ಮಹಾಭಾರತ.

ಕುಮಾರನ ಚಿತೆಯು ಪುನಃ ಪ್ರಜ್ವಲಿತವಾದಂತೆ ತೋರಿತು. ಅಗ್ನಿಯ ಶಿಖೆಯು ಮೇಲೇರಿ ನಭೋ ಮಂಡಲವನ್ನು ಮುಟ್ಟಿತು. ಆ ಚಿತೆಯ [illegible] ಭೂಮಿಯೆಲ್ಲವೂ ತುಂಬಿ ಬೆಳಗಿತು. ತ್ರಿಭುವನಗಳನ್ನು ಪ್ರಕಾಶಿಸುತ್ತಿರುವ, ಮಹಾಭಾರತಮೂರ್ತಿಯಾದ ರಾಜರಾಜೇಶ್ವರೀಮಾತೆಯು ಆ ಅಗ್ನಿಜ್ವಾಲೆಯಿಂದ ಮೇಲೆದ್ದು ಬಂದಳು. ನವೀನ ಧರ್ಮದ ವೇದಿಕೆಯ ಮೂಲದಲ್ಲಿ ಆರ್ಯಮಾತೆ ಮತ್ತು ಅನಾರ್ಯಮಾತೆ, ಈ ಎರಡು ದೇವತೆಯರು ಧ್ಯಾನಮಗ್ನರಾಗಿ ಕುಳಿತಿದ್ದರು. ವೇದಿಕೆಯ ಮಧ್ಯಭಾಗದಲ್ಲಿ ನಿರುಪಮವಾಗಿರುವ ನಿಷ್ಕಾಮ ಧರ್ಮದ ಮಹಾ ಮೂರ್ತಿಯಿದ್ದಿತು ಅದರ ಮೇಲುಗಡೆಯಲ್ಲಿ ಪ್ರತಿಭಾನ್ವಿತಳಾದ ಆನಂದಮಯೀ ಜನನಿಯು ಶೋಭಿಸುತ್ತಲಿದ್ದಳು ಆಕೆಯ ತಲೆಯಲ್ಲಿ ಅರ್ಧಚಂದ್ರಾಕೃತಿಯ ಕಿರೀಟವಿದ್ದತು; ಮತ್ತು ನಾಲ್ಕು ಕೈಗಳಲ್ಲಿ ಪಾಶ, ಅಂಕುಶ, ಬಿಲ್ಲು, ಬಾಣಗಳಿದ್ದವು. ಆಕೆಯ ಮೂರು ಕಣ್ಣುಗಳಲ್ಲಿ ಮೂರು ಕಾಲುಗಳ ಜ್ಞಾನವಿದ್ದಿತು (A). ಆ ಧರ್ಮ ಸಾಮ್ರಾಜ್ಞಿಯ ಮದನಮಂಡಲವು ಉದಯಾದಿತ್ಯನಂತೆ ವಿರಾಜಿಸುತ್ತಿದ್ದಿತು. ಆಕೆಯ ನಯನಗಳಲ್ಲಿ ಆನಂದಾಶ್ರುಗಳು ಸ್ಫುರಿಸುತ್ತ, ತರಲವಾದದ್ಯುತಿಯಿಂದ ಜಳಪಿಸುತ್ತಲಿದ್ದವು—ಆಕೆಯು ಕೃಷ್ಣನಾಮವನ್ನು ಹಾಡುತ್ತಿದ್ದಳು. ಇಂದಿಗೆ ಕೃಷ್ಣನಜೀವನವ್ರತವು ಪೂರ್ಣವಾಯಿತು ಉದ್ವೇಲಮನಸ್ಸಿನಿಂದ, ಕೃಷ್ಣನು "ತಾಯಿ, ತಾಯಿ" ಎನ್ನುತ್ತ, ಕುಮಾರನ ಚಿತೆಯ ಬಳಿಯಲ್ಲಿ ಮೈಮರೆದು ಬಿದ್ದನು ಪ್ರಭಾತಕಾಲದ ಪ್ರಕಾಶದಿಂದ ಮೂಡ ದೆಸೆಯಲ್ಲಿ ಆಕಾಶವು ಕಂಪಾಯಿತು ಅನಂತವಾದ ಮಂಗಲವಾದ್ಯಗಳು ಮೊರೆಯ ತೊಡಗಿದವು ಕುರುಕ್ಷೇತ್ರದಿಂದ ಮಂಗಲವಾದ ಆನಂದ ಗೀತಗಳ ಧ್ವನಿಯು ಮೇಲೆದ್ದು, ಉಚ್ಚರವದಿಂದ ಧರ್ಮರಾಜ್ಯದ ಘೋಷಣೆಯನ್ನು ಮಾಡಿತು. ಸುಭದ್ರೆ, ಪಾರ್ಥ, ಶೈಲಜೆ ಮತ್ತು ದ್ವೈಪಾಯನ (ವ್ಯಾಸ), ಇವರು ಮೆಲ್ಲಮೆಲ್ಲನೆ ಅಲ್ಲಿಗೆ ಬಂದರು ಶ್ರೀಕೃಷ್ಣನು ಎದ್ದು ನಿಂತುಕೊಂಡನು, ಮತ್ತು ಕುಮಾರನ ಚಿತೆಯ ಎದುರಿನಲ್ಲಿ ಪೂರ್ವಗಗನಾಭಿಮುಖನಾಗಿ ಯೋಗಧ್ಯಾನದಲ್ಲಿ ಮಗ್ನನಾದನು ಆತನ ಪಕ್ಕದಲ್ಲಿ ಅರ್ಜುನನಿದ್ದನು—ಮತ್ತು ಅವರಿಬ್ಬರ ನಡುವೆ ಸುಭದ್ರಾದೇವಿ ಇದ್ದಳು ಪ್ರೇಮಾನಂದದಿಂದ ತನ್ನನ್ನು ತಾನು ಮರೆತು ವ್ಯಾಸನು ಇಂತೆಂದನು—"ದೇವಗಣಗಳಿರಾ! ಋಷಿಗಣಗಳಿರಾ! ಬಂದು ತಡವೆ ಇಲ್ಲಿಗೆ ಬಂದು ಈ ಅಪಾರ್ಥಿವನಾದ ತ್ರಿಮೂರ್ತಿಗಳನ್ನು ನೋಡಿರಿ—ನೋಡಿ ಧನ್ಯರಾಗಿರಿ ಜ್ಞಾನದೇವನಾದ ಶ್ರೀಕೃಷ್ಣನು, ಬಲದೇವನಾದ ಧನಂಜಯನು, ಮತ್ತು ಅವರ ನಡುವೆ ಭಕ್ತಿದೇವಿಯಾದ ಸುಭದ್ರೆಯು—ಹೇಗೆ ದಿವ್ಯವಾಗಿ ಹೊಳೆಯುತ್ತಿರುವರು! ಇವರ ಎದುರಿನಲ್ಲಿ ಆತ್ಮವಿಸರ್ಜನೆಯ ಪ್ರತಿರೂಪವಾದ ಚಿತೆಯು! ಜ್ಞಾನ, ಬಲ, ಮತ್ತು ಆತ್ಮವಿಸರ್ಜನೆ—ಇವು ಭಕ್ತಿಯ ನಿಷ್ಕಾಮ ಸೂತ್ರದಿಂದ ಒಂದಾಗಿವೆ ಇದೇ ಮಾನವ ಜಾತಿಯ ಮೋಕ್ಷಧಾಮವು ಇದೇ ದ್ವಾಪರದಲ್ಲಿಯ ಅವತಾರವು ಈ ಮಹಾತೀರ್ಥವನ್ನು ನಾನು ಇಂದಿಗೆ ಕಣ್ಣು ತುಂಬಾ ನೋಡಿದೆನು ಈಗ ನಿನ್ನ ಮನೋರಥವು ಪೂರ್ಣವಾಯಿತು ನಾರಾಯಣಾ, ನಿನ್ನ ಮಹಾಭಾರತ ಸಂಗೀತವನ್ನು ಹಾಡಲಿಕ್ಕೆ ನನಗೆ ಶಕ್ತಿಯನ್ನೀಯು. ಆ ದಿವ್ಯ ಗೀತವನ್ನು ಕಿವಿಯಾರೆ ಕೇಳಿ ಮತ್ತು ಶ್ರೀಕೃಷ್ಣನಾಮದ ಅಮೃತವನ್ನು ಮನದಣಿಯೆ ಕುಡಿದು, ಮಾನವ ಜಾತಿಗೆ ಮುಕ್ತಿ ದೊರಕೀತು ಮತ್ತು ಪೃಥ್ವಿಯು ಕೇವಲ ಸ್ವರ್ಗವೇ ಆಗಿಬಿಡುವಳು"

ಶೈಲಜೆಯು ಗುರುವಿನ ಕಾಲಡಿಗಳ ಧೂಳನ್ನು ಎತ್ತಿ ತನ್ನ ಮಸ್ತಕದಲ್ಲಿಟ್ಟುಕೊಂಡಳು, ಮತ್ತು—"ಗುರುದೇವ, ತಮ್ಮ ಕೃಪೆಯಿಂದ, ಮತ್ತು ಮಗುವೇ, ನಿನ್ನ ಸ್ನೇಹದಿಂದ, ಈ ನಿನ್ನ ಅನಾಥಳಾದ ತಾಯಿಯ ಜನ್ಮವು ಇಂದಿಗೆ ಸಫಲವಾಯಿತು (ಮಗುವೇ ಎಂದು ಚಿತೆಯನ್ನುದ್ದೇಶಿಸಿ ಹೇಳಿದುದು) ಜಗನ್ನಾಥ, ಆರ್ಯರ ಮತ್ತು ಅನಾರ್ಯರ ದೇವಾ, ಪತಿತರಾದ ಅನಾರ್ಯರಿಗೆ ನಿನ್ನ ಅಡಿದಾವರೆಯ ದರ್ಶನವನ್ನೀಯು ಪನಷ್ಪತ್ರರ ನಾಲಗೆಯಲ್ಲಿ ನಿನ್ನ ಪತಿತಪಾವನವಾದ ನಾಮವನ್ನು ಸದಾ ಇರಗೊಡು ನಿನ್ನ ಧರ್ಮರಾಜ್ಯದಲ್ಲಿ ಅವರಿಗೂ ಸ್ಥಾನವನ್ನು ಕೊಡು —"ಎಂದಳು

* * * * * * * *

ಜಗನ್ನಾಥ, ಈ ಭರತಖಂಡದಲ್ಲಿರುವ ಜನರೆಲ್ಲರಿಗೆ ಜ್ಞಾನ, ಭಕ್ತಿ, ಮತ್ತು ಬಲ, ಇವುಗಳನ್ನು ಸಂಪಾದಿಸುವುದರಲ್ಲಿ ಮತ್ತು ಆತ್ಮವಿಸರ್ಜನ ಮಾಡುವುದರಲ್ಲಿ ಯೋಗ್ಯವಾದ ಶಿಕ್ಷಣವನ್ನು ಕೊಡು ನಿನ್ನ ಪದಕಮಲಗಳಲ್ಲಿ ಅವರಿಗೆ ನಿರಂತರವಾದ ಆಶ್ರಯವನ್ನೀಯು ಅವರಿಗೆ ನಿನ್ನ ಧರ್ಮರಾಜ್ಯದಲ್ಲಿ ಎಡೆಯನ್ನು ಕೊಡು.

"ನನ್ನ ಮಗಳ ಮದುವೆ"

ನನ್ನ ಮಗಳು ಅಂಬಾಬಾಯಿಗೆ ಬರುವ ಫಾಲ್ಗುಣಕ್ಕೆ ೧೧ ವರುಷ ಕಳಿಯುತ್ತದೆ ನಮ್ಮ ಅಜ್ಜ, ತಂದೆಯವರ ಕಾಲದಲ್ಲೆಲ್ಲ ೮ ಯಾ ೯ ವರುಷಗಳೊಳಗೆ ಹುಡುಗಿಯರಿಗೆ ಕನ್ಯಾದಾನ ಮಾಡುತ್ತಿದ್ದರಂತೆ. ಈಗ ಕಾಲ ಕಷ್ಟ. ನಾವು ನಮ್ಮ ಹುಡುಗಿಯರನ್ನು ೧೨ ವರುಷದಲ್ಲಿಯಾದರೂ ಮದುವೆ ಮಾಡಬೇಡವೇ? ಆದರೆ ಮಾಡಲೇನು ನನಗೆ ಪಿತ್ರಾರ್ಜಿತ ಆಸ್ತಿಯೇನಾದರೂ ಹೆಚ್ಚಿಲ್ಲ. ನನ್ನ ಅಂಶಕ್ಕೆ ಬಂದದ್ದು

(A) ಜನಾರಣ್ಯವಾದ ವ್ಯಕ್ತಿಗಳಿಗೆ ಮನುಷ್ಯರಿಗಿಂತ ಹೆಚ್ಚು ಅವಯವಗಳನ್ನು ಕಲ್ಪಿಸುವುದು ಮನುಷ್ಯನ ಭಕ್ತಿಬುದ್ಧಿಗೆ ಸಹಜವು. ಇಲ್ಲಿ ಮೂರು ಕಣ್ಣುಗಳಾವುವೆಂದರೆ—ಮನುಷ್ಯ ಜಾತಿಗೆ ಸಹಜವಾದ ಎರಡು ಕಣ್ಣುಗಳು, ಮತ್ತು ಹಣೆಯಲ್ಲಿ ಇನ್ನೊಂದು ಕಣ್ಣು. ಮೂರು ಕಾಲುಗಳು—(1) ವರ್ತಮಾನ ([illegible]) (2) [illegible] (ಹಿಂದೆ [illegible] ಹೋದದ್ದು) (3) [illegible] ([illegible])

ಇದೇ ೩೦ ಮುದಿ ಅಕ್ಕಿಯೂ ೧೫ ರೂಪಾಯಿ ಸಾವು ನನ್ನ ಸಂಜೀವ ಬಾಳಲ್ಲಾ ನಷ್ಟ ೩ ಜನ ಮಕ್ಕಳಿಗೂ ನಮ್ಮಿಬ್ಬರಿಗೂ ಜೀವನಕ್ಕೆ ಸಾಕಾಗುವದಿಲ್ಲ ಇರಲಿ ಚಿಂತಿಲ್ಲ; ಇನ್ನೊಂದು ವರುಷ ನೋಡುವ.

ಕೋರ್ಟಿನಲ್ಲಿ ಕೆಲಸದ ತರಾತುರಿ ನನಗೆ ಈ ಸಂಗತಿಯು ಮರೆಯಿತು. ಸುಮಾರು ೪ ತಿಂಗಳು ಕಳೆಯಿತು. ಒಂದು ದಿವಸ ರಾತ್ರಿ ಊಟ ತೀರಿ ನಾನೂ ನಮ್ಮಾಕೆಯೂ ಸುಖಸಲ್ಲಾಪದಲ್ಲಿದ್ದೆವು ಸ್ವಲ್ಪ ಹೊತ್ತು ಮಾತನಾಡಿದನಂತರ ನಮ್ಮಾಕೆಯು, "ಏನು" ನಮ್ಮ ಅಂಬಾಬಾಯಿಗೆ ೧೧ ವರುಷ ಕಳೆಯಿತು ಪುಣ್ಯವಂತರಲ್ಲಿ ಲಗ್ನಮಾಡಿ ಒಂದು ವರುಷವಾಗುತ್ತಿತ್ತು. ನಮಗೆ ಇನ್ನೂ ಜಾತಕ ಹುಡುಕುವ ಗೋಷ್ಟಿಯೇ ಇಲ್ಲಪ್ಪಾ ಇದೇನು ವಿಚಾರವೆಂತು ನಾನೇನರಿಯೆ" "ಹಾದು, ಮಾಡಲೇನು? ನೀನು ನೋಡುತ್ತಿಯಲ್ಲ, ನಾನು ಬೆಳಗ್ಗೆ ಹೋದರೆ ದೀಪಹಚ್ಚಿದನಂತರ ಮನೆಗೆ ಬರುತ್ತೇನೆ ಆಫೀಸಿನ ಕೆಲಸ ಮಾಡುವದೋ, ಜಾತಕ ಹುಡುಕುವದೋ, ಹೇಳು" "ಓಹೋ, ಒಳ್ಳೇ ಮಾತು, ಹಾಗಂದರೆ ಹುಡುಗಿಯನ್ನು ೧೬ ವರುಷದ ವರೆಗೆ ಬೆಳಿಸಿ ನಾವು ಬ್ರಹ್ಮಸಮಾಜಕ್ಕೆ ಕೊಡುವದೇನು?" ಒಂದೇ ಮಾತಿನಲ್ಲಿ ನನ್ನ ಬಾಯಿ ಮುಚ್ಚಿತು ಏನು ಹೇಳಲಿ! "ಬರುವ ಎಪ್ರಿಲ್ ರಜೆಯಲ್ಲಿ ಜಾತಕ ತಲಾಸಿಮಾಡುತ್ತೇನೆ ಹ್ಯಾಗಾದರೂ ಬರುವ ಕಾರ್ತಿಕದ ಒಳಗೆ ಲಗ್ನ ನಿಶ್ಚೈಸಬೇಕು"

ನನ್ನ ಬಾವನೆಂಟನಿಗೆ ಜಾತಕದ ತಲಾಶಿ ವಿಷಯದಲ್ಲಿ ಬೆಳಗಾಂವಿಗೆ ಕಾಗದ ಬರದೆ ಅವನು ೪ ಜಾತಕಗಳನ್ನು ಕಳುಹಿಸಿದನು ನಮ್ಮಾಕೆ ಏನು ಸುಮ್ಮನಿದ್ದಳೇ? ಅವಳೂ ರಾವಸಾಹೇಬ ಮಂಡಳೀಕರ್ ರಘುನಾಥರಾಯರ ಮಗನ ಜಾತಕವನ್ನೂ ತಂದಳು ಹಿಂದಕ್ಕಾದರೆ ನಮ್ಮ ಕುಲಪುರೋಹಿತ ನಾರಾಯಣ ಬಟ್ಟರೂ ಜಾತಕ ನೋಡುತ್ತಿದ್ದರು ಈಗ ಅವರಿಗೆ ಬಹಳ ಪ್ರಾಯವಾಯಿತು ಆದ್ದರಿಂದ ಮಗ ಮಂಗೇಶರಾಯನನ್ನು ಕಳುಹಿಸುವರು ಇವನನ್ನು III ಫೋರ್ಮಿನ ತನಕ ಮಂಗೇಶ ಬಟ್ಟನೆಂತ ಕರಿಯುತ್ತಿದ್ದರು IV ಫೋರ್ಮಿಗೆ ಕೊಲೆಜಿಗೆ ಹೋದನು ಅಲ್ಲಿ ಭಟ್ಟನೆಂದರೆ ಸರಿಯಲ್ಲವೆಂದು "ರಾವ್" ಆದ ತಂದೆಗೆ ಮುದಿಪ್ರಾಯವಾದ್ದರಿಂದಲೂ ತನಗೆ ಅದೇ ವರುಷ ಲಗ್ನವಾದ್ದರಿಂದಲೂ ಮಂಗೇಶರಾಯನು ಶಾಲೆಬಿಟ್ಟು ಮನೆ ವಹಿವಾಟು ನಡಿಸುವಕಾಲ ಬಂತು ಇವನು ಶಾಲೆಯಲ್ಲಿದ್ದಾಗ ಮಂತ್ರ ಕಲಿಯಲಿಕ್ಕೆ ಅನುಕೂಲವಿರಲಿಲ್ಲ ಜೋತಿಷ್ಯ ಅವಶ್ಯವಿರಲಿಲ್ಲ ಆದರೆ ಈಗ ದೇವಸ್ಥಾನದ ಅರ್ಚಕನಾದ್ದರಿಂದ ದಕ್ಷಿಣೆಗೆ ಒರುವನು ಹೀಗಿದ್ದದರಿಂದ ನಾನು ನಡಿಗುಂಡಿ ಸುಬ್ರಮಣ್ಯ ಶಾಸ್ತ್ರಿಗಳನ್ನು ಕರೆಯಬೇಕಾಯಿತು ಶಾಸ್ತ್ರಿಗಳು ಜಾತಕ ಪರಿಶೋಧನೆಗೆ ತೊಡಗಿದರು ನನಗೆ ಮುಂಚೆಯೇ ಶಾಸ್ತ್ರಿಗಳ ಹತ್ತರ ಈ ಪ್ರಸ್ತಾಪ ತೆಗಿಯಲು ಮರತುಹೋಗಿತ್ತು ಆದರೆ ಆಗ ನಾನು ಮನಸ್ಸಿನಲ್ಲಿಯೇ "ನಮ್ಮ ಹುಡುಗಿಯ ಜಾತಕ ರಾವಸಾಹೇಬರ ಮಗನಿಗೆ ಕೂಡಿಬಾರದಿದ್ದರೆ ನಾಳೆ ಗಣಪತಿದೇವರಿಗೆ ೮ ಆಣೆ ಪಂಚಕಜ್ಜಾಯ ಮಾಡಿಸುತ್ತೇನೆ" ಅಂದೆನು ಶುರುವಿನ ಪುರುಷಜಾತಕದಲ್ಲಿ ದ್ವಿಕಳತ್ರಯೋಗ ಇತ್ತು ಎರಡನೇದು ರಾವಸಾಹೇಬರ ಮಗನದು ಒಳ್ಳೇ ರೀತಿಯಿಂದ ಕೂಡಿಬರುವದು ಆದರೆ ೭ನೇ ವರುಷದಲ್ಲಿ ಕುಜರಾಹುಸಂಧಿ ಚಿಂತಿಲ್ಲ ೭ರ ನಂತರ ಸಂಧಿ ದೋಷವಿಲ್ಲವೆಂತಲೂ ಶಾಸ್ತ್ರಿಯರು ಹೇಳಿದರು ಇನ್ನೆರಡಕ್ಕೂ ದೋಷವಿತ್ತು ೫ನೇದು ಚನ್ನಾಗಿ ಕೂಡಿ ಬರುತ್ತದೆ "ಬಹುಶ್ಯಾ ಈ ಹುಡುಗನಿಗೆ ಇದೇ ಹುಡುಗಿ ಆಗಬೇಕು" ನನಗೆ ಸ್ವಲ್ಪ ಉಸುರು ಆಡಿತು

ಚನ್ನಾಗಿ ಕೂಡಿಬರುವ ಜಾತಕವು ಅಮರಮನೆ ರಾಮಚಂದ್ರರಾಯರ ಮಗನದು ಇವರು ಒಂದನೇ ತರಗತಿಯ ಬೆಳಗಾಂವ ಕೋರ್ಟು ವಕೀಲರು ಮಗ ವಿಶ್ವೇಶ್ವರ ರಾಯನು ಮುಂಬಾಯಿಯಲ್ಲಿ ಪಿ ಇ ಪಾಸಾಗಿ ರಜೆಯಲ್ಲಿ ಮನೆಗೆ ಬಂದಿರುತ್ತಾನೆ ಬಿ ಎ ಕಲಿಯುವರೆ ಆಲೋಚಿಸಬೇಕಂತೆ ನಮ್ಮಾಕೆಗೆ ನಾವು ರಾವಸಾಹೇಬರಲ್ಲಿ ಸಮ್ಮಂಧ ಬೆಳಸುವುದು ಬಹುಮನಸ್ಸು ಹುಡುಗನು ಕಳದ ವರುಷ ಮೆಟ್ರಿಕ್ಯೂಲೇಶನ್ ಪರೀಕ್ಷೆಯಲ್ಲಿ "ಕೌಯಲ್ಲಿ ಫೈಲ್ ಆದನಂತೆ ಈ ವರುಷ ಪುನಹ ಪರೀಕ್ಷೆಗೆ ಕೂತಿರುವನು ರಾವಸಾಹೇಬರ ಮನಸ್ಸು ನೋಡಿಬಿಡುವ ಎಂದು ನಾನು ಗಣಪತಿರಾಯರನ್ನು ಅವರಲ್ಲಿ ಕಳುಹಿಸಿದೆ ರಾವಸಾಹೇಬರು ಗಾಳಿತೆಗದು ಕೊಳ್ಳಲು ಹೊರಗೆ ಹೋಗಿದ್ದರು (ಗಣಪತಿರಾಯರ ಆಗಮನದ ಉದ್ದಿಶ್ಯವನ್ನು ಊಹಿಸಿಯೇ) ಅವರ ಪತ್ನಿಯು ನಮ್ಮ ಗಣಪತಿರಾಯರನ್ನು ಒಳಗೆ ಕರದು ಕುಳ್ಳಿರಿಸಿ ಕ್ಷೇಮಸಮಾಚಾರ ಮಾತನಾಡ ತೊಡಗಿದರು "ನಿಮ್ಮ ಶೀತಾಬಾಯಿ ನಮ್ಮ ಸಂಜೀವರಾಯನ ಜಾತಕವನ್ನು ತೆಗದುಕೊಂಡು ಹೋಗಿದ್ದಳು ನಾನು ಬೇಡವೆಂತಲೇ ಹೇಳಿದೆ ಆದರೂ ಅವಳು ನೋಡಿಬರುವ ಎಂದು ಪಶ್ಚಾತ್ತಾಯದಿಂದ ತೆಗದುಕೊಂಡಳು. ಏನು? ಭಟ್ರಿಗೆ ತೋರಿಸಿದರೋ, ಹ್ಯಾಗೆ ಕೂಡಿಬರುತ್ತದೆಯೋ? "ಸುಬ್ರಮಣ್ಯ ಶಾಸ್ತ್ರಿಗಳು ಮಧ್ಯಮರೀತಿಯಿಂದ ಕೂಡಿಬರುತ್ತದೆಂದು ಹೇಳಿದ್ದಾರೆ" "ನಮ್ಮ ಸಂಜೀವಗೆ ನನಗೆ ಇಷ್ಟುಬೇಗ ಲಗ್ನಮಾಡುವ ಮನಸ್ಸಿಲ್ಲ. ಅವನಿಗೆ ಇದೀಗ ೧೬ ಕಳೆದು ನಾಳೆ ಅಕ್ಷೀಜಕ್ಕೆ ೧೭ ವರುಷ ಹಿಡಿಯುತ್ತದೆ, ಅವನು ಸಹಾ ತಾನು ಬಿ. ಎ. ಪಾಸಾದ ಬಳಿಕ ಲಗ್ನ ಮಾಡಿಕೊಳ್ಳುವದಿಲ್ಲವೆಂತ ಹೇಳುತ್ತಾನೆ. ನೀವು ಕ್ಷೇತ್ರ ರತನಕ ಕಾಯಲಿಕ್ಕೆ ಆಗುತ್ತದೋ, ಈಗಲೇ ಹುಡುಗಿಗೆ ೧೧ ಕಳೆಯಿತು" ರಾವಸಾಹೇಬರ ಪತ್ನಿಯವರ ಅಭಿಪ್ರಾಯವು ಗಣಪತಿರಾಯರಿಗೆ ತಿಳಿಯಿತು. "ಸಂಜೀವರಾಯನಾ ಒಳ್ಳೇ

ಕಾರ್ತಿಕೇಯ ಅಚ್ಚುಕೂಟ.

ಸುಪ್ರಸಿದ್ಧ ವೈಗಳವರ

ಭಾವ ಚಿತ್ರಗಳು.

ವಿಕ್ರಿತಕ್ಕೆ ಸಿದ್ಧವಾಗಿರುವವು.

ಕ್ರಯ ಪ್ರತಿ ಒಂದಕ್ಕೆ 6 ಪೈ

ವ್ಯಾಪಾರಸ್ಥರಿಗೆ ಯಾ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಮಿಶನ್ ಕೊಡಲಾದೀತು

ಪ್ರತಿಗಳು ದೊರೆಯುವ ಸ್ಥಳ

ಕವಿ ಎಂಡ್ ಸನ್ಸ್ ಮಂಗಳೂರು, ದ ಕ.

THE NEWZEALAND INSURANCE CO, Ltd.

ದಿ. ನ್ಯೂಝೀಲಂಡ್ ಇನ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮೇರಿನ್ ಡಿಪಾರ್ಟ್‌ಮೆಂಟ್

ಮಂಗಳೂರು ಏಜಂಟರು — ದಿ ದತ್ತಾರಾಮ ಎಂಡ್ ಕೊ

ಪ್ರಿಟೋ ಬಿಲ್ಡಿಂಗ್ಸ್ ಮಂಗಳೂರು

ಈ ಕಂಪೆನಿಯಲ್ಲಿ ಯಾವ ಲ್ಯಾನಿನ ಸ್ಟೀಮರುಗಳಲ್ಲಿಯಾದರೂ, ಬೊಂಬಾಯಿ, ಕರಾಚಿ, ಕಲ್ಲಿಕೋಟು, ಕೊಲೊಂಬೊ, ಮದ್ರಾಸ್, ಕಲ್ಕತ್ತಾ, ರಂಗೂನ್, ವ ಇತರ ತನ್ಮಧ್ಯವಿರುವ ಬಂದರುಗಳಾಗಲಿ, ವಿಲಾಯತಿ ಬಂದರುಗಳಾಗಲಿ ಹೋಗುವ ಮಾಲಿನ ಮೇಲೆ ಬಹಳ ಸುಲಭವಾದ ದರಗಳಲ್ಲಿ ವಿಮೆ ಉತರಾಯಿಸಬಹುದು

ವಿಶೇಷ ಮಾಹಿತಿ ಕಂಪೆನಿಯ ಏಜಂಟರ ಕಡೆಯವರಾದ ಯಲ್ಲೂರು ರಾಮರಾವ್ ಇವರ ಕೂಡೆ ವಿಚಾರಿಸಿದ್ದಲ್ಲಿ ಯಾ ಬರಕೊಂಡಲ್ಲಿ ತಿಳಿಸಲಾಗುವದು

ರೂಪವಂತನು ಅಂಬಾಬಾಯಿಯೂ ಅವನಿಗೆ ಸೇರಿದ ಹುಡುಗಿಯೇ, ಈಗಿನ ಕಾಲದಲ್ಲಿ ಹುಡುಗಿಗೆ ಸ್ವಲ್ಪ ಬೇಗಲೇ ಒಂದು ಲಗ್ನಮಾಡಿಬಿಡಬೇಕು ನೋಡಿ ಇವರ ಕ್ಲಾಸಿನಲ್ಲಿಯೇ ಇರುವ ಆನಂದರಾಯನಿಗೆ ಇಬ್ಬರು ಮಕ್ಕಳಿದ್ದಾರೆ ಆನಂದರಾಯನಿಗೇನು ಇವನಷ್ಟೇ ಪ್ರಾಯ, ಯಾ ಒಂದೆರಡು ವರುಷ ಪ್ರಾಯ ಹೆಚ್ಚಾದೀತು ಸಂಜೀವನಿಗೇನು ೧೭ ವರುಷದಲ್ಲಿ ಲಗ್ನವಾಗುವದು ಬಹುಬೇಗವಾಯಿತೋ? ಅದಂತಿರಲಿ ನಿಮ್ಮ ಅಂದಾಜೇನು ನೋಡುವ" "ಮೊನ್ನೆ ಮಾಧವರಾಯರು ನಮ್ಮ ಹುಡುಗನ ಜಾತಕ ಕೇಳಿದರು ಆಗ ಈ ಪ್ರಸ್ತಾಪ ಬಂತು ಇವರಿಗೂ (ರಾವಸಾಹೇಬರಿಗೂ) ಅವರಿಗೂ ಬಹಳ ಸ್ನೇಹ ಅವರ ಹತ್ತರ ಹೆಚ್ಚು ಹೇಳಲಿಕ್ಕೆ ಆಗುವದಿಲ್ಲವೆಂದು ೫ ಸಾವಿರ ನಗದಿ, ಹಬ್ಬಗಳು ಮತ್ತು ಹುಡುಗನಿಗೆ ವಜ್ರದ ಒಂಟಿಜೋಡು ಕೊಡಬೇಕೆಂದರು ನೀವೇನು ನಮಗೆ ಮಾಧವರಾಯರಿಗಿಂತ ದೂರವೋ? ನೀವು ಸಹಾ ಅಷ್ಟೇ ಕೊಟ್ಟರೆ ಸಾಕು ನಾವೇನು ಹೆಚ್ಚು ತಕ್ಕೊಂಡರೆ ಅದು ನಾವು ಇರುವ ಪರ್ಯಂತರವೇಗೆ ಒಂದೀತೇ? ಗಣಪತಿರಾಯರು ಇನ್ನು ಹೆಚ್ಚು ಹೊತ್ತು ಕೂತು ಪ್ರಯೋಜನವಿಲ್ಲವೆಂದು ತಿಳಿದು ಅಲ್ಲಿಂದ ಹೊರಟರು ಈ ಪ್ರಸ್ತಾಪ ಕೇಳಿದ ಕೂಡಲೇ ನಮ್ಮಾಕೆಯ ಮುಖ ಬಾಡಿತು

ನಾಲ್ಕೈದು ದಿವಸದಲ್ಲಿಯೇ ನಮ್ಮ ಬಾವನೆಂಟನ ಪತ್ರ ಬಂತು • • •
• • • • • • • • • • • • • • • •

ರಾಮಚಂದ್ರರಾಯರು ಒಂದು ಸಾವಿರಕ್ಕಿಂತ ಕಡಿಮೆ ಕೇಳುವದಿಲ್ಲ. ಇದು ನಗದಿ ವಿಷಯ, ಹುಡುಗನು ವಿ ಎ ಎಲ್ ಎಲ್ ಬಿ ಕಲಿಯುವ ಖರ್ಚು ವರೂಢಿಯಲ್ಲಿರುವ ಎಲ್ಲಾ ಹಬ್ಬಗಳು ಕೂಡಿಬರಬೇಕಂತೆ, ಅವರು ಮತ್ತು ವಿಶ್ವೇಶ್ವರರು ಹುಡುಗಿಯ ನಕ್ಷೆ ನೋಡಿ ಸಂತೋಷಪಟ್ಟರು ಆದ್ದರಿಂದ ಹುಡುಗನ ವಶ್ಚಾತ್ತಾಯಕ್ಕೆ ಇಷ್ಟು ಕಮ್ಮಿಗೆ ಸಮ್ಮತಿಸಿದರಂತೆ ನಿನ್ನ ಅಭಿಪ್ರಾಯವೇನು?" • • • • • •

ನಾನು ಬೇರೆ ಜಾತಕ ಹುಡುಕಲು ಪ್ರಾರಂಭಿಸಿದೆ. ಮೇ ತಿಂಗಳು ಕಳೆಯಿತು. ಸುಮಾರು ೩೩ ಜಾತಕ ಸಿಕ್ಕಿತು. ಮಧ್ಯಮ ರೀತಿಯಿಂದ ನಾಲ್ಕೈದು ಕೂಡಿಬಂದರೂ ಚನ್ನಾಗಿ ಕೂಡಿಬರುವದೊಂದೇ ಈ ಹುಡುಗನ ತಂದೆ ಮಾಗಡಿ ಶ್ಯಾನಭಾಗನು. ತಿಂಗಳಿಗೆ ೧೫ ರೂಪಾಯಿ ತಲಬು ೫೫ ಮುದಿ ಅಕ್ಕಿ ಗೇಣಿ ಬರುತ್ತದೆ. ಹುಡುಗನು ಲೋವರ್ ಸೆಕಂಡರಿ ಪರೀಕ್ಷೆಕೊಟ್ಟು ೪ನೇ ಫೋರ್ಮಿಗೆ ಮುಂದರಿಸಲು ಅನುಕೂಲವಿಲ್ಲದೆ ಮನೆಯಲ್ಲಿದ್ದು ತಂದೆಗೆ ಸಹಾಯಕನಾಗಿದ್ದಾನೆ. ನನಗೆ ಇನ್ನು [illegible] ಹುಡುಕಲೂ ಸಮಯವಿಲ್ಲ. ಸಿಕ್ಕಿದ ಎರಡರಲ್ಲಿ ಒಂದನ್ನು ಮಾಡಬೇಕು. ನಮ್ಮಾಕೆಯ ಮನೋಗತವನ್ನು ನೋಡಬೇಕು.

ಭಲೇ! ಇತ್ತ ನೋಡು, ನೀನು ಯಾವದು ಆದೀತೆಂತ ನೆನಸುತ್ತೀ? ಮಾಗಣೆ ಶ್ಯಾನಭಾಗರ ಮಗನ ಜಾತಕವು ಚನ್ನಾಗಿ ಕೂಡಿಬರುತ್ತದೆ".

"ರಾಮಚಂದ್ರರಾಯರು ಏನಾದರೂ ಹೆಚ್ಚು ಕೇಳುವದಿಲ್ಲ. ಇಡೀ ಒಂದು ಸಾವಿರ. ನಮ್ಮ ಅಂಬಾಬಾಯಿಗೆ ಅಷ್ಟಾದರೂ ಕೊಡಬೇಡವೇ?" ಮಾಗಣೆ ಶ್ಯಾನಭಾಗರ ಪ್ರಸ್ತಾಪವೇ ಇಲ್ಲ.

"ಹೌದು ಮಾಡಲೇನು, ನನಗೆ ಕೆಲಸವಾಗಿ ೧೫ ವರುಷವಾದರೂ ಒಂದು ಪೈ ಬೇಂಕಿನಲ್ಲಿಡಲಿಲ್ಲ. ಎಷ್ಟು ಸಿಕ್ಕಿದರೂ ನಮಗೆ ಖರ್ಚಿಗೆ ಸಾಲದು. ಹೀಗಿರಲು ಎಲ್ಲಿಂದ ಒಂದು ಸಾವಿರ ಕೊಡಲಿ? ಮದುವೆ ಖರ್ಚಿಗೊಂದು ೫೦೦ರಾದರೂ ಬೇಕು, ಏನು, ಇದ್ದ ಆಸ್ತಿ ಮಾರುವದೆಂತ ಆಲೋಚನೆಯೋ?" ಮಾತು ಬಾಯಿಯಿಂದ ಬಂದುಹೋಯಿತು. ಅಮ್ಮನವರು ಕಣ್ಣೀರು ಸುರಿಸಲಾರಂಭಿಸಿದರು.

"ನಮ್ಮ ಅಂಬಾಬಾಯಿಯನ್ನು ಆ ಮಾಗಣೆ ಶ್ಯಾನಭಾಗನ ಮಗನಿಗೆ ಕೊಡುವದಕ್ಕಿಂತ ಅವಳನ್ನು ಕೈಕಾಲು ಕಟ್ಟಿ ಹೊಳೆಯಲ್ಲಿ ಬಿಡಬಾರದೇ? ಖರ್ಚುಕೊಡಲಿಕ್ಕೆ ಹಣವಿಲ್ಲದಿದ್ದರೆ ಆಸ್ತಿಯಾದರೂ ಮಾರಬೇಕು. ಇಡೀ ಸಂಸಾರಕ್ಕೆ ಇರುವದೊಂದು ಹೆಣ್ಣುಮಗು ಅದು ಒಂದು ಒಳ್ಳೇ ಮನೆತನಕ್ಕೆ ಮುಟ್ಟದಿದ್ದರೆ ಯಾರಾದರೂ ನಮಗೆ ಏನನ್ನುವರು? ಹುಡುಗನಾದರೋ ವಿದ್ಯೆ ಕಲಿತರೆ ಎಲ್ಲಿಯಾದರೂ ಹೊಟ್ಟೆ ಹೊರಕೊಂಡಾರು. [illegible]ಇಲ್ಲದಿದ್ದರೆ ಯಾರ ಕೈಕಾಲು ಸೇವೆಯಾದರೂ ಮಾಡ್ಯಾರು, ಹುಡುಗರಲ್ಲವೇ" "ನನಗೂ ಬೇರೇನೂ ಉಪಾಯ ಕಾಣದಿಲ್ಲ. ಆಸ್ತಿಯನ್ನು ನಮ್ಮಬೈಲ ಗುತ್ತು ಗುನ್ನಾ[illegible] ಬಿಕ್ರಿಗೆ [illegible] ಮಾಡಿಸಿ [illegible] ಜನಳಿ ಎನ್ನುವಾಗ ೧೬೦೦ ಹೋಯಿತು. [illegible] ಮದುವೆ ಪೂರೈಸಿತು. ನೆಂಟರೆಲ್ಲ ಹೊರಡುವ [illegible] ಮದುವೆ [illegible] ಒಗ್ಗೆ [illegible] ಹಂದ ಪೂ[illegible] ಜಂತ[illegible] ೧[illegible]—[illegible]—[illegible] ಬಂತು. ಎಲ್ಲಿಂದ ಕೊಡಲಿ? ಒಂದ [illegible] ಹ್ಯಾಗಾದರೂ ಒಂದಾವರ್ತಿ ಸಮಜಾಯಿಸಿ ಕಳುಹಿಸಿದೆ. ಎಲ್ಲಿ ನೋಡಿದರೂ ರೂಪಾಯಿ ಸಿಕ್ಕದಿಲ್ಲ. ಕಡೆಗೆ ನನ್ನ ೧೦೦೦ರದ ಲೈಫ್ ಇನ್ಶೂರೆನ್ಸನ್ನೂ [illegible]ಕ್ಕೆ ಕಂಪೆನಿಯವರಿಗೆ ಅಡವಿಟ್ಟ.

ಒಂದು ವರುಷದವರೆಗೆ ಹ್ಯಾಗಾದರೂ ನನ್ನ ಸಂಬಳದಿಂದ ಕಾಲಕ್ಷೇಪ ನಡೆಯಿತು. [illegible] ಉಡಿಗೆರೆಗೆ ಒಂದು ಬೆಳ್ಳಿಯ ಬಟ್ಟಲು ಆಗಬೇಕು. ಇನ್ಶೂರೆನ್ಸ್ ಕಂಪೆನಿಯವರಿಗೆ [illegible] ಬಡ್ಡಿಯೇ ಕೊಡಲಿಲ್ಲ. [illegible] "ಈಗ ಏನು ಮಾಡುವದು?" "ಏನು [illegible] ನನ್ನ ಕೈಯ [illegible] ಬೇಡಾದರೂ ಅಡವಿಟ್ಟು, ಹ್ಯಾಗಾದರೂ [illegible]?" [illegible] ೭೦ ರೂಪಾಯಿ ಸಿಕ್ಕಿತು. ೭೦ [illegible] ಬೆಳ್ಳಿ [illegible] ಒಂದು ವಾಚಿಸಿದೆ.

೧೦ ವರುಷ ಕಳೆಯಿತು. [illegible] ರೂಪಾಯಿಯಲ್ಲಿ ಏನು ಮಾಡಲಿ? [illegible] ಕಾಡಿಸಿಟ್ಟು ಹುಡುಗಿ[illegible] ರೂಪಾಯಿ [illegible] ನ್ಯಾಯದ [illegible] ಪ್ರಿಸ್ಕ್ರೇರಿನ್ ಕ್ಲಾಸಿನಲ್ಲಿದ್ದ, ಪ್ರಸವ ವರುಷ [illegible] ವರುಷಕ್ಕೆ ಕೊಡಲಿಕ್ಕೆ ಸಂಬಳ ಅನಾನುಕೂಲ, ಅವನು [illegible] ಒಳ ಆಡವಿದ್ದದ್ದು ಬಿಡಿಸಲು ಅನಾನುಕೂಲವಿಲ್ಲದೆ [illegible] ಹೋಯಿತು. ಇನ್ಶೂರೆನ್ಸಿನ ಕಂತು ಕೊಡಲಿಲ್ಲ. [illegible] ಕೊಟ್ಟಿರಲ್ಲವೇ? ಅಸಲು ಕೊಡಲಿ? ಅದೂ ಕಂಪೆನಿ[illegible] ಈಗ ನಮ್ಮ [illegible] ಮನೆಗೆ ಒಂದಾಗ ಇಬ್ಬರು ಮೊಮ್ಮಕ್ಕಳು ನನ್ನ ತೊಡೆಯಲ್ಲಿ ಕೂತು ಮುದ್ದಾಡುವರು. ಒಂದೊಂದು ಸಾರಿ "ಅಜ್ಜ, ಅಜ್ಜ, ನೀನು ಯಾಕೆ ಚಿಂತೆಯಲ್ಲಿದ್ದಂತೆ ಕಾಣುತ್ತೀ, ನೀನು ನಗಾಡಿದರೆ ನಮಗೆ ಸಂತೋಷ ಆಗುತ್ತದೆ" ಎನ್ನುವರು. ನಗಾಡಲೋ? ಕಣ್ಣೀರು ಸುರಿಸಲೋ? ಈಗ ಹೆಚ್ಚು ಮಾತಾಡಲಾರೆನು. ನಮಸ್ಕಾರ, ವಾಚಕರೇ, ನೀವು ಲಗ್ನಮಾಡಿಕೊಳ್ಳಲು ಯೋಚಿಸುವಾಗ ನನ್ನನ್ನು ಮರಿಯಬೇಡಿ.

Purushottam.

ದಶಾವತಾರ ಆಟಗಳು.

(ನ [illegible] ದಾರರಿಂದ)

ಒಬ್ಬ ವ್ಯಕ್ತಿಯ ನಡೆನುಡಿಗಳನ್ನು ಮತ್ತೊಬ್ಬನು ಅನುಸರಿಸುವ ವಾಡಿಕೆಯಿಂದ ಅವುಗಳ ಗುಣಾವಗುಣಗಳು ಯಾವ್ಯಾವ ಪಂಗಡದ ಸಮುದಾಯವಾದ ನಡವಳಿಕೆಯಲ್ಲಿ ಸೇರುತ್ತವೆ, ಪಂಗಡಗಳ ಸಮೂಹವೇ ಜನಾಂಗವೆನ್ನಿಸಿಕೊಳ್ಳುವದರಿಂದ ಅಂತಹ ಗುಣದೋಷಗಳು ಪ್ರಭಾವಿತವಾಗಿ ಆಯಾಯ ಜನಾಂಗದ ಲಕ್ಷಣಗಳೆಂದು ಎಣಿಸೋಣಾಗಲಿಕ್ಕೆ ಆಸ್ಪದವಾಗುತ್ತದೆ. ನಡತೆಯ ಔಚಿತ್ಯವೂ ಸ್ವೈರ್ಯವೂ ತುಲನವಾದಾಗ ಪರೀಕ್ಷಾಕರ್ತರು ಜನಾಂಗದ ನಾಗರೀಕತೆಯ ಮಿತವನ್ನು ನಿರ್ಧರಿಸಲು ಅವಕಾಶ ದೊರಿಯುತ್ತದೆ. ಓದುಬರಹದಿಂದ ಶಿಕ್ಷಣದ ಔತ್ಕೃಷ್ಟ್ಯವೇ ಪ್ರಾಮುಖ್ಯವೆಂಬದು ನಿಜವೇ. ಸೌಶೀಲ್ಯಕ್ಕೆ ವಿದ್ಯೆಯೇ ಅಸ್ತಿವಾರವೆಂಬದು ಸರ್ವರೂ ತಿಳಿದಿರುವರು. ಅಮೃತ ಕುಂಭದಲ್ಲಿ [illegible] ಬೆರೆಸಿದರೆ ಅದರ [illegible] ಹ್ಯಾಗೆ ಎಂಬ ವಿಚಾರ ಯಾರು ತಿಳಿಯರು? ಹಾಗೆಯೇ ವಿದ್ಯೆಯಲ್ಲಿ ನೈಪುಣ್ಯವನ್ನು ಸಂಪಾದಿಸಿದ ಯುವಕರಲ್ಲಿ ಐಹಿಕಾಮುಷ್ಮಿಕ ಯೋಚನೆಗಳು ಸಮತುಲ್ಯವಾಗಿ ಬೆಳೆಸಲು ಇರುವ ಅಡ್ಡಲುಗಳನ್ನು ತಕ್ಕ ಪ್ರಾಯದಲ್ಲಿಯೇ ನಿವಾರಣೆಯಾಗದಿದ್ದರೆ ಬೆಳೆದುಹೋದ ಬಿದುರನ್ನು ಬಗ್ಗಿಸುವ ಯತ್ನದಂತೆ ಮುಂದಿನ ಅಭಿವೃದ್ಧಿಯ ಅವಸ್ಥೆಯು ಕಷ್ಟಸಾಧ್ಯವಾಗುವದು ಯೇನು ಚೋದ್ಯ. ಸ್ನಾನ ಸಂಧ್ಯಾವಂದನೆ ಜಪಾನುಷ್ಠಾನ ನಾಗರೀಕತೆಯ ಮುಖ್ಯಾಂಗಗಳಲ್ಲವೆನ್ನುವವರು ಕರ್ಮ ಭ್ರಷ್ಟರೆನ್ನಿಸಿಕೊಂಡು ಸರ್ವಾಭಿವೃದ್ಧಿಯ ಶತ್ರುಗಳೆನ್ನಿಸಿಕೊಳ್ಳಲು ಪಾತ್ರರಲ್ಲವೇ? ದೇವರ ಒಲುಮೆಯನ್ನು ಸಂಪಾದಿಸಿಕೊಳ್ಳುವದೇ ಪ್ರಧಾನ ಕರ್ತವ್ಯವಾಗಿರುತ್ತದೆ. ರಾಮಾಯಣ ಭಾರತ ಭಾಗವತ ಮೊದಲಾದ ಸತ್ಕಥಾಶ್ರವಣದ ಕಾಲದಲ್ಲಿ ವಿದ್ಯಾರ್ಥಿಗಳಾದ ಮಕ್ಕಳು ಅದನ್ನು ಕೇಳುವ ಆಸಕ್ತಿಯನ್ನು ತೋರ್ಪಡಿಸಿದರೆ ನೀವು ನಿಮ್ಮ ಪುಸ್ತಕಗಳನ್ನು ಓದುವ ಕೆಲಸ ನೋಡಿ ಈ ಪುಣ್ಯಕರವಾದ ಪ್ರಸಂಗದಲ್ಲಿ ಮನಸ್ಸು ಕೊಡುವ ಸಮಯವು ಕೂದಲು ನರೆತ ಮೇಲೆ ಬರುವದು ಎಂಬ ಎಚ್ಚರಿಕೆಯನ್ನು ಹಿರಿಯರು ಕೊಡುವದುಂಟು. ಪರಂತು ರಾತ್ರೀ ಭೋಜನವಾದ ತರುವಾಯ ದಶಾವತಾರ ಆಟದ ಚಂಡೆ ಶಬ್ದ ಕೇಳಿತೇ ಸರಿ, ಆಬಾಲವೃದ್ಧರು ದೊಡ್ಡ ಅವಸರದಿಂದ ತೊಟ್ಟಿಲಲ್ಲಿ ಮಲಗಿರುವ ಕೂಸುಗಳನ್ನು ಕೂಡಾ ಎತ್ತಿಕೊಂಡು ಅವುಗಳ ರೋದನವಾದ್ಯ ಸಮೇತ ರಂಗಸ್ಥಳದ ಕಡೆಗೆ ತೆರಳಿ ಅದಮ್ಯ ಎಲ್ಲರಿಗೆ ಮುಹೂರ್ತವಾಗುವ ದುರಭ್ಯಾಸವು ದೊಡ್ಡ ಅರಿಷ್ಟವಲ್ಲವೇ? ಇಂತಹ ಮಹಾಸ್ಥಾನಗಳಲ್ಲಿ ಮೊತ್ತಮೊದಲು ಕಿವಿಗೆ ಬೀಳುವ ಸದ್ವಾಕ್ಯಗಳು ಹಾಸ್ಯಗಾರನ ಒಂದುಮಾತುಗಳು ಮತ್ತು ಭಾಗವತನ ಒಂದು ಪದಗಳು. ಕಡು ಲಜ್ಜಾಭಂಡನಾದರೂ ಕೇಳಲಿಕ್ಕೆ ನಾಚುವ ಬಂದು ಮರ್ಯಾದಸ್ಥ ನೋಟಕರೂ ಸಾಧ್ವಿಗಳೂ ತಮ್ಮ ಬಾಲಕ ಬಾಲಕಿಯರೊಡನೆ ಹ್ಯಾಗೆ ಸಹಿಸಿಕೊಳ್ಳುತ್ತಾರೋ ದೇವರೇ ಬಲ್ಲ. ಗ್ರಹಸ್ಥರು ಈ ಕುರಿತು ಸಮಯ ಕಳಿಯದೆ ತಕ್ಕ ಉಪಶಮನೋಪಾಯವನ್ನು ಹುಡುಕುವದು ಸಂಘ ಪರಿಷ್ಕರಣವೆಂಬ ಘನಕಾರ್ಯದ ಮುಖ್ಯ ಕರ್ತವ್ಯಾಂಶವೆಂದು ತಿಳಿಯಲು ಸಾವಕಾಶವಾಗದೆಂದು ಕೋರುವದರಕ್ಕಿಂತ ಹೆಚ್ಚಿನ ಪ್ರವರ್ತನೆಯು ನಮಗಸದಳ. ಇನ್ನು ಕೆಲವು ದಿವಸಗಳಲ್ಲಿ ಮೊಹರಂ ಉತ್ಸವವು ಪ್ರಾರಂಭವಾಗುವದು. ಆಗ್ಯೆ ಅನ್ಯಮತಸ್ಥರಾದ ಹಿಂದುಗಳನೇಕರು ಬೇರೆ ಬೇರೆ ವೇಷಗಳನ್ನು ಧರಿಸಿ ಬಹುಹೀನವಾದ ಬಂಡಾಟ ನಡಿಸುವಾಗ ಎಷ್ಟೋ ಜನರ ಮನಸ್ಸೂ ಕಿವಿಗಳೂ ಕಣ್ಣುಗಳೂ ಅತ್ಯಾತುರಪಡುವದುಂಟು. ನಾಗರೀಕತೆಯ ಶತ್ರುಗಳಾದವರ ಸಂಪರ್ಕವನ್ನು ವರ್ಜಿಸಿ ಅವರ ಬಲವನ್ನು ಮುರಿಯುವ ಸದುದ್ದೇಶವು ಎಂದು ನೆರವೇರುವದೋ ಭಗವಂತನೇ ಬಲ್ಲ.

BERNA WATCH COMPANY.

ಬರ್ನಾ ವಾಚು ಕಂಪೆನಿ.

ಕಿಶೆ ಗಡಿಯಾರುಗಳನ್ನು ತಯ್ಯಾರಿಸುವ ಕಾರ್ಖಾನೆಗಳಲ್ಲಿ ಇದೊಂದೇ ಕಂಪೆನಿಯ ಶಾಖೆಯು ಹಿಂದುಸ್ಥಾನದಲ್ಲಿರುವುದು. ಗೊರಂಟಿ ಯಾ ಜವಾಬ್ದಾರಿಯುಳ್ಳ ಗಡಿಯಾರುಗಳನ್ನು ಮಾತ್ರ ವಿಕ್ರಯಿಸುವದರಿಂದ ಸರಿಯಾದ ಸಮಯವನ್ನು ಸೂಚಿಸುವ ವಾಚುಗಳು ಬೇಕಾದವರಿಗೆ ಅಗ್ಗವಾದ ಬೆಲೆಯ ನಮ್ಮ ಗಡಿಯಾರುಗಳು ಖಂಡಿತವಾಗಿ ತೃಪ್ತಿ ಕೊಡುವವು.

ನಮ್ಮ 'ಮೆಕ್ಸಿಮ' ವಾಚನ್ನು ಭರವಸೆಯಿಂದ ಕೊಂಡುಕೊಳ್ಳಿರಿ.
ನಿಕಲ್ ಕೇಸಿನಲ್ಲಿ ರೂ ೧೦-೦-೦
ಬೆಳ್ಳಿ ಕೇಸಿನಲ್ಲಿ ರೂ ೧೪-೮-೦
ನಮ್ಮ 'ನ್ಯೂ ಡಿ. ಪಿ.' ನಿಕಲ್ ಕೇಸಿನಲ್ಲಿ ರೂ. ೧೪-೦-೦
ಬೆಳ್ಳಿ ಕೇಸಿನಲ್ಲಿ ರೂ. ೧೮-೮-೦.
ಕೆಟಲಾಗನ್ನು ಉಚಿತವಾಗಿ ಕಳುಹಿಸಿಕೊಡುವೆವು.



ನಮ್ಮ 'ಚಾರ್ಮರ್.'
ನಿಕಲ್ ಕೇಸಿನಲ್ಲಿ ರೂ ೧೬-೦-೦.
ಬೆಳ್ಳಿ ಕೇಸಿನಲ್ಲಿ ರೂ. ೨೧-೦-೦.
ನಮ್ಮ 'ವರ್ಡಲಿ.'
ನಿಕಲ್ ಕೇಸಿನಲ್ಲಿ ರೂ. ೧೮-೦-೦.
ಸಿಲ್ವರ್ ಕೇಸಿನಲ್ಲಿ ರೂ. ೨೩-೦-೦.
ನಮ್ಮ 'ಬೆಸ್ಟ'
ನಿಕಲ್ ಕೇಸಿನಲ್ಲಿ ರೂ. ೨೧-೦-೦
ಬೆಳ್ಳಿ ಕೇಸಿನಲ್ಲಿ ರೂ. ೨೭-೦-೦

ಎಲ್ಲಾ ಗಡಿಯಾರುಗಳು ಜಂಟ್ಸ್ ಸಾ[illegible]ನಲ್ಲಿರುವವು. ವಾಚುಗಳನ್ನು [illegible] ಹೆಚ್ಚಿಗೆ ಖರ್ಚಿನಲ್ಲಿ ವಿ. ಪಿ. ಮಾ. ಕಳುಹಿಸುವೆವು. ನಮ್ಮ 59 ಎಸ್ಪ್ಲನೇಡ್ ರೋಡ್ ಮುಂಬಯಿ ಆಫೀಸಿನಲ್ಲಿಯೂ ಮತ್ತು ಹಿಂದುಸ್ಥಾನದಲ್ಲಿರುವ ಎಲ್ಲಾ ವಾಚು ಮಾರಾಟದವರಲ್ಲಿಯೂ ಕ್ರಯಕ್ಕೆ ದೊರೆಕುವವು.

ಪತ್ರವ್ಯವಹಾರ

(ಬಾತಮೀದಾರರು ಕೊಡುವ ಅಭಿಪ್ರಾಯಕ್ಕೆ [illegible])

ಬಂಕು ಭತ್ತ

ಈ ಜಿಲ್ಲೆಯ ವ್ಯವಸಾಯ ಸಂಘದವರು ಇಲ್ಲಿ ಹೆಚ್ಚಾಗಿ ಬೆಳೆಸುವಂಥಾ ಬತ್ತದ ಸಾಗುವಳ್ಳಿಗೆ ಹೆಚ್ಚು ಮನಸ್ಸು ಕೊಟ್ಟು ಅದರ ಬಾಬತು ಬೇರೆ ಬೇರೆ ಜಾತಿಯ ಬತ್ತಗಳನ್ನು ತರಿಸಿ ಸಾಗುವಳಿಯನ್ನು ತಾವು ನಡಿಸಿ ಯಾ ತಮ್ಮ ಕಡೆಯಿಂದ ಮಾಡಿಸಿ ತಮಗೆ ತಿಳಿದು ಬಂದ ಅನುಬವವನ್ನು ಒಕ್ಕಲಿಗರಿಗೆ ತಿಳಿಸುವದಾಗಲೀ, ಹಾಗೆ ಸಾಗುವಳ್ಳಿ ಮಾಡುವರೆ ಆತುರ ಪಡುವ ರೈತರಿಗೆ ಬೀಜಗಳನ್ನು ಇತರ ಜಿಲ್ಲೆಗಳಿಂದ ತರಿಸಿ ಕೊಡುವದಾಗಲೀ ಇಲ್ಲದೆ, ನೆಲಗಡಲೆ ಪೈದಾಸ್ತಿನ ಕುರಿತು ಮಾತ್ರ ಪ್ರೋತ್ಸಾಹಗೊಳಿಸುವದರಿಂದ ಬಡಜನರಿಗೆ ಹೊಟ್ಟೆತುಂಬುವಹಾಗಿಲ್ಲ

ಹಲವು ವರುಷಗಳ ಹಿಂದೆ ಕೊರಿಲಿನ ಬತ್ತವನ್ನು ಸರಕಾರದವರು ಈ ಜಿಲ್ಲೆಯಲ್ಲಿ ಬೆಳೆಸಿದರು ನಂತರ ಅದರ [illegible] ಯಾರೂ ತಾತ್ಪರ್ಯ ಕೊಟ್ಟಲೇ ಇಲ್ಲ ಇದರ ಕಾರಣ ಏನೆಂತ ಗೊತ್ತಾಗುವದಿಲ್ಲ ಈಗ ಬಂಕುಬತ್ತವನ್ನು ವ್ಯವಸಾಯ ಸಂಘದವರು ತರಿಸಿ ಅದರ ಪ್ರಾಮುಖ್ಯವಾದ ಲಕ್ಷಣಗಳು [illegible] ಸಿ ಸಾಗುವಳಿ ಮಾಡಬೇಕೆಂಬದಾಗಿ ಹೇಳದೆ ಬೀಜ [illegible] ಬೇರೆ ಬೇರೆ [illegible] ಮಾಡಿರುವರು, ಫಿನಹಾ ಹೀಗೆ ಬೀಜ ಪಡಕೊಂಡ ಪ್ರತಿ [illegible] ತಿಳಿದು ಬಂದ ಅನುಬವವನ್ನು ತಾವು ತಿಳಕೊಂಡು ರೈತರಿಗೆ ತಿಳಿಸಲು [illegible] ಸೂಚನೆಯೂ ಇರುವದಿಲ್ಲ ಇಂಥಾ ಅನುಬವವನ್ನು ಪಡೆದು ಅದನ್ನು ಪ್ರಕಟಿಸಿದ್ದಕ್ಕೆ ಇದರ ಸಾಗುವಳ್ಳಿಯು ಎಲ್ಲರೂ ಒಳ್ಳೇ ರೀತಿಯಿಂದ ನಡಿಸಿ ಹೆಚ್ಚು ಪ್ರಯೋಜನ ಹೊಂದುತ್ತಿದ್ದರು

ಒಂದು ಸೇರು ಬಂಕು ಬತ್ತವನ್ನು ಹೆಚ್ಚು ಕಷ್ಟದಿಂದ ನಾನು ಕಳೆದ ಜೂನ್ ತಿಂಗಳಲ್ಲಿ ತಲಾಸಿ ಮಾಡಿ ಒಂದು ಸಣ್ಣ ಕುಳಂಜಿಯಲ್ಲಿ ನೇಜಿ [illegible] ಬಿತ್ತಿದೆ ಆಗ ಮಳೆಗಾಲವಾದದರಿಂದ ಆ ಕುಳಂಜಿಯಲ್ಲಿ ನೀರು ತುಂಬಿ ಹೋದೀತೆಂಬದರಿಂದ ಅದರ ಮಣ್ಣನ್ನು ಒಟ್ಟುಗೂಡಿಸಿ ಎತ್ತರ ಮಾಡಿ ಬಿತ್ತಿದೆ ಇದರ ಸಸಿಗಳಿಗೆ [illegible] ಏರುವದರಕ್ಕಿಂತ ಮುಂಚೆಯೇ ಜುಲಾಯಿ ತಿಂಗಳಲ್ಲಿ ಈ ನೇಜಿಯನ್ನು ತೆಗದು ಅದೇ ಕುಳಂಜಿಯಲ್ಲಿ ಸಪ್ಪು 7 ಹೆಪ್ಪರ ಬೂದಿಯನ್ನು ಹಾಕಿ ಹೂಡಿ ಒಂದೊಂದೇ ಸಸಿಯನ್ನು ನಡಬೇಕೆಂತ ಹೇಳಿದೆ ಈ ಸಸಿಗಳು ಬಹು ಚಿಕ್ಕದಾಗಿರುವ ಕಾರಣವೂ, ಇಲ್ಲಿ ಒಂದೊಂದಾಗಿ ನಡುವ ಕ್ರಮವು ಇನ್ನೂ ಜಾರಿಗೆ ಬಾರದೆ ಇದ್ದ ಕಾರಣವೂ, ರಿವಾಜಿ ಪ್ರಕಾರ ೪—೫ ಸಸಿಗಳನ್ನು ಒಟ್ಟುಕೂಡಿಸಿ ನಟ್ಟರು ನೇಜಿ ನಟ್ಟಾಯಿತು ಎಂತ ಬಂದು ಹೇಳಿದ ಕಾರಣ ಇಷ್ಟೇ ಕೊಳಂಜಿಗೆ ಬರ್ತಿ ಆಗಿ ಸ್ವಲ್ಪವಾದರೂ ಉಳಿದು ತೋರಿ ಏನು ಎಂತ ಕೇಳಿದ್ದಕ್ಕೆ ಅರ್ಧಕ್ಕೆ ಪೂರಾ ಬರಲಿಲವೆಂತ ಉತ್ತರ ಸಿಕ್ಕಿತು ಕೂಡಲೇ ನಾನು ಹೇಳಿದ ಹಾಗೆ ನಡಲಿಲ್ಲವೋ ಎಂತ ಕೇಳಿದ್ದಕ್ಕೆ ಯಾವಾಗಲೂ ನಡುವ ಕ್ರಮದಲ್ಲಿಯೇ ನಟ್ಟಿದೆ ಎಂತ ಹೇಳಿದರು ಆಗ ಸ್ವತಃ ಹೋಗಿ ಮೊದಲು ನಟ್ಟಿದ್ದ ಸಸಿಗಳನ್ನು ತೆಗಿಸಿ ಒಂದೊಂದೇ ಸಸಿಯನ್ನು ನಡಬೇಕೆಂತ ಹೇಳಿದೆ ಈ ಸಸಿಗಳು ಹೆಚ್ಚು ಎಳೆತು ಇದ್ದಾವೆ, ಆದದರಿಂದ ಎರಡೆರಡಾದರೂ ನಡಬೇಕಾದೀತು ಎಂತ ಆಳಿ ನಿಂತವರೆಲ್ಲರೂ ಹೇಳಲಿಕ್ಕೆ ಸುರುಮಾಡಿದ ಕಾರಣ ಎರಡೆರಡು ನಟ್ಟು [illegible] ಸೆಂಟ್ಸ್ ವಿಸ್ತೀರ್ಣ ಇರುವ ಈ ಕುಳಂಜಿಯು ಬರ್ತಿ ಮಾಡಿತು [illegible] ದಿವಸಗಳ ವರೆಗೆ ಈ ಕುಳಂಜಿಯ ಹತ್ತರದಿಂದ ಹಾದುಹೋಗಿ ಬರುವ ಜನರು ಈ ರೀತಿ ನಟ್ಟದ್ದು ನೋಡಿ ನಗಾಡಲಿಕ್ಕೆ ಶುರುಮಾಡಿದರು "ಕೆಯಿತ ಮರ ಎಂಚಯಾ" ಎಂತ ಶಹರಿನ ವರ್ಗದಾರರು ಹಳ್ಳಿಯ ಒಕ್ಕಲುಗಳ ಹತ್ತರ ವಿಚಾರಿಸುವಂಥವರು ಇದನ್ನು ನಡಿಸಿದ್ದಾರೆ ಈ ಬತ್ತ ನಮ್ಮ ಊರಿಗೆ ಆಗುವಂಥಾದ್ದಲ್ಲ" ಎಂತ ಹೇಳಲಿಕ್ಕೆ ಆರಂಬಿಸಿದರು ಕೆಲವು ದಿವಸಗಳನಂತರ ಅದು ಬೆಳೆಯಲಿಕ್ಕೆ ಆರಂಬವಾದ ಕೂಡಲೇ ಎಲ್ಲರೂ ಆಶ್ಚರ್ಯ ಪಟ್ಟರು ಗಂಧಸಾಲೆ ಸಸಿಗಳ ಹಾಗೆಯೇ ಉದ್ದ ಬೆಳೆಯಿತು ಮತ್ತು ಎಲ್ಲರೂ ಇದರ ಬತ್ತ ಹ್ಯಾಗೆ ಆದೀತು ಎಂತ ನೋಡಬೇಕೆಂಬ ಆತುರ ಪಟ್ಟರು ತೆನೆ ಬಂದು ಬತ್ತ ಕಾಣಲಿಕ್ಕೆ ಶುರು ಆದಾಗ ಎಲ್ಲರಿಗೂ ಇದರ ಸಾಗುವಳಿ ಒಳ್ಳೇದೆಂತ ಮನಸ್ಸಿಗೆ ಖಚಿತವಾಯಿತು ಚೌತಿ ಹಬ್ಬದ ಸಮ್ಮಂದ ನಾನು ಪರಊರಿಗೆ ಹೋದ ಸಮಯ ಮಳೆಯು ಇಲ್ಲದ್ದರಿಂದಲೂ ಈ ಕುಳಂಜಿಯು ತೋಡಿಗೆ ತಾಗಿಇದ್ದು ಅಡಿಯಿಂದ ನೀರು ಹಳ್ಳಕ್ಕೆ ಇಳಿದು ಹೋಗುತ್ತಿದ್ದರಿಂದಲೂ ನೀರಿಲ್ಲದೆ ಬೆಳೆಯು ಸರಿಯಾಗಿ ಬೆಳೆಯಲಿಲ್ಲ ಗದ್ದೆಯ ಮೇಲ್ಭಾಗವು ಒಡೆದ ಹಾಗೆ ಆಗಿ ಪಶೆಯು ಆರಿಹೋಯಿತು ಆದರೂ ಸಸಿಗಳು ಬಾಡಿಹೋದ ಹಾಗೆ ಕಾಣುತ್ತಿದ್ದಿಲ್ಲ. ಮತ್ತು ಬೆಳೆಯು ಹಾಳಾದ ಹಾಗೆ ತೋರುತ್ತಿದ್ದಿಲ್ಲ ಇನ್ನು ಮಳೆ ಬರುವ ಸಂಭವವು ಇಲ್ಲದ್ದರಿಂದ ದಂಬೆಇಟ್ಟು ನೀರು ಇದಕ್ಕೆ ಬರುವ ಹಾಗೆ ಮಾಡಿದೆ. ನಂತರ ಇದರ ಅಭಿವೃದ್ಧಿಯಲ್ಲಿ ಏನೂ ಕುಂದು ಬರಲಿಲ್ಲ. ಹೀಗಾದರೂ ತೆನೆಗಳಲ್ಲಿ ಹಾಲು ತುಂಬುವಾಗ ನೀರಿನ ಪಶೆ ಇಲ್ಲದಿದ್ದ ಕಾರಣ ಜಿಲ್ಲು ಭತ್ತ ಹೆಚ್ಚು ಸಿಕ್ಕಿತು. [illegible] ಕಟಾವಾಗುವಾಗ ಇದು ಕಟಾವಿಗೆ ತಯಾರಾಗಲಿಲ್ಲ. ಆಗ ಇದರ ಪೈರು ನೋಡಿದವರೆಲ್ಲ ಕೆಲವರು [illegible] ಸೇರು ಭತ್ತ ಸಿಕ್ಕೀತು ಎಂತ ಹೇಳಿದರು. [illegible] ಯವರೆಲ್ಲರು [illegible] ಸೇರು ಭತ್ತವಾದರೂ ಸಿಕ್ಕದೆ ಇರಲಿಕ್ಕಿಲ್ಲವೆಂತ ಹೇಳುತ್ತಿದ್ದರು.

ಕಡೆಗೆ ಇದನ್ನು ನವಂಬರ ತಿಂಗಳಲ್ಲಿ ಕಟಾವೆ ಮಾಡಿತು. ಪೈರಿನ ಭತ್ತವನ್ನು ಅಳತೆ ಮಾಡಿದ್ದಲ್ಲಿ $7\frac{1}{2}$ ಸೇರು ಆಯಿತು ಇದರಲ್ಲಿ 4 ಸೇರು ಒಳ್ಳೇ ಬತ್ತವು ಸಿಕ್ಕಿತು. ಈ ಬತ್ತಕ್ಕೆ ನೀರಿನಆಶ್ರಯ ಹೆಚ್ಚು ಬೇಕೆಂಬದಿಲ್ಲವಾಗಿ ಕೇಳಿದ ಮಾತನ್ನು ಪರೀಕ್ಷಿಸುವದಕ್ಕೆ ಅದನ್ನು ಬೈಲುಗದೆಗಿಂತ ಎತ್ತರವಾಗಿದ್ದ ಕುಳಂಜಿಯಲ್ಲಿ ಬಿತ್ತಿಬಿಟ್ಟೆನು. ಇದನ್ನು ಒಳ್ಳೇ ನೀರಾಶ್ರಯವಿರುವ ಬೆಟ್ಟುಗದ್ದೆಗಳಲ್ಲಿ ಮಾಡಿದರೆ ಒಳ್ಳೇ ಬೆಳೆ ಸಿಕ್ಕೀತು ಎಂಬದು ಮೇಲೆ ಹೇಳಿದ ಸಂಗತಿಯಿಂದಲೂ ಇದರ ಸಾಗುವಳ್ಳಿ ನಡಿಸಿದ ಬೇರೆ ಕೆಲವರ ಅನುಬವದಿಂದಲೂ ದೃಢವಾಗುತ್ತದೆ

ಬಂಟ್ವಾಳದ ಹತ್ತರ ಅಮಟಾಡಿ ಗ್ರಾಮದಲ್ಲಿ ಒಬ್ಬ ಗ್ರಹಸ್ಥರು ಇದರ ಸಾಗುವಳಿಯನ್ನು ಒಂದು ಮಜಲು ಗದ್ದೆಯಲ್ಲಿ ನಡಿಸಿದ್ದರು & ಸೇರು ಬಿತ್ತಿದ್ದರು. ಪೈರಿಗೆ ಕಣೆ [illegible] ಹಿಂಗಪ್ಪ [illegible] ಸೇರು ಬತ್ತ ಸಿಕ್ಕಿತು ಉಪ್ಪಿನಂಗಡಿ ತಾಲೂಕಿನಲ್ಲಿ ಕೊಲ್ಯಾಡಿ [illegible] ಗ್ರಹಸ್ಥರು 3 ಸೇರು ಭತ್ತವನ್ನು ಬಿತ್ತಿದ್ದಕ್ಕೆ ಅವರಿಗೆ & [illegible] ಬತ್ತ ಸಿಕ್ಕಿದ್ದಾಗಿ ನಾನು ಕೇಳಿರುತ್ತೇನೆ ಇದರ ವರ್ತಮಾನವು ತಪಸೀಲಾಗಿ ತಿಳಿದು [illegible] ಮುಂದೆ ತಮ್ಮ ಪತ್ರದ ವಾಚಕರ ತಿಳುವಳಿಕೆ ಬಗ್ಗೆ ಬರಕೊಳ್ಳುವೆನು

ಬಂಕ ಬತ್ತದ ಸಾಗುವಳ್ಳಿಯನ್ನು ಎಲ್ಲಾ [illegible] ನಡಿಸುವ ಹಾಗೆ ಈ ಲೇಖನವನ್ನು ತಮ್ಮ [illegible] ತಮ್ಮ ಪತ್ರದಲ್ಲಿ ಇದಕ್ಕೆ ಎಡೆಕೊಟ್ಟು ಇದರ ಸಾಗುವಳಿಯನ್ನು ಪ್ರಚಾರಕ್ಕೆ [illegible] ಬೇಕಾಗಿ ಬೇಡುತ್ತೇನೆ

ಬಂಕು ಬತ್ತದ ಸಾಗುವಳಿಯನ್ನು [illegible] ಬೆಳೆಯಲ್ಲಿ ನಡಿಸುವಾಗ ಈ ಕೆಳಗಿನ ಸಂಗತಿಗಳ [illegible] ಕೊಡಬೇಕು

೧ ಸುಗ್ಗಿ ಬೆಳೆಯನ್ನು ಬೆಳೆಸುವ ಗದ್ದೆಗಳಲ್ಲಿ ಇದನ್ನು ನಡಬಾರದು ಯಾಕಂದರೆ ಇದರ ಬೆಳವಳಿಕೆಗೆ ಹೆಚ್ಚು ಕಾಲ ಬೇಕಾಗುತ್ತದೆ ಈ ಬೆಳೆ ಕಟಾವು ಮಾಡಿ ಸುಗ್ಗಿ ಬೆಳೆಯ ನೇಜಿ [illegible] ಗದ್ದೆ [illegible] ಕಾಲದಲ್ಲಿ [illegible] ಅದರದಿಂದ ಇದನ್ನು [illegible]

೨ ಇದರ ನೇಜಿ [illegible] ನಟ್ಟರೆ ಸಾಕಾಗುವದಿಲ್ಲ ಮತ್ತು [illegible] ನಟ್ಟರೆ [illegible] ಇದರ ಕುರಿತು ಅಜಮಾಯಿಸಿ ಇನ್ನೂ [illegible]

೩ ಇದಕ್ಕೆ ವಿಶೇಷ [illegible] ದಿಲ್ಲ ನಾವು ಸಾಧಾರಣವಾಗಿ ಬೇರೆ ಗದ್ದೆಗಳಿಗೆ ಹಾಕ [illegible] ಸಾಕಾಗುತ್ತದೆ

೪ ಬಂಕು ಬತದ ಮೂಲ ಸಸಿ [illegible] ಬತ್ತದ ತೆನೆಯು ಕಟಾವಿಗೆ ಪಕ್ವವಾಗುವಾಗ ಅದಕ್ಕೆ ಹುಟ್ಟಿದ ಪಿಳ್ಳೆಗಳ [illegible] ತೆನೆಗಳು ಹಸರು ಇದ್ದು ಕಟಾವಿಗೆ ತಯ್ಯಾರಾಗುವದಿಲ್ಲ ಅದಾಗ್ಯೂ [illegible] ಕಟಾವಿಗೆ ತಯ್ಯಾರಾಯಿತು ಎಂತ ಎಣಿಸಿ ಕಟಾವು ಮಾಡಿದರೆ ಇದರ ಬತ್ತದಲ್ಲಿ ಎಳತು ಬತ್ತವು ಹೆಚ್ಚು ಸೇರಿರುತ್ತದೆ. ಈ ಕಾರಣದಿಂದ ಇಂಥಾ ಬತ್ತವನ್ನು ಒಣಗಿಸಿ ಬೀಜದ ಬಗ್ಗೆ ಕಟ್ಟಿ ಇಟ್ಟು ನಂತರ ಬಿತ್ತಿದ ಪಕ್ಷದಲ್ಲಿ ಬೇರೆ ಜಾತಿಯ ಬತ್ತದ ಬೀಜದಲ್ಲಿ ಸಿಕ್ಕುವಷ್ಟು ನೇಜಿಸಸಿಗಳು ಇದರಲ್ಲಿ ಸಿಕ್ಕಲಾರವು ಆದದರಿಂದ ಬೀಜದ ಬಗ್ಗೆ ಎಂತ ತೆನೆಗಳನ್ನು ಕಟಾವ ಮಾಡುವದಾದರೆ ಮೂಲಸಸಿಯು ಚನ್ನಾಗಿ ಬೆಳೆದ ನಂತರ ಅವುಗಳ ತೆನೆಗಳನ್ನೇ ಮಾತ್ರ ಕೊಯಿದು ಬತ್ತವನ್ನು ಒಟ್ಟುಗೂಡಿಸಿ ಇದರಿಂದಲೇ ಬಿತ್ತನೆ ಬೀಜವನ್ನು ಕಟ್ಟಿ ತಬೇಕು ನಂತರ ಪಿಳ್ಳೆಗಳ ತೆನೆಗಳು ಬಹುಶಃ ಕಟಾವಿಗೆ ಪಕ್ವವಾದಾಗ ಪೈರನ್ನು ಪೂರಾ ಕಟಾವುಮಾಡಬೇಕು ಈ ರೀತಿ ಮಾಡಿದರೆ ಬೀಜದ ಬತ್ತದಲ್ಲಿ ಹೆಚ್ಚು ಸಸಿಗಳು ಸಿಕ್ಕುವವು ಮತ್ತು ನಷ್ಟವೂ ಅತೀ ಕಮ್ಮಿಯಾದೀತು

೫ ಬಂಕು ಭತ್ತಕ್ಕೆ ಇತರ ಜಾತಿಯ ಬತ್ತಕ್ಕೆ ಬೇಕಾಗುವಷ್ಟು ನೀರು ಅವಶ್ಯಕವಿರುವದಿಲ್ಲನಂತೆ ಈ ಮಾಹಿತಿಯು ಕೆಲವುಕಾಲ ಪರೀಕ್ಷೆಮಾಡಿ ತಿಳಕೊಳ್ಳಬೇಕಾಗಿರುತ್ತದೆ

ಬಂಕುಬತ್ತವು ಸುಗ್ಗಿ ಬೆಳೆಯಲ್ಲಿಯೂ ಆಗುತ್ತದೆ ಪುತ್ತೂರಲ್ಲಿ ಒಬ್ಬ ಗ್ರಹಸ್ಥರು ಇದನ್ನು ಬೆಳಸಿದ್ದು ನೋಡಿದೆ, ನೇಜಿಯನ್ನು ೪ ವಾರಗಳೊಳಗೇನೇ ತೆಗೆದು ನಡೋಣಾಗಿತ್ತು ೫೫ ದಿವಸಗಳಲ್ಲಿಯೇ ತೆನೆ ಕಾಣಲಿಕ್ಕೆ ಶುರು ಆಗಿ ಈಗ ಬೆಳೆಯು ಒಳ್ಳೆ ಸ್ಥಿತಿಯಲ್ಲಿರುವದನ್ನು ತಿಳಿಸುವರೆ ಸಂತೋಷ ಪಡುತ್ತೇನೆ.

ತಮ್ಮ ಪತ್ರದ ಬಾತಮೀದಾರ

ಎಲ್ಲೂರು ಸುಬ್ಬರಾವ್

ವಿದೇಶ ವೃತ್ತಾಂತ

ಆಮದು ರಫ್ತು ಹೆಚ್ಚಾಗುವ ಬೀದಿ ವೆಂಡರ್‍ಗಳಾದ ಪ
ಶಾರಗಳಲ್ಲಿ ದೂಳು ಏಳುವುದನ್ನು ನಿಲ್ಲಿಸುವರೆ ಕಚ್ಚಾ ತರ
ಗತಿಯ ಸೀಮೆಎಣ್ಣೆಯನ್ನು ಉಪಯೋಗಿಸುವುದರಿಂದ
ಬಹಳ ಕಾಲದ ವರೆಗೆ ದೂಳು ಏಳದು ಅಮೇರಿಕದ ಎ
ಲ್ಲಾ ಪ್ರಾಮುಖ್ಯ ಪಟ್ಟಣಗಳಲ್ಲಿ ಈ ಉಪಾಯದಿಂದ ಬೀ
ದಿಗಳಲ್ಲಿ ದೂಳು ಇಲ್ಲದಂತೆ ಮಾಡಿರುವರು ಗಾಡಿಗಳಲ್ಲಿ
ತುಂಬಿಸಿ ಕೊಂಡು ಈ ಎಣ್ಣೆಯನ್ನು ಬೀದಿಗಳಲ್ಲೆಲ್ಲಾ ಸುರಿ
ಯುತ್ತಿರುವರು ನಮ್ಮ ದೇಶದಲ್ಲಿ ಮುಂಬಯಿಯಲ್ಲಿ
ಕೋಟೆಪ್ರಾಂತ್ಯಗಳಲ್ಲಿ ಮಾತ್ರ ಈ ಬಗ್ಗೆ ಸೀಮೆ ಎಣ್ಣೆ
ಯನ್ನು ಉಪಯೋಗಿಸುತ್ತಿರುವರು ಕಚ್ಚಾ ಸೀಮೆ ಎ
ಣ್ಣೆಯ ಕ್ರಯವು ಬಹಳ ಕಡಿಮೆಯಾಗಿರುವುದರಿಂದ ಎಣ್ಣೆ
ಯ ಬಗ್ಗೆ ಖರ್ಚು ಸಹಾ ವಿಪರೀತ ತಗಲದಂತೆ

ತಮ್ಮ ದೇಶಕ್ಕನುಗುಣವಾದ ರಸಾಯನ ಶಾಸ್ತ್ರ ಮ
ತ್ತು ಶಿಲ್ಪಶಾಸ್ತ್ರದ ಅಭಿವೃದ್ಧಿಯು ಭಾರತೀಯ ವಿದ್ಯಾ
ರ್ಥಿಗಳಲ್ಲಿ ಉಂಟಾಗುವಂತೆ ವಿಲಾಯತಿಯಲ್ಲಿ ತಕ್ಕ ಏ
ರ್ಪಾಡು ಆಗುತ್ತಿರುವುದು ಈ ಬಗ್ಗೆ ವೈದ್ಯವಿದ್ಯೆಯ ಪರ
ವಾಗಿ ಎಡಿಂಗ್ ಬರ್ಗನಲ್ಲಿಯೂ ಇಂಜಿನಿಯರಿಂಗ್ ಯಾ
ಯಂತ್ರವಿದ್ಯೆಯ ಪರವಾಗಿ ಗ್ಲಾಸಗೋ ಪಟ್ಟಣದಲ್ಲಿಯೂ,
ಗನಿಕೆಲಸಗಳವಾಹಿತಿ ಬಗ್ಗೆ ಬರ್ಮಿಂಗ್ಹಮ್ ಪಟ್ಟಣ
ದಲ್ಲಿಯೂ, ಬಣ್ಣದ ಕೆಲಸದ ಬಗ್ಗೆ ಮೆಂಚಸ್ಟರಿನಲ್ಲಿಯೂ
ವಿದ್ಯಾರ್ಥಿ ಸಂಘದ ಶಾಖೆಗಳನ್ನು ಏರ್ಪಡಿಸುವರು ಇಂ
ಗ್ಲೇಯ ಅನೇಕ ಶಾಸ್ತ್ರಜ್ಞ ಪಂಡಿತರು ಈ ಸಂಘಗಳ ಆಶ್ರ
ಯದಾತರಾಗುವರೆ ಸಮ್ಮತಿಸಿರುವರು

ಟಿರೋಪೋಲೀಸ್ ರಾಜಧಾನಿಯು ವ್ಯತಪಟ್ಟಿರುವಂತೆ
[illegible] ಸಂಧಿ ಪತ್ರ [illegible] ತೀರಿದುದಾಗಿರುವುದು

[illegible] ಪರಂಗೀತಾಪ
ವನ್ನು ಸಾಧಿಸುವುದಕ್ಕೆ ಲಂಡನಿನಲ್ಲಿ ಎರಡು ಸದಗಳು
ಕೂಡಿದವು

ಉತ್ತರ ಹಿಂದುಸ್ಥಾನ.

ಪಂಜಾಬಿನಲ್ಲಿ ಕೊಂಗ್ರೆಸ್ ಸಭೆಯೊಂದಿಗೆ ಕೂಡುವ
[illegible] ಕಾನ್ಫರೆನ್ಸು ಯ [illegible] ಔದ್ಯೋಗಿಕ ಸಭೆಯ
[illegible] ಸಂದರ್ಶಿಸುವರ ಪಂಜಾಬಿನ ಗವರ್ನರರಾದ
[illegible] ಡೇನ್ಸರವರು ಸಮ್ಮತಿಸಿರುವರು

[illegible]ಸ್ವಾಲ ಭಾರತೀಯರ ಸಹಾಯಕ್ಕಾಗಿ ಕಲ್ಕ
[illegible] ಸಹ [illegible] ಕೂಡಿಸುತ್ತಿರುವರು ಡಾ।
[illegible] ಪೋಷರವರು ಈ ಬಗ್ಗೆ ರೂ ೧೦೦೦
[illegible] ವರು ಇನ್ನೂ ಅನೇಕ ಬಂಗಾಳಿ ಪ್ರಜಾ
[illegible] ತಂತಮ್ಮ ಶಕ್ತ್ಯಾನುಸಾರ ಚಂದಾಹಣ
[illegible] ವರು

[illegible] ಯ ಶಾಲೆಯ ಮೂರನೇ
[illegible] ಜನು ಸಿಯಿಂದ ಲೈಸನ್ಸು
[illegible] ಕೋವಿಯನ್ನು ತರಿಸಿದ ಮೊಕದಮೆಯು
[illegible] ನಲ್ಲಿ ನಡಿಯುತ್ತಿರುವುದು ಹುಡುಗನು
[illegible]ವನ್ನು ಕೋರ್ಟುಮುಂದೆ ಒಪ್ಪಿರುವನು

[illegible]ಳದಲ್ಲಿ ನವೀನ ಕೌನ್ಸಿಲು ಮಾರ್ಪಾಟಗಳಿಂದ
[illegible] ಅಸಂತುಷ್ಟಿಯು ದಿನೇದಿನೇ ಹೆಚ್ಚೆಚ್ಚಾಗಿ ತಲೆ
[illegible] ತ್ತಿರುವುದು ಬಂಗಾಳ ಪ್ರಾಂತಿಕ ಕೊಂಗ್ರೆಸು
ಕಮಿಟಿಯವರು ಈ ಮಾರ್ಪಾಟಗಳಿಂದ ಉಂಟಾದ ಅನ್ಯಾ
ಯಗಳನ್ನು ಸೂಚಿಸುವರೆ ಸಭೆಕೂಡಿರುವರು. ಕೀರ್ತಿ
ಶೇಷ ವಿಕ್ಟೋರಿಯಾ ಮಾತೆಯವರು ಗುಜರಲ್ಲಿ ಪ್ರ

[illegible]
ವಾಗಿ ಧಾರ್ಮಿಕೀಯ ವಿಷಯಗಳಲ್ಲಿ ಪ್ರಜಾವರ್ಗದ ಮತ
ಭೇದಗಳ ವಿಚಾರವನ್ನು ಮಾಡಿಕೊಂಡು ಆಯಾ ಮತದ
ವರಿಗೆ ಸಮತುಲ್ಯವಲ್ಲದ ಹಕ್ಕುಗಳನ್ನು ಕೊಟ್ಟದ್ದು ನ್ಯಾ
ಯವಿರುದ್ಧವೆಂಬದಾಗಿಯೂ ಸೌಮ್ಯಪಕ್ಷದವರಲ್ಲಿ ಯಾರಾ
ದರೂ ಈ ಮಾರ್ಪಾಟಗಳ ಗೋಜಿಗೆ ಹೋಗಬಾರದಾಗಿ
ಯೂ ಹಾಗೆ ಹೋದವರಿದ್ದರೆ ಅಂಥವರ ಕೃತ್ಯಗಳು ಅನು
ಚಿತವೆಂತ ನಿರ್ಧರಿಸಬೇಕೆಂಬದಾಗಿಯೂ ನಿರ್ಣಯಗಳನ್ನು
ಸಭೆಯಲ್ಲಿ ಮಂಜೂರು ಮಾಡುವರು

ಮುಂಬಾಯಿ ಸರಕಾರದ ನ್ಯಾಯವಿಧಾಯಕ ಸಭೆ
ಯ ಪರವಾಗಿ ನಾನ್ ಒಫಿಸಿಯಲ್ ಮೆಂಬರರ ಕಡೆಯಿಂದ
ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕಸಭೆಯ ಮೆಂ
ಬರುತನಕ್ಕೆ ಬಹುಮಾನಪಟ್ಟ ಗೋಖಲೆಯವರೂ ಮಿ।
ಚಿಮನ್ ಲಾಲ್ ಸೆಟಲ್‍ವಾಡರವರೂ ಉಮೇದ್ವಾರರಾಗಿ
ರುವರಂತೆ

ಪಾರ್ಸಿಜಾತಿಯವರಲ್ಲಿ ಅತಿಬಡವರಾದವರಿಗೆ ಉಳ
ಕೊಳಲು ತಕ್ಕದಾದ ಕಟ್ಟೋಣಗಳನ್ನು ಈ ಜಾತಿಯ
ಉದಾರಮನಸ್ಸಿನ ಶ್ರೀಮಂತರನೇಕರು ಕಟ್ಟಿಸುತ್ತಿರುವರು
ಅಂಥಾ ಎರಡು ಕಟ್ಟೋಣಗಳು ಮುಂಬೈ ಗವರ್ನರರವ
ರಿಂದ ಇತ್ತಲಾಗೆ ತೆರಿಯಲ್ಪಟ್ಟವು

ಸಮಾಜಸಂಸ್ಕರಣೆ ಬಗ್ಗೆ ಮುಂಬಯಿಯಲ್ಲಿಯ
ಹಿಂದೂ ಪ್ರಜಾವರ್ಗದವರು ಬಹಳ ಸಾಹಸ ಪಡುತ್ತಿರು
ವರು ಹಿಂದೂಗಳಲ್ಲಿರುವ ಆಯಾ ಜಾತಿ, ಉಪಜಾತಿ
ಗಳಲ್ಲಿ ಸಹಾನುಭೂತಿ, ಪ್ರೀತಿ, ಐಕ್ಯಗಳು ಉಂಟಾಗುವ ವಿ
ಧಾನಗಳನ್ನು ಯೋಚಿಸುವರೆ ಮುಂಬಯಿಯಲ್ಲಿ ಒಂದು
ಸಭೆ ಕೂಡಿತು ಬಹುಮಾನಪಟ್ಟ ಹ್ಯಾಕೋರ್ಟು ಜಡ್ಜ
ಚಂದಾವರಕಾರರವರೇ ಮೊದಲಾದ ಅನೇಕ ಸದ್ಗೃಹ
ಸ್ಥರೂ ಮಾನ್ಯ ಕುಲಸ್ತ್ರೀಯರುಗಳೂ ಈ ಸಭೆಗೆ ದಯ
ಮಾಡಿಸಿದ್ದರು ಬಹುಮಾನ ಪಟ್ಟ ಜಿ ಕೆ। ಪರ್ರೇಕರವ
ರು ಸಭಾಧ್ಯಕ್ಷರಾಗಿದ್ದರು ಹೆಚ್ಚು ಕಡಿಮೆ ೫೧ ಆಯಾ
ಜಾತಿಯ ಹಿಂದೂ ಕ್ಲಬ್ಬುಗಳ ಪ್ರತಿನಿಧಿಗಳು ಬಂದಿದ್ದರು
ಆಯಾ ಹಿಂದೂ ಕ್ಲಬ್ಬಿನ ಪ್ರತಿನಿಧಿಗಳು ಪ್ರತಿ ಒಂದು
ತಿಂಗಳಿಗೊಂದಾವರ್ತಿಯಾದರೂ ಒಟ್ಟು ಸಭೆ ಕೂಡಬೇ
ಕೆಂದೂ ಆಯಾ ಕ್ಲಬ್ಬುಗಳಲ್ಲಿ ಆಗುವ ವಿಶೇಷ ಕಾರ್ಯ
ಗಳಿಗೆ ಇತರ ಕ್ಲಬ್ಬಿನವರನ್ನು ಬರಮಾಡಬೇಕೆಂಬದಾಗಿ
ಯೂ ಸ್ತ್ರೀವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನವನ್ನು ಕೊ
ಟ್ಟು ಸೇವಾಸದನವನ್ನಭಿವೃದ್ಧಿ ಸಬೇಕಾಗಿಯೂ ನಿರ್ಣಯ
ಗಳು ಮಂಜೂರು ಮಾಡಲಾದವು ಇಂಥಾ ಸಂಘಗಳು
ಪ್ರತಿ ಜಿಲ್ಲೆಗಳಲ್ಲಿಯೂ ಏರ್ಪಡಿಸಲವಶ್ಯವಿದೆ.

ಮದನಮೋಹನ ಮಾಳ್ವಿಯಾರವರನ್ನು ಕೊಂಗ್ರೆಸು
ಸಭಾಯ ಅಧ್ಯಕ್ಷರನ್ನಾಗಿ ಚುನಾಯಿಸಿರುವರು

ಕೊಂಗ್ರೆಸು ಸಭೆಯಲ್ಲಿ ಸಭೆಯವರು ವಿಚಾರಕ್ಕೆ ತ
ರಬೇಕಾದ ನಿರ್ಣಯಗಳನ್ನು ಪ್ರಕಟಿಸಿರುವರು ಕೌನ್ಸಿ
ಲು ಮಾರ್ಪಾಟಗಳಲ್ಲಿ ಉಂಟಾದ ಅಶಾಭಂಗ, ಟ್ರಾನ್ಸ
ವಾಲ ಭಾರತೀಯರ ದೀನಸ್ಥಿತಿ, ವಂಗವಿಭಜನೆ ಮತ್ತು
ಗಡಿಪಾರುಗಳನ್ನು ಪ್ರತಿವಾದಿಸುವುದು, ಜೀನಸುಧಾರಣೆ ವಿ
ಪರ್ಯಗಳ ಶೋಧನೆ, ಸ್ವದೇಶಿ, ವಿದ್ಯಾಭ್ಯಾಸ, ದೂತೆರಿಗೆ,
ಇತ್ತಲಾಗೆ ಜಾರಿಗೆ ಬಂದ ದಂಡನೆಯ ಕಾನೂನುಗಳು
ಈ ಎಲ್ಲಾ ವಿಷಯಗಳು ಚರ್ಚಿಸಲ್ಪಟ್ಟು ಇವುಗಳಿಗೆ ಬೇ
ಕಾದ ರೀತಿಯಲ್ಲಿ ನಿರ್ಣಯಗಳು ಮಂಜೂರು ಮಾಡಲ್ಪ
ಡುವವು

ಈ ಕೆಳಗೆ ಹೆಸರು ಕಾಣಿಸಿದ ವಿದ್ಯಾಸಂಸ್ಥೆಗಳಲ್ಲಿ
ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಅಂಥಾ ಸಂಸ್ಥೆಗಳಲ್ಲಿ
ಇವರಿಗೆ ದೊರಿಯುವ ಶಿಕ್ಷಣವು ಆಕ್ಷೇಪಕರವಾಗಿರುವ
[illegible]
ಯು ಹೊಂದುವ ಯಾ ಸರಕಾರದವರಿಂದ ಮಂಜೂರು
ಮಾಡಲ್ಪಟ್ಟ ಶಾಲೆಗಳಲ್ಲಿ ಪ್ರವೇಶ ದೊರೆಯದೆಂಬದಾಗಿ
ಮುಂಬಯಿ ಗವರ್ನಮೆಂಟಿನವರು ಪ್ರಕಟಿಸಿರುವರು. ಅಂ
ಥಾ ವಿದ್ಯಾಸಂಸ್ಥೆಗಳು ಯಾವುವೆಂದರೆ.—ಬೆಂಗೋಲಿಕೋ
ಟ್‍ನಲ್ಲಿರುವ ರಾಷ್ಟ್ರೀಯ ಕೈಗಾರಿಕೆ ಶಾಲೆ, ಧಾರವಾಡಿ
ನಲ್ಲಿರುವ ಕರ್ಣಾಟಕ ನೂತನ ವಿದ್ಯಾಲಯ, ನವಲ್
ಗುಂದಿನಲ್ಲಿರುವ ಪ್ರಾಯ್ವೇಟ್ ಇಂಗ್ಲಿಷಸ್ಕೂಲ್. ಬರ್ಸಿ
ಇಂಗ್ಲೀಷು ಖಾಸಗಿ ಶಾಲೆ ಹುಬ್ಬಿ, ಬೆಳಗಾಂವಿನಲ್ಲಿಯ
ಶ್ರೀ ಗಣೇಶ ವಿದ್ಯಾಲಯ, ದಾಪೋಳಿಯಲ್ಲಿರುವ ದಾಪೋ
ಳಿ ಖಾಸಗಿ ಶಾಲೆ

ಪಂಜಾಬಿನಲ್ಲಿ ವಿದ್ಯಾಖಾತೆಯ ಡಿರೆಕ್ಟರರವರು ಗವ
ರ್ನಮೆಂಟ್ ಕೊಲೆಜುಗಳ ವಿದ್ಯಾರ್ಥಿಗಳು ಕೊಂಗ್ರೆಸ್
ಸಭೆಗೆ ಒಲಂಟಿಯರ್ಸ್ ಯಾ ಸ್ವಯಂಸೇವಕರಾಗಿ ಸಹಾ
ಯ ಮಾಡುವುದು ಆಕ್ಷೇಪಕರವೆಂತ ಪ್ರಕಟಿಸಿರುವರು.

ಗಡಿಪಾರು ಮಾಡಲ್ಪಟ್ಟ ಕೃಷ್ಣಕುಮಾರ ಮಿತ್ರ,
ಅಶ್ವನಿಕುಮಾರ ದತ್ತ, ಮತ್ತು ಇನ್ನೊಬ್ಬರನ್ನು ಜನವರಿ
ತಿಂಗಳ ತಾರೀಕು ಒಂದರಲ್ಲಿ ವಿಮೋಚನೆಪಡಿಸುವರೆಂಬ
ವರ್ತಮಾನವಿರುವುದು

ಇಂಡಿಯಾ ಸರಕಾರದವರು "ತಳವಾರ್" ಎಂಬ ಪತ್ರ
ವನ್ನು ಹಿಂದೂಸ್ಥಾನಕ್ಕೆ ಸಮುದ್ರಮಾರ್ಗವಾಗಲಿ ಭೂ
ಮಾರ್ಗವಾಗಲಿ ಬರಬಿಡಬಾರದೆಂಬದಾಗಿ ಆಜ್ಞಾಪಿಸಿರು
ವರು

ವ್ಯಾಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಗೆ
ಪ್ರಜಾಪಕ್ಷವಾಗಿ ಆರಿಸಲ್ಪಟ್ಟ ಮೆಂಬರರಿಗೆ ನ್ಯಾಯವಿಧಾ
ಯಕ ಸಭೆ ಕೂಡುವಲ್ಲಿ ಹೋಗುವರೆ ಒಂದನೇ ತರಗತಿಯ
ರೈಲ್ವೆ ಪ್ರಯಾಣ ಖರ್ಚೂ ದಿನಕ್ಕೆ ರೂ. ೨೦ರ ಪ್ರಕಾರ
ಬೆತ್ತೆಯೂ ಕೊಡೋಣಾಗುವವು ಪ್ರಾಂತಿಕ ಸಭೆಯ
ಮೆಂಬರುಗಳಿಗೆ ಒಂದನೇ ತರಗತಿಯ ರೈಲ್ವೆ ಪ್ರಯಾಣದ
ಖರ್ಚಲ್ಲದೆ ದಿನಕ್ಕೆ ರೂ ೧೫ರಂತೆ ಭತ್ತೆಯು ದೊರಕು
ವಂತೆ ಏರ್ಪಟ್ಟಿರುವುದು

ಮುಂಬೈಯಲ್ಲಿ ಟ್ರಾನ್ಸ್‍ವಾಲ ಭಾರತೀಯರ ಬಗ್ಗೆ
ಏರ್ಪಡಿಸಿದ ಫಂಡಿನಲ್ಲಿ ರೂ ೩೭,೨೦೫ ಕೂಡಿರುವುದು.
ಇನ್ನೂ ಪ್ರಮುಖ ನಿವಾಸಿಗಳಲ್ಲಿ ಅನೇಕರು ರೂ. ೧೦೦೦
ದಂತೆ ಚಂದಾಹಣ ಕೊಡುತ್ತಿರುವರು.

ದಕ್ಷಿಣ ಹಿಂದುಸ್ಥಾನ.

ದಕ್ಷಿಣಕನ್ನಡಾ ಮತ್ತು ಮಲೆಬಾರ್ ಜಿಲ್ಲೆಗಳ ಲೋ
ಕಲ್ ಬೋರ್ಡು ಮತ್ತು ಮುನ್ಸಿಪಲ್ ಕೌನ್ಸಿಲುಗಳ ಪರ
ವಾಗಿ ಕಲ್ಲಿಕೋಟೆಯ ವಕೀಲರಾದ ಮಿ। ಕೃಷ್ಣನನ್ಯಾಯ
ರರವರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಚು
ನಾಯಿಸಲ್ಪಟ್ಟಿರುವರು ನಮ್ಮ ಜಿಲ್ಲೆಯಿಂದ ಮಂಗಳೂ
ರು ಮುನಿಸಿಪಾಲಿಟಿಯ ಚೆಯರ್ಮೆನರಾದ ಮಿ। ರಾ। ರಾ।
ರಾವ್‍ಸಾಹೇಬ್ ನಯಂಪಳ್ಳಿ ಸುಬ್ಬರಾವರವರು ಸಹಾ
ಈ ಮೆಂಬರುತನಕ್ಕೆ ಉಮೇದ್ವಾರರಾಗಿದ್ದರು. ಕೃಷ್ಣ
ನ್ಯಾಯರರಿಗೆ ೬೬ ವೋಟುಗಳು ದೊರಕಿರುವಾಗ ರಾ
ಸುಬ್ಬರಾಯರವರಿಗೆ ೭೦ ವೋಟುಗಳು ದೊರಕಿರುವವು.
ಮಲಬಾರ್ ಜಿಲ್ಲೆಯು ನಮ್ಮ ಜಿಲ್ಲೆಗಿಂತ ವಿಸ್ತೀರ್ಣವಾಗಿ
ದ್ದು ಹಲವು ಮುನಿಸಿಪಾಲಿಟಿಗಳಿಂದಲೂ ಲೋಕಲ್ ಬೋ
ರ್ಡುಗಳಿಂದಲೂ ಕೂಡಿರುವುದು. ನಮ್ಮ ಜಿಲ್ಲೆಯಲ್ಲಿ ೪
ಲೋಕಲ್ ಬೋರ್ಡುಗಳೂ ಒಂದು ಮುನಿಸಿಪಲ್ ಕೌನ್ಸಿ
ಲೂ ಮಾತ್ರ ಇರುವುದು. ನ್ಯಾಯವಿಧಾಯಕ ಸಭೆಗೆ
ಲೋಕಲ್ ಬೋರ್ಡು ಮತ್ತು ಮುನಿಸಿಪಾಲಿಟಿಗಳಿಂದ ಈ
ಎರಡು ಜಿಲ್ಲೆಗಳು ಕೂಡಾಗಿ ಒಬ್ಬ ಮೆಂಬರನನ್ನು ಚುನಾ
ಯಿಸುವ [illegible] ಮಂಜೂರು ಇರುವ [illegible]

ಜಿಲ್ಲೆಯಿಂದ ಈ ಪ್ರತಿನಿಧಿಯು ಆರಿಸಲ್ಪಡುವದು ಅತಿದು[illegible] ರ್ಲಭ. ನಮ್ಮ ಜಿಲ್ಲೆಗೆ ವಿಶೇಷವಾದ ಹಲವು ವಿಷಯಗಳ ಮಾಹೀತಿಯು ನಮ್ಮ ಜಿಲ್ಲೆಯುವರಿಗಲ್ಲದೆ ಇತರರಿಗೆ ತಿಳಿಯುವುದು ಕಷ್ಟಸಾಧ್ಯವಾದ್ದರಿಂದ ಇಂಥಾ ಜಿಲ್ಲೆಗಳಿಗೆ ಒಬ್ಬೊಬ್ಬ ಮೆಂಬರರನ್ನು ಚುನಾಯಿಸುವರೆ ಏರ್ಪಡಿಸುವದಾಗಿ ಕೋರುತ್ತೇವೆ.

~~~~~~

ತಿರುಚಿನಾಪಳ್ಳಿಯನ್ನು ಸಂದರ್ಶಿಸುವರೆ ವ್ಯಾಸರಾಯ ಪ್ರಭುಗಳಿಗೆ ಅನಾನುಕೂಲವಾದ್ದರಿಂದ ಅಲ್ಲಿಯರವು ವ್ಯಾಸರಾಯ ಪ್ರಭುಗಳ ಪರವಾಗಿ ಮದ್ರಾಸು ಗವರ್ನರರವರು ತಮ್ಮ ಸತ್ಕಾರವನ್ನು ಸ್ವೀಕರಿಸಿಕೊಳ್ಳಬೇಕಾಗಿ ಆಮಂತ್ರಣಕೊಟ್ಟಿದ್ದರು ಗವರ್ನರ ದೊರೆಗಳವರು ಈ ಆಮಂತ್ರಣವನ್ನು ಸ್ವೀಕರಿಸಿ ಕಳೆದ ಹಪ್ತೆಯಲ್ಲಿ ತಿರುಚಿನಾಪಳ್ಳಿಯನ್ನು ಸಂದರ್ಶಿಸಿದರು ಅಲ್ಲಿ ಜೈಲು, ಆಸ್ಪತ್ರಿ ಜಂಬುಕೇಶ್ವರ ದೇವಸ್ಥಾನ ಮೊದಲಾದವುಗಳನ್ನು ಸಂದರ್ಶಿಸಿ ತಿರುಚಿನಾಪಳ್ಳಿಯವರು ತಯ್ಯಾರುಪಡಿಸಿದ ಬಾರಿ ದೀಪೋತ್ಸವವನ್ನು ನೋಡಿ ಮದ್ರಾಸಿಗೆ ಹಿಂತಿರುಗುವರಾದರು ಜೈಲನ್ನು ಸಂದರ್ಶಿಸುವಾಗ ಅಲ್ಲಿಯ ಒಂದಿವಾನರನೇಕರ ಹಾಲು ಹವಾಲುಗಳನ್ನು ಕೇಳಿಕೊಂಡರು ತಿರ್ನಲ್ವೇಲ್ಲಿಯ ರಾಜದ್ರೋಹ ಮೊಕದ್ದಮೆಯಲ್ಲಿ ಶಿಕ್ಷೆ ವಿಧಿಸಲ್ಪಟ್ಟ ಸುಬ್ರಮಣ್ಯ ಶಿವ ಎಂಬವನು ಕುಷ್ಟರೋಗ ವ್ಯಾಧಿತನಾದ್ದನ್ನು ನೋಡಿ ಮನಗುಂದಿ ಈ ಬಗ್ಯೆ ತನ್ನ ಸಹಾನುಭೂತಿಯನ್ನು ಆತನಿಗೆ ತೋರಿದರು

~~~~~~

ದಕ್ಷಿಣ ಕನ್ನಡ.

~~~~~~

ಮಂಗಳೂರು. ಟ್ರೆಜರಿ ಡಿಪ್ಯುಟಿ ಕಲ್ಲೆಕ್ಟರರವರು ಇಲ್ಲಿಯ ತಾಲೂಕು ಖಜಾನೆಯನ್ನು ತನಕಿ ಮಾಡುವದೆ ಕಳೆದ ವಾರ ಶುರುಮಾಡಿರುತ್ತಾರೆ

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೬ ಪ್ಲೇಗ್ ಮರಣಗಳೂ ೯ ಸಿಡುಬು ರೋಗದ ಮರಣಗಳೂ ಇದ್ದವು

ತಾಲಿಪರಂಬದಲ್ಲಿಯ ಕಬ್ಬು ವ್ಯವಸಾಯ ಪಾಮ[illegible]ಯಾ ಹೊಲದ ಮೆನೇಜರರವರು ಇಲ್ಲಿಗೆ ಬಂದಿರುವರು ಇವರು ಸದ್ಯದಲ್ಲಿಯೇ ಕುಂದಾಪುರ ಅತ್ತಕಡೆ ಹೋಗುವದಾಗಿ ತಿಳಿಯುತ್ತೇವೆ

ಇಟಲಿಯಿಂದ ಇಲ್ಲಿಯ ರೋಮನ್ ಕಥೋಲಿಕ್ ಕ್ರೈಸ್ತರ ಬಿಷೋಪರಾದ ಘನ ಹೊಂದಿದ ವಾರಲ್ ಕೆವಡಿನಿಯವರು ನಿನ್ನೆ ದಿನ ಇಲ್ಲಿ ಬಂದು ತಲಪಿರುವರು

ಬ್ರಹ್ಮಾವರ ಸಬ್‌ರಿಜಿಸ್ಟ್ರಿ ಆಪೀಸಿನ ಪೋರ್ಜರಿ ಸಂಬ್ರವು ಸೆಶ್ಶನ್ ಕೋರ್ಟಿನಲ್ಲಿ ತನಕಿ ಆಗಿ ೬ ನೇ ಮುದ್ದೈಯಾಲಿಯಾದ ಗೋಪಾಲಕೃಷ್ಣ ಹೆಗ್ಗಡಗೆ ೫ ವರುಷದ ಕಠಿಣ ಕಾಮಗಿರಿ ಶಿಕ್ಷೆಯು ವಿಧಿಸಲ್ಪಟ್ಟಿತು ಬಾಕಿ ೧, ೨ನೇ ಮುದ್ದೈಯಾಲಿಯರನ್ನು ಬಿಟ್ಟಿರುವರು

ಕಾಸರಗೋಡು ಮೆಜಿಸ್ಟ್ರೇಟರ ಕೋರ್ಟಿನಿಂದ ಕ್ಷೌರ ಕತ್ತಿಯ ಜಗಳ ಸಮ್ಮಂಧ ಕಮಿಟ್ ಆದ ನಂಬ್ರವು ಆತ್ಮ ಸಂರಕ್ಷಣೆಗಾಗಿ ಮಾಡಲ್ಪಟ್ಟದೆಂದು ಕಂಡುಬಂದದರಿಂದ ಸದರಿ ನಂಬ್ರವನ್ನು ತೆಗೆದುಹಾಕಿದರು

ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲ್ಲೆಕ್ಟರರವರು ಇಲ್ಲಿಯ ಸಬ್‌ಮೆಜಿಸ್ಟ್ರೇಟ್ ಆಪೀಸಿನ ತನಕಿಯನ್ನು ತಾ ೨೨ಕ್ಕೆ ಮುಗಿಸಿ ಬಂಟ್ವಾಳ ಅತ್ತಕಡೆ ಸರ್ಕೀಟಿನಲ್ಲಿರುವರು.

~~~~~~

ಕಾಸರಗೋಡು. ಇಲ್ಲಿಂದ ಪೂರ್ವಕ್ಕೆ ಸುಮಾರು ೧೦ ಮೈಲ್ ದೂರದ ಒಂದು ಹಳ್ಳಿಯಲ್ಲಿ ದಕ್ಷಿಣದೇಶದಿಂದ (ವರುಷಂಪ್ರತಿ ವಾಡಿಕೆಯಾಗಿ ಬರುವ) ಬೇಡರ ಜಾತಿಯಂತಿರುವ ಭಿಕ್ಷುಕರು ಕೆಲವರು ಇದೇ ತಿಂಗಳ ಪ್ರಾರಂಭದಲ್ಲಿ ಒಬ್ಬ ಶಿವಳ್ಳಿ ಬ್ರಾಹ್ಮಣನ ಮನೆಗೆ ಕನ್ನ ಹಾಕಿ ಕೆಲವು ಚಿನ್ನಾಭರಣ ಉಡಿಗೆತೊಡಿಗೆಗಳಿರುವ ಪೆಟ್ಟಿಗೆಗಳನ್ನು ಕಳವುಮಾಡಿ ಪಲಾಯನರಾದರು. ಮರುದಿನ ಯಜಮಾನನಿಗೆ [illegible] ಪೋಲೀಸ್ ಸಹಾಯ [illegible] ಹಿಂದು [illegible] ಕೆಲವು ಸಿಕ್ಕಿದವು. ಬಾಕಿ ಸೊತ್ತುಗಳು ಅವರ ಜೊತೆಯಲ್ಲಿರುವವರ ಪಾಲಾಗಿ ಅವರು ಇನ್ನೂ ಪತ್ತೆಯಾಗಲಿಲ್ಲ. ಪತ್ತೆಯಾದ ಕಳ್ಳರು ಮೂವರಲ್ಲಿ ಒಬ್ಬ ಗಂಡಸು ಇಬ್ಬರು ಹೆಂಗಸರು ಸೊತ್ತಿನ ಸಮೇತ ಮೆಜಿಸ್ಟ್ರೇಟರ ಮುಂದೆ ಹಾಜರುಮಾಡಿ ಕೆಲವು ದಿವಸಗಳಿಂದ ತನಖಿಯಾಗಿರುಜುವಾತಿನಿಂದ ಈ ದಿವಸ ಚಾರ್ಜಿಮಾಡೋಣಾಗಿಯದೆ. ಇಂಥವರ ಕುರಿತು ಸರ್ವರೂ ಎಚ್ಚರಿಕೆಯಿಂದಿರ ಬೇಕಾಗಿರುವುದು

~~~~~~

ಬಸ್ರೂರು. ಇಲ್ಲಿಯ ಬ್ರಾಹ್ಮಣ ದೇವಾಲಯದ ಶ್ರೀಜನಾರ್ಧನ ಮೂರ್ತಿಗೆ ಸಂಭವಿಸಿದ ಶನಿದೆಶೆಯ ಕುರಿತು ಸ್ವದೇಶಾಭಿಮಾನಿಯ ಒಂದು ಸಂಚಿಕೆಯಲ್ಲಿ ಪ್ರಸ್ತಾಪಿಸಿದ್ದೇವಷ್ಟೆ ಹಿಡಿಯೋಣಾದ ದೆಶೆಯು ೭೦ ರದ್ದೋ ಯಾ ೨೦ ರದ್ದೋ ಎಂಬುದು ವಾಚಕರಿಗೆ ಸ್ಪಷ್ಟಪಡಿಸಲಿಲ್ಲ ಇತ್ತಲಾಗೆ ದೇವಸ್ಥಾನಗಳ ಕಮಿಟಿ ಮೆಂಬರೆನ್ನಿಸಿಕೊಳ್ಳುವವರು ಇಲ್ಲಿ ತನಕ ಚಿತ್ತೈಸಿ ಹಲವು ಜನ ಮೊಕ್ತೇಸ್ವರತೆಯಿಂದ ದೇವಸ್ಥಾನವು ಆಳಲ್ಪಡುವದರಿಂದಲೇ ಮೂರ್ತಿಗೆ ಶನಿದೆಶೆ ಬರುವ ಕಾರಣವೆಂಬದಾಗಿ ಮನವರಿತುಕೊಂಡವರಾಗಿ ಮ| ರಾ| ಪಟೇಲ ಕುಮಾರ ರಾಯ ಪೋಯ್ವರ ಹೆಸರಿನಲ್ಲಿ ಮೊಕ್ತೇಸ್ವರತೆಯನ್ನು ಕಾಯಂ ಮಾಡಿದ್ದರಾಗಿ ತಿಳಿದು ಬರೋಣ ಮೂರ್ತಿಗೆ ಸಂಭವಿಸಿದ ದೆಶೆಯು ೨೦ ರದ್ದೇ ಎಂಬದು ಖಚಿತವಾಯಿತು ಈ ಹೊಸ ಮೊಕ್ತೇಸ್ವರರು ಇದೇ ತಿಂಗಳ ತಾ ೧೬ಕ್ಕೆ ಇಲ್ಲಿ ನಡೆಯತಕ್ಕ ಉತ್ಸವದ ಸಂಬಂದ ಬಹಳ ಮೇಹನತ್ತು ಪಡುವದಾಗಿ ತಿಳಿದು ಬಂದದೆ

ಇಲ್ಲಿಯೇ ೪ ಮೈಲು ದೂರದಲ್ಲಿರುವ ಕಾಪು ಬೋರ್ಡು ಶಾಲೆಗೆ ಕುಂದಾಪುರ ತಾಲೂಕಿನ ಹೆಡ್ ಅಸಿಸ್ಟಾಂಟ್ ಕಲೆಕ್ಟರವರು ಚಿತ್ತೈಸಿ ಶಾಲೆಯು ಈಗಿನ ಹೊಸ ಟಿಕ್ಟಿಂಗ್ ಹೆಡ್ ಮಾಸ್ತರಾದ ಎಮ್ ದೇವರಾಯರ ಮೇಹನತ್ತಿನಿಂದ ಅಭಿವೃದ್ಧಿ ಸ್ಥಿತಿಗೆ ಬಂದದ್ದನ್ನು ಮನವರಿತು ಬಹಳ ಸಂತೋಷಗೊಂಡರು ಅಲ್ಲದೆ ಉಪಾಧ್ಯಾಯರುಗಳಿಗೆ ಪ್ರತಿ ತಿಂಗಳ ಸಂಬಳವು ಬಹಳ ಡೇರಿಯಾಗಿ ತಲ್ಪುವದನ್ನು ಉಪಾಧ್ಯಾಯರುಗಳಿಂದ ಅರಿತವರಾಗಿ ಈ ಆಯಾ ತಿಂಗಳ ಸಂಬಳವು ಮರುತಿಂಗಳ ೧೭ ಯಾ ೨೦ ರ ಒಳಗೆ ಹೊಂದುವಂತೆ ಮಾಡಿರುವರು ಈ ಏರ್ಪಾಡನ್ನು ತುಂಬಾ ಸ್ತುತಿಸತಕ್ಕದ್ದೇ.

೩ ರೂಪಾಯಿ ತಲಪಿನ ಮೇಲೆ ಅಂತರಿಕ್ಷದಲ್ಲಿ ಆಲೆದಾಡುತ್ತಿರುವ ಇಲ್ಲಿಯ ಬ್ರೇಂಚಾಫೀಸು ಹೆಚ್ಚು ತಲಪಿನ ಮೇಲೆ ಸ್ಥಿರಂಜೀವಿಯಾಗಿ ನಿಲ್ಲುವ ಪೆಲಿವಾರಿ ಪೋಸ್ಟಾಫೀಸುಗಳ ಮೇಲಾಫೀಸರರು ಆದಷ್ಟು ಬೇಗನೆ ಮಾಡಲು ಅವಕಾಶವಿರುವುದು

ಉಡಿಪಿ ರೇಂಜಿನ ಉಪಾಧ್ಯಾಯರುಗಳ ಮಾಸಿಕ ಕೂಟವು ಇನ್ನು ಮುಂದೆ ಪ್ರತಿ ತಿಂಗಳಲ್ಲಿ ನೆರವೇರುವದಿಲ್ಲವೆಂಬ ವರ್ತಮಾನ ಕಳೆದ ಸಭೆಯಲ್ಲಿ ಕೇಳಿದಾಗ ಉಪಾಧ್ಯಾಯರುಗಳಲ್ಲಿ ಹಲವರಿಗೆ ಖೇದವೂ ಕೆಲವರಿಗೆ, ಸಂತೋಷವೂ ಮೂಡುವದಾಯಿತು

~~~~~~

ಬಡಕಬೈಲ್ ಇದೇ ಕಳೆದ ತಾರೀಕು ೭ರಲ್ಲು ನಮ್ಮ ನೆರೆ ಕೊಪ್ಪಲ ಬಂಬಲ್ಲಿ ಸುಮಾರು ೮೦ ರೂ ಕ್ರಯ ಬಾಳುವ ಮೂರು ದನಗಳನ್ನು ಹುಲಿಗಳು ಹಿಡಿದು ತಿಂದವು ಆ ದನಗಳ ಯಜಮಾನನಾದ ಮೂಡ್ಕಾಕೋಡಿ ಮುತ್ತಿನ ಪಿರೇರ ಎಂಬವರು ಕೆಲ ಜನರ ಕೂಡ ರಾತ್ರಿ ಓಲಿ ಕಟ್ಟಿದರೂ ಹುಲಿ ಸಿಕ್ಕಲಿಲ್ಲ, ಗೂಡಿಗೆಂತೂ ಬೀಳಲಿಲ್ಲ, ಈ ವಿಷಯದಲ್ಲಿ ಸರಕಾರದವರು ಮನಸ್ಸು ಕೊಡದಿದ್ದರೆ ಪ್ರಜೆಗಳಿಗೆ ಬಲು ಸಂಕಷ್ಟವೇ ಸರಿ.

~~~~~~

[illegible] ಮುಂಡಾರು ಗ್ರಾಮದ [illegible] ಕಂದಕಾಸ್ಸಯರು [illegible] ದಸ್ತಾವೇಜಿನಲ್ಲಿ [illegible] ಮದ್ದತು ಮಾಡಿದ ಕುರಿತು ಇಲ್ಲಿಯ ಮೆಜಿಸ್ಟ್ರೇಟ ಕೋರ್ಟಿನಲ್ಲಿ ತನಖಿ ನಡೆಯುತ್ತಿದ್ದ ಮೊಕದ್ದಮೆ ತಾ. ೧೭ಲ್ಲು ಶೆಶ್ಶನ್ಸಿಗೆ ಕಮಿಟ್ ಮಾಡೋಣಾಯಿತು. ಇದರ ತನಖಿ ತಲಚೇರಿ ಶೆಶ್ಶನ್ಸ ಕೋರ್ಟಿನಲ್ಲಿ ಆಗುವದೆಂತ ಕೇಳುತ್ತೇವೆ.

